
# ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ

ಡಾ. ಎಸ್. ವಿದ್ಯಾಶಂಕರ



# ಪ್ರವಾಸೋದ್ಯಮ

ಹಾಗೂ

# ಕನ್ನಡದಲ್ಲಿ ಪ್ರವಾಸ ಸಾಹಿತ್ಯ

ಡಾ. ಎಸ್. ವಿದ್ಯಾಶಂಕರ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ ಆವರಣ
ಬೆಂಗಳೂರು-560 002

**PRAVASODYAMA HĀGU KANNADALLI PRAVASA SAHITYA**
**(Tourism and Travelogue in Kannada)**
Written by : Dr. S. Vidyashankar
Pub by : V.N. Mallikarjunaswamy, Administrative Officer,
Kannada Pustaka Pradhikara, Kannada Bhavana, J.C. Road,
Bangalore-560002

Pages : xvi+532

First Edition : 1991
Revised Edition : 2006

Price : **Rs. 180/-**



ISBN. 81-7713-156-7

ರಕ್ಷಾಪತ್ರ ವಿನ್ಯಾಸ : ಮೋನಪ್ಪ

ಪ್ರಕಾಶಕರು:
**ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ**
ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002

ಮುದ್ರಕರು:
**ಸ್ನೇಹಾ ಪ್ರಿಂಟರ್ಸ್**
ನಂ. 114, 4ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ
ಅತ್ತಿಗುಪ್ಪೆ, ವಿಜಯನಗರ 2ನೇ ಹಂತ, ಬೆಂಗಳೂರು-40
✆ : 080-30972467, 23392814
E-Mail-snehaprinters@gmail.com
karthikenterprises@gmail.com

# ಅಧ್ಯಕ್ಷರ ನುಡಿ

## ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ: ಒಂದು- ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು- ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ ೨x೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು, ಭಾವಪ್ರತಿಭೆಯ ಸೃಜನೆಯ ಫಲ. ಎರಡನೆಯದು, ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗ ದಾಳಿಗೆ

PRAVASODYAMA HĀGU KANNADALLI PRAVASA SAHITYA
**(Tourism and Travelogue in Kannada)**
Written by : Dr. S. Vidyashankar
Pub by : V.N. Mallikarjunaswamy, Administrative Officer, Kannada Pustaka Pradhikara, Kannada Bhavana, J.C. Road, Bangalore-560002

Pages : xvi+532

First Edition : 1991
Revised Edition : 2006

Price : **Rs. 180/-**



ISBN. 81-7713-156-7

ರಕ್ಷಾಪತ್ರ ವಿನ್ಯಾಸ : ಮೋನಪ್ಪ

ಪ್ರಕಾಶಕರು:
**ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ**
ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002

ಮುದ್ರಕರು:
**ಸ್ನೇಹಾ ಪ್ರಿಂಟರ್ಸ್**
ನಂ. 114, 4ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ
ಅತ್ತಿಗುಪ್ಪೆ, ವಿಜಯನಗರ 2ನೇ ಹಂತ, ಬೆಂಗಳೂರು-40
✆ : 080-30972467, 23392814
E-Mail-snehaprinters@gmail.com
karthikenterprises@gmail.com

# ಅಧ್ಯಕ್ಷರ ನುಡಿ

## ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ: ಒಂದು- ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು- ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ ೨x೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು, ಭಾವಪ್ರತಿಭೆಯ ಸೃಜನೆಯ ಫಲ. ಎರಡನೆಯದು, ಬುದ್ಧಿ ಸಂಚಯಧ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗ ದಾಳಿಗೆ

ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗ ದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ

ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರಲೋಕಕ್ಕಿದೆ. ಆದ್ದರಿಂದ ಅಕ್ಷರಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಮಗುಣ ಜೀವಂತ ಭಾಷೆಯೊಂದರ ದೊಡ್ಡ ಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮೂಲಕ ವಿಷಯ ಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ-

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ!
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ!
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ.

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀ ದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕ ಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕ-ವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯ ಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * *

ಭೌಗೋಳಿಕವಾಗಿ ಹಲವು ವೈಲಕ್ಷಣ್ಯಗಳ ವಿಶಿಷ್ಟತೆಯಿಂದ ಕೂಡಿರುವ ಕರ್ನಾಟಕ ಚಾರಿತ್ರಿಕವಾಗಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಪ್ರವಾಸಿ ತಾಣ. ಸುಂದರ ನಿಸರ್ಗಧಾಮಗಳಿಂದಲೂ ಐತಿಹಾಸಿಕ ಮಹತ್ವದ ಧಾರ್ಮಿಕ - ಶೈಕ್ಷಣಿಕ - ಕಲಾ ಕೇಂದ್ರಗಳಿಂದಲೂ ಕೂಡಿ ಸದಾ ಪ್ರವಾಸಿಗರನ್ನು ತನ್ನತ್ತ ಸೆಳೆಯುವ ಒಂದು ಸುಂದರ ನಾಡು, ಸಹಜವಾಗಿ ಇಲ್ಲಿನ ಪ್ರವಾಸ ಹಾಗೂ ಪ್ರವಾಸೋದ್ಯಮ ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿವೆ.

ಡಾ. ಎಸ್. ವಿದ್ಯಾಶಂಕರ ಅವರ **ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ** ಒಂದು ಮಹತ್ವದ ಕೃತಿ. ಇಲ್ಲಿನ ಮಹತ್ತಿಗೆ ಎರಡು ಕಾರಣಗಳಿವೆ. ಒಂದು: ಪ್ರವಾಸೋದ್ಯಮವನ್ನು ಕುರಿತು ಅದರ ಉದ್ದೇಶ, ಗುರಿ ಸಾಧನೆಗಳ ಬಗ್ಗೆ ಚಾರಿತ್ರಿಕ ದಾಖಲಾತಿಗಳೊಂದಿಗೆ ಒಂದು ಸಂಪೂರ್ಣ ಚಿತ್ರವನ್ನು ಕಟ್ಟಿಕೊಟ್ಟಿರುತ್ತಾರೆ. ಅದು ನಿರ್ವಹಿಸಬಹುದಾದ ಗೊತ್ತು ಗುರಿಗಳ ಬಗೆಗೆ ಉತ್ತಮ ಮಾರ್ಗಸೂಚಿ ವಿಚಾರಗಳಿವೆ. ಎರಡು: ಕನ್ನಡದಲ್ಲಿ ಇದುವರೆಗೆ ಬಂದಿರುವ ಹಲವು ಪ್ರವಾಸಾನುಭವ ಕೃತಿಗಳ ಒಂದು ವಿವರಪೂರ್ಣ ಸಮೀಕ್ಷೆ ಈ ಪುಸ್ತಕದಲ್ಲಿದೆ. ಒಂದು ದೇಶವನ್ನು ಕುರಿತು ಹಲವು ಪ್ರವಾಸಾನುಭವಗಳು ಬಂದಿದ್ದರೂ ನೋಡುವವರ ಕಣ್ಣಿನ ಗ್ರಹಿಕೆಗನುಗುಣವಾಗಿ ಅಲ್ಲಿನ ಅನುಭವದ ಅಸ್ಮಿತೆ ವಿಶಿಷ್ಟವೆನ್ನಿಸಿದಂತೆ ಹರಿದಿರುತ್ತದೆ. ಇದೆಲ್ಲವನ್ನು ಡಾ. ಎಸ್. ವಿದ್ಯಾಶಂಕರ ಅವರು ಒಳನೋಟ ಹರಿಸಿ, ವಿಶ್ಲೇಷಿಸಿದ್ದಾರೆ. ಅಲ್ಲಿನ ಚಾರಿತ್ರಿಕ, ಸಾಂಸ್ಕೃತಿಕ ಮಹತ್ವಗಳ ಬಗೆಗಿನ ಭಿನ್ನ ಅಭಿಪ್ರಾಯಗಳನ್ನು ಸಮಚಿತ್ತದಲ್ಲಿ ವಿಶ್ಲೇಷಿಸಿದ್ದಾರೆ. ಇದೊಂದು ಕನ್ನಡಕ್ಕೆ ಅಪೂರ್ವವಾದ ಕೊಡುಗೆ.

ಗುರುಗಳಾದ ಡಾ. ಎಸ್. ವಿದ್ಯಾಶಂಕರ ಅವರು ಇಂಥ ಒಂದು ಉತ್ತಮ ಮಾಹಿತಿ ಪ್ರಧಾನ ಅಧ್ಯಯನ ಸಂಪನ್ನ ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆಗೆ ನೀಡಿರುವುದಕ್ಕೆ ಅವರಿಗೆ ಆತ್ಮೀಯ ಧನ್ಯವಾದಗಳು. ಪುಸ್ತಕವನ್ನು ಸುಂದರವಾಗಿ ಮುದ್ರಿಸಿ ಕೊಟ್ಟ ಸ್ನೇಹಾ ಪ್ರಿಂಟರ್ಸ್‌ನ ಶ್ರಮಿಕ ಬಂಧುಗಳಿಗೆ ಪ್ರಾಧಿಕಾರದ ಸದಸ್ಯ ಮಿತ್ರರಿಗೆ ಸಿಬ್ಬಂದಿ ಬಳಗದವರಿಗೆ ಆತ್ಮೀಯ ಧನ್ಯವಾದಗಳು.

**-ಪ್ರೊ. ಎಸ್.ಜಿ. ಸಿದ್ಧರಾಮಯ್ಯ**

ಅಧ್ಯಕ್ಷರು

# ಅರಿಕೆ

'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ'ವೆಂಬ ನನ್ನ ಈ ಕೃತಿ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಗಮನಾರ್ಹವಾದುದೆಂದು ನಾನು ನಂಬಿರುವೆ. ಏಕೆಂದರೆ, ಪ್ರವಾಸೋದ್ಯಮದ (Tourism) ಬಗ್ಗೆ ಹಾಗೂ ಒಂದು ಶತಮಾನದ ಇತಿಹಾಸವನ್ನು ಹೊಂದಿರುವ ಕನ್ನಡದಲ್ಲಿನ ಪ್ರವಾಸ ಸಾಹಿತ್ಯದ ಬಗ್ಗೆ ನನ್ನದು ಮೊದಲ ಅಧ್ಯಯನ. ಪ್ರವಾಸೋದ್ಯಮದ ಬಗೆಗೆ ಇಂಗ್ಲಿಷ್‌ನಲ್ಲಿ ಸಾಕಷ್ಟು ಪುಸ್ತಕಗಳು ಬಂದಿವೆ. ಆದರೆ, ಕನ್ನಡದಲ್ಲಿ ಒಂದು ಲೇಖನವೂ ಬಂದಂತೆ ತೋರದು. ಈ ಪುಸ್ತಕ ಬರೆಯುವ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಪದವಿ ಮಟ್ಟದಲ್ಲಿ ಪ್ರವಾಸೋದ್ಯಮವನ್ನು ಕಲಿಕೆಯ ಒಂದು ಐಚ್ಛಿಕ ವಿಷಯವಾಗಿ ಪಠ್ಯಕ್ರಮದಲ್ಲಿ ಸೇರ್ಪಡೆ ಮಾಡಿದ್ದಿತ್ತು. ನಾನು ಪ್ರವಾಸೋದ್ಯಮ ಕುರಿತು ಇಂಗ್ಲಿಷ್‌ನಲ್ಲಿ ಬಂದಿದ್ದ ಪುಸ್ತಕಗಳನ್ನು ಓದಿ, ಪ್ರವಾಸೋದ್ಯಮ ಇಲಾಖೆಯ ಜೊತೆ ನಿರಂತರವಾಗಿ ಸಂಪರ್ಕವಿಟ್ಟುಕೊಂಡು ಕಲೆಹಾಕಿದ ಮಾಹಿತಿಗಳನ್ನಾಧರಿಸಿ ಬರವಣಿಗೆ ಪ್ರಾರಂಭಿಸಿದೆ.

ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ಒಂದು ಕಿರುಹೊತ್ತಿಗೆ ಪ್ರಕಟಿಸಿದ್ದಿತು; ಬೆರಳೆಣಿಕೆಯ ಲೇಖನಗಳು ಬಂದಿದ್ದುವು. ಆದರೆ, ಈ ವಿಷಯ ಕುರಿತ ಸಮಗ್ರ ಅಧ್ಯಯನ ಎಲ್ಲೂ ನಡೆದಿರಲಿಲ್ಲ. ನನಗೆ ಈ ವಿಷಯದ ಬಗೆಗೆ ಆಕಾಶವಾಣಿಯಲ್ಲಿ ಮಾತನಾಡಲು ಬೆಂಗಳೂರು ಆಕಾಶವಾಣಿ ನಿಲಯ ನಿರ್ದೇಶಕರಾಗಿದ್ದ ಡಾ. ಜ್ಯೋತ್ಸ್ನಾ ಕಾಮತ್‌ರವರು ಆಹ್ವಾನ ಕೊಟ್ಟರು. ಈ ನೆಪದಲ್ಲಿ ಈ ಕನ್ನೆನೆಲದ ಬಗೆಗೆ ಸಹಜವಾಗಿ ನನ್ನಲ್ಲಿ ಆಸಕ್ತಿ ಕೆರಳಿತು. ಈ ಆಸಕ್ತಿ ಎಷ್ಟು ಆಳವಾಗಿಬಿಟ್ಟಿತ್ತೆಂದರೆ, ನಾನು ಬಿಡುವಿನ ವೇಳೆಯಲ್ಲಿ ಕನ್ನಡದಲ್ಲಿ ಬಂದ ಎಲ್ಲ ಪ್ರವಾಸ ಸಾಹಿತ್ಯವನ್ನು ಶ್ರಮವಹಿಸಿ ಓದಿ ಮಾಹಿತಿ ಸಂಗ್ರಹಿಸಿದೆ. ನಾನು ಸಂಗ್ರಹಿಸಿದ ಮಾಹಿತಿಗಳನ್ನು ಮುಂದಿಟ್ಟುಕೊಂಡು ಹಸ್ತಪ್ರತಿ ಸಿದ್ಧಪಡಿಸಿದೆ. ನಾನು ಈ ಕೆಲಸ ಪ್ರಾರಂಭಿಸಿದ್ದು ೧೯೮೦ರಲ್ಲಿ ಅದು ಒಂದು ನಿಶ್ಚಿತರೂಪ ಪಡೆದದ್ದು ೧೯೯೦ರಲ್ಲಿ. ವರ್ಷವರ್ಷವೂ ಹೊಸ ಪುಸ್ತಕಗಳು ಬರುತ್ತಿದ್ದಂತೆ ನನ್ನ ಹಸ್ತಪ್ರತಿಯನ್ನು update ಮಾಡುವ ನೆಪದಲ್ಲಿ ಪರಿಷ್ಕರಿಸುತ್ತಾ ಬಂದೆ.

ನನ್ನ ಹಸ್ತಪ್ರತಿಯ ಶುದ್ಧಪ್ರತಿ ಸಿದ್ಧಪಡಿಸಿ ಪ್ರಕಾಶಕರ ಬಳಿ ತೆಗೆದುಕೊಂಡು ಹೋದೆ. ಯಾರೂ ಪ್ರಕಟಿಸಲು ಮುಂದೆ ಬರಲಿಲ್ಲ. ನಿರುತ್ಸಾಹದ ಪ್ರತಿಕ್ರಿಯೆ ತೋರಿಸಿದರು. ನಿರಾಶೆಯಾಯಿತು. ಹತ್ತು ವರ್ಷಗಳ ಶ್ರಮದ ಧಾರೆ ವ್ಯರ್ಥವಾಗಬಾರದೆಂದು ನಾನೇ ಸ್ವತಃ ಪ್ರಕಟಿಸುವ ನಿರ್ಧಾರ ತೆಗೆದುಕೊಂಡೆ. ಆ ಘಟ್ಟದಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಗೆ ನನ್ನ ಸಾಹಿತಿ ಮಿತ್ರರಾದ ಶ್ರೀ ವಿಜಯ ಸಾಸನೂರ ಅವರು ನಿರ್ದೇಶಕರಾಗಿ ಬಂದರು. ಒಮ್ಮೆ ಅವರ ಬಳಿ ನನ್ನ ಹಸ್ತಪ್ರತಿಯನ್ನು ಕುರಿತು ಪ್ರಸ್ತಾಪಿಸಿದೆ. ಅವರ ಕುತೂಹಲ ಸಹಜವಾಗಿ ಕೆರಳಿತು. ಕಾರಣ, ಅವರು ಪ್ರವಾಸೋದ್ಯಮ ಇಲಾಖೆಯನ್ನು ಆಧುನಿಕವಾಗಿ ಪುನರ್ಯೋಜಿಸುವ ಆಲೋಚನೆಯಲ್ಲಿದ್ದರು; ಸಾರ್ವಜನಿಕರ ಸಲಹೆಯನ್ನೂ ಕೇಳಿದ್ದರು. ನನ್ನ ಹಸ್ತಪ್ರತಿ ಅವರಿಗೆ ಪರಿಶೀಲಿಸಲು ಕೊಟ್ಟೆ. ಹದಿನೈದು ದಿವಸ ಬಿಟ್ಟು ಅವರಿಂದ ನನಗೆ ದೂರವಾಣಿ ಕರೆಯೊಂದು ಬಂದಿತು. ನನ್ನನ್ನು ಇಲಾಖೆಯ ಕಛೇರಿಯಲ್ಲಿ ಬಂದು ಭೇಟಿಮಾಡಿ ಇಲ್ಲವೆ, ನಾನೇ ನಿಮ್ಮನ್ನು ಕನ್ನಡ ಅಧ್ಯಯನ ಕೇಂದ್ರಕ್ಕೆ ಬಂದು ಕಾಣುತ್ತೇನೆ ಎಂದರು. ನಾನು ಸೌಜನ್ಯಕ್ಕೆ ಅವರನ್ನು ಕಛೇರಿಯಲ್ಲಿ ಹೋಗಿ ಭೇಟಿಮಾಡಿದೆ. ಪುಸ್ತಕ ಮುದ್ರಿಸಲು ಖರ್ಚು ಎಷ್ಟು ಬರಬಹುದು? ಎಂದು ಅವರು ನನ್ನನ್ನು ಕೇಳಿದರು. ನಾನು ಅಂದಾಜು ವೆಚ್ಚ ಹೇಳಿದೆ. ನನ್ನ ಇಲಾಖೆಯಿಂದ ಧನಸಹಾಯ ರೂಪದಲ್ಲಿ ಇಪ್ಪತ್ತು ಸಾವಿರ ರೂಪಾಯಿ ಕೊಡಲು ಶಿಫಾರಸು ಮಾಡುತ್ತೇನೆ, ಮುದ್ರಣಕಾರ್ಯ ಪ್ರಾರಂಭಿಸಿ. ಅಷ್ಟು ಹಣಕ್ಕೆ ಪ್ರತಿಯಾಗಿ ಪುಸ್ತಕದ ಮುಖಬೆಲೆಯ ಮೇಲೆ ಪುಸ್ತಕವನ್ನು ಇಲಾಖೆಗೆ ನೀವು ಕೊಡಬೇಕು ಎಂದು ಷರತ್ತು ಹಾಕಿದರು. ನನ್ನ ಮಿತ್ರರಿಗೆ ಹಸ್ತಪ್ರತಿ ಬಹಳ ಹಿಡಿಸಿತ್ತು. ಅದನ್ನು ಮುಕ್ತಮನದಿಂದ ಹೇಳಿದರು. ನನಗೆ ಸಂತೋಷವಾಯಿತು. ಆಗ ನನ್ನ ಸಹಾಯಕ್ಕೆ ಬಂದವರು ಲಕ್ಷ್ಮಿ ಮುದ್ರಣಾಲಯದ ಗೆಳೆಯ ಶ್ರೀ ಅಶೋಕ್‌ಕುಮಾರ್‌ರವರು. ಅವರು ನನ್ನ ಆರ್ಥಿಕ ಪರಿಸ್ಥಿತಿ ಅರ್ಥಮಾಡಿಕೊಂಡು ನನ್ನಿಂದ ಒಂದು ರೂಪಾಯಿಯನ್ನೂ ಮುಂಗಡ ಪಡೆಯದೆ ಮುದ್ರಿಸಿಕೊಟ್ಟರು. (ಆಗ ಇನ್ನೂ ಆಫ್‌ಸೆಟ್ ಮುದ್ರಣ ವ್ಯವಸ್ಥೆ ಬಂದಿರಲಿಲ್ಲ.)

ಪುಸ್ತಕ ಸಿದ್ಧವಾಯಿತು. ನಾನು ಮಿತ್ರರಾದ ಶ್ರೀ ವಿಜಯ ಸಾಸನೂರ ಅವರ ಸಕಾಲಿಕ ನೆರವನ್ನು ಸ್ಮರಿಸುವುದು ಕರ್ತವ್ಯವಾಗಿದ್ದಿತು. ಅದನ್ನು ಅವರಿಗೆ ತಿಳಿಸಿದೆ. ದಯಮಾಡಿ ನನ್ನ ಹೆಸರನ್ನು ಎಲ್ಲೂ ಪ್ರಸ್ತಾಪಿಸಬೇಡಿ ಎಂದರು. ಪುಸ್ತಕ ಬಿಡುಗಡೆಯ ಕಾರ್ಯಕ್ರಮ ಇಟ್ಟುಕೊಂಡು ಈ ನೆಪದಲ್ಲಾದರೂ ಉಪಕಾರ ಸ್ಮರಣೆ ಮಾಡಬೇಕೆಂದಿದ್ದೆ. ಅದೂ ಬೇಡವೆಂದರು. ಇಂಥ ಉಪಕಾರ ಬುದ್ಧಿ ಎಷ್ಟು ಜನರಿಗಿದೆಯೊ ನನಗೆ ತಿಳಿಯದು. ಪುಸ್ತಕ ಬಿಡುಗಡೆಯಾಯಿತು. ಶ್ರೀ ವಿಜಯ ಸಾಸನೂರ ಅವರು ತಮ್ಮ ಇಲಾಖೆಯಿಂದ ಹಣವನ್ನೂ ಬಿಡುಗಡೆ ಮಾಡಿದರು. ಅವರು ಆ ಸಂದರ್ಭದಲ್ಲಿ "ನೀವು ಇಷ್ಟು ಚೆನ್ನಾಗಿ ಪ್ರವಾಸೋದ್ಯಮದ ಬಗೆಗೆ ತಿಳಿದುಕೊಂಡಿದ್ದೀರಿ ನೀವೇಕೆ ನಮ್ಮ ಇಲಾಖೆಗೆ ಡೆಪ್ಯುಟೇಷನ್ ಮೇಲೆ ಬರಬಾರದು? ನಾನು ಡೆಪ್ಯೂಟಿ ಡೈರೆಕ್ಟರ್ ಆಗಿ ನಿಮ್ಮನ್ನು ನೇಮಕ ಮಾಡಲು ಸರಕಾರಕ್ಕೆ ಶಿಫಾರಸು

ಮಾಡುತ್ತೇನೆ. ನಿಮ್ಮ ಅಭ್ಯಂತರವಿಲ್ಲ ತಾನೇ" ಎಂದರು. "ನಾನು ಮೇಷ್ಟ್ರು. ಪಾಠ ಮಾಡುವುದರಲ್ಲಿ ನನಗೆ ಹೆಚ್ಚಿನ ತೃಪ್ತಿ, ಸಮಾಧಾನ. ನನಗೆ ಇಂತಹ ಸ್ಥಾನ-ಮಾನ ಬೇಡಿ" ಎಂದು ನಯವಾಗಿ ಹೇಳಿದೆ. "ನಾನು ಇಲ್ಲಿ ಇರುವವರೆವಿಗೆ ನನ್ನ ಜೊತೆ ಇರಿ. ನಾನು ಸರಕಾರಕ್ಕೆ ನಿಮ್ಮ ಹೆಸರು ಸೂಚಿಸಿ, ವಿಶ್ವವಿದ್ಯಾಲಯದಿಂದ ನಿಮ್ಮ ಸೇವೆಯನ್ನು ನಮ್ಮ ಇಲಾಖೆಗೆ ಎರವಲು ಪಡೆಯಲು ಮುಂದಿನ ಕ್ರಮ ಜರುಗಿಸುತ್ತೇನೆ" ಎಂದರು. ನಾನು ಅವರ ಔದಾರ್ಯಕ್ಕೆ ಇನ್ನಷ್ಟು ಕುಸಿದುಹೋಗಿದ್ದೆ. ಅವರು ಮಾತಿಗೆ ತಪ್ಪದೆ ಸರಕಾರಕ್ಕೂ ಬರೆದರು. ಅದಾದ ನಾಲ್ಕು ತಿಂಗಳಲ್ಲಿ ಅವರಿಗೆ ಬೇರೆ ಇಲಾಖೆಗೆ ವರ್ಗವಾಯಿತು. ನಾನು ಪ್ರವಾಸೋದ್ಯಮ ಇಲಾಖೆಗೆ ಹೋಗುವ ವಿಚಾರದಲ್ಲಿ ನಿರಾಸಕ್ತನಾದೆ.

ಇದಾದ ಎರಡು-ಮೂರು ವರ್ಷಗಳಲ್ಲಿ ಅವರು ಹಠಾತ್ತನೆ ತೀರಿಕೊಂಡರು. ಪ್ರಚಾರ ಬಯಸದೆ ತೆರೆಯ ಮರೆಯಲ್ಲೇ ಇದ್ದು ಸರಿದುಹೋದ ಮಿತ್ರರ ನೆನಪು ನನ್ನ ಮನದಲ್ಲಿ ಇಂದಿಗೂ ಹಸಿರಾಗಿದೆ. ಒಂದು ಒಳ್ಳೆಯ ಪ್ರಯತ್ನವನ್ನು ಗುರುತಿಸುವ, ಸೂಕ್ತ ಪ್ರೋತ್ಸಾಹ ನೀಡುವ ಹೃದಯವಂತಿಕೆ ಎಷ್ಟು ಜನರಿಗಿದೆ?

ನನ್ನ ಕೃತಿ ಪ್ರಕಟವಾದ ಹೊಸತರಲ್ಲಿ (೧೯೯೧) ನನ್ನ ಗುರುಗಳಾದ ಡಾ. ಹಾ.ಮಾ. ನಾಯಕ ಅವರಿಗೆ ಅದನ್ನು ಕಳುಹಿಸಿದ್ದೆ. ಅವರು ನನಗೆ ೬.೧.೧೯೯೨ರಲ್ಲಿ ಪತ್ರ ಬರೆದು "ಕನ್ನಡದಲ್ಲಿ ಇದುವರೆಗೆ ಯಾರೂ ಮಾಡದ ಒಂದು ದೊಡ್ಡ ಕೆಲಸವನ್ನು ಮಾಡಿದ್ದೀರಿ; ನೀವೇ ಅದನ್ನು ಪ್ರಕಟಿಸಿಯೂ ಇದ್ದೀರಿ. ಇದಕ್ಕಾಗಿ ನಿಮ್ಮನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ" ಎಂದಿದ್ದರು. ಪುಸ್ತಕವಲ್ಲಿ ಗ್ರಂಥಸೂಚಿ ಇಲ್ಲದಿರುವುದು ಮುಖ್ಯ ಕೊರತೆ ಎಂದೂ ಅವರು ಸೂಚಿಸಿದ್ದರು. ಅವರ ಅಭಿಮಾನದ ಪತ್ರ ಇಂದೂ ನನ್ನ ಬಳಿ ಇದೆ. ಅವರು ಸೂಚಿಸಿದ ಕೊರತೆಯನ್ನು ನಾನು ಪರಿಷ್ಕೃತ ಮುದ್ರಣದಲ್ಲಿ ನಿವಾರಿಸಿರುವೆನು.

ನನ್ನ ಕೃತಿ ಪ್ರಕಟವಾಗಿ ಹದಿನೈದು ವರ್ಷಗಳಾದುವು. ನಾನು ನಿರಂತರವಾಗಿ ಪ್ರವಾಸೋದ್ಯಮದ ಬಗೆಗೆ ಸಂಬಂಧವಿರಿಸಿಕೊಂಡಿದ್ದೆನು. ಹೊಸ ಹೊಸ ಪ್ರವಾಸ ಕಥನಗಳು ಬಂದಾಗಲೆಲ್ಲಾ ಓದಿ ಸೇರ್ಪಡೆ ಮಾಡುತ್ತಾ ಬಂದೆ. ಹೀಗಾಗಿ ಒಂದು ಪರಿಷ್ಕೃತ ಆವೃತ್ತಿಯ ಅಗತ್ಯ ನನಗೆ ಕಂಡುಬಂದಿತು. ಕನ್ನಡ ಪುಸ್ತಕ ಪ್ರಾಧಿಕಾರದ ಹಿಂದಿನ ಅಧ್ಯಕ್ಷರಾಗಿದ್ದ ಪ್ರೊ. ಮಲ್ಲೇಪುರಂ ವೆಂಕಟೇಶ್‌ರವರಲ್ಲಿ ಇದರ ಪ್ರಸ್ತಾಪ ಮಾಡಿದ್ದೆ. ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಸದಸ್ಯರೂ ಪರಿಷ್ಕೃತ ಆವೃತ್ತಿ ತರಲು ಒಪ್ಪಿದರು. ಹೊಸ ಅಧ್ಯಕ್ಷರಾಗಿ ನೇಮಕಗೊಂಡ ಗೆಳೆಯ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರು ಅಧಿಕಾರ ವಹಿಸಿಕೊಂಡ ಹೊಸದರಲ್ಲಿ ನನ್ನ ಪುಸ್ತಕದ ಪರಿಷ್ಕೃತ ಆವೃತ್ತಿ ಹೊರಬರುವುದರಲ್ಲಿ ಉತ್ಸಾಹ ತೋರಿದರು. ಇಷ್ಟಾದರೂ ನಾನು ಕೃತಿಯನ್ನು ಇನ್ನಷ್ಟು ಪರಿಷ್ಕರಿಸುವ ನೆಲೆಯಲ್ಲಿ ಸ್ವಲ್ಪ ತಡಮಾಡಿದೆ. ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ತಿಪ್ಪೇಸ್ವಾಮಿ ಅವರು ಪುಸ್ತಕ ಬೇಗ ಮುಗಿಸಿಕೊಡಲು ಪ್ರೀತಿಯ ಒತ್ತಾಯ ಹೇರಿದರು. ಈಗ ಪುಸ್ತಕ ಹೊರಬಂದಿದೆ.

ನಾನು ಇದುವರೆವಿಗೆ ಬಂದಿರುವ ಪ್ರವಾಸ ಸಾಹಿತ್ಯವನ್ನೆಲ್ಲ ಓದಿರುವೆನೆಂದು ಹೇಳಲಾರೆ. ಅದು ಸಾಧ್ಯವೂ ಇಲ್ಲ. ಏಕೆಂದರೆ, ಎಲ್ಲ ಪ್ರಕಟಿತ ಕೃತಿಗಳು ಓದುಗರ ಗಮನಕ್ಕೆ ಬರಬೇಕು. ಕೃತಿ ಪ್ರಕಟವಾಗಿದ್ದರೂ ಪ್ರಚಾರದ ಕೊರತೆಯಿಂದಾಗಿ ಓದುಗರ ಗಮನಕ್ಕೆ ಬರದಿರುವ ಸಾಧ್ಯತೆಯಿದೆ. ನಾನು ನೋಡದಿರುವ ಕೃತಿಗಳು ಇನ್ನೂ ಸಾಕಷ್ಟು ಇರಬಹುದು ಎಂಬ ಅತೃಪ್ತಿ ಈಗಲೂ ನನ್ನಲ್ಲಿದೆ. ನನ್ನ ಓದಿನ ಇತಿ-ಮಿತಿಯಲ್ಲಿ ಈ ಪ್ರಕಾರದ ಬಗೆಗೆ ಎಚ್ಚರವಹಿಸಿ ಬರೆದಿರುವೆನು. ನನ್ನ ವಿಮರ್ಶೆಯಲ್ಲಿ ಕೆಲವು ಕೃತಿಗಳು ವಿಶೇಷ ಗಮನ ಸೆಳೆದಿವೆ. ಅವುಗಳ ಬಗೆಗೆ ದೀರ್ಘವಾಗಿಯೂ ಕೆಲವು ಕೃತಿಗಳ ಬಗೆಗೆ ಸಂಕ್ಷಿಪ್ತವಾಗಿಯೂ ಬರೆದಿದ್ದು, ವಿಮರ್ಶೆಯಲ್ಲಿ ನಾನು ಸಮತೋಲನ ಕಾಯ್ದುಕೊಂಡಿಲ್ಲವೆನ್ನುವ ದೋಷಾರೋಪ ನನ್ನ ಮೇಲಿದೆ. ಒಳ್ಳೆಯದನ್ನು ಗುರುತಿಸಿ ಮೆಚ್ಚುವ ನನ್ನ ಗುಣಗ್ರಾಹಿ ಮಾಪನದಲ್ಲಿ ಕೆಲವು ಕೃತಿಗಳಿಗೆ ಹೆಚ್ಚು ಒತ್ತುಕೊಟ್ಟಿರುವೆನು. ಇದರಲ್ಲಿ ದೋಷವೇನೂ ನನಗೆ ಕಾಣದು. ಒಳ್ಳೆಯ ಕೃತಿಗಳನ್ನು ನಾನು ಅವಜ್ಞೆ ಮಾಡಿದ್ದರೆ ಆಗ ತಪ್ಪು ನನ್ನದು. ವಿಮರ್ಶೆಯಲ್ಲಿ ವೈಯಕ್ತಿಕ ಒಲವು ನಿಲವು ತಲೆಹಾಕದಂತೆ ನಾನು ಎಚ್ಚರವಹಿಸಿರುವೆನು.

ಈ ಪರಿಷ್ಕೃತ ಆವೃತ್ತಿಯಲ್ಲಿ ಅನುಬಂಧ ರೂಪದಲ್ಲಿ ಪ್ರಕಟಿತ ಪ್ರವಾಸ ಸಾಹಿತ್ಯದ ವಿವರಗಳನ್ನು ದಾಖಲಿಸಿದ್ದೇನೆ- ಅಧ್ಯಯನದ ಸೌಲಭ್ಯಕ್ಕಾಗಿ. ಕೃತಿ, ಕೃತಿಕರ್ತೃ, ಅದರ ಆಕಾರ, ಮೊದಲ ಮುದ್ರಣದ ವರ್ಷ, ಬೆಲೆ, ಪ್ರಕಾಶಕರು -ಹೀಗೆ ಸಮಗ್ರ ಮಾಹಿತಿ ಕೊಡುವ ಮೂಲಕ ಪ್ರವಾಸ ಸಾಹಿತ್ಯ ಕುರಿತ ಆಸಕ್ತರು ಇದರ ನೆರವು ಪಡೆಯಬಹುದು. ಮೇಲಾಗಿ ಕನ್ನಡದಲ್ಲಿ ಪ್ರವಾಸ ಸಾಹಿತ್ಯವು ಒಂದು ಸಾಹಿತ್ಯ ಪ್ರಕಾರವಾಗಿ ಬೆಳವಣಿಗೆ ಕಂಡುಕೊಂಡ ಅಧಿಕೃತ ಚಿತ್ರವೂ, ಪ್ರವಾಸ ಸಾಹಿತ್ಯ ರಚನೆ ಮಾಡಿದವರ ಅಭಿರುಚಿಯ ಬಗೆಗಿನ ಒಂದು ಒಳನೋಟವೂ, ಯಾವ ದೇಶದ ಬಗೆಗೆ ಹೆಚ್ಚು ಕೃತಿಗಳು ಬಂದಿವೆ ಎಂಬುದರ ತಿಳುವಳಿಕೆಯೂ ಇದರಿಂದ ಲಭ್ಯವಾಗುತ್ತದೆ. ಪ್ರವಾಸ ಸಾಹಿತ್ಯದ ವೈವಿಧ್ಯ ಹಾಗೂ ವೈಪುಲ್ಯಗಳ ಪರಿಚಯ ಮಾಡಿಕೊಳ್ಳುವ ಹಿನ್ನೆಲೆಯಲ್ಲಿಯೂ ಈ ಪಟ್ಟಿಯು ಮಹತ್ವದ್ದು. ನನ್ನ ಈ ಪಟ್ಟಿಯೂ ಅಪೂರ್ಣ. ಏಕೆಂದರೆ, ನನ್ನ ಗಮನಕ್ಕೆ ಬರದಿರುವ ಇನ್ನೂ ಸಾಕಷ್ಟು ಕೃತಿಗಳಿರಬಹುದು.

ನನ್ನ ಈ ಕೃತಿ ಈ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ಎಂದು ಈಗಾಗಲೇ ಹೇಳಿದ್ದೇನೆ. ಹಲವು ವರ್ಷಗಳ ನನ್ನ ಶ್ರಮ ಇಲ್ಲಿನ ನನ್ನ ಬರವಣಿಗೆಯಲ್ಲಿದೆ. ಈ ಪರಿಷ್ಕೃತ ಆವೃತ್ತಿಯನ್ನು ಹೊರತರುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಿಗೆ, ಸದಸ್ಯರಿಗೆ, ಆಡಳಿತಾಧಿಕಾರಿಯವರಿಗೆ ನಾನು ಋಣಿಯಾಗಿರುವೆ.

ನನ್ನ ಕೊರತೆಗಳನ್ನು ಸಹೃದಯರು ತೋರಿಸಿಕೊಟ್ಟರೆ, ಮುಂದಿನ ಆವೃತ್ತಿಯಲ್ಲಿ ಅದನ್ನು ತಿದ್ದಿಕೊಳ್ಳುವ ಆಶ್ವಾಸನೆ ನೀಡುತ್ತೇನೆ.

-ಎಸ್. ವಿದ್ಯಾಶಂಕರ

# ಒಳಗೆ...

## ಭಾಗ-೧



## ಭಾಗ-೨

# ಭಾಗ–೧

# ಪ್ರವಾಸದ ಬೆಳವಣಿಗೆಯ ಇತಿಹಾಸ

ಪ್ರಾಚೀನ ಕಾಲದಿಂದಲೂ ಮಾನವ ಜನಾಂಗಕ್ಕೆ ಸಂಚಾರ ಅಥವಾ ಪ್ರವಾಸವು ಅತ್ಯಂತ ಕುತೂಹಲದ ವಿಷಯವಾಗಿದ್ದಿತು. ಹೊಸ ಹೊಸ ಪ್ರದೇಶಗಳ ಅನ್ವೇಷಣೆ ಯುವಕರ ಸಾಹಸ ಪ್ರವೃತ್ತಿಗೊಂದು ಸವಾಲಾಗಿದ್ದಿತು. ಪರಿಸರದ ಬದಲಾವಣೆ ಹಾಗೂ ಹೊಸ ಅನುಭವಗಳಿಗೆ ತುಡಿಯುತ್ತಿದ್ದ ತರುಣರ ಪಾಲಿಗೆ ಪ್ರವಾಸವು ಚೈತನ್ಯದ ಬುಗ್ಗೆಯಾಗಿದ್ದಿತು. ಹಿಂದಿನಿಂದಲೂ ವಾಣಿಜ್ಯೋದ್ಯಮಿಗಳು, ತೀರ್ಥ ಯಾತ್ರಿಕರು, ಜ್ಞಾನಪಿಪಾಸುಗಳಾದ ವಿದ್ವಾಂಸರು ಸದಾ ಸಂಚಾರಿಗಳೇ ಆಗಿರುತ್ತಿದ್ದರು.

ವ್ಯಾಪಾರದಲ್ಲಿ ತಮ್ಮ ಅದೃಷ್ಟ ಪರೀಕ್ಷಿಸಲು ವಾಣಿಜ್ಯೋದ್ಯಮಿಗಳು ಸಾಗರ ಯಾತ್ರೆಯನ್ನು ಕೈಗೊಳ್ಳುತ್ತಿದ್ದರು. ಅದೃಷ್ಟವನ್ನು ಅರಸಿ ಹೊರಟ ಈ ಸಾಹಸಿಗರಿಂದಾಗಿ ಹೊಸ ವಾಣಿಜ್ಯ ಮಾರ್ಗಗಳು ತೆರೆದುಕೊಂಡವು. ವಾಣಿಜ್ಯಾಭಿವೃದ್ಧಿಗೆ ಪ್ರವಾಸವು ದೊಡ್ಡ ವರದಾನವಾಯಿತು. ವಾಣಿಜ್ಯ ಮಾರ್ಗಗಳನ್ನು ತೆರೆಯುವ ಮೂಲಕ ಪ್ರವಾಸವು ಹೆಚ್ಚು ಸುಸಂಘಟಿತವೂ ಸುಲಭವೂ ಆಗತೊಡಗಿತು. ದೇಶ ವಿದೇಶಗಳು ವಾಣಿಜ್ಯದ ನೆಪದಿಂದ ಹತ್ತಿರ ಹತ್ತಿರ ಬಂದುವು. ಹೀಗೆ ಒಬ್ಬರು ಮತ್ತೊಬ್ಬರ ದೇಶಕ್ಕೆ ಭೇಟಿನೀಡುವ ಮೂಲಕ ಸಾಂಸ್ಕೃತಿಕ ಸಂಬಂಧ ಮತ್ತಷ್ಟು ಹತ್ತಿರ ಬಂದಿತು. ಒಬ್ಬರು ಮತ್ತೊಬ್ಬರ ಭಾಷೆ, ಆಚಾರ-ವಿಚಾರ, ಸಂಪ್ರದಾಯ, ಜೀವನ ವಿಧಾನ, ಸಂಸ್ಕೃತಿಗಳನ್ನು ಇನ್ನಷ್ಟು ಚೆನ್ನಾಗಿ ತಿಳಿಯಲು ಸಾಧ್ಯವಾಯಿತು.

ನಾಗರೀಕತೆ ಬೆಳೆದಂತೆ ಹೊಸ ಹೊಸ ದೇಶಗಳನ್ನು ಕಂಡುಹಿಡಿಯುವ ಹಾಗೂ ಪ್ರಪಂಚವನ್ನು ನೋಡುವ ಸಲುವಾಗಿ ಪ್ರಜ್ಞಾಪೂರ್ವಕ ಪ್ರಶಾಸವು (Conscious Travel) ಪ್ರಾರಂಭವಾಯಿತು. ಸು. ಕ್ರಿ.ಪೂ. ೪೦೦೦ದಲ್ಲಿ ಸುಮೇರಿಯನ್ನರು ವಾಣಿಜ್ಯದಲ್ಲಿ ಹಣದ ಪ್ರಾಮುಖ್ಯತೆಯನ್ನು ಕಂಡುಕೊಂಡು, ಹಣದ ಬಳಕೆಯನ್ನು ಜಾರಿಗೆ ತಂದರು. ಇದರಿಂದಾಗಿ ಪ್ರವಾಸದ ಹೊಸ ಶಕೆ ಪ್ರಾರಂಭವಾಯಿತೆನ್ನಬಹುದು. ವ್ಯಾಪಾರದ ಅಭಿವೃದ್ಧಿಗಾಗಿ ಸಾರಿಗೆಯ ಸೌಕರ್ಯಗಳನ್ನು ಬೇಬಿಲೋನಿಯಾದ ಅರಸ ಶುಲ್ಗಿಯು ಕಲ್ಪಿಸಿದನು. ಗೌರವಾನ್ವಿತ ವಾಣಿಜ್ಯೋದ್ಯಮಿಗಳಿಗೆ ಒಳ್ಳೆಯ ರಸ್ತೆಗಳನ್ನು ನಿರ್ಮಿಸುವುದರ ಜೊತೆಗೆ ಅವರಿಗೆಂದು ವಿಶ್ರಾಂತಿಧಾಮಗಳನ್ನೂ ಶುಲ್ಗಿಯು ಕಟ್ಟಿಸಿದನು.

ಪ್ರಾಚೀನ ಗ್ರೀಕರ ಸಂಚಾರಿ ವ್ಯಾಮೋಹವನ್ನು ಹೋಮರನ ಮಹಾಕಾವ್ಯ 'ಒಡೆಸ್ಸಿ' ಹೇಳುತ್ತದೆ. ಫೊನಿಷಿಯನ್ನರು ಆಧುನಿಕ ದೃಷ್ಟಿಯಲ್ಲಿ ನಿಜವಾದ ಮೊದಲ ಪ್ರವಾಸಿಗರು. ಅವರು ವ್ಯಾಪಾರಿಗರಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣ ಕೈಗೊಂಡರು. ಭಾರತ ಹಾಗೂ ಚೈನಾ ಅಪಾರ ಸಂಪದ್ಭರಿತ ರಾಷ್ಟ್ರಗಳೆಂದು ಹಿಂದಿನಿಂದಲೂ ಪ್ರಸಿದ್ಧಿ ಪಡೆದಿದ್ದುವು. ಹೀಗಾಗಿ, ವ್ಯಾಪಾರದ ನೆಪದಲ್ಲಿ ಭಾರತದಲ್ಲಿನ ಸಂಪತ್ತನ್ನು ಅರಸಿಕೊಂಡು ಪ್ರವಾಸಿಗರ ಹಿಂಡು ಹಿಂಡೇ ಭಾರತಕ್ಕೆ ಬರತೊಡಗಿತು. ಈ ಧೋರಣೆ ಮುಂದುವರಿದುದರ ಫಲವಾಗಿ ಮುಂದೆ ಯುರೋಪಿಯನ್ನರು ಭಾರತದ ಸಮುದ್ರ ದಂಡೆಗಳಲ್ಲಿ ಬಂದಿಳಿಯತೊಡಗಿದರು.

ಭಾರತವು ಮೆಸಡೋನಿಯಾದ ಅಲೆಕ್ಸಾಂಡರನನ್ನು ಮೊದಲುಗೊಂಡು ಅನೇಕ ಹೊರದೇಶದ ದಂಡಯಾತ್ರಿಗರನ್ನು ಆಕರ್ಷಿಸಿದ್ದಷ್ಟೇ ಅಲ್ಲದೆ ವಾಸ್ಕೋಡಿಗಾಮನಂತಹ ಮಹಾನ್ ಪ್ರವಾಸಿಗರನ್ನೂ ಆಕರ್ಷಿಸಿದೆ. ವಿದೇಶೀಯರು ಅದರಲ್ಲೂ ಅರಬರು ಹಾಗೂ ಯುರೋಪಿಯನ್ನರು ವಾಣಿಜ್ಯ ನೆಲೆಗಳನ್ನು ಸ್ಥಾಪಿಸುವ ಸಲುವಾಗಿ ಭಾರತಕ್ಕೆ ಬರತೊಡಗಿದರು. ಕ್ರಿಸ್ಟಫರ್ ಕೊಲಂಬಸ್‌ನ ಮಹತ್ವಾಕಾಂಕ್ಷೆ ಭಾರತಕ್ಕೆ ಹೊಸ ಮಾರ್ಗವನ್ನು ಕಂಡುಹಿಡಿಯುವುದಾಗಿದ್ದು, ಅದರ ಶೋಧನೆಯಲ್ಲಿ ನಿರತನಾದ ಆತ ಸಮುದ್ರ ಪರ್ಯಟನವನ್ನು ಕೈಗೊಂಡು ಅಮೇರಿಕಾ ಖಂಡವನ್ನು ಗೊತ್ತು ಹಚ್ಚಿದನು. ಅವನು ತನ್ನ ಪರ್ಯಟನದ ಮೂಲ ಉದ್ದೇಶದಲ್ಲಿ ಯಶಸ್ಸು ಗಳಿಸದಿದ್ದರೂ ಹೊಸ ಪ್ರಪಂಚವನ್ನು ಅವನು ಕಾಣಿಸಿದನು. ನೈಲ್-ಕಾಂಗೋ-ಜಾಂಬೇಜ ಹಾಗೂ ನೈಜರ್ -ಇವು ಆಫ್ರಿಕಾದ ಮಹಾನದಿಗಳು. ಇವುಗಳ ಉಗಮವನ್ನು ಕಂಡುಹಿಡಿಯಲು ಜೀವದ ಹಂಗು ತೊರೆದು ಮಂಗೋಪಾರ್ಕ್ ಪ್ರಯತ್ನಿಸಿದನು. ಮ್ಯಾಗೆಲಿನ್ ದಕ್ಷಿಣ ಅಮೆರಿಕೆಯ ತುದಿಯನ್ನು ಸುತ್ತಿವಾಕಿ ಪೂರ್ವದಿಕ್ಕಿನಲ್ಲಿದ್ದ ಮಸಾದೆಯ ದ್ವೀಪಗಳ ಕಡೆಗೆ ಹೋಗುವ ಸಾಹಸ ಮಾಡಿದನು. ಲಿವಿಂಗ್‌ಸ್ಟನ್ ದಕ್ಷಿಣ ಹಾಗೂ ಮಧ್ಯ ಆಫ್ರಿಕೆಯನ್ನು ಕಂಡುಹಿಡಿದನು. ಕ್ಯಾಪ್ಟನ್ ಕುಕ್ ಕೇವಲ ಶಾಸ್ತ್ರ ಜ್ಞಾನದ ಹಂಬಲದಿಂದ ಜಗತ್ತನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿದನು.

ಪೋರ್ಚುಗೀಸರು ಆಫ್ರಿಕಾ, ಭಾರತಗಳಿಂದ ರಾಶಿರಾಶಿ ಚಿನ್ನ, ಬೆಳ್ಳಿ, ದಂತ, ಮುತ್ತು, ರತ್ನ ಹೊತ್ತು ತಂದುದನ್ನು ನೋಡಿದ ಸ್ಪೇನಿನವರು ತಾವೂ ಸಮುದ್ರಯಾನ ಮಾಡಿ ಈ ಪರದೇಶಗಳಿಂದ ಅವುಗಳನ್ನು ತರಬೇಕೆಂಬ ದೂರಾಲೋಚನೆಯಿಂದ ಕ್ರಿಸ್ಟೋಫರ್ ಕೊಲಂಬಸ್ಸನನ್ನು ಕ್ರಿ.ಶ ೧೪೯೨ರಲ್ಲಿ ಕಳುಹಿಸಿದರು. ಆ ವೇಳೆಗೆ ದಿಕ್ಸೂಚಿಯನ್ನು ಕಂಡುಹಿಡಿದ್ದರು. ಅದರಿಂದ ಮತ್ತು ನಕ್ಷತ್ರಗಳ ಸಹಾಯದಿಂದ ದಿಕ್ಕುಗಳನ್ನು ಚೆನ್ನಾಗಿ ಗುರುತಿಸಬಲ್ಲವರಾಗಿದ್ದರು. ಕೊಲಂಬಸ್ ತನ್ನ 'ಅಳಿಲು' (ಸ್ಕ್ವಿರ್‌ಲ್)

ಎಂಬ ನೌಕೆ ಮತ್ತು ಇತರ ಮೂರು ನೌಕೆಗಳಲ್ಲಿ ಸಹಾಯಕರೊಂದಿಗೆ ಸಾಹಸಯಾತ್ರೆಗೆ ಹೊರಟನು. ಐವತ್ತು ಟನ್ನಿನ ಅವನ ಅಳಿಲು ಅವನನ್ನು ಅಟ್ಲಾಂಟಿಕ್ ಸಾಗರವನ್ನು ದಾಟಿಸಬಿಟ್ಟಿತು! ಅವನ ಜೊತೆ ಮೂರು ನೌಕೆ ಜನ ಹೊರಟರೂ ಕೊನೆಗೆ ಬದುಕಿ ಉಳಿದವರು ಬೆರಳೆಣಿಕೆಯ ಜನ ಮಾತ್ರ. ಸರಿಯಾದ ಆಹಾರ ದೊರೆಯದೆ ಅವರು ಸ್ಕರ್ವಿ ರೋಗಕ್ಕೆ ತುತ್ತಾದರು. ಕೊಲಂಬಸ್ ಭಾರತವನ್ನು ತಲುಪುವ ಬದಲು ಈಗಿನ ವೆಸ್ಟ್ ಇಂಡೀಸ್ ತಲುಪಿದ! ಅವನ ಜೊತೆ ಪ್ರಯಾಣ ಮಾಡಿದ 'ಫಿಗಫೆಟ್ಟಾ' ಎಂಬ ನಾವಿಕ ತನ್ನ ಅನುಭವಗಳನ್ನು ಹೀಗೆ ಹೇಳಿರುವನು: "ನಾವು ಮೂರು ನಾಲ್ಕು ತಿಂಗಳು ಯಾನ ಮಾಡುತ್ತ ಭೂಮಿಯನ್ನೇ ಕಾಣದಿದ್ದಾಗ ಹೊತ್ತು ತಂದಿದ್ದ ತಿನಿಸುಗಳೆಲ್ಲಾ ಕೆಟ್ಟು, ಬಿಸ್ಕಿಟ್ಟು ಮುಂತಾದ ಒಣ ತಿನಿಸುಗಳು ಪುಡಿಯಾಗಿ ಹುಳುಹತ್ತಿದ್ದವು. ಎಲ್ಲ ತಿನಿಸುಗಳಲ್ಲೂ ಇಲಿಗಳ ಮೂತ್ರ ವಿಸರ್ಜನೆ. ಹಸಿವಿನ ನಿವಾರಣೆಗಾಗಿ ಇಲಿಗಳನ್ನೇ ಹಿಡಿದು ಚರ್ಮಸಹಿತ ಸುಟ್ಟು ತಿಂದೆವು. ಕೊನೆಗೆ ಅವುಗಳ ಸಂಖ್ಯೆಯೂ ಕಡಿಮೆಯಾಗಿ ಹೋಯಿತು. ಶೇಖರಿಸಿಟ್ಟ ಕುಡಿಯುವ ನೀರು ಪೀತವರ್ಣವಾಗಿ, ಹೊಲಸು ನಾರಿತು. ಇಂಥದ್ದನ್ನೆಲ್ಲಾ ಕುಡಿದು, ತಿಂದು ವಸಡಿನ ಊತ, ಜ್ವರ ಕಾಣಿಸಿತು. ಆದರೆ ಪುಣ್ಯಕ್ಕೆ ಸಾಗರ ಶಾಂತವಾಗಿತ್ತು. ದೇವರು ಅದನ್ನು ದಯಪಾಲಿಸದೇ ಇದ್ದಿದ್ದರೆ ನಾವು ಉಳಿಯುತ್ತಲೇ ಇರಲಿಲ್ಲ. ಇಂತಹ ಯಾನ ಎಂದೆಂದಿಗೂ ಬೇಡ..." ಎಲ್ಲೋ ಹೊರಟು ಎಲ್ಲೋ ತಲುಪಿದ ಆ ಜನ ಹೊಸದೊಂದು ವಿಶ್ವವನ್ನೇ ಸೃಷ್ಟಿಸಿಬಿಟ್ಟರು!

ಕೊಲಂಬಸ್‌ನಿಗಿಂತ ಪೂರ್ವದಲ್ಲಿ, ಐನೂರು ವರ್ಷ ಮೊದಲೇ, ಲೀಫ್ ಮತ್ತು ನಾರ್ಸ್ ಎನ್ನವವರು ಅಮೇರಿಕಾ ತಲುಪಿದ್ದರೆಂದು ತಿಳಿಯಬರುತ್ತದೆ. ನಾರ್ಸ್ ಆರ್ಕ್ಟಿಕ್ ಸಾಗರದ ಮೇಲಿಂದ ತೆರೆದ ನಾವೆಯಲ್ಲಿ ಕಂಪಾಸು, ನಕ್ಷೆ -ಇವಾವೂ ಇಲ್ಲದೆ ಉತ್ತರ ಅಮೇರಿಕಾ ತಲುಪಿದನಂತೆ. ತಮ್ಮ ಹಿಂದಿನವರ ಕಡಲ ಮೇಲಿನ ಪ್ರಯಾಣಕಾಲದ ಘೋರ ಅನುಭವಗಳು ಹಾಗೂ ಮೂಢನಂಬಿಕೆಗಳು -ಇವುಗಳ ಆಧಾರದ ಮೇಲೆ ಇವರು ಸಾಹಸಕ್ಕೆ ಕೈ ಹಾಕಿದರು. ತಮಗೆ ಪರಿಚಯವಾಗಿರುವ ದೇಶದ ಗಡಿ ದಾಟಿದವರು ಪ್ರಪಂಚದ ಅಂಚಿನಿಂದ ಕೆಳಗೆ ಬಿದ್ದು ಹೋಗುತ್ತಾರೆ; ಆನೆಗಳನ್ನು ಹೊತ್ತು ಹಾರುವ 'ರಾಕ್' ಹಕ್ಕಿ; ಸಮುದ್ರ ತಳದಲ್ಲಿ ಅವಿತುಕೊಂಡು ನಾವೆಗಳನ್ನು ಉರುಳಿಸುವ ಮಹಾ ಸರ್ಪಗಳು; ಹಡಗನ್ನು ತಿರುಗಿಸಿ ಸೆಳೆದುಕೊಳ್ಳುವ ಮಹಾನ್ ಸುಳಿಗಳು; ಹಡಗನ್ನು ಆಕಾಶಕ್ಕೆ ಎತ್ತಿ ಎಸೆಯುವ ಉಪ್ಪು ನೀರಿನ ಚಿಲುಮೆಗಳು -ಇಂತಹ ಮೂಢನಂಬಿಕೆಗಳು ಸಾಹಸಯಾತ್ರೆಗೆ ಮನತೆತ್ತ ವೀರರ ಎದೆಗಡಿಸುತ್ತಿದ್ದವು. ಟಾಲೆಮಿ ಎಂಬ ಭೂಗೋಳಶಾಸ್ತ್ರಜ್ಞ ಭೂಮಿ ಚಪ್ಪಟೆಯಾಗಿದೆ ಎಂದು ಹೇಳಿದ್ದಷ್ಟೇ ಅಲ್ಲದೆ ಅವನು ಪ್ರಪಂಚದ ನಕ್ಷೆಯೊಂದನ್ನು ತಯಾರಿಸಿದ್ದನು. ಅವನ ಭೂಮಿಗೆ

ಪ್ರಾಚೀನ ಗ್ರೀಕರ ಸಂಚಾರಿ ವ್ಯಾಮೋಹವನ್ನು ಹೋಮರನ ಮಹಾಕಾವ್ಯ 'ಒಡೆಸ್ಸಿ' ಹೇಳುತ್ತದೆ. ಫೊನಿಷಿಯನ್ನರು ಆಧುನಿಕ ದೃಷ್ಟಿಯಲ್ಲಿ ನಿಜವಾದ ಮೊದಲ ಪ್ರವಾಸಿಗರು. ಅವರು ವ್ಯಾಪಾರಿಗರಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣ ಕೈಗೊಂಡರು. ಭಾರತ ಹಾಗೂ ಚೈನಾ ಅಪಾರ ಸಂಪದ್ಭರಿತ ರಾಷ್ಟ್ರಗಳೆಂದು ಹಿಂದಿನಿಂದಲೂ ಪ್ರಸಿದ್ಧಿ ಪಡೆದಿದ್ದುವು. ಹೀಗಾಗಿ, ವ್ಯಾಪಾರದ ನೆಪದಲ್ಲಿ ಭಾರತದಲ್ಲಿನ ಸಂಪತ್ತನ್ನು ಅರಸಿಕೊಂಡು ಪ್ರವಾಸಿಗರ ಹಿಂಡು ಹಿಂಡೇ ಭಾರತಕ್ಕೆ ಬರತೊಡಗಿತು. ಈ ಧೋರಣೆ ಮುಂದುವರಿದುದರ ಫಲವಾಗಿ ಮುಂದೆ ಯುರೋಪಿಯನ್ನರು ಭಾರತದ ಸಮುದ್ರ ದಂಡೆಗಳಲ್ಲಿ ಬಂದಿಳಿಯತೊಡಗಿದರು.

ಭಾರತವು ಮೆಸಡೋನಿಯಾದ ಅಲೆಕ್ಸಾಂಡರನನ್ನು ಮೊದಲುಗೊಂಡು ಅನೇಕ ಹೊರದೇಶದ ದಂಡಯಾತ್ರಿಗರನ್ನು ಆಕರ್ಷಿಸಿದ್ದಷ್ಟೇ ಅಲ್ಲದೆ ವಾಸ್ಕೋಡಿಗಾಮನಂತಹ ಮಹಾನ್ ಪ್ರವಾಸಿಗರನ್ನೂ ಆಕರ್ಷಿಸಿದೆ. ವಿದೇಶೀಯರು ಅದರಲ್ಲೂ ಅರಬರು ಹಾಗೂ ಯುರೋಪಿಯನ್ನರು ವಾಣಿಜ್ಯ ನೆಲೆಗಳನ್ನು ಸ್ಥಾಪಿಸುವ ಸಲುವಾಗಿ ಭಾರತಕ್ಕೆ ಬರತೊಡಗಿದರು. ಕ್ರಿಸ್ಟಫರ್ ಕೊಲಂಬಸ್‌ನ ಮಹತ್ವಾಕಾಂಕ್ಷೆ ಭಾರತಕ್ಕೆ ಹೊಸ ಮಾರ್ಗವನ್ನು ಕಂಡುಹಿಡಿಯುವುದಾಗಿದ್ದು, ಅದರ ಶೋಧನೆಯಲ್ಲಿ ನಿರತನಾದ ಆತ ಸಮುದ್ರ ಪರ್ಯಟನವನ್ನು ಕೈಗೊಂಡು ಅಮೇರಿಕಾ ಖಂಡವನ್ನು ಗೊತ್ತು ಹಚ್ಚಿದನು. ಅವನು ತನ್ನ ಪರ್ಯಟನದ ಮೂಲ ಉದ್ದೇಶದಲ್ಲಿ ಯಶಸ್ಸು ಗಳಿಸದಿದ್ದರೂ ಹೊಸ ಪ್ರಪಂಚವನ್ನು ಅವನು ಕಾಣಿಸಿದನು. ನೈಲ್-ಕಾಂಗೋ-ಜಾಂಬೇಜ ಹಾಗೂ ನೈಜರ್ -ಇವು ಆಫ್ರಿಕಾದ ಮಹಾನದಿಗಳು. ಇವುಗಳ ಉಗಮವನ್ನು ಕಂಡುಹಿಡಿಯಲು ಜೀವದ ಹಂಗು ತೊರೆದು ಮಂಗೋಪಾರ್ಕ್ ಪ್ರಯತ್ನಿಸಿದನು. ಮ್ಯಾಗೆಲಿನ್ ದಕ್ಷಿಣ ಅಮೆರಿಕೆಯ ತುದಿಯನ್ನು ಸುತ್ತಿವಾಕಿ ಪೂರ್ವದಿಕ್ಕಿನಲ್ಲಿದ್ದ ಮಸಾದೆಯ ದ್ವೀಪಗಳ ಕಡೆಗೆ ಹೋಗುವ ಸಾಹಸ ಮಾಡಿದನು. ಲಿವಿಂಗ್‌ಸ್ಟನ್ ದಕ್ಷಿಣ ಹಾಗೂ ಮಧ್ಯ ಆಫ್ರಿಕೆಯನ್ನು ಕಂಡುಹಿಡಿದನು. ಕ್ಯಾಪ್ಟನ್ ಕುಕ್ ಕೇವಲ ಶಾಸ್ತ್ರ ಜ್ಞಾನದ ಹಂಬಲದಿಂದ ಜಗತ್ತನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿದನು.

ಪೋರ್ಚುಗೀಸರು ಆಫ್ರಿಕಾ, ಭಾರತಗಳಿಂದ ರಾಶಿರಾಶಿ ಚಿನ್ನ, ಬೆಳ್ಳಿ, ದಂತ, ಮುತ್ತು, ರತ್ನ ಹೊತ್ತು ತಂದುದನ್ನು ನೋಡಿದ ಸ್ಪೇನಿನವರು ತಾವೂ ಸಮುದ್ರಯಾನ ಮಾಡಿ ಈ ಪರದೇಶಗಳಿಂದ ಅವುಗಳನ್ನು ತರಬೇಕೆಂಬ ದೂರಾಲೋಚನೆಯಿಂದ ಕ್ರಿಸ್ಟೋಫರ್ ಕೊಲಂಬಸ್ಸನನ್ನು ಕ್ರಿ.ಶ ೧೪೯೨ರಲ್ಲಿ ಕಳುಹಿಸಿದರು. ಆ ವೇಳೆಗೆ ದಿಕ್ಸೂಚಿಯನ್ನು ಕಂಡುಹಿಡಿದ್ದರು. ಅದರಿಂದ ಮತ್ತು ನಕ್ಷತ್ರಗಳ ಸಹಾಯದಿಂದ ದಿಕ್ಕುಗಳನ್ನು ಚೆನ್ನಾಗಿ ಗುರುತಿಸಬಲ್ಲವರಾಗಿದ್ದರು. ಕೊಲಂಬಸ್ ತನ್ನ 'ಅಳಿಲು' (ಸ್ಕ್ವಿರ್ಲ್)

ಎಂಬ ನೌಕೆ ಮತ್ತು ಇತರ ಮೂರು ನೌಕೆಗಳಲ್ಲಿ ಸಹಾಯಕರೊಂದಿಗೆ ಸಾಹಸಯಾತ್ರೆಗೆ ಹೊರಟನು. ಐವತ್ತು ಟನ್ನಿನ ಅವನ ಅಳಿಲು ಅವನನ್ನು ಅಟ್ಲಾಂಟಿಕ್ ಸಾಗರವನ್ನು ದಾಟಿಸಬಿಟ್ಟಿತು! ಅವನ ಜೊತೆ ಮೂರು ನೌಕೆ ಜನ ಹೊರಟರೂ ಕೊನೆಗೆ ಬದುಕಿ ಉಳಿದವರು ಬೆರಳೆಣಿಕೆಯ ಜನ ಮಾತ್ರ. ಸರಿಯಾದ ಆಹಾರ ದೊರೆಯದೆ ಅವರು ಸ್ಕರ್ವಿ ರೋಗಕ್ಕೆ ತುತ್ತಾದರು. ಕೊಲಂಬಸ್ ಭಾರತವನ್ನು ತಲುಪುವ ಬದಲು ಈಗಿನ ವೆಸ್ಟ್ ಇಂಡೀಸ್ ತಲುಪಿದ! ಅವನ ಜೊತೆ ಪ್ರಯಾಣ ಮಾಡಿದ 'ಫಿಗಫೆಟ್ಟಾ' ಎಂಬ ನಾವಿಕ ತನ್ನ ಅನುಭವಗಳನ್ನು ಹೀಗೆ ಹೇಳಿರುವನು: "ನಾವು ಮೂರು ನಾಲ್ಕು ತಿಂಗಳು ಯಾನ ಮಾಡುತ್ತ ಭೂಮಿಯನ್ನೇ ಕಾಣದಿದ್ದಾಗ ಹೊತ್ತು ತಂದಿದ್ದ ತಿನಿಸುಗಳೆಲ್ಲಾ ಕೆಟ್ಟು, ಬಿಸ್ಕಿಟ್ಟು ಮುಂತಾದ ಒಣ ತಿನಿಸುಗಳು ಪುಡಿಯಾಗಿ ಹುಳುಹತ್ತಿದ್ದವು. ಎಲ್ಲ ತಿನಿಸುಗಳಲ್ಲೂ ಇಲಿಗಳ ಮೂತ್ರ ವಿಸರ್ಜನೆ. ಹಸಿವಿನ ನಿವಾರಣೆಗಾಗಿ ಇಲಿಗಳನ್ನೇ ಹಿಡಿದು ಚರ್ಮಸಹಿತ ಸುಟ್ಟು ತಿಂದೆವು. ಕೊನೆಗೆ ಅವುಗಳ ಸಂಖ್ಯೆಯೂ ಕಡಿಮೆಯಾಗಿ ಹೋಯಿತು. ಶೇಖರಿಸಿಟ್ಟ ಕುಡಿಯುವ ನೀರು ಪೀತವರ್ಣವಾಗಿ, ಹೊಲಸು ನಾರಿತು. ಇಂಥದ್ದನ್ನೆಲ್ಲಾ ಕುಡಿದು, ತಿಂದು ವಸಡಿನ ಊತ, ಜ್ವರ ಕಾಣಿಸಿತು. ಆದರೆ ಪುಣ್ಯಕ್ಕೆ ಸಾಗರ ಶಾಂತವಾಗಿತ್ತು. ದೇವರು ಅದನ್ನು ದಯಪಾಲಿಸದೇ ಇದ್ದಿದ್ದರೆ ನಾವು ಉಳಿಯುತ್ತಲೇ ಇರಲಿಲ್ಲ. ಇಂತಹ ಯಾನ ಎಂದೆಂದಿಗೂ ಬೇಡ..." ಎಲ್ಲೋ ಹೊರಟು ಎಲ್ಲೋ ತಲುಪಿದ ಆ ಜನ ಹೊಸದೊಂದು ವಿಶ್ವವನ್ನೇ ಸೃಷ್ಟಿಸಿಬಿಟ್ಟರು!

ಕೊಲಂಬಸ್‌ನಿಗಿಂತ ಪೂರ್ವದಲ್ಲಿ, ಐನೂರು ವರ್ಷ ಮೊದಲೇ, ಲೀಫ್ ಮತ್ತು ನಾರ್ಸ್ ಎನ್ನುವವರು ಅಮೇರಿಕಾ ತಲುಪಿದ್ದರೆಂದು ತಿಳಿದುಬರುತ್ತದೆ. ನಾರ್ಸ್ ಆರ್ಕ್ಟಿಕ್ ಸಾಗರದ ಮೇಲಿಂದ ತೆರೆದ ನಾವೆಯಲ್ಲಿ ಕಂಪಾಸು, ನಕ್ಷೆ -ಇವಾವೂ ಇಲ್ಲದೆ ಉತ್ತರ ಅಮೇರಿಕಾ ತಲುಪಿದನಂತೆ. ತಮ್ಮ ಹಿಂದಿನವರ ಕಡಲ ಮೇಲಿನ ಪ್ರಯಾಣಕಾಲದ ಘೋರ ಅನುಭವಗಳು ಹಾಗೂ ಮೂಢನಂಬಿಕೆಗಳು -ಇವುಗಳ ಆಧಾರದ ಮೇಲೆ ಇವರು ಸಾಹಸಕ್ಕೆ ಕೈ ಹಾಕಿದರು. ತಮಗೆ ಪರಿಚಯವಾಗಿರುವ ದೇಶದ ಗಡಿ ದಾಟಿದವರು ಪ್ರಪಂಚದ ಅಂಚಿನಿಂದ ಕೆಳಗೆ ಬಿದ್ದು ಹೋಗುತ್ತಾರೆ; ಆನೆಗಳನ್ನು ಹೊತ್ತು ಹಾರುವ 'ರಾಕ್' ಹಕ್ಕಿ; ಸಮುದ್ರ ತಳದಲ್ಲಿ ಅವಿತುಕೊಂಡು ನಾವೆಗಳನ್ನು ಉರುಳಿಸುವ ಮಹಾ ಸರ್ಪಗಳು; ಹಡಗನ್ನು ತಿರುಗಿಸಿ ಸೆಳೆದುಕೊಳ್ಳುವ ಮಹಾನ್ ಸುಳಿಗಳು; ಹಡಗನ್ನು ಆಕಾಶಕ್ಕೆ ಎತ್ತಿ ಎಸೆಯುವ ಉಷ್ಣ ನೀರಿನ ಚಿಲುಮೆಗಳು -ಇಂತಹ ಮೂಢನಂಬಿಕೆಗಳು ಸಾಹಸಯಾತ್ರೆಗೆ ಮನತೆತ್ತ ವೀರರ ಎದೆಗೆಡಿಸುತ್ತಿದ್ದವು. ಟೊಲೇಮಿ ಎಂಬ ಭೂಗೋಳಶಾಸ್ತ್ರಜ್ಞ ಭೂಮಿ ಚಪ್ಪಟೆಯಾಗಿದೆ ಎಂದು ಹೇಳಿದ್ದಷ್ಟೇ ಅಲ್ಲದೆ ಅವನು ಪ್ರಪಂಚದ ನಕ್ಷೆಯೊಂದನ್ನು ತಯಾರಿಸಿದ್ದನು. ಅವನ ಭೂಮಿಗೆ

ಉದ್ದ ಜಾಸ್ತಿ, ಅಗಲ ಕಮ್ಮಿ. ಉದ್ದಕ್ಕಿಂತ ಅಗಲ ೫೦೦೦ ಮೈಲಿ ಕಮ್ಮಿ ಇದ್ದ ಈ ಭೂಮಿಗೆ ಅವನು ಅಕ್ಷಾಂಶ ರೇಖಾಂಶಗಳನ್ನು ಮಾತ್ರ ರಚಿಸಿದ್ದ. ಈ ನಕ್ಷೆಯನ್ನು ನೆಚ್ಚಿಕೊಂಡು ನಾವಿಕರು ಎಲ್ಲೊ ಹೊರಟರೆ ಮತ್ತೆಲ್ಲೋ ಹೋಗಿ ತಲುಪುತ್ತಿದ್ದರು! ಧೈರ್ಯಶಾಲಿಗಳಿಗೆ ಸಮುದ್ರಯಾನ ಸತ್ವದ ಶೋಧನೆಗೆ ಆಹ್ವಾನ ನೀಡಿತ್ತು. ಅವರು ಸಾವಿನ, ಅಪಾಯದ, ಭಯದ ಅಂಚಿನಲ್ಲಿ ಸದಾ ಇರುತ್ತಿದ್ದರು. ಹೊಸದನ್ನು ಶೋಧಿಸುತ್ತೇವೆ ಎನ್ನುವ ದೂರದ ಆಸೆ ಅವರನ್ನು ಪ್ರಚೋದಿಸುತ್ತಿದ್ದಿತು, ಅವರಲ್ಲಿ ಹಠವನ್ನು ಬೆಳಸುತ್ತಿದ್ದಿತು.

ವ್ಯಾಪಾರೋದ್ಯಮ ಅನೇಕರು ಪ್ರವಾಸ ಕೈಗೊಳ್ಳಲು ಪ್ರಬಲ ಆಕರ್ಷಣೆಯಾಯಿತು. ಹೊಸ ನೆಲೆಗಳನ್ನು ಕಂಡುಹಿಡಿಯುವ ಹಾಗೂ ಪ್ರಾಚೀನ ದೂರದೇಶಗಳ ಬಗೆಗೆ ಹೆಚ್ಚಿನ ತಿಳುವಳಿಕೆ ಪಡೆಯುವ ತೀವ್ರತರವಾದ ಹಂಬಲ ಹಲವರನ್ನು ಪ್ರವಾಸಕ್ಕೆ ಸೆಳೆಯಿತು. ಹೊಸ ಹೊಸ ನೆಲೆಗಳನ್ನು ಕಂಡುಹಿಡಿಯುವ ಉತ್ಸಾಹದಲ್ಲಿ ಹಲವರು ಹಲವು ಭೀತಿದಾಯಕ ವರ್ಷಗಳನ್ನು ತಮ್ಮ ಬದುಕಿನಲ್ಲಿ ಕಳೆದ ಅನೇಕ ಉಲ್ಲೇಖಗಳು ನಮಗೆ ಕಾಣಸಿಗುತ್ತವೆ. ಅಲೆಕ್ಸಾಂಡರನು ಭಾರತವನ್ನು ತಲುಪಿದಾಗ ಚೆನ್ನಾಗಿ ರಕ್ಷಣೆ ಮಾಡಿದ್ದ ರಸ್ತೆಗಳು, ನೆರಳಿಗಾಗಿ ಬೆಳಸಿದ ಸಾಲುಮರಗಳು ಇವನ್ನು ನೋಡಿದನು. ಒಂದು ರಾಜಮಾರ್ಗವು ೧,೯೨೦ ಕಿ.ಮೀ. ಉದ್ದವೂ ಸು. ೧೯ ಮೀಟರ್ ಅಗಲವೂ ಇದ್ದು, ಅದರಲ್ಲಿ ಜನರು ರಥ, ಪಲ್ಲಕ್ಕಿ, ಎತ್ತಿನಗಾಡಿ, ಕುದುರೆ, ಒಂಟೆ, ಹಾಗೂ ಆನೆಗಳ ಮೇಲೆ ಸಂಚರಿಸುತ್ತಿದ್ದುದಾಗಿ ಅಲೆಕ್ಸಾಂಡರ್ ಹೇಳಿರುವನು.

ತರುಣ ಮಾರ್ಕೋಪೋಲೋ ೧೨೭೧ ರಲ್ಲಿ ತನ್ನ ತಂದೆ ಹಾಗೂ ಚಿಕ್ಕಪ್ಪನ ಜೊತೆ ವೆನಿಸ್ಸನ್ನು ಬಿಟ್ಟು ಪರ್ಷಿಯಾ ಹಾಗೂ ಅಫಘಾನಿಸ್ಥಾನ್‌ಗಳ ಮೂಲಕ ಪ್ರಯಾಣ ಕೈಗೊಂಡನು. ಗೋಬಿ ಮರುಳುಗಾಡನ್ನು ಹಾದುಹೋಗುತ್ತಿದ್ದಾಗ ಬಿರುಗಾಳಿಯೆದ್ದಿತು. ಅವನು ಕುಬ್ಲಾಯ್‌ಖಾನನ ಅರಮನೆಯನ್ನು ತಲುಪಿದನು. ಚೈನಾದಲ್ಲಿ ಅವನು ಇಪ್ಪತ್ತು ವರ್ಷಕ್ಕೂ ಹೆಚ್ಚು ಕಾಲ ವಾಸವಿದ್ದು, ತಾಯ್ನಾಡಿಗೆ ಹಿಂದಿರುಗುವಾಗ ಸುಮಾತ್ರಾ, ಜಾವಾ, ಇಂಡಿಯಾ ಮತ್ತು ಸಿಲೋನ್ ದೇಶಗಳಲ್ಲಿ ಸ್ವಲ್ಪ ಕಾಲ ತಂಗಿದ್ದನು. ಪ್ರಾಚ್ಯದೇಶಗಳಲ್ಲಿ ಸಂಚರಿಸಿದ ಮೊದಲ ಮಧ್ಯಕಾಲೀನ ಪ್ರವಾಸಿಗನೆಂದರೆ, ಜ್ಯುವಿಶ್ ವಿದ್ವಾಂಸನಾದ ಟುಡೆಲಾದ ಬೆಂಜಮಿನ್, ಅವನು ಸಾರಗೋಸ್ಸಾವನ್ನು ಕ್ರಿ.ಶ. ೧೧೬೦ರಲ್ಲಿ ಬಿಟ್ಟು ಯೂರೋಪ್, ಪರ್ಷಿಯಾ ಹಾಗೂ ಇಂಡಿಯಾ ದೇಶಗಳಲ್ಲಿ ಹದಿಮೂರು ವರುಷ ಸುತ್ತಾಡಿ ತನ್ನ ಪ್ರವಾಸಾನುಭವಗಳನ್ನು ದಾಖಲಿಸಿರುವನು. ಅವನ ವಿಸ್ತೃತವಾದ ವರದಿಯಲ್ಲಿ ಜ್ಯುವಿಶ್ ಪಂಗಡಗಳನ್ನೂ ತಾನು ಭೇಟಿಕೊಟ್ಟ

ಪ್ರದೇಶಗಳ ಭೂವಿವರಗಳನ್ನೂ ನೀಡಿರುವನು. ತನ್ನ ಪ್ರವಾಸದ ಕುತೂಹಲಕಾರಿಯಾದ ಅನುಭವಗಳನ್ನು ದಿನಚರಿಯಲ್ಲಿ ದಾಖಲು ಮಾಡಿದ ಮತ್ತೊಬ್ಬ ಪ್ರವಾಸಿಯೆಂದರೆ, ಇಬ್ನಿ ಬಟೂಟ. ಕ್ರಿ.ಶ. ೧೩೦೪ ರಲ್ಲಿ ಟಾಂಗ್ಯೆರ್‌ನಲ್ಲಿ ಜನಿಸಿದ ಇವನು ಕ್ರಿ.ಶ. ೧೩೨೫ರಲ್ಲಿ ಮನೆಯನ್ನು ಬಿಟ್ಟು ಪ್ರವಾಸ ಹೊರಟನು. ಆಫ್ರಿಕಾ ಹಾಗೂ ಪಶ್ಚಿಮಏಷ್ಯಾದ ಹಲವಾರು ದೇಶಗಳ ಮೇಲೆ ಹಾದುಹೋಗುತ್ತ ಇವನು ಕ್ರಿ.ಶ ೧೩೩೩ ರಲ್ಲಿ ಸಿಂಧೂನದಿಯನ್ನು ದಾಟಿದನು. ಇವನು ಇಂಡೋನೇಷ್ಯಾ ಹಾಗೂ ಚೈನಾದವರೆವಿಗೂ ಪ್ರವಾಸ ಕೈಗೊಂಡನು. ಇವನು ಪ್ರಯಾಣ ಮಾಡಿದ ಒಟ್ಟು ೧೭,೦೦೦ ಮೈಲಿಗಳಲ್ಲಿ ೧೪,೦೦೦ ಮೈಲಿಗಳಿಗಿಂತ ಹೆಚ್ಚು ಇಂಡಿಯಾ, ಮಾಲ್ಡೀವ್ಸ್ ಹಾಗೂ ಸಿಲೋನ್‌ಗಳಲ್ಲಿಯೇ ವ್ಯಾಪಕವಾಗಿ ಪ್ರಯಾಣ ಮಾಡಿದನು.

ಮೇಲೆ ತಿಳಿಸಿದ ಕಾಲಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ ಯೂರೋಪ್ ದೇಶದ ಪ್ರವಾಸಿಗರ ವರದಿಗಳೂ ದೊರೆಯುತ್ತವೆ. ಜಾನ್ ಆಫ್ ಮಾಂಟೆ ಕೊರ್ರಿನೋ (John of Monte corrino) ದ ಫ್ರಾನ್ಸಿಸ್ಕೊ ಫ್ರಯಾರನು ೧೩ನೇ ಶತಮಾನದ ಕೊನೆಯ ದಶಕದಲ್ಲಿ ಚೈನಾಕ್ಕೆ ಹೋಗಿ ಹಿಂದಿರುಗುವ ಮಾರ್ಗದಲ್ಲಿ ಭಾರತಕ್ಕೆ ಭೇಟಿ ನೀಡಿದ್ದನು. ಪೋರ್ತುಗೀಸ್ ಇತಿಹಾಸಜ್ಞ ಆಲ್‌ಫೋನ್‌ಜೋ ಡಿ ಅಲ್ಬುಕರ್ಕ್‌ನ ವಿವರಣೆಗಳನ್ನೂ ನಾವಿಲ್ಲಿ ಈ ಸಂದರ್ಭದಲ್ಲಿ ನೆನೆಯಬಹುದು. ನಂತರ ೧೬ ಮತ್ತು ೧೭ನೇ ಶತಮಾನಗಳಲ್ಲಿ ಇನ್ನಷ್ಟು ಯೂರೋಪ್‌ನ ಸನ್ಯಾಸಿಗಳು, ಪ್ರವಾಸಿಗರು, ಸಾಹಸಿಗರು ಭಾರತಕ್ಕೆ ಹಾಗೂ ಇನ್ನಿತರ ದೇಶಗಳಿಗೆ ಜ್ಞಾನದಾಹಿಗಳಾಗಿ ಭೇಟಿ ನೀಡಿದರು.

ಮಧ್ಯಕಾಲದಲ್ಲಿ ಧರ್ಮದ ವ್ಯಾಜದಿಂದ ನಡೆಸಿದ ಪ್ರವಾಸವು ಗಮನಾರ್ಹ ಪ್ರಾಮುಖ್ಯತೆಯನ್ನು ಪಡೆಯಿತು. ಧಾರ್ಮಿಕ ಕಾರಣಗಳಿಗಾಗಿ, ಅಂದರೆ, ಪುಣ್ಯಕ್ಷೇತ್ರಗಳಿಗೆ ಪ್ರವಾಸ ಹೋಗುವ ವಾಡಿಕೆಯು ಪ್ರಪಂಚದ ಹಲವು ಭಾಗಗಳಲ್ಲಿ ನಿರಂತರವಾಗ ನಡೆದಿದೆ. ಮಧ್ಯಕಾಲದ ಅಂತ್ಯದಲ್ಲಿ ಬಹುದೊಡ್ಡ ಪ್ರಮಾಣದ ಯಾತ್ರಾರ್ಥಿಗಳು ಯುರೋಪಿನ ಪ್ರಮುಖ ಚರ್ಚುಗಳಿಗೆ ಪ್ರವಾಸ ಕೈಗೊಂಡಿದ್ದರು. ಕ್ರಿಶ್ಚಿಯನ್ ಮತದ ಪ್ರಚಾರ ಹಾಗೂ ಅದಕ್ಕೆ ಸೇರಿದ (ಮತಾಂತರಗೊಂಡ) ವರಿಂದಾಗಿ ಧಾರ್ಮಿಕ ಪ್ರವಾಸ ಹೆಚ್ಚಿನ ರಂಗು ಪಡೆಯಿತು. ಧರ್ಮದ ಬಗೆಗೆ ಜನರಲ್ಲಿ ಗಾಢವಾದ ನಂಬುಗೆಯಿರುವುದರಿಂದಾಗಿ ಶತಶತಮಾನಗಳಿಂದಲೂ ಧಾರ್ಮಿಕ ಪ್ರವಾಸ ಸಾಗಿ ಬಂದಿದೆ. ಜನರನ್ನು ಒಂದುಗೂಡಿಸುವ ಪ್ರಬಲ ಶಕ್ತಿ ಧರ್ಮಕ್ಕಿದೆ. ಧಾರ್ಮಿಕ ಪ್ರಚಾರವು ಜನರಲ್ಲಿ ಧರ್ಮದ ಬಗೆಗೆ ಇರುವ ನಂಬಿಕೆಯನ್ನು ಇನ್ನಷ್ಟು ಬಲಗೊಳಿಸುತ್ತದೆ; ಅನ್ಯ ದೇಶಗಳ ಜನರ ನಡಾವಳಿಗಳು, ಪದ್ಧತಿಗಳು, ವೈವಿಧ್ಯಮಯವಾದ ಆಹಾರ,

ವೇಷಭೂಷಣಗಳು ಇವುಗಳನ್ನು ತಿಳಿಯಲು ಸಹಾಯಮಾಡುತ್ತದೆ. ಇದು ಪರಸ್ಪರ ಅರಿತು ಅಭಿಪ್ರಾಯಗಳ ವಿನಿಮಯ ಮಾಡಿಕೊಳ್ಳಲು, ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ಸಹಾಯಮಾಡಿದೆ. ಧಾರ್ಮಿಕ ಪ್ರವಾಸವು ಧರ್ಮದ ಹೆಸರಿನಲ್ಲಿ ಒಂದು ಧರ್ಮದ ಜನರಲ್ಲಿ ಐಕ್ಯಮತ್ಯವನ್ನುಂಟುಮಾಡುತ್ತದೆ. ಕ್ರೈಸ್ತಧರ್ಮವು ಮೊದಲಿಗೆ ಯೂರೋಪಿನಲ್ಲಿ ನಂತರ ಅಮೇರಿಕಾದಲ್ಲಿ; ಬೌದ್ಧಧರ್ಮ, ಇಸ್ಲಾಂಧರ್ಮ, ಹಿಂದೂಧರ್ಮಗಳು ಏಷ್ಯಾದಲ್ಲಿ ಅವಕಾಶ ಪಡೆದು ವೈಶಿಷ್ಟ್ಯಪೂರ್ಣವಾದ ಭಾಷೆ, ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ವೇದಾಂತ -ಇವುಗಳನ್ನು ಅಭಿವೃದ್ಧಿಪಡಿಸುವ ಚಿರಸ್ಮರಣೀಯ ಕಾರ್ಯವನ್ನು ಮಾಡಿತು. ಹೀಗೆ ಧರ್ಮವು ವಿಶ್ವದ ಜನತೆಯ ಬದುಕಿನಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದು, ಅದು ಪ್ರವಾಸದಲ್ಲಿಯೂ ನಿರ್ಣಾಯಕ ಪಾತ್ರವನ್ನು ಹೊಂದಿದೆ.

ವಾಣಿಜ್ಯ ಹಾಗೂ ಧಾರ್ಮಿಕ ಕಾರಣಗಳಿಗೆ ನಡೆಸುವ ಪ್ರವಾಸದಷ್ಟು ಪ್ರಾಮುಖ್ಯತೆಯನ್ನು ಜ್ಞಾನದ ಹಸಿವೆಯಿಂದ ನಡೆಸುವ ಪ್ರವಾಸವು ಪಡೆದಿಲ್ಲ. ಆದರೂ ಜ್ಞಾನಪಿಪಾಸುಗಳು ನಡೆಸಿದ ಪ್ರವಾಸವು ಅಲ್ಪದ್ದೇನಲ್ಲ. ಸಂಪದ್ಭರಿತ ಹಾಗೂ ಸುಶಿಕ್ಷಿತ ದೇಶಗಳ ಜನರು (ವಿಶ್ವದಲ್ಲಿ ಆಳ್ವಿಕೆಯ ದೃಷ್ಟಿಯಿಂದ ಇನ್ನೂ ಪ್ರಸಿದ್ಧರಲ್ಲದವರು), ಪ್ರತಿಷ್ಠೆಯ ಪರಾಕಾಷ್ಠೆಯನ್ನೇರಿ ಮರೆಯಾದ, ಆದರೆ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಗಾಗಿ ಪ್ರಸಿದ್ಧವಿರುವ ದೇಶಗಳಿಗೆ ಭೇಟಿ ಕೊಡುತ್ತಿದ್ದರು. ಉದಾಹರಣೆಗೆ ರೋಮನ್ನರು ಗ್ರೀಸ್ ಹಾಗೂ ಪೂರ್ವ ಮೆಡಿಟರೇನಿಯನ್ ದೇಶಗಳಿಗೂ, ಹದಿನಾರನೆ ಶತಮಾನದ ನಂತರ ಇಂಗ್ಲಿಷರು ಇಟಲಿಗೂ ಭೇಟಿಕೊಟ್ಟಿದ್ದರು. ಈ ಜ್ಞಾನಪಿಪಾಸು ಪ್ರವಾಸಿಗಳು ಮರೆತ ಪ್ರಪಂಚದ ಜ್ಞಾನವನ್ನೂ, ಪ್ರಾಚ್ಯವಸ್ತುಗಳನ್ನೂ, ಸುಸಂಸ್ಕೃತ ಸಭ್ಯ ಸಮಾಜವನ್ನೂ ಗೌರವಿಸಿದರು. ಕ್ರಿ.ಶ. ೧೭೬೩ರ ವರೆಗಿನ ಕಾಲಾವಧಿಯನ್ನು ಸುವರ್ಣಕಾಲವೆನ್ನಬಹುದು. ಈ ಕಾಲಾವಧಿಯಲ್ಲಿ ಶ್ರೇಷ್ಠ ಕವಿಗಳು, ಬರಹಗಾರರು ಹಾಗೂ ಬುದ್ಧಿಜೀವಿಗಳು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಮತ್ತು ಹೊಸದಾದ ಸಾಹಿತ್ಯ, ಚಿತ್ರ, ಸಂಗೀತ, ಕುಶಲಕಲೆಗಳನ್ನು ಅರಿಯಲು ಇಟಲಿ ಹಾಗೂ ಸಮೀಪವಿರುವ ಇತರ ದೇಶಗಳಿಗೆ ಭೇಟಿಕೊಟ್ಟರು.

ಖುಷಿ ಸಂಚಾರ (pleasure travel)ಈಗ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಹಿಂದೆ ರೋಮನ್ ಚಕ್ರಾಧಿಪತ್ಯದಲ್ಲೂ ಇದ್ದಿತೆಂದು ಹೇಳಬಹುದು. ಬಹುಶಃ ರೋಮನ್ನರು ಮೊದಲ ಖುಷಿ ಸಂಚಾರಿಗರು. ರೋಮನ್ ಸಾಮ್ರಾಜ್ಯದ ಒಳ್ಳೆಯ ಸಂಪರ್ಕ ವ್ಯವಸ್ಥೆ (communication system) ಹಾಗೂ ರಕ್ಷಣೆಗಳಿಂದಾಗಿ ಪ್ರವಾಸವು ಹೆಚ್ಚಿನ ಚಟುವಟಿಕೆಯನ್ನು ಪಡೆಯಿತು. ರೋಮ್‌ನಲ್ಲಿ ಪ್ರಾಯೋಜಿತವಾದ

ರಸ್ತೆಗಳಿದ್ದುವು. ಮತ್ತು ರೋಮನ್ನರು ಎಲ್ಲಿ ಹೋದರೂ ಹೆಚ್ಚು ಹೆಚ್ಚಾಗಿ ಹೊಸ ರಸ್ತೆಗಳ ನಿರ್ಮಾಣ ಕೈಗೊಂಡರು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಇರುವ ಅಂತರ ಹಾಗೂ ಅದನ್ನು ತಲುಪಲು ತೆಗೆದುಕೊಳ್ಳುವ ಕಾಲ, ವಿಸ್ತೃತವಾದ ದಾರಿ ಸೂಚನೆ, ಮುಖ್ಯ ರಸ್ತೆಗಳ ಹೆಸರು -ಇವನ್ನೆಲ್ಲಾ ಒಳಗೊಂಡ ಪ್ರವಾಸಿ ಸಾಹಿತ್ಯವನ್ನು ಅವರು ಹೊರತಂದರು. ರೋಮನ್ನರು ದಿನವೊಂದಕ್ಕೆ ಒಂದು ನೂರಕ್ಕಿಂತಲೂ ಹೆಚ್ಚಿನ ನೈಲಿಗಳನ್ನು ಕುದುರೆಗಳನ್ನು ಬದಲಿಸುತ್ತಾ ಸಂಚರಿಸಲು ಸಮರ್ಥರಾಗಿದ್ದರು. ಅವರು ಪ್ರಮುಖವಾಗಿ ಮೆಡಿಟರೇನಿಯನ್ ಪ್ರದೇಶಗಳಲ್ಲಿನ ಪ್ರಸಿದ್ಧ ದೇವಾಲಯಗಳನ್ನು, ಅದರಲ್ಲೂ ಮುಖ್ಯವಾಗಿ ಸ್ಮಾರಕಗಳನ್ನು ಹಾಗೂ ಈಜಿಪ್ಟಿನ ಪ್ರಸಿದ್ಧ ಪಿರಮಿಡ್ಡುಗಳನ್ನು ನೋಡಲು ಸಂಚಾರ ಹೋಗುತ್ತಿದ್ದರು. ರೋಮನ್ನರು ರಜೆಯ ಸಂದರ್ಭಗಳಲ್ಲಿ, ನಿರ್ದಿಷ್ಟವಾಗಿ ಒಲಂಪಿಕ್ ಕ್ರೀಡೆಗಳನ್ನು ನೋಡಲು ಪ್ರವಾಸ ಕೈಗೊಳ್ಳುತ್ತಿದ್ದರು.

ಈ ಕಾಲಮಾನದಲ್ಲಿ 'ಸ್ಪಾಸ್' (spas) ಹಾಗೂ ಸಮುದ್ರ ದಂಡೆಯ ವಿಶ್ರಾಂತಿ ಸ್ಥಳಗಳು ಅಭಿವೃದ್ಧಿಗೊಂಡುದನ್ನು ಖುಷಿ ಸಂಚಾರದೊಂದಿಗೆ ಹೊಂದಿಸಬಹುದಾಗಿದೆ. ಔಷಧಿ ಸ್ನಾನಗಳು (Medicinal baths) ಹಾಗೂ ಸಮುದ್ರ ದಂಡೆಯ ವಿಶ್ರಾಂತಿ ಸ್ಥಳಗಳನ್ನು ಮುಂದೆ 'ಸ್ಪಾಸ್'ಗಳೆಂದು ಕರೆಯಲಾಯಿತು. ರೋಮನ್ನರಲ್ಲಿ ಇದು ಬಹಳ ಪ್ರಸಿದ್ಧಿಯನ್ನು ಪಡೆಯಿತು. ಖನಿಜಯುಕ್ತ ಜಲವನ್ನು ಸೇವಿಸುವುದರ ಮೂಲಕ, ಇಲ್ಲವೆ ಅದರಲ್ಲಿ ಸ್ನಾನ ಮಾಡುವುದರ ಮೂಲಕ ರೋಗಗಳಿಂದ ಮುಕ್ತರಾಗಬಹುದೆಂಬ ನಂಬಿಕೆಯನ್ನು 'ಸ್ಪಾ'ವು ತನ್ನ ಮೂಲದಲ್ಲಿ ಹೊಂದಿದೆ. 'ಸ್ಪಾಸ್'ನ್ನು ಬಳಸುವ ರೋಗಿಗಳು ನಿರ್ದಿಷ್ಟ ಬದಲಾವಣೆಗಳಿಗೆ ಒಳಗಾಗಬೇಕಾಗಿತ್ತು. ಮುಂದೆ, ಕ್ರಮಕ್ರಮವಾಗಿ ಸ್ಪಾ ವಿಶ್ರಾಂತಿ ಸ್ಥಾನಗಳು ಔಷಧೋಪಚಾರಗಳ ಜೊತೆಗೆ ಖುಷಿ ಹಾಗೂ ಮನರಂಜನಾ ಸೌಲಭ್ಯಗಳನ್ನೂ ಕಲ್ಪಿಸಿದುವು. ಅಲ್ಲಿಗೆ ಬಂದವರು ಔಷಧ ಸ್ನಾನ ಸುಖವನ್ನನುಭವಿ-ಸಿದ್ದಲ್ಲದೆ ಹಲವು ಬಗೆಯ ಮನರಂಜನೆಗಳನ್ನು ಪಡೆದರು. ನಾಟಕ ಪ್ರದರ್ಶನಗಳು, ಅಂಗ ಸಾಧನಾ ಸ್ಪರ್ಧೆಗಳು, ಹಬ್ಬಗಳು ಹಾಗೂ ಇತರೆ ಪ್ರಕಾರದ ಮನರಂಜನಾ ಕಾರ್ಯಕ್ರಮಗಳು ಮತ್ತು ವಿನೋದಗಳು 'ಸ್ಪಾಸ್' ವಿಶ್ರಾಂತಿ ಧಾಮಗಳಲ್ಲಿ ಏರ್ಪಟ್ಟವು. ಇದರಿಂದಾಗಿ, ಪ್ರವಾಸಿಗರಿಗೆ ಸ್ಪಾಸ್ ಅತ್ಯಂತ ಪ್ರಿಯವಾಯಿತು.

'ಸ್ಪಾಸ್'ದ ಮೂಲ ಬಳಕೆಯ ನಂತರ, ಅದು ಮನರಂಜನೆಯ ಉದ್ದೇಶಕ್ಕಾಗಿ ಬಳಕೆಗೊಂಡಿತು. ಇದು ಯೂರೋಪಿನ ಬಹಳಷ್ಟು ದೇಶಗಳಲ್ಲಿ ಖುಷಿ ಸಂಚಾರದ ಪ್ರಗತಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿತು. ಸಮುದ್ರದಂಡೆಯ ವಿಶ್ರಾಂತಿ ಸ್ಥಾನಗಳ ಬೆಳವಣಿಗೆಯೂ ಇದರ ಜೊತೆಗೆ ಸೇರಿದೆ. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಜನರು ಸಮುದ್ರಜಲದ ಪರಿಣಾಮಕಾರೀ ರೋಗ ನಿವಾರಕ

ಸಾಧ್ಯತೆಯ ಬಗೆಗೆ ವಿಚಾರಮಾಡತೊಡಗಿದರು. ಇದರಿಂದ ಸಮುದ್ರಸ್ನಾನ ಬಹಳ ಪ್ರಸಿದ್ಧಿ ಪಡೆಯಿತು. ಬಹಳಷ್ಟು ಜನರು ಸ್ಪಾಸ್‌ಗಿಂತ ಸಮುದ್ರಸ್ನಾನ ಹೆಚ್ಚು ಪ್ರಯೋಜನಕಾರಿಯೆಂದು ನಂಬಿದರು. ಹೀಗಾಗಿ, ಸ್ಪಾಸ್‌ಗಳಿಗೆ ಪರ್ಯಾಯವಾಗಿ ಸಮುದ್ರದಂಡೆಯ ವಿಶ್ರಾಂತಿಧಾಮಗಳು ಕಾಣಿಸಿಕೊಂಡವು. ೧೮೬೫ರಲ್ಲಿ ಮಧ್ಯ ಯೂರೋಪಿನ ಬ್ರಿಟನ್, ಫ್ರಾನ್ಸ್ ಹಾಗೂ ಇನ್ನಿತರ ಕೆಲವು ದೇಶಗಳಲ್ಲಿ ಪ್ರಮುಖ ಸಮುದ್ರದಂಡೆ ವಿಶ್ರಾಂತಿ ಧಾಮಗಳು ತಲೆಯೆತ್ತಿದುವು. ಏನೇ ಆಗಲಿ, ಸ್ಪಾಸ್ ಹಾಗೂ ಸಮುದ್ರದಂಡೆ ವಿಶ್ರಾಂತಿಧಾಮಗಳು ಪ್ರಪಂಚದಾದ್ಯಂತ ಆಧುನಿಕ ಖುಷಿ ಸಂಚಾರಕ್ಕೆ ದಾರಿ ಮಾಡಿಕೊಟ್ಟುವು. ಪ್ರತಿ ವರ್ಷವೂ ಮಿಲಿಯಗಟ್ಟಲೆ ಜನ ಹಲವಾರು ಸಮುದ್ರದಂಡೆಯ ವಿಶ್ರಾಂತಿಧಾಮಗಳಿಗೆ ಭೇಟಿ ನೀಡಲು ಪ್ರೇರಣೆ ನೀಡಿದುವು.

ಐದನೆಯ ಶತಮಾನದಲ್ಲಿ ರೋಮನ್ ಚಕ್ರಾಧಿಪತ್ಯವು ಕೊನೆಗೊಂಡದ್ದು ಖುಷಿ ಸಂಚಾರಕ್ಕೆ ಬಹುದೊಡ್ಡ ಹೊಡೆತವಾಯಿತು. ಈ ಕಗ್ಗತ್ತಲ ಕಾಲದಲ್ಲಿ ಸಾಹಸಿಗರು ಹಾಗೂ ಧೈರ್ಯಶಾಲಿಗಳು ಮಾತ್ರ ಪ್ರವಾಸ ಕೈಗೊಂಡರು. ಈ ಕಾಲಮಾನದ ಚರಿತ್ರೆಯಲ್ಲಿ ಸಂಚಾರವು ಅಪಾಯಕಾರಿಯೆಂದು ಭಾವಿಸಲಾಗಿದ್ದಿತು. ರೋಮನ್ ಚಕ್ರಾಧಿಪತ್ಯದ ಅಳಿವಿನೊಂದಿಗೆ ವ್ಯಾಪಾರ ಹಾಗೂ ವಾಣಿಜ್ಯೋದ್ಯಮ ತೀವ್ರತರವಾಗಿ ಕುಸಿಯಿತು. ತತ್ಪರಿಣಾಮವಾಗಿ ಪ್ರವಾಸವು ಹಿಂದೆ ಸರಿಯಿತು.

ಯೂರೋಪ್‌ನಲ್ಲಿ ವಾರ್ಷಿಕ ರಜೆಯನ್ನು ಜಾರಿಗೆ ತಂದುದು ಮತ್ತೊಂದು ಗಮನಾರ್ಹ ಸಂಗತಿ. ಅದು ೧೮ನೇ ಶತಮಾನದಲ್ಲಿ ಬಹಳಷ್ಟು ಜನರನ್ನು ದೊಡ್ಡ ಪ್ರಮಾಣದಲ್ಲಿ ಪ್ರವಾಸ ಕೈಗೊಳ್ಳಲು ಪ್ರೋತ್ಸಾಹ ನೀಡಿತು. ಹದಿನೆಂಟನೆಯ ಶತಮಾನವು ಪ್ರವಾಸದ ಮಹೋನ್ನತ ಕಾಲ. (ಸಂಬಳ) ಪಾವತಿ ಮಾಡಿದ ರಜೆಗೆ (Paid holiday) ಮಾರ್ಗದರ್ಶಿಯಾಗಿ ವಾರ್ಷಿಕ ರಜೆ (annual holiday) ಜಾರಿಗೆ ಬಂದು ಪ್ರವಾಸದ ಅತಿಶಯ ಬೆಳವಣಿಗೆಗೆ ಕಾರಣವಾಯಿತು. Holiday ಎಂಬ ಪದ holydays ಎಂಬುದರಿಂದ ಬಂದಿದ್ದು, ಅದು ಧಾರ್ಮಿಕ ಆಚರಣೆಗೆ ಸಂಬಂಧಿಸಿದ್ದಾಗಿದೆ. ಇಂದು ಇದು ಸಾರ್ವತ್ರಿಕವಾಗಿ ಬಳಕೆಯಾಗುತ್ತಿದ್ದು, ಯಾಂತ್ರಿಕವಾದ ದೈನಂದಿನ ದುಡಿಮೆಯ ಜೀವನದಿಂದ ಬಿಡುವು ಅಥವಾ ವಿಶ್ರಾಂತಿ ಮತ್ತು ವಿರಾಮ, ಮನರಂಜನೆ ಹಾಗೂ ವಿನೋದಗಳಿಗೆ ಸಮಯ ಎಂಬ ಅರ್ಥದಲ್ಲಿ ರೂಢಿಯಲ್ಲಿದೆ. ಪ್ರಾಚೀನ ರೋಂನ ವಿಶೇಷವೆಂದರೆ, ಸಾರ್ವತ್ರಿಕ ರಜೆಗಳು ಅತ್ಯಂತ ಸಂತೋಷದಾಯಿಯಾದ ಘಟನೆಗಳಲ್ಲಿ ಒಂದು. ಸಂತೋಷದಾಯಿಯಾದ ಸಾರ್ವತ್ರಿಕ ರಜೆಯೆಂದರೆ ಡಿಸೆಂಬರನಲ್ಲಿ ಆಚರಿಸುವ ಸ್ಯಾಟರ್ನ್ ಹಬ್ಬವಾದ (feast of Saturn) 'ಸ್ಯಾಟರ್‌ನಾಲಿಯಾ' (Saturnalia). ಈ ಸಂದರ್ಭದಲ್ಲಿ ಎಲ್ಲ ವರ್ಗದ ಜನ ಒಂದುಗೂಡಿ ಉಲ್ಲಾಸದಿಂದ

ಹಬ್ಬವನ್ನಾಚರಿಸುವರು. ಯೂರೋಪಿನಲ್ಲೂ ಕೂಡಾ ನಿರ್ದಿಷ್ಟ ದಿನಗಳಂದು ಧಾರ್ಮಿಕ ಹಬ್ಬಗಳನ್ನು ಆಚರಿಸಲಾಗುತ್ತದೆ. ಅಲ್ಲಿ ಸಂತರ (saints) ದಿನಗಳು ಪವಿತ್ರ (holy) ದಿನಗಳಾಗಿದ್ದು, ಅಂದು ಎಲ್ಲರಿಗೂ ಕೆಲಸದಿಂದ ಬಿಡುವು. ಇಂಗ್ಲೆಂಡಿನಲ್ಲಿ ೧೫೫೨ರಲ್ಲಿ ಆರನೇ ಎಡ್ವರ್ಡ್‌ನ ಕಾಲದಲ್ಲಿ 'ಪವಿತ್ರ ದಿನಗಳನ್ನು ಹಾಗೂ ಉಪವಾಸದ ದಿನಗಳನ್ನು ರಕ್ಷಿಸಿಕೊಂಡು ಬರಲು' ಕಾಯಿದೆಯೊಂದನ್ನು ಮಾಡಲಾಯಿತು. ಈ ಕಾಯಿದೆ ಇಂದಿಗೂ (ಸ್ಟಾಟ್ಯೂಟ್ ಪುಸ್ತಕದಲ್ಲಿ) ಉಳಿದುಕೊಂಡು ಬಂದಿದೆ. ಇಂಗ್ಲೆಂಡಿನ ಸಾರ್ವಜನಿಕ ಹಾಗೂ ಅರೆ ಸರಕಾರಿ ಕಛೇರಿಗಳನ್ನು ನಿರ್ದಿಷ್ಟ ಸಂತರ (saints) ದಿನಗಳಂದು ಮುಚ್ಚಲಾಗುತ್ತದೆ. ಕೈಗಾರಿಕಾ ಕ್ರಾಂತಿಯಾಗುವವರೆವಿಗೂ ಅಲ್ಲಿ ಸಾರ್ವತ್ರಿಕ ರಜಾದಿನಗಳಿರಲಿಲ್ಲ. ಆಧುನಿಕ ವಾರ್ಷಿಕ (ಸಂಬಳ) ಪಾವತಿ ಮಾಡಿದ ರಜೆಯ ಕಲ್ಪನೆಯು, ಬಹುತೇಕ ಕೈಗಾರಿಕಾ ಕ್ರಾಂತಿಯ ಪರಿಣಾಮವೆನ್ನಬಹುದು.

ಮಧ್ಯಕಾಲೀನ ಯುಗವು ಬಹುತೇಕವಾಗಿ ಪ್ರವಾಸದ ಬೆಳವಣಿಗೆಗೆ ಒಳ್ಳೆಯ ಕಾಲವಾಗಿರಲಿಲ್ಲ. ಆಧುನಿಕ ಪ್ರವಾಸದ ಕಲ್ಪನೆಯು ೧೯ನೇ ಶತಮಾನದ ಉತ್ತರಾರ್ಧದಲ್ಲಿ ಬಂದು ಪಶ್ಚಿಮ ಯೂರೋಪ್ ಹಾಗೂ ಉತ್ತರ ಅಮೇರಿಕಾದಲ್ಲಿ ಕೈಗಾರಿಕೀಕರಣಗೊಂಡ ಸಮಾಜದ ಜೊತೆ ಕೈಕೈಹಿಡಿದು ಬೆಳೆಯಿತು. ಪಶ್ಚಿಮ ಯೂರೋಪ್ ಹಾಗೂ ಉತ್ತರ ಅಮೇರಿಕಾಗಳ ಕೈಗಾರಿಕೀಕರಣಗೊಂಡ ಸಮಾಜದ ಬೆಳವಣಿಗೆಯು ಆಧುನಿಕ ಪ್ರವಾಸದ ಬೆಳವಣಿಗೆಗೆ ಪ್ರಮುಖ ಕಾರಣವೆನ್ನಬಹುದು. ಕೈಗಾರಿಕಾ ಕ್ರಾಂತಿಯು ಪಾಶ್ಚಾತ್ಯ ಸಮಾಜದಲ್ಲಿ ಬಹುದೊಡ್ಡ ಬದಲಾವಣೆಯನ್ನು ತಂದಿತು. ಕೈಗಾರಿಕಾಕ್ರಾಂತಿಯ ಪೂರ್ವದಲ್ಲಿ ಪ್ರವಾಸವು ಪ್ರಧಾನವಾಗಿ ಜ್ಞಾನವನ್ನು ಪಡೆಯಲು, ವ್ಯಾಪಾರ ಹಾಗೂ ವಾಣಿಜ್ಯದಲ್ಲಿ ತೊಡಗಲು ಹಾಗೂ ತೀರ್ಥಕ್ಷೇತ್ರ ಸಂಚಾರ ಕೈಗೊಳ್ಳಲು ಮಾತ್ರ ಇದ್ದಿತು. ರೋಮನ್ ಚಕ್ರಾಧಿಪತ್ಯದಲ್ಲಿ ಐಶ್ವರ್ಯವಂತರು ಹಾಗೂ ಸಾಕಷ್ಟು ವಿರಾಮವಿರುವವರು ಮಾತ್ರ ಖುಷಿ ಸಂಚಾರದಲ್ಲಿ ತೊಡಗಿರುತ್ತಿದ್ದರು. ಕೈಗಾರಿಕಾಕ್ರಾಂತಿಯು ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ. ದುಡಿಯುವ ವರ್ಗ ಮೊದಲಿಗೆ ವಿರಾಮರಹಿತ ದುಡಿಮೆಯಿಂದ ಹಾಗೂ ತಮ್ಮ ಬಡತನದ ಸ್ಥಿತಿಯಿಂದ ನರಳುತ್ತಿದ್ದಿತು. ಪಟ್ಟಣಗಳಲ್ಲಿ ಜನಸಾಂದ್ರತೆ ದಟ್ಟವಾದಾಗ ಅನಾರೋಗ್ಯದ ಸಾಮಾಜಿಕ ಸ್ಥಿತಿ ತಲೆದೋರಿತು. ಕೈಗಾರಿಕೆಗಳ ಸ್ಥಾಪನೆ ರಭಸಗತಿಯಲ್ಲಿ ಸಾಗಿದಾಗ ಪಟ್ಟಣಗಳು ಹಾಗೂ ಅದರ ಜನಸಾಂದ್ರತೆ ಸಹಜವಾಗಿ, ಬೃಹತ್ಪ್ರಮಾಣದಲ್ಲಿ ಹೆಚ್ಚತೊಡಗಿತು. ಕೆಲಸದ ಒತ್ತಡದಿಂದ ಪಾರಾಗುವುದು ದುಡಿಯುವ ವರ್ಗಕ್ಕೆ ಅನಿವಾರ್ಯವಾಯಿತು. ಅನುಕೂಲಸ್ಥರು ಇದರಿಂದ ತಾತ್ಕಾಲಿಕವಾಗಿ ಬಿಡುಗಡೆಗೊಳ್ಳಲು ವಿಶ್ರಾಂತಿಧಾಮಗಳತ್ತ ಧಾವಿಸಿದರು.

೧೯ನೇ ಶತಮಾನದ ಉತ್ತರಾರ್ಧ ಹಾಗೂ ೨೦ನೇ ಶತಮಾನದ ಆದಿಭಾಗದಲ್ಲಿ ಕೈಗಾರಿಕೀಕರಣದಿಂದಾಗಿ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಹಾಗೆಯೇ ಸಾರಿಗೆ ಮತ್ತು ಮಾಧ್ಯಮಗಳಲ್ಲಿಯೂ ಸ್ವಲ್ಪ ಸುಧಾರಣೆಯಾಯಿತು. ಪಟ್ಟಣವಾಸಿಗಳು ಯಾಂತ್ರಿಕವಾದ ದೈನಂದಿನ ಕೆಲಸಗಳಿಂದ ಬಿಡುಗಡೆ, ಶಾರೀರಿಕ ವ್ಯಾಯಾಮ, ವಿಶ್ರಾಂತಿಗೆ ಅನುಕೂಲಗಳು, ವಿಶ್ರಾಂತಿ -ಇವುಗಳಿಗೆ ತುಡಿಯತೊಡಗಿದರು. ಇದರ ಪರಿಣಾಮವಾಗಿ ವಿಶ್ರಾಂತಿಧಾಮಗಳು, ಆರೋಗ್ಯಧಾಮಗಳು ಹೆಚ್ಚು ಹೆಚ್ಚಾಗಿ ತಲೆಯೆತ್ತತೊಡಗಿದುವು. ೧೯ನೇ ಶತಮಾನದಲ್ಲಿ ಮಧ್ಯ ಯೂರೋಪ್‌ನ ಬೃಹತ್ ಪಟ್ಟಣಗಳು ಹಾಗೂ ರಾಜಧಾನಿ ಕೇಂದ್ರಗಳಿಂದ ಸಾಕಷ್ಟು ದೂರದಲ್ಲಿ ದೊಡ್ಡ ಪ್ರಮಾಣದಲ್ಲಿ ಖುಷಿ ವಲಯಗಳು (Pleasure zones)ಬೆಳೆದುದನ್ನು ನಾವು ನೋಡುತ್ತೇವೆ. ನೀಸ್‌ನೊಂದಿಗೆ ಫ್ರೆಂಚ್ ರಿವೈರಾ, ಕ್ಯಾನಸ್, ಮಾಂಟೆ ಕಾರ್ಲೊ- ಇವು ಆಗಿನ ಖುಷಿ ವಲಯಗಳಾಗಿದ್ದುವು. ೧೯ನೇ ಶತಮಾನದ ಕೊನೆಯ ಭಾಗದಲ್ಲಿ ನಿಸ್ಸಂಶಯವಾಗಿ ರಿವೈರಾ ಅತ್ಯಂತ ಪ್ರಸಿದ್ಧ ಖುಷಿ ವಲಯವಾಗಿದ್ದಿತು. ಎಲ್ಲರೂ ವಿಶ್ರಾಂತಿಗಾಗಿ ದಕ್ಷಿಣದ ಕಡೆ ಧಾವಿಸಿದಾಗ ರಿವೈರಾದ ಪ್ರಗತಿ ಸಾಧ್ಯವಾಯಿತು ಮತ್ತು ಅದು ಯೂರೋಪ್‌ನಲ್ಲಿ ಪ್ರಮುಖ ಪ್ರವಾಸಿ ವೈಲಕ್ಷಣ್ಯವನ್ನು ಪಡೆಯಿತು. ಧನಿಕರ ಅಗತ್ಯಗಳನ್ನು ಪೂರೈಸುವ ಸಲುವಾಗಿ ಹಲವಾರು ಆರೋಗ್ಯಧಾಮಗಳು ಉದ್ಭವವಾದುವು. ಬೇಸಿಗೆಯ ಉಷ್ಣಾಂಶವು ಸಹಿಸಲಸಾಧ್ಯವಾದದ್ದಷ್ಟೇ ಅಲ್ಲದೆ ಆರೋಗ್ಯಕ್ಕೆ ಹಾನಿಕಾರಕವೂ ಆಗಿದ್ದಿತು. ಸು. ೧೯೨೦ರ ವೇಳೆಗೆ ಕ್ಯಾನಸ್ ಇಂಗ್ಲಿಷ್ ಆರೋಗ್ಯ ಧಾಮಗಳ ಜೊತೆ ಹೋಲಿಕೆಗೆ ಅರ್ಹತೆ ಪಡೆದಿದ್ದಿತು. ೧೯ನೇ ಶತಮಾನದ ಕೊನೆಯಲ್ಲಿ ಇಂಗ್ಲಿಷ್ ಹಾಗೂ ಫ್ರೆಂಚ್ ಆರೋಗ್ಯಧಾಮಗಳ ಜೊತೆ ರಿವೈರಾ ಸಹಾ ಪ್ರಸಿದ್ಧಿ ಪಡೆಯುತ್ತಿದ್ದಿತು. ೨೦ನೇ ಶತಮಾನದ ಆರಂಭದ ವೇಳೆಗೆ, ಧನಿಕ ಅಮೆರಿಕನ್ನರು ಸಾಕಷ್ಟು ಸಂಖ್ಯೆಯಲ್ಲಿ ರಿವೈರಾ ಕಡೆ ಬರತೊಡಗಿದರು. ಯುರೋಪಿಯನ್ ಪ್ರವಾಸಿ ರಂಗದಲ್ಲಿ ಅಮೇರಿಕನ್ನರು ತಡವಾಗಿ ಕಾಣಿಸಿಕೊಂಡದ್ದಕ್ಕೆ ಬಹುವಾಗಿ ದೂರಾಂತರ ಕಾರಣವೆನ್ನಬಹುದು.

## ರೈಲು ಪ್ರಯಾಣ

ಪ್ರವಾಸಿ ಚರಿತ್ರೆಯಲ್ಲಿ ೧೯ನೇ ಶತಮಾನದಲ್ಲಿ ರೈಲುಗಳ ಬಳಕೆಯಾದುದು ಮಹತ್ವದ ಸಂಗತಿಯಾಗಿದೆ. ಇಂಗ್ಲೆಂಡ್‌ನಲ್ಲಿ ೧೮೩೦ ರಲ್ಲಿ ಮೊದಲಿಗೆ ರೈಲಿನಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲಾಯಿತು. ಇಂಗ್ಲೆಂಡಿನಲ್ಲಿ ಲಿವರ್‌ಪೂಲ್ ಹಾಗೂ ಮ್ಯಾಂಚೆಸ್ಟರ್ ನಡುವೆ ಹೊಸ ರೈಲುಮಾರ್ಗ ಪೂರ್ಣಗೊಂಡಿತು. ಆದರೂ ವ್ಯವಸ್ಥಿತವಾದ ರೈಲು ಸಂಚಾರ ೧೮೪೧ರಿಂದ ಪ್ರಾರಂಭವಾಯಿತು. ಡರ್ಬಿಶೈರ್‌ನ

ಓರ್ವ ಬ್ಯಾಪ್ಟಿಸ್ಟ್ ಬೋಧಕನು ಲೈಸೆಸ್ಟರ್‌ನಲ್ಲಿ ನಡೆಯುತ್ತಿದ್ದ ಟೆಂಪರಾನ್ಸ್ ಸಭೆಗೆ ಪ್ರಯಾಣ ಮಾಡುತ್ತಿದ್ದನು. ಸ್ಪೆಷಲ್ ಟ್ರೈನನ್ನು ಪಡೆಯುವ ಹೊಸ ವಿಚಾರವೊಂದರಿಂದ ಸ್ಫೂರ್ತಿಗೊಂಡ ಅವನು ಲೈಸೆಸ್ಟರ್‌ನ ಟೆಂಪರಾನ್ಸ್ ಸಂಘದ ತನ್ನ ಮಿತ್ರರನ್ನು ಅಲ್ಲಿಂದ ಲೊ ಬೊರೋಗೆ (Lough borough) ತ್ರೈಮಾಸಿಕ ಸಭೆಯೊಂದರಲ್ಲಿ ಭಾಗವಹಿಸಲು ಕರೆದುಕೊಂಡು ಹೋಗಿ ಬರಲು ನಿಶ್ಚಯಿಸಿದನು. ಇದೆಲ್ಲದರ ಹಿಂದಿದ್ದವನು ಥಾಮಸ್ ಕುಕ್. ಅವನು ತನ್ನ ಆಲೋಚನೆಯನ್ನು ಮಿತ್ರರಲ್ಲಿ ಪ್ರಸ್ತಾಪಿಸಿದನು. ಕೆಲವು ವಾರಗಳ ನಂತರ, ೫೭೦ ಮಂದಿ ಪ್ರಯಾಣಿಕರು ವಿಶೇಷವಾಗಿ ಇಳಿಸಿದ ದರಗಳಲ್ಲಿ ಮಿಡ್ ಲ್ಯಾಂಡ್ ಕೌಂಟೀಸ್ ರೈಲ್ವೆಯಲ್ಲಿ ಪ್ರಯಾಣ ಮಾಡಿದರು. ಈ ಸಾಹಸದಿಂದಾಗಿ ಬೇರೆ ಬೇರೆ ಸುಂದರ ತಾಣಗಳಿಗೆ ಮನರಂಜನಾ ಪ್ರವಾಸ ಕೈಗೊಳ್ಳಲು ಸ್ಫೂರ್ತಿ ದೊರೆಯಿತು. ೧೮೪೩ರಲ್ಲಿ ಲೈಸೆಸ್ಟರ್‌ನಿಂದ ಡರ್ಬಿಗೆ ೩೦೦೦ ಶಾಲಾ ವಿದ್ಯಾರ್ಥಿಗಳನ್ನು ಸಂಚಾರಕ್ಕೆ (trip) ಕರೆದೊಯ್ಯಲಾಯಿತು. ಕುಕ್ಕನು ೧೮೪೮ ರಿಂದ ೧೮೬೩ರ ವರೆವಿಗೆ ಸ್ಕಾಟ್‌ಲ್ಯಾಂಡ್‌ನ ವರ್ತುಲ ಪ್ರವಾಸವನ್ನು ಕೈಗೊಂಡು, ಅದರಲ್ಲಿ ಸೀಸನ್ ಒಂದಕ್ಕೆ ೫೦೦೦ ಪ್ರವಾಸಿಗರಂತೆ ಕರೆದೊಯ್ದನು.

೧೮೩೦ರಲ್ಲಿ ಪ್ರಾರಂಭಗೊಂಡ ಲಿವರ್‌ಪೂಲ್ ಹಾಗೂ ಮ್ಯಾಂಚೆಸ್ಟರ್ ನಡುವಣ ರೈಲು ಸಂಚಾರದಿಂದ ಉತ್ತೇಜನಗೊಂಡ ಯುರೋಪ್‌ನ ಇತರೆ ದೇಶಗಳೂ ರೈಲು ಹಾದಿಯನ್ನು ಪ್ರಾರಂಭಿಸಿದುವು. ಫ್ರಾನ್ಸ್, ಆಸ್ಟ್ರಿಯಾ ಹಾಗೂ ಸ್ವಿಜರ್‌ಲ್ಯಾಂಡ್‌ಗಳಲ್ಲಿ ರೈಲು ಹಾದಿ ಹಾಕಲ್ಪಟ್ಟಿತು. ಸಾರಿಗೆ ತಂತ್ರಜ್ಞಾನದಲ್ಲಾದ ಈ ಕ್ರಾಂತಿಯಿಂದಾಗಿ ಯೂರೋಪಿಯನ್ ಪ್ರವಾಸೋದ್ಯಮದಲ್ಲಿ ತತ್‌ಕ್ಷಣದ ವಿಸ್ತರಣ ತಲೆದೋರಿತು. ೧೮೮೧ರಲ್ಲಿ ರೈಲು ಸಂಚಾರದಲ್ಲಿ ೬೦೦ ಮಿಲಿಯಕ್ಕೂ ಮೀರಿದ ಪ್ರಯಾಣಿಕರನ್ನು ಕರೆದೊಯ್ಯಲಾಯಿತು. ನೂರು ಸುಪ್ರಸಿದ್ಧ ಕಂಪನಿಗಳು ಇದರಲ್ಲಿ ವ್ಯವಹರಿಸ-ತೊಡಗಿದುವು. ರೈಲ್ವೆಯವರು ಈಗ ಪ್ರವಾಸಾಭಿವೃದ್ಧಿಯಲ್ಲಿ ಆಸಕ್ತಿ ವಹಿಸತೊಡಗಿದರು ಹಾಗೂ ಈ ವ್ಯವಸ್ಥೆಯನ್ನು ಪರಿಷ್ಕರಿಸುವ ವಿಚಾರ ಮಾಡಿದರು. ಈಗ ಇದರಲ್ಲಿ ಸ್ಪರ್ಧೆಯ ಅಂಶವೂ ಸೇರಿದ್ದರಿಂದಾಗಿ ಬೇರೆ ಬೇರೆ ರೈಲ್ವೆ ಕಂಪನಿಯವರು ಪ್ರವಾಸವನ್ನು ಸಾಧ್ಯವಾದಷ್ಟು ಸುಖಕರವಾಗಿಸಲು ಪ್ರಯತ್ನಿಸಿದರು. ೧೮೭೦ರ ಪ್ರಾರಂಭದಲ್ಲಿ ಅಮೆರಿಕನ್ನರಾದ ಜಿ.ಎಂ. ಪುಲ್‌ಮನ್ ಮೊದಲ ದರ್ಜೆ ರೈಲ್ವೆ ಪ್ರವಾಸವನ್ನು ಜಾರಿಗೆ ತಂದನು. ಅವನು ರೈಲು ಗಾಡಿಗಳನ್ನು ವೈಭವಯುತವಾಗಿ ಅಲಂಕರಿಸಿ, ಅಲ್ಲಿ ಊಟದ ಸೌಲಭ್ಯವನ್ನೂ ಕಲ್ಪಿಸಿದನು. ಈಗ ದೂರ ಪ್ರಯಾಣವನ್ನು, ರೈಲಿನಲ್ಲಿ ದೊರೆಯುವ ಸುಖ ಸೌಲಭ್ಯಗಳನ್ನು ಪಡೆದು ಆನಂದದಿಂದ ಪ್ರವಾಸ ಮಾಡಲು ಸಾಧ್ಯವಾಯಿತು. ಅಮೆರಿಕಾದಲ್ಲಿ ನಿರ್ಮಾಣಗೊಂಡ ಪುಲ್‌ಮನ್ ಕಾರ್‌ಗಳನ್ನು ಇಂಗ್ಲೆಂಡ್ ಹಾಗೂ ಯೂರೋಪ್‌ನ ಬೇರೆ ದೇಶಗಳ ರೈಲು ಕಂಪನಿಗಳಿಂದ ಆಮದು ಮಾಡಲಾಯಿತು.

ದೂರ ಪ್ರವಾಸಕ್ಕೆ ಈ ಕಾರುಗಳು ಬಹಳ ಅನುಕೂಲವಾಗಿದ್ದು ಇವನ್ನು ಅಮೇರಿಕಾದಲ್ಲಿ ಮೊದಲಿಗೆ ಜಾರಿಗೆ ತರಲಾಯಿತು. ೧೯೭೨ರಲ್ಲಿ ಪುಲ್ ಮನ್ ಕಂಪನಿಯು ೭೦೦ ಕಾರುಗಳನ್ನು ಹೊಂದಿದ್ದು, ೧೫೦ ಬೇರೆ ಬೇರೆ ಕಂಪನಿಗಳು ಒಪ್ಪಂದದ ಮೇರೆಗೆ ೩೦,೦೦೦ ಮೈಲಿಗಳಿಗೂ ಮಿಕ್ಕು ಕಾರ್ಯಾಚರಣೆಯಲ್ಲಿ ತೊಡಗಿದ್ದುವು. ನಗರೀಕರಣದಿಂದಾಗಿ ಪಟ್ಟಣದ ಜೀವನ ಅಸಹನೀಯವಾಗತೊಡಗಿ ಅದರಿಂದ ಬಿಡುಗಡೆ ಹೊಂದಲು ರೈಲು ಸಂಚಾರ ಅವಕಾಶ ಮಾಡಿಕೊಟ್ಟಿತು. ೧೯ ಮತ್ತು ೨೦ನೇ ಶತಮಾನಗಳಲ್ಲಿ ಸಾಮೂಹಿಕ ಪ್ರವಾಸ (Mass Travel) ಕೈಗೊಳ್ಳಲು ಅತ್ಯಂತ ಪ್ರಬಲವಾದ ಪ್ರೇರಣೆ ರೈಲ್ವೆಯಿಂದ ದೊರೆಯಿತು.

ಭಾರತದಲ್ಲಿ ಏಪ್ರಿಲ್ ೧೬, ೧೮೫೩ರಲ್ಲಿ ಮೊತ್ತಮೊದಲ ಟ್ರೈನ್ (೩೩ ಕಿ.ಮೀ ಅಂತರದ) ಬಾಂಬೆಯ ಬೋರಿಬಂದರ್‌ನಿಂದ ಥಾನಾಗೆ ಚಲಿಸಿತು. ವಿವಿಧ ಗುಂಪಿಗೆ ಸೇರಿದ ೪೦೦ ಮಂದಿ ಅತಿಥಿಗಳನ್ನು ಆಯ್ಕೆ ಮಾಡಿ ಆಹ್ವಾನಿಸಿ ಉಚಿತವಾಗಿ ಕರೆದೊಯ್ಯಲಾಯಿತು. ಭಾರತದಲ್ಲಿ ರೈಲು ಸಂಚಾರವ್ಯವಸ್ಥೆ ವಿಶ್ವದಲ್ಲಿ ಎರಡನೆ ಸ್ಥಾನ ಪಡೆದಿದ್ದು, ಆ ವ್ಯವಸ್ಥೆಯು ಭಾರತ ಸರಕಾರದ ಏಕಸ್ವಾಮ್ಯತೆಯಲ್ಲಿ ಕಾರ್ಯನಿರ್ವಹಿಸುತ್ತಿದೆ.

೧೯ನೇ ಶತಮಾನದಲ್ಲಿ ರೈಲ್ವೆಯಂತೆ ಹಡಗು ಪ್ರಯಾಣವು ಪ್ರವಾಸಕ್ಕೆ ಮಹತ್ವದ ಕೊಡುಗೆಯನ್ನು ನೀಡಿತು. ವಿಶೇಷವಾಗಿ ಯೂರೋಪ್‌ನಲ್ಲಿ ದೇಶೀಯ ಪ್ರವಾಸಕ್ಕೆ ರೈಲುಗಳು ಕಾರಣವಾದರೆ, ಹಡಗು ಎಲ್ಲೆಗಳನ್ನು ದಾಟಿ ಅಂತರ್ ದೇಶೀಯ ಪ್ರವಾಸದಲ್ಲಿ ದೊಡ್ಡ ಹೆಜ್ಜೆಹಾಕಿತು. ಹಡಗಿನ ತಾಂತ್ರಿಕ ಕೌಶಲ್ಯವು ೧೯ನೇ ಶತಮಾನದಲ್ಲಿ ಅನೇಕ ಬದಲಾವಣೆಗಳನ್ನು ತಂದಿತು. ಅಮೆರಿಕಾದಲ್ಲಿ ಅಸಂಖ್ಯ ತೇಲುವ ಹಡಗುಗಳ ನಿರ್ಮಾಣವಾಗಿ ಅವು ಇಂಗ್ಲೆಂಡ್ ಅಥವಾ ಇತರ ದೇಶಗಳ ಹಡಗುಗಳಿಗಿಂತ ಶ್ರೇಷ್ಠವಾದುವೆಂದು ಭಾವಿಸಲ್ಪಟ್ಟಿದ್ದುವು. ಅಮೇರಿಕಾ ಹಾಗೂ ಅಟ್ಲಾಂಟಿಕ್‌ಗಳ ನಡುವೆ ವ್ಯಾಪಾರ ಹಾಗೂ ವಾಣಿಜ್ಯ ಮತ್ತು ಪ್ರಯಾಣಿಕರ ಸಾಗಣೆಯ ಸಲುವಾಗಿ ಮಾಧ್ಯಮಗಳ ಅಗತ್ಯವಿರುವುದನ್ನು ಇಂಗ್ಲಿಷರು ಕಂಡುಕೊಂಡರು. ಇದರ ಪರಿಣಾಮವಾಗಿ ಸಮುದ್ರದ ಮೇಲಣ ಹಡಗು ಸಂಚಾರವು ಅತ್ಯದ್ಭುತವಾದ ಪ್ರಗತಿಯನ್ನು ಸಾಧಿಸಿತು. ಇಂಗ್ಲೆಂಡಿನ ಕುನಾರ್ಡ್ ಸ್ಟೀಂಶಿಪ್ಸ್ ಕಂಪನಿಯ ಚರಿತ್ರೆಯು ಉತ್ತರ ಅಟ್ಲಾಂಟಿಕ್ ಸಾಗರದ ಮೇಲೆ ಹಡಗು ಸಂಚಾರದಲ್ಲಾದ ಪ್ರಗತಿಯ ವೈಲಕ್ಷಣ್ಯಗಳನ್ನು ತಿಳಿಯಹೇಳುತ್ತದೆ. ಕಾಲ ಸರಿದಂತೆ ೧೯ನೇ ಶತಮಾನದ ಕೊನೆಯ ಭಾಗದಲ್ಲಿ ವಲಸಿಗ ಸಂಚಾರವು (Emigrant Trffic)ಉತ್ತರ ಅಟ್ಲಾಂಟಿಕ್ ಸಾಗರದ ಮೇಲಣ ಪ್ರವಾಸದಲ್ಲಿ ಅತ್ಯಂತ ಪ್ರಮುಖ ಅಂಶವಾಯಿತು. ಯುರೋಪಿನ ಜನರಿಗೆ ಆ ಕಾಲಕ್ಕೆ ಅಮೆರಿಕಾವು ಅವಕಾಶಗಳು

ಹಾಗೂ ಸಂಪತ್ತಿನಿಂದ ತುಂಬಿರುವ ಒಂದು ಹೊಸ ಪ್ರಪಂಚವಾಗಿ ಕಂಡುಬಂದಿತು. ಸಂಪತ್ತನ್ನು ಅರಸಿಕೊಂಡು ಯೂರೋಪಿನಿಂದ ಅಸಂಖ್ಯಾತ ಜನರು ಅಮೆರಿಕಾಕ್ಕೆ ವಲಸೆ ಹೋದರು. ಈ ಹೊಸ ಪ್ರಪಂಚಕ್ಕೆ ಮೊದಲಿಗೆ ಗ್ರೇಟ್ ಬ್ರಿಟನ್ ನಂತರ ಜರ್ಮನಿ ಹಾಗೂ ಇತರ ದೇಶಗಳವರು ಪ್ರಮುಖ ವಲಸಿಗರಾಗಿ ಬರತೊಡಗಿದರು. ಅನೇಕ ಮಂದಿ ಪ್ರವಾಸಿಗಳಾಗಿ ಈ ಹೊಸ ಪ್ರಪಂಚಕ್ಕೆ ಸಂಚಾರ ಕೈಗೊಂಡರು. ೧೮೬೯ರಲ್ಲಿ ಸುಯೇಜ್ ಕಾಲುವೆ ತೆರೆದಾಗ ಪಶ್ಚಿಮ ಹಾಗೂ ಪೂರ್ವ ರಾಷ್ಟ್ರಗಳ ನಡುವೆ ಅತ್ಯಂತ ಹತ್ತಿರದ ಮಾರ್ಗವನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಇದರ ಫಲವಾಗಿ ದೂರ ಪ್ರಾಚ್ಯ (Far east) ದೇಶಗಳಿಗೆ ಉತ್ತಮ ಹಡಗು ಸಂಚಾರದ ವ್ಯವಸ್ಥೆಯನ್ನು ಜಾರಿಗೆ ತರಲು ಪ್ರಚೋದನೆಯಾಯಿತು.

## ಸಮುದ್ರ ಪ್ರಯಾಣ

ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದಲ್ಲಿ ಪರಿಮಿತ ಪ್ರಮಾಣದಲ್ಲಿ ವಿನೋದಕ್ಕಾಗಿ ಸಮುದ್ರದ ಮೇಲೆ ಪ್ರಯಾಣ ಮಾಡಲು ಹಡಗುಗಳನ್ನು ಬಳಸಲಾಯಿತು. ೨೦ನೇ ಶತಮಾನದ ಪ್ರಾರಂಭದವರೆವಿಗೂ ಹಡಗು ಪ್ರಪಂಚದಲ್ಲಿ ವಿನೋದಕ್ಕಾಗಿ ಸಮುದ್ರದ ಮೇಲೆ ಪ್ರಯಾಣ ಮಾಡುವುದು ಪ್ರಮುಖ ಪಾತ್ರವನ್ನು ನಿರ್ವಹಿಸಿರಲಿಲ್ಲ. ಮೊದಲ ಪ್ರಪಂಚ ಯುದ್ಧಕ್ಕೆ ಸ್ವಲ್ಪ ಮೊದಲು ಪ್ರಯಾಣಿಕರು ಹಡಗಿನಲ್ಲಿ ಸಂಚಾರ ಕೈಗೊಳ್ಳುತ್ತಿದ್ದರು. ಈ ಕಾಲವು ಅದರ ವೈಭವದ ಕಾಲವಾಗಿ ಪರಿಗಣಿತವಾಗಿದೆ. ಬೇರೆ ಬೇರೆ ದೇಶಗಳಲ್ಲಿ ಮಿತ ಪ್ರಮಾಣದ ಕಂಪನಿಗಳು ಬೃಹತ್ ಪ್ರಮಾಣದ ವೇಗದ ಹಾಗೂ ಸೌಲಭ್ಯಗಳಿಂದ ಕೂಡಿದ ಹಡಗುಗಳ ಸಂಚಾರವನ್ನು ಏರ್ಪಡಿಸಿದ್ದವು. ಆದಾಗ್ಯೂ ಸಮುದ್ರಾಂತರ ಪ್ರಯಾಣದ ಆಕರ್ಷಣೆ ಧನಿಕರಾದ ಯುರೋಪಿಯನ್ನರು ಹಾಗೂ ಅಮೆರಿಕನ್ನರುಗಳಿಗೆ ಮೀಸಲಾಗಿದ್ದಿತು. ಸುಖಭೋಗಗಳಿಂದ ಕೂಡಿದ ಹಡಗುಗಳಲ್ಲಿ ವಿಶಾಲವಾದ ಜಾಗವನ್ನು ಅಷ್ಟೇನೋ ಶ್ರೀಮಂತರಲ್ಲದ ವಲಸಿಗರ ಸಂಚಾರಕ್ಕೆ ಹಾಗೂ ಬಳಕೆಗೆ ಮೀಸಲುಮಾಡಲಾಗಿದ್ದಿತು. ೨೦ನೇ ಶತಮಾನದ ಮೊದಲರ್ಧಭಾಗದಲ್ಲಿ ವಲಸಿಗರನ್ನು ಅನುಸರಿಸಿ ಬಂದವರು ಬಹುಶಃ ಟ್ರಾನ್ಸ್ ಅಟ್ಲಾಂಟಿಕ್‌ನ ಬಹುಭಾಗದಲ್ಲಿ ಪ್ರವಾಸಿ ಚಳುವಳಿಯನ್ನು ಆರಂಭಿಸಿರಬೇಕು. ನೀರಿನ ಮೇಲಣ ಸಾರಿಗೆಯು ನೆಲ ಹಾಗೂ ಆಕಾಶಮಾರ್ಗದ ಪ್ರವಾಸದ ಪ್ರಗತಿಯಲ್ಲಿ ಮಹತ್ತರವಾದ ತನ್ನ ಕೊಡುಗೆಯನ್ನು ನೀಡಿದೆ. ಅಂತರ್ದೇಶೀಯ ಪ್ರವಾಸಕ್ಕೆ ಆಗ ನಿಯಮಿತವಾದ ಹಡಗು ಸಾರಿಗೆಯನ್ನು ಮೊದಲು ಬಳಸುತ್ತಿದ್ದು, ಈಗ ಅದು ಬಳಕೆಯಲ್ಲಿಲ್ಲವಾಗಿದೆ. ಅಂತರರಾಷ್ಟ್ರೀಯ ಪ್ರವಾಸದ ವಿಸ್ತರಣದ ಕಾರಣವಾಗಿ, ಸಮುದ್ರವನ್ನು ದಾಟಲು ಪ್ರವಾಸಿಗರು ಈಗ ಫೆರ್ರಿ ದೋಣಿಗಳನ್ನು

ಬಳಸುವುದು ಹೆಚ್ಚುತ್ತಿದೆ. ಒಟ್ಟಾರೆಯಾಗಿ ಸಮುದ್ರದ ಮೇಲಣ ಪ್ರವಾಸವು ಒಳ್ಳೆಯ ಭವಿಷ್ಯವನ್ನು ಹೊಂದಿರುವಂತೆ ತೋರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಸಮುದ್ರದ ಮೇಲಣ ಸಾರಿಗೆಯಲ್ಲಾದ ಪ್ರಮುಖ ಪ್ರಗತಿಯೆಂದರೆ, ರಜೆಯ ಪ್ರಯುಕ್ತ ಸಮುದ್ರದ ಮೇಲೆ ಉಲ್ಲಾಸದ ಪ್ರಯಾಣ ಮಾಡುವ ಜನರ ಪ್ರವೃತ್ತಿ. ಮೆಡಿಟರೇನಿಯನ್ ಹಾಗೂ ಕಾರಿಬ್ಬಿಯನ್ ಮತ್ತು ಸೌತ್ ಈಸ್ಟ್ ಏಷ್ಯಾ-ಈ ಸಮುದ್ರಗಳ ಮೇಲೆ ಉಲ್ಲಾಸ ಪ್ರಯಾಣವನ್ನು ಪ್ರವಾಸಿಗರು ಕೈಗೊಳ್ಳುತ್ತಲಿರುವರು.

ಇಪ್ಪತ್ತನೇ ಶತಮಾನಕ್ಕೆ ತಿರುಗಿದಂತೆ ಆಧುನಿಕ ಪ್ರವಾಸದ ಎಲ್ಲ ವೈಲಕ್ಷಣ್ಯಗಳು ಅದರ ಗರ್ಭಾವಸ್ಥೆಯಲ್ಲಿರುವಂತೆ ತೋರುತ್ತದೆ. ಖುಷಿ ಪಡೆಯುವತ್ತ ವಾಲಿದ ಮಾನಸಿಕ ಧೋರಣೆ, ವಿದ್ಯಾಭ್ಯಾಸಕ್ಕಾಗಿ ಅಂಗೀಕೃತವಾದ ಪ್ರವಾಸಿ ಮೌಲ್ಯ, ಭೌತಿಕ ಸಂಪತ್ತಿನಲ್ಲಾದ ಹೆಚ್ಚಳ, ಸಾರಿಗೆಯಲ್ಲಾದ ಪರಿಷ್ಕರಣಗಳು, ಸಾಮಾಜಿಕ ಘನತೆ, ದೈನಂದಿನ ಯಾಂತ್ರಿಕ ದುಡಿಮೆಯಿಂದ ಬಿಡುಗಡೆ ಹೊಂದುವ ಕಾತುರ-ಈ ಎಲ್ಲ ಅಂಶಗಳು ದೊಡ್ಡ ಪ್ರಮಾಣದಲ್ಲಿ ಮನೋರಂಜನೆಯ ಪ್ರವಾಸ ಬೆಳೆಯಲು ಫಲವತ್ತಾದ ಭೂಮಿಯನ್ನು ಸೃಷ್ಟಿಸಿದುವು. ೨೦ನೇ ಶತಮಾನದ ಮೊದಲ ೨೫ ವರ್ಷಗಳಲ್ಲಿ ಪ್ರವಾಸವು ನಿಸ್ಸಂಶಯವಾಗಿ ಭೋಗವಸ್ತುವಾಗಿದ್ದಿತು. ಅದು ಕೆಲವೇ ಕೆಲವು ಮಂದಿ ಉಳ್ಳವರಿಗೆ- ಯಥೇಚ್ಛವಾದ ಕಾಲಾವಕಾಶ ಹಾಗೂ ಕೊಳ್ಳುವಶಕ್ತಿ ಸಾಕಷ್ಟು ಇರುವವರಿಗೆ ನಿಲುಕುವಂತಿದ್ದಿತು. ಆ ರೀತಿಯ ಪ್ರವಾಸವು ತನ್ನದೇ ಆದ ಆಕರ್ಷಣೆಯನ್ನು ಉತ್ತಮ ಅಭಿರುಚಿಯ ವೈಭವಯುಕ್ತ ಹೋಟೆಲ್ಲುಗಳು, 'ಓರಿಯಂಟ್ ಎಕ್ಸ್‌ಪ್ರೆಸ್' ನಂತಹ ದೀರ್ಘಾಂತರ ಟ್ರೆನ್‌ಗಳು ಹಾಗೂ 'ಕ್ವೀನ್ ಮೇರಿ'ಯಂತಹ ಬ್ಲೂ ರಿ ಬೇಂಡ್ ಟ್ರಾನ್ಸ್ ಅಟ್ಲಾಂಟಿಕ್ ಹಡಗುಗಳು -ಇವುಗಳ ಜೊತೆ ಹೊಂದಿದ್ದಿತು. ಹಲವು ಸಂಘ ಸಂಸ್ಥೆಗಳು ಮಧ್ಯಮ ಹಾಗೂ ದುಡಿಯುವ ವರ್ಗದ ಸದಸ್ಯರಲ್ಲಿ ಕೆಲವರನ್ನು ನೇಮಕ ಮಾಡಿಕೊಂಡು ಮನರಂಜನೆ ಪ್ರವಾಸಗಳನ್ನು, ರಜೆಯ ಕ್ಯಾಂಪ್‌ಗಳನ್ನು, ಕೌಟುಂಬಿಕ ವಿಶ್ರಾಂತಿ ಹಾಗೂ ವಿಶ್ರಾಂತಿ ಧಾಮ ಇತ್ಯಾದಿಗಳನ್ನು ವ್ಯವಸ್ಥೆಗೊಳಿಸಿದುವು. ಆದರೆ, ಆ ಕಾಲಕ್ಕೆ ಈ ರೀತಿಯ ಚಟುವಟಿಕೆಗಳಿಂದ ಕೆಲವೇ ಕೆಲವರು ಮಾತ್ರ ಲಾಭ ಪಡೆದರು.

## ಸಂಬಳ ಸಹಿತ ರಜೆಗಳು ಹಾಗೂ ಸಾಮೂಹಿಕ ಪ್ರವಾಸ

ಸಂಬಳ ಸಹಿತ ರಜೆ ಜಾರಿಗೆ ಬರುವುದರೊಂದಿಗೆ ಸಾಮೂಹಿಕ ಪ್ರವಾಸದ ಕಲ್ಪನೆ ಸೇರಿಕೊಂಡಿತು. ೧೯ನೇ ಶತಮಾನದ ಕೊನೆಯ ಭಾಗದಲ್ಲಿ, ದುಡಿಯುವ ವರ್ಗದ ಜನರಿಗೆ ಸಂಬಳ ಸಹಿತ ರಜೆ ಕೊಡುವುದರತ್ತ ಗಮನ ಹರಿಯಿತು. ಈ ವರ್ಗದ ಜನರು ಆಗಲೂ ರೈಲ್ವೆ ಪ್ರವಾಸ ಒದಗಿಸಿಕೊಟ್ಟ ನವೀನ ಸೌಲಭ್ಯಗಳ ಲಾಭ ಪಡೆಯಲಿಲ್ಲ. ಆ ಕಾಲಕ್ಕೆ ಪಶ್ಚಿಮದ ಕೆಲವು ದೇಶಗಳಲ್ಲಿ ಕೆಲವೇ ಕೆಲವು ಕಾರ್ಖಾನೆಗಳು

ತಮ್ಮ ಕಾರ್ಮಿಕರಿಗೆ ಸಂಬಳ ಸಹಿತ ರಜೆಯನ್ನು ಕೊಡಮಾಡಿದುವು. ವಾರ್ಷಿಕ ಸಂಬಳ ಸಹಿತ ರಜೆಯು ಬಹುತೇಕವಾಗಿ ಅಂಗ್ಲರ ಮೂಲವಾಗಿದ್ದು, ಇದು ಸಾಮೂಹಿಕ ಪ್ರವಾಸದ ಪ್ರಗತಿಯ ಮೇಲೆ ಬಲವಾದ ಪ್ರಭಾವ ಬೀರಿದೆ. ೧೯೩೯ರಲ್ಲಿ ಯು.ಕೆ. ಯಲ್ಲಿ ಸುಮಾರು ಹನ್ನೊಂದು ಮಿಲಿಯ ಜನರು ಸಂಬಳ ಸಹಿತ ರಜೆಯ ಕಾಯಿದೆಗೆ ಒಳಪಟ್ಟರು. ಇದು ಜನತೆಯಲ್ಲಿ ಚೈತನ್ಯವನ್ನೂಡಿತು, ಹೊಸ ಕೈಗಾರಿಕೆಗಳಿಗೆ ನಾಂದಿ ಹಾಡಿತು, ಅನೇಕ ಪಟ್ಟಣಗಳ ಹುಟ್ಟು-ಬೆಳವಣಿಗೆಗೆ ಕಾರಣವಾಯಿತು ಮತ್ತು ಮಿಲಿಯಗಟ್ಟಲೆ ಜನರ ಕ್ಷಿತಿಜವನ್ನು ವಿಸ್ತರಿಸಿತು.

೧೯೩೬ರಲ್ಲಿ ಟ್ರೇಡ್ ಯೂನಿಯನ್ ಪ್ರತಿನಿಧಿಗಳ (ಇಂಟರ್ ನ್ಯಾಷನಲ್ ಲೇಬರ್ ಆರ್ಗನೈಸೇಷನ್) ಪ್ರೇರಣೆಯಿಂದಾಗಿ ಆಧುನಿಕ ಪ್ರವಾಸವು ನಿಜಕ್ಕೂ ತನ್ನ ದಾರಿ ಕಂಡುಕೊಂಡಿತು. ಐ.ಎಲ್.ಓ. ತನ್ನ ಮೊದಲ ಒಡಂಬಡಿಕೆಯಲ್ಲಿ ಸಂಬಳ ಸಹಿತ ರಜೆಯನ್ನು ಅಭಿವೃದ್ಧಿಪಡಿಸುವ ಚಳುವಳಿಗೆ ತನ್ನ ಗಂಭೀರವಾದ ಬೆಂಬಲವನ್ನು ವ್ಯಕ್ತಪಡಿಸಿತು, ಬಹುತೇಕವಾಗಿ ಯೂರೋಪಿನ ಹದಿನಾಲ್ಕು ದೇಶಗಳಲ್ಲಿ ಸಂಬಳ ಸಹಿತ ರಜೆಯ ಸಾರ್ವತ್ರಿಕ ಕಾನೂನನ್ನು ಜಾರಿಗೊಳಿಸಲಾಯಿತು. ಅನಂತರ, ಪ್ರವಾಸವು ಅತ್ಯಂತ ಹೆಚ್ಚಿನ ಬೆಳವಣಿಗೆಯನ್ನು ಕಂಡುಕೊಂಡಿತು. ಈಗ ಪ್ರಪಂಚದಾದ್ಯಂತ ಸಂಬಳ ಸಹಿತ ರಜೆಯು ಜಾರಿಗೊಳಿಸಲ್ಪಟ್ಟಿದ್ದು, ಬಹುತೇಕ ದೇಶಗಳಲ್ಲಿ ಕನಿಷ್ಠ ಒಂದರಿಂದ ಮೂರು ವಾರಗಳ ಕಾಲಾವಧಿಯನ್ನು ಕಾನೂನು ಇಲ್ಲವೇ ಯಜಮಾನ ಹಾಗೂ ಕಾರ್ಮಿಕರ ನಡುವೆ ಆದ ಸಾಮೂಹಿಕ ಒಪ್ಪಂದಗಳ ಮೂಲಕ ನಿರ್ದಿಷ್ಟಗೊಳಿಸಲಾಗಿದೆ. ಈಗ ಸಂಬಳ ಸಹಿತ ರಜೆಯ ಹಕ್ಕು ವಿಶ್ವದಾದ್ಯಂತ ಅಂಗೀಕಾರ ಪಡೆದಿದೆ. ದೀರ್ಘಕಾಲೀನ ರಜೆಯನ್ನು ಪಡೆಯುವತ್ತ ಕಾರ್ಮಿಕರ ಒಲವಿದೆ. ಸಂಬಳ ಸಹಿತ ರಜೆಗಳು ಕೈಗಾರಿಕಾ ಉತ್ಪಾದನೆಗೆ ಅಡ್ಡಿಯನ್ನುಂಟುಮಾಡಿಲ್ಲವೆಂಬುದನ್ನು ಮಾಲೀಕರೂ ಕಂಡುಕೊಂಡಿರುವರು. ಸದ್ಯಕ್ಕೆ ಬಹುತೇಕ ರಾಷ್ಟ್ರಗಳಲ್ಲಿ ಕಾನೂನಿನ ಪರಮಿತಿಯಿರುವುದು ಮೂರು ವಾರಗಳಿಗೆ ಮಾತ್ರ. ಕೆಲವು ರಾಷ್ಟ್ರಗಳು ಈ ಮಿತಿಯನ್ನು ದಾಟಿ ನಾಲ್ಕು ವಾರಗಳ ಸಂಬಳ ಸಹಿತ ರಜೆಯನ್ನು ಕೊಟ್ಟಿವೆ. ಈಗ ಪಶ್ಚಿಮ ಯೂರೋಪ್‌ನಲ್ಲಿ ಉತ್ಪಾದನೆಯ ದೃಷ್ಟಿಯಿಂದಲೂ ಐದುವಾರ ಉತ್ಪಾದನಾ ಬಂಡವಾಳವೆಂದು ಭಾವಿಸಲಾಗಿದೆ. ಸಂಬಳಸಹಿತ ರಜೆಯ ಈ ಹೆಚ್ಚುವರಿ ಒಂದು ವಾರವನ್ನು ಇತ್ತೀಚೆಗೆ ಸ್ವೀಡನ್ ಕಾನೂನಿನ ವ್ಯಾಪ್ತಿಗೆ ಒಳಪಡಿಸಿ ಪ್ರಪಂಚದಾದ್ಯಂತ, ೫೦೦ ಮಿಲಿಯಕ್ಕೂ ಹೆಚ್ಚಿನ ಸಂಬಳ ಪಡೆಯುವ ಜನ ಸಂಬಳ ಸಹಿತ ರಜೆಯ ಹಕ್ಕನ್ನು ಪಡೆದಿರುವರು. ಈ ಸಂಖ್ಯೆಯಲ್ಲಿ ಅಂದಾಜು ಅರ್ಧಭಾಗ ಯೂರೋಪಿನಲ್ಲೂ, ಶೇಕಡಾ ೩೦ಕ್ಕೆ ಸ್ವಲ್ಪ ಕಡಿಮೆ ಅಮೆರಿಕೆಯಲ್ಲೂ ಹಾಗೂ ಉಳಿದವರು ಏಷ್ಯಾ ಮತ್ತು ಪೆಸಿಫಿಕ್‌ನಲ್ಲೂ ಇರುವರು. ಈಗ ಪ್ರವಾಸೀ ಮಾರುಕಟ್ಟೆಗೆ ಪ್ರಮುಖ ಅಂತಶ್ಶಕ್ತಿಯು ಸಂಬಳ

ಪಡೆಯುವವರಿಂದ ಹಾಗೂ ಅವರ ಕುಟುಂಬಗಳಿಂದ ದೊರೆಯುತ್ತಿದೆ. ಇನ್ನಷ್ಟು ಕೈಗಾರಿಕೀಕರಣಗೊಂಡದ್ದರ ಫಲವಾಗಿ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತ್ಯಂತರಗಳು ಕಾಣಿಸಿಕೊಂಡುವು. ಇದರಿಂದ ಪ್ರಪಂಚದಲ್ಲಿನ ಸಂಬಳ ಪಡೆಯುವವರ ಸಂಖ್ಯೆಯೂ ಹಿಂದಿನದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಏರಿತು. ಪಶ್ಚಿಮ ರಾಷ್ಟ್ರಗಳಲ್ಲಿ ಕೈಗಾರಿಕೋದ್ಯಮಗಳ ಬೆಳವಣಿಯಿಂದಾಗಿ ಸಂಬಳಸಹಿತ ರಜೆಯ ಕಲ್ಪನೆ ಹುಟ್ಟಿಕೊಂಡು ಆಧುನಿಕ ಪ್ರವಾಸಕ್ಕೆ ದಾರಿ ಮಾಡಿಕೊಟ್ಟಿತು, ಬಲವಾದ ಪ್ರೋತ್ಸಾಹ ನೀಡಿತು.

ಮೊದಲನೆ ಪ್ರಪಂಚಯುದ್ಧ ಪ್ರವಾಸಿ ಚಳುವಳಿಯ ತಾತ್ಕಾಲಿಕ ನಿಲುಗಡೆಗೆ ಕಾರಣವಾಯಿತು. ಯೂರೋಪ್‌ನ ಒಳಗಷ್ಟೇ ಅಲ್ಲದೆ ವಿಶ್ವದಾದ್ಯಂತ ಪ್ರವಾಸಿಗರ ಸಂಚಾರವು ಗಮನಾರ್ಹವಾಗಿ ಇಳಿಯಿತು. ಆದರೆ, ಯುದ್ಧಾನಂತರದಲ್ಲಿ ಯುದ್ಧ ಪೂರ್ವದ ಗರಿಷ್ಠ ಪ್ರಮಾಣವನ್ನು ಬೇಗನೆ ತಲುಪಿತು ಮತ್ತು ಮೂರು ನಾಲ್ಕು ವರ್ಷಗಳಲ್ಲೇ ಅದನ್ನು ಮೀರಿತು. ಯುದ್ಧವು ಅನೇಕ ಬದಲಾವಣೆಗಳನ್ನು ತಂದದ್ದರ ಫಲವಾಗಿ ಪ್ರವಾಸದ ಪ್ರಮಾಣದ ಮೇಲೂ ಅದರ ಪ್ರಭಾವ ಮೂಡಿತು. ಉದಾಹರಣೆಗೆ, ಯುದ್ಧದಿಂದಾಗಿ ಅಂತರರಾಷ್ಟ್ರೀಯ ಎಲ್ಲೆಗಳು ಮುರಿದುಬಿದ್ದುವು. ಇದರ ಪರಿಣಾಮವಾಗಿ ಆದರ್ಶವೂ, ಆಶಾವಾದಿಯೂ ಹಾಗೂ ಶಾಂತಿಯುತವೂ ಆದ ಅಂತರರಾಷ್ಟ್ರೀಯತ್ವವನ್ನು ಮೂಡಿಸಲು ಸಾಧ್ಯವಾಯಿತು. ಈ ವಾತಾವರದಲ್ಲಿ ಪ್ರವಾಸೋದ್ಯಮವು ಅಭಿವೃದ್ಧಿಗೊಂಡಿತು. ಎರಡನೆ ಪ್ರಪಂಚಯುದ್ಧ ಪೂರ್ವದಲ್ಲಿ, ಅಂದರೆ ೧೯೨೦, ೧೯೩೦ರಲ್ಲಿ ವ್ಯವಸ್ಥಿತ ಪ್ರವಾಸವು ಟ್ರೈನ್‌ಗಳಲ್ಲಿ, ದೋಣಿಗಳಲ್ಲಿ ಅಥವಾ ಕೋಚ್‌ಗಳಲ್ಲಿ ಆಗುತ್ತಿದ್ದಿತು. ೧೯೪೫ಕ್ಕೆ ಹಿಂದೆ ಪ್ರವಾಸವು ಹೆಚ್ಚುಹೆಚ್ಚಾಗಿ ವಿಮಾನದಲ್ಲಿ ಆಗುತ್ತಿದ್ದಿತು. ಪ್ರವಾಸಕ್ಕೆ ವಿಮಾನದ ಬಳಕೆ ಮುಂದಣ ವರ್ಷಗಳಲ್ಲಿ ಹೆಚ್ಚುತ್ತಾ ಹೋದಂತೆ ನಾವು ಈಗ ವಿಶ್ವ ಪ್ರವಾಸದ ಅಂಚಿನಲ್ಲಿರುವಂತೆ ಭಾಸವಾಗುತ್ತಿದೆ.

೨೦ನೇ ಶತಮಾನದ ಪ್ರಾರಂಭದವರೆವಿಗೆ ಪ್ರವಾಸಿಗರು ರೈಲು ಹಾಗೂ ಹಡಗುಗಳಲ್ಲಿ ಪ್ರತ್ಯೇಕವಾಗಿ ಸಂಚರಿಸುತ್ತಿದ್ದರು. ಹೊಸ ಸಾರಿಗೆ ಮಾಧ್ಯಮದ ಆವಿಷ್ಕಾರದೊಂದಿಗೆ ಪ್ರವಾಸೋದ್ಯಮದ ಹೊಸ ಶಕೆ ಪ್ರಾರಂಭವಾಯಿತು. ಖಾಸಗಿ ಕಾರು ಹಾಗೂ ಕೋಚ್‌ಗಳಲ್ಲಿ ಪ್ರವಾಸ ಶುರುವಾದಂತೆ ಪ್ರವಾಸಿ ಉದ್ದಿಮೆಯಲ್ಲಿ ಸಂಪೂರ್ಣ ಬದಲಾವಣೆ ತಲೆದೋರಿತು. ಮೊದಲ ಪ್ರಪಂಚ ಯುದ್ಧಾನಂತರದ ಹತ್ತು ವರ್ಷಗಳಲ್ಲಿ ಯು.ಎಸ್.ಎ ಹಾಗೂ ಯುನೈಟೆಡ್ ಕಿಂಗ್‌ಡಮ್‌ಗಳಲ್ಲಿ ಪ್ಯಾಸೆಂಜರ್ ರೈಲು ಸಂಚಾರವು ಬಹುತೇಕ ನಿಂತಿತು. ಕಿರು ಹಾಗೂ ಮಧ್ಯಮ ಪ್ರಮಾಣದ ಪ್ರವಾಸಗಳಿಗೆ ಮೋಟಾರ್ ಕಾರ್‌ಗಳು ಬಹಳ ಅನುಕೂಲವೆಂಬ ಭಾವನೆ ಬೆಳೆಯಿತು. ರಸ್ತೆಯ ಮೇಲೆ ಪ್ರವಾಸವನ್ನು ಕೈಗೊಂಡು, ರಜೆಯಲ್ಲಿ ಮನೆಯಿಂದ

ಹೊರಗೆ ಬಂದು ಪ್ರವಾಸ ಸುಖವನ್ನು ಅನುಭವಿಸುವವರ ಸಂಖ್ಯೆ ಗಣನೀಯವಾಗಿ ಏರಿತು. ಇದರ ಪರಿಣಾಮವಾಗಿ ೧೯೩೦ರ ನಂತರ ಸುಧಾರಿತ ರಸ್ತೆಗಳು ಹಾಗೂ ಇಬ್ಬಗೆಯ ವಾಹನ ದಾರಿಗಳು ಜಾರಿಗೆ ಬಂದುವು. ಜರ್ಮನರು ೧೯೩೦ರಲ್ಲಿ ತಮ್ಮ ಆಟೋಬಹನೆನ್ (Autobahnen) ಮೂಲಕ ಮೋಟಾರು ರಸ್ತೆ ಸುಧಾರಣೆಯ ಮಾರ್ಗದರ್ಶಕರಾದರು. ರಸ್ತೆ ಸಾಗಣೆ ಸೌಲಭ್ಯಗಳಲ್ಲಾದ ಸುಧಾರಣೆಯಿಂದಾಗಿ ಫ್ರಾನ್ಸ್, ಸ್ಪೆಯಿನ್ ಹಾಗೂ ಜರ್ಮನಿ ಮೊದಲಾದ ಯೂರೋಪು ದೇಶಗಳಲ್ಲಿ ಪ್ರವಾಸೋದ್ಯಮವು ಅಭಿವೃದ್ಧಿಗೊಂಡಿತು. ಹೆದ್ದಾರಿಗಳ, ತಡೆರಹಿತ ದಾರಿಗಳ ಹಾಗೂ ಸೂಪರ್ ಹೈವೇಗಳ ನಿರ್ಮಾಣದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ತೋರಿದ ಪ್ರಗತಿಯನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಹೊಸ ಹಾಗೂ ವೇಗವಾಗಿ ಸಾಗಲು ಯೋಗ್ಯವಾದ ರಸ್ತೆಗಳ ನಿರ್ಮಾಣವಾದುದರಿಂದ ರಸ್ತೆಯ ಮೇಲಣ ಸಂಚಾರವು ವೇಗಯುತವೂ ಆರಾಮದಾಯಿಯೂ ಆಗುವಂತಾಯಿತು. ಸುಲಭ ಸಾಗಣೆಯು ಬಹುಶಃ ಮೋಟಾರು ಸಾರಿಗೆಯ ಪ್ರಗತಿಗೆ ಪ್ರಧಾನವಾದ ಕಾರಣವೆನ್ನಬಹುದು. ಕಾಲದ ಉಳಿತಾಯದಲ್ಲಿ ವೇಗವೂ ಒಂದು ಪ್ರಮುಖ ಅಂಶವಾಗಿರುವುದರಿಂದ ಜನರಿಗೆ ಅಲ್ಪ ಕಾಲಾವಧಿಯಲ್ಲಿ ದೂರ ಸ್ಥಳಗಳಿಗೆ ಮೋಟಾರುಕಾರುಗಳಲ್ಲಿ ಹೋಗಲು ಸಾಧ್ಯವಾಯಿತು. ಜನರಿಗೆ ಒಂದು ವಾರದ ರಜೆಯೂ ಕೂಡಾ ಪ್ರವಾಸಕ್ಕೆ ಸಾಕು ಎನ್ನುವಂತಾಯಿತು. ರಸ್ತೆಗಳನ್ನು ಪ್ರಾಯೋಜಿತಗೊಳಿಸಿ ಕ್ರಮಕ್ರಮವಾಗಿ ಹಬ್ಬುವಂತೆ ಮಾಡುವುದರ ಮೂಲಕ ಹಲವು ಹೊಸ ಕ್ಷೇತ್ರಗಳನ್ನು ತೆರೆಯಲಾಯಿತು ಹಾಗೂ ಸುಲಭವಾಗಿ ಹೋಗಲಾಗದ ಅನೇಕ ಸ್ಥಳಗಳಿಗೆ ಹೋಗಲು ಅನುಕೂಲ ಕಲ್ಪಿಸಲಾಯಿತು.

೧೯೫೦ರ ನಂತರ ಸಾರಿಗೆಯಲ್ಲಿ ಅದ್ಭುತವಾದ ಪ್ರಗತಿ ತಲೆದೋರಿತು. ಕಾರುಗಳ ಒಡೆತನ ದ್ವಿಗುಣಗೊಂಡಿತು. ಮೋಟಾರು ಗಾಡಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಯಿತು ಮತ್ತು ಮೋಟಾರುಗಾಡಿಯ ಪ್ರಯಾಣ ಪ್ರಸಿದ್ಧವಾಯಿತು. ಯು.ಎಸ್.ಎ. ಕೆನಡಾ ಹಾಗೂ ಇತರ ಪ್ರಮುಖ ಪ್ರವಾಸಿ ರಾಷ್ಟ್ರಗಳಲ್ಲಿ ಈ ಬಗೆಯ ಸಾರಿಗೆಯ ಬಳಕೆ ಹೆಚ್ಚತೊಡಗಿತು. 'ಮೋಟೋರೈಲಿನಲ್ಲಾದ ಪ್ರಗತಿ' ದೂರ ಸ್ಥಳಗಳಿಗೆ ಕಾರುಗಳನ್ನು, ಕೋಚ್‌ಗಳನ್ನು ಟ್ರೈನಿನ ಮೂಲಕ ಕೊಂಡೊಯ್ಯುವುದು- ಅದರಿಂದಾಗಿ ರಜೆಯ ಸೌಲಭ್ಯ ಪಡೆದ ಪ್ರವಾಸಿಗರು ತಮ್ಮ ಮೋಟಾರು ಕಾರುಗಳಲ್ಲೇ ನೋಡಬೇಕಾದ ಸ್ಥಳಗಳಿಗೆ ಹೋಗಲು ಸಾಧ್ಯವಾಯಿತು. ಇತ್ತೀಚಿನ ದಿನಗಳಲ್ಲಿ ಪೆಟ್ರೋಲಿನ ಬೆಲೆಯಲ್ಲಿ ಹೆಚ್ಚುವರಿಯಾಗಿದ್ದರೂ, ಪೆಟ್ರೋಲಿನ ಅಭಾವ ತಲೆದೋರಿದ್ದರೂ ರಸ್ತೆ ಸಾರಿಗೆಯು ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಅನಿವಾರ್ಯವಾಗಿದೆ. ವಿಶ್ವದ ಆರ್ಥಿಕ ಮುಗ್ಗಟ್ಟು ಸಾರಿಗೆ ಸೌಲಭ್ಯಗಳ ಬಳಕೆಯಲ್ಲಿ ಕಡಿತವನ್ನು ತಂದಿದ್ದರೂ ರಸ್ತೆ ಸಾರಿಗೆಯ ಪ್ರಗತಿಯ

ಮೇಲೆ ಅದು ಅಷ್ಟಾಗಿ ಪರಿಣಾಮ ಬೀರಿದಂತೆ ತೋರುವುದಿಲ್ಲ. ಹಲವಾರು ರಾಷ್ಟ್ರಗಳು ಮೋಟಾರು ದಾರಿ ಹಾಗೂ ಹೆದ್ದಾರಿಗಳ ನಿರ್ಮಾಣವನ್ನು ಮುಂದುವರಿಸಿವೆ. ೧೯೯೦ರ ಒಳಗೆ ಜಕಾಸ್ಲೋವಾಕಿಯಾದಲ್ಲಿ ೧,೭೦೦ ಕಿ.ಮೀ. ಮೋಟಾರು ದಾರಿ ನಿರ್ಮಾಣವಾಗಬೇಕಾಗಿದೆ. ಬಲ್ಗೇರಿಯಾದಲ್ಲಿ ೧,೧೦೦ ಕಿ.ಮೀ.ದೂರದ ಸೋಫಿಯಾವಾರ್ನ ಮೋಟಾರು ದಾರಿಯ ಕೆಲಸ ಮುಂದುವರಿದಿದೆ. ಪೋಲ್ಯಾಂಡ್, ಫ್ರಾನ್, ಇಟಾಲಿ -ಇವೇ ಮೊದಲಾದ ದೇಶಗಳು ಮೋಟಾರು ರಸ್ತೆಗಳ ನಿರ್ಮಾಣಕ್ಕೆ ವಿಶೇಷ ಆದ್ಯತೆ ನೀಡಿದ್ದು, ದೊಡ್ಡ ಪ್ರಮಾಣದಲ್ಲಿ ಇದರ ಮೇಲೆ ಹಣ ಹೂಡಿವೆ. ಪ್ರಪಂಚದಾದ್ಯಂತ ಹೆದ್ದಾರಿಗಳ ನಿರ್ಮಾಣವೂ ಭರದಿಂದ ಸಾಗಿದೆ.

### ವಿಮಾನಯಾನ

ಅಂತರರಾಷ್ಟ್ರೀಯ ಪ್ರವಾಸೋದ್ಯಮದ ಬೆಳವಣಿಗೆಯಲ್ಲಿ ನಿಶ್ಚಿತವಾಗಿಯೂ ವಿಮಾನ ಸಾರಿಗೆಯದು ಪ್ರಮುಖ ಪಾತ್ರ. ವಿಶೇಷವಾಗಿ ದೂರ ಪ್ರಯಾಣ ಹಾಗೂ ಅಂತರರಾಷ್ಟ್ರೀಯ ಪ್ರವಾಸದಲ್ಲಿ ವಿಮಾನ ಸಾರಿಗೆಯದು ಪ್ರಮುಖ ಪಾತ್ರ. ವಾಣಿಜ್ಯ ಪ್ರವಾಸವು ಎರಡನೇ ಪ್ರಪಂಚಯುದ್ಧಕ್ಕೆ ಮುನ್ನವೇ ಆಗಿದ್ದರೂ, ಸಾಮಾನ್ಯ ಜನರಿಗೆ ವಿಮಾನಯಾನವು ಹೆಚ್ಚು ಹೆಚ್ಚಾಗಿ ಯುದ್ಧಾನಂತರದ ಕಾಲದಲ್ಲಿ ಆಯಿತು. ೧೯೬೦ರ ಕಾಲಮಾನದಲ್ಲಿ ಸಮಾಜದಲ್ಲಿ ಜೀವನಮಟ್ಟ ಏರಿದ್ದರ ಚಿಹ್ನೆಯಾಗಿ ಜನರು ರಜೆಯ ಸುಖವನ್ನು ಅನುಭವಿಸಲು ಸಮುದ್ರಾಂತರ ಪ್ರಯಾಣ ಕೈಗೊಂಡರು ಹೀಗಾಗಿ, ಈ ಕಾಲಮಾನದಲ್ಲಿ ವಿಮಾನಯಾನ ಗರಿಷ್ಠ ಪ್ರಮಾಣದಲ್ಲಿ ಅಭಿವೃದ್ಧಿಗೊಂಡಿತು. ಮೊದಲ ಪ್ರಪಂಚಯುದ್ಧದ ಕಾಲದಲ್ಲಿ ಹಲವು ವಾಣಿಜ್ಯ ನಾಗರಿಕ ವಿಮಾನಯಾನ ಸೇವೆಗಳು ಪ್ರಾರಂಭಗೊಂಡು ಅಭಿವೃದ್ಧಿಗೊಂಡುವು. ಯುರೋಪು ಖಂಡದಲ್ಲಿ ಹಾಗೂ ಭಾರತವೂ ಸೇರಿದಂತೆ ಇತರೇ ರಾಷ್ಟ್ರಗಳಲ್ಲಿ ವಿಮಾನ ಸಾರಿಗೆ ಅಭಿವೃದ್ಧಿಗೊಂಡಿತು. ಏನೇ ಆಗಲಿ, ಅಂತರರಾಷ್ಟ್ರೀಯ ವಿಮಾನಯಾನವು ಎರಡನೇ ಪ್ರಪಂಚ ಯುದ್ಧದ ಕೊನೆಯಲ್ಲಿ ಅತ್ಯದ್ಭುತವಾಗಿ ಪ್ರಗತಿಹೊಂದಿತು. ಯುದ್ಧಕಾಲದ ನಿರ್ಬಂಧಗಳನ್ನು ಅಂತರರಾಷ್ಟ್ರೀಯ ವಿಮಾನಯಾನದ ಮೇಲೆ ತೆಗೆದುಹಾಕಿದ್ದರಿಂದ ಹಾಗೂ ವೇಗದಲ್ಲಿ, ಸಂರಕ್ಷಣೆಯಲ್ಲಿ ಮತ್ತು ಸೌಲಭ್ಯಗಳನ್ನು ಕಲ್ಪಿಸುವುದರಲ್ಲಿ ಅತ್ಯದ್ಭುತ ಪ್ರಗತಿಯನ್ನು ತೋರಿಸಿದ್ದರಿಂದ ಪ್ರಪಂಚದಾದ್ಯಂತ ಸುತ್ತಬೇಕೆಂಬ ಜನರ ಬಹುಕಾಲದ ಬಯಕೆ ಪೂರ್ಣಗೊಂಡಿತು.

೧೯೫೮ರಲ್ಲಿ ಪ್ರಾರಂಭವಾದ ಜೆಟ್ ಪ್ರವಾಸವು ವೇಗ, ಆರಾಮ, ದಕ್ಷತೆಗಳಿಂದ ವಿಮಾನಸಾರಿಗೆಗೆ ಸಂಪೂರ್ಣವಾಗಿ ಹೊಸದಾದ ಒಂದು ಆಯಾಮವನ್ನು ತಂದು ಕೊಟ್ಟಿತು. ೧೯೬೦ರಿಂದ ಜೆಟ್ ವಿಮಾನವನ್ನು ಜಾರಿಗೆ ತಂದದ್ದರ ಫಲವಾಗಿ ವಿಮಾನ ಪ್ರಯಾಣ ಅತ್ಯದ್ಭುತವಾಗಿ ಬೆಳೆಯಿತು. ಈ ಕಾಲದ ಅತ್ಯಂತ ಪ್ರಮುಖವಾದ

ಬೆಳವಣಿಗೆಯೆಂದರೆ, ಸೇರ್ಪಡೆ ಪ್ರವಾಸಗಳ (Inclusive tours) ಪ್ರಗತಿ. ಇಲ್ಲಿ ಪ್ರವಾಸಿಗರನ್ನು ನಿಯಮಿತವಾಗಿ ಸಂಚಾರಿಸುವ ವಿಮಾನಗಳ ಮಾಮೂಲಿ ದರಕ್ಕಿಂತ ಕಡಿಮೆ ದರದಲ್ಲಿ ಚಾರ್ಟರ್ ವಿಮಾನಗಳಲ್ಲಿ ಕರೆದೊಯ್ಯಲಾಯಿತು. ೧೯೭೩ರ ನಂತರ ವಿಶ್ವದ ಎಲ್ಲೆಡೆಗಳಲ್ಲಿ ಇಂಧನ ಮುಗ್ಗಟ್ಟು ತಲೆದೋರಿದಾಗಿ, ಇದರ ಪರಿಣಾಮವಾಗಿ ಜೆಟ್ ಪ್ರವಾಸದ ಬೆಳವಣಿಗೆ ಕುಂಠಿತವಾಯಿತು. ಇಂಧನಗಳ ಬೆಲೆಯಲ್ಲಿ ಹೆಚ್ಚಳ ಕಂಡುಬಂದರೂ ವಿಮಾನ ಸಾರಿಗೆಯು ಪ್ರಯಾಣದವರನ್ನು ಯಶಸ್ವಿಯಾಗಿ ನಿಯಂತ್ರಿಸಿತು.

ಪ್ರವಾಸೋದ್ಯಮದಲ್ಲಿ ವಿಮಾನಗಳು ಮಹತ್ತರವಾದ ಪ್ರಭಾವವನ್ನು ಬೀರಿರುವಂತಿದೆ. ವೇಗ, ಸುರಕ್ಷತೆ ಹಾಗೂ ಸೌಲಭ್ಯ- ಈ ಮೂರು ಮುಖ್ಯ ಅಂಶಗಳು ಪ್ರವಾಸಿಗರನ್ನು ತಮಗೆ ಅನುಕೂಲವಾದ ಸಂಚಾರಿ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಲು ಪ್ರಚೋದಿಸುತ್ತಿವೆ. ಹೊಸದಾದ ವಿಶಾಲ ಅಂಗರಚನೆಯುಳ್ಳ ಜೆಟ್ ವಿಮಾನಗಳು ಬೋಯಿಂಗ್ ೭೦೭, ಬೋಯಿಂಗ್ ೭೨೭, ಬೋಯಿಂಗ್ ೭೪೭, ಮೆಕ್-ಡೊನ್ನೆಲ್-ಡೊಗ್ಲಾಸ್ ಡಿಸಿ ೧೦, ಏರ್‌ಬಸ್ A 300, ಲಾಕ್‌ಹೀಡ್ ಟ್ರಿಸ್ಟಾರ್ L-1011 -ಬೆಳೆಯುತ್ತಿರುವ ಪ್ರವಾಸಿ ಮಾರುಕಟ್ಟೆಯ ಅಗತ್ಯಗಳಿಗೆ ಪ್ರೇರಕಾಂಗಗಳಾಗಿವೆ. ಕಾಂಕಾರ್ಡ್ (Concorde) ಹಾಗೂ ಟುಪೊಲೆವ್ ೧೪೪ (Tupolev 144)-ಇವೇ ಮೊದಲಾದ ಸೂಪರ್‌ಸಾನಿಕ್ ವಿಮಾನಗಳ ತಾಂತ್ರಿಕ ಗುಣಮಟ್ಟ ಉಜ್ವಲವಾಗಿದ್ದು, ವಿಮಾನಯಾನದ ಇತಿಹಾಸದಲ್ಲಿ ಗಮನಾರ್ಹ ಹೆಗ್ಗುರುತುಗಳಾಗಿವೆ. ಜೂನ್ ೧, ೧೯೮೬ರಲ್ಲಿ ಸ್ವಾಯತ್ತ ಸಂಸ್ಥೆಯಾದ ರಾಷ್ಟ್ರೀಯ ಏರ್‌ಪೋರ್ಟ್ ಅಥಾರಿಟಿ ಪ್ರಾರಂಭವಾಯಿತು. ಇದು ನಿರ್ಮಾಣ, ಪ್ರಗತಿ, ನಿರ್ವಹಣ ಮತ್ತು ಡೊಮೆಸ್ಟಿಕ್ ಸಿವಿಲ್ ಏರ್‌ಪೋರ್ಟ್‌ಗಳ ಉಸ್ತುವಾರಿ ಹಾಗೂ ಇಡೀ ಭಾರತದ ವಾಯುಪಥದಲ್ಲಿ ವಿಮಾನ ಸಂಚಾರೀ ಸೇವೆಯನ್ನು ಒದಗಿಸುವುದು -ಇವುಗಳನ್ನು ನೋಡಿಕೊಳ್ಳುತ್ತದೆ. ಏರ್ ಇಂಡಿಯಾವು ತನ್ನ ವಿಮಾನಗಳನ್ನು ಆಧುನೀಕರಣಗೊಳಿಸುವಲ್ಲಿ ಆಸಕ್ತಿವಹಿಸಿದೆ. ಅದು ಆರು ಏರ್‌ಬಸ್ ೩೧೦ ವಿಮಾನವನ್ನು ಹೊಸದಾಗಿ ಸೇರ್ಪಡೆ ಮಾಡುತ್ತಿದೆ. ೧೯೮೭ ರಲ್ಲಿ ಕೊಳ್ಳಲು ಮಂಜೂರಾದ ಎರಡು ಹೊಸ ೭೪೭ ಕಾಂಬಿ ವಿಮಾನವನ್ನು ೧೯೮೮ರ ಅಕ್ಟೋಬರ್ / ನವಂಬರ್ ತಿಂಗಳಲ್ಲಿ ಸೇರ್ಪಡೆ ಮಾಡಿದೆ. ಏರ್ ಇಂಡಿಯಾವು ೧೯೮೫ರಲ್ಲಿ ಅಪಘಾತಕ್ಕೆ ಒಳಗಾದ ಕಾನಿಷ್ಕ ವಿಮಾನಕ್ಕೆ ಬದಲಿಯಾಗಿ ಮತ್ತೊಂದನ್ನು ಈಗಾಗಲೇ ಸೇರ್ಪಡೆ ಮಾಡಿದೆ. ಇಂಡಿಯನ್ ಏರ್‌ಲೈನ್ಸ್ ತನ್ನ ಸಂಚಾರಕ್ಕೆ ಎಲ್ಲ ರೀತಿಯಲ್ಲೂ ಜೆಟ್ ವಿಮಾನಗಳನ್ನು ಉಪಯೋಗಿಸುವ ದಿಕ್ಕಿನಲ್ಲಿದೆ. ೧೯ ಏರ್‌ಬಸ್ ೩೨೦ ವಿಮಾನವನ್ನು ಏಪ್ರಿಲ್ ೮೯ರ ವೇಳೆಗೆ ಹೊಸದಾಗಿ ಸೇರ್ಪಡೆ

ಮಾಡಲು ಆಲೋಚಿಸಿತು. ಏಪ್ರಿಲ್ ೧, ೧೯೮೫ರಲ್ಲಿ ವಾಯುದೂತ್ ಕೇವಲ ೩ ಡಾರ್ನಿಯರ್ (Dornier) ವಿಮಾನವನ್ನು ಹೊಂದಿದ್ದಿತು. ಆದರೆ ಅದು ಈಗ ೧೦ ಡಾರ್ನಿಯರ್, ೪ ಫೋಕ್ಕರ್ (Fokker) ಹಾಗೂ ೫ ಅವ್ರೊ ವಿಮಾನಗಳನ್ನು ಒಳಗೊಂಡಿದೆ. ವಾಯುದೂತ್ ಸಂಪರ್ಕ ವಿದೂರವಾದ, ತನಿಯಾದ ಪ್ರದೇಶಗಳಿಗೆ ಹಾಗೂ ಅತ್ಯಂತ ಕಠಿಣವಾದ ಭೌಗೋಳಿಕ ಪ್ರದೇಶಗಳಿಗೆ ವಿಮಾನಸಂಪರ್ಕವನ್ನು ಒದಗಿಸುವಲ್ಲಿ ಮಹತ್ವದ ಸೇವೆಯನ್ನು ಸಲ್ಲಿಸಿದೆ. ವಾಯುದೂತ್ ಈಗಾಗಲೇ ೯೫ ವಿಮಾನ ನಿಲ್ದಾಣಗಳನ್ನು ತನ್ನ ನೆಟ್ ವರ್ಕ್‌ಗೆ ಸೇರಿಸಿಕೊಂಡಿದ್ದು ಪ್ಯಾಕೇಜ್ ಟೂರ್, ಹಿಮಾಲಯನ್ ಏರ್ ಟ್ರ್ಯಾಕ್ ಫ್ಲೈಟ್, ಹಾಗೂ ಕಾರಿಯರ್ (Courier) ಸೇವೆಯನ್ನು ಜಾರಿಗೆ ತಂದಿದೆ.

ಹೊಸ ವಿಮಾನ ಕೊಳ್ಳುವ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆ ಭಾರಿ ಸುತ್ತಿ ಬಳಸಿ ನಡೆಸಿ ತಡವಾಗುತ್ತಿದ್ದ ಕಾರಣ ೧೯೯೧-೯೬ರ ಅವಧಿಯಲ್ಲಿ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ಎರಡೂ ಸಂಸ್ಥೆಗಳು ಸು. ೧೦೦೦ ಕೋಟಿಗಳಷ್ಟು ನಷ್ಟವನ್ನು ಅನುಭವಿಸಿವೆ. ವಿಮಾನ ಕೊಳ್ಳುವುದರ ಬಗ್ಗೆ ನಿರ್ಧಾರ ಆಗಬೇಕಾದರೆ ಹಲವಾರು ಸಮಿತಿಗಳ ಪರಿಶೀಲನೆಗೆ ಒಳಪಟ್ಟು ಅದರ ಅಂತಿಮ ತೀರ್ಮಾನದ ಹೊತ್ತಿಗೆ ಸಾಕಷ್ಟು ಸಮಯ ಹಿಡಿದು ವಿಮಾನಗಳ ದರಗಳೂ ಹೆಚ್ಚಾಗಿ ನಷ್ಟ ಅನುಭವಿಸಲಾಗಿದೆ ಇಂಥ ಪ್ರಕ್ರಿಯೆಗೆ ಅಂತ್ಯ ಹಾಡಿ, ಒಟ್ಟಾರೆ ಕೊಳ್ಳುವ ವ್ಯವಸ್ಥೆ ಪಾರದರ್ಶಕ ಆಗಿದ್ದು ಆದಷ್ಟು ಶೀಘ್ರ ತೀರ್ಮಾನ ಕೈಗೊಳ್ಳುವಂತೆ ಆಗಲು ಸರಕಾರ ಪ್ರಯತ್ನ ನಡೆಸಿದೆ.

ವಿಮಾನಯಾನ ಇಲಾಖೆಯ ವಿಚಾರದಲ್ಲಿ ವಿದೇಶೀ ಬಂಡವಾಳಕ್ಕೆ ಅವಕಾಶ ಕಲ್ಪಿಸಬೇಕೆ, ಬೇಡವೆ? ಎಂಬುದು ಮುಖ್ಯ ಪ್ರಶ್ನೆ. ಇತರ ದೇಶಗಳಲ್ಲಿ ಇರುವಂತೆ ಸ್ಥಳೀಯ ಸಂಸ್ಥೆಗಳೇ ದೇಶದಲ್ಲಿನ ವಿಮಾನಯಾನವನ್ನು ನಿಯಂತ್ರಿಸುತ್ತವೆ. ಆದರೆ ವಿಮಾನ ನಿಲ್ದಾಣಗಳ ಅಭಿವೃದ್ಧಿ ಮತ್ತು ಅವುಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸಲು ವಿದೇಶೀ ಬಂಡವಾಳದ ಬೆಂಬಲವನ್ನು ಪಡೆಯಬೇಕಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಇದು ತೀರಾ ಅಗತ್ಯ.

ನಮ್ಮ ದೇಶದ ವಿಮಾನ ವ್ಯವಸ್ಥೆ ಅಮೆರಿಕ ಮತ್ತು ಬ್ರಿಟನ್‌ಗೆ ಹೋಲಿಸಿದರೆ ಬಹಳಷ್ಟು ಸುರಕ್ಷಿತ. ಇಡೀ ದೇಶದಾದ್ಯಂತ ೨,೩೦೦ ವಿಮಾನಗಳು ಒಂದು ದಿನದಲ್ಲಿ ಹಾರಾಟ ನಡೆಸುತ್ತಲಿವೆ. ದೆಹಲಿ ಒಂದಲ್ಲೇ ಸುಮಾರು ೬೦೦ರಿಂದ ೮೦೦ ವಿಮಾನಗಳು ಬಂದು ಹೋಗುತ್ತವೆ.

ವಿದೇಶೀ ವಿನಿಮಯದ ಗಳಿಕೆಯಲ್ಲಿ ವಿಮಾನಯಾನ ಮಹತ್ವದ ಸ್ಥಾನ ಪಡೆದಿದೆ. ಭಾರತಕ್ಕೆ ಪ್ರವಾಸಿಗರಾಗಿ ಬರುವ ವಿದೇಶೀಯರಲ್ಲಿ ಶೇಕಡಾ ೯೯ರಷ್ಟು ಮಂದಿ ವಿಮಾನಯಾನವನ್ನು ಅಪೇಕ್ಷಿಸುವರು. ಕಾಲದ ಉಳಿತಾಯ, ಅತ್ಯಾಧುನಿಕವಾದ ತಾಂತ್ರಿಕ ಪ್ರಗತಿಯಿಂದಾದ ಸುರಕ್ಷತೆ ಹಾಗೂ ವಿಪುಲವಾದ ಸೌಲಭ್ಯಗಳಿಂದಾಗಿ ಇಂದು ಪ್ರವಾಸಿಗರಿಗೆ ವಿಮಾನವು ಅನಿವಾರ್ಯ ಸಂಚಾರಿ ಮಾಧ್ಯಮವಾಗಿದೆ. ವಿಮಾನ ಸಂಚಾರ ದೇಶದೇಶಗಳ ನಡುವೆ ಇರುವ ಅಂತರವನ್ನು ಕಡಿಮೆಮಾಡಿ ವಿಶ್ವದ ಜನರನ್ನು ಇಂದು ಹತ್ತಿರ ತರುತ್ತಿದೆ. ಪ್ರವಾಸಿಯೋರ್ವನು ಬೆಳಗಿನ ಉಪಹಾರವನ್ನು ಲಂಡನ್‌ನಲ್ಲೂ, ಮಧ್ಯಾಹ್ನದ ಊಟವನ್ನು ನ್ಯೂಯಾರ್ಕ್‌ನಲ್ಲೂ, ರಾತ್ರಿಯ ಭೋಜನವನ್ನು ಟೋಕಿಯೋದಲ್ಲೂ ಮಾಡಬಹುದು.

೧೯೮೯-೯೦ ರಲ್ಲಿ ನಾಗರೀಕ ಉಡ್ಡಾಣ ಹಾಗೂ ಪ್ರವಾಸೋದ್ಯಮ ಮಂತ್ರಾಲಯವು (ಈಗ ಇವೆರಡೂ ಪ್ರತ್ಯೇಕ ಮಂತ್ರಾಲಯಗಳಾಗಿ ವಿಭಜನೆಗೊಂಡಿವೆ) ವಿಮಾನದಲ್ಲಿ ಬೆಳವಣಿಗೆಯನ್ನು ಪ್ರಕಟಪಡಿಸಿತು. ೧೯೮೭-೮೮ರಲ್ಲಿ ಏರ್-ಇಂಡಿಯಾವು ೨೧.೩೩ ಲಕ್ಷ ಪ್ರಯಾಣಿಕರನ್ನು ಕೊಂಡೊಯ್ದರೆ, ೧೯೯೪-೯೫ರಲ್ಲಿ ೨೪.೯ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯುವ ನಿರೀಕ್ಷೆಯನ್ನು ಹೊಂದಿತ್ತು. ೧೯೮೭-೮೮ರಲ್ಲಿ ಇಂಡಿಯನ್ ಏರ್‌ಲೈನ್ಸ್‌ನ ಪ್ರವಾಸಿಗರ ಟ್ರಾಫಿಕ್ ೧೦೪.೪೦ ಲಕ್ಷ ಇದ್ದದ್ದು ೧೯೯೪-೯೫ರ ವೇಳೆಗೆ ೧೯೩.೮೦ ಲಕ್ಷಕ್ಕೆ ಏರಲಿದೆ. ೧೯೮೭-೮೮ರಲ್ಲಿ ವಾಯುದೂತ್‌ನ ಪ್ರವಾಸಿಗರ ಟ್ರಾಫಿಕ್ ಬೆಳವಣಿಗೆ ೪.೪೯ ಲಕ್ಷ ಇದ್ದುದು ೧೯೯೪-೯೫ರ ವೇಳೆಗೆ ೮.೫೦ ಲಕ್ಷಗಳಿಗೆ ಏರಿತು.

ಈ ಹೆಚ್ಚಳವನ್ನು ತಲುಪಲು ಕ್ಯಾರಿಯರ್‌ಗಳ ಫ್ಲೀಟ್ ಸ್ಟ್ರೆಂಕ್ತನ್ನು ಸಹಾ ಅಭಿವೃದ್ಧಿ ಪಡಿಸಲಾಯಿತು; ಹೊಸ ಕ್ಯಾರಿಯರ್‌ಗಳನ್ನು ಹೆಚ್ಚಿಸಲಾಯಿತು; ಚಾರ್ಟರ್‌ಗಳನ್ನು ಪ್ರೋತ್ಸಾಹಿಸಲಾಯಿತು. ಏರ್‌ಟ್ಯಾಕ್ಸಿಯ ಸೇವೆಯನ್ನು ಜಾರಿಗೆ ತರಲಾಯಿತು. ೧೯೯೦ರಲ್ಲಿ ಪಾಕಿಸ್ಥಾನ್ ಇಂಟರ್‌ನ್ಯಾಷನಲ್ ಏರ್‌ಲೈನ್ಸ್ ಹಾಗೂ ರಾಯಲ್ ಜೋರ್ಡಾನಿಯನ್ ಸರ್ವೀಸ್‌ಗಳ ಜೊತೆ ಒಪ್ಪಂದ ಮಾಡಿಕೊಂಡಂತೆ ಆ ರೀತಿಯಲ್ಲಿ ಇತರೆ ಕ್ಯಾರಿಯರ್ ಹಾಗೂ ರಾಷ್ಟ್ರಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಯಿತು.

ಏರ್‌ಟ್ಯಾಕ್ಸಿಗಳ ಕಾರ್ಯಾಚರಣೆಯನ್ನು ಸರಕಾರವೂ ಪ್ರೋತ್ಸಾಹಿಸುತ್ತಿದ್ದು, ಅವುಗಳ ಸೇವೆಯನ್ನು ೧೯೯೧ರ ವೇಳೆಗೆ ಜಾರಿಗೆ ತರಲಾಯಿತು. ೧೯೯೦ರಲ್ಲಿ ಸರಕಾರವು ಈ ಕೆಳಗಿನ ಏರ್‌ಪೋರ್ಟ್‌ಗಳು ಏರ್‌ಟ್ಯಾಕ್ಸಿ ಕಾರ್ಯಾಚರಣೆಗೆ ತೆರವು ಮಾಡಬೇಕೆಂದು ಘೋಷಿಸಿತು: ಆಗ್ರಾ, ಅಹಮದಾಬಾದ್, ಅಲಹಾಬಾದ್, ಔರಂಗಾಬಾದ್, ಬೆಂಗಳೂರು, ಬೆಳಗಾಂ, ಭಾವನಗರ್, ಭೂಪಾಲ್, ಭುವನೇಶ್ವರ,

ಮುಂಬಯಿ, ಕಲ್ಕತ್ತಾ, ಕೊಚ್ಚಿನ್, ಕೊಯಮತ್ತೂರು, ಡಬೋಲಿಮ್ (ಗೋವಾ), ದೆಹಲಿ, ಡೆಹರಾಡೂನ್, ದಿಬ್ರೂಘರ್, ಗೌಹತಿ, ಗೊರಖ್‌ಪುರ, ಹೈದರಾಬಾದ್, ಇಂದೂರ್, ಜಬಲ್‌ಪುರ, ಜೈಪುರ, ಜೆಮ್‌ಷಡ್‌ಪುರ, ಕಾನ್‌ಪುರ, ಕಾಂಡಾಲಾ, ಖುಜರಾಹೊ, ಕೋಟಾ, ಕುಲ್ಲು, ಲಕ್ನೋ, ಮದರಾಸು, ಮಧುರೈ, ಮಂಗಳೂರು, ಮೈಸೂರು, ನಾಗಪುರ, ನಾಂದೇಡ್, ನಾಸಿಕ್, ಪಾಟ್ನಾ, ಪಂತ್ ನಗರ್, ಪುಣೆ, ರಾಯಪುರ್, ರಾಜಕೋಟ್, ರಾಂಚಿ, ರಾಜಮಂಡ್ರಿ, ರತ್ನಗಿರಿ, ರೂರ್ಕೆಲಾ, ಸೂರತ್, ತಿರುಪತಿ, ತಿರುಚಿರಪಳ್ಳಿ, ತ್ರಿವೆಂಡ್ರಂ, ಉದೈಪುರ, ವಡೋದಾರ, ವಾರಣಾಸಿ, ವಿಶಾಖಪಟ್ಟಣ ಹಾಗೂ ವಿಜಯವಾಡ.

ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾವು ನವದೆಹಲಿ, ಮುಂಬಯಿ, ಕಲ್ಕತ್ತಾ ಹಾಗೂ ಮದರಾಸುಗಳಲ್ಲಿನ ಅಂತರರಾಷ್ಟ್ರೀಯ ಏರ್‌ಪೋರ್ಟ್‌ಗಳನ್ನು ನೋಡಿಕೊಳ್ಳುತ್ತದೆ. ಈ ನಾಲ್ಕು ಮೆಟ್ರೋಗಳು ವರ್ಷಕ್ಕೆ ಸುಮಾರು ೨೦ ಮಿಲಿಯ ಪ್ರಯಾಣಿಕರನ್ನು, ಅಂದರೆ, ಅಂದಾಜು ಶೇಕಡಾ ೮೦ರಷ್ಟು ದೇಶದ ವಿಮಾನ ಸಂಚಾರವನ್ನು ನಿಭಾಯಿಸುತ್ತವೆ. ೨೦೦೦ನೇ ಇಸವಿಗೆ ೪೯ ಮಿಲಿಯ ಪ್ರಯಾಣಿಕರ ಸಂಖ್ಯೆಯನ್ನು ಮುಟ್ಟುವ ನಿರೀಕ್ಷೆ ಹೊಂದಿದ್ದಿತು. ೧೯೮೭-೮೮ನೇ ಸಾಲಿನಲ್ಲಿ ನವದೆಹಲಿಯ ಮಾಡರ್ನ್ ಇಂದಿರಾಗಾಂಧಿ ಇಂಟರ್‌ನ್ಯಾಷನಲ್ ಏರ್ ಪೋರ್ಟ್ ವರ್ಷಕ್ಕೆ೩.೩ ಮಿಲಿಯನ್ ಪ್ರಯಾಣಿಕರನ್ನು ನಿಭಾಯಿಸುವಂತೆ ಅಳವಡಿಸ ಲ್ಪಟ್ಟಿದ್ದರೂ ೨.೫೮ ಮಿಲಿಯನ್ ಅಂತರರಾಷ್ಟ್ರೀಯ ವಿಮಾನ ಪ್ರಯಾಣಿಕರನ್ನು ನಿಭಾಯಿಸಿತು. ಕ್ರಿ.ಶ. ೨೦೦೦ದ ವೇಳೆಗೆ ೫.೫ ಮಿಲಿಯನ್ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ಅದು ವಿಸ್ತರಗೊಂಡಿದೆ. ಮುಂಬಯಿ ವಿಮಾನ ನಿಲ್ದಾಣವು ಅತ್ಯಂತ ಹೆಚ್ಚಿನ ವಿಮಾನ ಪ್ರಯಾಣಿಕರನ್ನು ಸ್ವಾಗತಿಸಿತು. (೧೯೮೭-೮೮)ರಲ್ಲಿ ೪.೫೬ ಮಿಲಿಯನ್ ಪ್ರಯಾಣಿಕರಿದ್ದುದು ಕ್ರಿ.ಶ. ೨೦೦೦ದ ವೇಳೆಗೆ ೯.೨ ಮಿಲಿಯನ್‌ಗೆ ಹೆಚ್ಚಿತು. ವಿಮಾನ ನಿಲ್ದಾಣದ ಎರಡು ಮೊಡ್ಯೂಲ್‌ಗಳು ಈಗಾಗಲೇ ಬಳಕೆಯಲ್ಲಿದ್ದ ಮೂರನೆ ಹಂತದ ಸೇರ್ಪಡೆಯೊಂದಿಗೆ ಅದರ ನಿರ್ವಹಣೆ ವರ್ಷಕ್ಕೆ ೭.೫ ಮಿಲಿಯನ್ ಪ್ರಯಾಣಿಕರಷ್ಟು ಹೆಚ್ಚುಗೆಯಾಗಬೇಕಾಗಿದೆ. ಸೌಲಭ್ಯಗಳ ಹೆಚ್ಚುವರಿಯಾಗುತ್ತಿದ್ದಂತೆ ನವ ಮುಂಬಯಿಯಲ್ಲಿ ಹೊಸ ಟರ್ಮಿನಲ್‌ಗಾಗಿ ನಿವೇಶನಗಳನ್ನು ಗುರುತಿಸಲಾಗಿದೆ. ಹೊಸ ಅಂತರರಾಷ್ಟ್ರೀಯ ಟರ್ಮಿನಲ್ ಒಂದರ ನಿರ್ಮಾಣ ಕಲ್ಕತ್ತೆಯಲ್ಲಿ ಆಗುತ್ತಿದ್ದು ಇದರಲ್ಲಿ ಏರೋಬ್ರಿಡ್ಜಸ್, ಎಸ್ಕಲೇಟರ್ಸ್ ಹಾಗೂ ಕನ್ವೇಯರ್ ಬೆಲ್ಟ್‌ಗಳಂತಹ ಅತ್ಯಾಧುನಿಕ ಸೌಲಭ್ಯಗಳನ್ನು ಅಳವಡಿಸಲಾಗಿದೆ. ಕ್ರಿ.ಶ. ೨೦೦೦ದ ವೇಳೆಗೆ ಆ ಆಧುನಿಕ ಸೌಲಭ್ಯಗಳು ೧೦ ಲಕ್ಷ ಪ್ರಯಾಣಿಕರ ಅಗತ್ಯಗಳನ್ನು ಪೂರೈಸಿತು.

೧೯೯೦ರ ಏಪ್ರಿಲ್‌ನಲ್ಲಿ ಮದ್ರಾಸು ತನ್ನ ಹೊಸ ಅಂತರರಾಷ್ಟ್ರೀಯ ಟರ್ಮಿನಲ್ಲನ್ನು ಪಡೆಯಿತು. ಹೊಸಟರ್ಮಿನಲ್ ಇಂಟರ್ ನ್ಯಾಷನಲ್ ಟ್ರಾಫಿಕ್‌ನಲ್ಲಿನ

ನಿರೀಕ್ಷಿತ ಜನಸಂದಣಿ ಸದ್ಯದ ೪.೩೧ ಲಕ್ಷದಿಂದ ಕ್ರಿ.ಶ. ೨೦೦೦ಕ್ಕೆ ೧೨.೩ ಲಕ್ಷಕ್ಕೆ ಏರಿದೆ.

ಈ ನಡುವೆ, ಐ.ಎ.ಎ.ಐ. ಯು ಫೆಸಿಲಿಟೇಷನ್ ಕೌಂಟರ್ಸ್, ಇನ್‌ಫ್ಯಾಂಟ್ ಲಾಬೀಸ್, ಫ್ಲೈ ಬಸ್ ಸರ್ವಿಸಸ್, ಪ್ರಿಪೇಯ್ಡ್ ಟ್ಯಾಕ್ಸಿ ಸರ್ವಿಸಸ್‌ಗಳನ್ನೊಳ ಗೊಂಡಂತೆ ಅತ್ಯಾಧುನಿಕವಾದ ವಿಮಾನ ನಿಲ್ದಾಣ ಸೌಲಭ್ಯಗಳನ್ನು ಪೂರೈಸುತ್ತಿದೆ. ಇನ್ನು ಮುಂದೆ ಭೇಟಿಕೊಡುವವರು ಕೂಡ ಉತ್ತಮ ಸೌಲಭ್ಯಗಳನ್ನು ನಿರೀಕ್ಷಿಸಬಹುದು. ಐ.ಎ.ಎ.ಐ ನಿರ್ವಹಿಸುತ್ತಿರುವ ನಾಲ್ಕು ವಿಮಾನ ನಿಲ್ದಾಣಗಳನ್ನು ಬಿಟ್ಟು, ನ್ಯಾಷನಲ್ ಏರ್‌ಪೋರ್ಟ್ ಅಥಾರಿಟಿಯು ದೇಶದಲ್ಲಿನ ನಾಗರೀಕ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಹೊಂದಿದೆ. ೧೯೮೯ರಲ್ಲಿ ನ್ಯಾಷನಲ್ ಏರ್ ಪೋರ್ಟ್ ಅಥಾರಿಟಿಯು ಪಾಂಡಿಚೇರಿ ಹಾಗೂ ದೀಸಾ (ಗುಜರಾತ್) ವಿಮಾನ ನಿಲ್ದಾಣಗಳನ್ನು ತನ್ನಲ್ಲಿ ಸೇರ್ಪಡೆ ಮಾಡಿಕೊಂಡಿತು. ಸೇಲಂನಲ್ಲಿ ವಿಮಾನ ನಿಲ್ದಾಣ ನಿರ್ಮಾಣಗೊಳ್ಳುತ್ತಿದ್ದು ಅದೂ ಸೇರ್ಪಡೆಯಾಗಲಿದೆ. ಇದರ ಜೊತೆಗೆ ಬೆಂಗಳೂರಿನಲ್ಲಿ ಇಂಟರ್‌ನ್ಯಾಷನಲ್ ಟರ್ಮಿನಲ್ ನಿರ್ಮಾಣ ಕಾರ್ಯ ಪೂರ್ಣ ಗೊಂಡಿದ್ದು, ಪುಣೆಯಲ್ಲಿನ ಟರ್ಮಿನಲ್ ಕಟ್ಟಡವು ಹೆಚ್ಚುವರಿ ಹೊಸ ಮೊಡ್ಯೂಲ್‌ಗಳೊಂದಿಗೆ ವಿಸ್ತರಣಗೊಳ್ಳುತ್ತಿದೆ.

ಅಹಮದಾಬಾದ್, ಅಮೃತಸರ, ಜೈಪುರ, ಭೂಪಾಲ್, ಲಕ್ನೋ, ವಾರಣಾಸಿ, ದಿಬ್ರೂಘರ್, ಇಂಫಾಲ್ ಹಾಗೂ ಅಗರ್ತಲಗಳಲ್ಲಿ ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಂ ಅನ್ನು ಅಳವಡಿಸಲಾಗಿದ್ದು, ಅದೇ ರೀತಿಯಲ್ಲಿ ಕಾನ್‌ಪುರ್‌ನಲ್ಲೂ ಅಳವಡಿಸಲಾಗುತ್ತಿದೆ. ೧೯೯೦-೯೧ನೇ ಸಾಲಿನಲ್ಲಿ ಇನ್ನೂ ಆರು ವಿಮಾನ ನಿಲ್ದಾಣಗಳಲ್ಲಿ ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಂ ಅನ್ನು ಅಳವಡಿಸಲಾಗಿದೆ. ರಾತ್ರಿ ಇಳಿಯುವ ಸೌಲಭ್ಯವನ್ನು ಖಜರಾಹೋ, ಉದಯಪುರ್, ಔರಂಗಾಬಾದ್ ಹಾಗೂ ರಾಯ್‌ಪುರಗಳಿಗೆ ಕಲ್ಪಿಸಲಾಯಿತು. ಆಟೋಮ್ಯಾಟಿಕ್ ಸ್ವಿಚಿಂಗ್ ಸಿಸ್ಟಂ ಅನ್ನು ತಿರ್ವೇಂದ್ರಂ, ಬೆಂಗಳೂರು, ಲಕ್ನೋ ಹಾಗೂ ಹೈದರಾಬಾದ್‌ಗಳಿಗೆ ಅಳವಡಿಸಲಾಯಿತು.

ಮುಂದಿನ ಯೋಜನೆಗಳು ಕೆಳಗಿನವುಗಳನ್ನು ಒಳಗೊಂಡಿದೆ. ಮುಂಬಯಿ ಹಾಗೂ ದೆಹಲಿ ವಿಮಾನ ನಿಲ್ದಾಣಗಳಲ್ಲಿ ಏರ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಂನಲ್ಲಿ ಆಧುನೀಕರಣಗೊಳಿಸುವುದು; ಆಯ್ದ ವಿಮಾನ ನಿಲ್ದಾಣಗಳಲ್ಲಿ ಟರ್ಮಿನಲ್ ಅಪ್ರೋಚ್ ರಾಡಾರ್‌ಗಳನ್ನು ಹಾಗೂ ಲಾಂಗ್ ರೇಂಜ್ ರಾಡಾರ್‌ಗಳನ್ನು ಅಳವಡಿಸುವುದು; ಪ್ರಾದೇಶಿಕ ಕೇಂದ್ರಗಳಲ್ಲಿ ಡೆಡಿಕೇಟೆಡ್ ಸೆಟಲಾಯಿಟ್ ಟರ್ಮಿನಲ್ಸ್‌ಗಳನ್ನು ಕಲ್ಪಿಸುವುದು; ಅಹಮದಾಬಾದ್ ಹಾಗೂ ಹೈದರಾಬಾದ್‌ಗಳಲ್ಲಿ ಇಂಟರ್‌ನ್ಯಾಷನಲ್ ಟರ್ಮಿನಲ್ಸ್‌ಗಳನ್ನು ನಿರ್ಮಾಣಮಾಡುವುದು ಹಾಗೂ ನಾಗಪುರದಲ್ಲೂ ಪೂರ್ಣಪ್ರಮಾಣದ ಅಂತರರಾಷ್ಟ್ರೀಯ ಪರ್ಯಾಯ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸುವುದು.

A೩೨೦ ಪ್ರಪಂಚದಲ್ಲೇ ಅತ್ಯಂತ ಮುಂದುವರಿದ ಪ್ಯಾಸೆಂಜರ್ ಜೆಟ್ ಏರ್ ಕ್ರಾಫ್ಟ್. ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ ೧೯A೩೨೦ ಏರ್‌ಕ್ರಾಫ್ಟ್‌ಗಳನ್ನು ಕೊಳ್ಳಲು ಈಗಾಗಲೇ ಆದೇಶ ನೀಡಿದ್ದು, ಇನ್ನೂ ೧೨ ಏರ್‌ಕ್ರಾಫ್ಟ್‌ಗಳಿಗೆ ಆದೇಶ ನೀಡುವ ಬಗೆಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ೩೧ ಏರ್‌ಬಸ್ ಏರ್ ಕ್ರಾಫ್ಟ್‌ಗಳನ್ನು ಕೊಳ್ಳುವುದರ ಜೊತೆಗೆ, ೩೩ ಹೆಚ್ಚಿಗೆ ಏರ್‌ಕ್ರಾಫ್ಟ್‌ಗಳನ್ನು ಹೊಂದುವ ಬಗೆಗೂ ವಿಚಾರಮಾಡಲಾಗುತ್ತಿದೆ. ಇವುಗಳಲ್ಲಿ ಏಳು ೩೦೦ ಸೀಟುಗಳ ಏರ್‌ಕ್ರಾಫ್ಟ್, ಇಪ್ಪತ್ತು ೧೦೦ ಸೀಟುಗಳ ಏರ್‌ಕ್ರಾಫ್ಟ್‌ಗಳನ್ನು ಒಳಗೊಳ್ಳುತ್ತವೆ. ಇದು ಸೂಚಿತವಾಗಿರುವ ತಾತ್ಕಾಲಿತ ಬೆಳವಣಿಗೆಯ ಯೋಜನೆ ಮಾತ್ರವಾಗಿದ್ದು ವಿವರಗಳು ಎಂಟನೆಯ ಯೋಜನೆಯಲ್ಲಿ ನಿರ್ಧರಿತವಾಗಬೇಕಾಗಿವೆ.

ಆಗಸ್ಟ್ ೧೯೯೦ರಲ್ಲಿ ಎರಡು ಏರ್‌ಬಸ್ A೩೧೦-೩೦೦ ಏರ್ ಕ್ರಾಫ್ಟ್‌ಗಳು ಏರ್‌ಲೈನ್ಸ್‌ಗೆ ಸೇರ್ಪಡೆಯಾದವು. ಇವುಗಳ ಅಂದಾಜು ಬೆಲೆ ರೂ. ೨೧೭. ೮೧ ಕೋಟಿ. ಏರ್ ಇಂಡಿಯಾವು ನಾಲ್ಕು ಲಾಂಗ್ ರೇಂಜ್ ಬೋಯಿಂಗ್ ೭೪೭-೪೦೦ ಕೋಂಬಿ ಏರ್‌ಕ್ರಾಫ್ಟ್‌ನ್ನು ಕೊಳ್ಳುವ ತನ್ನ ಆಯ್ಕೆಯನ್ನು ಪ್ರಕಟಪಡಿಸಿದ್ದು, ಈ ಸಲಹೆಯನ್ನು ಪಬ್ಲಿಕ್ ಇನ್‌ವೆಸ್ಟ್‌ಮೆಂಟ್ ಬೋರ್ಡ್ ಒಪ್ಪಬೇಕಾಗಿದೆ. ವಾಯುದೂತ್ ತನ್ನ ಜಾಲವನ್ನು ವಿಸ್ತರಿಸುತ್ತಿದ್ದು, ಈ ಸಂದರ್ಭದಲ್ಲೇ ಅದು ಹೊಸ ಏರ್‌ಕ್ರಾಫ್ಟ್ ಕಡೆ ನೋಡುತ್ತಿದ್ದು, ಅದರ ಮೇಲೆ ಹೊಸ ಬೆಳವಣಿಗೆಯು ಆಧರಿತವಾಗಿದೆ.

ಋತುಮಾನ ಲೆಕ್ಕಿಸದೆ ವರ್ಷವಿಡೀ ಪ್ರವಾಸಿಗರಿಗಾಗಿ ಆಕಾಶಮಾರ್ಗ ತೆರೆದಿಡುವ ಬೃಹತ್ ಪ್ರವಾಸೋದ್ಯಮ ಯೋಜನೆಯೊಂದನ್ನು ಕೇಂದ್ರ ಸರಕಾರ ರೂಪಿಸಿದೆ. ಪ್ರವಾಸಿಗರನ್ನು ಹೊಸ ವಿದೇಶೀ ವಿಶೇಷ ವಿಮಾನಗಳು ಒಂದು ತಾಣದಲ್ಲಿ ಇಳಿಯುವ ಬದಲು ಎರಡು ಅಥವಾ ಮೂರು ತಾಣಗಳಲ್ಲಿ ಇಳಿಯಲು ಅವಕಾಶ ಮಾಡಿಕೊಡಲು ಪ್ರಥಮಬಾರಿಗೆ ತೀರ್ಮಾನಿಸಲಾಗಿದೆ. ವಿಶೇಷತಃ ಜರ್ಮನಿಯಿಂದ ಈಗ ಬರುತ್ತಿರುವ ವಿಶೇಷ ವಿಮಾನಗಳು ಗೋವೆಯಲ್ಲಿ ಇಳಿದ ನಂತರ ಕಲ್ಕತ್ತ ದೆಹಲಿ ಅಥವಾ ಮದ್ರಾಸುಗಳಿಗೂ ಹೋಗಲು ಸಾಧ್ಯವಾಗುತ್ತಿದೆ. ಮುಂದೆ ಇವು ಬೆಂಗಳೂರಿಗೂ ಬಂದು ಇಳಿಯುತ್ತವೆ. ಬ್ರಿಟಿಷ್ ಏರ್‌ವೇಸ್ ಸಂಸ್ಥೆ ಲಂಡನ್ನಿನಿಂದ ಮದ್ರಾಸಿಗೆ ನೇರವಾಗಿ ವಿಮಾನಯಾನ ಕಲ್ಪಿಸಿದ್ದನ್ನು ಅನುಸರಿಸಿ ವಿಶ್ವದ ಇತರ ವಿಖ್ಯಾತ ವಿಮಾನ ಸಂಸ್ಥೆಗಳೂ ಇದೀಗ ಕೇಂದ್ರ ಸರಕಾರದ ಜೊತೆ ಮಾತುಕತೆ ಆರಂಭಿಸಿವೆ.

೧೯೮೯, ೧೯೯೦ ಮತ್ತು ೧೯೯೧ನೇ ವರ್ಷಗಳಿಗೆ ವರ್ಷಕ್ಕೆ ೧೦ರಂತೆ ತಲಾ ೧೭ ಆಸನಗಳ ಪುಟ್ಟ ವಿಮಾನಗಳನ್ನು ಪೂರೈಸಲು ಸೋವಿಯತ್ ರಷ್ಯವನ್ನು ಕೋರಲಾಗಿತ್ತು. ಈ ಸಂಬಂಧದಲ್ಲಿ ಮಾತುಕತೆಗೆ ನಿಯೋಗವೊಂದನ್ನು ಮಾಸ್ಕೋಗೆ ಕಳುಹಿಸಲಾಗಿತ್ತು.

ಜಪಾನಿನಲ್ಲಿ ಪ್ರತಿವರ್ಷ ೧೦ ಲಕ್ಷ ಮಂದಿ ಯುವಕರು ಮದುವೆಯಾಗುತ್ತಾರೆ. ಶೇಕಡಾ ೮೦ ಮಂದಿ ಮಧುಚಂದ್ರಕ್ಕೆ ವಿದೇಶಕ್ಕೆ ಹೋಗಲು ಬಯಸುತ್ತಾರೆ. ಇವರ ಯೆನ್ ಹಣ ಅಮೂಲ್ಯವಾಗಿರುವ ಕಾರಣ ಭಾರತ ಇವರನ್ನು ಆಕರ್ಷಿಸಬೇಕಿದೆ. ಆಸ್ಥೆಯಾದಿಂದ ಭಾರತಕ್ಕೆ ಬರುವ ನವದಂಪತಿಗಳ ಸಂಖ್ಯೆ ೧೫ ಸಹಸ್ರದಿಂದ ೩೦ ಸಹಸ್ರಕ್ಕೆ ಏರಿದೆ. ಈ ಹಿನ್ನೆಲೆಯಲ್ಲಿ ಈ ಉದ್ಯಮಕ್ಕೆ ಒಳ್ಳೆಯ ಭವಿಷ್ಯವಿರುವಂತಿದೆ.

## ರೈಲು ಪ್ರಯಾಣದಲ್ಲಾದ ಪ್ರಗತಿ

೧೯೭೪ರಿಂದ ಇಂಧನದ ಅಭಾವದ ಪರಿಣಾಮವಾಗಿ ಹಾಗೂ ಹಣದುಬ್ಬರದ ಕಾರಣವಾಗಿ ವಿಮಾನಯಾನ ಹಾಗೂ ಖಾಸಗಿ ಮೋಟಾರು ಕಾರಿನ ಸಂಚಾರಕ್ಕೆ ಬಲವಾದ ಹೊಡೆತ ಬಿದ್ದಿತು. ಇದರ ಪರಿಣಾಮವಾಗಿ ವಿಮಾನ ಹಾಗೂ ಖಾಸಗಿ ಕಾರು ಮತ್ತು ಕೋಚ್‌ಗಳಲ್ಲಿ ಪ್ರಯಾಣಿಸುವುದು ದುಬಾರಿಯೆನ್ನಿಸತೊಡಗಿತು. ಟ್ರೈನ್‌ಗಳಿಗೆ ಹೋಲಿಸಿದಾಗ ಆಟೋಮೊಬೈಲ್‌ಗಳಲ್ಲಿ ಪ್ರವಾಸಿಯೋರ್ವನಿಗೆ ಕಿಲೋಮೀಟರಿಗೆ ಎರಡರಿಂದ ನಾಲ್ಕು ಪಟ್ಟು, ವಿಮಾನಗಳಲ್ಲಿ ಹತ್ತು ಪಟ್ಟು ಹೆಚ್ಚು ಇಂಧನ ವ್ಯಯವಾಗುತ್ತದೆ. ಇಂಧನದ ಬೆಲೆಯೇರಿಕೆಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ವೇಗದ ಹಾಗೂ ಅಗ್ಗದ ರೈಲ್ವೆ ಸಾರಿಗೆಯ ಪ್ರಗತಿ ಅತ್ಯದ್ಭುತವಾಗಿ ಆಗಿದೆ. ದರದ ವಿಶೇಷಾಂಶದ ಜೊತೆಗೆ, ರೈಲ್ವೆಯು ವಿಮಾನಕ್ಕಿಂತ ಹೆಚ್ಚಿನ ಅನುಕೂಲಗಳನ್ನು ಪ್ರಯಾಣಿಕರಿಗೆ ಕಲ್ಪಿಸಿದೆ. ರೈಲ್ವೆಯ ನಿಲ್ದಾಣಗಳು ಸಾಮಾನ್ಯವಾಗಿ ಪಟ್ಟಣಗಳ ಮಧ್ಯಭಾಗದಲ್ಲಿರುವುದರ ಜೊತೆಗೆ ರೈಲ್ವೆಯ ವೇಳಾಪಟ್ಟಿಯು ಪ್ರಯಾಣಕರಿಗೆ ಬಹಳಷ್ಟು ಅನುಕೂಲಕರವಾಗಿದೆ. ಈ ಅಂಶಗಳ ಜೊತೆಗೆ ತಾಂತ್ರಿಕವಾಗಿ ಮುನ್ನಡೆದಿರುವುದು ಹಾಗೂ ಸಂಚಾರಿ ಅಗತ್ಯಗಳು ಹೆಚ್ಚುತ್ತಿರುವುದು ರೈಲ್ವೆ ಸಾರಿಗೆಯ ಪುನರುತ್ಥಾನಕ್ಕೆ ಕಾರಣವಾಗಿದೆ. ಯೂರೋಪ್‌ನ ಬಹುತೇಕ ಎಲ್ಲ ದೇಶಗಳಲ್ಲೂ, ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲೂ, ಏಷ್ಯಾದ ಮತ್ತಿತರ ದೇಶಗಳಲ್ಲೂ ಹೆಚ್ಚಿನ ವೇಗವನ್ನು ಸಾಧಿಸುವ ಹಾಗೂ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವ ಎಡೆಯಲ್ಲಿ ಕ್ರಾಂತಿಕಾರಕವಾದ ವಿಚಾರಗಳು ಬರುತ್ತಿದ್ದು ಅವನ್ನು ರೈಲ್ವೆ ಇಲಾಖೆ ಕಾರ್ಯಗತ ಮಾಡಬಯಸುತ್ತಿದೆ.

ಯೂರೋಪ್‌ನಲ್ಲಿ ಮೊದಲಿಗೆ ವೇಗಯುತವಾದ ಹಾಗೂ ಅನುಕೂಲಕರವಾದ ರೈಲುಗಳ ರೂಪರೇಷೆ ನಿರ್ಮಾಣವಾಯಿತು. ೧೯೬೦ರಲ್ಲಿ ಬ್ರಿಟಿಷ್ ರೈಲ್ವೆಯವರು ತಮ್ಮ ಲಂಡನ್-ಮ್ಯಾಂಚೆಸ್ಟರ್ ಲೈನನ್ನು ವಿದ್ಯುದೀಕರಣ ಮಾಡಿದರು. ಇದರಿಂದ ಗಂಟೆಗೆ ೧೬೦ ಕಿ.ಮೀ. ವೇಗವನ್ನು ಸಾಧಿಸಲಾಯಿತು. ಈ ಲೈನಿನಲ್ಲಿ ಹೊಸ ಅತಿ ವೇಗದ ರೈಲುಗಳು ತಮ್ಮ ಸಂಚಾರದ ವೇಳೆಯನ್ನು ಮೊದಲಿನ ಮೂರು ಗಂಟೆ ನಲವತ್ತೈದು ನಿಮಿಷಗಳಿಂದ ಸಂಪೂರ್ಣವಾಗಿ ಒಂದು ಗಂಟೆಗೆ ಇಳಿಸಿತು. ಪ್ರಯಾಣಿಕರ

ಸಂಚಾರ ಐದು ವರ್ಷಗಳಲ್ಲಿ ಬಹುತೇಕವಾಗಿ ದ್ವಿಗುಣಗೊಂಡಿತು. ೧೯೭೧ರಲ್ಲಿ ಪಶ್ಚಿಮ ಜರ್ಮನಿಯಲ್ಲಿ ಹೊಸದಾಗಿ ಪಟ್ಟಣಗಳ ನಡುವಣ ಸಂಚಾರಿ ವಿಧಾನವನ್ನು ಜಾರಿಗೆ ತರಲಾಯಿತು. ದೇಶದ ಪ್ರತಿಯೊಂದು ಪ್ರಮುಖ ಪಟ್ಟಣಗಳ ನಡುವೆ ಎರಡು ಗಂಟೆಗಳ ಮಧ್ಯಂತರವಿರುವ ವೇಗಯುತ ಟ್ರೈನ್ ಸಂಚಾರವನ್ನು ಒದಗಿಸಲಾಯಿತು. ಇದರಿಂದಾಗಿ ಮೊದಲು ಹನ್ನೆರಡು ತಿಂಗಳಲ್ಲಿ ಸುಮಾರು ಶೇಕಡಾ ಮೂವತ್ತರಷ್ಟು ಹೆಚ್ಚಿನ ಪ್ರಯಾಣಿಕರನ್ನು ಕರೆತರಲು ಸಾಧ್ಯವಾಯಿತು. ಪ್ರಯಾಣಿಕರಿಗೆ ಟೆಲಿಫೋನ್‌ಗಳು, ಸೆಕ್ರೆಟರಿಯೇಟ್ ಸೇವೆಗಳು, ಇತ್ತೀಚಿನ ಸ್ಟಾಕ್ ಕೊಟೇಶನ್‌ಗಳು, 'ಎ-ಲಾ-ಕಾರ್ಟೆ' ಡೈನಿಂಗ್ ಕಾರ್ ಸೇವೆ ಇವನ್ನು ದಿನವಿಡೀ ದೊರೆಯುವಂತೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲಾಯಿತು. ಹಾಗೆಯೇ ಫ್ರಾನ್ಸ್‌ನಲ್ಲಿ ಪ್ಯಾರಿಸ್ ಹಾಗೂ ಉತ್ತರ ಫ್ರಾನ್ಸ್‌ನ ಸೀನ್ (Caen) ನಡುವೆ ಗಂಟೆಗೆ ೧೬೦ ಕಿಲೋಮೀಟರ್ಸ್ ವೇಗದಲ್ಲಿ ಓಡುವ ಟರ್ಬೈನ್ ಟ್ರೈನ್ ಸೇವೆಯನ್ನು ೧೯೭೦ರಲ್ಲಿ ಪ್ರಾರಂಭಿಸಲಾಯಿತು. ಮೊದಲ ವರ್ಷದಲ್ಲಿ ಪ್ರಯಾಣಿಕರ ಸಂಖ್ಯೆ ಶೇಕಡಾ ೨೫ರಷ್ಟು ಹೆಚ್ಚಿತು. ಯುರೋಪಿನ ಬೇರೆಡೆಗಳಲ್ಲಿ ಅಂದರೆ ಫ್ರಾನ್ಸ್‌ನಲ್ಲಿ ಪ್ಯಾರಿಸ್ ಹಾಗೂ ಲಯೋನ್ಸ್ ಸೇರುವಂತೆ, ಇಟಲಿಯಲ್ಲಿ ರೋಮ್ ಹಾಗೂ ಮಿಲಾನ್ ಸೇರುವಂತೆ, ಯು.ಎಸ್. ಎಸ್. ಆರ್. ನಲ್ಲಿ ಮಾಸ್ಕೋ ಹಾಗೂ ಲೆನಿನ್‌ಗ್ರಾಡ್ ಸೇರುವಂತೆ ಅತಿವೇಗದ ರೈಲು ಸೇವೆ ಪ್ರಾರಂಭಿಸಲಾಯಿತು.

ಟ್ರಾನ್ಸ್ ಯುರೋಪಿಯನ್ ಎಕ್ಸ್‌ಪ್ರೆಸ್ ರೈಲುಗಳು ಆಧುನಿಕ ಅನುಕೂಲಗಳಿಂದ ಕೂಡಿದ ಸ್ವಚ್ಛವಾದ ವೈಭವೋಪೇತ ಗಾಡಿಗಳಾಗಿದ್ದು ಪ್ರಯಾಣಿಕರಿಗೆ ಸಂಚಾರಕ್ಕೆ ಅತ್ಯುತ್ತಮ ಮಾಧ್ಯಮವಾಗಿದ್ದುವು. ಇತ್ತೀಚೆಗೆ ಬ್ರಿಟನ್ನಿನ ವಿನ್ಯಾಸ ಇಂಜಿನಿಯರ್ ಜೋನ್ಸ್ ಗರಾರ್ಡ್ ಹೊಸ ರೈಲ್ವೆ ಇಂಜನ್ನಿನ ಮಾದರಿಯೊಂದನ್ನು ಸಿದ್ಧಪಡಿಸಿದ್ದು, ಇದು ಲಂಡನ್ ಹಾಗೂ ಯೂರೋಪಿನ ಇತರ ರಾಜಧಾನಿಗಳ ನಡುವೆ ಓಡಾಡಲಿದೆಯೆಂದು ತಿಳಿದುಬಂದಿದೆ. ಈ ಹೊಸ ರೈಲ್ವೆಇಂಜಿನ್ ಕಾರ್ಯಾಚರಣೆಗೆ ತೊಡಗಿದಾಗ ಗಂಟೆಗೆ ೩೦೦ ಕಿ.ಮೀ. ವೇಗದಲ್ಲಿ ಎಳೆಯಲಿದೆ.

ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ Amtrak ವಿಧಾನದಲ್ಲಿ ದೂರಾಂತರ ಟ್ರೈನುಗಳು ನ್ಯೂಯಾರ್ಕ್ ಹಾಗೂ ಸ್ಯಾನ್‌ಫ್ರಾನ್ಸಿಸ್ಕೋಗಳ ನಡುವೆ ಓಡಾಡುತ್ತಿದ್ದು, ಅವುಗಳನ್ನು ತಡವಾಗಿ ಆಧುನೀಕರಣಗೊಳಿಸಲಾಯಿತು. Amtrak ಹೊಸದಾಗಿ ಡಬಲ್ ಡೆಕ್ಡ್ ಪುಲ್‌ಮನ್ ಗಾಡಿಗಳನ್ನು ಅಳವಡಿಸುತ್ತಿದ್ದು ಕ್ರಮಾಗತವಾಗಿ ಹೆಚ್ಚು ರೈಲುಸಂಚಾರವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದೆ. ಈಗ ಸಂಯುಕ್ತ ಸಂಸ್ಥಾನದಲ್ಲಿ ಅತ್ಯಂತ ಜನದಟ್ಟಣೆಯಿರುವ ವಾಷಿಂಗ್‌ಟನ್-ಬಾಲ್ಟಿಮೋರ್-ಫಿಲಡೆಲ್ಫಿಯಾ-ನ್ಯೂಯಾರ್ಕ್-ಬೋಸ್ಟನ್ 'ಕೋರ್ರಿಡಾರ್'ಗಳಿಗೆ ಅತಿವೇಗದ ರೈಲು ಸೇವೆಗಳನ್ನು ಹೊಂದಿಸಲಾಗಿದೆ.

ಏಷ್ಯಾದಲ್ಲಿ ಜಪಾನ್ ದೇಶದಲ್ಲೂ ಅತ್ಯಾಧುನಿಕ ತಾಂತ್ರಿಕ ಜ್ಞಾನವನ್ನು ಬಳಸುವ ಹಾಗೂ ೫೧೫ ಕಿ.ಮೀ. ದೂರವನ್ನು ಒಳಗೊಳ್ಳುವ ಟೋಂಕಿಯೋ ಒಸಾಕಾ ರೈಲು ದಾರಿಯನ್ನು ಅತಿವೇಗದ ದಾರಿಯನ್ನಾಗಿ ಮಾರ್ಪಡಿಸುವ ಐತಿಹಾಸಿಕ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಈ ಮಹತ್ವಾಕಾಂಕ್ಷೆಯ ಯೋಜನೆ ೧೯೬೪ರಲ್ಲಿ ಪೂರ್ಣಗೊಂಡಿತು. ಈಗ ಇದು ಪ್ರಪಂಚದಲ್ಲಿ ಅತ್ಯಂತ ವೇಗವಾಗಿ ಚಲಿಸುವ ರೈಲೆಂದು ಪ್ರಸಿದ್ಧಿ ಪಡೆದಿದೆ. ಸೂಪರ್ ಫಾಸ್ಟ್ ಟ್ರೈನು 'ಹಿಕಾರಿ ಎಕ್ಸ್‌ಪ್ರೆಸ್'- 'ಬುಲೆಟ್ ಟ್ರೆನ್' ಎಂದು ಪ್ರಸಿದ್ಧಿ ಹೊಂದಿದ್ದು ಹೊಸ ಟೋಕೈಡೊ ಲೈನ್‌ನಲ್ಲಿ ಗಂಟೆಗೆ ೨೧೦ ಕಿ.ಮೀ. ವೇಗದಲ್ಲಿ ಸಂಚರಿಸುತ್ತಿದ್ದ, ಹಿಂದೆ ಆರೂವರೆ ಗಂಟೆ ತೆಗೆದುಕೊಳ್ಳುತ್ತಿದ್ದುದು ಈಗ ಮೂರು ಗಂಟೆಗೂ ಕಡಿಮೆ ಅವಧಿಯನ್ನು ತೆಗೆದುಕೊಳ್ಳುತ್ತಿದೆ. ಈ ಸಾಹಸ ಪ್ರಯತ್ನ ಜಯಪ್ರದವಾಗಲು ಅದರಿಂದ ಪ್ರಚೋದನೆಗೊಂಡು ೬೫೬ ಕಿ.ಮೀ. ಉದ್ದದ ಸ್ಯಾನ್ಯೋ ಲೈನನ್ನು ಹೊಸದಾಗಿ ನಿರ್ಮಿಸಿ, ಅದರಲ್ಲಿ ಟ್ರೈನುಗಳು ಗಂಟೆಗೆ ೨೬೦ ಕಿ.ಮೀ. ಗಳ ಗರಿಷ್ಠ ವೇಗದಲ್ಲಿ ಸಂಚರಿಸುವಂತೆ ಮಾಡಲಾಯಿತು. ಏಷ್ಯಾದ ಬೇರೆಡೆಗಳಲ್ಲಿಯೂ ಹೊಸದಾದ ಹಾಗೂ ವೇಗಯುತವಾದ ರೈಲ್ವೆ ಟ್ರ್ಯಾಕ್‌ಗಳನ್ನು ಜಾರಿಗೆ ತರಲಾಯಿತು. ಈಗ ಮಲಯೇಷ್ಯಾ, ಫಿಲಿಪೈನ್ಸ್ ಹಾಗೂ ಥೈಲೆಂಡ್‌ಗಳಲ್ಲಿ ರೈಲು ಪ್ರಯಾಣಿಕರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದೆ.

ಪಶ್ಚಿಮ ಜರ್ಮನಿಯ ತಂತ್ರಜ್ಞರು ಗಂಟೆಗೆ ೫೦೦ ಕಿ.ಮೀ. ವೇಗದಿಂದ ಚಲಿಸಬಲ್ಲ ಹೊಸ ಮಾದರಿಯ ರೈಲನ್ನು ನಿರ್ಮಿಸಿದ್ದು, ರೈಲ್ವೆ ತಂತ್ರಜ್ಞಾನದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿದ್ದಾರೆ. ಟ್ರಾನ್ಸ್‌ರ್‍ಯಾಪಿಡ್ (Transrapid) ಎಂದು ಹೊಸರಿಸಲಾದ ಈ ರೈಲು ಜರ್ಮನಿಯ ಹ್ಯಾಂಬರ್ಗ್ ಮತ್ತು ಹ್ಯಾನೋವರ್ ನಡುವಿನ ೧೫೪ ಕಿ.ಮೀ. ದೂರವನ್ನು ಕೇವಲ ೨೯ ನಿಮಿಷಗಳಲ್ಲಿ ಕ್ರಮಿಸುತ್ತದೆ! ಇದನ್ನು ೧೯೯೮ ರಿಂದ ಪ್ರಯಾಣಿಕರ ಖಾಯಂ ಸೇವೆಗೆ ಒದಗಿಸಲಾಗಿದೆ.

ಸದ್ಯ ಬಳಕೆಯಲ್ಲಿರುವ ರೈಲುಗಳಿಗೂ ಹಾಗೂ ಟ್ರಾನ್ಸ್‌ರ್‍ಯಾಪಿಡ್‌ನ ರಚನಾ ವಿನ್ಯಾಸಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ವಿನ್ಯಾಸದಲ್ಲಿನ ಈ ಭಿನ್ನತೆಯೇ ಟ್ರಾನ್ಸ್‌ರ್‍ಯಾಪಿಡ್‌ಗೆ ಇಷ್ಟೊಂದು ವೇಗವನ್ನು ಗಳಿಸಿಕೊಟ್ಟಿರುವುದು. ಟ್ರಾನ್ಸ್‌ರ್‍ಯಾಪಿಡ್ ರೈಲನ್ನು ರೂಪಿಸಿದ ತಂತ್ರಜ್ಞನ ಪ್ರಕಾರ ಇದೊಂದು ಅಯಸ್ಕಾಂತೀಯ ಹಳಿಗಳ ಮೇಲೆ ಹಾರುವ (ಅಥವಾ ತೇಲುವ) ರೈಲಾಗಿದೆ. ಸು. ೫ ಮೀಟರ್ ಎತ್ತರದ ಕಂಬಗಳ ಆಸರೆ ಈ ಹಳಿಗಳಿಗೆ ಇರುತ್ತದೆ. ವಿಶೇಷವೆಂದರೆ, ಟ್ರಾನ್ಸ್‌ರ್‍ಯಾಪಿಡ್‌ನಲ್ಲಿ ಮುಖ್ಯ ಚಾಲನಶಕ್ತಿ ಇರುವುದು ಎಂಜಿನ್ನಿನಲ್ಲಲ್ಲ, ಬದಲಾಗಿ ಹಳಿಗಳಲ್ಲಿ.

ಟ್ರಾನ್ಸ್ ರ್‍ಯಾಪಿಡ್ ರೈಲು ಭಾರಿ ವೇಗದಿಂದ ಹಳಿಗಳ ಮೇಲೆ ತೇಲುತ್ತ ಸಾಗುವುದರಿಂದ ಭೂಮಿಯ ಸಮಾನಾಂತರಕ್ಕೆ ಯಾವುದೇ ಲಘುಕೋನದಲ್ಲಿ ರೈಲು ಮಾರ್ಗ ರಚಿಸಬಹುದಾಗಿವೆ. ಸಾಮಾನ್ಯ ರೈಲಿಗೂ ಈ ವಿನೂತನ ರೈಲಿಗೆ ಇರುವ ಮುಖ್ಯ ವ್ಯತ್ಯಾಸವೇ ಇದಾಗಿದೆ. ಟ್ರಾನ್ಸ್‌ರ್‍ಯಾಪಿಡ್ ರೈಲು ಮಾರ್ಗವನ್ನು ಎಂಥ ದುರ್ಗಮ ಮಾರ್ಗದಲ್ಲೂ ಕೂಡ ಸುಲಭವಾಗಿ ಹಾಕಬಹುದಾಗಿದೆ. ಉದಾಹರಣೆಗೆ ರೈಲು ಮಾರ್ಗಕ್ಕೆ ಎದುರಾಗಿ ಗುಡ್ಡ-ಬೆಟ್ಟಗಳು ಬಂದರೆ ಅದನ್ನು ಕೊರೆಯುವ ಅಗತ್ಯವಿಲ್ಲ. ಬದಲಾಗಿ ಅದರ ಮೇಲಿಂದ ಹಾಯ್ದು ಹೋಗುವಂತೆ ರೈಲು ಮಾರ್ಗ ರಚಿಸುವ ಅವಕಾಶ ಈ ಮಾದರಿಯ ರೈಲಿಗೆ ಸಾಧ್ಯವಿದೆ. ಹೀಗಾಗಿ ಸುರಂಗ ತೋಡಲು ಆಗಬಹುದಾದ ವೆಚ್ಚ ಉಳಿಯಬಲ್ಲುದು. ಅಷ್ಟೇ ಅಲ್ಲ, ಸ್ವಾಭಾವಿಕ ಭೂಪ್ರದೇಶವನ್ನು ಕಡಿಯುವುದು, ಒಡ್ಡು ನಿರ್ಮಾಣ ಮಾಡುವುದು -ಇವುಗಳ ನಿವಾರಣೆ ಮಾಡಬಹುದು. ಈ ದೃಷ್ಟಿಯಿಂದ ಈ ರೈಲು ಅತ್ಯಂತ ಮಿತವ್ಯಯಕರವಷ್ಟೇ ಅಲ್ಲ, ಪರಿಸರದ ದೃಷ್ಟಿಯಿಂದಲೂ ಆದರ್ಶಪ್ರಾಯವಾಗಿದೆ. ವಿಮಾನಗಳಷ್ಟೇ ವೇಗದ, ಆದರೆ, ಮಿತವ್ಯಯಕಾರೀ ಸಂಚಾರಿ ವ್ಯವಸ್ಥೆಯನ್ನು ಭೂಮಿಯ ಮೇಲೆ ಒದಗಿಸಲಿರುವುದರಿಂದ ಈ ರೈಲಿಗೆ ಜಗತ್ತಿನಾದ್ಯಂತ ಬೇಡಿಕೆ ಆರಂಭವಾಗಿದೆ. ಅಮೆರಿಕದಲ್ಲಿ ಲಾಸ್‌ಏಂಜಲಿಸ್-ಲಾಸ್‌ವೇಗಾಸ್ ನಗರಗಳನ್ನು ಟ್ರಾನ್ಸ್‌ರ್‍ಯಾಪಿಡ್ ರೈಲು ಮಾರ್ಗದ ಮೂಲಕ ಜೋಡಿಸುವ ಕಾರ್‍ಯ ಆರಂಭವಾಯಿತು. ಈ ಹೊಸ ಬಗೆಯ ರೈಲನ್ನು ಜರ್ಮನಿಯ ತಂತ್ರಜ್ಞಾನ ತಂಡಗಳಾದಶ್ಮಿಟ್-ಬೊಲ್ಕೊವ್ ಬ್ಲೊಹ್ಮ್ (ಎಂಬಿಬಿ), ಕ್ರಾಸ್ ಮಾಫ್ಫೀ ಮತ್ತು ಥಿಸ್ಸೆನ್ ಹೆನ್ಷೆಲ್‌ಗಳು ಒಂದು ದಶಕಕ್ಕಿಂತ ಕಡಿಮೆ ಅವಧಿಯಲ್ಲಿ ವಿನ್ಯಾಸಗೊಳಿಸಿವೆ.

ಭಾರತದಲ್ಲಿ ರೈಲ್ವೆಯು ತಾಂತ್ರಿಕತೆಯಲ್ಲಿ ತನ್ನ ಹೆಚ್ಚಿನ ಗುಣಮಟ್ಟವನ್ನು ತೋರಿದ್ದರಿಂದಾಗಿ ವೇಗದಲ್ಲಿ ಹೆಚ್ಚಳ, ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯಗಳು ಹಾಗೂ ಸಾಗಣೆಯ ಶಕ್ತಿ ಕಾಣಿಸಿಕೊಂಡಿತು. ೧೯೬೦ಳಕ್ಕೆ ಮೊದಲಿಗೆ ಕೆಲವು ಟ್ರೈನುಗಳಲ್ಲಿ ಗಂಟೆಗೆ ೧೨೦ ಕಿ.ಮೀ.ನಂತೆ ವೇಗವನ್ನು ಹೆಚ್ಚಿಸಲು ಪ್ರಯತ್ನಿಸಲಾಯಿತು. ಈ ಪ್ರಯೋಗಗಳ ಫಲವಾಗಿ ರೈಲ್ವೆಯನ್ನು ಮೊದಲ ಅತಿವೇಗದ ರೈಲಾದ 'ರಾಜಧಾನಿ ಎಕ್ಸ್‌ಪ್ರೆಸ್' ಅನ್ನು ನವದೆಹಲಿ ಹಾಗೂ ಕಲ್ಕತ್ತಾ ನಡುವೆ ಜಾರಿಗೆ ತರುವಂತಾಯಿತು. ಮೊದಲಿಗೆ ಗಂಟೆಗೆ ೧೨೦ ಕಿ.ಮೀ. ವೇಗದಲ್ಲಿ ೧೪೪೧ ಕಿ.ಮೀ. ಅಂತರವನ್ನು ೧೭ ಗಂಟೆ ೩೦ ನಿಮಿಷಗಳಲ್ಲಿ ಕ್ರಮಿಸುವಂತೆ ತೀರ್ಮಾನಿಸಲಾಯಿತು. ಈಗ ಸಂಪೂರ್ಣ ಹವಾನಿಯಂತ್ರಿತವಾಗಿರುವ ಟ್ರೈನು ಗಂಟೆಗೆ ೧೩೦ ಕಿ.ಮೀ. ವೇಗದಲ್ಲಿ ಸಂಚರಿಸುತ್ತಿದ್ದು, ಕಾಲಾವಧಿಯನ್ನು ೧೬ ಗಂಟೆ ಇಪ್ಪತ್ತು ನಿಮಿಷಗಳಿಗೆ ಇಳಿಸಲಾಗಿದೆ. ಟ್ರೈನುಗಳಿಗಾಗಿ ವಿಶೇಷ ತರದ ಕೋಚ್‌ಗಳನ್ನು ಭಾರತದಲ್ಲಿ ನಿರ್ಮಿಸಲಾಗುತ್ತಿದೆ.

೧೯೭೨ರಲ್ಲಿ ಆ ಬಗೆಯ ಇನ್ನೊಂದು ಟ್ರೈನು ನವದೆಹಲಿ ಹಾಗೂ ಮುಂಬಯಿ ನಡುವೆ ಜಾರಿಗೆ ತರಲಾಯಿತು. ೧೩೮೪ ಕಿ.ಮೀ.ಗಳ ಅಂತರವನ್ನು ಗಂಟೆಗೆ ೧೨೦ಕಿ.ಮೀ.ಗಳ ವೇಗದಲ್ಲಿ ೧೬ ಗಂಟೆ ೫೦ ನಿಮಿಷಗಳಲ್ಲಿ ಕ್ರಮಿಸುವಂತೆ ಏರ್ಪಾಡುಮಾಡಲಾಯಿತು. ಈ ಎರಡೂ ದಾರಿಗಳಲ್ಲಿ ಟ್ರೈನ್‌ಗಳನ್ನು ಗಂಟೆಗೆ ೧೬೦ ಕಿ.ಮೀ. ವೇಗದಲ್ಲಿ ಓಡಿಸುವ ಪ್ರಯೋಗವನ್ನು ಮಾಡಲಾಗಿದೆ. 'ರಾಜಧಾನಿ ಎಕ್ಸ್‌ಪ್ರೆಸ್' ಟ್ರೈನ್‌ಗಳ ಹಾದಿಯಲ್ಲಿ ತರಲಾದ ಸುಧಾರಣೆಗಳಿಂದ ಪ್ರಯೋಜನ ಪಡೆದು ಟ್ರಂಕ್ ರೂಟ್ಸ್‌ಗಳ ಮೇಲೆ ಅನೇಕ ಪ್ರಮುಖ ರೈಲುಗಳನ್ನು 'ಸೂಪರ್ ಫಾಸ್ಟ್ ಟ್ರೈನ್'ಗಳಿಂದು ವಿನ್ಯಾಸಗೊಳಿಸಲಾಯಿತು ಹಾಗೂ ಗಂಟೆಗೆ ೧೧೦ಕಿ.ಮೀ. ನಂತೆ ವೇಗವನ್ನು ಹೆಚ್ಚಿಸಲಾಯಿತು. ಪ್ರಮುಖ ಪ್ರವಾಸಿ ಕೇಂದ್ರಗಳಿಂದ ಮುಖ್ಯ ಪಟ್ಟಣಗಳಿಗೆ ಜೋಡಣೆಗೊಳ್ಳುವಂತೆ ಅಸಂಖ್ಯಾತ ಹೊಸ ಅತಿವೇಗದ ಟ್ರೈನ್‌ಗಳನ್ನು ಜಾರಿಗೆ ತರಲಾಯಿತು.

ದೇಶದಲ್ಲಿ ಅತ್ಯಂತ ವೇಗವಾಗಿ ಸಂಚರಿಸುವ ಶತಾಬ್ದಿ ಎಕ್ಸ್‌ಪ್ರೆಸ್ ರೈಲನ್ನು ಈಗ ಜಾರಿಗೊಳಿಸಲಾಗಿದೆ. ಅವು ಉತ್ತರಭಾರತದ ಪ್ರಮುಖ ಪಟ್ಟಣಗಳಿಗೆ ತಮ್ಮ ಸೇವೆಯನ್ನು ವಿಸ್ತರಿಸಿದ್ದು, ಇನ್ನಷ್ಟು ಈ ಸೂಪರ್ ಫಾಸ್ಟ್ ಷಟಲ್ ಸರ್ವಿಸ್‌ಗಳನ್ನು ಮುಂದೆ ಜಾರಿಗೆ ತರಲಾಗುವುದು. ಈಗ ಮೂರು ಶತಾಬ್ದಿ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲಾಗುತ್ತಿದ್ದು, ಮೊದಲನೆಯದು ದೆಹಲಿ /ಆಗ್ರಾ/ ಗ್ವಾಲಿಯರ್/ ಝಾನ್ಸಿ/ ಭೂಪಾಲ್‌ಗಳಿಗೆ ಹೋಗಿ ಬರುತ್ತಿದೆ; ಎರಡನೆಯದು ಕಾನ್‌ಪುರ ಹಾಗೂ ಲಕ್ನೋಗಳ ಜೊತೆ ದೆಹಲಿಯನ್ನು ಕೂಡಿಸುತ್ತದೆ; ಮೂರನೆಯದು ಚಂಡಿಘರ್ ದೆಹಲಿಯನ್ನು ಸಂಬಂಧಿಸುತ್ತದೆ.

ಈ ಮೂರು ಅತ್ಯಂತ ವೇಗಯುತ ಟ್ರೈನುಗಳ ಜೊತೆ 'ಗಾಲಿಗಳ ಮೇಲೆ ಅರಮನೆ' (Palace on wheels) ಎನ್ನುವ ಬಹಳ ಜನಪ್ರಿಯವಾದ ಟ್ರೈನನ್ನೂ ಬಳಕೆಗೆ ತರಲಾಗಿದೆ. ಒಂದು ವಾರ ಪರ್ಯಂತ ಇದು ದೆಹಲಿಯಿಂದ ಆಗ್ರಾವನ್ನು ಒಳಗೊಂಡು ರಾಜಾಸ್ಥಾನದ ಪಟ್ಟಣಗಳ ವರೆಗೆ ಸಂಚರಿಸುತ್ತದೆ. ಇದರಲ್ಲಿನ ಸಂಚಾರಿ ಅನುಭವ ವಿಶಿಷ್ಟತರದ್ದಾಗಿ ಸಂತೋಷವನ್ನುಂಟುಮಾಡುತ್ತದೆ.

ಕರ್ನಾಟಕ ಹಾಗೂ ಗೋವಾ ರಾಜ್ಯಗಳ ನಡುವೆ ಆದ ಒಪ್ಪಂದದಂತೆ ಪ್ರವಾಸೋದ್ಯಮ ವರ್ಷಾಚರಣೆ ಅಂಗವಾಗಿ 'ಭಾರತ ಸಂದರ್ಶಿಸಿ' ಕಾರ್ಯಕ್ರಮದಂತೆ ಕರ್ನಾಟಕ-ಗೋವಾ ನಡುವೆ 'ಗಾಲಿ ಮೇಲೆ ಅರಮನೆ' ಪ್ರವಾಸಿ ರೈಲು ಸಂಚಾರ ೧೯೯೨ರ ಜನವರಿ ೧ರಂದು ಪ್ರಾರಂಭವಾಗುತ್ತದೆಂದು ಪ್ರಕಟಣೆ ಹೊರಡಿಸಲಾಯಿತು. ಈ ರೈಲು ವಾರದಲ್ಲಿ ಒಂದು ದಿನ ಗೋವಾ ಪ್ರವಾಸಿ ಸ್ಥಳಗಳಲ್ಲೂ ಮತ್ತು ಐದು ದಿನ

ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲೂ ಸಂಚರಿಸಲಿದೆ. ಗೋವಾದಲ್ಲಿನ ಒಂದು ದಿನದ ಸಂಚಾರದಲ್ಲಿ ಬೀಚ್‌ಗಳಿಗೂ ಮತ್ತು ಕರ್ನಾಟಕದಲ್ಲಿ ಮೈಸೂರು, ಕೆ.ಆರ್.ಎಸ್., ಕಬಿನಿ ಯೋಜನೆ, ಬೇಲೂರು, ಹಳೇಬೀಡು, ಹಾಸನ, ಹಂಪೆ, ಹೊಸಪೇಟೆ ಮತ್ತು ಗೋಲಗುಂಬಜ್ ಸ್ಥಳಗಳಿಗೆ (ಮಳೆಗಾಲ ಬಿಟ್ಟು ಉಳಿದ ಎಲ್ಲಾ ಕಾಲದಲ್ಲೂ) ಈ ರೈಲು ಸಂಚಾರವಿರುತ್ತದೆ ಎಂದು ಹೇಳಲಾಗಿದೆ.

ಕರ್ನಾಟಕದಲ್ಲಿ ಎಲ್ಲರ ಆರ್ಥಿಕ ಸೌಲಭ್ಯಕ್ಕೆ ಚೆನ್ನಾಗಿ ಹೊಂದುವ ಸಂಚಾರಿ ಮಾಧ್ಯಮಗಳಲ್ಲಿ ರೈಲು ಪ್ರಧಾನ ಸ್ಥಾನವನ್ನು ಪಡೆದಿದೆ. ರೈಲುಗಾಡಿ ಹಳಿಗಳ ಮೇಲೆ ಸಂಚರಿಸುವುದರಿಂದಾಗಿ ಎಂತಹ ಕೆಟ್ಟ ಹವೆಯಲ್ಲೂ ಸುಸೂತ್ರವಾಗಿ ಸಂಚರಿಸುತ್ತವೆ. ಹೊಸ ಹೊಸ ರೈಲು ಮಾರ್ಗಗಳನ್ನು ವೇಗದ ಸಂಚಾರವನ್ನು ಕಲ್ಪಿಸಿ, ಜನರಿಗೆ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಂಚರಿಸಲು, ವಸ್ತುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಕೇಂದ್ರ ಸರಕಾರ ನೆರವಾಗಿದೆ. ಆದರೆ, ಇದು ಸಾಲದು. ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಇದು ಇನ್ನಷ್ಟು ವಿಸ್ತರಣಗೊಳ್ಳಬೇಕಿದೆ. ರೈಲ್ವೆ ನಿಲ್ದಾಣಗಳಲ್ಲಿ ಸಾರ್ವಜನಿಕ ಅಗತ್ಯಗಳನ್ನು ಪೂರೈಸುವ, ನೈರ್ಮಲ್ಯವನ್ನು ಕಾಪಾಡುವ, ಜನದಟ್ಟಣೆಗೆ ಅನುಗುಣವಾಗಿ ರೈಲು ನಿಲ್ದಾಣಗಳನ್ನು ವಿಸ್ತರಿಸುವ, ರೈಲು ಬೋಗಿಗಳಲ್ಲಿ ಸಾಧ್ಯವಾದಷ್ಟು ಅನುಕೂಲಗಳನ್ನು ಕಲ್ಪಿಸುವ, ಪ್ರಯಾಣ ಕಾಲದಲ್ಲಿ ಹಲವೆಡೆಗಳಲ್ಲಿ ಸಾರ್ವಜನಿಕರು ತಂಗಿ ಪ್ರಯಾಣವನ್ನು ಮುಂದುವರಿಸುವ, ಮುಂಗಡವಾಗಿ ಸೀಟು ಕಾಯ್ದಿಡಲು ಹೆಚ್ಚು ಬುಕಿಂಗ್ ಕೌಂಟರ್‌ಗಳನ್ನು ಸ್ಥಾಪಿಸುವ, ಸಾರ್ವಜನಿಕರಿಗೆ ಕಾಲವ್ಯಯವಾಗದಂತೆ ಸೀಟು ಕಾಯ್ದಿರಿಸುವುದನ್ನು ಟಿಕೆಟ್ ಬುಕಿಂಗ್ ಅನ್ನು ಕಂಪ್ಯೂಟರೀಕರಣಕ್ಕೆ ಒಳಪಡಿಸುವ ಸ್ವಚ್ಛತೆಯನ್ನು ಎಲ್ಲೆಡೆ ಕಾಪಾಡುವ ದಿಶೆಯಲ್ಲಿ ರೈಲ್ವೆ ಮಂತ್ರಾಲಯ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಬೆಳೆಯುತ್ತಿರುವ ಜನಸಂಖ್ಯೆಗೆ, ಕೈಗಾರಿಕಾ ಕ್ರಾಂತಿಗೆ ಭಾರತೀಯ ರೈಲ್ವೆಯು ತನ್ನ ಸೇವಾ ಸೌಲಭ್ಯಗಳನ್ನು ಇನ್ನಷ್ಟು ವಿಸ್ತರಿಸುವುದು ಅನಿವಾರ್ಯವಾಗಿದೆ. ಆದಷ್ಟು ರೈಲು ದುರಂತಗಳು ಸಂಭವಿಸದಂತೆ ತೀವ್ರ ಗಮನಹರಿಸುವ ಅಗತ್ಯವಿದೆ. ಏಕೆಂದರೆ, ರೈಲು ಸಂಚಾರದಲ್ಲಿ ವಿಶ್ವಾಸವಿಟ್ಟು ಜನತೆ ಅದರತ್ತ ಧಾವಿಸುತ್ತಲಿರುವರು. ಅಪಘಾತ ಮುಕ್ತ ರೈಲು ಸಂಚಾರ ಅದರ ಆರ್ಥಿಕ ಸಂಪನ್ಮೂಲವನ್ನು ಇನ್ನಷ್ಟು ಬೆಳೆಸುವುದರಲ್ಲಿ ಸಂಶಯವಿಲ್ಲ.

# 'ಟೂರಿಸ್ಟ್' ಪದದ ವ್ಯುತ್ಪತ್ತಿ

'Tourist' ಎಂಬ ಮೂಲಪದ ಕ್ರಿ.ಶ. ೧೨೯೨ ರಷ್ಟು ಹಳೆಯದು. ಅದು 'Tour' ಎಂಬ ಪದದಿಂದ ಬಂದಿದೆ. 'Tour' ಪದವು ಲ್ಯಾಟಿನ್‌ನ 'tornus' ಎಂಬುದರಿಂದ ಬಂದಿದೆ. ಇದರ ಅರ್ಥ ವೃತ್ತವೊಂದನ್ನು ವಿವರಿಸುವ ಸಾಮಗ್ರಿ ಅಥವಾ ಸುತ್ತುವವನ ಚಕ್ರ ಎಂದು. ೧೭ನೇ ಶತಮಾನದ ಪೂರ್ವಾರ್ಧದಲ್ಲಿ ಈ ಪದವು ಮೊದಲಿಗೆ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವುದು, ಒಂದು ಸಂಚಾರ, ಒಂದು ವಿಹಾರಯಾತ್ರೆ, ಒಂದು ದೇಶ ಅಥವಾ ಪ್ರಾಂತ್ಯದ ಪ್ರಮುಖ ಭಾಗಗಳನ್ನು ಮುಟ್ಟುವ ಒಂದು ಬಳಸಾದ (Circuitious) ಪ್ರವಾಸ ಎಂದು ಬಳಸಲಾಯಿತು. ('19th century Dictionary')ಯಲ್ಲಿ 'Tourist' ಪದಕ್ಕೆ "ಕುತೂಹಲದಿಂದ ಪ್ರೇರಿತನಾದ ವ್ಯಕ್ತಿಯೋರ್ವನು ತನಗೆ ಮಾಡಲು ಬೇರೆ ಯಾವುದೂ ಕೆಲಸವಿಲ್ಲದಿದ್ದರಿಂದ ಸುತ್ತಾಟದಿಂದ ಖುಷಿ ಹೊಂದಲು ಪ್ರವಾಸ ಕೈಗೊಂಡವನು" ಎಂಬ ಅರ್ಥ ಮಾಡಿದೆ. 'Oxford Dictionary'ಯು Tourist ಪದವು ಕ್ರಿ.ಶ. ೧೮೦೦ ಕ್ಕಿಂತ ಹಿಂದೆಯೇ ಬಳಸಲ್ಪಟ್ಟಿದೆಯೆಂದು ಹೇಳುತ್ತದೆ. Dictionnaire Universal ಪ್ರಕಾರ 'Tourist' ಪದವು "ವ್ಯಕ್ತಿಯೋರ್ವನು ಕುತೂಹಲಕ್ಕಾಗಿ ಸಂಚಾರದಿಂದ ಪಡೆಯಬಹುದಾದ ಖುಷಿಗಾಗಿ ಅಥವಾ ತಾನು ಸುತ್ತಾಡಿದುದನ್ನು ಬೇರೆಯವರಿಗೆ ಹೇಳಲಿಕ್ಕಾಗಿ ಮಾಡಿದ ಸಂಚಾರ" ಎಂದು ವಿವರಿಸುತ್ತದೆ.

'ಖುಷಿ ಸಂಚಾರ' ಎಂಬ ಅರ್ಥದಲ್ಲಿ 'tourist' ಪದ ಬಳಕೆಗೊಂಡುದು ತೀರಾ ಇತ್ತೀಚಿಗೆ. ೧೯ನೇ ಶತಮಾನದ ಮೊದಲಿಗೆ 'tourist' ಪದವು ಪ್ರವಾಸ ಅಥವಾ ಪ್ರವಾಸಗಳನ್ನು ಮಾಡುವವನು, ಮೇಲಾಗಿ 'ಇದನ್ನು ಮನರಂಜನೆಗಾಗಿ ಮಾಡುವವನು ಅಥವಾ ಆನಂದಕ್ಕಾಗಿ, ಕುತೂಹಲಕ್ಕಾಗಿ, ಪ್ರಕೃತಿಯ ಸುಂದರ ದೃಶ್ಯಗಳಿಗಾಗಿ ಸಂಚರಿಸುವವನು ಎಂಬ ಅರ್ಥದಲ್ಲಿ ಬಳಕೆಗೊಂಡಿತು.

ಮೇಲಣ ವ್ಯಾಖ್ಯಾನಗಳೆಲ್ಲವೂ ಸಾಮಾನ್ಯ ಪ್ರಕಾರದ್ದು. ೧೯೭೩ರಲ್ಲಿ ಲೀಗ್ ಆಫ್ ನೇಷನ್ಸ್ 'tourist' ಪದದ ವ್ಯಾಖ್ಯೆಯನ್ನು ಸ್ಪಷ್ಟಪಡಿಸಿತು. ಅದು ವಿದೇಶೀ ಪ್ರವಾಸಿ (Foreign tourist) ಪದವನ್ನು ವಿವರಿಸುತ್ತ "ಯಾವಾತನು ತಾನು

ಸಾಮಾನ್ಯವಾಗಿ ತಾನು ವಾಸಮಾಡುವ ದೇಶಕ್ಕೆ ಹೊರಗೆ ಕೊನೆಯುಪಕ್ಷ ೨೪ ಘಂಟೆಗಳ ಅವಧಿಯಲ್ಲಿ ಬೇರೆ ದೇಶಕ್ಕೆ ಭೇಟಿ ನೀಡುವವನು" ಎಂದಿದೆ. ಈ ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಈ ಕೆಳಗಿನ ವ್ಯಕ್ತಿಗಳ ಪ್ರವಾಸಿಗಳಾಗಿ ಭಾವಿಸಲ್ಪಡುವರು:

ಅ. ಖುಷಿಗಾಗಿ, ಗೃಹಕಾರ್ಯಕ್ಕಾಗಿ, ಆರೋಗ್ಯ ಸುಧಾರಣೆಗಾಗಿ -ಈ ಕಾರಣಗಳಿಗಾಗಿ ಸಂಚರಿಸುವವರು.

ಆ. ಯಾವುದೇ ಬಗೆಯ ಪ್ರತಿನಿಧಿಯಾಗಿ (ವಿಜ್ಞಾನಿ, ಆಡಳಿತಗಾರ, ರಾಯಭಾರಿ, ಧಾರ್ಮಿಕ ಶ್ರದ್ಧಾವಂತ, ಕ್ರೀಡಾಪಟು, ಇತ್ಯಾದಿ) ಸಭೆಗಳಲ್ಲಿ ಭಾಗವಹಿಸಲು ತೆರಳುವ ವ್ಯಕ್ತಿಗಳು.

ಇ. ವ್ಯಾಪಾರೋದ್ದೇಶಕ್ಕಾಗಿ ಸಂಚರಿಸುವ ವ್ಯಕ್ತಿಗಳು.

ಈ. ಸಾಗರದ ಮೇಲೆದ್ದ ಬಿರುಗಾಳಿಯ ಕಾರಣವಾಗಿ ಬರುವ ವ್ಯಕ್ತಿಗಳು (ಅವರು ೨೪ ಗಂಟೆಗಳಿಗಿಂತ ಕಡಿಮೆ ಕಾಲ ತಂಗಿದ್ದರೂ ಕೂಡಾ).

**ಈ ಕೆಳಗಿನವರನ್ನು 'tourist'ಗಳಾಗಿ ಪರಿಗಣಿಸಕೂಡದು.**

೧. ಕೆಲಸವೊಂದರ ಒಪ್ಪಂದ ಪಡೆದು ಅಥವಾ ಪಡೆಯದೆ ದೇಶವೊಂದಕ್ಕೆ ಬರುವ ವ್ಯಕ್ತಿಗಳು; ಒಂದು ವೃತ್ತಿ ಅಥವಾ ವ್ಯಾಪಾರಿ ಚಟುವಟಿಕೆಯಲ್ಲಿ ತೊಡಗಲು ದೇಶವೊಂದಕ್ಕೆ ಬರುವ ವ್ಯಕ್ತಿಗಳು.

೨. ದೇಶವೊಂದರಲ್ಲಿ ವಾಸಗೃಹವನ್ನು ನಿರ್ಮಿಸಲು ಬರುವವರು.

೩. ಬೋರ್ಡಿಂಗ್ ವ್ಯವಸ್ಥೆಯ ಅಥವಾ ಶಾಲೆಗಳ ವಿದ್ಯಾರ್ಥಿಗಳು ಮತ್ತು ಕಿರಿಯರು.

೪. ಗಡಿಪ್ರದೇಶವೊಂದರ ನಿವಾಸಿಗಳು ಮತ್ತು ಕಾಯಂ ಆಗಿ ಒಂದೆಡೆ ವಾಸಿಸುತ್ತಾ ನೆರೆಯ ದೇಶದಲ್ಲಿ ಕೆಲಸ ಮಾಡುವವರು.

೫. ಸಂಚಾರವು ೨೪ ಗಂಟೆಗಳಿಗಿಂತ ಹೆಚ್ಚು ಕಾಲ ತೆಗೆದುಕೊಂಡರೂ ಎಲ್ಲೂ ನಿಲ್ಲದೆ ಒಂದು ದೇಶವನ್ನು ಹಾದುಹೋಗುತ್ತಿರುವ ಪ್ರವಾಸಿಗರು.

ಮೇಲಿನ ವ್ಯಾಖ್ಯಾನವು ೧೯೪೫ರಲ್ಲಿ ಸಂಯುಕ್ತ ಸಂಸ್ಥಾನಗಳಿಂದ (United Nations)ದೃಢಪಡಿಸಲ್ಪಟ್ಟಿತು. (Tourist) ಎಂದರೆ, ವ್ಯಕ್ತಿಯೋರ್ವನು ಯಾವುದೇ ವಲಸೆ ಹೋಗದ ಉದ್ದೇಶಕ್ಕಾಗಿ ವಿದೇಶವೊಂದರಲ್ಲಿ ೨೪ ಗಂಟೆಗಳಿಗಿಂತ ಹೆಚ್ಚಿಗೆ ಮತ್ತು ಆರು ತಿಂಗಳುಗಳಿಗಿಂತ ಕಡಿಮೆ ಕಾಲ ನೆಲೆನಿಲ್ಲುವವನು ಎಂದು ಹೇಳಲಾಯಿತು. ಈ ವ್ಯಾಖ್ಯಾನವು ಪ್ರವಾಸಿ ಅಂಕಿ ಸಂಖ್ಯೆಗಳ ಸಂಗ್ರಹಣೆಗಾಗಿ ಬಹಳಷ್ಟು ದೇಶಗಳಿಂದ ಸ್ವೀಕೃತವಾಯಿತು.

೧೯೬೩ರಲ್ಲಿ ರೋಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಪ್ರವಾಸ ಹಾಗೂ ಪ್ರವಾಸೋದ್ಯಮದ ಮೇಲೆ ಸಂಯುಕ್ತ ಸಂಸ್ಥಾನಗಳ ಸಮಾವೇಶ ನಡೆದು 'tourist' ಪದಕ್ಕೆ ವ್ಯಾಖ್ಯಾನವೊಂದನ್ನು ಸಿದ್ಧಪಡಿಸಿ ಇದನ್ನು ಸಂಯುಕ್ತ ಸಂಸ್ಥಾನಗಳ ಅಂಕಿ ಅಂಶಗಳ ಸಂಗ್ರಹಣ ಆಯೋಗವು ಅಧ್ಯಯನ ಮಾಡಬೇಕೆಂದು ಶಿಫಾರಸುಮಾಡಿತು. ಅಲ್ಲಿ ಪುನರ್ವಿಮರ್ಶಿತ ವ್ಯಾಖ್ಯೆಯೊಂದನ್ನು ಸಿದ್ಧಪಡಿಸಿ ಅದನ್ನು ಸ್ವೀಕರಿಸಲಾಯಿತು. ಸಭೆಯು 'Visitor' ಎಂಬ ಪದದ ಎಲ್ಲ ರೀತಿಯ ವ್ಯಾಖ್ಯಾನವನ್ನು ವಿಚಾರಮಾಡಿತು. ಅದು ಅಂಕಿಅಂಶಗಳ ಸಂಗ್ರಹಣ ಉದ್ದೇಶಗಳಿಗಾಗಿ ಹೀಗೆ ವಿವರಣೆ ನೀಡುತ್ತದೆ:

"ಯಾವುದೇ ವ್ಯಕ್ತಿಯು ತಾನು ಸಾಮಾನ್ಯವಾಗಿ ವಾಸವಿರುವ ಸ್ಥಳದಿಂದ ಹೊರಗೆ, ತಾನು ಭೇಟಿಕೊಟ್ಟ ದೇಶದ ಒಳಗೆ,, ಆದಾಯ ತರುವ ವೃತ್ತಿಯೊಂದನ್ನು ಅನುಸರಿಸಿ ದೇಶವೊಂದಕ್ಕೆ ಭೇಟಿನೀಡುವುದು."

ಈ ವ್ಯಾಖ್ಯೆಯು ಕೆಳಗಿನ ವಿವರಗಳನ್ನು ಒಳಗೊಳ್ಳುತ್ತದೆ:

ಅ. ಪ್ರವಾಸಿಗರು (tourist) ಇತ್ಯಾದಿ, ಭೇಟಿನೀಡಿದ ದೇಶದಲ್ಲಿ ಕನಿಷ್ಠಪಕ್ಷ ೨೪ ಗಂಟೆಗಳವರೆವಿಗೆ ವಾಸ್ತವ್ಯ ಹೂಡುವ ತಾತ್ಕಾಲಿಕ ಸಂದರ್ಶಕರು. ಅವರ ಪ್ರಯಾಣದ ಉದ್ದೇಶವನ್ನು ಈ ಕೆಳಗಣ ಶೀರ್ಷಿಕೆಗಳಲ್ಲಿ ಯಾವುದಾದರೂ ಒಂದರ ಕೆಳಗೆ ವಿಂಗಡಿಸಬಹುದು.

i. ಅ. ವಿರಾಮ (ಮನರಂಜನೆ, ರಜೆ, ಆರೋಗ್ಯ, ಅಧ್ಯಯನ, ಧಾರ್ಮಿಕ ಹಾಗೂ ಕ್ರೀಡೆ.

ಆ. ವ್ಯಾಪಾರ, ಕುಟುಂಬ, ಆಯೋಗ, ಸಭೆ.

ii. ವಿಹಾರ ಪ್ರಯಾಣಿಕರು (Excursionists) ಇತ್ಯಾದಿ, ಭೇಟಿನೀಡಿದ ದೇಶದೊಳಗೆ ೨೪ ಗಂಟೆಗಳಿಗಿಂತ ಕಡಿಮೆ ವಾಸ್ತವ್ಯ ಹೂಡುವ ತಾತ್ಕಾಲಿಕ ಸಂದರ್ಶಕರು (ಸಮುದ್ರ ವಿಕೋಪಕ್ಕೆ ಒಳಗಾದ ಪ್ರವಾಸಿಗರನ್ನೂ ಒಳಗೊಂಡು).

ಮೇಲಣ ವ್ಯಾಖ್ಯೆಯು ಕಾನೂನಿನ ದೃಷ್ಟಿಯಲ್ಲಿ ದೇಶವನ್ನು ಪ್ರವೇಶಿಸದೆ ಇರುವ (ಉದಾ: ವಿಮಾನ ಪ್ರವಾಸಿಗರು ವಿಮಾನ ನಿಲ್ದಾಣದ ಸಾಗಣೆ ಆವರಣವನ್ನು (transit area) ಬಿಡದೆ ಇರುವವರು) ಪ್ರವಾಸಿಗರನ್ನು ಹೊರತುಪಡಿಸುತ್ತದೆ.

ಈ ಎಲ್ಲ ವ್ಯಾಖ್ಯೆಗಳು ಕ್ರಮಕ್ರಮವಾಗಿ ಸಾರ್ವತಿಕ ಒಪ್ಪಿಗೆಯನ್ನು ಪಡೆಯುತ್ತಿವೆ. ವಿಶ್ವ ಪ್ರವಾಸೋದ್ಯಮ ಸಂಸ್ಥೆಯನ್ನು (WTO) ಈ ವಾಖ್ಯೆಯನ್ನು ಅಭಿವೃದ್ಧಿ ಪಡಿಸಿದ್ದು,

ಸು. ೧೧೦ ಸದಸ್ಯ ರಾಷ್ಟ್ರಗಳು ಇದನ್ನು ಅಂಗೀಕರಿಸಿವೆ. ಈ ವ್ಯಾಖ್ಯೆಯನ್ನು ಅಂಗೀಕರಿಸಿದ ರಾಷಟ್ರಗಳಲ್ಲಿ ಭಾರತವೂ ಸೇರಿದೆ.

'ವಿದೇಶೀ ಪ್ರವಾಸಿ' ಪದದ ವ್ಯಾಖ್ಯೆಯನ್ನು ೧೯೬೩ ರಲ್ಲಿ ರೋಮ್‌ನಲ್ಲಿ ಅಂತರರಾಷ್ಟ್ರೀಯ ಪ್ರವಾಸ ಹಾಗೂ ಪ್ರವಾಸೋದ್ಯಮದ ಮೇಲೆ ನಡೆದ ಸಂಯುಕ್ತ ಸಂಸ್ಥಾನಗಳ ಸಮಾವೇಶದಲ್ಲಿ ಶಿಫಾರಸು ಮಾಡಿರುವಂತೆ ಭಾರತ ಸರಕಾರದ ಪ್ರವಾಸೋದ್ಯಮ ಇಲಾಖೆಯು ಸ್ವೀಕರಿಸಿದೆ. ಅದು ಹೀಗಿದೆ:

'ವಿದೇಶೀ ಪ್ರವಾಸಿ'ಯ ವ್ಯಕ್ತಿಯೋರ್ವನು ವಿದೇಶೀ ಪಾಸ್‌ಪೋರ್ಟ್‌ನ ಮೇಲೆ ಭೇಟಿ ನೀಡುವವನಾಗಿದ್ದು, ಅವನು ಕನಿಷ್ಠ ೨೪ ಗಂಟೆಗಳ ಕಾಲ ಭಾರತದಲ್ಲಿ ವಾಸ್ತವ್ಯ ಹೂಡುವವನಾಗಿದ್ದು, ಅವನ ಪ್ರವಾಸದ ಉದ್ದೇಶವನ್ನು ಕೆಳಗಿನ ಶೀರ್ಷಿಕೆಗಳಲ್ಲಿ ಯಾವುದಾದರೂ ಒಂದರ ಕೆಳಗೆ ವರ್ಗೀಕರಿಸಬಹುದು.

i. ವಿರಾಮ (ಮನರಂಜನೆ, ರಜೆ, ಆರೋಗ್ಯ, ಅಧ್ಯಯನ, ಧಾರ್ಮಿಕ ಹಾಗೂ ಕ್ರೀಡೆ)

ii. ವ್ಯಾಪಾರ, ಕುಟುಂಬ, ಆಯೋಗ, ಸಭೆ.

ಈ ಕೆಳಗಿನ ಗುಂಪಿನವರು 'ವಿದೇಶೀ ಪ್ರವಾಸಿಗರು' ಎಂದು ಪರಿಗಣಿತ-ವಾಗುವುದಿಲ್ಲ.

1. ಒಪ್ಪಂದವಿದ್ದು ಅಥವಾ ಇಲ್ಲದೆಯೆ ದೇಶದ ಒಳಗಡೆಯೇ ಉದ್ಯೋಗವೊಂದನ್ನು ಸ್ವೀಕರಿಸಲು ಇಲ್ಲವೆ ಸಂಭಾವನೆಯಿರುವ ಕಾರ್ಯ ಚಟುವಟಿಕೆಗಳಲ್ಲಿ ತೊಡಗಲು ಬರುವ ವ್ಯಕ್ತಿಗಳು;
2. ದೇಶದಲ್ಲಿ ವಾಸಗೃಹ ನಿರ್ಮಾಣಕ್ಕಾಗಿ ಬರುವ ವ್ಯಕ್ತಿಗಳು;
3. ವಿಹಾರ ಪ್ರಯಾಣಿಕರು, ಇತ್ಯಾದಿ; ದೇಶದೊಳಗೆ ೨೪ ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ವಾಸ್ತವ್ಯ ಹೂಡುವ ತಾತ್ಕಾಲಿಕ ಸಂದರ್ಶಕರು (ಸಮುದ್ರವಿಕೋಪಕ್ಕೆ ಒಳಗಾದ ಪ್ರವಾಸಿಗರೂ ಸೇರಿದಂತೆ).

ಅಂಕಿಸಂಖ್ಯೆಗಳು ಈ ಕೆಳಗಿನವುಗಳನ್ನು ಒಳಗೊಳ್ಳುವುದಿಲ್ಲ.

ಅ. ಪಾಕಿಸ್ಥಾನ ಹಾಗೂ ಬಾಂಗ್ಲಾದೇಶದ ರಾಷ್ಟ್ರೀಯರು;

ಆ. ಭೂಮಾರ್ಗದ ಮೂಲಕ ಭಾರತವನ್ನು ಪ್ರವೇಶಿಸುವ ನೇಪಾಳದ ರಾಷ್ಟ್ರೀಯರು;

ಇ. ಭೂತಾನದ ಭೂಮಾರ್ಗದ ಮೂಲಕ ಭಾರತವನ್ನು ಪ್ರವೇಶಿಸುವ ಎಲ್ಲ ವಿದೇಶೀಯರು.

ದೇಶೀಯ ಅಥವಾ ಸ್ಥಳೀಯ ಪ್ರವಾಸ (Domestic Travel) ಹಾಗೂ ವಿದೇಶೀಯ ಅಥವಾ ಅಂತರ ರಾಷ್ಟ್ರೀಯ ಪ್ರವಾಸ ಎಂದು ಇವೆರಡರ ನಡುವೆ ವ್ಯತ್ಯಾಸವನ್ನು ಗುರುತಿಸಬಹುದು. ದೇಶೀಯ ಪ್ರವಾಸದಲ್ಲಿ ಜನರು ತಮ್ಮ ವಾಸಸ್ಥಾನದಿಂದ ಹೊರಗೆ, ದೇಶದ ಒಳಗೆಯೇ ನಿರ್ದಿಷ್ಟ ಸ್ಥಳಗಳಿಗೆ ೫೦ ಮೈಲಿಗಳಿಗಿಂತಲೂ ಹೆಚ್ಚಿಗೆ ಪ್ರವಾಸ ಹೋಗಿ ಅಂತರರಾಷ್ಟ್ರೀಯ ಪ್ರವಾಸದಲ್ಲಿ ದೇಶದ ಗಡಿಯ ಹೊರಗೆ ಪ್ರವಾಸ ಹೋಗಿ ಪ್ರಯಾಣ ಮಾಡಿ, ಕನಿಷ್ಠ ಒಂದು ರಾತ್ರಿ ಹೋಟೆಲೊಂದರಲ್ಲಿ ಅಥವಾ ಬೇರಾವುದೊಂದು ಕಡೆ ತಂಗಿದ್ದು ಅದಕ್ಕಾಗಿ ಹಣ ಖರ್ಚುಮಾಡುವವರು. ವ್ಯಕ್ತಿಯೊಬ್ಬ ಬೇರೊಂದು ಪಟ್ಟಣಕ್ಕೆ ಹೋಗಿ ತನ್ನ ಚಿಕ್ಕಪ್ಪನ ಮನೆಯಲ್ಲಿ ಇದ್ದುದಾದರೆ ಅವನನ್ನು ಪ್ರವಾಸಿ ಎಂದು ಪರಿಗಣಿಸಲಾಗದು. ಅವನನ್ನು ಸಂಚಾರಿ (traveller) ಎನ್ನಬಹುದು. ಪ್ರವಾಸಿ ಎನ್ನಲಾಗದು. ಪ್ರವಾಸಿಗೂ (tourist) ಸಂಚಾರಿಗೂ (traveller) ಇರುವ ಮೂಲಭೂತ ವ್ಯತ್ಯಾಸವನ್ನು ಇಲ್ಲಿ ಗುರುತಿಸಬಹುದು. ದೇಶೀಯ ಪ್ರವಾಸದಲ್ಲಿ ಯಾವ ನಿರ್ಬಂಧಗಳೂ ಇಲ್ಲದಿರುವುದರಿಂದ ಅದು ಸುಲಭ. ಇಲ್ಲಿ ಕರೆನ್ಸಿಯ ಬದಲಾವಣೆ, ಭಾಷೆ, ಪಾಸ್ ಪೋರ್ಟ್, ವೀಸಾ, ಉತ್ತಮ ಆರೋಗ್ಯದ ಬಗೆಗಿನ ದಾಖಲೆ ಪತ್ರಗಳು, ಇತ್ಯಾದಿಗಳನ್ನು ದೇಶೀಯ ಪ್ರವಾಸಿ ಎದುರಿಸಬೇಕಾಗಿಲ್ಲ. ಬಹುಮಟ್ಟಿಗೆ ದಿನನಿತ್ಯ ಅವನು ಬಳಸುವ ಭಾಷೆ ಅವನ ಸಂಪರ್ಕ ಮಾಧ್ಯಮವಾಗುತ್ತದೆ. (ಇಂಗ್ಲಿಷ್ ಭಾಷೆ ಬಲ್ಲ ಪ್ರವಾಸಿ ಭಾರತದಲ್ಲಿ ಎಲ್ಲಿಗೆ ಬೇಕಾದರೂ ಹೋಗಿ ಬರಬಹುದು). ನಿತ್ಯವೂ ವ್ಯವಹಾರದಲ್ಲಿ ಚಾಲ್ತಿಯಲ್ಲಿರುವ ಹಣಕಾಸನ್ನು ಅವನು ಎಲ್ಲಿ ಬೇಕಾದರೂ (ದೇಶೀಯ ಪ್ರವಾಸದಲ್ಲಿ) ಬಳಸಬಹುದು.

**ಪ್ರವಾಸಕ್ಕೆ ಪ್ರೇರಣೆ**

ಕೆಲವರೇ ಏಕೆ ಪ್ರವಾಸ ಮಾಡುತ್ತಾರೆ, ಎಲ್ಲರೂ ಏಕೆ ಮಾಡುವುದಿಲ್ಲ? ಒಂದು ಕುಟುಂಬದಲ್ಲಿ ಒಬ್ಬರು ಮಾತ್ರ ಏಕೆ ಪ್ರವಾಸ ಹೋಗುವರು, ಇತರರು ಏಕೆ ಹೋಗುವುದಿಲ್ಲ? ನಿರ್ದಿಷ್ಟ ದೇಶವೊಂದರ ಜನರೇ ಏಕೆ ಪ್ರವಾಸ ಹೋಗುವರು, ಬೇರೆ ದೇಶಗಳಲ್ಲಿನ ಜನರು ಏಕೆ ಹೋಗುವುದಿಲ್ಲ? ಈ ಪ್ರಶ್ನೆಗಳಿಗೆ ಪ್ರವಾಸೀ ಮನಶ್ಶಾಸ್ತ್ರ ಹಾಗೂ ಪ್ರವಾಸೀ ಪ್ರೇರಣೆಗಳ ವ್ಯಾಪಕ ಅಧ್ಯಯನಗಳಿಂದ ಉತ್ತರ ನೀಡ ಬಹುದು. ಸ್ಥೂಲವಾಗಿ ಹೇಳುವುದಾದರೆ, ವ್ಯಕ್ತಿಗಳು ಸಾಮಾನ್ಯವಾಗಿ ಒಂದಕ್ಕಿಂತ ಹೆಚ್ಚಿನ ಕಾರಣಗಳಿಗಾಗಿ ಪ್ರವಾಸ ಮಾಡಿದರೆ, ಬಹಳಷ್ಟು ಜನರು- ಬಹುತೇಕ ಜನರು-ಸಮ್ಮಿಶ್ರ ಪ್ರೇರಣೆಗಳ ಫಲಶ್ರುತಿಯಾಗಿ ಪ್ರವಾಸ ಮಾಡುವರು. ಪಾಶ್ಚಾತ್ಯ ದೇಶಗಳಲ್ಲಿ, ಮೊದಲನೆ ಪ್ರಪಂಚ ಯುದ್ಧಕಾಲದಿಂದ, ಪ್ರವಾಸದ ಬೆಳವಣಿಗೆಯು ನಿರ್ದಿಷ್ಟ ಪ್ರಕಾರದ ಪ್ರಚೋದನೆಗಳ ಫಲವಾಗಿದೆ. ೧೯ನೇ ಶತಮಾನದ ಕೈಗಾರಿಕಾ ಕ್ರಾಂತಿಯ ಫಲವಾಗಿ ಉಚ್ಛ್ರಾಯ ಸ್ಥಿತಿಯಲ್ಲಿರುವ ಒಂದು ದೊಡ್ಡ ಜನ ಸಮೂಹ ಪಾಶ್ಚಾತ್ಯ ಸಮಾಜದಲ್ಲಿ

ಉದ್ಭವವಾಯಿತು. ಕೈಗಾರಿಕೀಕರಣವಾಗುತ್ತಾ ಹೋದಂತೆ ವ್ಯಾಪಾರ ಹಾಗೂ ವಾಣಿಜ್ಯಗಳು ಅಭಿವೃದ್ಧಿಗೊಂಡುವು. ಇದರ ಪರಿಣಾಮವಾಗಿ ಈ ಜನಸಮೂಹ ಐಶ್ವರ್ಯವಂತರಾದರು. ಕೈಗಾರಿಕಾ ಚಟುವಟಿಕೆಯ ಬೆಳವಣಿಗೆಯಿಂದಾಗಿ ಸಂಖ್ಯೆಯಲ್ಲಿ ಬೆಳೆಯುತ್ತಾ ಹೋದ ಕೆಲಸಗಾರರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಬೇಕಾಯಿತು. ಇದರಿಂದ ಪಟ್ಟಣಗಳ ನಿರ್ಮಾಣವಾದುವು. ಜನಸಾಂದ್ರತೆ ಪಟ್ಟಣಗಳಲ್ಲಿ ಕೇಂದ್ರೀಕೃತವಾಯಿತು. ಮೊತ್ತಮೊದಲಿಗೆ ರೈಲ್ವೆ ಸಂಚಾರಕ್ರಮವನ್ನು ಇಂಗ್ಲೆಂಡಿನಲ್ಲಿ ಜಾರಿಗೆ ತರಲಾಯಿತು. ಅನಂತರ ಇದನ್ನು ಯುರೋಪು ಹಾಗೂ ಅಮೇರಿಕಾದ ಹಲವು ಭಾಗಗಳಲ್ಲಿ ಜಾರಿಗೆ ತರಲಾಯಿತು. ಇದರಿಂದ ಜನರಿಗೆ ಹೆಚ್ಚು ಖರ್ಚಿಲ್ಲದೆ ಬೇಗನೆ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣ ಮಾಡಲು ಅನುಕೂಲವಾಯಿತು.

ಅಂತರರಾಷ್ಟ್ರೀಯ ಪ್ರವಾಸದ ಅಗತ್ಯತೆಯನ್ನು ಹಡಗುಗಳು ಪೂರೈಸಿದುವು. ಯೂರೋಪ್ ಹಾಗೂ ಅಮೇರಿಕಾಗಳಲ್ಲಿ ಹಲವಾರು ಹಡಗು ಕಂಪನಿಗಳು ಮುಂದೆ ಬಂದದ್ದರಿಂದ ಅಂತರರಾಷ್ಟ್ರೀಯ ಪ್ರವಾಸ ಅಭಿವೃದ್ಧಿಗೊಳ್ಳಲು ಸಾಧ್ಯವಾಯಿತು. ಪ್ರವಾಸಿಗರ ಅಗತ್ಯವನ್ನು ಪೂರೈಸಲು ಹಲವಾರು ದೊಡ್ಡ ಹೋಟೆಲ್ಲುಗಳು ನಿರ್ಮಾಣಗೊಂಡುವು. ಪ್ರವಾಸಿ ಸಂಘಟಕರು, ಪ್ರವಾಸಿ ಸಾಹಿತ್ಯ ಹಾಗೂ ಕೆಲವು ಇತರ ಪ್ರವಾಸಿ ಸೇವೆಗಳು ತಲೆದೋರಿದ್ದರಿಂದಾಗಿ ಪ್ರವಾಸವು ಸುವ್ಯವಸ್ಥಿವಾಯಿತು. ಕೈಗಾರಿಕಾ ಸಮಾಜದಲ್ಲಿ ಆದ ಸಂಪದಭಿವೃದ್ಧಿ, ಸಂಚಾರಿ ಮಾಧ್ಯಮದಲ್ಲಾದ ಪ್ರಗತಿ ಹಾಗೂ ಪ್ರವಾಸದಲ್ಲಾದ ಸುವ್ಯವಸ್ಥೆ- ಈ ಮೂರು ಪ್ರಮುಖ ಬೆಳವಣಿಗೆಗಳು ಇಂಗ್ಲೆಂಡ್ ಹಾಗೂ ಅಮೆರಿಕಗಳಲ್ಲಿ ಸ್ವಲ್ಪಮಟ್ಟಿನ ಪ್ರಮಾಣದಲ್ಲಿ ಕಾಣಿಸಿಕೊಂಡುವು. ಏನೇ ಆಗಲಿ, ಇವರ ಪ್ರಭಾವ ಬಹಳ ಬೇಗನೆ ಯೂರೋಪ್ ಹಾಗೂ ಇತರ ದೇಶಗಳ ಭಾಗಗಳಿಗೆ ಹರಡಿತು. ೧೯ನೇ ಶತಮಾನದ ಮಧ್ಯಭಾಗಕ್ಕಿಂತ ಬಹಳ ಹಿಂದೆ ಪ್ರವಾಸದಲ್ಲಿ ತೊಡಗಲು ಒದಗಿ ಬಂದ ಮೂಲ ಪ್ರೇರಣೆಗಳನ್ನು ಹೀಗೆ ಗುರುತಿಸಬಹುದು: ಕುತೂಹಲ, ಉದ್ಯಮ ಹಾಗೂ ವಾಣಿಜ್ಯಗಳಲ್ಲಿ ತೊಡಗುವ ಮೂಲಕ ಲಭ್ಯವಾಗುವ ಪ್ರಾಪಂಚಿಕ ಲಾಭ, ವಿದ್ಯಾಭ್ಯಾಸ, ಆರೋಗ್ಯ. ಇದರ ಜೊತೆಗೆ ಇನ್ನೊಂದು ಪ್ರೇರಣೆಯೆಂದರೆ, ಮನೋರಂಜನೆ. ಇದು ನಿಶ್ಚಯವಾಗಿಯೂ ಕೈಗಾರಿಕೀಕರಣದ ಪರಿಣಾಮ.

ಮೊದಲ ಪ್ರಪಂಚ ಯುದ್ಧಾನಂತರ ಬಂದ ಗುಂಪು ಪ್ರವಾಸ (Mass Tourism) ದಿಂದಾಗಿ ಜನರು ಏಕೆ ಪ್ರವಾಸಿಗಳಾಗುತ್ತಾರೆ ಎಂಬುದರ ವ್ಯಾಪಕ ಅಧ್ಯಯನ ನಡೆಯಿತು. ಮ್ಯಾಕಿಂಟಾಶ್ ಹೇಳುವಂತೆ ಪ್ರವಾಸದ ಮೂಲ ಪ್ರೇರಣೆಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು:

i. **ಶಾರೀರಕ ಪ್ರೇರಣೆ:** ಶಾರೀರಕ ವಿಶ್ರಾಂತಿ ಹಾಗೂ ವಿರಾಮ, ಕ್ರೀಡಾ ಚಟುವಟಿಕೆಗಳು, ನಿರ್ದಿಷ್ಟ ವೈದ್ಯಕೀಯ ಚಿಕಿತ್ಸೆ- ಇವುಗಳಿಗೆ ಸಂಬಂಧಿಸಿರುತ್ತದೆ; ವ್ಯಕ್ತಿಯೋರ್ವನ ದೈಹಿಕ ಆರೋಗ್ಯ ಹಾಗೂ ಒಳಿತಿಗೆ (ಕ್ಷೇಮಕ್ಕೆ) ಸಂಬಂಧಿಸಿರುತ್ತದೆ.

ii. **ಸಾಂಸ್ಕೃತಿಕ ಪ್ರೇರಣೆ:** ಅನ್ಯದೇಶ ಹಾಗೂ ಅವುಗಳ ಜನರು, ಅವರ ಕಲೆ, ಸಂಗೀತ, ಸಾಹಿತ್ಯ, ಜಾನಪದ ಇತ್ಯಾದಿಗಳಲ್ಲಿ ಅಭಿವ್ಯಕ್ತಗೊಂಡಿರುವ ಸಾಂಸ್ಕೃತಿಕ ಪರಂಪರೆ -ಇವನ್ನು ತಿಳಿಯಬೇಕೆಂಬ ವ್ಯಕ್ತಿಯೋರ್ವನ ಆಸೆಗೆ ಇದು ಸಂಬಂಧಿಸಿರುತ್ತದೆ.

iii. **ವ್ಯಕ್ತಿಯ ಅಂತರ್‌ಪ್ರೇರಣೆ:** ಬಂಧು-ಮಿತ್ರರನ್ನು ಭೇಟಿ ಮಾಡುವುದು ಅಥವಾ ತನ್ನ ಕುಟುಂಬದಿಂದ, ಜೊತೆ ಕೆಲಸಗಾರರಿಂದ, ನೆರೆ ಹೊರೆಯವರಿಂದ ಬಿಡಿಸಿಕೊಂಡು ಹೋಗುವುದು -ಇವುಗಳಿಗೆ ಸಂಬಂಧಿಸಿರುತ್ತದೆ.

vi. **ಅಂತಸ್ತು ಹಾಗೂ ಪ್ರತಿಷ್ಠೆಯ ಪ್ರೇರಣೆ:** ಇವು ವೈಯಕ್ತಿಕ ಗೌರವ ಹಾಗೂ ವೈಯಕ್ತಿಕ ಪ್ರಗತಿಯ ಅಗತ್ಯದ ಜೊತೆ ಗುರುತಿಸಲ್ಪಡುತ್ತದೆ. ಇವು ವ್ಯಾಪಾರಕ್ಕಾಗಿ ಪ್ರವಾಸ ಅಥವಾ ವೃತ್ತಿ ಸಂಬಂಧಗಳಿಗಾಗಿ, ಹವ್ಯಾಸಗಳನ್ನು ಮುಂದುವರಿಸಿ ಕೊಂಡು ಹೋಗಲು, ಅಗತ್ಯ ವಿದ್ಯಾಭ್ಯಾಸವನ್ನು ಪಡೆಯುವುದಕ್ಕಾಗಿ ಸಂಬಂಧಿಸಿರುತ್ತದೆ.

ಮೇಲೆ ತಿಳಿಸಿದ ನಾಲ್ಕು ಪ್ರೇರಣೆಗಳನ್ನು ಇನ್ನಷ್ಟು ವ್ಯಾಪಕ ವಿವೇಚನೆಗೆ ಗುರಿಪಡಿಸಿದಾಗ, ಹೆಚ್ಚು ಹೆಚ್ಚು ಜನರು ಪ್ರವಾಸದಲ್ಲಿ ತೊಡಗುತ್ತಾರೆ ಎಂಬುದಕ್ಕೆ ಮತ್ತಷ್ಟು ಕಾರಣಗಳು ದೊರೆಯುತ್ತವೆ:

೧. **ಸಂತೋಷ:** ದೈನಂದಿನ ಯಾಂತ್ರಿಕ ಬದುಕಿನಿಂದ ಹೊರಬರಬೇಕೆಂಬುದು ಬಹುಶಃ ಈ ಹೊತ್ತಿನ ಅತ್ಯಂತ ಪ್ರಮುಖವಾದ ಪ್ರೇರಣೆ ಎನ್ನಬಹುದು. ಶುದ್ಧವಾದ ಆನಂದವನ್ನು ಪಡೆಯಬೇಕೆಂಬ ವೈಯುಕ್ತಿಕವಾದ ಹಂಬಲ ಅತ್ಯಂತ ಪ್ರಬಲವಾದುದು. ವ್ಯಕ್ತಿಯೋರ್ವನು ಸಾಧ್ಯವಾದಷ್ಟು ಮಟ್ಟಿಗೆ ತಮಾಷೆ, ಸಂಭ್ರಮ ಹಾಗೂ ಒಳ್ಳೆಯ ಮನರಂಜನೆಯನ್ನು ಹೊಂದಬೇಕೆಂದು ಅಪೇಕ್ಷಿಪಡುವನು.

೨. **ವಿಶ್ರಾಂತಿ ಹಾಗೂ ವಿರಾಮ ಮನರಂಜನೆ:** ಆಧುನಿಕ ಜೀವನದ ಮೇಲೆ ಕೈಗಾರಿಕೀಕರಣ ಹಾಗೂ ನಗರೀಕರಣ ಅತ್ಯಧಿಕ ಒತ್ತಡವನ್ನುಂಟುಮಾಡಿದೆ. ಆಧುನಿಕ ನಗರ ಜೀವನದ ಒತ್ತಡ ಹಾಗೂ ಹೊರೆಗಳಿಂದ ಬಿಡುಗಡೆಗೊಂಡು ಪ್ರಶಾಂತವೂ ಆರೋಗ್ಯಕರವೂ ಆದ ಪರಿಸರದಲ್ಲಿ ವಿಶ್ರಾಂತಿ ಪಡೆಯಲು ಜನರು ಇಚ್ಛಿಸುವರು. ಶರೀರ ಹಾಗೂ ಮನಸ್ಸನ್ನು ಪ್ರಸನ್ನವಾಗಿರಿಸಲು ವಿಶ್ರಾಂತಿ ತೀರಾ ಅಗತ್ಯ. ಹಲವರಿಗೆ

ಇಮ ವಾತಾವರಣ ಬದಲಾವಣೆಯಿಂದ ದೊರೆಯುತ್ತದೆ. ಮತ್ತೆ ಕೆಲವರಿಗೆ ಇದು ಸೂರ್ಯನ ಕಿರಣದಿಂದ ಬೆತ್ತಲೆ ದೇಹದ ಚರ್ಮವು ತನ್ನ ಬಣ್ಣ ಬದಲಿಸುವಂತೆ ಮಾಡುವ ಸಮುದ್ರ ದಂಡೆಯ ಸಡಗರ ಸಂಭ್ರಮಗಳಿಂದ ದೊರೆಯುತ್ತದೆ. ಕೆಲವರು ಹೊಸ ಸ್ಥಳಗಳ ದರ್ಶನದಿಂದ, ಹೊಸಬರನ್ನು ಭೇಟಿಮಾಡುವುದರಿಂದ ಹಾಗೂ ಹೊಸ ಅನುಭವಗಳನ್ನು ಪಡೆಯುವುದರಿಂದ ವಿಶ್ರಾಂತಿಯನ್ನು ಹೊಂದುವರು. ಯಾವುದೇ ಪ್ರಕಾರದ ರಜೆ ಬಂದರೂ ಅದರ ಪ್ರಯೋಜನ ಪಡೆಯುವವನು ನಿರ್ದಿಷ್ಟ ಪ್ರಮಾಣದಲ್ಲಿ ವಿಶ್ರಾಂತಿಯನ್ನು ಪಡೆದೇ ಪಡೆಯುವನು.

೩. **ಆರೋಗ್ಯ:** ಶುಭ್ರ ಗಾಳಿ ಹಾಗೂ ಸೂರ್ಯ ರಶ್ಮಿಗಳಿಂದ ಪಡೆಯಬಹುದಾದ ಲಾಭವನ್ನು ಬಹಳ ಹಿಂದೆಯೇ ಗುರುತಿಸಲಾಗಿದೆ. ರೋಮನ್ ಚಕ್ರಾಧಿಪತ್ಯದಲ್ಲಿ 'ಸ್ಪಾಸ್'ಗಳ ಬೆಳವಣಿಗೆಯು ಜನರು ಒಳ್ಳೆಯ ಆರೋಗ್ಯವನ್ನು ಪಡೆಯಬೇಕೆಂಬ ಬಯಕೆಯ ಪರಿಣಾಮವಾಗಿದೆ. ಸ್ವಿಜರ್ಲೆಂಡ್‌ನಲ್ಲಿ ಹಲವು ಸ್ಯಾನಟೋರಿಯಾಗಳನ್ನು ನಿರ್ಮಿಸಿದುದು ಒಳ್ಳೆಯ ಆರೋಗ್ಯವನ್ನು ಹೊಂದಬೇಕೆಂಬ ಜನತೆಯ ಎಚ್ಚೆತ್ತ ಪ್ರಜ್ಞೆಯ ಸಂಕೇತವಾಗಿವೆ. ಈ ಸ್ಯಾನಟೋರಿಯಾಗಳು ಮುಂದೆ ವಿಶ್ರಾಂತಿ ಆರೋಗ್ಯಧಾಮಗಳ ಬೆಳವಣಿಗೆಗೆ ಅಸ್ತಿಭಾರ ಹಾಕಿದವು. ರೋಗನಿವಾರಣಾ ಸ್ನಾನಕ್ಕಾಗಿ ಹಾಗೂ ವೈದ್ಯ ಚಿಕಿತ್ಸೆಗಾಗಿ ಬಹಳಷ್ಟು ಜನ ಸ್ಪಾಸ್ ಹಾಗೂ ಕ್ಲಿನಿಕ್‌ಗಳಿಗೆ ಪ್ರವಾಸ ಕೈಗೊಂಡರು. ಇಟಲಿ, ಆಸ್ಟ್ರಿಯಾ ಹಾಗೂ ಜರ್ಮನಿ ಇವೇ ಮೊದಲಾದ ದೇಶಗಳಲ್ಲಿ 'ಸ್ಪಾ' ಚಿಕಿತ್ಸೆಗೆ ಹೆಚ್ಚಿನ ಮಹತ್ವ ನೀಡಲಾಯಿತು. ಸೋವಿಯತ್ ಯೂನಿಯನ್ನಿನ ಕಪ್ಪು ಸಮುದ್ರದ ದಡದಲ್ಲಿ ಹಾಗೂ ಕಾಕಸಸ್ (Caucasus) ಬೆಟ್ಟದ ಅಡಿಯಲ್ಲಿರುವ ಗುಡ್ಡದಲ್ಲಿ ಅಸಂಖ್ಯಾತ ವಿಶ್ವ ವಿಖ್ಯಾತ ಸ್ಯಾನಟೋರಿಯಾಗಳಿದ್ದು, ಅವುಗಳಲ್ಲಿಗೆ ಪ್ರತಿವರ್ಷವೂ ಮಿಲಿಯಗಟ್ಟಲೆ ಸೋವಿಯತ್ ಪ್ರಜೆಗಳು ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರು ಬಂದು ಅವುಗಳ ಪ್ರಯೋಜನ ಪಡೆಯುವರು.

೪. **ಕ್ರೀಡೆಗಳಲ್ಲಿ ಭಾಗವಹಿಸುವುದು:** ಪರ್ವತ ಶಿಖರಾರೋಹಣ, ಸಂಚಾರ, ನೀರ್ಗಲ್ಲ ಮೇಲೆ ಜಾರಾಟ, ಸಮುದ್ರಯಾನ ಮಾಡುವುದು, ಗಾಲಿಯ ಪ್ರಯಾಣ ಹೋಗುವುದು (Trekking), ದೋಣಿ ವಿಹಾರ, ತೆರೆನೊರೆ ಸವಾರಿ (Surf riding) ಇತ್ಯಾದಿ ವೈವಿಧ್ಯಮಯವಾದ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ದಿನದಿನಕ್ಕೆ ಹೆಚ್ಚುತ್ತಿದೆ. ಶಾರೀರಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಳ್ಳಲು ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಜನ ರಜೆಯನ್ನು ಪಡೆಯುತ್ತಿರುವರು. ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂಬ ಪ್ರಮುಖ ಕಾರಣಕ್ಕಾಗಿಯೇ ಆ ಪ್ರದರ್ಶನ ಸ್ಥಳಗಳಿಗೆ ಜನರು ಹೋಗುತ್ತಿದ್ದು, ಅಲ್ಲಿಗೆ ತಮ್ಮೆಲ್ಲ ಶಕ್ತಿಯನ್ನು ಚಾಲನಗೊಳಿಸುವರು.

೫. **ಕುತೂಹಲ ಹಾಗೂ ಸಂಸ್ಕೃತಿ:** ಚಾರಿತ್ರಿಕ ಮಹತ್ವವುಳ್ಳ ಅಥವಾ ಪ್ರಾಚೀನ ಇತಿಹಾಸದೊಂದಿಗೆ ಸಂಬಂಧ ಹೊಂದಿರುವ ಸಾಂಸ್ಕೃತಿಕ ಮಹತ್ವವುಳ್ಳ ಸ್ಥಳಗಳಿಗೆ

ಅಥವಾ ವಿಶೇಷ ಕಲಾ ಮಹೋತ್ಸವ, ಸಂಗೀತ ಮಹೋತ್ಸವಗಳಿರುವ ಸ್ಥಳಗಳಿಗೆ, ನಾಟಕ ಹಾಗೂ ಇತರೆ ಸಾಂಸ್ಕೃತಿಕ ಮಹತ್ವವುಳ್ಳ ಸ್ಥಳಗಳಿಗೆ ಜನರು ಹೆಚ್ಚು ಹೆಚ್ಚಾಗಿ ಹೋಗುತ್ತಿರುವರು. ಕುತೂಹಲವು ಪ್ರವಾಸದ ಪ್ರಮುಖ ಕಾರಣವಾಗಿದೆ. ವಿದೇಶೀ ನೆಲ, ಜನ ಹಾಗೂ ಸ್ಥಳಗಳ ಬಗೆಗೆ ಮನುಷ್ಯನಲ್ಲಿ ಸದಾ ಕುತೂಹಲವಿದೆ. ಇಂದಿನ ದಿನಮಾನಗಳಲ್ಲಿ ದೃಶ್ಯ ಮಾಧ್ಯಮದ ಕ್ಷೇತ್ರದಲ್ಲಿ ತಾಂತ್ರಿಕ ಬೆಳವಣಿಗೆಗಳಾಗಿದ್ದು, ಇದರಿಂದಾಗಿ ಜನರಿಗೆ ವಿಶ್ವದ ಬೇರೆ ಭಾಗಗಳ ಬಗೆಗೆ ಓದಲು, ನೋಡಲು ಹಾಗೂ ಕೇಳಲು ಸಾಧ್ಯವಾಗಿದೆ. ವಾಸ್ತುಶಿಲ್ಪ, ಕಲೆ, ಸಂಗೀತ, ಸಾಹಿತ್ಯ, ಜಾನಪದ, ನೃತ್ಯ, ಚಿತ್ರಕಲೆ ಹಾಗೂ ಕ್ರೀಡೆಗಳು, ಬೇರೆ ಜನರ ಸಂಸ್ಕೃತಿ ಅಥವಾ ಪ್ರಾಚ್ಯ ಶೋಧನ ಶಾಸ್ತ್ರ ಹಾಗೂ ಐತಿಹಾಸಿಕ ಪಳೆಯುಳಿಕೆಗಳು ಮತ್ತು ಸ್ಮಾರಕಗಳು -ಇವುಗಳ ಬಗೆಗೆ ಜನರಲ್ಲಿ ದಿನದಿನಕ್ಕೆ ಆಸಕ್ತಿ ಹೆಚ್ಚುತ್ತಿರುವುದು, ಮನುಷ್ಯನ ಹೆಚ್ಚು ಹೆಚ್ಚು ತಿಳಿಯಬೇಕೆನ್ನುವ ಕುತೂಹಲಪ್ರಜ್ಞೆಯ ಇನ್ನೊಂದು ಮುಖವಾಗಿದೆ. ಈ ಕುತೂಹಲವು ಹೆಚ್ಚಿನ ಶಿಕ್ಷಣದಿಂದ ಪ್ರಚೋದಿತವಾಗುತ್ತದೆ. ಒಲಂಪಿಕ್ ಕ್ರೀಡೆಗಳು, ಏಷ್ಯನ್ ಕ್ರೀಡೆಗಳು, ರಾಷ್ಟ್ರೀಯ ಆಚರಣೆಗಳು, ಪ್ರದರ್ಶನಗಳು, ವಿಶೇಷ ಮಹೋತ್ಸವಗಳು ಇತ್ಯಾದಿ ಅಂತರರಾಷ್ಟ್ರೀಯ ಘಟನಾವಳಿಗಳು ಸಹಸ್ರಾರು ಮಂದಿ ಪ್ರವಾಸಿಗರನ್ನು ಆಕರ್ಷಿಸುತ್ತದೆ.

**೬. ಕುಲ ಸಂಬಂಧ ಹಾಗೂ ಕುಟುಂಬ:** ಇದು ಬಂಧುಗಳ ಹಾಗೂ ಮಿತ್ರರ ಭೇಟಿ ಮಾಡುವುದು, ಹೊಸ ಜನರ ಜೊತೆ ಸಂಪರ್ಕ ಬೆಳೆಸಿ ಸ್ನೇಹ ಸಂಬಂಧ ಹೊಂದುವುದು -ಇವುಗಳನ್ನು ಒಳಗೊಳ್ಳುತ್ತದೆ. ಬಹಳಷ್ಟು ಜನರು ತೀರಾ ವೈಯಕ್ತಿಕ ಕಾರಣಗಳಿಗಾಗಿ ಪ್ರವಾಸ ಮಾಡುವರು. ಹೆಚ್ಚಿನ ಸಂಖ್ಯೆಯಲ್ಲಿ ಅಮೆರಿಕನ್ನರು ಯುರೋಪಿಯನ್ ದೇಶಗಳಿಗೆ ತಮ್ಮ ಕುಟುಂಬಗಳನ್ನು ನೋಡುವ ಸಲುವಾಗಿ ಇಲ್ಲವೆ ತಮ್ಮ ಹುಟ್ಟೂರಿಗೆ ಭೇಟಿ ಕೊಟ್ಟಾಗಿನ ಸುಖವನ್ನು ಅನುಭವಿಸುವುದಕ್ಕಾಗಿ ಪ್ರಯಾಣ ಮಾಡುವರು. ವಿದೇಶದಲ್ಲಿ ನೆಲಸಿರುವ ಭಾರತೀಯರು ಪ್ರತಿ ವರ್ಷವೂ ಕುಲಸಂಬಂಧದ ಕಾರಣಕ್ಕಾಗಿ ಭಾರತಕ್ಕೆ ಭೇಟಿ ನೀಡುವರು.

**೭. ಆಧ್ಯಾತ್ಮಿಕ ಹಾಗೂ ಧಾರ್ಮಿಕ:** ಬಹಳ ಕಾಲದಿಂದಲೂ ಆಧ್ಯಾತ್ಮಿಕ ಕಾರಣಗಳಿಗಾಗಿ ಜನ ಪ್ರವಾಸವನ್ನು ಕೈಗೊಳ್ಳುತ್ತಲಿರುವರು. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿನೀಡುವುದು ಹಿಂದಿನಿಂದಲೂ ಬೆಳೆದು ಬಂದ ಸಂಪ್ರದಾಯ. ಇದು ಪ್ರವಾಸಕ್ಕೆ ಅತ್ಯಂತ ಪ್ರಬಲವಾದ ಪ್ರೇರಣೆ. ಅಸಂಖ್ಯಾತ ಜನರು ಪವಿತ್ರ ಧಾರ್ಮಿಕ ಕ್ಷೇತ್ರಗಳಿಗೆ ಅಥವಾ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೋಗುತ್ತಲಿರುವರು. ಪ್ರಪಂಚದ ಎಲ್ಲಾ ಕಡೆ ಇದು ವ್ಯಾಪಕವಾಗಿ ಆಚರಣೆಯಲ್ಲಿದೆ. ಉದಾಹರಣೆಗೆ, ಕ್ರಿಶ್ಚಿಯನ್ನರಲ್ಲಿ, ಜರುಸಲೇಂ ಅಥವಾ ವ್ಯಾಟಿಕನ್‌ಗೆ ಭೇಟಿಕೊಡುವುದು ಪವಿತ್ರವಾದುದೆಂದು ಭಾವಿಸಲಾಗಿದೆ. ಮುಸ್ಲಿಮರಲ್ಲಿ, ಮೆಕ್ಕಾಯಾತ್ರೆ ಮಾಡಿ ಬರುವುದು ಅಥವಾ ಪವಿತ್ರ ಕ್ಷೇತ್ರಗಳಿಗೆ ಹೋಗಿ

ಬರುವುದು ಬಹು ದೊಡ್ಡ ಕಾರ್ಯವೆಂದು ಭಾವಿಸಲಾಗಿದೆ. ಇಂಡಿಯಾದಲ್ಲಿ ಪ್ರಮುಖ ಧರ್ಮಗಳ ಪವಿತ್ರ ಕ್ಷೇತ್ರಗಳಿದ್ದು ಅಲ್ಲಿಗೆ ವಿಶ್ವದಾದ್ಯಂತ ಯಾತ್ರಿಕರು ಬರುವರು.

೮. **ಅಂತಸ್ತು ಹಾಗೂ ಪ್ರತಿಷ್ಠೆ:** ಇದು ವ್ಯಕ್ತಿಯ ಅಹಂ ಹಾಗೂ ವೈಯಕ್ತಿಕ ಪ್ರಗತಿಗೆ ಸಂಬಂಧಿಸಿರುತ್ತದೆ. ಬಹಳಷ್ಟು ಜನರು ತಮ್ಮ ಬಂಧುಗಳು ಹಾಗೂ ಮಿತ್ರರುಗಳ ಜೊತೆ ಮಾತುಕತೆಯಾಡಲೆಂದೇ ಪ್ರವಾಸ ಕೈಗೊಳ್ಳುವರು. ತಾವು ಭೇಟಿ ಮಾಡಿದ ಅನೇಕ ಸ್ಥಳಗಳಲ್ಲಿ ತಮಗಾದ ಅನುಭವಗಳನ್ನು ಹೇಳಿ ತಮ್ಮ ಬಂಧು- ಮಿತ್ರರಲ್ಲಿ ತಮ್ಮ ಬಗ್ಗೆ ಪ್ರಭಾವ ಬೀರಲು ಇಷ್ಟಪಡುವರು. ಪ್ರವಾಸ ಹೋಗುವುದು ಫ್ಯಾಶನ್ ಆಗಿರುವುದರಿಂದ ಆ ಕಾರಣಕ್ಕಾಗಿಯೇ ಕೆಲವರು ಪ್ರವಾಸ ಹೋಗುವರು. ಅಷ್ಟೇ ಅಲ್ಲ, ಪ್ರವಾಸ ಹೋಗಲು ತಮಗೆ ಸಾಧ್ಯವಿದೆ ಎಂಬುದನ್ನು ತೋರಿಸಿಕೊಳ್ಳಲೂ ಕೆಲವರು ಪ್ರವಾಸ ಹೋಗುವರು. ವಿದೇಶ ಪ್ರವಾಸವೆಂಬುದು ಒಂದು ಮಾಂತ್ರಿಕ ಪದ. ತಾವು ವಿದೇಶ ಪ್ರವಾಸ ಮಾಡುತ್ತಿರುವವೆಂದು ಮಿತ್ರರಲ್ಲಿ ಹಾಗೂ ಹತ್ತಿರದ ಬಂಧುಗಳಲ್ಲಿ ಹೇಳಿಕೊಳ್ಳುವುದು ಒಂದು ಹೆಮ್ಮೆ.

೯. **ವೃತ್ತಿ ಅಥವಾ ವ್ಯಾಪಾರ:** ವೃತ್ತಿ, ಉದ್ಯಮ, ವಾಣಿಜ್ಯ ಅಥವಾ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಡೆಯುವ ಸಭೆ, ಸಮಾವೇಶಗಳಿಗೆ ಸಂಬಂಧಪಟ್ಟ ವ್ಯಕ್ತಿಗಳು ಹೋಗಿ ಬರುವುದು ಬಹಳ ವಾಡಿಕೆಯಾಗಿದೆ. ಅನೇಕ ದೇಶಗಳು ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಬೃಹತ್ ಸಭಾ ಸಂಕೀರ್ಣಗಳನ್ನು ಏರ್ಪಡಿಸುತ್ತಿದೆ. ಅಲ್ಲಿ ವ್ಯಾಪಾರ ಸಂಬಂಧವಾದ ಸಭೆ, ವಿಚಾರ ಸಂಕಿರಣಗಳು, ಗೋಷ್ಠಿಗಳು ನಡೆಯಲು ಎಲ್ಲ ಬಗೆಯ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ದೊಡ್ಡ ಹೋಟೆಲ್ಲುಗಳು ಸಭೆ ಸಮಾರಂಭಗಳಿಗೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಿ ಕೊಡುತ್ತಿದ್ದು (ಕಾನ್‌ಫರೆನ್ಸ್ ಹಾಲ್, ಸೆಮಿನಾರ್ ಹಾಲ್ ಇತ್ಯಾದಿ.) ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ವ್ಯಾಪಾರ ಹಾಗೂ ವೃತ್ತಿ ಸಂಬಂಧವಾದ ಕಾರಣಗಳಿಗಾಗಿ ಭೇಟಿ ನೀಡುತ್ತಿರುವರು. ದೇಶದ ಬೇರೆ ಬೇರೆ ಭಾಗಗಳಲ್ಲಿ ವಿದ್ಯಾಭ್ಯಾಸ, ವಾಣಿಜ್ಯ, ಕೈಗಾರಿಕೆ, ರಾಜಕೀಯ ಹಾಗೂ ಅನೇಕ ವೃತ್ತಿಗಳಿಗೆ ಸಂಬಂಧಿಸಿದಂತೆ ಸಭೆ ಸಮಾವೇಶಗಳು ನಡೆಯುತ್ತಿವೆ. ಕೆಲವರು ವ್ಯಾಪಾರಕ್ಕಾಗಿಯೇ ಪ್ರವಾಸ ಕೈಗೊಂಡರೆ, ಬಹುತೇಕ ಜನರು ವ್ಯಾಪಾರದ ಜೊತೆಗೆ ಖುಷಿ ಸಂಚಾರವನ್ನು ಕೈಗೊಳ್ಳುವರು.

# ಪ್ರವಾಸಿ ವಾರ್ತಾ ಕಛೇರಿಗಳು

ಪ್ರವಾಸಿ ವಾರ್ತಾ ಕಛೇರಿಗಳನ್ನು ಭಾರತ ಹಾಗೂ ವಿದೇಶಗಳಲ್ಲಿ ಪ್ರಾರಂಭಿಸಲಾಯಿತು. ಪ್ರವಾಸಿ ಕಛೇರಿಗಳು ದೆಹಲಿ, ಬಾಂಬೆ, ಕಲ್ಕತ್ತಾ ಹಾಗೂ ಮದ್ರಾಸ್‌ಗಳಲ್ಲಿ ಪ್ರಾರಂಭಗೊಂಡವು. ಇದರ ಹಿಂದೆಯೇ ದೇಶದಾದ್ಯಂತ ವಾರ್ತಾ ಕಛೇರಿಗಳ ಸರಮಾಲೆ ಆರಂಭಗೊಂಡವು. ಭಾರತದಲ್ಲಿನ ಪ್ರವಾಸಿ ಕಛೇರಿಗಳು ಮಾಡಬೇಕಾದ ಕಾರ್ಯಗಳೆಂದರೆ, ಪ್ರವಾಸಿಗರು ಭಾರತಕ್ಕೆ ಬಂದ ಮೇಲೆ ಅವರಿಗೆ ಪ್ರವಾಸಿ ಆಕರ್ಷಣೆ ಹೊಂದಿರುವ ಸ್ಥಳಗಳ ಬಗೆಗೆ ಅಗತ್ಯ ಮಾಹಿತಿಗಳನ್ನು ಒದಗಿಸಿ ಕೊಡುವುದು, ಪ್ರವಾಸಿ ಉದ್ದಿಮೆಯ ಎಲ್ಲ ಅಂಶಗಳ ಬಗೆಗೆ ಯೋಗ್ಯ ತಿಳುವಳಿಕೆಯನ್ನು ಹೊಂದಿರುವುದು, ಪ್ರವಾಸಿಗರಿಗೆ ಅವರ ಹಲವಾರು ಬಗೆಯ ಪ್ರವಾಸಿ ನಿಯಮಗಳನ್ನು ಔಪಚಾರಿಕವಾಗಿ ಬಗೆಹರಿಸುವಲ್ಲಿ ನೆರವಾಗುವುದು, ಪ್ರವಾಸಿ ಸಾಹಿತ್ಯದ ವಿತರಣೆ ಹಾಗೂ ಪ್ರದರ್ಶನ ಮಾಡುವುದು ಮತ್ತು ಪ್ರವಾಸಿಗರಿಗೆ ದೊರೆಯುವ ಹಲವಾರು ಬಗೆಯ ಸೌಲಭ್ಯಗಳು ಅವರಿಗೆ ಸಿಗುತ್ತವೆಯೇ ಎಂಬುದರ ಬಗೆಗೆ ನಿಯತಕಾಲಿಕವಾಗಿ ತಪಾಸಣೆ ಮಾಡುವುದು; ಪ್ರವಾಸಿಗರಿಗೆ ದೊರೆಯುವ ಹಲವಾರು ಬಗೆಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು; ಪ್ರತಿಯೊಂದು ಭಾಗದಲ್ಲೂ ಅವನ್ನು ಸರಿಯಾಗಿ ನಡೆಸಿಕೊಂಡು ಹೋಗಲಾಗುತ್ತಿದೆಯೇ ಎಂಬುದನ್ನು ಪ್ರವಾಸಿ ಕಛೇರಿಗಳು ದೃಢಪಡಿಸಿಕೊಳ್ಳುವುದು. ವಿದೇಶೀ ಪ್ರವಾಸಿಗರಿಗೆ ನೆರವಾಗುವುದರ ಜೊತೆಗೆ ಪ್ರವಾಸಿ ಕಛೇರಿಗಳು ವಿದೇಶೀ ಪ್ರವಾಸಿಗರ ಅಗತ್ಯಗಳನ್ನೂ ಪೂರೈಸಬೇಕು.

ವಿದೇಶೀ ಪ್ರವಾಸಿಗರು ಭಾರತದ ಕಡೆ ಆಕರ್ಷಿತರಾಗುವಂತೆ ಮಾಡಲು ಸರಕಾರವು ವಿದೇಶಗಳಲ್ಲಿ ಪ್ರವಾಸಿ ಕಛೇರಿಗಳನ್ನು ತೆರೆಯಲು ತೀರ್ಮಾನಿಸಿತು. ಈ ದಿಶೆಯಲ್ಲಿ ಮೊದಲ ಹೆಜ್ಜೆಯೆಂದರೆ, ೧೯೫೨ ರ ಡಿಸೆಂಬರ್‌ನಲ್ಲಿ ನ್ಯೂಯಾರ್ಕ್‌ನಲ್ಲಿ ಪ್ರವಾಸಿ ಕಛೇರಿಯನ್ನು ತೆರೆದುದು. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಭಾರತ ತನ್ನ ಪ್ರವಾಸಿ ಕಛೇರಿಯನ್ನು ತೆರೆಯುವ ಉದ್ದೇಶವೆಂದರೆ, ಅದು ಸಂಪತ್ಸಮೃದ್ಧಿಯಾದ ದೇಶ. ಅದರ ಜನರು ಸಾಕಷ್ಟು ಹಣ ಹಾಗೂ ವಿರಾಮವನ್ನು ಹೊಂದಿದ್ದು, ಭಾರತದಲ್ಲಿ ತಮ್ಮ ರಜೆಯನ್ನು ಕಳೆಯಲು ಸಿದ್ಧರಿರವರೆಂಬುದು. ಆಸ್ಟ್ರೇಲಿಯಾ, ಶ್ರೀಲಂಕಾ

ದೇಶಗಳಲ್ಲಿ ಭಾರತದಲ್ಲಿನ ಪ್ರವಾಸಕ್ಕೆ ಉತ್ತೇಜನ ನೀಡಲು ಅಲ್ಲಿನ ಭಾರತದ ಹೈಕಮಿಷನರ್‌ರವರ ಆಫೀಸಿಗೆ ಸಮೀಪವಿರುವಂತೆ ಮನೆ ಹಾಗೂ, ವಿಶೇಷ ಸಿಬ್ಬಂದಿಯನ್ನು ಒದಗಿಸಿಕೊಡಲಾಯಿತು.

ಭಾರತಕ್ಕೆ ಭೇಟಿ ನೀಡುವ ಬಗೆಗೆ ಯೂರೋಪಿಯನ್ನರಲ್ಲಿ ಕುತೂಹಲವನ್ನುಂಟು ಮಾಡಲು ಭೂಖಂಡದಲ್ಲಿ ಪ್ರವಾಸಿ ಕಛೇರಿಗಳನ್ನು ತೆರೆಯಲಾಯಿತು. ಯೂರೋಪಿನಲ್ಲಿ ಮೊದಲ ಕಛೇರಿಯು, ಲಂಡನ್ನಿನಲ್ಲಿ ಜುಲೈ ೧೯೫೫ರಲ್ಲಿ ತೆರೆಯಲಾಯಿತು. ಹೆಚ್ಚಿನ ಎರಡು ಕಛೇರಿಗಳಲ್ಲಿ ಒಂದನ್ನು ಪ್ಯಾರಿಸ್‌ನಲ್ಲಿ ೧೯೫೬ರ ಫೆಬ್ರವರಿಯಲ್ಲೂ ಮತ್ತೊಂದನ್ನು ಫ್ರಾಂಕ್‌ಫರ್ಟ್‌ನಲ್ಲಿ ಸೆಪ್ಟೆಂಬರ್ ೧೯೫೬ ರಲ್ಲೂ ತೆರೆಯಲಾಯಿತು. ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗಳಲ್ಲಿ ಪ್ರವಾಸಿ ಸಂಚಾರವನ್ನು ಉತ್ತೇಜಿಸುವ ಸಲುವಾಗಿ ಪ್ರವಾಸಿ ಕಛೇರಿಯೊಂದನ್ನು ಮೆಲ್‌ಬೋರ್ನ್‌ನಲ್ಲಿ ಸೆಪ್ಟೆಂಬರ್ ೧೯೫೬ರಲ್ಲಿ ತೆರೆಯಲಾಯಿತು. ೧೯೫೬ರಲ್ಲಿ ಗೌತಮ ಬುದ್ಧನ ೨೫೦೦ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕೊಲಂಬೋದಲ್ಲಿ ಪ್ರವಾಸಿ ಕಛೇರಿಯೊಂದನ್ನು ತೆರೆಯಲಾಯಿತು. ಕೊಲೊಂಬೋದ ಕಛೇರಿಯು ಶ್ರೀಲಂಕಾದಿಂದ ಬೌದ್ಧಧರ್ಮಿಯರು ದೊಡ್ಡ ಪ್ರಮಾಣದಲ್ಲಿ ಭಾರತಕ್ಕೆ ಪ್ರವಾಸ ಹೋಗಲು ನೆರವು ನೀಡುವ ಹಾಗೂ ಜನರನ್ನು ಪ್ರವಾಸ ಕೈಗೊಳ್ಳಲು ಉತ್ತೇಜಿಸುವ ಜವಾಬ್ದಾರಿಯನ್ನು ಹೊತ್ತಿತ್ತು.

ವಿದೇಶದಲ್ಲಿನ ಪ್ರವಾಸಿ ಕಛೇರಿಗಳು ನಿರ್ವಹಿಸುವ ಕರ್ತವ್ಯಗಳು ಸಾಮಾನ್ಯವಾಗಿ ಪ್ರಾದೇಶಿಕ ಕಛೇರಿಗಳು ಕೆಲಸ ಮಾಡುವುದಕ್ಕಿಂತ ಭಿನ್ನವಾಗಿರುವುದಿಲ್ಲ. ಪ್ರಾದೇಶಿಕ ಕಛೇರಿಗಳು ಭಾರತಕ್ಕೆ ಬಂದ ವಿದೇಶೀ ಪ್ರವಾಸಿಗರಿಗೆ ಹೆಚ್ಚಿನ ಸಹಾಯ ನೀಡುವವು. ವಿದೇಶದಲ್ಲಿನ ಪ್ರವಾಸಿ ಕಛೇರಿಗಳು ಭಾರತಕ್ಕೆ ಭೇಟಿ ನೀಡಲು ಇಷ್ಟಪಡುವ ಪ್ರವಾಸಿಗರಿಗೆ ಪೂರ್ವಭಾವಿಯಾಗಿ ಮಾಹಿತಿಗಳನ್ನು ಒದಗಿಸಿಕೊಡುತ್ತವೆ. ಈ ಕಛೇರಿಗಳು ಪ್ರಚಾರ ಹಾಗೂ ಸಾರ್ವಜನಿಕ ಸಂಪರ್ಕ, ವ್ಯಾಪಾರಕ್ಕೆ ಉತ್ತೇಜನ, ವಿದೇಶೀ (ಪ್ರವಾಸಿಗರ) ಒಲವುಗಳನ್ನು ಕೇಂದ್ರೀಯ ಪ್ರವಾಸೋದ್ಯಮ ವಿಭಾಗಕ್ಕೆ ವರದಿ ಮಾಡುವುದು -ಈ ಕಾರ್ಯಗಳನ್ನು ನಿರ್ವಹಿಸುತ್ತವೆ.

## ಪ್ರವಾಸೋದ್ಯಮ ಸಚಿವಾಲಯದ ರಚನೆ

ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಾರಿಗೆ ಸಚಿವಾಲಯದೊಂದಿಗೆ ಚರ್ಚಿಸಿ ವ್ಯವಹರಿಸಲು ೧೯೫೮ರ ಮಾರ್ಚ್ ೧ ರಂದು ಪ್ರವಾಸೋದ್ಯಮ ಇಲಾಖೆಯನ್ನು ರಚಿಸಲಾಯಿತು. ಈ ಹೊಸ ಇಲಾಖೆಯನ್ನು ಡೈರೆಕ್ಟರ್ ಜನರಲ್‌ರವರ ಅಧೀನಕ್ಕೆ ಒಪ್ಪಿಸಲಾಯಿತು. ಇವರ ಅಧೀನದಲ್ಲಿ ಓರ್ವ ಡೆಪ್ಯೂಟಿ ಡೈರೆಕ್ಟರ್ ಜನರಲ್ ಹಾಗೂ ನಾಲ್ವರು ನಿರ್ದೇಶಕರು ಇದ್ದು ಪ್ರತಿಯೊಬ್ಬರೂ ಆಡಳಿತ, ಪ್ರಚಾರ,

ಪ್ರವಾಸ ಸಂಬಂಧಗಳು, ಯೋಜನೆ ಹಾಗೂ ಅಭಿವೃದ್ಧಿ- ಈ ಅಧಿಕಾರವನ್ನು ಹೊಂದಿರುತ್ತಿದ್ದರು. ೧೯೬೭ ಮಾರ್ಚ್ ೧೪ ರಂದು ರಾಷ್ಟ್ರಪತಿಗಳ ಆದೇಶದಂತೆ ಸಾರಿಗೆ ಮತ್ತು ನಾಗರಿಕ ಉಡ್ಡಾಣ ಮಂತ್ರಾಲಯ (Ministry of Transport and civil Aviation) ಅಧೀನದಲ್ಲಿದ್ದ ಉಡ್ಡಾಣ ಹಾಗೂ ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮ ಹಾಗೂ ನಾಗರಿಕ ಉಡ್ಡಾಣ ಸಚಿವಾಲಯವೆಂಬ ಹೆಸರಿನಲ್ಲಿ ಪ್ರತ್ಯೇಕವಾಗಿ ಎರಡು ನಿಯೋಜಿತ ಇಲಾಖೆಗಳಾದವು. ಸಚಿವಾಲಯವನ್ನು ಪೂರ್ಣಾವಧಿಯ ಮಂತ್ರಿಯೋರ್ವನ ವಶಕ್ಕೆ ಒಪ್ಪಿಸಲಾಯಿತು. ಪ್ರವಾಸೋದ್ಯಮ ಹಾಗೂ ನಾಗರಿಕ ಉಡ್ಡಾಣವೆಂಬ ಹೊಸ ಸಚಿವಾಲಯ ನಿರ್ಮಾಣಗೊಂಡ ಮೇಲೆ ಅದಕ್ಕೆ ದಕ್ಕಬೇಕಾದ ಪ್ರಾಮುಖ್ಯತೆಯನ್ನು ಅದು ಪಡೆಯಿತ್ತಷ್ಟೇ ಅಲ್ಲದೆ ಈ ಮೂಲಕ ಅದು ತನ್ನ ಕಾರ್ಯ ಚಟುವಟಿಕೆಗಳನ್ನು ಎಲ್ಲೆಡೆ ವಿಸ್ತರಿಸಿತು. ಈ ಸಚಿವಾಲಯದ ಕಾರ್ಯ ಚಟುವಟಿಕೆಗಳು- ನಿರ್ದಿಷ್ಟ ಜವಾಬ್ದಾರಿಗಳು- ಇಂತಿವೆ:

೧. ಪವನಶಾಸ್ತ್ರ (Meteorological) ಸೇವೆಯನ್ನು ವ್ಯವಸ್ಥೆಗೊಳಿಸುವುದು.

೨. ವಿಮಾನ ನಿಲ್ದಾಣಗಳನ್ನು ಒದಗಿಸುವುದು; ವಾಯುಮಾರ್ಗ, ವಿಮಾನ ನಿಲ್ದಾಣ, ವಿಮಾನ ಮತ್ತು ವಿಮಾನ ಸಂಚಾರ- ಇವುಗಳನ್ನು ನಿಯಂತ್ರಿಸುವುದು.

೩. ವಿಮಾನಕ್ಕೆ ರಕ್ಷಣೆ ಒದಗಿಸಿಕೊಡುವುದು.

೪. ವಾಯುಮಾರ್ಗದ ಮೂಲಕ ಪ್ರಯಾಣಿಕರು ಹಾಗೂ ವಸ್ತುಗಳನ್ನು ಸಾಗಿಸುವುದು.

೫. ವಾಯು ನಿಗಮ ಕಾಯಿದೆ (Air coporation Act) ೧೯೫೩ರ ಆಶ್ರಯದಲ್ಲಿ ನಿಗಮಗಳನ್ನು ಸ್ಥಾಪಿಸುವುದು.

೬. ರೈಲ್ವೆ ತನಿಖಾ ಮಂಡಲಿಯನ್ನು ಸ್ಥಾಪಿಸುವುದು.

೭. ಪ್ರವಾಸೋದ್ಯಮದ ಅಭಿವೃದ್ಧಿ ಹಾಗೂ ಪ್ರಗತಿ.

೮. ಯುವಜನ ಹಾಸ್ಟೆಲ್‌ಗಳ ನಿರ್ಮಾಣ.

೯. ಪ್ರವಾಸೋದ್ಯಮದ ಪ್ರಗತಿಗೆ ಸಂಬಂಧಿಸಿದಂತೆ ಇತರೆ ಸಚಿವಾಲಯಗಳ ನಿಕಟ ಸಂಬಂಧವನ್ನು ಹೊಂದುವುದು.

೧೦. ಸಂಸತ್‌ನ ಹಲವಾರು ಸಮಿತಿಗಳು ಹಾಗೂ ಇತರೆ ಸಂಸ್ಥೆಗಳ ಮೂಲಕ ಅನೇಕ ಕಾರ್ಯಚಟುವಟಿಕೆಗಳ ಸಂಯೋಜನೆ.

೧೧. ಅಂತರರಾಷ್ಟ್ರೀಯ ಹಾಗೂ ದ್ವಿಪಕ್ಷೀಯ (Bilateral) ಏಜೆನ್ಸಿಗಳ ಮೂಲಕ ಮಾತುಕತೆ (ಒಪ್ಪಂದ).

೧೨. ರಾಜ್ಯ ಸರಕಾರಗಳ ಹಾಗೂ ಯೋಜನಾ ಆಯೋಗಗಳ ಸಹಯೋಗದಲ್ಲಿ ದೇಶದಾದ್ಯಂತ ಪ್ರವಾಸಿ ಕಾರ್ಯಚಟುವಟಿಕೆಗಳ ಯೋಜನೆ ಮತ್ತು ವ್ಯವಸ್ಥೆ.

೧೩. ಈ ಪಟ್ಟಿಯಲ್ಲಿ ಸ್ಪಷ್ಟಪಡಿಸಿರುವ ಯಾವುದೇ ವಿಷಯಗಳಿಗೆ ಅನ್ವಯಿಸುವಂತೆ ವಿಚಾರಣೆ ಹಾಗೂ ಅಂಕಿ ಅಂಶಗಳು.

೧೪. ಈ ಪಟ್ಟಿಯಲ್ಲಿ ಸ್ಪಷ್ಟಪಡಿಸಿರುವ ಯಾವುದೇ ವಿಷಯಗಳಿಗೆ ಸಂಬಂಧಿಸಿ ದಂತೆ ಕರಾರು ಹಾಗೂ ಒಪ್ಪಂದಗಳನ್ನು ಜಾರಿಗೆ ತರುವುದು.

ಕೇಂದ್ರ ಸಚಿವಾಲಯವು, ನಾಗರಿಕ ಉಡ್ಡಾಣ ಮತ್ತು ಪ್ರವಾಸೋದ್ಯಮಗಳಿಗೆ ಸಂಬಂಧಿಸಿದ ವಿಚಾರಗಳಿಗೆ ಸಲಹೆ ನೀಡುತ್ತದೆ. ನಾಗರಿಕ ಉಡ್ಡಾಣ ಮತ್ತು ಪ್ರವಾಸೋದ್ಯಮದ ಕಾರ್ಯಕ್ರಮಗಳು ಹಾಗೂ ಅವುಗಳ ಧೋರಣೆಗಳನ್ನು ಸಂಯೋಜಿಸುತ್ತದೆ. ತಾಂತ್ರಿಕ ವಿವರಗಳನ್ನು ಪೂರೈಸುತ್ತದೆ. ಹಣಕಾಸಿನ ನೆರವನ್ನು ಒದಗಿಸಿಕೊಡುತ್ತದೆ. ಸಚಿವಾಲಯವು ನಾಗರಿಕ ಉಡ್ಡಾಣ ಹಾಗೂ ಪ್ರವಾಸೋದ್ಯಮದ ರಾಷ್ಟ್ರೀಯ ಧೋರಣೆಗಳನ್ನು (National Policies) ಪರಿಣತರ ಸಮಿತಿ ಹಾಗೂ ಮಂಡಲಿಗಳ ಮೂಲಕ ರೂಪಿಸುತ್ತದೆ.

## ಪ್ರವಾಸೋದ್ಯಮ ಇಲಾಖೆ

ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮ ಹಾಗೂ ನಾಗರಿಕ ಉಡ್ಡಾಣ ಸಚಿವಾಲಯಕ್ಕೆ ಹೊಂದಿದಂತಿದೆ ಹಾಗೂ ಪ್ರವಾಸೋದ್ಯಮದ ಡೈರೆಕ್ಟರ್ ಜನರಲ್‌ರವರ ನೇತೃತ್ವದಲ್ಲಿದೆ. ಇವರು ಭಾರತ ಸರಕಾರದ ಆಡಿಷನಲ್ ಕಾರ್ಯದರ್ಶಿಗಳ ಎಕ್ಸ್ ಅಫಿಷಿಯೋ ಸ್ಥಾನಮಾನಗಳನ್ನು ಹೊಂದಿರುವರು. ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮ ಹಾಗೂ ನಾಗರಿಕ ಉಡ್ಡಾಣ ಸಚಿವಾಲಯಕ್ಕೆ ಹೊಂದಿ-ಕೊಂಡಂತಿದ್ದರೂ ಇದು ಧೋರಣೆಗಳನ್ನು ರೂಪಿಸುತ್ತದೆ ಹಾಗೂ ಕಾರ್ಯ ನಿರ್ವಹಣೆಯನ್ನು ವ್ಯವಸ್ಥೆಗೊಳಿಸುತ್ತದೆ. ಇದು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಂತ್ರಾಲಯ ಹಾಗೂ ಇಲಾಖೆಗಳ ಜೊತೆ ನೇರವಾಗಿ ವ್ಯವಹರಿಸುತ್ತದೆ. ಡೈರೆಕ್ಟರ್ ಜನರಲ್‌ರವರು ಓರ್ವ ಅಡಿಷನಲ್ ಡೈರೆಕ್ಟರ್ ಜನರಲ್, ಓರ್ವ ಜಾಯಿಂಟ್ ಡೈರೆಕ್ಟರ್ ಜನರಲ್, ಓರ್ವ ಡೆಪ್ಯೂಟಿ ಸೆಕ್ರಟರಿ ಮತ್ತು ಐವರು ಡೆಪ್ಯೂಟಿ ಡೈರೆಕ್ಟರ್ ಜನರಲ್‌ಗಳು -ಇವರುಗಳ ಸಹಾಯ ಪಡೆಯುವರು. ಪ್ರವಾಸೋದ್ಯಮ ಇಲಾಖೆಯ ಕಾರ್ಯಚಟುವಟಿಕೆಗಳು ಅಭಿವೃಧ್ಯಾತ್ಮಕ ಮತ್ತು ವ್ಯವಸ್ಥಾತ್ಮಕವಾಗಿದ್ದು ಅವನ್ನು ಕೆಳಗಿನ ಏಳು ವಿಭಾಗಗಳು ನೋಡಿಕೊಳ್ಳುತ್ತವೆ:

೧. ಯೋಜನೆ ಹಾಗೂ ಕಾರ್ಯಕ್ರಮಗಳ ಸಿದ್ಧತೆ

೨. ಪ್ರಚಾರ ಹಾಗೂ ಸಮ್ಮೇಳನ

೩. ಪ್ರವಾಸ ವ್ಯಾಪಾರ ಹಾಗೂ ಆತಿಥ್ಯ

೪. ಸ್ಥಳಾವಕಾಶ

೫. ಹೆಚ್ಚುವರಿ ಸ್ಥಳಾವಕಾಶ ಹಾಗೂ ವನ್ಯಜೀವಿ

೬. ಮಾರುಕಟ್ಟೆ ಸಂಶೋಧನೆ

೭. ಆಡಳಿತ

ಇಲಾಖೆಯ ಕಾರ್ಯಚಟುವಟಿಕೆಗಳು ಬಹುಮುಖವಾಗಿ ಬೆಳೆದಿದ್ದು ಅದು ವೈವಿಧ್ಯವೂ ವ್ಯಾಪಕವೂ ಆದ ವಿಷಯಗಳನ್ನೊಳಗೊಂಡಿದೆ. ಇಲಾಖೆಯ ಚಟುವಟಿಕೆಗಳು ಕೆಳಗಿನಂತಿವೆ:

ಅ. ಭಾರತ ಹಾಗೂ ವಿದೇಶೀ ಪ್ರವಾಸಿಗರ ಸುದ್ದಿ ಸಂಗ್ರಹಣೆ, ಜೋಡಣೆ ಹಾಗೂ ಕ್ರೋಡೀಕರಣ ಮಾಡುವುದು ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರು, ಪ್ರವಾಸ ನಿರ್ವಾಹಕರುಗಳಿಂದ, ವಿಮಾನ ಹಡಗು ಕಂಪನಿಗಳು ಮತ್ತು ಹೋಟೆಲ್ -ಈ ಪ್ರವಾಸಿ ಉದ್ಯಮಿಗಳಿಂದ ಬರುವ ಪ್ರಶ್ನೆಗಳಿಗೆ ಉತ್ತರ ನೀಡುವುದು.

ಆ. ಅಂತರರಾಷ್ಟ್ರೀಯ ಪ್ರಯಾಣ ಹಾಗೂ ಪ್ರವಾಸಿ ಸಂಸ್ಥೆಗಳ ಜೊತೆ ಸರಕಾರಿ ಹಾಗೂ ಸರಕಾರೇತರ ನೆಲೆಗಳಲ್ಲಿ ಸಹಕಾರ ನೀಡುವುದು.

ಇ. ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಅಗತ್ಯವಾದ ಪ್ರವಾಸೀ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು.

ಈ. ಪ್ರವಾಸೋದ್ಯಮದ ಪ್ರಾಮುಖ್ಯತೆಯ ಬಗೆಗೆ ದೇಶ ವಿದೇಶಗಳಲ್ಲಿ ಜಾಗೃತಿಯನ್ನುಂಟುಮಾಡುವುದು.

ಉ. ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಗಡಿಯ ಔಪಚಾರಿಕ ತನಿಖೆಯನ್ನು ಸರಳಗೊಳಿಸುವುದು.

ಊ. ಪ್ರವಾಸಿ ಉದ್ಯಮದ ಬೇರೆ ಬೇರೆ ಅಂಗಗಳಾದ ಹೋಟೆಲ್ಲು, ಯುವ ಹಾಸ್ಟೆಲ್‌ಗಳು, ಪ್ರವಾಸಿ ಏಜೆಂಟರು, ವನ್ಯಜೀವಿಗಳನ್ನು

ತೋರಿಸುವವರು, ಮಾರ್ಗದರ್ಶಿಗಳು, ಪ್ರವಾಸಿ ವಾಹನ ಚಾಲಕರು, ಪ್ರವಾಸಿಗರ ಅಗತ್ಯಗಳನ್ನು ಪೂರೈಸುವ ವ್ಯಾಪಾರಿಗಳು- ಇವರ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವುದು.

ಏ. ಭಾರತಕ್ಕೆ ಬಂದ ಅಂತರರಾಷ್ಟ್ರೀಯ ಪ್ರವಾಸಿ ಸಂಚಾರದ (Tourist Traffic) ಬಗೆಗೆ ಅಂಕಿಸಂಖ್ಯೆ ಹಾಗೂ ಮಾರುಕಟ್ಟೆ ಶೋಧನೆಗಳನ್ನು ಸಂಕಲಿಸುವುದು ಮತ್ತು ಇವುಗಳನ್ನು ಪ್ರವಾಸಿ ಬೆಳವಣಿಗೆಗೆ ಪರಿಣಾಮ ಕಾರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದು.

ಪ್ರವಾಸೋದ್ಯಮ ಮಂತ್ರಾಲಯವು (ಭಾರತದ ಪ್ರಮುಖ ನಗರಗಳಲ್ಲಿ) ಸರಪಣಿಯೋಪಾದಿಯಲ್ಲಿರುವ ಪ್ರವಾಸಿ ಕಛೇರಿಗಳನ್ನು ಆಗ್ರಾ, ಔರಂಗಾಬಾದ್, ಬೆಂಗಳೂರು, ಭುವನೇಶ್ವರ್, ಮುಂಬಯಿ, ಕಲ್ಕತ್ತಾ, ಕೊಚ್ಚಿನ್, ಗೌಹತಿ, ಹೈದರಾಬಾದ್, ಇಂಫಾಲ್, ಜೈಪುರ್, ಖುಜುರಾಹೊ, ಮದ್ರಾಸ್, ನಹಾರಿ ಯಾಗಾಂ, ನವದೆಹಲಿ, ಪಣಜಿ, ಪೋರ್ಟ್‌ಬ್ಲೇರ್, ಶಿಲ್ಲಾಂಗ್, ತ್ರಿವೇಂದ್ರಂ, ವಾರಣಾಸಿಗಳಲ್ಲಿ ತೆರೆಯಲಾಗಿದೆ. ಗುಲ್‌ಮಾರ್ಗ ಮತ್ತು ಕಾಶ್ಮೀರಗಳಲ್ಲಿ, ಚಳಿಗಾಲದ ಕ್ರೀಡೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಯೋಜನೆಯೊಂದನ್ನು ಸಿದ್ಧ ಪಡಿಸಲಾಗಿದ್ದು, ಯೋಜನಾ ಕಛೇರಿಯೊಂದನ್ನು ಶ್ರೀನಗರದಲ್ಲಿ ತೆರೆಯಲಾಗಿದೆ. ಭಾರತದಲ್ಲಿ ಈ ಪ್ರವಾಸಿ ಕಛೇರಿಗಳು ಪ್ರವಾಸಿಗರಿಗೆ ಭಾರತದಲ್ಲಿನ ಸಂಚಾರದ ಬಗೆಗೆ ಹಾಗೂ ಪ್ರವಾಸಿ ಆಕರ್ಷಣೆಗಳ ಬಗೆಗೆ ಸುದ್ದಿಗಳನ್ನು ಒದಗಿಸಿಕೊಡುತ್ತವೆ. ಈ ಕಛೇರಿಗಳು ಪ್ರವಾಸೋದ್ಯಮದ ಹಲವು ಘಟಕಗಳು ಪ್ರವಾಸಿಗಿಗೆ ಬೇಕಾದ ಅಗತ್ಯ. ಮಾಹಿತಿಗಳನ್ನು ಒದಗಿಸಿಕೊಡುತ್ತವೆ. ಈ ಕಚೇರಿಗಳು ಪ್ರವಾಸೋದ್ಯಮದ ಹಲವು ಘಟಕಗಳ ಮೇಲೆ ಹಲವು ಬಗೆಯ ನಿಯಂತ್ರಣಗಳನ್ನು ಹೊರಿಸುವುದರ ಮೂಲಕ ಇಲಾಖೆಗೆ ನೆರವಾಗುತ್ತದೆ. ವಿದೇಶೀ ಪ್ರವಾಸಿಗರಿಗೆ ಹೆಚ್ಚು ಖರ್ಚಿಲ್ಲದೆ ಹಲವು ಬಗೆಯ ಸೇವೆ ದೊರೆಯುವಂತೆ ಮಾಡಲು ಇಲಾಖೆಯು ಪ್ರಯತ್ನಿಸುತ್ತಿದೆ. ಮತ್ತು ಅವರು ಭಾರತದಲ್ಲಿರುವಷ್ಟು ದಿವಸ ಯಾವುದೇ ರೀತಿಯ ತೊಂದರೆಗೆ ಒಳಗಾಗದಂತೆ ನೋಡಿಕೊಳ್ಳುತ್ತವೆ. ಈ ಕಛೇರಿಗಳು ರಾಜ್ಯಸರಕಾರಗಳು, ಪ್ರವಾಸಿ ಏಜೆನ್ಸಿಗಳು, ಯಾತ್ರಾ ಏಜೆನ್ಸಿಗಳು, ಹೋಟೆಲ್ ಮಾಲೀಕರುಗಳು, ಶಿಕಾರಿಗೆ ನೆರವಾಗುವವರು, ಫೋಟೋಗ್ರಾಫರ್‌ಗಳು, ಪ್ರವಾಸಿವಾಹನ ಚಾಲಕರುಗಳು- ಇವರುಗಳ ಜೊತೆ ಸೌಹಾರ್ದಯುತವಾಗಿ ಕಾರ್ಯ ನಿರ್ವಹಿಸುವವು.

ಸಮುದ್ರಾಂತರ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಭಾರತ ಸರಕಾರವು ಪ್ರವಾಸಿ ಕಛೇರಿಗಳನ್ನು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ, ಆಸ್ಟ್ರಿಯಾದ

ವಿಯನ್ನಾದಲ್ಲಿ, ಬೆಲ್ಜಿಯಂನ ಬ್ರಸ್ಸಲ್ಸ್‌ನಲ್ಲಿ, ಕೆನಡಾದ ಟೊರೆಂಟೊದಲ್ಲಿ, ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ, ಇಟಲಿಯ ಮಿಲಾನ್‌ನಲ್ಲಿ, ಜಪಾನ್‌ನ ಟೋಕಿಯೋದಲ್ಲಿ, ಕುವೈತ್‌ನಲ್ಲಿ, ನೇಪಾಳದ ಕಠ್‌ಮಂಡುವಿನಲ್ಲಿ, ಸಿಂಗಾಪುರದಲ್ಲಿ, ಸ್ವೀಡನ್‌ನ ಸ್ಟಾಕ್ ಹೋಮ್‌ನಲ್ಲಿ, ಸ್ವಿಜರ್‌ಲೆಂಡ್‌ನ ಜಿನೀವಾದಲ್ಲಿ, ಥಾಯ್‌ಲೆಂಡ್‌ನ ಬಾಂಕಾಕ್‌ನಲ್ಲಿ, ಮಲೇಸ್ಯಾದ ಕೌಲಾಲಂಪುರ್‌ನಲ್ಲಿ, ಯುನೈಟೆಡ್ ಕಿಂಗ್‌ಡಮ್‌ನ ಲಂಡನ್‌ನಲ್ಲಿ; ಯು.ಎಸ್.ಎ.ಯ ನ್ಯೂಯಾರ್ಕ್, ಚಿಕಾಗೋ, ಲಾಸೇಂಜಲಿಸ್‌ಗಳಲ್ಲಿ, ಪಶ್ಚಿಮ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ತೆರೆಯಲಾಗಿದೆ. ಪ್ರವಾಸಿ ಅಭಿವೃದ್ಧಿ ಕಛೇರಿಯನ್ನು ದುಬಾಯ್ (ಯು.ಎ.ಇ) ಬಹ್ರೈನ್‌ನಲ್ಲೂ ತೆರೆಯಲಾಗಿದೆ.

ಜುಲೈ ೧೯೬೮ರಲ್ಲಿ 'ಆಪರೇಷನ್ ಯೂರೋಪ್' ಜಾರಿಗೆ ಬಂದ ಮೇಲೆ ಸಮುದ್ರಾಂತರದಲ್ಲಿ ಭಾರತೀಯ ಪ್ರವಾಸೋದ್ಯಮವನ್ನು ವಾಣಿಜ್ಯವಾಗಿ ಪರಿವರ್ತಿಸುವ ತೀರ್ಮಾನದ ಮೂಲಕ ಗಮನಾರ್ಹ ಬದಲಾವಣೆಯಾಯಿತು. ಈ ಯೋಜನೆಯನ್ನು ೧೯೭೦ರಲ್ಲಿ ಯು.ಕೆ.ಗೆ, ೧೯೭೧ರಲ್ಲಿ ಯು.ಎಸ್.ಎ.ಗೆ, ೧೯೭೭ರಲ್ಲಿ ಆಸ್ಟ್ರೇಲಿಯಾ, ದೂರ ಪ್ರಾಚ್ಯ (Far East) ಹಾಗೂ ಪಶ್ಚಿಮ ಏಷ್ಯಾಗಳಿಗೆ ವಿಸ್ತರಿಸಲಾಯಿತು. ಈಗ ಕಾರ್ಯಾಚರಣೆಯ ಯೋಜನೆಯನ್ನು ಸಮುದ್ರಾಂತರದ ಎಲ್ಲ ಪ್ರವಾಸಿ ಕಛೇರಿಗಳಿಗೆ, ಪ್ರವಾಸಿಗರನ್ನು ವಿಶೇಷವಾಗಿ ಆಕರ್ಷಿಸುವ ಮಾರುಕಟ್ಟೆಗಳಿಗೆ ಅನ್ವಯಿಸಲಾಗಿದೆ. ಈ ಯೋಜನೆಯ ಆಶ್ರಯದಲ್ಲಿ ಭಾರತದ ರಾಷ್ಟ್ರೀಯ ಸಾಗಣೆಯಾದ ಏರ್ ಇಂಡಿಯಾವು ಭಾರತದ ವಾಯುಮಾರ್ಗದ ಬೆಳವಣಿಗೆಯ ಬಗೆಗೆ ಸಮಾನವಾದ ಆಸಕ್ತಿಯನ್ನು ಹೊಂದಿದ್ದು ಅದು ಪ್ರವಾಸೋದ್ಯಮ ಇಲಾಖೆಯ ಜೊತೆಗೂಡಿದ್ದು ಅತ್ಯಂತ ಪರಿಣಾಮಕಾರಿಯಾಗಿ ಸಮುದ್ರಾಂತರ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸುವ ದಿಶೆಯಲ್ಲಿ ಆಲೋಚಿಸುತ್ತಿದೆ. ಸಮುದ್ರಾಂತರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆಂದು ಏರ್ ಇಂಡಿಯಾದ ಜೊತೆ ಪ್ರವಾಸೋದ್ಯಮ ಇಲಾಖೆಯು ಸಂಯುಕ್ತವಾಗಿ ಹಣ ಹೂಡಿದೆ.

ಪ್ರವಾಸೋದ್ಯಮವು ಇಂದು ಇಡೀ ವಿಶ್ವವನ್ನೇ ಆಕರ್ಷಿಸಿದೆ. ಒಂದು ದೇಶದ ಆರ್ಥಿಕ ಅಭಿವೃದ್ಧಿಯು ಪ್ರವಾಸೋದ್ಯಮದ ಜೊತೆ ನೇರವಾದ ಸಂಬಂಧವನ್ನು ಹೊಂದಿದೆ. ಮುಂದುವರಿದ ದೇಶಗಳ ಉದ್ಯಮಗಳು ನಿರ್ಮಿಸಿದ ವಸ್ತುಗಳನ್ನು ಪ್ರವಾಸೋದ್ಯಮದ ಮೂಲಕ ಸುಲಭವಾಗಿ ಅಲ್ಪಾದಾಯದ ೩ನೇ ಪ್ರಪಂಚ ಅಭಿವೃದ್ಧಿ ಶೀಲದೇಶಗಳ ಹಾಗೂ ಅಭಿವೃದ್ಧಿ ಹೊಂದಿದ ಬಹಳಷ್ಟು ಅಭಿವೃದ್ಧಿಶೀಲ ದೇಶಗಳಿಗೆ ರವಾನಿಸಬಹುದು. ವಿದೇಶೀ ವಿನಿಮಯದ ಗಳಿಕೆಗೆ ಇದೊಂದು ಪ್ರಮುಖ ಆಧಾರವಾಗಿದೆ.

೧೯೭೮ರಲ್ಲಿ ಸ್ಪೈನ್ ದೇಶಕ್ಕೆ ಭೇಟಿಯಿತ್ತವರ ಸಂಖ್ಯೆಯ ಅದರ ನಿಗದಿತ ಜನಸಂಖ್ಯೆಗಿಂತ (೩೬ ಮಿಲಿಯ) ಹೆಚ್ಚಿನದಿದ್ದಿತು (೪೦ ಮಿಲಿಯ). ಹೊಸದಾಗಿ ಹುಟ್ಟುತ್ತಿರುವ ಕಾರಿಬ್ಬಿಯನ್ ಮೊದಲಾದ ರಾಷ್ಟ್ರಗಳು ಅತ್ಯಧಿಕವಾಗಿ ಪ್ರವಾಸೀ ಆದಾಯವನ್ನು ಅವಲಂಬಿಸಿದ್ದು, ಅದು ಎಲ್ಲ ಗೃಹೋತ್ಪಾದನೆಯ (Gross Domestic product) ಪ್ರಮುಖಭಾಗವನ್ನು ಪ್ರತಿನಿಧಿಸುತ್ತದೆ. ಭಾರತದಲ್ಲಿ ೧೯೮೧ರಲ್ಲಿ ಪ್ರವಾಸೋದ್ಯಮವು ಆ ದೇಶದ ಅತಿ ಹೆಚ್ಚಿನ ವಿದೇಶೀ ವಿನಿಮಯ ಗಳಿಕೆಯಲ್ಲಿ ಮೂರನೆಯದ್ದಾಗಿ ತನ್ನ ಸಾಧನೆಯನ್ನು ತೋರಿಸಿತು. ಮುಂದುವರಿದ ರಾಷ್ಟ್ರವಾದ ಕೆನಡಾ ಸಹಾ ತನ್ನ ಡಿಡಿಸಿಯಲ್ಲಿ ಶೇಕಡಾ ೧೧ರಷ್ಟು ಹೆಚ್ಚಿನದನ್ನು ೧೯೭೫ರಲ್ಲಿ ಅಂತರರಾಷ್ಟ್ರೀಯ ಪ್ರವಾಸಿಗರಿಂದ ಪಡೆಯಿತು. ಪ್ರವಾಸೋದ್ಯಮದಿಂದ ದೊರೆಯುವ ಆದಾಯವನ್ನು ಅತ್ಯಧಿಕವಾಗಿ ಬಹುತೇಕ ರಾಷ್ಟ್ರಗಳು ಅವಲಂಬಿಸಿವೆ. (A.K. Bhatia: Tourim Development Principles and Practices, preface, P. viii)

ಪ್ರವಾಸೋದ್ಯಮವು ಸಾಮಾಜಿಕ ಹಾಗೂ ರಾಜಕೀಯ ತಿಳುವಳಿಕೆಯನ್ನು ಸುಧಾರಿಸುವಲ್ಲಿ ಮಹತ್ವದ ಕೊಡುಗೆಯನ್ನು ಸಲ್ಲಿಸುತ್ತದೆ. ಬೇರೆ ಬೇರೆ ದೇಶಗಳಲ್ಲಿ ಸಂಚರಿಸುವುದರಿಂದ ಭಿನ್ನ ಮನೋಭಾವದ ಜನರ ಜೊತೆ ಉತ್ತಮ ಸಂಬಂಧವನ್ನು ಕಲ್ಪಿಸಬಹುದು. ಅನ್ಯಸಂಸ್ಕೃತಿಗಳ ಬಗೆಗೆ ವಿಚಾರಗಳನ್ನು ಹರಡಲು ಪ್ರಮುಖ ಸಾಧನವೆಂದರೆ ವೈಯಕ್ತಿಕ ಅಂತರರಾಷ್ಟ್ರೀಯ ಸಂಪರ್ಕವಾಗಿದೆ. ಪ್ರವಾಸದಿಂದ ಪಡೆದ ಅನುಭವಗಳು ವ್ಯಕ್ತಿಯ ಬದುಕಿನ ಮೇಲೆ ಹಾಗೂ ಒಟ್ಟಾರೆಯಾಗಿ ಸಮಾಜದ ಮೇಲೆ ಮಹತ್ವದ ಪರಿಣಾಮ ಬೀರಬಹುದು. ಪ್ರವಾಸವು ಅಂತರರಾಷ್ಟ್ರೀಯ ತಿಳುವಳಿಕೆ ಮತ್ತು ಇತರೇ ಜನರ ಜೀವನ ವಿಧಾನದ ಮೇಲೆ ಆರೋಗ್ಯಕರ ಪ್ರಭಾವ ಬೀರಬಹುದು.

ಸೇವಾಕೈಗಾರಿಕೆಯಾಗಿ ಪ್ರವಾಸೋದ್ಯಮವು ಸ್ಥಳೀಯ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತದೆ. ಭಾರತದಂತಹ ಪ್ರಗತಿಪರ ರಾಷ್ಟ್ರಕ್ಕೆ ಉದ್ಯೋಗಾವಕಾಶಗಳು ಹೆಚ್ಚುವಂತೆ ಮಾಡುತ್ತದೆ. ಪ್ರವಾಸೋದ್ಯಮವು ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಪ್ರವಾಸಿ ಅಂಗಡಿಗಳು, ಪ್ರವಾಸಿ ಏಜೆನ್ಸಿಗಳು, ಸಾರಿಗೆ, ಕೈಮಗ್ಗ ಹಾಗೂ ಕರಕುಶಲ ಕೈಗಾರಿಕೆ -ಹೀಗೆ ನೇರ ಉದ್ಯೋಗಗಳನ್ನು ಕಲ್ಪಿಸುತ್ತದೆ. ನೇರ ಉದ್ಯೋಗಗಳು ನಿರ್ದಿಷ್ಟ ವರ್ಗದ ಕೆಲಸಗಾರರಿಗೆ ಮೀಸಲಾಗಿದೆ. ಉದಾಹರಣೆಗೆ ದುಬಾಷಿಗಳು, ಮಾರ್ಗದರ್ಶಿಗಳು, ಪ್ರವಾಸಿ ಅಪರೇಟರ್‌ಗಳು ಇತ್ಯಾದಿ. ೧೯೭೫ರಲ್ಲಿ 'ದ ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಎಕನಾಮಿಕ್ ರಿಸರ್ಚ್' (NCAER) ಅಂದಾಜು ಮಾಡಿರುವಂತೆ ಸು. ೯,೩೩,೦೦೦ ಜನರು ಪರೋಕ್ಷವಾಗಿ ಇಲ್ಲವೆ ಅಪರೋಕ್ಷವಾಗಿ ಪ್ರವಾಸೋದ್ಯಮ ಕೈಗಾರಿಕೆಯಲ್ಲಿ

ತೊಡಗಿರುವರು. ಪ್ರವಾಸೋದ್ಯಮಗಳಿಗೆ ಸಂಬಂಧಿಸಿದಂತಹ ಯೋಜನೆಗಳಿಗೆ ಸಾಲ ಸೌಲಭ್ಯ ಕಲ್ಪಿಸುವ ಸಲುವಾಗಿ ೧೯೮೯ರಲ್ಲಿ ಭಾರತ ಪ್ರವಾಸೋದ್ಯಮ ಹಣಕಾಸು ನಿಗಮ (Tourism Finance Corporation of India) ಸ್ಥಾಪಿತವಾಗಿದೆ.

ಪ್ರವಾಸಿಗರ ಅಗತ್ಯಗಳನ್ನು ಪೂರೈಸುವುದು ಪ್ರವಾಸೋದ್ಯಮದ ಆದ್ಯ ಕರ್ತವ್ಯ. ಪ್ರವಾಸಿಗರು ನಮ್ಮಲ್ಲಿರುವ ಸಮುದ್ರದಂಡೆಗಳಿಗೆ, ಗಿರಿಧಾಮಗಳಿಗೆ, ಪಕ್ಷಿಧಾಮಗಳಿಗೆ, ಸಾಂಸ್ಕೃತಿಕ ಸ್ಮಾರಕಗಳಿಗೆ ಹೋಗಿಬರಲು ಅನುಕೂಲಗಳನ್ನು ಕಲ್ಪಿಸಬೇಕು. ಪ್ರವಾಸಿಯು ತಂಗಲು ಅನುಕೂಲವಾದ ಹೋಟೆಲ್ಲು, ನಿತ್ಯವೂ ಸೇವಿಸಲು ರುಚಿಕರವಾದ ಆಹಾರ, ಉಲ್ಲಾಸದಾಯಿಯಾದ ಮನರಂಜನೆ, ಸುತ್ತಾಡಲು ಕರೆದೊಯ್ಯಲು ಯೋಗ್ಯ ಸಾರಿಗೆ ಸೌಲಭ್ಯ- ಇವುಗಳನ್ನು ಅಪೇಕ್ಷಿಸುತ್ತಾನೆ. ತನ್ನ ಭೇಟಿಯ ಸವಿನೆನಪನ್ನು ಮನೆಗೆ ಕೊಂಡೊಯ್ಯಲು ಅವನು ಸೊವೆನೀರ್‌ಗಳನ್ನು ಇಷ್ಟಪಡುತ್ತಾನೆ. ತನ್ನ ಪ್ರವಾಸದ ನೆನಪನ್ನು ಮಧುರವಾಗಿಸುವ ಆಯಾ ಪ್ರದೇಶದ ಪ್ರಸಿದ್ಧ ವಸ್ತುಗಳನ್ನು- ಅವು ಅವನ ಕೈಗೆಟಕುವಂತಿದ್ದರೆ- ಕೊಂಡೊಯ್ಯುವನು.

ಪ್ರವಾಸಿಗರಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಪೂರೈಸಲು ಬೇರೆ ಬೇರೆ ದೇಶಗಳು ವಿವಿಧ ಮಾರ್ಗಗಳನ್ನು ಅನುಸರಿಸಿವೆ. ಭಾರತದಲ್ಲಿ ಪ್ರವಾಸಿಗರಿಗೆ ಅಗತ್ಯವಿರುವ ವಸ್ತುಗಳನ್ನು ಮಾರಾಟ ಮಾಡುವ ದಿಶೆಯಲ್ಲಿ ಮೂರು ವಿವಿಧ ಘಟ್ಟಗಳಲ್ಲಿ ವ್ಯವಹರಿಸಲಾಗುತ್ತದೆ. ಮೊದಲನೆಯ ಘಟ್ಟವೆಂದರೆ, ಕೇಂದ್ರೀಯ ಪ್ರವಾಸೋದ್ಯಮ ಇಲಾಖೆ. ಇದು ರಾಷ್ಟ್ರೀಯ ಮಟ್ಟದಲ್ಲಿ ಪ್ರಧಾನ ಸಲಹಾ ಸಮಿತಿಯಾಗಿರುವ ಪ್ರವಾಸಿ ಅಭಿವೃದ್ಧಿ ಮಂಡಲಿಯ ನೆರವನ್ನು ಪಡೆಯುತ್ತದೆ. ಎರಡನೆಯ ಘಟ್ಟವೆಂದರೆ, ಸ್ವಾಯತ್ತ ಸಂಸ್ಥೆಯಾದ ಕೇಂದ್ರೀಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಲಿ. ಇದರ ಕಾರ್ಯಚಟುವಟಿಕೆಗಳ ವ್ಯಾಪ್ತಿ ಸೀಮಿತವಾಗಿದೆ ಅಥವಾ ಕೇಂದ್ರೀಯ ಪ್ರವಾಸೋದ್ಯಮ ಇಲಾಖೆಗೆ ಪೋಷಕವಾಗಿರುತ್ತದೆ. ದೇಶದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ದಿಶೆಯಲ್ಲಿ ವಾಣಿಜ್ಯಾಂಗವಾಗಿ (Commercial) ಕಾರ್ಯನಿರ್ವಹಿಸುತ್ತದೆ. ಮೂರನೆಯ ಘಟ್ಟವೆಂದರೆ, ರಾಜ್ಯಗಳದ್ದು. ಸ್ಥಳೀಯ ಪ್ರವಾಸಕ್ಕೆ ಅನುಕೂಲವಾಗುವಂತೆ ಕಡಿಮೆ ಆದಾಯದ ವಿಶ್ರಾಂತಿ ಗೃಹಗಳನ್ನು ನಿರ್ಮಿಸುವುದು, ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದು, ತನ್ನಲ್ಲಿನ ಪ್ರವಾಸಿ ಆಕರ್ಷಣೆಗಳ ಬಗೆಗೆ ವ್ಯಾಪಕವಾದ ಪ್ರಚಾರ ಕೈಗೊಳ್ಳುವುದು- ಈ ಕಾರ್ಯವ್ಯಾಪ್ತಿಗೆ ರಾಜ್ಯಗಳು ಬದ್ಧವಾಗಿರುತ್ತವೆ. ಈ ಮೂರೂ ಘಟ್ಟಗಳ ಜೊತೆಗೆ, ಹಲವಾರು ಸರ್ಕಾರಿ ಹಾಗೂ ಸರ್ಕಾರೇತರ ಏಜೆನ್ಸಿಗಳು ಪ್ರವಾಸೋದ್ಯಮದ ಅಭಿವೃದ್ಧಿಗೆ ನೇರವಾಗಿ ಸಂಬಂಧಪಡದಿದ್ದರೂ ಪ್ರವಾಸೋದ್ಯಮ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಸರ್ಕಾರಿ ಹಾಗೂ

ಸರ್ಕಾರೇತರ ಏಜೆನ್ಸಿಗಳು- ಪ್ರಾಚ್ಯ ವಸ್ತು ಸಂಗ್ರಹಾಲಯ ಇಲಾಖೆ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಗಳು, ಕಸ್ಟಮ್ಸ್, ಏರ್‌ಲೈನ್ಸ್, ರೈಲ್ವೆಗಳು, ಸಾರಿಗೆ ನಿಗಮಗಳು (Undertakings), ಅರಣ್ಯ ಇಲಾಖೆಗಳು, ಕೈಮಗ್ಗ ಹಾಗೂ ಕರಕುಶಲ ಮಂಡಲಿಗಳು, ಪ್ರವಾಸಿ ಏಜೆಂಟರುಗಳು, ಸರಕಾರಿ/ ಖಾಸಗಿ ಹೋಟೆಲ್ಲುಗಳು, ಪ್ರವಾಸಿ ವಾಣಿಜ್ಯ ಪತ್ರಿಕೆಗಳು ಇವೆಲ್ಲವೂ ಒಳಗೊಳ್ಳುತ್ತವೆ.

**ಐ.ಟಿ.ಡಿ.ಸಿ. (ಇಂಡಿಯಾ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್)**

ಪ್ರವಾಸೋದ್ಯಮದ ಮೇಲಣ ಅಡ್‌ಹಾಕ್ (ಜ್ಹಾ ಸಮಿತಿ, ೧೯೬೩) ವರದಿಯ ಶಿಫಾರಸಿನಂತೆ, ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವಲ್ಲಿ ಪಬ್ಲಿಕ್ ಸೆಕ್ಟಾರ್ ಪ್ರಮುಖ ಪಾತ್ರ ನಿರ್ವಹಿಸಬೇಕೆಂದು ಭಾರತ ಸರಕಾರವು ೧೯೬೫ರಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಮೂರು ಪ್ರತ್ಯೇಕ ಮಂಡಲಿಗಳನ್ನು ಪ್ರಾರಂಭಿಸಿತು. ಅವು ಯಾವುವೆಂದರೆ-

೧. ಹೋಟೆಲ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್

೨. ಇಂಡಿಯಾ ಟೂರಿಸಂ ಕಾರ್ಪೋರೇಷನ್ ಲಿಮಿಟೆಡ್

೩. ಇಂಡಿಯಾ ಟೂರಿಸಂ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ ಲಿಮಿಟೆಡ್.

ಈ ಮಂಡಲಿಗಳನ್ನು ೧೯೫೬ರ ಕಂಪನಿ ಕಾಯಿದೆಗಳ ಅನ್ವಯ ಪ್ರಾರಂಭಿಸಲಾಯಿತು. ಇವುಗಳ ಪ್ರಮುಖ ಕಾರ್ಯ ಚಟುವಟಿಕೆಗಳೆಂದರೆ, ಪಬ್ಲಿಕ್ ಸೆಕ್ಟಾರ್‌ನಲ್ಲಿ ಹೋಟೆಲ್‌ಗಳನ್ನು ನಿರ್ಮಿಸಿ ನಡೆಸುವುದು, ಪ್ರವಾಸಿ ಪ್ರಚಾರಕ್ಕೆಂದು ಸಾಮಗ್ರಿಗಳನ್ನು ಉತ್ಪಾದಿಸುವುದು, ಪ್ರವಾಸಿಗರಿಗೆ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸುವುದು. ಕೆಲಕಾಲಾನಂತರ, ಸರಕಾರ ಈ ಮೂರು ಮಂಡಲಿಗಳನ್ನು ಒಂದುಗೂಡಿಸಿ ೧೯೬೬ರಲ್ಲಿ ಇಂಡಿಯಾ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ಎಂಬ ಸಂಸ್ಥೆಯಾಗಿ ಮಾರ್ಪಡಿಸಿತು. ಇದು ೧೯೬೬ರ ಅಕ್ಟೋಬರ್ ೧ ರಿಂದ ಕಾರ್ಯ ನಿರ್ವಹಿಸತೊಡಗಿತು. ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಷನ್ (ARC) ಶಿಫಾರಸಿನಂತೆ ೧೯೬೮ರ ಜುಲೈ ೨ ರಿಂದ ಜಾರಿಗೆ ಬರುವಂತೆ ಅಶೋಕಾ ಹೋಟೆಲ್ ಲಿಮಿಟೆಡ್ ಹಾಗೂ ಜನಪಥ್ ಹೋಟೆಲ್ ಲಿಮಿಟೆಡ್ -ಇವುಗಳ ಮೇಲಣ ಹತೋಟಿಯು ಆಗಿನ 'Minister of works Housing and supply to the Ministry of Tourism and Civil Aviation' ನಿಂದ ವರ್ಗಾವಣೆಗೊಂಡಿತು. ಈ ಎರಡು ಹೋಟೆಲ್ಲುಗಳು ಹಾಗೂ ಮೋದಿ ಮತ್ತು ರಣಜಿತ್ ಹೋಟೆಲ್ಲುಗಳು

ಐಟಿಡಿಸಿ ಜೊತೆ ಸೇರ್ಪಡೆಯಾದುವು. ಐಟಿಡಿಸಿಯ ಗುರಿ ಹಾಗೂ ಕಾರ್ಯಚಟುವಟಿಕೆಗಳು ಹೀಗಿವೆ:

ಅ. ಬೇರೆ ಬೇರೆ ಎಡೆಗಳಲ್ಲಿ ಪ್ರವಾಸಿಗಳಿಗೆ ವಾಸ್ತವ್ಯವನ್ನೊದಗಿಸಲು, ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಪ್ರವಾಸಿ ಬಂಗಲೆಗಳು, ಅತಿಥಿಗೃಹಗಳು, ಸಮುದ್ರ ದಂಡೆ ವಿಶ್ರಾಂತಿ ಧಾಮಗಳು -ಇವುಗಳ ನಿರ್ಮಾಣ ಹಾಗೂ ನಿರ್ವಹಣೆ.

ಆ. ಪ್ರವಾಸಿಗರಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸಿಕೊಡುವುದು.

ಇ. ಸಾಂಸ್ಕೃತಿಕ ಪ್ರದರ್ಶನ, ಸಂಗೀತ ಕಛೇರಿ, ಧ್ವನಿ ಹಾಗೂ ದೃಶ್ಯ ಪ್ರದರ್ಶನ ಇತ್ಯಾದಿ ಮನರಂಜನಾ ಸೌಲಭ್ಯಗಳನ್ನು ಒದಗಿಸುವುದು.

ಈ. ಪ್ರವಾಸಿಗರಿಗೆ ವ್ಯಾಪಾರಿ ಸೌಲಭ್ಯವನ್ನು ಒದಗಿಸುವುದು.

ಉ. ಭಾರತದ ಬಗೆಗೆ ಹಾಗೂ ಇಲ್ಲಿನ ಪ್ರವಾಸಿ ಆಕರ್ಷಣೆಗಳ ಬಗೆಗೆ ವಿದೇಶಗಳಲ್ಲಿ ಪ್ರಚಾರ ಮಾಡುವುದು.

೧೯೬೬ರಲ್ಲಿ ಪ್ರವಾಸಿಗರ ತಂಗಣೆಗಾಗಿ ೧೨೯ ಕೊಠಡಿಗಳು, ಸಾರಿಗೆಗಾಗಿ ೫೦ ಕಾರು ಹಾಗೂ ಬಸ್ಸುಗಳನ್ನು ಒಳಗೊಂಡಿದ್ದ ಐಟಿಡಿಸಿ ಇಂದು ನಮ್ಮ ನಿರೀಕ್ಷೆಗೂ ಮೀರಿ ಬೆಳೆದಿದೆ. ಪ್ರವಾಸಿಗರಿಗೆ ಇಳಿದುಕೊಳ್ಳಲು ಎಲ್ಲ ಸೌಕರ್ಯಗಳಿರುವ ಹೋಟೆಲ್ಲುಗಳು, ಶುಚಿ ರುಚಿಯಾದ ಪ್ರವಾಸಿಗರ ಆಯ್ಕೆಯ ಆಹಾರ ಪಾನೀಯಗಳು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು, ಕರರಹಿತ ವ್ಯಾಪಾರಿ ಮಳಿಗೆಗಳು, ಮನ ಸೆಳೆಯುವ ಧ್ವನಿ ಹಾಗೂ ಬೆಳಕಿನ ಪ್ರದರ್ಶನಗಳು, ಉತ್ಕೃಷ್ಟವಾದ ಪ್ರಚಾರ ಸಾಮಗ್ರಿಗಳು -ಇವುಗಳನ್ನು ಇಂದು ಐಟಿಡಿಸಿ ಒಳಗೊಂಡಿದೆ. ಇದು ತನ್ನ ಪ್ರಮುಖ ನೆಲೆಯಾದ ನವದೆಹಲಿಯಲ್ಲಿ ಒಂದು ವ್ಯಾಪಾರಿ ಮಳಿಗೆಯನ್ನು ಸ್ಥಾಪಿಸಿದ್ದು, ಪ್ರವಾಸಿ ಕೈಗಾರಿಕೆಗೆ ನೆರವು ನೀಡುತ್ತದೆ. ಪ್ರವಾಸಿ ಸಿದ್ಧವಸ್ತುಗಳ ಮಾರಾಟದಲ್ಲೂ ಐಟಿಡಿಸಿ ಪ್ರಮುಖ ಪಾತ್ರವನ್ನು ವಹಿಸಿದೆ.

೧೯೮೩ರಲ್ಲಿ ಪ್ರವಾಸೋದ್ಯಮ ಸಚಿವಾಲಯವು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೂರಿಸಂ ಅಂಡ್ ಟ್ರಾವಲ್ ಮೇನೇಜ್‌ಮೆಂಟ್ (IITTM) ಸಂಸ್ಥೆಯನ್ನು ಪ್ರಾರಂಭಿಸಿತು. ಪ್ರವಾಸೋದ್ಯಮದ ಮೇಲಣ ರಾಷ್ಟ್ರೀಯ ಸಮಿತಿಯು ಪ್ರವಾಸೋದ್ಯಮವನ್ನು ಒಂದು ಶಿಕ್ಷಣ ವಿಷಯವಾಗಿ ಕಲಿಸಲು ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ಈ ಸಂಸ್ಥೆಗೆ ವಹಿಸಿತು. ಅದು ನೇರವಾಗಿ ಮೇನೇಜ್‌ಮೆಂಟ್ ಡೆವಲಪ್‌ಮೆಂಟ್ ಪ್ರೋಗ್ರಾಂ (MDP) ಎಂಬ ಕೋರ್ಸನ್ನೂ, ಬಿಲಾಸಪುರದ ಗುರು

ಘಾಸಿದಾಸ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಡಿಪ್ಲೊಮಾ ಇನ್ ಟೂರಿಸಂ ಮೇನೇಜ್‌ಮೆಂಟ್ (DTM) ಕೋರ್ಸನ್ನೂ ಪ್ರಾರಂಭಿಸಿತು. ಅಷ್ಟೇ ಅಲ್ಲದೆ, ಪೋಸ್ಟ್ ಗ್ರ್ಯಾಜುಯೇಟ್ ಡಿಪ್ಲೊಮಾ ಇನ್ ಟೂರಿಸಂ ಮೇನೇಜ್‌ಮೆಂಟ್ (PGDTM) ಹಾಗೂ ಮಾಸ್ಟರ್ ಇನ್ ಟೂರ್ರಿಸಂ ಅಡ್ಮಿನಿಸ್ಟ್ರೇಶನ್ ಪದವಿಗಳಿಗೆ ಪಠ್ಯ ಕ್ರಮವನ್ನು ನಿಯೋಜಿಸಿ, ಭಾರತ ಸರಕಾರದ ಪ್ರವಾಸೋದ್ಯಮ ಸಚಿವಾಲಯದಿಂದ ಅದು ಅನುಮೋದನೆಗೊಳ್ಳುವಂತೆ ಮಾಡಿತು.

ಪ್ರವಾಸೋದ್ಯಮವನ್ನು ಶೈಕ್ಷಣಿಕ ವಿಷಯವಾಗಿ ವಿಶ್ವವಿದ್ಯಾಲಯಗಳ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಲು ಹಾಗೂ ಅದಕ್ಕೆ ಮಾನ್ಯತೆ ದೊರಕಿಸಿಕೊಡಲು ಐ ಐ ಟಿ ಟಿ ಎಂ ಸಂಸ್ಥೆಯು ವಿಶೇಷವಾಗಿ ಶ್ರಮಿಸಿತು. ಈ ಸಂಸ್ಥೆಯು ಜಾರ್ಜ್ ವಾಷಿಂಗ್‌ಟನ್ ಯೂನಿವರ್ಸಿಟಿಯ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೂರಿಸಂ ಸ್ಟಡೀಸ್ ಜೊತೆ ಜಂಟಿಯಾಗಿ ಒಪ್ಪಂದ ಮಾಡಿಕೊಂಡಿದೆ. ಯು.ಕೆ.ಯ ಸರ್ರೆ ಹಾಗೂ ಸ್ಟ್ರೆಟ್ಸ್ ಕ್ಲೈಡ್ (Strethclyde), ಕೆನಡಾದ ಕಾಲ್‌ಗರಿ, ಹವಾಯ್ ವಿಶ್ವವಿದ್ಯಾಲಯದ ಟ್ರಾವಲ್ ಇಂಡಸ್ಟ್ರಿ ಮೇನೇಜ್‌ಮೆಂಟ್ ಸ್ಕೂಲ್, ಆಸ್ಟ್ರೇಲಿಯಾದ ನಾರ್ತ್ ಕ್ವೀನ್‌ಲ್ಯಾಂಡ್ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಬೆಂಬಲವನ್ನೂ ಬೋಧನಾಂಗ ಶಾಖೆಗಳ ನೆರವನ್ನೂ ಇದು ಪಡೆದಿದೆ.

೧೯೯೦ರಲ್ಲಿ ಈ ಸಂಸ್ಥೆಯು ರಾಜ್ಯ ಸರಕಾರಗಳ ಪ್ರವಾಸೋದ್ಯಮ ಇಲಾಖೆಗಾಗಿ ಒಂದು ವಾರ ಕಾಲಾವಧಿಯ ಟೂರಿಸಂ ಓರಿಯಂಟೇಶನ್ ಪ್ರೋಗ್ರಾಂ ಹಾಗೂ ಬುದ್ಧಿಸ್ಟ್ ಟೂರಿಸಂ ಅಂಡ್ ಹೆರಿಟೇಜ್ ಇಂಟರ್‌ಪ್ರಿಟೇಶನ್ ಕೋರ್ಸ್; ಮೂರುವಾರ ಕಾಲಾವಧಿಯ ಮೇನೇಜ್‌ಮೆಂಟ್ ಡೆವಲಪ್‌ಮೆಂಟ್ ಪ್ರೋಗ್ರಾಂ ಕೋರ್ಸ್; ಒಂದು ವಾರ ಕಾಲಾವಧಿಯ ಇಮಿಗ್ರೇಶನ್ ಆಫೀಸರ್ಸ್ ಕೋರ್ಸ್ -ಹೀಗೆ ಶಿಕ್ಷಣ ವ್ಯವಸ್ಥೆಯನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಮುಂಬಯಿ, ಬೆಂಗಳೂರು, ಕಲ್ಕತ್ತಾ, ದೆಹಲಿ, ಮದರಾಸು, ಜೈಪುರ ಇತ್ಯಾದಿ ಪ್ರಮುಖ ಪ್ರವಾಸೋದ್ಯಮ ಕೇಂದ್ರಗಳಲ್ಲಿನ ಮಾರ್ಗದರ್ಶಿಗಳಿಗೆ ಅರೇಬಿಕ್, ಫ್ರೆಂಚ್, ಜರ್ಮನ್, ಇಟಾಲಿಯನ್, ಜಪನೀಸ್, ರಷ್ಯನ್ ಹಾಗೂ ಸ್ಪ್ಯಾನಿಸ್ ಭಾಷೆಗಳನ್ನು ಕಲಿಸುವ ವಿದೇಶೀ ಭಾಷಾ ಶಿಕ್ಷಣ ಕಾರ್ಯಕ್ರಮಗಳನ್ನು ಈ ಸಂಸ್ಥೆ ಹೊಂದಿದೆ.

# ಭಾರತದಲ್ಲಿ ಸಾಂಸ್ಕೃತಿಕ ಪ್ರವಾಸ

"This is indeed India... The one land that all men desire to see, and having seen once, by even a glimpse, would not give that glimpse for the shows of all the rest of the globe combined."

-Mark Twain

ಭಾರತಕ್ಕೆ ಇರುವ ಅದರ ಪ್ರಾಚೀನ ಸಂಸ್ಕೃತಿಯ ಕಾರಣದಿಂದಾಗಿ ಸಾಂಸ್ಕೃತಿಕ ಪ್ರವಾಸಕ್ಕೆ ಮಹತ್ವದ ಸ್ಥಾನವಿದೆ. ಭಾರತಕ್ಕೆ ಪ್ರವಾಸಕ್ಕೆಂದು ಬರಲು ಹಲವು ಉದ್ದೇಶಿತ ಕಾರಣಗಳಿದ್ದರೂ, 'ಸಾಂಸ್ಕೃತಿಕ ಪ್ರವಾಸ'ವು ನಿಸ್ಸಂಶಯವಾಗಿ ಅತ್ಯಂತ ಪ್ರಮುಖವಾಗಿದೆ. ಯಾವುದೇ ವಿದೇಶೀ ಪ್ರವಾಸಿಗೆ ಭಾರತಕ್ಕೆ ಪ್ರವಾಸಿಯಾಗಿ ಬರಲು ಅವನ ಮೇಲೆ ಗಾಢವಾಗಿ ಆಗಿರುವ ಸಾಂಸ್ಕೃತಿಕ ಪ್ರಭಾವವೇ ಕಾರಣವೆನ್ನಬಹುದು. ವಿಶಾಲಾರ್ಥದಲ್ಲಿ, ಭಾರತದಲ್ಲಿನ ಪ್ರವಾಸವೆಂದರೆ ಸಾಂಸ್ಕೃತಿಕವಾಗಿ ಮಹತ್ವವಾಗಿರುವ ಪ್ರದೇಶಗಳಿಗೆ ಭೇಟಿ ನೀಡುವುದಾಗಿದೆ. ನಮ್ಮ ಐತಿಹಾಸಿಕ ಪ್ರಾಚ್ಯವಸ್ತು ಸಂಶೋಧನಾ ಸ್ಮಾರಕಗಳು, ದೇವಾಲಯಗಳು, ಕಲೆ, ಜನಜೀವನ, ಪರಂಪರೆಯಿಂದ ಬಂದಿರುವ ಜಾನಪದ ಸಂಗೀತ, ನೃತ್ಯ, ಆಚಾರಗಳು, ನಂಬಿಕೆಗಳು ಇವು ಅಂತರರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸುವ ಪ್ರಬಲ ಸಾಧನಗಳಾಗಿವೆ. ಶೇಕಡಾ ೫೪ರಷ್ಟು ಪ್ರವಾಸಿಗರು ತಮ್ಮ ತಂಗಣೆಯಲ್ಲಿ ಸಂತೋಷಗೊಳ್ಳುವುದು ಮನುಷ್ಯ ನಿರ್ಮಿತವಾದ ರಸದೌತಣವನ್ನೂಡುವ ಕಟ್ಟಡಗಳು, ದೇವಾಲಯಗಳು, ಚರ್ಚ್‌ಗಳು -ಇವುಗಳಿಗಾಗಿ. ಭಾರತದ ಭವ್ಯ ಸ್ಮಾರಕಗಳು, ಪ್ರವಾಸಿಗರ ಆಕರ್ಷಣೆಯ ಪಟ್ಟಿಯಲ್ಲಿ ಮೊದಲನೆಯದಾಗಿದೆ. ಇಂತಹ ವಿಶಿಷ್ಟ ಅಸಕ್ತಿಯನ್ನೊಳಗೊಂಡ ಪ್ರವಾಸಿಗರು ಭಾರತಕ್ಕೆ ಸಾಮಾನ್ಯವಾಗಿ ಯೂರೋಪ್ ಹಾಗೂ ಅಮೇರಿಕಾ ದೇಶಗಳಿಂದ ಬರುವರು. ಭವ್ಯ ಸ್ಮಾರಕಗಳನ್ನು ನಾಲ್ಕು ಪ್ರಮುಖ ವರ್ಗಗಳಾಗಿ ವಿಂಗಡಿಸಬಹುದು.

ಅ. ಬೌದ್ಧ ಸ್ಮಾರಕಗಳು

ಆ. ಹಿಂದೂ ಸ್ಮಾರಕಗಳು

ಇ. ಇಂಡೊ-ಇಸ್ಲಾಮಿಕ್ ಸ್ಮಾರಕಗಳು

ಈ. ಭಾರತದೊಡನೆ ಸಂಪರ್ಕ ಹೊಂದಿರುವ ಯೂರೋಪಿಯನ್ ಹಾಗೂ ಬ್ರಿಟಿಷ್ ಸ್ಮಾರಕಗಳು.

ಧಾರ್ಮಿಕ ಮನೋಭಾವದ ಪ್ರವಾಸಿಗರಿಗೆ ಸಾಮಾನ್ಯವಾಗಿ ಭಾರತದ ಭವ್ಯ ಸ್ಮಾರಕಗಳ ಬಗೆಗೆ ಆಳವಾದ ಶ್ರದ್ಧೆಯಿರುತ್ತದೆ. 'ಧಾರ್ಮಿಕ ಪರಂಪರೆ' ಅನೇಕ ಜನರನ್ನು ಆಕರ್ಷಿಸುತ್ತದೆ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ವಾಸಿಸುತ್ತಿರುವ ಭಾರತೀಯರು ತಮ್ಮ ತಾತ ಮುತ್ತಾತಂದಿರ ಧರ್ಮದ ಸಾಂಸ್ಕೃತಿಕ ಕೇಂದ್ರಗಳನ್ನು ಹುಡುಕಿಕೊಂಡು ಬರುವರು. ಜಪಾನ್, ಥೈಲ್ಯಾಂಡ್, ಶ್ರೀಲಂಕಾ ಹಾಗೂ ಇತರ ದೇಶಗಳಲ್ಲಿ, ದಿನದಿನಕ್ಕೆ ಹೆಚ್ಚುತ್ತಿರುವ ಬೌದ್ಧಧರ್ಮೀಯರು ಬುದ್ಧನಿಗೆ ಸಂಬಂಧಪಟ್ಟ ಕೇಂದ್ರಗಳಿಗೆ ಭೇಟಿಕೊಡುತ್ತಿರುವರು. ಹಿಂದೂಧರ್ಮ, ಬೌದ್ಧಧರ್ಮ ಹಾಗೂ ಇಸ್ಲಾಂಧರ್ಮಗಳಲ್ಲಿ ಆಸಕ್ತರಾದ ಅಮೆರಿಕನ್ನರು, ಯೂರೋಪಿಯನ್ನರು ಸಂಖ್ಯೆಯಲ್ಲಿ ಕಡಿಮೆಯಿದ್ದರೂ ದಿನದಿನಕ್ಕೆ ಅವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ. ಭಾರತೀಯ ಧರ್ಮಗಳಲ್ಲಿ ಆಸಕ್ತರಾದ ಇವರು ಆ ಧರ್ಮಗಳ ದರ್ಶನವನ್ನು ಅರಿಯಲು ಭಾರತಕ್ಕೆ ಭೇಟ ನೀಡುತ್ತಲಿರುವರು.

ಭಾರತ ವರ್ಷದುದ್ದಕ್ಕೂ ಹಬ್ಬಗಳನ್ನು ವೈಭವದಿಂದ ಆಚರಿಸುತ್ತಿದೆ. ಅದಕ್ಕೆ ವರ್ಷದ ಯಾವುದೇ ಕಾಲಮಾನದ ನಿಗದಿಯಿಲ್ಲ. ಭಾರತದ ಯಾವುದಾದರೊಂದೆಡೆಯಲ್ಲಿ ಜನರು ಒಂದಲ್ಲಾ ಒಂದು ಹಬ್ಬವನ್ನು ತಮ್ಮದೇ ಆದ ಪರಂಪರೆ, ನಂಬುಗೆಗಳ ಹಿನ್ನೆಲೆಯಲ್ಲಿ ಆನಂದದಿಂದ ಆಚರಿಸುತ್ತಿರುವರು. ಈ ಹಬ್ಬಗಳಲ್ಲಿ ಹಲವು ಪ್ರಾದೇಶಿಕ ಹಬ್ಬಗಳಾದರೆ ಮತ್ತೆ ಕೆಲವು ರಾಷ್ಟ್ರೀಯ ಹಬ್ಬಗಳು. ಭಾರತದ ಜನತೆಯೆಲ್ಲ ಒಟ್ಟುಗೂಡಿ ಈ ಹಬ್ಬಗಳನ್ನು ಆಚರಿಸುವುದೊಂದು ವೈಶಿಷ್ಟ್ಯ. ವರ್ಷದಲ್ಲಿನ ದಿನಗಳಿಗಿಂತ ಹೆಚ್ಚಿನ ಹಬ್ಬಗಳು ಭಾರತದಲ್ಲಿ ಆಚರಣೆಯಲ್ಲಿವೆ ಎಂಬುದು ನಗೆಚಾಟಿಕೆಯ ಮಾತಾದರೂ ಅದು ವಾಸ್ತವವೂ ಹೌದು. ನಮ್ಮ ಸಂಸ್ಕೃತಿ ನಾವು ಆಚರಿಸುತ್ತಿರುವ ಹಬ್ಬಗಳಲ್ಲಿ ಅಡಗಿದೆ.

ಭಾರತದ 'ಪ್ರಾಕೃತಿಕ ಪರಂಪರೆ'ಗೆ ಆಕರ್ಷಿತರಾಗಿ ಪ್ರವಾಸಿಗರಾಗಿ ಭಾರತಕ್ಕೆ ಬರುವವರ ಸಂಖ್ಯೆಯೂ ಸಾಕಷ್ಟಿದೆ. ಶೇಕಡಾ ೪೮.೩ ರಷ್ಟು ಪ್ರವಾಸಿಗರು ಭಾವಿಸುವಂತೆ ಅವರು ಭಾರತದ 'ಮನಮೋಹಕ ಪ್ರಾಕೃತಿಕ ದೃಶ್ಯಾವಳಿ'ಗಳಿಂದ ಆಕರ್ಷಿತರಾಗಿ ಭಾರತಕ್ಕೆ ಬರಲು ಇಷ್ಟಪಡುವರು. ಇಲ್ಲಿನ ಭೂಗುಣ, ಹವಾಮಾನ ವಿದೇಶೀಯರಿಗೆ ಆಪ್ಯಾಯಮಾನವಾದುದು. ಅಷ್ಟೇ ಅಲ್ಲ, ಇಲ್ಲಿನ ಪಕ್ಷಿಗಳು, ವನ್ಯ

ಸಂರಕ್ಷಣಾಧಾಮಗಳು ಅವರ ಆಸಕ್ತಿಯನ್ನು ಕೆರಳಿಸಿರುವುದರಿಂದ ಭಾರತಕ್ಕೆ ಪ್ರವಾಸಿಗರಾಗಿ ಅವರು ಬರಲು ಇಷ್ಟಪಡುವರು. ಸಂಪದ್ಭರಿತವೂ ವೈವಿಧ್ಯಮಯವೂ ಆದ ಭಾರತದ ಸಾಂಪ್ರದಾಯಿಕ ಕಲೆ ಹಾಗೂ ಕರಕುಶಲ ವಸ್ತುಗಳು- ಇವುಗಳ ಅಧ್ಯಯನದ ಜೊತೆಗೆ ಕಲಾವಿದರು ಹಾಗೂ ಕರಕುಶಲ ಕಾರ್ಮಿಕರ ಬದುಕನ್ನು ಅಭ್ಯಸಿಸುವುದೂ ಭಾರತಕ್ಕೆ ಭೇಟಿ ನೀಡುವ ಪ್ರವಾಸಿಗರ ಉದ್ದೇಶವಾಗಿರುವಂತಿದೆ. ಭಾರತದ ಸಾಂಸ್ಕೃತಿಕ ಪ್ರವಾಸದಲ್ಲಿ ಕಲೆ ಹಾಗೂ ಕರಕುಶಲ ವಸ್ತುಗಳ ಮೇಲಣ ಕುತೂಹಲಾಸಕ್ತಿಗಳು 'ಸಾಂಸ್ಕೃತಿಕ ವಸ್ತುಗಳ ಮಾರಾಟ ಮಳಿಗೆ'ಗಳ ಮೂಲಕ ವ್ಯಕ್ತಗೊಳ್ಳುತ್ತದೆ. ಪ್ರವಾಸಿಗರು ಭಾರತೀಯ ಕರಕುಶಲ ವಸ್ತುಗಳನ್ನು, ಕೈಮಗ್ಗದ ವಸ್ತುಗಳನ್ನು ಕೊಳ್ಳುವುದರ ಮೂಲಕ ತಮ್ಮ ಶ್ರದ್ಧೆ ಆಸಕ್ತಿಗಳನ್ನು ಪ್ರಕಟಪಡಿಸುವರು. ಭಾರತದ ನೆನಪನ್ನು ಮಧುರವಾಗಿಸುವ ಇಂತಹ ವಸ್ತುಗಳನ್ನು ತಮ್ಮ ಮನೆಗೆ ಬಹುತೇಕ ಎಲ್ಲ ಪ್ರವಾಸಿಗರೂ ಕೊಂಡೊಯ್ಯುವುದರಿಂದ ಬಹುಶಃ ಇವುಗಳ ವ್ಯಾಪಾರ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ. ಭಾರತೀಯ ಸಂಗೀತ ಮತ್ತು ನಾಟ್ಯಗಳೂ ವಿದೇಶೀಯರ ಮೇಲೆ ಪ್ರಭಾವ ಬೀರಿವೆ. ಭಾರತಕ್ಕೆ ಭೇಟಿ ನೀಡಿದ ವಿದೇಶೀ ಪ್ರವಾಸಿಗಳು ಸಾಂಪ್ರದಾಯಿಕ ಶೈಲಿಯನ್ನುಳಿಸಿಕೊಂಡಿರುವ ಭಾರತೀಯ ಸಂಗೀತ ಮತ್ತು ನಾಟ್ಯಗಳ ಪ್ರದರ್ಶನಗಳನ್ನು ಸ್ವತಃ ನೋಡುವ ಆಸಕ್ತಿಯನ್ನು ಹೊಂದಿರುತ್ತಿದ್ದರು.*

ಸಾಂಸ್ಕೃತಿಕ ಪ್ರವಾಸವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ನಂಬುಗೆ ಮತ್ತು ತಿಳುವಳಿಕೆಯನ್ನು ಹೆಚ್ಚಿಸುವುದರಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಸಹಸ್ರಾರು ಪ್ರಾಚ್ಯವಸ್ತು ಹಾಗೂ ಐತಿಹಾಸಿಕ ಸ್ಮಾರಕಗಳು ರಾಷ್ಟ್ರದಾದ್ಯಂತ ಹರಡಿ ಹೋಗಿದ್ದು

---

* ಸಾಂಸ್ಕೃತಿಕ ಉತ್ಸವಗಳೂ ಪ್ರವಾಸಿಗರಿಗೆ ಒಳ್ಳೆಯ ಆಕರ್ಷಣೆಗಳು. ಜಾನಪದ ಕಲಾವಿದರು ಹಾಗೂ ಕರಕುಶಲ ಕರ್ಮಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕನ್ನಡ-ಸಂಸ್ಕೃತಿ ಇಲಾಖೆ ಹಾಗೂ, ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಸಂಯುಕ್ತವಾಗಿ ಶಿಶಿರೋತ್ಸವ-೯೬ ಕಾರ್ಯಕ್ರಮವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದವು. ಕರ್ನಾಟಕದ ಕುಸಾಳೆ, ತಮಿಳುನಾಡಿನ ಕರಗಂ, ಆಂಧ್ರದ ಮಾಧುರಿ, ಮಧ್ಯಪ್ರದೇಶದ ಘನಘೋರ, ಕಲ್ಕತ್ತಾದ ಚೌ, ಪಂಜಾಬಿನ ಭಾಂಗ್ರಾ ಹಾಗೂ ಗೋವಾ ರಾಜ್ಯಗಳ ಜಾನಪದ ನೃತ್ಯಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು. ಈ ಉತ್ಸವ ಮೇಳದಲ್ಲಿ ಮಧ್ಯಾಹ್ನ ಹಾಗೂ ಸಂಜೆ ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ನಡೆಯಿತು. ಇಂಥ ಉತ್ಸವಗಳಿಂದ ಪ್ರವಾಸಿಗರು ಮನರಂಜನೆಯನ್ನು ಪಡೆಯಲೂ, ತಮ್ಮ ಪ್ರವಾಸದ ನೆನಪಿಗಾಗಿ ಕಾಣಿಕೆಯ ರೂಪದಲ್ಲಿ ಕರಕುಶಲ ವಸ್ತುಗಳನ್ನು ಖರೀದಿಸಲೂ ಅವಕಾಶವಾಯಿತು. ಎಲ್ಲಕ್ಕಿಂತ ಮಿಗಿಲಾಗಿ ಈ ರೀತಿಯ ಸಾಂಸ್ಕೃತಿಕ ಉತ್ಸವಗಳು ರಾಷ್ಟ್ರದ ಬೇರೆ ಬೇರೆ ಭಾಗದ ಕಲೆಗಳ ಭವ್ಯ ಪರಂಪರೆಯನ್ನು ಅವುಗಳು ಭಾವೈಕ್ಯವನ್ನು ಬೆಸೆಯುವಲ್ಲಿ ವಹಿಸುವ ಮಹತ್ತರ ಪಾತ್ರವನ್ನೂ ಬಿಂಬಿಸುತ್ತವೆ.

ಇವು ಭಾರತೀಯ ಪ್ರಾಚೀನ ಐತಿಹಾಸ ಮತ್ತು ಸಂಸ್ಕೃತಿಯನ್ನು ಅರಿಯಲು ಅವಕಾಶ ಮಾಡಿಕೊಡುತ್ತವೆ. ಸಂಪದ್ಭರಿತವೂ ಶಕ್ತಿಶಾಲಿಯೂ ಆದ ಸ್ಮಾರಕಗಳ ಪರಂಪರೆ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ನೆರವಾಗುತ್ತದೆಂಬುದನ್ನು ಮನಗಂಡ ಭಾರತ ಸರಕಾರವು ೧೯೬೮ರಲ್ಲಿ ಯುನೆಸ್ಕೋದ ಮೂಲಕ ಪರಿಣತರೊಬ್ಬರ ಸೇವೆಯನ್ನು ಪಡೆದು ಅವರಿಂದ 'ಸಾಂಸ್ಕೃತಿಕ ಪ್ರವಾಸ'ವನ್ನೇರ್ಪಡಿಸುವುದರ ಬಗೆಗೆ ಪ್ರವಾಸೋದ್ಯಮ ಇಲಾಖೆ ಸಲಹೆ ಪಡೆಯುವಂತೆ ಮಾಡಿತು. ಯುನೆಸ್ಕೋ ಪರಿಣತರಾದ ಡಾ|| ಇ.ಆರ್. ಆಲ್‌ಚಿನ್‌ರವರನ್ನು 'ಸಾಂಸ್ಕೃತಿಕ ಪ್ರವಾಸ'ದ ಹಲವು ಮುಖಗಳನ್ನು ಅಧ್ಯಯನ ಮಾಡಲು ೧೯೬೯ರ ಜನವರಿಯಲ್ಲಿ ಭಾರತಕ್ಕೆ ಆಹ್ವಾನಿಸಲಾಯಿತು. ಅವರ ೧೯೬೯ರಲ್ಲಿಯೇ ತಮ್ಮ ವರದಿಯನ್ನು ಸರಕಾರಕ್ಕೆ ಸಲ್ಲಿಸಿದರು. ಅವರು ತಮ್ಮ ವರದಿಯಲ್ಲಿ ಹೀಗೆ ಹೇಳಿರುವರು: "ಭಾರತವು ದೊಡ್ಡ ಜನಭರಿತ ದೇಶವಾಗಿದ್ದು ಅದು ಬಹುದೊಡ್ಡ ಪ್ರಾಚೀನ ಇತಿಹಾಸವನ್ನೂ ಶ್ರೇಷ್ಠ ಪರಂಪರೆಯನ್ನೂ ಹೊಂದಿದೆ. ಅದು ಸುಮಾರು ನಾಲ್ಕು ಸಹಸ್ರ ವರ್ಷಗಳಷ್ಟು ಪ್ರಾಚೀನವಾದ ನಾಗರಿಕ ಜೀವನವನ್ನು ಹೊಂದಿರುವುದರಿಂದ ಅದನ್ನು ಶ್ರೇಷ್ಠ ನಾಗರಿಕ ದೇಶವೆಂದು ಪರಿಗಣಿಸಬೇಕು. ಅದರ ಭವ್ಯ ಪರಂಪರೆಯು ಅದರ ಪ್ರಾಚೀನ ಇತಿಹಾಸದಿಂದ ಉದ್ಭವವಾಗಿದೆ. ಈ ಕಾರಣಗಳಿಂದಾಗಿ ಭಾರತಕ್ಕೆ ಭೇಟಿ ಕೊಡುವ ಯಾವುದೇ ಪ್ರವಾಸಿಗೆ ಅದರ ಪ್ರಬಲವಾದ ಸಾಂಸ್ಕೃತಿಕ ಪ್ರಭಾವ ಆಗಿಯೇ ಆಗುತ್ತದೆ. ಈ ವಿಶಾಲ ಅರ್ಥದಲ್ಲಿ ಭಾರತದಲ್ಲಿನ ಪ್ರವಾಸವು ಕೊನೆಯ ಪಕ್ಷ ಸಾಂಸ್ಕೃತಿಕ ಪ್ರವಾಸದ ಒಂದು ಭಾಗವನ್ನಾದರೂ ಒಳಗೊಳ್ಳುತ್ತದೆ." ಡಾ|| ಆಲ್‌ಚಿನ್ ಹೇಳುವಂತೆ, ಬಹುತೇಕ ವಿದೇಶೀ ಪ್ರವಾಸಿಗರು, ಮುಖ್ಯವಾಗಿ ಯೂರೋಪ್ ಮತ್ತು ಅಮೇರಿಕಾದ ಪ್ರವಾಸಿಗರು, ಭಾರತಕ್ಕೆ ಭೇಟಿಕೊಡುವುದು ಭಾರತದ ಸಂಸ್ಕೃತಿ-ಇತಿಹಾಸದಲ್ಲಿ ಕುತೂಹಲಿಗರಾಗಿಯೇ.

ಪ್ರಾಚೀನ ನಾಗರೀಕತೆ ಅಥವಾ ಮೂಲ ಸಂಸ್ಕೃತಿಯೊಂದನ್ನು ಹೊಂದಿರುವ ಪ್ರಗತಿಪರ ರಾಷ್ಟ್ರಗಳು ಪ್ರವಾಸೋದ್ಯಮದಿಂದ ಹೆಚ್ಚಿನ ಲಾಭವನ್ನು ಹೊಂದಬಹುದು. ಏಕೆಂದರೆ, ವಿದೇಶಿ ಪ್ರವಾಸಿಗರಲ್ಲಿ ಬಹಳಷ್ಟು ಮಂದಿ ಹೊರಗಿನ ಈ ಸಂಸ್ಕೃತಿಯನ್ನು ತಿಳಿಯಲು ಬಯಸುವರು; ಆ ಪ್ರಾಚೀನ ನಾಗರೀಕತೆಯ ಜೊತೆ ಸಂಪರ್ಕವನ್ನು ಹೊಂದಲು ತೀವ್ರವಾಗಿ ಅವರು ಅಪೇಕ್ಷಿಸುವರು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಸ್ಪಷ್ಟವಾಗದ, ನಿರ್ಧರಿತವಾದ ಮೂಲ ವ್ಯಕ್ತಿತ್ವವನ್ನು ಹೊಂದಿರುವ ಕಾರಣ, ಅಪೂರ್ವವಾದ ಮಾನವೀಯ ತಿಳುವಳಿಕೆಯ ಶೋಧದಲ್ಲಿ ನಿರತವಾಗಿರುವ ಯಾಂತ್ರೀಕೃತ ದೇಶಗಳಿಂದ ಪ್ರವಾಸಿಗರನ್ನು ದೊಡ್ಡ ಪ್ರಮಾಣದಲ್ಲಿ ಆಕರ್ಷಿಸಲು ಸಮರ್ಥವಾಗಿವೆ. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ತನ್ನ ಪ್ರವಾಸಿಗರನ್ನು ಸಾಂಸ್ಕೃತಿಕ

ಸಂಪನ್ನತೆಯ ಕಾರಣಕ್ಕಾಗಿ ಅಭಿವೃದ್ಧಿ ಹೊಂದುತ್ತಲಿರುವ ದೇಶಗಳಿಗೆ ಕಳುಹಿಸುತ್ತಲಿವೆ. ಸಾಂಸ್ಕೃತಿಕ ಪ್ರವಾಸದಿಂದಾಗುವ ಮುಖ್ಯ ಪ್ರಯೋಜನವೆಂದರೆ, ದೊಡ್ಡ ಪ್ರಮಾಣದಲ್ಲಿ ವಿದೇಶಿ ವಿನಿಮಯದ ಗಳಿಕೆ. ಇದರಿಂದಾಗಿ, ರಾಷ್ಟ್ರವು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.

ಭಾರತಕ್ಕೆ ಭವ್ಯವಾದ ತನ್ನದೇ ಆದ ವಿಶಿಷ್ಟ ಇತಿಹಾಸವಿದೆ. ಪ್ರವಾಸಿಗರಿಗೆ ಕುತೂಹಲ, ವಿಸ್ಮಯ, ಅಭಿಮಾನವನ್ನುಂಟುಮಾಡುವ ಲಕ್ಷಗಟ್ಟಲೆ ಐತಿಹಾಸಿಕ ಅವಶೇಷಗಳನ್ನು ಸಂಧಿಸುವ ಅವಕಾಶವಿದೆ. ಇವನ್ನು ಪ್ರವಾಸಿ ಆಕರ್ಷಣೆಯಾಗಿ ಬಳಸಿಕೊಳ್ಳಬಹುದು. ವ್ಯಾಸರಾಯ ಬಲ್ಲಾಳರು ತಮ್ಮ ಅಮೆರಿಕ ಪ್ರವಾಸದಲ್ಲಿದ್ದಾಗ ಪ್ರವಾಸಿಗಳ ಆಕರ್ಷಣೆಯಾದ ಅಲಾಮೋ ಎಂಬ ಒಂದು ಕಟ್ಟಡ ಸಂಕೀರ್ಣವನ್ನು ಸಂದರ್ಶಿಸಿದರು. ೧೯ನೆಯ ಶತಮಾನದ ಆದಿಭಾಗದಲ್ಲಿ ಟೆಕ್ಸಾಸ್ ರಾಜ್ಯಕ್ರಾಂತಿಯಲ್ಲಿ ೧೫೦ ಜನ ಸೈನಿಕರು ಒಂದು ಕೋಟೆಯ ರಕ್ಷಣೆಗಾಗಿ ಹೋರಾಡಿದರು. ಆ ಘಟನೆ ನಡೆದದ್ದು ಅಲಾಮೋದಲ್ಲಿ. ಇಂದು ಅಲಾಮೋ ಪ್ರವಾಸಿಗಳ ಆಕರ್ಷಣೆಯ ಕೇಂದ್ರ. ಆ ಪ್ರವಾಸಿ ಕೇಂದ್ರವನ್ನು ಪೋಷಿಸಿಕೊಂಡು ಬಂದಿರುವ ಬಗ್ಗೆ, ಅಲ್ಲಿನ ವಸ್ತು ಪ್ರದರ್ಶನ, ವಿಡಿಯೋ ಚಿತ್ರದ ಮೂಲಕ ನಡೆದ ಕಾಳಗದ ಪರಿಚಯ ಮಾಡಿಕೊಡುವ ಪ್ರಯತ್ನ, ಪ್ರವಾಸಿ ಕೇಂದ್ರದಲ್ಲಿ ಪ್ರವಾಸಿಗಳಿಗೆ ಎಲ್ಲ ಸೌಕರ್ಯಗಳು ದೊರಕುವಂತಿರಬೇಕು ಎನ್ನುವ ಪೋಷಕ ವ್ಯವಸ್ಥೆ, ಯಾವ ರಾಷ್ಟ್ರವೂ ಮಾಡಬಹುದಾದಂಥ, ಮಾಡಬೇಕಾದ ಕೆಲಸ ಎನ್ನುವವರು ವ್ಯಾಸರಾಯ ಬಲ್ಲಾಳರು.[೧] ರಾಷ್ಟ್ರದ ನಮ್ಮ ಸಾಂಸ್ಕೃತಿಕ ಅವಶೇಷಗಳ ಬಗೆಗೆ ಸರಿಯಾದ ತಿಳಿವಳಿಕೆ ನೀಡುವ, ಅವುಗಳನ್ನು ನೋಡಲು ಬರುವವರಿಗೆ ಆಗತ್ಯ ಮಾಹಿತಿಗಳನ್ನೂ ತಂಗಲು ಯೋಗ್ಯವಾದ ಎಲ್ಲ ಸೌಕರ್ಯಗಳನ್ನೂ ಒದಗಿಸುವ ಮೂಲಕ ಲಾಭಕ್ಕೆ ಬಳಸಿಕೊಳ್ಳಬಹುದಾಗಿದೆ.*

---

೧. ನೋಡಿ: ನಾನೊಬ್ಬ ಭಾರತೀಯ ಪ್ರವಾಸಿ, ಪು. ೧೫೯-೧೬೦.

* ಭಾರತ ಹಾಗೂ ಯು.ಎಸ್.ಎ. ಜೊತೆಗೂಡಿ ಭಾರತದ ಪ್ರಮುಖ ಸಾಂಸ್ಕೃತಿಕ ಅವಶೇಷಗಳನ್ನು ಸಂರಕ್ಷಿಸುವ ದಿಶೆಯಲ್ಲಿ ಒಂದು ಒಪ್ಪಂದವನ್ನು ೧೯೮೯ರಲ್ಲಿ ಮಾಡಿಕೊಂಡಿದೆ. ಈ ಒಪ್ಪಂದದಂತೆ ಸಂಯುಕ್ತ ಸಂಸ್ಥಾನದ ನ್ಯಾಷನಲ್ ಪಾರ್ಕ್ ಸರ್ವಿಸ್ ಹಾಗೂ ಭಾರತದ ಪ್ರವಾಸೋದ್ಯಮ ಇಲಾಖೆಯು ಸಂಯುಕ್ತವಾಗಿ ಐತಿಹಾಸಿಕ ಸ್ಥಳಗಳ ದಾಖಲುಮಾಡುವ ಕಾರ್ಯ ಕೈಗೊಂಡಿದೆ. ನ್ಯಾಷನಲ್ ಪಾರ್ಕ್‌ಸರ್ವಿಸ್ ಈಗಾಗಲೇ ತಾಜಮಹಲಿನ ಸುತ್ತಲಿನ ಐತಿಹಾಸಿಕ ಮಹತ್ವವುಳ್ಳ ಉದ್ಯಾನದ ಅಧ್ಯಯನ ಕೈಗೊಂಡಿದೆ. ಬೋಧ್‌ಗಯಾ ಹಾಗೂ ಸಾರನಾಥದ ಉದ್ಯಾನಗಳ ಅಭಿವೃದ್ಧಿಯ ಬಗೆಗೂ ಅಧ್ಯಯನ ನಡೆದಿದ್ದು ಅದು ಸದ್ಯದಲ್ಲೇ ಜಾರಿಗೆ ಬರಲಿದೆ. ಕುತೂಹಲದ ಸಂಗತಿಯೆಂದರೆ, ೧೯-೮೮ರಲ್ಲಿ, ಒಂದು ಅಧ್ಯಯನದ ಪ್ರಕಾರ, ೫೪ ರಾಷ್ಟ್ರಗಳಲ್ಲಿ "ಎಲ್ಲ ಮಾನವ ಜನಾಂಗಕ್ಕೆ

ನಮ್ಮ ಪರಂಪರೆ ಭವ್ಯವಾದುದು. ಅಸಂಖ್ಯ ಪ್ರಾಚೀನ ಅವಶೇಷಗಳು, ಸ್ಮಾರಕಗಳು, ದೇವಾಲಯಗಳು, ಶಿಲ್ಪಗಳು, ಸಂಗೀತ ನೃತ್ಯ ಪರಂಪರೆಗಳು ಪ್ರಪಂಚದ ಬೇರೆಲ್ಲೂ ಕಾಣದಷ್ಟು ವಿಶಿಷ್ಟವಾಗಿವೆ. ನಮ್ಮ ಭವ್ಯ ಪರಂಪರೆಗೆ ಐದು ಸಹಸ್ರ ವರ್ಷಗಳ ಗತಕಾಲದ ಇತಿಹಾಸವಿದೆ. ಸಾಂಸ್ಕೃತಿಕ ಪುನರುತ್ಥಾನ ನಮ್ಮ ಯುವಪೀಳಿಗೆಯ ಆದರ್ಶವಾಗಬೇಕು. ಯಾರೇ ಆಗಲಿ ನಮ್ಮ ಪುರಾತನ ಸ್ಮಾರಕಗಳನ್ನು ಹಾಳುಮಾಡ ಹೊರಟರೆ, ನಮ್ಮ ಪೂಜಾಸ್ಥಳಗಳಿಗೆ ಪವಿತ್ರಕ್ಷೇತ್ರಗಳಿಗೆ ಅಗೌರವ ತೋರಿಸ ಹೊರಟರೆ ಅಥವಾ ಯಾವುದೇ ರೂಪದಲ್ಲಿ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಮಲಿನಗೊಳಿಸ ಹೊರಟರೆ ಹಾಗೆ ಮಾಡಬಾರದೆಂದು ಅವರಿಗೆ ತಿಳುವಳಿಕೆ ನೀಡಬೇಕು, ಇಲ್ಲವೆ ತಡೆಯಬೇಕು, ಇಲ್ಲವೆ ಅವರ ಬಗೆಗೆ ಸಂಬಂಧಿಸಿದವರಿಗೆ ದೂರು ನೀಡಬೇಕು. ಬೆಲೆ ಕಟ್ಟಲಾಗದ ನಮ್ಮ ಭವ್ಯ ಪರಂಪರೆ ಉಳಿಯಲು ನಾವೆಲ್ಲರೂ ಮಾಡಬೇಕಾದ ಕರ್ತವ್ಯವಿದು.

# ಭಾರತದಲ್ಲಿ ಪ್ರವಾಸೋದ್ಯಮ

**ಭಾ**ರತವು ಅತ್ಯಂತ ವೈವಿಧ್ಯಮಯವಾದ ದೇಶ. ಅದು ವಿಶಾಲವಾದುದು, ಮನೋಹರವಾದುದು. ಭಾರತವು ಎರಡನೆಯ ಅತ್ಯಂತ ಜನಭರಿತ ದೇಶ, ಪ್ರಪಂಚದಲ್ಲೇ ಏಳನೆಯ ದೊಡ್ಡ ದೇಶ. ಇದು ತೀರಾ ಪ್ರಾಚೀನವಾದ ಸಾಂಸ್ಕೃತಿಕ ಪರಂಪರೆಯನ್ನೊಳಗೊಂಡಿದೆ. ಈ ದೇಶದ ಜನ ೩೨,೮೭,೭೮೨ ಚದುರ ಕಿಲೋಮೀಟರ್ ನೆಲದಲ್ಲಿ ವಾಸಿಸುತ್ತಿರುವರು. ಅದು ೧೫,೨೦೦ ಕಿ.ಮೀ. ಭೂಸರಹದ್ದನ್ನೂ, ೬೦೦೦ ಕಿ.ಮೀ. ಕರಾವಳಿ ಪ್ರದೇಶವನ್ನೂ ಹೊಂದಿದೆ. ಬಹುತರವಾದ ಅದರ ಮನೋಹರ ದೃಶ್ಯಗಳು, ಬಹುವಿಧವಾದ ವ್ಯವಸಾಯ, ಬಗೆ ಬಗೆಯ ಉದ್ಯಮಗಳು, ದೊಡ್ಡ ಪಟ್ಟಣಗಳು ಹಾಗೂ ದಟ್ಟ ಜನಸಂದಣಿಯಿರುವ ಪ್ರದೇಶಗಳು, ವಿಶಾಲ ಬಯಲು ಪ್ರದೇಶಗಳು, ಬಂದರುಗಳು, ಮನೋಹರವಾದ ಕರಾವಳಿಗಳು, ಭವ್ಯ ಪರ್ವತ ಶ್ರೇಣಿಗಳು, ಕಣ್ಮನ ತಣಿಸುವ ಕಣಿವೆಗಳು, ಸಂಪದ್ಭರಿತ ಕಾಡುಗಳು, ಭಕ್ತಿಯನ್ನು ಉದ್ದೀಪಿಸುವ ದೇವಾಲಯಗಳು, ವೈವಿಧ್ಯಮಯವಾದ ವೇಷ-ಭೂಷಣಗಳು, ಪ್ರಾಚೀನ ಅವಶೇಷಗಳು, ಶಿಲ್ಪಕಲಾ ವೈಭವ, ನಾಗರೀಕತೆಗೆ ಒಳಗಾಗದೆ ಗ್ರಾಮೀಣ ಪರಿಸರದಲ್ಲೇ ಉಳಿದುಕೊಂಡಿರುವ ಜಾನಪದ ಸಂಪತ್ತು, ಪ್ರಾಚೀನ ಕಾಲದಿಂದಲೂ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಬಂದಿರುವ ಶಾಸ್ತ್ರೀಯ ನೃತ್ಯ, ಸಂಗೀತ, ಸುಮಧುರವಾದ ದೇಶೀಯ ಭಾಷೆಗಳು, ಪ್ರಪಂಚದ ಅಗ್ರಮಾನ್ಯ ರಾಷ್ಟ್ರಗಳೊಡನೆ ಅದು ಹೊಂದಿರುವ ನಿಕಟ ಬಾಂಧವ್ಯಗಳು- ಇವೆಲ್ಲವೂ ಭಾರತದೇಶವನ್ನು ಅತ್ಯಂತ ಆಕರ್ಷಕವೂ, ಅತ್ಯಾಶ್ಚರ್ಯಕರವೂ ಆಗಿರುವಂತೆ ಮಾಡಿದೆ. ವಿದೇಶೀ ಪ್ರವಾಸಿಗರಿಗೆ ಈ ದೇಶ ಸ್ವರ್ಗ ಸಮಾನವಾಗಿದೆ.

ಭಾರತದಲ್ಲಿ ೧೯೬೦ರ ಸುಮಾರಿಗೆ ಪ್ರವಾಸೋದ್ಯಮವನ್ನು ಗಂಭೀರವಾಗಿ ಪರಿಗಣನೆ ಮಾಡಲಾಯಿತು. ಸ್ವಾತಂತ್ರ್ಯಾನಂತರ ಇದರ ಪ್ರಗತಿಯತ್ತ ಗಮನಹರಿಸಿದಂತೆ ಕಂಡುಬಂದರೂ, ಅದಾದ ಹದಿನೈದು ವರ್ಷಗಳಲ್ಲಿ ಪ್ರವಾಸೋದ್ಯಮವು ತನಗೆ ನಿಶ್ಚಿತವಾಗಿಯೂ ದಕ್ಕಬೇಕಾದ ಆದ್ಯತೆಯನ್ನು ಪಡೆಯಿತು. ಪ್ರವಾಸೋದ್ಯಮವು ತೀವ್ರವಾಗಿ ಅಭಿವೃದ್ಧಿ ಹೊಂದಲು ಈ ದೇಶದ ಪ್ರಾಚೀನ ಸಂಪದ್ಭರಿತ ಇತಿಹಾಸವೂ ಕಾರಣವಾಗಿದೆ. ಭಾರತದ ಸಾಂಸ್ಕೃತಿಕ ಪರಂಪರೆ ಭವ್ಯವಾಗಿರುವುದು ಪ್ರವಾಸಿಗಳ

ಪ್ರಧಾನ ಆಕರ್ಷಣೆಗೆ ಕಾರಣವಾಗಿದೆ. ಆದ್ದರಿಂದಲೇ ನಮ್ಮ ಪ್ರಾಚೀನ ಇತಿಹಾಸದಿಂದ ಪ್ರವಾಸೋದ್ಯಮವನ್ನು ಬೇರ್ಪಡಿಸಲಾಗುತ್ತಿಲ್ಲ. ನಮ್ಮ ಇತಿಹಾಸವು ತನ್ನ ಸ್ಮಾರಕಗಳೆಂಬ ನಿಧಿಯನ್ನು ನಮಗೆ ಉದಾರವಾಗಿ ಬಿಟ್ಟುಹೋಗಿದೆ. ಆಗ್ರಾದ ತಾಜಮಹಲ್, ದಕ್ಷಿಣದ ದೇವಾಲಯಗಳು, ಅದರಲ್ಲೂ ಮಧುರೆಯ ಮೀನಾಕ್ಷಿ ದೇವಾಲಯ, ಅಜಂತಾ ಎಲ್ಲೋರ ಗುಹಾಂತರ್ದೇವಾಲಯಗಳು, ಸೋಮನಾಥಪುರ, ಬೇಲೂರು, ಹಳೇಬೀಡು, ಐಹೊಳೆ, ಪಟ್ಟದಕಲ್ಲು -ಇವುಗಳ ಸುಂದರ ಮನಮೋಹಕ ಶಿಲ್ಪಕಲಾವೈಭವಗಳು ಮಹತ್ವದವುಗಳಾಗಿವೆ.

ಭಾರತದಲ್ಲಿ ಎರಡನೆ ಪ್ರಪಂಚ ಯುದ್ಧಕ್ಕೆ ಮೊದಲೇ ಪ್ರವಾಸೋದ್ಯಮದ ಮಹತ್ವವನ್ನು ಗುರುತಿಸಲಾಗಿದ್ದಿತು. ಆಗಿನ ಸರಕಾರದ ಪ್ರವಾಸೋದ್ಯಮ ಅಭಿವೃದ್ಧಿಯ ಕಾರ್ಯಚಟುವಟಿಕೆಗಳಿಗೆ ಯುದ್ಧವು ತಡೆಯೊಡ್ಡಿ ಪೂರ್ಣವಿರಾಮವನ್ನು ಹಾಕಿತು. ೧೯೪೫ರಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯ ಬಗೆಗಿನ ವ್ಯವಸ್ಥಿತವಾದ ಕಾರ್ಯಚಟುವಟಿಕೆಯು ಪ್ರಾರಂಭವಾಯಿತು. ಭಾರತ ಸರಕಾರವು ಆಗ ತನ್ನ ಶೈಕ್ಷಣಿಕ ಸಲಹೆಗಾರರಾಗಿದ್ದ ಸರ್ ಜಾನ್ ಸಾರ್ಜೆಂಟ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ದೇಶದ ಪ್ರವಾಸೋದ್ಯಮದ ಹಾದಿಯನ್ನು ಅಭಿವೃದ್ಧಿಗೊಳಿಸುವ ಸಾಧ್ಯತೆಗಳನ್ನು ಸರ್ವೆ ಮಾಡುವುದು ಈ ಸಮಿತಿಯ ಪ್ರಧಾನ ಉದ್ದೇಶವಾಗಿದ್ದಿತು. ಇದು ೧೯೬೪ರ ಅಕ್ಟೋಬರ್‌ನಲ್ಲಿ ತನ್ನ ಮಧ್ಯಕಾಲೀನ (ತಾತ್ಕಾಲಿಕ) ವರದಿಯನ್ನು ಸಲ್ಲಿಸಿತು. ಇದು ತನ್ನ ವರದಿಯಲ್ಲಿ ಭಾರತದ ಹಿತದೃಷ್ಟಿಯಿಂದ ಪ್ರವಾಸೋದ್ಯಮದ ಒಳ ಹಾಗೂ ಹೊರಗಿನ ಹಾದಿಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಲು ಎಲ್ಲ ಬಗೆಯ ವಿಧಾನಗಳನ್ನು ಅನುಸರಿಸಬೇಕೆಂದು ಸರ್ವಾನುಮತದ ಅಭಿಪ್ರಾಯ ವ್ಯಕ್ತಪಡಿಸಿತು.

ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಭಾರತದ ಆರ್ಥಿಕ ಆದಾಯವು ಬಹುದೊಡ್ಡ ಪ್ರಮಾಣದಲ್ಲಿ ಹೆಚ್ಚುವುದು; ಪ್ರವಾಸೋದ್ಯಮವನ್ನು ಯೋಗ್ಯರೀತಿಯಲ್ಲಿ ವ್ಯವಸ್ಥೆಗೊಳಿಸಿದರೆ ಭಾರತಕ್ಕೆ ಭೇಟಿ ನೀಡುವ ವಿದೇಶೀ ಪ್ರವಾಸಿಗರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚುವುದು; ಉದ್ಯಮಕ್ಕೆ ಎಲ್ಲ ದೃಷ್ಟಿಯಿಂದಲೂ ಲಾಭವಾಗುವುದು ಎಂದು ಈ ಸಮಿತಿಯು ಅಭಿಪ್ರಾಯಪಟ್ಟಿತು. ಈ ಸಮಿತಿಯ ಪ್ರಮುಖ ಶಿಫಾರಸ್ಸೆಂದರೆ, ಸರಕಾರ ಹಾಗೂ ಖಾಸಗಿ ಪ್ರತಿನಿಧಿಗಳು, ಸಮಪ್ರಮಾಣದಲ್ಲಿರುವ ಪ್ರತ್ಯೇಕ ಸಂಸ್ಥೆಯೊಂದನ್ನು ರಚಿಸಬೇಕೆಂಬುದು. ಸಮಿತಿಯು ಪ್ರವಾಸಿಗರ ಸಂಚಾರಕ್ಕೆ ಉತ್ತೇಜನ ನೀಡುವ ಹಾಗೂ ಪ್ರವಾಸೋದ್ಯಮದ ಅಭಿವೃದ್ಧಿಯ ಪ್ರಶ್ನೆಯು ರಾಷ್ಟ್ರೀಯ ಮಹತ್ವದ್ದಾಗಿದ್ದು ಇದಕ್ಕೆ ಪೂರ್ಣ ಗಮನ ನೀಡಲು ಪ್ರತ್ಯೇಕ ಸಂಸ್ಥೆಯೊಂದರ ಅಗತ್ಯವಿದ್ದು, ಅದು ಈ ಕೆಳಗಿನ ವಿಷಯಗಳ ಕಡೆ ಆದ್ಯತೆ ನೀಡಬೇಕೆಂದು ಸಲಹೆ ಮಾಡಿತು.

೧. ಭಾರತ ಹಾಗೂ ಹೊರದೇಶಗಳಲ್ಲಿ ಪ್ರಚಾರ

೨. ಯೋಗ್ಯ ಪ್ರವಾಸಿ ಸಾಹಿತ್ಯ, ಅಂದರೆ - ಮಾರ್ಗದರ್ಶಿ ಕೈಪಿಡಿಗಳು, ಫೋಲ್ಡರ್‌ಗಳು, ಪೋಸ್ಟರುಗಳು ಇತ್ಯಾದಿ.

೩. ಮಾರ್ಗದರ್ಶಿಗಳಿಗೆ ತರಬೇತಿಯ ಅವಕಾಶ

೪. ಪ್ರವಾಸಿಗಳಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸುವ- ಕೈಗಾರಿಕೆ ಹಾಗೂ ವಾಣಿಜ್ಯಗಳಿಗೆ ಸಂಬಂಧಿಸಿದ ವಿಷಯಗಳೂ ಸೇರಿದಂತೆ- ಸರಕಾರದ ಇತರ ವಿಭಾಗಗಳೊಡನೆ ಸಂಪರ್ಕ

೫. ಪ್ರವಾಸಿಗಳಿಗೆ ಅಗತ್ಯವಿರುವ ಎಲ್ಲ ಏರ್ಪಾಡು ಮಾಡುವ ಪ್ರವಾಸಿ ಸಂಘ ಸಂಸ್ಥೆಗಳೊಡನೆ ಸಂಪರ್ಕ

೬. ಹೋಟೆಲ್ ಹಾಗೂ ಊಟೋಪಚಾರಗಳನ್ನು ಒದಗಿಸುವ ಸಂಸ್ಥೆಗಳ ಜೊತೆ ಸಂಪರ್ಕ

೭. ಪ್ರವಾಸಿಗರ ಅಂಕಿ ಅಂಶಗಳ ಸಂಗ್ರಹಣೆ.

**ಸಮಿತಿಯ ಮಾಡಿದ ಹಲವು ಶಿಫಾರಸುಗಳೆಂದರೆ-**

ಅ. ವಿಮಾನ ಹಾಗೂ ರೈಲು ಸೇವೆಯಲ್ಲಿ ಅನ್ಯೋನ್ಯ ಸಂಬಂಧ-ವಿಮಾನ ಹಾಗೂ ರೈಲು ಪ್ರಯಾಣ ಪ್ರವಾಸಿಗರಿಗೆ ಆದಷ್ಟು ಸುಖಕರವಾಗಿಸುವ ದೃಷ್ಟಿಯಿಂದ.

ಆ. ವಿದೇಶೀ ಪ್ರವಾಸಿಗರ ಅನುಕೂಲಕ್ಕಾಗಿ ಅಂತರ್‌ದೇಶೀಯ ಗುಣಮಟ್ಟದ ಮೊದಲ ದರ್ಜೆಯ ಹೋಟೆಲುಗಳ ಸರಣಿ.

ಇ. ಲಂಡನ್ ಮತ್ತು ನ್ಯೂಯಾರ್ಕ್ ಹಾಗೂ ಇತರೆ ದೇಶಗಳ ರಾಜಧಾನಿಗಳಲ್ಲಿ ಪ್ರಚಾರ ಕಛೇರಿಗಳನ್ನು ತೆರೆಯುವುದು.

ಸಮಿತಿಯು ಮಾಡಿದ ಶಿಫಾರಸುಗಳು ಅಮೂಲ್ಯವಾಗಿದ್ದು, ಅವು ನಿಸ್ಸಂಶಯವಾಗಿ ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗುವವು. ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಪ್ರವಾಸೋದ್ಯಮವು ಪ್ರಗತಿಪರವಾಗಿ ಮುನ್ನಡೆದಿದೆ. ಸ್ವಾತಂತ್ರ್ಯಾನಂತರ, ದೇಶದಲ್ಲಿನ ಪ್ರವಾಸಿ ಸಂಸ್ಥೆಗಳಿಗೆ ಅವು ಮಾರ್ಗದರ್ಶಿ ಸೂತ್ರಗಳನ್ನು ಕಲ್ಪಿಸಿಕೊಟ್ಟವು ಎಂದರೆ ತಪ್ಪಾಗಲಾರದು.

ಸಾರ್ಜೆಂಟ್ ಸಮಿತಿಯು ತನ್ನ ೧೯೪೬ರ ವರದಿಯಲ್ಲಿ ಪ್ರವಾಸಿ ಸಂಸ್ಥೆಯೊಂದನ್ನು ಪ್ರತ್ಯೇಕವಾಗಿ ಕೇಂದ್ರದಲ್ಲಿ ಸ್ಥಾಪಿಸಿ ಅದರ ಶಾಖೆಗಳನ್ನು ಮುಖ್ಯ ಪಟ್ಟಣಗಳಾದ ಮುಂಬಯಿ, ದೆಹಲಿ, ಕಲ್ಕತ್ತಾ ಹಾಗೂ ಮದ್ರಾಸ್‌ಗಳಲ್ಲಿ ಪ್ರಾರಂಭಿಸ

ಬೇಕೆಂದು ಶಿಫಾರಸು ಮಾಡಿತು. ಆ ಸಮಿತಿಯು ಪ್ರವಾಸಿ ಪ್ರಚಾರ ವಿಭಾಗಗಳನ್ನು ಭಾರತೀಯ ರಾಯಭಾರಿ ಕಛೇರಿಯಲ್ಲಿ ಹಾಗೂ ಪ್ರಪಂಚದಲ್ಲಿನ ಎಲ್ಲಾ ರಾಯಭಾರಿ ಕಛೇರಿಗಳಲ್ಲಿ ತೆರೆಯಬೇಕೆಂದು ಶಿಫಾರಸು ಮಾಡಿತು. ಇದನ್ನನುಸರಿಸಿ ತಾತ್ಕಾಲಿಕ ಪ್ರವಾಸಿ ಸಂಚಾರಿ ಸಮಿತಿಯೊಂದನ್ನು ೧೯೪೮ರಲ್ಲಿ ನೇಮಕ ಮಾಡಲಾಯಿತು. ಈ ಸಮಿತಿಗೆ ಪ್ರವಾಸಿ ಸಂಚಾರವನ್ನು ಅಭಿವೃದ್ಧಿಪಡಿಸಲು ಅಗತ್ಯವಿದ್ದ ಸಲಹೆ ಸೂಚನೆಗಳನ್ನು ನೀಡುವ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು.

ಸಾರ್ಜೆಂಟ್ ಸಮಿತಿಯ ಶಿಫಾರಸಿನಂತೆ ೧೯೪೯ರಲ್ಲಿ ಸಾರಿಗೆ ಸಚಿವಾಲಯದಲ್ಲಿ ಪ್ರತ್ಯೇಕವಾದ ಪ್ರವಾಸಿ ಸಂಚಾರಿ ಶಾಖೆಯನ್ನು (Tourist Traffic Branch) ಭಾರತದಲ್ಲಿ ಪ್ರವಾಸಿ ಸಂಚಾರವನ್ನು ಅಭಿವೃದ್ಧಿಪಡಿಸುವ ಸಲುವಾಗಿ ತೆರೆಯಲಾಯತು. ಮುಂದಣ ವರ್ಷಗಳಲ್ಲಿ ಪ್ರವಾಸಿ ಸಂಚಾರಿ ಶಾಖೆಗಳು ವಿಸ್ತರಣೆಗೊಂಡದ್ದನ್ನೂ, ಅವು ಬೇರೆ ಬೇರೆ ದಿಕ್ಕಿನಲ್ಲಿ ಕಾರ್ಯನಿರ್ವಹಣೆ ಮಾಡಿದ್ದನ್ನೂ ನಾವು ಕಾಣುವೆವು. ೧೯೫೫-೫೬ರಲ್ಲಿ ಪ್ರವಾಸಿ ಸಂಚಾರಿ ವಿಭಾಗವು ಗಮನಾರ್ಹವಾಗಿ ವಿಸ್ತರಣೆಗೊಂಡು ಒಂದು ಶಾಖೆ ನಾಲ್ಕು ಶಾಖೆಗಳಾಗಿ- ಬೆಳೆದುದನ್ನು ನೋಡುವೆವು. ಈ ನಾಲ್ಕು ಶಾಖೆಗಳು ನೋಡಿಕೊಳ್ಳುತ್ತಿದ್ದ ಹಲವಾರು ವಿಷಯಗಳೆಂದರೆ-

೧. ಪ್ರವಾಸಿ ಸಂಚಾರಿ ವಿಭಾಗ ೨. ಆಡಳಿತ ವಿಭಾಗ ೩. ಪ್ರವಾಸಿ ಪ್ರಚಾರ ವಿಭಾಗ. ೪. ವಿತರಣಾ ವಿಭಾಗ.

ಪ್ರವಾಸಿ ಸಂಚಾರಿ ವಿಭಾಗವು ಬಹುಸಂಖ್ಯಾತ ಸಂಚಾರೀ ಉದ್ಯಮ ವಿಷಯಗಳನ್ನು ನೋಡಿಕೊಳ್ಳಬೇಕಾಗಿದ್ದಿತು. ಇದರ ಜೊತೆಗೆ, ಒಳ ಹಾಗೂ ಹೊರಗಿನ ಪ್ರವಾಸಿ ಸಂಚಾರಿ ಪ್ರಗತಿ, ಕಾನೂನು ವಿಷಯಗಳು, ಪಂಚವಾರ್ಷಿಕ ಯೋಜನೆಗಳು, ಪ್ರವಾಸಿ ಸಂಸ್ಥೆಗಳು, ಹೋಟೆಲು ಹಾಗೂ ವಿಶ್ರಾಂತಿ ಧಾಮಗಳು, ಪ್ರವಾಸಿ ಅಂಕಿ ಸಂಖ್ಯೆಗಳು ಮತ್ತು ಮಾಸಿಕ ವರದಿಗಳು -ಇವುಗಳನ್ನೂ ನೋಡಿಕೊಳ್ಳಬೇಕಾಗಿದ್ದಿತು. ಪ್ರವಾಸಿ ಆಡಳಿತ ವಿಭಾಗವು ಸ್ವದೇಶ ಹಾಗೂ ವಿದೇಶಿಗಳಲ್ಲಿರುವ ಪ್ರವಾಸಿ ಕಛೇರಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕವಾದ ಕೆಲಸಗಳನ್ನು ನಿರ್ವಹಿಸುವುದು, ಆಯವ್ಯಯ ಹಣಕಾಸಿನ ಅಧಿಕಾರವನ್ನು ಪ್ರವಾಸಿ ಕಛೇರಿಗಳಿಗೆ ವಹಿಸಿಕೊಡುವುದು, ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಪ್ರವಾಸಿ ಕಛೇರಿಗಳನ್ನು ಹೊಸದಾಗಿ ತೆರೆಯುವುದು, ನಿಯತ ಕಾಲಿಕವಾಗಿ ಪ್ರವಾಸಿ ಕಛೇರಿಗಳನ್ನು ತಪಾಸಣೆ ಮಾಡುವುದು -ಈ ಕಾರ್ಯಗಳನ್ನು ಮಾಡುತ್ತದೆ. ಪ್ರವಾಸಿ ಪ್ರಚಾರ ವಿಭಾಗವು ಪ್ರವಾಸಿ ಸಾಹಿತ್ಯವನ್ನು, ಅಂದರೆ, ಕಿರು ಹೊತ್ತಿಗೆಗಳನ್ನು, ಮಾರ್ಗದರ್ಶಿ ಕೈಪಿಡಿಗಳನ್ನು ಹಾಗೂ ಪೋಸ್ಟರ್‌ಗಳನ್ನು ಪ್ರಕಟಿಸುವುದು, ಜಾಹೀರಾತು ಕೊಡುವುದು ಮತ್ತು ವಸ್ತುಪ್ರದರ್ಶನ ಹಾಗೂ ಕೂಟಗಳಲ್ಲಿ

ಭಾಗವಹಿಸುವುದು -ಈ ಕಾರ್ಯಗಳನ್ನು ನಿರ್ವಹಿಸುತ್ತದೆ. ವಿತರಣಾ ವಿಭಾಗವು ಪ್ರವಾಸಿ ಪ್ರಚಾರ ಸಾಹಿತ್ಯವನ್ನು ಭಾರತ ಹಾಗೂ ವಿದೇಶಗಳಲ್ಲಿ ವಿತರಣೆ ಮಾಡುವ ಕೆಲಸವನ್ನು ನಿರ್ವಹಿಸುತ್ತದೆ.

ಮೇಲೆ ಹೇಳಲಾದ ಈ ನಾಲ್ಕು ಶಾಖೆಗಳು ಓರ್ವ ಉಪಕಾರ್ಯದರ್ಶಿ ಹಾಗೂ ಈರ್ವರು ಅಧೀನ ಕಾರ್ಯದರ್ಶಿಗಳ ಕೈಕೆಳಗೆ ಕಾರ್ಯನಿರ್ವಹಿಸುತ್ತಿದ್ದುವು. ಈ ಘಟ್ಟದಲ್ಲಿ ಪ್ರವಾಸಿ ಮಹಾನಿರ್ದೇಶಕರ (Directorate General of Tourism) ಹುದ್ದೆಯನ್ನು ಸೃಷ್ಟಿಸುವ ಸಲಹೆಯೊಂದು ಬಂದಿತು. ಈ ಹುದ್ದೆಯನ್ನು ಸೃಷ್ಟಿಸಲು ಒದಗಿ ಬಂದ ಏಕೈಕ ಕಾರಣವೆಂದರೆ, ನಿಯಮಗಳನ್ನು ಮಾಡುವುದು (Policy Making) ಹಾಗೂ ಆಡಳಿತಾತ್ಮಕ ಚಟುವಟಿಕೆಗಳು. ಇವು ಸೆಕ್ರೆಟರಿಯೇಟ್‌ನ ಪ್ರವಾಸಿ ವಿಭಾಗದಲ್ಲಿ ಪ್ರಚಲಿತವಿದ್ದುವು. ಇವನ್ನು ಬೇರ್ಪಡಿಸುವುದೇ ಈ ಹುದ್ದೆಯ ಸೃಷ್ಟಿಯ ಪ್ರಮುಖ ಉದ್ದೇಶ. ಏನೇ ಆಗಲಿ, ಈ ಸಲಹೆ ಕಾರ್ಯರೂಪಕ್ಕೆ ಬರಲಿಲ್ಲ. ಏಕೆಂದರೆ, ಆಗ ಪ್ರವಾಸೋದ್ಯಮವು ಇವನ್ನು ಬೇರ್ಪಡಿಸುವಷ್ಟು ಪ್ರಮಾಣದಲ್ಲಿ ಬೃಹತ್ತಾಗಿ ಬೆಳೆದಿರಲಿಲ್ಲ.

ಪ್ರವಾಸೋದ್ಯಮವು ಈಗ ಬಹು ದೊಡ್ಡ 'ಉದ್ಯಮ'. ಜನರಲ್ಲಿ ಹಣ ಹಾಗೂ ವಿರಾಮ ಹೆಚ್ಚು ಹೆಚ್ಚಾದಂತೆ ಪ್ರವಾಸವೂ ಅಧಿಕವಾಗತೊಡಗುವುದು. ಪ್ರವಾಸಕ್ಕಾಗಿ ಹಾಗೂ ಇನ್ನಿತರ ಖರ್ಚುಗಳಿಗಾಗಿ ಮೀಸಲಿಟ್ಟ ಹಣವನ್ನು ವಿನಿಯೋಗದ ಆದಾಯ (disposable income)ವೆಂದು ಕರೆಯಲಾಗುವುದು. ಜನರ ಜೀವನಮಟ್ಟದಂತೆಯೇ ಅವರ ಶಿಕ್ಷಣಮಟ್ಟವೂ ಹೆಚ್ಚಿದಂತೆ ಪ್ರವಾಸೋದ್ಯಮವೂ ವೃದ್ಧಿಗೊಳ್ಳುತ್ತದೆ. ಭಾರತದಲ್ಲಿ ೧೫೦ ಮಿಲಿಯ ಜನರು ಮಧ್ಯಮವರ್ಗದವರೆಂದು ಗುರುತಿಸಲಾಗಿದೆ. (ಇದು ಜಪಾನ್‌ನ ಒಟ್ಟು ಜನಸಂಖ್ಯೆಗಿಂತ ಹೆಚ್ಚಿನದು.) ಬಹಳಷ್ಟು ಜನರಿಗೆ ತಮ್ಮ ದೇಶದೊಳಗೇ ಸಂಚರಿಸಲು ಸಾಧ್ಯವಿದೆ. ಕೆಲವರಿಗೆ ವಿದೇಶಗಳಿಗೆ ಹೋಗಲೂ ಸಾಧ್ಯವಿದೆ. ಭಾರತ ಸರಕಾರ ಈ ಕಾರಣದಿಂದ ವಿದೇಶೀಯರಿಗೆ ಹಾಗೂ ಭಾರತೀಯರಿಗೆ ಅಷ್ಟೇ ಅಲ್ಲದೆ ಕಡಿಮೆ ಆದಾಯದ ದೇಶೀಯ ಪ್ರವಾಸಿಗರಿಗೆ (demostic tourists) ಎಟುಕಬಹುದಾದ ಹೋಟೆಲ್‌ಗಳ ನಿರ್ಮಾಣದಲ್ಲಿ ನೆರವಾಗುತ್ತಿದೆ. ಒಳ್ಳೆಯ ಸಾರಿಗೆ, ತರಬೇತಿ ಪಡೆದ ಪ್ರವಾಸಿ ಮಾರ್ಗದರ್ಶಿಗಳನ್ನು ಒದಗಿಸುತ್ತಿದೆ. ಪ್ರವಾಸಿಗರಿಗೆ ಬೇಕಾದ ಅಗತ್ಯ ಮಾಹಿತಿಗಳನ್ನು ನೀಡಲು ಪ್ರವಾಸಿ ಕಛೇರಿ (tourist office)ಗಳನ್ನು ತೆರೆದಿದೆ. ರಾಜ್ಯಸರಕಾರಗಳೂ ಈ ದಿಶೆಯಲ್ಲಿ ಆಸಕ್ತಿ ತೋರಿವೆ. ದೇಶೀಯ ಪ್ರವಾಸಿಗಳ ಸೇವೆಗಾಗಿ ಅವು ಪ್ರವಾಸಿ ಕಛೇರಿಗಳನ್ನು ತೆರೆದಿವೆ. ಅವು ತಮ್ಮ ಆರ್ಥಿಕ ಶಕ್ತ್ಯಾನುಸಾರ ದೇಶೀಯ ಪ್ರವಾಸಿಗರಿಗಾಗಿ ಪರ್ಯಾಯ ವ್ಯವಸ್ಥೆ ಮಾಡಿವೆ.

## ಅತುಲ್ಯ ಭಾರತ (Incredible India)

ಕೇಂದ್ರ ಸರಕಾರದ ಪ್ರವಾಸೋದ್ಯಮ ಮಂತ್ರಾಲಯವು ಪ್ರವಾಸೋದ್ಯಮದ ಮೂಲಕ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುವುದಕ್ಕೆ ವಿದೇಶೀ ಪ್ರವಾಸಿಗರನ್ನು ವಿಶೇಷವಾಗಿ ಸೆಳೆಯಲು ಪ್ರಯತ್ನಿಸಿದೆ. ಅದು ಅದ್ದೂರಿಯ ಪ್ರಚಾರದ ಮೂಲಕವೂ ಸಾಧ್ಯವೆಂಬುದನ್ನು ಕಂಡುಕೊಂಡಿದೆ. ಭಾರತದ ಬೇರೆ ಬೇರೆ ಭೂಭಾಗಗಳ ಪ್ರಾಣಿಸಂಪತ್ತು, ಸಸ್ಯಸಂಪತ್ತು, ಪ್ರಕೃತಿ ಸಂಪತ್ತು, ಕಲಾಸಂಪತ್ತುಗಳ ಪರಿಚಯದ ಜೊತೆಗೆ ಅವುಗಳ ವೈವಿಧ್ಯಮಯವಾದ ಶ್ರೀಮಂತ ಸಂಸ್ಕೃತಿ, ಪರಂಪರೆ ಹಾಗೂ ಭವ್ಯ ಇತಿಹಾಸವನ್ನು ಪರಿಚಯಿಸುವ ಪ್ರಯತ್ನವನ್ನೂ ಹಮ್ಮಿಕೊಂಡಿದೆ. ಸಮೃದ್ಧ ಭಾರತದ ಜೊತೆಗೆ ಅದು ಸಂಪನ್ನ ಭಾರತವೂ ಆಗಿದೆ ಎಂಬುದನ್ನು ಅದು ಬಿಂಬಿಸುತ್ತಿದೆ. ಈ ದೇಶದ ಮಣ್ಣಿನಲ್ಲಿ ಸಮನ್ವಯದ ಬಾಳುವೆಯನ್ನು ಆಚರಣೆಗೆ ತರುವ ಮೂಲಕ ಜನರ ಅಂತರಂಗದ ಶ್ರೀಮಂತಿಕೆಗೆ ಹೆಚ್ಚು ಒತ್ತುಕೊಡಲಾಯಿತು. ಈ ನೆಲದ ಜನರ ಬದುಕಿನಲ್ಲಿ 'ಅನೇಕತೆಯಲ್ಲಿ ಏಕತೆ' ಎಂಬ ಜೀವನ ಸಿದ್ಧಾಂತವನ್ನು ಸಮನ್ವಯ-ಗೊಳಿಸಲಾಯಿತು. ದೇಶದ ಬೇರೆ ಬೇರೆ ಭಾಗಗಳ ವೈವಿಧ್ಯಮಯವಾದ ಬದುಕು, ಆಹಾರ, ಆಚಾರ, ನಂಬುಗೆ, ಪದ್ಧತಿಗಳ ಪರಿಚಯ ಮಾಡಿಕೊಡುವ ಮೂಲಕ ಭಾರತದ ಬಹುಮುಖೀ ಸಾಂಸ್ಕೃತಿಕ ಶ್ರೀಮಂತಿಕೆಯ ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನವನ್ನು ಕೇಂದ್ರ ಸರಕಾರದ ಪ್ರವಾಸೋದ್ಯಮ ಮಂತ್ರಾಲಯವು ತನ್ನ ಗುರಿಯನ್ನಾಗಿ ಹೊಂದಿದೆ. ಈ ವಿಶಾಲ ಹಿನ್ನೆಲೆಯಲ್ಲಿ ಅದು 'Incredible India' ಎಂಬುದನ್ನು ತನ್ನ ಸಂದೇಶ ವಾಕ್ಯವಾಗಿ ಸ್ವೀಕರಿಸಿದೆ. ಅದು ಆ ಶೀರ್ಷಿಕೆಯಲ್ಲೆ ಒಂದು ಭವ್ಯವಾದ ಮಾಸಿಕವನ್ನು ಇಂಗ್ಲಿಷ್‌ನಲ್ಲಿ ತರುತ್ತಿದೆ. ೧/೪ ಡೆಮಿ ಆಕಾರದ ಈ ಮಾಸಿಕ ಆರ್ಟ್ ಪೇಪರ್‌ನಲ್ಲಿ ಮುದ್ರಿತವಾಗುತ್ತಿದ್ದು, ನಯನ ಮನೋಹರ ವರ್ಣಚಿತ್ರಗಳ ಮೂಲಕ ಭಾರತದ ಶ್ರೀಮಂತ ಪರಂಪರೆಯನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿದೆ. 'Incredible India' (ನಂಬಲಸಾಧ್ಯವಾದ ಭಾರತ, ಅತುಲ್ಯ ಭಾರತ ಅಥವಾ ಆಶ್ಚರ್ಯಕರವಾದ ಭಾರತ) ಎಂಬುದನ್ನು ಸಾಂಕೇತಿಕ(Symbol)ವಾಗಿ ಬಳಸಿಕೊಂಡು ಆ ಹೆಸರಿನ ಮಾಲಿಕೆಯಲ್ಲಿ ತಮಿಳುನಾಡು, ಆಂಧ್ರಪ್ರದೇಶ, ಕೇರಳ (ಮುನ್ನಾರ್, ತೇಕ್ಕಡಿ / ಪೆರಿಯಾರ್), ಕರ್ನಾಟಕ -ಹೀಗೆ ಬೇರೆ ಬೇರೆ ಪ್ರದೇಶಗಳ ಪ್ರವಾಸೀ ಆಕರ್ಷಣೆಯ ವಿವರಗಳನ್ನು ೧/೮ ಡೆಮಿ ಆಕಾರದ ಕಿರು ಪ್ರಚಾರ ಪತ್ರಿಕೆಗಳ ಮೂಲಕ ಕೊಟ್ಟಿದೆ. Incredible India ಮಾಲಿಕೆಯಲ್ಲಿ ಹೈದರಾಬಾದ್‌ನ ಪ್ರವಾಸಿ ತಾಣಗಳ ವರ್ಣಚಿತ್ರಗಳನ್ನು ಕೊಟ್ಟು ಅಲ್ಲಿ ನೋಡಬೇಕಾದ ಸ್ಥಳಗಳ ಬಗೆಗೆ ಒಂದು ಆಕರ್ಷಕ ಫೋಲ್ಡರ್‌ನ್ನು (ಇಂಗ್ಲಿಷ್‌ನಲ್ಲಿ) ಹೊರತಂದಿದೆ. ಆಂಧ್ರಪ್ರದೇಶದ ತಿರುಮಲ ತಿರುಪತಿ

ದೇವಸ್ಥಾನದ ಭಗೆಗೆ ವಿಸ್ತೃತ ಪ್ರವಾಸೀ ಮಾಹಿತಿ ಕೊಡುವ ಒಂದು ಫೋಲ್ಡರ್‌ನ್ನು (ಇಂಗ್ಲಿಷ್‌ನಲ್ಲಿ), ಕರ್ನಾಟಕದ ಬೇಲೂರು, ಹಳೇಬೀಡಿನ ಬಗ್ಗೆ ಒಂದು ಫೋಲ್ಡರ್‌ನ್ನು (ಇಂಗ್ಲಿಷ್‌ನಲ್ಲಿ) ಪ್ರಕಟಿಸಿದೆ. ಹಾಗೆಯೇ ತಮಿಳುನಾಡಿನ ಮದುರೈ ತಿರುಚಿನಾಪಳ್ಳಿ ರಾಮೇಶ್ವರಂ ಕುರಿತಂತೆ ಪ್ರವಾಸೀ ಮಾಹಿತಿ ಕೊಡುವ ಒಂದು ಫೋಲ್ಡರ್‌ನ್ನು (ಇಂಗ್ಲಿಷ್‌ನಲ್ಲಿ) ಹೊರತಂದಿದೆ.

ಭಾರತದ ನೃತ್ಯ ಮತ್ತು ಸಂಗೀತ ಪರಂಪರೆಯನ್ನು ಪರಿಚಯಿಸುವ 'Sa-re-ga-ma-pa-da-ne' ಎಂಬ ಶೀರ್ಷಿಕೆಯ ಪ್ರಚಾರ ಸಾಮಗ್ರಿಯನ್ನು ಹಾಗೂ 'Museum & Art Galleries' ಎಂಬ ಶೀರ್ಷಿಕೆಯ ಇನ್ನೊಂದು ಪ್ರಚಾರ ಸಾಮಗ್ರಿಯನ್ನು ಆಕರ್ಷಕ ಬಹುವರ್ಣ ಮುದ್ರಣದಲ್ಲಿ ೧/೪ ಕ್ರೌನ್ ಆಕಾರದ ತಲಾ ಒಂದೊಂದು ಪುಟದಲ್ಲಿ ಹೊರತಂದಿದೆ. ಭಾರತದಲ್ಲಿನ ಬೌದ್ಧಧರ್ಮದ ಪವಿತ್ರ ಸ್ಥಾನಗಳ ಪರಿಚಯ ಮಾಡಿಕೊಡುವ 'Walk with the Buddha' ಎಂಬ ಸೊಗಸಾದ ವರ್ಣಚಿತ್ರಗಳಿಂದ ಕೂಡಿದ ಫೋಲ್ಡರ್ (ಇಂಗ್ಲಿಷ್‌ನಲ್ಲಿ) ಹೊರತಂದಿದೆ. ಹಿಂದಿಯಲ್ಲಿ ಅತುಲ್ಯ! ಭಾರತ್ (Incredible India) ಮಾಲಿಕೆಯಲ್ಲಿ ಭಾರತದ ಭವ್ಯ ಶ್ರೀಮಂತಿಕೆಯನ್ನು ಪರಿಚಯಿಸುವ 'ಭಾರತೀಯ ಬೌದ್ಧಿಕ ಶಕ್ತಿ ಕೆ ಸ್ಮಾರಕ್ ತಥಾ ನಯೆ ಪ್ರವಾಸೋಂ ಕೆ ಅಂತರ್ಗತ್ ಉನ್‌ಕಾ ಪುನರುದ್ಧಾರ್' ಎಂಬ ಕಿರುಹೊತ್ತಗೆಯನ್ನು (೨೦೦೪) ಹೊರತಂದಿದೆ. ಇದರಲ್ಲಿನ ಸೊಗಸಾದ ಚಿತ್ರಗಳು-ವಿವರಗಳು ಭಾರತದ ಭವ್ಯಪರಂಪರೆಯನ್ನು ಚೆನ್ನಾಗಿ ಪರಿಚಯಿಸುತ್ತವೆ. ಕೇಂದ್ರ ಸರಕಾರದ ಪ್ರವಾಸೋದ್ಯಮ ಮಂತ್ರಾಲಯವು ವಿದೇಶೀಯ ಪ್ರವಾಸಿಗರಿಗಾಗಿ ವಿದೇಶಗಳಲ್ಲಿ ಭಾರತವನ್ನು ಕುರಿತು ಪ್ರಚಾರ ಮಾಡುತ್ತಿರುವ ಟ್ರಾವಲ್ ಏಜೆಂಟರುಗಳು ಹಾಗೂ ಟ್ರಾವಲ್ ಆಪರೇಟರ್‌ಗಳ ವಿವರಗಳನ್ನು 'We take you places' ಎಂಬ ಕಿರುಹೊತ್ತಗೆಯಲ್ಲಿ ಹೊರತಂದಿರುವರು.

ತಮಿಳುನಾಡು ಪ್ರವಾಸೋದ್ಯಮದ ಮುಖ್ಯ ಆಕರ್ಷಣೆಯಾದ ವನ್ಯಜೀವಿ ಪ್ರಪಂಚದ ಬಗ್ಗೆ (ಇಂಗ್ಲಿಷ್‌ನಲ್ಲಿ) 'Rendezvous with the Nature - the wild Life' ಎಂಬ ವರ್ಣಚಿತ್ರಗಳಿಂದ ಕೂಡಿದ ಪರಿಚಯಾತ್ಮಕ ಕಿರುಹೊತ್ತಗೆಯನ್ನು ತಮಿಳುನಾಡು ಪ್ರವಾಸೋದ್ಯಮ ಇಲಾಖೆ ಪ್ರಕಟಿಸಿದೆ. ಹಾಗೆಯೇ 'enchanting tamil nadu' ಎಂಬ ಪ್ರಚಾರ ಕಿರುಹೊತ್ತಗೆಯನ್ನು (ಇಂಗ್ಲಿಷ್‌ನಲ್ಲಿ) ಹೊರತಂದಿದೆ.

# ಕರ್ನಾಟಕದಲ್ಲಿ ಪ್ರವಾಸೋದ್ಯಮ

**ಕ**ರ್ನಾಟಕವು ಚೆಲುವ ಕನ್ನಡನಾಡು. ಸು. ೧,೯೧,೭೯೧ ಚ.ಕಿ.ಮೀ ಪ್ರದೇಶವನ್ನು ಒಳಗೊಂಡಿರುವ ಇದು ಇಂಗ್ಲೆಂಡ್ ಹಾಗೂ ಸ್ಕಾಟ್‌ಲೆಂಡ್‌ಗಳನ್ನು ಒಟ್ಟಿಗೆ ಸೇರಿಸಿದರೆ ಎಷ್ಟು ವಿಸ್ತೀರ್ಣವಾಗುತ್ತದೆಯೋ ಅದಕ್ಕೆ ಸಮಾನವಾದ ವ್ಯಾಪ್ತಿಯನ್ನೊಳಗೊಂಡಿದೆ. ಪೋರ್ಚುಗಲ್ ಅಥವಾ ಗ್ರೀಸ್ ದೇಶಗಳ ಎರಡರಷ್ಟು ಭೂವ್ಯಾಪ್ತಿ ಇದಕ್ಕಿದೆ. ಮತ್ತೂ ಹೋಲಿಸುವುದಾದರೆ ಡೆನ್‌ಮಾರ್ಕ್‌ಗಿಂತ ಐದು ಪಟ್ಟು ಹಾಲೆಂಡ್‌ಗಿಂತ ಆರುಪಟ್ಟು ಗಾತ್ರದಲ್ಲಿ ಹೆಚ್ಚಿನದಿದೆ. ಇದರ ಜನಸಂಖ್ಯೆ ಸು. ೩.೫ ಕೋಟಿ. ಮುಗಿಲೆತ್ತರದ ಬೆಟ್ಟ ಗುಡ್ಡಗಳು, ಹಸಿರು ಮುಕ್ಕಳಿಸುವ ಸಸ್ಯ ಶ್ಯಾಮಲೆ, ತುಂಬಿ ಹರಿಯುವ ನದಿಗಳು, ಕಣ್ಮನ ಸೆಳೆಯುವ ವೃಕ್ಷ ಸಂಪದದಿಂ ಕೂಡಿರುವ ಅರಣ್ಯಗಳು -ಹೀಗೆ ಇದರ ನೈಸರ್ಗಿಕ ಚೆಲುವು ಅಸಾಧಾರಣವಾದುದು. ಗಂಗ, ರಾಷ್ಟ್ರಕೂಟ, ಕದಂಬ, ಚಾಲುಕ್ಯ, ಹೊಯ್ಸಳ, ವಿಜಯ ನಗರ ಹಾಗೂ ಮೈಸೂರು ಅರಸು ಮನೆತನಗಳು ಈ ನೆಲವನ್ನು ಆಳಿದ ಸು. ಒಂದು ಸಾವಿರ ವರ್ಷಗಳ ಭವ್ಯ ಇತಿಹಾಸವಿದೆ; ಸಾಂಸ್ಕೃತಿಕ ಪರಂಪರೆಯಿದೆ. 'ನನ್ನದು ಈ ಕನ್ನಡ ನಾಡು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಭಾಗ್ಯ ಕನ್ನಡಿಗರದು.

ಕರ್ನಾಟಕವು ಪ್ರವಾಸಿಗರ ಸ್ವರ್ಗ. ಇಲ್ಲಿನ ಹವೆ ತಂಪು. ಜನ ಸಹನಾಶೀಲರು, ಮನಸ್ಸು ಔದಾರ್ಯಯುತವಾದುದು. ಇಲ್ಲಿ ಕಲ್ಲು ಅರಳಿ ಹೂವಾಗಿದೆ, ಕಲೆಯ ನೆಲವೀಡಾಗಿದೆ. ಪ್ರವಾಸೀ ಆಕರ್ಷಣೆಗಳು ವಿಶೇಷವಾಗಿರುವುದರಿಂದ ವರ್ಷದ ಎಲ್ಲಾ ಕಾಲಗಳಲ್ಲೂ ದೇಶ ವಿದೇಶಗಳಿಂದ ಜನ ಇಲ್ಲಿಗೆ ಬರುವರು. ಜಗತ್ ಪ್ರಸಿದ್ಧವಾದ ಬೃಂದಾವನ, ದಸರಾ, ಖೆಡ್ಡಾ, ಜೋಗ್ ಜಲಪಾತ, ಬೇಲೂರು, ಹಳೆಬೀಡು-ಶ್ರವಣಬೆಳುಗೊಳ - ಸೋಮನಾಥಪುರ - ಐಹೊಳೆ - ಪಟ್ಟದ ಕಲ್ಲು - ಬಾದಾಮಿ-ಅರಳುಪ್ಪೆಗಳಲ್ಲಿನ ಶ್ರೇಷ್ಠ ಶಿಲ್ಪಕಲೆ, ಬಿಜಾಪುರದ ಗೋಳಗುಂಬಜ್, ಪ್ರಸಿದ್ಧ ಅರಸರ ಕೋಟೆ ಕೊತ್ತಲಗಳು, ಸ್ಮಾರಕಗಳು, ಮನಸೆಳೆಯುವ ಕರಾವಳೀ ಪ್ರದೇಶಗಳು, ಸೃಷ್ಟಿಯ ವೈಚಿತ್ರ್ಯ ನಿರ್ಮಿಸಿದ ಸ್ವರ್ಗೀಯ ದ್ವೀಪಸಮುದಾಯಗಳು, ಪಕ್ಷಿಧಾಮಗಳು, ದೇವಾಲಯಗಳು -ಹೀಗೆ ಹೆಮ್ಮೆಯಿಂದ ಹೇಳಲು ನೂರಾರಿವೆ.

ಕರ್ನಾಟಕವು, ಬಸವ, ಮಧ್ವ, ಶಂಕರ, ರಾಮಾನುಜ -ಮುಂತಾದ ಆಚಾರ್ಯ ಪುರುಷರು ಎಡೆಯಾಡಿದ ಸ್ಥಳ. ಧಾರ್ಮಿಕ ಶ್ರದ್ಧಾವಂತರಿಗೆ ಶೃಂಗೇರಿ, ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯ, ಕೊಲ್ಲೂರು, ಕೂಡಲ ಸಂಗಮ, ಮೇಲ್ಕೋಟೆ ಸವದತ್ತಿ, ನಂಜನಗೂಡು, ಎಡೆಯೂರು, ಮಾದೇಶ್ವರನಬೆಟ್ಟ, ಚಾಮುಂಡಿಬೆಟ್ಟ ಈ ಮುಖ್ಯ ಕ್ಷೇತ್ರಗಳ ಜೊತೆಗೆ ನೂರಾರು ಸಣ್ಣ ಪುಟ್ಟ ಯಾತ್ರಾಸ್ಥಳಗಳಿವೆ.

ಕರ್ನಾಟಕದ ಕರಾವಳಿಯ ಚೆಲುವು ನೊಬೆಲ್ ಪ್ರಶಸ್ತಿ ವಿಜೇತ ಕವಿ ರವೀಂದ್ರರ ಮನಸೆಳೆದು ಹೊಗಳಿಕೆ ಪಡೆದಿದೆ : "The sea beach of Karwar is certainly a fit place in which to realise that the beauty of nature is not a mirage of imagination but reflects the joy of the infinite and thus drawas us to lose ourselves in it." ಶ್ರೀಮತಿ ಸರೋಜಿನಿ ನಾಯ್ಡುರವರು ಮಂಗಳೂರಿನ ಕಲ್ಪವೃಕ್ಷ ನಂದನವನ್ನು ಮೆಚ್ಚಿ ಹಾಡಿರುವರು. ನಮ್ಮ ಕರಾವಳಿಯ ನಿಸರ್ಗ ಸಂಪತ್ತು ಅನುಪಮವಾದುದಾದರೂ ಈ ದಿವ್ಯ ಸೌಂದರ್ಯವನ್ನು ಆಸ್ವಾದಿಸುವವರೇ ಇಲ್ಲ. ಕು.ಶಿ. ಹರಿದಾಸ ಭಟ್ಟರು ಹೇಳುವಂತೆ "ಸುರತ್ಕಲ್ ಕರಾವಳಿಯಲ್ಲಿ ಕಲ್ಲುಗುಡ್ಡದ ಮೇಲಿನ ಶಿವಾಲಯದಿಂದ ಸೂರ್ಯಸ್ತದ ಸೌಂದರ್ಯವನ್ನು ಸವಿಯಬೇಕು; ಮಲ್ಪೆಗೆ ಮೂರು ಮೈಲು ಅಂತರದ ಸಾಂತಮಾರಿ (ತೋನ್ಸೆಪಾರಿನ) ದ್ವೀಪದಲ್ಲಿ ಕುಳಿತು ಅರಬ್ಬೀ ಸಮುದ್ರದ ಅಲೆಗಳ ಮರ್ಮರ, ಗಾಳಿಯ ಬೀಸಾಟ, ಶಿಲಾಸ್ತೋಮದ ತಣ್ಣನ ಆರಾಮವನ್ನು ನೆನಪಿಸಿಕೊಳ್ಳಬೇಕು; ಮರವಂತೆಯಲ್ಲಿ ಕಡಲು ಮತ್ತು ನದಿ ಸಮಾನಾಂತರವಾಗಿ ಹರಿಯುವಾಗ ನಡುವಿನ ಹೆದ್ದಾರಿಯ ಬಳಿ ನಿಂತು ಉಭಯ ಜಲರಾಶಿಯ ವಿಭಿನ್ನ ಸೌಂದರ್ಯವನ್ನು ಧ್ಯಾನಿಸಬೇಕು; ತಿಂಗಳ ಬೆಳಕಿಗೆ ನದಿಯಲ್ಲಿ ನೌಕಾವಿಹಾರ ಮಾಡಬೇಕು; ಹೊನ್ನಾವರ ಸೇತುವೆಯ ಮೇಲೆ ಗಂಟೆಗಟ್ಟಲೆ ಧ್ಯಾನಮಗ್ನರಾಗಿ ಕುಳಿತು ಶರಾವತಿಯ ವೈಭವವನ್ನು ಕಲ್ಪಿಸಿಕೊಳ್ಳಬೇಕು; ಧಾರೇಶ್ವರದ ಮರಳಲ್ಲಿ ಹುಚ್ಚುಕಟ್ಟಿ ಓಡಬೇಕು, ಬೇಸರವಾದರೆ ನೀರಿಗಿಳಿದು ಈಸಬೇಕು. ಬಣಗೆ ಮತ್ತು ಕಾರವಾರಗಳಲ್ಲಿ ಸಮೀಪಗತವಾದ ಪಶ್ಚಿಮಘಟ್ಟದ ತುದಿಯಿಂದ ಸಮುದ್ರದ ನೀಲ ಜಲರಾಶಿಗೆ ಮೈ ಮರೆಯಬೇಕು ..ಕಾರವಾರದಿಂದ ಹೊನ್ನಾವರ, ಸಿರ್ಸಿ, ಮಂಗಳೂರಿನಿಂದ ಬೆಂಗಳೂರು ಮೈಸೂರುಗಳಿಗೆ ಘಟ್ಟ ದಾಟಿ ಹೋಗುವ ದಾರಿಗಳ ಸೆರಗಿನ ಚೆಲುವನ್ನು ನಿಧಾನವಾಗಿ ಹೀರಬೇಕು. ಪ್ರತಿ ಘಟ್ಟದ ದಾರಿಗೂ ಅದರದ್ದೇ ಆದ ವೈಶಿಷ್ಟ್ಯವುಂಟು. ಸಂಪಾಜೆ, ಚಾರ್ಮಾಡಿ, ಆಗುಂಬೆ, ಹುಲಿಕಲ್ಲು, ದೇವೀಮನೆ -ಈ ದಾರಿಯಾಗಿ ಕಾಲ್ನಡೆ ಹೋಗುವಾಗ ಮನಸ್ಸು ಅಂತರ್ಮುಖಿ-ಯಾಗುತ್ತದೆ. ಏಕಾಂತವೆಂದರೇನು? ಎಂಬುದು ನಮಗೆ ಅರಿವಾಗುತ್ತದೆ. ಗುಡ್ಡ, ಬೆಟ್ಟ,

ನದೀಮೂಲ ತುಂಗಾಮೂಲ, ಕಾವೇರಿಮೂಲ, ವರದಾಮೂಲಗಳು ಕನ್ನಡಿಗರಿಗೆ ಈಗಾಗಲೇ ಯಾತ್ರಾಸ್ಥಳಗಳು..."[೧]

ನಿಸರ್ಗವೇ ಮೈದಾಳಿ ನಿಂತ ಕಾರವಾರದ ಬಂದರು ಸರ್ವಋತು ಬಂದರಾಗಿ ಈಗ ಮಾರ್ಪಟ್ಟಿದೆ. ಕಾರವಾರದ ದಕ್ಷಿಣಕ್ಕೆ ಬೈತಕೋಲದ ಸುಂದರ ನಿಸರ್ಗ ನಿರ್ಮಿತ ಕೊಲ್ಲಿಯಲ್ಲಿ ಸರಕಾರವು ಹದಿನೆಂಟು ಕೋಟಿ ವೆಚ್ಚದಲ್ಲಿ ಹಡಗುಕಟ್ಟೆಯನ್ನು ನಿರ್ಮಿಸಿದೆ. ಇಲ್ಲಿ ಎರಡು ದೊಡ್ಡ ಹಡಗುಗಳು ಏಕಕಾಲಕ್ಕೆ ಬಂದು ನಿಲ್ಲಲು ಸೌಲಭ್ಯ ಕಲ್ಪಿಸಲಾಗಿದೆ. ನಮ್ಮಲ್ಲಿ ತುಂಗಭದ್ರಾ, ಲಿಂಗನಮಕ್ಕಿ, ಭದ್ರಾ, ಕಬಿನಿ ಮಾರ್ಕೋನಹಳ್ಳಿ* ಹೀಗೆ ಅನೇಕ ಜಲಾನಯನ ಪ್ರದೇಶಗಳಿದ್ದು, ಈ ಜಲಾನಯನಗಳು ಪ್ರವಾಸಿಗರ ವಿಹಾರಕ್ಕೆ ಯೋಗ್ಯ ತಾಣಗಳಾಗಿವೆ.

ನಿಸರ್ಗದೊಂದಿಗೆ ಬೆರೆಯಲು ಕಡಲಿನಷ್ಟು ಮೋಹಕವಾದ ವಸ್ತು ಬೇರೊಂದಿಲ್ಲ. ಮಳೆಗಾಲದ ಮೂರು ತಿಂಗಳು ಮಾನಸೂನ್ ಗಾಳಿಯ ಹೊಡೆತ ಬಿಟ್ಟರೆ ಉಳಿದ ಒಂಬತ್ತು ತಿಂಗಳು ತೆಪ್ಪಗೆ ತೆವಳುವ ಕರ್ನಾಟಕದ ಕರಾವಳಿಯಲ್ಲಿ ಸ್ನಾನಕ್ಕೆ ಯೋಗ್ಯವಾದ ಬೀಚುಗಳು ಹೇರಳವಾಗಿವೆ. ಕಡಿಮೆ ಎಂದರೆ ೧೦೦ ಮೈಲಾದರೂ ಸ್ವಚ್ಛ ಬಿಳಿಯರಳಿನ ವಿಶಾಲ ಕರೆಯ, ಆಳವಿಲ್ಲದ ನೀಲ ಜಲರಾಶಿ ಯಾವ ಜಲಕ್ರೀಡೆಗೂ ಅನುಕೂಲವಾಗಿದೆ. ಕಡಲಿನ ಮೇಲಿನ ವಿಹಾರಕ್ಕೆ ವಿದೇಶೀಯರು ಬೇಕಾದ ಅನುಕೂಲ ಕಲ್ಪಿಸಿಕೊಂಡಿರುವರು. ಅಟ್ಲಾಂಟಿಕ್ ತೀರದ ಡೆಟಾನಾ ಬೀಚ್‌ನ ಸೂರ್ಯೋದಯದ ಸೊಬಗಿನ ಬಣ್ಣಪ್ರಪಂಚ ಪ್ರಸಿದ್ಧವಾದುದು. ಹಾಗೆಯೇ ನಮ್ಮ ಕರ್ನಾಟಕದ ಅನೇಕ ಬೀಚ್‌ಗಳು ಪ್ರಸಿದ್ಧವಿದ್ದು ಈ ಬೀಚುಗಳಲ್ಲಿ ಲಕ್ಷಾಂತರ ಜನ ಸ್ತ್ರೀ ಪುರುಷರು ಆನಂದಾನುಭವ ಪಡೆಯುತ್ತಾರೆ. ನಮ್ಮಲ್ಲಿ ಅದಿಲ್ಲ. ಮಲ್ಪೆಯ ಬೀಚ್ ಉಡುಪಿಯಿಂದ ಕೇವಲ ಎಂಟು ಕಿ.ಮೀ. ದೂರದಲ್ಲಿದೆ. ಚಿನ್ನದ ಬಣ್ಣದ ಈ ಬೀಚಿನ ಸೌಂದರ್ಯ ಯಾರಿಗೂ ಬೇಡವಾಗಿದೆ. ಮಲ್ಪೆಯ ಸಮುದ್ರ ತೀರಕ್ಕೆ ಐದು ಕಿ.ಮೀ. ಹತ್ತಿರವಿರುವ ಸೈಂಟ್ ಮೇರೀಸ್‌ದ್ವೀಪದಲ್ಲಿ (ತೋನ್ಸೆಪಾರು) ಕರಿ ಶಿಲೆಗಳ ಸುಂದರ ಸಮೂಹವಿದೆ. ತೆಂಗಿನ ಸೊಬಗು ಪ್ರವಾಸಿಗರಿಗೆ ಸ್ವರ್ಗಸದೃಶವಾಗಿದೆ. ಅಲ್ಲಿ ನೀರಿನ ಕ್ರೀಡೆ (Water sports)ಗಳನ್ನು ಆರಂಭಿಸಬಹುದು.

ಉಡುಪಿ ಜಿಲ್ಲೆಯಲ್ಲಿ ಕಾಪು ಸಮುದ್ರ ಕಿನಾರೆ ತನ್ನ ನಯನ ಮನೋಹರ ದೃಶ್ಯ ವೈಭವದಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಉಡುಪಿಯಿಂದ ಹನ್ನೊಂದು ಕಿ.ಮೀ. ದೂರದ ಈ ಕಾಪು ಸಮುದ್ರ ಕಿನಾರೆಗೆ ಪಿಕ್‌ನಿಕ್ ಆಚರಿಸಲು ಬರುವ ಪ್ರವಾಸಿಗರು ರೋಮಾಂಚಕ ಅನುಭವ ಪಡೆಯುವರು.

---

೧. ಜಗದಗಲ, ಪು. ೩೫, ೩೬.

* ಮಾರ್ಕೋನಹಳ್ಳಿ ಜಲಾಶಯವು ಎಡೆಯೂರಿನಿಂದ ಬೆಂಗಳೂರಿಗೆ ಹೋಗುವ ಹೆದ್ದಾರಿಯಲ್ಲಿ ಎಡೆಯೂರಿನಿಂದ ೬೧/೨ ಕಿ.ಮೀ. ದೂರದಲ್ಲಿದೆ.

ಅರಬ್ಬಿ ಸಮುದ್ರದ ರುದ್ರರಮಣೀಯ ತೆರೆಗಳ ಅಬ್ಬರ, ಸಮುದ್ರದಿಂದ ಮೇಲೆದ್ದು ಕಡಲ ತಡಿಯತ್ತ ಮಿಂಚಿನ ವೇಗದಲ್ಲಿ ಅಪ್ಪಳಿಸುವ ತೆರೆಗಳ ಆರ್ಭಟ ಹಿರಿಯರಾದಿಯಾಗಿ ಎಲ್ಲರ ಮನವನ್ನು ಗೆಲ್ಲುತ್ತದೆ. ಸಂಜೆ ಸೂರ್ಯಾಸ್ತ ಸಮಯದಲ್ಲಿ ಬಾನೆಲ್ಲ ರಕ್ತದೋಕುಳಿಯಲ್ಲಿ ಮೀಯುವ ಸುಂದರ ದೃಶ್ಯ ಅದ್ಭುತವಾದುದು. ಸಮುದ್ರ ತೀರದ ಬೆಟ್ಟದ ಮೇಲೆ ಬ್ರಿಟಿಷರ ೧೯೩೫ರಲ್ಲಿ ನಿರ್ಮಿಸಿದ ಬೃಹದಾಕಾರದ ದೀಪಸ್ತಂಭವನ್ನು ಏರಿ ಸುತ್ತಲೂ ಕಣ್ಣಾಡಿಸಿದಾಗ ನಮ್ಮ ದೃಷ್ಟಿ ಹರಿಯುವವರೆಗೆ ಬರಿಯ ಸಮುದ್ರದ ಜಲರಾಶಿ. ಕಡಲತಡಿಯಲ್ಲಿನ ಕಲ್ಲು ಬಂಡೆಗಳ ನಡುವೆ ಹಾಯ್ದು ಬಂದ ತೆರೆಗಳು ಬಿಳಿಯ ನೊರೆಯನ್ನು ಸುತ್ತೆಲ್ಲ ಹರಡಿ ತನ್ನದೇ ಆದ ಸಪ್ಪಳವನ್ನು ಕೇಳಿಸುತ್ತದೆ. ಸಮುದ್ರದಲ್ಲಿ ಚಲಿಸುವ ಹಡಗುಗಳಿಗೆ ದಿಕ್ಕು ತೋರಿಸಲು ದೀಪಸ್ತಂಭದ ಬೆಳಕು ಸಹಾಯ ಮಾಡುತ್ತದೆ. ಮೂರು ವಿಶಾಲ ಫ್ಲಾಶ್‌ಗಳನ್ನು ಹೊಂದಿರುವ ದೀಪವು ಸು. ೨೬ ಮೈಲಿ ಬೆಳಕನ್ನು ಹರಡಿ ನೌಕೆಗಳಿಗೆ ಮಾರ್ಗದರ್ಶನ ಮಾಡಿಸುತ್ತವೆ. ರಾತ್ರಿ ವೇಳೆ ದೀಪಸ್ತಂಭದ ಅಂದವನ್ನು ದೂರ ನಿಂತು ಸವಿಯಬಹುದು. ಕಾಪು ಬೀಚ್‌ಗೆ ಹೋಗಲು ಒಳ್ಳೆಯ ರಸ್ತೆಯಿಲ್ಲ. ರಾತ್ರಿ ಬರಲು ದೀಪ ವ್ಯವಸ್ಥೆಯಿಲ್ಲ. ಮಳೆ ಬಂದರೆ ನೆಲೆ ಪಡೆಯಲು ತಂಗುದಾಣಗಳಿಲ್ಲ. ಪ್ರವಾಸೋದ್ಯಮ ಇಲಾಖೆಯ ನಿರ್ಲಕ್ಷ್ಯಕ್ಕೆ ಕಾಪು ಬೀಚ್ ಒಳಗಾಗಿದೆ.

ಚಿಕಮಗಳೂರಿನಿಂದ ತರೀಕೆರೆಗೆ ಹೋಗುವ ರಸ್ತೆಯಲ್ಲಿ ಸಖರಾಯಪಟ್ಟಣವೆಂಬ ಪುಟ್ಟಗ್ರಾಮ ಸಿಗುತ್ತದೆ. ಸಖರಾಯಪಟ್ಟಣದ ಒಳರಸ್ತೆಯಲ್ಲಿ ಸುಮಾರು ಏಳೆಂಟು ಕಿ.ಮೀ. ದೂರ ಹೋದರೆ ಅಯ್ಯನಕೆರೆ ಎಂಬ ವಿಶಾಲವಾದ ಕೆರೆ ಸಿಗುತ್ತದೆ. ಇದರಲ್ಲಿ ಏಳು ಗುಡ್ಡಗಳು ಮುಳುಗಿವೆಯೆಂದು ಹೇಳಲಾಗಿದೆ. ಕೆರೆಯ ನಡುವೆ ಒಂದು ಪುಟ್ಟ ದ್ವೀಪದಂತೆ ಒಂದು ಗುಡ್ಡವಿದೆ. ಗುಡ್ಡದ ಸುತ್ತಲೂ ಸುಂದರ ಪ್ರಕೃತಿ ದೃಶ್ಯಗಳಿವೆ. ಕೆರೆಯು ೩೫ ಅಡಿ ಆಳ ಹೊಂದಿದೆ. ಮಳೆಗಾಲದಲ್ಲಿ ಕೆರೆ ತುಂಬಿರುತ್ತದೆ. ಕೆರೆಯ ನೀರಿನ ಬಳಕೆಗಾಗಿ ಅಲ್ಲಿ ಅಣೆಕಟ್ಟೆಯೊಂದನ್ನು ೨೦೦೪ರಲ್ಲಿ ನಿರ್ಮಿಸಲಾಯಿತು. ಅಯ್ಯನಕೆರೆಯ ನೀರಿನಿಂದ ಸುತ್ತಮುತ್ತ ತೋಟಗಳು ಫಲಭರಿತವಾಗಿವೆ. ನೀರಾವರಿಯಿಂದಾಗಿ ಬಾಳೆ, ಕಬ್ಬು, ಭತ್ತ, ತೆಂಗು, ಅಡಕೆ ಇತ್ಯಾದಿ ಬೆಳೆ ತೆಗೆಯಲಾಗುತ್ತಿದೆ. ಅಣೆಕಟ್ಟೆ ಈಗ ಪ್ರವಾಸಿ ತಾಣವಾಗಿದೆ. ಶುಭ್ರ, ಸ್ವಚ್ಛ ಪರಿಸರ. ಯುವಕರು ಪುಟಿಯುವ ಉತ್ಸಾಹದಿಂದ ಈಜುವರು. ಕೆರೆ ಆಳವಿರುವುದರಿಂದ ಈಜುವವರು ಎಚ್ಚರದಿಂದಿರಬೇಕು. ಈ ಸುಂದರ ಪ್ರಕೃತಿಯ ನೆಲೆವೀಡಿಗೆ ಬಸ್ ಸೌಕರ್ಯವಿಲ್ಲ. ಕಚ್ಚಾ ರಸ್ತೆ.

ಡಾ. ಜಿ.ಎಸ್. ಶಿವರುದ್ರಪ್ಪನವರು ತಮ್ಮ ಅಮೆರಿಕೆಯ ಪ್ರವಾಸದಲ್ಲಿ ನ್ಯೂಯಾರ್ಕಿನ ದಕ್ಷಿಣದ ಕಡಲ ತೀರದಲ್ಲಿರುವ ಓಷನ್ ಸಿಟಿಗೆ ಭೇಟಿ ನೀಡಿದ್ದರು. ಆ ಕಡಲ ತೀರವು ಆ ಪ್ರವಾಸಿಗರ ಸೂಜಿಗಲ್ಲಾಗಿದ್ದು ಬೇಸಿಗೆಯ ૩-೪

ತಿಂಗಳುಗಳಲ್ಲಂತೂ ಇದೊಂದು ಗಿಜಿಗುಟ್ಟುವ ಜೇನುಗೂಡಿನಂತಾಗುವುದನ್ನು ಗಮನಿಸಿದ ಅವರು "ನಮ್ಮಲ್ಲೂ ಕಡಲ ತೀರಗಳಿವೆ. ಇದಕ್ಕಿಂತ ಸೊಗಸಾದ ಕಡಲ ತೀರಗಳಿವೆ. ಆದರೆ ಅವುಗಳನ್ನು ಸೊಗಸಿನ ಹಾಗೂ ಆಕರ್ಷಣೆಯ ನೆಲೆಗಳನ್ನಾಗಿ ಮಾಡುವ ಕಲೆಗಾರಿಕೆಯಾಗಲಿ, ಕುಶಲತೆಯಾಗಲಿ ನಮಗಿಲ್ಲ. ಇಂಥ ಒಂದು ಸಾಧಾರಣವಾದ ಕಡಲ ತೀರವನ್ನು ಈ ಜನ ಪ್ರವಾಸಿಯ ಅಯಸ್ಕಾಂತವನ್ನಾಗಿ ಪರಿವರ್ತಿಸಬಲ್ಲರು. ನಿಸರ್ಗದತ್ತವಾದ ಒಂದು ಪರಿಸರವನ್ನು ಆಕರ್ಷಕವೂ, ಲಾಭದಾಯಕವೂ ಆದ ನೆಲೆಯನ್ನಾಗಿ ಮಾಡಬಹುದೆಂಬ ಕೌಶಲ ಈ ಜನಕ್ಕೆ ಚೆನ್ನಾಗಿ ಗೊತ್ತು. ಅದೊಂದು ವ್ಯಾಪಾರವೂ ಹೌದು, ಕಲೆಯೂ ಹೌದು" ಎಂದಿರುವರು.

ಕರ್ನಾಟಕದ ಭವ್ಯ ಇತಿಹಾಸ, ಪರಂಪರೆ, ಸಂಸ್ಕೃತಿಗಳ ಪರಿಚಯ ಮಾಡಿ ಕೊಡುವ ಉದ್ದೇಶದಿಂದ ಕರ್ನಾಟಕ ಸರಕಾರವು ರಾಜ್ಯ ಪ್ರವಾಸೋದ್ಯಮ ಇಲಾಖೆಯನ್ನು ಸ್ಥಾಪಿಸಿದೆ. ಮೊದಲಿಗೆ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಾಗಿ ವ್ಯವಹರಿಸುತ್ತಿದ್ದು, ೧೯೭೪ರಲ್ಲಿ ವಾರ್ತಾ ಇಲಾಖೆಯಿಂದ ಬೇರ್ಪಟ್ಟು ಪ್ರವಾಸೋದ್ಯಮ ನಿರ್ದೇಶನಾಲಯವು ಸ್ವತಂತ್ರ ಅಸ್ತಿತ್ವವನ್ನೇ ಪಡೆಯಿತು. ಇದು ವಾರ್ತಾ ಪ್ರವಾಸಿ ಹಾಗೂ ಯುವಜನ ಸೇವೆಯ ಕಾರ್ಯದರ್ಶಿಯವರ ಆಡಳಿತಾತ್ಮಕ ನಿರ್ದೇಶನಕ್ಕೆ ಒಳಪಡುತ್ತದೆ. ಪ್ರವಾಸೋದ್ಯಮ ನಿರ್ದೇಶನಾಲಯದ ಅಂಗಸಂಸ್ಥೆಯಾಗಿ 'ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ'ವು ಕಾರ್ಯ ನಿರ್ವಹಿಸುತ್ತದೆ.

ಪ್ರವಾಸೋದ್ಯಮ ಇಲಾಖೆಯು ಪ್ರವಾಸಿ ಕಾರ್ಯಾಲಯಗಳು, ಟೂರಿಸ್ಟ್ ಹೋಂಗಳು, ಪ್ರವಾಸಿ ಕುಟೀರಗಳು ಹಾಗೂ ಕ್ಯಾಂಟೀನ್ -ಇವುಗಳ ವ್ಯವಸ್ಥೆಯನ್ನು ನೋಡಿಕೊಳ್ಳುತ್ತದೆ. ಇಲಾಖೆಯು ಪ್ರವಾಸಿ ತಾಣಗಳನ್ನು ಗುರುತಿಸಿ, ಅವುಗಳನ್ನು ಅಭಿವೃದ್ಧಿಪಡಿಸಿ ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುತ್ತದೆ. ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಅದರಲ್ಲೂ ಮುಖ್ಯವಾಗಿ ಪ್ರಚಾರೋದ್ದೇಶಕ್ಕಾಗಿ ೧೯೮೯-೯೦ನೇ ಸಾಲಿನಲ್ಲಿ ೨೪ ಲಕ್ಷ ರೂಪಾಯಿಗಳನ್ನು ಗೊತ್ತುಪಡಿಸಲಾಯಿತು. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಪ್ರವಾಸೋದ್ಯಮ ಇಲಾಖೆಯ ಗುರಿ ವಿದೇಶೀ ವಿನಿಮಯದ ಹಣಗಳಿಕೆಯ ಕಡೆಗೆ ಇರುವುದರಿಂದ ವಿದೇಶೀ ಪ್ರವಾಸಿಗರನ್ನು ಆಕರ್ಷಿಸಬೇಕಾಗಿದೆ. ತನ್ನ ಹೊರ ಆಹ್ಲಾದಕರ ಬಣ್ಣಗಳಿಂದ ಕೂಡಿದ ಚಿತ್ರಮಯ ಫೋಲ್ಡರ್‌ಗಳನ್ನು ಭಾರತಕ್ಕೆ ಅದರಲ್ಲೂ ಕರ್ನಾಟಕಕ್ಕೆ ಭೇಟ ನೀಡುವ ವಿದೇಶೀ ಪ್ರವಾಸಿಗರಿಗಾಗಿಯೇ ಇಂಗ್ಲಿಷಿನಲ್ಲಿ ಹೊರತರಲಾಗಿದೆ. (ಇವು ಅವರ ಮನಸ್ಸನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ). ಕರ್ನಾಟಕದಲ್ಲಿ ಪ್ರವಾಸ ಕೈಗೊಳ್ಳುವ ವಿದೇಶೀಯರಿಗಾಗಿ ತೀರಾ ಅಗತ್ಯವಿರುವ 'A to z Tourist Map of Karnataka' ವನ್ನು ಹೊರತರಲಾಗಿದೆ. ಇದರಲ್ಲಿ ಪ್ರವಾಸಿಗೆ ಅಗತ್ಯವಿರುವ ಎಲ್ಲ ಮಾಹಿತಿಗಳನ್ನೂ ಕೊಡಲಾಗಿದೆ. ನಕಾಶೆಯಲ್ಲಿ ಕರ್ನಾಟಕದ ಪ್ರಮುಖ ಪ್ರವಾಸಿ ಆಕರ್ಷಣೆಯ

ಕೇಂದ್ರಗಳು, ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳು, ಇತರೆ ಪ್ರಮುಖ ಪಟ್ಟಣಗಳು, ಜಿಲ್ಲಾ ಗಡಿಗಳು, ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಸಂಪರ್ಕ ರಸ್ತೆಗಳು, ರೈಲುಹಾದಿ, ನದಿಗಳು, ಶಿಲ್ಪಕಲಾ ಸ್ಮಾರಕಗಳು, ಗಿರಿಧಾಮಗಳು, ಕರಾವಳಿಯ ತಂಗುದಾಣಗಳು, ಪ್ರಾಣಿ ಹಾಗೂ ಪಕ್ಷಿಧಾಮಗಳು, ಏರ್‌ಪೋರ್ಟ್‌ಗಳು, ಕೆ.ಎಸ್. ಟಿ.ಡಿ.ಸಿ. ಪ್ರವಾಸಿ ಗೃಹಗಳು, ಕೆ.ಎಸ್. ಟಿ.ಡಿ.ಸಿ. ನಡೆಸಿಕೊಡುವ ಬಸ್ ಪ್ರವಾಸಗಳು, ಬೆಂಗಳೂರಿನಿಂದ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಇರುವ ಅಂತರ-ಹೀಗೆ ವಿದೇಶಿ ಪ್ರವಾಸಿಗೆ ತೀರಾ ಉಪಯುಕ್ತವಿರುವ ಮಾಹಿತಿಗಳನ್ನು ಇದು ಒದಗಿಸಿಕೊಡುತ್ತದೆ. (ಬೆಂಗಳೂರಿನ ವಾಸನ್ ಬುಕ್ ಡಿಪೋದವರು ಖಾಸಗಿಯಾಗಿ 'Karnataka Tourist Guide (with Karnataka Road Map);Karnataka Road Guide' ಬೆಂಗಳೂರಿನಿಂದ ಉಮಾ ಪಬ್ಲಿಕೇಷನ್‌ರವರು Bangalore Mysore Ooty (with city Maps) 'Bangalore Guide' ಅತ್ಯಾಕರ್ಷಕವಾಗಿ ಹೊರತಂದಿರುವವರು).

'Karnataka' ಎಂಬ ಫೋಲ್ಡರ್‌ನಲ್ಲಿ ಮೈಸೂರು, ಮಂಗಳೂರು, ಬಿಜಾಪುರ, ಮಡಿಕೇರಿ, ಬೆಂಗಳೂರು -ಈ ಪ್ರವಾಸಿ ಕೇಂದ್ರಗಳ ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳ ಸ್ಥೂಲ ಪರಿಚಯವಿದೆ. 'Mysore' ಎಂಬ ಫೋಲ್ಡರ್‌ನಲ್ಲಿ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬಿಜಾಪುರ, ಬೀದರ್- ಗುಲ್ಬರ್ಗ-ರಾಯಚೂರು, ಬೇಲೂರು, ಹಳೇಬೀಡು, ಹಂಪೆ, ಬೆಂಗಳೂರು, ಮೈಸೂರು, ಶ್ರವಣಬೆಳಗೊಳ, ತುಂಗಭದ್ರಾ- ಈ ಪ್ರೇಕ್ಷಣೀಯ ಸ್ಥಳಗಳ ಸ್ಥೂಲಪರಿಚಯ ಚಿತ್ರಗಳೊಂದಿಗೆ ಕೊಡಲಾಗಿದೆ. ಮೈಸೂರಿಗೆ ವಿಶಿಷ್ಟವಾದ ಶ್ರೀಗಂಧದ ಕೆತ್ತನೆಗಳು, ರೇಷ್ಮೆ ವಸ್ತ್ರಗಳು, ರುಚಿಕರವಾದ ಕಾಫಿ- ಇವುಗಳ ಬಗೆಗೂ, ಜೋಗ್ ಫಾಲ್ಸ್ ಕುರಿತೂ, ಬೆಟ್ಟಗಳಲ್ಲಿನ ತಂಪು ತಂಗುದಾಣ (Hill stations) ಗಳ ಬಗೆಗೂ ಸಚಿತ್ರ ವಿವರಣೆ ಹೊಂದಿದೆ. ಇದು ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಕೊಡುಗೆ. 'Bangalore in and out' ಇದು ಬೆಂಗಳೂರಿನ ಸುತ್ತಮುತ್ತ ಇರುವ ಪ್ರೇಕ್ಷಣೀಯ ಸ್ಥಳಗಳ ಬಗೆಗೆ ವಿವರಗಳನ್ನೊಳಗೊಂಡ ಫೋಲ್ಡರ್. 'Mysore Dasara' ಇದು ದಸರಾ ಉತ್ಸವದ ಬಗೆಗೆ ಸಚಿತ್ರ ಫೋಲ್ಡರ್. Badami, Pattdakal, Aihole, Bijapur, Hampi' ಇದು ಭಾರತ ಸರಕಾರದ ಪ್ರವಾಸೋದ್ಯಮ ಸಚಿವಾಲಯದವರ ಕೊಡುಗೆ; ಕರ್ನಾಟಕದ ಪ್ರಸಿದ್ಧ ಶಿಲ್ಪಕಲಾ ಕೇಂದ್ರಗಳ ಬಗೆಗಿನ ಪರಿಚಯ. ಸೊಗಸಾದ ವರ್ಣಚಿತ್ರಗಳನ್ನು ಈ ಫೋಲ್ಡರ್ ಒಳಗೊಂಡಿದೆ. ಈ ಸ್ಥಳಗಳಿಗೆ ಭೇಟಿಕೊಡಲು ಸೂಕ್ತವಾದ ಋತುಮಾನ, ಈ ಸ್ಥಳಗಳಿಗೆ ಹೋಗುವುದು ಹೇಗೆ? ಎಲ್ಲಿ ಉಳಿದುಕೊಳ್ಳುವುದು- ಈ ವಿವರಗಳನ್ನು ಇದು ನೀಡುತ್ತದೆ. ಐಹೊಳೆ, ಬಾದಾಮಿ, ಪಟ್ಟದಕಲ್, ಹಂಪೆ, ಬಿಜಾಪುರ- ಈ ಸ್ಥಳಗಳ ಪ್ರವಾಸ ಸೇವಾ ಡೈರೆಕ್ಟರಿ; ಬೆಂಗಳೂರು- ಪಟ್ಟಣದ ಪ್ರವಾಸ ಸೇವಾ ಡೈರೆಕ್ಟರಿಗಳನ್ನು ಭಾರತ ಸರಕಾರದ ಪ್ರವಾಸೋದ್ಯಮ ಇಲಾಖೆಗಾಗಿ ಇಂಡಿಯಾ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನವರು ಇಂಗ್ಲೀಷ್‌ನಲ್ಲಿ ಸಿದ್ದಪಡಿಸಿರುವರು.

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯವರ ಪ್ರಮುಖ ಪ್ರವಾಸಿ ಕೇಂದ್ರಗಳಾದ ಮೈಸೂರು, ಮಂಡ್ಯ, ಶಿವಮೊಗ್ಗ, ಚಿಕಮಗಳೂರು, ಕೊಡಗು, ಹಂಪೆ ಇವುಗಳ ಬಗೆಗೆ ಪರಿಚಯಾತ್ಮಕ ಫೋಲ್ಡರ್‌ಗಳನ್ನು ಹೊರತಂದಿರುವರು. ಪ್ರತಿಯೊಂದೂ ಚಿತ್ತಾಕರ್ಷಕವಾದ ಫೋಟೋಗಳನ್ನು ಒಳಗೊಂಡಿದೆ. ಇವು ಇಂಗ್ಲಿಷ್‌ನಲ್ಲಿವೆ. ವಿದೇಶೀ ಪ್ರವಾಸಿಗರಿಗೆ ಅನೂಕೂಲವಾಗಲೆಂದು ಪ್ರತಿಯೊಂದು ಪ್ರವಾಸಿ ಕೇಂದ್ರದ ಸುತ್ತ ಮುತ್ತ ಇರುವ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಲು ನೆರವಾಗುವ ಮಾರ್ಗಸೂಚಿ (Map) ಕೊಡಲಾಗಿದೆ. ಇದರಲ್ಲಿ ಜಿಲ್ಲಾ ಕೇಂದ್ರ ಕಾರ್ಯಸ್ಥಾನ, ತಾಲೂಕು ಕೇಂದ್ರ ಕಾರ್ಯಸ್ಥಾನ ನದಿಗಳು -ಇವುಗಳನ್ನು ಸೂಚಿಸಲಾಗಿದೆ. ಈ ಪ್ರವಾಸಿ ಕೇಂದ್ರಗಳಿಗೆ ಹೇಗೆ ಹೋಗಬೇಕು, ಎಲ್ಲಿ ತಂಗಬೇಕು -ಇವುಗಳ ವಿವರಗಳನ್ನೂ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲಾಧಿಕಾರಿ ಹಾಗೂ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಶೀ Uttara Kannada Captivating Canvas of Nature' ಎಂಬ ಇಂಗ್ಲೀಷಿನಲ್ಲಿರುವ ಕಿರುಹೊತ್ತಗೆಯನ್ನು ಹೊರತಂದಿರುವರು. ಉತ್ತರ ಕನ್ನಡ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳ ಪರಿಚಯವನ್ನು ವರ್ಣಚಿತ್ರಗಳ ಮೂಲಕ ವಿವರಿಸಿರುವರು. ಈ ಪುಟ್ಟ ಹೊತ್ತಗೆ ತುಂಬ ಆಕರ್ಷಕವಾಗಿ ಹೊರಬಂದಿದ್ದು ಪ್ರವಾಸಿಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯವರು ಇತ್ತೀಚೆಗೆ (ಜಿಲ್ಲೆಗಳ ಪುನರ್ವಿಂಗಡಣೆಯಾದ ಮೇಲೆ) ಬಾಗಲಕೋಟೆ, ಬಿಜಾಪುರ, ಕೂರ್ಗ್, ಹಾಸನ, ಮೈಸೂರು, ಉಡುಪಿ ಜಿಲ್ಲೆಗಳ ಜನಪ್ರಿಯ ಪ್ರವಾಸಿ ತಾಣಗಳ ಪರಿಚಯವನ್ನು ವರ್ಣಚಿತ್ರ ಸಹಿತ ಮಾಡಿಕೊಡುವ ಕಿರುಹೊತ್ತಗೆಗಳನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವರು. ಭವ್ಯಪರಂಪರೆಯನ್ನೊಳಗೊಂಡ ಹಂಪಿಯ ಪ್ರೇಕ್ಷಣೀಯ ಸ್ಥಳಗಳ ಪರಿಚಯವನ್ನು ವರ್ಣಚಿತ್ರಗಳೊಂದಿಗೆ ಕಿರುಹೊತ್ತಿಗೆಯಲ್ಲಿ ಪ್ರಕಟಿಸಿರುವರು. ಇವು ವಿದೇಶೀ ಪ್ರವಾಸಿಗರಿಗಾಗಿ. ಭಾರತಕ್ಕೆ ಆದರಲ್ಲೂ ಕರ್ನಾಟಕಕ್ಕೆ ಪ್ರವಾಸಿಗರಾಗಿ ಬರುವ ಅವರಿಗೆ ಎಲ್ಲಿ ತಂಗಣೆ ಮಾಡಬೇಕೆನ್ನುವ ವಿವರವನ್ನು ಪ್ರತಿಯೊಂದು ಕಿರುಹೊತ್ತಿಗೆಯಲ್ಲೂ ಕೊಟ್ಟಿರುವರು. ಇವುಗಳ ಮುದ್ರಣ ಹಾಗೂ ವಿನ್ಯಾಸ ಅತ್ಯಾಕರ್ಷಕವಾಗಿದೆ.

ಕರ್ನಾಟಕದ ಪ್ರವಾಸಿ ಆಕರ್ಷಣೆಗಳಲ್ಲಿ ವನ್ಯಜೀವಿಗಳು, ಪರ್ವತಧಾಮಗಳು, ಭವ್ಯಪರಂಪರೆ, ಜಲಪಾತಗಳು, ಬೀಚ್‌ಗಳು ಮುಖ್ಯವಾದವುಗಳು. ಕರ್ನಾಟಕದ ಹೊರಗಿನವರಿಗೆ, ವಿದೇಶೀಯರಿಗೆ ಇವುಗಳ ಮಹತ್ವ ಹಾಗೂ ಹಿರಿಮೆಯನ್ನು ಇಂಗ್ಲಿಷ್ ವಿವರಣೆಯೊಂದಿಗೆ, ಮನಮೋಹಕ ವರ್ಣಚಿತ್ರಗಳೊಂದಿಗೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಕಿರುಹೊತ್ತಗೆಗಳನ್ನು ಹೊರತಂದಿದೆ (World of Wild Life. World of Hillstations, World of Heritage, World of Waterfalls, World of Beaches).

ಕರ್ನಾಟಕದ ಶಿಲೆಗಳಲ್ಲಿ ಅರಳಿದ ಭವ್ಯಪರಂಪರೆ (Heritage - A legacy sculptured in stone), ಕರ್ನಾಟಕದ ಹಬ್ಬಗಳು (Festive Karnataka - A Celebration of Life), ಕರಾವಳಿ ಕರ್ನಾಟಕ (Coastal Karnataka - 320 k.m. of Sun, Surf and Solitude), ರಮ್ಯ ಗಿರಿಧಾಮ ಹಾಗೂ ಸಾಹಸ ಚಟುವಟಿಕೆಗಳ ಕೂರ್ಗ್ (Coorg-Romantic Hill Stations. Adventure trails), ಪವಿತ್ರ ಕರ್ನಾಟಕ- ಅಧ್ಯಾತ್ಮ ಪ್ರಪಂಚದಲ್ಲಿನ ಶೋಧ (Devine Karnataka - Explore the realm of the spiritual), ಪ್ರಕೃತಿ ಹಾಗೂ ಜಲಪಾತಗಳು - ಕರ್ನಾಟಕದ ಸಹಜ ಶೋಭೆ (Nature and Waterfalls - Natural Spelnder of Karnataka), ಬೆಂಗಳೂರು -ಎಲ್ಲವೂ ಜರುಗುವ ತಾಣ (Bangalore - Where it all happens), ವನ್ಯಜೀವಿ - ಬೆಲೆ ಕಟ್ಟಲಾಗದ ಪ್ರಕೃತಿಯ ಸಹಜ ಪರಂಪರೆ (Wild life - Priceless Natural Heritage). ಮೈಸೂರು-ರಾಜ ಪರಂಪರೆ. ಅದ್ಭುತ ವನ್ಯಜೀವಿ (Mysore - Royal Heritage. Exotic Wildlife), ಕರ್ನಾಟಕ - ವೈವಿಧ್ಯತೆಯ ಅನುಭವ (Karnataka - Experience Variety) -ಹೀಗೆ ಆಕರ್ಷಕ ಇಂಗ್ಲಿಷ್ ಶೀರ್ಷಿಕೆಗಳಲ್ಲಿ ಕರ್ನಾಟಕದ ಮುಖ್ಯ ಪ್ರವಾಸಿ ಆಕರ್ಷಣೆಗಳ ಬಗೆಗೆ ವಿವರಣೆಯನ್ನು ಸೊಗಸಾದ ವರ್ಣಚಿತ್ರಗಳೊಂದಿಗೆ ನೀಡುವ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯವರ ಪ್ರಯತ್ನ ಶ್ಲಾಘನೀಯ. ಇಲ್ಲೆಲ್ಲ ಇಲಾಖೆಯ ಗಮ್ಯವಿರುವುದು ದೇಶೀ (Domestic) ಹಾಗೂ ವಿದೇಶೀ ಪ್ರವಾಸಿಗರ ಮೇಲೆ. ಅವರ ತಂಗಣೆ ಕರ್ನಾಟಕದಲ್ಲಿ ಸುಖದಾಯಿಯಾಗಿರಬೇಕೆಂಬ ಉದ್ದೇಶದಿಂದ ಎಲ್ಲಿ ತಂಗಬೇಕೆನ್ನುವ ವಿವರಗಳನ್ನು ಕೊಡಲಾಗಿದೆ. ಹಾಗೆಯೇ ಈ ಫೋಲ್ಡರ್‌ಗಳಲ್ಲಿ ಪ್ರತಿಯೊಂದರಲ್ಲೂ ಪ್ರವಾಸೀ ಆಕರ್ಷಣೆಯ ಸ್ಥಳಗಳನ್ನು ಕರ್ನಾಟಕದ ನಕಾಶೆಯಲ್ಲಿ ಕಾಣಿಸಿರುವರು. ಈ ಫೋಲ್ಡರ್‌ಗಳನ್ನೆಲ್ಲ ಸ್ಫೂರ್ತಿಯ ರಂಗಭೂಮಿ (Theatre of inspiration) ಎಂಬ ಘೋಷಣಾವಾಕ್ಯದ ಮಾಲಿಕೆಯಲ್ಲಿ ಪ್ರವಾಸೋದ್ಯಮ ಇಲಾಖೆಯವರು ಹೊರತಂದಿರುವರು.

'Get back to Nature and feel the Adventure' ಎಂಬ ಇಂಗ್ಲೀಷ್‌ನಲ್ಲಿರುವ ಫೋಲ್ಡರ್ ಸಾಹಸಪ್ರವೃತ್ತಿಯ ಯುವಕ ಯುವತಿಯರಿಗಾಗಿ ಹೊರತರಲಾಗಿದೆ. ಇದರಲ್ಲಿ ಅರಣ್ಯ ಶೋಧನೆ, ವನ್ಯ ಪ್ರಾಣಿಗಳ ಜೀವನಾಧ್ಯಯನ, ಪರ್ವತಾರೋಹಣ, ಶಿಲಾರೋಹಣ, ಗುಹಾ ಶೋಧನೆ, ಪ್ರಕೃತಿ ಛಾಯಾಗ್ರಹಣ, ಸ್ಥಳೀಯರೊಂದಿಗೆ ವಾಸ, ಪಳೆಯುಳಿಕೆಗಳ ಶೋಧ, ಪಕ್ಷಿವೀಕ್ಷಣೆ, ಆರ್ಕಿಯಾಲಜಿಕಲ್ ಸ್ಟಡಿ ಟೂರ್ಸ್, ಕೊರೇಕಲ್ ರ್‍ಯಾಫ್ಟಿಂಗ್, ಪ್ರಕೃತಿಯ ನಡುವೆ ಮಕ್ಕಳ ತಂಗಣೆ, ಇಳಿಜಾರಾದ ಹುಲ್ಲಿನಲ್ಲಿ ಜಾರುವಿಕೆ, ಮರಗಳ ಮೇಲೆ ತಂಗಣೆ -ಇವೆಲ್ಲವುಗಳ ಬಗೆಗೆ ವಿವರ ನೀಡಲಾಗಿದೆ. ಅಷ್ಟೇ ಅಲ್ಲ, ಇವುಗಳ ಬಗೆಗೆ ಮಾಹಿತಿ ನೀಡುವ ಕರ್ನಾಟಕದ

ಕಾರ್ಯಕರ್ತರ ವಿಳಾಸಗಳನ್ನೂ ನೀಡಲಾಗಿದೆ, ಅವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆಗಳನ್ನೂ ಕೊಡಲಾಗಿದೆ.

'KABINI RIVER LODGE' ಎಂಬ ಇಂಗ್ಲಿಷ್‌ನಲ್ಲಿರುವ ಫೋಲ್ಡರ್ ಮೈಸೂರಿಗೆ ಪಶ್ಚಿಮದಲ್ಲಿರುವ ೮೦ ಕಿ.ಮೀ. ದೂರದಲ್ಲಿರುವ ಕಬಿನಿ ರಿವರ್ ಲಾಡ್ಜ್ ಬಗೆಗೆ ವಿವರಣೆ ನೀಡುತ್ತದೆ. ನಾಗರಹೊಳೆಯ ವನ್ಯಜೀವಿ ಅಭಯಾರಣ್ಯ ಹಾಗೂ ಭೀಮೇಶ್ವರಿಯಲ್ಲಿನ ಕಾವೇರಿ ಫಿಶಿಂಗ್ ಕ್ಯಾಂಪ್ ಬಗೆಗೆ ಇಲ್ಲಿ ಮಾಹಿತಿ ದೊರೆಯುತ್ತದೆ. ಪ್ರಶಾಂತ ವಾತಾವರಣದಲ್ಲಿ ಬಹಳ ಮುಖ್ಯವಾದ ಸಭೆ ನಡೆಸಲು ಉತ್ಕೃಷ್ಟವಾದ ಸ್ಥಳವಿದು. ಬೋರ್ಡ್ ಮೀಟಿಂಗ್‌ಗಳು, ವಿಚಾರ ಸಂಕಿರಣಗಳು, ತರಬೇತಿ ಕಾರ್ಯಕ್ರಮಗಳಿಗೆ ಯೋಗ್ಯವಾದ ಸ್ಥಳ. ೨೮ ಮಂದಿಗೆ ಆಸನ ವ್ಯವಸ್ಥೆಯಿದೆ.

'Southern circuit' ಎಂಬ ಇಂಗ್ಲಿಷ್‌ನಲ್ಲಿರುವ ಕೈಪಿಡಿಯಲ್ಲಿ ಬೆಂಗಳೂರು, ಮೈಸೂರು, ಸುಲ್ತಾನ್ಸ್ ಬತ್ತೇರಿ, ಮುದ್ದುಮಲೈ, ಉದಕಮಂಡಲ, ಕೂನೂರ್, ಕೊಯಮತ್ತೂರು -ಈ ಪ್ರವಾಸಿ ತಾಣಗಳ ಬಗೆಗೆ ಇಲ್ಲಿ ವಿವರ ನೀಡಲಾಗಿದೆ. ಆಯಾ ಪ್ರವಾಸಿ ತಾಣಗಳಲ್ಲಿನ ಪ್ರಮುಖ ಆಕರ್ಷಣೆಯ ಚಿತ್ರಗಳನ್ನು ಕೊಡಲಾಗಿದೆ. ಈ ಚಿತ್ರಗಳು ಮನಸೆಳೆಯುತ್ತವೆ. 'Hill Resorts of South India' ಎಂಬ ಇಂಗ್ಲಿಷ್‌ನಲ್ಲಿರುವ ಕೈಪಿಡಿಯು ದಕ್ಷಿಣ ಭಾರತದಲ್ಲಿರುವ ಗಿರಿಧಾಮಗಳ ಬಗೆಗೆ ವಿಪುಲವಾದ ಮಾಹಿತಿ ಒದಗಿಸಿಕೊಡುತ್ತದೆ. ವಿದೇಶೀ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಈ ವಿವರಗಳನ್ನು ನೀಡಲಾಗಿದೆ. ಮಾಹಿತಿಗಳು ಬಹಳ ಉಪಯುಕ್ತವಾಗಿವೆ. ಏಕಾಕಿ ಪ್ರವಾಸಿಗೆ ಇಂತಹ ಕೈಪಿಡಿಗಳ ಅಗತ್ಯ ಎಷ್ಟೆಂಬುದನ್ನು ಮಾತಿನಲ್ಲಿ ಹೇಳಲಾಗದು. ಇವೆರಡೂ ಕೈಪಿಡಿಗಳನ್ನು ಭಾರತ ಸರಕಾರದ ಪ್ರವಾಸೋದ್ಯಮ ಇಲಾಖೆಯು ಹೊರತಂದಿದೆ.

ಕೋಟೀಶ್ವರ ಸೂರ್ಯನಾರಾಯಣರಾವ್‌ರವರು ಉತ್ತರ ಭಾರತದ ಅನೇಕ ಕ್ಷೇತ್ರಗಳನ್ನು ಪರಿಚಯಿಸುವ ಒಂದು ಕೃತಿ ರಚಿಸಿದ್ದರು. ಈಗ ಭಾರತದ ಪವಿತ್ರ ಕ್ಷೇತ್ರಗಳ, ನದಿಗಳ ಪುಣ್ಯಧಾಮಗಳ ದರ್ಶನ ಮಾಡಿ ಅವುಗಳ ಬಗೆಗೆ ವಿವರಗಳನ್ನು **'ಭಾರತದ ಕ್ಷೇತ್ರದರ್ಶನ : ಯಾತ್ರಾ-೨'** ಎಂಬ ತಮ್ಮ ಈ ಎರಡನೆಯ ಕೃತಿಯಲ್ಲಿ ಕೊಟ್ಟಿರುವರು.

'ಚಿರಂಜೀವಿ' ಅವರು 'ನಮ್ಮ ನಿಮ್ಮ ಬೆಂಗಳೂರು' ಎಂಬ ಕೃತಿ ರಚಿಸಿದ್ದು, ಅದರಲ್ಲಿ ಬೆಂಗಳೂರು ನಡೆದು ಬಂದ ದಾರಿಯನ್ನೂ, ಬೆಂಗಳೂರಿನಲ್ಲಿ ನೋಡಲೇಬೇಕಾದುದನ್ನೂ ಮಾರ್ಗದರ್ಶಿ ರೂಪದಲ್ಲಿಕೊಟ್ಟಿರುವರು.

ಇಂಗ್ಲಿಷ್‌ನಲ್ಲಿ ಬಂದಿರುವ 'Speaking Stones'; ಪ್ರವಾಸೋದ್ಯಮ ಇಲಾಖೆಯ ಬೆಂಬಲದಿಂದ ಹೊರಬಂದಿರುವ 'Visitors Guide Karnataka',

'Hampi Travel Guide'; ಎಂ.ಹೆಚ್. ರಘೋತ್ತಮ ತೀರ್ಥರವರ Hoysala Tempel Trio - Belur Halebeed, Somanathapur ಪ್ರವಾಸಿಗಳಿಗೆ ಉತ್ತಮ ಮಾರ್ಗದರ್ಶಿಗಳಾಗಿವೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯವರು '1980-90 ರ ದಶವಾರ್ಷಿಕ ನೀಲನಕಾಶೆ ಹಾಗೂ ಕಾರ್ಯಯೋಜನೆ' (Blue print And plan of Action 1980-1990) ಎನ್ನುವ ಪ್ರಕಟಣೆಯೊಂದನ್ನು ಹಿಂದೆ ಹೊರಡಿಸಿದ್ದರು. ಹತ್ತು ವರ್ಷಗಳಲ್ಲಿ ಕೈಗೊಳ್ಳಬೇಕೆಂದಿದ್ದ ಯೋಜನೆಗಳು, ಕಲ್ಪಿಸಬೇಕೆಂದಿದ್ದ ಪ್ರವಾಸಿ ಸೌಲಭ್ಯಗಳು, ಸಾರಿಗೆ ಸೌಕರ್ಯಗಳು, ಉದ್ದೇಶಿಸಲಾಗಿದ್ದ ಕಾರ್ಯಗಳು ಇವುಗಳ ವಿವರಗಳನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ಇಲಾಖೆಯ ಗುರಿ ಮುಖ್ಯವಾಗಿ ವಿದೇಶೀ ವಿನಿಮಯದ ಗಳಿಕೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಯ ಕಡೆಗಿದ್ದಂತೆ ಕಂಡುಬರುತ್ತದೆ. ವಿಶಾಲ ವ್ಯಾಪ್ತಿಯ ಹಾಗೂ ದೊಡ್ಡ ಪ್ರಮಾಣದ ಯೋಜನೆಗಳಿಗೆ ಮೂಲಾದಾಯವನ್ನು ಹಂಚಲು ಬಿಡದೆ, ಆಯ್ದ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಯ ಕಡೆಗೆ ಗಮನವನ್ನು ಕೇಂದ್ರೀಕರಿಸಿದಂತೆ ತೋರುತ್ತದೆ. ಇಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಎರಡು ವಿಶಾಲ ವರ್ತುಲಗಳನ್ನು (broad circuit) ನಿಗದಿ ಮಾಡಿದೆ. ಅವು ಯಾವುವೆಂದರೆ:

೧. ಬಿಜಾಪುರ-ಬಾದಾಮಿ-ಪಟ್ಟದಕಲ್ಲು-ಐಹೊಳೆ-ಹೊಸಪೇಟೆ.

೨. ಬೆಂಗಳೂರು-ಮೈಸೂರು-ಬಂಡೀಪುರ-ನಾಗರಹೊಳೆ- ಹಾಸನ (ಬೇಲೂರು ಹಳೇಬೀಡು-ಶ್ರವಣಬೆಳಗೂಳ).

ಇವುಗಳಿಗೆ ಅಗತ್ಯವಿರುವ ಸಾರಿಗೆ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಅಭಿವೃದ್ಧಿಗೆ ಅಗತ್ಯವಿರುವ ಪುನರ್ವ್ಯವಸ್ಥೆಯ ಕಾರ್ಯವನ್ನೂ ಕೈಗೊಳ್ಳಲು ಯೋಜಿಸಲಾಗಿದ್ದಿತು.

ಪ್ರವಾಸೋದ್ಯಮ ಇಲಾಖೆಯು ಆಗ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಹಾಕಿ ಕೊಂಡಿದ್ದ ಯೋಜನೆಗಳ ಒಟ್ಟು ಅಂದಾಜು ವಚ್ಚ ೧.೭೫ ಕೋಟಿ ರೂಪಾಯಿಗಳು. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಂಯುಕ್ತ ಪ್ರಯುತ್ನದಿಂದ ೧೯೯೦ರ ಅಂತ್ಯದ ವೇಳೆಗೆ ೩.೫ ಲಕ್ಷ ಪ್ರವಾಸಿಗರನ್ನು ಆರ್ಕಷಿಸುವ ಗುರಿಯನ್ನು ತನ್ನ ಮುಂದಿಟ್ಟು ಕೊಂಡಿದ್ದಿತು.

ವಿದೇಶೀ ವಿನಿಮಯದ ಗಳಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕೆಂದಿರುವ ಪ್ರವಾಸೋದ್ಯಮ ಇಲಾಖೆಯು ವಿದೇಶಗಳಿಂದ ಬರುವ ಪ್ರವಾಸಿಗಳಿಗೆ ಒಳ್ಳೆಯ ಅತಿಥ್ಯ ನೀಡಲು, ಅವರ ತಂಗಡೆ ಸುಖಕರವಾಗಿರಲು, ಅವರ ಸುತ್ತಾಟಗಳಿಗೆ ಗರಿಷ್ಠ

ಪ್ರಮಾಣದಲ್ಲಿ ಸಾರಿಗೆ ಸೌಕರ್ಯವನ್ನು ಕಲ್ಪಿಸಲು ವಿಶೇಷವಾಗಿ ಶ್ರಮವಹಿಸುತ್ತಿದೆ. ಈ ಎಲ್ಲ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನೋಡಿಕೊಳ್ಳುತ್ತದೆ. ಕೆ.ಎಸ್.ಟಿ.ಡಿ.ಸಿಯು ರಾಜ್ಯದಲ್ಲಿ ತನ್ನದೇ ಆದ ಹೋಟೆಲ್‌ಗಳ/ ಲಾಡ್ಜ್‌ಗಳ ಸರಪಣಿಯನ್ನು ಹೊಂದಿದೆ: ಮಂಗಳೂರಿನಲ್ಲಿ ಹೋಟೆಲ್ ಮಯೂರ ನೇತ್ರಾವತಿ; ಮಡಿಕೇರಿಯಲ್ಲಿ ಹೋಟೆಲ್ ಮಯೂರ ವ್ಯಾಲಿ ವ್ಯೂ; ಮೈಸೂರಿನಲ್ಲಿ ಹೋಟೆಲ್ ಮಯೂರ ಹೊಯ್ಸಳ; ಶ್ರೀರಂಗಪಟ್ಟಣದಲ್ಲಿ ಹೋಟೆಲ್ ಮಯೂರ ರಿವರ್‌ಸೈಡ್ ಕಾಟೇಜಸ್; ನಂದಿಬೆಟ್ಟದಲ್ಲಿ ಹೋಟೆಲ್ ಮಯೂರ ಪೈನ್ ಟಾಪ್; ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಹೋಟೆಲ್ ಮಯೂರ; ಬೆಂಗಳೂರಿನ ಬನ್ನೇರಘಟ್ಟದ ರಾಷ್ಟ್ರೀಯ ಉದ್ಯಾನದಲ್ಲಿ ಹೋಟೆಲ್ ಮಯೂರ ವನಶ್ರೀ. ರಾಜ್ಯ ಪ್ರವಾಸೋದ್ಯಮ ಇಲಾಖೆಯು ಸೋಮನಾಥಪುರದಲ್ಲಿ ಟೂರಿಸ್ಟ್ ಕ್ಯಾಂಟಿನ್ ಕಮ್-ರೆಸ್ಟ್ ಹೌಸ್; ಶ್ರವಣಬೆಳಗೊಳದಲ್ಲಿ ಟೂರಿಸ್ಟ್ ಕ್ಯಾಂಟೀನ್-ಕಮ್-ರೆಸಿಡೆನ್ಸ್-ಹಳೇಬೀಡಿನಲ್ಲಿ ಟೂರಿಸ್ಟ್ ಕಾಟೇಜಸ್-ಕಮ್-ಕಾಫಿ ಕಿಯೋಸ್ಕ್ -ಇವುಗಳನ್ನು ನಡೆಸುತ್ತಿದೆ.

ಕೆ.ಎಸ್.ಟಿ.ಡಿ.ಸಿ.ಯು ನಿಯೋಜಿತ (Conducted) ಪ್ರವಾಸಗಳನ್ನು ಬೆಂಗಳೂರಿನಿಂದ ಕೈಗೊಳ್ಳುತ್ತಿದೆ; ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳಿಗೆ ೧/೨ ದಿನದ ಪ್ರವಾಸ; ಬೇಲೂರು, ಹಳೇಬೀಡು, ಶ್ರವಣಬೆಳಗೊಳಗಳಿಗೆ ೧ ದಿನದ ಪ್ರವಾಸ; ಮಂತ್ರಾಲಯ, ಟಿ.ಬಿ. ಡ್ಯಾಮ್, ಹಂಪಿಗಳಿಗೆ ೩ ದಿನಗಳ ಪ್ರವಾಸ; ಮೈಸೂರು ಪ್ರೇಕ್ಷಣೀಯ ಸ್ಥಳಗಳಿಗೆ ೧ ದಿನದ ಪ್ರವಾಸ; ತಿರುಪತಿ; ಮಂಗಾಪುರ, ಕಾಳಹಸ್ತಿಗಳಿಗೆ ೩ ದಿನಗಳ ಪ್ರವಾಸ; ಶ್ರಿರಂಗಪಟ್ಟಣ, ಮೈಸೂರು, ಬೃಂದಾವನ ಗಾರ್ಡನ್ಸ್, ಬಂಡೀಪುರ, ಊಟಿಗಳಿಗೆ ೩ ದಿನಗಳ ಪ್ರವಾಸ; ಶೃಂಗೇರಿ ಹಾಗೂ ಸಮುದ್ರದಂಡೆಗಳ/ ಧಾರ್ಮಿಕ ಪ್ರವಾಸ-ಹೀಗೆ ನಿಯೋಜಿತ ಪ್ರವಾಸಗಳನ್ನು ತನ್ನದೇ ಆದ ಸಾರಿಗೆ ವ್ಯವಸ್ಥೆಯ ಮೂಲಕ ಕೈಗೊಳ್ಳುತ್ತಿದೆ.

ಕರ್ನಾಟಕದ ಪ್ರಸಿದ್ಧ ಪ್ರವಾಸಿ ಕೇಂದ್ರಗಳಾದ ನಂದಿ ಹಾಗೂ ಚಾಮುಂಡಿಬೆಟ್ಟಗಳಿಗೆ ಏರಲು ವೃದ್ಧರಿಗೆ ಅಶಕ್ತರಿಗೆ ಸಾಧ್ಯವಿಲ್ಲದಿರುವುದರಿಂದ ಅಂತಹವರಿಗೆ ಅನುಕೂಲವಾಗಲೆಂದು ಅವುಗಳಿಗೆ ಮೇಲೇರಲು ರೋಪ್‌ವೇ (Roapways) ಸಂಪರ್ಕವನ್ನು ಕಲ್ಪಿಸಲಾಗುವುದು. ಜಗದ್ವಿಖ್ಯಾತ ಬೃಂದಾವನ ಗಾರ್ಡನ್‌ಗೆ ಪುನರ್ ವಿದ್ಯುದಲಂಕರಣ, ಮ್ಯೂಸಿಕಲ್ ಫೌಂಟನ್ ಏರ್ಪಡಿಸಲಾಗಿದ್ದು, ವಿದೇಶೀ ಪ್ರವಾಸಿಗರಿಗೆ ಇದು ವಿಶೇಷ ಆಕರ್ಷಣೆಯಾಗಿದೆ. ಬಿಜಾಪುರದ ಗೋಳಗುಂಬಜ್‌ಗೆ ೧೪.೫೦ ಲಕ್ಷ ರೂಪಾಯಿ ವೆಚ್ಚದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲು ಮತ್ತು ಅಲ್ಲಿನ ಆದಿಲ್‌ಶಾಹಿ ಹೋಟೆಲ್‌ನಲ್ಲಿ ಹೆಚ್ಚುವರಿ ವಸತಿ ಸೌಕರ್ಯ

ಕಲ್ಪಿಸಲು ೨೧.೫೦ ಲಕ್ಷ ರೂಪಾಯಿ ವೆಚ್ಚದ ಯೋಜನೆಯನ್ನು ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ಕಳುಹಿಸಿದೆ. ಬಾದಾಮಿ ಹತ್ತಿರದ ಚೊಳಚಗುಡ್ಡದಲ್ಲಿ ಚಾಲುಕ್ಯ ಸಂಸ್ಕೃತಿ ಕೇಂದ್ರ ತೆರೆಯಲು ೪೮ ಲಕ್ಷ ರೂಪಾಯಿ ವೆಚ್ಚದ ಯೋಜನೆಯನ್ನು ಕರ್ನಾಟಕ ಸರಕಾರ ಸಿದ್ಧಪಡಿಸಿದೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಗಮನಾರ್ಹ ಕೊಡುಗೆಯೆಂದರೆ, ಅರಣ್ಯ ಧಾಮಗಳು (Jungle Lodges). ಬಂಡಿಪುರದ ಬಳಿಯಿರುವ ನಾಗರಹೊಳೆ ಅಭಯಾರಣ್ಯದಲ್ಲಿ ೨೫ಲಕ್ಷ ರೂಪಾಯಿ ವೆಚ್ಚದಲ್ಲಿ ಕಬಿನಿ ರಿವರ್ ಲಾಡ್ಜ್‌ನ್ನು ಕಟ್ಟಲಾಗಿದೆ. ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ ೧೪ ಡಬಲ್ ರೂಮ್‌ಗಳನ್ನು ಒಳಗೊಂಡ ಈ ಲಾಡ್ಜ್‌ನಲ್ಲಿ ಭಾರತೀಯ, ಚೈನೀಸ್ ಹಾಗೂ ಕಾಂಟಿನೆಂಟಲ್ ಊಟೋಪಚಾರಗಳ ವ್ಯವಸ್ಥೆ ಮಾಡಲಾಗಿದೆ. ನಾಗರಹೊಳೆಯ ಅಭಯಾರಣ್ಯದಲ್ಲಿ ವನ್ಯಜೀವಿಗಳನ್ನು ನೋಡಲು ಸಂಚಾರ, ಪಕ್ಷಿಗಳನ್ನು ವೀಕ್ಷಿಸಲು ಕೊರಾಕಲ್ ದೋಣಿ ಪಯಣ, ಪ್ರಕೃತಿಯ ನಡುವೆ ಸುತ್ತಾಟ, ದೋಣಿಯಲ್ಲಿ ಕುಳಿತು ತೇಲುವುದು- ಈ ಸೌಲಭ್ಯಗಳಿವೆ. ಆನೆಯ ಮೇಲೆ ಕುಳಿತು ವಿಹರಿಸುವುದು ಇಲ್ಲಿನ ವಿಶೇಷ ಆಕರ್ಷಣೆ.

೧೯೮೯-೯೦ರಲ್ಲಿ ಸರ್ಕಾರವು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ೧೫೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತು. ೮೯-೯೦ನೇ ಸಾಲಿನಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ಕೆಳಗಿನ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ. ಹಾಗೆಯೇ ಕಳೆದ ಸಾಲಿನ ಯೋಜನೆಗಳನ್ನು ಮುಂದುವರಿಸಲಾಗದೆ:

| | | |
|---|---|---|
| ೧. | ಮೇಕೆದಾಟನಲ್ಲಿ ಸಂತೋಷ ವಿಹಾರದ ವಿಶ್ರಾಂತಿಧಾಮದ ಅಭಿವೃದ್ಧಿಗಾಗಿ | ೦.೦೫ ಲಕ್ಷ |
| ೨. | ಮುತ್ಯಾಲಮಡು ಸಂತೋಷ ವಿಹಾರದ ವಿಶ್ರಾಂತಿಧಾಮದ ಅಭಿವೃದ್ಧಿಗಾಗಿ | ೦.೫೦ ಲಕ್ಷ |
| ೩. | ಬಾದಾಮಿಯಲ್ಲಿ ಹೆಚ್ಚಿನ ಸೌಲಭ್ಯವನ್ನೂ ಸ್ಥಳಾವಕಾಶವನ್ನೂ ಕಲ್ಪಿಸಲು | ೪.೫೦ ಲಕ್ಷ |
| ೪. | ಜೋಗ್ ಫಾಲ್ಸ್‌ನಲ್ಲಿ ಹೆಚ್ಚಿನ ಸೌಲಭ್ಯವನ್ನೂ ಸ್ಥಳಾವಕಾಶವನ್ನೂ ಕಲ್ಪಿಸಲು | ೩.೦೦ ಲಕ್ಷ |
| ೫. | ಬೇಲೂರಿನಲ್ಲಿ ೨೫ ಕೊಠಡಿಗಳು, ೨ ಡಾರ್ಮೆಟರಿ, ರೆಸ್ಟೋರೆಂಟ್ ನಿರ್ಮಾಣಕ್ಕೆ | ೦.೫೦ ಲಕ್ಷ |
| ೬. | ಕನಕಪುರದ ಬಳಿಯಿರುವ ಮೇಕೆದಾಟನಲ್ಲಿ ಅಡಿಗೆಮನೆ ಕಟ್ಟಡ ನಿರ್ಮಿಸಲು | ೩.೦೦ ಲಕ್ಷ |
| ೭. | ಶ್ರೀರಂಗಪಟ್ಟಣದ ಮೊದಲ ಹಾಗೂ ಎರಡನೆ ಸ್ಟೇಜ್‌ಗಳಲ್ಲಿ ಊಟೋಪಚಾರ ನೀಡಲು | ೧.೨೦ ಲಕ್ಷ |

| | |
|---|---|
| ೮. ಹಳೇಬೀಡಿನಲ್ಲಿ ಹೊಯ್ಸಳ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಲು | ೦.೫೦ ಲಕ್ಷ |
| ೯. ಮೂಡಬಿದ್ರೆ ಹಾಗೂ ಕಾರ್ಕಳದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗೆ | ೦.೧೧ ಲಕ್ಷ |
| ೧೦. ಕೋಲಾರದಲ್ಲಿ ದಾರಿಬದಿಯ ಸೌಲಭ್ಯ ಕಲ್ಪಿಸಲು | ೩.೦೦ ಲಕ್ಷ |
| ೧೧. ಬನವಾಸಿಯ ಅಭಿವೃದ್ಧಿಗಾಗಿ | ೨.೦೦ ಲಕ್ಷ |
| ೧೨. ಯಡಿಯೂರಿನಲ್ಲಿ ದಾರಿಬದಿಯ ಸೌಲಭ್ಯ ಕಲ್ಪಿಸಲು | ೧.೭೨ ಲಕ್ಷ |
| ೧೩. ರಾಮೋಹಳ್ಳಿಯ ಸಂತೋಷ ವಿಹಾರದ ವಿಶ್ರಾಂತಿ ಧಾಮದ ಅಭಿವೃದ್ಧಿಗಾಗಿ | ೦.೨೨ ಲಕ್ಷ |
| ೧೪. ಮೈಸೂರಿನ ಸಮೀಪವಿರುವ ಹಂಗಳದಲ್ಲಿ ದಾರಿಬದಿಯ ಸೌಲಭ್ಯ ಕಲ್ಪಿಸಲು | ೦.೫೦ ಲಕ್ಷ |
| ೧೫. ಸೌಂದತ್ತಿಯ ಅಭಿವೃದ್ಧಿಗಾಗಿ | ೦.೪೬ ಲಕ್ಷ |
| ೧೬. ಬೆಳಗಾಂ ಜಿಲ್ಲೆಯ ಸೊಗಲ ಕ್ಷೇತ್ರದ ಅಭಿವೃದ್ಧಿಗಾಗಿ | ೦.೫೦ ಲಕ್ಷ |
| ೧೭. ಶ್ರೀ ರಂಗಪಟ್ಟಣದಲ್ಲಿ ನದಿಯ ದಂಡೆಯ ಹೆಚ್ಚುವರಿ ಕುಟೀರಗಳಿಗಾಗಿ | ೧೨.೨೦ ಲಕ್ಷ |
| ೧೮. ಬಳ್ಳಾರಿ ಮೊದಲ ಘಟ್ಟದ ಅಭಿವೃದ್ಧಿಗಾಗಿ | ೬.೦೦ ಲಕ್ಷ |
| ೧೯. ಮೈಸೂರಿನ ನೆಹರೂ ಲೋಕದ ಅಭಿವೃದ್ಧಿಗಾಗಿ | ೧.೭೨ ಲಕ್ಷ |
| ೨೦. ಹೆಬ್ಬಾಳ/ ಅಲಸೂರು/ ಸ್ಯಾಂಕಿ/ ಯಡಿಯೂರು ಕೆರೆಗಳ ಅಭಿವೃದ್ಧಿ ದೋಣಿ ವಿಹಾರ, ಮೋಟೆಲ್ ಸ್ಥಾಪನೆ | ೧.೦೦ ಲಕ್ಷ |
| ೨೧. ಮುರುಡೇಶ್ವರದಲ್ಲಿ ಸಮುದ್ರ ದಂಡೆಯ ವಿಶ್ರಾಂತಿ ಗೃಹ ನಿರ್ಮಾಣ | ೬.೦೦ ಲಕ್ಷ |
| ೨೨. ಹುಮ್ನಾಬಾದ್‌ನಲ್ಲಿ ದಾರಿಬದಿಯ ಸೌಲಭ್ಯ ಕಲ್ಪಿಸಲು | ೦.೨೨ ಲಕ್ಷ |
| ೨೩. ರಾಮನಗರಂ (ಸೂಪಾ) ದಾರಿಬದಿಯ ಸೌಲಭ್ಯ ಕಲ್ಪಿಸಲು | ೦.೨೨ ಲಕ್ಷ |
| ೨೪. ವಾಣಿವಿಲಾಸ ಸಾಗರ (ಚಿತ್ರದುರ್ಗ)ದಲ್ಲಿ ಬೋಟಿಂಗ್ ಕ್ಲಬ್ ಅಭಿವೃದ್ಧಿಗಾಗಿ | ೧.೭೨ ಲಕ್ಷ |
| ೨೫. ಬಿಜಾಪುರದ ಗೋಲಗುಂಬಜ್ ವಿದ್ಯುದಲಂಕಾರಕ್ಕಾಗಿ | ೪.೩೫ ಲಕ್ಷ |
| ೨೬. ಸೂಪಾ ತಾಲೂಕಿನ ಅನ್‌ಮೋದ್ ಪ್ರವಾಸಿ ವಿಶ್ರಾಂತಿ ಗೃಹ ನಿರ್ಮಾಣಕ್ಕಾಗಿ | ೨.೦೦ಲಕ್ಷ |
| ೨೭. ಗಂಗಾಪೇಟೆಯಲ್ಲಿ ದತ್ತಾತ್ರೇಯ ಪೀಠದ ಪ್ರವಾಸಿ ರೆಸ್ಟೋರೆಂಟ್ ನಿರ್ಮಿಸಲು | ೩.೦೦ ಲಕ್ಷ |
| | ೪೨.೨೪ ಲಕ್ಷ |
| | ೪೨.೨೪ ಲಕ್ಷ |

೧೯೮೯-೯೦ನೇ ಸಾಲಿನಲ್ಲಿ ರಾಜ್ಯ ಮರಾಮತ್ ಇಲಾಖೆಯು ಮೂಡಬಿದ್ರೆ ಹಾಗೂ ಕಾರ್ಕಳದಲ್ಲಿ ಅಡಿಗೆಮನೆ ಹಾಗೂ ಊಟದ ಬ್ಲಾಕ್ ನಿರ್ಮಾಣ; ಜೋಗ್ ಫಾಲ್ಸ್‌ನಲ್ಲಿ ಜಲದರ್ಶಿನಿ ತುಂಗಾಲಾಡ್ಜ್ ನಿರ್ಮಾಣ- ಈ ಮೂರು ಯೋಜನೆಗಳನ್ನು ಪೂರ್ಣಗೊಳಿಸಿದ್ದು, ಅವು ಬಳಕೆಗೆ ಸಜ್ಜಾಗಿವೆ. ರಾಜ್ಯ ಸರಕಾರವು ಕೇಂದ್ರ ಸರಕಾರಕ್ಕೆ ಸಲ್ಲಿಸಿದ್ದ ೧೩ ಪ್ರಾಜೆಕ್ಟ್‌ಗಳನ್ನು ಕೇಂದ್ರ ಸರಕಾರವು ಮಂಜೂರು ಮಾಡಿದ್ದು ಅವುಗಳ ಕಾರ್ಯ ನಿರ್ವಹಿಸಲು ರಾಜ್ಯ ಮರಾಮತ್ ಇಲಾಖೆ, ಕೇಂದ್ರ ಮರಾಮತ್ ಇಲಾಖೆ, ಕೆಎಲ್‌ಎಸಿ, ಕೆಎಸ್‌ಸಿಸಿ - ಈ ಸಂಸ್ಥೆಗಳಿಗೆ ಆದೇಶ ನೀಡಲಾಗಿದೆ. ಇವಲ್ಲದೆ, ರಂಗನತಿಟ್ಟು ಪಕ್ಷಿಧಾಮಕ್ಕೆ ಎರಡು ದೋಣಿಗಳನ್ನು ಕೊಳ್ಳಲು ೯೯,೬೧೦=೦೦; ಬಾದಾಮಿಯಲ್ಲಿ ಪ್ರವಾಸಿ ಗೃಹ (ನ್ಯೂ ಬ್ಲಾಕ್) ನಿರ್ಮಾಣಕ್ಕಾಗಿ ೨೧,೦೪,೦೦=೦೦; ಮೆಲಕಾಮನಹಳ್ಳಿಯಲ್ಲಿ ಟೂರಿಸ್ಟ್ ಕಾಂಪ್ಲೆಕ್ಸ್ ನಿರ್ಮಾಣಕ್ಕಾಗಿ ೧೦,೫೨,೦೦=೦೦ ಈ ಯೋಜನೆಗಳನ್ನು ಕೇಂದ್ರ ಸರಕಾರವು ಮಂಜೂರು ಮಾಡಿದ್ದು ಇವುಗಳ ಕೆಲಸ ಪ್ರಾರಂಭಿಸಲು ಮೊದಲ ಕಂತಿನ ೯.೯೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ಪ್ರವಾಸೋದ್ಯಮ ಇಲಾಖೆಯು ಸಾಹಸಿ ಪ್ರವಾಸೋದ್ಯಮವನ್ನು (Adventure Tourism) ಅಭಿವೃದ್ಧಿ ಪಡಿಸಲು ಯೋಜಿಸಿದ್ದು ಇದರ ಸಲುವಾಗಿ ಖಾರಾಪುರ (ಕಬಿನಿ ನದಿಯ ದಂಡೆಯ ಕುಟೀರಗಳ ಬಳಿ) ಟೆಂಟ್ ಕ್ಯಾಂಪ್ ನಿರ್ಮಿಸಲು ಮೆ॥ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್, ಬೆಂಗಳೂರು ಇವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದೆ.

೧೯೯೧ರ ವಾರ್ಷಿಕ ಪ್ಲ್ಯಾನ್‌ನಲ್ಲಿ ಸೇರಿಸಿಕೊಳ್ಳಲು ಕೇಂದ್ರ ಸರಕಾರಕ್ಕೆ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಕೆಳಗಿನ ಯೋಜನೆಗಳನ್ನು ಸಾದರ ಪಡಿಸಿದೆ:

| | | |
|---|---|---|
| ೧. | ಮುರುಡೇಶ್ವರದಲ್ಲಿ ಗಿರಿಧಾಮಗಳು (Hill cottages) ನಿರ್ಮಾಣ | ೨೨.೭೫ ಲಕ್ಷ |
| ೨. | ಕೊಡಚಾದ್ರಿಯಲ್ಲಿ ಗಿರಿ ಧಾಮಗಳ ನಿರ್ಮಾಣ | ೨೨.೭೫ ಲಕ್ಷ |
| ೩. | ಕುದುರೆಮುಖದಲ್ಲಿ ಗಿರಿಧಾಮಗಳ ನಿರ್ಮಾಣ | ೨೨.೭೫ ಲಕ್ಷ |
| ೪. | ಬಾಬಾಬುಡನ್ ಗಿರಿಯಲ್ಲಿ ಗಿರಿಧಾಮಗಳ ನಿರ್ಮಾಣ | ೨೨.೭೫ ಲಕ್ಷ |
| ೫. | ಮಾದೇಶ್ವರ ಬೆಟ್ಟದಲ್ಲಿ ಗಿರಿಧಾಮಗಳ ನಿರ್ಮಾಣ | ೨೦.೭೫ ಲಕ್ಷ |
| ೬. | ಬಿಳಿಗಿರಿರಂಗನ ಬೆಟ್ಟದಲ್ಲಿ ಗಿರಿಧಾಮಗಳ ನಿರ್ಮಾಣ | ೨೨.೭೫ ಲಕ್ಷ |
| ೭. | ಪರ್ವತಾರೋಹಣ ಸಾಧನಗಳನ್ನು ಕೊಳ್ಳಲು | ೪.೧೫ ಲಕ್ಷ |
| ೮. | ದೋಣಿಗಳನ್ನು ಕೊಳ್ಳಲು | ೫.೧೫ ಲಕ್ಷ |
| ೯. | ಬಾಣಾವರದಲ್ಲಿ ಹಾದಿಬದಿಯ ಸೌಲಭ್ಯ ಕಲ್ಪಿಸಲು | ೧೧.೨೬ ಲಕ್ಷ |
| ೧೦. | ಬನವಾಸಿಯಲ್ಲಿ ಪ್ರವಾಸೀ ಸೌಲಭ್ಯ ಕಲ್ಪಿಸಲು | ೧೧.೨೬ ಲಕ್ಷ |

| | |
|---|---|
| ೧೨. ಹಾಲಸಿಯಲ್ಲಿ ಪ್ರವಾಸೀ ಸೌಲಭ್ಯ ಕಲ್ಪಿಸಲು | ೧೧.೨೬ ಲಕ್ಷ |
| ೧೩. ಶಿರಾಡಿಯಲ್ಲಿ ಹಾದ ಬದಿಯ ಸೌಲಭ್ಯ ಕಲ್ಪಿಸಲು | ೧೧.೨೬ ಲಕ್ಷ |
| **ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್ ಲಿ.** | |
| ೧೪. ಭೀಮೇಶ್ವರಿ ಮೀನುಗಾರಿಕೆ ಕ್ಯಾಂಪ್‌ನಲ್ಲಿ ಪ್ರವಾಸಿ ಕುಟೀರ ನಿರ್ಮಾಣಕ್ಕಾಗಿ | ೧೭.೨೩ ಲಕ್ಷ |
| ೧೫. ಏರಡು ಜೀಪ್ ಕೊಳ್ಳಲು | ೨.೯೭ ಲಕ್ಷ |
| | ೨೨೨.೩೦ |

೧೯೮೦-೯೦ನೇ ಸಾಲಿನಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಇತರೆ ಹಲವಾರು ಸರಕಾರಿ ಏಜೆನ್ಸಿಗಳ ಸಹಕಾರದೊಂದಿಗೆ ಕರ್ನಾಟಕದ ಉತ್ತರ ಹಾಗೂ ದಕ್ಷಿಣ ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕೆಲವು ಯೋಜನೆಗಳನ್ನು ಸಿದ್ಧಪಡಿಸಿ ಒ.ಇ.ಸಿ.ಎಫ್. ಜಪಾನ್ ಯೋಜನೆಯ ನೆರವನ್ನು ಪಡೆಯ ಬಯಸಿದೆ. ಈ ಯೋಜನೆ, ಪ್ರಮುಖ ಪ್ರವಾಸಿ ಕೇಂದ್ರಗಳಿಗೆ ರಸ್ತೆಗಳನ್ನು ನಿರ್ಮಿಸುವುದು, ಸ್ಥಳಾವಕಾಶ ಕಲ್ಪಿಸುವುದು, ಹಾದಿ ಬದಿಯ ಸೌಲಭ್ಯ ಕಲ್ಪಿಸುವುದು, ಮನರಂಜನೆಯ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸುವುದು, ಪ್ರಾಚ್ಯ ಸ್ಮಾರಕಗಳ ಭೂಶೋಧನ ಮಾಡುವುದು- ಇವುಗಳನ್ನು ಒಳಗೊಳ್ಳುತ್ತದೆ. ಈ ಯೋಜನೆಯ ಬೆಂಗಳೂರಿನ ಮೆ॥ ಫರ್ಗುಸನ್ ಕಂಪನಿಯವರಿಂದ ರೂ ೨೦೯ ಕೋಟಿ ಅಂದಾಜು ವೆಚ್ಚದಲ್ಲಿ ಸಿದ್ಧಗೊಂಡಿದ್ದು, ಇದನ್ನು ರಾಜ್ಯಸರಕಾರವು ರೂ. ೧೬೨.೦ ಕೋಟಿಗೆ ಸರಿಗೊಳಿಸಿ, ಕೇಂದ್ರ ಸರಕಾರದ ಮೂಲಕ ಜಪಾನಿನ ಒ.ಇ.ಸಿ.ಎಫ್.ನ್ನು ಲಘು ಸಾಲ / ಸಹಾಯ (Soft loan/ assistance) ಕೇಳಲು ಬಯಸಿದೆ. ಈ ಮೊತ್ತದಲ್ಲಿ ರೂ. ೬೨.೪೦ ಕೋಟಿಯನ್ನು ಖಾಸಗಿ ಉದ್ಯಮದವರಿಗೆ (Private sector) ತೆಗೆದಿಟ್ಟು, ಉಳಿದ ರೂ. ೧೦೦.೦೦ ಕೋಟಿಯನ್ನು ಸರಕಾರದ ಪರವಾದ ಏಜೆನ್ಸಿಗಳು (ಅಂದರೆ ಪ್ರವಾಸೋದ್ಯಮ ಇಲಾಖೆಯು) ೫ ವರ್ಷಗಳ ಅವಧಿಯಲ್ಲಿ ಈ ಯೋಜನೆ ಜಾರಿಗೆ ಬರುವಂತೆ ಜಪಾನಿನ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಯಿಂದ ಸಾಲ ಪಡೆಯಲು ಅರ್ಜಿ ಸಲ್ಲಿಸಿದೆ.

ಪ್ರವಾಸೋದ್ಯಮ ಇಲಾಖೆಯು ಹಂಪೆ ಹಾಗೂ ಮೈಸೂರಿನಲ್ಲಿ ಪ್ರವಾಸಿ ಸಂಕೀರ್ಣವನ್ನು ಕಟ್ಟಿಸುತ್ತಿದ್ದು ಇವು ಮುಕ್ತಾಯದ ಹಂತದಲ್ಲಿವೆ. ಶಿರಡಿ, ಲೋಕಾಪುರ, ಕುಣಗುಂದ, ಬನವಾಸಿಗಳಲ್ಲಿ ಪ್ರವಾಸಿ ಕೇಂದ್ರವನ್ನು ತೆರೆಯಲು ಹಾಗೂ ಭೀಮೇಶ್ವರಿಯಲ್ಲಿ ಮೀನುಗಾರಿಕೆ ಕೇಂದ್ರವನ್ನು ತೆರೆಯಲು ಪ್ರವಾಸೋದ್ಯಮ ಇಲಾಖೆ

## ಕರ್ನಾಟಕಕ್ಕೆ ಪ್ರವಾಸಿಗರಾಗಿ ಬಂದವರ ಅಂಕಿ ಸಂಖ್ಯೆ

| ಸ್ಥಳಗಳು | ಪ್ರವಾಸಿಗರು | 1983-84 | 1984-85 | 1985-86 | 1986-87 | 1987-88 | 1988-89 | 1989-90 |
|---|---|---|---|---|---|---|---|---|
| 1. ಬೆಂಗಳೂರು | ಭಾರತೀಯರು | 1,28,56,300 | 1,38,43,300 | 1,31,57,588 | 1,72,41,856 | 1,79,98,568 | 1,86,96,433 | 2,38,88,965 |
| | ವಿದೇಶೀಯರು | 1,13,300 | 1,84,200 | 1,62,458 | 3,12,375 | 3,38,156 | 3,64,250 | 4,71,365 |
| 2. ಹಂಪಿ | ಭಾರತೀಯರು | 1,97,700 | 2,21,60 | 2,64,800 | 2,87,438 | 3,96,260 | | |
| | ವಿದೇಶೀಯರು | | | | | | | |
| 3. ಬಿಜಾಪುರ | ಭಾರತೀಯರು | 1,81,667 | 1,68,447 | 2,30,450 | 2,75,917 | 3,50,609 | 4,09,919 | 5,66,670 |
| | ವಿದೇಶೀಯರು | 12,938 | 11,171 | 14,031 | 15,149 | 16,307 | 17,650 | 29,175 |
| 4. ಪಟ್ಟದಕಲ್ ಬಾದಾಮಿ ಐಹೊಳೆ | ಭಾರತೀಯರು | 2,23,126 | 2,23,996 | 3,02,316 | 3,70,944 | 4,42,044 | 4,92,304 | 6,14,670 |
| | ವಿದೇಶೀಯರು | 39,876 | 46,716 | 56,004 | 90,936 | 1,02,144 | 1,10,510 | 2,19,400 |
| | ಭಾರತೀಯರು | | | | | | | |
| | ವಿದೇಶೀಯರು | | | | | | | |
| 5. ಬೇಲೂರು ಹಳೇಬೀಡು ಶ್ರವಣಬೆಳುಗೊಳ | ಭಾರತೀಯರು | 3,01,320 | 3,09,000 | 3,59,160 | 4,31,430 | 501,672 | 5,58,174 | 8,69,275 |
| | ವಿದೇಶೀಯರು | 12,600 | 18,672 | 21,708 | 24,358 | 66,390 | | |
| 6. ಮೈಸೂರು | ಭಾರತೀಯರು | 6,00,000 | 6,50,000 | 7,50,000 | 7,60,000 | 7,00,000 | 7,29,000 | 9,90,000 |
| | ವಿದೇಶೀಯರು | 68,640 | 70,640 | 70,640 | 75,700 | 70,000 | 72,450 | 92,600 |

ಬೇಲೂರಿನ ಬಳಿ ಯಗಟಿ ನದಿಯ ನೀರಿನ ಬಳಕೆಗಾಗಿ ಒಂದು ಡ್ಯಾಂ ನಿರ್ಮಿಸಲಾಗಿದೆ. ಯಗಟಿ ಎಡದಂಡೆ ನಾಲೆಯ ಉದ್ದ ೮೩ ಕಿ.ಮೀ. ನೀರಿನ ಸಾಮರ್ಥ್ಯ ೪೯೨ ಕ್ಯೂಸೆಕ್ಸ್. ಈ ಡ್ಯಾಂನಿಂದ ನೀರುಣಿಸುವ ಅಚ್ಚುಕಟ್ಟು ಪ್ರದೇಶ ೩.೭ ಸಾವಿರ ಎಕರೆ. ಪ್ರಾರಂಭಿಕ ಹಂತದಲ್ಲಿ ನೀರಿನ ಆಳ ೨೪೦ ಮೀಟರ್ಸ್. ಈಗ ಈ ಡ್ಯಾಂ ಜನರ ಆಕರ್ಷಣೆಗೆ ಒಳಗಾಗಿದ್ದು, ಬೇಲೂರಿಗೆ ಬರುವ ಪ್ರವಾಸಿಗರು ಇದನ್ನು ನೋಡಿ ಆನಂದಿಸಲು ಬರುತ್ತಿರುವರು.

ಉತ್ತರ ಭಾರತದಲ್ಲಿ ಭಯೋತ್ಪಾದಕರ ಆಕ್ರಮಣದ ಭೀತಿಯಿರುವುದರಿಂದಾಗಿ ವಿದೇಶೀ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ರೂಪಿಸಿರುವ 'ಸನ್ನಿ ಸೌತ್' ಪ್ರಚಾರಾಂದೋಲನ ದಕ್ಷಿಣ ಭಾರತಕ್ಕೆ ಪ್ರವಾಸಿಗರನ್ನು ಆಹ್ವಾನಿಸುತ್ತಿದೆ. ರಾಜ್ಯ ಸರಕಾರವು ಈ ಯೋಜನೆಯನ್ನು ಒಪ್ಪಿಕೊಂಡಿದೆ.

ಕರ್ನಾಟಕಕ್ಕೆ ಪ್ರವಾಸಿಗರಾಗಿ ಭೇಟಿಕೊಟ್ಟ ಭಾರತೀಯ/ ವಿದೇಶೀಯರ ಅಂಕಿ ಸಂಖ್ಯೆಗಳು ಕುತೂಹಲಕರವಾಗಿವೆ. ಗಮನಾರ್ಹವಾದ ಸಂಗತಿಯೆಂದರೆ, ಬೇರಾವ ರಾಜ್ಯಗಳಿಗೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಪ್ರವಾಸಿಗರು ಆಕರ್ಷಿತರಾಗದಿರುವುದು. ಎಲ್ಲ ಋತುಮಾನಗಳಲ್ಲೂ ಇಲ್ಲಿ ಸುಖಕರವಾಗಿ ಪ್ರವಾಸ ಕೈಗೊಳ್ಳಲು ಅನುಕೂಲ ವಾದ ಆಹ್ಲಾದಮಯವಾದ ಹವಾಮಾನವಿರುವುದು ಪ್ರವಾಸಿಗರ ಹೆಚ್ಚಳಕ್ಕೆ ಮೊದಲನೆಯ ಕಾರಣ. ಪ್ರವಾಸಿಗರ ಆಗಮನದ ಅಂಕಿ ಸಂಖ್ಯೆಗಳು ಪ್ರಕಾರ, ಬೆಂಗಳೂರು, ಮೈಸೂರು, ಪಟ್ಟದಕಲ್, ಬಾದಾಮಿ, ಐಹೊಳೆ, ಹಂಪೆ-ಹೀಗೆ ಅನುಕ್ರಮವಾಗಿ ಪ್ರವಾಸಿ ಆಕರ್ಷಣೆಯ ಕೇಂದ್ರಗಳಿವೆ. ಪ್ರವಾಸಿ ಸ್ಥಳಗಳ ಆಯ್ಕೆಯಲ್ಲಿನ ಅನುಕ್ರಮಣಿಕೆಯು ಪ್ರವಾಸಿಗರ ವೈಯಕ್ತಿಕ ಒಲವುಗಳ ಕಡೆ ಬೆರಳು ಮಾಡುತ್ತದೆ. ವೈವಿಧ್ಯಮಯವಾದ ಪ್ರವಾಸಿ ಆಕರ್ಷಣೆ ಪ್ರವಾಸಿಗರ ಹೆಚ್ಚಳಕ್ಕೆ ಎರಡನೆಯ ಕಾರಣ. ಕರ್ನಾಟಕದ ಜನತೆ ಸೌಹಾರ್ದಮಯಿಗಳಾಗಿರುವುದರಿಂದ ಹಾಗೂ ಇಲ್ಲಿ ಭಯದ ವಾತಾವರಣವಿಲ್ಲದಿರುವುದರಿಂದ ಪ್ರವಾಸಿಗರ ಹೆಚ್ಚಳಕ್ಕೆ ಮೂರನೆಯ ಕಾರಣ. ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪ, ಕೈಗಾರಿಕೆ ಮೊದಲಾದವುಗಳು ವೈಶಿಷ್ಟ್ಯಪೂರ್ಣವಾಗಿದ್ದು, ಅವುಗಳಿಗೆ ತಮ್ಮದೇ ಆದ ಒಂದು ಭವ್ಯ ಪರಂಪರೆಯಿರುವುದೂ ಪ್ರವಾಸಿಗರ ಹೆಚ್ಚಳಕ್ಕೆ ನಾಲ್ಕನೆಯ ಕಾರಣ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ತಾರಗೋಡದ ಸೀತಾರಾಮ ಹೆಗಡೆ ಹಾಗೂ ಅವರ ಪತ್ನಿ ಗಂಗಾಭವಾನಿ ಹೆಗಡೆ ಬಿದಿರಿನಿಂದ ನಾನಾ ಬಗೆಯ ಗೃಹೋಪಯೋಗಿ ವಸ್ತುಗಳು, ಅಲಂಕಾರಿಕ ವಸ್ತುಗಳನ್ನು ನಿರ್ಮಿಸುವ ಹವ್ಯಾಸ. ಈ

ದಂಪತಿಗಳು ಬಿದಿರಿನಿಂದ ನಾನಾ ಬಗೆಯ ವಸ್ತುಗಳನ್ನು ತಯಾರಿಸುವುದನ್ನು ಸ್ವತಂತ್ರವಾಗಿ ಕಲಿತು ಒಬ್ಬರಿಗೊಬ್ಬರು ಮಾಡಿ ನೋಡಿ ತಿಳಿಯುವುದರ ಮೂಲಕ ಕಲಿತು ಈಗ ಇವರು ಯಾವುದೇ ಮಾಡೆಲ್‌ಗಳನ್ನು ಕಲಾತ್ಮಕವಾಗಿ ಮಾಡುವಷ್ಟು ಪಳಗಿದ್ದಾರೆ. ಆಕರ್ಷಕ ವಿನ್ಯಾಸದ ಲ್ಯಾಂಪ್‌ಶೇಡ್, ಆಭರಣ ಪೆಟ್ಟಿಗೆ, ಚಕ್ಕಡಿಗಾಡಿ, ಪೆನ್‌ಸ್ಟ್ಯಾಂಡ್, ನವಿಲು ಹೂದಾನಿ, ರಥ, ತೊಟ್ಟಿಲು, ಪತ್ರಗಳನ್ನಡುವ ಪೆಟ್ಟಿಗೆ -ಹೀಗೆ ನಾನಾ ಬಗೆಯ ಗೃಹೋಪಯೋಗಿ ಅಲಂಕಾರಿಕ ವಸ್ತುಗಳು ಬಿದಿರಿನಿಂದ ಇಲ್ಲಿ ತಯಾರಾಗುತ್ತಿವೆ. ಈ ಕರಕೌಶಲ್ಯ ವಸ್ತುಗಳು ಅವರ ಮನೆಯನ್ನು ಅಲಂಕರಿಸಿವೆ. ಅಷ್ಟೇ ಅಲ್ಲ, ಆಸಕ್ತರಿಗಾಗಿ ಇವುಗಳ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಬಿದಿರುಕಲೆಗೆ ಯೋಗ್ಯ ಪ್ರೋತ್ಸಾಹ ನೀಡಿದರೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಇದನ್ನೊಂದು ಲಾಭದಾಯಕ ಉದ್ಯಮವಾಗಿಯೂ ಬೆಳೆಸಲು ಸಾಧ್ಯವಿದೆ.

**ಸಾಹಸ ಕ್ರೀಡೆಗಳು**

ಸಾಹಸ ಕ್ರೀಡೆಗಳು ಈಗ ಸಾರ್ವಜನಿಕರ ಆಸಕ್ತಿಗೆ ಒಳಗಾಗಿವೆ, ಶಿಕ್ಷಣದ ಒಂದು ಭಾಗವೇ ಆಗಿವೆ. ಇದನ್ನು ಇನ್ನಷ್ಟು ವ್ಯಾಪಕವಾಗಿ ಜನಸಮೂಹದಲ್ಲಿ ಹರಡಲು ೧೯೮೯ರಲ್ಲಿ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಅಸ್ತಿತ್ವಕ್ಕೆ ಬಂದಿತು. ಸಾಹಸ ಕ್ರೀಡೆಗಳನ್ನು ಪ್ರಮುಖವಾಗಿ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ:

**೧. ಭೂಸಾಹಸ ಚಟುವಟಿಕೆಗಳು (Terrestrial sports)**

ತಿರುಗಾಟ (Rambling), ಹೊರಸಂಚಾರ (Hiking) ಚಾರಣ (Trekking), ಶಿಲಾರೋಹಣ (Rock climbing) ರಾತ್ರಿಚಾರಣ (Orienteeing) ಗುಹಾನ್ವೇಷಣೆ, ಹಿಮಪರ್ವತಗಳಲ್ಲಿ ಚಾರಣ, ಪರ್ವತಾರೋಹಣ, ಸ್ಕೀಯಿಂಗ್, ಹೈ ಆಲ್ಟಿಟ್ಯೂಡ್ ಟ್ರೆಕ್ಕಿಂಗ್, ನದಿದಾಟುವಿಕೆ, ನದಿಮೂಲ ಹುಡುಕುವುದು, ವನ್ಯಜೀವಿ ಅಧ್ಯಯನ, ವನ್ಯಸಸ್ಯಗಳ ಅಧ್ಯಯನ, ಕಾಡಿನಲ್ಲಿ ವಿವಿಧ ದಾರಿಗಳ ಅನ್ವೇಷಣೆ, ಪರಿಸರ ಸ್ನೇಹಿ ಹೊರಾಂಗಣ ಶಿಕ್ಷಣ ಇತ್ಯಾದಿ.

**೨. ಜಲಸಾಹಸ ಕ್ರೀಡೆಗಳು (Aero sports)**

ಹುಟ್ಟುಹಾಕಿ ದೋಣಿ ನಡೆಸುವುದು (Rowing), ಕಾನೋಯಾನ (canoeing) ಕಯಾಕ್‌ಯಾನ (Kayaking), ಹಾಯಿದೋಣಿಯಾನ (wind surfing) ವೇವ್ ಸರ್ಫಿಂಗ್, ತೆಪ್ಪದಯಾನ, ಸ್ಕ್ಯೂಬಾ ಡೈವಿಂಗ್, ಮೋಟಾರ್ ಬೋಟಿಂಗ್, ಆಳ ಸಮುದ್ರಗಳಲ್ಲಿ ಮುಳುಗುವಿಕೆ, ಸಮುದ್ರದೊಳಗಣ ಅನ್ವೇಷಣೆ ಇತ್ಯಾದಿ.

## ೬. ವಾಯುಸಾಹಸ ಕ್ರೀಡೆಗಳು

ಪ್ಯಾರಾ ಸೇಲಿಂಗ್, ಪ್ಯಾರಾ ಗ್ಲೈಡಿಂಗ್, ಪ್ಯಾರಾ ಟ್ರೂಪಿಂಗ್, ಹ್ಯಾಂಗ್ ಗ್ಲೈಡಿಂಗ್, ಪವರ್ಡ್ ಹ್ಯಾಂಗ್ ಗ್ಲೈಡಿಂಗ್, ಸ್ಕೈಡೈವಿಂಗ್, ಗಾಳಿಯಲ್ಲಿ ತೇಲುವುದು, ಮೈಕ್ರೋಲೈಟ್, ಅಲ್ಟ್ರಾಲೈಟ್‌ಗಳ ಉಡ್ಡಯನ, ಬಿಸಿಗಾಳಿ ಬಲೂನ್‌ಗಳಲ್ಲಿ ಯಾನ, ಗಾಳಿಯಲ್ಲಿ ನಡೆಸುವ ವಿವಿಧ ಬಗೆಯ ಕಸರತ್ತುಗಳು ಇತ್ಯಾದಿ.

ಈ ಎಲ್ಲ ಸಾಹಸಕ್ರೀಡೆಗಳನ್ನು ಒಂದೇ ಊರಿನಲ್ಲಿ ನಡೆಸಲು ಸಾಧ್ಯವಾಗದು. ಸ್ಕೀಯಿಂಗ್ ಹಿಮದರಾಶಿಯ ನೆಲ, ಗುಡ್ಡಗಳು ಬೇಕಾದರೆ, ಹಿಮಾಲಯದ ಉನ್ನತ ಶಿಖರಗಳು, ಕಣಿವೆಗಳಲ್ಲಿ ಹೈ ಆಲ್ಟಿಟ್ಯೂಡ್ ಟ್ರೆಕ್ಕಿಂಗ್ ನಡೆಸಬಹುದು. ಇವೆರಡನ್ನು ಬಿಟ್ಟರೆ ಉಳಿದ ಎಲ್ಲಾ ಬಗೆಯ ಸಾಹಸಗಳನ್ನು ಕರ್ನಾಟಕದಲ್ಲಿ ನಡೆಸಲು ಅವಕಾಶಗಳಿವೆ. ಪರಿಸರ ಹಾಗೂ ಹೊರಾಂಗಣ ಶಿಕ್ಷಣದ ಮಹತ್ವ ತಿಳಿಸಲು ಸಾಹಸ ಶಿಬಿರಗಳು ಮೇಲಿಂದ ನಡೆಯಬೇಕಾಗಿವೆ. ಪ್ರತಿವರ್ಷ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯವರು ಮಕ್ಕಳಿಗಾಗಿ ಹತ್ತಾರು ಸಾಹಸ, ಪರಿಸರ ಅಧ್ಯಯನ ಶಿಬಿರಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಏರ್ಪಡಿಸುವರು. ಆಸಕ್ತರು ಯುವಜನ ಸೇವಾ ಇಲಾಖೆಯ ಮುಖ್ಯಸ್ಥರನ್ನು ಭೇಟಿ ಮಾಡಿ ಮಾಹಿತಿ ಪಡೆಯಬಹುದು. ಕರ್ನಾಟಕದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಸಾಹಸ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವಕಾಶವಿದೆ. ಸಹ್ಯಾದ್ರಿಶ್ರೇಣಿಯ ಎಲ್ಲೆಡೆಗಳಲ್ಲಿ ಈ ಶಿಬಿರಗಳನ್ನು ನಡೆಸಬಹುದು. ಉತ್ತರಕನ್ನಡ ಜಿಲ್ಲೆಯಲ್ಲಿ, ಶಿವಮೊಗ್ಗ, ಉಡುಪಿ, ಮಂಗಳೂರು, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿನ ಬೆಟ್ಟ ಗುಡ್ಡ ಕಣಿವೆಗಳಲ್ಲಿ ಹೊರಾಂಗಣ ಶಿಕ್ಷಣ ಶಿಬಿರಗಳನ್ನು ಹಮ್ಮಿಕೊಳ್ಳಬಹುದು. ರಾಮನಗರ, ಚಿತ್ರದುರ್ಗದ ಚಂದ್ರವಳ್ಳಿ, ಹಂಪಿ ಮತ್ತು ಬದಾಮಿಗಳಲ್ಲಿ ಶಿಲಾರೋಹಣ ಮಾಡಬಹುದು. ನದಿ ತೊರೆ ಹೆಚ್ಚಿರುವ ಪ್ರದೇಶಗಳಲ್ಲಿ ಜಲಸಾಹಸ ಕ್ರೀಡೆಗಳನ್ನು ಹಮ್ಮಿಕೊಳ್ಳಬಹುದು. ವಾಯುನೆಲೆ, ಹೆಲಿಪ್ಯಾಡ್‌ಗಳು ಇಲ್ಲವೆ ವಿಶಾಲವಾದ ಒಣಗಿದ ಕೆರೆಯ ಅಂಗಳದಲ್ಲಿ ವಾಯುಸಾಹಸ ಕ್ರೀಡೆಗಳನ್ನು ನಡೆಸಲು ಯೋಜನೆ ಹಾಕಿಕೊಳ್ಳಬಹುದು. ರೈಲು ಹಳಿಗುಂಟ ಚಾರಣ ಹೋಗುವ ಹವ್ಯಾಸ ಸಹಾ ಬೆಳೆದಿದೆ. ಸಕಲೇಶಪುರ-ದೋಣಿಗಾಲು-ಎಡಕುಮೇರಿ-ಸಿರಿವಾಗಿಲು-ಕೆಂಪುಹಳ್ಳ-ಸುಬ್ರಹ್ಮಣ್ಯ ರಸ್ತೆವರೆಗಿನ ಸು. ೪೫ ಕಿ.ಮೀ. ಮಾರ್ಗದಲ್ಲಿ ೧೦೦ ಅಡಿಗಳಿಂದ ಹಿಡಿದು ೬೫೦ ಅಡಿಗಳ ವರೆಗಿನ ಸು. ಎಂಟು ಸುರಂಗ ಮಾರ್ಗ ಚಾರಣ, ದಟ್ಟವಾದ ಕಾಡುಗಳಲ್ಲಿ ಚಾರಣ, ಸಹ್ಯಾದ್ರಿಶ್ರೇಣಿ ಪರ್ವತಗಳ ಚಾರಣ ಹೀಗೆ ಇವುಗಳನ್ನು ಆಯ್ಕೆಮಾಡಿಕೊಳ್ಳಬಹುದು.

ಕರ್ನಾಟಕದಲ್ಲಿರುವ ಅಂಶಿ ರಾಷ್ಟ್ರೀಯ ಉದ್ಯಾನ, ಬಂಡೀಪುರ ರಾಷ್ಟ್ರೀಯ ಉದ್ಯಾನ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಕುದುರೆಮುಖ ರಾಷ್ಟ್ರೀಯ ಉದ್ಯಾನ, ನಾಗರಹೊಳೆ ರಾಷ್ಟ್ರೀಯ ಉದ್ಯಾನ, ಆದಿ ಚುಂಚನಗಿರಿ ನವಿಲು ಪಕ್ಷಿಧಾಮ, ಅರಬಿತಿಟ್ಟು ವನ್ಯಧಾಮ, ಭದ್ರಾ ವನ್ಯಧಾಮ, ಬಿಳಿಗಿರಿರಂಗನ ಬೆಟ್ಟ ವನ್ಯಧಾಮ, ಬ್ರಹ್ಮಗಿರಿ ವನ್ಯಧಾಮ, ಮೂಕಾಂಬಿಕಾ ವನ್ಯಧಾಮ, ನುಗು ವನ್ಯಧಾಮ, ಶರಾವತಿಕಣಿವೆ ವನ್ಯಧಾಮ, ಸೋಮೇಶ್ವರ ಅಭಯಾರಣ್ಯ, ಶೆಟ್ಟಿಹಳ್ಳಿ ಅಭಯಾರಣ್ಯ, ರಾಣಿಬೆನ್ನೂರು ವನ್ಯಧಾಮ, ಪುಷ್ಪಗಿರಿ ವನ್ಯಾಧಾಮ, ಕಾವೇರಿ ವನ್ಯಾಧಾಮ, ತಲಕಾವೇರಿ ಅಭಯಾರಣ್ಯ, ರಂಗನತಿ ಪಕ್ಷಿಧಾಮ, ಗುಡವಿ ಪಕ್ಷಿಧಾಮ ರಾಷ್ಟ್ರೀಯ ಉದ್ಯಾನಗಳಿವೆ. ಇವುಗಳಿಗೆ ಭೇಟಿ ನೀಡಬಹುದು.

ಕೃಷ್ಣ, ಘಟಪ್ರಭಾ, ಮಲಪ್ರಾಭಾ, ಭೀಮಾ, ತುಂಗಭದ್ರಾ, ವೇದಾವತಿ, ಕಾವೇರಿ, ಹೇಮಾವತಿ, ಕಬಿನಿ, ಮಂಜ್ರಾ, ಕಾಳೀ, ಶರಾವತಿ, ಅಘನಾಶಿನಿ, ಬೇಡ್ತಿ, ನೇತ್ರಾವತಿ, ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ, ಪಾವಾರ್, ಶಿಂಷಾ, ಕಾರಂಜಾ, ಅರ್ಕಾವತಿ ಇತ್ಯಾದಿ ನದೀ ಪಾತ್ರದುದ್ದಕ್ಕೂ ಇರುವ ಕಣಿವೆಮಾರ್ಗಗಳಲ್ಲಿ ಸಂಚಾರ ಕೈಗೊಳ್ಳಬಹುದು.

ಜೋಗ್, ಜಲದುರ್ಗ, ಅಬ್ಬೆ, ಚುಂಚನಕಟ್ಟೆ, ಇರುಪ್ಪ, ಶಿವನಸಮುದ್ರ, ಉಂಚಳ್ಳಿ, ಗೋಕಾಕ, ಮಾಗೋಡು, ಲಾಲಗುಳಿ, ಕೆಪ್ಪಜೋಗ, ಬುರುಡೆಜೋಗ, ಗಣೇಶಪಾಲ ಮೊದಲಾದ ಜಲಪಾತ ಹಾಗೂ ಅವುಗಳನ್ನು ನೋಡಲು ದಟ್ಟ ಕಾನನದ ನಡುವೆ ಹಾದಿ ಹುಡುಕಿಕೊಂಡು ನಡೆಸುವ ಚಾರಣ ಪರಿಸರ ಅಧ್ಯಯನಕ್ಕೆ ಯೋಗ್ಯ ನೆಲೆಯೊದಗಿಸುತ್ತದೆ. ಯಾಣ, ಗಣೇಶಗುಡ್ಡೆ ಘಾಟ್ ಮಾರ್ಗ, ಅಣಶಿ ಮತ್ತು ಅರಬೈಲ ಕಣಿವೆಗಳು, ಶಿರಸಿ ಸಮೀಪದ ಸಹ್ಯಾದ್ರಿ ಶ್ರೇಣಿಯ ಕಲ್ಯಾಣಿಶ್ರೇಣಿಭಾಗ, ಬೇಡಸಗಾಂವ್ ಗುಡ್ಡ, ದೇವಿಮನೆ ಘಾಟ್, ದಡ್ಡೀಘಾಟ್ ಗೋಕರ್ಣದ ಶತಶೃಂಗ ಪರ್ವತ, ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿ, ಕಲ್ಲತ್ತಗಿರಿ, ಕುದುರೆಮುಖ, ಗಂಗಾಮೂಲ, ಗಂಗಡಿಕಲ್ಲು, ಕೊಡಚಾದ್ರಿ, ಅಗಸ್ತ್ಯಪರ್ವತ, ಕವಲೇದುರ್ಗ, ಪುಷ್ಪಗಿರಿ (ಕುಮಾರಪರ್ವತ), ಬ್ರಹ್ಮಗಿರಿ, ಸೋಮಮಲೆ, ನಂದಿದುರ್ಗ, ಜೋಗಿಮಟ್ಟಿ, ಕಾಮನದುರ್ಗ, ಮಧುಗಿರಿಬೆಟ್ಟ, ದೇವರಾಯನದುರ್ಗ, ಕಟ್ಟೇಗುಡ್ಡ, ತೇಗೂರು ಗುಡ್ಡ, ಮಹಮ್ಮದಪುರ ಬೆಟ್ಟ, ಪಂಡೂರು ಬೆಟ್ಟಗಳು, ಉಚ್ಚಂಗಿದುರ್ಗ, ಮೇಲುಕೋಟೆ, ಬಿಳಿಗಿರಿರಂಗನಬೆಟ್ಟ, ಮಹದೇಶ್ವರನಬೆಟ್ಟ ಮೊದಲಾದ ಬೆಟ್ಟಗುಡ್ಡಗಳು, ಕಣಿವೆಗಳು ಸಾಹಸ ಚಟುವಟಿಕೆಗಳನ್ನು ಕೈಗೊಳ್ಳಲು ಯೋಗ್ಯವಾಗಿವೆ.

**ಸಾಹಸ ಕ್ರೀಡೆಗಳ ತರಬೇತಿ ಸಂಸ್ಥೆಗಳು**

೧. **ನೆಹರು ಇನ್ಸ್ಟಿಟ್ಯೂಟ್ ಆಫ್ ಮೌಂಟನಿಯರಿಂಗ್**, ಉತ್ತರ ಕಾಶಿ ೨೪೯ ೧೯೩.

೨. **ಹಿಮಾಲಯನ್ ಇನ್ಸ್ಟಿಟ್ಯೂಟ್ ಆಫ್ ಮೌಂಟನಿಯರಿಂಗ್**, ಡಾರ್ಜಿಲಿಂಗ್-೭೩೪ ೧೦೧.

೩. **ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ**, ರಾಜ್ಯ ಯುವ ಕೇಂದ್ರ, ಬೆಂಗಳೂರು-೫೬೦ ೦೦೧.

೪. **ದಿ ನ್ಯಾಷನಲ್ ಅಡ್ವೆಂಚರ್ ಫೌಂಡೇಷನ್**, ೧೧೩೭-ಎ, ಜವಹರಲಾಲ್ ನೆಹರು, ಸ್ಟೇಡಿಯಂ, ನವದೆಹಲಿ-೧೧೦ ೦೦೩.

೫. **ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವಾಟರ್ ಸ್ಪೋರ್ಟ್ಸ್**, ಇಂಡಿಯಾ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಷನ್, ೧೯೯, ಎ-ಮ್ಯಾಂಗೊರ್ ಹಿಲ್, ವಾಸ್ಕೊ-ಡ-ಗಾಮ, ಗೋವಾ-೪೦೫ ೮೦೨

೬. **ಮೌಂಟನಿಯರಿಂಗ್ ಇನ್ಸ್ಟಿಟ್ಯೂಟ್ ಆಫ್ ಅಲೈಡ್ ಸ್ಪೋರ್ಟ್ಸ್**, ಮನಾಲಿ, ಕುಲು- ೧೭೫೧೩೧, ಹಿಮಾಚಲ ಪ್ರದೇಶ್

೭. **ಇಂಡಿಯನ್ ಕಯಾಕಿಂಗ್ ಆ್ಯಂಡ್ ಕೆನೋಯಿಂಗ್ ಅಸೋಸಿಯೇಷನ್**, ೬೦೬, ಅಕಾಶದೀಪ್, ೬ನೇ ಮಹಡಿ, ಬಾರಾಕಂಬ ರೋಡ್, ನವದೆಹಲಿ-೧೧೦ ೦೦೧.

೮. **ಪ್ಯಾರಾಗ್ಲೈಡಿಂಗ್ ಅಸೋಷಿಯೇಷನ್**, ಪೋಸ್ಟ್ ಬಾಕ್ಸ್ ನಂ. ೪೫೪೨, ನವದೆಹಲಿ-೧೧೦೦೧೬.

೯. **ಘರವಾಲ್ ಮಂಡಲ್ ವಿಕಾಸ್ ನಿಗಮ್**, ಮೌಂಟನಿಯರಿಂಗ್, ಟ್ರಕ್ಕಿಂಗ್, ಸ್ಕೀಯಿಂಗ್ ಡಿವಿಷನ್, ಮುನಿ ಕಿ ರೇತಿ, ಹೃಷಿಕೇಷ-೨೪೯ ೨೦೧.

**ಪರಿಸರ ಪ್ರವಾಸೋದ್ಯಮ**

ದಟ್ಟವಾದ ಅರಣ್ಯಗಳು, ಕಣ್ಮನ ಸೆಳೆಯುವ ಕಡಲಕಿನಾರಗಳು, ವಿಪುಲವಾದ ವನ್ಯಸಂಕುಲ, ಮನಮುದಗೊಳಿಸುವ ಜಲಪಾತಗಳು ನಯನಮನೋಹರ ಗಿರಿಕಂದರಗಳು ಇವೆಲ್ಲ ನಿಸರ್ಗದ ಕೊಡುಗೆಗಳನ್ನು ತನ್ನಲ್ಲಿ ಹುದುಗಿಸಿಟ್ಟುಕೊಂಡ ಕರ್ನಾಟಕ ಪರಿಸರ ಪ್ರವಾಸೋದ್ಯಮದಲ್ಲಿ ಇಂದು ಮುಂಚೂಣಿಯಲ್ಲಿದೆ.

ಪರಿಸರ ಪ್ರವಾಸೋದ್ಯಮದಲ್ಲಿ ಕರ್ನಾಟಕಕ್ಕೆ ಹೆಸರು ತಂದುಕೊಟ್ಟ ಪ್ರವಾಸೀ ಸಂಸ್ಥೆಗಳಲ್ಲಿ ಪ್ರಮುಖವಾದ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್ ಸಂಸ್ಥೆಗೆ ಅಗ್ರಸ್ಥಾನ. ಪ್ರವಾಸೋದ್ಯಮ ಸಚಿವರಾಗಿದ್ದ ಆರ್. ಗುಂಡೂರಾವ್ ಅವರ ಒತ್ತಾಸೆಯಿಂದ ಖಾಸಗೀ ಸಹಭಾಗಿತ್ವದಲ್ಲಿ ಆರಂಭಗೊಂಡ ಜಂಗಲ್ ಲಾಡ್ಜಸ್ ಇಂದು ಸರ್ಕಾರಿ ಒಡೆತನದ ಸಂಸ್ಥೆ.

ನಿಸರ್ಗ ನಿರ್ಮಿತ ತಾಣಗಳಲ್ಲಿ ಓಡಾಟ, ಪ್ರಕೃತಿಯ ನಡುವೆ ತಂಗುವಿಕೆ ಹಾಗೂ ವನ್ಯಮೃಗಗಳನ್ನು ಅವುಗಳ ವಾಸಸ್ಥಳದಲ್ಲಿಯೇ ನೋಡುವ ಅವಕಾಶ- ಇವೆಲ್ಲವುಗಳನ್ನು ಪ್ರವಾಸಿಗರಿಗೆ ಒದಗಿಸಿಕೊಡುವ ಪ್ರಯತ್ನ ಪ್ರಪ್ರಥಮವಾಗಿ ಆರಂಭಗೊಂಡಿದ್ದು ನಾಗರಹೊಳೆ ಅಭಯಾರಣ್ಯದಲ್ಲಿ. ನಂತರದ ವರ್ಷಗಳಲ್ಲಿ ದಟ್ಟಾರಣ್ಯದ ಮಧ್ಯೆ ಮಾಸ್ತಿಗುಡಿಯಲ್ಲಿ ಹಳೆಯ ಬಂಗಲೆಯೊಂದರಲ್ಲಿ ಜಂಗಲ್ ಲಾಡ್ಜಸ್ ಪೂರ್ಣ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂತು. ಆದರೆ, ಅರಣ್ಯ ಕಾನೂನುಗಳಿಂದಾಗಿ ಈ ಸಂಸ್ಥೆ ಕಾರಾಪುರಕ್ಕೆ ಸ್ಥಳಾಂತರಗೊಳ್ಳಬೇಕಾಯಿತು.

ಮೈಸೂರು ಅರಸರ ೧೨೫ ವರ್ಷಗಳ ಹಳೆಯ ಬೃಹತ್ ಬಂಗಲೆಯಲ್ಲಿ ಜಂಗಲ್ ಲಾಡ್ಜಸ್ ಕೆಲಸ ಶುರುವಿಟ್ಟಿತು, ಆನಂತರ ರಾಜ್ಯದ ಅರಣ್ಯ ಭಾಗಗಳಲ್ಲಿ ಹಳೆಯ ಕಟ್ಟಡಗಳು ಜಂಗಲ್ ಲಾಡ್ಜಸ್ ವ್ಯಾಪ್ತಿಗೆ ಬಂದು ದೇಶ- ವಿದೇಶಗಳ ಪ್ರವಾಸಿಗರು ಇಲ್ಲಿಯೇ ತಂಗಿದ್ದು ಪ್ರಕೃತಿಯ ವಿಶೇಷತೆಗಳನ್ನು ಸವಿಯುವ ಅವಕಾಶ ದೊರೆಯುವಂತಾಯಿತು.

ಕಳೆದ ೨೫ ವರ್ಷಗಳಲ್ಲಿ ಜಂಗಲ್ ಲಾಡ್ಜಸ್ ದೇಶ-ವಿದೇಶಗಳಲ್ಲಿ ವನ್ಯ-ಪರಿಸರ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಉತ್ತಮ ಹೆಸರು ಗಳಿಸಿದೆ. ನಮ್ಮ ನಾಡಿನ ಪ್ರಾಕೃತಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಪರಿಸರ ಸ್ನೇಹಿ ಪ್ರವಾಸೋದ್ಯಮವನ್ನು ಬೆಳೆಸಲು ಗಣನೀಯ ಕಾಣಿಕೆ ನೀಡಿರುವ ಜಂಗಲ್ ಲಾಡ್ಜಸ್ ಇಂದು ರಾಜ್ಯದ ಹಲವಾರು ಕಡೆ ತನ್ನ ಕ್ಷೇತ್ರಗಳನ್ನು ವಿಸ್ತರಿಸಿಕೊಂಡಿದೆ.

ಕರ್ನಾಟಕದ ಅತ್ಯಂತ ಗಮ್ಯ ತಾಣಗಳಲ್ಲಿ ತನ್ನ ಪ್ರವಾಸೀ ಕೇಂದ್ರಗಳನ್ನು ಹೊಂದಿರುವ ಜಂಗಲ್ ಲಾಡ್ಜಸ್ ವಿದೇಶೀ ಪ್ರವಾಸಿಗರಿಂದಲೂ ಪ್ರಶಂಸೆ ಪಡೆಯುತ್ತಿದೆ.

ಬಂಡೀಪುರ, ಬನ್ನೇರಘಟ್ಟ ಭೀಮೇಶ್ವರಿ, ದೇವಬಾಗ್, ದೊಡ್ಡಮಾಕಳಿ, ದುಬಾರೆ, ಗಾಳಿಬೋರೆ, ಕಬಿನಿ, ಕಾಳಿ, ಕೆ. ಗುಡಿ ಮುಂತಾದ ಕಡೆ ಜಂಗಲ್ ಲಾಡ್ಜಸ್ ಪ್ರಕೃತಿ ಪ್ರಿಯರಿಗೆ ವಿಶಿಷ್ಟ ಬಗೆಯ ಪ್ರವಾಸೀ ಸೌಲಭ್ಯಗಳನ್ನು ಕಲ್ಪಿಸುತ್ತಿದೆ.

ನಿಸರ್ಗರಮಣೀಯ ತಾಣಗಳಲ್ಲೇ ತನ್ನ ವ್ಯಾಪ್ತಿಯನ್ನು ಹೆಚ್ಚಾಗಿ ಇಟ್ಟುಕೊಂಡಿರುವ ಜಂಗಲ್ ಲಾಡ್ಜಸ್ ಕಾಲ್ನಡಿಗೆ (ಟ್ರೆಕಿಂಗ್) ಜಲವಿಹಾರ, ವನ್ಯಪ್ರಾಣಿ ವೀಕ್ಷಣೆ, ಅಡವಿಗಳ ಸಂದರ್ಶನ, ನದಿಗಳ ಹಿನ್ನೀರಿನಲ್ಲಿ ಪಯಣ ಹೀಗೆ ಹಲವಾರು ಬಗೆಯ ಪ್ರವಾಸೀ ಆಕರ್ಷಣೆಗಳನ್ನು ಜಂಗಲ್ ಲಾಡ್ಜ್ಸ್ ಪ್ರವಾಸಿಗರಿಗೆ ಒದಗಿಸಿಕೊಡುತ್ತಿದೆ. ಕರ್ನಾಟಕದಲ್ಲಿ ಹಾಯ್ದುಹೋಗಿರುವ ಪಶ್ಚಿಮ ಘಟ್ಟಗಳ ಸಾಲಿನ ಅನೇಕ ರಮಣೀಯ ವನ್ಯಧಾಮಗಳ ಆಸು-ಪಾಸಿನಲ್ಲಿ ಸಮುದ್ರ ಹಾಗೂ ನದಿಗಳ ತಟಗಳಲ್ಲಿ ಅತ್ಯಾಕರ್ಷಕ ಸ್ಥಳಗಳನ್ನು ಆಯ್ಕೆಮಾಡಿರುವ ಜಂಗಲ್ ರಿಸಾರ್ಟ್ಸ್ ವರ್ಷದ ಎಲ್ಲಾ ಕಾಲದಲ್ಲೂ ಪ್ರವಾಸಿಗರ ಮನತಣಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

**ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್ ರಾಜ್ಯದ ವಿವಿಧ ಭಾಗಗಳಲ್ಲಿ ಹೊಂದಿರುವ ಪ್ರವಾಸೀತಾಣಗಳು:**

**ಬಂಡೀಪುರ ಸಫಾರಿ ಲಾಡ್ಜ್**

ಹುಲಿ ಹಾಗೂ ಆನೆಗಳ ಆವಾಸಸ್ಥಾನಗಳಲ್ಲಿ ಹೆಸರು ಮಾಡಿರುವ ಬಂಡೀಪುರ ಕಾನನ ಮೈಸೂರು ಊಟಿ ಹೆದ್ದಾರಿಯಲ್ಲಿದೆ. ನೀಲಗಿರಿ ಗಿರಿಶ್ರೇಣಿಯ ತಪ್ಪಲಲ್ಲಿ ಹರಡಿರುವ ಬಂಡೀಪುರ ಅಭಯಾರಣ್ಯದಲ್ಲಿ ಜಂಗಲ್ ಲಾಡ್ಜಸ್ ವನ್ಯ ಮೃಗಗಳ ಸಮೀಪ ದರ್ಶನ ಮಾಡಿಸುತ್ತದೆ. ಹಿಮವತ್ ಗೋಪಾಲಸ್ವಾಮಿ ಬೆಟ್ಟವೂ ಸೇರಿಕೊಂಡಿರುವ ಈ ಅಭಯಾರಣ್ಯ ವಿಶಿಷ್ಟಬಗೆಯ ಪಕ್ಷಿಗಳ ವೀಕ್ಷಣೆಗೂ ಉತ್ತಮ ಸ್ಥಳ.

ಬೆಂಗಳೂರಿಗೆ ಸಮೀಪದಲ್ಲಿರುವ ಬನ್ನೇರಘಟ್ಟ ೨೫ ಸಾವಿರ ಎಕರೆಗಳಲ್ಲಿ ಹರಡಿಕೊಂಡಿರುವ ದಟ್ಟಾರಣ್ಯ. ರಕ್ಷಿತ ಅರಣ್ಯವಲ್ಲದೆ ಅನೇಕ ಮಾನವನಿರ್ಮಿತ ಪುಟ್ಟಪುಟ್ಟ ಅಡವಿಗಳೂ ಇರುವ ಬನ್ನೇರಘಟ್ಟ ವನ್ಯಮೃಗಗಳಿಗೂ, ಸಾಕುಮೃಗಗಳಿಗೂ ಸ್ಥಾನ ಕಲ್ಪಿಸಿಕೊಟ್ಟಿರುವ ಪ್ರದೇಶ.

ಬನ್ನೇರಘಟ್ಟ ಪ್ರಕೃತಿಶಿಬಿರ ಅರಣ್ಯ ಹಾಗೂ ವನ್ಯಮೃಗಗಳ ಪರಿಚಯ ಮಾಡಿಕೊಡುವ ಜನಪ್ರಿಯ ತಾಣ. ೨೦೦ ಬಗೆಯ ಪಕ್ಷಿಗಳಿಗೆ ಸ್ಥಳಕೊಟ್ಟಿರುವ ಈ ಅರಣ್ಯ ಕರಡಿ, ಹುಲಿ ಅಭಯಾರಣ್ಯಗಳಿಗೂ ಹೆಸರುವಾಸಿ.

ಭೀಮೇಶ್ವರಿ

ಕಾವೇರಿ ನದಿಯ ಪಾತ್ರದಲ್ಲಿರುವ ಮುತ್ತತ್ತಿ ಅರಣ್ಯದ ಭೀಮೇಶ್ವರಿ ಅಪರೂಪವಾದ ಮಾಶಿರ್ ಮೀನುಗಳ ತಾಣ. ಕ್ರೀಡಾ ಮೀನುಗಳೆಂದೇ ಹೆಸರಾದ

ಮಾಶಿರ್ ಜಾತಿಯ ಮೀನುಗಳೊಡನೆ ಆಟವಾಡುವುದು ಅನೇಕ ಪ್ರವಾಸಿಗರಿಗೆ ಹವ್ಯಾಸ. ನದಿ ಬದಿಯಲ್ಲೆ ಪ್ರಕೃತಿ ಶಿಬಿರವನ್ನೂ ಹೊಂದಿರುವ ಭೀಮೇಶ್ವರಿಯಲ್ಲಿ ಮೀನುಗಳ ಜೊತೆ ಮೋಜಿನಾಟದ ಕ್ಷಣಗಳನ್ನು ಅನುಭವಿಸುವುದೇ ಅಲ್ಲದೆ ಗಗನಚುಂಬಿ ವೃಕ್ಷಗಳ ಒಡನಾಡವನ್ನು ಹೊಂದಬಹುದು.

**ದೇವ್‌ಭಾಗ್**

ಕವಿ ರವೀಂದ್ರನಾಥ ಟ್ಯಾಗೂರರು ಮೆಚ್ಚಿದ ಪ್ರಕೃತಿ ಸೊಬಗಿನ ಕಾರವಾರದ ಸಮೀಪದಲ್ಲಿರುವ ದೇವ್‌ಭಾಗ್ ಕಡಲಕಿನಾರದ ಪ್ರಕೃತಿಧಾಮ. ಸಮುದ್ರಕ್ಕೆ ಸೇರಿಕೊಂಡಿರುವ ದೇವ್‌ಭಾಗ್ ಇಡೀ ದೇಶದಲ್ಲೇ ವಿಶಿಷ್ಟ ಬಗೆಯ ಜಲವಿಹಾರ ಕೇಂದ್ರ. ದೋಣಿ ವಿಹಾರ, ಈಜು, ಸೂರ್ಯಸ್ನಾನ ಮೊದಲಾದವುಗಳಿಗೆ ಹೇಳಿ ಮಾಡಿದಂತೆ ದೇವ್‌ಭಾಗ್ ಸಮುದ್ರ ಹಾಗೂ ನದಿಗಳೆರಡರ ನಡುವಿನ ನಿಸರ್ಗತಾಣ. ಜಂಗಲ್ ಲಾಡ್ಜ್ ಇಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ತಂಗುದಾಣಗಳನ್ನು ಹಾಗೂ ನೌಕಾವಿಶ್ರಾಂತ ತಾಣಗಳನ್ನು ಪ್ರವಾಸಿಗರಿಗಾಗಿ ತೆರೆದಿಟ್ಟಿದೆ.

**ದೊಡ್ಡಮಾಕಾಳಿ**

ಜೀವನದಿ ಕಾವೇರಿ ದಂಡೆಯಲ್ಲಿರುವ ದೊಡ್ಡ ಮಾಕಾಳಿ ಹಸಿರು ನಡುವೆ ನಳನಳಿಸುವ ನಿಸರ್ಗರಮಣೀಯ ಕೇಂದ್ರ. ಕಾವೇರಿಯ ನದಿಯಲ್ಲಿ ಸಿಗುವ ಮಾಶಿರ್ ಮೀನು ಹಾಗೂ ಅಚ್ಚಹಸಿರು, ಶುದ್ಧ ಗಾಳಿ, ತಂಪಾದ ಹವೆ, ಕಣ್ಮನ ತಣಿಸುವ ನೋಟಗಳಿರುವ ಮಾಕಾಳಿ ವೈವಿಧ್ಯಮಯ ವಿಹಾರ ತಾಣ. ಇಲ್ಲಿರುವ ನಿಸರ್ಗ ಕೇಂದ್ರವು ಪ್ರವಾಸಿಗರಿಗೆ ಅಚ್ಚುಮೆಚ್ಚಿದರು.

**ದುಬಾರೆ**

ಕರ್ನಾಟಕದಲ್ಲಿ ಆನೆಗಳು ಸ್ವಚ್ಛಂದವಾಗಿ ಬದುಕಲು ಬೇಕಾದ ವಿಶಾಲವಾದ ಭೂಪ್ರದೇಶ ಲಭ್ಯವಿದೆ. ಆನೆಗಳನ್ನು ಹಿಡಿದು ಪಳಗಿಸಿ ಉಪಯೋಗಿಸಿಕೊಳ್ಳುವ ಕ್ಯಾಂಪ್‌ಗಳು ಸಾಕಷ್ಟಿವೆ. ಅವುಗಳಲ್ಲಿ ಕೊಡಗಿನ ದುಬಾರೆ ಕ್ಯಾಂಪ್ ಕೂಡ ಒಂದು. ಕಾವೇರಿ ನದಿಯ ಪಕ್ಕದಲ್ಲಿರುವ ದುಬಾರೆ ಕ್ಯಾಂಪ್ ಆನೆಗಳನ್ನು ಪಳಗಿಸುವ ಕೇಂದ್ರವೇ ಅಲ್ಲದೆ ಮನೋಹರ ಜಲವಿಹಾರ ಕೇಂದ್ರ. ಆನೆಗಳನ್ನು ಪೋಷಿಸುವ ಈ ತಾಣ ದೇಶ-ವಿದೇಶಗಳಲ್ಲೂ ಖ್ಯಾತಿಗಳಿಸಿರುವ ಸ್ಥಳ.

**ಗಾಳಿಬೋರೆ**

ಪ್ರಕೃತಿಯ ಸೊಬಗನ್ನು ಸವಿಯುವ ಅಪೂರ್ವ ಅವಕಾಶಗಳನ್ನು ಕಲ್ಪಿಸುವ ಹಾಗೂ ನಿಸರ್ಗದೊಡನೆ ಕೆಲ ಸಮಯ ಬದುಕುವ ವ್ಯವಸ್ಥೆ ಇರುವ ಗಾಳಿಬೋರೆ ಕಾವೇರಿ

ನದಿಯ ಬದಿಯಲ್ಲಿ ಇರುವ ನಿಸರ್ಗನಿರ್ಮಿತ ಪ್ರವಾಸೀ ಕೇಂದ್ರ. ಮಕ್ಕಳಿಗೆ ನಿಸರ್ಗದ ರಹಸ್ಯಗಳನ್ನು ತಿಳಿಹೇಳುವ ಹಾಗೂ ನದಿಯಲ್ಲಿ ಸಂತಸದ ಕ್ಷಣಗಳನ್ನು ಕಳೆಯಲು ಅವಕಾಶ ಕಲ್ಪಿಸಿರುವ ಗಾಳಿಬೋರೆ ಮಾಶಿರ್ ಮೀನಿನನೊಡನೆ ನಲಿದಾಟವಾಡುವ ಸ್ಥಳವೂ ಹೌದು.

**ಕಬನಿ**

ಕಬಿನಿನದಿಯ ಹಿನ್ನೀರಿನಲ್ಲಿರುವ ಕಬಿನಿ ಕಾನನದ ಆನೆ, ಹುಲಿ, ಚಿರತೆ, ಲಂಗೂರ್, ಮೊಸಳೆ ಮೊದಲಾದ ೨೫೦ಕ್ಕೂ ಹೆಚ್ಚು ಪ್ರಾಣಿಸಂಕುಲವನ್ನು ನೋಡಲು ಸಾಧ್ಯವಿರುವ ಕಬಿನಿ ಹಿನ್ನೀರ ತಾಣ ನೂರಾರು ಹಕ್ಕಿಗಳನ್ನು ಅವುಗಳ ಕಲರವವನ್ನು ಕೇಳಬಹುದಾದ ಸ್ಥಳ.

**ಕಾಳೀ ಸಾಹಸ ಶಿಬಿರ**

ಕಾಳೀನದಿಯಲ್ಲಿ ಸಹ್ಯಾದ್ರಿ ಅರಣ್ಯ ಶ್ರೇಣಿಯ ಮಡಿಲಲ್ಲಿ ಸ್ಥಾಪಿಸಲ್ಪಟ್ಟಿರುವ ಕಾಳೀನದಿ ಸಾಹಸ ಶಿಬಿರ ಜಂಗಲ್ ಲಾಡ್ಜ್ ಸಂಸ್ಥೆಯ ಹೆಮ್ಮೆಯ ತಾಣ. ಕರ್ನಾಟಕದ ನದಿಯೊಂದರಲ್ಲಿ ಸಾಹಸ ಕ್ರೀಡೆ ನಡೆಸಲು ಸಾಧ್ಯವಿರುವ ಅಪರೂಪದ ನದಿ ಈ ಕಾಳೀ. ಪ್ಲಾಸ್ಟಿಕ್ ಜಲನೌಕೆಗಳಲ್ಲಿ ರಭಸದಿಂದ ಹರಿಯುವ ನೀರಿನಲ್ಲಿ ಹುಟ್ಟುಹಾಕುತ್ತ ಸಾಗುವುದು ಸಾಹಸದ ವಿಷಯ. ಇಂತಹ ಸಾಹಸಮಯ ಕ್ಷಣಗಳಿಗೆ ತೆರೆದುಕೊಂಡಿರುವ ಕಾಳೀನದಿ ಬೆಟ್ಟ ಏರುವ, ನದಿಯಲ್ಲಿ ಈಜುವ, ವನ್ಯಮೃಗಗಳ ತಾಣದಲ್ಲಿ ಅಲೆಯುವ ಅವಕಾಶಗಳನ್ನು ಒದಗಿಸುತ್ತದೆ.

**ಕೆ. ಗುಡಿ**

ಬಿಳಿಗಿರಿರಂಗನಬೆಟ್ಟದಲ್ಲಿರುವ ಕೆ. ಗುಡಿ ಮೈಸೂರು ಮಹಾರಾಜರ ಕಾಲದಲ್ಲಿ ಪ್ರಸಿದ್ಧ ಭೇಟಿತಾಣ. ದಟ್ಟಅರಣ್ಯಗಳ ನಡುವೆ ಕಟ್ಟಲಾಗಿರುವ ದೊಡ್ಡ ಬಂಗಲೆಯಲ್ಲಿ ತಂಗಿದ್ದು ವನ್ಯಮೃಗಗಳನ್ನು ನೋಡುವ ಬೇಟೆಯಾಡುವ ಹವ್ಯಾಸ ಹಿಂದಿತ್ತು. ಇದೀಗ ವನ್ಯಮೃಗಗಳನ್ನು ನೋಡುವುದಕ್ಕೆ ಮಾತ್ರ ಸೀಮಿತ. ಕೆ.ಗುಡಿ ಇಂದಿಗೂ ಹಸಿರಿನ ದಟ್ಟ ಅಡವಿಯ ನಡುವೆ ವಿಶಿಷ್ಟ ಅನುಭವ ಕೊಡುವ ವಿಹಾರ ತಾಣ. ಆನೆಸವಾರಿ, ಪಕ್ಷಿವೀಕ್ಷಣೆ, ಮನ್ಯಮೃಗದರ್ಶನ ಇವುಗಳಿಗೆ ಖ್ಯಾತವಾಗಿರುವ ಜಾಗ. ನೂರಾರು ಕಾಡೆಮ್ಮೆಗಳು, ಆನೆಗಳು ಕಾಣಸಿಗುವ ಕೆ.ಗುಡಿ ಗಗನಚುಂಬಿ ವೃಕ್ಷಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ.

**ಕರಾವಳಿಯ ಕಂಬಳದ ಕ್ರೀಡೆ**

ಕರಾವಳಿಯ ಹಲವೆಡೆ ಸುಗ್ಗಿಕಾಲದಲ್ಲಿ ಕಂಬಳಗಳು ನಡೆಯುತ್ತವೆ. ಆಧುನಿಕ ರೀತಿಯಲಿ ಜಾನಪದ ಕಂಬಳವನು ಅದೂರಿಯಾಗಿ ಕಾಸರಗೋಡು ಸೇರಿದಂತೆ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ನಡಸಲಾಗುತ್ತದೆ. ವಿವಿಧ ಎಡೆಗಳಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸುವ ಕೋಣಗಳ ಶೃಂಗಾರದ ಸೊಬಗನ್ನು ನೋಡಲು ಚಂದ.

ಹಗಲು ರಾತ್ರಿ ಎಡೆಬಿಡದೆ ನಡೆಯುವ ಕಂಬಳದಲ್ಲಿ ಸಂಭ್ರಮವೋ ಸಂಭ್ರಮ. ಈ ಕ್ರೀಡೆಗಾಗಿಯೇ ವಿಶೇಷ ಆಸ್ಥೆವಹಿಸಿ ಸಾಕಿದ ಕೋಣಗಳನ್ನು ಕೆಸರು ಗದ್ದೆಗೆ ಇಳಿಬಿಡುತ್ತಾರೆ. ಕೆಸರುಗದ್ದೆಯಲ್ಲಿ ಕೆಸರು ನೀರಿನ ಸಂಚನದೊಂದಿಗೆ ಅತೀವೇಗವಾಗಿ ಓಡುವ ಕೋಣಗಳು ನೆರೆದ ಸಹಸ್ರಾರು ಮಂದಿಯ ಮೈನವಿರೇಳಿಸುತ್ತವೆ. ಕಂಬಳಕ್ಕಾಗಿ ಹದಮಾಡಿದ ಜೋಡುಕೆರೆಗಳನ್ನು ಪೂರಕ ಅಳತೆಯೊಂದಿಗೆ ರಚಿಸಲಾಗುತ್ತದೆ. ಕೋಣಗಳಷ್ಟೇ ಪ್ರಾಧಾನ್ಯತೆಯನ್ನು ಕೋಣ ಓಡಿಸುವವನಿಗೂ ನೀಡಲಾಗುತ್ತದೆ. ವಿಶೇಷವಾಗಿ ತರಬೇತಿಗೊಳಿಸಿ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಅಣಿಗೊಳಿಸಲಾಗುತ್ತದೆ. ಹೆಚ್ಚಿನಕಡೆ ಹೊನಲು ಬೆಳಕಿನ ವ್ಯವಸ್ಥೆ ಮಾಡಿ ಕಂಬಳಗಳನ್ನು ಇತ್ತೀಚೆಗೆ ನಡೆಸಲಾಗುತ್ತಿದೆ.

ಕಂಬಳದ ಕೋಣಗಳನ್ನು ಸಾಕುವುದು ಸಾಹಸದ ಕೆಲಸ. ಲಕ್ಷಾಂತರ ರೂಪಾಯಿ ಬೆಲೆಬಾಳುವ ಕಂಬಳದ ಕೋಣಗಳನ್ನು ಕಂಬಳಕ್ಕಾಗಿಯೇ ವಿಶೇಷ ಕಾಳಜಿವಹಿಸಿ ಸಾಕಲಾಗುತ್ತದೆ. ಅವುಗಳ ಆರೈಕೆಗಾಗಿ ಪ್ರತ್ಯೇಕ ವ್ಯಕ್ತಿಯನ್ನೇ ನೇಮಿಸಲಾಗುತ್ತದೆ. ಕಾಲಕಾಲಕ್ಕೆ ಎಣ್ಣೆ ಸ್ನಾನ ಮಾಡಿಸುತ್ತ ಪೌಷ್ಠಿಕ ಆಹಾರವನ್ನು ಕೊಟ್ಟು ಸಾಕಿದಲ್ಲಿ ಯಾವುದೇ ಭಯವಿಲ್ಲದೆ ಕಂಬಳದಲ್ಲಿ ಅವು ಪಾಲ್ಗೊಳ್ಳುತ್ತದೆ. ಕಂಬಳದ ಕೋಣಗಳನ್ನು ಸಾಕುವುದು ಶ್ರೀಮಂತರಿಂದ ಮಾತ್ರ ಸಾಧ್ಯ. ಪ್ರತಿದಿನ ಅವುಗಳಿಗೆ ಎಳತೆಂಗಿನಕಾಯಿ ತುರಿದ ಗಂಜಿ ಬೇಯಿಸಿ ಹಾಕುವರು. ಹುರುಳಿ ಬೇಯಿಸಿ ಬತ್ತದ ಹೊಟ್ಟನ್ನು ಬೆರಸಿ ನೀಡುವರು. ಒಣಗಿದ ತೆಂಗಿನಕಾಯಿ, ಎಳ್ಳು, ನೆಲಗಡಲೆ, ಹತ್ತಿಯ ಹಿಂಡಿ, ಎಣ್ಣೆ ಮುಂತಾದ ತಿಂಡಿತಿನಿಸು ನೀಡಿದಲ್ಲಿ ಕೋಣಗಳ ಕೈಕಾಲಿಗೆ ಶಕ್ತಿ ಹೆಚ್ಚಾಗಿ ಓಟದಲ್ಲಿ ತೀವ್ರ ನಡೆ ಸಾಧಿಸುತ್ತವೆ.

ಕಂಬಳಕ್ಕೆ ಮುನ್ನ ಜೋಯಿಸರಲ್ಲಿ ಹೋಗಿ ಗಳಿಗೆ ಕೇಳುವ ಕ್ರಮವಿದೆ. ದೈವಸ್ಥಾನ, ಗರೋಡಿ, ಗುಡಿ ಇಂತಹ ದೈವಸ್ಥಾನದಲ್ಲಿ ನಡೆಯುವ ಕಂಬಳಕ್ಕೆ ಅಲ್ಲಿಯ ದರ್ಶನದಲ್ಲಿ ದೈವಗಳಿಂದ ನುಡಿ ಕೇಳುವ ಕ್ರಮವಿದೆ. ಅಮಾವಾಸ್ಯೆಯ ದಿನ ಕಂಬಳ ನಡೆಯುವುದಿಲ್ಲ. ಕಂಬಳಕ್ಕೆ ದಿನ ಕೇಳಿ ಊರಿಡಿ ಹೇಳಿಕೆ ನೀಡುವ ಕ್ರಮವು ಹಿಂದಿನಿಂದಲೂ ಸಾಂಪ್ರದಾಯಿಕವಾಗಿ ಬಂದಿದೆ. ಕಂಬಳ ನಡೆಯುವ ದಿನ ಸೂರ್ಯ ಉದಯಿಸುವ ಮೊದಲು ಊರಿನ ಕೋಣ ಅಥವಾ ಕಂಬಳ ನಡೆಸುವ ಬೀಡಿನ ಕೋಣ, ಜನರು ಒಟ್ಟಾಗಿ ಕಂಬಳದ ಗದ್ದೆಗೆ ಇಳಿಯುತ್ತಾರೆ. ಆ ಬಳಿಕ ಸ್ಪರ್ಧೆಯಲ್ಲಿ ಭಾಗವಹಿಸುವ ಕೋಣಗಳನ್ನು ಕೆಸರುಗದ್ದೆಯಲ್ಲಿ ಓಡಿಸುವ ಮೂಲಕ ಕಂಬಳಕ್ರೀಡೆಗೆ ಚಾಲನೆ

ದೊರೆಯುತ್ತದೆ. ಕಂಬಳದಲ್ಲಿ ಸ್ಪರ್ಧೆಯು ಹಗ್ಗ ಹಿರಿಯ, ಹಗ್ಗ ಕಿರಿಯ, ನೇಗಿಲು ಹಿರಿಯ, ನೇಗಿಲು ಕಿರಿಯ, ಅಡ್ಡಹಲಗೆ, ಕೆನೆಹಲಗೆ ಈ ಆರು ವಿಭಾಗಗಳಲ್ಲಿ ನಡೆಯುತ್ತದೆ.

ಈ ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಜಿಲ್ಲಾ ಸಮಿತಿಯನ್ನು ರಚಿಸಲಾಗಿದ್ದು, ಪ್ರತಿವರ್ಷದ ಕಂಬಳ ದಿನಾಂಕಗಳನ್ನು ಜಿಲ್ಲಾ ಸಮಿತಿಯು ನಿಗದಿಪಡಿಸುತ್ತದೆ. ಮೂಡಬಿದರೆಯ ಕೋಟಿ ಚೆನ್ನಯ, ಮಂಜೇಶ್ವರದ ವೀರವಿಕ್ರಮ, ಕಾರ್ಕಳ ಬಿರಾಡಿಬೀಡಿನ ಸೂರ್ಯಚಂದ್ರ, ಬಂಟ್ವಾಳ ಹೊಕ್ಕಾಡಿ ಗೋಳಿ ವೀರವಿಕ್ರಮ, ಬಂಟ್ವಾಳ ಬೊಳಂತೂರು ವಿಜಯ ವಿಕ್ರಮ, ಕಾರ್ಕಳ ಮೀಯಾರು ಲವಕುಶ, ಮುಲ್ಕಿ ಸೀಮೆಯ ಮೂಡುತಡು, ಪಾಣೆಮಂಗಳೂರಿನ ಜಯವಿಜಯ, ಅಡ್ವೆನಂದಿಕೂರಿನ ಕೋಟಿ ಚೆನ್ನಯ್ಯ, ಬಂಟ್ವಾಳ ಕೊಳತ್ತಮ ಜಲಿನ ಜಯವಿಜಯ, ಮಂಗಳೂರು ಹೈಕಳ ಭಾವದ ಕಾಂತಬಾರೆ ಬೂದಬಾರೆ, ಮೇಣೂರು ಪೆರ್ಮುಡದ ಸೂರ್ಯಚಂದ್ರ, ಬಂಟ್ವಾಳ ಪಜಿರು, ಕೇಡಗೆ ಬೈಲಿನ ಲವಕುಶ, ಕಾರ್ಕಳ ಈಡುವಿನ ಜಯವಿಜಯ, ಪುತ್ತೂರಿನ ಕೋಟಿ ಚೆನ್ನಯ್ಯ, ಬಂಟ್ವಾಳ ಕಾವಲು ಕಟ್ಟೆಯ ಮೂಡೂರು ಪಡೂರು, ಉಪ್ಪಿನಂಗಡಿಯ ವಿಜಯ ವಿಕ್ರಮ- ಇವು ಕರಾವಳಿಯಲ್ಲಿ ವಿವಿಧೆಡೆ ನಡೆಯುವ ಕಂಬಳಗಳು.

ಕರ್ನಾಟಕದಲ್ಲಿ ಪ್ರವಾಸವನ್ನು ಉದ್ಯಮವನ್ನಾಗಿ ಪರಿವರ್ತಿಸಲು ಎಲ್ಲ ವಿಧವಾದ ಸೌಲಭ್ಯಗಳೂ ಇವೆ. ಇವನ್ನು ಬಳಸಿಕೊಂಡು ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿದೆ. ಈಗ ಅವುಗಳಿಗೆ ಅಗತ್ಯವಾಗಿ ಬೇಕಾಗಿರುವುದು. ವೃತ್ತಿಪರವಾದ ಪರಿಜ್ಞಾನ (Professionalism) ಹಾಗೂ ಸೇವಾ ಮನೋಭಾವ. ಪ್ರವಾಸ ಹಣವಿರುವವರ ಆಸಕ್ತಿ. ಆದರೂ, ಈಗ ಮಧ್ಯಮವರ್ಗದವರ ಸರಾಸರಿ ವರಮಾನ ಹೆಚ್ಚಿರುವುದರಿಂದ ಅವರೂ ಪ್ರವಾಸ ಕೈಗೊಳ್ಳಲು ಆಸಕ್ತಿ ತೋರುತ್ತಿರುವರು. ಸರಕಾರವೂ ಪರೋಕ್ಷವಾಗಿ ಎಲ್.ಟಿ.ಸಿ ಸೌಲಭ್ಯದ ಮೂಲಕ ಸರಕಾರಿ ನೌಕರರಲ್ಲಿ ಪ್ರವಾಸಕ್ಕೆ ಉತ್ತೇಜನ ನೀಡುತ್ತಿದೆ. ಇದು ಶುಭ ಸೂಚನೆ. ಪ್ರವಾಸೋದ್ಯಮವು ಸಾಮಾಜಿಕ ಆರ್ಥಿಕ ಅಭ್ಯುದಯದ ಬೆನ್ನೆಲುಬಾಗಿರುವುದರಿಂದ ಇದು ಲಕ್ಷಾಂತರ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸುತ್ತದೆ. ಮೈಸೂರಿನ ರೇಷ್ಮೆ, ಸಾಗರದ ಶ್ರೀಗಂಧದ ಕುಸುರಿಕಲೆಯ ವಸ್ತುಗಳು, ಚೆನ್ನಪಟ್ಟಣದ ಆಟಿಕೆಗಳು, ರುಚಿಕರವಾದ ಆಹಾರ ಹಾಗೂ ತಂಗಲು ಸ್ಥಳ ಒದಗಿಸುವ ಹೋಟೆಲ್ ಉದ್ಯಮ, ಕರ್ನಾಟಕದ ಉದ್ದಗಲಕ್ಕೂ ಚಾಚಿರುವ ಸರಕಾರಿ/ ಖಾಸಗಿ ಸಾರಿಗೆ ಉದ್ಯಮ-ಹೀಗೆ ಇವೆಲ್ಲವೂ ರಾಜ್ಯವು ಆರ್ಥಿಕವಾಗಿ ಸಂಪನ್ನವಾಗಲು ನೆರವಾಗುತ್ತಿವೆ.

ಕರ್ನಾಟಕದಲ್ಲಿ ಸಾಂಸ್ಕೃತಿಕ ಪ್ರವಾಸದೊಂದಿಗೆ ಸಾಹಸಿ ಪ್ರವಾಸವು ಬೆಳೆಯಬೇಕಾಗಿದೆ. ಅದಕ್ಕೀಗ ಒಳ್ಳೆಯ ಪರಿಸರ ನಿರ್ಮಾಣವಾಗಿದೆ. ಶಿಲಾರೋಹಣವು ಸಾಹಸಿ ಪ್ರವಾಸದಲ್ಲಿ ಒಂದು. ರಾಮನಗರ, ಕಬ್ಬಾಳದುರ್ಗ, ಸಾವನದುರ್ಗ, ಯಾಣ, ಜಮಾಲ್ ಬಾಗ್, ಬಳ್ಳಾರಿ ಹಾಗೂ ರಾಯಚೂರಿನ ಬಂಡೆಗಳು, ಚಾಮುಂಡಿಬೆಟ್ಟ ಮುಂತಾದವುಗಳು ಸಾಹಸಿಗಳನ್ನು ತನ್ನತ್ತ ಸೆಳೆಯುತ್ತಿವೆ. ಎಂಟನೇ ಯೋಜನೆಯಲ್ಲಿ ರಾಮನಗರದಲ್ಲಿ ಶಿಲಾರೋಹಣ ತರಬೇತಿ ಕೇಂದ್ರವನ್ನು ತೆರೆಯುವ ಉದ್ದೇಶವನ್ನು ಪ್ರವಾಸೋದ್ಯಮ ಇಲಾಖೆ ಹೊಂದಿದೆ. ಚಿಕಮಗಳೂರು, ಸೀತಾಳಯ್ಯನ ಬೆಟ್ಟ, ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿ, ದೊಡ್ಡರಾಗಿಹಳ್ಳಿಗಳಲ್ಲಿ ಗುಹೆಗಳಿದ್ದು ಇವುಗಳ ವೀಕ್ಷಣೆ ಹಾಗೂ ಅಧ್ಯಯನವನ್ನು ಸಾಹಸಿ ಯುವಕರು ನಡೆಸಬಹುದಾಗಿದೆ. (ಸೀತಾಳಯ್ಯನ ಬೆಟ್ಟ, ಮುಳ್ಳಯ್ಯನ ಗಿರಿಯಲ್ಲಿ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್‌ನಲ್ಲಿ ಮೋಡಗಳ ಒಂದು ಅದ್ಭುತ ಕಣ್ಣುಮುಚ್ಚಾಲೆಯಾಟ ನೋಡಬಹುದು. ಪ್ರಕೃತಿಯ ಮಹೋನ್ನತ ಲೀಲೆಯನ್ನು ಎಷ್ಟು ನೋಡಿದರೂ ಸಾಲದು. ಕಾಶ್ಮೀರದ ಸುಂದರ ದೃಶ್ಯಾವಳಿಯನ್ನು ನಾವಿಲ್ಲಿ ನೋಡಬಹುದು. ಬಾಬುಬುಡನ್‌ಗಿರಿಯಲ್ಲಿನ ಮಾಣಿಕ್ಯಧಾರಾ ಫಾಲ್ಸ್‌ನಲ್ಲಿ ಮೀಯುವುದು ಮೇಲಿನಿಂದ ಸುರಿವ ನೀರಿಗೆ ಮೈಯೊಡ್ಡಿ ನಿಲ್ಲುವುದೊಂದು ಸುಖಾನುಭವ. ಕಾನನದ ನಡುವೆ ಹರಿದುಬರುವುದರಿಂದ ಆ ನೀರಿಗೆ ತನ್ನದೇ ಆದ ಆರೋಗ್ಯವರ್ಧಕ ಗುಣವಿದೆ. ಇಲ್ಲಿ ಮಿಂದರೆ ಚರ್ಮರೋಗಗಳಿಗೆ ಪರಿಹಾರ ದೊರೆಯುತ್ತದೆನ್ನುವ ನಂಬಿಕೆ ಕೆಲವರದು.) ಸಿದ್ಧರಬೆಟ್ಟ, ದೇವರಾಯನದುರ್ಗ, ಸಾವನದುರ್ಗ, ಶಿವಗಂಗೆ, ಕುಮಾರಪರ್ವತ ಮೊದಲಾದುವು ಪರ್ವತಾರೋಹಣಕ್ಕೆ ಯೋಗ್ಯ ಸ್ಥಳಗಳು. ಯುವ ಸಾಹಸಿಗಳು ಪರ್ವತಾರೋಹಣ ಮಾಡಬಹುದು. ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಸುರುಳಿ ಸುತ್ತಿದಂತಿರುವ ಪರ್ವತಗಳಿವೆ. ಹುಬ್ಬರಾಯನದುರ್ಗ (ಸಕಲೇಶಪುರ ತಾಲೂಕು), ಮುಳ್ಳಯ್ಯನಗಿರಿ, ಬ್ರಹ್ಮಗಿರಿಗಳಲ್ಲಿ ಸೂಕ್ಷ್ಮವಾದ ಹುಲ್ಲಿನ ಇಳಿಜಾರುಗಳಿದ್ದು ಇಲ್ಲಿ ಜಾರಾಟವನ್ನು ಉತ್ಸಾಹಿಗಳು ನಡೆಸಬಹುದು. ದುರ್ಗಮವಾದ ಬೆಟ್ಟ ಗುಡ್ಡ ಕಾಡುಗಳಲ್ಲಿ ನದೀಮೂಲಗಳಿವೆ. ಇವುಗಳನ್ನು ಹುಡುಕಿಕೊಂಡು ಹೊರಡುವ ಸಾಹಸ ಚಟುವಟಿಕೆಯಲ್ಲಿ ಯುವಕರು ಪಾಲ್ಗೊಳ್ಳಬಹುದಾಗಿದೆ. ಕರ್ನಾಟಕದಲ್ಲಿ ತುಂಬಿ ಹರಿಯುವ ಅಸಂಖ್ಯ ನದಿಗಳಿವೆ. ಕಾವೇರಿ, ಶಿಂಶಾ, ಕಬಿನಿ ನದಿಗಳ ಇಳಿಜಾರು ಪ್ರವಾಹದಲ್ಲಿ ಹರಿಗೋಲು ನಡೆಸುವ; ಕೃಷ್ಣರಾಜಸಾಗರ, ಅಯ್ಯನಕೆರೆ, ಗೊರೂರು ಅಣೆಕಟ್ಟೆ, ತುಂಗಭದ್ರಾ ಅಣೆಕಟ್ಟೆ, ಶಾಂತಿಸಾಗರ, ಮಡಿವಾಳ, ಅಲಸೂರು ಮೊದಲಾದ ಕೆರೆ ಕಟ್ಟೆಗಳಲ್ಲಿ ಜಲಕ್ರೀಡೆ ಮಾಡುವ ಅವಕಾಶಗಳು ಸಾಹಸಿ ಯುವಕರು ಪಾಲಿಗಿವೆ. ಈಗ ದೋಣಿ, ಯಂತ್ರಚಾಲಿತ ದೋಣಿಗಳ ಕ್ರೀಡೆಯಿದೆ. ಮುಂದೆ ಹೊವರ್ ಕ್ರಾಫ್ಟ್,

ಕಯಾಕಿಂಗ್ ವಾಟರ್ ಸ್ಕೂಟರ್, ವಾಟರ್ ಸ್ಕೀಯಿಂಗ್ ಮೊದಲಾದುವನ್ನು ಆರಂಭಿಸುವ ಉದ್ದೇಶವಿದೆ. ಕೇರಳದ ಕುಮಾರ ಕೋಂನವೆಂಬ ನಾಡ್ ಮುನ್ನಾರ್ ಭಗವಂತ ಸೃಷ್ಟಿಸಿರುವ ಅದ್ಭುತ ಲೋಕ. ಅಲ್ಲಿನ ಸರೋವರದಲ್ಲಿ ಎರಡು ಮಹಡಿಯ ದೋಣಿ ವಿಹಾರದ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ಬಗೆಯ ದೋಣಿ ವಿಹಾರವನ್ನು ಕರ್ನಾಟಕದಲ್ಲೂ ಚಾಲನೆಗೆ ತರಬಹುದು. ವಾಯು ಕ್ರೀಡೆಗಳಲ್ಲಿ ಹ್ಯಾಂಡ್ ಗ್ಲೈಡಿಂಗ್, ಪ್ಯಾರಾ ಸೈಲಿಂಗ್, ಪವರ್ ಗ್ಲೈಡಿಂಗ್‌ಗಳು ಚಾಲ್ತಿಯಲ್ಲಿವೆ. ಬಲೂನು ಹಾರಾಟ, ಗಾಳಿಪಟ ಹಾರಾಟ -ಇವುಗಳೂ ಯುವಕರನ್ನು ಆಕರ್ಷಿಸುವ ಕ್ರೀಡೆಗಳಾಗಿವೆ.

ಪಕ್ಷಿಧಾಮವಾದ ರಂಗನತಿಟ್ಟಿನಲ್ಲಿ ಹಲವು ಅಭಿವೃದ್ಧಿ ಕಾರ್ಯಕ್ರಮ ಭರದಿಂದ ನಡೆದಿದ್ದು. ಪ್ರವಾಸಿಗಳನ್ನು ಸೆಳೆಯುವ ಪೂರಕ ವಾತಾವರಣ ನಿರ್ಮಾಣವಾಗುತ್ತಿದೆ.

ಅರಣ್ಯ ಇಲಾಖೆಯ 'ಸಂರಕ್ಷಿತ ಪ್ರದೇಶ ಅಭಿವೃದ್ಧಿ ನಿಧಿ'ಯಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ರೆಸ್ಟೋರೆಂಟ್, ಶುದ್ಧ ಕುಡಿಯುವ ನೀರು, ಶೌಚಾಲಯ ವಾಹನ ನಿಲ್ದಾಣ ಇವುಗಳ ಕಾಮಗಾರಿ ಪ್ರಗತಿಯಲ್ಲಿದೆ. ಪ್ರವಾಸಿಗರ ಅನುಕೂಲಕ್ಕಾಗಿ ೩.೫ ಎಕರೆ ಪ್ರದೇಶದಲ್ಲಿ ರೆಸ್ಟೋರೆಂಟ್ ವಾಚನಾಲಯ, ಮಕ್ಕಳ ಪಾರ್ಕ್, ಶೌಚಾಲಯ ಕಾಮಗಾರಿ ಪ್ರಗತಿಯಲ್ಲಿದೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ದರೋಜಿ ಒಂದು ಕಾಲಕ್ಕೆ ಕುರುಚಲು ಕಾಡಾಗಿದ್ದಿತು. ಹೆಸರಾಂತ ವನ್ಯಜೀವಿ ಛಾಯಾಗ್ರಾಹಕ ಹಾಗೂ ಮಾಜಿ ಮಂತ್ರಿ ಎಂ.ವೈ. ಘೋರ್ಪಡೆಯವರ ಪ್ರಯತ್ನದಿಂದಾಗಿ ದರೋಜಿಯಿಂದ ಶುರುವಾಗಿ ಹೊಸಪೇಟೆ ತಾಲ್ಲೂಕಿನ ರಾಮಸಾಗರದವರೆವಿಗೂ ಹರಡಿರುವ ೫೫೮೭ ಎಕರೆಗಳನ್ನು ಅಭಯಾರಣ್ಯಕ್ಕಾಗಿ ಮೀಸಲಿಡಲು ಸರ್ಕಾರ ನಿರ್ಧರಿಸಿತು. ದೇಶದ ಏಕಮಾತ್ರ ಕರಡಿ ಧಾಮವಾಗಿ ೧೯೯೪ರಲ್ಲಿ ಅಸ್ತಿತ್ವಕ್ಕೆ ಬಂದಿತು. ದೊಡ್ಡಬೆಟ್ಟಗಳು, ಹಲವಾರು ಗುಹೆಗಳೂ ಇರುವ ಈ ಕರಡಿ ಧಾಮದಲ್ಲಿ ಕೇವಲ ಕರಡಿಗಳಷ್ಟೇ ಅಲ್ಲ ಚಿರತೆ, ತೋಳ, ಮುಂಗುಸಿ, ಮೊಲ, ಕತ್ತೆಕಿರುಬ, ಕಾಡುಹಂದಿಗಳನ್ನೂ ಕಾಣಬಹುದು. ಇಲ್ಲಿ ನವಿಲು ಗರಿಬಿಚ್ಚಿ ನರ್ತಿಸುತ್ತವೆ. ಕಾಡುಕೋಳಿಗಳೂ ಅನೇಕ ಬಗೆಯ ಪಕ್ಷಿಗಳೂ ಇಲ್ಲಿವೆ. ಅರಣ್ಯ ಇಲಾಖೆ ಬೇಟೆಯಾಡಲು ಅನುಮತಿಸುವುದಿಲ್ಲವಾದ್ದರಿಂದ ಇಲ್ಲಿ ಪ್ರಾಣಿಗಳು, ಪಕ್ಷಿಗಳು ನಿರಾತಂಕವಾಗಿ ಜೀವಿಸಿವೆ. ಈ ವನ್ಯಜೀವಿಧಾಮದಲ್ಲಿ ಪ್ರಾಣಿಗಳ ವೀಕ್ಷಣೆಗಾಗಿ ಗೋಪುರವನ್ನು ಅರಣ್ಯ ಇಲಾಖೆ ನಿರ್ಮಿಸಿದೆ.

ಪ್ರಾಣಿ-ಪಕ್ಷಿಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಪುಸ್ತಕಗಳು ಹಾಗೂ ನಿಯತಕಾಲಿಕಗಳನ್ನು ಇಲ್ಲಿನ ವಾಚನಾಲಯದಲ್ಲಿ ಒದಗಿಸಲಾಗುವುದು.

ಕರ್ನಾಟಕದಲ್ಲಿ ನಿಸರ್ಗ ಸಂಪತ್ತು ವಿಶೇಷವಾಗಿದೆ. ನಿಸರ್ಗ ಪ್ರೇಮಿಗಳಾದವರು ಚಿಟ್ಟೆಗಳ ಸಂಗ್ರಹ ಹಾಗೂ ಅವುಗಳನ್ನು ಗುರುತಿಸುವ ಹವ್ಯಾಸವನ್ನಾಗಲೀ, ಪ್ರಕೃತಿಯೊಂದಿಗೆ ತಾದಾತ್ಮ್ಯ ಹೊಂದುವ ಭಾವನೆಯನ್ನು ಬೆಳೆಯಿಸಲು ಕಾಡಿನ ನಡುವೆವಾಸಿಸುವ, ಕಾಡಿನಲ್ಲಿ ಸಂಚರಿಸಿ ವನ್ಯಜೀವಿಗಳನ್ನು ನೋಡುವ, ಪ್ರಾಣಿ ಹಾಗೂ ಪಕ್ಷಿಗಳ ಜೀವನ ವಿಧಾನ ಹಾಗೂ ಚಟುವಟಿಕೆಗಳನ್ನು ಅಭ್ಯಸಿಸುವ ಪ್ರಯತ್ನವನ್ನಾಗಲೀ ಮಾಡಬಹುದು. ಅರಣ್ಯ ಪ್ರವಾಸಿಗಳಿಗೆ ಬಂಡಿಪುರ, ನಾಗರಹೊಳೆ, ದಾಂಡೇಲಿಯ ಅರಣ್ಯಗಳು ಮರೆಯಲಾಗದ ಅನುಭವಗಳನ್ನೂ ಅಧ್ಯಯನಕ್ಕೆ ಪೂರಕ ಸಾಮಗ್ರಿಗಳನ್ನೂ ಒದಗಿಸುತ್ತದೆ. ಕಾಡಿನಲ್ಲಿ ಮರದ ಮೇಲೆ ಅಟ್ಟಣೆಗೆ ಕಟ್ಟ ವನ್ಯ ಜೀವಿಗಳ ಓಡಾಟವನ್ನು ಕಾಣುವುದು ಒಂದು ವಿನೂತನ ಅನುಭವ. ಬಿಳಿಗಿರಿರಂಗನ ರೆಸಾರ್ಟ್ಸ್, ಅಡ್ವೆಂಚರ್ ಕ್ಲಬ್ ಹಾಗೂ ಕ್ರೀಡೆಗಳಲ್ಲಿ ಹೆಚ್ಚಳ ಕಂಡುಬರುತ್ತಿದ್ದು ಹೆಚ್ಚು ಜನಪ್ರಿಯವಾಗುತ್ತಿದೆ. ರೆಸಾರ್ಟ್ಸ್‌ಗಳ ಹೆಚ್ಚಳವು ಅಂಕಿಸಂಖ್ಯೆಗಳ ಮೂಲಕ ತಿಳಿಯುತ್ತಿದ್ದು ಅದು ಎಕೋ ಟೂರಿಸಂಅನ್ನು ಅಭಿವೃದ್ಧಿಪಡಿಸುತ್ತಿದೆ, ಹೆಚ್ಚು ಸಂಖ್ಯೆಯಲ್ಲಿ ಪ್ರವಾಸಿಗಳನ್ನು ಆಕರ್ಷಿಸುತ್ತಿದೆ. ಉತ್ತರ ಕನ್ನಡದ ದಾಂಡೇಲಿಯ ಕಾಳಿನದಿಯ ಬಗೆಗೆ ಮುಂದಾಲೋಚಿಸಿ ಸರ್ಕಾರ ಹೆಚ್ಚು ಆಸಕ್ತಿ ತೋರುತ್ತಿರುವುದು ಎಕೊ ಟೂರಿಸಂನ ಬಹುದೊಡ್ಡಸಾಧನೆ. ಅರಣ್ಯ ವಿಶ್ರಾಮಧಾಮಗಳೊಂದಿಗೆ ದಟ್ಟ ಅರಣ್ಯದ ಪರಿಸರಕ್ಕೆ ಧಕ್ಕೆಯಾಗದಂತೆ ಇದು ಯೋಜಿತವಾಗುತ್ತಿರುವುದು ಸುತ್ತಣ ನಿಸರ್ಗ ಪರಿಸರಕ್ಕೆ ಧಕ್ಕೆಯಾಗದ ರೀತಿಯಲ್ಲಿ ಆರೋಗ್ಯಕರ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವುದು ಇದರ ಜೊತೆಗೆ ಅರಣ್ಯನಾಶ ಹಾಗೂ ಪರಿಸರ ನೈರ್ಮಲ್ಯವನ್ನು ತತ್ಪಸುವುದು ಬೆಂಗಳೂರಿನ ಸುತ್ತಮುತ್ತ ಸಾಹಸಕ್ರಿಡೆಗಳನ್ನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಆಗ ಪ್ರವಾಸಿಗರಿಗೆ ಪ್ರಕೃತಿಯ ಸಹಜಸ್ಥಿತಿಯನ್ನು ಕಾಪಾಡಿಕೊಂಡು ಬರುವ ಬಗೆಗೆ ತಿಳುವಳಿಕೆ ನೀಡಲಾಗುವುದು.

ಪ್ರಾಕೃತಿಕ ಮನೊರಂಜನೆಗಾಗಿ ಜನ ಈಗ ನಗರದ ಹೊರಗಡೆ ಪ್ರವಾಸ ಕೈಗೊಳ್ಳಲು ಬಯಸಿರುವುರು. ಬಿಳಿಗಿರಿರಂಗನ ಬೆಟ್ಟ, ಕೊಡಗು, ಬ್ರಹ್ಮಗಿರಿಗಳಲ್ಲಿ ಇಂತಹ ಅವಕಾಶಗಳು ಸಾಕಷ್ಟಿವೆ. ನಗರದ ಸದ್ದುಗದ್ದಲದಿಂದ ಬಹುದೂರ ಹೋಗಿ ಪ್ರಕೃತಿಯ ನಡುವೆ ಇರುವ ಅವಕಾಶವನ್ನು ಕಲ್ಪಿಸಲಾಗುತ್ತಿದೆ. ಸೋಮನಹಳ್ಳಿ, ಬನ್ನೇರುಘಟ್ಟ, ನಾಗರಹೊಳೆ, ದಾಂಡೇಲಿ, ರಾಣಿಬೆನ್ನೂರು ಮುಂತಾದೆಡೆಗಳಲ್ಲಿ ಪ್ರಕೃತಿ ಶಿಬಿರಗಳನ್ನು ಏರ್ಪಡಿಸಲಾಗಿದೆ. ದಟ್ಟ ಅಡವಿಯೊಳಗಿರುವ ಬುಡಕಟ್ಟಿನ ಜನಾಂಗದವರ ಜೀವನ ಪರಿಚಯ ಮಾಡಿಕೊಳ್ಳಲು ಪ್ರವಾಸ ಕೈಗೊಳ್ಳಬಹುದು, ಉದಾಹರಣೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿರುವ ಸೋಲಿಗರ ವೈವಿಧ್ಯಮಯವಾದ ಸಾಮಾಜಿಕ ಜೀವನ

ಹಾಗೂ ಅವರ ವೈಶಿಷ್ಟ್ಯಪೂರ್ಣವಾದ ಆಚರಣೆಗಳು, ಪದ್ಧತಿಗಳು, ನಂಬಿಕೆಗಳು- ಇವುಗಳ ಅಧ್ಯಯನವನ್ನು ನಡೆಸುವುದರಿಂದ ಕುತೂಹಲಕಾರಿಯಾದ ಅನೇಕ ಹೊಸ ಸಂಗತಿಗಳು ಬೆಳಕಿಗೆ ಬರುತ್ತವೆ.

೧೯೯೧ ಪ್ರವಾಸಿ ವರ್ಷವೆಂದು ಸರ್ಕಾರ ಘೋಷಿಸಿತು. 'ಭಾರತಕ್ಕೆ ಭೇಟಿ ಕೊಡಿ' ಎಂಬ ಪ್ರಚಾರ ಭಿತ್ತಿಗಳು ಕಂಡುಬಂದವು ವಿದೇಶೀ ವಿನಿಮಯದಗಳಿಕೆಯ ಕಡೆಗೆ ಸರಕಾರದ ಗಮನವಿರುವುದರಿಂದ ಪ್ರವಾಸಿ ತಾಣಗಳ ಬಗೆಗೆ ಪ್ರಚಾರ ಸಾಕಷ್ಟು ವೈಭವಯುತವಾಗಿಯೇ ನಡೆಯಿತು. ಸೊಗಸಾಗಿ ಮುದ್ರಿತವಾಗಿರುವ ಫೋಲ್ಡರ್‌ಗಳೆಲ್ಲ, ನಕಾಶೆಗಳೆಲ್ಲ ಇಂಗ್ಲಿಷ್‌ನಲ್ಲೇ ಇವೆ. ಕನ್ನಡೇತರರಿಗೆ ಮಾತ್ರ ತಿಳಿಯಪಡಿಸುವ ಈ ವಿವರಗಳು, ಈ ನೆಲದ ಮಕ್ಕಳಿಗೂ ಅವರ ಭಾಷೆಯಲ್ಲಿಯೇ ತಿಳಿಯಬೇಕಲ್ಲವೆ? ಕರ್ನಾಟಕದಲ್ಲಿನ ಪ್ರವಾಸಿ ತಾಣಗಳ ಬಗೆಗೆ ಹೆಮ್ಮೆಯಿಂದ ಹೇಳಿಕೊಳ್ಳುವ ಪರಿಸರ ನಿರ್ಮಾಣ ಮಾಡಬೇಕು.

ಆ ಪರಿಸರ ನಿರ್ಮಾಣ ಪ್ರವಾಸೋದ್ಯಮ ಇಲಾಖೆಯ ಪ್ರಚಾರ ಸಾಧನಗಳ ಮೂಲಕ ಸಾಧ್ಯ. ಪ್ರವಾಸೋದ್ಯಮ ಬೆಳೆದಂತೆ ಜನರಲ್ಲಿ ಪ್ರವಾಸದ ಬಗೆಗೆ ಆಸಕ್ತಿಯನ್ನು ಮೂಡಿಸಲು ಪತ್ರಿಕೆಗಳು ನೆರವಾಗಬೇಕು. ಕನ್ನಡದಲ್ಲಿ 'ಯಾತ್ರಿಕ' ಎಂಬ ಪಕ್ಷ ಪತ್ರಿಕೆಯನ್ನು ಏಷ್ಯನ್ ಟ್ರಾವಲ್ಸ್‌ನವರೂ 'ವಿಶ್ವಪರ್ಯಟನ' ಮಾಸಪತ್ರಿಕೆಯನ್ನು ಆನಂದ್ ಕಾರ್ಪೊರೇಷನ್‌ರವರೂ ಹೊರತರುತ್ತಿದ್ದರು. ಪ್ರವಾಸೋದ್ಯಮಕ್ಕೇ ಮೀಸಲಾಗಿದ್ದ ಕನ್ನಡ ಪತ್ರಿಕೆಗಳಿವು. 'ವಿಶ್ವರ್ಯಟನ' ಈಗ ನಿಂತಿದೆ. ಇಂಗ್ಲಿಷ್‌ನಲ್ಲಿ ಭಾರತ ಸರಕಾರದ ಪ್ರವಾಸೋದ್ಯಮ ಇಲಾಖೆಯ ವಾರ್ತಾಪತ್ರ 'Travel India Briefings' ಹಿಂದೆ ಪ್ರಕಟವಾಗುತ್ತಿತ್ತು. ಈಗ 'Know India' ಎಂಬ ದ್ವೈಮಾಸಿಕ ವಾರ್ತಾ ಪತ್ರ ಪ್ರಕಟವಾಗುತ್ತಿದೆ. ಇದರ ಹಿಂದಿ ರೂಪಾಂತರ 'ಭಾರತ್ ದರ್ಶನ್' ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿದೆ. 'Discover India' ಎಂಬ ಇಂಗ್ಲಿಷ್ ಮಾಸಿಕವನ್ನು ಹಾಂಕಾಂಗಿನ ಮೀಡಿಯಾ ಟ್ರಾನ್ಸಾಸಿಯಾ ಲಿಮಿಟೆಡ್ ಸಂಸ್ಥೆಯ ೧೯೮೮ರಿಂದ ಹೊರತರುತ್ತಿವೆ. ಭಾರತೀಯ ಜನತೆ ಹಾಗೂ ಸಂಸ್ಕೃತಿಯನ್ನು ಕುರಿತಂತೆ 'The India Magazine' ಇಂಗ್ಲಿಷ್‌ನಲ್ಲಿ ೧೯೮೧ ರಿಂದ ಪ್ರಕಟವಾಗುತ್ತಿದೆ. ಪ್ರವಾಸವು ಇಂದಿನ ಶಿಕ್ಷಣದ ಪಠ್ಯಭಾಗವಾಗಬೇಕೆಂದು ಶಿಕ್ಷಣತಜ್ಞರು ಹೇಳುತ್ತಿರುವರು. ೧೯೮೦-೮೧ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಪ್ರವಾಸೋದ್ಯಮವನ್ನು ಪದವಿ ಮಟ್ಟದಲ್ಲಿ ಕಲಿಸಲು ಒಂದು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿತು. ೧೯೮೧ರಲ್ಲಿ ಪ್ರಾಣನಾಥ್ ಸೇಥ್‌ರವರು ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಪ್ರವಾಸೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಪ್ರಾರಂಭಿಸಿದರು.

ಪ್ರವಾಸೋದ್ಯಮಕ್ಕೆ ಪೂರಕವಾದ 'Hotel Business Management and marketing Research' ಎಂಬ ಪದವಿ ಮಟ್ಟದ ಕೋರ್ಸ್ ಮಣಿಪಾಲದಲ್ಲಿದೆ. ಪ್ರಿ.ಯೂನಿವರ್ಸಿಟಿ ಶಿಕ್ಷಣ ಆದ ಬಳಿಕ ಈ ಮೂರು ವರ್ಷದ ಕೋರ್ಸಿಗೆ ಸೇರಬಹುದು. ಬೆಂಗಳೂರಿನ 'Institute of Hotel and Food Catering' ಸಂಸ್ಥೆಯ ಹೋಟೆಲ್ ಮೇನೇಜ್‌ಮೆಂಟ್ ಹಾಗೂ ಫುಡ್ ಕೇಟರಿಂಗ್ ಬಗೆಗೆ ಶಿಕ್ಷಣ ನೀಡುತ್ತಿದೆ. 'Indian Institute of Tourism and Travel management' (IITTM) ಸಂಸ್ಥೆಯು ಭಾರತ ಸರಕಾರದ ಪ್ರವಾಸೋದ್ಯಮ ಸಚಿವಾಲಯದಿಂದ (Ministry of Tourism, Government of India) ಮಾನ್ಯ ಮಾಡಿದ (Post-Graduate Diploma in Tourism Management(PGDTM) ಹಾಗೂ Masters in Tourism Administaration (MTA) ಪದವಿಗಳನ್ನು ವಿದ್ಯಾರ್ಥಿಗಳಿಗೆ ನೀಡಲು ಹೊರಟಿದೆ. ವಿದೇಶಗಳಲ್ಲಿ ಪ್ರವಾಸೋದ್ಯಮದ ಬಗೆಗೆ ಉನ್ನತ ಶಿಕ್ಷಣ ಪಡೆಯಲು ಅವಕಾಶವಿದೆ. ಉದಾಹರಣೆಗೆ, ಅಮೆರಿಕದ ನ್ಯಾಷನಲ್ ಪಾರ್ಕ್ ಯೂನಿವರ್ಸಿಟಿಯಿಂದ ವರ್ಷ ವರ್ಷವೂ ನೂರಾರು ಸ್ನಾತಕರು ಅಲ್ಲಿನ ಪರ್ವತ, ನದಿ, ಭೋರ್ಗರೆವ ಝರಿ, ನೆಲದ ಫಲವತ್ತತೆ, ಇಲ್ಲಿಯ ಪ್ರಾಣಿಗಳ ಸಂರಕ್ಷಣೆ, ಪ್ರವಾಸಿ ಸೌಕರ್ಯ ಇವುಗಳನ್ನೆಲ್ಲಾ ನೋಡಿಕೊಳ್ಳುವ ಸಲುವಾಗಿ ಶಿಕ್ಷಣ ಪಡೆಯುತ್ತಾರೆ. ಈ ವಿಷಯಗಳಲ್ಲಿ ಹೆಚ್ಚಿನ ಸಂಶೋಧನೆ ನಡೆಸುವವರಿಗೆ ಡಾಕ್ಟರೇಟ್ ಪದವಿಯನ್ನೂ ಕೊಡಲಾಗುತ್ತದೆ. ಪ್ರವಾಸವು ಶಿಕ್ಷಣದ ಒಂದು ಅವಿಭಾಜ್ಯ ಘಟಕವಾಗ ಬಹುದೆಂಬುದಕ್ಕೆ ಡಾ. ಬಿ.ಜಿ.ಎಲ್. ಸ್ವಾಮಿಯವರ 'ಹಸಿರು ಹೊನ್ನು' ಒಂದು ಶ್ರೇಷ್ಠ ಉದಾಹರಣೆ. ಲಲಿತ ಸಾಹಿತ್ಯದ ಮೂಲಕವೂ ಸಾಮಾನ್ಯ ಓದುಗನ ಮನಸ್ಸಿನ ಮೇಲೆ ಪ್ರವಾಸವು ಒಳ್ಳೆಯ ಪರಿಣಾಮ ಬೀರಬಲ್ಲುದು. ಉದಾಹರಣೆಗೆ ಗೋಕಾಕರ 'ಸಮರಸವೇ ಜೀವನ', ಕಾರಂತರ 'ಆಳ ನಿರಾಳ', ಟಿ.ಕೆ. ರಾಮರಾವ್ ರವರ 'ಪಶ್ಚಿಮದ ಬೆಟ್ಟ'- ಇವೇ ಮೊದಲಾದ ಕಾದಂಬರಿಗಳು ತಮ್ಮ ಕಥೆಯ ಒಡಲಿನಲ್ಲಿ ಪ್ರವಾಸಾನುಭವಗಳನ್ನು ತುಂಬಿಕೊಂಡು ಅಪರೋಕ್ಷಾನುಭವವನ್ನು ಓದುಗನಲ್ಲಿ ಉಂಟುಮಾಡುತ್ತವೆ.

ಡಾ. ಬಿ.ಜಿ.ಎಲ್. ಸ್ವಾಮಿಯವರ ಹಸಿರುಹೊನ್ನು ಮನರಂಜನಾರ್ಥವಾಗಿ ಕೈಗೊಳ್ಳುವ ಪ್ರವಾಸ ಕಥನಕ್ಕಿಂತ ಭಿನ್ನವಾದುದು. ಸಸ್ಯಶಾಸ್ತ್ರದ ಪ್ರಾಧ್ಯಾಪಕರಾದ ಅವರು ತಮ್ಮ ವಿಭಾಗದ ವಿದ್ಯಾರ್ಥಿಗಳ ಜೊತೆಗೆ ಕೈಕೊಂಡ ಸಸ್ಯಸಂಗ್ರಹ ಪ್ರವಾಸ ಕಥನ. ಸಸ್ಯಸಮೃದ್ಧವಾದ ಕಾಡುಮೇಡುಗಳಲ್ಲಿ ವಿಜ್ಞಾನದ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರ ನಿರ್ದೇಶನದಲ್ಲಿ ಕೈಗೊಂಡ ಪ್ರವಾಸವಿದು. ನಮಗೆ ನಮ್ಮ ಸುತ್ತಣ ನಿಸರ್ಗದ ಬಾಹ್ಯಪರಿಚಯವಿದೆಯೇ ಹೊರತು ಅದರ ಅಂತರಂಗದ ಪರಿಚಯವಿರುವುದಿಲ್ಲ.

ನಮಗೆ ನಮ್ಮ ಪರಿಸರದಲ್ಲಿರುವ ಗಿಡ, ಮರ, ಬಳ್ಳಿ ಹೂಗಳ ಪರಿಚಯವೆಷ್ಟಿದೆ? 'ಹಸಿರು ಹೊನ್ನು' ಕೃತಿಯಲ್ಲಿ ಲೇಖಕರು ನೂರಾರು ಗಿಡಗಳ ಸಾಮಾನ್ಯ ಪರಿಚಯ ಮಾಡಿಕೊಡುವುದಿಲ್ಲ, ಅವರು ಸಾಮಾನ್ಯನಿಗೂ ತಿಳಿಯುವಂತೆ ಒಂದೊಂದು ಸಸ್ಯಕ್ಕೂ ಇರುವ ಭಾರತೀಯವಾದ ಜನಬಳಕೆಯ ಹೆಸರನ್ನು ತಿಳಿಸಿ, ಅದು ಹೇಗೆ ಈ ದೇಶದ ಬದುಕಿನ ಒಂದು ಉಪಯುಕ್ತ ಭಾಗವಾಗಿದೆ ಎಂಬುದನ್ನು ವಿವರಿಸುವರು. ಬಿ.ಜಿ. ಎಲ್. ಸ್ವಾಮಿಯವರು ಕೇವಲ ಸಸ್ಯ ವಿಜ್ಞಾನಿಯಾಗಿ ಒಂದು ಸಸ್ಯವನ್ನು ನೋಡದೆ ಈ ನೆಲದ ಸಾಂಸ್ಕೃತಿಕ ಭಾಗವಾಗಿ ನೋಡುವರು, ವಿಶ್ಲೇಷಿಸುವರು. ಇದು ಅವರ ವಿಶಿಷ್ಟಗುಣ. ಅವರು ಸಸ್ಯಗಳನ್ನು ಸಂಗ್ರಹಿಸುವುದಕ್ಕೆ ಕೊಡುವಷ್ಟೇ ಪ್ರಾಶಸ್ತ್ಯವನ್ನು ಅದರ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವದ ಭಾಗವಾಗಿರುವ ಅನ್ವೇಷಣೆಗೂ ಕೊಡುವರು. ಒಂದು ಸಸ್ಯಕ್ಕೆ ಸಸ್ಯಶಾಸ್ತ್ರದಲ್ಲಿ ಕೊಡಲಾಗಿರುವ ನಾಮರೂಪ ವಿಶೇಷಗಳ ಜೊತೆಗೆ ಅದಕ್ಕೆ ಭಾರತೀಯ ಪರಿಸರದಲ್ಲಿರುವ ಹೆಸರು, ಅದರ ವೈದ್ಯಕೀಯ ಪ್ರಯೋಜನ, ಧಾರ್ಮಿಕ ಪರಿಧಿಯಲ್ಲಿ ಅದಕ್ಕಿರುವ ಸ್ಥಾನ -ಇವೇ ಮೊದಲಾದವನ್ನು ವಿಶ್ಲೇಷಿಸುವರು. ಇಲ್ಲಿನ ಬರವಣಿಗೆಯ ಶೈಲಿ ಲವಲವಿಕೆಯಿಂದ ಕೂಡಿ ವಿನೋದಮಯವಾಗಿದೆ. ಇಲ್ಲಿ ಬರುವ ವೆತ್ತಪಿಳ್ಳೈ, ವರದರಾಜ, ಇಳವರಸ, ವೆಂಕಟಪ್ಪ - ಇವರ ನಡಾವಳಿ, ವ್ಯಕ್ತಿತ್ವ ಸೊಗಸಾಗಿ ಚಿತ್ರಿತವಾಗಿದೆ.* ಅಲ್ಲಲ್ಲಿ ಬರುವ ನಿಸರ್ಗದ ಕಾವ್ಯಮಯವಾದ ವರ್ಣನಾಭಾಗಗಳು ಚೇತೋಹಾರಿಯಾಗಿವೆ. ಆಗುಂಬೆಯ ಕಾಡಿನಲ್ಲಿ ಸುರಿದ ಮಧ್ಯಾಹ್ನದ ಮಳೆಯ ವರ್ಣನೆಯನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು.

ನಮ್ಮಲ್ಲಿ ಪ್ರವಾಸ ಸಾಹಿತ್ಯ ಪತ್ರಿಕೆಗಳಲ್ಲಿ ಅನಿಯತವಾಗಿ ಪ್ರಕಟವಾಗುತ್ತಿವೆ. ಹೊಸ ಹೊಸ ಪ್ರವಾಸಿ ತಾಣಗಳನ್ನು ಗುರುತಿಸುವ, ತಾವು ಪಡೆದ ಅನುಭವವನ್ನು ರಸವತ್ತಾಗಿ ತಿಳಿಯಹೇಳುವ ಲೇಖನಗಳು ಬಹಳ ಕಡಿಮೆ. ವರ್ಷದಲ್ಲಿ ಹತ್ತಾರು ಪ್ರಕಟವಾದರೆ ಹೆಚ್ಚು. ಪ್ರವಾಸ ಮಾಡಿದವರೆಲ್ಲರೂ ತಮ್ಮ ಅನುಭವಗಳನ್ನು ನಿರೂಪಿಸಬೇಕೆಂದಿಲ್ಲ. (ಅದು) ಸಾಧುವೂ ಅಲ್ಲ, ಸಾಧ್ಯವೂ ಅಲ್ಲ. ಕೆಲವರಾದರೂ ತಮ್ಮ ಅನುಭವಗಳನ್ನು ಬರಹಮುಖೇನ ಇತರರೊಡನೆ ಹಂಚಿಕೊಳ್ಳಬೇಕು. ಆಗಲೇ ಅದು ಸಾರ್ಥಕ್ಯ ಪಡೆಯುವುದು.

---

* ಕನ್ನಡದಲ್ಲಿ ಅಣಕ ಅಥವಾ ನವಿರಾದ ವಿಡಂಬನೆಯ ಸಾಹಿತ್ಯ ಬಹಳ ಕಡಿಮೆ. ಬಿ.ಜಿ.ಎಲ್. ಸ್ವಾಮಿಯವರು ಆ ಕೊರತೆಯನ್ನು ಸ್ವಲ್ಪಮಟ್ಟಿಗೆ ತುಂಬಿರುವರು. ಅವರ ಕಾಲೇಜುರಂಗ, ತಮಿಳು ತಲೆಗಳ ನಡುವೆ -ಇದಕ್ಕೆ ಉದಾಹರಣೆ. ವ್ಯಕ್ತಿಚಿತ್ರವನ್ನು ಬಿಡಿಸುವಲ್ಲಿಯೂ ಅವರು ಸಿದ್ಧಹಸ್ತರು. 'ಪಂಚಕಲಶ ಗೋಪುರ' ಇದಕ್ಕೆ ಒಂದು ಒಳ್ಳೆಯ ಉದಾಹರಣೆ. ಓರ್ವ ಸಸ್ಯವಿಜ್ಞಾನಿ ಹೀಗೆ ಸಾಹಿತ್ಯವನ್ನು ಬದುಕಿನ ವಿರಾಟ್‌ದರ್ಶನದ ಅಭಿವ್ಯಕ್ತಿಗೆ ಬಳಸಿಕೊಂಡಿರುವುದು ವಿಶೇಷ.

ಕರ್ನಾಟಕಕ್ಕೆ ತನ್ನದೇ ಆದ ಪ್ರವಾಸಿ ಕ್ಯಾಲೆಂಡರ್ ಇದೆ. ಜನವರಿಯಿಂದ ಡಿಸೆಂಬರ್‌ವರೆವಿಗೂ ಪ್ರವಾಸೀ ಆಕರ್ಷಣೆಗಳಿವೆ. ಜನವರಿಯಲ್ಲಿ ಹಂಪೆಯ ವೀಕ್ಷಣೆ; ಫೆಬ್ರವರಿ ೧೬ಕ್ಕೆ ಗೋಕರ್ಣ ಭೇಟಿ; ಮಾರ್ಚ್‌ನಿಂದ ಮೇ ತಿಂಗಳವರೆಗೆ ಮಡಿಕೇರಿ, ಕೆಮ್ಮಣ್ಣುಗುಂಡಿ, ನಂದಿಬೆಟ್ಟ, ಮಹದೇಶ್ವರನಬೆಟ್ಟ, ಬಿಳಿಗಿರಿರಂಗನಬೆಟ್ಟ, ವಾಣಿ ವಿಲಾಸಸಾಗರ, ಕಬಿನಿ, ಗುಂಡಲ್ ಡ್ಯಾಂಗಳು -ಇಲ್ಲಿ ತಂಪು ಹವೆಯಲ್ಲಿ ವಿಶ್ರಾಂತಿ; ಜೂನ್‌ನಿಂದ ಅಕ್ಟೋಬರ್‌ವರೆವಿಗೆ ಜೋಗ್ ಜಲಪಾತದ ಭವ್ಯದೃಶ್ಯ ವೀಕ್ಷಣೆ; ಜೂನ್‌ನಿಂದ ಸೆಪ್ಟೆಂಬರ್‌ವರೆವಿಗೆ ರಂಗನತಿಟ್ಟಿನಲ್ಲಿ ಪಕ್ಷಿಗಳ ವೀಕ್ಷಣೆ; ಜೂನ್‌ನಿಂದ ಅಕ್ಟೋಬರ್‌ವರೆವಿಗೆ ಬಂಡೀಪುರ ಅರಣ್ಯ ಪ್ರವಾಸ; ಅಕ್ಟೋಬರ್ ೨೧ಕ್ಕೆ ವಿಶ್ವ ವಿಖ್ಯಾತ ಮೈಸೂರು ದಸರಾ; ನವಂಬರ್ ಹಾಗೂ ಡಿಸೆಂಬರ್‌ಗಳಲ್ಲಿ ಆಗುಂಬೆಯಲ್ಲಿ ಸೂರ್ಯಾಸ್ತಮಾನದ ರೋಮಾಂಚಕ ಅನುಭವ.

ಕರ್ನಾಟಕಕ್ಕೆ ತನ್ನದೇ ಆದ ಧಾರ್ಮಿಕ ವಲಯಗಳಿದ್ದು ಅವು ತೀರ್ಥಯಾತ್ರೆಗೆ ಬಂದ ಪ್ರವಾಸಿಗರು ಹಾಗೂ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿದವರ ಮನಸ್ಸಿಗೆ ಆಹ್ಲಾದ ನೀಡುತ್ತವೆ. ಕರ್ನಾಟಕದ ವೈಶಿಷ್ಟ್ಯವೆಂದರೆ, ಅಲ್ಲಿನ ಶಿಲ್ಪಕಲಾವೈಭವದ ಬೆರಗು ಹಾಗೂ ಪೌರಾಣಿಕ ಹಿನ್ನೆಲೆ ಸುಮಧುರವಾದ ಇತಿಹಾಸದ ಜೊತೆಗೆ ಬೇರ್ಪಡಿಸಲಾಗದಂತೆ ಬೆರೆತು ಹೋಗಿರುವುದು.

ಕರಾವಳಿ ಪಟ್ಟಣವಾದ ಗೋಕರ್ಣವು ಹಿಂದೂ ತೀರ್ಥಯಾತ್ರಿಗಳನ್ನು ಸಂಸ್ಕೃತ ವಿದ್ವಾಂಸರನ್ನು ಆಕರ್ಷಿಸಿದೆ. ಹಾಗೆಯೇ ಅಲ್ಲಿನ ಸಮುದ್ರ ದಂಡೆಯೂ ಪ್ರವಾಸಿಗರ ಮನಸೆಳೆದಿದೆ. ಆತ್ಮಲಿಂಗವನ್ನು ಹೊಂದಿರುವ ಅಲ್ಲಿನ ಪ್ರಾಚೀನ ಮಹಾಬಲೇಶ್ವರ ದೇವಾಲಯ, ವೆಂಕಟರಮಣ ದೇವಾಲಯ, ಗಣಪತಿ ದೇವಾಲಯ, ಯಾತ್ರಾರ್ಥಿಗಳು ಮೀಯುವ ಕೋಟಿ ತೀರ್ಥ -ಇವು ಇಲ್ಲಿನ ಪ್ರಮುಖ ಆಕರ್ಷಣೆಗಳು. ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಭಕ್ತಾದಿಗಳು ಮುಖ್ಯ ರಸ್ತೆಯಲ್ಲಿ ಹಲವು ಬಗೆಯ ರಥೋತ್ಸವಗಳನ್ನು ನಡೆಸುವರು.

ಮಂಗಳೂರಿನಿಂದ ಸು. ೬೦ ಕಿ.ಮೀ. ದೂರದಲ್ಲಿರುವ ಉಡುಪಿಯು ವೈಷ್ಣವರಿಗೆ ಪವಿತ್ರ ಕ್ಷೇತ್ರ; ಮಧ್ವಾಚಾರ್ಯರ ಪುಣ್ಯಕ್ಷೇತ್ರ. ಉಡುಪಿಯಲ್ಲಿ ಪ್ರಸಿದ್ಧವಾದುದು ಕೃಷ್ಣ ದೇವಾಲಯ. ಇದರಲ್ಲಿನ ಮುಖ್ಯ ಆಕರ್ಷಣೆ ಕನಕನ ಕಿಂಡಿ -ಒಂದು ಪುಟ್ಟ ಕಿಟಕಿಯಿಂದ ಕೃಷ್ಣನ ಪರಮಭಕ್ತನಾದ ಕನಕದಾಸನಿಗೆ ಕೃಷ್ಣನು ದರ್ಶನ ನೀಡಿದುದು. ವರ್ಷ ಬಿಟ್ಟು ವರ್ಷ ನಡೆಯುವ ಪರ್ಯಾಯ ಸಮಾರಂಭದಲ್ಲಿ ಕೃಷ್ಣ ಮಠದ ಅಧಿಕೃತ ಸ್ವಾಮಿಗಳ ನೇಮಕವು ಸಾಂಪ್ರದಾಯಿಕವಾಗಿ ನೆರವೇರುವುದು.

ಮಂಗಳೂರಿನಿಂದ ೧೨೦ ಕಿ.ಮೀ. ದೂರದಲ್ಲಿ ಪಶ್ಚಿಮ ಘಟ್ಟಗಳ ಹಸಿರು ಬನಗಳ ನಡುವೆ ಕೊಲ್ಲೂರಿನಲ್ಲಿ ಮೂಕಾಂಬಿಕೆ ನೆಲೆಸಿರುವವಳು. ಕರಾವಳಿ ಪ್ರದೇಶದ ಏಳು ಅತ್ಯಂತ ಪವಿತ್ರ ಸ್ಥಾನಗಳಲ್ಲಿ ಇದೂ ಒಂದು. ಮೂಕಾಂಬಿಕೆಯು ಆ ಭಾಗದ ಭಕ್ತ ಜನರ ಬದುಕಿನಲ್ಲಿ ಭಾವನಾತ್ಮಕವಾಗಿ ಶಕ್ತಿದೇವತೆಯಾಗಿ ಪರಿಗಣಿಸಲ್ಪಟ್ಟಿರುವವಳು. ಶಂಕರಾಚಾರ್ಯರು ಇಲ್ಲಿ ಕೆಲಕಾಲ ತಪಸ್ಸು ಮಾಡಿದ್ದರು.

ಮಂಗಳೂರಿನ ಪೂರ್ವಕ್ಕೆ ೭೫ ಕಿ.ಮೀ. ದೂರದಲ್ಲಿ ದಕ್ಷಿಣ ಕನ್ನಡ ಬೆಳ್ತಂಗಡಿ ತಾಲ್ಲೂಕಿಗೆ ಸೇರಿದ ಧರ್ಮಸ್ಥಳವಿದ್ದು ಇದು ಧರ್ಮಸಮನ್ವಯಕ್ಕೆ, ಸಾಂಸ್ಕೃತಿಕ ಸಹಜೀವನಕ್ಕೆ ಉದಾಹರಣೆಯಾಗಿದೆ. ಇಲ್ಲಿ ಅನೇಕ ಜಿನಬಸದಿಗಳಿದ್ದು ಇಲ್ಲಿನ ವಿಶೇಷ ಆಕರ್ಷಣೆ ೩೯' ಎತ್ತರದ ಬಾಹುಬಲಿಯ ಮೂರ್ತಿ. ಇಲ್ಲಿನ ಮಂಜುನಾಥ ದೇವಾಲಯವು ಪ್ರಮುಖ ಶಿವದೇವಾಲಯವಾಗಿದ್ದರೂ ಇದರ ಉಸ್ತುವಾರಿಯನ್ನು ಜೈನಧರ್ಮೀಯರಾದ ಹೆಗ್ಗಡೆಯವರು ನೋಡಿಕೊಳ್ಳುವರು. ಅವರ ದಾನಧರ್ಮಗಳು, ನ್ಯಾಯ ನಿರ್ಣಯ ವಿಧಾನ, ಸಾಮಾಜಿಕ ಸೇವಾಬದ್ಧತೆ ಬಹಳ ಪ್ರಸಿದ್ಧವಾಗಿವೆ. ಜಾತಿವ್ಯವಸ್ಥೆಯ ಸಂಕೋಲೆ ಕಳಚಿ ಇಲ್ಲಿ ಸರ್ವ ಧರ್ಮೀಯರಿಗೂ ಸಮಾನ ಪಂಕ್ತಿಯಲ್ಲಿ ಉಚಿತ ಊಟದ ವ್ಯವಸ್ಥೆಯಿದೆ. ಲಕ್ಷ ದೀಪೋತ್ಸವದ ಸಂದರ್ಭದಲ್ಲಿ ಒಂದು ಲಕ್ಷ ಕಿರುಹಣತೆಗಳು ರಾತ್ರಿಯ ವೇಳೆ ಬೆಳಗುವವು.

ಮುರುಡೇಶ್ವರವು ಮಂಗಳೂರು-ಕಾರವಾರ ಹೆದ್ದಾರಿಯಲ್ಲಿದೆ. ಪಶ್ಚಿಮ ಘಟ್ಟ ಹಾಗೂ ಅರೇಬಿಯಾ ಸಮುದ್ರದ ಸುಂದರ ಹಿನ್ನೆಲೆಯನ್ನು ಹೊಂದಿದ್ದು ಸಮುದ್ರ ದಂಡೆ ಇದರ ಪ್ರಮುಖ ಆಕರ್ಷಣೆ. ಸುಂದರವಾದ ಶಿವನ ವಿಗ್ರಹ ಹಾಗೂ ಶಿವದೇವಾಲಯವು ಭಕ್ತರ ಮನಸೆಳೆಯುವಂತಿದೆ. ದೇವಾಲಯವು ಬೆಟ್ಟದ ಮೇಲಿದ್ದು ಸಮುದ್ರದ ಭವ್ಯ ನೋಟಕ್ಕೆ ಸಹಕಾರಿಯಾಗಿದೆ.

ಬೆಂಗಳೂರಿನಿಂದ ೧೫೮ ಕಿ.ಮೀ. ದೂರದಲ್ಲಿ ಹಾಸನ ಜಿಲ್ಲೆಯಲ್ಲಿ ಶ್ರವಣ ಬೆಳಗೊಳವಿದ್ದು ಇಲ್ಲಿ ಇಡೀ ಏಷ್ಯಾದಲ್ಲೇ ಪ್ರಸಿದ್ಧವಾದ ೫೮' ಎತ್ತರದ ಬಾಹುಬಲಿಯ ಶಿಲಾವಿಗ್ರಹವಿದೆ. ಹನ್ನೆರಡು ವರ್ಷಗಳಿಗೊಮ್ಮೆ ಬಾಹುಬಲಿಗೆ ನಡೆಯುವ ಮಹಾ ಮಸ್ತಕಾಭಿಷೇಕ ಸಮಾರಂಭವು ಅತ್ಯಂತ ವೈಭವದಿಂದ, ಸಾಂಪ್ರದಾಯಿಕವಾಗಿ ಜರುಗುತ್ತಲಿದ್ದು ವಿಶ್ವದಾದ್ಯಂತ ಇರುವ ಬಾಹುಬಲಿಯ ಭಕ್ತಜನರು ಈ ಭವ್ಯ ದೃಶ್ಯವನ್ನು ನೋಡಿ ಧನ್ಯರಾಗಲು ಇಲ್ಲಿಗೆ ಬರುವರು.

ಮೂಡಬಿದರಿಯನ್ನು ದಕ್ಷಿಣದ ಜೈನ ಕಾಶಿಯೆಂದು ಕರೆಯುವರು. ಅಲ್ಲಿ ೧೮ ಜೈನಬಸದಿಗಳಿದ್ದು ಅವುಗಳಲ್ಲಿ ೧೫ನೇ ಶತಮಾನದ ಚಂದ್ರನಾಥ ಬಸದಿಯನ್ನು ಸಹಸ್ರ

ಕಂಬದ ಬಸದಿ ಎಂದು ಕರೆಯುವರು. ಈ ದೇವಸ್ಥಾನವು ಬೆಲೆಬಾಳುವ ಆಭರಣಗಳ ಸಂಗ್ರಹವನ್ನೂ, ಲೋಹದಿಂದ ನಿರ್ಮಿಸಿದ ಜೈನ ತೀರ್ಥಂಕರರ ಮೂರ್ತಿಗಳನ್ನೂ ಹೊಂದಿದೆ. ಪ್ರಮುಖ ದೇವಾಲಯದ ಪ್ರವೇಶ ದ್ವಾರಕ್ಕೆ ಸಮೀಪವಿರುವ ಜೈನಮಠದಲ್ಲಿ ಕ್ರಿ.ಶ. ೧೨, ೧೩ನೇ ಶತಮಾನಗಳ ತಾಡವೋಲೆ ಹಸ್ತಗಳಿವೆ.

ವೇಣೂರಿನಲ್ಲಿ ಎಂಟು ಜೈನಬಸದಿಗಳಿವೆ, ಮಹಾದೇವ ದೇವಾಲಯವೂ ಇದೆ. ೧೬೦೪ರಲ್ಲಿ ನಿರ್ಮಿಸಿದ ಬಾಹುಬಲಿಯ ಎತ್ತರದ ಭವ್ಯಮೂರ್ತಿಯಿದೆ.

ಕಾರ್ಕಳದಲ್ಲಿ ೪೨' ಅಡಿ ಎತ್ತರದ ಗೋಮಟೇಶ್ವರನ ಕರಿಕಲ್ಲಿನ ಮೂರ್ತಿಯು ಊರ ಹೊರಭಾಗದಲ್ಲಿದೆ. ಇಲ್ಲಿನ ಚತುರ್ಮುಖ ಬಸದಿಯು ೧೫೮೬ರಲ್ಲಿ ಪೂರ್ಣಗೊಂಡಿದ್ದು, ಇಲ್ಲಿ ಒಂದರೊಡನೊಂದು ಹೋಲುವ ನಾಲ್ಕು ಜೈನ ತೀರ್ಥಂಕರ ಮೂರ್ತಿಗಳು ನಾಲ್ಕು ಬೇರೆ ಬೇರೆ ದಿಕ್ಕುಗಳಿಗೆ ಮುಖಮಾಡಿವೆ.

ಶೃಂಗೇರಿಯ ಮೊದಲಿನ ಹೆಸರು ಋಷ್ಯಶೃಂಗ. ತುಂಗಭದ್ರಾ ನದಿಯ ದಡದಲ್ಲಿರುವ ಶೃಂಗೇರಿಯಲ್ಲಿ ಅದ್ವೈತ ಸಿದ್ಧಾಂತದ ಪ್ರತಿಪಾದಕ ಆದಿಶಂಕರರು ಒಂದು ಹಾವು ಕಪ್ಪೆಗೆ ಜಡಿಮಳೆಯಿಂದ ರಕ್ಷಣೆ ಕೊಟ್ಟಿದ್ದಾಗಿ ಹೇಳಲಾಗಿದೆ. ತುಂಗಭದ್ರೆಯ ದಡದಲ್ಲಿ ಆದಿಶಂಕರರ ಆಧ್ಯಾತ್ಮ ಕೇಂದ್ರವಿದೆ.

ಇಲ್ಲಿನ ವಿದ್ಯಾಶಂಕರ ದೇವಾಲಯವು ಚಿಕ್ಕಮಗಳೂರಿನ ಅಚ್ಚಹಸಿರು ಕಾಡಿನ ನಡುವೆ ಇದ್ದು ಶಿಲ್ಪಕಲೆಯ ದೃಷ್ಟಿಯಿಂದ ಮಹತ್ತರವಾದುದು. ಇಲ್ಲಿನ ೧೨ ಕೆತ್ತನೆಯ ಕಂಬಗಳು ಪ್ರತಿಯೊಂದೂ ರಾಶಿಮಂಡಲದ ಚಿಹ್ನೆಯನ್ನು ಪ್ರತಿನಿಧಿಸುವಂತೆ ಜೋಡಿಸಿದ್ದು ಸೂರ್ಯನ ಕಿರಣಗಳು ಯಶಸ್ವಿಯಾಗಿ ಪ್ರತಿಯೊಂದು ಕಂಬದ ಮೇಲೂ ಕ್ರಮವಾಗಿ ಸೌರಮಾನ ತಿಂಗಳುಗಳಲ್ಲಿ ಬೀಳುವಂತೆ ಮಾಡಿರುವುದು ಅತ್ಯಾಶ್ಚರ್ಯಕರವಾಗಿದೆ. ಎರಡನೆಯ ದೇವಾಲಯವು ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದ್ದು ಜ್ಞಾನದೇವತೆ ಶಾರದಾದೇವಿಗೆ ಅರ್ಪಿಸಲಾಗಿದೆ. ಇಲ್ಲಿ ತುಂಗಭದ್ರೆ ರಭಸದಿಂದ ಹರಿಯುತ್ತಿದ್ದು ಭಕ್ತಾದಿಗಳು ಅಲ್ಲಿನ ಮೀನುಗಳಿಗೆ ಉಣಿಸು ನೀಡುವುದು ಆನಂದದ ದೃಶ್ಯ.

ಚಿಕಮಗಳೂರಿನಿಂದ ೨೮ ಕಿ.ಮೀ., ಕೆಮ್ಮಣ್ಣುಗುಂಡಿಯಿಂದ ೨೪ ಕಿ.ಮೀ. ದೂರದಲ್ಲಿರುವ ಬಾಬಾಬುಡನ್‌ಗಿರಿಯು ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿದೆ. ಇಲ್ಲಿ ವಾಸವಿದ್ದ ಮುಸ್ಲಿಂ ಸಂತ ಬಾಬಾಬುಡನ್ ಎನ್ನುವವನು ಮೈಲನ್‌ಗೆ ಹೋಗಿಬರುವಾಗ ಏಳು ಕಾಫಿ ಸಸಿಗಳನ್ನು ಮೊದಲಿಗೆ ಈ ಭಾಗಕ್ಕೆ ತಂದನೆಂದು ಹೇಳುವರು. ಇಲ್ಲಿನ ಗುಹೆಯೊಂದರಲ್ಲಿ ದತ್ತಾತ್ರೇಯ ಸ್ವಾಮಿ ಹಾಗೂ

ಹಜರತ್ ದಾದಾ ಹಯಾತ್ ಮೀರ್ ಖಲಂದರ್ ವಾಸವಿದ್ದರೆಂದೂ ಹೇಳಲಾಗುವುದು. ಇಲ್ಲಿನ ಪೂಜೆಯು ಓರ್ವ ಫಕೀರನಿಂದ ಜರುಗುವುದು. ಇಲ್ಲಿನ ವಾರ್ಷಿಕ ಜಾತ್ರೆ ಅಥವಾ ಉರುಸ್‌ನಲ್ಲಿ ಹಿಂದೂ ಹಾಗೂ ಮುಸ್ಲಿಮರು ಭಾಗವಹಿಸುವರು.

ಸುಂದರ ಪ್ರಕೃತಿರಮ್ಯ ತಾಣವಾದ ಬ್ರಹ್ಮಗಿರಿ ಬೆಟ್ಟದಲ್ಲಿ ಕಾವೇರಿ ನದಿಯ ಮೂಲ ಸ್ರೋತವಿದ್ದು ಕಾವೇರಿ ಜಲ ಉದ್ಭವವಾಗುವ ಸ್ಥಳದ ಸಮೀಪದಲ್ಲಿ ತಲಕಾವೇರಿ ದೇವಾಲಯವಿದೆ. ಅಕ್ಟೋಬರ್ ತಿಂಗಳ ತುಲಾ ಸಂಕ್ರಮಣದ ದಿವಸ ಸಾವಿರಾರು ಮಂದಿ ಯಾತ್ರಾರ್ಥಿಗಳು ಆಶ್ಚರ್ಯಕರ ರೀತಿಯಲ್ಲಿ ಕಾವೇರಿ ಉದ್ಭವವಾಗುವುದನ್ನು ನೋಡಲು ಅಲ್ಲಿಗೆ ಬರುವರು. ನಿಶ್ಚಿತ ಕ್ಷಣದಲ್ಲಿ ಕಾವೇರಿಯು ಭೂಮಿಯ ಅಂತರಾಳದಿಂದ ಚಿಮ್ಮಿ ಬರುವುದು ಪ್ರಕೃತಿಯ ಒಂದು ಸೋಜಿಗ. ಕಾವೇರಿ ಉದ್ಭವಿಸುವ ಜಾಗದಿಂದ ಬೆಟ್ಟದ ತುದಿಗೆ ಹೋಗಲು ಮೆಟ್ಟಿಲುಗಳಿದ್ದು ಕಣಿವೆಯ ಮನೋಹರ ದೃಶ್ಯವನ್ನು ನೋಡಿ ಭವ್ಯಾನುಭೂತಿಯನ್ನು ಪಡೆಯಬಹುದು.

ಉತ್ತರ ಕನ್ನಡ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಯ ಗಡಿಭಾಗದಲ್ಲಿರುವ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಜೇನುಬಣ್ಣದ ಲಿಂಗವು ದೇವಾಲಯದ ಒಳಗೆ ಇದ್ದು, ಅದರಿಂದಾಗಿ ಮಧುಕೇಶ್ವರ ಎಂಬ ಹೆಸರು ಪಡೆಯಿತು. ಬನವಾಸಿಯು ವರದಾ ನದಿಯ ದಡದಲ್ಲಿದ್ದು, ಕರ್ನಾಟಕವನ್ನು ಮೊದಲು ಆಳಿದ ಅರಸುಮನೆತನ ಕದಂಬರಾಗಿದ್ದು, ರಾಜಧಾನಿಯಾಗಿ ಅದು ಇತಿಹಾಸದಲ್ಲಿ ಪ್ರಸಿದ್ಧಿ ಪಡೆದಿದೆ. ೧೨ನೇ ಶತಮಾನದ ಮಹಾನ್ ಜ್ಞಾನಿ ಅಲ್ಲಮಪ್ರಭುವಿನ ಜನ್ಮಸ್ಥಳವಿದು.

ಬೀದರ್ ಜಿಲ್ಲೆಯ ಬಸವ ಕಲ್ಯಾಣವು ಹಿಂದೆ ಕಲ್ಯಾಣಿ ಚಾಲುಕ್ಯರ ರಾಜಧಾನಿಯಾಗಿದ್ದಿತು. ೧೨ನೇ ಶತಮಾನದ ಬಸವಾದಿ ಶಿವಶರಣರ ಸಮಾಜೋಧಾರ್ಮಿಕ ಹೋರಾಟದ; ಜ್ಞಾನಾರ್ಜನೆಯ ಹಾಗೂ ಆಧ್ಯಾತ್ಮಿಕ ಸಾಧನೆಯ ಪ್ರಮುಖ ಕೇಂದ್ರವಾಗಿದ್ದಿತು.

ಬೀದರ್ ಒಂದು ಕಾಲಕ್ಕೆ ತೀವ್ರ ಬರಗಾಲಕ್ಕೆ ಒಳಗಾಗಿದ್ದಿತು. ಆ ಸಮಯದಲ್ಲಿ ಗುರುನಾನಕ್‌ರವರು ಅಲ್ಲಿ ತಂಗಿದ್ದರು. ಮುಸ್ಲಿಂ ಪೀರರು ಗುರುನಾನಕರಲ್ಲಿ "ದೇವರನ್ನು ಪ್ರಾರ್ಥಿಸಿ ನೀರು ದೊರೆಯುವಂತೆ ಮಾಡಿ" ಎಂದು ಪ್ರಾರ್ಥಿಸಿದರಂತೆ. ದೇವರು ನಾನಕರ ಪ್ರಾರ್ಥನೆಗೆ ಒಲಿದು ಬಂಡೆಯೊಂದರಿಂದ ನೀರು ಹರಿಯುವಂತೆ ಮಾಡಿದನು. ಗುರುದ್ವಾರದ ಬಳಿಯಿರುವ ಬಂಡೆಯೊಂದರಿಂದ ನೀರು ಇಂದಿಗೂ ಹರಿಯುತ್ತಿದ್ದು, ಇದು ಗುರುನಾನಕರ ಪ್ರಾರ್ಥನೆಯ ಫಲವೆಂದು ಭಕ್ತರು ನಂಬಿರುವರು. ಈ

ಪವಾಡದಿಂದಾಗಿ ಈ ಸ್ಥಳ ನಾನಕ್ ಝೀರಾ ಎಂದು ಹೆಸರು ಪಡೆಯಿತು. (ಝೀರಾ ಎಂದರೆ ನೀರಿನ ಚಿಲುಮೆ). ಈ ನೀರು ಔಷಧೀಯ ಗುಣವನ್ನು ಹೊಂದಿದ್ದು ದೇಶದ ನಾನಾಭಾಗಗಳಿಂದ ಸಹಸ್ರಾರು ಮಂದಿ ಸಿಖ್ಖರು ಈ ಪವಾಡ ಜರುಗಿದ ಸ್ಥಳಕ್ಕೆ ಭೇಟಿ ಕೊಡುವರು.

ಬಾದಾಮಿಗೆ ಹೋಗುವ ದಾರಿಯಲ್ಲಿ ಬನಶಂಕರಿ ದೇವಸ್ಥಾನ ಸಿಗುತ್ತದೆ. ಈ ದೇವಾಲಯವನ್ನು ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದ್ದು ಎಂಟು ಕೈಗಳ ಶಕ್ತಿದೇವತೆಯಾದ ಬನಶಂಕರಿಯು ಸಿಂಹದ ಮೇಲೆ ಕುಳಿತಿರುವಳು. ಬನಶಂಕರಿಯು ಪಾರ್ವತಿಯ ಅವತಾರವೆಂದು ಭಾವಿಸಲಾಗಿದ್ದು, ದೇವಾಂಗ ಮತಸ್ಥರು- ವಿಶೇಷವಾಗಿ ಈ ದೇವಿಯ ಭಕ್ತರು- ವರ್ಷದಲ್ಲಿ ಒಮ್ಮೆ ಇಲ್ಲಿ ನಡೆಯುವ ಜಾತ್ರೆಯಲ್ಲಿ ಸಾವಿರಾರು ಮಂದಿ ಭಾಗವಹಿಸುವರು.

ಕೂಡಲ ಸಂಗಮವು ಬಾಗಲಕೋಟ ಜಿಲ್ಲೆಯಲ್ಲಿದ್ದು ಕೃಷ್ಣ-ಮಲಪ್ರಭಾ ನದಿಗಳು ಒಂದುಗೂಡುವ ಪ್ರದೇಶವಾಗಿದೆ. ಚಾಲುಕ್ಯ ಶೈಲಿಯ ಇಲ್ಲಿನ ಸಂಗಮೇಶ್ವರ ದೇವಾಲಯವು ಯಾತ್ರಾರ್ಥಿಗಳ ಪ್ರಮುಖ ಕೇಂದ್ರವಾಗಿದೆ. ೧೨ನೇ ಶತಮಾನದ ಪ್ರಮುಖ ವಚನಕಾರ ಹಾಗೂ ಸಮಾಜ ಸುಧಾರಕ ಬಸವಣ್ಣನವರು ಇಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪಡೆದರು. ಕೂಡಲಸಂಗಮದಿಂದ ೩೦ ಕಿ.ಮೀ. ದೂರದಲ್ಲಿರುವ ಬಸವನ ಬಾಗೇವಾಡಿಯು ಬಸವಣ್ಣನವರು ತಮ್ಮ ತಂದೆ-ತಾಯಿಯರೊಂದಿಗೆ ವಾಸವಾಗಿದ್ದ ಸ್ಥಳವಾಗಿದೆ. ಇಂದಿಗೂ ಅಲ್ಲಿ ಬಸವಣ್ಣನವರ ಪೂರ್ವಜರ ಮನೆಯನ್ನು ನೋಡಬಹುದು. ಬಸವಣ್ಣನವರ ತಾಯಿಯ ಮನೆ ಇಂಗಳೇಶ್ವರದಲ್ಲಿ ಬಸವನ ಬಾಗೇವಾಡಿಯಿಂದ ಸು. ೮ ಕಿ.ಮೀ. ದೂರದಲ್ಲಿದೆ. ಇಲ್ಲಿ ಬಸವಣ್ಣನವರ ಜನನವಾಯಿತೆಂದು ಹೇಳಲಾಗಿದೆ.

ಬೆಳಗಾವಿ ಜಿಲ್ಲೆಯ ಸೌಂದತ್ತಿಯ ಗುಡ್ಡದ ಮೇಲೆ ರೇಣುಕಾದೇವಿಯ ದೇವಾಲಯವಿದೆ. ಇದನ್ನು ಯಲ್ಲಮ್ಮದೇವಿ ದೇವಾಲಯವೆಂದೂ ಕರೆಯಲಾಗುವುದು. ಈ ದೇವತೆಯ ಭಕ್ತಾದಿಗಳು ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶಗಳಲ್ಲಿ ಹರಡಿಹೋಗಿರುವರು. ಹಿಂದೆ ಭಕ್ತಾದಿಗಳು ತಮ್ಮ ಇಷ್ಟಾರ್ಥ ಪೂರೈಕೆಗಾಗಿ ಯಲ್ಲಮ್ಮದೇವಿಗೆ ತಮ್ಮ ಹೆಣ್ಣುಮಕ್ಕಳನ್ನು ಬಸವಿ ಬಿಡುವ ವ್ರತವನ್ನು ಹೊಂದಿದ್ದರು. ಸರಕಾರ ಇದನ್ನು ಈಗ ನಿಷೇಧಿಸಿದೆ. ಯಲ್ಲಮ್ಮನ ಜಾತ್ರೆಯು ಭರತ ಹುಣ್ಣಿಮೆಯ ದಿನ ಜರುಗುವುದು. ದೇವರಿಗೆ ಹರಕೆಯ ರೂಪದಲ್ಲಿ ಮಹಿಳೆಯರು ಬೆತ್ತಲೆ ಸೇವೆಯನ್ನು ಮಾಡುವ ಪದ್ಧತಿ ಆ ದಿನದಂದು ನೆರವೇರುತ್ತಿತ್ತು. ಇದನ್ನೂ ಸರಕಾರ ನಿಷೇಧಿಸಿದೆ.

ತುಮಕೂರಿನಿಂದ ೭ ಕಿ.ಮೀ. ದೂರದಲ್ಲಿರುವ ಸಿದ್ಧಗಂಗೆಯು ಇಂದು ಪೂಜ್ಯ ಡಾ. ಶಿವಕುಮಾರ ಮಹಾಸ್ವಾಮಿಗಳವರ ತಪೋನುಷ್ಠಾನದಿಂದಾಗಿ ಪ್ರಸಿದ್ಧಿಯನ್ನು ಪಡೆದಿದೆ. ಅವರನ್ನು ತ್ರಿವಿಧ ದಾಸೋಹಮೂರ್ತಿಗಳೆಂದು ಜನತೆ ಗೌರವಿಸಿದೆ. ಅಲ್ಲಿ ಮಠ ಪ್ರಾರಂಭವಾದಾಗಿನಿಂದ ಹಚ್ಚಿದ ಒಲೆಯ ಬೆಂಕಿ ಇಂದಿಗೂ ಆರಿಲ್ಲ. ಸಿದ್ಧಗಂಗೆ 'ದಾಸೋಹ'ಕ್ಕೆ ಪ್ರಸಿದ್ಧ. ಇಲ್ಲಿ ಓದಲೆಂದು ಬಂದ ಎಂಟುಸಾವಿರಕ್ಕೂ ಹೆಚ್ಚಿನ ಬಡಮಕ್ಕಳಿಗೆ ಅನ್ನ, ವಸತಿ ಹಾಗೂ ಜ್ಞಾನವನ್ನು ಉಚಿತವಾಗಿ ನೀಡಲಾಗುತ್ತಿದೆ. ಸಿದ್ಧಗಂಗೆಯ ಬೆಟ್ಟದ ಮೇಲೆ ಸಿದ್ಧಲಿಂಗೇಶ್ವರ ದೇವಾಲಯವಿದೆ.

ಶಿವಗಂಗೆಯ ಬೆಟ್ಟವು ಚತುರ್ಮುಖಗಳನ್ನು ಹೊಂದಿದೆ. (ಸಮುದ್ರದಿಂದ ಮೇಲೆ ೧೩೬೮ ಮೈಲು ಎತ್ತರದಲ್ಲಿದೆ.) ಬೆಟ್ಟವನ್ನು ಪೂರ್ವ ದಿಕ್ಕಿನಿಂದ ನೋಡಿದಂತೆ ನಂದಿಯಂತೆಯೂ, ಪಶ್ಚಿಮಕ್ಕೆ ನೋಡಿದರೆ ಗಣೇಶನಂತೆಯೂ, ದಕ್ಷಿಣಕ್ಕೆ ನೋಡಿದರೆ ಲಿಂಗದಂತೆಯೂ, ಉತ್ತರಕ್ಕೆ ನೋಡಿದರೆ ನಾಗಹಾವಿನಂತೆಯೂ ಕಾಣಬರುತ್ತದೆ. ಇಲ್ಲಿ ಗವಿಗಂಗಾಧರೇಶ್ವರ ಹಾಗೂ ಹೊನ್ನಾದೇವಿ ಎಂಬ ಎರಡು ಪ್ರಮುಖ ಗುಹಾದೇವಾಲಯಗಳಿವೆ. ಇವುಗಳ ನಡುವೆ ಪಾತಾಳಗಂಗ ಇದೆ. ಇದು ಉದ್ಭವ ಚಿಲುಮೆ.

ಹಸಿರುಗುಡ್ಡ ಹಾಗೂ ದುರ್ಗಮ ಕಾಡಿನ ನಡುವೆ ಇರುವ ದೇವರಾಯನದುರ್ಗದ ಬೆಟ್ಟದ ಮೇಲೆ ಯೋಗಾನರಸಿಂಹ ಹಾಗೂ ಭೋಗಾನರಸಿಂಹ ದೇವಾಲಯಗಳಿವೆ. ದೇವರಾಯನದುರ್ಗದ ಬೆಟ್ಟದ ಮೇಲೆ ಪವಿತ್ರ ತೀರ್ಥೋದ್ಭವ ಚಿಲುಮೆಯಿದೆ. ಇದನ್ನು ನಾಮದ ಚಿಲುಮೆ ಎಂದು ಕರೆಯುವರು. ಇದಕ್ಕೆ ಸಮೀಪವಿರುವ ಗೊರವನಹಳ್ಳಿಯ ಮಹಾಲಕ್ಷ್ಮಿ ದೇವಾಲಯ ಆಸ್ತಿಕ ಭಕ್ತರನ್ನು ನಿತ್ಯವೂ ಆಕರ್ಷಿಸುತ್ತಿದೆ.

ನಂಜನಗೂಡು ಮೈಸೂರಿನಿಂದ ೧೭ ಕಿ.ಮೀ. ದೂರದಲ್ಲಿದೆ. ಇದು ತಾಲ್ಲೂಕು ಕೇಂದ್ರ. ಇದೊಂದು ಪ್ರಮುಖ ಧಾರ್ಮಿಕ ಕ್ಷೇತ್ರ. ಕಪಿಲಾನದಿಯ ದಡದಲ್ಲಿದೆ. ಕರ್ನಾಟಕದಲ್ಲಿನ ಅತ್ಯಂತ ದೊಡ್ಡ ದೇವಾಲಯ ನಂಜುಂಡೇಶ್ವರ ದೇವಾಲಯ. ದ್ರಾವಿಡ ಶೈಲಿಯಲ್ಲಿ ರಚನೆಯಾಗಿರುವ ಈ ದೇವಾಲಯದಲ್ಲಿ ತಮಿಳುನಾಡಿನ ಅರವತ್ತು ಮೂರು ನಾಯನ್ಮಾರರ ಮೂರ್ತಿಗಳಿವೆ. ಟಿಪ್ಪುವಿನ ಆನೆಗೆ ಬಂದ ಕಾಯಿಲೆ ನಂಜುಂಡೇಶ್ವರನಿಗೆ ಹರಕೆ ಹೊತ್ತದ್ದರಿಂದ ನಿವಾರಣೆಯಾಯಿತು. ಆ ಕಾರಣಕ್ಕಾಗಿ ನಂಜುಂಡೇಶ್ವರನನ್ನು ಹಕೀಂ ನಂಜುಂಡ ಎಂದು ಕರೆಯುವರು. ಇದು ಶಿವದೇವಾಲಯವಾದರೂ ಇದರ ಪೂಜೆ ಮಾಡುವವರು ಬ್ರಾಹ್ಮಣರು. ನಂಜುಂಡೇಶ್ವರನ ಮಹಿಮೆ ಸುತ್ತಮುತ್ತ ಪ್ರಸಿದ್ಧವಿರುವುದರಿಂದ ಎಲ್ಲ ಜಾತ ಮತದವರೂ ಈ ದೇವರಿಗೆ ಭಕ್ತಿಯಿಂದ ನಡೆದುಕೊಳ್ಳುವರು. ಭಕ್ತಾದಿಗಳು ತಮ್ಮ ಕಾಯಿಲೆ / ಕಷ್ಟ ಪರಿಹಾರಕ್ಕಾಗಿ ಹರಕೆ.

ಹೊರುವರು. ಹರಕೆ ಪೂರೈಸಲು ಹನ್ನೆರಡು ವರ್ಷಗಳ ಗಡುವು ಇದೆ. ಹೀಗಾಗಿ ಭಕ್ತರು ತಾವು ಹೊತ್ತ ಹರಕೆಯನ್ನು ಬಹಳ ಶ್ರದ್ಧೆಯಿಂದ ಪೂರೈಸುವರು.

೧೨ನೇ ಶತಮಾನದಲ್ಲಿ ನಿರ್ಮಿಸಲಾದ ಚೆಲುವರಾಯಸ್ವಾಮಿ ದೇವಾಲಯವು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿದೆ. ದೇವಾಲಯ ಗೋಪುರವು ಗುಲಾಬಿ ಬಣ್ಣವನ್ನು ಹೊಂದಿದ್ದು, ಹುಲಿಮುಖಗಳು ನಾಲ್ಕೂ ದಿಕ್ಕುಗಳಿಗೆ ಮುಖಮಾಡಿವೆ. ಮಾರ್ಚ್-ಏಪ್ರಿಲ್ ತಿಂಗಳ ನಡುವೆ ಇಲ್ಲಿ ಪ್ರಸಿದ್ಧವಾದ ವೈರಮುಡಿ ಉತ್ಸವ ಜರುಗುತ್ತದೆ. ಆಗ ದೇವರಿಗೆ ಅಮೂಲ್ಯವಾದ ಆಭರಣಗಳನ್ನು ಧರಿಸುವರು. ಈ ಆಭರಣಗಳು ಮೈಸೂರು ಮಹಾರಾಜರಿಗೆ ಸೇರಿದ್ದಾಗಿದೆ.

ಕಾವೇರಿ ದಡದಲ್ಲಿರುವ ತಲಕಾಡು ಮೈಸೂರು ಜಿಲ್ಲೆ ನರಸೀಪುರ ತಾಲ್ಲೂಕಿಗೆ ಸೇರಿದೆ. ಇಲ್ಲಿ ಪ್ರಧಾನವಾದದ್ದು ಕೀರ್ತಿನಾರಾಯಣ ದೇವಾಲಯ. ಇದನ್ನು ವೈದ್ಯೇಶ್ವರ ದೇವಾಲಯ ಎಂದೂ ಕರೆಯುವರು. ಇಲ್ಲಿ ಅನೇಕ ದೇವಾಲಯಗಳಿದ್ದು ಅವು ಮರಳಿನಲ್ಲಿ ಮುಚ್ಚಿಹೋಗಿವೆ. ಮೈಸೂರಿನ ಚಾಮುಂಡಿಯು ಕೆರಳಿ 'ತಲಕಾಡು ಮರಳಾಗಲಿ, ಮೈಸೂರರಸರಿಗೆ ಸಂತಾನವಾಗದಿರಲಿ' ಎಂದು ಶಾಪ ಕೊಟ್ಟಿದ್ದರಿಂದ ತಲಕಾಡು ಮರಳಿನಿಂದ ಆವೃತವಾಯಿತು ಎಂದು ಹೇಳುವರು. ೧೨ನೇ ವರ್ಷಗಳಿಗೊಮ್ಮೆ ಮರಳರಾಶಿಯನ್ನು ಅಗೆದು ದೇವಾಲಯಗಳು ಕಾಣುವಂತೆ ಮಾಡಲಾಗುವುದು. ಆಗ ಪಂಚಲಿಂಗಗಳ ದರ್ಶನಕ್ಕಾಗಿ ರಾಜ್ಯದ ನಾನಾಭಾಗಗಳಿಂದ ಭಕ್ತರು ಬರುವರು.

ರೇವಣಸಿದ್ಧೇಶ್ವರ ಬೆಟ್ಟವು ಬೆಂಗಳೂರಿನಿಂದ ಸು. ೭೫ ಕಿ.ಮೀ. ದೂರದಲ್ಲಿದ್ದು ರಾಮನಗರ ತಾಲ್ಲೂಕಿಗೆ ಸೇರಿದೆ. ಇದರ ಸುತ್ತಮುತ್ತ ಬಂಡೆಗಳಿಂದಾವೃತವಾದ ಬೆಟ್ಟಗಳಿವೆ. ಕೈಲಾಂಚವೆಂಬುದು ಸಣ್ಣ ಹೋಬಳಿ, ರಾಮನಗರ-ಕನಕಪುರ ರಸ್ತೆಯಲ್ಲಿದೆ. ಅದರ ಬಳಿ ಅವ್ವೇರಹಳ್ಳಿ ಒಂದು ಪುಟ್ಟ ಗ್ರಾಮ. ರೇವಣಸಿದ್ಧೇಶ್ವರ ಬೆಟ್ಟದ ತಪ್ಪಲಿಗೆ ಇಲ್ಲಿಂದ ೩ ಕಿ.ಮೀ. ದೂರ. ಸಮುದ್ರಮಟ್ಟದಿಂದ ಮೇಲೆ ೩೩೦೦ ಅಡಿ ಎತ್ತರದಲ್ಲಿ ಈ ಗ್ರಾನೈಟ್ ಕಲ್ಲಿನ ಬೆಟ್ಟವಿದೆ. ಬೆಟ್ಟದ ತಪ್ಪಲಿನ ರಥಬೀದಿಯಲ್ಲಿ ರೇಣುಕಾಂಬ (ರೇವಮ್ಮ) ದೇವಾಲಯವಿದೆ. ಈ ಬೀದಿಯ ಕೊನೆಯಲ್ಲಿ ಬೆಟ್ಟವನ್ನು ಹತ್ತಲು ಮೆಟ್ಟಿಲುಗಳಿವೆ. ಈ ಬೆಟ್ಟದಲ್ಲಿ ಬೆಳೆಯುವ ಮರಗಳನ್ನು ಚನ್ನಪಟ್ಟಣದ ಗೊಂಬೆಗಳನ್ನು ಮಾಡಲು ಬಳಸುವರು. ಬೆಟ್ಟವನ್ನು ಹತ್ತುವಾಗ ಸುತ್ತಣ ಮನೋಹರ ದೃಶ್ಯವನ್ನು ಸವಿಯಬಹುದು. ಬೆಟ್ಟದ ಮೇಲೆ ಸಿದ್ಧರಾಮೇಶ್ವರ ಹಾಗೂ ರುದ್ರಮುನೀಶ್ವರ ಲಿಂಗಗಳಿವೆ. ರೇವಣಸಿದ್ಧೇಶ್ವರ ಲಿಂಗವು ಗುಲಾಬಿ ಬಣ್ಣದಿಂದ ಕೂಡಿದ್ದು ಪಾದರಸ ಹಾಗೂ ಹಲವು ಗಿಡಮೂಲಿಕೆಗಳ ರಸದಿಂದ ಸಿದ್ಧಗೊಂಡಿದೆ. ವೈಶಾಖದ

ಪೂರ್ಣಚಂದ್ರನ ದಿವಸ ಜಾತ್ರೆ ನಡೆಯುತ್ತದೆ. ಐದು ದಿವಸಗಳ ಜಾತ್ರೆಯಲ್ಲಿ ರಥೋತ್ಸವ ಹಾಗೂ ಕೊಂಡೋತ್ಸವ (ಬೆಂಕಿಯಲ್ಲಿ ನಡೆಯುವುದು) ಜನರ ವಿಶೇಷ ಗಮನ ಸೆಳೆಯುತ್ತವೆ.

ಕರ್ನಾಟಕದಲ್ಲಿ ಪ್ರವಾಸೋದ್ಯಮ ಸಾಕಷ್ಟು ಬೆಳೆಯದಿರುವುದಕ್ಕೆ ಅನೇಕ ಕಾರಣಗಳಿವೆ. ರಾಜ್ಯ ಪ್ರವಾಸೋದ್ಯಮ ಇಲಾಖೆ ಹಾಗೂ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಗಳು ರಾಜ್ಯದ ಪ್ರಮುಖ ಪ್ರವಾಸಿ ಕೇಂದ್ರಗಳಿಗಷ್ಟೇ ತನ್ನ ಕಾರ್ಯಾಚರಣೆಯನ್ನು ಸೀಮಿತಗೊಳಿಸಿಕೊಂಡಿವೆ. ದೇಸೀ ಪ್ರವಾಸಿಗರಿಗಿಂತ ವಿದೇಶೀ ಪ್ರವಾಸಿಗರ ಕಡೆಗೇ ಹೆಚ್ಚಿನ ಗಮನ ಕೇಂದ್ರೀಕರಿಸಿರುವುದರಿಂದ ಕಾರ್ಯವ್ಯಾಪ್ತಿ ಸೀಮಿತವಾಗುತ್ತಿದೆ. ಪ್ರವಾಸೋದ್ಯಮ ಇಲಾಖೆಯ ಯೋಜನೆಗಳನ್ನು ಪರಿಶೀಲಿಸಿದಾಗ, ಯಾತ್ರಿಕರಿಗೆ ಮೂಲಭೂತ ಅಗತ್ಯಗಳನ್ನು ಕಲ್ಪಿಸುವ ಒಳ್ಳೆಯ ಧ್ಯೇಯ ಅದರ ಮುಂದಿರುವಂತಿದೆ; ಹೊಸ ಹೊಸ ಪ್ರವಾಸಿ ತಾಣಗಳನ್ನು ಗುರುತಿಸಿ ಅವುಗಳನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲೂ ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡು ಕಾರ್ಯನಿರ್ವಹಿಸುತ್ತಿದೆ. ದಸರಾ ಉತ್ಸವ, ಹಂಪೆ ಉತ್ಸವ ಹಾಗೂ ಕರಾವಳಿ ಉತ್ಸವ, ಬಿಜಾಪುರ ಸಂಗೀತೋತ್ಸವ, ಪಟ್ಟದಕಲ್ ನೃತ್ಯೋತ್ಸವಗಳನ್ನು ಹಮ್ಮಿಕೊಳ್ಳುವ ಮೂಲಕ ಆಯಾ ಪ್ರದೇಶಗಳ ಜನರಿಗೆ ತಿಳುವಳಿಕೆ ಹಾಗೂ ಮನರಂಜನೆ ನೀಡುವ ಉದ್ದೇಶವಿದೆ. ಪ್ರವಾಸೀ ಕೇಂದ್ರಗಳ ಬಗೆಗೆ ವೀಡಿಯೋ ಚಿತ್ರನಿರ್ಮಾಣ ಮಾಡಿ ಪ್ರವಾಸೀ ಕೇಂದ್ರಗಳ ಸಾಂಸ್ಕೃತಿಕ ಕೊಡುಗೆಯನ್ನು ತಿಳಿಯಪಡಿಸುವ ಬಹಳ ಮಹತ್ವದ ಕಾರ್ಯ ನಿರ್ವಹಿಸಿದೆ.

ಆಗುಂಬೆಯು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಒಂದು ಪುಟ್ಟ ಹಳ್ಳಿ. ಇದರ ಒಟ್ಟು ಜನಸಂಖ್ಯೆ ಸು. ೧೦೦೦. ಇದು ಶಿವಮೊಗ್ಗದಿಂದ ೯೦ ಕಿ.ಮೀ. ದೂರದಲ್ಲಿದೆ. ಇದು ಪಶ್ಚಿಮ ಘಟ್ಟಗಳ ತುತ್ತತುದಿಯಲ್ಲಿದೆ. ದೂರದ ಅರೇಬಿಯನ್ ಸಮುದ್ರದಲ್ಲಿ ಸೂರ್ಯ ಮುಳುಗುವುದು ನೋಡುವವರನ್ನು ಸೆರೆಹಿಡಿಯುವ ದೃಶ್ಯ. ಈ ಸೂರ್ಯಾಸ್ತದ ಮನೋಹರ ದೃಶ್ಯ ನಿತ್ಯವೂ ಸಾವಿರಾರು ಪ್ರವಾಸಿಗರ ಆಕರ್ಷಣೆಯಾಗಿದೆ.

ದೇಶದ ಅತಿ ಹೆಚ್ಚಿನ ಮಳೆ ಬೀಳುವ ಪ್ರದೇಶಗಳಲ್ಲಿ ಕರ್ನಾಟಕದ ಆಗುಂಬೆಯೂ ಒಂದು. ಇಲ್ಲಿ ಬೀಳುವ ಮಳೆಯೇ ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯ ಕೃಷಿ ಮತ್ತು ಕುಡಿವ ನೀರಿನ ಸೊತ್ತಾಗಿದೆ. ಅಪರೂಪದ ವನ್ಯ ಪ್ರಾಣಿ-ಪಕ್ಷಿಗಳು ಇಲ್ಲಿವೆ. ಪ್ರಪಂಚದಲ್ಲಿಯೇ ವಿಶಿಷ್ಟವಾದ ಔಷದೋಪಯುಕ್ತ ಗಿಡಮೂಲಿಕೆಗಳು, ಮರಮಟ್ಟುಗಳು ಇವೆ. ಈ ಹಿನ್ನೆಲೆಯಲ್ಲಿ ಆಗುಂಬೆಯ ದಟ್ಟ ಅರಣ್ಯ ಪ್ರದೇಶವನ್ನು 'ರಾಷ್ಟ್ರೀಯ ರಕ್ಷಿತ ಉದ್ಯಾನ'ವೆಂದು ಘೋಷಿಸಿ ಸಂರಕ್ಷಿಸುವ ಅಗತ್ಯವಿದೆ. ಚಾರಣರಿಗೆ ಇದು ಸಾಹಸಮಯ

ಸ್ಥಳವಾಗಿದ್ದು ನಿಸರ್ಗ ಅಧ್ಯಯನಕ್ಕೂ ಅವಶ್ಯಕ ಜಾಗವಾಗಿದೆ. ಆಗುಂಬೆಯ ಪರಿಸರ ರಕ್ಷಣೆಯ ದೃಷ್ಟಿಯಿಂದ ಅದರ ದಟ್ಟ ಅರಣ್ಯ ಪ್ರದೇಶದಲ್ಲಿ ಕಾಂಕ್ರೀಟ್ ಕಟ್ಟಡ ನಿರ್ಮಾಣ ಇತ್ಯಾದಿ ಕಾರ್ಯಗಳು ಆಗಕೂಡದು. ಖಾಸಗಿ ಪ್ರವಾಸಿ ಮಂದಿರ ನಿರ್ಮಾಣಕ್ಕೆ ಇಲ್ಲಿ ಅನುಮತಿ ಕೊಟ್ಟರೆ ಅತಿಸಂಚಾರ, ಕಾಡುಗಳ್ಳತನ, ಹವ್ಯಾಸಕ್ಕಾಗಿ ಶಿಖಾರಿ, ಪಕ್ಷಿ-ಪ್ರಾಣಿಗಳನ್ನು ಹಿಂಸಿಸುವುದು ಮುಂತಾದ ತೊಂದರೆಗಳನ್ನೆಲ್ಲಾ ಎದುರಿಸಬೇಕಾಗಿ ಬರುತ್ತದೆ.

ದೇಶದ ನಾನಾ ಕಡೆಯಿಂದ ಪ್ರವಾಸಿಗಳು ಆಗುಂಬೆಗೆ ಬರುವರು, ನವಂಬರ್-ಫೆಬ್ರವರಿ ತಿಂಗಳ ನಡುವಿನ ಋತುಮಾನದಲ್ಲಿ ಸೂರ್ಯಾಸ್ತದ ಭವ್ಯದೃಶ್ಯವನ್ನು ಕಣ್ಣಾರೆ ನೋಡಿ ಆನಂದಿಸುವರು; ಆ ಸಂಜೆಯೇ ಹಿಂತಿರುಗುವರು. ಪ್ರವಾಸಿಗರು ತಮ್ಮ ಸ್ವಂತ ವಾಹನಗಳಲ್ಲಿ ಮುಂಜಾನೆಯೇ ಬಂದು ಬರ್ಕಾನಾ, ಜೋಗಿಗುಂಡಿ, ಒನಕೆ ಒಟ್ಟೆ ಹಾಗೂ ಇತರ ಸ್ಥಳಗಳನ್ನು ಸಂದರ್ಶಿಸುವರು; ಶಂಕರ್‌ನಾಗ್‌ರವರ ಮಾಲ್ಗುಡಿಯ ಹಳ್ಳಿಯಲ್ಲಿ ಸುತ್ತಾಡುವರು; ಆಗುಂಬೆಯ ಸೂರ್ಯಾಸ್ತವನ್ನು ನೋಡಿಯಾದ ಮೇಲೆ ವಾಪಸಾಗುವರು. ಪಿ.ಡಬ್ಲ್ಯು.ಡಿ. ಇಲಾಖೆಯ ಉಸ್ತುವಾರಿಯಲ್ಲಿರುವ ಇನ್ಸ್‌ಪೆಕ್ಶನ್ ಬಂಗಲೆಯಲ್ಲಿ ಕೇವಲ ಬೆರಳೆಣಿಕೆಯ ಮಂದಿ ಮಾತ್ರ ತಂಗುವರು. ಇಲ್ಲಿ ಕುಡಿಯುವ ನೀರೂ ದುಬಾರಿ.

ಇನ್ನಿತರೆ ಪ್ರವಾಸಿ ಕೇಂದ್ರಗಳಿಗಿಂತ ಭಿನ್ನವಾದ ಹಾಗೂ ವಿಚಿತ್ರವಾದ ಸಂಸ್ಕೃತಿಯನ್ನು ಆಗುಂಬೆ ಹೊಂದಿದೆ. ಹಲವು ದಶಕಗಳಿಂದ ಇದೊಂದು ಪ್ರಮುಖ ಪ್ರವಾಸಿ ಕೇಂದ್ರವಾಗಿದ್ದರೂ ಈ ಹಳ್ಳಿ ಪ್ರವಾಸಿ ಕೇಂದ್ರವೊಂದರ ಮೌಲ್ಯವನ್ನು ಪಡೆದುಕೊಂಡಿಲ್ಲ. ಇದು ಒಂದು ಒಳ್ಳೆಯ ಹೋಟೆಲ್ ಅಥವಾ ಲಾಡ್ಜ್‌ನ್ನು ಸಹಾ ಹೊಂದಿಲ್ಲದಿರುವುದಕ್ಕೆ ಮುಖ್ಯ ಕಾರಣ ಪ್ರವಾಸಿಗಳು ಈ ಪ್ರವಾಸಿ ತಾಣದಲ್ಲಿ ನಿಲ್ಲದೆ ಅದನ್ನು ನೋಡಿ ಹಿಂತಿರುಗಿ ಹೋಗುತ್ತಿರುವುದು. ಇಲ್ಲಿ ರೆಸಾರ್ಟ್ ಸಂಸ್ಕೃತಿ ತಲೆಹಾಕಬಾರದೆನ್ನುವುದು ಇಲ್ಲಿನವರ ವಾದ. ಅದು ತಲೆ ಹಾಕುತ್ತಿರುವುದು ಸ್ಥಳೀಯರ ಭಯಕ್ಕೆ ಕಾರಣವಾಗಿದೆ. ತಮ್ಮ ಸಂಸ್ಕೃತಿ ಹಾಗೂ ಪರಂಪರೆಗೆ ಇದು ಮಾರಕವಾಗಿದೆಯೆಂಬ ಭಾವನೆ ಅವರದು. ಆಗುಂಬೆಯ ಪರಿಸ್ಥಿತಿ ಕೇರಳದ ಕೋವಲಂ ಬೀಚ್ ಜೊತೆ ತುಲನೆಮಾಡುವಂತಿದೆ. ಅದನ್ನು ಹಿಪ್ಪಿಗಳು ಕಂಡುಹಿಡಿಯುವ ಪೂರ್ವದಲ್ಲಿ ಅದೊಂದು ಸಣ್ಣ ಹಳ್ಳಿಯಾಗಿದ್ದಿತು. ಈಗ ಕೋವಲಮ್ ಬೀಚ್ ರೆಸಾರ್ಟ್ ಆಗಿ ಪರಿವರ್ತಿತವಾಗಿ ಎಲ್ಲ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಆಗರವಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿಯ ಹೆಸರಿನಲ್ಲಿ ಕರ್ನಾಟಕದ ಆಗುಂಬೆಯು ಬಲೆಗೆ ಬಿದ್ದ ಮೃಗದ ರೀತಿಯಲ್ಲಿ ಅಪವಾದಕ್ಕೆ ಗುರಿಯಾಗಬಹುದು. ಕಾಲಾಂತರದಲ್ಲಿ ಮೆಲ್ಲಮೆಲ್ಲನೆ ಅದು ಕರ್ನಾಟಕದ ಕೋವಲಮ್ ಆಗಬಹುದೆನ್ನುವ ಆತಂಕ ಎಲ್ಲರದು.

ಕರ್ನಾಟಕದಲ್ಲಿ ಅಸಂಖ್ಯ ಪ್ರವಾಸೀ ತಾಣಗಳಿವೆ. ಅವುಗಳಿಂದ ಸರ್ಕಾರದ ಬೊಕ್ಕಸ ತುಂಬಿಕೊಳ್ಳುವ ಸುವರ್ಣಾವಕಾಶಗಳಿವೆ ಎಂಬುದು ಈಗ ಸರ್ಕಾರಕ್ಕೆ ಮನವರಿಕೆಯಾಗಿದೆ. ಈ ಪ್ರವಾಸಿ ತಾಣಗಳಿಗೆ ತಲುಪಲು ಯೋಗ್ಯವಾದ ರಸ್ತೆಗಳಿಲ್ಲ; ವಾಹನ ಸೌಕರ್ಯಗಳಿಲ್ಲ; ತಂಗಲು ಸರಿಯಾದ ವ್ಯವಸ್ಥೆಯಿಲ್ಲ; ಕುಡಿಯುವ ನೀರಿನ ಸೌಲಭ್ಯವೂ ಇಲ್ಲ; ಊಟ ತಿಂಡಿಗಳಿಗೆ ಸರಿಯಾದ ಅನುಕೂಲಗಳಿಲ್ಲ; ತರಬೇತಿ ಪಡೆದ ಸುಸಂಸ್ಕೃತ ಮಾರ್ಗದರ್ಶಿಗಳಿಲ್ಲ; ಪ್ರವಾಸೀ ತಾಣಗಳ ಬಗೆಗೆ ಸೂಕ್ತ ತಿಳುವಳಿಕೆ ನೀಡಲು ವ್ಯವಸ್ಥಿತವಾಗಿ ಪ್ರಚಾರ ಹಾಗೂ ಪ್ರಸಾರ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿಲ್ಲ. ಈ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದೆ ಕರ್ನಾಟಕದಲ್ಲಿ ಪ್ರವಾಸ ಒಂದು ಪ್ರಬಲವಾದ ಉದ್ಯಮವಾಗುವುದು ಸಾಧ್ಯವಿಲ್ಲ. ಪ್ರವಾಸೋದ್ಯಮಕ್ಕೂ ಅಭಿವೃದ್ಧಿಗೂ ನಿಕಟ ಸಂಬಂಧವಿದೆ. ಪ್ರವಾಸೋದ್ಯಮವು ರಾಜ್ಯದ ಬೊಕ್ಕಸವನ್ನು ತುಂಬುವ ಮುಖ್ಯ ಬಾಬುಗಳಲ್ಲಿ ಒಂದೆಂಬುದು ಸರಕಾರಕ್ಕೆ ಸ್ಪಷ್ಟವಾದ ಮೇಲೆ ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ ನೀಡಬೇಕು; ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಅದು ಕೇವಲ ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ, ಖಾಸಗಿ ಸಹಭಾಗಿತ್ವ ಸರ್ಕಾರದ ಆರ್ಥಿಕ ಮುಗ್ಗಟ್ಟಿನ ಹಿನ್ನೆಲೆಯಲ್ಲಿ ಈಗ ಅನಿವಾರ್ಯವಾಗಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಖಾಸಗಿ ಮತ್ತು ಸಾರ್ವಜನಿಕರ ಸಹಭಾಗಿತ್ವಕ್ಕೆ ಪ್ರೋತ್ಸಾಹ ನೀಡಲು ರಾಜ್ಯ ಸರಕಾರ ೨೦೦೨ರಲ್ಲಿ 'ಕನೆಕ್ಟ್-೨೦೦೨' ಮತ್ತು ೨೦೦೩ ರಲ್ಲಿ 'ಕನೆಕ್ಟ್-೨೦೦೩' ಎಂಬ ಸಮ್ಮೇಳನ ನಡೆಸಿತ್ತು.

ಭಾರತದ ಪ್ರವಾಸಿ ತಾಣಗಳಲ್ಲಿ ಕರ್ನಾಟಕದ ಸ್ಥಾನ ಮೊದಲಿನದಿರಬೇಕೆಂಬುದು ಕರ್ನಾಟಕ ಸರಕಾರದ ಮಹದಾಕಾಂಕ್ಷೆ. ಎರಡು ವರ್ಷಗಳ ಹಿಂದೆ ಸರಕಾರ ಪ್ರವಾಸಿ ಆಕರ್ಷಣೆಗಾಗಿ 'ಸ್ಫೂರ್ತಿಯ ರಂಗಭೂಮಿ' (Theatre of inspiration) ಎಂಬ ಸ್ಲೋಗನ್ನನ್ನು ಚಾಲ್ತಿಗೆ ತಂದಿತು. ಆದರೆ, ಅದು ಟುಸ್ಸೆಂದಿತು. ಈಗ ಪ್ರವಾಸೋದ್ಯಮ ಇಲಾಖೆ 'ಒಂದು ರಾಜ್ಯ ಹಲವು ಪ್ರಪಂಚಗಳು' ಎಂಬ ಘೋಷಣಾ ವಾಕ್ಯ ಹೊರಡಿಸಿ ಕರ್ನಾಟಕ ಪ್ರವಾಸೋದ್ಯಮಕ್ಕೆ ಹೊಸ ಆಯಾಮ ನೀಡಲು ಹೊರಟಿದೆ. ಇದರೊಂದಿಗೆ ಹೊಸ ಪ್ರವಾಸೀ ವಲಯಗಳನ್ನು ವ್ಯವಸ್ಥೆಗೊಳಿಸುವುದು, ಖಾಸಗಿ ಸಹಭಾಗಿತ್ವ ಹೊಂದುವವರಿಗೆ ಕೆಲವು ವಿಶೇಷ ಸವಲತ್ತುಗಳನ್ನು ಒದಗಿಸುವುದು, ಹೊಸ ಪ್ರವಾಸಿ ಯೋಜನೆಗಳನ್ನು ನಿಯೋಜಿಸುವುದು -ಹೀಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ರಕ್ತಸಂಚಾರವಾಗಲು ಪ್ರವಾಸೋದ್ಯಮ ಇಲಾಖೆ ಶ್ರಮಿಸುತ್ತಿದೆ.

ಪ್ರವಾಸೋದ್ಯಮ ಇಲಾಖೆಯು Southern Circuit, Malnad Circuit, Coastal Circuit, Bijapur Circuit, Belgaum Circuit, Mercara Circuit, Maindan Cirtcuit -ಎಂದು ಏಳು ಪ್ರವಾಸಿ ವಲಯಗಳನ್ನು ಗುರುತಿಸಿ, ಈ ವಲಯಗಳಲ್ಲಿನ ಪ್ರಮುಖ ಪ್ರವಾಸಿ ತಾಣಗಳನ್ನು ಪ್ರತ್ಯೇಕ ಫೋಲ್ಡರ್‌ಗಳ ಮೂಲಕ

ಇಂಗ್ಲೀಷ್ ವಿವರಣೆಯೊಂದಿಗೆ ಪ್ರಕಟಿಸಿದೆ. ಈ ಆಕರ್ಷಕ ಫೋಲ್ಡರ್‌ಗಳಲ್ಲಿ ಪ್ರವಾಸೀ ವಲಯಗಳ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುವ ಮಾರ್ಗಸೂಚಿ ಹಾಗೂ ತಂಗಣೆಯ ಸ್ಥಳಗಳ ವಿವರಗಳನ್ನು ಕೊಡಲಾಗಿದೆ. ಇವು ವಿದೇಶೀ ಪ್ರವಾಸಿಗಳಿಗಾಗಿಯೇ ಸಿದ್ಧಪಡಿಸಲಾದ ಫೋಲ್ಡರ್‌ಗಳು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಈಗಾಗಲೇ ನೆಲೆ ಪಡೆದುಕೊಂಡಿರುವ ಪ್ರವಾಸಿ ತಾಣಗಳ ಚಟುವಟಿಕೆ ವಿಸ್ತರಿಸಲು ಯೋಚಿಸಲಾಗಿದೆ. ಉದಾಹರಣೆಗೆ ಟ್ರೆಕ್ಕಿಂಗ್, ಬಾದಾಮಿಯಲ್ಲಿ ಬೆಟ್ಟ ಹತ್ತುವುದು ಇತ್ಯಾದಿ. ಪ್ರವಾಸಿ ತಾಣಗಳನ್ನು ABC ವೃತ್ತಗಳಾಗಿ ವರ್ಗೀಕರಿಸಲಾಗುವುದು. ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್‌ಗಳು 'ಎ' ವೃತ್ತದಲ್ಲಿ ಮಾತ್ರ ವ್ಯವಹರಿಸುತ್ತವೆ. 'ಬಿ' ವೃತ್ತದಲ್ಲಿ ಮೂಲಭೂತ ಸೌಲಭ್ಯ ದೊರಕಿಸಿಕೊಡಲಾಗುವುದು. 'ಸಿ' ವೃತ್ತದಲ್ಲಿ ಹೊಸ ಪ್ರವಾಸಿ ತಾಣಗಳ ಭೂಮಿಯನ್ನು ಖಾಸಗಿಯವರು ಖರೀದಿಸಿ ಅದನ್ನು ಅಭಿವೃದ್ಧಿಪಡಿಸಲು ಖಾಸಗಿ ವಲಯದವರಿಗೆ ನೀಡಲಾಗುವುದು.

೨೦ ನವೆಂಬರ್ ೨೦೦೫ರಲ್ಲಿ ರಾಷ್ಟ್ರಪತಿ ಅಬ್ದುಲ್ ಕಲಾಂ ಸುವರ್ಣ ಕರ್ನಾಟಕಕ್ಕೆ ೧೧ ಸೂತ್ರಗಳನ್ನು ತೆರೆದಿಟ್ಟರು. ಅವುಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯೂ ಒಂದು. ಅವರು ಅಭಿಪ್ರಾಯಪಡುವಂತೆ "ಅತ್ಯಾಧುನಿಕ ಪ್ರವಾಸಿ ತಾಣಗಳನ್ನು ಹೊಂದಿರುವ ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಮಗ್ರ ಕಾರ್ಯಯೋಜನೆ ಜಾರಿಗೆ ತಂದರೆ ೨೦೦೫ರೊಳಗೆ ೧೮೦ ದಶಲಕ್ಷ ವಿದೇಶೀ ವಿನಿಮಯ ಗಳಿಸಲು ಸಾಧ್ಯ. ಜೊತೆಗೆ ಸ್ಥಳೀಯರಿಗೆ ಅಪಾರ ಉದ್ಯೋಗಾವಕಾಶ ನಿರ್ಮಾಣ ಮಾಡಬಹುದು.

ಪ್ರವಾಸಿಗರು ರಾಜ್ಯದ ಎಲ್ಲಾ ಭಾಗಗಳ ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಸಾಧ್ಯವಾಗುವಂತೆ ರಾಜ್ಯದ ಎಲ್ಲಾ ೨೭ ಜಿಲ್ಲೆಗಳಲ್ಲೂ ಮೂಲ ಸೌಕರ್ಯ ಅಭಿವೃದ್ಧಿಗೊಳಿಸಬೇಕು. ಪ್ರವಾಸೋದ್ಯಮ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವವರಲ್ಲಿ ವೃತ್ತಿಪರತೆ ಬೆಳೆಸಬೇಕು. ಆಧುನಿಕ ಸಲಕರಣೆಗಳನ್ನು ದೊರಕಿಸಿಕೊಡಬೇಕು. ತೀರ್ಥಯಾತ್ರೆ, ಇಕೋ ಟೂರಿಸಂ, ಚಾರಣ, ಸಾಹಸ ಕ್ರೀಡಾತಾಣ, ಐತಿಹಾಸಿಕ ಸ್ಥಳಗಳೂ ಸೇರಿದಂತೆ ಪ್ರವಾಸಿಗನ ಆಸಕ್ತಿ ಕುರಿತು ಮಾರ್ಗದರ್ಶನ ನೀಡುವ ಗೈಡ್‌ಗಳ ಸಂಖ್ಯೆ ಹೆಚ್ಚಿಸಬೇಕು. ರಾಜ್ಯದ ಪ್ರವಾಸಿ ತಾಣಗಳ ಬಗ್ಗೆ ತೆಲುಗು, ತಮಿಳು, ಮರಾಠಿ, ಕೊಂಕಣಿ ಸೇರಿದಂತೆ ದೇಶೀಯ ಭಾಷೆಗಳು ಹಾಗೂ ಕೆಲ ವಿದೇಶೀ ಭಾಷೆಗಳಲ್ಲೂ ಮಾಹಿತಿ ನೀಡಬೇಕು. ದೇಶೀಯ ಪ್ರವಾಸಿಗರ ಸಂಖ್ಯೆಯನ್ನು ಹಾಲಿ ೨೧ ದಶಲಕ್ಷದಿಂದ ೪೦ ದಶಲಕ್ಷಕ್ಕೆ ಹಾಗೂ ವಿದೇಶೀ ಪ್ರವಾಸಿಗರ ಸಂಖ್ಯೆಯನ್ನು ೫.೩ ರಿಂದ ೧೫ ಲಕ್ಷಕ್ಕೆ ಏರಿಸಬೇಕು."

# ಕರ್ನಾಟಕ ಸರಕಾರದ ೨೦೦೨-೨೦೦೭ರ ಪ್ರವಾಸೋದ್ಯಮ ನೀತಿ*

ಎ. **ಗೊತ್ತುಗುರಿಗಳು**

೧. ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ಖಾಸಗಿಯವರು ಭಾಗವಹಿಸುವುದನ್ನು ಪ್ರೋತ್ಸಾಹಿಸುವುದು.

೨. ರಾಜ್ಯದ ಸಸ್ಯ ಹಾಗೂ ಪ್ರಾಣಿ ಸಂಪತ್ತನ್ನು ಪ್ರವಾಸಿಗರು ಮೆಚ್ಚುವಂತೆ ಮಾಡುವ ಉದ್ದೇಶದಿಂದ ಎಕೊ ಟೂರಿಸಂನ ಅಭಿವೃದ್ಧಿ.

೩. ಪ್ರವಾಸೋದ್ಯಮ ಸಂಬಂಧೀ ಚಟುವಟಿಕೆಗಳ ಅಭಿವೃದ್ಧಿ.

೪. ಸಂಚಾರಿ ವಲಯಗಳ (travel circuits) ಅಭಿವೃದ್ಧಿ ಹಾಗೂ ರಾಜ್ಯಕ್ಕೆ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಪ್ರವಾಸಿ ಆಕರ್ಷಣೆಗಳನ್ನು ಬಗೆಬಗೆಯಾಗಿ ವಿಂಗಡಿಸುವುದು.

೫. ಹೊಸ ಪ್ರವಾಸೋದ್ಯಮ ಉತ್ಪನ್ನಗಳನ್ನು ವಿಶ್ವದ ಗುಣಮಟ್ಟಕ್ಕೆ ಅನುಗುಣವಾಗಿ ಉತ್ಪಾದಿಸುವುದು.

೬. ರಾಜ್ಯದ ಪ್ರವಾಸೋದ್ಯಮ ಸಾಧ್ಯತೆಯನ್ನು ಸಂಪೂರ್ಣವಾಗಿ ನಿಯಂತ್ರಿಸುವುದು.

೭. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಉತ್ಪನ್ನಗಳ ಅಭಿವೃದ್ಧಿ ಹಾಗೂ ವ್ಯಾಪಾರೀಕರಣ.

೮. ಸಾಹಸಿ ಕ್ರೀಡೆಗಳನ್ನು, ಮನರಂಜನಾ ಚಟುವಟಿಕೆಗಳನ್ನು ಹಾಗೂ ಹೆದ್ದಾರಿ ಪ್ರವಾಸೋದ್ಯಮಗಳನ್ನು ಅಭಿವೃದ್ಧಿಪಡಿಸುವುದು.

---

* ಕೃಪೆ : ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ.

**ಬಿ. ಅರ್ಹತೆ**

ಹೊಸ ಪ್ರವಾಸೋದ್ಯಮ ಯೋಜನೆಗಳು ಕರ್ನಾಟಕ ಸರಕಾರದ ಪ್ರವಾಸೋದ್ಯಮ ಇಲಾಖೆ ೧.೬.೨೦೦೨ರಲ್ಲಿ ಅಥವಾ ೧.೬.೨೦೦೨ರ ನಂತರ ಮತ್ತು ೩೧.೫.೨೦೦೭ರ ಒಳಗಾಗಿ ಅಂಗೀಕಾರ ಮಾಡಿರುವವು ಹಾಗೂ ಅಂಗೀಕೃತ ಸಂಸ್ಥೆಗಳ ವಿಸ್ತೃತ ಯೋಜನೆಗಳು ೨೦೦೨ರ ಹೊಸ ಪ್ರವಾಸೋದ್ಯಮ ನೀತಿಯ ಕೆಳಗೆ ಉತ್ತೇಜಕ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಪಡೆಯಲು ಅರ್ಹವಾಗಿವೆ.

**ಸಿ. ವ್ಯಾಪಕತೆ**

ಪ್ರವಾಸೋದ್ಯಮ ಇಲಾಖೆಯಿಂದ ಅಂಗೀಕೃತವಾದ ಎಲ್ಲ ಯೋಜನೆಗಳು.

**ಡಿ. ಲೋಪ ಅಥವಾ ತಪ್ಪಿಗೆ ದಂಡ**

ಪ್ರವಾಸೋದ್ಯಮ ಯೋಜನೆಗಳ ವ್ಯವಸ್ಥಾಪಕರು / ಘಟಕಗಳು ಪ್ರವಾಸೋದ್ಯಮ ಇಲಾಖೆಯ ಒಪ್ಪಂದದ ನಿಯಮಗಳನ್ನು ಉಲ್ಲಂಘಿಸಿದಾಗ ಪಡೆಯಲಾದ ಉತ್ತೇಜಕ ಹಾಗೂ ರಿಯಾಯಿತಿ ಸೌಲಭ್ಯಗಳನ್ನು ಇಡಿಯಾಗಿ ಶೇಕಡಾ ೧೮ರಂತೆ ದಂಡನಾರ್ಹ ಬಡ್ಡಿಯ ಜೊತೆಗೆ ಹಿಂತಿರುಗಿಸಬೇಕು. ಪ್ರವಾಸೋದ್ಯಮ ಇಲಾಖೆಯಿಂದ ನೋಟೀಸು ಜಾರಿಯಾದ ಮೇಲೂ ವ್ಯವಸ್ಥಾಪಕರು ರಾಜ್ಯ ಸರಕಾರಕ್ಕೆ ಹಣವನ್ನು ಹಿಂತಿರುಗಿಸದಿದ್ದಲ್ಲಿ ಅವರನ್ನು ಕರ್ನಾಟಕ ಭೂಕಾಯಿದೆಯ ವ್ಯಾಪ್ತಿಯಲ್ಲಿ ಕಾನೂನಿನ ಕ್ರಮಕ್ಕೆ ಒಳಪಡಿಸಿ ಬರಬೇಕಾದ ಬಾಕಿ ಹಣವನ್ನು ಭೂಕಂದಾಯದ ಬಾಕಿ ಹಣವೆಂದು ವಸೂಲಿ ಮಾಡಬಹುದು.

**ಇ. ಪ್ರವಾಸೋದ್ಯಮ ಘಟಕಗಳು (Units)**

ಪ್ರವಾಸೋದ್ಯಮ ಘಟಕಗಳು ಯಾವುವೆಂದರೆ, ಕರ್ನಾಟಕದಲ್ಲಿ ಸಾರ್ವಜನಿಕರ ಸಲುವಾಗಿ ಯಾವುವು ವಾಣಿಜ್ಯ ಘಟಕಗಳಾಗಿ ಪ್ರವಾಸಿಗಳಿಗೆ ಸೌಲಭ್ಯಗಳನ್ನು / ಸೇವೆಯನ್ನು ದೊರಕಿಸಿಕೊಡುತ್ತವೆಯೋ ಅವುಗಳಲ್ಲಿ ಕೆಳಗಿನವು ಸೇರ್ಪಡೆಯಾಗುತ್ತವೆ:

೧. ಹೋಟೆಲ್‌ಗಳು

೨. ಪ್ರವಾಸಿ ವಿಶ್ರಾಂತಿಧಾಮಗಳು

೩. ಹಾದಿಬದಿಯ ಸೌಕರ್ಯಗಳು

೪. ಮನರಂಜನಾ ಪಾರ್ಕುಗಳು

೫. ದೋಣಿ ಮನೆಗಳು

೭. ಸಾಹಸಿ / ಮನರಂಜನಾ ಚಟುವಟಿಕೆಯ ಕೇಂದ್ರ

೮. ಪರಂಪರೆಯನ್ನು ಹೊಂದಿರುವ ಹೋಟೆಲ್‌ಗಳು

೯. ಪ್ರವಾಸಿಗಳ ಗ್ರಾಮ

೧೦. ಡಾರ್ಮಿಟರಿ

೧೧. ಪ್ರವಾಸೋದ್ಯಮ ಇಲಾಖೆಯ ಸ್ವಂತ ವಿವೇಚನೆಗೊಳಪಟ್ಟ ಯಾವುದೇ ವಿಧವಾದ ಪ್ರವಾಸೋದ್ಯಮ ಸಂಬಂಧೀ ಯೋಜನೆಗಳು.

## ೧. ಹೋಟೆಲ್

ಹೋಟೆಲ್ ಎಂದರೆ ಊಟ ಹಾಗೂ ವಸತಿ ಸೌಕರ್ಯವಿರುವ ಘಟಕ ಕನಿಷ್ಠ ಪೂರ್ಣವಾಗಿ ಪೀಠೋಪಕರಣಗಳಿಂದ ಸಜ್ಜುಗೊಂಡಿರುವ ಇಪ್ಪತ್ತು ಹಾಸುಗೆಗಳೊಂದಿಗೆ ಹತ್ತು ಡಬಲ್ ರೂಮುಗಳನ್ನು ಹೊಂದಿದ್ದು ಪ್ರತಿಯೊಂದೂ ಸ್ಯಾನಿಟರಿ ಸೌಲಭ್ಯಗಳನ್ನು ಕಕ್ಕಸ್ಸು ಹಾಗೂ ಸ್ನಾನದ ಮನೆಗೆ ಅಳವಡಿಸಲಾಗಿದ್ದು, ಇವುಗಳ ಜೊತೆಗೆ ರೆಸ್ಟೋರೆಂಟ್, ರೆಸಿಪ್ಶನ್ ಹಾಗೂ ಸಾರ್ವಜನಿಕ ಜಾಗ ಮತ್ತು ಸಾಕಷ್ಟು ವಾಹನ ನಿಲುಗಡೆ ಜಾಗಗಳನ್ನು ಒಳಗೊಂಡಿರಬೇಕು. ಹೋಟೆಲ್ಲು ಹಲವು ಮನೆ ಹಾಗೂ ಕಾಟೇಜ್‌ಗಳನ್ನೂ ಒಳಗೊಳ್ಳಬಹುದು. ಇವುಗಳು ಪೂರ್ಣವಾಗಿ ಪೀಠೋಪಕರಣಗಳಿಂದ ಸಜ್ಜುಗೊಂಡಿರುವ ಇಪ್ಪತ್ತು ಹಾಸುಗೆಗಳೊಂದಿಗೆ ಸ್ನಾನದ ಮನೆಗಳನ್ನೂ ಮೇಲೆ ಉಲ್ಲೇಖಿಸಿರುವ ಇತರೆ ಸೌಲಭ್ಯಗಳನ್ನೂ ಹೊಂದಿರಬೇಕು.

## ೨. ಪ್ರವಾಸಿ ವಿಶ್ರಾಂತಿಧಾಮ

ಪ್ರವಾಸಿ ವಿಶ್ರಾಂತಿಧಾಮಗಳು ಯಾವುವೆಂದರೆ, ಯಾವ ಘಟಕಗಳಲ್ಲಿ ಕನಿಷ್ಠ ಹತ್ತು ಡಬಲ್ ರೂಂಗಳು / ಕಾಟೇಜಸ್‌ಗಳು ಸ್ಯಾನಿಟರಿ ಸೌಲಭ್ಯಗಳನ್ನು ಕಕ್ಕಸ್ಸು ಹಾಗೂ ಸ್ನಾನದ ಮನೆಗಳಲ್ಲಿ ಅಳವಡಿಸಲಾಗಿದ್ದು ಇವುಗಳ ಜೊತೆಗೆ ರೆಸ್ಟೋರೆಂಟ್, ರೆಸಿಪ್ಶನ್, ವಾಹನ ನಿಲುಗಡೆಗೆ ಸ್ಥಳ, ಎರಡು ಅಂಗಡಿಗಳು ಇತ್ಯಾದಿ ಇದ್ದು ಆದ್ಯತೆಯ ಮೇರೆಗೆ ಕೆಳಗಿನ ಚಟುವಟಿಕೆಗಳನ್ನು / ಸೌಲಭ್ಯಗಳನ್ನು ಹೊಂದಿರಬೇಕು:

೧. ಹೆಲ್ತ್‌ಕ್ಲಬ್ / ಪ್ರಕೃತಿ ಚಿಕಿತ್ಸೆ ಸೌಲಭ್ಯ

೨. ಈಜುಕೊಳ

೩. ಒಳಾಂಗಣ ಆಟಗಳು

೪. ಮಕ್ಕಳ ಪಾರ್ಕ್

### ೩. ಹಾದಿಬದಿಯ ಸೌಲಭ್ಯಗಳು

ಹಾದಿಬದಿಯ ಸೌಲಭ್ಯಗಳು ಯಾವುವೆಂದರೆ ಕರ್ನಾಟಕದ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾ ಹೆದ್ದಾರಿಗಳಲ್ಲಿ ನಿರ್ಮಾಣಗೊಂಡಿದ್ದು ತಂಗಣೆ ಹಾಗೂ ಊಟದ ಸೌಲಭ್ಯಗಳನ್ನು ಒದಗಿಸುವುದು, ತಕ್ಷಣದ ಊಟೋಪಚಾರ ನಡೆಸುವುದು, ಸಾಮಾನ್ಯರಿಗಾಗಿ ಕಕ್ಕಸ್ಸಿನ ಸೌಲಭ್ಯಗಳನ್ನು ಒದಗಿಸುವುದು. ಅವು ಐದು ಡಬಲ್ ರೂಂಗಳನ್ನು ಹೊಂದಿರಬೇಕು ಹಾಗೂ ೨೫ ಮಂದಿಗೆ ಅವಕಾಶ ಕಲ್ಪಿಸುವ ಸ್ನಾನದ ಮನೆ ಹಾಗೂ ಕಕ್ಕಸ್ಸಿನ ಸೌಲಭ್ಯ ಹೊಂದಿರಬೇಕು; ರಸ್ತೆಯಲ್ಲಿ ಸಂಚರಿಸುವ ಸಮೂಹ ಪ್ರವಾಸಿಗಳಿಗೆ / ಮೋಟಾರ್ ಪ್ರವಾಸಿಗಳಿಗೆ ಎಸ್‌ಟಿಡಿ ಸೌಲಭ್ಯಗಳನ್ನು ಒದಗಿಸಬೇಕು. ಅಗತ್ಯವಿರುವ ಕನಿಷ್ಠ ಪ್ರಮಾಣದ ಜಾಗ ಅರ್ಧ ಎಕರೆ.

### ೪. ವಿನೋದ / ವಾಟರ್ ಪಾರ್ಕ್‌ಗಳು

ವಿನೋದದ ಪಾರ್ಕ್‌ಗಳೆಂದರೆ ಎಲ್ಲ ವಯೋಮಾನದ ಜನರಿಗೆ ಮನರಂಜನಾ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ತಕ್ಕುದಾದ ಒಂದು ಖಾಲಿ ಜಾಗ. ಹಲವು ಬಗೆಯ ವಿನೋದ / ಸಂತೋಷ ಸವಾರಿ, ನೀರಿನ ಜಾರಾಟ, ಕಾನೂನು ರೀತ್ಯಾ ಅನುಮತಿ ಹೊಂದಿರುವ ಮನರಂಜನಾ ಚಟುವಟಿಕೆಗಳು, ಮ್ಯಾಜಿಕ್ ಪ್ರದರ್ಶನಗಳು, ವಿಜ್ಞಾನ ರೂಪಕಗಳ ಪ್ರದರ್ಶನಗಳು, ರೆಸ್ಟೋರೆಂಟ್, ಕಕ್ಕಸ್ಸು, ಟೆಲಿಕಮ್ಯೂನಿಕೇಶನ್, ಪ್ರಥಮ ಚಿಕಿತ್ಸೆ, ಸಾಕಾಗುವಷ್ಟು ವಾಹನ ನಿಲುಗಡೆ ಜಾಗ -ಇವೆಲ್ಲವುಗಳನ್ನು ಹೊಂದಿರಬೇಕು. ಅವು ಎರಡು ಅಂಗಡಿಗಳನ್ನು ಅಗತ್ಯವಾಗಿ ಹೊಂದಿರಬೇಕು ಹಾಗೂ ಸ್ಯಾನಿಟರಿ ಸೌಲಭ್ಯಗಳ ಅಳವಡಿಕೆ ಹೊಂದಿರುವ ಕಕ್ಕಸ್ಸು ಮತ್ತು ಸ್ನಾನದ ಮನೆಗಳನ್ನು ಒಳಗೊಂಡ ಹತ್ತು ಡಬಲ್ ರೂಂಗಳನ್ನು ಹೊಂದಿರಬೇಕು.

### ೫. ದೋಣಿ ಮನೆಗಳು

ದೋಣಿ ಮನೆ ಎಂದರೆ ಸರೋವರ ಅಥವಾ ನದಿ ನೀರಿನ ಮೇಲೆ ಊಟ ಹಾಗೂ ತಂಗಣೆಯ ಸೌಲಭ್ಯಗಳನ್ನು ಹೊಂದಿರುವ, ಸರಿಯಾದ ರೀತಿಯಲ್ಲಿ ಪೀಠೋಪಕರಣಗಳಿಂದ ಸಜ್ಜುಗೊಂಡಿರುವ ಸ್ಯಾನಿಟರಿ ಸೌಕರ್ಯವನ್ನು ಅಳವಡಿಸಿರುವ ಸ್ನಾನದ ಮನೆ ಹಾಗೂ ಕಕ್ಕಸ್ಸುಗಳನ್ನು ಹೊಂದಿರುವ ಕನಿಷ್ಟ ಎರಡು ಮಲಗು ಮನೆಗಳು ಮತ್ತು ಸ್ವತಂತ್ರವಾದ ಊಟದ ಮನೆ, ಡ್ರಾಯಿಂಗ್ ರೂಂಗಳು ಪ್ರತ್ಯೇಕ ಅಡುಗೆಮನೆ ಹೊಂದಿರುವವು.

### ೬. ಸಾಹಸ / ಮನರಂಜನಾ ಚಟುವಟಿಕೆಗಳ ಕೇಂದ್ರ

ಸಾಹಸ / ಮನರಂಜನಾ ಚಟುವಟಿಕೆಗಳ ಕೇಂದ್ರವೆಂದರೆ, ಜ್ಞಾನದ ಸೌಲಭ್ಯಗಳ ಜೊತೆಗೆ ಹಲವು ಬಗೆಯ ಸಾಹಸ ಚಟುವಟಿಕೆಗಳನ್ನು ಅಂದರೆ ಬಂಡೆ ಹತ್ತುವುದು,

ಪ್ಯಾರಾ ಸೈಲಿಂಗ್, ಹ್ಯಾಂಗ್ ಗ್ಲೈಡಿಂಗ್, ಹಾಟ್ ಏರ್ ಬಲೂನಿಂಗ್, ರ್ಯಾಫ್ಟಿಂಗ್, ಕಯಾಕಿಂಗ್, ಯಾಚ್ಟಿಂಗ್, ವಾಟರ್ ಸ್ಕೀಯಿಂಗ್, ಆ್ಯಂಗ್ಲಿಂಗ್, ಗೋಲ್ಫಿಂಗ್ ಹಾಗೂ ಇತರೆ ಎಲ್ಲ ಸಾಹಸ ಸಂಬಂಧೀ ಚಟುವಟಿಕೆಗಳನ್ನು ಹೊಂದಿರುವವು. ಈ ಕೇಂದ್ರವು ಪೂರ್ಣಪ್ರಮಾಣದ ತಾಂತ್ರಿಕ ಸಾಧನಗಳನ್ನು ಒದಗಿಸಬೇಕು, ಪರಿಣತಿ ಹೊಂದಿರುವ ತರಪೇತುದಾರರನ್ನು ಹೊಂದಿರಬೇಕು, ಅದು ಒದಗಿಸುವ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಂರಕ್ಷಣಾ ಸೌಲಭ್ಯಗಳನ್ನು ದೊರಕಿಸಿಕೊಡಬೇಕು. ಈ ಕೇಂದ್ರವು ಅಂತರರಾಷ್ಟ್ರೀಯ ಮಟ್ಟದ ಸಂರಕ್ಷಣಾ ಸೌಲಭ್ಯಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರಬೇಕು ಹಾಗೂ ಈ ಚಟುವಟಿಕೆಗಳ ಮೇಲೆ ತನ್ನದೇ ಆದ ನಿಯಂತ್ರಣವನ್ನು ಹೊಂದಿರಬೇಕು. ಕನಿಷ್ಠ ೨೦ ಮಂದಿಗೆ ಇದು ಒಳಾಂಗಣ ಊಟೋಪಚಾರ ಹಾಗೂ ತಂಗಣೆಯ ಸೌಲಭ್ಯಗಳನ್ನು ಒದಗಿಸಬೇಕು.

### ೭. ಪರಂಪರೆಯನ್ನು ಹೊಂದಿರುವ ಹೋಟೆಲುಗಳು

ಪರಂಪರೆಯನ್ನು ಹೊಂದಿರುವ ಹೋಟೆಲುಗಳು ಅಂದರೆ ೧೯೫೦ಕ್ಕಿಂತ ಹಿಂದೆ ನಿರ್ಮಿಸಿರುವ ಪರಂಪರೆ ಹೊಂದಿರುವ ಹೋಟೆಲ್ಲುಗಳನ್ನು ನಡೆಸುವವು. ಅವು ಪ್ರವಾಸೋದ್ಯಮ ಇಲಾಖೆಯ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಅಂಗೀಕೃತವಾಗಿರಬೇಕು.

### ೮. ಪ್ರವಾಸಿಗರ ಗ್ರಾಮ

ಪ್ರವಾಸಿಗರ ಗ್ರಾಮವು ಶ್ರೀಮಂತ ಪರಂಪರೆಯ ಕಲೆ ಹಾಗೂ ಸಂಸ್ಕೃತಿ, ಗೃಹ ಕೈಗಾರಿಕೆಗಳು, ಜಾನಪದ, ಜೀವನ ವಿಧಾನ ಹಾಗೂ ರಾಜ್ಯದ ರುಚಿಕಟ್ಟಾದ ಪಾಕ ಕಲೆ -ಇವುಗಳ ಹಿರಿಮೆಯನ್ನು ಪರಿಚಯಿಸುವಂತಿರಬೇಕು. ಸ್ಯಾನಿಟರಿ ಸೌಲಭ್ಯ ಅಳವಡಿಸಿರುವ ಕಕ್ಕಸ್ಸು ಹಾಗೂ ಸ್ನಾನದ ಮನೆಗಳನ್ನು ಹೊಂದಿರುವ ಕನಿಷ್ಠ ಹತ್ತು ಕೊಠಡಿಗಳನ್ನು ಒಳಗೊಂಡಿರಬೇಕು. ರೆಸ್ಟೋರೆಂಟ್, ಎರಡು ಅಂಗಡಿಗಳು, ಹಲವು ಬಗೆಯ ಕಲಾ ಪ್ರದರ್ಶನಕ್ಕೆ ಒಂದು ರಂಗಮಂದಿರ ಇವನ್ನು ಹೊಂದಿರಬೇಕು.

### ೯. ಡಾರ್ಮೆಟರಿ

ಸಮೂಹ ಪ್ರವಾಸಿಗಳ ಅಗತ್ಯಕ್ಕನುಗುಣವಾಗಿ ಊಟೋಪಚಾರ ಹಾಗೂ ತಂಗಣೆಯ ಸೌಲಭ್ಯವನ್ನೂ ಕನಿಷ್ಠ ಐವತ್ತು ಮಂದಿಗೆ ಮಲಗಲು ಅನುಕೂಲ ಕಲ್ಪಿಸುವ ಸಾಮರ್ಥ್ಯವನ್ನೂ ಅದು ಹೊಂದಿರುವಂತಹದ್ದು, ಒಂದು ಸಾವಿರ ಚದುರ ಅಡಿ ವಿಸ್ತೀರ್ಣದ ವಿಶಾಲ ಅಂಗಳವನ್ನೂ ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ವಿಭಾಗಗಳನ್ನೂ ಹೊಂದಿರುವಂತಹದ್ದು, ಪ್ರತ್ಯೇಕ ಕಕ್ಕಸ್ಸು ಹಾಗೂ ಸ್ನಾನದ ಮನೆ

ಸೌಲಭ್ಯಗಳನ್ನು ಡಾರ್ಮೆಟರಿಗೆ ಹೊಂದಿಕೊಂಡಿರುವಂತೆ ವ್ಯವಸ್ಥೆ ಮಾಡಿರಬೇಕು. ಅದು ಅಡುಗೆಮನೆ, ಊಟದ ಹಾಲ್, ಅಗತ್ಯವಿರುವಷ್ಟು ವಾಹನ ನಿಲುಗಡೆ ಜಾಗವನ್ನು ಹೊಂದಿರಬೇಕು. ಹತ್ತು ಸಾವಿರ ಚದುರ ಅಡಿ ವಿಸ್ತೀರ್ಣದ ಜಾಗವನ್ನು ಅದು ಹೊಂದಿರಬೇಕು.

**ಎಫ್. ಯೋಜನೆಗಳ ಮಂಜೂರಾತಿಗಾಗಿ ಇರುವ ಕ್ರಮ ಹಾಗೂ ನಿಯಮಗಳು**

**I. ಹೋಟೆಲ್‌ಗಳು**

೧. ಜಾಗ : ಹೋಟಲ್ಲಿನ ಜಾಗವು ಒಳ್ಳೆಯ ಸ್ಥಳದಲ್ಲಿರಬೇಕು ಮತ್ತು ಅದು ಸುಲಭವಾಗಿ ಲಭ್ಯವಾಗುವಂತಿರಬೇಕು. ಅಗತ್ಯವಿರುವ ಜಾಗದ ಕನಿಷ್ಠ ವಿಸ್ತೀರ್ಣ ಆರು ಸಾವಿರ ಚದುರ ಅಡಿ.

೨. ಕೊಠಡಿಗಳು / ಸ್ನಾನದ ಮನೆಯ ಪ್ರಮಾಣ

ಅ) ಡಬಲ್ ರೂಂ - ೧೫೦ ಚದುರ ಅಡಿ

ಆ) ಸ್ನಾನದ ಮನೆಗಳು - ೪೦ ಚದುರ ಅಡಿ

೩. **ಸೌಲಭ್ಯಗಳು**

ಅ. ಕೊಠಡಿಗಳು : ಕನಿಷ್ಠ ೨೦ ಹಾಸುಗೆ ಸಾಮರ್ಥ್ಯದ ೧೦ ಕೊಠಡಿಗಳು ಮತ್ತು ಎಲ್ಲಾ ಕೊಠಡಿಗಳು ಸ್ನಾನದ ಮನೆಯೊಂದಿಗೆ ಹೊಂದಿಕೆಯಾಗಿರಬೇಕು.

ಆ. ಅಡುಗೆಮನೆಯನ್ನೊಳಗೊಂಡ ರೆಸ್ಟೋರೆಂಟ್‌ಗಳು : ಎಲ್ಲಾ ಹೋಟೆಲ್ಲುಗಳು ಅಡುಗೆಮನೆಯೊಂದನ್ನು ಹೊಂದಿರುವ ರೆಸ್ಟೋರೆಂಟನ್ನು ಹೊಂದಿರಬೇಕು.

ಇ. ಸಭಾಂಗಣ : ಹೋಟೆಲ್ ಯೋಜನೆಗಳಿಗೆ ಸಭಾಂಗಣವೊಂದು ಅಗತ್ಯವಾಗಿ ಇರಲೇಬೇಕು. ಅವು ಜಿಲ್ಲಾ ಮುಖ್ಯ ಕಛೇರಿಯ ವ್ಯಾಪ್ತಿಯಲ್ಲಿರಬೇಕು.

ಈ. ಅಂಗಡಿಗಳು : ಕೊನೆಪಕ್ಷ ಒಂದು ಅಂಗಡಿ ಹಾಗೂ ಗರಿಷ್ಠ ಪ್ರಮಾಣದಲ್ಲಿ ಎರಡು ಅಂಗಡಿಗಳಿರಬೇಕು.

ಉ. ವಾಹನ ನಿಲುಗಡೆಯ ಜಾಗ : ಕನಿಷ್ಠ ಒಂದು ಸಾವಿರ ಚದುರ ಅಡಿ ವಿಸ್ತೀರ್ಣದ ವಾಹನ ನಿಲುಗಡೆಯ ಜಾಗ ಹೊಂದಿರಬೇಕು.

ಊ. ಎತ್ತುಗ (Lift) : ಕೆಳಮನೆ + ಎರಡು ಮಹಡಿಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಎತ್ತುಗದ ಅಗತ್ಯವಿದೆ.

### ೪. ಅಗತ್ಯವಿರುವ ಕಾಗದ ಪತ್ರಗಳು

ಯೋಜನೆಯ ಕೆಲಸ ಪ್ರಾರಂಭಿಸುವ ಮುನ್ನ ಪ್ರವಾಸೋದ್ಯಮ ಇಲಾಖೆಯಿಂದ ಅಗತ್ಯ ಅನುಮತಿ ಪಡೆದಿರಬೇಕು. ಪ್ರವಾಸಿಗರು ಇಳಿಯುವ ಸ್ಥಳದ ಸಮಗ್ರವಾದ ಪ್ರಗತಿಗೆ ಈ ಯೋಜನೆ ಅನುಗುಣವಾಗಿದೆ ಎಂಬುದನ್ನು ಅದು ದೃಢಪಡಿಸಬೇಕು. ಹೋಟೆಲ್ ಯೋಜನೆಯ ಅನುಮೋದನೆ ಪಡೆದುಕೊಳ್ಳಲು ಈ ಕೆಳಗಿನ ಕಾಗದ ಪತ್ರಗಳನ್ನು ಅರ್ಜಿಯೊಂದಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಬೇಕು.

ಅ. ಯೋಜನೆಯ ವರದಿ

ಆ. ಗ್ರಾಮ ಪಂಚಾಯತ್ / ಮುನಿಸಿಪಾಲಿಟಿ / ಕಾರ್ಪೊರೇಷನ್‌ನಿಂದ ಅಂಗೀಕೃತವಾದ ಮೂಲ ನಕಾಶೆ.

ಇ. ನೋಂದಣಿ ಹೊಂದಿದ ಅಂಗೀಕೃತ ಇಂಜಿನಿಯರ್‌ರವರಿಂದ ಸಿದ್ಧಪಡಿಸಿದ ಯೋಜನೆಯ ಅಂದಾಜು ವೆಚ್ಚದ ಪ್ರತಿ.

ಈ. ಭೂಮಿಯ ಹಕ್ಕುಪತ್ರ

ಉ. ಯೋಜನೆಯ ಸಹಭಾಗಿತ್ವದಿಂದ ಕೂಡಿದ್ದಲ್ಲಿ ನೋಂದಣಿಯಾದ ಸಹಭಾಗಿತ್ವ ಪತ್ರ.

ಊ. ಇತ್ತೀಚಿನ ಖಾತಾ ನಕಲು

ಎ. ಪರಭಾರೆಯ ಸರ್ಟಿಫಿಕೇಟ್

ಏ. ಅಗ್ನಿಶಾಮಕ ದಳದವರಿಂದ ನಿರ್ಬಂಧರಹಿತ ಪತ್ರ (NOC) : ಕಟ್ಟಡವು ನಾಲ್ಕು ಅಂತಸ್ತಿನದಾಗಿದ್ದರೆ, ಅಂದರೆ ನೆಲ ಅಂತಸ್ತು + ಮೂರು ಅಂತಸ್ತಿಗಿಂತ ಹೆಚ್ಚಿಗೆ ಇದ್ದರೆ.

### II. ಇತರೆ ಪ್ರವಾಸೋದ್ಯಮ ಘಟಕಗಳು:

ಇವುಗಳಿಗೆ ಅಂಗೀಕಾರವನ್ನು ಪಡೆಯುವ ಸಲುವಾಗಿ ೧) ಪ್ರವಾಸಿ ವಿಶ್ರಾಂತಿ ಧಾಮಗಳು ೨) ಹಾದಿಬದಿಯ ಸೌಲಭ್ಯಗಳು ೩) ಮನರಂಜನಾ ಪಾರ್ಕ್‌ಗಳು ೪) ದೋಣಿ ಮನೆಗಳು ೫) ಸಾಹಸ / ಮನರಂಜನಾ ಚಟುವಟಿಕೆಯ ಕೇಂದ್ರಗಳು ೬) ಪರಂಪರೆಯ ಹೋಟೆಲ್‌ಗಳು ೭) ಪ್ರವಾಸಿ ಗ್ರಾಮಗಳು ೮) ಡಾರ್ಮಿಟರಿ. ಕಾಗದಪತ್ರಗಳನ್ನು ಮೇಲೆ ತಿಳಿಸಿದಂತೆ ಹಾಜರುಪಡಿಸಬೇಕು.

## ಜಿ. ಪೂರ್ಣತೆಯ ಪ್ರಮಾಣಪತ್ರ ಪಡೆಯಲು ಕ್ರಮ ಮತ್ತು ನಿಯಮಗಳು

ಪ್ರವಾಸೋದ್ಯಮ ಯೋಜನೆಯು ಪೂರ್ಣಗೊಂಡ ಮೇಲೆ ಅದು ಪ್ರವಾಸಿಗರಿಗಾಗಿ ಉದ್ಘಾಟನೆಗೊಳ್ಳುವ ಪೂರ್ವದಲ್ಲಿ ಪ್ರವರ್ತಕರು ಪ್ರವಾಸೋದ್ಯಮ ಇಲಾಖೆಯಿಂದ ಯೋಜನೆ ಪೂರ್ಣಗೊಂಡಿರುವುದಕ್ಕೆ ಪ್ರಮಾಣ ಪತ್ರವನ್ನು ಪಡೆಯಬೇಕು. ಈ ಪ್ರಮಾಣ ಪತ್ರವನ್ನು ಪಡೆಯಲು ಈ ಕೆಳಗಿನ ಕಾಗದ ಪತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು:

೧. ವಾಸ್ತವ್ಯ / ಪೂರ್ಣತೆಯ ಪ್ರಮಾಣ ಪತ್ರ : ಗ್ರಾಮ ಪಂಚಾಯತ್ / ಮುನಿಸಿಪಾಲಿಟಿ / ಕಾರ್ಪೊರೇಷನ್‌ನಿಂದ ಪಡೆದಿರುವುದು.

೨. ಪ್ರವಾಸೋದ್ಯಮ ಇಲಾಖೆಯಿಂದ ಹೊರಡಿಸಲಾದ ಅಂಗೀಕಾರಪತ್ರದ ನಕಲು.

೩. ವಸತಿಗೃಹ ಹಾಗೂ ರೆಸ್ಟೋರೆಂಟಿನ ಪ್ರಥಮ ಬಿಲ್ಲಿನ ನಕಲು.

೪. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (KPTCL) ಬಿಲ್

## ಎಚ್. ಕಟ್ಟಡ ನಿರ್ಮಾಣ

ಪ್ರವಾಸೋದ್ಯಮ ಘಟಕದ ಎಲ್ಲ ಕಟ್ಟಡ ನಿರ್ಮಾಣವು ಅಂಗೀಕೃತ ಪ್ಲಾನ್‌ನಂತೆ ಇರಬೇಕು. ಅಂಗೀಕೃತ ಪ್ಲಾನ್‌ನಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಬೇಕಿದ್ದರೆ ಪ್ರವಾಸೋದ್ಯಮ ಇಲಾಖೆಯ ಅನುಮತಿಯನ್ನು ಪಡೆಯಬೇಕು. ಹೋಟೆಲ್ ಯೋಜನೆಯಲ್ಲಿ ಒಳಗಿನ ಬಳಕೆಗೆ ಸಂಬಂಧಿಸಿದಂತೆ ಯಾವುದೇ ಬಗೆಯ ಬದಲಾವಣೆ ಮಾಡಬೇಕಿದ್ದಲ್ಲಿ ಇಲಾಖೆಯ ವಿಶೇಷ ಅನುಮತಿಯನ್ನು ಪಡೆಯಬೇಕು. ಹಾಗಿಲ್ಲದಿದ್ದಲ್ಲಿ ಪೂರ್ಣತೆಯ ಪ್ರಮಾಣ ಪತ್ರವನ್ನು ಕೊಡಲಾಗುವುದಿಲ್ಲ.

## ಐ. ಉದ್ಯೋಗಿಗಳು

ಪ್ರವರ್ತಕರು ತರಬೇತಿ ಪಡೆದಿರುವ ಉದ್ಯೋಗಿಗಳನ್ನು ಹೋಟೆಲ್ ನಿರ್ವಹಣೆ ಹಾಗೂ ಊಟವನ್ನು ಒದಗಿಸುವ ತಾಂತ್ರಿಕತೆ ಅಥವಾ ಇತರೇ ಅಧಿಕೃತ ಪ್ರಮಾಣ ಪತ್ರ ಹೊಂದಿರುವ ಶೇಕಡಾ ೮೦ರಷ್ಟು ಪ್ರಮಾಣದ ಉದ್ಯೋಗಿಗಳು ಕನ್ನಡಿಗರಾಗಿರಬೇಕು. ಸರಕಾರಿ ಆದೇಶದನ್ವಯ ಎಸ್‌ಸಿ / ಎಸ್‌ಟಿ ಅಭ್ಯರ್ಥಿಗಳನ್ನು ನೇಮಕ ಮಾಡಬೇಕು. ಹಾಗೆ ಮಾಡದಿದ್ದಲ್ಲಿ ಉತ್ತೇಜಕಗಳನ್ನು ಅಥವಾ ರಿಯಾಯಿತಿಗಳನ್ನು ಕೊಡಲಾಗುವುದಿಲ್ಲ.

**ಜೆ. ಪ್ರವರ್ತಕರ ಭಾಗದ ಕರಾರು**

ಅ. ಪ್ರವರ್ತಕರು ನೀರಿನ ಪುನರ್ಬಳಕೆ ಮಾಡಬೇಕು.

ಆ. ಪ್ರವರ್ತಕರು ಸಂಪ್ರದಾಯಬದ್ಧವಲ್ಲದ ಶಕ್ತಿ ಸಂಪತ್ತನ್ನು ಅಂದರೆ ಸೋಲಾರ್ ಶಕ್ತಿ, ಬಯೋ-ಗ್ಯಾಸ್ ಶಕ್ತಿ ಇತ್ಯಾದಿಯನ್ನು ಬಳಸುವಲ್ಲಿ ಆಸಕ್ತಿ ತೋರಬೇಕು.

ಇ. ಪ್ರವರ್ತಕರು ವರ್ಮಿನ್ - ಕಾಂಪೋಸ್ಟ್ ಟೆಕ್ನಾಲಜಿಯನ್ನು ಬಳಸಬೇಕು.

ಈ. ಪ್ರವರ್ತಕರು ಪ್ರವಾಸೋದ್ಯಮ ಇಲಾಖೆಯ ಜೊತೆಗೆ ಅದರ ಅಭಿವೃದ್ಧಿ ಹಾಗೂ ಪ್ರಚಾರ ಚಟುವಟಿಕೆಗಳಲ್ಲಿ ಸಹಕರಿಸಬೇಕು.

ಉ. ಪ್ರವರ್ತಕರು ಹೋಟೆಲ್‌ನ ಪ್ರದರ್ಶನದ ಹಲಗೆಯ ಮೇಲೆ ಸ್ಪಷ್ಟವಾಗಿ ಕರ್ನಾಟಕ ಸರಕಾರದ ಪ್ರವಾಸೋದ್ಯಮ ಇಲಾಖೆಯಿಂದ ಅಂಗೀಕೃತವಾಗಿದೆ ಎಂದು ಬರೆಯಬೇಕು.

**ಕೆ. ಅಂಗೀಕರಿಸುವ ಅಧಿಕಾರಿಗಳು**

ಅ. ಪ್ರವಾಸೋದ್ಯಮ ಯೋಜನೆಗಳು ಮೂರು ಕೋಟಿ ರೂಪಾಯಿಗಳವರೆವಿಗೆ ಬಂಡವಾಳ ಹೂಡಿದ್ದಲ್ಲಿ : ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರಕಾರ, ನಂ. ೪೯, ಎರಡನೆ ಹಂತ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-೫೬೦೦೦೧.

ಆ. ಪ್ರವಾಸೋದ್ಯಮ ಯೋಜನೆಗಳು ಐವತ್ತು ಕೋಟಿ ರೂಪಾಯಿಗಳವರೆವಿಗೆ ಬಂಡವಾಳ ಹೂಡಿದ್ದಲ್ಲಿ : ಕರ್ನಾಟಕ ಸರಕಾರ ಮತ್ತು ಕರ್ನಾಟಕ ಉದ್ಯೋಗ ಮಿತ್ರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಅನುಮತಿ ನೀಡುವ ಅಧಿಕಾರಿಗಳು.

ಇ. ಪ್ರವಾಸೋದ್ಯಮ ಯೋಜನೆಗಳು ಐವತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಬಂಡವಾಳ ಹೂಡಿದ್ದಲ್ಲಿ : ಕರ್ನಾಟಕದ ಗೌರವಾನ್ವಿತ ಮುಖ್ಯಮಂತ್ರಿಗಳು ಉನ್ನತ ಮಟ್ಟದ ಸಮಿತಿಯ ಅಧ್ಯಕ್ಷರಾಗಿರುವರು. ಕರ್ನಾಟಕ ಉದ್ಯೋಗ ಮಿತ್ರವು ಅನುಮತಿ ನೀಡುವ ಅಧಿಕಾರ ಹೊಂದಿರುತ್ತದೆ.

**ಎಲ್. ತಿರಸ್ಕೃತ**

ಅಂಗೀಕಾರಕ್ಕೆ ಅನರ್ಹವಾದ ಎಲ್ಲ ಯೋಜನೆಗಳು ಸೂಚನೆ ನೀಡದೆ ತಿರಸ್ಕರಿಸಬಹುದೆಂದು ಭಾವಿಸಲಾಗುವುದು.

## ಎಂ. ಉತ್ತೇಜಕಗಳು ಹಾಗೂ ರಿಯಾಯಿತಿಗಳು

ಖಾಸಗಿ ಬಂಡವಾಳ ಹೂಡಿಕೆದಾರರು ರಾಜ್ಯದ ಎಲ್ಲ ಬಗೆಯ ಪ್ರವಾಸೋದ್ಯಮ ಸಂಬಂಧೀ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಉತ್ತೇಜಿಸುವ ಸಲುವಾಗಿ ಕೆಳಗಿನ ಉತ್ತೇಜಕಗಳು ಹಾಗೂ ರಿಯಾಯಿತಿಗಳನ್ನು ಪ್ರವಾಸೋದ್ಯಮ ನೀತಿಯ ಕಾಲಾವಧಿಯಲ್ಲಿ ಕೊಡಲಾಗುವುದು.

೧. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಖಾಸಗಿ ಬಂಡವಾಳದಾರರಿಗೆ ರಾಜ್ಯದ ಕೈಗಾರಿಕಾ ನೀತಿಯ (೨೦೦೨-೦೭) ಕೆಳಗೆ ಎಲ್ಲ ಬಗೆಯ ರಿಯಾಯಿತಿಗಳು ಲಭ್ಯವಾಗುವಂತೆ ಮಾಡಲಾಗಿದೆ.

೨. ಭೋಗವಸ್ತುಗಳ ಮೇಲಿನ ತೆರಿಗೆಯನ್ನು ಕೊಠಡಿಗಳ ಬಾಡಿಗೆ ರೂ. ೪೦೦/- ಮೇಲ್ಪಟ್ಟಿದ್ದಾಗ ಮಾತ್ರ ಹಾಕಲಾಗುತ್ತದೆ. ಕೊಠಡಿ ಬಾಡಿಗೆ ಎಷ್ಟು ಪಾವತಿ ಮಾಡಲಾಗಿದೆಯೋ ಅಷ್ಟರ ಮೇಲೆ ತೆರಿಗೆ ವಿಧಿಸಲಾಗುತ್ತದೆ. ಅನ್ವಯಿಸುವಂತೆ ಶೇಕಡಾ ೧೦ರಂತೆ ಅದರ ಮೇಲೆ ತೆರಿಗೆ ವಿಧಿಸಲಾಗುವುದು.

೩. ವಿದೇಶೀ ಮದ್ಯದ ಮೇಲಿನ ರಾಜ್ಯದ ಹೆಚ್ಚುವರಿ ಅಬಕಾರಿ ಸುಂಕವು ಶೇಕಡಾ ೬೬ ರಿಂದ ಶೇಕಡಾ ೨೫ಕ್ಕೆ ಇಳಿಸಲಾಗುವುದು. ಇಲ್ಲವೆ ಮೂಲ ಬೆಲೆಯ ಮೇಲೆ ತೆರಿಗೆ ವಿಧಿಸಲಾಗುವುದು.

೪. ರಾಜ್ಯಗಳ ನಡುವೆ ಸಂಚರಿಸುವ ಪ್ರವಾಸಿ ವಾಹನಗಳ ಮೇಲಿನ ತೆರಿಗೆಯನ್ನು ಪರ್ಯಾಯ ಕ್ರಮದಲ್ಲಿ ನ್ಯಾಯಸಮ್ಮತವಾದ ರೀತಿಯಲ್ಲಿ ವಿಧಿಸಲಾಗುವುದು.

೫. ೫೦ ಕೋಟಿ ರೂಪಾಯಿಗಳಷ್ಟು ಕಡಿಮೆ / ಹೆಚ್ಚು ಪ್ರಮಾಣದ ಬಂಡವಾಳಕ್ಕೆ ಶೇಕಡಾ ೫೦ / ಶೇಕಡಾ ೧೦೦ರಷ್ಟು ಸ್ಟ್ಯಾಂಪ್ ಡ್ಯೂಟಿಯ ವಿನಾಯಿತಿ.

೬. ನೋಂದಣಿ ಹಣದಲ್ಲಿ ರೂ. ೧೦೦೦/- ಕ್ಕೆ ಒಂದು ರೂಪಾಯಿಯಂತೆ ರಿಯಾಯಿತಿ ನೀಡಲಾಗುವುದು.

೭. ಕನ್ವರ್ಶನ್ ಫೀಯನ್ನು ತೆಗೆದುಹಾಕಲಾಗುವುದು.

೮. ಪ್ರವೇಶ ತೆರಿಗೆ ವಿನಾಯಿತಿಯನ್ನು ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗಿನ ಮೂರು ವರ್ಷಗಳ ಅವಧಿಗೆ ಕೊಡಲಾಗುವುದು.

೯. ಐ ಮ್ಯಾಕ್ಸ್ ಥಿಯೇಟರ್‌ಗಳಿಗೆ ಮಾತ್ರ ಅನ್ವಯಿಸುವಂತೆ ಮನರಂಜನಾ ತೆರಿಗೆ ವಿನಾಯಿತಿಯನ್ನು ಶೇಕಡಾ ೧೦೦ರಷ್ಟನ್ನು ಮೊದಲ ಮೂರು ವರ್ಷಗಳಿಗೂ, ಶೇಕಡಾ ೭೫ರಷ್ಟನ್ನು ನಂತರದ ಎರಡು ವರ್ಷಗಳಿಗೂ ನೀಡಲಾಗುವುದು.

೧೦. ಏವಿಯೇಶನ್ ಟರ್ಬೈನ್ ಫ್ಯುಯಲ್ ಮೇಲಿನ ತೆರಿಗೆಯನ್ನು ಶೇಕಡಾ ನಾಲ್ಕಕ್ಕೆ ಇಳಿಸಲಾಗುವುದು. ಸಾರ್ವಜನಿಕರು ಕೊಂಡಿರದ ಖಾಸಗಿ ವಿಮಾನಗಳ ಶೇಕಡಾ ೫೦ರಷ್ಟು ಟಿಕೆಟ್‌ಗಳ ಮೇಲೆ ಮೊದಲ ಮೂರು ವರ್ಷಗಳ ಅವಧಿಗೆ ಇಳಿಸಲಾಗುವುದು.

೧೧. ಸರಕಾರಿ ಜಮೀನನ್ನು ಅದರ ಮಾರುಕಟ್ಟೆಯ ಬೆಲೆಯ ಶೇಕಡಾ ೫೦ಕ್ಕೆ ವ್ಯವಸ್ಥಾಪಕರಿಗೆ ಕೊಡಲಾಗುವುದು.

## ಗಟ್ಟಿ ನೆಲ ಕಾಣದ ಪ್ರವಾಸೋದ್ಯಮ

ಪ್ರವಾಸೋದ್ಯಮವೇ ಪ್ರಮುಖ ಆಕರ್ಷಣೆಯಾದ ಕೇರಳ ರಾಜ್ಯದ ಪ್ರವಾಸೋದ್ಯಮದ ವಾರ್ಷಿಕ ಆಯವ್ಯಯ ೮೦ ಕೋಟಿ ರೂಪಾಯಿಗಳು. ಸುಮಾರು ೩೬೦ ಕಿ. ಮೀ.ಗಳ ಕರಾವಳಿ, ಯುನೆಸ್ಕೋದಿಂದ ಮಾನ್ಯತೆ ಪಡೆದ ಎರಡು ವಿಶ್ವ ಪರಂಪರೆಯ ತಾಣಗಳು. (ಹಂಪೆ ಮತ್ತು ಪಟ್ಟದಕಲ್ಲು ಐತಿಹಾಸಿಕ ಸ್ಮಾರಕಗಳು) ಕರ್ನಾಟಕದ ಕಲೆ, ಇತಿಹಾಸ ಮತ್ತು ಪರಂಪರೆಯನ್ನು ಬಿಂಬಿಸುವ ಅಸಂಖ್ಯ ತಾಣಗಳು, ದೇವಾಲಯಗಳು ರಾಜ್ಯದಲ್ಲಿವೆ. ಆದರೆ ಕರ್ನಾಟಕದ ಪ್ರವಾಸೋದ್ಯಮ ಇಲಾಖೆಗೆ ಮಂಜೂರಾಗಿರುವ ಆಯವ್ಯಯ ಕೇವಲ ೧೬.೫೦ ಕೋಟಿ ರೂಪಾಯಿಗಳು ಮಾತ್ರ. ಗೋವೆಯ ಮಾದರಿಯಲ್ಲಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಮತ್ತು ಖಾಸಗಿಯವರಿಗೆ ವಿಪುಲ ಅವಕಾಶಗಳಿವೆ. ಆದರೂ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಗಟ್ಟಿನೆಲೆ ಇಲ್ಲ. ಪ್ರವಾಸೋದ್ಯಮದ ಅಭಿವೃದ್ಧಿಯ ಮಾತುಗಳು ಕಳೆದ ೫೦ ವರ್ಷಗಳಿಂದ ಕೇಳಿ ಬರುತ್ತಿರುವುದು ವಿಪರ್ಯಾಸ.

ಕರ್ನಾಟಕವನ್ನು ದೇಶದ ಪ್ರಮುಖ ಪ್ರವಾಸಿತಾಣವನ್ನಾಗಿ ರೂಪಿಸುವ ಸಾವಿರ ಕೋಟಿ ರೂಪಾಯಿಗಳ ಯೋಜನೆಯ ನೀಲನಕ್ಷೆಯನ್ನು ಪ್ರವಾಸೋದ್ಯಮ ಇಲಾಖೆ ರಚಿಸಿದೆ ಎಂದು ಪ್ರವಾಸೋದ್ಯಮ ಸಚಿವ ಡಿ.ಟಿ. ಜಯಕುಮಾರ್ ತಿಳಿಸಿದ್ದಾರೆ. ಇದುವರೆಗೂ ಸರಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಪ್ರವಾಸಿ ತಾಣಗಳ ಅಭಿವೃದ್ಧಿ ಹಾಗೂ ಜಾನಪದ ಕಲೆಯ ಅಭಿವೃದ್ಧಿ ಮುಂದಿನ ದಿನಗಳಲ್ಲಿ ಆಗಲಿದೆ. ಯಾವ ರಾಜ್ಯದಲ್ಲೂ ಸಿಗದ ಅನುಕೂಲಗಳು ಹಾಗೂ ವ್ಯವಸ್ಥೆಯನ್ನು ಈ ಯೋಜನೆಯ ಅಡಿಯಲ್ಲಿ ಪ್ರವಾಸಿಗರಿಗೆ ನೀಡಲಾಗುವುದು ಎಂದು ಕರ್ನಾಟಕ ಜಾನಪದ ಪರಿಷತ್ತು

ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ಬೆಂಗಳೂರಿನ ಜಕ್ಕೂರು ವಿಮಾನ ಹಾರಾಟ ತರಬೇತಿ ಶಾಲೆಯಲ್ಲಿ ೧೬.೬.೨೦೦೫ ರಂದು ನಡೆದ '೧೮ನೇ ರಾಜ್ಯಮಟ್ಟದ ಗಾಳಿಪಟ ಉತ್ಸವ ೨೦೦೫'ನ್ನು ಉದ್ಘಾಟಿಸುತ್ತ ಮಾನ್ಯ ಮಂತ್ರಿಗಳು ತಿಳಿಸಿದರು. ಅರಬ್ ರಾಷ್ಟ್ರಗಳಲ್ಲಿ ಮಳೆ ಪ್ರಮಾಣ ಕಡಿಮೆ. ಅಲ್ಲಿನ ಪ್ರವಾಸಿಗರನ್ನು ಆಕರ್ಷಿಸಲು ನಾವು ಮಳೆ ಹೆಚ್ಚಾಗುವ ತಾಣಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಬರುವ ವರ್ಷ ಈ ಕಾರ್ಯ ಪೂರ್ಣಗೊಳ್ಳಲಿದೆ. ಆ ನಂತರ ಅಲ್ಲಿನ ಪ್ರವಾಸಿಗರನ್ನು ರಾಜ್ಯಕ್ಕೆ ಆಹ್ವಾನಿಸುತ್ತೇವೆ. ಇದೇ ರೀತಿ ಅನ್ಯ ರಾಷ್ಟ್ರಗಳ ಜನ ಬಯಸುವ ವಾತಾವರಣಗಳು ಇಲ್ಲಿವೆ. ಅವನ್ನು ಗುರ್ತಿಸಿ, ಸೌಕರ್ಯ ಕಲ್ಪಿಸಿ, ಆಯಾ ಸಂದರ್ಭಕ್ಕೆ ತಕ್ಕಂತೆ ಬಳಮಾಡಿಕೊಳ್ಳಲಾಗುವುದು ಎಂದರು. ಸೌಲಭ್ಯದ ಕೊರತೆಯಿಂದ ಜನಪ್ರಿಯತೆ ಕಳೆದು ಕೊಂಡಿದ್ದ ಇಲಾಖೆಯ ಮಯೂರ ಹೋಟೆಲ್‌ಗಳನ್ನು ಒಎನ್‌ಜಿಸಿ ಸಂಸ್ಥೆಗೆ ವಹಿಸಿಕೊಡಲಾಗಿದೆ. ಈಗಾಗಲೇ ಹಲವು ಹೋಟೆಲ್‌ಗಳನ್ನು ಅವರು ಪಡೆದು ಅಭಿವೃದ್ಧಿಪಡಿಸಲು ಮುಂದಾಗಿದ್ದಾರೆ. ಇನ್ನಾರು ತಿಂಗಳಲ್ಲಿ ಎಲ್ಲ ಮಯೂರ ಹೋಟೆಲ್‌ಗಳನ್ನು ಒಎನ್‌ಜಿಸಿಗೆ ವಹಿಸಿಕೊಡಲಾಗುವುದು. ಅವರು ಹೋಟೆಲ್‌ಗಳು ಅಭಿವೃದ್ಧಿ ಕಾರ್ಯ ನಡೆಸುವರು ಎಂದರು.

ಬೆಂಗಳೂರಿನಲ್ಲಿ ೧೩.೧.೨೦೦೬ರಂದು ಕರ್ನಾಟಕ ಪ್ರವಾಸೋದ್ಯಮ ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ಸಚಿವ ಡಿ.ಟಿ. ಜಯಕುಮಾರ್‌ರವರು ಮಾತನಾಡುತ್ತಾ- "ಕರ್ನಾಟಕಕ್ಕೆ 'ಒಂದು ರಾಜ್ಯ-ಹಲವು ಪ್ರಪಂಚ' ಎಂಬ ಬ್ರಾಂಡ್ ನೀಡುವುದರೊಂದಿಗೆ ಪ್ರವಾಸೋದ್ಯಮಕ್ಕೆ ಹೊಸ ಆಯಾಮ ನೀಡಲಾಗುತ್ತಿದೆ. ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೊಳಿಸಲು ಖಾಸಗಿ ವಲಯ ಮುಂದೆ ಬರಬೇಕು" ಎಂದು ಕರೆ ನೀಡಿದರು.

ಕರ್ನಾಟಕ ಪ್ರಕೃತಿಯ ವಿಶೇಷ ಕೃಪಾದೃಷ್ಟಿ ಪಡೆದಿದೆ. ಇಲ್ಲಿ ಅನೇಕ ರಮ್ಯ ಪ್ರಾಕೃತಿಕ ಸೌಂದರ್ಯದ ತಾಣಗಳಿವೆ. ಇವನ್ನು ಇದುವರೆಗೆ ಸರಿಯಾಗಿ ಬಳಸಿಕೊಂಡಿಲ್ಲ. ಪರಿಸರ, ಆರೋಗ್ಯ ಹಾಗೂ ಆಯುರ್ವೇದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸ ಬೇಕಾಗಿದೆ. ರಾಜ್ಯದಲ್ಲಿ ರೆಸಾರ್ಟ್ ಸಂಸ್ಕೃತಿ ಬೇರೂರತೊಡಗಿದೆ. ಗೋವಾ ಸಮುದ್ರ ತೀರವು ಅಲ್ಲಿನ ಪ್ರವಾಸೋದ್ಯಮಕ್ಕೆ, ಕೇರಳ ಆಯುರ್ವೇದವು ಅಲ್ಲಿನ ಪ್ರವಾಸೋದ್ಯಮಕ್ಕೆ ಪ್ರಸಿದ್ಧವಾಗಿರುವಂತೆ ಇವೆರಡಕ್ಕಿಂತ ಸಂಪದ್ಭರಿತವಾಗಿರುವ ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶಗಳಿವೆ ಎಂದು ಸಚಿವರು ಹೇಳಿದರು.

ಖಾಸಗಿ ಮತ್ತು ಸರಕಾರದ ಸಹಭಾಗಿತ್ವದ ಯೋಜನೆಗಳಿಗಾಗಿ ರಾಜ್ಯದಲ್ಲಿ ಏಳು ಪ್ರವಾಸಿ ವಲಯಗಳನ್ನು ರೂಪಿಸಲಾಗಿದೆ. ಇಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಬೇಕಾಗಿರುವ ಎಲ್ಲ ಅನುಕೂಲತೆಗಳನ್ನು ಸರಕಾರ ಮಾಡಿಕೊಡುತ್ತದೆ ಎಂದು

ಪ್ರವಾಸೋದ್ಯಮ ಸಚಿವಾಲಯ ಕಾರ್ಯದರ್ಶಿ ಶಾಂತಕುಮಾರಿ ಹೇಳಿದರು. ರಾಜ್ಯದಲ್ಲಿ ಅನೇಕ ಪ್ರವಾಸಿ ತಾಣಗಳು ಇದ್ದರೂ ಅಲ್ಲಿನ ಮೂಲ ಸೌಕರ್ಯ ಕೆಟ್ಟದಾಗಿದೆ. ಈ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣ, ರಸ್ತೆಗಳು, ವಿದ್ಯುತ್ ಮೊದಲಾದ ಸವಲತ್ತುಗಳನ್ನು ನೀಡಬೇಕು ಎಂಬ ಒಮ್ಮತದ ಅಭಿಪ್ರಾಯ ಚರ್ಚೆಯಲ್ಲಿ ಮೂಡಿಬಂದಿತು.

ದಕ್ಷಿಣ ಭಾರತದಲ್ಲಿಯೇ ಅತ್ಯಂತ ಮಹತ್ವದ ಪ್ರವಾಸಿ ಕೇಂದ್ರ ಮೈಸೂರು ಹಿಂದೆ ಪ್ರವಾಸಿಗರ ಸ್ವರ್ಗವಾಗಿದ್ದಿತು. ಆ ಖ್ಯಾತಿ ಈಗ ಉಳಿದಿಷ್ಟು. ಇಲ್ಲಿಗೆ ಪ್ರತಿ ತಿಂಗಳೂ ಸರಾಸರಿ ಒಂದೂವರೆ ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಭೇಟಿಕೊಡುವರು ಪ್ರವಾಸಿ ಋತುವಿನ ಪರಾಕಾಷ್ಠೆ ಎನ್ನಬಹುದಾದ ಡಿಸೆಂಬರ್‌ನಲ್ಲಿ ಹಾಗೂ ನವರಾತ್ರಿಯ ದಸರಾ ಉತ್ಸವಕಾಲದಲ್ಲಿ ಪ್ರವಾಸಿಗರ ಸಂಖ್ಯೆ ಸು. ಆರು ಲಕ್ಷಕ್ಕೂ ಮೀರಿರುತ್ತದೆ. ಮೈಸೂರು ನಗರದ ಒಟ್ಟು ಜನಸಂಖ್ಯೆ ಸು. ಎಂಟುಲಕ್ಷ ಪ್ರವಾಸಿಗರ ಭೇಟಿಯು ನಗರದ ಆರ್ಥಿಕಸ್ಥಿತಿಯ ಮೇಲೆ ಎಷ್ಟರ ಮಟ್ಟಿನ ಪರಿಣಾಮ ಬೀರುತ್ತದೆಂಬುದನ್ನು ಆರ್ಥಿಕತಜ್ಞರು ಹಾಗೂ ಸರಕಾರ ವಿಚಾರಮಾಡಬೇಕಿದೆ. ೨೦೦೨ ಪ್ರವಾಸೋದ್ಯಕ್ಕೆ ಗ್ರಹಣ ಹಿಡಿದ ವರ್ಷ. ಬರಗಾಲ, ಕಾವೇರಿ, ಹೋರಾಟ, ವೀರಪ್ಪನ್ ಹಾವಳಿ-ಭಯ -ಇವು ಕಾಡುತ್ತಿದ್ದ ಸಮಸ್ಯೆಗಳು. ಈಗ ಈ ಸಮಸ್ಯೆಗಳು ಇಲ್ಲವಾಗಿ ಪ್ರವಾಸೋದ್ಯ ನಿರಾಳವಾಗಿ ಉಸಿರುಬಿಡುವಂತಾಗಿದೆ. ಐ.ಟಿ. ಉದ್ಯಮವನ್ನು ಮೈಸೂರಿಗೂ ವಿಸ್ತರಿಸುವ ಆಲೋಚನೆ ಸರ್ಕಾರದ್ದು. ಆದರೆ ಐ.ಟಿ. ಉದ್ಯಮಿಗಳು ಮೈಸೂರಿಗೆ ವಿಮಾನದಲ್ಲಿ ಬಂದರೆ ವಿಮಾನ ಇಳಿಯುವುದೆಲ್ಲಿ? ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಸುಧಾರಿಸುವ, ಆಧುನೀಕರಣಗೊಳಿಸುವ ಉದ್ದೇಶ ಸರಕಾರದ್ದು. ಒಂದು ಪಕ್ಕದಲ್ಲಿ ರಾಜ್ಯ ಹೆದ್ದಾರಿ, ಇನ್ನೊಂದೆಡೆ ರೈಲುಹಳಿ, ಮತ್ತೊಂದೆಡೆ ವಿಮಾನಗಳ ಟೇಕ್‌ಆಫ್ ದಿಕ್ಕಿಗೇ ಚಾಮುಂಡಿ ಬೆಟ್ಟ -ಹೀಗಿರುವಾಗ ಮಂಡಕಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿ ಯೋಜನೆ ಎಷ್ಟರಮಟ್ಟಿಗೆ ಸಾಧುವಾದುದು? ಬೃಂದಾವನಕ್ಕೆ ಮಳೆಗಾಲದಲ್ಲಿ ಪ್ರವಾಸಿಗರು ಭೇಟಿ ನೀಡಿದರೆ ನೋಡಲು ಚೆಂದ, ಕಣ್ಣಿಗೊಂದು ಹಬ್ಬ. ಮಳೆಗಾಲ ಹೊರತಾಗಿ ಬೇರೆ ದಿನಗಳಲ್ಲಿ ಕನ್ನಂಬಾಡಿಕಟ್ಟೆ ಬತ್ತಿರುತ್ತದೆ. ಪ್ರವಾಸಿಗರ ದಂಡು ನೀರಿಲ್ಲದಿದ್ದಾಗ ಅಲ್ಲಿಗೆ ಬರುವುದು ಕಡಿಮೆ. ಬೃಂದಾವನ ಉದ್ಯಾನವನವನ್ನು ಖಾಸಗಿಯವರಿಗೆ ವಹಿಸಿಕೊಡುವ ಆಲೋಚನೆ ಸರಕಾರದ ಮುಂದಿದೆ; ಆದರೆ ಅದು ಇನ್ನೂ ನಿರ್ಧಾರವಾಗಿಲ್ಲ. ಮೈಸೂರಿಗೆ ವಿದೇಶೀಯರು ಬಂದಾಗ ತಂಗಲು ಸರಕಾರದ ಒಡೆತನದಲ್ಲಿರುವ ಹೋಟೆಲ್ ಮೆಟ್ರೋಪೋಲೊ ಕೆಲಕಾಲ ಮುಚ್ಚಲಾಗಿದ್ದು, ಈಗ ಅದನ್ನು ಖಾಸಗಿಯವರಿಗೆ ವಹಿಸಿಕೊಡಲಾಗಿದೆ. ನಷ್ಟದಲ್ಲಿ ನಡೆಯುತ್ತಿರುವ ಕೃಷ್ಣರಾಜಸಾಗರದ ಕಾವೇರಿ ಹೋಟೆಲನ್ನು ಖಾಸಗಿಯವರು ವಹಿಸಿಕೊಳ್ಳಲು ಮುಂದೆ ಬಂದಿದ್ದರೂ ರಾಜ್ಯಸರಕಾರ

ಇನ್ನೂ ನಿರ್ಧಾರ ಕೈಗೊಂಡಿಲ್ಲ. ಮಹಾರಾಜರ ಅರಮನೆ, ಜಗನ್ಮೋಹನ ವಸ್ತುಸಂಗ್ರಹಾಲಯ, ಪ್ರಾಣಿ ಸಂಗ್ರಹಾಲಯ ಹಾಗೂ ಚಾಮುಂಡಿಬೆಟ್ಟ -ಇವು ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳು. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಕೆಲಸ ಸದ್ಯದಲ್ಲೇ ಮುಗಿಯಲಿದೆ. ಅದು ಪೂರ್ಣಗೊಂಡಲ್ಲಿ ಕಡಿಮೆ ವೇಳೆಯಲ್ಲಿ ಸುಖಕರವಾದ ಪ್ರವಾಸ ಕೈಗೊಳ್ಳಬಹುದು. ಜೋಡಿ ರೈಲುಹಳಿಗಳ ನಿರ್ಮಾಣಕಾರ್ಯ ತೀವ್ರಗತಿಯನ್ನು ಆಗಬೇಕಾಗಿದೆ. ಮೈಸೂರಿಗೆ ಆಧುನೀಕರಣಗೊಂಡ ಒಂದು ಒಳ್ಳೆಯ ವಿಮಾನ ನಿಲ್ದಾಣದ ಅಗತ್ಯವಿದೆ.

ಹಂಪೆ ಜಗದ್ವಿಖ್ಯಾತ ಪ್ರವಾಸಿ ಕೇಂದ್ರ. ಅಲ್ಲಿಗೆ ಬರುವ ದೇಶೀಯ (Domestic) ಹಾಗೂ ವಿದೇಶೀ ಪ್ರವಾಸಿಗಳ ಸಂಖ್ಯೆ ಗಮನಾರ್ಹವಾದುದು. ಸಂಯುಕ್ತ ರಾಷ್ಟ್ರ ಸಂಸ್ಥೆ ಅದನ್ನು ಪರಂಪರೆಯ ಸಂರಕ್ಷಣೆಗೊಳಗಾಗಬೇಕಾದ ಸ್ಮಾರಕವೆಂದು ಗುರುತಿಸಿದೆ ಹಾಗೂ ಮಾನ್ಯಮಾಡಿದೆ. ವಿಜಯನಗರದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಹತ್ತಾರು ಸಂಗತಿಗಳನ್ನು ಅಲ್ಲಿ ನಡೆದ ಹತ್ತು ಹನ್ನೆರಡು ವರ್ಷಗಳ ಅವಧಿಯ ಉತ್ಖನನವನ್ನು ಬೆಳಕಿಗೆ ತಂದ ನಂತರ ಹಂಪೆಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ಬರಿಗಾಲಿನಲ್ಲಿ ನಡೆದು ಹಂಪೆ ನೋಡುವ ಸಾವಿರಾರು ಸಾಮಾನ್ಯ ಪ್ರವಾಸಿಗಳಾಗಿ, ಇದರ ಜೊತೆಗೆ ಅದರ ಗತ ಇತಿಹಾಸವನ್ನು ತಿಳಿದುಕೊಂಡು ನೋಡುವ ಕುತೂಹಲದಿಂದ ಹಂಪೆಗೆ ಬರುವ ವಿದೇಶೀ ಪ್ರವಾಸಿಗಳ ಸಂಖ್ಯೆ ನೂರಾರು. ಹಂಪೆಯ ನಿವಾಸಿಗಳು ಒದಗಿಸಿದ ಸಾಮಾನ್ಯ ಕೊಠಡಿಗಳು ಹಾಗೂ ಮನೆಯ ಜಗುಲಿಗಳ ಮೇಲೆ ವಾರಗಟ್ಟಲೆ ತಂಗಿ ಸು. ೨೬ ಕಿ.ಮೀ. ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಸ್ಮಾರಕಗಳನ್ನು ನೋಡಿ ದಣಿದ ವಿದೇಶೀ ಪ್ರವಾಸಿಗಳಿಗೆ ಕನಿಷ್ಠ ಸೌಲಭ್ಯಗಳನ್ನೂ ಸರಕಾರ ಒದಗಿಸಿಲ್ಲ.

ಬರಿಗಾಲಿನ ಪ್ರವಾಸಿಗರಿಗೆ ಒಂದು ಸಾಮಾನ್ಯ ಊಟವೂ ಸ್ಮಾರಕಗಳ ಬಳಿ ದೊರೆಯುವುದಿಲ್ಲ. ವಿಶ್ವವಿಖ್ಯಾತ ಗೋಳಗುಮ್ಮಟದ ಬಿಜಾಪುರವು ಐತಿಹಾಸಿಕ ಸ್ಥಳ. ಇಬ್ರಾಹಿಂ ರೋಜಾ, ಬಾರಾಕಮಾನ್, ತಾಜ್‌ಬಾವಡಿ, ಗಗನ ಮಹಲ್, ಜಾಮಿಯ ಮಸೀದಿ, ಜೋಡಿ ಗುಮ್ಮಟ, ಮಾಲಿಕ್-ಇ- ಮೈದಾನ್, ಚಾಂದ್‌ಬಾವಡಿ, ಉಕಲಿ ಬುರಜ್, ಮೆಹತರ್ ಮಹಲ್‌ಗಳು ಇಲ್ಲಿವೆ. ಇವಲ್ಲದೆ ಈ ನಗರದಲ್ಲೇ ನೂರಕ್ಕೂ ಹೆಚ್ಚು ಐತಿಹಾಸಿಕ ಸ್ಮಾರಕಗಳಿವೆ. ಬಿಜಾಪುರಕ್ಕೆ ನೇರ ರೈಲುಮಾರ್ಗವಿಲ್ಲ. ವಿದೇಶಿ ಪ್ರವಾಸಿಗರಿಗೆ ವಿಮಾನ ಸೌಲಭ್ಯವಿಲ್ಲ.

ಪೂರ್ವಕ್ಕೆ ಪಶ್ಚಿಮ ಘಟ್ಟಗಳ ಸಾಲು. ಪಶ್ಚಿಮಕ್ಕೆ ಚಾಚಿಕೊಂಡ ಅರಬ್ಬೀ ಸಮುದ್ರ, ನಡುವೆ ನೆಲೆಸಿರುವ ನೂರಾರು ದೇವತೆಗಳ ಪುಣ್ಯಕ್ಷೇತ್ರಗಳು. ಪ್ರವಾಸಿಗಳನ್ನು ಸೆಳೆಯಲು ರಾಜ್ಯದಲ್ಲಿ ದಕ್ಷಿಣ ಕನ್ನಡದಷ್ಟು ಪ್ರಶಸ್ತವಾದ ಇನ್ನೊಂದು ಜಿಲ್ಲೆ ರಾಜ್ಯದಲ್ಲಿಲ್ಲ. ರಾಜ್ಯದ

ಕರಾವಳಿಯ ಆಕರ್ಷಕ ಬೀಚುಗಳಲ್ಲಿ ಒಳ್ಳೆಯ ಸೌಲಭ್ಯಗಳನ್ನು ಕಲ್ಪಿಸಿ ವಿದೇಶಿ ಪ್ರವಾಸಿಗರನ್ನು ಸೆಳೆಯುಬಹುದು. ಅದಕ್ಕೆ ಹಣದ ಕೊರತೆ ಯಾವತ್ತೂ ಬರುವುದಿಲ್ಲ. ಧರ್ಮಸ್ಥಳ, ಕೊಲ್ಲೂರು. ಕುಕ್ಕೆ ಸುಬ್ರಹ್ಮಣ್ಯ. ಕಟೀಲು ಮೊದಲಾದ ಕ್ಷೇತ್ರಗಳಲ್ಲಿ ದೇವಾಲಯಗಳ ಆಡಳಿತ ಮಂಡಲಿಗಳೇ ಉತ್ತಮ ಸೌಲಭ್ಯದ ವಸತಿಗೃಹಗಳನ್ನು ನಿರ್ಮಿಸಿವೆ. ಪ್ರವಾಸೋದ್ಯಮ ಇಲಾಖೆ ಮಲ್ಪೆಯಂಥ ಆಯಕಟ್ಟಿನ ಸ್ಥಳದಲ್ಲಿ ನಿರ್ಮಿಸಲು ಆರಂಭಿಸಿದ್ದ ವಸತಿಗೃಹದ ನಿರ್ಮಾಣವನ್ನು ಅರ್ಧಕ್ಕೆ ನಿಲ್ಲಿಸಿ ಕೈಬಿಟ್ಟಿದೆ. ಅದನ್ನೂ ಇದೀಗ ಖಾಸಗಿಯವರಿಗೆ ಒಪ್ಪಿಸಿ ಕೈತೊಳೆದುಕೊಂಡಿದೆ.

ರಾಜ್ಯ ಪ್ರವಾಸೋದ್ಯಮ ಇಲಾಖೆ ಜಿಲ್ಲೆಯ ಕೆಲವು ಧರ್ಮಕ್ಷೇತ್ರಗಳಲ್ಲಿ ಯಾತ್ರಿನಿವಾಸಗಳನ್ನು ನಿರ್ಮಿಸಿದೆಯಾದರೂ ಸದ್ಯಕ್ಕೆ ಮಂಗಳೂರು ಸಮೀಪದ ಪಿಲಿಕುಳ ನಿಸರ್ಗಧಾಮದ ಅಭಿವೃದ್ಧಿಯನ್ನು ಮುಖ್ಯವಾಗಿಟ್ಟುಕೊಂಡಿದೆ. ನಿಸರ್ಗಧಾಮವನ್ನು ಎಲ್ಲ ಸೌಲಭ್ಯಗಳಿಂದ ಸಜ್ಜುಗೊಳಿಸಲು ಅಂದಾಜು ೪.೨೬ ಕೋಟಿ ವೆಚ್ಚದ ಯೋಜನೆ ಜಾರಿಯಲ್ಲಿದೆ. ಈ ವರೆಗೆ ೧.೩೭ ಕೋಟಿಯಷ್ಟು ಹಣ ಬಿಡುಗಡೆಯಾಗಿದೆ. ಉಳಿದ ಹಣ ಬಿಡುಗಡೆಯಾಗದೆ ಕೆಲಸ ಮುಂದುವರಿಯುವುದಿಲ್ಲ. ಇತರ ಯೋಜನೆಗಳ ವಿಚಾರದಲ್ಲಿಯೂ ಹಣ ಬಿಡುಗಡೆಯಾಗಿಲ್ಲ. ಬಿಡುಗಡೆಯಾದ ಸಂದರ್ಭಗಳಲ್ಲಿ ಅಲ್ಪಸ್ವಲ್ಪ ಹಣ ಮಾತ್ರ ಸಿಕ್ಕಿದೆ.

ಹಣಕ್ಕೆ ಯಾವ ಕೊರತೆಯೂ ಇಲ್ಲ ಎಂಬ ಘೋಷಣೆ ಹೊರಡಿಸಿದ್ದ ಸರ್ಕಾರಕ್ಕೆ ಇಲಾಖೆ ಕಳುಹಿಸಿದ ಪ್ರಸ್ತಾವಗಳಿಗೆ ಮಂಜೂರಾತಿ ಇನ್ನೂ ಲಭಿಸಿಲ್ಲ. ಮೂಡಬಿದಿರೆಯಲ್ಲಿ ಹೊನಲು ಬೆಳಕಿನ ವ್ಯವಸ್ಥೆ, ಪಣಂಬೂರು ಬೀಚಿನಲ್ಲಿ ಸೌಕರ್ಯಗಳ ನಿರ್ಮಾಣ. ಕೋಟಿಚೆನ್ನಯ್ಯ ಜನ್ಮಸ್ಥಳವಾದ ಪಡುಮಲೆಯ ಅಭಿವೃದ್ಧಿ, ಕಾರಿಂಜೇಶ್ವರದಲ್ಲಿ ಯಾತ್ರಿ ನಿವಾಸ, ಬೆಳ್ತಂಗಡಿಯ ಮಲ್ಲಳ್ಳದ ಜಲಪಾತ ಅಭಿವೃದ್ಧಿ, ಅಲ್ಲಿನ ಶಿಶಿಲೇಶ್ವರ ಕ್ಷೇತ್ರ ಅಭಿವೃದ್ಧಿ, ಸವಣಾಲು ಕ್ಷೇತ್ರದ ಅಭಿವೃದ್ಧಿ, ಬೋಳಾರದಲ್ಲಿ ಫೆರ್ರಿ ಸರ್ವಿಸ್, ಗುರುಪುರ ನದಿಗೆ ತೂಗುಸೇತುವೆ ನಿರ್ಮಾಣ ಮೊದಲಾದ ಹಲವು ಪ್ರಸ್ತಾವಗಳಿಗೆ ಈವರೆಗೂ ಹಸಿರು ನಿಶಾನೆ ಸಿಕ್ಕಿಲ್ಲ.

ಪ್ರವಾಸಿಗರ ಆರ್ಥಿಕ ಸ್ಥಿತಿ-ಗತಿಗೆ ಅನುಗುಣವಾಗಿ ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಡುವ ಹಿನ್ನೆಲೆಯಲ್ಲಿ ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಎಷ್ಟರಮಟ್ಟಿಗೆ ಭಾಗಿಯಾಗಬಹುದು ಎನ್ನುವುದು ಚರ್ಚಾಸ್ಪದ ಸಂಗತಿ. ಸರ್ಕಾರ ಈ ಹಿನ್ನೆಲೆಯಲ್ಲಿ ತನ್ನ ಹೊಸ ಪ್ರವಾಸಿ ನೀತಿಯನ್ನು ಪ್ರಕಟಿಸಿದೆ. ಇದನ್ನು ಆಮೂಲಾಗ್ರವಾಗಿ ಪರಿಶೀಲಿಸಿದಾಗ ಸರಕಾರದ ಹೊಸ ಪ್ರವಾಸಿ ನೀತಿ ಜಾಗತೀಕರಣದ ಹಿನ್ನೆಲೆಯಲ್ಲಿ ಹೊಸ ರೂಪವನ್ನು ಪಡೆದುಕೊಂಡಿರುವಂತೆ ತೋರುತ್ತದೆ.

ಈ ಹೊಸ ಪ್ರವಾಸಿ ನೀತಿಯಲ್ಲಿ ಹೊಸದೇನೂ ಇಲ್ಲ. ೧೯೯೧ರಲ್ಲಿ 'ಭಾರತ ಸಂದರ್ಶಿಸಿ ೧೯೯೧' ಆಚರಣೆಯ ಸಂದರ್ಭದಲ್ಲಿ ಈಗಿನ ಹೊಸ ಪ್ರವಾಸಿ ನೀತಿಯಲ್ಲಿರುವ ಪ್ರಸ್ತಾಪಗಳೇ ಬೇರೊಂದು ರೀತಿಯಲ್ಲಿ ಪ್ರಕಟವಾಗಿದ್ದುವು. ಸರ್ಕಾರ ಬದಲಾಗಿವೆಯೆ ಹೊರತು ಪ್ರವಾಸಿ ನೀತಿಯಲ್ಲಿನ ಪ್ರಸ್ತಾವಗಳು ಬದಲಾಗಿಲ್ಲ. ವಿದೇಶೀ ಪ್ರವಾಸಿಗರನ್ನು ಲಕ್ಷ್ಯದಲ್ಲಿಟ್ಟುಕೊಂಡು ಈಗಿನ ಹೊಸ ಪ್ರವಾಸಿ ನೀತಿಯಲ್ಲಿ ವಿದೇಶಗಳಿಂದ ಆಮದುಮಾಡಿಕೊಳ್ಳುವ ಮದ್ಯದ ಮೇಲಿನ ಸುಂಕವನ್ನು ಶೇ. ೬೬ರಿಂದ ಶೇ. ೨೫ಕ್ಕೆ ಇಳಿಸಿರುವುದು ಅವರನ್ನು ಆಕರ್ಷಿಸುವ ಸಲುವಾಗಿಯೇ ಎಂಬುದು ತಿಳಿಯುತ್ತದೆ. ಪ್ರವಾಸಿ ಅಭಿವೃದ್ಧಿ ಯೋಜನೆಗಳು ಘೋಷಣೆಯಾಗಿ ಕಾಗದದಲ್ಲಿ ಮಾತ್ರ ಉಳಿಯಬಾರದು, ಅವು ಕಾರ್ಯರೂಪಕ್ಕೆ ಬರಬೇಕು. ಆಗ ಸರಕಾರದ ಉದ್ದೇಶ ಪೂರೈಸಿದಂತಾಗುತ್ತದೆ.

## ರಾಜ್ಯದ ಹೊಸ ಪ್ರವಾಸೋದ್ಯಮ ನೀತಿ

ನಗರದಲ್ಲಿ ನಡೆದ ಪ್ರವಾಸೋದ್ಯಮದಲ್ಲಿ ಖಾಸಗಿ ಮತ್ತು ಸಾರ್ವಜನಿಕರ ಪಾಲುದಾರಿಕೆಗೆ (ಕನೆಕ್ಟ್) ಸಂಬಂಧಿಸಿದ ಸಮಾವೇಶದಲ್ಲಿ ೨೦೦೨-೦೭ರ ಅವಧಿಗೆ ರಾಜ್ಯದ ಹೊಸ ಪ್ರವಾಸೋದ್ಯಮ ನೀತಿಯನ್ನು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಪ್ರಕಟಿಸಿದರು.

ಹೊಸ ನೀತಿಯ ಪ್ರಕಾರ ಮೊದಲ ಹಂತದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ನಂದಿ ಬೆಟ್ಟ ಬೃಂದಾವನ ಉದ್ಯಾನ. ಕೆಮ್ಮಣ್ಣು ಗುಂಡಿ, ಜೋಗ ಜಲಪಾತ. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ವಿಜಾಪುರ. ಹಂಪಿ, ಕಾರವಾರ, ಗೋಕರ್ಣ, ಮೈಸೂರು, ಹೆಸರಘಟ್ಟ, ಆಗುಂಬೆ ಮತ್ತು ನೆಹರು ಲೋಕಗಳಲ್ಲಿ ರಸ್ತೆ, ಶೌಚಾಲಯ, ಕುಡಿಯುವ ನೀರು ಪೂರೈಕೆ ಮೊದಲಾದ ಮೂಲ ಸೌಲಭ್ಯಗಳ ಅಭಿವೃದ್ಧಿ ಯೋಜನೆ ಕೈಗೆತ್ತಿಕೊಳ್ಳಲಾಗುತ್ತದೆ.

ಹಂಪಿ, ಮೈಸೂರು, ಹಾಸನ, ವಿಜಾಪುರ, ಶಿವಮೊಗ್ಗ, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ, ಬೀದರ್, ಬಳ್ಳಾರಿ, ಕಲ್ಬುರ್ಗಿ, ರಾಯಚೂರು, ಮಂಗಳೂರು, ಕಾರವಾರ ಮತ್ತು ಕೊಡಗು ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣ ಸ್ಥಾಪನೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ. ಸಾಧ್ಯವಿರುವ ಕಡೆಗಳಲ್ಲಿ ಹೆಲಿಪ್ಯಾಡ್ ನಿರ್ಮಾಣ ಮತ್ತಿತರ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗುತ್ತದೆ. ಪ್ರಮುಖ ಪ್ರವಾಸಿ ತಾಣಗಳ ನಡುವೆ ಸಂಪರ್ಕ

---

೧. ನಂಟರು, ಪು. ೧೨೪.

೨. ಜೀವನಲೀಲೆ (ಅನು. ಸಾಲಿ ರಾಮಚಂದ್ರರಾಯ), ಸಾಹಿತ್ಯ ಅಕಾದೆಮಿ, ನವದೆಹಲಿ

ಕಲ್ಪಿಸುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಸುಧಾರಣೆಯನ್ನು ಆದ್ಯತೆ ಮೇಲ ಕೈಗೊಳ್ಳಲಾಗುತ್ತದೆ ಎಂದು ಪ್ರಕಟಿಸಲಾಗಿದೆ.

ಪ್ರವಾಸೋದ್ಯಮದಲ್ಲಿ ಖಾಸಗಿ ಸಹಭಾಗಿತ್ತುವನ್ನು ಉತ್ತೇಜಿಸಲು ಅನೇಕ ರಿಯಾಯಿತುಗಳನ್ನು ನೀಡಲಾಗಿದೆ. ವಿಮಾನಯಾನ ಇಂದನ ತೆರಿಗೆಯನ್ನು ಶೇ ೪ಕೆ, ಇಳಿಸುವುದು. ಮೂರು ವರ್ಷಗಳವರೆಗೆ ಖಾಸಗಿ ವಿಮಾನಯಾನದ ಶೇ ೫೦ರಷ್ಟು ಟಿಕೆಟ್‌ಗಳನ್ನು ಸರ್ಕಾರವೇ ಖರೀದಿಸುವುದು ಅವುಗಳಲ್ಲಿ ಸೇರಿದೆ.

ಪ್ರವಾಸಿ ತಾಣಗಳಲ್ಲಿ ಖಾಸಗಿ ಸಂಸ್ಥೆಗಳು ಸರ್ಕಾರಿ ಜಮೀನನ್ನು ಖರೀದಿಸಲು ಮುಂದಾದರೆ ಮಾರುಕಟ್ಟೆ ದರದ ಶೇ. ೫೦ರಷ್ಟು ರಿಯಾಯಿತಿಯಲ್ಲಿ ಅದನ್ನು ಒದಗಿಸಲಾಗುತ್ತದೆ. ರಾಜ್ಯ ಕೈಗಾರಿಕಾ ನೀತಿಯಲ್ಲಿ (೨೦೦೨-೦೭) ಘೋಷಿಸಲಾಗಿರುವ ಎಲ್ಲಾ ವಿನಾಯಿತಿಗಳನ್ನು ಪ್ರವಾಸೋದ್ಯಮದಲ್ಲಿ ಖಾಸಗಿ ಬಂಡವಾಳ ಹೂಡಿಕೆದಾರರಿಗೂ ವಿಸ್ತರಿಸಲಾಗುತ್ತದೆ. ವಸತಿಗೃಹದ ಬಾಡಿಗೆ ೪೦೦ ರೂಪಾಯಿಗಿಂತ ಜಾಸ್ತಿ ಇದ್ದರೆ ಮಾತ್ರ ಐಷಾರಾಮಿ ತೆರಿಗೆ ವಿಧಿಸಲಾಗುತ್ತದೆ. ಒಟ್ಟು ಸಂಗ್ರಹಿತ ಮೊತ್ತಕ್ಕೆ ತೆರಿಗೆ ವಿಧಿಸುವುದರ ಜತೆಗೆ ಶೇ. ೧೦ ರಷ್ಟು ರಿಯಾಯಿತಿ ನೀಡಲಾಗುತ್ತದೆ ಎಂದು ಘೋಷಿಸಲಾಗಿದೆ. ೫೦ ಕೋಟಿ ರೂಪಾಯಿಗಿಂತ ಕಡಿಮೆ ಬಂಡವಾಳ ಹೂಡಿಕೆಗೆ ಶೇ ೫೦ರಷ್ಟು ಮತ್ತು ೫೦ ಕೋಟಿಗಿಂತ ಹೆಚ್ಚಿನ ಹೂಡಿಕೆಗೆ ಮುದ್ರಾಂಕ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡುವುದೂ ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಸೇರಿದೆ.

**ಮದ್ಯ ಅಗ್ಗ** : ಐಎಂಎಫ್ ಎಲ್‌ಮದ್ಯದ ಮೇಲಿನ ಹೆಚ್ಚುವರಿ ತೆರಿಗೆಯನ್ನು ಶೇ. ೬೬ ರಿಂದ ಶೇ. ೨೫ಕ್ಕೆ ಇಳಿಸುವುದಾಗಿ ಪ್ರವಾಸೋದ್ಯಮ ನೀತಿಯಲ್ಲಿ ಪ್ರಕಟಿಸಲಾಗಿದೆ. ನೋಂದಣಿ ಶುಲ್ಕವನ್ನು ಒಂದು ಸಾವಿರ ರೂಪಾಯಿಗೆ ಕೇವಲ ಒಂದು ರೂಪಾಯಿ ನಿಗದಿಪಡಿಸಲಾಗುವುದು. ಪರಿವರ್ತನಾಶುಲ್ಕ ರದ್ದುಪಡಿಸಲಾಗುವುದು. ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಮೂರು ವರ್ಷಗಳ ಅವಧಿಗೆ ಪ್ರವೇಶ ತೆರಿಗೆಯಲ್ಲಿ ರಿಯಾಯಿತಿ ನೀಡಲಾಗುವುದು. ಮೊದಲ ಮೂರು ವರ್ಷ ಮನರಂಜನಾ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಪಡಿಸಲಾಗುವುದು. ಮತ್ತು ನಂತರದ ಎರಡು ವರ್ಷ- ಐ-ಮ್ಯಾಕ್ಸ್ ಥಿಯೇಟರ್‌ಗಳಿಗೆ ಶೇ. ೭೫ ರಷ್ಟು ರಿಯಾಯಿತಿ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

ಗಾಲಿ ಮೇಲೆ ಅರಮನೆ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ರಾತ್ರಿ ಸಫಾರಿಗೆ ಅವಕಾಶ ಕಲ್ಪಿಸುವುದು, ಉತ್ತರ ಕನ್ನಡದಲ್ಲಿ ಕರಾವಳಿ ವೃತ್ತ ನಿರ್ಮಾಣ, ಬದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳ ಅಭಿವೃದ್ಧಿ, ಖಾಸಗಿ ಸಹಭಾಗಿತ್ವದ

ಮೂಲಕ ಬೃಂದಾವನ ಉದ್ಯಾನದಲ್ಲಿ ಜಾಗತಿಕ ಮಟ್ಟದ ಸೌಲಭ್ಯ ಒದಗಿಸುವುದು, ಜೋಗ ಜಲಪಾತದ ಸಮಗ್ರ ಅಭಿವೃದ್ಧಿ, ಐತಿಹಾಸಿಕ ಸ್ಮಾರಕಗಳನ್ನು ಹೊಂದಿರುವ ಪ್ರದೇಶಗಳ ಸುಧಾರಣೆ. ಖಾಸಗಿಯವರಿಂದ ಸರ್ಕಾರಿ ವಸತಿ ಗೃಹಗಳ ನಿರ್ವಹಣೆ ಕೂಡ ಹೊಸ ನೀತಿಯಲ್ಲಿ ಸೇರಿವೆ.

ಬೆಂಗಳೂರನ್ನು ಪ್ರಮುಖ ಪ್ರವಾಸಿ ತಾಣವಾಗಿ ರೂಪಿಸುವುದೂ ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಸೇರಿದೆ.

ಖಾಸಗಿ ಸಹಭಾಗಿತ್ವದಲ್ಲಿ ನಂದಿಬೆಟ್ಟದ ಸುಧಾರಣೆ ಹಾಗೂ ಅಲಸೂರು, ಮಡಿವಾಳ, ಬೆಳ್ಳಂದೂರು ಮತ್ತು ಸ್ಯಾಂಕಿ ಕೆರೆಗಳಲ್ಲಿ ದೋಣಿ ವಿಹಾರ ನಡೆಸಲು ಖಾಸಗಿಯವರಿಗೆ ಅವಕಾಶ ಕಲ್ಪಿಸುವುದು, ನಗರದ ಸೌಂದರ್ಯೀಕರಣಕ್ಕೆ ಎಲ್ಲೆಡ ಮರಗಳನ್ನು ಬೆಳೆಸುವುದು ಅದರಲ್ಲಿ ಸೇರಿದೆ.

ನಗರ ಹೊರವಲಯದಲ್ಲಿ ಮೋಟಾರ್ ರೇಸ್ ಟ್ರ್ಯಾಕ್ ನಿರ್ಮಾಣ, ಸಾಹಸ ಕ್ರೀಡೆಗಳಿಗೆ ಉತ್ತೇಜನ, ಗುಡಿ ಕೈಗಾರಿಕೆ ಮಾರುಕಟ್ಟೆಗಳ ಸ್ಥಾಪನೆ, ಹಳೆಯ ಕಟ್ಟಡಗಳ ರಕ್ಷಣೆ ಸಹ ಅದರಲ್ಲಿ ಸೇರಿದೆ.

ಹೊಸ ಪ್ರವಾಸೋದ್ಯಮ ನೀತಿ ಬಿಡುಗಡೆ ಮಾಡಿ ಮಾತನಾಡಿದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ರಾಜ್ಯದ ಅಭಿವೃದ್ಧಿಯಲ್ಲಿ ಪ್ರವಾಸೋದ್ಯಮ ಮುಖ್ಯ ಪಾತ್ರ ವಹಿಸುತ್ತದೆ. ಪ್ರವಾಸೋದ್ಯಮದ ಅಭಿವೃದ್ಧಿಗೆ ಸಂಬಂಧಿಸಿ ಹಿಂದೆ ಹಲವಾರು ಅವಕಾಶಗಳನ್ನು ಕೈ ಚೆಲ್ಲಿದ್ದೇವೆ. ಹೀಗಾಗಿ ಈಗ ದಿಟ್ಟ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಮೂಲ ಸೌಲಭ್ಯಗಳ ಸುಧಾರಣೆ ಆಗದೆ ಪ್ರವಾಸೋದ್ಯಮದ ಬೆಳವಣಿಗೆ ಆಗದು. ಆದ್ದರಿಂದ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ರಾಜ್ಯ ಸರಕಾರ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಅನೇಕ ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಯ ಮೊದಲ ಹಂತವಾಗಿ ಗೋಲಗುಂಬಜ್ ಸೇರಿದಂತೆ ೨೫ ಸ್ಥಳಗಳಲ್ಲಿ ತಂಗುದಾಣ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಆ ಪೈಕಿ ೧೫ ಕಡೆಗಳಲ್ಲಿ ನಿರ್ಮಾಣ ಪೂರ್ಣಗೊಂಡಿದೆ.

---

೧. ದೊಡ್ಡೇರಿ ವೆಂಕಟಗಿರಿರಾವ್; ಏಕಾಕಿ ಪ್ರವಾಸಿ, ಮುನ್ನುಡಿ, ಪು. vi.

ಶಿವನಸಮುದ್ರ ಸೇರಿದಂತೆ ನಾಲ್ಕು ಕಡೆಗಳಲ್ಲಿ ರಸ್ತೆ ಬದಿಯ ತಂಗುದಾಣಗಳನ್ನು ನಿರ್ಮಿಸಲಾಗಿದೆ. ಧಾರವಾಡ, ಬೀದರ್, ಶಿವಮೊಗ್ಗ ಮತ್ತು ಹಾಸನಗಳಲ್ಲಿ ಪ್ರವಾಸ ಮಾಹಿತಿ ಕೇಂದ್ರಗಳನ್ನು ತೆರೆಯಲಾಗಿದೆ.

ಮಲ್ಪೆ ಮತ್ತು ಪಣಂಬೂರು ಕಡಲತೀರಗಳಲ್ಲಿ ಧ್ವನಿ ಬೆಳಕಿನ ಕಾರ್ಯಕ್ರಮಗಳು ಸದ್ಯದಲ್ಲಿಯೇ ಆರಂಭವಾಗಲಿವೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ರಾತ್ರಿ ಸಫಾರಿಗೆ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ.

ರಮಣೀಯ ತಾಣಗಳಲ್ಲಿ ರಸ್ತೆ, ಕುಡಿಯುವ ನೀರು. ತಂಗುದಾಣ ಮೊದಲಾದ ಮೂಲ ಸೌಕರ್ಯಗಳನ್ನು ಉತ್ತಮಪಡಿಸಲು ಸರ್ಕಾರ ೧೨೫ ಕೋಟಿ ರೂಪಾಯಿಗಳ ಯೋಜನೆ ರೂಪಿಸಿದೆ.

ಪ್ರವಾಸೋದ್ಯಮ ಬೆಳವಣಿಗೆಗೆ ಸಂಬಂಧಿಸಿ ದಂತೆ ಯೋಜನೆಗಳ ಮಂಜೂರಾತಿ ಮತ್ತಿತರ ವಿಚಾರಗಳಲ್ಲಿ ವಿಳಂಬ ಸಲ್ಲದು ಎಂದು ಇಲಾಖೆಗಳಿಗೆ ತಾಕೀತು ಮಾಡಲಾಗಿದೆ. ಪ್ರವಾಸೋದ್ಯಮ, ಅರಣ್ಯ, ಲೋಕೋಪಯೋಗಿ ಮೊದಲಾದ ಇಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂಬ ಆದೇಶ. ಹೊರಡಿಸಿದೆ. ಸರಕಾರ ಈಗ ಹಂಪೆಗೆ ಲಘು ವಿಮಾನ ಮತ್ತು ವಿಶ್ವದರ್ಜೆಯ ಸೌಕರ್ಯ ಒದಗಿಸುವ ನೀತಿ ರೂಪಿಸಿದೆ.

**ರಾಜ್ಯ ಸರಕಾರವು ಐದುವರ್ಷಗಳ ಅವಧಿಗಾಗಿ (೨೦೦೨-೦೭ ಪ್ರಕಟಿಸಿರುವ ಹೊಸ ಪ್ರವಾಸೋದ್ಯಮ ನೀತಿಯ ಮುಖ್ಯಾಂಶಗಳು)**

೧. ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ೧೨೫ ಕೋಟಿ ರೂಪಾಯಿ ಯೋಜನೆ.

೨. ಬದಾಮಿ, ಐಹೊಳೆ, ಪಟ್ಟದಕಲ್ಲೂ ಅಭಿವೃದ್ಧಿಗೆ ಆದ್ಯತೆ. ಉತ್ತರ ಕನ್ನಡದಲ್ಲಿ ಕರಾವಳಿ ವೃತ್ತ ನಿರ್ಮಾಣ.

೩. ಬನ್ನೇರುಘಟ್ಟರಾಷ್ಟ್ರೀಯ ಉದ್ಯಾನದಲ್ಲಿ ರಾತ್ರಿ ಸಫಾರಿಗೆ ಬೃಂದಾವನ ಉದ್ಯಾನ ಮತ್ತು ನಂದಿಬೆಟ್ಟಗಳ ಅಭಿವೃದ್ಧಿ.

೪. ಕೈಗಾರಿಕಾ ನೀತಿಯಲ್ಲಿ ಘೋಷಿಸಲಾಗಿರುವ ರಿಯಾಯಿತಿಗಳು. ಪ್ರವಾಸೋದ್ಯಮದಲ್ಲಿ ಹೂಡಿಕೆದಾರರಿಗೂ ಅವಕಾಶ ೫೦ ಕೋಟಿ ರೂಪಾಯಿಗಿಂತ ಹೆಚ್ಚಿನ ಹೂಡಿಕೆದಾರರಿಗೆ ಮುದ್ರಾಂಕಿತ ಶುಲ್ಕದಲ್ಲಿ ಸಂಪೂರ್ಣ ರಿಯಾಯಿತಿ.

೫. ಖಾಸಗಿ ವಿಮಾನಯಾನ ಸಂಸ್ಥೆಗಳಿಗೆ ಇಂಧನ ತೆರಿಗೆ ಶೇಕಡ ೪ಕ್ಕೆ ಇಳಿಕೆ.

# ಭಾಗ-೨

# ಕನ್ನಡದಲ್ಲಿ ಪ್ರವಾಸ ಸಾಹಿತ್ಯ

Travel in the younger sort, is a part of education
in the elder, a part of experience.

**-Francis Becon**

The art of using one's leisure intelligently
is a supreme sign of civilization.

**-Bertrand Russell**

"ಪಯಣವೆಂದರೆ ನನಗೆ ಪ್ರೀತಿಯ ವಿಷಯ. ನಾನು ಪಯಣಿಸಿದಂತೆ ನನ್ನ ಕನಸುಗಳೂ ವೃದ್ಧಿಂಗತವಾಗುತ್ತವೆ. ದೈನಂದಿನ ಜೀವನದಲ್ಲಿ ಕಳೆದುಕೊಂಡ ಸ್ವಾತಂತ್ರ್ಯ ಅಲ್ಲಿ ತಾನೇ ತಾನಾಗಿ ಮೆರೆಯುತ್ತದೆ."

**-ವಿ.ಕೃ. ಗೋಕಾಕ್** : ಪ್ರವಾಸ ಸಾಹಿತ್ಯ
(ಸಮಗ್ರ ವಿನಾಯಕ ವಾಙ್ಮಯ-೭), ಮುನ್ನುಡಿ.

**ನೋ**ಡುವ ಕಣ್ಣಿದ್ದರೆ, ಆನಂದಿಸುವ ಹೃದಯವಿದ್ದರೆ ಸೃಷ್ಟಿಯಲ್ಲಿ ಅಂತರ್ಗತವಾಗಿರುವ ಅದರ ಸೊಬಗು, ವಿಲಾಸ, ಲಾಲಿತ್ಯಗಳು ಕಣ್ಣಿಗೆ ಉಣಿಸುವ ವರ್ಣಮಯ ಚಿತ್ರ ಚಿತ್ತಾರಗಳ ರಮ್ಯ ನೋಟಗಳು ನಮ್ಮ ಬದುಕನ್ನು ರಸವತ್ತಾಗಿಸುತ್ತವೆ; ಸಾರ್ಥಕಗೊಳಿಸುತ್ತವೆ. ಹಾಗೆ ಅವಿಲ್ಲದಿದ್ದರೆ, ಸೃಷ್ಟಿಯ ಚೇತೋಹಾರಿಯಾದ, ವರ್ಣಮಯವಾದ ದೃಶ್ಯಗಳು ಬರಿಯ ನೋಟಗಳಾಗುತ್ತದೆ. ಅವುಗಳಿಂದ ಬದುಕು ಅರ್ಥವಂತಿಕೆಯನ್ನು ಪಡೆಯದೆ ದೈನಂದಿನ ನಮ್ಮ ಕಾರ್ಯ ಕಲಾಪಗಳಲ್ಲಿ ಅವು ಮರೆಯಾಗಿ ಹೋಗುತ್ತವೆ. ನಮ್ಮ ಮುಂದಿರುವ ವಿಸ್ಮಯ ಜಗತ್ತನ್ನು ಅರಿಯುವ ಪ್ರಯತ್ನದಲ್ಲಿ ನಾವು ತಿದ್ದಿದ ಕಣ್ಣು ಮನಗಳ ಮೂಲಕ ದರ್ಶಿಸಬೇಕು. ಆಗ ಆ ನಿಗೂಢ ಜಗತ್ತಿನ ಒಂದೊಂದೇ ಬಾಗಿಲು ತೆರೆಯುತ್ತಾ ಹೋಗುತ್ತದೆ. ತಿದ್ದಿದ ಕಣ್ಣು ಮತ್ತು ಮನಸ್ಸಿನಿಂದ ಸಹಜವಾಗಿ ನಮ್ಮ ಭಾವ ಕೋಶ ಗರಿಗೆದರುತ್ತದೆ, ಮನಸ್ಸು ಪ್ರಸನ್ನವಾಗುತ್ತದೆ, ಅರಿವು ವಿಶಾಲವಾಗುತ್ತಾ ಹೋಗುತ್ತದೆ.

'ದೇಶ ನೋಡು ಕೋಶ ಓದು' ಎಂಬ ಗಾದೆಯ ಮಾತೊಂದು ನಮ್ಮಲ್ಲಿ ಬಳಕೆಯಲ್ಲಿದೆ. ಸುತ್ತಾಡಿ ದೇಶ ನೋಡುವುದರಿಂದ, ನಮ್ಮ ಜ್ಞಾನ ಹೆಚ್ಚುತ್ತದೆಂಬುದು

ಅದರ ಅರ್ಥವಲ್ಲ. ಸುತ್ತಾಟದ ಅವಧಿಯಲ್ಲಿ ನಮ್ಮ ಇಂದ್ರಿಯಗಳು, ಭಾವಗಳು, ಸುತ್ತಣ ಪ್ರಪಂಚಕ್ಕೆ ಸ್ಪಂದಿಸಬೇಕು. ಕಣ್ಣು ಹರಿಬಿಟ್ಟ ಕಡೆ ಇಂದ್ರಿಯಗಳಷ್ಟೇ ಅಲ್ಲ, ಭಾವಗಳೂ ದಳಗಳ ಅರಳಬೇಕು. ಆಗ ಪ್ರಕೃತಿ ತನಗೆ ತಾನೇ ನಮ್ಮ ಇಂದ್ರಿಯ ಹಾಗೂ ಭಾವಗಳಿಗೆ ಸಮಾರಾಧನೆಯನ್ನು ಒದಗಿಸುತ್ತದೆ. ಈ ಸಮಾರಾಧನೆಯಲ್ಲಿ ಸಿಂಹಪಾಲು ಕಣ್ಣು ಮತ್ತು ಮನಗಳದ್ದು. ಪ್ರವಾಸವು ಬಹಳ ಮಂದಿ ಗ್ರಹಿಸಿರುವಂತೆ-ಖುಷಿಗಾಗಿ, ಮನರಂಜನೆಗಾಗಿ, ಯಾಂತ್ರಿಕ ಬದುಕಿನ ಜಡತ್ವದ ನಿವಾರಣೆಗಾಗಿ. ಈ ಲೌಕಿಕ ವಲಯವನ್ನು ನಮ್ಮ ಉದ್ದೇಶ ಮೀರಿ ನಿಲ್ಲಬೇಕು. ನಮ್ಮ ಪ್ರವಾಸ ಕೇವಲ ಖುಷಿಗಾಗಿಯಲ್ಲ, ತತ್ಕಾಲದ ಮನರಂಜನೆಗಾಗಿಯಲ್ಲ, ದುಡಿತದಿಂದಾದ ಜಡತ್ವದ ನಿವಾರಣೆಗಾಗಿಯಲ್ಲ. ಅದು ಅನುಭವ ಶೋಧನೆಯತ್ತ ನಡೆಸುವ ರಸಯಾತ್ರೆ. ಹೃದಯ ವಿಕಸನಕ್ಕೆ, ಹೃದಯ ಹೃದಯಗಳ ಗ್ರಹಿಕೆಗೆ- ಸಾಮೀಪ್ಯಕ್ಕೆ, ಸಂವಾದಕ್ಕೆ ಅಣಿಗೊಳಿಸುವ 'ವಿಹಾರ' ಹೃದಯ ವಿಹಾರ. ಗ್ರೇಸ್ಲಿ ಹೇಳುವಂತೆ "Our object in travelling should be not to gratify curiosity and seek mere temporary amusement. but to learn and to venerate to improve the understanding and the heart."

"ಇದ್ದ ಕಡೆಯೇ ಇದ್ದು, ಮಾಡಿದ ಕೆಲಸವನ್ನೇ ಮಾಡಿ, ನೋಡಿದ ನೋಟವನ್ನೇ ನೋಡಿ, ಆಡಿದ ಮಾತನ್ನೇ ಆಡುತ್ತಾ ಬದುಕು ಸಾಗಿಸುವಿಕೆ ಜೀವನವನ್ನು ನೀರಸಗೊಳಿಸುತ್ತದೆ. ಬಧುಕು ರಸಪೂರ್ಣವಾಗಬೇಕಾದರೆ ಹೊಸತು ಅದಕ್ಕೆ ಬೇಕು. ಪ್ರವಾಸ ನಿತ್ಯದ ಏಕತಾನದಿಂದ ಬಿಡುಗಡೆಗೊಳಿಸಿ ನವೀನತೆಯನ್ನು ಒದಗಿಸುತ್ತದೆ."[೧]

ತುಸಿರಾದ ನೆನಪುಗಳು, ಬರಿದಾಗದ ಅನುಭವಗಳು ನಮ್ಮ ಬದುಕಿನಲ್ಲಿ ಚೈತನ್ಯದ ರಸವಾಹಿನಿಗಳು. ಅವುಗಳು ಬಾಡಿದಾಗ, ಬತ್ತಿದಾಗ ನಮ್ಮ ಬದುಕು ನಿರ್ಜೀವವಾಗುತ್ತದೆ. ಬದುಕಿನ ತಿಳಿಗೊಳದಲ್ಲಿ ನೆನಪಿನ ಅಲೆಗಳು ಹರಡಿದಾಗ ಅವು ಜೀವಕ್ಕೊದಗಿಸುವ ಸುಖವನ್ನು, ಮುದವನ್ನು ಮಾತಿನಲ್ಲಿ ಸೆರೆಹಿಡಿಯಲಾಗದು. ಬದುಕಿನ ಮಜಲು ಮಜಲುಗಳಲ್ಲಿ ಜೀವ ಕಂಡುಂಡ ಸುಖವನ್ನೆಲ್ಲಾ ನೆನಪಿನಾಳದಲ್ಲಿ ಕೂಡಿಡಲಾಗದು. ಕಾಲಪುರುಷ ಬಹಳಷ್ಟನ್ನು ಅಳಿಸಿ ಕೆಲವನ್ನು ಮಾತ್ರ ಉಳಿಸಿ ಸಾಗುವನು. ನಿನ್ನೆಯ ಬದುಕಿನ ಮೆಲುಕು ನಾಳಿನ ಬದುಕಿಗೆ ಸ್ವಲ್ಪಮಟ್ಟಿಗೆ ದಾರಿ ತೋರಬಹುದು. ಹೀಗೆ, ಬದುಕು ನಿನ್ನೆಯೊಂದಿಗೆ ನಾಳೆಯನ್ನು ಬೆಸುಗೆಹಾಕುತ್ತದೆ. ಪ್ರಸನ್ನ ಸ್ಥಿತಿಯ ಮನಸ್ಸು ಅನುಭವಗಳನ್ನು ದಕ್ಕಿಸಿಕೊಡುತ್ತಿದೆ ಹಾಗೂ ಅವನ್ನು ಅಕ್ಷಯವಾಗಿಸುತ್ತಾ ಸಾಗುತ್ತದೆ.

---

೧. ಡಾ. ಡಿ.ಬಿ. ರಾಮಚಂದ್ರಾಚಾರ್ : ಮೂರು ವಾರ ಮೂರು ಕಡೆ, ಪು. ೮.

ಎಲ್ಲಿಯವರೆವಿಗೆ ನಮ್ಮ ಬದುಕಿನಲ್ಲಿ ಅನುಭವಗಳು ಅಕ್ಷಯವಾಗುವುದಿಲ್ಲವೊ ಅಲ್ಲಿಯವರೆವಿಗೆ ನಮ್ಮ ಬದುಕು ಸಾರವತ್ತಾಗುವುದಿಲ್ಲ; ಮನಸ್ಸು ವಿಕಾಸಗೊಳ್ಳುವುದಿಲ್ಲ; ಊರ್ಧ್ವಮುಖಿಯಾಗುವುದಿಲ್ಲ. ನಮ್ಮ ಅನುಭವಗಳೇ ನಮ್ಮನ್ನು ಕೈಹಿಡಿದು ನಡೆಸುವ ನೇಹಿಗರು. ಅದು ಜೀವನದಲ್ಲಿ ನಲಿವನ್ನೂ ಲವಲವಿಕೆಯನ್ನು ತಂದುಕೊಡುವ ಸಂಜೀವಿನಿ.

ಪ್ರವಾಸ ನಮ್ಮ ಅನುಭವದ ಕೋಶವನ್ನು ಹಿಗ್ಗಿಸಲು ಬಹು ಮುಖ್ಯವಾದ ಸಾಧನ. ನೋಡುವ, ಕೇಳುವ, ಗ್ರಹಿಸುವ ಮೂಲಕ ನಮ್ಮ ಸಂಚಾರವು ನಮ್ಮ ಅನುಭವಕ್ಕೊಂದು ವ್ಯಾಪ್ತಿಯನ್ನು, ಅರ್ಥವಂತಿಕೆಯನ್ನು, ಮೆರುಗನ್ನು ಕೊಡುತ್ತದೆ. ಪ್ರವಾಸದಿಂದ ಇಂದ್ರಿಯ ಹಾಗೂ ಭಾವಗಮ್ಯವಾದ ಸುಖವು ಅನುಭವಗಳ ಮೂಲಕ ದೊರೆಯುತ್ತದೆ. ದೇಹ-ಮನಸ್ಸು ಅರ್ಥಪೂರ್ಣವಾಗಿ ಎರಕಗೊಂಡಾಗಲೇ ಬದುಕು ಸಾರ್ಥಕವೆನ್ನಿಸುವುದು. ದೇಹ ಮತ್ತು ಮನಸ್ಸು ನಾನಾ ದೇಶಗಳ ಜನಗಳ, ಮನಗಳ, ನದಿ-ಕಾನುಗಳ, ನೆಲ- ಬಾನುಗಳ, ಇತಿಹಾಸ-ಕಲೆ-ಸಾಹಿತ್ಯ-ಸಂಸ್ಕೃತಿಗಳ ಜೊತೆಗೆ ಅರ್ಥಪೂರ್ಣವಾದ ಸಂಬಂಧ ಬೆಳೆಸಿದಾಗಲೇ ಅವುಗಳಿಗೆ ಒಂದು ಬಗೆಯ ಕಳೆ, ತೃಪ್ತಿ, ಗೆಲವು, ಲವಲವಿಕೆ ಪ್ರಾಪ್ತವಾಗುವುದು. "ನಮ್ಮಲ್ಲಿ ನಿಸರ್ಗ ಸೌಂದರ್ಯವನ್ನು ಸವಿಯುವುದಕ್ಕಾಗಿ, ಇತಿಹಾಸದ ಕಣ್ಣು ಬೆಳೆಸುವ ಸಲುವಾಗಿ ಪ್ರವಾಸ ಕೈಗೊಳ್ಳುವ ಸಂದರ್ಭ ಮತ್ತು ಮನೋವೃತ್ತಿ ವಿರಳ."[೧] ಕುವೆಂಪುರವರು ಹೇಳುವಂತೆ "ಪ್ರತ್ಯಕ್ಷಾನುಭವ ಇಲ್ಲವೇ ಅಪರೋಕ್ಷಾನುಭವಗಳಿಂದ ಮನಸ್ಸು ಗರಿಗೆದರುತ್ತದೆ. ಬದುಕಿಗೆ ಚೈತನ್ಯದ ನವವರ್ಷ ತುಂಬುತ್ತದೆ. ನಾವು ಹೊಸಬರಾಗುತ್ತೇವೆ. ಇದೇ ಜೀವಂತಿಕೆಯ ಲಕ್ಷಣ."

ವಿ.ಕೃ. ಗೋಕಾಕರು "ಪ್ರವಾಸ ಹಾಗೂ ಪ್ರವಾಸ ಸಾಹಿತ್ಯಗಳು ನನ್ನ ಬದುಕಿನಲ್ಲಿ ವಿಶೇಷ ಸ್ಥಾನವನ್ನು ಪಡೆದಿವೆ... ಬದುಕಿನ ಆಳ, ವೈಶಾಲ್ಯ ಹಾಗೂ ಉದ್ದಳತೆಗಳನ್ನು ಅಳೆಯಲೆಂದೇ ಪ್ರವಾಸ ಸಾಹಿತ್ಯವು ಹುಟ್ಟಿದೆ" ಎಂದು ಅದರ ಮಹತ್ವವನ್ನು ಕುರಿತು ಪ್ರಸ್ತಾಪಿಸುವರು.

ಒಂದು ದೇಶದ ಹಿರಿಮೆ ಅದರ ಸಂಸ್ಕೃತಿ ಕಲೆ-ಸಾಹಿತ್ಯಗಳನ್ನು ಆಧರಿಸಿರುತ್ತದೆ. ಇವುಗಳ ಪರಿಚಯ ನಮಗೆ ಆಯಾ ದೇಶಗಳ ಸಾಹಿತ್ಯ-ಇತಿಹಾಸಗಳಿಂದಾಗುತ್ತದೆ; ಗುಡಿ ಗುಂಡಾರಗಳಿಂದಾಗುತ್ತದೆ. ಒಂದು ದೇಶದ ಪ್ರಾಕೃತಿಕ ಸಂಪತ್ತು, ಜನರ ಆಚಾರ ವಿಚಾರಗಳು, ನಂಬಿಕೆಗಳು, ಸಂಪ್ರದಾಯಗಳು, ಬದುಕು-ಬವಣೆಗಳು, ಸ್ನೇಹ ಸೌಜನ್ಯಗಳು, ಇಷ್ಟಾನಿಷ್ಟಗಳು, ಜೀವನ ಮೌಲ್ಯಗಳು, ಕಲಾವಿದರುಗಳು ಹಾಗೂ

---

೧. ಪ್ರೊ. ಕು.ಶಿ. ಹರಿದಾಸ ಭಟ್ಟ: ಜಗದಗಲ, ಪು. ೭.

ಅವರ ಕಲಾ ಪ್ರತಿಭೆ -ಇವುಗಳ ನೇರ ಪರಿಚಯ ನಮಗಾಗುವುದು ಪ್ರವಾಸದಿಂದಲೇ. ಇವೆಲ್ಲವುಗಳ ತಿಳುವಳಿಕೆಯನ್ನು ಪ್ರವಾಸ ನಮಗೆ ಒದಗಿಸಿಕೊಡಬೇಕು. ಇವೆಲ್ಲವನ್ನೂ ಚಾಕ್ಷುಷ ರೂಪದಲ್ಲಿ ನಮ್ಮದಾಗಿಸಿ, ನಮ್ಮ ಜ್ಞಾನದ ಪರಿಧಿಯನ್ನುವಿಸ್ತರಿಸುವುದರಿಂದ ಪ್ರವಾಸವು ಪ್ರಪಂಚದಾದ್ಯಂತ ಒಂದು ಪ್ರಬಲ ಶಿಕ್ಷಣ ಮಾಧ್ಯಮವಾಗಿ ಅಂಗೀಕೃತವಾಗಿದೆ.

ಇಂಗ್ಲಿಷ್‌ನಲ್ಲಿ ಪ್ರವಾಸ ಸಾಹಿತ್ಯವನ್ನು ಟ್ರಾವೆಲೋಗ್ (Travelogue) ಅಥವಾ ಟ್ರಾವೆಲ್ ಲಿಟರೇಚರ್ (travel Literature) ಎಂದು ಕರೆಯಲಾಗಿದೆ. ಆದರೆ ಇದನ್ನು ಇಂಗ್ಲಿಷ್‌ನ ಯಾವುದೇ ಕೋಶಗಳೂ ವಿವರಿಸಿಲ್ಲ. ಸಾಹಿತ್ಯದ ಪರಿಭಾಷಾ ಶಬ್ದಗಳನ್ನು (Literary terms) ಕುರಿತಂತೆ ಜೋಸೆಫ್ ಷಿಪ್ಲಿ, ರೋಜರ್ ಫ್ಲಾವರ್ ಮತ್ತು ಜೆ.ಎ. ಸಡನ್ ಮತ್ತಿತರರು ಬರೆದ ಕೃತಿಗಳಲ್ಲಿ ಕೂಡ ಟ್ರಾವಲೋಗ್‌ನ ಸೂತ್ರ ವಿವರಣೆಗಳಿರದಿರುವುದು ಕುತೂಹಲಕರವಾದದ್ದು. ಅಲ್ಲೆಲ್ಲ ಪ್ರವಾಸ ಸಾಹಿತ್ಯವನ್ನು ಒಂದು ಗಂಭೀರವಾದ ಪ್ರಮುಖವಾದ ಸಾಹಿತ್ಯ ಪ್ರಕಾರ ಎಂದು ಭಾವಿಸಿದಂತಿಲ್ಲ. (ನೋಡಿ: ಡಾ. ಎಸ್.ಎಸ್. ತಾರಾನಾಥ, ಪ್ರವಾಸ ಸಾಹಿತ್ಯ, ಶಕ್ತಿ ಪ್ರಕಾಶನ, ಗೋಕುಲಂ ೩ನೇ ಹಂತ, ಮೈಸೂರು-೨, ೧೯೯೦)

ಇಂದು ನಮ್ಮಲ್ಲಿ ಪ್ರವಾಸವು ಶಿಕ್ಷಣ ವಿಷಯವಾಗಿ ಸ್ವೀಕೃತವಾಗುತ್ತಿದೆ. ಆದರೆ ನಮಗಿಂದು ಪ್ರವಾಸವು ಬೌದ್ಧಿಕ ಹಾಗೂ ಮಾನಸಿಕ ಶಿಕ್ಷಣಕ್ಕಾಗಿಯಲ್ಲ, ವಿಲಾಸಕ್ಕಾಗಿ ತತ್ಕಾಲೀನ ರಂಜನೆಗಾಗಿ, ಹೊತ್ತ ಹರಕೆಯ ಪೂರೈಕೆಗಾಗಿ-ಸತ್ತವರಿಗೆ ಮೋಕ್ಷ ಕಾಣಿಸಲಿಕ್ಕಾಗಿ. ನಮ್ಮಲ್ಲಿಂದು ಪ್ರವಾಸವು ಶೈಕ್ಷಣಿಕ ಮಹತ್ವವನ್ನು ಪಡೆಯದಿರುವುದಕ್ಕೆ ನಾವು ಉಸಿರಾಡುತ್ತಿರುವ ವಾತಾವರಣ, ನಮ್ಮ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆ ಕಾರಣವೆನ್ನಬಹುದು. ನಿತ್ಯವೂ ತನ್ನ ಹಾಗೂ ಕುಟುಂಬದ ಅಸ್ತಿತ್ವಕ್ಕಾಗಿ ಹೋರಾಟದ ಬದುಕನ್ನು ನಡೆಸುತ್ತಿರುವ ಶ್ರೀಸಾಮಾನ್ಯನಿಗೆ ತನ್ನದೇ ಆದ ವರ್ತುಲದಿಂದ ಹೊರಗೆ ದೃಷ್ಟಿ ಚಾಚಲು, ಮನಸ್ಸನ್ನು ಹರಿಯಬಿಡಲು ಸಮಯ-ಸಮಾಧಾನಗಳಾದರೂ ಎಲ್ಲಿದೆ? ನಿತ್ಯವೂ ಕೈ ಬಾಯಿಗಳ ನಡುವಣ ಅಂತರ ತುಂಬುವ ಸಮಸ್ಯೆ ಅವನಿಗೆ ಪ್ರಧಾನವಾಗಿರುವಾಗ ಕಣ್ಣು ಮತ್ತು ಮನಸ್ಸು ಪ್ರಸನ್ನ ಸ್ಥಿತಿಯಲ್ಲಿ ಸುತ್ತ ನೋಡುವುದಾದರೂ ಹೇಗೆ ಸಾಧ್ಯ? ಭಾರತೀಯನ ಆರ್ಥಿಕ ಸ್ಥಿತಿ ಸುಧಾರಿಸದ ಹೊರತು ನಮ್ಮ ಪಾಲಿಗೆ ಪ್ರವಾಸವು ಶೈಕ್ಷಣಿಕವಾಗುವುದು, ನಮ್ಮ ಬದುಕಿಗೆ ಅರ್ಥಪೂರ್ಣವಾದ ಮೈತ್ರಿಯನ್ನು ಬೆಸೆಯಿಸುವುದು ದೂರದ ಮಾತು. ಸದ್ಯದ ಪರಿಸ್ಥಿತಿಯಲ್ಲಿ 'ಪ್ರವಾಸ' ಎಂದರೆ ಧಾರ್ಮಿಕ ಕ್ಷೇತ್ರಗಳಿಗೆ ಯಾತ್ರೆ ಹೋಗುವುದು ಎನ್ನುವಷ್ಟರಮಟ್ಟಿಗೆ ಈ ಪದದ ವ್ಯಾಪ್ತಿ ಸಂಕುಚಿತವಾಗಿಬಿಟ್ಟಿದೆ. ನಮ್ಮ ಭೌತಿಕ ಬದುಕಿಗೆ ಮುಕ್ತಿ ಸಿಗಬೇಕಾದರೆ

ಕಾಶಿ-ಬದರಿ-ರಾಮೇಶ್ವರಗಳಿಗೆ ಯಾತ್ರೆ ಮಾಡಬೇಕು ಎನ್ನುವಷ್ಟರಮಟ್ಟಿಗೆ ನಮ್ಮ ಮನೋಭಾವ ಸೀಮಿತವಾಗಿಬಿಟ್ಟಿದೆ.

ನಮ್ಮಲ್ಲಿ ನಾಲ್ಕು ಗೋಡೆಗಳ ನಡುವೆ ಪಡೆಯುವ ಶಿಕ್ಷಣಕ್ಕಿಂತ ಹೊರಗಿನ ಬದುಕಿನಿಂದ ಪಡೆಯುವ ಶಿಕ್ಷಣ ದೊಡ್ಡದೆಂದು ನಂಬಿದವರು ಬಹಳ ಕಡಿಮೆ. ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರರಂತ ಸತ್ಯ ಸಂಚಾರಿಗಳಾಗಿ ಅನುಭವದ ಶೋಧನೆಗೆ ಮನತೆತ್ತು ನಡೆದ ಸಾಹಸಿಗಳು ತೀರಾ ವಿರಳ. ಕಾರಂತರು ಸಂಚಾರಿ ಪ್ರೇಮಿಗಳು. ಈ ಗುಣವನ್ನು ಕಂಡೇ ದ.ಬಾ.ಕು. ಕಾರಂತರನ್ನು 'ತಿರುಗಲ ತಿಪ್ಪ' ಎಂದದ್ದು. ಅವರು ತಮ್ಮ ಸುತ್ತಾಟದ ಹಂಬಲದಿಂದಾಗಿ ಕಾಲುನಡಿಗೆಯಲ್ಲಿಯೇ ಕರ್ನಾಟಕದ ಬಹುಭಾಗವನ್ನು ಹಾಗೂ ಭಾರತದ ಕೆಲವು ಭಾಗವನ್ನು ಸಂದರ್ಶಿಸಿರುವರು. ಅವರ 'ಅಬೂವಿನಿಂದ ಬರಾಮಾಕ್ಕೆ' ಹಾಗೂ 'ಹುಚ್ಚು ಮನಸ್ಸಿನ ಹತ್ತು ಮುಖ'ವೆಂಬ ಆತ್ಮಕಥೆ ಸುತ್ತಾಟದಿಂದ ಅವರ ಬದುಕು ಪಡೆದ ಶ್ರೀಮಂತ ಅನುಭವಗಳ ಪರಿಚಯವನ್ನು ಮಾಡಿಕೊಡುತ್ತವೆ. ಅವರು ಹೊಸ ಅನುಭವಗಳನ್ನು ಹುಡುಕಿಕೊಂಡು-ಸಾಲಮಾಡಿ-ವಿದೇಶಗಳನ್ನು ಸುತ್ತಿಬಂದ ಅಪರೂಪದ ವ್ಯಕ್ತಿ. 'ಅಪೂರ್ವ ಪಶ್ಚಿಮ'ವು ಅವರ ಯುರೋಪು ಪ್ರವಾಸದ ಅನುಭವಗಳನ್ನು ಹೇಳಿದರೆ 'ಪಾತಾಳಕ್ಕೆ ಪಯಣ'ವು ಅಮೆರಿಕ ಪ್ರವಾಸದ ಅನುಭವಗಳನ್ನು ಹೇಳಿದೆ. ಅವರ 'ಸ್ಮೃತಿಪಟಲದಿಂದ' ಸಂಪುಟಗಳು ಬದುಕನ್ನು ಪ್ರೀತಿಸುವ, ಅದನ್ನು ತೆರೆದ ಪುಸ್ತಕವಾಗಿ ವೈಜ್ಞಾನಿಕ ಮನೋಭಾವದಿಂದ ಅಭ್ಯಾಸ ಮಾಡುವ, ಪರಂಪರೆಯಿಂದ ಬಂದುದೆಲ್ಲವನ್ನೂ ಕಣ್ಣುಮುಚ್ಚಿ ಒಪ್ಪಿಕೊಳ್ಳದೆ ತನ್ನ ವಿವೇಚನೆಗೆ ಸರಿಯೆನ್ನಿಸಿದ್ದನ್ನು ಮಾತ್ರ ಸ್ವೀಕರಿಸುವ, ಸಾಹಸಿಯೊಬ್ಬನ ಆತ್ಮಕಥನವಾಗಿವೆ. ಇವುಗಳಲ್ಲಿಯೂ 'ಯಾತ್ರಿಕ' ಕಾರಂತರನ್ನು ನಾವು ಕಾಣುವೆವು. ಸುತ್ತಾಟದ ಅನುಭವಗಳಿಂದ ತಮ್ಮ ಭಾವಪ್ರಪಂಚವನ್ನು ಶ್ರೀಮಂತಗೊಳಿಸಿಕೊಂಡ ಮತ್ತೋರ್ವ ಕನ್ನಡಿಗರೆಂದರೆ ಗೊರೂರರು. ಅವರೇ ಒಂದೆಡೆ ಹೀಗೆ ಹೇಳಿಕೊಂಡಿರುವರು:

"ನನ್ನದು ಬಹಳ ಅಲೆಮಾರಿ ಸ್ವಭಾವ. ಯಾವ ಬಂಧನಕ್ಕೂ ಸಿಕ್ಕದೆ 'ಹರಕೆ ಪರದೇಶಿಯಂತೆ' ಗ್ರಾಮೈಕರಾತ್ರಿಯಾಗಿ, ಈ ರಾಷ್ಟ್ರದ ನೆಲ, ನೀರು, ಪರ್ವತ ಶ್ರೇಣಿ, ದೇವಾಲಯ, ವಿಶಾಲವಾದ ಅದ್ಭುತ ಬಯಲು, ಪ್ರಕೃತಿ ವೈಚಿತ್ರ್ಯಗಳನ್ನು ಅನುಭವಿಸುತ್ತ ಗುರುತು ಪರಿಚಯವಿಲ್ಲದ ಯಾವುದೋ ಕಡೆ ಕಂತೆ ಒಗೆಯಬೇಕೆಂಬುದು ನನ್ನ ಇಷ್ಟ. ಸಾಧ್ಯವಾದಷ್ಟು ತಿರುಗಾಟವನ್ನು ನಾನು ಕಾಲುನಡಿಗೆ, ಗಾಡಿ, ಬೈಸಿಕಲ್ಲು, ಬಸ್ಸು, ಕಾರು, ರೈಲು, ವಿಮಾನಗಳಲ್ಲಿ ಸಹ ಈ ಮಹಾನ್ ರಾಷ್ಟ್ರದ ಮೂಲೆ ಮೂಲೆಯಲ್ಲಿ ತಿರುಗಿದುದುಂಟು..." (ಅಮೆರಿಕದಲ್ಲಿ ಗೊರೂರು ಪು. ೧)

## ಪ್ರವಾಸ ಸಾಹಿತ್ಯ ಸೃಜನಶೀಲ ಸಾಹಿತ್ಯ ಪ್ರಕಾರವೆ?

ಡಾ. ಎನ್.ಎಸ್. ತಾರಾನಾಥ್‌ರವರು 'ಪ್ರವಾಸ ಸಾಹಿತ್ಯ' ಎನ್ನುವ ಕಿರುಹೊತ್ತಗೆ ಬರೆದಿರುವರು (ಶಕ್ತಿ ಪ್ರಕಾಶನ, ಗೋಕುಲಂ ಮೂರನೇ ಹಂತ, ಮೈಸೂರು-೫೭೦೦೦೨, ೧೯೯೦). ಅದರಲ್ಲಿ ಅವರು "ನನ್ನ ದೃಷ್ಟಿಯಲ್ಲಿ ಪ್ರವಾಸ ಸಾಹಿತ್ಯ ಶುದ್ಧ ಸೃಜನಶೀಲ ಸಾಹಿತ್ಯ ಪ್ರಕಾರವಲ್ಲ..." ಎಂದಿರುವರು (ಅದೇ, ಪು. ೨೩). ಇದು ಅವರ ವೈಯಕ್ತಿಕ ಅಭಿಪ್ರಾಯ, ಅದನ್ನು ಒಪ್ಪಲಾಗದು. ಪ್ರವಾಸ ಸಾಹಿತ್ಯವು ಒಂದು ಸಾಹಿತ್ಯ ರೂಪ (literary form) ಎಂದು ಪರಿಗಣಿತವಾಗಿದೆ. ಈ ಸಾಹಿತ್ಯರೂಪಕ್ಕೆ ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಒಂದು ಮರ್ಯಾದಿತ ಸ್ಥಾನ ತಂದುಕೊಟ್ಟವರು ಕನ್ನಡದ ಸುಪ್ರಸಿದ್ಧ ಲೇಖಕರು. ಕನ್ನಡದಲ್ಲಿ ಬಂದಿರುವಷ್ಟು ಪ್ರವಾಸ ಸಾಹಿತ್ಯ ಬೇರಾವ ಭಾರತೀಯ ಭಾಷೆಯಲ್ಲೂ ಬಂದಿಲ್ಲವೆನ್ನುವುದು ಇದರ ಹಿರಿಮೆಗೆ ಸಾಕ್ಷಿ. ಕವಿ / ಕಾದಂಬರಿಕಾರ / ಕಥೆಗಾರ / ನಾಟಕಕಾರ ತನ್ನ ಅನುಭವಕ್ಕೆ ನಿಲುಕಿದ್ದನ್ನು ತನ್ನ ಸೃಜನ ಪ್ರತಿಭೆಯ ಮೂಲಕ ಶಾಬ್ದಿಕವಾಗಿ ಹೇಳುತ್ತಾನೆ. ಅನುಭವದ್ರವ್ಯ ಸಾಹಿತ್ಯಾಭಿವ್ಯಕ್ತಿ ಪಡೆದುಕೊಳ್ಳುವಾಗ ಅವರವರ ಬುದ್ಧಿಶಕ್ತಿ, ಸಾಮರ್ಥ್ಯಕ್ಕೆ ಅನುಗುಣವಾಗಿ ಕಲಾತ್ಮಕ ಸೌಂದರ್ಯವನ್ನು ಪಡೆದುಕೊಳ್ಳುತ್ತದೆ. ವರ್ಣನೆ, ವಸ್ತುವಿಶ್ಲೇಷಣೆ, ಸಾಮಾಜಿಕ ಅಧ್ಯಯನಗಳು ಒಂದು ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳುತ್ತದೆ. ಪ್ರವಾಸ ಸಾಹಿತ್ಯವು Narrative prose ನಲ್ಲಿದೆ. ಆದರೆ ವಿ.ಕೃ. ಗೋಕಾಕ್‌ರವರು ಪ್ರವಾಸ ಸಾಹಿತ್ಯವನ್ನು ಪದ್ಯದಲ್ಲೂ ರಚಿಸಿರುವರು. ಅವರು ಅಭಿಪ್ರಾಯಪಡುವಂತೆ "ಪ್ರವಾಸ ಸಾಹಿತ್ಯವು ಕಾವ್ಯವಾದಾಗ ಅದರಲ್ಲಿ ಆವೇಶ ತುಂಬಿ, ಭಾವ ಇಲ್ಲದೆ ದರ್ಶನದ ಪ್ರಾಧಾನ್ಯ ಅಲ್ಲಿ ಸಂಭವಿಸುವುದುಂಟು. ಪ್ರವಾಸ ಸಾಹಿತ್ಯವು ಗದ್ಯವಾದಾಗ ವ್ಯಕ್ತಿಗಳ ಸ್ನೇಹವರ್ತುಲ, ಕಂಡ ದೇಶದ ಸಾಮಾಜಿಕ ಹಾಗೂ ನೈತಿಕ ಪರಿಸ್ಥಿತಿ, ವ್ಯಕ್ತಿ-ವ್ಯಕ್ತಿಗಳ ಸಂದರ್ಶನದಲ್ಲಾದ ಚಮತ್ಕಾರ ಇಲ್ಲವೆ ಮೋಜಿನ ಪ್ರಸಂಗಗಳು -ಇವೆಲ್ಲದರ ಕಡೆಗೆ ನನ್ನ ಲಕ್ಷ್ಯ ಹರಿದುಹೋಗುತ್ತದೆ. ನನ್ನೊಳಗಿನ ಬುದ್ಧಿಜೀವಿ ಅಲ್ಲಿ ಬಂದು ತನ್ನ ದರ್ಶನಗಳನ್ನು ನೆನೆಸಿಕೊಂಡು ಆ ಅರ್ಥೀಕರಣದ ವಿಧಾನವನ್ನು ಈ ಉಳಿದ ಪ್ರಸಂಗಗಳಿಗೆ ಅನ್ವಯಿಸುತ್ತಾನೆ." ಕನ್ನಡದ ಕವಿ / ಕಾದಂಬರಿಕಾರ, ಕಥೆಗಾರ, ನಾಟಕಕಾರನೇ ಆಗಿರಲಿ ಅವನು ತಾನು ನೋಡಿದ ಪ್ರದೇಶವೊಂದರ ಪ್ರತ್ಯಕ್ಷಾನುಭವವನ್ನು ನಿರೂಪಿಸುವಾಗ- ಅವನ ಸೃಜನಶೀಲ ಪ್ರತಿಭೆ ಪ್ರವಾಸ ಸಾಹಿತ್ಯವೊಂದನ್ನು ಬರೆಯುವಾಗ- ಏಕೆ ಕ್ರಿಯಾತ್ಮಕವಾಗಿ ವ್ಯವಹರಿಸುವುದಿಲ್ಲ? ಕಾರಂತ, ಗೋಕಾಕ, ವಿ.ಸೀ., ದೇಜಗೌ, ಶಿವರುದ್ರಪ್ಪ, ಪ್ರಭುಶಂಕರ, ಎ.ಎನ್. ಮೂರ್ತಿರಾವ್, ಗೊರೂರು, ವ್ಯಾಸರಾಯ ಬಲ್ಲಾಳ, ನಾಗತಿಹಳ್ಳಿ ಚಂದ್ರಶೇಖರ,

ಕು.ಶಿ. ಹರಿದಾಸ ಭಟ್ಟ -ಇವರೇ ಮೊದಲಾದವರ ಪ್ರವಾಸ ಕಥನ ಓದಿದಾಗ ಅಲ್ಲಿ ಸೃಜನ ಪ್ರತಿಭೆ ವ್ಯಕ್ತವಾಗಿಲ್ಲ, ಪ್ರಾತ್ಯಕ್ಷಿಕ ಅನುಭವ ನಿವೇದನೆ ಮಾತ್ರ ಎನ್ನುವುದಾದರೆ ಅದಕ್ಕಿಂತ ಅಪಾಯಕಾರಿ ಹೇಳಿಕೆ ಮತ್ತೊಂದಿಲ್ಲ. ಡಾ. ಎನ್.ಎಸ್. ತಾರಾನಾಥ್-ರವರೇ ಒಂದೆಡೆ "ಅಮೆರಿಕೆಯ ಪ್ರ[illegible]ನಗಳಲ್ಲಿ ಪ್ರವಾಸಿಯ ತೆರೆದ ಕಣ್ಣುಗಳಿಗೆ ನೂರು ದೃಶ್ಯಗಳನ್ನು ಬಣ್ಣಿಸಲು ಅವಕಾ[illegible], [illegible]ರು ಪ್ರಸಂಗಗಳಲ್ಲಿ ಭಾಗವಹಿಸುವ ಸಂದರ್ಭಗಳೇರ್ಪಡುತ್ತವೆ; ಕುತೂಹಲದ ದೃಷ್ಟಿಯಿದ್ದರೆ ಸಾವಿರಾರು ಸಂಗತಿಗಳನ್ನು ಅರಿತು ಹೊರಚೆಲ್ಲಲು ಮಾಹಿತಿಗಳ ಗಣಿಯೇ ಇದೆ..." ಎನ್ನುವರು (ಪು. ೪೧-೪೨). ಕಾರಂತ, ಬಿಜಿಎಲ್. ಸ್ವಾಮಿ, ಕಾಮತ್, ಎ.ಎನ್. ಮೂರ್ತಿರಾವ್, ವ್ಯಾಸರಾಯ ಬಲ್ಲಾಳ, ಶಿವರುದ್ರಪ್ಪ, ನಾಗತಿಹಳ್ಳಿ ಚಂದ್ರಶೇಖರ ಅವರ ಕೃತಿಗಳಲ್ಲಿ ತೆರೆದುಕೊಳ್ಳುವ ತಾಜಾ ಅನುಭವ ಪ್ರಪಂಚ, ಸ್ವತಂತ್ರ ಚಿಂತನೆಗಳು, ಕಲೆಯ ಬಗೆಗಿನ ವಿಶ್ಲೇಷಣಾತ್ಮಕ ಬರವಣಿಗೆ, ತಾಳುವ ವೈಚಾರಿಕ ನಿಲುವುಗಳು ನಡೆಸುವ ಸಾಮಾಜಿಕ ವಿಶ್ಲೇಷಣೆಗಳು ಲೇಖಕರ ಅಪಾರವಾದ ಸೃಜನ ಪ್ರತಿಭೆಗೆ ಸಾಕ್ಷಿಯೊದಗಿಸುತ್ತವೆ. "ಪ್ರವಾಸ ಕಥನದಲ್ಲಿ ಎಲ್ಲೂ ಲೇಖಕನ ಕಲ್ಪನೆ ಅರಳುವುದಿಲ್ಲ (blossoming of imagination) ಅದರಲ್ಲಿ ಉದ್ದಕ್ಕೂ ಆತನ ವರ್ಣನ ಕಲೆ, ನಿರೂಪಣಾ ವೈಖರಿ (descriptive) ಮಾತ್ರ ಎದ್ದು ಕಾಣುತ್ತದೆ. ಸೃಜನಶೀಲತೆಗೆ ಕಿಂಚಿತ್ತೂ ಅವಕಾಶವಿಲ್ಲದ ಪ್ರಕಾರವನ್ನು ಹೇಗೆ ಸೃಜನಶೀಲ ಪ್ರಕಾರವೆಂದು ಕರೆಯುವುದು? ...ಪ್ರವಾಸ ಕಥನದಲ್ಲಿ ಅಪರಿಚಿತ ವ್ಯಕ್ತಿಯ ವೈಶಿಷ್ಟ್ಯವನ್ನೋ, ಕಂಡ ಪ್ರದೇಶವನ್ನೋ ಆಪ್ತವಾಗಿ ವರ್ಣಿಸುವ ಅವಕಾಶವಿರುತ್ತದೆ. ಹೊಸದಾಗಿ ಏನನ್ನಾದರೂ ಸೃಷ್ಟಿಸುವ ಅವಕಾಶವಿರುವುದಿಲ್ಲ..." ಎಂಬ ಲೇಖಕರ ಹೇಳಿಕೆ (ಅದೇ, ಪು. ೨೪) ವಾಸ್ತವಕ್ಕೆ ದೂರವಾದುದು; ಲೇಖಕರ ವ್ಯಾಪಕ ಅಧ್ಯಯನದ ಕೊರತೆಯಿಂದ ಹುಟ್ಟಿಕೊಂಡ ಅಪ್ರಬುದ್ಧ ಆಡಂಬರದ (Pompus) ಹೇಳಿಕೆ ಎನ್ನಬಹುದು. 'ಹೊಸದಾಗಿ ಏನನ್ನಾದರೂ ಸೃಷ್ಟಿಸುವ ಅವಕಾಶವಿರುವುದಿಲ್ಲ' ಎನ್ನುವ ಮಾತನ್ನು ಎಲ್ಲ ಸೃಜನ ಸಾಹಿತ್ಯ ಪ್ರಕಾರದ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ಅದರ ಔಚಿತ್ಯದ ಪ್ರಶ್ನೆ ಬರುತ್ತದೆ.

## ಪ್ರವಾಸ ಸಾಹಿತ್ಯದ ಮೇಲ್ಮೆ ಇರುವುದೆಲ್ಲಿ...?

"ಗದ್ಯವೇ ಆಗಲಿ, ಪದ್ಯವೇ ಆಗಲಿ ಅದು ನಾವು ಕಂಡ ದೇಶದ ಹಾಗೂ ಜನತೆಯ ಹೃದಯವನ್ನು ಬಿಚ್ಚಿ ತೋರಿಸಬೇಕು. ಇದ್ದಂತೆ ಅದನ್ನು ಜನರೆದುರಿಗೆ ತೆರೆದಿಡಬೇಕು. ಹೃದಯಕ್ಕೆ ಹೃದಯದ ಸಾಂಗತ್ಯವಿರದೆ ಪ್ರವಾಸ ಸಾಹಿತ್ಯವೆಲ್ಲಿಂದ ಬಂದೀತು? ಬರಿ ಜನತೆ ಅಲ್ಲ, ಅಲ್ಲಿಯ ನಿಸರ್ಗದ ರಮಣೀಯ ದೃಶ್ಯಗಳು, ಅಲ್ಲಿಯ ಸಾಮಾಜಿಕ ಪ್ರಗತಿಯನ್ನು ಅಳೆದು ತೋರಿಸುವ ಸಂಸ್ಥೆಗಳು, ಪರಂಪರೆಯನ್ನು

ರಕ್ಷಿಸಿಕೊಂಡು ಬಂದ ಅಲ್ಲಿಯ ದೇವಾಲಯಗಳು ಇಲ್ಲವೆ ಭವ್ಯ ಮಂದಿರಗಳು -ಇವೆಲ್ಲ ಓದುಗನ ಮನಸ್ಸಿನಲ್ಲಿ ಅಳಿಸಲಾಗದ ಚಿತ್ರದಂತೆ ಮೂಡಿರಬೇಕು. ಹೀಗಾದಾಗ ಪ್ರವಾಸ ಕೃತಿಗಳೂ ಸಾಹಿತ್ಯವಾಗುತ್ತವೆ. ಲೇಖಕನ ಅಂತಃಕರಣ ಈ ಎಲ್ಲ ದೃಶ್ಯಗಳ ಮಧ್ಯೆ ಹೊಳೆ ಹರಿದಂತೆ ಹೊರಹೊಮ್ಮಬೇಕು..." ಎಂದು ವಿ.ಕೃ. ಗೋಕಾಕರು ಅಭಿಪ್ರಾಯಪಡುವರು. (ಪ್ರವಾಸ ಸಾಹಿತ್ಯ (ಸಮಗ್ರ ವಿನಾಯಕ ವಾಙ್ಮಯ-೭), ಮುನ್ನುಡಿ.)

ಸೃಜನ ಸಾಹಿತ್ಯ ಪ್ರಕಾರದಲ್ಲೂ ಚಿಂತನಕ್ರಮ ಹಾಗೂ ಅಭಿವ್ಯಕ್ತಿ ವಿಧಾನದಲ್ಲಿ ಎಲ್ಲರೂ ಏಕಪ್ರಕಾರವಾಗಿರುವುದಿಲ್ಲ. ಎಲ್ಲರೂ ಹೊಸದಾಗಿ ಏನನ್ನಾದರೂ ಸೃಷ್ಟಿಸುವ ಅವಕಾಶಕ್ಕಾಗಿ ಕಾಯುವುದಿಲ್ಲ. ಬಿ.ಜಿ.ಎಲ್. ಸ್ವಾಮಿಯವರ ಹಸಿರುಹೊನ್ನು; ದೇನಾಶ್ರೀಯವರ 'ಕಾಲಾತೀತರ ದ್ವೀಪಗಳಲ್ಲಿ'; ವ್ಯಾಸರಾಯ ಬಲ್ಲಾಳರ 'ನಾನೊಬ್ಬ ಭಾರತೀಯ ಪ್ರವಾಸಿ'; ಡಾ. ಕೆ.ಜಿ. ಗುರುಮೂರ್ತಿಯವರ 'ಅಮೆರಿಕೆಯಲ್ಲಿ ಪ್ರವಾಸ'; ಎ.ಎನ್. ಮೂರ್ತಿರಾಯರ 'ಅಪರವಯಸ್ಕನ ಅಮೆರಿಕ ಯಾತ್ರೆ'; ಜಿ.ಎಸ್. ಶಿವರುದ್ರಪ್ಪನವರ 'ಗಂಗೆಯ ಶಿಖರಗಳಲ್ಲಿ'; ಶಮಂತರವರ 'ಕಾಲ್ನಡಿಗೆಯಲ್ಲಿ ಹಿಮಾಲಯಕ್ಕೆ ರಮ್ಯಸಾಹಸ ಭಾಗ ೧-೨', 'ಗಿರಿಸ್ನೇಹ'; ಪ್ರೊ. ಎಸ್. ರಾಮಸ್ವಾಮಿಯವರ 'ಇಂಗ್ಲೆಂಡ್‌ನಲ್ಲಿ ಅಲೆಮಾರಿ', 'ಫ್ರಾನ್ಸ್‌ನಲ್ಲಿ ಅಲೆಮಾರಿ'; ನಾಗತಿಹಳ್ಳಿ ಚಂದ್ರಶೇಖರ ಅವರ 'ಅಮೆರಿಕಾ! ಅಮೆರಿಕಾ!!' -ಇವೇ ಮೊದಲಾದ ಕೃತಿಗಳು ಪ್ರವಾಸಿ ಮಾಹಿತಿಗಳನ್ನಷ್ಟೇ ಒಳಗೊಳ್ಳುವುದಿಲ್ಲ, ತಾವು ಕಂಡ ಪ್ರದೇಶವನ್ನು ಆಪ್ತವಾಗಿ ವರ್ಣಿಸುವುದಿಲ್ಲ, ಅದರಾಚೆಗೆ ಪ್ರಕೃತಿ, ಮನುಷ್ಯ, ಸಮಾಜ, ಸಂಸ್ಕೃತಿ, ಕಲೆ, ಸಾಹಿತ್ಯ, ಜೀವನ ವಿಧಾನ -ಇವುಗಳ ಅಧ್ಯಯನವನ್ನು ಮಾಡುತ್ತವೆ. ಮನುಷ್ಯ ಸಂಬಂಧಗಳು ಹಾಗೂ ಅದರ ಸಂಕೀರ್ಣತೆ ಒಂದು ಕಥೆ ಕಾದಂಬರಿಯ ಮೂಲಕ ಸೃಜನಾತ್ಮಕ ಅಭಿವ್ಯಕ್ತಿ ಸಾಧ್ಯತೆಯನ್ನು ಕಂಡುಕೊಳ್ಳಬಹುದಾದರೆ, ಪ್ರವಾಸ ಕಥನಕ್ಕೆ ಏಕೆ ಅದು ಸಾಧ್ಯವಾಗುವುದಿಲ್ಲ. ಹಾಗಿದ್ದರೆ, ಪ್ರವಾಸ ಕಥನವನ್ನು ಪ್ರತ್ಯೇಕ ಸಾಹಿತ್ಯ ಪ್ರಕಾರವಾಗಿ ಗುರುತಿಸದೆ ಸೃಜನ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿ ಸೇರಿಸಬಹುದಿತ್ತಲ್ಲ ಎಂದು ಯಾರಾದರೂ ಪ್ರಶ್ನಿಸಬಹುದು. ಅದಕ್ಕೆ ಉತ್ತರವೂ ಇದೆ. ಪ್ರವಾಸ ಸಾಹಿತ್ಯಕ್ಕೆ ಒಂದು ನೂರಕ್ಕೂ ಹೆಚ್ಚಿನ ವರ್ಷಗಳ ಇತಿಹಾಸವಿದೆ. ಅದು ಇನ್ನಿತರ ಸೃಜನಶೀಲ ಸಾಹಿತ್ಯ ಪ್ರಕಾರಗಳಿಗಿಂತ ಭಿನ್ನವಾಗಿ ನಿಲ್ಲಲಿಕ್ಕೆ ಅದರ ವೈಲಕ್ಷಣ್ಯಗಳು ಕಾರಣವಾಗುತ್ತವೆ. ಪ್ರವಾಸ ಸಾಹಿತ್ಯಕ್ಕೂ ಸೃಜನ ಪ್ರತಿಭೆಯ ಸಂಸ್ಪರ್ಶ ಬೇಕು. ಪ್ರವಾಸ ಕಥನ ತನ್ನ ವೈಲಕ್ಷಣ್ಯಗಳನ್ನು ಸ್ಪಷ್ಟಪಡಿಸಿಕೊಳ್ಳುವಾಗ ಸೃಜನಪ್ರತಿಭೆಯಿಂದ ತನ್ನನ್ನು ಹೊರತಾಗಿಸಿ ಕೊಂಡಿಲ್ಲ ಎಂಬುದು ಲಕ್ಷಿಸಬೇಕಾದ ಮಾತು.

## ಕಾದಂಬರಿ ರೂಪದಲ್ಲಿ ಪ್ರವಾಸ ಸಾಹಿತ್ಯ

ಶಿವರಾಮ ಕಾರಂತರ 'ಅಳ ನಿರಾಳ' ನಿಸ್ಸಂಶಯವಾಗಿ ಸಾಮಾಜಿಕ ಕಾದಂಬರಿ, ಅಲ್ಲಿ ಗಟ್ಟಿಯಾದ ಒಂದು ಕಥೆಯಿದೆ. ಕಥೆಗೆ ಸಂಬಂಧಿಸಿದಂತೆ ಪಾತ್ರಗಳಿವೆ. ಕಾರಂತರು ಪ್ರವಾಸಪ್ರಿಯರಾದ್ದರಿಂದ ಕಾದಂಬರಿಗೆ ತಮ್ಮ ಪ್ರವಾಸ ಕಥನವನ್ನು ಹೊಂದಿಸುವರು. ಉತ್ತರ ಭಾರತ ಪ್ರವಾಸ ಕೈಗೊಂಡ ಯಾತ್ರಿಕರ ಭಿನ್ನ ವ್ಯಕ್ತಿತ್ವಗಳ ಸಮಾವೇಶ ಆ ಕಾದಂಬರಿಯಲ್ಲಾಗಿದೆ. ಕಾರಂತರ ಪ್ರತಿನಿಧಿಯಾಗಿ ಕಲಾವಿದ ದೇಸಾಯಿ ಆ ಕಾದಂಬರಿಯಲ್ಲಿ ತನ್ನ ವೈಚಾರಿಕ ಪ್ರಜ್ಞೆಯನ್ನು ಕಾದಂಬರಿಯ ಉದ್ದಕ್ಕೂ ಪ್ರಕಟಪಡಿಸುವನು. ಕನ್ನಡದಲ್ಲಿ ಕಾದಂಬರಿ ಮಾಧ್ಯಮದಲ್ಲಿ ಪ್ರವಾಸ ಸಾಹಿತ್ಯಕ್ಕೆ ಒಂದು ಅಪರೂಪದ ಕೊಡಿಗೆಯಾಗಿ ಕಾರಂತರು ತಮ್ಮ 'ಅಳ ನಿರಾಳ'ವನ್ನು ಕೊಟ್ಟಿರುವರು. ಇದು ಕಾದಂಬರಿರೂಪದ ಮೊದಲ ಕನ್ನಡ ಪ್ರವಾಸ ಸಾಹಿತ್ಯವಾಗಿದೆ.

ದೇಜಗೌರವರ 'ವಿಸ್ಮಯಗಳ ನಾಡಿನಲ್ಲಿ' ಅಮೆರಿಕಾದ ಪ್ರವಾಸ ಕಥನವಾದರೂ ಅನುಭವ ನಿರೂಪಣೆಯಲ್ಲಿ ದೇಜಗೌರವರು ಕಥನತಂತ್ರವನ್ನು ಅಂದರೆ ಕಾದಂಬರಿ ರೂಪದ ಕಥನತಂತ್ರವನ್ನು ಬಳಸಿರುವರು. "ವಸ್ತುಸ್ಥಿತಿಯ ನೈಜ ಚಿತ್ರಣಕ್ಕೆ ಉತ್ತಮ ಪುರುಷಕ್ಕಿಂತ ಪ್ರಥಮ ಪುರುಷದ ಬಳಕೆಯೇ ಮೇಲೆಂದು ಕಥನಕಾರ ಸಾಕ್ಷೀಭೂತವಾಗುಳಿಯುವುದೆ ಸರಿಯೆಂದು ನನಗನ್ನಿಸಿದ್ದರಿಂತ ಇಡೀ ಕಥೆಯನ್ನು ಪ್ರಥಮ ಪುರುಷಾರ್ಥದಲ್ಲಿ ಬೆಳೆಸಲಾಗಿದೆ. ಪ್ರಥಮ ಪುರುಷದಲ್ಲಿ ಕಥಿಸುವಾಗ ಕಥನಕಾರನಿಗೆ ಹೆಚ್ಚು ಸ್ವಾತಂತ್ರ್ಯವಿದೆಯೆಂದೇ ನನ್ನ ನಂಬಿಕೆ. ಇತರರ ಮಟ್ಟಿಗೆ ಈ ನಂಬಿಕೆ ಎಷ್ಟು ನಿಜವೋ ಕಾಣೆ. ಅದೇನೇ ಇರಲಿ, ಹಳೆಯ ಜಾಡನ್ನು ಬಿಟ್ಟು ವಿನೂತನ ವಿಧಾನವನ್ನವಲಂಬಿಸಿದ್ದರಿಂದ ನನಗಂತೂ ಹಳೆಯ ಸುಂಕು ಮುರಿದ ಸಮಾಧಾನವಿದೆ. ಇದು ಓದುಗರಿಗೆ ಈಷತ್ತಾದರೂ ಹಿಡಿಸುವ ಪಕ್ಷಕ್ಕೆ ನನಗೆ ತೃಪ್ತಿಯಾಗುತ್ತದೆ." ಎಂದು ಲೇಖಕರೇ 'ಪ್ರವೇಶ'ದಲ್ಲಿ ಹೇಳಿಕೊಂಡಿರುವರು. ಕಾರಂತರ 'ಅಳ ನಿರಾಳ'ದ ನಂತರ ಬಂದ ಎರಡನೆಯ ಕಾದಂಬರಿ ರೂಪದ ಪ್ರವಾಸಕಥನವಿದು. ಕನ್ನಡದಲ್ಲಿ ಕಾರಂತ ಹಾಗೂ ದೇಜಗೌ ತಮ್ಮ ಪ್ರವಾಸಕಥನಗಳಿಗೆ ಬೇರೊಂದು ವ್ಯಾಪ್ತಿಯನ್ನು ಪ್ರಯೋಗ ರೂಪದಲ್ಲಿ ದೊರಕಿಸಿ ಕೊಟ್ಟ ಮಹನೀಯರು ಎಂಬ ಯಶಸ್ಸು ಅವರಿಗೆ ಸೇರುತ್ತದೆ. ಇದು ಒಂದೇ ನಿಟ್ಟಿನಲ್ಲಿ, ಎಡೆಬಿಡದೆ ಬರೆದ ಗ್ರಂಥವಲ್ಲ. ಮೂರ್ನಾಲ್ಕು ವರ್ಷಗಳ ಅಂತರದಲ್ಲಿ ಬಿಟ್ಟು ಬಿಟ್ಟು ಬರೆದದ್ದು.

ದೇಜಗೌರವರು ಈ ಕಾದಂಬರಿಯ ತಂತ್ರವನ್ನು ಪರಿಮಿತಾರ್ಥದಲ್ಲಿ ಬಳಸಿರುವರೇ ಹೊರತು ಪಾತ್ರ ರಚಕನಾಗಿಯಲ್ಲ. ಈ ಕೃತಿಯಲ್ಲಿ ಘಟನೆಗಳು,

ಸನ್ನಿವೇಶಗಳು, ದೃಶ್ಯಗಳು, ವರ್ಣನೆಗಳು ಪ್ರಧಾನವೇ ಹೊರತು ಪಾತ್ರಗಳಲ್ಲ" ಎಂಬ ಮುನ್ಸೂಚನೆಯನ್ನು ಕೊಟ್ಟು ಅನಂತರ 'ಇಲ್ಲಿಯ ಘಟನೆಗಳು ಸನ್ನಿವೇಶ ವರ್ಣನೆಗಳಿಂದ ಪ್ರತ್ಯೇಕವೆನ್ನುವಂತೆಯೂ ಇಲ್ಲ" ಎನ್ನುವ ಎಚ್ಚರಿಕೆಯನ್ನೂ ಕೊಟ್ಟಿರುವರು (ಪು.V).

"ನಾನು ಕಂಡಿರುವ ಅಮೆರಿಕೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಮುಖಗಳನ್ನು ಮತ್ತು ಅಮೆರಿಕೆಯ ಪ್ರತಿಭೆಯನ್ನು ಸಂಕ್ಷೇಪವಾಗಿಯಾದರೂ ಆದಷ್ಟು ವ್ಯಾಪಕವಾಗಿ ಚಿತ್ರಿಸಬೇಕು, ಅಮೆರಿಕೆ ಇಡೀ ಜಗತ್ತಿಗೆ ಕಣ್ಣೆಲೆಯಾಗಿ, ಆದರ್ಶವಾಗಿ, ಭವಿಷ್ಯದ ಭರವಸೆಯಾಗಿ ವಿಕಾಸಗೊಳ್ಳಲು ಕಾರಣವಾದ ನಿಸರ್ಗ ಹಾಗೂ ಮನುಷ್ಯ ಶಕ್ತಿಗಳನ್ನು ಅಲ್ಪಪ್ರಮಾಣದಲ್ಲಾದರೂ ಕುಂಚಿಸಬೇಕು; ಆ ದೇಶದ ಸರ್ವತೋಮುಖವಾದ ಅಭ್ಯುದಯಕ್ಕೆ ನಿಸರ್ಗ ಸಂಪತ್ತು ಮಾತ್ರವೇ ಮುಖ್ಯವಲ್ಲ, ಅಲ್ಲಿಯ ಜನರ ದುಡಿಮೆ, ಸಾಹಸಮನೋಧರ್ಮ, ಆತ್ಮಪ್ರತ್ಯಯ, ಸ್ವಾತಂತ್ರ್ಯವೇ ಮೊದಲಾದ ತತ್ವಗಳನ್ನೊಳಗೊಂಡ ಅಮೆರಿಕಾ ಸಂಹಿತೆಯನ್ನು ನಮ್ಮ ಜನರಿಗೆ ಮನದಟ್ಟು ಮಾಡಿಕೊಡಬೇಕು; ಜಾತೀಯ ಮತೀಯ ಭಾವನೆಗಳು ಮನೆ ಅಥವಾ ಚರ್ಚುಗಳೊಳಗೆ ಬಂಧನಗೊಳ್ಳಬೇಕೇ ಹೊರತು, ಅವು ಹಾದಿಬೀದಿಗಳಲ್ಲಿ ಮೆರವಣಿಗೆ ಸಭೆ ಸಮಾರಂಭಗಳಲ್ಲಿ, ಸಂಸತ್ಸಭೆಗಳಲ್ಲಿ, ಸಾರ್ವಜನಿಕ ಕ್ಷೇತ್ರಗಳಲ್ಲಿ, ಚುನಾವಣೆಗಳಲ್ಲಿ, ರಾಜಕೀಯ, ಆರ್ಥಿಕಾದಿ ಲೌಕಿಕ ವ್ಯವಹಾರಗಳಲ್ಲಿ ವಿಜೃಂಭಿಸಬಾರದೆಂಬುದೇ ಆ ಜನರ ಆಶಯವೆಂಬುದನ್ನು ಇಂಡಿಯಾದ ನಾಯಕರರಿಯಬೇಕು; ವಿವೇಕಾನಂದೋಪ-ದೇಶದ ಬೆಳಕಿನಲ್ಲಿ ಭಾರತೀಯ ಸಂಹಿತೆಯನ್ನು ರೂಪಿಸಿಕೊಳ್ಳುವಲ್ಲಿ ಸ್ವಲ್ಪಮಟ್ಟಿಗಾದರೂ ಅಮೆರಿಕಾ ಸಂಹಿತೆಯ ಹಿನ್ನೆಲೆ ಯುವಪೀಳಿಗೆಗೆ ನೆರವಾಗಬಹುದೆ? ಇಂಥ ಕೆಲವು ಸಂಗತಿಗಳು ನೇರವಾಗಿಯೊ ಮರೆಯಾಗಿಯೊ ಇಲ್ಲಿ ಕಾಣಿಸಿಕೊಳ್ಳುತ್ತವೆ. ನನ್ನ ಅನುಭವಗಳಿಗೆ ಅಭಿವ್ಯಕ್ತಿ ನೀಡಬೇಕೆಂಬುದೇ ಈ ರಚನೆಯ ಉದ್ದೇಶ." ಎಂದು ದೇಜಗೌರವರು ತಮ್ಮ ಕೃತಿರಚನೆಯ ಹಿನ್ನೆಲೆಯನ್ನು ಸ್ಪಷ್ಟಪಡಿಸಿರುವರು.

ಇಲ್ಲಿ ಕಥನತಂತ್ರ ಬಳಕೆಯಾಗಿದೆಯೆಂಬುದು ವಾಸ್ತವವಾದರೂ ಪ್ರವಾಸಕಥನದಲ್ಲಿ ಬರುವ ಸವಿತಾದೇವಿ (ಸಾವಿತ್ರಮ್ಮ), ಧರ್ಮೇಂದ್ರರು (ದೇಜಗೌ) ಇಂದುಮತಿ (ಶಶಿಕಲಾ), ಚಂದ್ರಕಾಂತ (ಚಂದ್ರಶೇಖರ್) ಮಾನವೇಂದ್ರ ಕಮಲನಯನ ಅನಿಕೇತನ (ಶಶಿಕಲಾ-ಚಂದ್ರಶೇಖರ್‌ರವರ ಮಕ್ಕಳು) -ಎಂಬ ಹೆಸರುಗಳು ದೇಜಗೌರವರ ಕುಟುಂಬದ ಸದಸ್ಯರ ಹೆಸರುಗಳೇ ಎಂಬುದು ಬಲ್ಲವರಿಗೆ ತಿಳಿದುಬಿಡುತ್ತದೆ, ತಿಳಿಯದವರಿಗೆ ಕಾದಂಬರಿಯ ಪಾತ್ರಗಳ ಹೆಸರುಗಳಾಗಿಬಿಡುತ್ತವೆ. ದೇಜಗೌ ಅಮೇರಿಕದ ಬದುಕನ್ನು ಹಾಗೂ ಅಲ್ಲಿನ ವೈರುಧ್ಯಗಳನ್ನು ಗುರುತಿಸುವುದು, ಪ್ರವಾಸಿತಾಣಗಳಿಗೆ ಹೋಗಿಬರುವುದು ಮಗಳು-ಅಳಿಯ, ಮೊಮ್ಮಗನ ವ್ಯಾಜದಲ್ಲಿ;

ಮಹದೇವಪ್ಪ, ಕುಮಾರಸ್ವಾಮಿ, ಶ್ರೀನಾಥ, ಪ್ರಸಾದ್, ವೆಂಕಟರಾಂ, ಕೃಷ್ಣಪ್ರಸಾದ್ ಮೊದಲಾದ ಗೆಳೆಯರ ಜೊತೆಯಲ್ಲಿ, ದೇಜಗೌರವರು ತಮ್ಮ ಈ ಕೃತಿಯ 'ಪ್ರವೇಶ' ಭಾಗದಲ್ಲಿ ಪ್ರಸ್ತಾಪಿಸಿರುವ ಕೃತಿರಚನೋದ್ದೇಶವನ್ನು ಸ್ಪಷ್ಟವಾಗಿ ತಿಳಿಯಪಡಿಸಿರುವರು. ದೇಜಗೌ 'ವಿಸ್ಮಯಗಳ ನಾಡಿನಲ್ಲಿ' ಎಂದು ತಮ್ಮ ಅಮೇರಿಕಾ ಪ್ರವಾಸ ಕಥನಕ್ಕೆ ಶೀರ್ಷಿಕೆ ಕೊಟ್ಟಿರುವುದು ಸಾರ್ಥಕವಾಗಿದೆ. ಏಕೆಂದರೆ, ಇಲ್ಲಿ ದೇಜಗೌ ಅಮೇರಿಕಾವನ್ನು ಬೆಕ್ಕಸ ಬೆರಗಿನಿಂದ ನೋಡಿರುವರು. ಆ ನಿಚ್ಚೆರಗಿನ ಅನುಭವಗಳು ತಮ್ಮತನದಿಂದ ಓದುಗರನ್ನು ಆಕರ್ಷಿಸುತ್ತವೆ ಎನ್ನುವುದು ಇಲ್ಲಿ ಮುಖ್ಯ.

ಪ್ರವಾಸ ಕಥನವೆನ್ನುವುದು ವ್ಯಕ್ತಿನಿಷ್ಠ ಸಾಹಿತ್ಯ. ಅದು ಭಾವಗೀತೆಯಂತೆ, ಲಲಿತ ಪ್ರಬಂಧದಂತೆ ವೈಯಕ್ತಿಕ. ಎಲ್ಲ ಸಾಹಿತ್ಯ ಪ್ರಕಾರಗಳ ಮೂಲಸರಕು ಅನುಭವವಾಗಿರುವಂತೆ ಪ್ರವಾಸ ಸಾಹಿತ್ಯಕ್ಕೂ ಅದೇ ಆಗಿದೆ. ಪ್ರವಾಸಿಯ ಗ್ರಾಹ್ಯ ಶಕ್ತಿಯನ್ನವಲಂಬಿಸಿ ಅವನ ಅನುಭವ ಗಟ್ಟಿ ಇಲ್ಲವೆ ಟೊಳ್ಳಾಗಿರುತ್ತದೆ. 'ಗ್ರಹಿಕೆ' ಗುಣವಿಲ್ಲದ ಪ್ರವಾಸಿಯು ರೆಕ್ಕೆಗಳಿಲ್ಲದ ಪಕ್ಷಿಯಂತೆ. ಎಷ್ಟರಮಟ್ಟಿಗೆ ಅವನ ಕಣ್ಣು ಮನಗಳು ಭೂಮ ವ್ಯೋಮ ವಿಹಾರಿಯಾಗುತ್ತದೊ ಅಷ್ಟರ ಮಟ್ಟಿಗೆ ಅವನ ಅಂತರಂಗ ಕಲಿಯುತ್ತದೆ, ನಲಿಯುತ್ತದೆ. ಅವನ ಸಂವೇದನಾಶೀಲತೆಯನ್ನಾಧರಿಸಿ ಅವನ ಅನುಭವದ್ರವ್ಯ ಸಲ್ಲುತ್ತದೆ, ಸಲ್ಲದಿರುತ್ತದೆ. ಇಲ್ಲಿ ಅವನ ಸಮೃದ್ಧ ಅನುಭವರಾಶಿಯನ್ನು ಘನೀಕರಿಸುವ ಭಾಷೆ ಪ್ರಧಾನವಾಗುತ್ತದೆ. ತನ್ನ ಅನುಭವಗಳನ್ನು ನಿರೂಪಿಸುವಾಗ ಅವನ ನಿರೂಪಣಾ ಶೈಲಿ ಗಮನಾರ್ಹವಾಗುತ್ತದೆ. ಚಾಕ್ಷುಷರೂಪಿನ ಅನುಭವ ಪ್ರಪಂಚವನ್ನು ಬರಹಕ್ಕೆ ಪರಿವರ್ತಿಸುವಾಗ ಅವನ ಅನುಭವ ಪ್ರಪಂಚ ಎಷ್ಟೇ ಶ್ರೀಮಂತವಾಗಿದ್ದರೂ ಅದನ್ನು ಒಂದು ಶಿಸ್ತಿನ ಆಕರ್ಷಕವಾದ ಬರವಣಿಗೆಗೆ ಹೊಂದಿಸಲು ಅವನು ಬಹಳ ಹೆಣಗಬೇಕಾಗುತ್ತದೆ. ಇದರಲ್ಲಿ ಸಾಫಲ್ಯಕ್ಕಿಂತ ವೈಫಲ್ಯವೇ ಹೆಚ್ಚು. ಪ್ರವಾಸ ಕೈಗೊಡರೂ ತಮ್ಮ ಅನುಭವವನ್ನು ಬರಹಕ್ಕಿಳಿಸುವಾಗ ಎದುರಿಸುವ ಸಮಸ್ಯೆ ಭಾಷೆಯದು. ಕೆಲವರು ತಮ್ಮ ಅನುಭವವನ್ನು ನಿರೂಪಿಸಲು ಸಾಕಷ್ಟು ಪದಸಂಪತ್ತಿಯಿಲ್ಲದೆ ತೊಳಲಾಡಿದ್ದರೆ, ಮತ್ತೆ ಕೆಲವರು ಹೇಗೆ ಹೇಳಬೇಕೆಂಬುದು ತಿಳಿಯದೆ ಕಷ್ಟಪಟ್ಟಿದ್ದಾರೆ.

ಪ್ರವಾಸ (ದೇಶ, ವಿದೇಶ) ಕೈಗೊಂಡವರೆಲ್ಲ ತಮ್ಮ ಅನುಭವಗಳನ್ನು ಸಾಹಿತ್ಯವಾಗಿ ನಿರೂಪಿಸಿಲ್ಲ. ಅದು ಎಲ್ಲರಿಗೂ ಸಾಧ್ಯವಾಗದ ಕಾರ್ಯ. ದೇಶ ವಿದೇಶಗಳಲ್ಲಿ ಸಂಚಾರ ಕೈಗೊಂಡು ಬಂದ ಹೊಸದರಲ್ಲಿ ಕೆಲವರಿಗೆ ತಾವು ನೋಡಿದ್ದು, ಅನುಭವಿಸಿದ್ದು

---

೧. ನಂಟರು, ಪು. ೧೨೮

ಎಲ್ಲವನ್ನೂ ಬರಹ ರೂಪದಲ್ಲಿ ಹೇಳಿಕೊಳ್ಳುವ ಉತ್ಸಾಹ. ಮತ್ತೆ ಕೆಲವರಿಗೆ, ತಮ್ಮ ಪ್ರವಾಸಾನುಭವಗಳನ್ನು ಲೇಖನ ಇಲ್ಲವೆ ಗ್ರಂಥದ ಮೂಲಕ ತಿಳಿಯ ಹೇಳಬೇಕೆಂಬ ತವಕ. ಪ್ರತಿಯೋರ್ವ ಪ್ರವಾಸಿಯೂ ತಾನು ಅನುಭವಗಳನ್ನು ವಸ್ತುನಿಷ್ಠವಾಗಿ ಹೇಳುತ್ತಿರುವೆನೆಂದೂ, ಉಳಿದವರಿಗಿಂತ ತನ್ನದು ಪ್ರಮಾಣಿಕವಾಗಿರುವುದೆಂದೂ ಭಾವಿಸುವನು. ಆರು ಮಂದಿ ಕುರುಡರು ಆನೆಯೊಂದನ್ನು ವರ್ಣಿಸ ಹೊರಟಾಗ ಅವರವರ ಅನುಭವಕ್ಕೆ ಬಂದುದು ಅವರವರ ಮಟ್ಟಿಗೆ ಹೇಗೆ ಸತ್ಯವಾಗಿರುತ್ತದೊ ಹಾಗೆ ಪ್ರವಾಸಿಗರ ಅನುಭವ-ಅನಿಸಿಕೆಗಳು ಸತ್ಯವಾಗಿರುತ್ತವೆ. ಪ್ರವಾಸಿಯು ತನ್ನ ಸುತ್ತಾಟಗಳಲ್ಲಿ ತಾನು ಕಂಡದ್ದು, ಅನುಭವಿಸಿದ್ದು ಇವಿಷ್ಟನ್ನೇ ಪ್ರಧಾನವಾಗಿ ಹೇಳಿದ್ದರೆ ಅದು ಪ್ರವಾಸ ಸಾಹಿತ್ಯವಾಗುವುದಿಲ್ಲ. ರೈಲು, ಹಡಗು, ವಿಮಾನಯಾನಗಳಲ್ಲಿ ತಾವು ನೋಡಿದ್ದೆಲ್ಲವನ್ನು, ಸಂಚಾರ ಕಾಲದಲ್ಲಿ ತಾವು ಕಂಡದ್ದು-ಕೇಳಿದ್ದು-ಓದಿದ್ದು ಎಲ್ಲವನ್ನೂ ಅಂಕಿ-ಸಂಖ್ಯೆ, ಚಿತ್ರ ನಕಾಶೆಗಳ ಮೂಲಕ ವಿವರಿಸಿದರೂ ಅದು ಪ್ರವಾಸ ಸಾಹಿತ್ಯವಾಗುವುದಿಲ್ಲ, ಬರಿಯ 'ಗೈಡ್' ಆಗಿರುತ್ತದಷ್ಟೆ! ನಮ್ಮಲ್ಲಿ ಬಂದಿರುವ ಬಹಳಷ್ಟು ಪ್ರವಾಸ ಸಾಹಿತ್ಯ ಬರಿಯ 'ಗೈಡ್' ಗಳಾಗುವಷ್ಟಕ್ಕೆ ಸಾರ್ಥಕತೆ ಪಡೆದುಕೊಂಡಿವೆ. ಕೆಲವು ಕೃತಿಗಳು ಅತಿ ಭಾವುಕತೆಯಿಂದಾಗಿ ಬೆರಗು ಹಾಗೂ ಮುಗ್ಧನಿರೂಪಣೆಯನ್ನು ಹೊಂದಿವೆ. ಕೆಲವು ಕೃತಿಗಳು ಅತ್ಯುತ್ಸಾಹದ ಧೋರಣೆಯಿಂದಾಗಿ ಬೇಕಾದ್ದು ಬೇಡವಾದದ್ದು ಎಲ್ಲವನ್ನೂ ಸವಿವರವಾಗಿ ನಿರೂಪಿಸುವ ಧಾಟಿಯಲ್ಲಿವೆ. ಈ 'ಟೂರಿಸ್ಟ್' ಮನೋಭಾವದಿಂದ ಪ್ರವಾಸಿಯು ತನ್ನನ್ನು ಬೇರೆಯಾಗಿಸದ ಹೊರತು ಪ್ರವಾಸ ಕಥನವು ಸಾಹಿತ್ಯ ಸ್ಪರ್ಶವನ್ನು ಪಡೆದುಕೊಳ್ಳಲಾರದು. ನಮ್ಮ ಬಹುಪಾಲು ಪ್ರವಾಸಿಗರ ಅನುಭವ 'ಸಾಹಿತ್ಯ'ವಾಗದಿರುವುದಕ್ಕೆ ಇದೇ ಕಾರಣವಿರಬಹುದೇನೊ?

ಪ್ರೊ. ತೀ.ನಂ.ಶ್ರೀ. ಅವರು ಪ್ರವಾಸಿಗರಲ್ಲಿ ಎರಡು ಬಗೆಯನ್ನು ಗುರುತಿಸುವರು.[೧] "ಯಾವುದಾದರೊಂದು 'ಯಾತ್ರೆ'ಯನ್ನು -ಅದು ಧಾರ್ಮಿಕವಾಗಿರಬಹುದು ಲೌಕಿಕವಾಗಿರಬಹುದು, ಎರಡರ ಮಿಶ್ರಣವೂ ಆಗಿರಬಹುದು- ಮಾಡಬೇಕೆಂದು ಹಲವು ದಿನಗಳಿಗೆ ಮೊದಲೇ ನಿರ್ಧಾರ ಮಾಡಿ, ಅದಕ್ಕಾಗಿ ಹಣವನ್ನು ಹೇಗೋ ಶೇಖರಿಸಿ ತಮ್ಮ ಜೇಬಿನಿಂದಲೇ ವೆಚ್ಚ ಮಾಡಿ, ಕೃತಾರ್ಥರಾಗುವವರು ಒಂದು ಜಾತಿ. ಹೀಗೆ ಪ್ರವಾಸಮಾಡುವವರು ಶ್ರೀಮಂತರಾಗಿರಬೇಕು ಇಲ್ಲವೇ ಸಂಕಲ್ಪ ಸಾಧಕರಾಗಿರಬೇಕು. ಇವರು ಈ ಯಾತ್ರೆಗಳನ್ನು ವ್ರತದಂತೆ ಕೈಗೊಳ್ಳುತ್ತಾರೆ. ಉಗ್ರನಿಷ್ಠೆಯಿಂದ ನೆರವೇರಿಸುತ್ತಾರೆ. ಎರಡನೆಯ ಜಾತಿಯವರಲ್ಲಿ ಆ ಹಣವು ಇರುವುದಿಲ್ಲ, ಆ ಹಠವೂ ಇರುವುದಿಲ್ಲ. ಇವರು ತಾನಾಗಿಯೇ ಅವಕಾಶವೊದಗಿದಾಗ, ಪ್ರೇಕ್ಷಣ ಕುತೂಹಲಕ್ಕೂ

ತಕ್ಕ ಮಟ್ಟಿಗೆ ಆಸ್ಪದ ಕೊಡುವವರು. ತಾವು ಅವಲಂಬಿಸಿರುವ ವೃತ್ತಿಯ ಬಲದಿಂದ ಇಂಥವರು ಆಗಾಗ ದೇಶಪರ್ಯಟನ ಮಾಡಬೇಕಾಗಬಹುದು. ಒಂದು ಉಪನ್ಯಾಸ ಕೊಡುವುದಕ್ಕೆ, ಒಂದು ಸಭೆಯಲ್ಲಿ ಭಾಗವಹಿಸುವುದಕ್ಕೆ, ಒಂದು ಸಮ್ಮೇಳನವನ್ನು ವೀಕ್ಷಿಸುವುದಕ್ಕೆ ಅವರು ದೂರದ ಸ್ಥಳಗಳಿಗೆ ಹೋಗಬೇಕಾಗಬಹುದು. ಒಮ್ಮೊಮ್ಮೆ ಅದೃಷ್ಟ ಕಣ್ಣು ಬಿಟ್ಟು ನೋಡಿದ್ದರ ಫಲವಾಗಿ, ಹೆಚ್ಚಿನ ವಿದ್ಯಾರ್ಜನೆಗಾಗಿ, ವಿಷಯ ಸಂಗ್ರಹಕ್ಕಾಗಿ ಸರ್ಕಾರದ ಅಥವಾ ಉದಾರ ಸಂಸ್ಥೆಯೊಂದರ ವಿಶೇಷ ಕೃಪೆಯಿಂದ ವಿದೇಶಗಳಿಗೆ ಹೋಗಿ ಬರುವ ಅನುಕೂಲ ಸಂದರ್ಭವೂ ಅವರಿಗೆ ಒದಗಬಹುದು. ಅಂಥ ಸನ್ನಿವೇಶಗಳಲ್ಲಿ ಕಣ್‌ತಡೆ ಕಟ್ಟಿಸಿಕೊಂಡ ಟಾಂಗಾ ಕುದುರೆಯಂತೆ "ಹೋದ ಪುಟ್ಟ, ಬಂದ ಪುಟ್ಟ" ಎನ್ನುವಷ್ಟರಲ್ಲಿಯೇ ಮುಗಿಸಿಬಿಡದೆ, ಇವರು ಕರ್ತವ್ಯ ನಿರ್ವಾಹದ ಜೊತೆಗೆ ಅನತಿ ದೂರದ ರಮ್ಯಸ್ಥಳಗಳ ಕಡೆಗೂ ಕಣ್ಣು ಹಾಯಿಸತಕ್ಕವರು; ಇಂಥ ಸಂದರ್ಶನಗಳಿಗಾಗಿ ಒಂದೆರಡು ಹೆಚ್ಚು ದಿನಗಳನ್ನು ವಿನಿಯೋಗಿಸಬೇಕಾಗಿ ಬಂದರೂ, ಪ್ರಯಾಣವನ್ನು ವಿಸ್ತರಿಸಬೇಕಾಗಿ ಬಂದರೂ, ಬೇಬಿನ ಹಣವನ್ನೇ ವೆಚ್ಚ ಮಾಡಬೇಕಾಗಿ ಬಂದರೂ ಹಿಂಜರಿಯದವರು...."[೧]

ಮನುಷ್ಯನ ಸುತ್ತಾಟದ ಹಿನ್ನೆಲೆಯಲ್ಲಿ ಹೊಸದನ್ನು ನೋಡಬೇಕೆನ್ನುವ ಅವನ ಮೂಲ ಪ್ರವೃತ್ತಿಯನ್ನು ಗುರುತಿಸಬಹುದು. ದೈನಂದಿನ ಸ್ವಾರಸ್ಯವಿಲ್ಲದ ಬದುಕಿನಿಂದ ಕೆಲ ಕಾಲ ದೂರ ನಿಂತು ಎಲ್ಲ ಜವಾಬ್ದಾರಿಗಳಿಂದ ಮುಕ್ತನಾಗಿ ಸ್ವಾತಂತ್ರ್ಯದ ಸವಿಯುಣ್ಣಬೇಕೆಂಬ ಚಾಪಲ್ಯವೇ ಅವನ ಸುತ್ತಾಟಗಳಿಗೆ ಮೂಲ ಪ್ರೇರಣೆಯಾಗಿದೆ. ಸ್ವಾತಂತ್ರ್ಯಾನಂತರ ನಾಗರೀಕತೆ ಬೆಳೆದಂತೆ ಪ್ರಯಾಣ ಸೌಲಭ್ಯಗಳು ಹೆಚ್ಚಿದಂತೆ ಹಿಂದಿಗಿಂತ ಇಂದು ಪ್ರವಾಸ ಸುಲಭವಾಗುತ್ತಿದೆ, ಸುಖದಾಯಿಯಾಗುತ್ತಿದೆ. ಕಾಕಾ ಸಾಹೇಬ ಕಾಲೇಲಕರರು ಹೇಳುವಂತೆ "ಈಗ ನಮ್ಮ ದೇಶದಲ್ಲಿ ಪ್ರವಾಸದ ಸಾಧನಗಳು ಬಹಳಷ್ಟು ಹೆಚ್ಚಿವೆ, ಮತ್ತು ಹೆಚ್ಚುತ್ತಲಿವೆ. ಫೋಟೋಗ್ರಾಫಿಯ ಕಲೆ ಲಲಿತಕಲೆಯ ಪಂಕ್ತಿಯಲ್ಲಿ ಸೇರುವಷ್ಟು ವಿಕಸಿತವಾಗಿದೆ. ದೇಶ ವಿದೇಶಗಳ ಭಾಷೆಗಳಲ್ಲಿಯ ಪ್ರವಾಸ ವರ್ಣನೆಗಳ ವಾಚನದಿಂದ ನಮ್ಮ ಕಲ್ಪನೆ ಉದ್ದೀಪಿತವಾಗಲು ಶಕ್ಯವಾಗಿದೆ ಎಂದ ಬಳಿಕ ದಾರಿದ್ರ್ಯವನ್ನು ಏಕೆ ದೂರವಾಗಿಸಬಾರದು?"

ಪ್ರವಾಸಿಗರಲ್ಲಿ ಎರಡು ವಿಧ. ಹವ್ಯಾಸಿ ಹಾಗೂ ನಿಯೋಗಿ ಪ್ರವಾಸಿಗಳೆಂದು ಅವರನ್ನು ಕರೆಯಬಹುದು. ಪ್ರವಾಸವು ಮಾನಸಿಕ ಹಾಗೂ ಬೌದ್ಧಿಕ ವಿಕಾಸಕ್ಕೆ ಸಾಧನವೆಂದು ಬಗೆದು ತನ್ನ ಬದುಕಿನಲ್ಲಿ ಪ್ರವಾಸವನ್ನು ಒಂದು ಅವಿಭಾಜ್ಯ ಘಟಕವಾಗಿಸಿ, ಕಾಲ ಅವಕಾಶಗಳು ದೊರೆತಾಗ ಏಕಾಂಗಿಯಾಗಿಯೊ ಇಲ್ಲವೆ ಗುಂಪು

---

೧. ಅದೇ, ಪು. ೧೪೫

ಗೂಡಿಯೊ ಸಂಚರಿಸುವವರು ಹವ್ಯಾಸಿ ಪ್ರವಾಸಿಗರು. ಸರಕಾರದ ಪ್ರತಿನಿಧಿಗಳಾಗಿಯೊ, ಆಮಂತ್ರಿತ ಅತಿಥಿಗಳಾಗಿಯೊ, ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳಾಗಿಯೊ ಸ್ವದೇಶೀ ಇಲ್ಲವೆ ವಿದೇಶೀ ನೆರವಿನಿಂದ ಹೊರದೇಶಗಳಿಗೆ ಹೋಗುವವರು ನಿಯೋಗಿ ಪ್ರವಾಸಿಗರು. ಇದು ಸ್ಥೂಲವಾದ ವಿಂಗಡಣೆ. ಎರಡೂ ಪ್ರಕಾರದ ಪ್ರವಾಸಿಗರು ಒಂಟಿಯಾಗಿಯೂ, ಗುಂಪಾಗಿಯೂ ಇರಬಹುದು. "ಸಾಮಾನ್ಯವಾಗಿ ನಾಲ್ಕು ಜನ ಗೆಳೆಯರು ಕೂಡಿಕೊಂಡೋ ಅಥವಾ ಯಾವುದಾದರೂ ಪ್ರವಾಸೋದ್ಯಮ ಸಂಸ್ಥೆಯವರು ಏರ್ಪಡಿಸಿದ ಪೂರ್ವ ನಿಯೋಜಿತ ಪ್ರವಾಸ ಕಾರ್ಯಕ್ರಮದಲ್ಲಿ ಸೇರಿಕೊಂಡೊ ಹೋಗುವ ಪ್ರವಾಸಗಳಿಗಿಂತ ಏಕಾಕಿ ಪ್ರವಾಸಿಗೆ ಜವಾಬ್ದಾರಿ ಮತ್ತು ಜಾಗರೂಕತೆಗಳ ಆವಶ್ಯಕತೆ ಹೆಚ್ಚು. ಧೈರ್ಯ, ಸ್ಥೈರ್ಯ, ದಿಟ್ಟತನ, ತಾಳ್ಮೆ, ಸಮಯಾವಧಾನ, ತನಗೆ ತಾನೇ ಸಂಗಾತಿಯಾಗಬಲ್ಲ ಸ್ವಭಾವಗಳನ್ನು ಹೊಂದಿರುವ ಏಕಾಕಿ ಪ್ರವಾಸಿಗೆ ಪ್ರವಾಸ ಕಾಲದಲ್ಲಿ ಸ್ವಾತಂತ್ರ್ಯ, ಆನಂದ ಮತ್ತು ಜ್ಞಾನಾನುಭವಗಳ ಗಳಿಕೆಯು ಹೆಚ್ಚು."[೧]

ಸ್ವಂತ ಖರ್ಚಿನಲ್ಲಿ, ಸ್ವತಂತ್ರವಾಗಿ, ಕಾಲದ ಮಿತಿಯಿಲ್ಲದೆ ಪ್ರವಾಸ ಮಾಡುವ ಅವಕಾಶ ನಿಯೋಗಿ ಪ್ರವಾಸಿಗೆ ಇರುವುದಿಲ್ಲ. ಗುಂಪುಗೂಡಿ ಪ್ರವಾಸ ಕೈಗೊಂಡಾಗ ಅಲ್ಲಿ ವೈಯಕ್ತಿಕ ಸ್ವಾತಂತ್ರ್ಯವಿರುವುದಿಲ್ಲ. ಸಾಮೂಹಿಕ ತೀರ್ಮಾನಗಳಿಗೆ ಅಥವಾ ಪ್ರವಾಸಿ ಸಂಸ್ಥೆಯವರು ಕೈಗೊಂಡ ತೀರ್ಮಾನಕ್ಕೆ ಪ್ರವಾಸಿಯು ಬದ್ಧನಾಗಿರಬೇಕಾಗುತ್ತದೆ. ಬೇರೆ ದೇಶಗಳ ಅತಿಥಿಯಾಗಿ ಪ್ರವಾಸ ಕೈಗೊಂಡಾಗಲಂತೂ ಆಹ್ವಾನಿತರ ಕಾರ್ಯಕ್ರಮಗಳ ವೇಳಾಪಟ್ಟಿಗೆ ಪ್ರವಾಸಿಯು ಹೊಂದಿಕೊಳ್ಳಬೇಕಾದ ದಾಕ್ಷಿಣ್ಯ ಸ್ಥಿತಿ ಪ್ರಾಪ್ತವಾಗುತ್ತದೆ. ನಿಶ್ಚಿತ ಕಾಲಾವಧಿಯಲ್ಲಿ ಪೂರ್ವನಿಶ್ಚಿತ ಕಾರ್ಯಕ್ರಮದಂತೆ ಸುತ್ತಾಟ ನಡೆಸಬೇಕಾಗುತ್ತದೆ. ತನಗೆ ಇಷ್ಟಬಂದಂತೆ ಸುತ್ತುವ, ಮನಸ್ಸಿಗೆ ಪ್ರಿಯರಾದವರನ್ನು ಭೇಟಿಮಾಡುವ, ವಿರಾಮವಾಗಿ ನಿಂತು ನೋಡುವ, ಜನಜೀವನವನ್ನು ಸ್ವೇಚ್ಛೆಯಂತೆ ಅಧ್ಯಯನ ಮಾಡುವ ಸ್ವಾತಂತ್ರ್ಯ ಅಲ್ಲಿ ಮೊಟಕುಗೊಳ್ಳುತ್ತದೆ. ವಿದೇಶಗಳಲ್ಲಿ ನಡೆಯುವ ಸಭೆ, ಸಮ್ಮೇಳನ, ವಿಚಾರಗೋಷ್ಠಿಗಳಲ್ಲಿ ಪಾಲ್ಗೊಳ್ಳಲು ಹೋಗುವ ಪ್ರತಿನಿಧಿಗಳು ನಿಶ್ಚಿತ ಅಲ್ಪಕಾಲಾವಧಿಯ ತಂಗಣೆಯಲ್ಲಿ ತಾವು ಭೇಟಿಮಾಡುವ ದೇಶವನ್ನು ಸಮಗ್ರವಾಗಿ ನೋಡಲು, ಜನಜೀವನವನ್ನು ಅಭ್ಯಾಸ ಮಾಡಲು ಸಮಯ ಅವಕಾಶಗಳಿರುವುದಿಲ್ಲ. (ಸೋಜಿಗದ ಸಂಗತಿಯೆಂದರೆ, ವಿದೇಶಗಳಲ್ಲಿ ನಡೆದ ಸಭೆ, ಸಮ್ಮೇಳನಗಳಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಿದ ಅನೇಕ ಗಣ್ಯ ಕನ್ನಡಿಗರು ಒಳ್ಳೆಯ ಪ್ರವಾಸ ಕಥನಗಳನ್ನು ಕೊಟ್ಟಿರುವರು. ಉದಾಹರಣೆಗೆ: ದೇಜಗೌರವರ 'ವಿದೇಶಗಳಲ್ಲಿ

---

೧. ಅದೇ, ಪು. ೧೪೫

ನಾಲ್ಕು ವಾರ', 'ಪ್ರವಾಸಿ ದಿನಚರಿ', 'ಆಫ್ರಿಕಾ ಯಾತ್ರೆ', 'ಏಸು ವಿಭೀಷಣರ ನಾಡಿನಲ್ಲಿ'; ಅನುಪಮಾ ನಿರಂಜನರ 'ಸ್ನೇಹಯಾತ್ರೆ'; ರಾ.ಶಿ. ಯವರ 'ಕೊರವಂಜಿಯ ಪಡುವಣ ಯಾತ್ರೆ' ಇತ್ಯಾದಿ.

ನಮ್ಮಲ್ಲಿ ಬಹುಪಾಲು ಪ್ರವಾಸ ಸಾಹಿತ್ಯ ವರ್ಣನಾತ್ಮಕವಾದುದು. ಕಂಡವರು ಕಾಣದವರಿಗೆ ಅಪರೋಕ್ಷಾನುಭವಾಗುವಂತೆ ಸದಭಿರುಚಿಯ ಹಿತಮಿತವಾದ ಬಣ್ಣನೆಯ ವಿಶಿಷ್ಟಾನುಭವವು ಸಂವಹನವಾಗುವಂತೆ ತಮ್ಮ ಕಣ್ಣು- ಮನಗಳು ಉಂಡ ಸುಖವನ್ನು ಬೇರೆಯವರೂ ಸವಿಯುವಂತೆ ವರ್ಣಿಸುವುದು ವಿಹಿತವಾದುದು. ತನ್ನ ಅನುಭವದ ರಸಯಾತ್ರೆಯಲ್ಲಿ ಓದುಗನನ್ನು ಲೀನವಾಗಿಸುವ ಶಕ್ತಿ ಪ್ರವಾಸ ಸಾಹಿತಿಯಲ್ಲಿರಬೇಕು. ಡಾ. ವಿ.ಕೃ. ಗೋಕಾಕ್‌ರವರು ಹೇಳುವಂತೆ "ಪ್ರವಾಸ ಸಾಹಿತಿಯು ತಾನು ಕಂಡ ಜಗತ್ತನ್ನೆಲ್ಲ ಸ್ಪಷ್ಟವಾಗುವಂತೆ ತನ್ನ ಶಬ್ದಚಿತ್ರಗಳಲ್ಲಿ ಮೂಡಿಸಬೇಕು. ಸ್ವಂತದ ದೃಷ್ಟಿಯನ್ನು ಆ ನವೀನ ಸೃಷ್ಟಿಯ ಮೇಲೆ ಆರೋಪಿಸದ ರೀತಿಯು ಎಲ್ಲೆಡೆಗೆ ಸ್ಫುಟವಾಗಿರಬೇಕು. ಇದು ಸಾಧಿಸಿದಲ್ಲಿ ರಸಾನುಭವ, ಮನೋ ರಂಜನೆ, ಉಪಯುಕ್ತತೆ, ಮೊದಲಾದ ಗುರಿಗಳೆಲ್ಲ ಸಫಲವಾಗುವವು."

ಭಾರತದಲ್ಲಿ ಸ್ಥಿತಿವಂತರು ಇಲ್ಲವೇ ಬದುಕನ್ನು ಸಂತೋಷಮಯವಾಗಿರಿಸಲು ಕಷ್ಟನಷ್ಟಗಳಿಗೆ ಎದೆಯೊಡ್ಡಿ ಪ್ರಪಂಚ ಒದಗಿಸುವ ಅನುಭವಕ್ಕೆ ಕಾತರಿಸುವವರು ಮಾತ್ರ ಪ್ರವಾಸ ಮಾಡಬಲ್ಲರು, ಎಲ್ಲರೂ ಅಲ್ಲ. ಸ್ಥಿತಿವಂತರು ಬಸ್ಸು, ರೈಲು, ಕಾರು, ವಿಮಾನಗಳಲ್ಲಿ ದೇಶ ವಿದೇಶಗಳನ್ನು ಸುತ್ತಬಲ್ಲರು. ಹೊಸ ಅನುಭವದ ಗಳಿಕೆಗಾಗಿ ಕೆಚ್ಚೇ ಮೂಲಧನವಾಗಿ ಕಾಲು ನಡಿಗೆಯಲ್ಲಿ, ಸೈಕಲ್ಲಿನಲ್ಲಿ, ಹೆಚ್ಚಾಗಿ ಭಾರತವನ್ನು, ಸ್ವಲ್ಪ ಮಟ್ಟಿಗೆ ವಿದೇಶಗಳನ್ನು ಕೆಲವರು ಸಾಹಸಿಗಳು ಸುತ್ತಬಲ್ಲರು. ಮೊದಲನೆ ಗುಂಪಿನವರ ಸಂಖ್ಯೆ ಕಡಿಮೆ ಪ್ರಮಾಣದ್ದಾದರೆ, ಎರಡನೆ ಗುಂಪಿನವರ ಸಂಖ್ಯಾ ಪ್ರಮಾಣ ತೀರಾ ಕಡಿಮೆ. ಏಕೋ ಇತ್ತೀಚಿನ ದಿನಗಳಲ್ಲಿ ಯುವ ಜನಾಂಗದಲ್ಲಿ ಸಾಹಸ ಪ್ರವೃತ್ತಿ ದಿನದಿಂದ ದಿನಕ್ಕೆ ನಶಿಸುತ್ತಿದೆ. ಹಣದ ಬಲವಿಲ್ಲದಿದ್ದರೂ ಕಾಲುಗಳು ಗಟ್ಟಿಯಾಗಿವೆ ದೇಶ ಸುತ್ತುತ್ತೇನೆ ಎನ್ನುವ ಕೆಚ್ಚೂ ಬತ್ತುತ್ತಿದೆ.

ಪ್ರವಾಸಕ್ಕೆ ಕೆಲವು ಅಡ್ಡಿಗಳೂ ಇವೆ. ಜನರಿಗೆ ತಮ್ಮ ಖರ್ಚುವೆಚ್ಚಗಳ ಬಗೆಗೆ ನಿರ್ಬಂಧಗಳಿದ್ದು ಅವರು ಪ್ರವಾಸದ ವೆಚ್ಚವನ್ನು ಸರಿತೂಗಿಸಲು ಸಾಧ್ಯವಾಗುತ್ತಿಲ್ಲ. ಒಂದು ಅಧ್ಯಯನದ ಪ್ರಕಾರ, ಪ್ರವಾಸದ ದುಬಾರಿ ವೆಚ್ಚದ ಕಾರಣದಿಂದಾಗಿ ಸಂಯುಕ್ತ ಸಂಸ್ಥಾನವೊಂದರ ಶೇಕಡಾ ೫೦ ರಷ್ಟು ಜನ ಪ್ರವಾಸ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಯಾವುದಾದರೂ ಒಂದು ವೃತ್ತಿಯಲ್ಲಿ ತೊಡಗಿಕೊಂಡಿರುವವರಿಗೆ ತಮ್ಮ ವೃತ್ತಿಯಿಂದ ಅಥವಾ ವ್ಯಾಪಾರದಿಂದ ಬಿಡುವು ಪಡೆದು ಪ್ರವಾಸ ಮಾಡುವುದು ಕಷ್ಟವಾಗುತ್ತದೆ.

ತಮ್ಮ ವೃತ್ತಿಯಿಂದ ಅಥವಾವ್ಯಾಪಾರದಿಂದ ಹಲವು ದಿವಸಗಳು ಅಗಲಿ ಇರುವುದು ಸಾಧ್ಯವಾಗುತ್ತಿಲ್ಲ. ಬಹಳಷ್ಟು ಜನರಿಗೆ, ವಿಶೇಷವಾಗಿ ವೃದ್ಧರಿಗೆ ದೈಹಿಕ ಶಕ್ತಿಯ ಕೊರತೆಯಿಂದಾಗಿ ಪ್ರವಾಸ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಚಿಕ್ಕವಯಸ್ಸಿನ ಮಕ್ಕಳಿರುವ ತಂದೆ-ತಾಯಿಯರಿಗೆ ಕೌಟುಂಬಿಕ ಜವಾಬ್ದಾರಿಯ ಕಾರಣದಿಂದಾಗಿ ಪ್ರವಾಸ ಮಾಡಲು ಅನಾನುಕೂಲವಾಗಿರುತ್ತದೆ.

ಪ್ರವಾಸದ ಪ್ರಾಮುಖ್ಯತೆಯ ಬಗೆಗೆ ಅಜ್ಞಾನ, ಪ್ರವಾಸಿ ತಾಣಗಳ ಬಗೆಗೆ ತಿಳುವಳಿಕೆಯ ಕೊರತೆ, ಬೇರೆ ಜನ ಮನವನ್ನು ಅರಿಯುವುದು ಒಂದು ನೈಜ ಶಿಕ್ಷಣವೆನ್ನುವ ಭಾವನೆಯಿಲ್ಲದಿರುವುದು ಅನಾಸಕ್ತಿ ಕೆಲವರಲ್ಲಿರುತ್ತದೆ.

ನಮ್ಮಲ್ಲಿ ಪ್ರವಾಸವೆಂದರೆ ಬೇಸಗೆಯ ತಂಪುದಾಣಗಳಾದ ನಂದಿ, ಕೆಮ್ಮಣ್ಣು ಗುಂಡಿ, ಊಟಿ, ಕೊಡೈಕೆನಾಲ್, ಸಿಮ್ಲಾ, ಕಾಶ್ಮೀರ- ಇವೇ ಮೊದಲಾದ ಸ್ಥಳಗಳಿಗೆ; ಸುಪ್ರಸಿದ್ಧ ದೇವಾಲಯಗಳಿಗೆ; ಪವಿತ್ರ ತೀರ್ಥಕ್ಷೇತ್ರಗಳಿಗೆ; ಬೇಲೂರು, ಹಳೇಬೀಡು, ಶ್ರವಣಬೆಳುಗೊಳ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಹಂಪೆ, ಸೋಮನಾಥಪುರ, ಅಬು, ಎಲ್ಲೋರಾ, ಅಜಂತಾ, ಖಜುರಾಹೊ, ಕೊನಾರ್ಕ್, ಮಹಾಬಲಿಪುರಂ-ಇವೇ ಮೊದಲಾದ ಶಿಲ್ಪಕಲೆಯ ಬೀಡುಗಳಿಗೆ ಭೇಟಿಕೊಡುವುದು. ನೋಡುವ ಸ್ಥಳಗಳ ಬಗೆಗೆ ಬಂದಿರುವ ಆಕರ ಗ್ರಂಥಗಳನ್ನು ಅವಲೋಕಿಸಿ ಪೂರ್ವಸಿದ್ಧತೆಯೊಡನೆ ಪ್ರವಾಸ ಕೈಗೊಳ್ಳುವವರ ಸಂಖ್ಯೆ ನಮ್ಮಲ್ಲಿ ಕಡಿಮೆ. ನಿರ್ದಿಷ್ಟ ಕಾಲಮಿತಿಯೊಳಗೆ ಅವಸರವಸರವಾಗಿ ನೋಡಿ ಮುಗಿಸಿ ಹೊರಡುವವರ ಸಂಖ್ಯೆ ನಮ್ಮಲ್ಲಿ ಹೆಚ್ಚು. ಒಳ್ಳೆಯ ಮಾರ್ಗದರ್ಶಿಯೊಬ್ಬನ ನೆರವು ಪಡೆದು ವಿವರಗಳನ್ನು ಕೇಳಿ ತಿಳಿಯುವ ಪ್ರವೃತ್ತಿಯೂ ನಮ್ಮಲ್ಲಿ ಇಲ್ಲ. ಇತಿಹಾಸದ ತಿಳುವಳಿಕೆಯಿರದ ಅನುಭವಿಯಲ್ಲದ ಮಾರ್ಗದರ್ಶಿ ಹೇಳಿದ್ದಕ್ಕೆ ಗೋಣು ಆಡಿಸಿ ನಡೆಯುವವರೇ ನಮ್ಮಲ್ಲಿ ಹೆಚ್ಚು. ವಿರಾಮವಾಗಿ ಕಾಲಾಡಿಸುತ್ತ, ಕುತೂಹಲ ಕೆರಳಿದಲ್ಲಿ ನಿಂತು ಸಾವಕಾಶವಾಗ ನೋಡುವ ಪ್ರವಾಸಿಗರ ಸಂಖ್ಯೆ ಬಹಳ ಕಡಮೆ- ಸಾವಿರಕ್ಕೊಬ್ಬರು ಸಿಗುವರೇನೋ! ಪ್ರೊ|| ತೀ.ನಂ. ಶ್ರೀಯವರು ಹೇಳುವಂತೆ "ಪ್ರವಾಸದಲ್ಲಿ ತೃಪ್ತಿ ಬರಬೇಕಾದರೆ ಒಂದು ನಗರದಲ್ಲಿ ಹೆಚ್ಚು ಕಾಲ ತಂಗಿದ್ದು, ಅದರ ದೃಶ್ಯವಿಶೇಷಗಳನ್ನೆಲ್ಲಾ ಸಾವಕಾಶವಾಗಿ ವಿವರ ವಿವರವಾಗಿ ತಾನೇ ನೋಡಿಕೊಂಡು ಹೋಗುವುದು ಉತ್ತಮ ಮಾರ್ಗ."

ವಿದೇಶಗಳನ್ನು ನೋಡುವ ಭಾಗ್ಯ ಅದೃಷ್ಟವಂತರಿಗೆ, ಸಿರಿವಂತರಿಗೆ ಮಾತ್ರ. ಇವರ ಸಂಖ್ಯೆಯೂ ಸೀಮಿತ. ಹೀಗಿರುವಾಗ ಪ್ರವಾಸದ ಸ್ಥಾನದಲ್ಲಿ ಪ್ರವಾಸ ಸಾಹಿತ್ಯ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಭಾರತೀಯ ಪರಿಸರದಲ್ಲಿ ಪರೋಕ್ಷಾನುಭವ ಪಡೆಯಲಾಗದ ಲಕ್ಷಾಂತರ ಅಕ್ಷರಸ್ಥರಿಗೆ ಪ್ರವಾಸ ಮಾಡಿ

ಬಂದವರಿಂದ ಸೃಷ್ಟಿಸಲ್ಪಟ್ಟ ಸಾಹಿತ್ಯ ಅಪರೋಕ್ಷಾನುಭವವನ್ನು ಅನಿವಾರ್ಯವಾಗಿ ಒದಗಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರವಾಸ ಸಾಹಿತ್ಯದ ಆಗತ್ಯ ವಿಶೇಷವಾಗಿದೆ. ಪಂಡಿತ್ ಜವಹರಲಾಲ್ ನೆಹರೂರವರು ಕೆ.ಪಿ.ಎಸ್. ಮೆನನ್‌ರವರ 'ವಿಶ್ವಪರ್ಯಟಣೆ' ಎಂಬ ಗ್ರಂಥಕ್ಕೆ 'ಮುನ್ನುಡಿ' ಬರೆಯುತ್ತ ಹೀಗೆ ಹೇಳಿರುವರು: "ಪ್ರವಾಸ ಮಾಡುವುದು ಒಳ್ಳೆಯದು. ಹಾಗೆ ಪ್ರವಾಸ ಮಾಡಲಾರದೇ ಹೋದಾಗ ಪ್ರವಾಸದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ ಹವ್ಯಾಸ."

ಪ್ರವಾಸ ಸಾಹಿತ್ಯದಿಂದ ಮನರಂಜನೆ, ಜ್ಞಾನಾಭಿವೃದ್ಧಿ, ಪ್ರಾಪಂಚಿಕ ಅನುಭವಗಳು ಒಟ್ಟಿಗೆ ಲಭ್ಯವಾಗುತ್ತವೆ. ಕಥೆ ಕಾದಂಬರಿಗಳ ಲೇಖಕನಿಗೆ ಕಲ್ಪನೆಯನ್ನು ಬಳಸಲು ಧಾರಾಳ ಸ್ವಾತಂತ್ರ್ಯವಿದ್ದರೆ, ಪ್ರವಾಸ ಸಾಹಿತಿಗೆ ಈ ಸ್ವಾತಂತ್ರ್ಯವಿಲ್ಲ. ಪ್ರವಾಸ ಸಾಹಿತಿಯಲ್ಲಿ ನೋಡಬಲ್ಲ, ಗ್ರಹಿಸಬಲ್ಲ ಶಕ್ತಿ ಅತ್ಯಂತ ತೀಕ್ಷ್ಣವಾಗಿರಬೇಕು. ತನಗೊದಗಿದ ಅನುಭವಗಳನ್ನು ಶಾಬ್ದಿಕವಾಗಿ ಅಭಿವ್ಯಕ್ತಿಸುವಾಗ ಕಲಾತ್ಮಕ ಪ್ರತಿಭೆ ಪ್ರಕಟಗೊಳ್ಳಬೇಕು; ಹದವಾದ ಉತ್ಸಾಹಕ್ಕೆ ತಕ್ಕ ಮಾತಿನ ಜೀವಂತಿಕೆಯಿರಬೇಕು. ವೈವಿಧ್ಯಮಯವಾದ ಆಸಕ್ತಿಗೆ ತಕ್ಕಂತಹ ತಿಳುವಳಿಕೆಯೂ ಉತ್ಸಾಹವೂ ಮೇಳ ಗೊಂಡಿರಬೇಕು. ಸೂಕ್ಷ್ಮಪ್ರಜ್ಞೆ, ಹೊಸ ವಾತಾವರಣದೊಂದಿಗೆ ಸುಲಭವಾಗಿ ಬೆರೆಯುವ ಹಾಗೂ ಅಲ್ಲಿನ ಒಳ್ಳೆಯ ಅಂಶಗಳನ್ನು ಗುರುತಿಸುವ ಜಾಣ್ಮೆ, ಸದಭಿರುಚಿ ಇರಬೇಕು. ಹೀಗೆ ಇವೆಲ್ಲವನ್ನು ಒಳಗೊಂಡ ಪ್ರವಾಸಿಯ ವೈಯಕ್ತಿಕ ಅಭಿವ್ಯಕ್ತಿಯಾದ ಅನುಭವ ಕಥನವು ನಮಗೆ ಅಪರಿಚಿತವಿರುವ ಹೊಸ ಪ್ರಪಂಚದಲ್ಲಿ ಪ್ರವೇಶ ದೊರಕಿಸಿಕೊಡುತ್ತದೆ.

ಪ್ರವಾಸಿಯ ಸುತ್ತಾಟಗಳಲ್ಲಿ ಹೊಸ ಹೊಸ ಅನುಭವಗಳು ಅವನ ಭಾವ ಕೋಶವನ್ನು ತುಂಬುತ್ತಾ ಹೋಗುತ್ತವೆ. ಒಮ್ಮೊಮ್ಮೆ ಅಪರೂಪಕ್ಕೆ ಅವನ ಅನುಭವ ಪ್ರಪಂಚಕ್ಕೆ ವರ್ಣನಾತೀತವಾದ ದೃಶ್ಯ ಪ್ರಪಂಚವೊಂದು ದಾಖಲಾಗುವುದುಂಟು. ಪ್ರೊ. ತೀ.ನಂ.ಶ್ರೀ. ಅವರು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರವಾಸ ಕೈಗೊಂಡಿದ್ದಾಗ, ಕ್ಯಾಲಿಫೋರ್ನಿಯದಲ್ಲಿರುವ ಯೋಸೇಮಿಟಿ ಕಣಿವೆಗೆ (Yosomite valley) ಭೇಟಿ ಕೊಟ್ಟಾಗ ಅವರಿಗೆ ಭವ್ಯ ಸೌಂದರ್ಯದ ಸಾಕ್ಷಾತ್ಕಾರವಾಯಿತು. ಆ ದರ್ಶನಾನುಭವವನ್ನು ಅವರು ಹೀಗೆ ಹೇಳಿರುವರು: "ಪ್ರೇಕ್ಷಣೀಯವೆಂದು ಹೊಗಳಿಸಿ ಕೊಂಡ ವಸ್ತುಗಳನ್ನು, ಸ್ಥಳಗಳನ್ನು ನೋಡಿಕೊಂಡು ಬರಬೇಕೆಂಬ ಆಸೆ ಪ್ರವಾಸಿಯ ಮನಸ್ಸಿನಲ್ಲಿ ಬುಗ್ಗೆಯಂತೆ ಸಂತತವಾಗಿ ಚಿಮ್ಮುತ್ತಿದ್ದರೂ, ಹಲವು ಸಂದರ್ಭಗಳ ಅನುಭವದಿಂದ ಅವನ ನೀರಿಕ್ಷೆ ತಕ್ಕಮಟ್ಟಿಗೆ ಇಳಿದಿರುತ್ತದೆ. ಇಷ್ಟೊಂದು ರಮ್ಯತೆ ಮರ್ತ್ಯಲೋಕದಲ್ಲಿ ಇರಬಲ್ಲದೆ, ಏಕಾಪೋಶನವಾಗಿ ದೊರೆಯಬಲ್ಲದೆ ಎಂಬ ಸಂದೇಹವು ಅವನಲ್ಲಿ ತಕ್ಕಮಟ್ಟಿಗೆ ಬೆಳೆದಿರುತ್ತದೆ. ಆದರೆ ಅವನು ಯಾವಾಗಲೂ

ದರ್ಶನ ಸಾಹಸಿ. ಹಿಂದಿನ ಆಶಾಭಂಗಗಳಿಂದ ಹಿಂಜರಿಯದೆ ಮುನ್ನುಗ್ಗುತ್ತಿರುತ್ತಾನೆ. ಅದಕ್ಕೆ ಫಲವೂ ಕೆಲವು ಸಲ ಉತ್ತಮವಾಗಿ ಲಭಿಸುತ್ತದೆ. ಕಣ್ಣಾರೆ ನೋಡಿದ ಬಳಿಕ, ಯಾವ ಶಬ್ದವೈಖರಿ ತಾನೆ ಈ ಭವ್ಯ ಸೌಂದರ್ಯದ ಉನ್ನತಿಯನ್ನು ಎಟುಕಿಸಿಕೊಳ್ಳ ಬಲ್ಲುದು ಎಂಬ ಬೆರಗನ್ನು ತರುವ ಸನ್ನಿವೇಶಗಳೂ ಜಗತ್ತಿನಲ್ಲಿ ಉಂಟು. "ಯತೋವಾಚೋ ನಿವರ್ತಂತೇ" ಎಂದು ಗುರುತಿಸಬಹುದಾದ ಅನುಭವವನ್ನು ನಮ್ಮ ದೇಶದಲ್ಲಿ ಗೋಮಟೇಶ್ವರನ ದರ್ಶನದಿಂದಲೂ ತಾಜಮಹಲಿನ ದರ್ಶನದಿಂದಲೂ ನಿಸ್ಸಂದೇಹವಾಗಿ ಪಡೆಯಬಹುದು. ಅದರ ವಿವರಣೆ ಅಸಮರ್ಪಕವೂ ಅಧಿಕ ಪ್ರಸಂಗವೂ ಆಗುವುದೆಂದು ತಿಳಿದೂ ತಿಳಿದೂ ಇಲ್ಲಿ ಏಕೆ ಕೈ ಹಾಕಲಿ! ಇವೆರಡು ಕಲ್ಪನೆಗೆ ಮೀರಿದ ಅತಿಶಯವನ್ನು ಸಾಧಿಸಿರುವ ಮಾನವ ನಿರ್ಮಿತಿಗಳು. ಒಮ್ಮೊಮ್ಮೆ ಪ್ರಕೃತಿಯೇ ಕಲಾವಿದನ ಪಾತ್ರವನ್ನು ವಹಿಸಿ ಬೃಹದ್ಭವ್ಯತೆಯ ಸ್ಥಾನಗಳನ್ನು ನಿರ್ಮಿಸುತ್ತದೆ. ಅಲ್ಲಿ ಮಡುಗಟ್ಟಿರುವ ಘನ ಸೌಂದರ್ಯ ಪ್ರೇಕ್ಷಕನನ್ನು ಪರವಶನನ್ನಾಗಿ ಮಾಡುತ್ತದೆ..."

ಹೀಗೆ ಪ್ರೊ. ತೀ.ನಂ.ಶ್ರೀ. ಅವರು ತಮ್ಮ ಪ್ರವಾಸದಲ್ಲಿ ಪಡೆದ ಭವ್ಯಾನುಭೂತಿ ಪ್ರವಾಸಿಯ ಸುತ್ತಾಟದಲ್ಲ ಒಂದಲ್ಲಾ ಒಂದು ಬಾರಿ ಅನುಭವಕ್ಕೆ ಬರಬಹುದು, ಪರವಶಗೊಳಿಸಿರಬಹುದು. ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಪಡೆಯಬಹುದಾದ ಅಂತಹ ವಿಶಿಷ್ಟಾನುಭವವನ್ನು ಬೇರೆಯವರೂ ಕೇಳಿ ಸುಖಿಸಲು ಶಕ್ತಿಶಾಲಿಯಾದ ಭಾಷೆ ಪ್ರವಾಸಿಯ ಸಹಾಯಕ್ಕೆ ಬರಬೇಕು. ಜೀವಭಾವ ಪುಟಗೊಂಡು ನಲಿದಾಗ, ಆ ಸಂತೋಷ ಆನಂದಗಳನ್ನು ಶಬ್ದಗಳಲ್ಲಿ ಹರಳುಗೊಳಿಸಲು ಜೀವದ್ಭಾಷೆ ನೆರವಾಗಿಬಿಟ್ಟರೆ ಪ್ರವಾಸಿಯ ಆ ಸೌಂದರ್ಯಾನುಭೂತಿ ಸಾರ್ಥಕ್ಯವನ್ನು ಪಡೆದುಕೊಳ್ಳುತ್ತದೆ.

ಪ್ರವಾಸಕ್ಕೆ ಮನಸ್ಸು ಮಾಡಿದ ಮೇಲೆ ಇಂದು-ನಾಳೆ ಎಂದು ಮುಹೂರ್ತವನ್ನು ಮುಂದೂಡುವುದು ಸರಿಯಲ್ಲವೆಂದು ಪ್ರೊ. ತೀ.ನಂ. ಶ್ರೀ. ಅವರು ಹೇಳುವರು. "ಪ್ರವಾಸಿಯಾಗಬೇಕೆನ್ನುವವನಿಗೆ ದೇಹಾರೋಗ್ಯ ಬೇಕು; ಜಂಘಾಬಲ ಬೇಕು; ಒಳಸೋರದ ಉತ್ಸಾಹ ಬೇಕು. ಇದೆಲ್ಲ ತಾರುಣ್ಯದಲ್ಲಿ ತುಂಬಿಕೊಂಡಿರುತ್ತದೆ. ವಯಸ್ಸು ಹೆಚ್ಚಿದ ಬಳಿಕ ಎರಡು ಮೈಲಿ ನಡೆಯುವಷ್ಟರಲ್ಲಿ ನಾಲ್ಕು ಕಡೆ ಕುಳಿತುಕೊಳ್ಳ ಬೇಕೆನ್ನಿಸುತ್ತದೆ. ಬೆಟ್ಟವನ್ನು ಹತ್ತಿ ಇಳಿಯಬೇಕಾದರೆ ವಾಹನವಿಲ್ಲದೆ ದೇಹ ಮುಂದೆ ಚಲಿಸುವುದೇ ಇಲ್ಲ. ಅನ್ನಪಾನಗಳಲ್ಲಿ ಪಥ್ಯಾಪಥ್ಯಗಳ ನಿಯಮ ಪ್ರಬಲವಾಗುತ್ತದೆ. ಸುಪ್ಪತ್ತಿಗೆಯ ಮೇಲೆ ಮಲಗಿದರೂ ಕಣ್ಣಿಗೆ ಸರಿಯಾದ ನಿದ್ದೆ ಹತ್ತುವುದಿಲ್ಲ. ಹೊಸ ಸ್ಥಳವನ್ನು ನೋಡಬೇಕೆಂಬ ಆಸೆ ಆಗಾಗ ತಲೆದೋರಿದರೂ ಪ್ರಯಾಣದ ಕ್ಲೇಶಗಳನ್ನು ಭಾವಿಸಿದೊಡನೆ ಹಾಗೆಯೇ ಉಡುಗಿಹೋಗುತ್ತದೆ. ಇರುವಲ್ಲಿಯೇ ಹಾಯಾಗಿ

ಇದ್ದುಬಿಡೋಣ ಎನ್ನಿಸುತ್ತದೆ. ನೋಟಗಳು ಯೌವನದಲ್ಲಿ, ನೆನವರಿಕೆ ಮುಪ್ಪಿನಲ್ಲಿ!" ಪ್ರವಾಸಕ್ಕೆ ಯೌವನದ ದಿನಗಳೇ ಯೋಗ್ಯವೆನ್ನುವ ಪ್ರೊ. ತೀ.ನಂ. ಶ್ರೀ. ಅವರು ತಮ್ಮ ಈ ಅಭಿಪ್ರಾಯವನ್ನು (ಬಸವಣ್ಣನ ಪ್ರಸಿದ್ಧ ವಚನವೊಂದನ್ನು ಬಳಸಿಕೊಂಡು) ತಾವೇ ಕಟ್ಟಿದ ಅಣಕವಾಡಿನಲ್ಲಿ ಚೆನ್ನಾಗಿ ಧ್ವನಿಸಿರುವರು:

ನರೆ ಕೆನ್ನೆಗೆ, ತೆರೆ ಗಲ್ಲಕೆ ಬಂದಡಸದ ಮುನ್ನ
ಕೀಳುಣಿಸಿನ, ಎದುಸಿರಿನ, ಚಳಿ ಸೆಕೆಗಳ ಚಿಂತೆ
ಮನವನಲ್ಲಾಡಿಸದ ಮುನ್ನ,
ತಗುಣೆ ಸೊಳ್ಳೆ ಗುಂಪು ಗದ್ದಲಗಳ ಭೀತಿ
ರಕ್ತವನಾರಿಸದ ಮುನ್ನ,
ಮೈಯ ಕೆಚ್ಚು, ಕಾಲ ಕಸುವು, ಬಗೆಯ ಹುಮ್ಮಸು
ಒಪ್ಪವಳಿಯದ ಮುನ್ನ,
ಮುಪ್ಪಿನ ಭಾರ ಹೆಗಲೇರದ ಮುನ್ನ,
ಕಿವಿಗೊಡು ಓ ಪ್ರೇಕ್ಷಣರಸಿಕನೆ, ಪ್ರವಾಸದ ಕರೆಗೆ.

ಕುವೆಂಪುರವರು ಪ್ರವಾಸವನ್ನು ಅಧೋಮುಖಿ, ಸಮತಲಮುಖಿ ಹಾಗೂ ಊರ್ಧ್ವಮುಖಿ ಎಂದು ಮೂರು ಬಗೆಯಾಗಿ ವಿಂಗಡಿಸುವರು. ಅವರ ಪ್ರಕಾರ, "ಮಾದಕ ಮತ್ತು ಲೈಂಗಿಕವಾದಿ ಪ್ರಪಂಚಗಳಲ್ಲಿ ತನ್ನನ್ನು ತಾನು ಮರೆಯಲೂ ಮೀರಲೂ ಮಾನವ ಕೈಗೊಳ್ಳುವ ಸಾಹಸಗಳೆಲ್ಲ ಅಧೋಮುಖಿ ಪ್ರವಾಸಕ್ಕೆ ಸೇರುತ್ತವೆ. ಅದರ ಪರಿಣಾಮ ಮೊದಮೊದಲು ಸ್ವಾದುವಾದರೂ ತುದಿಯಲ್ಲಿ ಕೇಡು. ತನಗೆ ತನ್ನ ಸಮಾಜಕ್ಕೆ, ನಾಡಿಗೆ, ತನ್ನ ಸಾಹಿತ್ಯ, ಸಂಗೀತ, ಕಲೆ, ಲೋಕವೊಪ್ಪುವ ಅಥವಾ ಮೆಚ್ಚುವ ಯಾವುದಾದರೊಂದು ಸುಧಾರಣೆಯ ಚಳುವಳಿ, ರಾಜಕಾರಣ, ರಾಜ್ಯಸಭೆ ಮತ್ತು ಪರಿಷತ್ತುಗಳಲ್ಲಿ ಭಾಗವಹಿಸುವುದು, ದೇಶಭಕ್ತಿ ಅಥವಾ ದೇಶರಕ್ಷಣೆಯ ಅಥವಾ ಸಮಾಜಸೇವೆಯ ಚಟುವಟಿಕೆಗಳಲ್ಲಿ ಆಸಕ್ತನಾಗುವುದು ಇತ್ಯಾದಿ ನಮ್ಮ ಸುತ್ತಮುತ್ತ ದಿನವೂ ನಡೆಯುತ್ತಿರುವ ನೂರಾರು ವ್ಯಾಪಾರಗಳಲ್ಲಿ ಮನಃಪ್ಪೂ. ಮುಳುಗುವುದೆ, ನಮ್ಮನ್ನು ನಾವು ಮರೆಯುವುದೆ, ಮೀರುವುದೆ, ಸಮತಲಮುಖಿ ಪ್ರವಾಸ. ಆಧ್ಯಾತ್ಮಿಕ ಶ್ರೇಯಸ್ಸೇ ಧ್ಯೇಯವಾಗಿ, ನಮ್ಮ ಸಮಸ್ತಪ್ರಜ್ಞೆಯ ಪೂರ್ಣ ಸಮರ್ಪಣಾವೆ ದಾರಿಯಾಗಿ, ನಮ್ಮ ಪೂರ್ಣತೆಯ ಅನುಸಂಧಾನಕ್ಕಾಗಿ ನಾವು ಕೈಗೊಳ್ಳುವ ಆತ್ಮಪೂರ್ವ ಸಾಹಸವೆ ಅತ್ಯಂತ ವಿರಳವಾದ ಊರ್ಧ್ವಮುಖಿ ಪ್ರವಾಸ."

## ಪ್ರವಾಸಿಗರಿಗೆ ಕೆಲವು ಸೂಚನೆಗಳು

ಪ್ರವಾಸ ಮಾನವನ ಜೀವನದಲ್ಲಿ ಒಂದು ಅನಿವಾರ್ಯ ಸಂಗತಿ. ಐತಿಹಾಸಿಕ, ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಬರುವುದು ಕೆಲವರಿಗೆ ಮೆಚ್ಚುಗೆಯ ವಿಷಯ. ಮತ್ತೆ

ಕೆಲವರಿಗೆ ಅಧ್ಯಯನದ ಉದ್ದೇಶ. ಬೇಜಾರು ಕಳೆದುಕೊಂಡುಬರಲೋ, ಪುಣ್ಯ ಸಂಪಾದನೆಗಾಗಿಯೊ, ನೆಮ್ಮದಿ ಪಡೆಯಲಿಕ್ಕೆಂದೋ ಪ್ರವಾಸ, ಯಾತ್ರೆ ಕೈಕೊಳ್ಳುವುದು ಸಾಮಾನ್ಯ. ಪ್ರವಾಸ ಯಾವುದಕ್ಕಾಗಿಯೇ ಇರಲಿ ಅದು ಸುಖಕರವಾಗಿರಬೇಕಷ್ಟೆ. ನಮ್ಮ ಪ್ರವಾಸ ಹಿತವಾಗಲು ನಾವು ಕೆಲವು ತಯಾರಿ ಮಾಡಿಕೊಳ್ಳಬೇಕಾದುದು ಅವಶ್ಯ. ಜೀವನದಲ್ಲಿ ಎಷ್ಟೋ ಸಿಹಿಕಹಿ ಉಂಡಿರುತ್ತೇವೆ- ಪ್ರವಾಸ ಕಾಲದಲ್ಲಿಯೂ ಕಹಿ ಪ್ರಸಂಗಗಳಾದರೆ ಮನಸ್ಸು ನೆಮ್ಮದಿ ಕಾಣದು.

ಮೊಟ್ಟ ಮೊದಲನೆಯದಾಗಿ ಯಾತ್ರೆ ಕಾಲದಲ್ಲಿ ಪರಸ್ಥಳಗಳಲ್ಲಿ ನಮಗೆ ಎದುರಾಗುವ ಸಮಸ್ಯೆ ಭಾಷೆಯದು. ನಾವು ಯಾವ ಪ್ರದೇಶಕ್ಕೆ ಹೋಗುತ್ತೇವೆಯೋ ಅಲ್ಲಿನ ಜನರಾಡುವ ಭಾಷೆಯ ಪರಿಜ್ಞಾನ ಕೆಲಮಟ್ಟಿಗಾದರೂ ಇರಬೇಕು. ಉದಾಹರಣೆಗೆ ಉತ್ತರ ಭಾರತದಲ್ಲಿ ಹಿಂದಿ ಭಾಷೆ ಮಾತನಾಡುವ ಜನರೇ ಹೆಚ್ಚು. ದಕ್ಷಿಣದಿಂದ ಅಲ್ಲಿಗೆ ಹೋದವರು ಹಿಂದಿ ತಿಳಿದಿರುವುದು ಉಚಿತ. ತೀರಾ ಆಳವಾಗಿ ಅಭ್ಯಾಸ ಮಾಡದಿದ್ದರೂ ದಿನನಿತ್ಯದ ಮಾತುಗಳನ್ನಾಡುವುದನ್ನು ಕಲಿತಿರಬೇಕು. ಭಾಷೆ ಅಡ್ಡಿಯಾಗದಿದ್ದರೆ ಪ್ರವಾಸ ಸುಖಮುಖ.

ನೀವು ಯಾವ ಪ್ರದೇಶಕ್ಕೆ ಪ್ರವಾಸ ಹೋಗುತ್ತೀರೊ ಆ ಪ್ರದೇಶಕ್ಕೆ ಸಂಬಂಧಿಸಿದ ಗೈಡ್ ಅಥವಾ ಮಾಹಿತಿ ಪುಸ್ತಕವೊಂದನ್ನೂ ಇಟ್ಟುಕೊಳ್ಳಬೇಕು. ಮೊದಲೇ ಓದಿಕೊಂಡಿದ್ದರೆ ಇನ್ನೂ ಚೆನ್ನ. ಈಗೀಗ ಪ್ರವಾಸೋದ್ಯಮ ಇಲಾಖೆಯೇ ಪ್ರತಿ ರಾಜ್ಯದ ಪ್ರೇಕ್ಷಣೀಯ ಸ್ಥಳಗಳ ವಿವರ, ರಾಜಧಾನಿಯಿಂದ ಆ ಸ್ಥಳಗಳಿಗಿರುವ ದೂರ ಮೊದಲಾದುವನ್ನು ಅಚ್ಚುಮಾಡಿಸಿ ಉಚಿತವಾಗಿ ವಿತರಿಸುವ ಕಾರ್ಯಕ್ರಮ ಇಟ್ಟುಕೊಂಡಿರುತ್ತದೆ. ಸಂಕ್ಷಿಪ್ತ ಮಾಹಿತಿಗಳಲ್ಲದೆ ಪ್ರದೇಶದ ಸಂಪೂರ್ಣ ವಿವರಗಳಿರುವ ಪುಸ್ತಕಗಳಾದರೆ ಹೆಚ್ಚು ಲಾಭ. ಒಂದು ಪ್ರದೇಶದ ಇತಿಹಾಸ ತಿಳಿದಿರಬೇಕಾದುದು ತೀರಾ ಅವಶ್ಯ. ಜ್ಞಾನವನ್ನು ಹೆಚ್ಚಿಸಿ ಕೊಳ್ಳಲು ಅವಕಾಶವಾಗುತ್ತದೆ.

ಪ್ರವಾಸ ಹೋಗುವ ಮೊದಲು ನಿಮ್ಮ ಬಳಿ ಒಂದು ಡೈರಿ ಇಟ್ಟುಕೊಳ್ಳಿ. ಯಾತ್ರೆ ಕಾಲದಲ್ಲಾದ ಅನುಭವಗಳು, ಖರ್ಚುವೆಚ್ಚಗಳು, ಪರಿಚಯವಾದವರ ವಿಳಾಸಗಳು, ಅಂಗಡಿಗಳ ವಿವರ ಇತ್ಯಾದಿಗಳನ್ನು ಡೈರಿಯಲ್ಲಿ ಬರೆದಿಟ್ಟುಕೊಳ್ಳಲು, ಸಾಧ್ಯವಾಗುತ್ತದಲ್ಲದೆ ಸ್ಮೃತಿಯಲ್ಲಿಲ್ಲದಾಗ ಅದನ್ನು ಓದಿಕೊಂಡು ಜೀವನದ ಆನಂದ ದಿನಗಳನ್ನು ಮೆಲುಕುಹಾಕಬಹುದು.

ಯಾತ್ರೆ ಕಾಲದಲ್ಲಿ ಎದುರಾಗುವ ಸಮಸ್ಯೆ ಆಹಾರದ್ದಾಗಿದೆ. ನೀವು ವಾಸಿಸುತ್ತಿರುವ ಪದೇಶದಲಿ ಉಪಯೋಗಿಸುವ ಆಹಾರಕಿಂತ ಪವಾಸ ಸಳದಲಿ ಸಿಗುವ ಆಹಾರ

ಭಿನ್ನವಿರಬಹುದು. ದೊರೆತ ಆಹಾರದಲ್ಲಿಯೇ ರುಚಿ ಕಾಣಲು ಪ್ರಯತ್ನಿಸಿ. ಕೆಲವರು ಆಹಾರ ಸರಿಯಾಗಿ ದೊರಕುವುದೋ ಇಲ್ಲವೋ ಎಂದು ಯಾತ್ರೆ ಕೈಕೊಳ್ಳುವುದನ್ನು ಬಿಡುವುದು ಉಂಟು. ಬೇರೆ ಊರಿಗೆ ಹೋದಾಗ ಕೆಲವರು ಯಾವ ಉಪಾಹಾರ ಗೃಹದಲ್ಲಿ ತಮಗೆ ಮೆಚ್ಚುಗೆಯಾದ ಆಹಾರ ಸಿಗುವುದೆಂದು ಹುಡುಕಿ ಹೋಗುವುದುಂಟು. ಹೇಗೇ ಇರಲಿ, ಸಿಕ್ಕಿದ ಆಹಾರದಲ್ಲಿಯೇ ಸಂತೋಷವನ್ನು ಕಾಣಿ. ಕೆಲವರು ದೀರ್ಘಕಾಲದ ಯಾತ್ರೆ ಕೈಕೊಂಡಾಗ ತಮ್ಮೊಡನೆ ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ತಂಗಿದ ಕಡೆ ಬೇಯಿಸಿಕೊಳ್ಳುವುದೂ ಇದೆ. ಅದು ಅವರ ಅನುಕೂಲವಿದ್ದಂತೆ. ಆದಾಗ್ಯೂ ಎಲ್ಲ ಕಾಲದಲ್ಲಿ ನಾವು ಬಯಸಿದುದೇ ಸಿಗುತ್ತದೆ ಎಂದು ಹೇಳುವಂತಿಲ್ಲ. ಇನ್ನು ನೀರು, ಬಹುಬೇಗ ದೈಹಿಕ ಸ್ಥಿತಿಯನ್ನು ಬದಲಾಯಿಸುವುದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುವ ನೀರು. ನೀವು ಹೋಗಿರುವ ಪ್ರದೇಶದಲ್ಲಿ ಉತ್ತಮ ಎಂದು ಕಂಡುಬಂದ ನೀರನ್ನು ಶೇಖರಿಸಿಕೊಳ್ಳುತ್ತ ಹೋಗುವುದು ಒಳ್ಳೆಯ ಅಭ್ಯಾಸ.

ಯಾತ್ರೆ ಕಾಲದಲ್ಲಿ ಆದಷ್ಟೂ ಕಡಿಮೆ ಸಾಮಾನುಗಳನ್ನು [ಲಗ್ಗೇಜ್] ಇಟ್ಟುಕೊಳ್ಳುವುದು ಅಗತ್ಯ. ಹೊರೆಯಾದಷ್ಟೂ ಪ್ರವಾಸ ಕಷ್ಟಕರ.

ದೀರ್ಘಕಾಲದ ಯಾತ್ರೆಯಲ್ಲಿ ಹಣದ ಅವಶ್ಯ ತುಂಬಾ ಇರುತ್ತದೆ. ಹಣ ಬಳಿಯಲ್ಲಿರಬೇಕು ನಿಜ. ಆದರೆ ಹೆಚ್ಚು ಹಣವನ್ನು ಜೇಬಿನಲ್ಲಿ ಒಯ್ಯುವ ಬದಲು ಟ್ರಾವೆಲರ್ಸ್ ಚೆಕ್ ಇಟ್ಟುಕೊಂಡು ಹೋಗುವುದು ಉತ್ತಮ. ಮುಖ್ಯ ಸ್ಥಳಗಳಲ್ಲಿ ಕ್ರೆಡಿಟ್ ಕಾರ್ಡ್‌ಗಳ ಮೂಲಕ ಬೇಕೆನಿಸಿದಷ್ಟು ಹಣವನ್ನು ಪಡೆಯಬಹುದು. ಹೆಂಗಸರು ಬೆಲೆಬಾಳುವ ಆಭರಣಗಳನ್ನು ಧರಿಸದಿರುವುದು ಉಚಿತ.

ಪ್ರವಾಸ ಕಾಲದಲ್ಲಿ ಸಣ್ಣಪುಟ್ಟ ದೈಹಿಕ ತೊಂದರೆಗಳು ಉಂಟಾಗುವುದು ಸಹಜ. ನಿಮ್ಮ ದೈನಂದಿನ ಜೀವನದಲ್ಲಿ ನಿಮಗೆ ಎದುರಾಗ ಬಹುದಾದ ತಲೆನೋವು, ಕೆಮ್ಮು, ನೆಗಡಿ ಮೊದಲಾವು ಸಣ್ಣಪುಟ್ಟ ಬೇನೆಗಳಿಗೆ ಸೂಕ್ತ ಮಾತ್ರೆ ಔಷಧಗಳನ್ನು ಜೊತೆಯಲ್ಲಿಟ್ಟುಕೊಂಡಿರುವುದು ಲೇಸು.

ಗುಂಪಿನಲ್ಲಿ ಯಾತ್ರೆ ಹೋದಾಗ ನೀವು ಯಾವ ಸಂಸ್ಥೆಯ ವತಿಯಿಂದ ಯಾತ್ರೆ ಹೋಗುತ್ತಿರೋ ಅವರೇ ತಂಗಲು ಸೂಕ್ತವಾದ ವಸತಿಗೃಹ, ಲಾಡ್ಜ್‌ಗಳನ್ನು ಏರ್ಪಡಿಸಿರುತ್ತಾರೆ. ಆದರೆ. ಆದರೆ ನೀವು ಒಬ್ಬರೋ ಇಬ್ಬರೋ ನಾಲ್ವರೋ ಪ್ರವಾಸ ಕೈಕೊಂಡಾಗ ತಂಗಲು ಮೊದಲೇ ಅವಕಾಶ ಮಾಡಿಕೊಳ್ಳಬೇಕು. ಕೆಲವೊಮ್ಮೆ ನೀವು ಹೋದ ಸ್ಥಳಗಳಲ್ಲಿ ಸರಿಯಾದ ಲಾಡ್ಜ್‌ಗಳು ಸಿಗದೆ ಪರದಾಡುವ ಪರಸ್ಥಿತಿ ಇರುತ್ತದೆ. ಮುನ್ನೆಚ್ಚರಿಕೆ ಲೇಸು.

ನೀವು ಪ್ರವಾಸ ಹೋಗುವ ಕಾಲವನ್ನು ಗಮನಿಸಿ. ಚಳಿಗಾಲವಾದಲ್ಲಿ ತಕ್ಕ ಬಟ್ಟೆ ಬರೆ ತೆಗೆದುಕೊಂಡು ಹೋಗಬೇಕು. ಬಿಸಿಲು ಕಾಲವಾದಲ್ಲಿ ಹಿತಮಿತವಾದ ವಸ್ತುಗಳು ಸಾಕಾದಾವು. ಅದೂ ಅಲ್ಲದೆ ಯಾವ ಪ್ರದೇಶಕ್ಕೆ ನೀವು ಹೋದರೂ ಮೊದಲು ಅಲ್ಲಿಗೆ ಯಾವ ಕಾಲದಲ್ಲಿ ಹೋದರೆ ಸೂಕ್ತ ಎಂಬುದನ್ನೂ ತಿಳಿದಿರಿ. ಆ ಕಾಲದಲ್ಲಿಯೇ ಅಲ್ಲಿಗೆ ಹೋದರೆ ಪ್ರವಾಸ ಸುಖಕರ. ಆದಾಗ್ಯ ಪ್ರವಾಸದ ಉದ್ದಿಶ್ಯ ಮುಖ್ಯ. ಕಛೇರಿ ಅಥವಾ ಕಾರ್ಖಾನೆಯ ನಿಮಿತ್ತ ಹೋದಾಗ ಕಾಲದ ಗಣನೆ ಬರುವುದಿಲ್ಲ. ಆಗಷ್ಟೆ ಪ್ರವಾಸಿ ಸುಖಕರ ಪ್ರವಾಸಕ್ಕಾಗಿ ಯತ್ನಿಸಬೇಕು.

ಯಾವ ಪ್ರದೇಶಕ್ಕೆ ಯಾತ್ರೆ ಹೋಗಲಿ ಹಿಂದಿರುಗುವಾಗ ನೆನಪಿಗಾಗಿ ಅಲ್ಲಿನ ಬಹುಮೂಲ್ಯ ವಸ್ತುಗಳನ್ನು ಖರೀದಿಸಿ ತನ್ನಿ.

ಯಾತ್ರೆ ಮಾನವನ ಜೀವನದ ಒಂದು ಮಹತ್ವಪೂರ್ಣ ಅಧ್ಯಾಯ; ಶಿಕ್ಷಣ ಕೂಡ. ಅನುಭವ ವಿಸ್ತಾರವಾಗುತ್ತದೆ ಪ್ರವಾಸದಿಂದ.

ಪ್ರವಾಸ ಎಂದಿಗೂ ಲಾಭಕರ. ಹಣ ಖರ್ಚಾಗುವುದೆಂಬ ಭೀತಿಯಿಂದ ಕೆಲವರು ಪ್ರವಾಸ ಹೋಗುವುದೇ ಇಲ್ಲ. ಆದರೆ ಪ್ರವಾಸ ನೀಡುವ ಶಿಕ್ಷಣ ಸಂಪಾದಿಸಿದ ಹಣಕ್ಕೂ ದೊಡ್ಡದು ಎಂಬುದನ್ನು ಮರೆಯುವಂತಿಲ್ಲ. ಶಾಲೆಯಲ್ಲಿ ದೊರಕದ ಶಿಕ್ಷಣ ಅದು. ಅನುಭವವನ್ನು ವಿಸ್ತರಿಸಿ ಜೀವನದ ಉಳಿದ ಭಾಗಕ್ಕೆ ನೆರವಾಗುವ ಪ್ರವಾಸ ಯಾರಿಗೆ ಬೇಡ?

# ಕನ್ನಡದಲ್ಲಿ ಪ್ರವಾಸ ಸಾಹಿತ್ಯ : ಒಂದು ಅಧ್ಯಯನ

ಪಾಶ್ಚಾತ್ಯರಿಗೆ ಪ್ರವಾಸವು ಒಂದು ಹವ್ಯಾಸ. ಹೊಸ ಹೊಸ ಅನುಭವಗಳಿಂದ ತಮ್ಮ ಬದುಕನ್ನು ಸಂಪನ್ನಗೊಳಿಸಿಕೊಳ್ಳಬೇಕೆಂಬ ಅದಮ್ಯ ಜೀವನೋತ್ಸಾಹ ಅವರಲ್ಲಿದೆ. ಸುತ್ತಾಟದಿಂದ ಮುದುಡಿದ ಮನಸ್ಸಿಗೆ ಚೈತನ್ಯದ ಊಟೆ ಚಿಮ್ಮುತ್ತದೆಂದು ಅವರು ನಂಬಿದ್ದುದರಿಂದ ಹಾಗೂ ಅದಕ್ಕೆ ಬೇಕಾದ ವಿರಾಮ, ಸೌಲಭ್ಯ, ಹಣಕಾಸು ಅವರಿಗೆ ಇದ್ದುದರಿಂದ ಅವರು ತಮಗೊದಗಿದ ವಿಶಿಷ್ಟಾನುಭವಗಳನ್ನು ಬರಹದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದರು. ಪ್ರವಾಸ ಸಾಹಿತ್ಯವು ಮೊದಲಿಗೆ ಸೃಷ್ಟಿಯಾದುದು ಆಂಗ್ಲರಿಂದ. ನಮ್ಮಲ್ಲಿ ೧೯ನೇ ಶತಮಾನದವರೆವಿಗೂ ಪ್ರವಾಸವೆಂದರೆ ತೀರ್ಥಯಾತ್ರೆಯೇ ಆಗಿದ್ದಿತು. ಪಾಶ್ಚಾತ್ಯರಂತೆ ಅನುಭವದ ಶೋಧನೆ ಗುರಿಯಾಗುಳ್ಳ, ನಿರ್ವ್ಯಾಜ್ಯ ಆನಂದವೇ ಪರಮ ಗಂತವ್ಯವಾಗುಳ್ಳ ಪ್ರವಾಸ ನಮ್ಮಲ್ಲಿ ಕಳೆದ ಐದು ದಶಕಗಳಿಂದ ಪ್ರಾರಂಭವಾಗಿದೆ.

ಕನ್ನಡದಲ್ಲಿ ಮೊದಲಿಗೆ ಬಂದ ಪ್ರವಾಸ ಸಾಹಿತ್ಯದಲ್ಲಿ ಹೆಚ್ಚಿನವು ತೀರ್ಥ ಕ್ಷೇತ್ರಗಳನ್ನು ಪರಿಚಯಿಸುವ ಸೀಮಿತ ಉದ್ದೇಶ ಹೊಂದಿವೆ. ಕ್ಷೇತ್ರ ಮಹಿಮೆ ಪ್ರಧಾನವಾಗಿರುವ ಇವುಗಳಲ್ಲಿ ಸಾಹಿತ್ಯಾಂಶ ಗೌಣ. ಉಪಲಬ್ಧ ಆಧಾರಗಳ ಮೇಲೆ ಹೇಳುವುದಾದರೆ ಸದ್ಯಕ್ಕೆ ಕನ್ನಡದಲ್ಲಿ ಬಂದ ಮೊದಲು ಪ್ರವಾಸ ಕೃತಿಯೆಂದರೆ ೧೯ನೇ ಶತಮಾನದ ಕೊನೆಯ ಭಾಗದಲ್ಲಿ (ಸು. ೧೮೯೦) ಬಂದ ಸೂರಿ ವೆಂಕಟರಮಣ ಶಾಸ್ತ್ರಿಗಳ 'ದಕ್ಷಿಣ ಭಾರತ ಯಾತ್ರೆ'. ಆದರೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಸಮೃದ್ಧವಾಗಿ ಬಂದುದು ೨೦ನೇ ಶತಮಾನದ ಮಧ್ಯಭಾಗದಲ್ಲಿಯೇ.

ಕಥನಾತ್ಮಕವಾದ ಪ್ರವಾಸ ಸಾಹಿತ್ಯವು ಗದ್ಯರೂಪದಲ್ಲಿದ್ದು ಪ್ರಬಂಧ ಶೈಲಿಯನ್ನು ಹೊಂದಿವೆ. ಅದು ರಸವತ್ತಾದ ಕಾದಂಬರಿಯಂತೆ ಸುಲಭವಾಗಿ ಓದಿಸಿಕೊಂಡು ಹೋಗಬೇಕು. ಕಥೆ ಕಾದಂಬರಿಗಳಲ್ಲಿ ಸಿದ್ಧ ವಸ್ತು-ಪಾತ್ರ-ಸನ್ನಿವೇಶಗಳಿರುವುದರಿಂದ ಹಾಗೂ ಅಲ್ಲಿ ಮುಖ್ಯವಾಗಿ ಒಂದು ಕಥಾಸೂತ್ರವಿರುವುದರಿಂದ ಅವು ಎಲ್ಲ ವರ್ಗದ ಜನರನ್ನು ಆಕರ್ಷಿಸುತ್ತವೆ. ಪ್ರವಾಸ ಸಾಹಿತ್ಯದಲ್ಲಿ ಕಾದಂಬರಿಯಲ್ಲಿರುವಂತೆ ಕಲ್ಪನಾಂಶವಿದ್ದು, ಅನುಭವ ನಿರೂಪಣೆಗೆ ಹೆಚ್ಚಿನ ಆದ್ಯತೆ. ಆದಕ್ಕೆ ತನ್ನದೇ ಆದ ನಿರ್ದಿಷ್ಟ ಓದುಗರ ವಲಯವಿದೆ. ಬೌದ್ಧಿಕವಾಗಿ ಬೆಳೆದವರಿಗೆ ಬಹುಶಃ

ಪ್ರಿಯವಾಗಬಹುದಾದ ಸಾಹಿತ್ಯ ಪ್ರಕಾರವಿದೆನ್ನಬಹುದು. ಕನ್ನಡದಲ್ಲಿ ಪ್ರವಾಸ ಸಾಹಿತ್ಯವನ್ನು-ಹೆಚ್ಚಿನ ಸಂಖ್ಯೆಯಲ್ಲಿ-ಕನ್ನಡದ ಪ್ರಸಿದ್ಧ ಬರಹಗಾರರೇ ಬರೆದಿರುವುದು ಗಮನಾರ್ಹ ಸಂಗತಿ. ಆದರೆ ಪ್ರಸಿದ್ಧ ಸಾಹಿತಿಗಳಲ್ಲದವರೂ, ಬದುಕಿನಲ್ಲಿ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿರುವ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಪಡದೆ ಇರುವವರೂ ಪ್ರವಾಸ ಸಾಹಿತ್ಯವನ್ನು ಬರೆದಿರುವರು. ಇದೂ ಸಹಾ ಲಕ್ಷಿಸಬೇಕಾದ ಸಂಗತಿ. ಕನ್ನಡದಲ್ಲಿ ಇತರ ಸಾಹಿತ್ಯ ಪ್ರಕಾರಗಳಂತೆ ಪ್ರವಾಸ ಸಾಹಿತ್ಯವು ಹುಲುಸಾಗಿ ಬಂದಿಲ್ಲದಿದ್ದರೂ, ನಿರಾಶೆಪಡುವ ಸ್ಥಿತಿಯೇನೂ ಇಲ್ಲ. ಇದು ಪತ್ರಸಾಹಿತ್ಯ, ದಿನಚರಿ ಹಾಗೂ ಅನುಭವ ಕಥನ -ಹೀಗೆ ಮೂರು ರೂಪಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಪ್ರವಾಸ ಸಾಹಿತ್ಯವನ್ನು ಹೀಗೆ ವಿಂಗಡಿಸುವುದು ಸರಿಯೆನ್ನಿಸಿದರೂ ಔಚಿತ್ಯದ ದೃಷ್ಟಿಯಿಂದ ಸಮಂಜಸವಾಗಿ ತೋರುವುದಿಲ್ಲ. ಕನ್ನಡದ ಪ್ರವಾಸ ಸಾಹಿತ್ಯವು ಪತ್ರ ಸಾಹಿತ್ಯ ಹಾಗೂ ದಿನಚರಿ ರೂಪದಲ್ಲಿ ಬಂದಿರುವುದು ಬೆರಳೆಣಿಕೆಯಷ್ಟು ಮಾತ್ರ. ಅನುಭವ ಕಥನ ಹೆಚ್ಚಿನ ಸಂಖ್ಯೆಯಲ್ಲಿವೆ. ಪ್ರವಾಸ ಸಾಹಿತ್ಯವನ್ನು ತೀರ್ಥಯಾತ್ರಾ, ಸಾಂಸ್ಕೃತಿಕ, ಶೈಕ್ಷಣಿಕ, ವ್ಯಾವಹಾರಿಕ ಹಾಗೂ ಪ್ರವಾಸ ಪ್ರೇಮಿ-ಹೀಗೆ ಸ್ಥೂಲವಾಗಿ ಐದು ಬಗೆಯಲ್ಲಿ ವಿಂಗಡಿಸುವ ಪ್ರಯತ್ನ ನಡೆದಿದೆ.[೧] ಅಭ್ಯಾಸದ ಅನುಕೂಲಕ್ಕಾಗಿ ನಾವು ಪ್ರವಾಸ ಸಾಹಿತ್ಯವನ್ನು

೧. ವಿಶ್ವಪರ್ಯಟನ ಸಾಹಿತ್ಯ

೨. ಬಿಡಿ ಬಿಡಿ ದೇಶಗಳ ಪ್ರವಾಸ ಸಾಹಿತ್ಯ

೩. ಭರತಖಂಡ ಪ್ರವಾಸ ಸಾಹಿತ್ಯ

೪. ತೀರ್ಥಯಾತ್ರಾ ಸಾಹಿತ್ಯ

೫. ಕರ್ನಾಟಕ ಪ್ರವಾಸ ಸಾಹಿತ್ಯ

೬. ಅನುವಾದ ಪ್ರವಾಸ ಸಾಹಿತ್ಯ

ಹೀಗೆ ಆರು ಬಗೆಯಲ್ಲಿ ವಿಂಗಡಿಸಿಕೊಳ್ಳಬಹುದು. ಇದರಿಂದ ಒಂದೊಂದು ವಿಭಾಗಕ್ಕೆ ಬರುವ ಕೃತಿಗಳ ಅಧ್ಯಯನವನ್ನು ಸಮಗ್ರವಾಗಿ ನಡೆಸಲು ಸಾಧ್ಯವಾಗುತ್ತದೆ; ವೈವಿಧ್ಯಮಯವಾದ ಬರವಣಿಗೆಯನ್ನು ಗಮನಿಸಲು ಅವಕಾಶವಾಗುತ್ತದೆ. ಒಂದು ರಾಷ್ಟ್ರವನ್ನು ಹಲವರು ಬೇರೆ ಬೇರೆ ಕಾರಣಗಳಿಗಾಗಿ ಸಂದರ್ಶಿಸಿದಾಗ ಅವರ

---

೧. ನೋಡಿ : ಸಾ.ಶಿ. ಮರುಳಯ್ಯ: ಪ್ರವಾಸ ಸಾಹಿತ್ಯ 'ಕನ್ನಡ ನುಡಿ' ೨೬, ೧೨ (ಬೆಳ್ಳಿ ಸಂಚಿಕೆ, ೧೯೬೩) ಪು ೭೩.

ಅನುಭವಗಳು, ವೈವಿಧ್ಯಮಯವೂ, ವೈಯಕ್ತಿಕವೂ ಆಗುತ್ತದೆ. ಇಲ್ಲಿ ಅವರವರ ಅಭಿರುಚಿ, ಆಸಕ್ತಿ, ಒಲವು, ನಿರೀಕ್ಷಣಾ ವಿಧಾನ, ತಿಳುವಳಿಕೆ-ಇವುಗಳನ್ನು ಅನುಸರಿಸಿ ಅನುಭವ ವೈವಿಧ್ಯಮಯವಾಗುವುದರ ಬಗೆಗೆ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ.

**ವಿಶ್ವಪರ್ಯಟನ ಸಾಹಿತ್ಯ:**

ನಮ್ಮಲ್ಲಿ ವಿಶ್ವಪರ್ಯಟನ ಮಾಡಿ ಬಂದವರ ಸಂಖ್ಯೆ ತೀರಾ ಕಡಿಮೆ. ಇದು ಸ್ಥಿತಿವಂತರಿಗೆ ಮಾತ್ರ ಸಾಧ್ಯವಾದ ಕಾರಣ ಹಾಗೂ ವಿಶ್ವಪರ್ಯಟನೆ ಮಾಡಿದವರೆಲ್ಲರೂ ತಮ್ಮ ಅನುಭವಗಳನ್ನು ಪ್ರವಾಸ ಸಾಹಿತ್ಯ ರೂಪದಲ್ಲಿ ಹೇಳಿಲ್ಲವಾದ ಕಾರಣ ಅದರ ಸಂಖ್ಯೆ ಕಡಿಮೆಯಿದ್ದಿರಬಹುದು. ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರು ಪ್ರಪಂಚ ಸಂಚಾರವನ್ನು ೧೯೩೭-೩೮ರಲ್ಲಿ ಹಡಗಿನಲ್ಲಿ ಕೈಗೊಂಡು ತಮ್ಮ ಪ್ರವಾಸಾನುಭವಗಳನ್ನು 'ನನ್ನ ಪ್ರಪಂಚ ಸಂಚಾರ' ಎಂಬ ಕೃತಿಯ ಎರಡು ಅಧ್ಯಾಯಗಳಲ್ಲಿ ಹೇಳಿರುವರು. ಈ ಪ್ರವಾಸನಾನುಭವ ಅರಸರೊಬ್ಬರ ವೈಯಕ್ತಿಕ ಒಲವುಗಳನ್ನು ಪ್ರತಿನಿಧಿಸುವುದರಿಂದ ಸಾಮಾನ್ಯ ಓದುಗನಿಗೆ ಯಾವ ಖುಷಿಯನ್ನೂ ಕೊಡುವುದಿಲ್ಲ. ವಿಶ್ರಾಂತಿಗಾಗಿ, ಮೈ ಮನಗಳಿಗೆ ಮುದುವನ್ನೊದಗಿಸಲಿಕ್ಕಾಗಿ ಮಹಾರಾಜರು ಕೈಗೊಂಡ ಪ್ರವಾಸವಿದಾದ್ದರಿಂದ ಇದರಲ್ಲಿ ಅವರ ಮನೋಲಹರಿ ಹರಿಮುದ್ದ ವರ್ಣನೆಗೆ ಮಾತ್ರ ಪ್ರಾಧಾನ್ಯ ದೊರೆತಿದೆ. ಎಷ್ಟೋ ಕಡೆ, ಇಲ್ಲಿಂದ ಇಲ್ಲಿಗೆ ಹೊರಟೆವು ಎಂದು ನೀರಸ ವಿವರ ಬರುತ್ತದೆ. ನೋಡಿದ ಸ್ಥಳಗಳು, ತಂಗಿದ್ದ ಎಡೆಗಳು, ಕಂಡ ಸುಂದರ ದೃಶ್ಯಗಳು -ಇವೆಲ್ಲಾ ಟಿಪ್ಪಣಿ ರೂಪದಲ್ಲಿ ಬರುವುದರಿಂದ ಓದುಗರು ಒಮ್ಮೆ ಓದಿ ಸುಲಭವಾಗಿ ಮರೆತು ಬಿಡಬಹುದು. ವರ್ಣನೆಗಳು ಎಲ್ಲಿಯೂ ಗಾಢವಾಗಿ ನಮ್ಮನ್ನು ಸೆಳೆಯುವುದಿಲ್ಲ; ದೃಶ್ಯಗಳು ಸ್ಥಾಯಿಯಾಗಿ ನಮ್ಮ ಮನಃಪಟಲದಲ್ಲಿ ನಿಲ್ಲುವುದಿಲ್ಲ. ಭಾಷೆಯೂ ಕೃತಕವಾಗಿದೆ. ಓದುಗನ ಕುತೂಹಲವನ್ನು ಎಲ್ಲಿಯೂ ಮೀಟಲಾರದ ಈ ಪ್ರವಾಸ ಕಥನ ಸರಾಗವಾಗಿ ಓದಿಸಿಕೊಂಡು ಹೋಗುವ ಗುಣವನ್ನೂ ಹೊಂದಿಲ್ಲ.

ಕಲಾ ರಾಯಭಾರಿಗಳಾಗಿ ಆಗಿನ ಮೈಸೂರು ಸರಕಾರದ ನೆರವಿನಿಂದ ಮೂರು ವರ್ಷಗಳ ಕಾಲ ವಿಶ್ವ ಪರ್ಯಟನ ಮಾಡಿ ಭಾರತೀಯ ನೃತ್ಯ ಪದ್ಧತಿಯ ವೈಶಿಷ್ಟ್ಯವನ್ನು ವಿದೇಶೀಯರಿಗೆ ಪರಿಚಯಿಸಿದ ಕೀರ್ತಿ ಕನ್ನಡಿಗ ಕಲಾವಿದ ದಂಪತಿಗಳಾದ ಶ್ರೀಮತಿ ಚಂದ್ರಭಾಗಾದೇವಿ ಮತ್ತು ಶ್ರೀಕೃಷ್ಣರಾವ್ ಅವರಿಗೆ ಸೇರಿದೆ. ಈ ಕಲಾವಿದ ದಂಪತಿಗಳ ಅಭೂತಪೂರ್ವವಾದ ಕಲಾಯಾತ್ರೆಯ ವಿವರಗಳು 'ಗೆಜ್ಜೆಯ ಹೆಜ್ಜೆ ನುಡಿ'ಯಲ್ಲಿ ಉದ್ದಕ್ಕೂ ಒಕ್ಕಣೆಗೊಂಡಿವೆ. ಇದು ಪತ್ರ ಸಾಹಿತ್ಯ ಪ್ರಕಾರಕ್ಕೆ ಸೇರಿದುದು. ಶ್ರೀಮತಿ ಚಂದ್ರಭಾಗಾದೇವಿಯವರು ತಮ್ಮ ಕೃತಿಯಲ್ಲಿ ಕಲಾಯಾತ್ರೆಯ ಅನುಭವಗಳನ್ನೂ ತಾವು ಕಂಡ ಸುಖಿಸಿದ ನೆಲ-ಜಲ-ಜನಗಳ ಪರಿಚಯವನ್ನೂ ಪತ್ರಗಳ ಮೂಲಕ

ಮಾಡಿಕೊಟ್ಟಿರುವರು. ಈ ಪತ್ರಗಳಾದರೊ ತಂದೆ-ತಾಯಿಯರಿಗೆ, ಆತ್ಮೀಯರಿಗೆ ಹಾಗೂ ಮುದ್ದು ಮಕ್ಕಳಿಗೆ ಬರೆದವು. ಅವರವರಿಗೆ ತಕ್ಕಂತೆ ಪತ್ರಗಳಲ್ಲಿ ವಿಷಯ ನಿರೂಪಣೆ ಮಾಡಲಾಗಿದೆ. ಪತ್ರಗಳನ್ನು ಬರೆಯುವಾಗ ಮುಂದೆ ಅವು ಮುದ್ರಣಯೋಗ ಕಾಣುತ್ತವೆಯೆಂಬ ಕಲ್ಪನೆ ಲೇಖಕಿಗೆ ಇಲ್ಲದ್ದರಿಂದ ತೀರಾ ವೈಯಕ್ತಿಕವಾದ ಕೌಟುಂಬಿಕ ವಿವರಗಳೆಲ್ಲವೂ ಅವುಗಳಲ್ಲಿ ನುಸುಳಿವೆ. ಭಾವನಾ ವಿವಶತೆ ಈ ಪತ್ರಗಳಲ್ಲಿ ಎದ್ದು ಕಾಣುವ ಅಂಶ. ಬೆಳೆದ ತಮ್ಮ ಮಕ್ಕಳಿಗೆ ಬರೆದ ಕಾಗದಗಳಲ್ಲಿ ತಾಯಿಯ ಅಂತರಂಗದ ಅತಿಶಯವಾದ ಪ್ರೇಮ ವಾತ್ಸಲ್ಯಗಳು, ಅವರ ಏಳಿಗೆಯ ಬಗೆಗಿನ ಕನಸುಗಳು, ಮಕ್ಕಳ ಬಗೆಗಿನ ಕಳಕಳಿ -ಹೀಗೆ ಎಲ್ಲವೂ ಪಾಕಗೊಂಡು ಬಂದಿವೆ. ಆ ತಾಯಿಯ ದೇಹ ಸಹಸ್ರಾರು ಮೈಲಿ ದೂರದಲ್ಲಿದ್ದರೂ ಮನಸ್ಸು ಮಾತ್ರ ಮನೆಯ ಆವರಣದಲ್ಲೇ, ಮಕ್ಕಳ ಲಾಲನೆ-ಪಾಲನೆ ಸಿಹಿಯುಪ್ಪುಗಳಲ್ಲೇ ವಿಹರಿಸುತ್ತದೆ. ಮಕ್ಕಳನ್ನು ಅನಿವಾರ್ಯವಾಗಿ ಅಗಲಿ ದೂರದೇಶದಲ್ಲಿರಬೇಕಾದಾಗ ಆ ತಾಯಿಯ ಮನಸ್ಸು ತನ್ನ ಮಕ್ಕಳ ಬುದ್ಧಿವಂತಿಕೆ, ಜಾಣ್ಮೆಗಳನ್ನು ನೆನೆದು ಪುಳಕಗೊಳ್ಳುತ್ತದೆ. ಆ ಸವಿನೆನಪಿನಲ್ಲಿ ಮುದಗೊಂಡ ಮನಸ್ಸು ಅಂತಹ ಮಕ್ಕಳನ್ನು ಪಡೆದ ತಾವು ಭಾಗ್ಯವಂತರೆಂದು ಹತ್ತಾರು ಸಾರಿ ತನಗೆ ತಾನೇ ಅಂದುಕೊಳ್ಳುತ್ತದೆ. ಮಕ್ಕಳ ನೆನಪು ತೀವ್ರವಾದಾಗ ಏಕಾಂತದಲ್ಲಿ ಆ ತಾಯಿ ಕಣ್ಣೀರು ಮಿಡಿಯುವಳು, ತನಗೆ ತಾನೆ ಸಮಾಧಾನ ತಂದುಕೊಳ್ಳುವಳು. ಹೀಗೆ ದೂರದೇಶದಲ್ಲಿರುವ ಆ ಮಮತಾಮಯಿ ತಾಯಿಯು ಮನದ ತುಡಿತ ಮಿಡಿತಗಳು ಹೃದಯಸ್ಪರ್ಶಿಯಾಗಿ ಪತ್ರರೂಪದಲ್ಲಿ ಬಂದಿವೆ. -ಹೆಂಗುರಳಿನ ಅಂತರಾಳದಿಂದ ಅವು ಮೂಡಿ ಬಂದಿರುವುದರಿಂದಲೂ ಏನೊ ಅವಕ್ಕೆ ಭಾವುಕ ಜನರ ಹೃದಯ ಮೀಟಬಲ್ಲ ಶಕ್ತಿಯಿದೆ.

ತಂದೆ-ತಾಯಿ ಹಾಗೂ ಆತ್ಮೀಯರಿಗೆ ಬರೆದ ಪತ್ರಗಳಲ್ಲಿ, ಬಹುವಾಗಿ ಲೇಖಕಿ ತಮ್ಮ ನಾಟ್ಯ ಪ್ರದರ್ಶನಗಳು ಹಾಗೂ ಅವುಗಳ ಬಗೆಗೆ ಪಾಶ್ಚಾತ್ಯರು ತೋರಿದ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿರುವರು. ತಮ್ಮ ಸಾಧನೆ-ಸಿದ್ಧಿಗಳ ಬಗೆಗೆ ಯಾವ ಸಂಕೋಚವೂ ಇಲ್ಲದೆ ಹೆಮ್ಮೆಯ ಮಾತುಗಳನ್ನು ಹೇಳಿಕೊಂಡಿರುವರು. ಏಕೆಂದರೆ, ಅವರ ಕಲಾಪ್ರದರ್ಶನಗಳು ದೇಹ-ಮನಸ್ಸುಗಳ ಸತತ ಪರಿಶ್ರಮದ ಫಲಗಳು. ವಯಸ್ಸಲ್ಲದ ವಯಸ್ಸಿನಲ್ಲಿ, ಸೌಕರ್ಯಗಳ ಕೊರತೆ, ಹಣದ ಅಭಾವ -ಇವುಗಳಿಂದ ಬಳಲಿದರೂ ಧೈರ್ಯಗುಂದದೆ ಪ್ರದರ್ಶಿಸಿದ ನೃತ್ಯ ಕಾರ್ಯಕ್ರಮಗಳು ಲೇಖಕಿಗೆ ಮನ್ನಣೆ ದೊರಕಿಸಿಕೊಟ್ಟವು. ತಾಯ್ನಾಡವರ ಪ್ರೋತ್ಸಾಹ ಶ್ಲಾಘನೆಗಳಿಗಿಂತ ಮಿಗಿಲಾಗಿ ವಿದೇಶಗಳಲ್ಲಿನ ವಿಮರ್ಶಕ-ಪ್ರೇಕ್ಷಕರುಗಳಿಂದ ಗೌರವಾದರಗಳು ಅವರಿಗೆ ದೊರೆತವು. ಆ ಸಂತೋಷವನ್ನು ತನ್ನವರಿಗೆ ಪತ್ರಮುಖೇನ ಲೇಖಕಿ ಹಂಚಿಕೊಂಡಿದ್ದರಲ್ಲಿ ಔಚಿತ್ಯವಿದೆ. ಬಿಡುವಿನ ವೇಳೆಯಲ್ಲಿ, ತಾವು ಎಡೆಯಾಡಿದ ಸ್ಥಳಗಳ ಪ್ರಕೃತಿ

ಸೌಂದರ್ಯವನ್ನೂ, ಜನಜೀವನವನ್ನೂ, ಜನರ ಸುಸಂಸ್ಕೃತಿಯನ್ನೂ, ಕಲಾ ಪ್ರೇಮವನ್ನೂ, ರಸಿಕತೆಯನ್ನೂ, ಸೌಜನ್ಯವನ್ನೂ, ಹೃದಯ ವೈಶಾಲ್ಯವನ್ನೂ ಲೇಖಕಿ ವಿವರವಾಗಿ ಪರಿಚಯಿಸಿರುವರು. ಅವರ ಭಾವಪೂರ್ಣ ಬರವಣಿಗೆ ಹಲವಡೆ ನಿರೀಕ್ಷೆ ಮೀರಿ ಮನಸ್ಸನ್ನು ಮೀಟುತ್ತದೆ. ಲಲಿತವಾದ ಶೈಲಿ ಸಂಸ್ಕಾರಗೊಂಡ ಮನಸ್ಸಿನ ನೋವು ನಲಿವುಗಳನ್ನು ತೋಡಿಕೊಳ್ಳುವಲ್ಲಿ ಮಿನುಗಿದೆ.

ಜನಪ್ರಿಯ ಕಾದಂಬರಿಕಾರರಾದ ಟಿ.ಕೆ. ರಾಮರಾವ್‌ರವರು ಎರಡೂವರೆ ತಿಂಗಳ ಕಾಲ ಹನ್ನೊಂದು ರಾಷ್ಟ್ರಗಳ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಜೀವನವನ್ನು ಅಧ್ಯಯನ ಮಾಡಿ '**ಗೋಳದ ಮೇಲೊಂದು ಸುತ್ತು**' ಎಂಬ ತಮ್ಮ ಕೃತಿಯಲ್ಲಿ ತಮ್ಮ ಪ್ರವಾಸಾನುಭಾವಗಳ ಪಕ್ಷಿನೋಟವನ್ನು ಕೊಟ್ಟಿರುವರು. ಸಾಮಾನ್ಯ ಓದುಗನ ಆಸಕ್ತಿ ಕುತೂಹಲ ಮೀಟುವಂತೆ ತಮ್ಮ ಅನುಭವದ ಕಥನವನ್ನು ಲೇಖಕರು ಬಿಡಿಸಿರುವರು. ಪ್ರವಾಸಿಯಾಗಿ ಸುತ್ತಾಡುವಾಗ ತಮಗೊದಗಿದ ಅನುಭವ ಅನಿಸಿಕೆಗಳನ್ನು ಮುಚ್ಚುಮರೆಯಿಲ್ಲದೆ ನೇರವಾಗಿ, ಒಮ್ಮೊಮ್ಮೆ ತೀರಾ ಕಟುವಾಗಿ ನಿರೂಪಿಸಿರುವರು.

ರೋಂ ನಗರವನ್ನು ಅಶ್ಲೀಲ ನಗರವೆಂದು ಕರೆದ ಲೇಖಕರು ಅದರ ವಿಲಾಸಮಯ ರಾತ್ರಿ ಜೀವನವನ್ನು ಕುರಿತು ಹೇಳುತ್ತಾ "ಪೀಟರನ ಪವಿತ್ರ ಛತ್ರದಡಿಯಲ್ಲಿ ನಗ್ನ ಸ್ತ್ರೀದೇಹ ನಾವು ಕಾಣುವುದು ಸಾಧುವೆ? ಶತಮಾನಗಳ ಕಾಲದಿಂದ ಕಾದಿಟ್ಟ ಅದ್ಭುತ ಪಾವನ ಆಸ್ತಿಗಳ ನೋಟದ ನಂತರ ಈ ಆಧುನಿಕತೆ ಎನಿಸಿದ ದೃಶ್ಯವನ್ನು ರಾಷ್ಟ್ರ ಪ್ರದರ್ಶಿಸಬಹುದೆ? ಹಗಲಿನಲ್ಲಿ ಕಂಡು ಮರೆಯಲಾಗದ ಪಾವಿತ್ರ್ಯತೆಗೆ ರಾತ್ರಿಯ ಈ ಮೂರು ನಿಮಿಷಗಳ ದೃಶ್ಯ ಸಾಕು, ಪುನರುಜ್ಜೀವನ ಅಸಾಧ್ಯವಾಗುವಷ್ಟು ಸ್ಫೋಟನೆ ನಡೆಸುತ್ತಿದೆ. ಆಗ ನಿಮ್ಮ ಕಣ್ಣುಗಳಿಂದ ಸಹಾನುಭೂತಿಯ ಆಶ್ರು ತಾನಾಗಿಯೇ ಹರಿಯುತ್ತದೆ." (ಪು.೩೦) ಎಂದು ಭಾವಪರವಶರಾಗಿ ನುಡಿಯುವರು. ಅಮೆರಿಕನ್ ಡಾಲರ್ ಬಗೆಗೆ ಇಟಲಿಗಿರುವ ತೀವ್ರಾಸಕ್ತಿಯನ್ನೂ ಅಮೆರಿಕನ್ ಹಣ ಹಿಂತಿರುಗಿಸಲು ಸುಲಭವಾಗಿ ಒಪ್ಪದ ಅವರ ದುರಾಶೆಯನ್ನೂ ಲೇಖಕರು ಟೀಕಿಸಿರುವರು. ಅಷ್ಟೇ ಅಲ್ಲ, ಅವರು ನಾಚಿಕೆಯಿಲ್ಲದ ಸ್ವಾರ್ಥಿಗಳು ಎಂದು ತಮ್ಮ ಕಹಿ ಅನುಭವದಿಂದ ಬಿರುನುಡಿಯಾಡುವರು. (ಪು.೫೦) ಲಂಡನ್ನಿನ ಮೇಲೆ ಅಮೆರಿಕನ್ನರ ಪ್ರಭಾವ ಹೆಚ್ಚುತ್ತಿರುವುದನ್ನು ಕಂಡ ಲೇಖಕರು "ಬಹುಶಃ ಈ ರಾಷ್ಟ್ರದಲ್ಲಿ ಸೂರ್ಯನು ಅಸ್ತಮಿಸಲು ಪ್ರಾರಂಭಿಸಿದ್ದಾನೆ" ಎಂದು ಭವಿಷ್ಯ ನುಡಿಯುವರು. (ಪು.೮೪) ಲಂಡನ್ ನಗರವನ್ನು 'ಕಂದಾಚಾರಗಳಿಗೆ ಜೋತು ಬಿದ್ದಿರುವ ನಾಡು' ಎಂದರೆ, 'ನ್ಯೂಯಾರ್ಕ್‌ನಲ್ಲಿನ ತಮ್ಮ ಹದಿನೇಳು ದಿವಸಗಳ ವಾಸ್ತವ್ಯದಲ್ಲಿ ಅಮೆರಿಕೆಯ ಸರ್ವಾಂಗ ಚಟುವಟಿಕೆಯನ್ನೂ, ಅಮೆರಿಕೆಯಲ್ಲಿ ಭಾರತೀಯನ ಸ್ಥಾನ-ಮಾನವನ್ನು,

ಅಮೆರಿಕನ್ ಸಂಪ್ರದಾಯ ಹಾಗೂ ಸಂಸ್ಕೃತಿಗಳನ್ನೂ ಲೇಖಕರು ತಿಳಿಯಲು ಪ್ರಯತ್ನಿಸಿದಂತೆ ತೋರುತ್ತದೆ.

ಅಮೆರಿಕೆಯಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲ ಲೇಖಕರು ಉಳಿದದ್ದರಿಂದ ಅದರ ಮೇಲಿನ ಆಕರ್ಷಣೆ ಹೆಚ್ಚು. ಅಮೆರಿಕದ ಸಾಮಾಜಿಕ ಜೀವನ ವಿಧಾನ ಕಾರ್ಯಚಟುವಟಿಕೆ, ಶಿಸ್ತು, ಮುಚ್ಚುಮರೆಯಿಲ್ಲದ ಜನರ ನೀತಿ, ನಡಾವಳಿ, ಅಲ್ಲಿನ ಸೌಲಭ್ಯಗಳು, ಕಣ್ಣು-ಮನ ತಣಿಸುವ ನೋಟಗಳು -ಇವೆಲ್ಲವನ್ನೂ ಮೆಚ್ಚುಗೆಯ ಮಾತುಗಳಲ್ಲಿ ತೋಯಿಸಿರುವರು. ಪುಸ್ತಕದ ಅಧಿಕ ಭಾಗವನ್ನು ಆಕ್ರಮಿಸಿರುವ ಈ ಬಗೆಯ ಬರವಣಿಗೆ ಲೇಖಕರ ಒಲವು ನಿಲುವುಗಳನ್ನು ಸ್ಪಷ್ಟಪಡಿಸುತ್ತದೆ.

ಲೇಖಕರ ಪ್ರಕಾರ "ಅಧ್ಯಯನಕ್ಕೆ ಪ್ರಪಂಚದಲ್ಲಿ ಅತ್ಯಂತ ಆಸಕ್ತಿಪೂರ್ಣ ವ್ಯಕ್ತಿ ಎಂದರೆ ಅಮೆರಿಕನ್. ಆ ವ್ಯಕ್ತಿಯಿಂದಲೇ ಭಾರತೀಯರು ಕಲಿಯುವುದು ಬಹಳವಿದೆ. ಇಂತಹ ವ್ಯಕ್ತಿ ಪ್ರಪಂಚದಾದ್ಯಂತ ಎಲ್ಲಿಯೂ ದೊರೆಯಲಾರ." ಈ ಉತ್ಸಾಹಪೂರ್ಣ ವಾಗ್ಧಾರಿ ಇಷ್ಟಕ್ಕೇ ಮುರಿಗೊಳ್ಳುವುದಿಲ್ಲ. ಅಮೆರಿಕದ ಕಛೇರಿಗಳಲ್ಲಿ ಪ್ರಕಟವಾಗುವ ಕಾರ್ಯವೇಗವನ್ನು ನಮ್ಮ ಇಲಾಖೆ, ವಿದ್ಯಾ ಇಲಾಖೆಯವರಿಗೆ ತೋರಿಸಬೇಕು-ಎಂಬ ತುಲನೆಗೆ ಹೊರಡುತ್ತದೆ. ಅಮೇರಿಕಾದ ವರ್ಣ ನೀತಿಯನ್ನುಬೆಂಬಲಿಸುವ ಲೇಖಕರು ಅಮೇರಿಕಾ ನೀಗ್ರೋ ಜನರಿಗೆ ಏನೂ ಅನ್ಯಾಯ ಬಗೆದಿಲ್ಲ. ಅಮೇರಿಕಾದ ಕೊಲೆ, ಸುಲಿಗೆ, ದರೋಡೆಗಳಲ್ಲಿ ನೀಗ್ರೋ ಪಾತ್ರ ಅಧಿಕವಾಗಿದೆ. ಒಂಟಿಯಾಗಿ ಚಲಿಸುವ ಪಾದಚಾರಿಗಳ ಮೇಲ ಕೈಮಾಡಿ ಅವರನ್ನು ಸುಲಿಗೆ ಮಾಡುವವರಲ್ಲಿ ಅಧಿಕ ಮಂದಿ ನೀಗ್ರೋಗಳೇ ಆಗಿರುತ್ತಾರೆ. ಪಾರ್ಕ್ ಮಾಡಿದ ಕಾರಿನ ಗಾಜನ್ನು ಒಡೆದು ಒಳಗಿನ ವಸ್ತುಗಳನ್ನು ಅಪಹರಿಸುವ ಕೀರ್ತಿ ನೀಗ್ರೋ ಮಹಾಶಯನಿಗೆ ಸೇರಿದೆ -ಎಂದ ಆರೋಪ ಹೊರಿಸುವರು. ಇವರಲ್ಲಿ ಸತ್ಯಾಂಶವಿದೆ ಎಂಬುದನ್ನು ನಿರಾಕರಿಸಲಾಗದು. ಆದರೆ ಬಹುಕಾಲದಿಂದ ಅಲ್ಲಿ ನಡೆದಿರುವ ವರ್ಣದ್ವೇಷ, ಅಲ್ಲಿ ಬಿಳಿಯರು ಕರಿಯರ ಮೇಲ ನಡೆಸಿರುವ ಅಮಾನುಷವಾದ ಸಾಂಸ್ಕೃತಿಕ ಅತ್ಯಾಚಾರಗಳ ಹಿನ್ನೆಲೆಯಲ್ಲಿ ಸಮಸ್ಯೆಯನ್ನು ಗಂಭೀರವಾಗಿ ಆಲೋಚಿಸಬೇಕು. ಅಮೆರಿಕದ ಬಿಳಿಯ ಬೀದಿಹೋಕನಂತೆ ಲೇಖಕರು ನೀಗ್ರೋ ಮೇಲೆ ಆರೋಪ ಹೊರಿಸಿರುವುದು ಒಪ್ಪುವಂತಹದ್ದಲ್ಲ.

ಅಮೆರಿಕದಲ್ಲಿ ನೆಲೆಸಿರುವ ಭಾರತೀಯರ ಭಾರತೀಯತ್ವವನ್ನು, ಸ್ವದೇಶ ಪ್ರೇಮವನ್ನು, ಲೇಖಕರು ನಿರೂಪಿಸಿರುವ ರೀತಿ, 'ಪ್ರತಿಭಾ ಪಲಾಯನ'ವನ್ನು ಸಮರ್ಥಿಸಿರುವ ಬಗೆ ಹಾಗೂ ಈ ಸಮಸ್ಯೆಯನ್ನು ಲೇಖಕರು ಸುಲಭವಾಗಿ ಪರಿಹರಿಸಿರುವ ಕ್ರಮ ನಗೆತರಿಸುತ್ತದೆ. ಅಮೆರಿಕದಲ್ಲಿ ನೆಲಸಿರುವ ಭಾರತೀಯರು ಭಾರತೀಯ ಆಹಾರ ಸಿದ್ಧಪಡಿಸುವುದು, ಇಂಡಿಯನ್ ರೆಸ್ಟೋರೆಂಟುಗಳಿಗೆ ಬಂದು

ಊಟ ಮಾಡುವುದು, ರವಿಶಂಕರರ ಸಿತಾರ್, ಸುಬ್ಬಲಕ್ಷ್ಮಿ, ವಸಂತಕುಮಾರಿಯರ ಗಾಯನ ಕೇಳುವುದು, ಭಾರತದಿಂದ ಬರುವ ಪತ್ರಿಕೆಗಳನ್ನು ಓದುವುದು, ಭಾರತೀಯ ಚಲನಚಿತ್ರ ನೋಡುವುದು ಇತ್ಯಾದಿಯಾದ ಅವರ ಆಸಕ್ತಿಗಳನ್ನು ಉದಾಹರಿಸಿರುವ ಲೇಖಕರು "ಭಾರತೀಯ ಇದಕ್ಕಿಂತ ಹೆಚ್ಚಾಗಿ ಮತ್ತೇನು ಮಾಡಬೇಕೆಂದು ನಿರೀಕ್ಷಿಸುವಿರಿ?" ಎಂದು ನಮ್ಮನ್ನೇ ಪ್ರಶ್ನಿಸಿರುವರು (ಪು.೧೫೯) ಅಮೆರಿಕದಲ್ಲಿ ನೆಲೆಸಿರುವ ಭಾರತೀಯರನ್ನು ಕಟ್ಟಿ ಹಾಕಿರುವುದು ಅಲ್ಲಿನ ಡಾಲರ್. ಆ 'ಡಿಯರ್ ಡಾಲರ್' ಮುಂದೆ ಬಡ ಭಾರತ, ಅದರ ದೈನಂದಿನ ಸಮಸ್ಯೆಗಳು ಅವರಿಗೆ ಏನೇನೂ ಅಲ್ಲ. ಈ ವಾಸ್ತವ ಸತ್ಯ ಲೇಖಕರಿಗೂ ತಿಳಿದಿದೆ. ವಿದೇಶದಲ್ಲಿ ನೆಲಸಿರುವ ಭಾರತೀಯರಿಗೆ ಲೇಖಕರು ನೀಡುವ ಸಂದೇಶವಿದು: ಹೆಚ್ಚು ಕಾಲ ಉಳಿಯಿರಿ, ಹೆಚ್ಚು ಡಾಲರ್ ಸಂಗ್ರಹಿಸಿ, ಹೆಚ್ಚು ಪರಿಣತಿ ಪಡೆಯಿರಿ, ತಪ್ಪದೆ ಭಾರತಕ್ಕೆ ಹಿಂತಿರುಗಿ ಬನ್ನಿ (ಪು.೧೫೯). ಬಹುಶಃ ಇಳಿವಯಸ್ಸಿನಲ್ಲಿ ತಾಯ್ನಾಡಿನಲ್ಲಿ ನೆಲೆಸಿ, ಸುಖಮಯ ವಿಶ್ರಾಂತಿ ಜೀವನ ನಡೆಯಿಸಿ, ಜನ್ಮಭೂಮಿಯಲ್ಲೇ ಜೀವ ಬಿಡಲು ಲೇಖಕರು ಆಹ್ವಾನಿಸುತ್ತಿದ್ದಾರೊ ಏನೊ!

ಅಮೆರಿಕನ್ನರ ಸಾಮಾಜಿಕ ಹಾಗೂ ಮಾನಸಿಕ ಅಸ್ವಸ್ಥತೆಗೆ ಕಾರಣಗಳನ್ನು ಸ್ವಲ್ಪ ಮಟ್ಟಿಗೆ ಲೇಖಕರು ಊಹಿಸಿರುವರು. ಶಾಂತಿಗಾಗಿ ತಹತಹಿಸುತ್ತಿರುವ ಅದು ಪೂರ್ವದೇಶದ ಕಡೆಗೆ ಹೇಗೆ ಆಸೆಯ ನೋಟ ಹರಿಸಿದೆ ಎಂಬುದರ ಚಿತ್ರವನ್ನು ಚೆನ್ನಾಗಿಯೇ ಕೊಟ್ಟಿರುವರು. ಅಮೆರಿಕನ್ನರ ಸ್ವಚ್ಛಂದ ಲೈಂಗಿಕ ಜೀವನವನ್ನು, ಅದರ ಅತಿರೇಕಾವಸ್ಥೆಯನ್ನು ಲೇಖಕರು ವಿಶದವಾಗಿ ಪ್ರಸ್ತಾಪಿಸಿರುವರು (ಪು. ೧೬೪-೧೬೭). ಅಮೆರಿಕನ್ನರ ಬದುಕಿನ ಇನ್ನೊಂದು ಮುಖವಾದ ನಿಶಾ ಜೀವನ, ನೈಟ್‌ಕ್ಲಬ್, ಅಶ್ಲೀಲ ಚಲನಚಿತ್ರ, ಅಶ್ಲೀಲ ಪ್ರವೃತ್ತಿ -ಇವೆಲ್ಲವುಗಳ ಬಗೆಗೆ ಆಸಕ್ತಿ ಕೆರಳುವಂತೆ ನಿರೂಪಿಸುವ ಲೇಖಕರು "ಸುಗಮ ಪೈರುಗಳೊಂದಿಗೆ ಸಣ್ಣ ಕುರುಚಲುಗಳು ಹೊಲದಲ್ಲಿ ಸ್ವಾಭಾವಿಕವಾಗಿ ಉದ್ಭವಿಸುವಂತೆ ಆಧುನಿಕತೆಯ ಉಚ್ಚಮಟ್ಟವನ್ನೇರಿದ ಅಮೆರಿಕನ್ ನಗರದಲ್ಲಿ ಇಂತಹ ಕ್ಷುದ್ರತೆಗಳನ್ನು ಕಂಡು ನಾವು ಭಾರತದ ವಿಷಯದಲ್ಲಿ ಹೆಮ್ಮೆ ಪಡಲಾಗದೆಂದು ಮತ್ತೊಮ್ಮೆ ಪುನರುಚ್ಚರಿಸುವೆ. ಈ ಅಶ್ಲೀಲತೆ, ಕ್ಷುದ್ರತೆ, ರಾತ್ರಿ ಜೀವನಗಳು ಅಮೆರಿಕನ್ ಜೀವನದ ಅವಿಭಾಜ್ಯ ಅಂಗಗಳಂತೆ. ಅಂತಹ ಜೀವನ ಸಾಗಿಸುತ್ತಾ ಬಂದಿರುವ ರಾಷ್ಟ್ರದಲ್ಲಿ ಯಾರೊಬ್ಬರೂ ಪಶ್ಚಾತ್ತಾಪ ಪಡುವುದಿಲ್ಲ. "ವಿಶಾಲ ಚಂದ್ರಮನ ಶೀತಳ ಕಿರಣಗಳ ಮಧ್ಯೆ ಅದರ ಕಪ್ಪು ಚುಕ್ಕೆಗಳು ಮರೆಯಾಗುವಂತೆ ಪ್ರಪಂಚದ ಅಗ್ರರಾಷ್ಟ್ರವು ತನ್ನ ಈ ದೋಷಗಳನ್ನು ಕರಗಿಸಿಕೊಂಡು ನಿಂತಿದೆ" (ಪು. ೧೬೮) ಎಂದು ಉದಾರ ಮನೋಭಾವದಿಂದ ಸಮಸ್ಯೆಯನ್ನು ಲಘುವಾಗಿ ತೇಲಿಸಿಬಿಡುವರು.

ನೆವಾಡ ಪ್ರಾಂತ್ಯದ ರಿನೊ ನಗರ ಮತ್ತು ಲಾಸ್‌ವೇಗಸ್‌ಗಳನ್ನು ಅಲ್ಲಿನ ಸಮಾಜಶಾಸ್ತ್ರಜ್ಞರು 'ಅಮೆರಿಕಾದ ಕ್ಯಾನ್ಸರ್' ಎಂದು ಕರೆಯುವರೆಂದು ಹೇಳುವ ಲೇಖಕರು ಅಲ್ಲಿನ ಮೋಜಿನ ಜೀವನವನ್ನು ವರ್ಣಿಸುವುದರಲ್ಲಿ ತಲ್ಲೀನರಾಗಿ ವಾಸ್ತವಾಂಶವನ್ನೇ ಮರೆಯುವರು. ಅಮೆರಿಕದ ಜನಸಾಮಾನ್ಯರ ವೈಭವದ ಬದುಕನ್ನು ಬೆರಗುಗಣ್ಣಿನಿಂದ ನೋಡಿ ಅಷ್ಟೇ ಉತ್ಸಾಹದಿಂದ "ಇಲ್ಲಿ ಬೀದಿ ಗುಡಿಸುವವನ ಬಳಿಯೂ ಕಾರು ಇದೆ. ಬೆಳಿಗ್ಗೆ ಕಾರಿನಲ್ಲಿ ಬಂದವನು ತನ್ನ ಕಾರನ್ನು ಸರ್ಕಾರಿ ಪಾರ್ಕಿಂಗ್ ಏರಿಯಾದಲ್ಲಿ ಬಿಟ್ಟು ಬಟ್ಟೆ ಕಳಚಿ ಉದ್ಯೋಗದ ಯೂನಿಫಾರಂ ಧರಿಸಿ ಕೆಲಸಕ್ಕೆ ಇಳಿಯುತ್ತಾನೆ. ಕೆಲಸ ಮುಗಿದೊಡನೆ ಮತ್ತು ಕಾರು ಹಿಡಿದು ಒಬ್ಬ ಸೆನೆಟರನಂತೆ ಹಾರಿಹೋಗುತ್ತಾನೆ." (ಪು.೧೨೬) ಎಂದು ವರ್ಣಿಸುವರು. ಇವೆಲ್ಲಾ ನಾವು ಕೇಳಿರುವ ಸಂಗತಿಗಳೇ. ಆದಾಗ್ಯೂ ಲೇಖಕರ ನಿರೂಪಣೆಯಿಂದ ಅಮೇರಿಕಾ 'ಭುಮಿಯ ಮೇಲಣ ಸ್ವರ್ಗ' ಎಂಬ ಭಾವನೆಯುಂಟಾಗುತ್ತದೆ. ಕಾಣದ ದೇಶದಲ್ಲಿನ ಆ ಸ್ವರ್ಗಧ ಸುಖವನ್ನು, ಲೇಖಕರ ಆಕರ್ಷಕ ಬರವಣಿಗೆಯಿಂದಾಗಿ ಓದುಗನ ಮನಸ್ಸು ಚಪ್ಪರಿಸುತ್ತದೆ. ಅಮೆರಿಕದ ಸಾರಿಗೆ ವ್ಯವಸ್ಥೆ, ಅದರಲ್ಲೂ ಗ್ರೆಹೌಂಡ್ ಬಸ್‌ನ ಅಚ್ಚು ಕಟ್ಟಾದ ವ್ಯವಸ್ಥೆ ಓದಿ ಬೆರಗಾಗುತ್ತೇವೆ. ಹಾಗೆಯೇ, ಅಮೆರಿಕದಲ್ಲಿ ಕಾರುಗಳ ಉತ್ಪನ್ನ, ಮಾರಾಟ ಹರಿದಾಟ -ಇವುಗಳ ಬಗೆಗಿನ ವಿವರಗಳೂ ಓದುಗನ ಕುತೂಹಲವನ್ನು ಕೆರಳಿಸುತ್ತವೆ.

ಲೇಖಕರ ಪ್ರಕಾರ, ಜಪಾನಿನ ಜನರು ಮಹಾ ಚತುರರು-ಅತಿ ಚುರುಕು ಬುದ್ಧಿಯುಳ್ಳವರು-ಸತ್ಯಸಂಧರು-ಶ್ರಮಜೀವಿಗಳು. ಅನುಕರಣೆಗಾಗಿ ಪಶ್ಚಿಮ ದಿಕ್ಕಿಗೆ ದೃಷ್ಟಿ ಹಾಯಿಸುವ ಭಾರತವು ಜಪಾನನ್ನು ಅನುಕರಿಸುವುದು ಸರ್ವವಿಧದಲ್ಲಿಯೂ ಕ್ಷೇಮ. ಅದೊಂದು 'ಪವಾಡ ಸೀಮೆ'. ಅಷ್ಟೇ ಅಲ್ಲ, ಈ ನಾಡಿಗೆ ಸಾಟಿಯಾದುದು ಯಾವುದೂ ಇಲ್ಲ ಎಂಬ ಅಭಿಮಾನದ ಮಾತನ್ನಾಡಿರುವರು. ಜಪಾನ್‌ನಿಂದ ಮುಂದೆ ಹಾಂಕಾಂಗ್‌ಗೆ ಬಂದ ಲೇಖಕರು ಅಲ್ಲಿ ಸುಳ್ಳು, ಮೋಸ, ಕಳ್ಳತನಗಳನ್ನು ಕಾಣುವರು. ಮುಂದೆ ಈ ದುರ್ಗುಣಗಳು ಸಿಂಗಪುರದಲ್ಲಿ ಮತ್ತಷ್ಟು ಅಧಿಕವಾಗಿ ಬೆಳೆದಿರುವುದನ್ನು ಕಾಣುವರು. ತಮಗೆ ಸಿಲೋನ್‌ನಲ್ಲಿ ವಿದೇಶೀವಿನಿಮಯದಲ್ಲಿ ಉಂಟಾದ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು ಮನಸ್ಸನ್ನು ಕಹಿಮಾಡಿಕೊಂಡು "ಇದು ನೋಡಲು ಅರ್ಹವಾದ ದೇಶವೆಂದು ಯಾರಿಗೂ ಒತ್ತಿ ಹೇಳಬೇಡಿ. ನಿಮ್ಮಲ್ಲಿ ಹಣ ಅಧಿಕವಾಗಿದ್ದು ಅದಕ್ಕೆ ಸಿಲೋನ್ ಕರೆನ್ಸಿ ದೊರೆಯುವ ಸಾಧ್ಯತೆಯಿದ್ದರೆ ಮಾತ್ರ ಇಲ್ಲಿಗೆ ಭೇಟಿ ಕೊಡಿ. ಸಿಲೋನ್‌ಗೆ ಬಂದ ಮೇಲೆ ಅಲ್ಲಿ ಯಾವುದಾದರೂ ಭಾಗವನ್ನು ನೋಡಲು ಸಾಧ್ಯವಾಗದಿದ್ದರೆ ಚಿಂತಿಸಬೇಡಿ. ಪಶ್ಚಾತ್ತಾಪ ಪಡುವ ಸಂಭವವೇ ಇಲ್ಲ. ಇದು ನನ್ನ ಸ್ಪಷ್ಟವಾದ ವೈಯಕ್ತಿಕ ಅಭಿಪ್ರಾಯ" ಎಂದು ಕಟುವಾಗಿ ಹೇಳುವರು.

ಟಿ.ಕೆ. ರಾಮರಾವ್‌ರವರು ಕನ್ನಡದ ಜನಪ್ರಿಯ ಕಾದಂಬರಿಕಾರರು. ಅವರ ಬರವಣಿಗೆಗೆ ತನ್ನದೇ ಆದ ಶೈಲಿಯಿದೆ. ಅವರು ಓದುಗನ ಮನವನ್ನು ಸೆರೆ ಹಿಡಿಯುವಂತೆ ಬರೆಯಬಲ್ಲ ಶಕ್ತಿಯುಳ್ಳ ವಿರಳರು. ಸ್ವಂತ ಖರ್ಚಿನಲ್ಲಿ ವಿಶ್ವಪ್ರವಾಸ ಮಾಡಿ ಬಂದ ಅವರ ಉತ್ಸಾಹ ಮೆಚ್ಚುವಂತಹದು. ಭಾವತೀವ್ರತೆಯಿಂದ ಅವರ ಬರವಣಿಗೆ ಒಮ್ಮೊಮ್ಮೆ ನರಳುತ್ತದೆ. ವಾಚಾಳಿತನದಿಂದಾಗಿ ಮಾತಿನ ದುಂದುಮೆ ಕಾಣಬರುತ್ತದೆ. ಅನುಭವಗಳನ್ನು ಮೆಲುಕುಹಾಕುವಾಗ-ತಮಗಾದ ಕಹಿ ಅನುಭವಗಳನ್ನು ಹೇಳುವಾಗ-ತೀವ್ರವಾದ ಭಾವಾವೇಶಕ್ಕೆ ಒಳಗಾಗುವರು. ತಮಗೆ ಪ್ರಿಯವಾದುವನ್ನು ಹೇಳುವಾಗಲೂ ಈ ಭಾವತೀವ್ರತೆ ಅವರನ್ನು ಕಾಡುತ್ತದೆ. ಇವು ಲೇಖಕರಲ್ಲಿನ ದೋಷಗಳು. ಬರೆಹ ಭಾವಾವೇಶದಿಂದ ಮುಕ್ತವಾಗಿದ್ದರೆ, ವಾದಗ್ರಸ್ತ ಹೇಳಿಕೆಗಳನ್ನು ಬಿಟ್ಟಿದ್ದರೆ, ವೈಯಕ್ತಿಕ ಇಷ್ಟಾನಿಷ್ಟಗಳನ್ನು ಹೇಳುವಲ್ಲಿ ಲೇಖನಿ ಸ್ವಲ್ಪ ಸಂಯಮ ವಹಿಸಿದ್ದರೆ, ಸಮಸ್ಯೆಗಳ ಬಗೆಗೆ ಇನ್ನಷ್ಟು ಆಳವಾಗಿ ಚಿಂತನ ಮಂಥನ ನಡೆಸಿದ್ದರೆ ಈ ಪ್ರವಾಸ ಕಥನ ಖಂಡಿತವಾಗಿಯೂ ಇನ್ನಷ್ಟು ಹೃದ್ಯವಾಗುತ್ತಿತ್ತು. ಲೇಖಕರ ಉತ್ಸಾಹ, ವ್ಯಾಪಕವಾದ ವಿಷಯ ಸಂಗ್ರಹಣೆ, ಆಸಕ್ತಿ ಕೆರಳಿಸುವ ಸರಸ ಶೈಲಿ ಈ ಪ್ರವಾಸ ಕಥನದ ಮೆಚ್ಚಬೇಕಾದ ಅಂಶಗಳು:

ವಿಶ್ವಪರ್ಯಟನೆ ಮಾಡಿದ ಮತ್ತೊಬ್ಬ ಉತ್ಸಾಹಶಾಲಿ ಕನ್ನಡಿಗ ಗುರುಮೂರ್ತಿ ಪೆಂಡಕೂರ ಅವರು. ತೊಂಬತ್ತು ದಿನಗಳಲ್ಲಿ ತಾವು ನಡೆಸಿದ ವಿಶ್ವಪರ್ಯಟನೆಯ ಅನುಭವಗಳನ್ನು ಅವರು **'ಬಹುರೂಪಾ ವಸುಂಧರಾ'** ಎಂಬ ಕೃತಿಯಲ್ಲಿ ಕೊಟ್ಟಿರುವರು. ವಾಣಿಜ್ಯೋದ್ಯಮಿಗಳಾದ ಇವರು ಮಾನವತೆಯ ಸಾಧನೆಯನ್ನು ಅರಿಯುವ, ಬಹುರೂಪಿ ವಸುಂಧರೆಯನ್ನು ಕಾಣುವ ಉದ್ದೇಶದಿಂದ ವಿಶ್ವಪರ್ಯಟನೆ ಮಾಡಿದರು. ನಿರ್ದಿಷ್ಟ ಕಾಲಮಿತಿಗೆ ಒಳಗಾಗಿ ಅವಸರದ ಸುತ್ತಾಟ ನಡೆಸಿದ ಲೇಖಕರು ಎಲ್ಲೆಡೆಗೂ ತಮ್ಮ ಬೆರಗುಗಣ್ಣುಗಳನ್ನೇ ಹಾಯಿಸಿರುವರು. ಏನನ್ನೇ ಆಗಲಿ ವಿವರವಾಗಿ ನಿಂತು ನೋಡಲಾಗದ ಅವಸರದ ಗತಿಯಿಂದಾಗಿ, ತಾವು ನೋಡಿದ್ದನ್ನು-ಕೇಳಿ ತಿಳಿದಿದ್ದನ್ನು-ವಿಷಯ ಸಂಗ್ರಹಿಸಿದ್ದನ್ನು ಟೂರಿಸ್ಟ್ ಮನೋಭಾವದಿಂದ ನಿರೂಪಿಸಿರುವರು. ಹೀಗಿದ್ದೂ ಅವರ ಈ ನಿರೂಪಣೆಯಲ್ಲಿ ಪ್ರಾಮಾಣಿಕತೆಯಿದೆ. ತಮ್ಮ ಅನುಭವಗಳನ್ನು ದಾಖಲಿಸುವಲ್ಲಿ ಇವರಿಗೆ ಒಳ್ಳೆಯ ಭಾಷೆ ನೆರವಾಗಿದೆ.

**ಯೂರೋಪ್:**

ಕನ್ನಡಿಗರಾದ ಶ್ರೀ ಕರವೀರಪ್ಪ ಅಂದಾನೆಪ್ಪ ಕುಲಕರ್ಣಿಯವರು ಜಮೀನ್ದಾರರೂ, ವಕೀಲರೂ, ಚಿತ್ರಕಲೆಯಲ್ಲಿ ಆಸಕ್ತಿಯುಳ್ಳವರೂ ಆಗಿದ್ದು ೧೯೨೯ರಲ್ಲಿಯೇ ಯೂರೋಪ್ ಖಂಡದ ಪ್ರವಾಸ ಕೈಗೊಳ್ಳುವ ಸಾಹಸ ಮಾಡಿದರು. ಅವರ

**ಯೂರೋಪ ಖಂಡದ ಪ್ರವಾಸವು** ಎಂಬ ಕೃತಿ ಬಹುಶಃ ಈ ದಿಶೆಯಲ್ಲಿ ಮೊದಲ ವಿದೇಶ ಪ್ರವಾಸಾನುಭವ ಕಥನವಾಗುತ್ತದೆ.

ಕುಲಕರ್ಣಿಯವರು ಕಟ್ಟಾ ಸಸ್ಯಾಹಾರಿಗಳು. ಅವರಿಗೆ ವಿದೇಶ ಪ್ರವಾಸದಲ್ಲಿ ಸಸ್ಯಾಹಾರ ದೊರೆಯುವುದಿಲ್ಲವೆಂದು ಮಿತ್ರರು ಭಯ ಹುಟ್ಟಿಸಿದ್ದರು. ಅವರ ಮುಂಬಯಿಯ ವಕೀಲ ಮಿತ್ರರಾದ ಬಸರೂರ ಅವರು ಆ ಭಯವನ್ನು ನಿವಾರಿಸಿ, ಲಂಡನ್‌ನಲ್ಲಿ ಶಾಖಾಹಾರದ ಮನೆಯೊಂದರ ವಿಳಾಸವನ್ನು ಕೊಟ್ಟರು. ಆ ಮನೆಯ ಒಡತಿ ಪೀಟರ್‌ಸನ್ ಭಾರತೀಯರ ಬಗೆಗೆ ಗೌರವಾದರಗಳನ್ನು ಹೊಂದಿದ್ದಳು. ಅವಳು ಕುಲಕರ್ಣಿಯವರಿಗೆ ಅಲ್ಲಿನ ಸಮಾಜದ ರೀತಿನೀತಿಗಳ, ನಡಾವಳಿಗಳ ಪರಿಚಯ ಮಾಡಿಕೊಟ್ಟಳು. ಕುಲಕರ್ಣಿಯವರು 'ದಿ ಲಂಡನ್ ವೆಜಿಟೇರಿಯನ್ ಸೊಸೈಟಿ'ಯ ಸದಸ್ಯರಾಗಿ ಅದರ ಮಾಸಿಕ ಹಾಗೂ ವಾರ್ಷಿಕ ವರದಿಗಳ ಸಹಾಯದಿಂದ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿನ ಶಾಖಾಹಾರಿ ಸಂಸ್ಥೆಗಳ ವಿವರ ಪಡೆದು ತಮ್ಮ ಪ್ರವಾಸವನ್ನು ಮುಂದುವರಿಸಿದರು. ಅವರು ಇಂಗ್ಲೆಂಡಿಗೆ ಭೇಟಿ ನೀಡಿದಾಗ ಅಲ್ಲಿನ ಜನರ ಪ್ರಾಮಾಣಿಕತೆ, ಪರೋಪಕಾರಿ ಮನೋಭಾವ, ನಿಯಮಬದ್ಧ ಜೀವನವಿಧಾನವನ್ನು ಮೆಚ್ಚಿಕೊಂಡರು. ಇಂಗ್ಲೆಂಡಿನ ವಿದ್ಯಾರ್ಥಿಗಿಂತ ಭಾರತೀಯ ವಿದ್ಯಾರ್ಥಿ ಹೆಚ್ಚು ಬುದ್ಧಿವಂತನೆಂದೂ, ಅಲ್ಲಿಗೆ ಯಾಂತ್ರಿಕ, ಶಾಸ್ತ್ರೀಯ ಕಲಾಕೌಶಲ್ಯಗಳ ಅಭ್ಯಾಸಕ್ಕೆ ಹೋಗುವುದು ಉತ್ತಮವಾದರೂ ಕಲೆ (Arts), ಕಾನೂನು (Law) ಪದವಿ ಪಡೆಯಲು ಅಲ್ಲಿಗೆ ಹೋಗುವುದರಲ್ಲಿ ಅರ್ಥವಿಲ್ಲವೆಂದೂ ಅವರು ಅಭಿಪ್ರಾಯಪಡುವರು. ಇಂಗ್ಲೆಂಡಿನಲ್ಲಿ ಭಾರತದಲ್ಲಿರುವಂತೆ ದಡ್ಡರು ಬೇಸಾಯ ಕೈಗೊಳ್ಳುವರೆಂಬ ಅವರ ವಿಚಾರಧಾರೆಗೆ ಸ್ಪಷ್ಟೀಕರಣದ ಅಗತ್ಯವಿದೆ.

ಇಂಗ್ಲೆಂಡ್‌ನಿಂದ ಫ್ರಾನ್ಸ್ ದೇಶಕ್ಕೆ ಪ್ರಯಾಣ ಬೆಳೆಸಿದ ಕುಲಕರ್ಣಿಯವರು ಪ್ಯಾರಿಸ್‌ನಲ್ಲಿ ಕೆಲದಿವಸ ತಂಗಿದ್ದರು. ಅಲ್ಲಿಂದ ಬೆಲ್ಜಿಯಂ ಗಡಿಯನ್ನು ದಾಟಿ ಜರ್ಮನಿಯನ್ನು ಪ್ರವೇಶಿಸಿದ ಅವರು ಅಲ್ಲಿನ ಜನರ ಚಟುವಟಿಕೆ, ಶಿಸ್ತು, ಸ್ವಚ್ಛತೆಯನ್ನು ಮೆಚ್ಚುವರು. ಆಸ್ಟ್ರಿಯಾದಲ್ಲಿ ಬೇಸಾಯಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಟ್ಟಿರುವುದನ್ನು ಅವರು ತಮ್ಮ ಪ್ರವಾಸದಲ್ಲಿ ಗಮನಿಸುವರು. ವಿಯನ್ನಾದಲ್ಲಿ ಕೆಲದಿನವಿದ್ದು ಮುಂದೆ ಅವರು ಇಟಲಿಗೆ ಪ್ರಯಾಣಮಾಡುವರು. ಮಿಲನ್ ಪಟ್ಟಣದಲ್ಲಿ ಪೋಲೀಸರ ನಿರ್ಬಂಧ ಹೆಚ್ಚಿರುವುದನ್ನು ಗಮನಿಸಿದ ಅವರು, ಬೇರೆ ದೇಶಗಳ ವರ್ತಮಾನ ಪತ್ರಿಕೆ ತಮ್ಮ ದೇಶದೊಳಕ್ಕೆ ಬರದಂತೆ ಪೋಲೀಸರು ಎಚ್ಚರ ವಹಿಸಿರುವುದನ್ನು ಉಲ್ಲೇಖಿಸಿರುವರು. ಇಟಲಿಯಿಂದ ಸ್ವಿಟ್ಜರ್‌ಲೆಂಡ್‌ಗೆ ಬಂದು ಜಿನೀವಾದಲ್ಲಿ ಕೆಲದಿವಸ ತಂಗಣೆ ಮಾಡಿದ ಅವರು ಅಲ್ಲಿನ ನಯನಮನೋಹರ ಪ್ರಕೃತಿ ಸೌಂದರ್ಯ ಹಾಗೂ ಪ್ರಶಾಂತ ವಾತಾವರಣವನ್ನು ಬಹಳವಾಗಿ ಮೆಚ್ಚುವರು. ಅಲ್ಲಿಂದಲೇ ಅವರು ಭಾರತಕ್ಕೆ ಹಿಂತಿರುಗುವರು.

ಕುಲಕರ್ಣಿಯವರ ವಿದೇಶ ಪ್ರವಾಸಾನುಭವವು ಕನ್ನಡಕ್ಕೆ ಆ ಕಾಲಮಾನಕ್ಕೆ ಪ್ರಾಯಶಃ ಮೊದಲನೆಯದು ಆಗುವುದರಿಂದ ಮುಖ್ಯವೆನ್ನಿಸುತ್ತದೆ.*

ನಮ್ಮನ್ನಾಳಿದ ಪ್ರಭು ಕೃಷ್ಣರಾಜ ಒಡೆಯರು ಮೂವತ್ತು ನಾಲ್ಕು ವರ್ಷಗಳ ದೀರ್ಘಕಾಲ ರಾಜ್ಯಭಾರ ಮಾಡಿ ಕೆಲಕಾಲ ವಿಶ್ರಾಂತಿ ಸೌಖ್ಯ ಪಡೆಯಬೇಕೆಂಬ ಉದ್ದೇಶದಿಂದ ಪ್ರಪಂಚ ಪರ್ಯಟನವನ್ನು ೧೯೩೭-೩೮ರಲ್ಲಿ ಮಾಡಿದರು. ಅವರ ಪ್ರಪಂಚ ಸಂಚಾರದಲ್ಲಿ ಯೂರೋಪ್ ಪ್ರವಾಸ ಒಂದು ಭಾಗ. ಪ್ರಭುಗಳ ಯುರೋಪ್ ಪ್ರವಾಸಾನುಭವವನ್ನು ಕುರಿತು ಆರ್.ಎಸ್. ನಾರಾಯಣರಾವ್‌ರವರು **ಪ್ರಭುವರ್ಯರ ಯೂರೋಪ್ ಪ್ರವಾಸ** ಎಂಬ ಗ್ರಂಥ ರಚಿಸಿರುವರು. ಈ ಕಿರುಹೊತ್ತಗೆಯಲ್ಲಿ ಲೇಖಕರು ಮಹಾರಾಜರ ಯೂರೋಪ್ ಪ್ರವಾಸದ ಸಂಕ್ಷಿಪ್ತ ವರದಿಯನ್ನು ಕೊಟ್ಟಿರುವರು. ಇದರಲ್ಲಿ ಮಹಾರಾಜರು ನೋಡಿದ ಸ್ಥಳಗಳ ವಿವರಗಳು ಬಂದಿವೆ. ಆದರೂ ಗುಣ-ವಿಶೇಷಗಳಲ್ಲಿ ಈ ಕೃತಿ ಹೇಳಿಕೊಳ್ಳುವಂತಹದ್ದಲ್ಲ.

ದಿನಕರ ದೇಸಾಯಿಯವರ **ನಾ ಕಂಡ ಪಡುವಣ** ಅಂತರರಾಷ್ಟ್ರೀಯ ಕೂಲಿಕಾರ ಪರಿಷತ್ತೊಂದರಲ್ಲಿ ಭಾಗವಹಿಸಲು ಭಾರತದ ಪ್ರತಿನಿಧಿಯಾಗಿ ಹೋದ ಅನುಭವದ ಚಿತ್ರಣ. ಕೂಲಿಕಾರರ ಮುಖಂಡರಾಗಿ ಪ್ರಖ್ಯಾತರಾಗಿರುವ ದಿನಕರ ದೇಸಾಯಿಯವರು ತಮ್ಮ ಈ ಅನುಭವ ಕಥನದಲ್ಲಿ ಜೀವನ ಹಾಗೂ ಸಂಘಟನೆ ಕುರಿತು ಸಾಕಷ್ಟು ವಿವರ ಕೊಟ್ಟಿರುವರು. ಅಪರಿಚಿತ ನಾಡುಗಳ ಜೀವನ ವ್ಯವಸ್ಥೆಯ ವಿವರಣೆಯೂ ಇದರಲ್ಲಿ ಸಾಕಷ್ಟು ಬಂದಿವೆ.

ಕೆ.ಆರ್. ಕಾರಂತರು ತಮ್ಮ ಯೂರೋಪು ಪ್ರವಾಸದ ಅನುಭವಗಳನ್ನು **ಪ್ರವಾಸಿಯ ಪತ್ರಗಳು** ಎಂಬ ಕೃತಿಯಲ್ಲಿ ಕೊಟ್ಟಿರುವರು. ಪ್ರವಾಸ ಕಥನ ಪತ್ರ ರೂಪದಲ್ಲಿ ಬಂದಿರುವುದು ಇದರ ವಿಶೇಷ. ಪ್ರವಾಸ ಕಾಲದಲ್ಲಿ ಐವತ್ತಾರು ವರುಷದ ತಮಗೆ ಹದಿನಾರು ವರುಷದ ಬಾಲಕನ ಉತ್ಸಾಹ ಬಂದಿತ್ತು ಎನ್ನುವ ಲೇಖಕರು ತಾವು ಕಂಡಿದ್ದನ್ನು, ತಮಗೆ ವಿಶೇಷವಾಗಿ ಖುಷಿ ಕೊಟ್ಟಿದ್ದನ್ನು ಲವಲವಿಕೆಯಿಂದಲೇ ಹೇಳಿರುವರು. ಅವರ ನಿರೂಪಣೆಯಲ್ಲಿ ಅಪ್ಪಟವಾದ ಪ್ರಾಮಾಣಿಕತೆಯಿದೆ. ತಮ್ಮ ಸುತ್ತಾಟದಲ್ಲಿ ಎಲ್ಲೂ ಅವಸರಿಸದೆ, ಆಸಕ್ತಿಯಿಂದ ನಿಂತು ನೋಡಿ, ವಿವರಗಳನ್ನು ಕೇಳಿ ತಿಳಿದು, ಕಣ್ಣಿಗೆ ಆನಂದವಾದುದನ್ನು ಅನುಭವಿಸುತ್ತಾ ಸಾಗಿರುವರು. ಪ್ರವಾಸಿಯಲ್ಲಿ

---

* ಈ ಪ್ರವಾಸಕಥನವನ್ನು ಮೂಲದಲ್ಲಿ ನಾನು ನೋಡಲಾಗಲಿಲ್ಲ. ಆದರೆ, ಶ್ರೀ ಬಾಪೂಗೌಡ ಸಂ. ಪಾಟೀಲ ಅವರು 'ತರಂಗ' ವಾರಪತ್ರಿಕೆಯಲ್ಲಿ (೧೭.೪.೧೯೮೮) ಈ ಕೃತಿಯ ಬಗೆಗೆ ಒಂದು ಪರಿಚಯಾತ್ಮಕ ಲೇಖನ ಬರೆದಿರುವರು. ನಾನು ಇದರ ನೆರವು ಪಡೆದಿದ್ದು, ಅದಕ್ಕಾಗಿ ಸಂಬಂಧಿಸಿದ ಲೇಖಕರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಅಗತ್ಯವಾಗಿ ಇರಬೇಕಾದ ಈ ಗುಣಗಳು ಕೆ.ಆರ್. ಕಾರಂತರಲ್ಲಿ ಇವೆ. ಅವರು ತಮ್ಮ ಅನುಭವದ ನಿರೂಪಣೆಯಲ್ಲಿ ಎಲ್ಲೂ ಗಡಿಬಿಡಿ ತೋರಿಲ್ಲ. ಆಶ್ಚರ್ಯೋದ್ಗಾರಗಳನ್ನು ಪ್ರಕಟಿಸಿಲ್ಲ. ಅವರದು ಹೇಳಬೇಕಾದ್ದನ್ನು ಅಚ್ಚುಕಟ್ಟಾಗಿ ಹೇಳುವ ಹಂಬಲ. ತಮ್ಮ ಅನುಭವಗಳನ್ನು ದಾಖಲು ಮಾಡಲು ಹಾಗೂ ಅಲ್ಲಿನ ವಿಶಿಷ್ಟಾಂಶಗಳನ್ನು ಗುರುತಿಸಿ ಹೇಳಲು ಅವರಿಗೆ ತೊಡಕಾಗಿರುವುದು ಭಾಷೆ, ಗರಿಮುರಿಯಾದ ಭಾಷೆ. ಆಕರ್ಷಕ ಶೈಲಿ ಅವರ ಅಭಿವ್ಯಕ್ತಿಗೆ ನೆರವಾಗಿದ್ದರೆ ಅವರ ಅನುಭವಗಳಿಗೆ ವಿಶಿಷ್ಟವಾದ ಒಂದು ಗಟ್ಟಿ ನೆಲೆ ಸಿಗುತ್ತಿತ್ತು, ಓದುಗನ ನೆನಪಿನಂಗಳದಲ್ಲಿ ಅನುಭವಗಳು ಬಹಳ ಕಾಲ ನಿಲ್ಲುತ್ತಿದ್ದುವು.

ಬರಹವನ್ನೇ ನಂಬಿ ಸ್ವತಂತ್ರ ಜೀವನ ನಡೆಸಹೊರಟ ಬರಹಗಾರನೊಬ್ಬ ವಿದೇಶ ಪ್ರವಾಸ ಮಾಡಬೇಕೆಂದು ಕನಸುಗಟ್ಟಿ ಸಾಲಮಾಡಿ ಹೊರಟ ಪ್ರಸಂಗ ಅಪೂರ್ವ. ಈ ಕನಸುಗಾರ ಸಾಹಿತಿ ಬೇರಾರೂ ಅಲ್ಲ, ನಮ್ಮ ಪ್ರಸಿದ್ಧ ಲೇಖಕರಾದ ಶಿವರಾಮ ಕಾರಂತರು. ಅವರ ವಿದೇಶಯಾತ್ರೆಯ ಕನಸಿಗೆ ಕಾರಣವೇನೆಂಬುದನ್ನು ಅವರೇ ಹೀಗೆ ಹೇಳಿರುವರು: "ಹಲವು ವರ್ಷಗಳಿಂದ ವಿದೇಶಯಾತ್ರೆಗೆ ಹೋಗಬೇಕೆಂಬ ಕನಸು ನನ್ನನ್ನು ಬಹುವಾಗಿ ಕಾಡುತ್ತಾ ಬಂದಿತ್ತು. ಆ ಯಾತ್ರೆ ಏಕೆ? ಏನು? ಎಂಬ ಸ್ಪಷ್ಟವಾದ ಉದ್ದೇಶವಾಗಲಿ, ಚಿತ್ರವಾಗಲಿ ಕಣ್ಣಿನ ಮುಂದೆ ಹೊಳೆಯುವುದಾದರೂ, ನಮ್ಮ ದೇಶದಲ್ಲಿ ಕಾಣಲಾರದ ಯಾವುದೋ ಒಂದು ಬಗೆಯ ಚೆಲುವು ಅಲ್ಲಿ ಕಾಣಲು ಸಿಕ್ಕೀತು ಎಂಬ ಆಸೆ ಉಂಟಾಗಿತ್ತು. ಇದೊಂದೇ ಅಲ್ಲ-ಪಾಶ್ಚಾತ್ಯರ ಚಿತ್ರ, ಶಿಲ್ಪ ಕಲೆಗಳನ್ನು ಕುರಿತು ನಾನು ಓದಿಕೊಂಡ ಬರಹಗಳೂ ಇದಕ್ಕೆ ಕಾರಣವಾಗಿದ್ದುವು. ಇಟಲಿಯ ಶಿಲ್ಪಿಯೂ ಚಿತ್ರಕಾರನೂ ಆದ ಮೈಕೆಲ್ ಎಂಜೆಲೊ, ಚಿತ್ರಕಾರನೂ ವಿಜ್ಞಾನಿಯೂ ಆದ ಲಿಯನಾರ್ಡೊ-ಡ-ವಿನ್ಸಿ, ಬ್ರಿಟಿಷ್ ಚಿತ್ರಕಾರರಾದ ವಿಸ್ಲರ್, ಟರ್ನರರು; ಡಚ್ ಚಿತ್ರಕಾರನಾದ ರೆಂಬ್ರಾಟ್; ಫ್ರೆಂಚ್ ಚಿತ್ರಕಾರ ಪಾಲ್‌ಗಾಗಿನ್, ಸಿಸಾನ್-ಇವರೇ ಮೊದಲಾದ ಹಲವು ಪ್ರಸಿದ್ಧ ಕಲಾವಿದರ ಹೆಸರುಗಳು, ಅವರ ಕೃತಿಗಳನ್ನು ಕುರಿತು ನಾನು ಓದಿದ ಬರಹಗಳು, ಕಂಡ ಮೂಲ ಚಿತ್ರಗಳಲ್ಲದಿದ್ದರೂ, ಚಿತ್ರಪತ್ರಿಗಳು ನನ್ನ ಈ ಆಸೆಗೆ ರೂಪುಕೊಟ್ಟಿದ್ದುವು. ಇಂಥವುಗಳ ಜತೆಗೆ ಪಪ್ಲೋವಾ, ಡಂಕನ್ ಮೊದಲಾದ ನರ್ತಕಿಯರ ವಿಚಾರದಲ್ಲಿ ಓದಿದವನಾದುದರಿಂದ ಆ ದೇಶದ ಜನಗಳ ನೃತ್ಯ ಹೇಗಿದೆ. ಬ್ಯಾಲೆ (Ballet) ಹೇಗಿದೆ, ನಾಟಕ ಹೇಗಿದೆ -ಎಂದೆಲ್ಲಾ ತಿಳಿದುಕೊಳ್ಳುವ ಹಂಬಲವಾಗಿತ್ತು. ಈ ಕ್ಷೇತ್ರಗಳು ನಾನು ಹುಡುಕಿ ಪ್ರಯೋಗ ನಡೆಸಿದವುಗಳಾದುದರಿಂದ ನನಗೆ ಪ್ರಿಯವಾಗಿದ್ದುವು. ಅದರಂತೆಯೇ ಕಲಾಕೇಂದ್ರಗಳಾದ ಪೇರಿಸ್, ರೋಮ್, ಫ್ಲಾರೆನ್ಸ್, ಲಂಡನ್‌ನಂಥ ನಗರಗಳು ನನಗೆ ಆಕರ್ಷಕವಾಗಿದ್ದುವು. ಇವೆಲ್ಲವುಗಳ ಜತೆಗೆ ಆ ದೇಶದಲ್ಲಿ ಉದ್ಯಮ ಹೇಗಿದೆ? ಸಂಸ್ಕೃತಿ ಯಾವ ಬಗೆಯದು? ಎಂಥವು

ನಮ್ಮ ಪಾಲಿಗೆ ಅನುಕರಣೀಯ? ಎಂದು ತಿಳಿಯುವ ಚಪಲವೂ ಸೇರಿತ್ತು..." ಬಹುಶಃ ಕಾರಂತರ ಈ ಮಾತುಗಳು ಸಾಮಾನ್ಯ ಪ್ರವಾಸಿಯೋರ್ವನ ಕಣ್ಣು-ಮನಗಳು ಗ್ರಹಿಸಿ ಅಭಿವ್ಯಕ್ತಿಸುವುದಕ್ಕೂ, ಚಿಂತನಶೀಲ ಪ್ರವೃತ್ತಿಯುಳ್ಳ ಸುಸಂಸ್ಕೃತ ಸಾಹಿತಿಯೋರ್ವನ ಕಣ್ಣು-ಮನಗಳು ಗ್ರಹಿಸಿ ಅಭಿವ್ಯಕ್ತಿಸುವುದಕ್ಕೂ ಇರುವ ವ್ಯತ್ಯಾಸಗಳನ್ನು ತಿಳಿಯಹೇಳುತ್ತವೆ.

**ಅಪೂರ್ವ ಪಶ್ಚಿಮವು** ಕಾರಂತರು ಲಂಡನ್, ನಾರ್ವೆ, ಓಸ್ಲೋ, ಸ್ವೀಡನ್, ಹೆಂಬರ್ಗ್, ಹಾಲೆಂಡ್, ಬೆಲ್ಜಿಯಂ, ನೀಸ್, ಪ್ಯಾರಿಸ್, ಇಟಲಿ, ಮಿಲಾನ್ ಮತ್ತು ವೆನಿಸ್, ಫ್ಲಾರೆನ್ಸ್, ಹಾಗೂ ರೋಮ್-ಈ ದೇಶಗಳ ಸುತ್ತಾಟದಲ್ಲಿ ಪಡೆದ ಅನುಭವಗಳನ್ನು ಪರಿಚಯಿಸುವ ವಿಶಿಷ್ಟ ಕೃತಿ. ಕಾರಂತರು ಪ್ರಕೃತಿ ಸೌಂದರ್ಯ, ಕಲೆ, ಪ್ರಪಂಚದ ಜನರ ಬದುಕು, ಅವರ ಸುಖಮಯ ಬದುಕಿಗೆ ಕಾರಣವಾಗಿರುವ ಉದ್ಯಮ -ಇವುಗಳನ್ನು ಪ್ರಧಾನವಾಗಿ ತಮ್ಮ ಪ್ರವಾಸ ಕಥನದಲ್ಲಿ ಅಧ್ಯಯನ ಮಾಡಿರುವರು. ಆದ್ದರಿಂದಲೇ ಈ ಕೃತಿ ಬೇರೆ ಕೃತಿಗಳಿಗಿಂತ ಭಿನ್ನವಾದುದು, ಮೌಲಿಕವಾದುದು.

ಕಾರಂತರು ತಮ್ಮ ಪ್ರವಾಸ ಕಾಲದಲ್ಲಿ ವಿರಾಮವಾಗಿ ತಮಗೆ ಮೆಚ್ಚುಗೆಯಾದುದನ್ನು ನಿಂತು ನೋಡಿದ್ದಾರೆ; ಕಣ್ಣು-ಕಿವಿ-ಮನಗಳನ್ನು ತೆರೆದು ಕಲೆ ಸಂಸ್ಕೃತಿಗಳ ಆರಾಧಕರಾಗಿ ಸುತ್ತಾಟ ನಡೆಸಿದ್ದಾರೆ. ಯಾವ ಪೂರ್ವ ನಿರ್ಧರಿತ ಧೋರಣೆಗಳಿಗೂ ಬಲಿಯಾಗದೆ, ಯಾವ ತಮ್ಮ ಧೋರಣೆಯನ್ನೂ ಮುಂದಿಡದೆ ನಡೆದಿದ್ದಾರೆ. ಅವರಿಗೆ ಪ್ರವಾಸವು ಸಾಂಸ್ಕೃತಿಕ ಮಹತ್ವದ್ದಾಗುವುದರಿಂದ ಅದು ಅನುಭವಗಳ ಶೋಧನೆಯಲ್ಲಿ ಸುತ್ತಮುತ್ತಣ ಪ್ರಪಂಚವನ್ನು ಜನಮನವನ್ನು ಅರಿಯುವಲ್ಲಿ ಒಂದು ಸಶಕ್ತ ಮಾಧ್ಯಮವಾಗುತ್ತದೆ. ಬಹುಪಾಲು ಮಂದಿಗೆ ಪ್ರವಾಸವು ಮನರಂಜನೆಯದಾದರೆ, ಕಾರಂತರಿಗೆ ಅದು ಬೌದ್ಧಿಕ ವಿಕಾಸಕ್ಕೆ ಸಾಧನವಾಗಿರುತ್ತದೆ.

ಪ್ರವಾಸದಲ್ಲಿ ಕಾರಂತರ ಗುರಿಯಾಗುತ್ತಿದ್ದುದು ಮ್ಯೂಸಿಯಂಗಳು, ಮೃಗಾಲಯಗಳು, ನೃತ್ಯನಾಟಕಗಳು, ಉದ್ಯೋಗ ಪ್ರದರ್ಶನಗಳು ಇತ್ಯಾದಿ. ಅವರದು ಆರೋಗ್ಯವಂತ ಸುಸಂಸ್ಕೃತ ಕಲಾವಿದನ ಮನಸ್ಸಾದ್ದರಿಂದ ಅವ್ಯಕ್ತ ಸುಖದ ಸೀಮೆಯಲ್ಲಿ ಅವರ ಕಣ್ಣು-ಮನ ವಿಹರಿಸುತ್ತದೆ. ಪ್ಯಾರಿಸ್, ರೋಂ, ಫ್ಲಾರೆನ್ಸ್, ಲಂಡನ್ ನಗರಗಳಲ್ಲಿನ ಮ್ಯೂಸಿಯಂಗಳ ಕಲಾವೈಭವಗಳ ಉಲ್ಲೇಖ ಇದಕ್ಕೆ ನಿದರ್ಶನವಾಗಿ ಕೊಡಬಹುದು. ಎಲ್ಲಿ ಸೌಂದರ್ಯ ಅರಳಿ ನಿಂತಿದೆಯೊ ಅಲ್ಲೆಲ್ಲಾ ಸಹೃದಯ ಕಲಾವಿದ ಕಾರಂತರ ನೋಟ ಹಿಂಬಾಲಿಸಿದೆ. ಇಂಗ್ಲೆಂಡಿನ ಪರ್ವತಗಳಲ್ಲಿ ಮುಕ್ಕಳಿಸುತ್ತಿರುವ ಹಸಿರು ಕೃಷಿಕನ ಕೈಯಲ್ಲಿ ತಿದ್ದಿ ಬೆಳೆಸಿರುವಂತಿರುವುದನ್ನು ಕಂಡು "ಇಂಗ್ಲೆಂಡಿನ ಹಸಿರು ನಿಸರ್ಗದ ಶೋಭೆಯನ್ನು ತೋರಿಸುವುದರ ಜೊತೆಗೆ ಮಾನವನ ಕೈವಾಡವನ್ನೂ

ತೋರಿಸುತ್ತಿತ್ತು" ಎಂದು ಮೆಚ್ಚುಗೆಯಾಡುವರು. ಬ್ರಿಟಿಷರ ಸೌಂದರ್ಯಪ್ರಿಯತೆಯನ್ನು ಬಹಳವಾಗಿ ಮೆಚ್ಚಿದ ಕಾರಂತರು "ವಸಂತ ವೈಶಾಖಗಳು ಅದನ್ನು ತಿದ್ದಿ ಬೆಳೆಸಿದ ಶಕ್ತಿಗಳಾಗಿವೆ" ಎನ್ನುವರು. ಪ್ರಕೃತಿಯ ಮಡಿಲಲ್ಲಿ ಸೊಬಗು ಎಲ್ಲೇ ಕಾಣಲಿ ನೋಡಿ ಮೈಮರೆಯುವ ಸ್ವಭಾವ ಕಾರಂತರದು. ಹೀಗಾಗಿ ಸರೋವರಗಳ ಹಂಸಪಕ್ಷಿಗಳ ಜೊತೆ ಮೌನ ಸಂಭಾಷಣೆ ನಡೆಸುವರು; ಹೂಮಾರಾಟದ ಅಂಗಡಿಗೆ ಹೋದರೆ 'ಅಲ್ಲೇ ತಾಸುಗಳ ತನಕ ನಿಂತು ನೋಡುವ ಆಸೆ.' (ಪು.೩೫)

ಲಂಡನ್ನಿನಲ್ಲಿ ಚಲನಚಿತ್ರ ಮಂದಿರಗಳು ಸಾಕಷ್ಟಿದ್ದರೂ ಅವುಗಳ ಎಡೆಯಲ್ಲಿ ಷೇಕ್ಸ್‌ಪಿಯರ್, ಷಾ ಮೊದಲಾದವರ ನಾಟಕಗಳು ಬದುಕಿ ಉಳಿದಿರುವುದನ್ನು ಕಂಡ ಕಾರಂತರು ಅದಕ್ಕೆ ಕಾರಣ, ಅಲ್ಲಿನ ಉತ್ತಮ ಸಂಸ್ಕಾರವುಳ್ಳ ಪ್ರೇಕ್ಷಕವರ್ಗ. ಆ ಸಂಸ್ಕಾರ ನಮ್ಮಲ್ಲಿದ್ದಿದ್ದರೆ ನಮ್ಮ ಇಂದಿನ ನಾಟಕಗಳು ಬೆಳೆಯುತ್ತಿದ್ದವು ಎನ್ನುವರು. "ನಾಟಕದ ಅಷ್ಟೇ ಶಕ್ತಿಯಿಂದ ಚಲನಚಿತ್ರವು ಮಾಡಲಾರದು ಎಂದು ತಿಳಿಯಬಲ್ಲ ಸಂಸ್ಕಾರವಂತ ಜನರು ಮಾತ್ರ ತಮ್ಮ ರಂಗಭೂಮಿಯನ್ನು ಉಳಿಸಿಕೊಂಡಾರು" (ಪು.೮೨) ಎಂದು ನಮ್ಮ ರಂಗಭೂಮಿಯ ಅಳಿವು-ಉಳಿವಿನ ಬಗೆಗೆ ವಿಚಾರ ಮಾಡುವರು. ಬ್ರಿಟಿಶ್ ಜನತೆ ತಮಗೆ ಯುದ್ಧದಿಂದ ಅಪಾರವಾದ ಹಾನಿಯಾಗಿದ್ದರೂ. ಅದನ್ನು ತಮ್ಮ ಅಪಾರ ಶ್ರಮದಿಂದ ತುಂಬಿಕೊಂಡಿರುವುದು, ಶ್ರಮಪೂರಿತ ದುಡಿಮೆಯ ಫಲವನ್ನು ಉಣ್ಣುತ್ತಿರುವುದು ಕಾರಂತರಿಗೆ ಮೆಚ್ಚುಗೆಯಾದ ಅಂಶ. "ಇಂಗ್ಲೆಂಡಿನ ಯಶಸ್ಸು -ಬಹುವಾಗಿ ಯಂತ್ರದ ಹಿಂದೆ ಆಲಸ್ಯವಿಲ್ಲದೆ ನಿಂತು ದುಡಿಯುವ, ಸ್ವದೇಶ ಪ್ರೀತಿಯುಳ್ಳ ಸಾಮಾನ್ಯ ಪ್ರಜೆಯಿಂದಲೇ ಉಂಟಾಯಿತು" (ಪು.೭೪) ಎಂದು ಹೇಳುವ ಕಾರಂತರು, ಅವರಿಗೂ ನಮಗೂ ಇರುವ ಅಂತರವನ್ನು ಗುರುತಿಸುತ್ತಾ "ಅವರು ಯಾರೂ ಕೆಲಸ ಹೆಚ್ಚಾಯಿತೆಂದು ಕೊರಗಿದವರಲ್ಲ. ತಾವು ಉಳಿಯಲು, ತಮ್ಮ ದೇಶ ಉಳಿಯಲು ಎಂಥ ತ್ಯಾಗಕ್ಕೂ, ಸಿದ್ಧರಾದರೆ ಭಾರತೀಯರಾದರೋ 'ಕೆಲಸದ ವೇತನ ಹೆಚ್ಚಿಸಿ ಕೆಲಸದ ವೇಳೆ ತಗ್ಗಿಸಿ' ಎಂದು ಕೂಗು ಹಾಕುವರು. ಹಕ್ಕಿನೊಂದಿಗೆ ಬೆರೆತ ಹೊಣೆ ಇಲ್ಲಿ ಯಾರಿಗೂ ಬೇಡವಾಗಿದೆ" (ಪು. ೭೫) ಎಂದು ವ್ಯಂಗ್ಯವಾಡಿರುವರು.

"ಮಹಾಯುದ್ಧದ ಮೊದಲಿನಿಂದಲೂ ಒಂದು ಬಗೆಯ ಅಭಿಮಾನ ನನಗೆ ಜರ್ಮನ್ ಜನಸಾಮಾನ್ಯರ ವಿಚಾರದಲ್ಲಿ" ಎನ್ನುವ ಕಾರಂತರು ಜರ್ಮನಿ ಯುದ್ಧದಿಂದ ಅಪಾರವಾದ ಹಾನಿಯನ್ನು ಹೊಂದಿದ್ದರೂ ಯುದ್ಧಮುಗಿದ ಮರುದಿನವೇ ಚೇತರಿಸಿಕೊಂಡು ನೆಲ ಚೊಕ್ಕಟಮಾಡಿ, ಮುರಿದ ಕಟ್ಟಡ ಹೊಡೆದು ಹೊಸದನ್ನು ಕಟ್ಟಿ ಪ್ರಗತಿಯುತ್ತ ಮುಖ ಮಾಡಿದ, ದಿನಕ್ಕೆ ೮-೧೦ ಗಂಟೆಗೆ ದುಡಿದ, ಕಾರ್ಖಾನೆಗಳು ನಾಶವಾದಾಗ ಎದೆಗೆಡದೆ ಅದರ ಒಡೆಯರು ಪಶ್ಚಿಮ ಜರ್ಮನಿಗೆ ಬಂದು ಅಡಗಿಸಿದ್ದ

ಯಂತ್ರಗಳ ನಕ್ಷೆಯಿಂದ ತಿರುಗಿ ಯಂತ್ರ ನಿರ್ಮಾಣಮಾಡಿ ಮೊದಲಿನಂತೆ ಪೈಪೋಟಿಯ ಉದ್ಯಮಗಳಲ್ಲಿ ನಿರತರಾದ ಜರ್ಮನರ ಈ ಅಪೂರ್ವ ಸಾಹಸವನ್ನು, ಜೀವನೋತ್ಸಾಹವನ್ನು ಕಾರಂತರು ಬಹಳವಾಗಿ ಮೆಚ್ಚಿಕೊಂಡಿರುವರು. ಭಾರತೀಯರಾದ ನಮಗೆ ಯುದ್ಧದಿಂದ ನೇರ ಹಾನಿಯಾಗದಿದ್ದರೂ ಯುದ್ಧಾನಂತರ ನಾವು ಶೇಕಡಾ ಹತ್ತರಷ್ಟು ಉದ್ಯಮ ಬೆಳೆಸಿದ್ದೇವೆಯೇ? ಎಂಬ ಅನುಮಾನವನ್ನು ಕಾರಂತರು ವ್ಯಕ್ತಪಡಿಸಿರುವರು.

"ನಾನು ಸ್ವಿಜರ್ಲೆಂಡಿಗೆ ಬಂದ ಉದ್ದೇಶ- ಕೇವಲ ಅಲ್ಲಿನ ಸೃಷ್ಟಿ ಸೌಂದರ್ಯವನ್ನು ನೋಡುವುದಕ್ಕೇ ಹೊರತು ಇನ್ನೇನೂ ಅಲ್ಲ" (ಪು. ೨೭೩) ಎಂದು ಕಾರಂತರು ಹೇಳುವರು. ಸ್ವಿಜರ್ಲೆಂಡಿನಲ್ಲಿ ಪ್ರವಾಸ ಮಾಡುತ್ತಿದ್ದಾಗ ಕಾರಂತರು ತಮ್ಮ ರೈಲಿನ ಹಾಲಿಡೇ ಟಿಕೆಟ್ ಪುಸ್ತಕ ಕಳೆದುಕೊಂಡರು. ಅದು ಎಷ್ಟು ಹುಡುಕಿದರೂ ಸಿಗಲಿಲ್ಲ. ಕಾರಂತರ ಕಷ್ಟ ನೋಡಿ ಅಯಾಚಿತವಾಗಿ ಸಹಾಯಕ್ಕೆ ಓರ್ವ ಹುಡುಗಿ ಬಂದು ಅವರು ಎಲ್ಲೆಲ್ಲಿ ಹೋಗಿದ್ದರೆಂಬುದನ್ನೆಲ್ಲಾ ಕೇಳಿ ತಿಳಿದು ನಾಲ್ಕು ಕಡೆಗಳಿಗೆ ಫೋನ್ ಮಾಡಿ ಹಿಂದಣ ದಿನ ಕಾರಂತರು ಉಪಾಹಾರ ಗೃಹವೊಂದರಲ್ಲಿ ಮರೆತು ಬಂದಿದ್ದ ಟಿಕೆಟ್ ಬುಕ್ಕನ್ನು ಪತ್ತೆಮಾಡಿ ಅದನ್ನು ಅವರಿಗೆ ಒಪ್ಪಿಸಿದಳು. ಈ ಉಪಕಾರಕ್ಕೆ ಇನಾಮವಾಗಿ ಐದು ಫ್ರಾಂಕ್ ಕೊಟ್ಟರೂ ಆಕೆ ಅದನ್ನು ಸ್ವೀಕರಿಸಲಿಲ್ಲವಂತೆ. ಸ್ವಿಸ್ ಜನರ ಈ ಉಪಕಾರ ಮನೋಭಾವವನ್ನು ಹೇಳಿರುವ ಕಾರಂತರು ಸ್ಪೈನ್, ಇಟಲಿ, ಫ್ರಾನ್ಸ್ ದೇಶಗಳ ಜನರ ವಿಲಾಸಮಯ ಜೀವನವನ್ನು ಕುರಿತೂ ಹೇಳಿರುವರು.

ಸ್ಟಾಕ್‌ಹೋಂನಲ್ಲಿ ಓರ್ವ ಮಧ್ಯವಯಸ್ಕ ಸ್ತ್ರೀ ಅಯಾಚಿತವಾಗಿ ಸಹಾಯ ಮಾಡಲು ಮುಂದೆ ಬಂದ ಒಂದು ಘಟನೆಯನ್ನು ಕಾರಂತರು ಹೀಗೆ ಉಲ್ಲೇಖಿಸಿರುವರು. "ಕೆಫೆಯೊಂದರಲ್ಲಿ ಹಾಲು ಕುಡಿದು ಹೊರಗೆ ಬಂದವನು ಮೆಲ್ಲಗೆ ದಾರಿಯನ್ನು ತುಳಿಯುತ್ತ ನೂರುಗಜ ಸರಿದಿದ್ದೆ. ಅಷ್ಟಕ್ಕೆ ಒಬ್ಬ ಮಧ್ಯ ವಯಸ್ಕ ಸ್ತ್ರೀಯು ನನ್ನನ್ನು ಹಿಂಬಾಲಿಸಿಕೊಂಡು ಬಂದು ತಡೆದು ನಿಲ್ಲಿಸಿದಳು. "ನೀವು ಹೊಟೇಲಿಂದ ಬಂದಿರಲ್ಲವೇ?" ಎಂದು ಕೇಳಿದಳು. ಅರ್ಧ ಇಂಗ್ಲಿಷು, ಅರ್ಧ ಸ್ವೀಡಿಷ್ ಭಾಷೆಯಲ್ಲಿ "ಹೊಟೇಲು" ಎಂಬ ಪದವನ್ನು ಕೇಳಿ ನನ್ನ ನಿವಾಸನ ಹೊಟೇಲು ಎದುರಿಗೇನೆ ಇರುವುದನ್ನು ತೋರಿಸಿದೆ. ಆಗ ಅವಳು "ಹಾಗಲ್ಲ, ನೀವು ಹೊಟೇಲಿಗೆ ಬಂದಿರಿ, ಊಟದ ಮನೆಯಿಂದ ಊಟಮಾಡಿದೆ ಮರಳಿದಿರೇಕೆ? ಕೈಯಲ್ಲಿ ಹಣವಿದ್ದಿರಲಿಲ್ಲವೇ" ಎಂದು ತನ್ನ ಚೀಲ ತೆರೆದು ಹಣ ಕೊಡಲು ಮುಂದಾದಳು. ನಾನು ಅಲ್ಲಿ ಒಂದೆರಡು ನಿಮಿಷ ನಿಂತುದನ್ನು ಆಕೆ ಕಂಡಿದ್ದಳು. ಹಾಲು ಕುಡಿದುದನ್ನು ಕಂಡಿರಲಾರಳು. ಊಟದ ಮನೆಯಿಂದ ಬರಿದೆ ಹೊರಡಲು ಏನು ಕಾರಣವೆಂದು ಊಹಿಸಿ, ನನ್ನನ್ನು ಅರಸಿಕೊಂಡು

ಸಹಾಯಮಾಡಲು ಅವಸರಿಸಿ ತಾನಾಗಿ ಓಡಿಬಂದಳು. ಒಂದು ಕ್ಷಣಕ್ಕೆ ನನ್ನ ಮೈ ಜುಮ್ಮೆಂದಿತು. ನಾನು ಆಕೆಯ ವಿಶಾಲ ಅಂತಃಕರಣವನ್ನು ಕಂಡು ಶಿಶುವಾದೆ. "ಇಲ್ಲ-ನಾನು ಆಕೆಯ ತಾಯಿಯ ಅಂತಃಕರಣವನ್ನು ಕಂಡು ಶಿಶುವಾದೆ. "ಇಲ್ಲ-ನಾನು ಹಾಲನ್ನು ಕುಡಿದು ಬಂದೆ" ಎಂದು ಸಮಾಧಾನ ಹೇಳಿದೆ. ಆಕೆ ಕೂಡಲೆ ಮರಳಿದಳು. ಈ ಬಗೆಯ ಔದಾರ್ಯವನ್ನು ನಮ್ಮ ಜೀವನದಲ್ಲೆಷ್ಟು ಬಾರಿ ಕಾಣಬಹುದು?..."

ಕಾರಂತರು ತಮ್ಮ ಯೂರೋಪ್ ಪ್ರವಾಸದಲ್ಲಿ ತಮಗೆ ಮೆಚ್ಚುಗೆಯಾದ ಮ್ಯೂಸಿಯಂಗಳ ಒಳಹೊಕ್ಕು ಕಲಾವಿದನಾಗಿ ಅವುಗಳಲ್ಲಿನ ಶಿಲ್ಪ, ಚಿತ್ರಗಳನ್ನು ಅಭ್ಯಾಸ ಮಾಡಿರುವರು. ಜನರ ಜೀವನ ವಿಧಾನವನ್ನು ಹಾಗೂ ಅವರ ಬದುಕಿನಲ್ಲಿ ವ್ಯಕ್ತವಾಗುವ ಹಿರಿಯಮಟ್ಟದ ಸಂಸ್ಕೃತಿಯನ್ನು ಜನರೊಡನೆ ಬೆರೆಯುವುದರ ಮೂಲಕ, ಸಂಭಾಷಿಸುವುದರ ಮೂಲಕ ತಿಳಿಯಪಡಿಸಿರುವರು. ಯೂರೋಪಿನ ಪ್ರಕೃತಿ ಸಂಪತ್ತು, ಕಲಾಸಂಪತ್ತು, ಜನಜೀವನದಲ್ಲಿ ತೋರಿಬರುವ ಜೀವನೋತ್ಸಾಹ, ದುಡಿಮೆಯ ಬಗೆಗಿರುವ ಶ್ರದ್ಧೆ, ಪ್ರಾಮಾಣಿಕತೆಗಳನ್ನು ಕಂಡ ಕಾರಂತರ ಮನದ ಮೂಲೆಯಲ್ಲಿ ಭಾರತೀಯರ ಅಪರಿಪೂರ್ಣಾವಸ್ಥೆಯ ಚಿತ್ರವೂ ಮೂಡಿ ನೋವು ತಂದಿದೆ. "ಪಡುವಣ ದೇಶಗಳಿಗೂ ಮೂಡಣ ಭಾರತಕ್ಕೂ ಇರುವ ದೂರವು ಭೌಗೋಲಿಕ ದೂರ ಮಾತ್ರವಲ್ಲ, ಮಾನಸಿಕ ಅಂತರವೂ ಹೌದು" ಎಂಬ ಕಾರಂತರ ಮಾತಿನಲ್ಲಿ ವಾಸ್ತವವಿದೆ. ಈ ಪ್ರವಾಸ ಕಥನದಲ್ಲಿ ಕಾರಂತರು ತಮಗೆ ತಿಳಿದುಬಂದುದನ್ನು ಅತಿಯಾಗಿ ಲಂಬಿಸದೆ; ಕಲ್ಪನೆಯ ರಂಗು ಬಳಿಯದೆ ಹಿತಮಿತವಾಗಿ ಹೇಳಿರುವರು. ಯೂರೋಪಿನ ಕಲಾಶಾಲೆಗಳ ಅದ್ಭುತ ಚಿತ್ರಗಳನ್ನು, ಶಿಲ್ಪಗಳನ್ನು ವಿವರಿಸುವಾಗಿನ ಅವರ ಆ ಸೂಕ್ಷ್ಮ ಸಂವೇದನಾಶಕ್ತಿಗೆ ನಾವು ಅಚ್ಚರಿಗೊಳ್ಳುತ್ತೇವೆ.

ರಾ.ಶಿ.ಯವರು ರಷ್ಯಾ ಮತ್ತು ಯೂರೋಪ್ ದೇಶಗಳಲ್ಲಿ ನಡೆಸಿದ ಎರಡು ತಿಂಗಳ ವ್ಯಾಸಂಗ ಪ್ರವಾಸವು **ಕೊರವಂಜಿಯ ಪಡುವಣಯಾತ್ರೆಯ** ರೂಪದಲ್ಲಿ ಹೊರಬಂದಿದೆ. ರಾ.ಶಿ.ಯವರು ವೃತ್ತಿಯಲ್ಲಿ ವೈದ್ಯರು. ವೈದ್ಯರಾಗಿ ಅವರು ಎಷ್ಟು ಜನಪ್ರಿಯರೊ ಹಾಗೆಯೇ ನಗೆಗಾರರಾಗಿಯೂ ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧರು. ಕನ್ನಡದಲ್ಲಿನ ಅವರ ನಗೆ ಬರಹಗಳನ್ನು ಓದಿರುವವರಿಗೆ, ಅವರ ಹಾಸ್ಯ ಪ್ರವೃತ್ತಿಯ ಪರಿಚಯವಿರುವವರಿಗೆ ರಾ.ಶಿ.ಯವರ ಈ ಪ್ರವಾಸ ಕಥನದಲ್ಲಿನ ತಿಳಿಯಾದ ಹಾಸ್ಯ ಕಚಗುಳಿಯಿಡುತ್ತದೆ. ಇಲ್ಲಿ ಸುತ್ತಾಟದ ವಿವರಗಳು ಎಲ್ಲೂ ಹಿಂಜಿ ಹಿಂಜಿ ಬರದೆ ಉಚಿತಕ್ಕೆ ತಕ್ಕಷ್ಟು ಬರುತ್ತವೆ. ರಷ್ಯಾದ ಹಿರಿಯ ವಿಜ್ಞಾನಿ ಅಕಾಡೆಮಿಷಯನ್ ಬೈಖೋವ್ ನಿಧನ ಹೊಂದಿ ವರ್ಷವಾದರೂ ದೆಹಲಿಯ ಸೋವಿಯತ್ ರಾಯಭಾರಿ ಕಛೇರಿಯವರಿಗೇ ಆ ವಿಷಯ ತಿಳಿದಿರಲಿಲ್ಲವೆನ್ನುವಾಗ ರಷ್ಯಾದವರ ಮೈಗಳ್ಳತನದ

ಬಗೆಗಿನ ವ್ಯಂಗ್ಯದ ಮೊನಚು ಚುಚ್ಚುತ್ತದೆ. ಪ್ಯಾರಿಸ್ ಹಾಗೂ ವಿಯನ್ನಾ ದೇಶಗಳಲ್ಲಿನ ಮೋಜಿನ ರಾತ್ರಿಗಳ ವರ್ಣನೆ ಹಾಗೂ ಅಲ್ಲಿನವರ ಮುಕ್ತ ವಿಲಾಸಕೇಳಿಯ ಚಿತ್ರವನ್ನು ರಾ.ಶಿ.ಯವರು ವಿಸ್ತಾರವಾಗಿಯೇ ಕೊಟ್ಟಿರುವರು. ವೈದ್ಯಕೀಯ ಕ್ಷೇತ್ರದಲ್ಲಿ ವಿಯನ್ನಾ ಸಾಧಿಸಿರುವ ಮುನ್ನಡೆಯನ್ನು ರಾ.ಶಿ.ಯವರು ಪ್ರಸ್ತಾಪಿಸುತ್ತಾ, ನಮ್ಮ ವೈದ್ಯ ತರುಣರು ಮೂರು ಅಥವಾ ಆರು ತಿಂಗಳು ಅಲ್ಲಿ ಕೆಲಸ ಮಾಡಿ ಬಂದರೆ ಅವರ ತಿಳುವಳಿಕೆ ಒಂದು ಹದ ಪಡೆಯುತ್ತದೆನ್ನುವರು. ಸ್ವಿಜರ್ಲೆಂಡಿನ ಕ್ಷಯದ ಆಸ್ಪತ್ರೆಯೊಂದಕ್ಕೆ ಭೇಟಿ ನೀಡಿದ ರಾ.ಶಿ.ಯವರು ಅಲ್ಲಿನ ಶುಚಿತ್ವ, ರೋಗಿಗಳನ್ನು ಉಪಚರಿಸುವಲ್ಲಿ ತೋರುವ ಶ್ರದ್ಧೆ-ಇವನ್ನು ಕಂಡು "ಹಿಂದಿನ ಕಾಲದ ರಾಜ್ಯ ಇದ್ದ ರಾಜರ ಅಳಿಯಂದಿರು ಕೂಡ ಆ ವೈಭವವನ್ನು ಅನುಭವಿಸಿರಲಾರರು" ಎಂದು ಮೆಚ್ಚುಗೆಯಾಡಿರುವರು. ಹಾಸ್ಯ ಸಾಹಿತಿಯೋರ್ವರು ವೈದ್ಯರೂ ಆಗಿದ್ದಾಗ ಅವರ ಪ್ರವಾಸದ ಅನುಭವ ಕಥನ ಎಷ್ಟರ ಮಟ್ಟಿಗೆ ಖುಷಿಯೊಂದಿಗೆ ತಿಳಿವನ್ನೂ ನೀಡುತ್ತದೆಂಬುದಕ್ಕೆ ರಾ.ಶಿ.ಯವರ ಈ ಕೃತಿ ನಿದರ್ಶನವಾಗಿದೆ.

ವಯಸ್ಕರ ಶಿಕ್ಷಣ ಸಮಿತಿಯ ನೆರವಿನಿಂದ ಎಸ್. ರಜತಾದ್ರಿಯವರು ಡೆನ್ಮಾರ್ಕ್, ಸ್ವೀಡನ್, ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ಪಶ್ಚಿಮ ರಾಷ್ಟ್ರಗಳನ್ನು ಸುಮಾರು ಮೂರುವರೆ ತಿಂಗಳು ಸುತ್ತಿ ಬಂದು ತಮಗಾದ ಅನುಭವಗಳನ್ನು **'ಪಶ್ಚಿಮದ ಹೊಂಬೆಳಗು'** ಎಂಬ ತಮ್ಮ ಪ್ರವಾಸ ಕಥನದಲ್ಲಿ ನಿರೂಪಿಸಿರುವರು. ಸಾಮಾನ್ಯ ಓದುಗನನ್ನು ಗಮನದಲ್ಲಿಟ್ಟುಕೊಂಡು ಈ ಕೃತಿಯಲ್ಲಿ ವಿಷಯ ಸಂಗ್ರಹಣೆ ಮಾಡಲಾಗಿದೆ.

ಪ್ರವಾಸವು ಕೊಚ್ಚಿನ್‌ನಿಂದ ಜಹಜಿನಲ್ಲಿ ಪ್ರಾರಂಭವಾಗುತ್ತದೆ. ಜಹಜು ಜೀವನದ ಕಿರು ಚಿತ್ರವನ್ನು ಮೊದಲಿಗೆ ಲೇಖಕರು ಕೊಟ್ಟಿರುವರು. ನೇಪಲ್ಸ್‌ನಲ್ಲಿ ಹಡಗು ನಿಂತಾಗ ಪಾಂಪೆಯನ್ನು ನೋಡಲು ಹೋದ ಲೇಖಕರು ಅದರ ಪೂರ್ವೇತಿಹಾಸವನ್ನು ಸೂಕ್ಷ್ಮವಾಗಿ ತಿಳಿಯಪಡಿಸಿರುವರು. ದಕ್ಷಿಣ ಭಾರತದ ಮನೆಗಳ ಮಾದರಿಯಲ್ಲಿ ಅಲ್ಲಿ ಮನೆಗಳಿರುವುದನ್ನು ಎತ್ತಿ ತೋರಿಸಿರುವರು. ಜಹಜು ಪಯಣ ಜಿನೋವಾಕ್ಕೆ ಮುಗಿದು ಮುಂದೆ ಕೊಪೆನ್‌ಹೇಗನ್‌ಗೆ ವಿದ್ಯುತ್ ರೈಲಿನಲ್ಲಿ ಪ್ರಯಾಣ ಮಾಡಿದ ಲೇಖಕರು ಡೆನ್ಮಾರ್ಕಿನ ವಿವಿಧ ವ್ಯವಸಾಯ, ತೋಟಗಾರಿಕೆ, ಹೈನುಗಾರಿಕೆ ಶಾಲೆಗಳಿಗೆ ಭೇಟಿನೀಡಿ ವಿಚಾರವಿನಿಮಯ ನಡೆಸುವರು. ಅವರು ಅವೆಲ್ಲವುಗಳ ವಿವರವನ್ನು ಸ್ವಲ್ಪದರಲ್ಲೇ ಹೇಳಿರುವರು. ಆಲ್‌ಬರ್ಗ್‌ನಗರದ ವಸ್ತು ಪ್ರದರ್ಶನದ ಕಲಾಶಾಲೆಯ ಶಿಲ್ಪಗಳು, ತೈಲ ಚಿತ್ರಗಳು -ಇವುಗಳ ಪರಿಚಯವನ್ನು ವಿಸ್ತಾರವಾಗಿ ಮಾಡಿಕೊಟ್ಟಿರುವರು. ಇಂಗ್ಲೆಂಡಿಗೆ ಬಂದ ಲೇಖಕರು "ಆ ಜನರು ಸ್ವಭಾವತಃ ಬಿಗುಮನದ ಜನ; ಮಿತಭಾಷಿಗಳು, ದೇಶದ ಬಗೆಗೆ ಅವರಿಗೆ ಅಪಾರ ಪ್ರೇಮ.

ನಾಡಿನ ಗೌರವಕ್ಕಾಗಿ ಎಂತಹ ತ್ಯಾಗ ಮಾಡಲೂ ಅವರು ಸಿದ್ಧರಿರುತ್ತಾರೆ" ಎಂದು ತಮ್ಮ ಅನುಭವವನ್ನು ಹೇಳುವರು. ನಾಟಿಂಗ್‌ಹ್ಯಾಂನಲ್ಲಿ ನಡೆದ ವರ್ಣೀಯ ಘರ್ಷಣೆಯ ಬಗೆಗೆ ಕೋರ್ಟು ನಿಷ್ಪಕ್ಷಪಾತದಿಂದ ನ್ಯಾಯ ನೀಡಿ ತನ್ನ ಉದಾತ್ತ ಧ್ಯೇಯಗಳನ್ನು ಎತ್ತಿಹಿಡಿದಿದ್ದಿತು. ಅಲ್ಲಿನ ಪತ್ರಿಕೆಗಳು ಯಾವುದನ್ನೂ ಬಚ್ಚಿಡದೆ ವರದಿಯನ್ನು ವಿವರವಾಗಿ ಪ್ರಕಟಿಸಿದುವು. ತಮ್ಮ ಪ್ರವಾಸ ಕಾಲದಲ್ಲಿ ಇದನ್ನು ಗಮನಿಸಿದ ಲೇಖಕರು ಅಲ್ಲಿರುವ ಪತ್ರಿಕಾ ಸ್ವಾತಂತ್ರ್ಯದ ಬಗೆಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವರು. ಸಿನೇರಮಾ ಒಂದರಲ್ಲಿ ತೋರಿಸಲಾದ ಒಂದು ಚಿತ್ರದಲ್ಲಿ (ವಿಶ್ವದ ಏಳು ಅದ್ಭುತಗಳು) ಭಾರತದ ದೃಶ್ಯಗಳೂ ಇದ್ದು ಅವುಗಳಿಗೆ ವಿವರಣೆ, ವ್ಯಾಖ್ಯಾನ ನೀಡುವಲ್ಲಿ ಭಾರತವನ್ನು ಗೇಲಿ ಮಾಡುವ ಧೋರಣೆಯಿದ್ದುದನ್ನು ಗಮನಿಸಿದ ಲೇಖಕರು "ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಸಾರುವ ಒಂದಂಶವಾದರೂ ಅದರಲ್ಲಿ ಇಲ್ಲವಲ್ಲ" ಎಂದು ನೊಂದು ನುಡಿದಿರುವರು. ನಮ್ಮ ರಾಯಭಾರ ಕಛೇರಿಗಳು ಅಲಂಕಾರ ವಸ್ತುಗಳಂತೆ ಇರದೆ ನಮ್ಮ ದೇಶದ ಸಂಸ್ಕೃತಿಯ ಬಗೆಗೆ ಸರಿಯಾದ ಅಭಿಪ್ರಾಯ ಮೂಡಿಸಲು ಪ್ರಯತ್ನಿಸಬಾರದೇಕೆ? ಎಂಬ ಸಕಾಲಿನ ಎಚ್ಚರವನ್ನೂ ಕೊಟ್ಟಿರುವರು.

ಪ್ಯಾರಿಸ್‌ನಲ್ಲಿ ಭಾರತದ ರಾಯಭಾರಿಗಳಾಗಿದ್ದ ಕೆ.ಎಂ. ಫಣಿಕ್ಕರ್‌ರವರನ್ನು ಲೇಖಕರು ಭೇಟಿಮಾಡಿ ಮಾತಿನ ನಡುವೆ "ನಮ್ಮ ವಿದ್ಯಾಪೀಠಗಳು ಪ್ರಾಚೀನ ಗುರುಕುಲಗಳ ಮಾದರಿಗಳು" ಎಂದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ಫಣಿಕ್ಕರ್‌ರವರು "ಗುರುಕುಲಗಳ ಸುದ್ದಿ ಎತ್ತಬೇಡಿ. ಅದು ಶುದ್ಧ ಅವಿವೇಕ. ಅವುಗಳಲ್ಲಿ ಎಂತಹ ಹೊಲಸು ತುಂಬಿತ್ತು ಎಂಬುದು ನನಗೆ ಗೊತ್ತು" ಎಂದು ತೀಕ್ಷ್ಣವಾಗಿ ನುಡಿದರು. ಅಷ್ಟಕ್ಕೇ ಮೆತ್ತಗಾದ ಲೇಖಕರು "ಫಣಿಕ್ಕರ್‌ರವರ ಅಭಿಪ್ರಾಯದಲ್ಲಿ ಸತ್ಯಾಂಶವಿದ್ದರೂ ಅವರ ಮಾತುಗಳು ತೀವ್ರವೂ ಹರಿತವೂ ಆಗಿದ್ದಂತೆ ತೋರಿದುವು" ಎಂದು ತಣ್ಣಗೆ ಹೇಳುವರು. ಪ್ಯಾರಿಸ್ಸಿನ ಪ್ರೇಕ್ಷಣೀಯ ಸ್ಥಳಗಳು, ರಾತ್ರಿಯ ವಿನೋದಗಳು- ಇವುಗಳ ಬಗೆಗೆ ಹೆಚ್ಚಿಗೆ ಹೇಳದೆ ವಿವರಣೆಯನ್ನು ಮೊಟಕುಗೊಳಿಸಿರುವರು. ರೋಮ್‌ನಲ್ಲಿ ಹೆಚ್ಚು ದಿನ ತಂಗಲಾರದೆ ಕೈರೋಗೆ ಪ್ರಯಾಣ ಬೆಳೆಸಿದ ಲೇಖಕರು ಅಲ್ಲಿ ಎರಡು ದಿವಸಗಳಿದ್ದು ಅಲ್ಲಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಭಾರತಕ್ಕೆ ಅಲ್ಲಿಂದಲೇ ವಿಮಾನ ಮೂಲಕ ಹಿಂತಿರುಗುವರು. ಕೊನೆಯಲ್ಲಿ ತಮ್ಮ ಪ್ರವಾಸದ ಅನುಭವಗಳನ್ನು ಮೆಲುಕುಹಾಕಿರುವ ಲೇಖಕರು "ಪಶ್ಚಿಮದಲ್ಲಿ ನಮಗೆ ತೋರಿ ಬರುವ ಅಂದಚಂದಗಳು, ಶಿಸ್ತು, ಕಾಲದ ಪರಿವೆ, ಕಾರ್ಯತತ್ಪರತೆ ಮುಂತಾದ ಗುಣಗಳು ಭಾರತೀಯರಲ್ಲಿ ಏಕೆ ಹೆಚ್ಚಿನ ಪ್ರಮಾಣದಲ್ಲಿ ಕಾಣಸಿಗುವುದಿಲ್ಲಾ? ತೋರಿಕೆಯಲ್ಲಿ ಈರ್ವರಿಗೂ ಎಷ್ಟು ಅಂತರ!" ಎಂದು ಅಚ್ಚರಿಪಟ್ಟಿರುವರು.

ಕನ್ನಡ ಚಲನಚಿತ್ರರಂಗದ ಪ್ರಸಿದ್ಧ ನಿರ್ದೇಶಕರುಗಳಲ್ಲಿ ಒಬ್ಬರಾದ ಶ್ರೀ ಎನ್. ಲಕ್ಷ್ಮೀನಾರಾಯಣ್‌ರವರು 'ನಿರ್ದೇಶಕನ ವಿದೇಶಯಾತ್ರೆ' ಎಂಬ ತಮ್ಮ ಕೃತಿಯಲ್ಲಿ ಓರ್ವ ಚಲನಚಿತ್ರ ನಿರ್ದೇಶಕನಾಗಿ ಲಂಡನ್, ಪ್ಯಾರಿಸ್ ಜರ್ಮನಿ, ಸ್ವಿಡರ್ಲೆಂಡ್, ವೆನಿಸ್, ರೋಮ್-ಈ ದೇಶಗಳ ಸಂಚಾರ ಕೈಗೊಂಡಿದ್ದು ಆ ಅನುಭವಗಳನ್ನು ಪ್ರವಾಸಕಥನ ರೂಪದಲ್ಲಿ ನಿರೂಪಿಸಿರುವರು. ಲಕ್ಷ್ಮೀನಾರಾಯಣ್‌ರವರ ಪ್ರವಾಸದ ಪ್ರಮುಖ ಆಕರ್ಷಣೆ ಲಂಡನ್ ಚಲನಚಿತ್ರೋತ್ಸವದಲ್ಲಿ ಪಾಲ್ಗೊಳ್ಳುವುದು. ಹೀಗಾಗಿ ಅವರ ಪ್ರವಾಸದ ಬಹುಪಾಲು ಕಾಲ ಲಂಡನ್ ಚಲನಚಿತ್ರೋತ್ಸವದಲ್ಲಿ ಪ್ರದರ್ಶಿತವಾದ ವಿಶ್ವದ ಪ್ರಸಿದ್ಧ ನಿರ್ದೇಶಕರ ಚಿತ್ರಗಳನ್ನು ನೋಡುವುದರಲ್ಲಿಯೇ ವ್ಯಯವಾಯಿತು. ಬ್ರಿಟಿಷ್ ಫಿಲಂ ಇನ್‌ಸ್ಟಿಟ್ಯೂಟ್‌ನ ಧ್ಯೇಯ ಹಾಗೂ ಕಾರ್ಯಚಟುವಟಿಕೆಗಳು, ಲಂಡನ್‌ನಲ್ಲಿ ಭಾರತೀಯ ಚಿತ್ರಗಳ ಪ್ರದರ್ಶನ, ಬ್ರಿಟನ್‌ನಲ್ಲಿ ರಾಯ್‌ರವರು ಬೀರಿರುವ ಪ್ರಭಾವ, ಲಂಡನ್‌ನಲ್ಲಿ ತಾವು ನೋಡಿದ ಅಶ್ಲೀಲ ಚಿತ್ರಗಳು, ಲಂಡನ್‌ನ ಪ್ರೇಕ್ಷಣೀಯ ಸ್ಥಳಗಳು -ಹೀಗೆ ಲಕ್ಷ್ಮೀನಾರಾಯಣ್‌ರವರು ತಮ್ಮ ಆಸಕ್ತಿಯ ವಿಷಯಗಳ ಬಗೆಗೆ ತಮ್ಮ ಅನಿಸಿಕೆಗಳನ್ನು ಮುಚ್ಚುಮರೆಯಿಲ್ಲದೆ ಹೇಳಿರುವರು. ಅವರ ಅನುಭವಗಳು ಅವರ ವೃತ್ತಿಗೆ ಸಂಬಂಧಿಸಿದಂತೆಯೇ ಬಿಚ್ಚಿಕೊಳ್ಳುತ್ತಾ ಸಾಗುವುದರಿಂದಾಗಿಯೋ ಏನೋ ಅವು ಆ ಪರಿಧಿಯನ್ನು ದಾಟಿಹೋಗಲು ಯತ್ನಿಸುವುದೇ ಇಲ್ಲ. ಈ ಪ್ರವಾಸ ಕಥನದಲ್ಲಿ ಲಂಡನ್ ಹೊರತಾಗಿ ಉಳಿದ ದೇಶಗಳ ಪ್ರವಾಸಾನುಭವ ತೀರಾ ಚುಟುಕಾಗಿ ನಿರೂಪಣೆಗೊಂಡಿದೆ. ಲೇಖಕರ ಅನುಭವದ ಅಭಿವ್ಯಕ್ತಿಗೆ ಭಾಷೆ ನೆರವಾಗಿಲ್ಲ. ಹೀಗಾಗಿ ಅವರ ಅನುಭವಗಳು ಗಾಢವಾಗಿ ನಮ್ಮ ಮನಸ್ಸನ್ನು ಆವರಿಸುವುದೇ ಇಲ್ಲ. ಲಕ್ಷ್ಮೀನಾರಾಯಣ್‌ರವರು ಅಭಿವ್ಯಕ್ತಿಯಲ್ಲಿ ಸೋತಿದ್ದರೂ ನಮಗೆ ಅಪರಿಚಿತವಿರುವ ಸಿನಿಮಾ ಪ್ರಪಂಚದ ಬಗೆಗೆ ವಿಶದವಾಗಿ ಹೇಳಿ ನಮ್ಮ ತಿಳುವಳಿಕೆಯ ಕ್ಷಿತಿಜವನ್ನು ವಿಸ್ತರಿಸುವ ಮೂಲಕ ಮನಸ್ಸನ್ನು ಗೆದ್ದಿರುವರು.

ಇಂಗ್ಲೆಂಡಿನಲ್ಲಿ ನಡೆದ ಕಾಮನ್ವೆಲ್ತ್ ವಿಶ್ವವಿದ್ಯಾನಿಲಯಗಳ ಒಕ್ಕೂಟದಲ್ಲಿ ಭಾಗವಹಿಸಲು ತೆರಳಿದ. ದೇ.ಜ.ಗೌ.ರವರು ತಮ್ಮ ಪ್ರವಾಸಾನುಭವಗಳನ್ನು 'ದಿನಚರಿ' ರೂಪದಲ್ಲಿ ಕೊಟ್ಟಿರುವರು. ಅವರ 'ಪ್ರವಾಸಿಯ ದಿನಚರಿ'ಯು ಇಟಲಿ, ರೋಂ, ಎಡಿನ್‌ಬರೋ, ಲಂಡನ್, ಈ ದೇಶಗಳಲ್ಲಿ ಸಂಚರಿಸಿದಾಗ ಒದಗಿದ ಅನುಭವಗಳನ್ನು ತಿಳಿಯಪಡಿಸುತ್ತದೆ. ಲೇಖಕರು ತಾವು ನೋಡಿದ ದೇಶಗಳ ಪ್ರೇಕ್ಷಣೀಯ ಸ್ಥಳಗಳ ಪರಿಚಯದ ಜೊತೆಗೆ ಆಯಾ ದೇಶಗಳ ಸಂಕ್ಷಿಪ್ತ ಇತಿಹಾಸವನ್ನೂ ನಮ್ಮ ಕಣ್ಣು ಮುಂದೆ ಕಾಣಿಸುವರು. ಇದರ ಜೊತೆಗೆ ತಾವು ಭಾಗವಹಿಸಿದ ಕುಲಪತಿಗಳ ಸಮ್ಮೇಳನದ ಕಾರ್ಯಚಟುವಟಿಕೆಗಳ ಕಿರು ಪರಿಚಯವನ್ನೂ, ಅಲ್ಲಿ ಮಂಡಿತವಾದ ಪ್ರಬಂಧಗಳಲ್ಲಿ ವ್ಯಕ್ತವಾದ ಪ್ರಮುಖ ವಿಚಾರಗಳನ್ನೂ ಪ್ರಸ್ತಾಪಿಸಿರುವರು.

ಎಡಿನ್‌ಬರೋ, ಲಂಡನ್‌ಗಳಲ್ಲಿ ನೆಲಸಿರುವ ಭಾರತೀಯರನ್ನು ಭೇಟಿಮಾಡಿ, ಅವರೊಡನೆ ಚರ್ಚಿಸಿ, ಅಲ್ಲಿನ ಸಾಮಾಜಿಕ ಜೀವನವನ್ನು ತಿಳಿಯುವ ಪ್ರಯತ್ನವನ್ನು ಲೇಖಕರು ಮಾಡಿರುವರು. ಷೇಕ್ಸ್‌ಪಿಯರನ ಹುಟ್ಟೂರಿನ ರಮ್ಯ ನೋಟಗಳು; ತಮ್ಮ ನೆಚ್ಚಿನ ಕವಿ-ನಾಟಕಕಾರನಿಗೆ ಅಲ್ಲಿನ ಜನತೆ ತೋರುತ್ತಿರುವ ಗೌರವ; ಕೇಂಬ್ರಿಜ್ ವಿಶ್ವವಿದ್ಯಾಲಯದ ವರ್ಣನೆ -ಇವೆಲ್ಲ ವಿಸ್ತಾರವಾಗಿ ಬಂದಿದ್ದು ಉಪಯುಕ್ತ ವಿವರಗಳನ್ನು ಹೊಂದಿವೆ. ಲಂಡನ್ ಹಾಗೂ ಇತರೆಡೆ ಇರುವ ಕಲಾಶಾಲೆಗಳು, ಪ್ರಾಣಿ ಸಂಗ್ರಹಾಲಯಗಳು, ಪ್ರಾಚ್ಯ ವಸ್ತುಸಂಗ್ರಹಾಲಯಗಳು ಜೀವಂತ ಜ್ಞಾನ ಕೇಂದ್ರಗಳಾಗಿವೆ. ಮಕ್ಕಳು ಇವನ್ನೆಲ್ಲಾ ಒಂದೆರಡು ಬಾರಿ ನೋಡಿದ್ದೇ ಆದರೆ ಹತ್ತು ವರ್ಷದ ಹೊತ್ತಿಗೆ ಒಬ್ಬ ವ್ಯಕ್ತಿ ಇಡೀ ಜೀವನದಲ್ಲಿ ಸಂಪಾದನೆ ಮಾಡಬಹುದಾದ ಜ್ಞಾನವನ್ನೆಲ್ಲಾ ಸಂಗ್ರಹಿಸಬಹುದು ಎಂದು ಲೇಖಕರು ಅಭಿಪ್ರಾಯಪಡುವರು. "ಎಲ್ಲಿಯ ತನಕ ನಾವು ಸಣ್ಣ ಸಣ್ಣ ನಗರಗಳಲ್ಲಿಯಾದರೂ, ಪ್ರತಿಯೊಂದು ತಾಲ್ಲೂಕಿನ ಮುಖ್ಯ ಕೇಂದ್ರಗಳಲ್ಲಿಯಾದರೂ ಸಣ್ಣ ಸಣ್ಣ ವಸ್ತುಸಂಗ್ರಹಾಲಯಗಳನ್ನು ಬೆಳೆಸುವುದಿಲ್ಲವೊ ಅಲ್ಲಿಯ ತನಕ ನಾವು ಮಕ್ಕಳಿಗೆ ಕೊಡುವ ಶಿಕ್ಷಣ ಅಪೂರ್ಣವಾಗಿರುತ್ತದೆ" ಎಂಬ ಅವರ ಅಭಿಪ್ರಾಯವೂ ಚಿಂತನಾರ್ಹವಾಗಿದೆ. ರಾಯಲ್ ಬಟಾನಿಕಲ್ ಗಾರ್ಡನ್ಸ್‌ನ ವೈವಿಧ್ಯಮಯ ಸಸ್ಯ ಪ್ರಪಂಚವನ್ನು ನೋಡಿ ಬಹಳವಾಗಿ ಮೆಚ್ಚಿದ ದೇ.ಜ.ಗೌ. "ಒಂದು ತೋಟ, ಒಂದು ತೋಪು, ಒಂದು ಗಿಡ, ಒಂದು ಹೂವು ನನಗೆ ನೀಡಿರುವ ಆನಂದವನ್ನು ಪ್ರಪಂಚದಲ್ಲಿ ಬೇರಾವ ವಸ್ತುವೂ ನೀಡಿಲ್ಲ. ಒಂದು ಗಿಡವನ್ನು ಬೆಳೆಸುವುದೆಂದರೆ ಸ್ವರ್ಗವನ್ನು ಸೃಷ್ಟಿಸಿದಂತೆಯೇ ಎಂದು ನನ್ನ ಭಾವನೆ" ಎಂದು ಭಾವುಕರಾಗಿ ನುಡಿದಿರುವರು.

ದೇ.ಜ.ಗೌ.ರವರ 'ಪ್ರವಾಸಿಯ ದಿನಚರಿ' ವಿಷಯ ಸಂಪತ್ತಿಯಿಂದ ಮನ ಮುಟ್ಟುವ ಸರಳ ಹಾಗೂ ಸುಂದರ ನಿರೂಪಣೆಯಿಂದ, ಆಕರ್ಷಕ ಗದ್ಯ ಶೈಲಿಯಿಂದ ಒಂದು ಒಳ್ಳೆಯ ಕೊಡುಗೆಯಾಗಿದೆ. ಎಲ್ಲೂ ನಿಲ್ಲದೆ ಸುಲಭವಾಗಿ ಓದಿಸಿಕೊಂಡು ಹೋಗುವ ಇದರ ನಿರಾಡಂಬರ ಶೈಲಿ ಚಿರಕಾಲ ನಮ್ಮ ನೆನಪಿನಲ್ಲಿ ನಿಲ್ಲುತ್ತದೆ.

ಕರ್ನಾಟಕ ರಾಜ್ಯದ ಪ್ರಧಾನ ಗ್ರಂಥಾಲಯಾಧಿಕಾರಿಯಾಗಿದ್ದ ಎನ್.ಡಿ. ಬಗರಿಯವರು ಜಮೈಕಾದಲ್ಲಿ ನಡೆದ ಕಾಮನ್‌ವೆಲ್ತ್ ರಾಷ್ಟ್ರಗಳ ಗ್ರಂಥಾಲಯಾಧಿಕಾರಿಗಳ ಮಹಾಸಮ್ಮೇಳನದಲ್ಲಿ ಭಾಗವಹಿಸಿದ್ದಲ್ಲದೆ ಲಂಡನ್, ಪ್ಯಾರಿಸ್, ವಾಷಿಂಗ್‌ಟನ್, ನ್ಯೂಯಾರ್ಕ್ ಜಮೈಕಾ, ಜರ್ಮನಿ, ರೋಂ -ಹೀಗೆ ವಿಶ್ವದ ಅತಿ ಮಹತ್ವಪೂರ್ಣ ಸ್ಥಳಗಳನ್ನು ಸಂದರ್ಶಿಸಿ ತಮ್ಮ ಆ ಅನುಭವಗಳನ್ನು ಪ್ರವಾಸದಿಂದ ಹಿಂತಿರುಗಿದ ಹೊಸತರಲ್ಲೇ ಲಿಖಿತರೂಪದಲ್ಲಿ ದಾಖಲಿಸಿರುವರು.

ಈ ಕೃತಿಯ ನಿರೂಪಣೆಯ ಹಿನ್ನೆಲೆಯಲ್ಲಿರುವುದು ಓರ್ವ ಗ್ರಂಥಾಲಯ ಅಧಿಕಾರಿಯ ಪ್ರವಾಸಾನುಭವ. ಲೇಖಕರೇ ಹೇಳುವಂತೆ "ಗ್ರಂಥಾಲಯಾಧಿಕಾರಿಯಾಗಿ ಪ್ರವಾಸ ಮಾಡಿದುದರಿಂದ ಮತ್ತು ಗ್ರಂಥಾಲಯ ಜಗತ್ತಿನ ಬಗೆಗೆ ನನಗೆ ಅಪಾರವಾದ ಆಸ್ಥೆ ಇರುವುದರಿಂದ ಅವನ್ನು ಹೆಚ್ಚಿನ ಕೂತೂಹಲದಿಂದಲೇ ಸೂಕ್ಷ್ಮವಾಗಿ ಗಮನಿಸಿದ್ದೇನೆ. ನನ್ನ ಕಾರ್ಯ ರಂಗದ ಗ್ರಂಥಾಲಯ ಜನ, ಸಿಬ್ಬಂದಿ ವರ್ಗದವರು ಅಥವಾ ಗ್ರಂಥಾಲಯವನ್ನು ಆರಾಧಿಸುವ ವಾಚಕರಿಗೂ ಪ್ರಯೋಜನಕಾರಿಯಾಗಲಿ ಎಂಬ ಸದುದ್ದೇಶದಿಂದ ಈ ತಾಂತ್ರಿಕ ಹಾಗೂ ಗ್ರಂಥಾಲಯ ವಿಷಯ ಪ್ರಧಾನ ಅಧ್ಯಾಯಗಳನ್ನು ನಿರೂಪಿಸಿರುವೆ. ಈ ಪ್ರವಾಸ ಕಾಲದಲ್ಲಿ ನಿಸರ್ಗದ ಸೊಬಗನ್ನು ಸವಿಯುವ ಕೆಲವು ದಿನಗಳನ್ನು ಬಿಟ್ಟು ನಾನು ಕಂಡದ್ದೆಲ್ಲಾ ಗ್ರಂಥಾಲಯ ವಿಜ್ಞಾನದ ಮುನ್ನಡೆಯ ಹಾದಿಯನ್ನು. ಆದ್ದರಿಂದ ಆದಷ್ಟು ಸಹಜವಾಗಿಯೇ ಈ ಕೃತಿಯ ತಳದಲ್ಲಿ ಅದು ಅವ್ಯಕ್ತವಾಗಿ ಹೊಮ್ಮಿದರೆ ಆಶ್ಚರ್ಯವೇನಿಲ್ಲ"(ಪು. ೩,೪).

ಪ್ರವಾಸ ಕಥನದಲ್ಲಿ ಲೇಖಕರಿಗೆ ಪ್ರಿಯವಾದ ವಿಷಯವೊಂದು ಮುಖ್ಯವಾಗಿ ಆವರಿಸಿಕೊಳ್ಳುವುದು ಮೆಚ್ಚುವ ಸಂಗತಿಯಲ್ಲ. ಅಷ್ಟೇ ಅಲ್ಲ, ಕೃತಿಯ ಒಡಲಲ್ಲಿ ಬಂದಿರುವ ವಿಷಯಕ್ಕೆ ಹೊರತಾದ ಅನೇಕ ಛಾಯಾಚಿತ್ರಗಳನ್ನು, ಜಮೈಕಾದಲ್ಲಿ ನಡೆದ ಅಧಿವೇಶಕ್ಕೆ ಬಂದಿದ್ದ ಮಹನೀಯರ ಹೆಸರು ವಿಳಾಸಗಳ ಪಟ್ಟಿಯನ್ನು ಕೈಬಿಡಬಲಹುದಾಗಿತ್ತು. ಪು. ೧೦೦ರಲ್ಲಿ ಗಯಾನಾದ ಪ್ರತಿನಿಧಿ ಜಾನ್ ಕ್ರಿಶ್ಚಿಯಾವಾ ಕರ್ನಾಟಕದಲ್ಲಿ ಗ್ರಂಥಾಲಯ ಆಂದೋಲನ ಹೇಗೆ ನಡೆದಿದೆ ಎಂದು ಔಪಚಾರಿಕವಾಗಿ ಪ್ರಶ್ನಿಸಿದ್ದಕ್ಕೆ ಲೇಖಕರು ವಿಸ್ತಾರವಾದ ವಿವರಣೆ ನೀಡುವರು. 'ನಾನು ಸಂಕ್ಷಿಪ್ತವಾಗಿ ಗ್ರಂಥಾಲಯ ಆಂದೋಲನದ ಬಗೆಗೆ ಅವರಿಗೆ ನೀಡಿದೆ' ಎಂದು ಒಂದು ಸಾಲಿನಲ್ಲಿ ಹೇಳಿ ಮುಗಿಸಬಹುದಾಗಿದ್ದುದು ಪುಟಗಟ್ಟಲೆ ಬೆಳೆಯುತ್ತದೆ. ಆದರೂ, 'ಸುಂದರವಾಗಿ ಅರಳುತ್ತಿರುವ ಪ್ರಪಂಚದ ಸೊಗಸನ್ನು ಕಣ್ತುಂಬ ಸವಿಯುವ, ಬದುಕು ತುಂಬಾ ಇಷ್ಟವಾಗಿ'ರುವ ಲೇಖಕರು ಓರ್ವ 'ಟೂರಿಸ್ಟ್'ನ ಕೂತುಹಲವನ್ನು ಹೊಂದಿದ್ದು, ತಮ್ಮ ಸುತ್ತಾಟದ ವಿವರಗಳನ್ನು ರಸವತ್ತಾಗಿ ನಿರೂಪಿಸುವ ಪ್ರಯತ್ನ ನಡೆಸಿರುವರು.

ದೊಡ್ಡೇರಿ ವೆಂಕಟಗಿರಿರಾವ್‌ರವರ ಏಕಾಕಿ ಪ್ರವಾಸಿಯು ಪಶ್ಚಿಮ ಯೂರೋಪ್‌ನ ಹತ್ತು ದೇಶಗಳ ಇಪ್ಪತ್ತು ಪಟ್ಟಣಗಳಲ್ಲಿ ಆರು ವಾರ ಕಾಲ ಸಂಚರಿಸಿ ಪಡೆದ ಅನುಭವಗಳ ಕಥನವಾಗಿದೆ. ಲೇಖಕರು ಏಕಾಕಿಯಾಗಿ ಕೈಗೊಂಡ ಪ್ರವಾಸವಿದು. ಕಾಲ್ನಡಿಗೆಯಲ್ಲಿ, ಬಸ್ಸು, ರೈಲಿನಲ್ಲಿ ಸುತ್ತಾಡಿ ತಾವು ಕಂಡದ್ದನ್ನು, ಅನುಭವಿಸಿದ್ದನ್ನು ರಸಾರ್ದ್ರವಾಗಿ ವರ್ಣಿಸಿರುವರು. ಲೇಖಕರೇ ಹೇಳುವಂತೆ "ಸಾಮಾನ್ಯವಾಗಿ ನಾಲ್ಕು ಜನ ಗೆಳೆಯರನ್ನು ಕೂಡಿಕೊಂಡೋ ಅಥವಾ ಯಾವುದಾದರೂ ಪ್ರವಾಸೋದ್ಯಮ

ಸಂಸ್ಥೆಯವರು ಏರ್ಪಡಿಸಿದ ಪೂರ್ವನಿಯೋಜಿತ ಪ್ರವಾಸ ಕಾರ್ಯಕ್ರಮದಲ್ಲಿ ಸೇರಿಕೊಂಡೋ ಹೋಗುವ ಪ್ರವಾಸಗಳಿಗಿಂತ ಏಕಾಕಿ ಪ್ರವಾಸಿಗೆ ಜವಾಬ್ದಾರಿ ಮತ್ತು ಜಾಗರೂಕತೆಗಳ ಅವಶ್ಯಕತೆ ಹೆಚ್ಚು. ಧೈರ್ಯ, ಸ್ಥೈರ್ಯ, ದಿಟ್ಟತನ, ತಾಳ್ಮೆ, ಸಮಯಾವಧಾನ, ತನಗೆ ತಾನೇ ಸಂಗಾತಿಯಾಗಬಲ್ಲ ಸ್ವಭಾವಗಳನ್ನು ಹೊಂದಿರುವ ಏಕಾಕಿ ಪ್ರವಾಸಿಗೆ ಪ್ರವಾಸ ಕಾಲದಲ್ಲಿ ಸ್ವಾತಂತ್ರ್ಯ, ಆನಂದ ಮತ್ತು ಜ್ಞಾನಾನುಭವಗಳ ಗಳಿಕೆಯು ಹೆಚ್ಚು" (ಮುನ್ನುಡಿ, ಪು. vi) ಲೇಖಕರಿಗೆ ತಮ್ಮ ಸುತ್ತಾಟದ ಕಾಲದ ಪರಿಮಿತಿಯ ಅರಿವಿದೆ. ಹೀಗಾಗಿ ಕೇವಲ ಆರು ವಾರಗಳ ಅವಧಿಯಲ್ಲಿ ತಾವು ನೋಡಿದ ದೇಶಗಳ ಪರಿಚಯ ಪಡೆದಿದ್ದೇನೆ ಎನ್ನುವ ದಾರ್ಷ್ಟ್ಯವಿಲ್ಲ. ಅವರೇ ಹೇಳಿರುವಂತೆ "ಆ ಪರಿಚಯವು ಕ್ಷಣಕಾಲ ಮೇಲು ನೋಟಕ್ಕೆ ಕಂಡ ವಿಶ್ವರೂಪುದರ್ಶನದಂತೆ. ಕಣ್ಣುಗಳ ಮುಂದೆ ಉಜ್ವಲವಾದ ವಿವಿಧ ವರ್ಣಗಳ ಆಕರ್ಷಣೀಯ ದೃಶ್ಯಪರಂಪರೆಯೇ ಹಾದುಹೋಗುವಾಗ ಕಂಡುದು ಎಷ್ಟು, ತಿಳಿದುದು ಎಷ್ಟು ಎಂದು ಹೇಳುವುದು ಕಷ್ಟ. ಕೆಲವು ಸಲ ಒಮ್ಮೆ ಕಂಡುದನ್ನು ಮತ್ತೊಮ್ಮೆ ಕಂಡೆನೆಂದು ಮನಸ್ಸು ಭ್ರಮಿಸುವುದುಂಟು. ಕಂಡುದುದನ್ನೆಲ್ಲಾ ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟಸಾಧ್ಯ. ಪರಸ್ಪರ ಸಂಬಂಧ ಇರುವ ಹಾಗೆ, ಅರ್ಥ ಆಗುವ ಹಾಗೆ ನೆನಪು ಆದುದನ್ನೆಲ್ಲಾ ಬಣ್ಣಿಸುವುದೂ ಸುಲಭ ಅಲ್ಲ."

ಏಕಾಕಿ ಪ್ರವಾಸಿಯಾದ ಲೇಖಕರು ಅಥೆನ್ಸ್, ರೋಂ, ಫ್ಲಾರೆನ್ಸ್, ವಿಯನ್ನ, ಮ್ಯೂನಿಕ್, ಬರ್ನ್, ಇಂಟರ್‌ಲಾಕನ್, ಜ್ಯೂರಿಕ್, ಆಂಸ್ಟರ್‌ಡಾಂ, ಬ್ರಸ್ಸಲ್ಸ್, ಪ್ಯಾರಿಸ್, ಲೂವ್ರ್, ವರ್ಸೆಲ್ಸ್, ಲಂಡನ್ -ಈ ಪಟ್ಟಣಗಳಲ್ಲಿ ಸಂಚಾರ ಕೈಗೊಂಡುದು ಓರ್ವ ಕಲಾಪ್ರೇಮಿಯಾಗಿ, ನಿಸರ್ಗಪ್ರೇಮಿಯಾಗಿ, ಸಹೃದಯಿ ಸಾಹಿತಿಯಾಗಿ. ಚೆಲುವನ್ನು ಕಾಣುವ, ಕಂಡು ಆನಂದಿಸುವ, ತಿದ್ದಿ ತೀಡಿದ ಕಣ್ಣು-ಮನಸ್ಸು ಲೇಖಕರದು. ಪಶ್ಚಿಮ ಯೂರೋಪಿನ ದೇಶಗಳಲ್ಲಿ ಸಂಚರಿಸುವಾಗ ತಾವು ಕಂಡ ಅಲ್ಲಿನ ಉತ್ಕೃಷ್ಟ ಶಿಲ್ಪಕಲೆ, ಚಿತ್ರಕಲೆ, ವಾಸ್ತುಕಲೆಗಳ ಬಗೆಗೆ ವಿವರವಾಗಿ ಲೇಖಕರು ಪ್ರಸ್ತಾಪಿಸಿರುವರು. ಅವರು ಭೇಟಿಕೊಟ್ಟ ಮ್ಯೂಸಿಯಂಗಳಲ್ಲಿ, ಚರ್ಚ್‌ಗಳಲ್ಲಿ ಓರ್ವ ಕಲಾಪ್ರೇಮಿಯ ರಸಾರ್ದ್ರ ಮನಸ್ಸು ಅನುಭವಿಸಿದ ಸುಖವನ್ನು ಮಾತುಗಳಲ್ಲಿ ಸೆರೆಹಿಡಿದಿರುವರು.

ಪ್ರಕೃತಿಯ ನಿಸರ್ಗ ಸಂಪತ್ತನ್ನು ನೋಡಿ ಆನಂದಿಸುವ ಅವರು ಆ ಸಂತೋಷವನ್ನು ನಮಗೂ ಹಂಚಿರುವರು. ಕಲೆಯ ಬಗೆಗೆ ಅವರಿಗಿರುವ ವಿಶೇಷ ಆಸಕ್ತಿಯಿಂದಾಗಿ ನಮಗೆ ಆಯಾ ದೇಶಗಳ ಅಮೂಲ್ಯ ಕಲಾಸಂಪತ್ತಿಯ ಪರಿಚಯವಾಗುತ್ತದೆ. ಹೋದೆಡೆಯಲ್ಲೆಲ್ಲಾ ಅವರ ಕಣ್ಣು ಅರಸುವುದು ಈ ಕಲಾಪ್ರಕಾರಗಳನ್ನೇ. ಆದುದರಿಂದ ಸಂಸ್ಕಾರಗೊಂಡ ಪಕ್ವವಾದ ವಿಷಯಜ್ಞಾನದ ನಿರೂಪಣೆ ಇಲ್ಲಿ ಒದಗಿ ಬಂದಿದೆ.

ಮಹತ್ವವೆನ್ನಿಸಿದ ಆಯಾ ದೇಶಗಳ ಸಾಂಸ್ಕೃತಿಕ ಕೊಡುಗೆಗಳು ಅವುಗಳ ಬಗೆಗೆ ಆಸಕ್ತಿಯಿರುವ ಎಲ್ಲರಿಗೂ ಪ್ರಿಯವಾಗುತ್ತದೆ. ಲೇಖಕರು ತಾವು ನೋಡಿ ಮೆಚ್ಚಿದ ಸ್ಥಳಗಳ ವಿಶೇಷವನ್ನು ಸಾರಿಹೇಳುವ ಚಿತ್ರಗಳು, ತಮ್ಮ ಮನಸ್ಸಿಗೆ ಪ್ರಿಯವಾದ ಶಿಲಾವಿಗ್ರಹಗಳ ಚಿತ್ರಗಳು, ಉತ್ಕೃಷ್ಟವೆನ್ನಿಸಿದ ವರ್ಣಚಿತ್ರಗಳು, ಸಾಂಸ್ಕೃತಿಕ ಪಳೆಯುಳಿಕೆಗಳಾದ ಕೋಟೆ ಕೊತ್ತಲಗಳು, ಸ್ಮಾರಕಗಳು, ಪ್ರಕೃತಿಯ ಸುಂದರ ದೃಶ್ಯಗಳು -ಇವುಗಳನ್ನು ತಮ್ಮ ಕ್ಯಾಮರಾದಿಂದ ಸೆರೆಹಿಡಿದು ಅವುಗಳನ್ನು ಓದುಗರಿಗೆ ಒದಗಿಸಿಕೊಟ್ಟು ಉಪಕರಿಸಿರುವರು. ಹೀಗೆ ಪ್ರವಾಸ ಕಥನವು ಸಚಿತ್ರವಾಗಿರುವುದು ಅದರ ವೈಶಿಷ್ಟ್ಯವಾಗಿದೆ. ವರ್ಡ್ಸ್‌ವರ್ತ್ ಬಾಳಿ ಬದುಕಿದ ರೈಡಲ್‌ಮೌಂಟ್‌ನ ವರ್ಣನೆ ಹಾಗೂ ಆ ಪರಿಸರದ ಚೇತೋಹಾರಿಯಾದ ನುಡಿಚಿತ್ರ ಈ ಪ್ರವಾಸ ಕಥನದ ಇನ್ನೊಂದು ಮೆಚ್ಚುವ ಅಂಶವಾಗಿದೆ. ಕಲಾಸಕ್ತಿ, ಪ್ರಕೃತಿಯ ಆರಾಧನೆ ಪ್ರಧಾನವಾಗಿರುವ ಈ ಪ್ರವಾಸ ಕಥನ ಬೇರೆ ಕಥನಗಳಿಗಿಂತ ಭಿನ್ನವಾಗಿದೆ. ಶಿವರಾಮ ಕಾರಂತರ ನಂತರ ಆ ರೀತಿಯ ವಿಶಿಷ್ಟ ಸಂಸ್ಕಾರವನ್ನೂ ಹೊಂದಿದ ಪ್ರವಾಸಿಗರಾಗಿ ಡಾ॥ ಡಿ.ವಿ.ರಾವ್ ಕಂಡುಬರುವರು.

ಹೊ. ಶ್ರೀನಿವಾಸಯ್ಯನವರು ತಮ್ಮ ಪತ್ನಿ ಶ್ರೀಮತಿ ಜಯಲಕ್ಷ್ಮಿಯವರೊಡನೆ ಮಾಡಿದ ಯೂರೋಪು ದೇಶದ ಪ್ರವಾಸ ಕಥನವು **'ಜಯಶ್ರೀ ಕಂಡ ಐರೋಪ'** ಎಂಬ ಕೃತಿಯ ರೂಪದಲ್ಲಿ ಬಂದಿದೆ. ಇಟಲಿ, ಸ್ವಿಜರ್ಲೆಂಡ್, ಜರ್ಮನಿ ಹಾಲೆಂಡ್, ಫ್ರಾನ್ಸ್, ಬ್ರಿಟನ್-ಈ ದೇಶಗಳಲ್ಲಿ ಪ್ರವಾಸ ಕೈಗೊಂಡಿದ್ದರೂ ಪ್ರವಾಸ ಕಥನದಲ್ಲಿ ಜರ್ಮನಿ ಹೆಚ್ಚಿನ ಭಾಗ ಆಕ್ರಮಿಸಿಕೊಂಡಿದೆ. ಹೊ. ಶ್ರೀನಿವಾಸಯ್ಯನವರು ಹಿಂದೆ ಎರಡು ಬಾರಿ ಜರ್ಮನಿಗೆ ಭೇಟಿಕೊಟ್ಟಿದ್ದರು. ತಮ್ಮ ಪತ್ನಿಯೊಡನೆ ಅವರು ಅಲ್ಲಿಗೆ ಬರುತ್ತಿರುವುದು ಮೂರನೆಯ ಬಾರಿ. ಹೀಗಾಗಿ ಜರ್ಮನಿಯನ್ನು ತವರುಮನೆ ಎಂದು ಕರೆದಿರುವುದು ವಾಸ್ತವವಾಗಿದೆ. ಮೂವತ್ತು ವರ್ಷಗಳ ಹಿಂದೆ ತಾವು ಕೆಲಸ ಮಾಡುತ್ತಿದ್ದ ಬಿ ಇ ಎಂ ಎಲ್ ಕಾರ್ಖಾನೆಯಿಂದ ತರಬೇತಿಗಾಗಿ ಸು. ೧೮ ತಿಂಗಳು ಜರ್ಮನಿಯ ನ್ಯೂರೆನ್‌ಬರ್ಗ್‌ಗೆ ಬಂದಿದ್ದರು. ಬೌನ್ಸ್‌ವೈಗ್‌ನಲ್ಲಿ ವಾಸವಿದ್ದರು. ತಾವು ಹಿಂದೆ ಕೆಲಸ ಮಾಡಿದ ಸ್ಥಳ, ಅಲ್ಲಿನ ಹಳೆಯ ಗೆಳೆಯರುಗಳನ್ನು ಭೇಟಿ ಮಾಡಿ ಹಳೆಯ ನೆನಪುಗಳನ್ನು ಮೆಲುಕು ಹಾಕಿರುವರು. ರ್‍ಯಾಡಿಕೇ, ಶ್ರೀಮತಿ ಮತ್ತು ಶ್ರೀ ನಾಯ್‌ಬವಾರ್, ಶ್ರೀಮತಿ ಓಲೆಂಡೋರ್ಫ್, ಶ್ರೀಮತಿ ಕೆಲ್ಬರ್, ರೂಬೆ, ಡಾ॥ ಆಸ್ಮಾನ್ ಇವರೇ ಮೊದಲಾದ ಸ್ನೇಹಿತರ ನಡುವೆ ಪಡೆದ ಸಿಹಿಯಾದ ಆತಿಥ್ಯದ ವಿವರಗಳು ಸ್ವಾರಸ್ಯಕರವಾಗಿವೆ. ಶ್ರೀಮತಿ ಕೆಲ್ಲರ್‌ರವರ ಕಥೆ ಮನಮಿಡಿಯುವಂತಿದೆ. ಗಂಡನನ್ನು ಕಳೆದುಕೊಂಡಿರುವ ಕೆಲ್ಲರ್; ಪೋಲಿ ಬಿದ್ದು ಜೈಲು ಸೇರಿರುವ ಮಗನಿಂದ ಆಸ್ತಿಗಾಗಿ ಪ್ರಾಣಭೀತಿಗೆ ಒಳಗಾಗಿ ಆ ಚಿಂತೆಯಲ್ಲೇ ನರಳುತ್ತಿರುವುದನ್ನು ಓದಿದಾಗ ಮನುಷ್ಯ ಸ್ವಭಾವದ ಬಗೆಗೆ ಬೇಸರವಾಗುತ್ತದೆ.

ಇಟಲಿಯಲ್ಲಿ ಬಸ್ ನಿಲ್ದಾಣಕ್ಕೂ ಲೇಖಕರು ತಂಗಲು ಹೊರಟಿದ್ದ ಹೋಟಲಿಗೂ ಸಮೀಪವಿದ್ದರೂ ಅಲ್ಲಿ ಇಲ್ಲಿ ಸುತ್ತಾಡಿಸಿ ೧೫ ಸಾವಿರ ಲೀರಾ ಪಡೆದು ವಂಚಿಸಿದ ಟ್ಯಾಕ್ಸಿ ಡ್ರೈವರ್‌ವರ್ತನೆ (ಪು. ೧೩) ಟ್ರೆವಿ ಫೌಂಟನ್‌ನ ನೀರಿಗೆ ಫೌಂಟನ್‌ಗೆ ಬೆನ್ನು ಮಾಡಿ ದುಡ್ಡನ್ನು ಎಸೆದರೆ ಮತ್ತೆ ರೋಮ್ ನಗರಕ್ಕೆ ಬರುತ್ತೇವೆನ್ನುವ ನಂಬಿಕೆಯ (ಪು. ೧೭) ಟೀಕೆ, ಭಾರತದ ದೇವಾಲಯಗಳಲ್ಲಿ ದೇವರ ಪ್ರಸಾದ ಮಾರುವಂತೆ ವ್ಯಾಟಿಕನ್ ನಗರದಲ್ಲಿ ಪೋಪ್ ಆಶೀರ್ವದಿಸಿದ ಚಿತ್ರಗಳನ್ನು ಮಾರುತ್ತಿರುವುದು (ಪು.೧೮) ೧೯೪೫ಅಲ್ಲಿ ಬೆಂಗಳೂರಿನ ಎರಡನೇ ಮಹಾಯುದ್ಧದಲ್ಲಿ ಖೈದಿಯಾಗಿ ಯಲಹಂಕದ ಬಳಿ ಇದ್ದು ತಾಯ್ನಾಡಿಗೆ (ಇಟಲಿಗೆ) ಹಿಂತಿರುಗಿರುವ ಮುದುಕನೊಬ್ಬನನ್ನು ಭೇಟಿಯಾಗಿ ಅವನ ಮನೆಯಲ್ಲಿ ಟೀ ಸೇವಿಸಿದ್ದು (ಪು. ೨೧), ಸ್ವಿಟ್ಜರ್‌ಲೆಂಡ್‌ನ ಇಸ್ಕಾನ್‌ನಲ್ಲಿ ಹರೇಕೃಷ್ಣ ದೇವಸ್ಥಾನದವರ ಆತಿಥ್ಯ (ಪು. ೨೫-೩೧) ಇವು ಸಣ್ಣ ಪುಟ್ಟ ಸಂಗತಿಗಳಾದರೂ ಲೇಖಕರು ನಿರೂಪಣೆಯಿಂದಾಗಿ ಸಹ್ಯವಾಗುತ್ತದೆ. ಇಂಗ್ಲೆಂಡ್‌ನ ಭೇಟಿಯಲ್ಲಿ ಮಿತ್ರರಾದ ಮತ್ತೂರು ಕೃಷ್ಣಮೂರ್ತಿಯವರ ಅತಿಥ್ಯದ ವಿವರ ತುಂಬಿಹೋಗಿದೆ.

ಹೊ. ಶ್ರೀನಿವಾಸಯ್ಯನವರು ತಮ್ಮ ಪ್ರವಾಸ ಕಾಲದಲ್ಲಿ ಭೇಟಿಯಾದ ಜನರ ಬಗ್ಗೆ, ನೋಡಿದ ಸ್ಥಳಗಳ ಬಗೆಗೆ ಸ್ವಾರಸ್ಯಕರವಾಗಿ ಹೇಳಿರುವರು; ತಮಗೆ ಇಷ್ಟವಾದವರ ಬಗೆಗೆ ಬಾಯ್ತುಂಬ ಹೊಗಳಿರುವರು. ಹಾಲೆಂಡ್‌ನಲ್ಲಿ ಸೊಗಸಾದ ಸೂಟ್ ಹಾಕಿಕೊಂಡು ತಳ್ಳುವ ಗಾಡಿಯಲ್ಲಿ ಸಂಗೀತದ ಉಪಕರಣಗಳನ್ನು ಹಾಕಿಕೊಂಡು ಸಾಧ್ಯವಾದರೆ ರೆಕಾರ್ಡೆಡ್ ಸಂಗೀತ ಹಾಡಿ ಭಿಕ್ಷೆ ಬೇಡುವ ಭಿಕ್ಷುಕನ ವಿವರವನ್ನೇ ಆಗಲಿ (ಪು.೧೦; ಹಾಲೆಂಡ್‌ನ ಬಂದೀಖಾನೆಯೊಂದರ ಭೇಟಿ ಮಾಡಿದ್ದರ ದೀರ್ಘ ವಿವರವನ್ನೇ ಆಗಲಿ ಪು. ೧೦೮-೧೧೦) ಓದಿದಾಗ ಲೇಖಕರ ಕೂತೂಹಲ ಹಾಗೂ ವಿಭಿನ್ನ ಆಸಕ್ತಿ ವಲಯಗಳ ಪರಿಚಯ ನಮಗಾಗುತ್ತದೆ. ಈ ಅಪರ ವಯಸ್ಕನ ಕೂತೂಹಲ ಹಾಗೂ ವಿಭಿನ್ನ ಆಸಕ್ತಿ ವಲಯಗಳ ಪರಿಚಯ ನಮಗಾಗುತ್ತದೆ. ಈ ಅಪರ ವಯಸ್ಕನ ಲೋಕವನ್ನು ನೋಡಬೇಕೆನ್ನುವ; ಜನರನ್ನು, ಅವರ ಬದುಕನ್ನು ತಿಳಿಯಬೇಕೆನ್ನುವ ಕೂತುಹಲಾಸಕ್ತಿ ನಮ್ಮಲ್ಲಿ ಬೆರಗು ಮೂಡಿಸುತ್ತದೆ.

ಹೇಮಲತಾ ಮಹಿಷಿಯವರ **ಯುರೋಪ ದರ್ಶನ** ಮೂವತ್ತೈದು ದಿನಗಳ ಯೂರೋಪ್ ಪ್ರವಾಸ ಕಥನ. ಯಾವುದೇ ಪ್ರವಾಸ ಕಥನವಾಗಲಿ ಅದು ವ್ಯಕ್ತಿಗತವಾದ ಅನುಭವ ಕಥನ. ಅದು ಅವನ ಗ್ರಹಿಕೆಯ ಇತಿ-ಮಿತಿಯನ್ನು ವಿಶೇಷವಾಗಿ ಅವಲಂಬಿಸಿರುತ್ತದೆ. ಇದನ್ನು ಹೇಮಲತಾ ಮಹಿಷಿಯವರು ತಮ್ಮ ಮಾತುಗಳಲ್ಲಿ ಸ್ಪಷ್ಟಪಡಿಸಿರುವರು: "ಒಬ್ಬ ಪ್ರವಾಸಿ, ಪ್ರವಾಸಿಯಾಗಿ ಹೊಸ ದೇಶಕ್ಕೆ ಹೋದಾಗ

ಭಿನ್ನವಾದ ಸಂಸ್ಕೃತಿ, ಜನಜೀವನ, ವ್ಯವಸ್ಥೆ, ಮೌಲ್ಯಗಳನ್ನು ಕಂಡಾಗ ಎಷ್ಟರಮಟ್ಟಿಗೆ ಅದನ್ನು ಗ್ರಹಿಸಲು, ಸೂಕ್ತವಾಗಿ ಪದಗಳಲ್ಲಿ ಹಿಡಿದಿಡಲು ಶಕ್ತನಾಗುತ್ತಾನೆ?... ಹೆಚ್ಚೆಂದರೆ ಅದು ಆ ಪ್ರವಾಸಿಯ ಗ್ರಹಿಕೆ ಎಂದು ಹೇಳಬಹುದಷ್ಟೆ" (ಪುಟ ೧,೨). ಲೇಖಕಿ ತನ್ನ ಸುತ್ತಾಟದ ವಿವರಗಳನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ದಾಖಲಿಸುವರು. ಬ್ರಾಂಟಿ ಸೋದರಿಯರು ಮತ್ತು ಮೂರ್‌ಗಳು, ವರ್ಡ್ಸ್‌ವರ್ತ್‌ನ ಲೇಕ್ ಡಿಸ್ಟ್ರಿಕ್, ಕಿಹಿ ಸಿಹಿಲಂಡನ್, ಪಾಂತೆ ಇಟಲಿಯ ಹಂಪೆ, ನಾಜಿ ಶಿಬಿರದಲ್ಲೊಂದು ದಿನ, ಬರ್ಲಿನ್ ಗೋಡೆ ಒಡೆದಿದೆ, ಪ್ರವಾಸ ಕಥನದ ಈ ಭಾಗಗಳು ಸಾಂಸ್ಕೃತಿಕವಾಗಿ ಮಹತ್ವದವು. ವರ್ಡ್ಸ್‌ವರ್ತ್‌ನ ಲೇಕ್ ಡಿಸ್ಟ್ರಿಕ್ಟ್ ಹಾಗೂ ಶೇಕ್ಸ್‌ಪಿಯರ್‌ನ ಹ್ಯಾವರ್ಥ್‌ನ ವಿವರಗಳು ಕುತೂಹಲಕಾರಿಯಾಗಿವೆ.

ತ್ರಿವೇಣಿ ಶಿವಕುಮಾರ್‌ರವರ ನಿಸರ್ಗಪ್ರಿಯರ ನಾಡುಗಳಲ್ಲಿ ಎನ್ನುವ ಕೃತಿ ಸ್ವಿಜರ್‌ಲ್ಯಾಂಡ್, ಇಟಲಿ, ಜರ್ಮನಿ, ಹಾಲೆಂಡ್, ಫ್ರಾನ್ಸ್, ಇಂಗ್ಲೆಂಡ್ ದೇಶಗಳ ಸುತ್ತಾಟದ ಅನುಭವ ಕಥನ. ಇದು ಗುಂಪು ಪ್ರವಾಸ ಕಥನ. ಲೇಖಕಿ ಪ್ರವಾಸಕ್ಕೆ ಮೊದಲಿಗೆ ತಾವು ಭೇಟಿಮಾಡುವ ದೇಶಗಳ ಬಗೆಗೆ ಸಾಕಷ್ಟು ಓದಿಕೊಂಡಿರುವರು. ಜೊತೆಗೆ ದೇಶಗಳನ್ನು ಅವುಗಳ ಪ್ರಾಕೃತಿಕ ಸೊಬಗನ್ನು ನೋಡಿ ಅನುಭವಿಸಬೇಕು ಹಾಗೂ ಅವುಗಳ ಕಲೆ, ಸಾಹಿತ್ಯ ಸಂಸ್ಕೃತಿಗಳ ಬಗೆಗೆ ತಿಳಿವಳಿಕೆ ಹೊಂದಬೇಕೆನ್ನುವ ಕಳಕಳಿ ಅವರಲ್ಲಿದೆ. ಹೀಗಾಗಿ ಅವರು ಎಲ್ಲಿಯೇ ಹೋಗಲಿ ಮಾರ್ಗದರ್ಶಿ ಹೇಳುವುದನ್ನು ಚೆನ್ನಾಗಿ ಕೇಳುವರು, ಟಿಪ್ಪಣಿ ಮಾಡಿಕೊಳ್ಳುವರು, ಸಂದರ್ಶಿಸಿದ ಸ್ಥಳಗಳ ಬಗೆಗೆ ದೊರೆತ ಪ್ರಚಾರ ಭಿತ್ತಿಪತ್ರಗಳನ್ನು ಅಭ್ಯಾಸ ಮಾಡುವರು. ಹೀಗಾಗಿ ಅವರ ಪ್ರವಾಸ ಕಥನದಲ್ಲಿನ ಮಾಹಿತಿಗಳು ಪ್ರಾಮಾಣಿಕ ದಾಖಲೆಗಳಾಗಿವೆ. ತಾವು ತಂಗಿದ್ದ ರೂಮಿನ ಕಿಟಕಿಯ ಮೂಲಕ ಕಂಡ ಆಲ್ಪ್ಸ್ ಪರ್ವತದ ದಿವ್ಯ ಸೌಂದರ್ಯಾನುಭೂತಿಯಲ್ಲಿ ಪರವಶರಾಗುವ ಹಾಗೂ ಆ ಅನುಭವದಲ್ಲಿ ಸುಖಿಯಾಗುವ ಭಾವಜೀವಿ ಲೇಖಕಿ ಅದನ್ನು ತಮ್ಮ ಮಾತಿನಲ್ಲಿ ಸೆರೆಹಿಡಿದಿರುವರು (ಪು. ೩೨) ಲೇಖಕಿ ತಮ್ಮ ಪ್ರವಾಸದಲ್ಲಿನ ಸಹಪ್ರಯಾಣಿಕರ ವರ್ತನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ದಾಖಲಿಸಿರುವರು. ಪ್ರವಾಸದ ಧ್ಯೇಯವನ್ನು ಮರೆತು ಚುಕ್ಕಿಆಟದಲ್ಲಿ ಮಗ್ನರಾಗಿರುವ ಯುವ ದಂಪತಿಗಳು, ಅವರ ಆಟ ನೋಡುತ್ತಿರುವ ಮೂರು ಜೋಡಿಗಳನ್ನು ಗಮನಿಸಿದ ಲೇಖಕಿ "ಹದಿನಾರು ದಿನಗಳನ್ನು ವ್ಯರ್ಥಮಾಡಿಕೊಂಡು ಲಕ್ಷಗಟ್ಟಲೆ ಹಣ ಖರ್ಚುಮಾಡಿಕೊಂಡು ಇವರು ಚುಕ್ಕಿಯಾಟ ಆಡಲು ಪ್ರವಾಸ ಕೈಗೊಂಡಿದ್ದರೆ?" ಎಂದು ಚಿಂತಿಸುವರು. ಪರ್ವತದ ತುದಿಯಲ್ಲಿ ಧುಮುಕುತ್ತಿದ್ದ ಬೆಳ್ಳಿ ಜಲಪಾತ ನೋಡಿ ತಮ್ಮ ಆನಂದವನ್ನು ತಮ್ಮ ಪತಿಗೂ ಹಂಚಲು 'ರೀ, ಬೇಗ ನೋಡಿ ಎಷ್ಟು ಚೆನ್ನಾಗಿದೆ ಫಾಲ್ಸ್' ಎಂದು ಹೇಳಹೊರಟರೆ, ಪತಿ ನಿದ್ರಾದೇವಿಯ ವಶರಾಗಿದ್ದರು.

ಕೋಚ್‌ನಲ್ಲಿದ್ದವರಲ್ಲಿ ನಾಲ್ಕೈದು ಜೋಡಿ ಬಿಟ್ಟರೆ ಎಲ್ಲರದೂ ಇದೇ ಪಾಡು (ಪು.೩೯) ಎನ್ನುವಲ್ಲಿ ಅವರ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗಿದೆ. ಲೇಖಕಿಗೆ ಆಲ್ಪ್ಸ್ ಪರ್ವತಗಳ ಚೆಲುವಿಗಿಂತ ಹಿಮಾಲಯದ ಸೌಂದರ್ಯವೇ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ.

ಪ್ರವಾಸಪ್ರಿಯರಾದ ಲೇಖಕಿಯನ್ನು ಯಾರೋ ಕೆಣಕಿದಾಗ ಅವರು ಕೊಡುವ ಉತ್ತರವಿದು "ಅನ್ಯೋ ಎಂಟ್ಹತ್ತು ದಿನ ಮನೆ ಬಿಟ್ಹೋಗೋಂದು ಹೇಗೆ ಅಂತ ಯೋಚನೆ ಮಾಡ್ತಾ ಕೂತರೆ ನಾವು ಜೀವನದಲ್ಲಿ ಏನನ್ನೂ ನೋಡಲು ಸಾಧ್ಯವಿಲ್ಲ. ಸ್ವಲ್ಪದಿನ ಮನೆ ಬಿಟ್ಟುಹೋಗೋದಿಕ್ಕೆ ಹೆದರಿದರೆ ಮೇಲಿನಿಂದ ಭಗವಂತನ ಕರೆ ಬಂದರೆ ಶಾಶ್ವತವಾಗಿ ಬಿಟ್ಟು ಹೋಗಬೇಕಲ್ಲ. ಆವಾಗ ಹೇಗೆ ಹೋಗ್ತೀವಿ. ಹಾಗೇ ಇದು. ಬಾಯಿ ಇರುವ ವರೆಗೆ ಊಟ, ಕಣ್ಣಿರುವವರೆಗೆ ನೋಟ. ಆಮೇಲೆ ಮೇಲಕ್ಕೆ ಓಟ ಎನ್ನುವ ನಾಣ್ಣುಡಿ ಕೇಳಿಲ್ಲವೆ? ಎಂದು ವ್ಯಂಗ್ಯವಾಡಿದವರ ಬಾಯಿಗೆ ಬೀಗ ಹಾಕುತ್ತಿದ್ದೆ..." (ಪು. ೪೨)

ಲೇಖಕಿ ಭಾವಜೀವಿ. ತೆರೆದ ಕಣ್ಣು, ಬೆರಗು ಮನಸ್ಸುಗಳಿಂದ ಸಂಚಾರದ ಸುಖವನ್ನು ಅನುಭವಿಸಿರುವರು. ತಮ್ಮ ಆ ಸವಿ ಅನುಭವಗಳನ್ನು ಬರಹದ ಮೂಲಕ ಹಂಚಿಕೊಳ್ಳುವಲ್ಲಿಯೂ ಲೇಖಕಿಗೆ ಒಂದು ಬಗೆಯ ಧನ್ಯತೆಯ ಭಾವ.

ಆಶಾದೇವಿ ಸೂಲಾರವರು ತಮ್ಮ ಪತಿ ವಿಶ್ವನಾಥ ಖೂಬಾ ಅವರ ಜೊತೆ ಯೂರೋಪ್ ಖಂಡದ ಕೆಲವು ದೇಶಗಳಲ್ಲಿ ಸುತ್ತಾಡಿದ ಅನುಭವ ಕಥನ **ನನ್ನ ಪ್ರವಾಸ ಕಥನ**. ಇದು ಸಾಮೂಹಿಕ ಪ್ರವಾಸವಾದರೂ ಲೇಖಕಿ ತನ್ನ ಅನುಭವಕ್ಕೆ ಹಕ್ಕಿದ್ದನ್ನು ಮಾತ್ರ ಇಲ್ಲಿ ದಾಖಲಿಸಿರುವರು. ಸಾಮೂಹಿಕ ಪ್ರವಾಸದ ಕಾರಣದಿಂದಾಗಿ ಪೂರ್ವ ನಿರ್ಧರಿತ ದೇಶಗಳಲ್ಲಿ ಮಾತ್ರ ಪ್ರವಾಸ. ಕಾಲದ ಪರಿಮಿತ ಮಿತಿಯಿಂದಾಗಿ ಪ್ರವಾಸದಲ್ಲಿ ಮುಖ್ಯ ದೇಶಗಳನ್ನು ನೋಡಲಾಗಲಿಲ್ಲವೆನ್ನುವ ಅತೃಪ್ತಿ ಲೇಖಕಿಯದು. ಲೇಖಕಿ ಅಧ್ಯಾಪಕಿಯಾಗಿರುವುದರಿಂದ ಸಹಜವಾಗಿ ಅವರಲ್ಲಿ ತಾವು ದೇಶಗಳ ಜನ ಜೀವನ, ಕಲೆ, ಸಂಸ್ಕೃತಿಗಳನ್ನು ತಿಳಿಯಬೇಕೆನ್ನುವ ಹಾಗೂ ಇತರರಿಗೆ ತಿಳಿಸಬೇಕೆನ್ನುವ ವಾಂಛೆಯಿದೆ. ಲೇಖಕಿಗೆ ಸಾಮೂಹಿಕ ಪ್ರವಾಸದಲ್ಲಿ ಭಿನ್ನ ಮನೋಭಾವದ ಜನಗಳ ಆಸಕ್ತಿಯನ್ನು ಸೂಕ್ಷ್ಮವಾಗಿ ಗಮನಿಸುವ ಹಾಗೂ ಅವರ ಪ್ರವೃತ್ತಿಯನ್ನು ಧೈರ್ಯವಾಗಿ ಟೀಕಿಸುವ ರಚನಾತ್ಮಕ ಮನೋಭಾವವಿದೆ: "...ಊಟ ಸರಿಯಾಗಿಯೇ ಇತ್ತು. ಆದರೂ ಕೆಲವರು ಹಿರಿಯರಾದವರೂ ಮಾಂಸಾಹಾರಿ ಊಟ ಸಿಗಲಿಲ್ಲವೆಂದು ಸಿಕ್ಕಾಪಟ್ಟೆ ಜಗಳವಾಡಿದರು. ಅವಾಚ್ಯ ಶಬ್ದಗಳು ಬಂದವು. ಮಾರ್ಗದರ್ಶಕನಾದ ರಾಜೇಶ್ ಭೈಯ್ಯಾಗೆ ಸಿಕ್ಕಾಪಟ್ಟೆ ಬೈಗುಳ. ಇದನ್ನು ನೋಡಿ ನನಗನಿಸಿತು ಚಿಕ್ಕಮಕ್ಕಳು ಶಾಲೆಯಲ್ಲಿ ಮನೆಯಲ್ಲಿ ಜಗಳ ಆಡುವುದು ಒಂದು ಸಣ್ಣ ವಸ್ತುವಿಗಾಗಿ ಎಂಬ ನೆನಪು ಬಂದಿತು" (ಪು. ೫೦).

**ತಾವು ನೋಡಿದ** ದೇಶಗಳ ಬಗ್ಗೆ ಓದಿ, ಕೇಳಿ ಮಾಹಿತಿ ಸಂಗ್ರಹಿಸಿ ಬಹಳ ಶ್ರದ್ಧೆಯಿಂದ ಈ ಪುಟ್ಟ ಪ್ರವಾಸ ಕಥನವನ್ನು ಲೇಖಕಿ ಬರೆದಿರುವರು. ಅವರ ಆಸಕ್ತಿ ಹಾಗೂ ಕುತೂಹಲ ಈ ಪ್ರವಾಸ ಕಥನದಲ್ಲಿ ತೆರೆದುಕೊಂಡಿದೆ. ಸಂಸ್ಕಾರಗೊಂಡ ಕಣ್ಣು ಹಾಗೂ ಮನ ಖುಷಿಯಿಂದ ತೆರೆದುಕೊಳ್ಳುವುದರಿಂದ ಪ್ರವಾಸಕಥನ ಎಲ್ಲೂ ಬೇಸರ ಬರಿಸುವುದಿಲ್ಲ. ಯೂರೋಪ್‌ದೇಶಗಳ ಜೊತೆಗೆ ಮುಂಬೈನ ಪ್ರವಾಸಿ ಆಕರ್ಷಣೆಯ ಸ್ಥಳಗಳನ್ನು ಸಂದರ್ಶಿಸಿದ ಅನುಭವಗಳೂ ಇಲ್ಲಿ ದಾಖಲಾಗಿವೆ. ಎಲಿಫೆಂಟಾ ಗುಹೆಗಳ ಒಗೆಗಿನ ವಿವರಣೆ ಚೆನ್ನಾಗಿ ಬಂದಿದೆ. ಒರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯೊಬ್ಬರು ಇಷ್ಟು ಚೆನ್ನಾಗಿ ಪ್ರವಾಸಾನುಭವಗಳನ್ನು ಓದುಗರೊಡನೆ ಹಂಚಿಕೊಂಡಿರುವುದು ಲಕ್ಷಿಸಬೇಕಾದದ್ದು.

ಡಾ. ಎಚ್.ಎಂ. ಮಹೇಶ್ವರಯ್ಯನವರ **ಬೆಳಕಿನ ನಾಡಿನಲ್ಲಿ** ಯುರೋಪ್ ಪ್ರವಾಸ ಕಥನ. ಲೇಖಕರು ದ್ರಾವಿಡಭಾಷೆಗಳಲ್ಲಿ ನಡೆದ ಅಧ್ಯಯನ, ಸಂಶೋಧನೆಗಳನ್ನು ಕುರಿತ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಜರ್ಮನಿಗೆ ಹೋಗಿದ್ದರು. ಜರ್ಮನಿಯ ಸ್ಟುಟ್‌ಗಾರ್ಟ್‌ನಲ್ಲಿ ನೋಡಿದ ಬೆತ್ತಲೆ ನೃತ್ಯದ ವರ್ಣನೆ, ಕಾಡಿನ ಮಧ್ಯೆಯೂ ಒಂದು ತುಣುಕು ಕಾಗದವನ್ನೂ ಎಸೆಯದ ಜರ್ಮನರ ಶುಚಿಪ್ರಜ್ಞೆ, ಟ್ಯುಬಿಂಗನ್‌ನಲ್ಲಿ ಕಿಟ್ಟೆಲ್‌ರವರ ಸಮಾಧಿ ಹುಡುಕಿ ನಿರಾಶರಾದದ್ದು, ಹಾದಿತಪ್ಪಿದಾಗ ಗರ್ಭಿಣಿಯೋರ್ವಳು ಮಾಡಿದ ಸಹಾಯ, ಫ್ರಿಟ್ಸ್ ದಂಪತಿಗಳ ನಿರ್ವ್ಯಾಜ ಪ್ರೀತಿ-ಆತಿಥ್ಯ ಪ್ರವಾಸ ಕಥನದಲ್ಲಿ ಚೆನ್ನಾಗಿ ಬಂದಿದೆ.

ಲಂಡನ್‌ನ ಭಾರತೀಯ ವಿದ್ಯಾಭವನದಲ್ಲಿ ನಂದಕುಮಾರ್‌ರವರ ಅತಿಥಿಯಾಗಿ ಹೋದ ಮಹೇಶ್ವರಯ್ಯನವರು ಜರ್ಮನಿಯಲ್ಲಿನ ತಂಗಣೆಯ ದಿನಗಳ ವರ್ಣನೆಗಿಂತ ಲಂಡನ್‌ನಲ್ಲಿ ನೋಡಿದ ಸ್ಥಳಗಳ ವಿವರಣೆ ದೀರ್ಘವಾಗಿ ಬಂದಿದೆ. ಬಹುಶಃ ಲಂಡನ್ ತನ್ನ ಪಳೆಯುಳಿಕೆಗಳ ಸಾಂಸ್ಕೃತಿಕ ಸಮೃದ್ಧಿಯಿಂದ ಲೇಖಕರನ್ನು ಆಕರ್ಷಿಸಿದೆ. ಇಲ್ಲಿ ಭೌಗೋಳಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ವಿವರಗಳು ಲೇಖಕರ ಕುತೂಹಲಾಸಕ್ತಿಯ ಕಾರಣವಾಗಿ ಶ್ರದ್ಧೆಯಿಂದ ದಾಖಲಾಗಿದೆ. ಅವನ್ನು ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಸ್ವಂತ ಅಭಿರುಚಿಯ ಕಾರಣವಾಗಿ ಒಂದು ದೇಶದ ಭವ್ಯತೆಯನ್ನು, ತಾವು ನೋಡಿದ ಸ್ಥಳಗಳ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬೆಲೆಗಟ್ಟುವಲ್ಲಿ, ದಾಖಲಿಸುವಲ್ಲಿ ಮಹೇಶ್ವರಯ್ಯನವರು ಮನಸ್ಸಿನ ತುಡಿತ ಮಿಡಿತಗಳು ಈ ಪ್ರವಾಸ ಕಥನದಲ್ಲಿ ಚೆನ್ನಾಗಿ ಬಿಂಬಿತವಾಗಿದೆ.

“ಲಂಡನ್ , ಪ್ಯಾರಿಸ್ ಮತ್ತು ರೋಂ ನಗರಗಳ ಹರಿಯುವ ಮತ್ತು ಆ ನಗರಗಳ ಜೀವನಾಡಿಯಾಗಿರುವ ಥೇಮ್ಸ್, ಸೈನ್ ಮತ್ತು ಟೈಬರ್ ನದಿಗಳು ಇಂಗ್ಲೆಂಡ್,

ಫ್ರಾನ್ಸ್, ಮತ್ತು ಇಟಲಿ ದೇಶಗಳ ಸಾವಿರಾರು ವರ್ಷಗಳ ಇತಿಹಾಸಕ್ಕೆ ಸಾಕ್ಷಿಯಾಗಿ ಹರಿಯುತ್ತಲೇ ಇವೆ. ಇವು ಪ್ರವಾಸಿಗರ ಪ್ರಮುಖ ಆಕರ್ಷಣೆಯ ಕೇಂದ್ರಗಳಾಗಿವೆ. ಆದ್ದರಿಂದ ನನ್ನ ಈ ಪ್ರವಾಸ ಕಥನವನ್ನು **ಥೇಮ್ಸ್‌ದಿಂದ ಟೈಬರ್‌ವರೆಗೆ** ಎಂದು ಹೆಸರಿಸಿದ್ದೇನೆ" ಎಂದು ವೆಂಕಟೇಶ ಮಾಚಕನೂರ ಅವರು ತಮ್ಮ ಪ್ರವಾಸ ಕಥನದ 'ಮೊದಲ ಮಾತು'ವಿನಲ್ಲಿ ಹೇಳಿರುವರು.

ಇದು ಲೇಖಕರ ಪ್ರಥಮ ಪ್ರಯತ್ನ. ಪಶ್ಚಿಮ ದೇಶಗಳಿಗೆ ನಿತ್ಯವೂ ಒಂದಲ್ಲಾ ಒಂದು ಕಾರಣಕ್ಕೆ ಹೋಗಿಬರುತ್ತಿರುವರು. ಅವರೆಲ್ಲಾ ಪ್ರವಾಸಿಗರಲ್ಲ, ಅವರ ದೃಷ್ಟಿಕೋನ ಬೇರೆ. 'ನನ್ನದು ಓರ್ವ ಸಾಮಾನ್ಯ ಪ್ರವಾಸಿಯ ದೃಷ್ಟಿಕೋನ' ಎಂದು ತಮ್ಮ ಅನುಭವ ಕಥನದ ವಿಶೇಷತೆಯನ್ನು ಲೇಖಕರು ಪ್ರಸ್ತಾಪಿಸಿರುವರು. ಇದು ಖಾಸಗಿಯಾದ ಯುರೋಪ್ ಪ್ರವಾಸ. ಲಂಡನ್, ಪ್ಯಾರಿಸ್ ಬೆಲ್ಜಿಯಂ, ರೋಂ, ದುಬೈ -ಹೀಗೆ ತಾವು ನೋಡಿದ ಪ್ರಮುಖ ಪ್ರವಾಸಿ ಆಕರ್ಷಣೆಯ ಕೇಂದ್ರಗಳ ಸೊಗಸಾದ ಪರಿಚಯ ಈ ಪ್ರವಾಸ ಕಥನದಲ್ಲಿದೆ. ಮಾಚಕನೂರ ಅವರು ತಮ್ಮ ಪತ್ನಿಯೊಂದಿಗೆ 'ಗುಂಪು ಪ್ರವಾಸ'ದಲ್ಲಿ ಯೂರೋಪ್ ಸುತ್ತಿರುವರು. ಇದು ಹದಿನೈದು ದಿನಗಳ ಕಾಲಮಿತಿಯ ಗುಂಪು ಪ್ರವಾಸ. ಹೀಗಾಗಿ ಯೂರೋಪ್‌ನ ದೇಶಗಳ ಈ ಪ್ರವಾಸದಲ್ಲಿ ನೋಡಿದುದಕ್ಕಿಂತ ನೋಡದೆ ಉಳಿದುದು ಹೆಚ್ಚು. ಮಹತ್ವದ ವೀಕ್ಷಣಾಸ್ಥಳಗಳನ್ನು ನೋಡಿದರೂ ಕೂಡ ಇನ್ನೂ ನೋಡಬೇಕಾದದ್ದು ಬಹಳಷ್ಟಿದೆ ಎಂಬ ಕೊರಗು ಲೇಖಕರದು. ಇದು ಕಾಲಮಿತಿಯ 'ಗುಂಪು ಪ್ರವಾಸ' ಕೈಗೊಳ್ಳುವವರ ಸಾಮಾನ್ಯವಾದ ಕೊರಗು.

ನನಗೆ ಮೆಚ್ಚುಗೆಯಾದದ್ದು ಲೇಖಕರ ತನ್ಮಯವಾದ ಬರವಣಿಗೆಯ ಶೈಲಿ ಎಲ್ಲೂ ಅತಿಯಾಗಿ ಲಂಬಿಸದೆ, ತಾವು ನೋಡಿದ್ದನ್ನು ಅನುಭವಿಸಿದ್ದನ್ನು ಕನ್ನಡ ಭಾಷೆಗೆ ಸಂವಹಿಸುವಲ್ಲಿ ಲೇಖಕರ ನಿಸೂರಾದ ಬರವಣಿಗೆ ಇದು ಅವರ ಮೊದಲ ಪ್ರಯತ್ನವೆಂಬುದನ್ನು ನಂಬಲಾಗಲೇ ಇಲ್ಲ; ಅಷ್ಟು ಸಂಯಮಪೂರ್ಣ ಬರವಣಿಗೆ ಲೇಖಕರದು. ಪ್ರವಾಸ ಕಥನದ ಕೊನೆಯಲ್ಲಿ ತಮ್ಮ ಸುತ್ತಾಟದ 'ಸಿಂಹಾವಲೋಕನ' ನಡೆಸಿ ಹೀಗೆ ಚಿಂತಿಸುವರು "...ಎರಡನೇ ಮಹಾಯುದ್ಧದಲ್ಲಿ ಹೆಚ್ಚು ಕಡಿಮೆ ಹಾಳಾದ ಯುರೋಪಿನ ದೇಶಗಳು ಮತ್ತೆ ಐವತ್ತು ವರ್ಷಗಳಲ್ಲಿ ಹಿಂದಿನದೆಲ್ಲ ಮರೆತು ಏನು ಆಗಿಯೇ ಇರಲಿಲ್ಲ ಎನ್ನುವಷ್ಟು ಅಭಿವೃದ್ಧಿ ಸಾಧಿಸಿವೆ. ಆದರೆ ನಾವು ಸ್ವಾತಂತ್ರ್ಯ ಗಳಿಸಿ ಐವತ್ತು ವರ್ಷಗಳೇ ಕಳೆದರೂ ಅವರ ಮಟ್ಟಕ್ಕೆ ಏರಲು ಏಕೆ ಆಗುತ್ತಿಲ್ಲ; ನಾವು ಎಂದಿಗೂ ಆ ಹಂತ ತಲುಪಲಾರೆವೆ ಎಂದು ನನಗೆ ಅನಿಸುತ್ತಿತ್ತು.... ಯುರೋಪಿನಲ್ಲಿ ಒಬ್ಬ ವ್ಯಕ್ತಿಗೆ ಹತ್ತು ಕೆಲಸಗಳ ಆಯ್ಕೆ ಇದ್ದರೆ, ನಮ್ಮಲ್ಲಿ ಒಂದು ಸಾವಿರ ಜನರಿಗೆ

ಒಂದು ಕೆಲಸದ ಆಯ್ಕೆ ಇದೆ. ನಮ್ಮ ಜನಸಂಖ್ಯೆಯೇ ನಮಗೆ ಭಾರವಾಗುತ್ತಿದೆಯೇನೋ ಎಂದು ಭಾಸವಾಗುತ್ತದೆ. ಇಲ್ಲಿಯ ಮಾನವಶಕ್ತಿ ಸಂಪನ್ಮೂಲವನ್ನು ದೇಶದ ಅಭಿವೃದ್ಧಿಗೆ ಪೂರ್ಣವಾಗಿ ಬಳಸಿಕೊಳ್ಳುವ ಅವಕಾಶ ನಿರ್ಮಾಣವಾಗದ ಹೊರತು ನಮ್ಮ ಸರ್ವತೋಮುಖ ಅಭಿವೃದ್ಧಿ ಸಾಧ್ಯವಿಲ್ಲವೆನಿಸುತ್ತದೆ. ಈ ದಿಶೆಯಲ್ಲಿ ಯೋಚಿಸಿ ಕಾರ್ಯನಿರ್ವಹಿಸಬಲ್ಲ ಶಕ್ತ ಪ್ರಾಮಾಣಿಕ ಮುಂದಾಳತ್ವ ತಳಮಟ್ಟದಿಂದಲೇ ತಯಾರಾಗಬೇಕು. ಹಾಗಾದಲ್ಲಿ ಮಾತ್ರ ನಾವು ಪಶ್ಚಿಮದೇಶಗಳ ಮಟ್ಟಕ್ಕೆ ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು ನನಗನ್ನಿಸಿತು" (ಪು. ೧೨೩) ಎಂಬ ಲೇಖಕರ ಪ್ರಾಮಾಣಿಕ ಚಿಂತನೆ ಮೆಚ್ಚುವಂತಿದೆ.

ಪ್ರವಾಸದಲ್ಲಿನ ಈ ತನ್ಮಯವಾದ ನೋಟದ ಅನುಭವಗಳನ್ನು ಬರವಣಿಗೆಗೆ ಇಳಿಸುವಾಗ ಲೇಖಕರು ವಹಿಸಿರುವ ಕಾಳಜಿ ಗಮನಿಸಿದಾಗ ಒತ್ತಿಬಂದ ಭಾವನೆಗಳನ್ನು, ಅನುಭವಗಳನ್ನು ನಿರುಂಬಳವಾಗಿ ದಾಖಲಿಸುವಲ್ಲಿನ ಆ ಪ್ರಸನ್ನ ಮನಸ್ಥಿತಿ ನನಗೆ ಮೆಚ್ಚುಗೆಯಾಯಿತು. ಇದು ಮಾಚಕನೂರರು ಸಾಮಾನ್ಯ ಪ್ರವಾಸಿಗರಾಗಿ ಮೂಡಿಸಿದ ವಿಶಿಷ್ಟ ಅನುಭವ ಕಥನ.

ಇಂದಿರಾ ಶಿವಣ್ಣನವರ **ಹಾಲೆಂಡಿನಿಂದ ಲಂಡನ್‌ವರೆಗೆ** ಯೂರೋಪ್ ಪ್ರವಾಸದ ಅನುಭವಗಳನ್ನು ತಿಳಿಸುವ ಕೃತಿ. ವಿದೇಶ ಪ್ರವಾಸ ಮಾಡುವವರು ತಮ್ಮ ಪ್ರವಾಸ ಮಾಡುವ ಸ್ಥಳಗಳ ಬಗೆಗೆ ಅಧ್ಯಯನ ಮಾಡಿ ಸಾಕಷ್ಟು ಮಾಹಿತಿ ಪಡೆದಿರುವರು. ಇಂತಹ ಪೂರ್ವಸಿದ್ಧತೆ ಇಲ್ಲದೆ ಯೂರೋಪ್ ಯಾತ್ರೆ ಹೊರಡುವ ಹವ್ಯಾಸಿ ಪ್ರವಾಸಿಗರಿಗಾಗಿ ನನ್ನ ಈ ಕಿರುಪುಸ್ತಕ ಎಂದು ಲೇಖಕಿ ತಮ್ಮ ಮಾತಿನಲ್ಲಿ ಹೇಳಿಕೊಂಡಿರುವರು. ಇಲ್ಲಿ ಲೇಖಕಿ ಕಡಲಾಚೆಯ ನೆಲದಲ್ಲಿ ಅಲೆದಾಡಿದ ಅಪೂರ್ವ ಘಳಿಗೆಗಳ ರೋಮಾಂಚನಕಾರಿ ಅನುಭವಗಳನ್ನು ಓದುಗರೊಂದಿಗೆ ಹಂಚಿಕೊಳ್ಳುತ್ತಿದ್ದಾರೆ.

ಇದು ಗುಂಪು ಪ್ರವಾಸ. ನೆದರ್‌ಲ್ಯಾಂಡ್, ಹಾಲೆಂಡ್, ಜರ್ಮನಿ, ವೆನಿಸ್, ರೋಂ, ಇಟಲಿ, ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್, ಲುಸಾರ್ನ್, ಜಿನೀವಾ, ಇಂಟರ್‌ಲೇಕ್ ನಗರ, ಪ್ಯಾರಿಸ್, ಲಂಡನ್ -ಹೀಗೆ ಮುಖ್ಯ ದೇಶಗಳ ಪ್ರಮುಖ ಪ್ರವಾಸಿ ಸ್ಥಳಗಳನ್ನು ನೋಡಿದ ಅನುಭವಗಳಲ್ಲಿ ಬೆರಗು ಮಡುಗಟ್ಟಿದೆ. ಗುಂಪು ಪ್ರವಾಸವಾದ್ದರಿಂದ ನಿಗದಿತ ವೇಳೆಯಲ್ಲಿ ನಿಗದಿತ ಸ್ಥಳಗಳ ವೀಕ್ಷಣೆ ಮಾತ್ರ. ಹೆಚ್ಚು ಕಾಲ ಎಲ್ಲಿಯೂ ನಿಲ್ಲುವಂತಿಲ್ಲ. ಇಂದಿರಾ ಶಿವಣ್ಣನವರ ಪ್ರವಾಸದ ಉದ್ದಕ್ಕೂ ಈ ಕೊರಗು ಇದೆ. ಪೂರ್ವಸಿದ್ಧತೆಯೊಂದಿಗೆ ಪ್ರವಾಸ ಹೊರಟಿರುವುದರಿಂದ ನೋಡಿದ ಸ್ಥಳಗಳ ಬಗೆಗೆ ಅಧಿಕೃತ ಮಾಹಿತಿಯನ್ನು ಇಂದಿರಾ ಶಿವಣ್ಣ ಕೊಟ್ಟಿರುವರು. ಅವರ ಉಕ್ಕುವ ಉತ್ಸಾಹದೊಂದಿಗೆ ಪ್ರವಾಸಿ ತಾಣಗಳಲ್ಲಿ ಕಣ್ಣು ಮನಸ್ಸು ಪಡೆಯಬಹುದಾದ ಪರಮಸುಖವನ್ನು ಅನುಭವಿಸಿರುವರು. ಅದು ಅವರ ಮಾತುಗಳಲ್ಲಿ ಅವಿಭಾಜ್ಯ ಭಾಗವಾಗಿ ಬಂದಿದೆ.

**ಬಿಡಿ ಬಿಡಿ ದೇಶಗಳ ಪ್ರವಾಸ ಸಾಹಿತ್ಯ:**

ನಮ್ಮಲ್ಲಿ ಸಾಕಷ್ಟು ಮಂದಿ ವಿಶ್ವದ ಬಿಡಿ ಭಾಗಗಳನ್ನು ಸಾಂಸ್ಕೃತಿಕ ರಾಯಭಾರಿಗಳಾಗಿಯೋ, ಉನ್ನತ ಶಿಕ್ಷಣ / ತರಬೇತಿ ಪಡೆಯಲು ವಿದ್ಯಾರ್ಥಿಗಳಾಗಿಯೋ, ಅಂತರರಾಷ್ಟ್ರೀಯ ಸಭೆ ಸಮ್ಮೇಳನಗಳಲ್ಲಿ ಪಾಲ್ಗೊಳ್ಳುವವರಾಗಿಯೋ, ವ್ಯಾಪಾರೋದ್ಯಮಿಗಳಾಗಿಯೋ, ಸಾಂಸ್ಕೃತಿಕ ವಿನಿಮಯದ ಆಶ್ರಯದಲ್ಲಿ ಆಹ್ವಾನಿತರಾಗಿಯೋ, ಕೇವಲ ಪ್ರವಾಸಿಗಳಾಗಿಯೋ ಸಂದರ್ಶಿಸಿರುವುದುಂಟು. ಹೀಗೆ ವಿಶ್ವದ ಬಿಡಿ ಬಿಡಿ ಭಾಗಗಳಲ್ಲಿ ಸುತ್ತಾಡಿ ಬಂದವರೆಲ್ಲರೂ ತಮ್ಮ ತಮ್ಮ ವಿಶಿಷ್ಟಾನುಭವಗಳನ್ನು ಬರಹರೂಪಕ್ಕೆ ಒಳಪಡಿಸಿಲ್ಲ. ಬೆರಳೆಣಿಕೆಯ ಮಂದಿ ಮಾತ್ರ ತಮ್ಮ ಪ್ರವಾಸಾನುಭವಗಳನ್ನು ಶಾಬ್ದಿಕವಾಗಿ ದಾಖಲಿಸಿರುವರು. ಪ್ರವಾಸಿಗರೆಲ್ಲರ ಅನುಭವಗಳು ಸಾಮಾನ್ಯವಾಗಿ ಒಂದೇ ಆಗಿರುವುದಿಲ್ಲ. ಏಕೆಂದರೆ, ಅದು ಅವರವರ ಓದು, ಅಭಿರುಚಿ, ಆಸಕ್ತಿಗಳನ್ನು ಅವಲಂಬಿಸಿರುತ್ತದೆ. ಗ್ರಹಿಕೆಯ ಗುಣ-ಪ್ರಮಾಣಗಳು ಎಲ್ಲರಲ್ಲೂ ಒಂದೇ ಆಗಿರುವುದಿಲ್ಲ. ಗ್ರಹಿಕೆಯ ಗುಣಮಟ್ಟವು ವ್ಯಕ್ತಿಯ ಅಭಿರುಚಿಯನ್ನು ಸೂಚಿಸುವುದರಿಂದ ಅದನ್ನು ಅವಲಂಬಿಸಿ ಒಳ್ಳೆಯ ಅಥವಾ ಸಾಧಾರಣ ಪ್ರವಾಸ ಸಾಹಿತ್ಯ ನಿರ್ಮಾಣವಾಗಬಹುದು. ಓದಿನಿಂದ ಇಲ್ಲವೆ ಉತ್ತಮ ಸಂಸ್ಕಾರದಿಂದ ಪಕ್ವವಾದ ಮನಸ್ಸು ಸುತ್ತಾಟದ ಅವಧಿಯಲ್ಲಿ ಸುತ್ತಣ ಪ್ರಪಂಚದೊಡನೆ ಹೇಗೆ ಸ್ಪಂದಿಸುತ್ತದೆ; ಸಂಸ್ಕಾರಗೊಂಡ ಕಣ್ಣು ಮತ್ತು ಮನಸ್ಸು ಸುತ್ತಣ ಬದುಕನ್ನು ಹೇಗೆ ಗ್ರಹಿಸುತ್ತದೆ; ಅಭಿವ್ಯಕ್ತಿ ಅನುಭವದ ಗರ್ಭದಿಂದ ಬರುವಾಗ ಭಾಷೆಯೊಂದಿಗೆ ಹೇಗೆ ಸಾವಯವ ಸಂಬಂಧ ಪಡೆಯುತ್ತದೆ -ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ವಿಶ್ವದ ಬಿಡಿ ಬಿಡಿ ಭಾಗಗಳ ಸಂಚಾರ ಕೈಗೊಂಡವರ ಅನುಭವದ ಕಥನದಲ್ಲಿ ಕಾಣಸಿಗುತ್ತದೆ. ಇಲ್ಲಿ ಪ್ರತಿಯೊಬ್ಬರ ಅನುಭವವೂ ನೋಡುವ ನೋಟದಿಂದ, ಆಲೋಚಿಸುವ ಬಗೆಯಿಂದ ಭಿನ್ನವಾಗಿದೆ, ಹೆಚ್ಚು ವೈವಿಧ್ಯಮಯವಾಗಿದೆ.

ವಿಶ್ವದ ಬಿಡಿ ಬಿಡಿ ಭಾಗಗಳು ಅಂದರೆ-ರಷ್ಯಾ ಅಮೇರಿಕಾ, ಲಂಡನ್, ಜಪಾನ್, ಬರ್ಲಿನ್, ಜರ್ಮನಿ, ಪ್ಯಾರಿಸ್, ಇತಾಲಿಯಾ, ಆಫ್ರಿಕ, ಇಸ್ರೇಲ್, ಶ್ರೀಲಂಕಾ, ಬಾಂಗ್ಲಾದೇಶವ, ಚೀಣಾ ಈ ದೇಶಗಳಲ್ಲಿ ಪ್ರವಾಸ ಮಾಡಿರುವ ಕನ್ನಡಿಗರು ಸಾಕಷ್ಟು ಮಂದಿ ಇರುವರು. ಈ ದೇಶಗಳಲ್ಲಿ ಅಮೇರಿಕಾವು ಹೆಚ್ಚಿನ ಸಂಖ್ಯೆಯ ಕನ್ನಡಿಗರನ್ನು ಆಕರ್ಷಿಸಿದೆ. ಅಮೇರಿಕಾವನ್ನು ಕುರಿತ ಪ್ರವಾಸ ಸಾಹಿತ್ಯ ಕನ್ನಡದಲ್ಲಿ ಸಮೃದ್ಧವಾಗಿ ಬಂದಿರುವುದು ಲಕ್ಷಿಸಬೇಕಾದ ಸಂಗತಿ. ಕನ್ನಡಿಗರನ್ನು ಆಕರ್ಷಿಸಿದ ಮತ್ತೊಂದ ರಾಷ್ಟ್ರವೆಂದರೆ ರಷ್ಯಾ.

## ಕೆನಡಾ

ಗುರುಮೂರ್ತಿ ಪೆಂಡಕೂರರ **ಓ! ಕೆನಡಾ** ಕೆನಡಾ ದೇಶದಲ್ಲಿ ಸುತ್ತಾಡಿದಾಗ ಒದಗಿಬಂದ ಅನುಭವಗಳ ಕಥನ. ೧೯೫೦ರಿಂದ ಕೆನಡಾ ನನಗೆ ಅತ್ಯಂತ ಕುತೂಹಲ ಕೆರಳಿಸಿದ ದೇಶ ಎನ್ನುವ ಲೇಖಕರು ೧೯೬೯ರಲ್ಲಿ ಕೆನಡಾಕ್ಕೆ ಹೋಗಿದ್ದರು. ಆಗ ಅವರಿಗೆ ಕೆನಡಾದ ಸಂಸ್ಕೃತಿಯ ಪ್ರಥಮ ಪರಿಚಯವಾಗಿದ್ದಿತು. ಈಗ ಪತ್ನಿಯೊಂದಿಗೆ ಬಂಧು-ಬಾಂಧವರ ಭೇಟಿಗ ಹೋದರು. 'ಕೆನಡಾವನ್ನು ಸಾಕಷ್ಟು ವಿವರವಾಗಿ ಮತ್ತು ಅರ್ಥಪೂರ್ಣವಾಗಿ ನೋಡಿದ ತೃಪ್ತಿ ನಮ್ಮದು' ಎಂದು ಲೇಖಕರೇ ಕೃತಿಯ ಕೊನೆಯಲ್ಲಿ ಹೇಳಿರುವರು. ಗುರುಮೂರ್ತಿಯವರಿಗೆ ಕೆನಡಾ ಮೆಚ್ಚುಗೆಯಾಗಿರುವುದಕ್ಕೆ ಕಾರಣ ಹೀಗಿದೆ: "ಮೊದಲಿನಿಂದಲೂ ಕೆನಡಾ ಭಾರತದ ಆತ್ಮೀಯ ಮಿತ್ರದೇಶವೆನಿಸಿದೆ. ನಮ್ಮ ಕಷ್ಟಕಾಲಕ್ಕೆ ಮುಕ್ತಹಸ್ತದ ನೆರವು ನೀಡಿದವರು ಕೆನಡಾದವರು. ಹೀಗಾಗಿ ಕೆನಡಾ ಸುತ್ತಾಡುವಾಗ ಅದೊಂದು ಪರದೇಶವೆನಿಸುವುದೇ ಇಲ್ಲ. ಎಲ್ಲಿ ನೋಡಿದರೂ ಭರತಖಂಡದ ಜನ, ಅವರ ವ್ಯಾಪಾರ, ಗುಡಿ - ಗುರುದ್ವಾರ - ಮಸೀದೆ ಮತ್ತು ಘಮಘಮಿಸುವ ಮಸಾಲೆ ಹಾಕಿದ ಊಟದ ಹೋಟೆಲ್‌ಗಳು, ಪಂಜಾಬಿಯಲ್ಲಿ, ಹಿಂದಿಯಲ್ಲಿ ಬರೆದ ಅಂಗಡಿಯ ಫಲಕಗಳು. ಊರೂರಲ್ಲಿ ಭಾರತೀಯ ಪೌರ್ವಾತ್ಯ ಕಲಾವಿದರ ನೃತ್ಯ, ಸಂಗೀತ, ನಾಟಕಾದಿ ಕಾರ್ಯಕ್ರಮಗಳು. ಹಿಂದಿ, ಬಂಗಾಲಿ ಸಿನೆಮಾಗಳು ಭಾರತೀಯ ವಾತಾವರಣವನ್ನು ಕಲ್ಪಿಸಿವೆ."

**ಓ! ಕೆನಡಾ** ಒಂದು ಪುಟ್ಟ ಪ್ರವಾಸ ಕಥನ. ಆದರೆ ಅದರ ಒಳಗಿನ ಮನುಷ್ಯ ಸಂಬಂಧಗಳ ಕಥನ ಅದ್ಭುತವಾದುದು. ಹಳೆಯದರ ಮೆಲುಕು, ಹರಟೆ, ಸುಗ್ರಾಸ ಭೋಜನ ಮನುಷ್ಯ ಸಂಬಂಧಗಳ ಅನುಬಂಧವು ಮತ್ತಷ್ಟು ಗಟ್ಟಿಗೊಳ್ಳಲು ಸಂತೋಷಕೊಡುವ ಮಾತುಕತೆ, ನೆಲದ ಬೇರು ಕಳಚಿಕೊಂಡು ಕೆನಡಾದಲ್ಲಿ ಬೇರುಬಿಟ್ಟಿರುವ ಅಣ್ಣ-ತಮ್ಮ, ಮಿತ್ರರೇ ಮೊದಲಾದವರ ಶ್ರೇಯೋಭಿವೃದ್ಧಿಯ ಬಗೆಗಿನ ಮೆಚ್ಚುಗೆ -ಹೀಗೆ ಕೌಟುಂಬಿಕ ಸಂಬಂಧಗಳ ಸುತ್ತು ಬಳಸಿನಲ್ಲಿ ಬಾಂಧವ್ಯಗಳ ಮಧುರಸ್ಮೃತಿ ಪ್ರವಾಸ ಕಥನದುದ್ದಕ್ಕೂ ದಾಖಲಾಗಿದೆ. ಗುರುಮೂರ್ತಿ ದಂಪತಿಗಳದು ಅನ್ಯೋನ್ಯ ಸವಿಯಾದ ಮೈತ್ರಿ. ಪತ್ನಿ ಪಾರ್ವತಿಯ ಕೈಯಡುಗೆಯ ಸವಿ, ಬಂಧುಗಳ ಜೊತೆ ಮನಬಿಚ್ಚು ಬೆರೆಯುವ ಅವರ ಸೌಹಾರ್ದ ಗುಣ, ಕಂಠಸಿರಿ ಇವನ್ನು ಮನದುಂಬಿ ಹೊಗಳುವ ಗುರುಮೂರ್ತಿಯವರ ದಾಂಪತ್ಯದ ಬದುಕಿನಲ್ಲಿ ಹಾಲುಜೇನಿನ ಸಂಬಂಧ. ಈ ದಂಪತಿಗಳ "ಅದಂದಿಗೆ ಸಂತೋಷಪಟ್ಟಿದ್ದು ಮತ್ತು ಪ್ರಸನ್ನತೆಯಿಂದ ಬದುಕಿದ್ದೇ ಜೀವನ" (ಪು. ೬೯) ಎನ್ನುವ ಬದುಕಿನ ವ್ಯಾಖ್ಯೆ ಈ ಪ್ರವಾಸ ಕಥನದಿಂದ ಪರಿಪುಷ್ಟಗೊಳ್ಳುತ್ತದೆ.

ಓ! **ಕೆನಡಾ** ಎಂಬುದು ಕೆನಡಾ ದೇಶದ ರಾಷ್ಟ್ರಗೀತೆಯ ಮೊದಲ ಸಾಲು. ಅದನ್ನು ತಮ್ಮ ಪ್ರವಾಸ ಕಥನಕ್ಕೆ ಶೀರ್ಷಿಕೆಯಾಗಿ ಲೇಖಕರು ಬಳಸಿಕೊಂಡಿರುವರು. ಗುರುಮೂರ್ತಿಯವರ ಪ್ರವಾಸ ಕಥನದ ಮತ್ತೊಂದು ಆಕರ್ಷಣೆಯೆಂದರೆ, ತಾವು ನೋಡಿದ್ದನ್ನು ಕೇಳಿದ್ದನ್ನು ಸುಂದರವಾಗಿ ಭಾಷೆಯಲ್ಲಿ ಅಭಿವ್ಯಕ್ತಿಸುವ ಸಾಹಿತ್ಯಕ ಗುಣ. ಅವರ ಆಸಕ್ತಿ ದೇಶದ ಇತಿಹಾಸವನ್ನು ಕುರಿತಷ್ಟೇ ಅಲ್ಲ, ಬಹುಮುಖಿಯಾಗಿದೆ. ಅವರು ನೋಡಿದ್ದು ಒಂಟೇರಿಯಾ ಪ್ರಾಂತದ ಲಂಡನ್. ಗುರುಮೂರ್ತಿಯವರೇ ಹೇಳುವಂತೆ 'ಈ ಲಂಡನ್ ಸಣ್ಣ ಊರು. ನಮ್ಮ ಹರಪನಹಳ್ಳಿ ಕೂಡ್ಲಿಗಿ ಗಾತ್ರದ ಊರು.' ಅಲ್ಲಿಯ ವೆಂಕಟೇಶ್ವರ ದೇವಾಲಯದ ಪ್ರತಿಷ್ಠಾಪನಾ ವಾರ್ಷಿಕೋತ್ಸವದ ಸಡಗರದ ವರ್ಣನೆಯಾಗಲೀ, ಈರೀ ಮತ್ತು ಹ್ಯುರನ್ ಸರೋವರಗಳಿಗೆ ಪಿಕ್‌ನಿಕ್ ಹೋದ ಸಂಭ್ರಮವನ್ನಾಗಲೀ ಓದಿ ಸವಿಯಬೇಕು. ಈರೀ ಸರೋವರವನ್ನು ನೋಡಿ ಬಂದ ಮೇಲೆ ಗುರುಮೂರ್ತಿಯವರ ಮನಸ್ಸು ಖಿನ್ನವಾಯಿತು. ನಮ್ಮಲ್ಲಿ ಇಂಥ ವಿಪುಲ ಸ್ಥಳಗಳಿಲ್ಲ, ಆದರೆ ಅವನ್ನು ಚೆನ್ನಾಗಿ ವ್ಯವಸ್ಥೆ ಮಾಡಿ ಸಾರ್ವಜನಿಕರ ಸಂತೋಷಕ್ಕೆ ಅವಕಾಶ ಕಲ್ಪಿಸಬಹುದಾಗಿತ್ತು ಎಂದು ಅವರು ಎರಡೂ ದೇಶಗಳ ತುಲನೆ ಮಾಡುವರು (ಪು. ೨೬). ಡಾ. ವೆಲಮೂರ್‌ರವರ ಅತಿಥಿಯಾಗಿ ಅವರ ಮದ್ರಾಸಿ ಶೈಲಿಯ ಊಟದ ಏರ್ಪಾಟನ್ನು ಮೆಚ್ಚುವ ಸಂದರ್ಭದಲ್ಲಿ ಅವರ ಕುಟುಂಬದ ವಿಶೇಷತೆಯನ್ನು ಹೀಗೆ ಗುರುತಿಸುವರು: "...ಅವರು ಅಮೆರಿಕೆಯ ಜೀವನ ಶೈಲಿಯನ್ನು ಮೆಚ್ಚಿದ್ದಾರೆ. ಆದರೆ ಹಲವರಂತೆ ಹಗಲು-ರಾತ್ರಿ ಭಾರತೀಯತೆಯನ್ನು ಹಳಿಯುವುದಿಲ್ಲ. ಮತ್ತೆ ಕೆಲವರಂತೆ ಅಮೇರಿಕದಲ್ಲಿ ಕೆಲಸ ಮಾಡುತ್ತಾ ಆ ಜೀವನದ ಸಮಸ್ತ ಸುಖ ಮತ್ತು ಅನುಕೂಲಗಳನ್ನು ಹೀರುತ್ತಾ, ಅಮೆರಿಕನ್ನರನ್ನು ತಮಾಷೆ ಮಾಡುತ್ತಾ ಹೀಯಾಳಿಸುತ್ತಾ ಇರುತ್ತಾರೆ. ಅವರದೊಂದು ರೀತಿ" (ಪು. ೨೮). ಹೀಗೆ ಹೊರನಾಡ ಭಾರತೀಯರ ಕುಟುಂಬದಲ್ಲಿ ಬೆರೆಯುತ್ತ ಸೂಕ್ಷ್ಮವಾಗಿ ವ್ಯಕ್ತಿಗಳ ಗುಣ-ಸ್ವಭಾವಗಳನ್ನು, ದೌರ್ಬಲ್ಯ ಹಾಗೂ ಕುಬ್ಜತೆಗಳನ್ನು ಗಮನಿಸುವರು. ಒಂಟೇರಿಯಾ ರಾಜ್ಯದ ವಿಧಾನಸಭೆಗೆ ನಡೆದ ಚುನಾವಣೆಯ ವೈಖರಿಯನ್ನು ಲೇಖಕರು ಸೂಕ್ಷ್ಮವಾಗಿ ಗಮನಿಸುತ್ತ ನಮ್ಮ ದೇಶದ ಚುನಾವಣೆಯಲ್ಲಿ ಭ್ರಷ್ಟ ವ್ಯವಸ್ಥೆಯನ್ನು ಉಲ್ಲೇಖಿಸುವರು (ಪು. ೨೮-೨೯). ಅಲಾಸ್ಕಾದ ದುರ್ಗಮ ಶಿಖರವನ್ನೇರಲು ಹೋಗಿ ಸಾವನ್ನಪ್ಪಿದ ಜಿಮ್‌ನ ವ್ಯಕ್ತಿಚಿತ್ರವನ್ನು ಚೆನ್ನಾಗಿ ಕೊಟ್ಟಿರುವರು. ಗುರುಮೂರ್ತಿಯವರ ವೈವಿಧ್ಯಮಯವಾದ ಆಸಕ್ತಿಗಳನ್ನು ಗಮನಿಸಿದರೆ ಸೋಜಿಗವಾಗುತ್ತದೆ. ಅವರಿಗಿರುವ ಸ್ಥಳನಾಮಗಳ ಬಗೆಗಿನ ಆಸಕ್ತಿಯ ಕಾರಣವಾಗಿ ವಾಂಕೋವರ್‌ನ ಗ್ರಂಥಾಲಯದಲ್ಲಿ ಅಮೆರಿಕೆಯ ಸ್ಥಳನಾಮಗಳ ಬಗ್ಗೆ ಅಪೂರ್ವ ಗ್ರಂಥ ಲ್ಯಾಂಬರ್ಟ್ ಮತ್ತು ಪೇಯ್ ಬರೆದ 'ದಿ ಬುಕ್ ಆಫ್ ಪ್ಲೇಸ್‌ನೇಮ್ಸ್' ಬಗ್ಗೆ ಆಸಕ್ತಿಯುಂಟಾಗಿ ಆ ಪುಸ್ತಕವನ್ನು Zerox ಯಂತ್ರದ ಮೂಲಕ ಪ್ರತಿ ಮಾಡಿಕೊಳ್ಳುವರು.

ಗುರುಮೂರ್ತಿಯವರ ಆಸಕ್ತಿ ಎಂತಹದ್ದೆಂದರೆ, ಅವರು ಅಮೆರಿಕಾ ಖಂಡದ ಕಸ ಟಪಾಲು (Trash Mail) ಬಗ್ಗೆ ಮಾಹಿತಿಗಳನ್ನು ಕೊಟ್ಟಿರುವರು. ಅದನ್ನು ಓದುತ್ತಿದ್ದಂತೆ ಮುಖದಲ್ಲಿ ತೆಳುನಗೆ ಹರಡಿಕೊಳ್ಳುತ್ತದೆ. ಆ ಅಭಿವೃದ್ಧಿ ದೇಶದ ಸರ್ವತೋಮುಖ ಬೆಳವಣಿಗೆಯ ನಡುವೆ ಕಾಣಿಸಿಕೊಳ್ಳುವ ಸಾಮಾಜಿಕ ವೈರುಧ್ಯಗಳ ಬಗೆಗೆ ಮನಸ್ಸು ವಿಚಾರ ಮಾಡುತ್ತದೆ.

ಗುರುಮೂರ್ತಿಯವರು ಅಮೆರಿಕಾದ ಛತ್ರಛಾಯೆಯಲ್ಲಿ ಕೆನಡಾ ಇದೆ ಎಂಬುದನ್ನು ತಮ್ಮ ಕೃತಿಯ ಕೊನೆಯಲ್ಲಿ ವಿವರಿಸಿರುವರು. ಕೆನಡಾದಲ್ಲಿ ಕೆಲಸ ಮಾಡುವ ಜನರ ಅವಶ್ಯಕತೆ ಇರುವುದರಿಂದ ಆ ದೇಶದ ವಲಸೆ ಕಾನೂನು ಮತ್ತು ನಿಯಮಗಳೂ ಕೂಡ ಸರಳವಾಗಿವೆ. ಹೀಗಾಗಿ ಕೆನಡಾದಲ್ಲಿ ವೃತ್ತಿ ಕಾರಣವಾಗಿ ನೆಲಸಿರುವ ಬಂಧು-ಬಾಂಧವರ ಭೇಟಿಯ ನೆಪದಲ್ಲಿ ಒಂದು ಸೊಗಸಾದ 'ಸುಖ ಸಂಕಥಾಲಾಪ'ವನ್ನು ಗುರುಮೂರ್ತಿಯವರು ಕೊಟ್ಟಿರುವರು. ಈ ಖುಷಿಯ ಬರವಣಿಗೆ ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ.

**ರಷ್ಯಾ:**

> "ಪ್ರವಾಸಿಯೇ, ನನ್ನ ಆತಿಥ್ಯವನ್ನು ತಿರಸ್ಕರಿಸಿ ನೀನು ಮುನ್ನಡೆದೆಯಾದರೆ ದಾರಿಯಲ್ಲಿ ಗುಡುಗು ಮತ್ತು ಹಿಮಪಾತಕ್ಕೆ ಈಡಾಗಲಿರುವಿ. ನನ್ನ ಆತಿಥ್ಯದಿಂದ ನಿಮಗೆ ಸಂತೋಷವಾಗದಿದ್ದರೆ ಗುಡುಗು ಮತ್ತು ಹಿಮಪಾತಕ್ಕೆ ನಾನು ಗುರಿಯಾಗುತ್ತೇನೆ."
>
> -ರಷ್ಯನ್ ನಾಣ್ಣುಡಿ

ರಷ್ಯಾವನ್ನು ಸುಮಾರು ಹತ್ತು ಮಂದಿ ಕನ್ನಡಿಗರು ಸಂದರ್ಶಿಸಿರುವರು. ಇವರಲ್ಲಿ ಬಹುಪಾಲು ಮಂದಿ ಕನ್ನಡದ ಪ್ರಸಿದ್ಧ ಬರಹಗಾರರೇ ಆಗಿರುವುದು ವಿಶೇಷ. ಭಾರತೀಯ ಪರಿಸರಕ್ಕೆ ತೀರಾ ಭಿನ್ನವಾದ ಪರಿಸರದಲ್ಲಿ ನಮ್ಮ ಸಾಹಿತಿಗಳು ಸುತ್ತಾಟ ನಡೆಸಿದಾಗ ಅವರ ನೋಟ, ಅನುಭವ, ವಿವೇಚನೆ ಪರಸ್ಪರ ಭಿನ್ನವಾಗಿ ತೋರಿದ್ದರೂ ಎಲ್ಲರೂ ರಷ್ಯಾವನ್ನು ತಮ್ಮದೇ ಆದ ಕಾರಣಗಳಿಗಾಗಿ ಮೆಚ್ಚಿಕೊಂಡಿರುವರು. ತನ್ನ ಜನತೆಯ ಮೇಲೆ ತಾನೇ ನಿರ್ಬಂಧ ಹೇರಿ, ಆ ಸ್ವಾತಂತ್ರ್ಯರಹಿತ ಬದುಕಿನಲ್ಲೂ ಸುಖ-ಸಂತೋಷ-ನೆಮ್ಮದಿ ಮತ್ತು ಪ್ರಗತಿಪರವಾದ ನಿಲುವಿನಿಂದ ಬದುಕನ್ನು ಸಹನೀಯವಾಗುವಂತೆ ಮಾಡುತ್ತಿರುವ ಕಮ್ಯುನಿಸ್ಟ್ ರಾಷ್ಟ್ರದ ಧೋರಣೆಯ ಬಗೆಗೆ ಏನೇ ವಿರೋಧಗಳಿರಲಿ, ಆ ದೇಶ ತನಗೆ ತಾನೇ ಹೇರಿಕೊಂಡ ಶಿಸ್ತಿನ ಸಂಕೋಲೆಯಲ್ಲಿ ಪ್ರಗತಿ ಸಾಧಿಸುತ್ತಿರುವುದನ್ನು ನೋಡಿದ ನಮ್ಮ ಸಾಹಿತಿಗಳು ಅಚ್ಚರಿಪಟ್ಟಿರುವರು. ಬಡತನ ನಿವಾರಣೆ, ಕಲೆ ಸಾಹಿತ್ಯ ವಿಜ್ಞಾನಗಳ ಬಗೆಗೆ ಆ ರಾಷ್ಟ್ರ ತೋರುತ್ತಿರುವ ಶ್ರದ್ಧೆ ಎಲ್ಲರ

ಮೆಚ್ಚುಗೆಯ ಅಂಶವಾಗಿದೆ. 'ದುಡಿಮೆಯೇ ದೇವರು' ಎಂದು ನಂಬಿ ಬಾಳುತ್ತಿರುವ ಆ ಜನರ ಜೀವನಶ್ರದ್ಧೆಯನ್ನು, ತನ್ನ ದೇಶದ ಕಲೆ ಸಂಸ್ಕೃತಿ ಇತಿಹಾಸವನ್ನು ತಿಳಿಯಹೇಳುವ ವಸ್ತುಗಳ ರಕ್ಷಣೆಯಲ್ಲಿ ತೋರಿಸುತ್ತಿರುವ ಶ್ರದ್ಧೆಯನ್ನು, ದುಡಿಮೆಯಿಂದ ಬಳಲಿದಾಗ ತಿಂದು ಕುಡಿದು ನಕ್ಕು ನಲಿಯುವ ಅವರ ಜೀವನವಿಧಾನವನ್ನು ಎಲ್ಲರೂ ಮೆಚ್ಚಿರುವರು.

೧೯೫೫ರಲ್ಲಿ ಫಿನ್ಲೆಂಡಿನ ರಾಜಧಾನಿ ಹೆಲ್ಸಿಂಕಿಯಲ್ಲಿ ನಡೆದ ವಿಶ್ವಶಾಂತಿ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಬಿಳಿಗೆರೆ ರಾಮಚಂದ್ರರಾಯರು ಭಾಗವಹಿಸಿ ಫಿನ್ಲೆಂಡ್, ಸೋವಿಯತ್ ರಷ್ಯಾ ಮತ್ತು ಜೆಕೋಸ್ಲಾವಾಕಿಯ ದೇಶಗಳಲ್ಲೆಲ್ಲಾ ಸುತ್ತಾಡಿ ತಮ್ಮ ಪ್ರವಾಸಾನುಭವವನ್ನು **ನಾನು ಕಂಡ ರಷ್ಯಾ** ಎಂಬ ಹೊತ್ತಗೆಯಲ್ಲಿ ಕೊಟ್ಟಿರುವರು. ಕನ್ನಡದಲ್ಲಿ ರಷ್ಯಾ ಕುರಿತು ಬರೆದ ಕೃತಿಗಳಲ್ಲಿ ಬಹುಶಃ ಇದೇ ಮೊದಲನೆಯದು. "ದೇಶಪರ್ಯಟನೆಯು ಜ್ಞಾನಾರ್ಜನೆಗೆ ಒಂದು ಸಾಧನ. ಪರದೇಶಗಳನ್ನು ತಿರುಗಿ ಬಂದ ಮೇಲೆ ಆ ದೇಶಗಳ ಸ್ಥಿತಿಗತಿಗಳನ್ನು ಬರೆದಿಡುವುದು ಮೊದಲಿನಿಂದಲೂ ಬಂದ ಪದ್ಧತಿ. ಇದಲ್ಲದೆ ನಮ್ಮ ದೇಶದ ಸ್ಥಿತಿಗತಿಗಳಿಗೂ ಮತ್ತು ಆ ದೇಶದ ಸ್ಥಿತಿಗತಿಗಳಿಗೂ ಇರುವ ಹೋಲಿಕೆ, ವ್ಯತ್ಯಾಸ, ಆ ದೇಶಗಳ ವಿಚಿತ್ರ ಪದ್ಧತಿಗಳು, ಅನುಕರಣೀಯವಾದ ವಿಷಯಗಳು ಮತ್ತು ಜಗತ್ಪ್ರಸಿದ್ಧವಾದ ಮತ್ತು ಪ್ರೇಕ್ಷಣೀಯ ಸ್ಥಳಗಳು ಮತ್ತು ವಸ್ತುಗಳು ಇವುಗಳೆಲ್ಲದರ ವಿಷಯವಾಗಿ ನಮ್ಮ ದೇಶದ ಜನಗಳೂ ಈಗಿನ ಸಂದರ್ಭದಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ತಿಳಿಯುವುದು ಅವಶ್ಯಕವೆಂಬುದೇ ಉದ್ದೇಶವಾಗಿದೆ" ಎಂದು ಪೀಠಿಕೆಯಲ್ಲಿ ತಮ್ಮ ಈ ಕೃತಿರಚನೆಗೆ ಕಾರಣವನ್ನು ಸ್ಪಷ್ಟಪಡಿಸಿರುವರು. ಲೇಖಕರು ತಾವು ನೋಡಿದ ಕಲಾ ವಸ್ತುಸಂಗ್ರಹಾಲಯ, ಉದ್ಯಾನಗಳು, ಸೋವಿಯತ್ ಪೌರ ಜೀವನ, ಮಾಸ್ಕೋ ವಿಶ್ವವಿದ್ಯಾನಿಲಯ, ಲೆನಿನ್ ಮತ್ತು ಸ್ಟಾಲಿನ್ ಸ್ಮಾರಕಗಳು ಇತ್ಯಾದಿ ವಿಷಯಗಳ ಬಗೆಗೆ ವಿಸ್ತಾರವಾದ ವಿವರಣೆ ನೀಡಿರುವರು. ರಷ್ಯಾದಲ್ಲಿ ನ್ಯಾಯ ಪರಿಪಾಲನೆ ಹೇಗೆ? ಎಂಬುದರ ಸ್ಥೂಲ ಪರಿಚಯವನ್ನೂ ಕೊಟ್ಟಿರುವರು. ರಷ್ಯಾದ ಸಾಮಾನ್ಯ ಮನುಷ್ಯನ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಜೀವನವನ್ನು ಕುರಿತಂತೆ ಲೇಖಕರ ನಿಷ್ಪಕ್ಷಪಾತವಾದ ಅಭಿಪ್ರಾಯಗಳನ್ನು ಈ ಕೃತಿಯಲ್ಲಿ ನಾವು ನೋಡಬಹುದಾಗಿದೆ.

ಯುನೆಸ್ಕೋ ಅಭ್ಯರ್ಥಿಯಾಗಿ ಮೂರು ತಿಂಗಳ ಸೋವಿಯತ್ ರಾಷ್ಟ್ರದ ಶಿಕ್ಷಣ ಪದ್ಧತಿಯನ್ನು ಅಧ್ಯಯನ ಮಾಡಲು ಭಾರತದ ಪರವಾಗಿ ಕರ್ನಾಟಕದ ಪ್ರಸಿದ್ಧ ಶಿಕ್ಷಣ ತಜ್ಞರಾದ ಶ್ರೀರಂಗರಾಜುರವರು ಮಾಸ್ಕೋವಿಗೆ ಹೋಗಿಬಂದರು. ಅಲ್ಲಿನ ತಂಗುಣೆಯಲ್ಲಿ ತಮಗೊದಗಿದ ಅನುಭವಗಳನ್ನು, ಮನದಲ್ಲಿ ಮೂಡಿದ ಅನಿಸಿಕೆಗಳನ್ನು ತೆರದ ಮನಸ್ಸಿನಿಂದ ತಮ್ಮ ದಿನಚರಿಯಲ್ಲಿ ಬರೆದಿರುವರು. ಅವರ **ಸೋವಿಯತ್ ದಿನಚರಿ**

ರಷ್ಯನರ ಆಸೆ-ಆಕಾಂಕ್ಷೆಗಳು, ಅಭಿರುಚಿ-ಮನೋಧರ್ಮಗಳು, ಸಾಧನೆ-ಸಿದ್ಧಿಗಳು ಇವೇ ಮೊದಲಾದುವನ್ನು ಕುರಿತು ಅಧ್ಯಯನಾತ್ಮಕ ವರದಿಯನ್ನು ನೀಡುತ್ತದೆ. ಅದಕ್ಕಾಗಿ ಲೇಖಕರು ಅನೇಕ ಜನರನ್ನು ಸಂಧಿಸಿ ಚರ್ಚಿಸಿರುವರು; ಅನೇಕ ಸಂಗತಿಗಳನ್ನು ಕಣ್ಣಾರೆ ನೋಡಿರುವರು. ತಮ್ಮ ಬರಹದಲ್ಲಿ ಅನುಭವಗಳನ್ನು ದಾಖಲಿಸುವಾಗ ಲೇಖಕರು ಸತ್ಯನಿಷ್ಠರಾಗಿರುವರು. ತಮ್ಮ ಅಧ್ಯಯನದಿಂದ ರಷ್ಯದ ಬಗೆಗೆ ಪರಿಪೂರ್ಣವಲ್ಲದಿದ್ದರೂ ಒಂದು ಉತ್ತಮ ಚಿತ್ರವನ್ನು ಓದುಗ ಕಲ್ಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವರು. ಲೇಖಕರು ರಷ್ಯಾದಲ್ಲಿ ಒಳಿತನ್ನು ಕಂಡಂತೆ ಅಲ್ಲಿನ ಕೆಲವು ದೋಷ ಅಥವಾ ಕೊರತೆಗಳನ್ನೂ ಗಮನಿಸಿರುವರು. ವಿಚಾರ ಸ್ವಾತಂತ್ರ್ಯಕ್ಕೆ ಧಕ್ಕೆ, ಜೀವನದ ಅಭದ್ರತೆ, ದಿನಬಳಕೆಯ ವಸ್ತುಗಳ ಅಭಾವ -ಇವು ಲೇಖಕರು ಕಂಡಿರುವ ಕೊರತೆಗಳು. ಪುರುಷ ಪ್ರಯತ್ನದಲ್ಲಿ ಅಪರಿಮಿತ ವಿಶ್ವಾಸವನ್ನಿಟ್ಟಿರುವ ಈ ಜನಕ್ಕೆ ಯಾವುದೂ ಅಸಾಧ್ಯವಲ್ಲ. ಸದಾ ಸಮಾಧಾನದಿಂದಿರುವ ಚಿತ್ತವನ್ನು ಬೇರೆ ಮಾರ್ಗದಿಂದ ಸಾಧಿಸಬೇಕು. ಆ ಮಾರ್ಗವನ್ನು ಈ ಜನರು ಕಂಡುಕೊಳ್ಳಲಿ ಎಂದು ಲೇಖಕರು ಹಾರೈಸಿರುವರು. ಅಂದಂದಿನ ಅನುಭವವನ್ನು ಆ ಕಾವಿನಲ್ಲಿಯೇ ಬರೆದಿರಿಸಿದ ಈ ದಿನಚರಿ ಅಥವಾ ಪ್ರವಾಸ ಕಥನದಲ್ಲಿ ಸುಶಿಕ್ಷಿತ ಮನಸ್ಸಿನ ಬಿಚ್ಚು ಮನದ, ನಿರ್ವಿಕಾರ ದೃಷ್ಟಿಯ ಆಲೋಚನೆಯ ಹಲವು ಮಜಲುಗಳನ್ನು ನಾವು ಕಾಣಬಹುದಾಗಿದೆ. ಸೋದರನಾಡಿನ ಜನರ ಹೃದಯ ಶ್ರೀಮಂತಿಕೆಯ ಬಗೆಗೆ ಮೆಚ್ಚುಗೆಯನ್ನೂ, ಅವರ ಪ್ರಗತಿಯ ಬಗೆಗೆ ಶ್ಲಾಘನೆಯನ್ನೂ, ಅಲ್ಲಲ್ಲಿ ಕಾಣುತ್ತೇವೆ. ಹಾಗೆಯೇ ಅಲ್ಲಲ್ಲಿ ನಮ್ಮ ದೇಶದ ಹಿಂದುಳಿಕೆಯ ವಾಸ್ತವಸ್ಥಿತಿಯ ಬಗೆಗೆ ಚಿಂತನೆಯನ್ನೂ, ನಿಟ್ಟುಸಿರನ್ನೂ ನೋಡುತ್ತೇವೆ.

ದೇ.ಜ.ಗೌ.ರವರ **ವಿದೇಶದಲ್ಲಿ ನಾಲ್ಕು ವಾರ** ಎಂಬ ಕೃತಿಯು ಅದರ ಶೀರ್ಷಿಕೆಯೇ ಹೇಳುವಂತೆ ಒಂದು ತಿಂಗಳ ಕಾಲಾವಧಿಯಲ್ಲಿ ರಷ್ಯಾ, ಆಸ್ಟ್ರಿಯಾ, ಜರ್ಮನಿ, ಇಂಗ್ಲೆಂಡ್-ಈ ದೇಶಗಳಲ್ಲಿ ಸುತ್ತಾಡಿ ಪಡೆದ ಅನುಭವಗಳ ಕಥನವಾಗಿದೆ. ಇದರ ಬಹುಭಾಗ ರಷ್ಯಾ ಪ್ರವಾಸಾನುಭವ ಆಕ್ರಮಿಸಿಕೊಂಡಿದೆ "ಜ್ಞಾನಾಭಿವೃದ್ಧಿಯ ದೃಷ್ಟಿಯಿಂದ, ಅನುಭವ ಸಂಪಾದನೆಯ ಕೋನದಿಂದ, ರಾಷ್ಟ್ರಪ್ರಗತಿಯ ನಿಮಿತ್ತದಿಂದ ಪ್ರವಾಸ ಅತ್ಯಗತ್ಯ. ನಮ್ಮ ಜನ ಪ್ರಪಂಚದ ಮುಂದುವರಿದ ರಾಷ್ಟ್ರಗಳಿಗೆ ಮೇಲಿಂದ ಮೇಲೆ ಹೋಗಬೇಕು. ಅಲ್ಲಿಯ ವಿದ್ಯಮಾನಗಳನ್ನು ಗ್ರಹಿಸಬೇಕು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಗಮನಿಸಬೇಕು, ಅಲ್ಲಿಯ ಪ್ರತಿಭಾವಂತ ತಜ್ಞರೊಡನೆ ವಿಚಾರ ವಿನಿಮಯ ಮಾಡಬೇಕು. ಸ್ವದೇಶಕ್ಕೆ ಹಿಂತಿರುಗಿದ ಮೇಲೆ ತಾವು ಕಲಿತದ್ದನ್ನು, ದೇಶದ ಆರೋಗ್ಯಕ್ಕೆ ಅನುಕೂಲವಾದದ್ದನ್ನು ಕಾರ್ಯರೂಪಕ್ಕೆ ತರಬೇಕು." ದೇ.ಜ.ಗೌ.ರವರ ಈ ಮಾತುಗಳು ಪ್ರವಾಸದ ಉದ್ದಿಶ್ಯವನ್ನು ಮಾತ್ರ ಹೇಳುತ್ತಿಲ್ಲ, ಪ್ರವಾಸಿಗರ ಕರ್ತವ್ಯವನ್ನೂ ನಿರ್ದೇಶಿಸುತ್ತದೆ. ಪ್ರವಾಸವನ್ನು ಶೈಕ್ಷಣಿಕವಾಗಿ ಸ್ವೀಕರಿಸುವ

ದೇ.ಜ.ಗೌ.ರವರಿಗೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ, ನಮ್ಮ ಸರಕಾರದಲ್ಲಿ ಕನ್ನಡ ಸರಿಯಾದ ಮನ್ನಣೆ ಪಡೆದಿಲ್ಲವೆಂಬ ಕೊರಗು. ತಾಯ್ನಾಡಿನಲ್ಲಿ ಮನ್ನಣೆಯಿದ್ದಿದ್ದರೆ ಹೊರನಾಡಿನಲ್ಲೂ ಅದಕ್ಕೆ ಪುರಸ್ಕಾರ ಪ್ರಾಪ್ತವಾಗುತ್ತಿತ್ತು. ರಷ್ಯಾದಲ್ಲಿ ಹಿಂದಿ, ಉರ್ದು, ತಮಿಳು, ಬಂಗಾಳಿ ಭಾಷೆ ಕಲಿಯಲು ಅವಕಾಶವಿದೆ. ಸಂಸ್ಕೃತ ಮತ್ತು ಪಂಜಾಬಿ ಭಾಷೆಗಳನ್ನು ದ್ವಿತೀಯ ಭಾಷೆಯ ಮಟ್ಟದಲ್ಲಿ ಓದುತ್ತಾರೆ. ಆದರೆ ಕನ್ನಡಕ್ಕೆ ಅಲ್ಲಿ ಕಲಿಯಲು ಅವಕಾಶವಿಲ್ಲ ಎನ್ನುವ ಕೊರಗು ಅವರದು. ಕ್ರೈಸ್ತಧರ್ಮದ ಪ್ರಚಾರ ಗುರುವಾಗಿ ಕನ್ನಡ ಸಾಹಿತ್ಯ ಸೇವೆಯನ್ನು ವಿಶೇಷವಾಗಿ ಮಾಡಿದ ಫರ್ಡಿನೆಂಡ್ ಕಿಟ್ಟೆಲ್‌ರವರ ಸಮಾಧಿದರ್ಶನ ಮಾಡಲು ಟುಬಿಂಗನ್‌ನಲ್ಲಿ ಅವರು ಪಟ್ಟ ಶ್ರಮ ದೇ.ಜ.ಗೌ.ರವರ ಕನ್ನಡಾಭಿಮಾನಕ್ಕೊಂದು ಉಜ್ವಲ ನಿದರ್ಶನ. ತಮ್ಮ ಸುತ್ತಾಟದ ಅವಧಿಯಲ್ಲಿ ಪಾಶ್ಚಾತ್ಯರು ತೋರಿದ ನಿಸ್ವಾರ್ಥ ಪ್ರೇಮದ ಅತಿಥ್ಯವನ್ನು ಸವಿದ (ರೆಕ್ಟಾರ್ ಬ್ಯಾಲಿಯವರ ಅತಿಥ್ಯವನ್ನು ಇಲ್ಲಿ ಸ್ಮರಿಸಬಹುದು) ದೇ.ಜ.ಗೌ. ಅದಕ್ಕಾಗಿ ಹೃದಯ ತುಂಬಿದ ಕೃತಜ್ಞತೆ ವ್ಯಕ್ತಪಡಿಸಿರುವರು.

ದೇ.ಜ.ಗೌ. ರಷ್ಯಾ ಪ್ರವಾಸದಲ್ಲಿ ಜನರ ಶಿಸ್ತು, ದೇಶಾಭಿಮಾನ, ಭಾಷಾಭಿಮಾನಗಳನ್ನು, ಕಲಾಪ್ರೇಮವನ್ನು ಕಂಡು ಸಂತೋಷಗೊಂಡಿರುವರು. ಆ ಸಂದರ್ಭದಲ್ಲೇ, ನಮ್ಮಲ್ಲಿ ಇವು ಇಲ್ಲದಿರುವುದರ ಬಗೆಗೆ ನಿಟ್ಟುಸಿರುಗರೆದಿರುವರು. ಅಲ್ಲಿನ ಜನರ ಪ್ರಾಮಾಣಿಕತೆ, ದುಡಿಮೆಯ ಬಗೆಗಿನ ಮನದಾಳದ ಪ್ರೀತಿ, ವೈಜ್ಞಾನಿಕ ಪ್ರಗತಿ, ಜೀವನಶ್ರದ್ಧೆ -ಇವನ್ನು ಗಮನಿಸುತ್ತಿದ್ದಂತೆಯೇ ಇವು ನಮ್ಮ ಜನರಲ್ಲಿ ಇಲ್ಲವಲ್ಲಾ ಎಂಬ ನಿರಾಶೆಯೂ ಅವರಿಗೆ ಉಂಟಾಗಿದೆ. ರಷ್ಯಾದ ಸಂಶೋಧಕ ವಿದ್ವಾಂಸರು ಸಂಶೋಧನೆಯಲ್ಲಿ ತೊಡಗಿಸುವ ಆಸಕ್ತಿ, ತೋರುವ ಪರಿಶ್ರಮ; ಅವರ ಆಳವಾದ ವ್ಯಾಸಂಗ; ಸಮರ್ಪಣಾಭಾವ; ಪ್ರಾಮಾಣಿಕತೆ; ಕಲಾಭಿಮಾನ; ಮೈದಣಿಯುವಂತೆ ದುಡಿಯುವ ಅವರ ಕಾಯಕನಿಷ್ಠೆ -ಇವುಗಳ ಬಗೆಗೆ ದೇ.ಜ.ಗೌ. ನೆನಪಿನಲ್ಲಿ ಉಳಿಯುವ ವಿವರಣೆ ನೀಡಿರುವರು.

ದೇ.ಜ.ಗೌ. ರವರ **ವಿದೇಶದಲ್ಲಿ ಮೂರು ವಾರ** ಎಂಬ ಕೃತಿಯು ಅದರ ಶೀರ್ಷಿಕೆಯೇ ಹೇಳುವಂತೆ ಒಂದು ತಿಂಗಳ ಕಾಲಾವಧಿಯಲ್ಲಿ ರಷ್ಯಾ, ಆಸ್ಟ್ರಿಯಾ, ಜರ್ಮನಿ -ಈ ದೇಶಗಳಲ್ಲಿ ಸುತ್ತಾಡಿ ಪಡೆದ ಅನುಭವಗಳ ಕಥನವಾಗಿದೆ. ಹಿಂದೆ ಇದೇ ಲೇಖಕರು **'ವಿದೇಶದಲ್ಲಿ ನಾಲ್ಕು ವಾರ'** ಎಂಬ ಪ್ರವಾಸ ಕಥನ ಬರೆದಿದ್ದರು. ಅಲ್ಲಿ ಇಂಗ್ಲೆಂಡ್ ದೇಶದ ಪ್ರವಾಸಾನುಭವವೂ ಸೇರ್ಪಡೆಯಾಗಿದ್ದಿತು. ಪ್ರಸ್ತುತ 'ವಿದೇಶದಲ್ಲಿ ಮೂರು ವಾರ' ಕೃತಿಯಲ್ಲಿ ಇಂಗ್ಲೆಂಡ್ ದೇಶದ ಪ್ರವಾಸಾನುಭವವನ್ನು ಬಿಡಲಾಗಿದೆ. ಈ ಕೃತಿಯ ಬಹುಭಾಗವನ್ನು ರಷ್ಯಾ ಪ್ರವಾಸಾನುಭವ ಆಕ್ರಮಿಸಿಕೊಂಡು ಬಿಟ್ಟಿದೆ. "ನನ್ನದು ಬಿರುಗಾಳಿ"ಯ ಪ್ರವಾಸವಾದದ್ದರಿಂದ, ನನಗೆ ರಷ್ಯನ್ ಭಾಷೆಯಾಗಲಿ

ಜರ್ಮನ್ ಭಾಷೆಯಾಗಲಿ ಬರುತ್ತಿಲ್ಲವಾದ್ದರಿಂದ ಜನಜೀವನದ ಸಂಪೂರ್ಣ ಪರಿಚಯ ನನಗೆ ದೊರೆಯಿತೆಂದು ಹೇಳುವಂತಿಲ್ಲ. ಆಯಾಯ ಜನತೆಯ ನಡುವೆ ನಾಲ್ಕಾರು ವರ್ಷ ಬಾಳಿ, ಅವರ ಭಾಷಾ ಸಾಹಿತ್ಯಗಳನ್ನು ಚೆನ್ನಾಗಿ ವ್ಯಾಸಂಗ ಮಾಡಿದಾಗ, ಅವರ ಸಮಾಜದಲ್ಲಿ ಏಕೀಭವಿಸಿದಾಗ ಮಾತ್ರ ಜನಜೀವನದ ಆಳವಾದ ಪರಿಚಯ ಸಾಧ್ಯವಾಗುತ್ತದೆ. ನನಗೆ ತಿಳಿದಷ್ಟನ್ನು ಮಾತ್ರ ನಾನು ಕಂಡಂತೆ ಮೂರು ರಾಷ್ಟ್ರಗಳ ಜನಜೀವನದ ಸ್ಥೂಲ ರೂಪರೇಷೆಗಳನ್ನು ಇಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ. ಈ ನನ್ನ ವಿವರಣೆಯಲ್ಲಿ ನನ್ನ ಪೂರ್ವಗ್ರಹದೃಷ್ಟಿ ಹಾಗೂ ಮನಸ್ಸಿನ ಓರೆಕೋರೆಗಳು ಪ್ರತಿಫಲಿತವಾಗಿದ್ದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ" ಎಂದು ಲೇಖಕರು ತಮ್ಮ ಇತಿಮಿತಿಯನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡಿರುವರು. ದೇ.ಜ.ಗೌ. ತಾವು ಪ್ರವಾಸ ಮಾಡಿದ ಸಮಯಲ್ಲಿಯೇ ಪ್ರವಾಸ ಕಥನದ ಬಹುಭಾಗವನ್ನು 'ದಿನಚರಿ'. ರೂಪದಲ್ಲಿ ಬರೆದಿರುವರು. ದೇ.ಜ.ಗೌ. ತಾವು ಹೋದೆಡೆಯಲ್ಲೆಲ್ಲಾ ವಿಶ್ವವಿದ್ಯಾನಿಲಯಗಳನ್ನು ಸಂದರ್ಶಿಸುವರು, ಶಿಕ್ಷಣ ವ್ಯವಸ್ಥೆಯ ಬಗೆಗೆ ಚರ್ಚಿಸುವರು. ಕನ್ನಡಕ್ಕೆ ತನ್ನ ನೆಲದಲ್ಲಿಯೇ ಮರ್ಯಾದೆಯಿಲ್ಲ, ಹೀಗಿರುವಾಗ ಬೇರೆಡೆ ಪುರಸ್ಕಾರ ಹೇಗೆ ದೊರೆತೀತು? ರಷ್ಯಾದಲ್ಲಿ ಹಿಂದಿ, ಉರ್ದು, ತಮಿಳು, ಬಂಗಾಳಿ ಭಾಷೆ ಕಲಿಯಲು ಅವಕಾಶವಿದೆ. ಸಂಸ್ಕೃತ ಮತ್ತು ಪಂಜಾಬಿ ಭಾಷೆಗಳನ್ನು ದ್ವಿತೀಯ ಭಾಷೆಯ ಮಟ್ಟದಲ್ಲಿ ವಿದ್ಯಾರ್ಥಿಗಳು ಓದುವರು. ಆದರೆ ಅಲ್ಲಿ ಕನ್ನಡಕ್ಕೆ ಅವಕಾಶವಿಲ್ಲವಲ್ಲಾ ಎನ್ನುವ ಕೊರಗು ಲೇಖಕರದು. ಫರ್ಡಿನೆಂಡ್ ಕಿಟ್ಟೆಲ್‌ರವರ ಸಮಾಧಿಯನ್ನು ಟುಬಿಂಗನ್‌ನಲ್ಲಿ ಹುಡುಕಲು ಅವರು ಪಟ್ಟ ಶ್ರಮ ಉಲ್ಲೇಖನಾರ್ಹವಾದುದು. ಲೇಖಕರು ತಮ್ಮ ಪ್ರವಾಸಕಥನದಲ್ಲಿ ಅನೇಕ ದಿನಬಳಕೆಯ ಇಂಗ್ಲೀಷ್ ಪದಗಳನ್ನು ಕನ್ನಡಕ್ಕೆ ತರುವಾಗ ತಮ್ಮ ವೈಶಿಷ್ಟ್ಯವನ್ನು ಮೆರೆದಿರುವರು. ಮೇಜು ನಡೆವಳಿ, ಮನೆಗಿರ, ಹುಡುಕಣೆ, ಹಿಂಚು (Late), ಹೆಗ್ಗಾರು (van), ಎತ್ತುಗ, ತಂತಿಲಿ ಯಂತ್ರ, ಮಾಣಿನಿ ಇತ್ಯಾದಿ ಪದಗಳು ಸ್ವತಂತ್ರವೆನ್ನುವಷ್ಟು ಸಲೀಸಾಗಿ ಪ್ರಯೋಗಗೊಂಡಿವೆ.

ಸೋವಿಯತ್ ದೇಶದ ಗೌರವಾನ್ವಿತ ಅತಿಥಿಯಾಗಿ ಎರಡು ವಾರಗಳ ಕಾಲ ಆ ದೇಶದ ಹಲವು ಭಾಗಗಳನ್ನು ಸಂದರ್ಶಿಸಿದ ನಮ್ಮ ಪ್ರಸಿದ್ಧ ಕಾದಂಬರಿಕಾರರಾದ ಬಸವರಾಜ ಕಟ್ಟೀಮನಿಯವರು ತಮ್ಮ ಪ್ರವಾಸಾನುಭವವನ್ನು **ನಾನು ಕಂಡ ರಶಿಯಾ** ಎಂಬ ಕಿರುಹೊತ್ತಗೆಯಲ್ಲಿ ಕೊಟ್ಟಿರುವರು. ಲೇಖಕರಿಗೆ ಕಾಲಾವಕಾಶದ ಮಿತಿಯಿಂದಾಗಿ ರಶಿಯನ್ ಫೆಡರೇಷನ್, ಬೈಲೋ ರಶಿಯಾ, ಉಕ್ರೇನ್-ಈ ಮೂರು ರಾಜ್ಯಗಳಲ್ಲಿ ಕೆಲವು ನಗರ ಹಾಗೂ ಗ್ರಾಮಗಳನ್ನು ಸಂದರ್ಶಿಸಲು ಮಾತ್ರ ಸಾಧ್ಯವಾಯಿತು. ಹೀಗಾಗಿ ಪ್ರವಾಸಕಥನದಲ್ಲಿ ಪ್ರೇಕ್ಷಣೀಯ ಸ್ಥಳಗಳ ವಿವರ ತಲೆ ಹಾಕುತ್ತದೆ. ಆ ಬೃಹದ್ ರಾಷ್ಟ್ರದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂಗತಿಗಳು ಅಲ್ಲಿ ಇಲ್ಲಿ

ಇಣುಕುತ್ತವೆಯಷ್ಟೆ. ಕಟ್ಟೀಮನಿಯವರು ಕೊಡುವ ವಿವರಗಳು ಈಗಾಗಲೇ ಎಲ್ಲರಿಗೂ ತಿಳಿದಂತಹವುಗಳು. ಅವನ್ನು ಆ ರಾಷ್ಟ್ರ ಸಮೃದ್ಧವಾಗಿ ತಂದಿರುವ ಕೈಪಿಡಿಯೊಂದರಿಂದ ಪಡೆಯಬಹುದು. ಕೃತಿಯ ಕೊನೆಯಲ್ಲಿ ಪ್ರವಾಸ ಮುಗಿಸಿದ ಮೇಲೆ ತಮ್ಮ ಅನುಭವಗಳ ಸಿಂಹಾವಲೋಕನ ಮಾಡಿರುವರು. ಇಲ್ಲಿಯೂ ವಿಶೇಷವೇನೂ ಕಂಡುಬರದೆ ನಿರಾಶೆಯಾಗುತ್ತದೆ.

೧೯೭೧-೭೨ನೇ ಸಾಲಿನ ಭಾರತ-ಸೋವಿಯತ್ ರಷ್ಯಾ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಅಂಗವಾಗಿ ಡಾ॥ ಜಿ.ಎಸ್. ಶಿವರುದ್ರಪ್ಪನವರು ತಮ್ಮ ಇಪ್ಪತ್ತೆರಡು ದಿವಸಗಳ ಮಾಸ್ಕೋ ಪ್ರವಾಸದ ಕಥನವನ್ನು ದಿನಚರಿಯ ರೂಪದಲ್ಲಿ ಕೊಟ್ಟಿರುವರು. "ಆ ಜನಜೀವನದಲ್ಲಿ ಬೆರೆಯುವ ಸಮಯಾವಕಾಶವಾಗಲೀ, ವ್ಯವಹರಿಸಲು ಭಾಷೆಯ ಸೌಲಭ್ಯವಾಗಲೀ ಇಲ್ಲದ ಆ ಪರಿಸರದಲ್ಲಿ ನಾನು ಕೇವಲ ಆಗಂತುಕನಾಗಿ, ಅವಸರದ ಸಂದರ್ಶಕನಾಗಿ ಸುತ್ತಾಡಿ ಕಣ್ಣಿಂದ ಪಡೆದ, ನನಗೆ ಪರಿಚಿತರಾದ ಒಬ್ಬಿಬ್ಬರೊಂದಿಗೆ ವ್ಯವಹರಿಸಿದ, ತರ್ಕಿಸಿದ, ನನ್ನ 'ಅನಿಸಿಕೆ'ಗಳನ್ನು 'ಅನುಭವಗಳು' ಎಂದು ಕೂಡ ಗಂಭೀರವಾಗಿ ಭಾವಿಸುವುದು ತಪ್ಪಾದೀತೇನೋ ಎಂಬ ಶಂಕೆ ನನಗೆ" ಎಂಬ ಲೇಖಕರ ಈ ಅಭಿಪ್ರಾಯವು ಅವರ ಪ್ರವಾಸಕಥನದ ಇತಿ-ಮಿತಿಗಳನ್ನು ಸೂಚಿಸುತ್ತಿರುವಂತಿದೆ.

**ಮಾಸ್ಕೋದಲ್ಲಿ ಇಪ್ಪತ್ತೆರಡು** ದಿನ ಎಂಬ ಅವರ ಪ್ರವಾಸ ಕಥನವು 'ಮುಚ್ಚುವ-ಬಿಚ್ಚುವ ಕಿಟಕಿ'ಯಿಂದ ಪ್ರಾರಂಭವಾಗುತ್ತದೆ. ರಷ್ಯನರು ತಮಗೆ ತಾವೇ ಹೇರಿಕೊಂಡ ನಿರ್ಬಂಧವನ್ನು, ಅವರ ಪರಿಸರದ ನಿಗೂಢತೆಯನ್ನು ಬಹುಶಃ ಇದು ಸಾಂಕೇತಿಸಬಹುದು. ವಿಮಾನ ನಿಲ್ದಾಣದಲ್ಲಿನ ನಿರ್ಭಾವವಾದ ನಿಶ್ಶಬ್ದ, ಕಟಕಟೆಯಲ್ಲಿ ಕೂತ ಗಂಟುಮುಖದ ಮಹಿಳಾ ಅಧಿಕಾರಿಣಿ, ರಾಷ್ಟ್ರದ ಗೌರವಾನ್ವಿತ ಅತಿಥಿಯಾಗಿದ್ದರೂ ಹಣ ಕೊಡದೆ ಊಟ ಕೊಡುವುದಿಲ್ಲವೆನ್ನುವ ರೆಸ್ಟೋರೆಂಟಿನ ಅನ್ನದಾತೆಯ ಲೆಕ್ಕಾಚಾರದ ನಿಲವು, ಮೇಲಿಂದ ಮೇಲೆ ನಡೆಸುವ ಪಾಸ್‌ಪೋರ್ಟ್ ತನಿಖೆ, ತೆರೆದ ಮನಸ್ಸಿಗೆ ಬೇಡಿ ತೊಡಿಸಿದ ತುಟಿಗಳು, ಏನೇ ಮಾತನಾಡಬೇಕಿದ್ದರೂ ಪರಕೀಯರೊಡನೆ ಜೋಕೆಯಿಂದ ತಪ್ಪಿ ಏನಾದರೂ ಹೇಳುವೆನೊ ಎಂಬ ಬೆದರಿಕೆಯೊಡನೆ ವ್ಯವಹರಿಸುವ ರೀತಿ -ಹೀಗೆ ಎಲ್ಲೆಲ್ಲಿಯೂ ಲೇಖಕರಿಗೆ ಕಟ್ಟುನಿಟ್ಟಿನ ಬಿಗಿ ವಾತಾವರಣದ ನೋಟ ಕಾಣಸಿಗುತ್ತದೆ ಹಾಗೂ ಅನುಭವವಾಗುತ್ತದೆ. ಲೇಖಕರು ಭೇಟಿಯಾದ ರಷ್ಯದ ಪ್ರಖ್ಯಾತಕವಿ ಸ್ಟುರ್ಟ್ಸ್ ರೊಸ್ತಸ್ಟವೆನ್‌ಸ್ಕಿ ಸಹಾ ಮುಕ್ತಮನಸ್ಸಿನಿಂದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲಾರ. ಸಮಸ್ಯೆಗಳೇ ಇಲ್ಲದ ದೇಶದ ಕವಿಗಳಿಂದ ಸಾಹಿತ್ಯ ಹೇಗೆ ತಾನೇ ಸೃಷ್ಟಿಯಾದೀತು? ಎಂದು ರಷ್ಯಾಕ್ಕೆ ಸಂಬಂಧಿಸಿದಂತೆ ಲೇಖಕರು ಪ್ರಶ್ನೆ ಮಾಡಿದರೆ, ಪ್ರಶ್ನೆಗೆ ಅಪ್ರಸನ್ನನಾಗಿ ಆತ ತೇಲಿಕೆಯ ಉತ್ತರ ಕೊಡುವನು.

ಇಂಡಿಯಾವೆಂದರೆ ಸಣ್ಣ ನಗರ ಇಲ್ಲವೆ ಒಂದು ಊರು ಎಂದು ನಂಬಿರುವ; ಬಸವಣ್ಣನವರು ಪ್ರತಿಪಾದಿಸಿದ ಧರ್ಮದ ಬಗೆಗೆ ಸಭೆಯೊಂದರಲ್ಲಿ ಪೇಪರ್ ಓದಿದರೆ ವೀರಶೈವ ಧರ್ಮದ ಮೇಲೆ ಮುಸ್ಲಿಂ ಇಲ್ಲವೆ ಕ್ರೈಸ್ತ ಧರ್ಮದ ಪ್ರಭಾವ ಏನಾದರೂ ಆಗಿರಬಹುದೆ? ಎಂದು ಮುಗ್ಧ ಪ್ರಶ್ನೆ ಕೇಳುವ; ದೇವರನ್ನು ನಂಬದಿದ್ದರೂ ಅದೃಷ್ಟವನ್ನು ನಂಬುವ; ಕೂತುಹಲಕ್ಕಾದರೂ ಇಂಡಿಯಾದ ಜನಜೀವನ ಹೇಗಿದೆ, ಅಲ್ಲಿನ ಸಂಸ್ಕೃತಿ ಎಂತಹದು ಎಂದು ಒಂಮ್ಮೊ ಪ್ರಶ್ನೆ ಕೇಳದ ಜನರನ್ನು ನೋಡಿ ಲೇಖಕರು ಬೆರಗಾಗಿರುವರು. ಅಲ್ಲಿನ ಜನರ ಲೆಕ್ಕಾಚಾರದ ನಿಲುವು, ಸದಾ ಇರುವ ಪಾಸ್‌ಪೋರ್ಟಿನ ನಿರ್ಬಂಧ, ಬಹುಪಾಲು ಧಾರ್ಮಿಕ ಸಂಸ್ಥೆಗಳು (ಚರ್ಚ್‌ಗಳು) ಮ್ಯೂಸಿಯಂ ಆಗಿರುವುದು, ದೇವರಿಲ್ಲದ ಕೊರತೆಯನ್ನು ಲೆನಿನ್ ತುಂಬುತ್ತಿರುವುದು, ಲೆನಿನ್ನನ ಶವಾಲಯ ರಷ್ಯನ್ನರಿಗೆ 'ಕಾಶಿ'ಯಾಗಿರುವುದು -ಇವೆಲ್ಲಾ ಲೇಖಕರಿಗೆ ಹತ್ತಿಕ್ಕಲಾರದ ಆಶ್ಚರ್ಯಗಳು.

ರಷ್ಯಾದ ವಿಶಾಲವಾದ ರಸ್ತೆಗಳು, ಶುಚಿಯಾದ ನಾಗರೀಕ ಜೀವನ, ತಿದ್ದಿ ತೀಡಿ ಬೆಳೆಸಿದ ಗಿಡಮರಗಳು, ಹಸಿರು ಮುಕ್ಕಳಿಸುವ ಸಸ್ಯರಾಶಿ, ಅರಳಿ ನಿಂತ ಬಗೆಬಗೆಯ ಪುಷ್ಪಗಳ ವಿಲಾಸ, ಸಾಂಸ್ಕೃತಿಕ ಬಳುವಳಿಗಳನ್ನು ರಕ್ಷಿಸಿ ಅವನ್ನು ಪ್ರದರ್ಶಿಸಿರುವ ರೀತಿ, ತಮ್ಮ ಕಲೆಗಳ ಬಗೆಗೆ ಅವರಿಗಿರುವ ತೀವ್ರವಾದ ಅಭಿಮಾನ, ಶ್ರೇಷ್ಠ ಮಟ್ಟದ ಕಲಾಪ್ರದರ್ಶನ, ರಾಷ್ಟ್ರಜೀವನ ಕೇಂದ್ರಶಕ್ತಿಗಳಾದ ಕವಿಗಳನ್ನು ಮಹಾ ನಾಯಕರನ್ನು ಗೌರವಿಸುವ ವಿಧಾನ-ಇವೆಲ್ಲವ ಲೇಖಕರಿಗೆ ತೃಪ್ತಿನೀಡಿರುವ, ಪ್ರಿಯವಾಗಿರುವ ಸಂಗತಿಗಳು.

ಐವತ್ತು ವರ್ಷಗಳು ಅವಿಶ್ರಾಂತವಾಗಿ ದುಡಿದು ತೋರಿರುವ ಅವರ ಅದ್ಭುತ ಸಾಧನೆಗಳ ಬಗೆಗೆ ಲೇಖಕರು ವಿಚಾರ ಮಾಡುತ್ತಾ, ಭಾರತ ಕಳೆದ ಇಪ್ಪತ್ತೈದು ವರ್ಷಗಳಿಂದ ಸಾಧಿಸಿದ್ದೇನು? ಎಂದು ಪ್ರಶ್ನಿಸಿರುವರು. "ನಮ್ಮ ದೇಶದಲ್ಲಿ ವಾಕ್ ಸ್ವಾತಂತ್ರ್ಯವಿದ್ದೂ ಎಷ್ಟು ಜನ ಪ್ರತಿಭಾವಂತರನ್ನು ಈ ಪರಿಸರ ಬೆಳೆಯಗೊಟ್ಟಿದೆ? ಕೆಲವು ತುಂಬ ಪ್ರತಿಭಾವಂತರಾದ ವಿಜ್ಞಾನಿಗಳು ಏಕೆ ಆತ್ಮಹತ್ಯೆ ಮಾಡಿಕೊಂಡರು? ಎಂದು ತಮಗೆ ತಾವೇ ಕೇಳಿಕೊಂಡಿರುವರು. ಇಪ್ಪತ್ತೈದು ವರ್ಷಗಳಿಂದ ನಾವು ಬೆಳೆದದ್ದು ಬರೀ ಭಾಷಣಗಳನ್ನು! ಎನ್ನುವಾಗಿನ ಲೇಖಕರ ವ್ಯಂಗ್ಯ ತೀಕ್ಷ್ಣವಾಗಿದೆ. ಬೃಹತ್ ರಷ್ಯಾವನ್ನು ನೋಡಿಯಾದ ಮೇಲೆ ಅವರ ಅಗಾಧವಾದ ಯಂತ್ರಶಕ್ತಿ, ಉತ್ಪಾದನಾ ಸಾಮರ್ಥ್ಯ, ಸಂಶೋಧನ ಪ್ರವೃತ್ತಿ, ದಕ್ಷತೆ -ಇವುಗಳನ್ನು ಮೆಚ್ಚಿಕೊಂಡ ಲೇಖಕರು "ಇವರಿಗೆ ಹೋಲಿಸಿದರೆ ನಾವು ಇನ್ನೂ ಎಲ್ಲಿದ್ದೇವೆ? ಈ ಜನಕ್ಕೆ ರಾಷ್ಟ್ರಪ್ರಜ್ಞೆ ಇದೆಯೆ? ನಾವೂ ತಲೆಯೆತ್ತಿ ನಿಲ್ಲುವುದು ಯಾವಾಗ? ಹಸಿವಿನಿಂದ ನರಳದ, ನಾಳೆಯೇನು ಎಂಬ ತಳಮಳದಲ್ಲಿ ಬದುಕನ್ನು ಒಂದು ಶಾಪವೆಂದು ಭಾವಿಸದ 'ಸುಖೀರಾಜ್ಯ' ಎಂದು ಬಂದೀತು..." ಎಂದು ಚಿಂತಿಸಿರುವರು.

ಜಿ.ಎಸ್.ಶಿವರುದ್ರಪ್ಪನವರು ಸುಪ್ರಸಿದ್ಧ ಕವಿಗಳು, ವಿಮರ್ಶಕರು, ಅವರ ಕವಿ ಮನದ ಭಾವಪೂರ್ಣ ಬರವಣಿಗೆ ಚಿಂತನಪರವಾದಾಗ ಗಂಭೀರವಾಗುತ್ತದೆ, ನಮ್ಮನ್ನು ಆಲೋಚಿಸುವಂತೆ ಪ್ರೇರೇಪಿಸುತ್ತದೆ. ಸುತ್ತಣ ಪ್ರಪಂಚವನ್ನು ತೆರೆದ ಮನಸ್ಸಿನಿಂದ ನೋಡುವಾಗ ಅವರ ನೋಟ ಸೂಕ್ಷ್ಮವಾಗಿ ಪರಿಭಾವಿಸುತ್ತದೆ. ಕವಿ ಚೇತನ ಅರಳಿದಾಗ ವರ್ಣನೆ ಭಾವಗಂಧಿಯಾಗುತ್ತದೆ. ಕಿಟಕಿಯ ಬದಿಯಲ್ಲಿ ಕುಳಿತು ಪ್ರಕೃತಿಯನ್ನು ಮೌನವಾಗಿ ಆರಾಧಿಸುವಾಗ ನೂರು ಭಾವಗಳು ಮನದ ಅಂಗಳದಲ್ಲಿ ರಂಗು ಚೆಲ್ಲುತ್ತವೆ. 'ಮೊಸರು ಮೋಡಗಳ ಹಿಂಡು ತೂಗಡಿಸುವ ನೋಟ'; 'ಗೆರೆ ಬರೆದ ದಾರಿಗಳು', 'ಉ ಊ ತಿದ್ದುವ ಹೊಳೆಗಳ ಗುರುತುಗಳು; 'ಮಕ್ಕಳಾಟಿಕೆಯ ಸಾಮಾನುಗಳಂತೆ ಅಲ್ಲಲ್ಲಿ ಊರುಗಳು ನಗರಗಳು' -ಈ ಬಗೆಯ ಶಬ್ದಚಿತ್ರಗಳು ಪ್ರವಾಸಕಥನದಲ್ಲಿ ಮಾತಿಗೆ ಜೀವ ತುಂಬುತ್ತದೆ. ಕವಿಮನದ ಭಾವಪೂರ್ಣ ಶೈಲಿ ಅರ್ಥಗರ್ಭಿತ ಮಾತುಗಳಲ್ಲಿ ತೊಯ್ದು ಬರುವುದರಿಂದ ಪ್ರವಾಸ ಕಥನವು ಮನಸ್ಸಿಗೆ ಮುದಕೊಡುತ್ತದೆ; ನಿಲ್ಲದೆ ಓದಿಸಿಕೊಂಡು ಹೋಗುತ್ತದೆ. ಉತ್ತಮ ಪ್ರವಾಸ ಕಥನಕ್ಕೆ ಈ ಕೃತಿ ಯೋಗ್ಯ ಮಾದರಿಯಾಗಿದೆ.

ಸೋವಿಯತ್-ಭಾರತ ಸಾಂಸ್ಕೃತಿಕ ಸಂಘದ ಅತಿಥಿಯಾಗಿ ಸೋವಿಯತ್ ದೇಶದ ಪ್ರವಾಸ ಕೈಗೊಂಡ ವಿ.ವಿ. ಉಪಾಧ್ಯಾಯ ಅವರು ತಮ್ಮ ಅನುಭವಗಳನ್ನು **ಲೆನಿನರ ನಾಡಿನಲ್ಲಿ** ಎಂಬ ಕೃತಿಯಲ್ಲಿ ದಾಖಲಿಸಿರುವರು. ಉಜ್ಬೆಕಿಸ್ತಾನದ ರಾಜಧಾನಿ ತಾಷ್ಕೆಂಟ್, ಬುಖಾರಾ, ಸಮರ ಕಂದ್, ಮಾಸ್ಕೊ, ಬೈಲೊ ರಷ್ಯಾ, ಖಾತಿನ್- ಇವೇ ಮೊದಲಾದ ಪ್ರೇಕ್ಷಣೀಯ ಸ್ಥಳಗಳ ಪರಿಚಯ, ಸೋವಿಯತ್ ನ್ಯಾಯಾಂಗದ ಸೂಕ್ಷ್ಮ ವಿಶ್ಲೇಷಣೆ, ಸಾಮೂಹಿಕ ಕೃಷಿ ಪದ್ಧತಿ, ಭಾರತ-ಸೋವಿಯತ್ ಸ್ನೇಹ ಸಂಬಂಧ -ಇವುಗಳು ಈ ಕೃತಿಯಲ್ಲಿ ವಿವರಣೆಗೊಂಡಿವೆ. ಸೋವಿಯತ್ ದೇಶದ "ಹೊಸ ಬಗೆಯ ಜೀವನ ದರ್ಶನದ ಕುರಿತು ತಪ್ಪು ನಂಬಿಕೆಗಳಿಂದ ಭಾರತದ ಕಥಾಕಥಿತ ಬುದ್ಧಿಜೀವಿಗಳ ಮನಸ್ಸು ಮಬ್ಬಾಗಿರುವ ಈ ಕಾಲಘಟ್ಟದಲ್ಲಿ ನನ್ನೀ ಅಳಿಲು ಸೇವೆಯಿಂದ ಆ ನರಮಾನವನ ನಾಡಿನ ಕುರಿತು ಕಿಂಚಿತ್ತಾದರೂ ಅರಿವು ಮೂಡಿದರೆ ನನ್ನ ಶ್ರಮ ಸಾರ್ಥಕ" ಎಂದು ಲೇಖಕರು ತಮ್ಮ ಕೃತಿಯ ಪ್ರಾರಂಭದ 'ಬಿನ್ನಹ'ದಲ್ಲಿ ಹೇಳಿಕೊಂಡಿರುವರು. ಇದು ಲೇಖಕರ ಕೃತಿರಚನೋದ್ದೇಶವನ್ನು ಸ್ಪಷ್ಟಪಡಿಸುತ್ತದೆ.

೧೯೬೬ರ ಏಪ್ರಿಲ್ ೨೬ರಂದು ಪ್ರಕೃತಿಯ ವಿಕೋಪದಿಂದ ನೆಲಸಮವಾದ ತಾಷ್ಕೆಂಟ್ ನಗರವು ಮತ್ತೆ ಏಳು ವರುಷಗಳಲ್ಲೇ ಮೇಲೆದ್ದ ಚಿತ್ರ ರೋಚಕವಾಗಿ ಬಂದಿದೆ. ಹದಿನಾರನೆಯ ಶತಮಾನದಲ್ಲಿ ಬುಖಾರಾದಲ್ಲಿ ಭಾರತೀಯರು ವಾಸಿಸುತ್ತಿದ್ದು ಅಲ್ಲಿ ತಮ್ಮ ಪರಂಪರಾಗತ ವೈಶಿಷ್ಟ್ಯಪೂರ್ಣ ಜೀವನಕ್ರಮಗಳನ್ನು ಪೂರ್ಣಸ್ವಾತಂತ್ರ್ಯ-

ದೊಂದಿಗೆ ಅನುಸರಿಸುತ್ತಿದ್ದರೆಂಬುದನ್ನು ಲೇಖಕರು ಸ್ವಾರಸ್ಯಪೂರ್ಣವಾಗಿ ವಿವರಿಸಿರುವರು. ಲೇಖಕರ ಖಾತಿನ್ ಗ್ರಾಮಸಂದರ್ಶನ ನೆನಪಿನಲ್ಲಿ ಉಳಿಯುತ್ತದೆ. "ಗ್ರಾಮ ಜೀವನದ ಯಾವ ಲಕ್ಷಣವೂ ಕಾಣಸಿಗದ ಹಳ್ಳಿಯದು. ನಾಝಿಗಳ ದಾಳಿಗೆ ತುತ್ತಾಗಿ, ಅಮಾನುಷ ಹಿಂಸೆಗೆ ಗುರಿಯಾಗಿ ಬೈಲೋ ರಷ್ಯಾದ ಜನಜೀವನದ ದುರಂತಕ್ಕೆ ಮೌನಸಾಕ್ಷಿಯಾಗಿ ಖಾತಿನ್ ಇಂದು ನಿಂತಿದೆ . ನಾಝಿಗಳ ಆಕ್ರಮಣಕ್ಕೆ ಮುನ್ನ ೨೬ ಮನೆಗಳಿದ್ದವು. ೧೫೦ ಮಂದಿ ನಿವಾಸಿಗಳಿದ್ದರು. ಶತ್ರು ಸೈನ್ಯದ ಚಿಕ್ಕ ತುಕಡಿಯೊಂದು ಆ ಗ್ರಾಮವನ್ನು ಪ್ರವೇಶಿಸಿ ಅಲ್ಲಿನ ನಿವಾಸಿಗಳನ್ನೆಲ್ಲ ಒಂದು ಮನೆಯಲ್ಲಿ ಬಲಾತ್ಕಾರದಿಂದ ಕೂಡಿಹಾಕಿ ಮನೆಗೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದರು. ಆತ್ಮರಕ್ಷಣೆಗೆ ಪ್ರಯತ್ನಿಸಿದವರನ್ನು ಶತ್ರುಗಳು ಗುಂಡಿಟ್ಟು ಕೊಂದರು. ಬೈಲೋ ರಷ್ಯಾದ ಅದ್ಭುತ ಪ್ರಗತಿಯನ್ನು ಕಣ್ಣಾರೆ ಕಂಡ ನಂತರ ಖಾತಿನ್ ದುಃಖಪೂರ್ಣ ನೋಟ ಮನಮೋಹಕ ಸ್ವಪ್ನದ ಮಧ್ಯೆ ಎಚ್ಚರಗೊಂಡಂತೆ ಪ್ರೇಕ್ಷಕರನ್ನು ಕನಸಿನ ಸ್ವರ್ಗದಿಂದ ವಾಸ್ತವಿಕತೆಯ ಧರೆಯತ್ತ ದೂಡುತ್ತಿದೆ..." ಎಂಬ ಲೇಖಕರ ವಿಷಾದ ಓದುಗರ ಮನ ತಟ್ಟುತ್ತದೆ.

ಸ್ವಾತಂತ್ರ್ಯಕ್ಕಾಗಿ ಧೀರ ಸೋವಿಯತ್ ಜನರು ಹೆಣ್ಣು ಗಂಡೆನ್ನದೆ ತಮ್ಮ ಬಲಿದಾನ ಮಾಡಿದ ಚಿತ್ರ ಸೊಗಸಾಗಿ ಮೂಡಿಬಂದಿವೆ. ವೇರಾ ಖೊರುಝಾಯಾ ಎಂಬ ಮಹಿಳೆ ತನ್ನ ಎರಡು ಚಿಕ್ಕ ಮಕ್ಕಳನ್ನು ಬಿಟ್ಟು ಹೊರಡುವ ಮೊದಲು ಬರೆದ ಪತ್ರ ಹೀಗಿವೆ: "ನಮ್ಮ ತಾಯ್ನಾಡಿಗಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ, ನನ್ನ ಬೈಲೊ ರಷ್ಯಾವನ್ನು ಸಲಹುವ ಸಲುವಾಗಿ ನಾನಿಂದು ಮಕ್ಕಳನ್ನು ಬಿಟ್ಟು ಹೋರಾಟಕ್ಕಿಳಿದಿದ್ದೇನೆ. ಓರ್ವ ಕಮ್ಯುನಿಸ್ಟಳಾಗಿರುವ ನನಗೆ ನನ್ನ ಮಕ್ಕಳ ಜವಾಬ್ದಾರಿ ಮಾತ್ರವಲ್ಲ, ಸಮಸ್ತ ವಿಶ್ವದ ಮಕ್ಕಳ ಜವಾಬ್ದಾರಿಯೂ ಇದೆ." ಸೋವಿಯತ್ ನ್ಯಾಯಾಂಗ ಹಾಗೂ ಸಾಮೂಹಿಕ ಕೃಷಿಯ ಬಗೆಗಿನ ವಿವರಣೆ ಚೆನ್ನಾಗಿ ಬಂದಿದೆ.

ಲೇಖಕರು ತಮ್ಮ ಪ್ರವಾಸ ಕಥನದುದ್ದಕ್ಕೂ ಸೋವಿಯತ್ ಜನರ ಮೈತ್ರಿ, ಸಹೋದರತ್ವ ಹಾಗೂ ಅವರು ನಿರ್ಮಿಸಿರುವ ಶೋಷಣಾರಹಿತ ಆದರ್ಶ ಸಮಾಜ ಇವನ್ನು ಬಾಯ್ತುಂಬ ಹೊಗಳಿರುವರು. ಕೃತಿಯ ಪ್ರತಿಯೊಂದು ಅಧ್ಯಾಯವೂ ಆಮಂತ್ರಿತ ದೇಶವನ್ನು ಹೊಗಳುವುದರಲ್ಲಿ ಪರ್ಯವಸಾನಗೊಳ್ಳುತ್ತದೆ. ಈ ಹೊಗಳಿಕೆಯ ಮಾತುಗಳನ್ನು ಗಮನಿಸಿದಾಗ ಲೇಖಕರ ಒಲವು ಯಾವ ಕಡೆಗಿದೆಯೆಂಬುದು ಓದುಗರಿಗೆ ವಿದಿತವಾಗುತ್ತದೆ. ತಾವು ಅತಿಥಿಯಾಗಿ ಭೇಟಿಕೊಟ್ಟ ರಷ್ಯಾದಲ್ಲಿ ಒಳಿತನ್ನೇ ಕಾಣಹೊರಡುವ ವಿ.ವಿ. ಉಪಾಧ್ಯಾಯ ಅವರಿಗೆ ಸತ್ಯದ ಇನ್ನೊಂದು ಮುಖ ಕಾಣಲೇ ಇಲ್ಲ. ಬಹುಶಃ ಅವರ ಸೋವಿಯತ್ ದೇಶದ ಬಗೆಗಿನ ಗೌರವ, ಪೂಜ್ಯಭಾವನೆ ಆ ಇನ್ನೊಂದು ಮುಖವನ್ನು ತೋರಗೊಡಲಿಲ್ಲವೊ ಏನೋ!

ಐದನೇ ಆಫ್ರೋ ಏಷಿಯನ್ ಬರಹಗಾರ ಸಮ್ಮೇಳನದಲ್ಲಿ ಭಾರತೀಯ ಪ್ರತಿನಿಧಿಗಳಲ್ಲಿ ಒಬ್ಬರಾಗಿ ಭಾಗವಹಿಸಿದ ಕನ್ನಡದ ಪ್ರಸಿದ್ಧ ನಗೆಸಾಹಿತಿ ಬೀಚಿಯವರು ರಷ್ಯಾದ ಪ್ರವಾಸ ಕೈಗೊಂಡು ತಮ್ಮ ಅನುಭವಗಳನ್ನು **'ದೇವರಿಲ್ಲದ ಗುಡಿ'** ಎಂಬ ಕೃತಿಯಲ್ಲಿ ನಿರೂಪಿಸಿರುವರು. ಬೀಚಿ ಅವರ ವಿಶಿಷ್ಟ ಲೇಖನ ಶೈಲಿಯ ಪರಿಚಯವಿರುವವರಿಗೆ ಈ ಪ್ರವಾಸಕಥನ ಖುಷಿ ಕೊಡುತ್ತದೆ. ಅವರ ಬರಹಗಳಲ್ಲಿ ಮಾಮೂಲಿಯಾಗಿರುವ ವ್ಯಂಗ್ಯಮಿಶ್ರವಾದ ತೆಳುಹಾಸ್ಯ ಇಲ್ಲೂ ಹಾಸು ಹೊಕ್ಕಾಗಿದೆ.

ಕೃತಿಯ ಉದ್ದಕ್ಕೂ ರಷ್ಯಾದ ಜನತೆ ಕಮ್ಯೂನಿಸ್ಟ್ ಆಡಳಿತದ ಭದ್ರ ಹಿಡಿತದಲ್ಲಿ ಪಡೆದ ಒಳಿತು ಕೆಡುಕಗಳ ಬಗೆಗೆ ಚರ್ಚಿಸುತ್ತಾ ಬೀಚಿಯವರು ರಷ್ಯನ್ನರ ಬದುಕನ್ನು ಭಾರತೀಯರ ಬದುಕಿನೊಂದಿಗೆ ತುಲನೆ ಮಾಡಲು ತೊಡಗುವರು. ಬಿಗಿಯಾದ ನಿರ್ಬಂಧದಲ್ಲೂ ರಷ್ಯನ್ನರ ಸಾಮಾಜಿಕ ಜೀವನ ಎಷ್ಟು ಸುಖಮಯವಾಗಿದೆ ಎಂಬುದು ಅವರ ಆಲೋಚನೆಯ ಕೇಂದ್ರಬಿಂದು. ರಷ್ಯನ್ನರ ಶ್ರಮಪೂರಿತ ದುಡಿಮೆ, ಋಜು ಜೀವನ, ಆಹಾರ-ವಿಹಾರ, ಕಲಾಪ್ರಿಯತೆ, ಪ್ರಾಮಾಣಿಕತೆ, ದೇಶಪ್ರೇಮ-ವರ್ಣ-ವರ್ಗ-ದೇವರಹಿತ ಸಮಾಜ -ಇವೆಲ್ಲ ಪ್ರಗತಿಪರ ಅಭಿವೃದ್ಧಿ ರಾಷ್ಟ್ರಗಳಿಗೆ ಹೇಗೆ ಆದರ್ಶವಾಗಿವೆ, ಅನುಕರಣೀಯವಾಗಿದೆ ಎಂಬುದನ್ನು ಅವರು ವಿಸ್ತಾರವಾಗಿ ಪ್ರಸ್ತಾಪಿಸಿರುವರು. ರಷ್ಯವನ್ನು ಭಾರತದೊಡನೆ ತುಲನೆ ಮಾಡುವಾಗಲೆಲ್ಲಾ ನಮ್ಮವರು ಬೀಚಿ ಅವರ ತೀಕ್ಷ್ಣವಾದ ಟೀಕೆಗೆ ಗುರಿಯಾಗುವರು. ಲೆನಿನ್ ಬಗೆಗೆ ರಷ್ಯನರಿಗೆ ಇರುವಷ್ಟು ತೀವ್ರವಾದ ಅಭಿಮಾನ ನಮ್ಮಲ್ಲಿ ನಮ್ಮ ರಾಷ್ಟ್ರಪಿತನ ಬಗೆಗೆ ಇಲ್ಲವಲ್ಲಾ ಎನ್ನುವ ಅವರ ಕಳಕಳಿ ವಿಚಾರ ಮಾಡುವಂತಹದು.

ರಷ್ಯಾ ಭೂಮಿಯ ಮೇಲಣ ಸ್ವರ್ಗವೆನ್ನುವ ಧಾಟಿಯಲ್ಲಿ ಬರವಣಿಗೆ ಸಾಗಿದ್ದರೂ ಕೆಲವಡೆ ರಷ್ಯನ್ನರೂ ಬೀಚಿ ಅವರ ಟೀಕೆಗೆ ಗುರಿಯಾಗಿರುವರು. ರಾಜಕಾರಣ, ಸಾಹಿತ್ಯ ಈ ವಿಷಯಗಳು ಚರ್ಚೆಗೆ ಬಂದಾಗಲೆಲ್ಲಾ ರಷ್ಯನರ ವರ್ತನೆ ತಕ್ಷಣ ಹೇಗೆ ಬದಲಾಗುತ್ತದೆಂಬುದನ್ನು, ಅವರು ಹೇಗೆ ಭೀತರಾಗುತ್ತಾರೆಂಬುದನ್ನು, ಅವರು ಹೇಗೆ ತುಟಿ ಬಿಗಿದುಕೊಳ್ಳುತ್ತಾರೆಂಬುದನ್ನು ಲೇಖಕರು ಗಮನಿಸಿರುವರು. ಬೀಚಿ ಅವರಿಗೆ ಬಹಳ ಪ್ರಿಯವಾದ ವಿಷಯ ಜಾತಿ, ದೇವತೆಗಳ ಖಂಡನೆ. ಆದ್ದರಿಂದಲೇ ಅವರು ಎದ್ದು ಕಾಣುವ ವಿವಾದಾಸ್ಪದ ವ್ಯಕ್ತಿ. ಈ ಕೃತಿಯಲ್ಲಿ ಅವರ ವಿಚಾರಧಾರೆಗಳ ಮರುಕಳಿಕೆಯನ್ನು ಕಾಣುತ್ತೇವೆ.

ಆಲ್ಮಾ ಆಟ್ಟದಲ್ಲಿ ನಡೆದ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಲು ಬಂದಿದ್ದ ಭಾರತದ ಪ್ರಸಿದ್ಧ ಉರ್ದು ಲೇಖಕ ಸಯ್ಯದ್ ಸಜ್ಜಾದ್ ಜಾಹಿರ್‌ರವರು ಹೃದಯ ಸ್ತಂಭನದಿಂದ ಹಠಾತ್ತನೆ ನಿಧನರಾದರು. ಅವರೊಡನೆ ಆತ್ಮೀಯವಾದ ಸ್ನೇಹ

ಸಂಬಂಧವನ್ನು ಹೊಂದಿದ್ದ ಬೀಚಿ ಅವರು ಗತಿಸಿದ ತಮ್ಮ ಮಿತ್ರರ ವ್ಯಕ್ತಿತ್ವದ ಕಿರು ಪರಿಚಯವನ್ನು ಈ ಕೃತಿಯಲ್ಲಿ ಕೊಟ್ಟಿರುವರು.

ಬೀಚಿ ಅವರದು ಆಕರ್ಷಕ ಬರವಣಿಗೆ. ನಗೆಯ ಹಿನ್ನೆಲೆಯಲ್ಲಿ ಗಂಭೀರವಾಗಿ ಆಲೋಚಿಸುವಂತೆ ಮಾಡಬಲ್ಲ ಬರವಣಿಗೆ ಅವರದು. ಬರವಣಿಗೆಯಲ್ಲಿ ಕಾಣುವ Witty ಗುಣ ಓದುಗರ ಮನಸ್ಸನ್ನು ಅರಳಿಸುತ್ತದೆ, ಹಾಗೆಯೇ ವಿಚಾರಪರರನ್ನಾಗಿ ಮಾಡುತ್ತದೆ. ಪ್ರವಾಸಕಥನಕ್ಕೆ ಇಂತಹ ವಿಶಿಷ್ಟ ಶೈಲಿ ಇದ್ದರೆ ಕಥೆ ಕಾದಂಬರಿಯಂತೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ನಮ್ಮಲ್ಲಿ ಆ ಬಗೆಯ ವಿಶಿಷ್ಟ ಶೈಲಿಯನ್ನು ಸೊಗಸಾಗಿ ಬಳಸಿದವರು ಇಬ್ಬರೇ ಇಬ್ಬರು-ಒಬ್ಬರು ರಾ.ಶಿ, ಮತ್ತೊಬ್ಬರು ಬೀಚಿ.

ಸೋವಿಯತ್ ನೋವೋಸ್ತಿ ಪ್ರೆಸ್ ಏಜೆನ್ಸಿಯವರ ಆಹ್ವಾನದ ಮೇಲೆ ಎರಡು ವಾರಗಳ ಅಧ್ಯಯನ ಪ್ರವಾಸವನ್ನು ಮಾಸ್ಕೊ, ಮೊಲ್ದಾವಿಯಾದ ರಾಜಧಾನಿ ಕಿಷಿನೇವ್ ಲೆನಿನ್‌ಗ್ರಾಡ್, ವೊಲ್ಗಾಗ್ರಾಡ್ -ಈ ಸ್ಥಳಗಳಲ್ಲಿ ಮಾಡಿದ ಪತ್ರಕರ್ತ ಹ.ವೆಂ. ನಾಗರಾಜರಾಯರು ತಮಗೊದಗಿದೆ ರೋಚಕ ಅನುಭವಗಳನ್ನು ವಿಸ್ತಾರವಾಗಿ **ನವ ರಷ್ಯಾದ ನೋಟ** ಎಂಬ ತಮ್ಮ ಪ್ರವಾಸ ಕಥನದಲ್ಲಿ ಕೊಟ್ಟಿರುವರು. ಸೋವಿಯತ್ ಜನರ ಸ್ನೇಹ ಸೌಹಾರ್ದ ಗುಣಗಳು, ಸಮೃದ್ಧವಾದ ಹಳೆಯ ನೆನಪುಗಳನ್ನು ಪರಿಣಾಮಕಾರಿಯಾಗಿ ತಿಳಿಯಪಡಿಸುವ ಮ್ಯೂಸಿಯಂಗಳು, ವಿದ್ಯಾಭ್ಯಾಸಕ್ರಮ, ತೀವ್ರವಾದ ಕಲಾಸಕ್ತಿ, ಅತಿಥಿ ಸತ್ಕಾರಗುಣ, ದೇಶಪ್ರೇಮ, ಶಾಂತಪ್ರಿಯತೆ- ಇವೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಲೇಖಕರು ತಿಳಿಯ ಹೇಳಿರುವರು. ಯುದ್ಧಗಳಿಂದಾಗಿ ಅನುಭವಿಸಿದ ಘೋರಯಾತನೆ, ಆ ಕಠೋರ ದಿನಗಳಲ್ಲಿಯೂ ಹೋರಾಡಿ ಬದುಕಿದ ಜನರ ಕೆಚ್ಚು; ಒಂದೊಂದು ಮನೆಯವರೂ ಯುದ್ಧಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡ ಅಪೂರ್ವ ತ್ಯಾಗ; ಹಲವೆಡೆ ಹೃದಯ ಮುಟ್ಟುವಂತೆ ಚಿತ್ರಿತವಾಗಿದೆ. ಯುದ್ಧಗಳಿಂದಾದ ಸಾವು ನೋವು, ಅನಿಷ್ಟಗಳನ್ನು, ಅನುಭವಿಸಿದ ಅವರು ಶಾಂತಿಗಾಗಿ ತಹತಹಿಸುತ್ತಿರುವುದರ ವಿವರ ಅಲ್ಲಲ್ಲಿ ಕಾಣಸಿಗುತ್ತದೆ. ರಷ್ಯನ್ನರ ಸಮಸ್ತ ಚೇತನವನ್ನು ಮಿಡಿದ ಲೆನಿನ್ನನ ಬಗೆಗೆ ಅವರ ಗೌರವಾದರ ಪರ್ವತಶೃಂಗ ಸದೃಶ್ಯವಾದುದು.

ನಾಝಿಗಳ ದಾಳಿಯಿಂದ ಲೆನಿನ್‌ಗ್ರಾಡನ್ನು ರಕ್ಷಿಸುತ್ತ ಆ ಪ್ರಯತ್ನದಲ್ಲೇ ಹತರಾದ ಸ್ತ್ರೀ ಪುರುಷರು ಮಕ್ಕಳು ಸೈನಿಕರಾದಿಯಾಗಿ ಎಲ್ಲರ ನೆನಪು ಹೊತ್ತ ರುದ್ರಭೂಮಿ ಪಿಸ್ಕರೆವಸ್ಕಾಯ. ಇಲ್ಲಿ ಸ್ಮಾರಕವೊಂದಿದೆ. ಅದನ್ನು ನೋಡ ನೋಡುತ್ತಲೇ ಅದರ ಚರಿತ್ರೆ ಲೇಖಕರ ಬಗೆಗಣ್ಣಿನಲ್ಲಿ ಮರುಕಳಿಸುತ್ತದೆ. ಭಾವನಾ ವಿವಶರಾಗುವ ಅವರು ನುಡಿಚಿತ್ರವೊಂದನ್ನು ಬಿಡಿಸುವರು:

"ನಂದದ ಜ್ವಾಲೆಯೊಂದು ಇಲ್ಲಿ ಉರಿಯುತ್ತಿದೆ. ಅದೋ ಆ ಅನತಿದೂರದಲ್ಲಿ ಆಕಾಶದೆತ್ತರದ ಮಹಿಳೆಯ ಪ್ರತಿಮೆಯೊಂದು ಕೈಯಲ್ಲಿ ಹರಿದೊಗದ ಶೃಂಖಲೆಗಳನ್ನು

ಹಿಡಿದು ದಿಟ್ಟವಾಗಿ ನಿಂತಿದೆ. ವಿಶಾಲ ಗಗನವೆ ಅವಳ ಹಿನ್ನೆಲೆ. ಕರುಣೆ, ಕಾಠಿಣ್ಯಗಳೆರಡೂ ಒಟ್ಟಿಗೆ ಬೆರೆತಂತಹ ಮುಖಭಾವ. ಅವಳ ದೃಷ್ಟಿಯಾದರೋ ದಿಗಂತವನ್ನೇ ಇರಿಯುತ್ತದೆ."

**ಈ ವಿಗ್ರಹ ಮಾತೃಭೂಮಿ ರಷ್ಯದ ಪ್ರತೀಕ:**

ತಾಯಿ ರಹಸ್ಯ ಮುಗಿಲೆತ್ತರ ಪ್ರತಿಮೆಯ ಪದತಲದಲ್ಲಿ ನಾನು ಸಣ್ಣ ಮಗುವಿನಂತೆ ನಿಂತಿದ್ದೇನೆ. ಅವಳ ಕಣ್ಣುಗಳಲ್ಲಿ ಸೂಸುತ್ತಿರುವ ಕರುಣೆ ವೇದನೆಗಳನ್ನು ಅನುಭವಿಸುತ್ತಿದ್ದೇನೆ. ೯೦೦ ದಿನಗಳ ಕಠೋರಯಾತನೆಯಿದು. ಆದರೆ ಅದೆಂತಹ ಚಿತ್ತ ಸ್ಥೈರ್ಯ.

ಈ ಪ್ರತಿಮೆಯ ಎದುರಿಗೆ ನಾನೊಂದು ಬಿಂದು. ಇವಳು ತಾಯಿ ರಷ್ಯದ ಪ್ರತಿಮೆ ಮಾತ್ರವೇ ಅಲ್ಲ; ಯುದ್ಧದಲ್ಲಿ ನೊಂದು ಬೆಂದ ಇಡೀ ಮಾನವತೆಯ ಸಾಕಾರಮೂರ್ತಿ. ಇಗೋ ಈ ತಾಯಿಗೆ ನನ್ನ ಕಾಣಿಕೆ: ನನಗರಿವಿಲ್ಲದೆಯೇ ಕಣ್ಣ ಹನಿಗಳು ಈ ಸಮಾಧಿಯ ಮೇಲೆ ಉರುಳುತ್ತಿವೆ. ಮಾನವ ಮಾನವನನ್ನು ಕೊಂದದ್ದಕ್ಕೆ ಈ ಸಾರ್ಥಕ.

ರಷ್ಯನರ ಅತಿಥಿ ಸೇವಾಗುಣವನ್ನು ಬಹಳವಾಗಿ ಮೆಚ್ಚಿಕೊಂಡಿರುವ ಲೇಖಕರು ಅದನ್ನು ಮೇಡಂ ರಿಮ್ಮಾ ಬಾರಾನ್ನಿಕೋವಾ ಅವರ ಆತಿಥ್ಯ ವರ್ಣನೆ ಮಾಡುವಾಗ ತಿಳಿಯಪಡಿಸಿರುವರು. ತಾವು ಭೇಟಿ ಮಾಡಿದ ಸ್ಥಳಗಳ ಬಗೆಗೆ ವಿವರವಾದ ವಿಷಯ ಸಂಗ್ರಹಣೆಯ ಜೊತೆಗೆ ಭಾವಪೂರ್ಣವಾದ ನಿರೂಪಣೆ ಮಾಡುವ ಲೇಖಕರ ಈ ಗುಣ ಕೃತಿಯುದ್ದಕ್ಕೂ ಕಂಡು ಬರುತ್ತದೆ. ಒಬ್ಬ ನಿಜವಾದ ಪ್ರವಾಸಿಗಿರಬೇಕಾದ ನೋಡಿ ತಿಳಿಯಬೇಕೆನ್ನುವ ಕುತೂಹಲ ಆಸಕ್ತಿಗಳು ವಿಶೇಷವಾಗಿ ಈ ಲೇಖಕರಲ್ಲಿದೆ. ಅವರಲ್ಲಿ ಪತ್ರಿಕೋದ್ಯಮಿಯ ವಸ್ತುನಿಷ್ಠ ಗುಣವೂ, ಕವಿಯ ರಸಾರ್ದ್ರ ಭಾವುಕ ಮನಸ್ಸೂ ಈಡು ಜೋಡಾಗಿದೆ.

ಪತ್ರಕರ್ತ ಹ.ವೆಂ. ನಾಗರಾಜರಾವ್‌ರವರು ಸೋವಿಯೆತ್ ರಷ್ಯಾದ ನೋವಸ್ತಿ ಪ್ರೆಸ್ ಏಜೆನ್ಸಿ (APN) ಅವರ ಆಹ್ವಾನದ ಮೇರೆಗೆ ಸೋವಿಯೆತ್ ರಷ್ಯಕ್ಕೆ ಭೇಟಿಕೊಟ್ಟು ಅಲ್ಲಿನ ಯಾಸ್ನಯ ಪಲ್ಯಾನ ಎಸ್ಟೇಟ್ ಮ್ಯೂಜಿಯಂ ಸಂದರ್ಶಿಸಿದ ಮಧುರ ಅನುಭವಗಳ ಕಥನ ಯಾಸ್ನಯ ಪಲ್ಯಾನ (=ಉಜ್ವಲ ಹುಲ್ಲುಗಾವಲು). ಲೆವ್ ತೊಲ್ ಸ್ತೋಯ್ ರಷ್ಯದ ಮಹಾನ್ ಲೇಖಕ. ಶ್ರೀಮಂತ ಮನೆತನದಿಂದ ಬಂದ ಅವರು ನಿತ್ಯವೂ ಊಟದ ಮೇಜಿನ ಮೇಲೆ ಬೆಳ್ಳಿ ಪಾತ್ರೆಗಳಲ್ಲಿ ಭವ್ಯ ಭೋಜನ ಸ್ವೀಕರಿಸುತ್ತಿದ್ದರು. ತಮ್ಮ ಅದ್ದೂರಿ ಹಾಗೂ ಆಡಂಬರ ಜೀವನಕ್ಕೆ ಹೇಸಿ, ಕಡೆಯಲ್ಲಿ ಮನೆಯನ್ನೇ ತ್ಯಜಿಸಿ ಎಲ್ಲಿಯೋ ದೂರದಲ್ಲಿ ಅನಾಥನಂತೆ ಅಲೆದು ಪ್ರಾಣತ್ಯಾಗ ಮಾಡಿದರು. ಲೆವ್ ತೊಲ್ ಸ್ತೋಯ್ ತಮ್ಮ ೮೨ ವರ್ಷಗಳ ಸುದೀರ್ಘ ಆಯುರ್ಮಾನದಲ್ಲಿ

ಸುಮಾರು ೫೫-೬೦ ರರ್ಷ ಕಳೆದದ್ದು 'ಯಾಸ್ನಯ ಪಲ್ಯಾನ'ದಲ್ಲಿ ತೊಲ್ ಸ್ತೋಯ್ ತಮ್ಮ ಬದುಕನ್ನು ಈ ಮನೆಯಲ್ಲಿ ಹೇಗೆ ಕಳೆಯುತ್ತಿದ್ದರು, ಹೇಗೆ ಅಧ್ಯಯನ ಮಾಡುತ್ತಿದ್ದರು, ಹೇಗೆ ತಮ್ಮ ಸೃಜನಶೀಲ ಬರವಣಿಗೆಯಲ್ಲಿ ತೊಡಗುತ್ತಿದ್ದರು, ಎಲ್ಲಿ ಮಲಗುತ್ತಿದ್ದರು. ಯಾವ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದರು, ಹೇಗೆ ಪಿಯಾನೋ ಬಾರಿಸುತ್ತಿದ್ದರು. ಹೇಗೆ ಕುರ್ಚಿಯಲ್ಲಿ ಕುಳಿತು ತನ್ಮಯರಾಗಿ ಸಂಗೀತ ಆಲಿಸುತ್ತಿದ್ದರು, ಯಾವ ಮೇಜುಗಳನ್ನು ಬಳಸುತ್ತಿದ್ದರು, ಹೇಗೆ ಕುದುರೆ ಸವಾರಿ, ಅವರ ಅಧ್ಯಯನ ಕೋಣೆ ಹೇಗೆ ಇದ್ದಿತು, ಹೇಗೆ ತಮ್ಮ ಬಳಿ ಬರುತ್ತಿದ್ದ ಅಸಂಖ್ಯ ಅತಿಥಿಗಳನ್ನು ಬರಮಾಡಿಕೊಳ್ಳುತ್ತಿದ್ದರು, ಅವರ ವಾಸದ ಮನೆಯ ಗೋಡೆಗಳನ್ನು ಅಪೂರ್ವ ಚಿತ್ರಗಳು ಹೇಗೆ ಅಲಂಕರಿಸಿದ್ದವು, ಅವರು ನಿತ್ಯಕರ್ಮಗಳು ಎಂತಿರುತ್ತಿದ್ದುವು -ಎಂಬೆಲ್ಲ ವಿವರಗಳನ್ನೂ ಜೀವಂತವಾಗಿ ಆ ಮಹಾಲೇಖಕ ಇದ್ದ ಕಾಲದಲ್ಲಿಯೇ ಇದ್ದಂತೆ ಕಣ್ಣಿಗೆ ಕಟ್ಟುವಂತೆ ಅಗಾಧ ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡು ಬರುತ್ತಿರುವ ಯಾಸ್ನಯ ಪಲ್ಯಾನ ಎಸ್ಟೇಟ್ ಮ್ಯೂಜಿಯಂ ದಾರ್ಶನಿಕ ಮಹಾಪುರುಷನೊಬ್ಬನಿಗೆ ಸಲ್ಲಬೇಕಾದ ಗೌರವವನ್ನು ತೋರಿಸಿದೆ.

ಲೆವ್ ನಿಕಲಾಯೆವಿಚ್ ತೊಲ್‌ಸ್ತೋಯ್‌ರವರ ದಿನನಿತ್ಯದ ಬದುಕು ಯಾಸ್ನಯ ಪಲ್ಯಾನದಲ್ಲಿ ಹೇಗೆ ತೊಡಗಿತ್ತು, ಅವರ ಕೃತಿ ನಿರ್ಮಿತಿಗೆ ಯಾವ ಹಿನ್ನೆಲೆ ಒದಗಿಸಿತ್ತು ಎನ್ನುವುದರ ಕಿರುನೋಟ ಈ ಅನುಭವ ಕಥನದ್ದು.

**ಸುಂದರ ಮಾಸ್ಕೊ, ಸುಂದರ** ರಶಿಯ ಎಚ್.ಎಸ್. ಹರಿಶಂಕರ್‌ರವರ ರಷ್ಯಾ ದೇಶದ ಪ್ರವಾಸ ಕಥನ. ೧೯೭೨-೭೩ರಲ್ಲಿ ಮಾಸ್ಕೋದಲ್ಲಿ ಸುಮಾರು ಒಂದು ವರ್ಷ ರಷ್ಯನ್ ಭಾಷೆ ಕಲಿಯಲು ೧೯೭೫ ಹಾಗೂ ೧೯೭೮ರಲ್ಲಿ ಮಾಸ್ಕೋದ ಪ್ಯಾಟ್ರಿಸ್ ಲುಮುಂಬಾ ಮೈತ್ರಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಅಂತರಾಷ್ಟ್ರೀಯ ರಷ್ಯನ್ ಭಾಷಾಭೋಧಕರ ಸಮ್ಮೇಳನಗಳಲ್ಲಿ ಭಾಗವಹಿಸಲು-ಹೀಗೆ ಒಟ್ಟಿಗೆ ಮೂರು ಸಾರಿ ರಷ್ಯಾಯಾತ್ರೆ ಕೈಗೊಂಡಿದ್ದ ಲೇಖಕರು ತಮ್ಮ ಪ್ರವಾಸಾನುಭವಗಳಿಗೆ ಆರೇಳು ವರ್ಷಗಳ ನಂತರ ಒಂದು ಮೂರ್ತರೂಪ ಕೊಟ್ಟಿರುವರು. ಸೋವಿಯತ್ ಜನರ ಶ್ರಮಪೂರ್ಣ ದುಡಿಮೆಯಿಂದಾದ ಮಹತ್ಸಾಧನೆಯ ಪರಿಚಯ ಈ ಪ್ರವಾಸ ಕಥನದಿಂದಾಗುತ್ತದೆ. ಜನರ ನೈರ್ಮಲ್ಯಪಾಲನೆ, ದುಬಾರಿಯಲ್ಲದ ಬಸ್, ರೈಲು, ಮೆಟ್ರೋ ಸಂಚಾರ, ಮಾಸ್ಕೊ ವಿಶ್ವವಿದ್ಯಾಲಯದಲ್ಲಿ ಶಿಸ್ತಿನ ವಿದ್ಯಾರ್ಥಿಜೀವನ, ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ಜನ ಬದ್ಧರಾಗಿದ್ದರೂ ಜೀವನವನ್ನು ಆಹ್ಲಾದಮಯವಾಗಿ ಕಳೆಯುವ ರೀತಿ, ಸಾಹಿತ್ಯ-ಕಲೆಗಳಿಗೆ ಕೊಡುವ ಪ್ರೋತ್ಸಾಹ ಇವು ಪ್ರವಾಸ ಕಥನದುದ್ದಕ್ಕೂ ಮೈತಾಳಿವೆ. ಸೋವಿಯತ್ ಜನಜೀವನವನ್ನು ಕುತೂಹಲದಿಂದ ನೋಡಿರುವುದರಿಂದಾಗಿಯೋ ಏನೋ ಆ ಭಾಗ ವಿಸ್ತೃತವಾಗಿ ಬಂದಿದೆ. ಈ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇಲ್ಲದಿರುವುದಕ್ಕೆ ಲೇಖಕರು ಕೊಡುವ ಕಾರಣಗಳಿವು:

೧. ಅಲ್ಲಿನ ರಾಜಕೀಯ ವ್ಯವಸ್ಥೆ.

೨. ಇತರ ರಾಷ್ಟ್ರಗಳಂತೆ ಈ ರಾಷ್ಟ್ರದಲ್ಲಿ ಜನರಿಗೆ ವಲಸೆಗೊಳ್ಳಲು ಅನುಮತಿ ನೀಡದಿರುವುದು.

೩. ವಿಶಾಲ ರಾಷ್ಟ್ರವಾಗಿದ್ದೂ ಅದಕ್ಕೆ ತಕ್ಕಂತೆ ಜನಸಂಖ್ಯಾ ಪ್ರಮಾಣವಿಲ್ಲದಿರುವುದು.

ಸೋವಿಯತ್ ದೇಶ ತನ್ನ ಪ್ರತಿಯೊಬ್ಬ ಪ್ರಜೆಗೂ ಕಡಿಮೆ ಬಾಡಿಗೆಯಲ್ಲಿ ಮನೆಯನ್ನು ಒದಗಿಸಿಕೊಟ್ಟಿದ್ದು ಕಟ್ಟಡದಲ್ಲಿರುವ ನೋಂದಣಿ ಪುಸ್ತಕದಿಂದಾಗಿ ಪೊಲೀಸ್ ಕೆ.ಜಿ.ಬಿ. (ರಷ್ಯಾದ ರಹಸ್ಯ ಪಡೆ) ಸಂಸ್ಥೆಗಳೂ ಸೋವಿಯತ್ ಒಕ್ಕೂಟದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಚಲನವಲನಗಳನ್ನು ಕಣ್ಣಿಟ್ಟು ನೋಡಬಲ್ಲವು. ವಾಸ್ತವವಾಗಿ ಈ ಎರಡು ಸಂಸ್ಥೆಗಳೂ ಜನರನ್ನು ಅವರ ಹುಟ್ಟಿನಿಂದ ಮರಣದವರೆವಿಗೂ ಹಿಂಬಾಲಿಸುತ್ತವೆ. ಈ ಕಟ್ಟುನಿಟ್ಟಿನ ಕ್ರಮದಿಂದಾಗಿ ಅನ್ಯದೇಶಗಳಿಂದ ವಲಸೆ ಬಂದು ಇಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಅಸ್ತವ್ಯಸ್ತಗೊಳಿಸುವುದು ತಪ್ಪಿದೆ. ಈ ರಾಜಕೀಯ ವ್ಯವಸ್ಥೆಯಿಂದಾಗಿ ಸಾಮಾಜಿಕ ಹೊಣೆಗಾರಿಕೆಯನ್ನು ಶ್ರದ್ಧೆಯಿಂದ ನಿರ್ವಹಿಸಿ ಜನರಿಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲು ಈ ದೇಶಕ್ಕೆ ಸಾಧ್ಯವಾಗಿದೆ. ಕಾನೂನು ಪರಿಪಾಲನೆ ಸಾಮಾಜಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿರುವುದರಿಂದ ಸೋವಿಯತ್ ಜನತೆ ಕಾನೂನನ್ನು ಗೌರವಿಸುತ್ತದೆ. ಕಾನೂನು ಬಿಗಿಯಾಗಿರುವುದರಿಂದ ಇಲ್ಲಿ ಕಳವು, ದರೋಡೆ, ಮಾನಭಂಗ, ಕೊಲೆ ಮೊದಲಾದ ಶಿಕ್ಷಾರ್ಹ ಅಪರಾಧಗಳು ತೀರಾ ಕಡಿಮೆ. ಜನರು ಸುಸಂಸ್ಕೃತ-ರಾಗಿರುವುದರಿಂದ ತಾವಿರುವ ಪರಿಸರ ಹಾಗೂ ವಾಸವಿರುವ ಮನೆಯನ್ನು ಆದಷ್ಟು ಅಚ್ಚುಕಟ್ಟಾಗಿ ಇಟ್ಟುಕೊಂಡಿರುವರು. ಕರ್ತವ್ಯನಿರತರಾಗಿರುವಾಗ ಶ್ರದ್ಧೆಯಿಂದ ದುಡಿಯುವರು. ಕರ್ತವ್ಯ ಮುಗಿದ ಮೇಲೆ ಉಲ್ಲಾಸದಿಂದಿರಲು ಚೆನ್ನಾಗಿ ಉಂಡು, ಕುಡಿದು ಸುಖಿಸುವರು. ದಿನಬಳಕೆಯ ವಸ್ತುಗಳ ಕೃತಕ ಅಭಾವ ಮಾರುಕಟ್ಟೆಗಳಲ್ಲಿ ನಿತ್ಯ ಕಾಣುವ ನೋಟ.

ವಿದೇಶೀ ಮಾಲುಗಳಿಗೆ ಅಲ್ಲಿ ಬೇಡಿಕೆ ಹೆಚ್ಚು. ಎಷ್ಟೇ ಬೆಲೆಯಿರಲಿ ಕೊಂಡುಕೊಳ್ಳುವರು. ಇವು ಲೇಖಕರು ಸೋವಿಯತ್ ಜನರ ಬದುಕಿನಲ್ಲಿ ಕಂಡ ವಿಶೇಷಾಂಶಗಳು. ಎಲ್ಲದಕ್ಕೂ ಗಂಟೆಗಟ್ಟಲೆ 'ಕ್ಯೂ' ನಿಲ್ಲುವ ರಷ್ಯನರ ಶಿಸ್ತು, ಸಂಯಮ ಲೇಖಕರಿಗೆ ಅಚ್ಚರಿಯನ್ನುಂಟು ಮಾಡಿದೆ. ರಷ್ಯನರ ಈ 'ಕ್ಯೂ' ಪದ್ಧತಿಯ ಬಗೆಗೆ ಚಾಲ್ತಿಯಲ್ಲಿರುವ ಒಂದು ಅಣಕದ ಕಥೆಯನ್ನು ಲೇಖಕರು ಹೇಳಿರುವರು: ನಪೋಲಿಯನ್ ಒಮ್ಮೆ ಚಳಿಗಾಲದಲ್ಲಿ ರಷ್ಯದ ಮೇಲೆ ದಂಡೆತ್ತಿ ಬಂದನಂತೆ. ಮಕ್ಕಳಾದಿಯಾಗಿ ದೊಡ್ಡವರೆಲ್ಲರೂ 'ಕ್ಯೂ'ನಲ್ಲಿ ನಿಂತಿರುವುದನ್ನು ಕಂಡು

ಕುತೂಹಲಗೊಂಡು ಕಾರಣ ವಿಚಾರಿಸಿದನಂತೆ. ಅವರೆಲ್ಲರೂ ಐಸ್‌ಕ್ರೀಂಗಾಗಿ ಕ್ಯೂ ನಿಂತಿರುವರೆಂಬುದು ಅವನಿಗೆ ತಿಳಿಯಿತು. 'ಹಾಗಾದರೆ ರಷ್ಯನರನ್ನು ಗೆಲ್ಲುವುದು ಅಸಾಧ್ಯ' ಎಂದು ಅವನು ತನ್ನವರೊಡನೆ ಉದ್ಗಾರ ತೆಗೆದನಂತೆ (ಪು.೪೭).

ರಷ್ಯನರ ಸಾಹಿತ್ಯಪ್ರೇಮ ಮೇಲ್ಮಟ್ಟದ್ದು. ತಮ್ಮ ಪ್ರಸಿದ್ಧ ಕವಿಯೊಬ್ಬನ ಕಾವ್ಯವಾಚನ ಕೇಳಲು ಟಿಕೆಟ್‌ಗಾಗಿ ಜನರು ಮುಂದಾಗಿಯೇ ಕ್ಯೂ ನಿಂತಿದ್ದರಂತೆ. ಅಷ್ಟೇ ಅಲ್ಲ, ಅವರು ತಮಗೆ ಟಿಕೆಟ್ ಸಿಗದೇ ಹೋದರೆ ತಮ್ಮ ಜೀವನದಲ್ಲಿ ಒಂದು ರಸಮಯ ಸನ್ನಿವೇಶವನ್ನು ಕಳೆದುಕೊಂಡಂತೆ ಎಂದು ಭಾವಿಸಿದ್ದರಂತೆ. ಕಾವ್ಯವಾಚನ ಕೇಳಲು ನೆರೆದಿದ್ದ ಜನರ ಸಂಖ್ಯೆಯೇ ನಾಲ್ಕೈದು ಸಾವಿರವಂತೆ! (ಪು. ೯೯).

ಪಟ್ಟಣದ ವಾತಾವರಣದ ಹಾಗೂ ಹಳ್ಳಿಯ ವಾತಾವರಣಗಳಲ್ಲಿ ನಡೆದ ಎರಡು ಸೋವಿಯತ್ ವಿವಾಹ ಕೂಟದಲ್ಲಿ ಭಾಗವಹಿಸಿದ ಲೇಖಕರು ಆ ಮದುವೆಗಳು ತೀರಾ ಸರಳವಾಗಿದ್ದು ಆತ್ಮೀಯವಾಗಿದ್ದುದನ್ನು ಮೆಚ್ಚಿರುವರು; ಮದುವೆಯ ನೆಪದಲ್ಲಿ ಆ ಜನ ಸಂತೃಪ್ತಿಯಾಗುವವರೆಗೆ ತಿಂದು ಕುಡಿದು ಸುಖಿಸುವ ಅವರ ಆ ಜೀವನ ವಿಧಾನವನ್ನು ಮೆಚ್ಚಿರುವರು. ಅಲ್ಲಿಯ ಜನರ ಸಂತೃಪ್ತಿಯ ಬದುಕನ್ನು ಕಂಡ ಲೇಖಕರು 'ಕಮ್ಯುನಿಸಂ ಕೇಡಲ್ಲ' ಎಂಬ ತೀರ್ಮಾನಕ್ಕೆ ಬರುವರು. ಪ್ರಜಾಪ್ರಭುತ್ವವಾದಿಗಳಾದ ನಮಗೂ ಕಮ್ಯುನಿಸಂ ವಾದಿಗಳಾದ ಅವರಿಗೂ ಇರುವ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿರುವರು (ಪು. ೭೮). 'ರಾಷ್ಟ್ರೀಯ ಹಬ್ಬ'ವೊಂದರ ಆಚರಣೆಯಲ್ಲಿ ಲೇಖಕರು ಭಾಗವಹಿಸಿದ್ದರ ವಿವರ ಸೊಗಸಾಗಿ ಬಂದಿದೆ. ಸೋವಿಯತ್ ಜನರ ರಾಷ್ಟ್ರಪ್ರೇಮ ಅಲ್ಲಿ ಚೆನ್ನಾಗಿ ಮೂಡಿದೆ. (ಪು. ೬೯-೭೫) ಬಲ್ಶೋಯ್ ರಂಗಮಂದಿರದಲ್ಲಿ ನಡೆದ 'ಹಂಸ ಸರೋವರ' ಬ್ಯಾಲೆಯನ್ನು ನೋಡಿದಾಗಿನ ಅನುಭವ ವಿಶಿಷ್ಟತರದ್ದಾಗಿದೆ. ರಷ್ಯನರ ಕಲಾಪ್ರೇಮಕ್ಕೆ ಇದು ಸಾಕ್ಷಿಯಂತಿದೆ. ಬರೋಡಿನೋ ಮ್ಯೂಸಿಯಂ, ಪುಷ್ಕಿನ್ ಮ್ಯೂಸಿಯಂ, ತ್ರ್ಯೆಚಿಕೋವ್‌ಸ್ಕಿ ಗ್ಯಾಲರಿ, ವದೆಎನ್‌ಕ ವಸ್ತು ಪ್ರದರ್ಶನಗಳನ್ನು ಕುರಿತಂತೆ ಸಂಕ್ಷಿಪ್ತ ವರದಿ ಕೃತಿಯಲ್ಲಿ ನಿರೂಪಿತವಾಗಿದೆ. (ಪು. ೮೮) ಉಷ್ಣಾಂಶ ಶೂನ್ಯವನ್ನು ತಲುಪಿದ್ದಾಗ ಆ ಕೊರೆಯುವ ಚಳಿಯಲ್ಲಿ ಮಾಸ್ಕೊ ನದಿಯನ್ನು ಈರ್ವರು ಸಾಹಸಿಗಳು ಈಜಿದ ವಿವರ ಓದುತ್ತಿದ್ದಂತೆ ಅಚ್ಚರಿಯಾಗಿ ನಮಗೆ ವಜ್ರಕಾಯರ ನೆನಪಾಗುತ್ತದೆ. ಪುಷ್ಕಿನ್ ಹಾಗೂ ಟಾಲ್‌ಸ್ಟಾಯ್ ಬಾಳಿ ಬದುಕಿದ ಹಳ್ಳಿಯ ಪರಿಸರಕ್ಕೆ (ವಿಹಾಯ್ ಲೋವ್‌ಸ್ಕಿ ಹಾಗೂ ಯಾಸ್ನಯ ಪಲ್ಯಾನ) ಲೇಖಕರು ಭೇಟಿಕೊಟ್ಟ ಪ್ರಸಂಗ (ಪು. ೧೨೩-೧೩೫) ನೆನಪಿನಲ್ಲಿ ಉಳಿಯುವಂತೆ ನಿರೂಪಣೆಗೊಂಡಿದೆ.

ಈ ಪ್ರವಾಸ ಕಥನದ ಕೊನೆಯಲ್ಲಿ ಬರುವ "ನಾನು ಈ ಒಕ್ಕೂಟವನ್ನು ನೋಡಿ ಬಂದ ಮೇಲೆ ಕಮ್ಯುನಿಸಂ ಬಗ್ಗೆ ವಿನಾಕಾರಣ ಭೀತಿಯಿದೆ ಎಂದು ನನಗನ್ನಿಸುತ್ತಿದೆ"

ಎಂಬ ಲೇಖಕರ ಪ್ರಾಮಾಣಿಕ ಅಭಿಪ್ರಾಯ ಮೆಚ್ಚುವಂತಹದು. "ಈ ಯಾತ್ರೆಗಳಿಂದ ನಿಜಕ್ಕೂ ರಷ್ಯನರ ಬಗ್ಗೆ ನನಗಿದ್ದ ಪೂರ್ವಾಗ್ರಹ ಹೊರಟು ಹೋಗಿದೆ" ಎಂಬ ಲೇಖಕರ ಅಭಿಪ್ರಾಯ ಈ ಪುಸ್ತಕ ಓದಿದ ಮೇಲೆ ನಮ್ಮದೂ ಆಗುತ್ತದೆ. ವಿಮರ್ಶಾತ್ಮಕವಾದ ಈ ಪ್ರವಾಸ ಕಥನ ಪ್ರಬುದ್ಧವಾಗಿದೆ, ಅನುಭವ ಸಂಪನ್ನವಾಗಿದೆ.

ಎನ್.ಕೆ. ಉಪಾಧ್ಯಾಯ ಅವರ **ದೇವರ ಗುಡಿ** ರಷ್ಯಾ ದೇಶದ ಕಥನ. ಆರು ವಾರಗಳ ಕಾಲ ಸೋವಿಯತ್ ದೇಶವನ್ನು ಸುತ್ತಾಡಿದ ಅನುಭವಗಳ ಕಥನವಿದು. ಅಲ್ಲಿನ ವೈದ್ಯಕೀಯ ವ್ಯವಸ್ಥೆ, ಉಚಿತ ಶಿಕ್ಷಣ, ಕುಟುಂಬ ಜೀವನ, ನಿರುದ್ಯೋಗ ಸಮಸ್ಯೆ, ಕಾರ್ಮಿಕ ಸಂಘಗಳು, ಧರ್ಮ, ಸ್ವಂತ ಆಸ್ತಿಯ ಪ್ರಶ್ನೆ, ನಾಗರಿಕ ಸ್ವಾತಂತ್ರ್ಯ, ಕೈಗಾರಿಕಾಭಿವೃದ್ಧಿ, ಹಳ್ಳಿ-ಪಟ್ಟಣಗಳು ಹೀಗೆ ವಿಷಯಗಳು ಚರ್ಚಿತವಾಗಿದೆ.

ಪಾಟೀಲ ಪುಟ್ಟಪ್ಪನವರ **ಸೋವಿಯತ್ ದೇಶ ಕಂಡೆ** ಸೋವಿಯತ್ ಸರಕಾರದ ಆಮಂತ್ರಣದ ಮೇರೆಗೆ ಅಲ್ಲಿಗೆ ಹೋಗಿ ಬಂದ ಅನುಭವದ ಕಥನ. ಯಾವ ಪೂರ್ವನಿಶ್ಚಿತ ಧೋರಣೆಗಳೂ ಇಲ್ಲದೆ 'ತೆರೆದ ಕಣ್ಣಿನಿಂದಲೇ ಸೋವಿಯತ್ ದೇಶಕ್ಕೆ ಹೊರಟೆ' ಎಂದು ಲೇಖಕರು ಹೇಳಿಕೊಂಡಿರುವರು. ಮಾರ್ಗದರ್ಶಿ ಶಿರ್ಗಿಯ ಮೂಲಕ 'ನನ್ನ ಸಂಪರ್ಕಕ್ಕೆ ಬಂದ ಜೀವನದ ವಿವಿಧ ವೃತ್ತಿಗಳಿಗೆ ಸೇರಿದ ಜನರಿಂದ, ಆ ದೇಶದ ಬಗ್ಗೆ ಅಲ್ಲಿಯ ಜನಜೀವನದ ವಿವಿಧ ವೃತ್ತಿಗಳಿಗೆ ಸೇರಿದ ಜನರಿಂದ, ಆ ದೇಶದ ಬಗ್ಗೆ ಅಲ್ಲಿಯ ಜನಜೀವನದ ಬಗ್ಗೆ ಬಹಳಷ್ಟು ತಿಳಿದುಕೊಂಡೆ' ಎಂದೂ ಅವರು ಹೇಳುವರು. ಏಕಾಕಿ ಪ್ರವಾಸಿಯಾಗಿ ಆ ದೇಶವನ್ನು ನೋಡುವ ಅವಕಾಶ ಅವರಿಗೆ ಲಭ್ಯವಾದುದರಿಂದ ಆ ದೇಶವನ್ನು ಜನರನ್ನು ಬಹಳಷ್ಟು ತಿಳಿಯಲು ಸಾಧ್ಯವಾಯಿತು. ಕಮ್ಯುನಿಸ್ಟ್ ರಾಜ್ಯವಾದ ಸೋವಿಯತ್ ದೇಶದಲ್ಲಿ ನಿರ್ಬಂಧಗಳು ಹೆಚ್ಚು ಎನ್ನುವ ವಾದವನ್ನು ಲೇಖಕರು ಒಪ್ಪದೆ 'ಆ ದೇಶವು ಮುಚ್ಚಿರಿಸಿದ ಪುಸ್ತಕ ಎನ್ನುವ ಭಾವನೆ ನನಗೆ ಒಂದು ಕ್ಷಣಮಾತ್ರವೂ ಬರಲಿಲ್ಲ. ನಾನು ಯಾರನ್ನೇ ಭೇಟಿಯಾದರೂ ಅವರು ನನ್ನೊಂದಿಗೆ ಮುಕ್ತ ಮನಸ್ಸಿನಿಂದ ಚರ್ಚಿಸುತ್ತಿದ್ದರು. ಆ ದೇಶದಲ್ಲಿ ನಾನು ಆಡಳಿತ ನಿರ್ವಹಿಸುವ ಜನರೊಂದಿಗೆ, ವಿಶ್ವವಿದ್ಯಾನಿಲಯದ ಕುಲಪತಿಯವರೊಂದಿಗೆ, ಪತ್ರಿಕಾ ಸಂಪಾದಕರೊಂದಿಗೆ, ಕೃಷಿ ಅಧಿಕಾರಿಗಳೊಂದಿಗೆ, ಸಣ್ಣ ದೊಡ್ಡ ಶಿಕ್ಷಕರೊಂದಿಗೆ, ಕಾರ್ಮಿಕ ವರ್ಗದೊಂದಿಗೆ ಹೀಗೆ ಅನೇಕ ವೃತ್ತಿಗಳಲ್ಲಿ ತೊಡಗಿದ ಜನರೊಡನೆ ನಾನು ಮಾತುಕತೆ ಆಡಿದೆ" ಎನ್ನುವರು. ಇದು ಬೇರೆಯವರ ಅನುಭವಗಳಿಗೆ ವ್ಯತಿರಿಕ್ತವಾಗಿರುವಂತೆ ತೋರುತ್ತದೆ. ಆ ದೇಶದ ಜನರ ಪ್ರಾಮಾಣಿಕತೆ, ಉತ್ಕಟ ದೇಶಾಭಿಮಾನ ನಮ್ಮ ಜನರಲ್ಲೂ ಏಕೆ ಮೂಡಬಾರದು ಎಂಬ ನೋವು ಲೇಖಕರ ಪಾಲಿನದು. ಆ ದೇಶದ ಸಾಮಾಜಿಕ ಜೀವನದಲ್ಲಿ ಕಾಣುವ ಸಮಾನತೆ, ಶಿಸ್ತು,

ಶಾಂತಿ, ಸಮಾಧಾನ, ದೇಶಪ್ರೇಮ -ಇವನ್ನೆಲ್ಲ ದಾಖಲಿಸುವಾಗ ಲೇಖಕರು ತಮ್ಮ ಅನುಭವಗಳನ್ನು ಮನಬಿಚ್ಚಿ ಹೇಳಿರುವರು. ಪಾಪು ಅವರ ಗದ್ಯ ಶೈಲಿ ಸರಳವಾದುದು, ಆದರೆ ಪರಿಣಾಮಕಾರಿಯಾದುದು. ಆ ದೇಶದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂಗತಿಗಳನ್ನು ಅರ್ಥೈಸಿಕೊಳ್ಳಲು ನಮಗೆ ಪಾಪು ಅವರ ಈ ಪ್ರವಾಸ ಕಥನ ನಿಶ್ಚಯವಾಗಿಯೂ ನೆರವಾಗುತ್ತದೆ ಎಂದು ಹೇಳಲಾಗದಿದ್ದರೂ ಸ್ವಲ್ಪ ಮಟ್ಟಿನ ಸಹಾಯವನ್ನಾದರೂ ಮಾಡುತ್ತದೆನ್ನಬಹುದು.

**ಚೀಣಾ:**

ಪ್ರೊ. ಹೆಚ್.ಆರ್. ದಾಸೇಗೌಡರು ೧೯೮೫ರಲ್ಲಿ ಚೀಣಾಕ್ಕೆ ಕರ್ನಾಟಕದಿಂದ ಎಂಟು ಜನರ ನಿಯೋಗವೊಂದನ್ನು ಭಾರತ-ಚೀಣಾ ಸಾಂಸ್ಕೃತಿಕ ಸಂಘದವರ ಆಹ್ವಾನದ ಮೇರೆಗೆ ಕರೆದೊಯ್ದರು. ಈ ನಿಯೋಗದ ನಾಯಕರಾಗಿ ಆ ದೇಶದಲ್ಲಿ ಪ್ರವಾಸ ಕೈಗೊಂಡದ್ದು ಎರಡು ವಾರಗಳು ಮಾತ್ರ. ತಮ್ಮ ಪ್ರವಾಸದಲ್ಲಿ ಒದಗಿ ಬಂದ ಅನುಭವಗಳನ್ನು ಅವರು **ಸಾಂಗ್ ಸೇನ್ ತುಂಗ್ ನೆಲದಲ್ಲಿ** ಎಂಬ ಪ್ರವಾಸ ಕಥನದಲ್ಲಿ ನಿರೂಪಿಸಿರುವರು. 'ಚೀಣಾ' ನನ್ನ ತೀವ್ರ ಕುತೂಹಲ ಹಾಗೂ ಆಸಕ್ತಿಯನ್ನು ಕೆರಳಿಸುವ ದೇಶ ಎಂದು ಹೇಳಿಕೊಂಡಿರುವ ಲೇಖಕರು ಅದನ್ನು ಸಾಂಸ್ಕೃತಿಕ ಭದ್ರತೆಯುಳ್ಳ ರಾಷ್ಟ್ರವೆಂದು ಕರೆದಿರುವರು.

ಲೇಖಕರು ಪ್ರಾರಂಭದಲ್ಲಿ ಚೀಣಾದ ಈಗಿನ ಪ್ರಗತಿಯನ್ನು ಅದರ ಹಿಂದಿನ ಐತಿಹಾಸಿಕ ಹಿನ್ನೆಲೆಯಲ್ಲಿ ಪರಿಚಯ ಮಾಡಿಕೊಟ್ಟಿರುವರು. ಇಲ್ಲಿ ಸಂಭಾಷಣಾ ತಂತ್ರವನ್ನು ಬಳಸಲಾಗಿದೆ. ತಮ್ಮ ಮಿತ್ರ ಕಮಲೇಶ್‌ರವರ ಜೊತೆ ಲೇಖಕರು ನಡೆಸುವ ಸಂವಾದದ ಮೂಲಕ ಚೀಣಾದ ಐತಿಹಾಸಿಕ ಹಿನ್ನೆಲೆಯ ವಿವರಗಳು ತೆರೆದುಕೊಳ್ಳುತ್ತವೆ. ಹಾಗೆಯೇ, ಚೀಣಾದಲ್ಲಿನ ಕಮ್ಯುನಿಸ್ಟ್ ಸಿದ್ಧಾಂತಕ್ಕೂ ಮೂಲದ ಮಾರ್ಕ್ಸ್ ಸಿದ್ಧಾಂತಕ್ಕೂ ಹೆಚ್ಚಿನ ವ್ಯತ್ಯಾಸಗಳಿರುವುದನ್ನೂ, ಕಮ್ಯುನಿಸ್ಟ್ ಸಿದ್ಧಾಂತವನ್ನು ಚೀಣಾದ ಸರ್ವಾಂಗೀಣ ಪ್ರಗತಿಗೆ ಬಳಸಿಕೊಂಡು ದೇಶದ ಬಡತನ, ಅನಕ್ಷರತೆ, ಅನಾರೋಗ್ಯವನ್ನು ತೊಡೆದ ಹಾಕಲು ಉಗ್ರವಾದ ಹೋರಾಟ ನಡೆಸಿದ ಮಾವೋ ಅವರ ಸಾಹಸವನ್ನೂ ಲೇಖಕರು ತಮ್ಮ ಮಿತ್ರರಾದ ಭಾಸ್ಕರ್‌ರವರ ಜೊತೆ ನಡೆಸುವ ಸಂಭಾಷಣೆಯ ಮೂಲಕ ತಿಳಿಯಪಡಿಸುವರು. ಇದರಿಂದ ಚೀಣಾದ ಬಗೆಗಿನ ನಮ್ಮ ತಿಳುವಳಿಕೆ ಹೆಚ್ಚುತ್ತದೆಯಾದರೂ ನಿರೂಪಣೆಗೆ ಬಳಸಿಕೊಳ್ಳಲಾಗಿರುವ ಸಂಭಾಷಣಾ ತಂತ್ರ ಕೃತಕವೆನ್ನಿಸುತ್ತದೆ.

ಚೀಣಾ ದೇಶದವರ ಆರೋಗ್ಯದ ಗುಟ್ಟು ಅವರು ಬೆಳಗಿನ ಐದು ಗಂಟೆಗೆ ಎದ್ದು ತಮ್ಮ ಮನೆಯ ಕೈದೋಟ, ಮುಂಗಟ್ಟು ಮತ್ತು ಸುತ್ತಮುತ್ತಲಿನ

ಸಾರ್ವತ್ರಿಕ ಉದ್ಯಾನವನಗಳಲ್ಲಿ ಮಾಡುವ ವ್ಯಾಯಾಮದಲ್ಲಿರುವುದನ್ನು ಲೇಖಕರು ಕಂಡುಕೊಳ್ಳುವರು. ಯೂರಲ್ ಪ್ಲೈನ್ ಪರ್ವತ ಶ್ರೇಣಿಯನ್ನು ತಪ್ಪಿ ಹಿಡಿದ ದೊಡ್ಡ ಗೋಡೆಯ ಸುತ್ತಮುತ್ತ ಶಿಸ್ತಿನಿಂದ ಮರ ಗಿಡಗಳನ್ನು ಬೆಳೆಸಿರುವುದನ್ನು ನೋಡಿದ ಲೇಖಕರು ನಮ್ಮಲ್ಲಿ ಅರಣ್ಯ ಬೆಳೆಸುವ ಹಾಗ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಾಗಿರುವುದು, ನಮ್ಮ ಅರಣ್ಯಯೋಜನೆಯಲ್ಲಿ ನಾವು ನೀಲಗಿರಿ, ಸರ್ವೆ ಹಾಗೂ ಬಿದಿರುಗಳನ್ನು ಬೆಳೆಸುವುದು ಅವರಲ್ಲೂ ಬಂಡವಾಳಶಾಹಿಗಳ ಪ್ರಯೋಜನಕ್ಕಾಗಿಯೇ ಎಂದು ವ್ಯಂಗ್ಯವಾಗಿ ಹೇಳುವರು (ಪು. ೩೯).

ಶಾಪಿಂಗೆಂದು ಬಂದ ಚೀಣೀ ದಂಪತಿಗಳ ಜೊತೆ ಸಂಭಾಷಿಸುವಾಗ ಲೇಖಕರು "ಇಲ್ಲಿ ಮದುವೆಯ ವಯಸ್ಸೆಷ್ಟು?" ಎಂದು ಪ್ರಶ್ನಿಸುವರು. "ಹೆಂಗಸಿಗೆ ೨೫ ವರ್ಷ ಮತ್ತು ಗಂಡಸಿಗೆ ೨೭ ವರ್ಷ" ಎಂದು ಉತ್ತರ ಬರುವುದು. "ನಿಮ್ಮ ಮಗು ಏನಾಗಬೇಕೆಂದು ನಿಮ್ಮ ಇಚ್ಛೆ?" ಈ ಪ್ರಶ್ನೆಗೆ ಅವರಿಂದ ಬಂದ ಉತ್ತರ: "ನಮ್ಮ ಮಗು ಏನಾಗಬೇಕೆಂಬುದನ್ನು ದೇಶ ನಿರ್ಧರಿಸುತ್ತದೆ. ತನಗೆ ಬೇಕಾದ ರೀತಿಯಲ್ಲಿ ಈ ಮಗುವನ್ನು ರೂಪಿಸುವ ಹೊಣೆ ದೇಶದ್ದು. ಮಕ್ಕಳ ಪೋಷಣೆ ಹಾಗೂ ರಕ್ಷಣೆ ಕುಟುಂಬಕ್ಕಿಂತ ದೇಶಕ್ಕೆ ಸೇರಿದ್ದು." ಇವುಗಳ ಮೂಲಕ ಆ ದೇಶದ ಸಾಮಾಜಿಕ ಜೀವನವಿಧಾನ ತಿಳಿಯಬಹುದೆನ್ನುವುದರಲ್ಲಿ ಅರ್ಥವಿಲ್ಲ.

ಚೀಣಾದಲ್ಲಿನ ಶಿಕ್ಷಣ ವ್ಯವಸ್ಥೆ, ವ್ಯವಸಾಯ ಕ್ರಮ, ವೈದ್ಯಕೀಯ ಸೇವೆ, ಉದ್ಯೋಗ ನೀತಿ, ದೇವರು ಹಾಗೂ ಧರ್ಮವನ್ನು ಷೋಕೇಸ್‌ನಲ್ಲಿಟ್ಟಿರುವುದು, ಪ್ರಾಮಾಣಿಕತೆ, ದಕ್ಷ ಆಡಳಿತ -ಇವುಗಳೆಲ್ಲದರ ಬಗೆಗೆ ಲೇಖಕರು ಸೂಕ್ಷ್ಮವಾಗಿ ಪ್ರಸ್ತಾಪಿಸಿರುವರು. ದೇವರು ಹಾಗೂ ಧರ್ಮಗಳಿಂದ ತಮ್ಮ ಸಮಾಜಕ್ಕೆ ಕೆಡಕುಗಳು ತಟ್ಟದಿರುವಂತೆ ಅವರು ಎಚ್ಚರಿಕೆ ವಹಿಸಿದ್ದಾರೆಂದೂ, ಸಾಮೂಹಿಕ ಹಿತಚಿಂತನೆ ಚೀಣೀ ಸಮಾಜದ ವೈಶಿಷ್ಟ್ಯವೆಂದೂ ಲೇಖಕರು ಅಭಿಪ್ರಾಯಪಡುವರು.

ಚೀಣಾವನ್ನು ನೋಡಿ ಬಂದ ಮೇಲೆ, ನಾಲ್ಕು ವರ್ಷದ ಅವಧಿಯಲ್ಲಿ, ಅಲ್ಲಿ ಶರವೇಗದ ಬದಲಾವಣೆಯಾಗಿರುವುದನ್ನು ಲೇಖಕರು ಗಮನಿಸಿರುವರು. ಅಲ್ಲಿನ ಜನಜೀವನದ ಮೇಲೆ ಅಮೆರಿಕಾದಂತಹ ಬಂಡವಾಳಶಾಹಿ ರಾಷ್ಟ್ರಗಳ ಪ್ರಭಾವ ನಿಚ್ಚಳವಾಗಿ ಆಗುತ್ತಿರುವುದನ್ನು ಲೇಖಕರು ತಮ್ಮ ಗ್ರಂಥದ 'ಅರಿಕೆ'ಯಲ್ಲಿ ಪ್ರಸ್ತಾಪಿಸಿರುವರು.

ತಾವು ಅಲ್ಪ ಕಾಲಾವಧಿಯಲ್ಲಿ ನೋಡಿದ ಚೀಣಾದ ಜನರ ಜೀವನದ ಕೆಲವು ಮುಖಗಳನ್ನು ಲೇಖಕರು ಚೆನ್ನಾಗಿಯೇ ಪರಿಚಯ ಮಾಡಿಕೊಟ್ಟಿರುವರು. ಬಹುಶಃ ಆ ದೇಶದ ಓತ್ಪೈಷಿಯಾಗಿ ಅವರು ಅದನ್ನು ನೋಡಿರುವರು. 'ಚೀಣಾ ಪ್ರವಾಸದಲ್ಲಿದ್ದಾಗ

ನನಗೆ ಬೇರೆ ದೇಶಕ್ಕೆ ಹೋಗಿದ್ದೆನೆಂಬ ಭಾವನೆ ಹೆಚ್ಚಾಗಿ ಕಾಣುತ್ತಿರಲಿಲ್ಲ' ಎಂಬ ಅವರ ಹೇಳಿಕೆ ಚೀಣಾ ಹಾಗೂ ಭಾರತಗಳ ಸ್ನೇಹ ಸಂಬಂಧದ ಹಿನ್ನೆಲೆಯಲ್ಲಿ ಹೇಳಿದಂತೆ ಕಾಣುವುದಿಲ್ಲ. ಕೆಲವಡೆ ಎರಡೂ ದೇಶಗಳ ತುಲನಾತ್ಮಕ ವಿವೇಚನೆ ಬಂದಿದ್ದರೂ ಎರಡೂ ದೇಶಗಳ ಸಾಮಾಜಿಕ ರಾಜಕೀಯ ಹಿನ್ನೆಲೆ ಬೇರೆ ಎನ್ನುವುದನ್ನು ಲೇಖಕರು ಮರೆಯುವುದಿಲ್ಲ. ಎರಡೂ ದೇಶಗಳ ಸ್ನೇಹ ಸಂಬಂಧವನ್ನು ಇನ್ನಷ್ಟು ಮಧುರವಾಗಿಸುವ ಕಾರಣಕ್ಕಾಗಿಯೋ ಏನೋ ಚೀಣಾದ ಬಗೆಗೆ ಎಲ್ಲೂ ಕಟುವಾದ ಮಾತುಗಳನ್ನು ಲೇಖಕರು ಹೇಳುವುದಿಲ್ಲ. ಈ ಅಲ್ಪಕಾಲದ ಭೇಟಿಯಲ್ಲಿ ಚೀಣಾವನ್ನು ಸಂಪೂರ್ಣವಾಗಿ ತಮ್ಮ ಬರಹದಲ್ಲಿ ಸೆರೆ ಹಿಡಿದಿರುವೆನೆನ್ನುವ ಭ್ರಮೆ ಲೇಖಕರಿಗಿಲ್ಲ. ಚೀಣಾದ ಕೆಲವು ಭಾಗಗಳನ್ನು ನೋಡಿ ಅಲ್ಲಿನ ಪ್ರಸಂಗಗಳಿಗೆ ಲೇಖಕರು ಸ್ಪಂದಿಸಿರುವ ರೀತಿ ಇಲ್ಲಿನ ಬರವಣಿಗೆಯ ವೈಶಿಷ್ಟ್ಯವಾಗಿವೆ. ಚೀಣಾವನ್ನು ಕುರಿತ ಒಂದೇ ಒಂದು ಪ್ರವಾಸಕಥನ ಇದಾಗಿರುವುದರಿಂದ ಈ ಕಾರಣಕ್ಕಾಗಿಯೂ ಇದು ಗಮನಾರ್ಹವಾಗುತ್ತದೆ.

**ಇಂಡೋ ಚೈನಾ:**

ಸುಧಾ ಮೂರ್ತಿಯವರ **ಕಾವೇರಿಯಿಂದ ಮೆಕಾಂಗಿಗೆ** ಇಂಡೋ ಚೈನಾ ಪ್ರವಾಸ ಕಥನ. ಅಮೆರಿಕೆಯ ನ್ಯೂಯಾರ್ಕ್ ನಗರದ ಏಶಿಯಾ ಸೊಸೈಟಿಯವರು ಏರ್ಪಡಿಸಿದ್ದ ಇಂಡೋ ಚೈನಾ ಪ್ರವಾಸದಲ್ಲಿ ಲೇಖಕಿ ಭಾಗಿಯಾಗಿದ್ದರು. ಮೆಕಾಂಗ್ ಜಗತ್ತಿನ ಸುಪ್ರಸಿದ್ಧ ಹನ್ನೆರಡು ನದಿಗಳಲ್ಲಿ ಒಂದು. ಟಿಬೆಟ್ಟಿನಲ್ಲಿ ಹುಟ್ಟಿ ತನ್ನೊಡನೆ ಫಲವತ್ತಾದ ಮಣ್ಣನ್ನು ಹೊತ್ತ ಈ ಜೀವನದಿ ಕಾಂಬೋಡಿಯಾದಲ್ಲಿ ಸೌತ್ ಚೈನಾ ಸಮುದ್ರವನ್ನು ಸೇರುವಳು. ಕಾಂಬೋಡಿಯಾ, ವಿಯಟ್ನಾಂ, ಲಾವೋಸ್ ಹಾಗೂ ಥೈಲ್ಯಾಂಡ್ -ಈ ನಾಲ್ಕು ದೇಶಗಳಿಗೆ ಇಂಡೋ ಚೈನಾ ಎನ್ನುವರು. ಸುಧಾ ಮೂರ್ತಿಯವರು ಈ ನಾಲ್ಕು ದೇಶಗಳಲ್ಲಿ ಸಾಂಸ್ಕೃತಿಕ ಸಂಚಾರ ಕೈಗೊಂಡು ತಮ್ಮ ಪ್ರವಾಸದ ಅನುಭವಗಳನ್ನು ಈ ಕೃತಿಯಲ್ಲಿ ಹೇಳಿರುವರು. ಈ ದೇಶಗಳ ಜನಜೀವನ, ಕಲೆ, ಸಂಸ್ಕೃತಿಗಳನ್ನು ಕುರಿತು ಈ ಪ್ರವಾಸ ಕಥನದಲ್ಲಿ ವಿವರವಾಗಿ ಚರ್ಚಿಸಿರುವರು.

**ಜರ್ಮನಿ:**

ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ಇಂಜನಿಯರ್ ಆಗಿದ್ದ ಶ್ರೀನಿವಾಸಯ್ಯನವರು ವಿಶೇಷ ತರಬೇತಿಗಾಗಿ ಜರ್ಮನಿಯ ಯಾತ್ರೆ ಕೈಗೊಂಡು ತಮ್ಮ ಪ್ರವಾಸಾನುಭವಗಳನ್ನು **ನಾ ಕಂಡ ಜರ್ಮನಿ** ಎಂಬ ಕೃತಿಯಲ್ಲಿ ಕೊಟ್ಟಿರುವರು. ಕೃತಿ ೨೨ ಭಾಗಗಳಾಗಿ ವಿಂಗಡಣೆಗೊಂಡಿದೆ. ಕೃತಿಯ ಬಹುಭಾಗ ಜರ್ಮನಿಯ ಅನುಭವಗಳಿಗೆ ಮೀಸಲಾಗಿದ್ದರೂ, ಕೊನೆಯ ೬೭ ಪುಟಗಳನ್ನು ಬೆಲ್ಜಿಯಂ,

ಹಾಲೆಂಡ್, ಇಂಗ್ಲೆಂಡ್, ಫ್ರಾನ್ಸ್, ಸ್ವಿಡ್ಜರ್ಲೆಂಡ್ ಮೊದಲಾದ ಐರೋಪ್ಯ ದೇಶಗಳ ಪ್ರೇಕ್ಷಣೀಯ ಸ್ಥಳಗಳ ಪರಿಚಯಕ್ಕೆ ಹಾಗೂ ಆ ದೇಶಗಳ ಸಂಸ್ಕೃತಿಯ ಅಧ್ಯಯನಕ್ಕೆ ಮೀಸಲು ಮಾಡಲಾಗಿದೆ. ಪಶ್ಚಿಮ ಜರ್ಮನಿಯ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡಿ ಅನುಭವ ಗಳಿಸುತ್ತ, ಮಧ್ಯಮವರ್ಗದ ಮನೆಯೊಂದರಲ್ಲಿ ಅತಿಥಿಯಾಗಿ ವಾಸ ಮಾಡಿ ಆ ವರ್ಗದವರ ಆಸೆ ಆಕಾಂಕ್ಷೆ, ಜೀವನ ವಿಧಾನ, ಸಿದ್ಧಿ-ಸಾಧನೆ ಇವುಗಳ ಪರಿಚಯ ಮಾಡಿಕೊಳ್ಳುತ್ತ, ಅವರ ಮನೋಧರ್ಮವನ್ನು ಅರಿತು ನಮ್ಮ ಸಂಸ್ಕೃತಿಯ ತಿರುಳನ್ನು ಅವರಿಗೆ ತಿಳಿಸುತ್ತ ಲೇಖಕರು ಜರ್ಮನಿಯಲ್ಲಿ ಸುಖವಾಗಿ ದಿನಗಳನ್ನು ದೂಡಿರುವರು. ತಮ್ಮ ಎಳೆಂಟು ತಿಂಗಳ ವಾಸ್ತವ್ಯದಲ್ಲಿ ಅನುಭವಕೋಶವನ್ನು ವಿಸ್ತರಿಸಿಕೊಂಡ ಲೇಖಕರು ಆ ವಿಶಿಷ್ಟ ಅನುಭವಗಳನ್ನು ಸರಳವಾಗಿ ಎಲ್ಲರಿಗೂ ತಿಳಿಯುವಂತೆ ಹೇಳಿರುವರು. ಅವರ ಅನುಭವಗಳು ಸಮೃದ್ಧವಾಗಿದ್ದು ಅವು ವಸ್ತುನಿಷ್ಠವಾಗಿವೆ, ಪ್ರಾಮಾಣಿಕತೆವಾಗಿವೆ.

ಜರ್ಮನರ ದೇಶಪ್ರೇಮ, ದುಡಿಮೆಗೆ ಅವರು ಕೊಡುವ ಬೆಲೆ, ನಡಾವಳಿ, ಋಜುಗುಣ, ನ್ಯಾಯನಿಷ್ಠೆ, ಪೌರಪ್ರಜ್ಞೆ, ಕಲಾರಸಿಕತೆ-ಹೀಗೆ ಬಹುಮುಖವಾದ ಅವರ ಜೀವನ ಮೌಲ್ಯಗಳನ್ನು ಲೇಖಕರು ಕಂಡು ಮೆಚ್ಚಿರುವರು. ಅವರು ಜರ್ಮನರ ಸಾಮಾಜಿಕ ಜೀವನವನ್ನು ಆಳವಾಗಿ ಅಧ್ಯಯನ ನಡೆಸಿರುವುದರಿಂದ ಅಲ್ಲಿನ ಒಳಿತೆಲ್ಲವನ್ನೂ ಸಾರಭೂತವಾಗಿ ಮಾತಿನಲ್ಲಿ ಎರಕಗೊಳಿಸಿರುವರು. ಭಾರತದ ಬಗೆಗೆ ಜರ್ಮನರು ಹೊಂದಿದ್ದ ತಪ್ಪು ಕಲ್ಪನೆಯನ್ನು ನಿವಾರಿಸಲು ಲೇಖಕರು ಪ್ರಯತ್ನಿಸಿರುವರು. ಜರ್ಮನರ ಸದ್ಗುಣವನ್ನು ಭಾರತ ಅನುಸರಿಸಿ ಪ್ರಗತಿಯತ್ತ ಹೆಜ್ಜೆಹಾಕಿ ಸಾಗಬಾರದೆ? ಎನ್ನುವ ಹಂಬಲ ಅವರದು. ಈ ಬಗೆಯ ಕಳಕಳಿ ಪುಸ್ತಕದ ಹಲವಡೆ ವ್ಯಕ್ತಗೊಂಡಿದೆ. ತಮ್ಮ ಅನುಭವಕ್ಕೆ ಬಂದದ್ದನ್ನು ಓದುಗ ಪ್ರಪಂಚಕ್ಕೆ ಯಾವ ಬಗೆಯ ಉದ್ವೇಗ ಉತ್ಪ್ರೇಕ್ಷೆಗಳಿಲ್ಲದೆ ದಾಟಿಸುವ ಒಂದು ಸರಳ ಪ್ರಯತ್ನ ಈ ಕೃತಿಯಲ್ಲಿದೆ.

ಬರ್ಲಿನ್‌ನಲ್ಲಿ ನಡೆದ ನಾಟಕ ಮತ್ತು ಸಂಗೀತ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ ಕನ್ನಡದ ಸುಪ್ರಸಿದ್ಧ ನಾಟಕಕಾರ ಶ್ರೀರಂಗರು ಮಾಡಿದ ನಾಲ್ಕುವಾರಗಳ ಪ್ರವಾಸದ ಅನುಭವ ಕಥನ **ಶ್ರೀ-ರಂಗ-ಯಾತ್ರೆ.** ಬರ್ಲಿನ್‌ನಲ್ಲಿ ತಾವು ನೋಡಿದ ನಾಟಕಗಳಿಂದ ಪ್ರಭಾವಿತರಾದ ಶ್ರೀರಂಗರು "ಬರ್ಲಿನರ ನಾಟ್ಯಗೃಹಗಳು, ಅಲ್ಲಿಯ ರಂಗಭೂಮಿ, ಕಲಾವಿದರ ಹಾಡುಗಾರಿಕೆ, ನಟರ ನಟನಾ ಸಾಮರ್ಥ್ಯ, ರಂಗಭೂಮಿಯ ಮೇಲೆ ಪ್ರದರ್ಶಿಸುವ ರೀತಿ, ರಂಗ ಸಜ್ಜಿಕೆ, ಬೆಳಕಿನ ಯೋಜನೆ ಮತ್ತು ಕೊನೆಯದಾಗಿ ಅಲ್ಲಿನ ವಿಶಾಲ ಪ್ರೇಕ್ಷಕ ವರ್ಗದ ಸಹೃದಯತೆ ಇವು ಅಭಿನಂದನೀಯವಾದಷ್ಟೆ ಅನುಕರಣೀಯವೂ ಆಗಿವೆ" (ಪು ೨೪) ಎಂದು

ಮೆಚ್ಚುಗೆಯಾಡಿರುವರು.[೧] ನ್ಯಾಟಗೃಹಗಳಲ್ಲಿ ನಾಟ್ಯ ಶಿಕ್ಷಣ ಹೇಗೆ ಕೊಡುವರು? ಶಿಕ್ಷಣ ಪಡೆದ ನಂತರ ಡಿಪ್ಲೊಮಾ ಪಡೆದ ವಿದ್ಯಾರ್ಥಿಯ ಭವಿಷ್ಯವೇನು?-ಈಎಲ್ಲ ವಿಷಯಗಳನ್ನು ಶ್ರೀರಂಗರು ತಜ್ಞರೊಡನೆ ಸಮಾಲೋಚಿಸಿರುವರು (ಪು. ೨೯-೩೦). ಜರ್ಮನ ಸೌಜನ್ಯ ಮತ್ತು ಸಹೃದಯತೆಗಳನ್ನು ತಮ್ಮ ಪಾಲಿಗೆ ಬಂದ ಅನುಭವದಿಂದ ಪರಿಚಯಿಸಿರುವರು.

ಹಂಗೆರಿಯ ಸರಕಾರದ ಅತಿಥಿಯಾಗಿ ಬುಡಾಪೆಸ್ಟ್‌ನಲ್ಲಿ ಹನ್ನೆರಡು ದಿನಗಳ ವಾಸ್ತವ್ಯ ಮಾಡಿದ ಶ್ರೀರಂಗರು ಅಲ್ಲಿಯವರು ಸಾಹಿತಿ ಕಲಾವಿದರನ್ನು ಗೌರವಿಸುವ ರೀತಿ, ನಾಟಕ ಮಾಡುವವರ ಉತ್ಸಾಹ, ನೋಡುವವರ ಸಂತೋಷಗಳನ್ನು ಅಲ್ಲಿನ ವೈಶಿಷ್ಟ್ಯವೆಂದು ಗುರುತಿಸಿರುವರು. "ಜಗತ್ತಿನ ಶ್ರೇಷ್ಠ ಸಾಹಿತ್ಯ ಮತ್ತು ಸಂಸ್ಕೃತಿಗಳ ಅಭ್ಯಾಸ ಯಾವ ಸುಸಂಸ್ಕೃತನಿಗೂ ಅಗತ್ಯ" ಎನ್ನುವ ಬುಡಾಪೆಸ್ಟಿನ ಇಂಡಾಲಜಿ ವಿಭಾಗದ ಪ್ರೊ।। ಹರ್‌ಮಟಾರವರ ಅಭಿಪ್ರಾಯವನ್ನು ಗಮನಿಸಿದಾಗ ಹಾಗೂ ಕಳೆದ ಹದಿನೈದು ವರ್ಷಗಳಲ್ಲಿ ಅವರು ಸಂಸ್ಕೃತ ಕೃತಿಗಳನ್ನು ಹಂಗೆರಿಯನ್ ಭಾಷೆಗೆ ಅನುವಾದಿಸಿರುವುದನ್ನು ಕಂಡಾಗ ಅವರ ಅಭಿಮಾನ ಹಿರಿದೆನ್ನಿಸುತ್ತದೆ. ಹಂಗೆರಿಯನ್ ನಾಟ್ಯ ಸಂಸ್ಥೆಯವರು ಎಲ್ಲ ದೇಶಗಳ ರಂಗಭೂಮಿಯ ಚಟುವಟಿಕೆಗಳನ್ನು ಕುರಿತ ಎಲ್ಲ ವಿವರಗಳನ್ನು (ಸು. ೧೨ ಸಾವಿರ ನಾಟಕಕಾರರ ಬಗೆಗೆ) ವ್ಯವಸ್ಥಿತವಾಗಿ ಕಲೆಹಾಕಿರುವುದನ್ನು ಗಮನಿಸಿದ ಶ್ರೀರಂಗರು ನಮ್ಮಲ್ಲೂ ಸಂಗೀತ-ನಾಟಕ ಅಕಾಡೆಮಿಗಳು ಇಂತಹ ಉಪಯುಕ್ತ ಕೆಲಸ ಕೈಗೊಳ್ಳಬಾರದೇಕೆ? (ಪು. ೫೨) ಎಂದು ವಿಚಾರಮಾಡಿರುವರು.

ಬುಡಾಪೆಸ್ಟ್‌ನಲ್ಲಿ ಸರಕಾರ ನಡೆಸುವ ನಾಟ್ಯ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಣವನ್ನು ಯಾವ ರೀತಿ ಕೊಡಲಾಗುತ್ತಿದೆ? ಅಲ್ಲಿ ಕಲಿಸುವ ವಿಷಯಗಳಾವುವು? ಮಕ್ಕಳ ನಾಟ್ಯಗೃಹದ ಚಟುವಟಿಕೆ ಯಾವ ರೀತಿಯಿದೆ? ಈ ಎಲ್ಲ ಸಂಗತಿಗಳು ಸಾಕಷ್ಟು ವಿಸ್ತಾರವಾಗಿ ಕೃತಿಯಲ್ಲಿ ಚರ್ಚಿತವಾಗಿದೆ.

ನಾಟಕಕಾರ ಶ್ರೀರಂಗರ ಬರ್ಲಿನ್ ಹಾಗೂ ಬುಡಾಪೆಸ್ಟ್ ಯಾತ್ರೆ ನಿಜಕ್ಕೂ ಔಪಯೋಗಿಕವಾಗಿದೆ. ನಮ್ಮ ರಂಗಭೂಮಿಯು ಇನ್ನೂ ಬೆಳೆಯಬೇಕಾಗಿದೆ. ಅದರ ಕೊರತೆಗಳನ್ನು ನೀಗಿಸಿಕೊಳ್ಳಲು ಶ್ರೀರಂಗರ ಈ ಯಾತ್ರೆ ಸ್ವಲ್ಪಮಟ್ಟಿಗೆ

---

೧. ಜರ್ಮನಿಯ ಹಳ್ಳಿ ಹಳ್ಳಿಗಳಲ್ಲೂ ಜನ ಹೇಗೆ ಉತ್ಸಾಹದಿಂದ ನಾಟಕಗಳನ್ನಾಡುತ್ತಿದ್ದರು? ಪ್ರೇಕ್ಷಕರು ಅಪಾರ ಸಂಖ್ಯೆಯಲ್ಲಿ ನಾಟಕಗಳನ್ನು ಹೇಗೆ ಪ್ರೋತ್ಸಾಹಿಸುತ್ತಿದ್ದರು? ಇವೆಲ್ಲವನ್ನೂ ಡಾ।। ಅನುಪಮಾ ನಿರಂಜನರು ತಮ್ಮ 'ಸ್ನೇಹಯಾತ್ರೆ' ಎಂಬ ಪ್ರವಾಸ ಕಥನದಲ್ಲಿ ಚೆನ್ನಾಗಿ ಹೇಳಿರುವರು.

ಸಹಾಯಮಾಡುತ್ತದೆ. ಅನುಭವೀ ನಾಟಕಕಾರರಾದ ಶ್ರೀರಂಗರ ಈ ಪ್ರವಾಸ ಕಥನದಿಂದ ನಮ್ಮ ನಾಟ್ಯರಂಗದ ಭವಿಷ್ಯದ ರೂಪವನ್ನು ನಾವು ಕಟ್ಟಿಕೊಳ್ಳಬಹುದು. ನಮ್ಮ ನಾಟ್ಯಕಲಾಪಿದರು ಇದನ್ನು ಓದುವುದರಿಂದ ಹೆಚ್ಚಿನ ಲಾಭವಿದೆ.

'ಶಶಿ ಕಂಡ ಜರ್ಮನಿ' 'ಪತ್ರಗುಚ್ಛ' ರೂಪದಲ್ಲಿ ಮಕ್ಕಳಿಗಾಗಿ ಬಂದಿರುವ ಪ್ರವಾಸ ಸಾಹಿತ್ಯ. ಶಶಿ ಎನ್ನುವ ಹುಡುಗಿ ತನ್ನ ಗೆಳತಿ ಗೀತಾಳಿಗೆ ಬರೆದ ಒಂಬತ್ತು ಪತ್ರಗಳ ಮೂಲಕ ತಾನು ಭೇಟಿಕೊಟ್ಟ ಜರ್ಮನಿಯ ಜನಜೀವನದ ಪರಿಚಯ ಮಾಡಿಕೊಟ್ಟ ರೀತಿಯಲ್ಲಿ ಹೂ. ಶ್ರೀನಿವಾಸಯ್ಯ **ಶಶಿ ಕಂಡ ಜರ್ಮನಿ** ಎಂಬ ಪ್ರವಾಸ ಕಥನವನ್ನು ನಿರೂಪಿಸಿರುವರು. ಜರ್ಮನಿಯಲ್ಲಿನ ಚಳಿಗಾಲ, ಬೇಸಿಗೆಕಾಲಗಳಲ್ಲಿನ ಹವಾಮಾನ, ಜರ್ಮನರ ನೈರ್ಮಲ್ಯ, ಜನಜೀವನ ಕ್ರಮ, ದೇಶಪ್ರೇಮ, ಹಬ್ಬಗಳು, ಕೈಗಾರಿಕಾ ಪ್ರಗತಿ, ವಿದ್ಯಾರ್ಥಿಗಳಲ್ಲಿನ ಶಿಸ್ತು -ಇವೆಲ್ಲವುಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಜರ್ಮನರ ಜೀವನವಿಧಾನದ ಪರಿಚಯ ಚಿಕ್ಕಮಕ್ಕಳಿಗೆ ತಿಳಿಯುವಂತೆ ಮಾಡಿಕೊಡಲಾಗಿದೆ.

ಕನ್ನಡದ ಪ್ರಖ್ಯಾತ ಕಾದಂಬರಿಕಾರ್ತಿಯರಲ್ಲಿ ಒಬ್ಬರಾದ ಡಾ|| ಅನುಪಮಾ ನಿರಂಜನ ಅವರು ೧೯೭೫ರಲ್ಲಿ ಅಕ್ಟೋಬರ್‌ನಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತರ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾರತೀಯ ನಿಯೋಗದ ಒಬ್ಬ ಸದಸ್ಯೆಯಾಗಿ ಹೋಗಿ ಬಂದು ತಮ್ಮ ಪೂರ್ವಜರ್ಮನಿ ಹಾಗೂ ರಷ್ಯಾ ದೇಶಗಳ ಪ್ರವಾಸಾನುಭವವನ್ನು **ಸ್ನೇಹಯಾತ್ರೆ** ಎಂಬ ಕೃತಿಯಲ್ಲಿ ಕೊಟ್ಟಿರುವರು. ಜರ್ಮನಿಯ ಇತಿಹಾಸ, ಅದರಲ್ಲೂ ಹಿಟ್ಲರನ ಸರ್ವಾಧಿಕಾರಿ ರಾಕ್ಷಸೀ ಲಾಲಸೆಯಿಂದಾಗಿ ಎರಡನೆಯ ಪ್ರಪಂಚ ಯುದ್ಧದಲ್ಲಿ ಜರ್ಮನಿಯ ಜನತೆ ತಮ್ಮನ್ನು ತಾವೇ ಬಲಿದಾನ ಮಾಡಿಕೊಳ್ಳಬೇಕಾಗಿ ಬಂದ ದಾರುಣ ಪ್ರಸಂಗವನ್ನು, ಯುದ್ಧದಲ್ಲಿ ಅಪಾರವಾದ ಸಾವು-ನೋವು-ನಷ್ಟಗಳಿಗೆ ಗುರಿಯಾಗಿ ಹಾಳುಬಿದ್ದ ಬರ್ಲಿನ್ ನಗರವನ್ನು ಶೃಂಗರಿಸಿ ಕಳೆದ ೨೫ ವರ್ಷಗಳಲ್ಲಿ ಪುನರ್ ನಿರ್ಮಿಸಿ, ಮತ್ತೆ ನಾಡು ಸಮೃದ್ಧವಾಗಿ ಶಕ್ತಿಯುತವಾಗಿ ತಲೆಯೆತ್ತುವಂತೆ ಮಾಡಿದ ಜನರ ತ್ಯಾಗ, ನಿಷ್ಠೆ, ದೇಶಪ್ರೇಮಗಳನ್ನು ಬಹಳ ಚೆನ್ನಾಗಿ ಲೇಖಕಿ ಪ್ರಾರಂಭದಲ್ಲಿ ಕೊಟ್ಟಿರುವರು. ರ್‍ಯಾವೆನ್ಸ್ ಬ್ರುಕ್‌ನಲ್ಲಿ, ಯುದ್ಧ ಸಂದರ್ಭದಲ್ಲಿ ಜರ್ಮನಿಯ ಹೆಂಗಸರ ಮೇಲೆ ನಡೆಸಿದ ಅಮಾನುಷ ಕೃತ್ಯಗಳನ್ನು ನಿರೂಪಿಸುವ ಚಿತ್ರವೊಂದನ್ನು ನಿಯೋಗದ ಸದಸ್ಯೆಯರಿಗೆ ತೋರಿಸಲಾಯಿತು. ಮನುಷ್ಯತ್ವವನ್ನೇ ಮರೆತು ನಡೆಸಿದ ಹಿಂಸಾಚಾರಗಳ ವಿವರಗಳನ್ನು ಚಿತ್ರ ನೋಡಿ ಲೇಖಕಿ ಕೊಟ್ಟಿರುವರು. ಅವನ್ನು ಓದುತ್ತಿದ್ದಂತೆ ನಮ್ಮ ನೆತ್ತರು ಕುದಿಯುತ್ತದೆ; ಆ ಜರ್ಮನ್ ಮಹಾಮಾತೆಯರು ಪಟ್ಟ ಬವಣೆಗಾಗಿ ಕಣ್ಣು ಹನಿಗೂಡುತ್ತದೆ. ಆ ಕ್ರೌರ್ಯಗಳ ಸರಮಾಲೆಯ ಪರಿಚಯ ನಮಗಾಗಲು ಕೆಳಗಿನ ನಿದರ್ಶನ ಒಂದು ಸಾಕು:

"ರ್‍ಯಾವೆನ್ಸ್ ಬ್ರುಕ್‌ನಲ್ಲಿ ಇಟ್ಟಿಗೆ ಬೇಯಿಸುವಂಥ ದೊಡ್ಡ ಮೂರು ನಾಲ್ಕು ಗೂಡುಗಳಿವೆ. ಮೇಲೆ ಹೊಗೆಕೊಳವೆಗಳು. ಇಲ್ಲಿ ಪ್ರತಿ ಮಂಗಳವಾರ ಶುಕ್ರವಾರ ಕೈದಿಗಳನ್ನು ಜೀವಂತವಾಗಿ ಸುಡುತ್ತಿದ್ದರು. ಹೊರಗಿನಿಂದ ಬಂದ ಹೆಣಗಳನ್ನು ಸುಡುವುದರ ಜೊತೆಗೆ ರ್‍ಯಾವೆನ್ಸ್ ಬ್ರುಕ್‌ನಲ್ಲಿದ್ದ ಕೈದಿಗಳನ್ನೂ ನಿರ್ನಾಮ ಮಾಡುತ್ತಿದ್ದರು. ಕೆಲಸಕ್ಕೆ ಬಾರದಂತಹ ಮಕ್ಕಳು, ವೃದ್ಧರು, ಬಸುರಿ ಹೆಂಗಸರು, ಅನಾರೋಗ್ಯ- ಗೊಂಡವರು ಮುಂತಾದವರಿಂದ ಆರಂಭವಾಗಿ ಸುಡುವಿಕೆ ೯೨,೦೦೦ ಜನರನ್ನು ಬಲಿ ತೆಗೆದುಕೊಂಡಿತು. ವಾರದಲ್ಲಿ ಆ ದಿನಗಳು ಬಂದಾಗ ಪ್ರತಿಯೊಬ್ಬ ಕೈದಿಗೂ ಕಾತರವಾಗುತ್ತಿತ್ತು, ಇನ್ನು ತಮ್ಮ ಸರದಿ ಬಂತೇನೋ ಎಂದು. ದೇಹ ಸುಡುತ್ತಿರುವಾಗ ಹೊಗೆಕೊಳವೆಗಳಿಂದ ಏಳುತ್ತಿದ್ದ ದುರ್ನಾತ ಇಡೀ ಆವರಣದಲ್ಲಿ ಉಸಿರು ಕಟ್ಟುವಂತಹ ವಾತಾವರಣವನ್ನು ನಿರ್ಮಿಸುತ್ತಿತ್ತು. ಪ್ರತಿಬಾರಿಯೂ ಬೂದಿಯ ರಾಶಿಯನ್ನು ಹತ್ತಿರವೇ ಇದ್ದ ಸ್ಟೀವಾಲ್ಡ್ ಸರೋವರಕ್ಕೆ ಸುರಿಯುತ್ತಿದ್ದರು." (ಪು. ೫೧)

ಜರ್ಮನಿ ಪ್ರಖ್ಯಾತ ದಾರ್ಶನಿಕ, ಶಿಲ್ಪಿ, ಕಲಾವಿದರುಗಳ, ಸಾಹಿತಿಗಳ ಜೀವನ ಹಾಗೂ ಕೊಡುಗೆಯನ್ನು ಸಂಕ್ಷಿಪ್ತವಾಗಿ ಲೇಖಕಿ ಪರಿಚಯ ಮಾಡಿಕೊಟ್ಟಿರುವರು (ಪು. ೫೬-೮೮). ಆರೋಗ್ಯ ಹಾಗೂ ಸಾಂಸ್ಕೃತಿಕ ಇಲಾಖೆಗಳ ಮಂತ್ರಿಗಳು, ಜೊತೆ ನಿಯೋಗದ ಸದಸ್ಯರು ನಡೆಸಿದ ಚರ್ಚೆಯಿಂದ ಆ ದೇಶ ಆರೋಗ್ಯಪಾಲನೆಗಾಗಿ ಹಾಗೂ ಸಾಂಸ್ಕೃತಿಕ ವಿಕಾಸಕ್ಕಾಗಿ ತೋರುತ್ತಿರುವ ಕಾಳಜಿಯ ಅರಿವು ನಮಗಾಗುತ್ತದೆ. ಜರ್ಮನ್ ಮಹಿಳೆಯರ ಜೀವನದಲ್ಲಿ ಕಂಡುಬರುವ ತೃಪ್ತಿಗೆ ಕಾರಣವೇನೆಂಬುದನ್ನು ತಿಳಿಯಲು ಹಲವು ಸಂದರ್ಶನಗಳಿಂದ ಲೇಖಕಿ ಮಾಹಿತಿಗಳನ್ನು ಪಡೆದಿರುವರು. ವೃದ್ಧರಿಗೆ ವೃದ್ಧಾಪ್ಯ ವೇತನ, ನೂತನ ದಂಪತಿಗಳಿಗೆ ೫೦೦೦ ಮಾರ್ಕು ಬಡ್ಡಿರಹಿತ ಸಾಲ (ಇದನ್ನು ತೀರಿಸಲೇಬೇಕೆಂಬ ನಿಯಮವಿಲ್ಲ), ಹೆರಿಗೆಗೆ ಮುಂಚೆ ಆರುವಾರ ಹಾಗೂ ಹೆರಿಗೆಯ ನಂತರ ೧೨ವಾರ ಸಂಬಳಸಹಿತ ರಜೆ, ಹೆಣ್ಣಾದರೂ ಒಂದೇ ಗಂಡಾದರೂ ಒಂದೇ ಎಂಬ ಮನೋಭಾವ (ಹೆಣ್ಣಾಗಲೀ ಗಂಡಾಗಲೀ ದೊಡ್ಡವರಾದ ಮೇಲೆ ಇಬ್ಬರೂ ದುಡಿಯಲೇಬೇಕು) -ಈ ಸವಲತ್ತುಗಳಿರುವ ಸಮಾಜದಲ್ಲಿ ನೆಮ್ಮದಿ ಕಾಣಬರುವುದು ಸಹಜ ತಾನೆ. ಕೃತಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ರ ಅಧಿವೇಶನದ ವರದಿಯನ್ನು ಲೇಖಕಿ ಸಂಕ್ಷಿಪ್ತವಾಗಿ ಕೊಟ್ಟಿರುವರು (ಪು. ೧೦೬- ೧೨೮). ಬರ್ಲಿನ್‌ನಿಂದ ಹಿಂತಿರುಗುವಾಗ ರಷ್ಯಾವನ್ನು ಸಂದರ್ಶಿಸಿದ ಲೇಖಕಿ, ತಮ್ಮ ಅಲ್ಪಕಾಲಾವಧಿಯ ತಂಗಣೆಯಲ್ಲಿ ಅಲ್ಲಿ ನೋಡಿದ್ದರ ಬಗೆಗೆ ಚುಟುಕಾಗಿ ಹೇಳಿರುವರು. ಅಲ್ಲಿ ವೀಕ್ಷಕರಾಗಿ ನೋಡಿದ್ದಕ್ಕಿಂತ, ಭಾರತೀಯ ಮಿತ್ರರನ್ನು ಕಷ್ಟಪಟ್ಟು ಭೇಟಿಯಾಗಿ ಅವರೊಡನೆ ಉಭಯ ಕುಶಲೋಪರಿ, ಭೋಜನ ಮಾಡಿದ್ದರ ವಿವರಣೆ ಹೆಚ್ಚು ಬಂದಿದೆ.

ಡಾ॥ ಅನುಪಮಾ ನಿರಂಜನರ ಈ ಪ್ರವಾಸಾನುಭವ ಸೀಮಿತ ಅವಧಿಯದು. ಈ ಸೀಮಿತ ಅವಧಿಯಲ್ಲಿ ದೇಶ-ಭಾಷೆಗಳ ಪರಿಚಯವಿಲ್ಲದ ಯಾರೇ ಆಗಲೀ ದೇಶವನ್ನು, ಬಲ್ಲ ಲೇಖಕಿ, ತಾವು ಜರ್ಮನ್ ದೇಶದ ಬಗೆಗೆ ಓದಿ ತಿಳಿದದ್ದನ್ನು, ಸುತ್ತಾಟದಲ್ಲಿ ಕಂಡದ್ದನ್ನು ಕೇಳಿದ್ದನ್ನು ಇತರರಿಗೆ ತಿಳಿಯ ಹೇಳುವುದು ಕರ್ತವ್ಯವೆಂದು ಭಾವಿಸಿರುವರು. ಅವರ ಚೌಕಟ್ಟು ಸೀಮಿತವಾಗಿದ್ದರೂ "ಜರ್ಮನಿಯ ರಾಜಕೀಯ-ಸಾಂಸ್ಕೃತಿಕ ಬೆಳವಣಿಗೆಗಳನ್ನೂ ಅವನತಿ-ಔನ್ನತ್ಯಗಳನ್ನೂ, ಜೀವನದ ಎಲ್ಲ ಮೌಲ್ಯಗಳನ್ನು ಸೃಷ್ಟಿಸುವ ಜನರನ್ನೂ" ಇಲ್ಲಿ ಚಿತ್ರಿಸಲು ಲೇಖಕಿ ಪ್ರಯತ್ನ ಪಟ್ಟಿರುವರು. ಅವರ ಸರಳ ನಿರೂಪಣೆ ಮನಸ್ಸನ್ನು ಮುಟ್ಟುತ್ತದೆ.

ಡಾ. ಶಿವಾಜಿರಾವ ಸರ್ವಿ ಅವರು ವೃತ್ತಿಯಲ್ಲಿ ವೈದ್ಯರು, ಕರ್ನಾಟಕದವರು. ಇಂಗ್ಲೆಂಡಿನಲ್ಲಿ ಓದಿ ೪೦ ವರ್ಷ ಹೊರನಾಡಿನ ಮತ್ತು ವಿದೇಶದಲ್ಲಿ ಇದ್ದುದರಿಂದ ಕರ್ನಾಟಕ ಹಾಗೂ ಕನ್ನಡ ಭಾಷೆಯ ಸಂಪರ್ಕ ತಪ್ಪಿಹೋಗಿದ್ದಿತು. ಲೇಖಕರು ಜರ್ಮನಿಯ 'ಹ್ಯಾಂಬರ್ಗದಲ್ಲಿ ಹದಿನೈದು ದಿನ' ಪ್ರವಾಸ ಮಾಡಿದ ಮಧುರ ನೆನಪನ್ನು ದಿನಚರಿಯ ರೂಪದಲ್ಲಿ ದಾಖಲಿಸಿರುವರು. ಲೇಖಕರು ಹೈದರಾಬಾದಿನ ಪ್ರಿನ್ಸೆಸ್ ನಿಲೋಫರ್ ಹಾಸ್ಪಿಟಲ್‌ನಲ್ಲಿ ವೈದ್ಯರು. ೧೯೮೨ರ ಜುಲೈನಲ್ಲಿ World Federation of Occupational Therapistsನ ಎಂಟನೇ ಕಾಂಗ್ರೆಸ್ ಹ್ಯಾಂಬರ್ಗ್‌ನಲ್ಲಿ ಸಮಾವೇಶವಾಗುವದಿದ್ದಿತು. ಅದರಲ್ಲಿ ಭಾಗವಹಿಸಲು ಆಹ್ವಾನ ಬಂದದ್ದರಿಂದ ಡಾ. ಶಿವಾಜಿರಾವ ಸರ್ವಿರವರು ಹ್ಯಾಂಬರ್ಗ್ ಪ್ರವಾಸ ಕೈಗೊಂಡರು. ಅಲ್ಲಿನ ತಂಗಣೆಯ ಅವಧಿ ಹದಿನೈದು ದಿವಸಗಳು. ಈ ಪ್ರವಾಸ ಕಥನದ ತುಂಬ World Federation of Occupational Therapists ಕಾಂಗ್ರೆಸ್‌ನ ಚಟುವಟಿಕೆಗಳೇ ಆಕ್ರಮಿಸಿಕೊಂಡು ಬಿಟ್ಟಿವೆ. ಹ್ಯಾಂಬರ್ಗ್ ಹೊರಡುವ ಪೂರ್ವ ತಯಾರಿ, ಬಂದಂತಹ ಅಡ್ಡಿಗಳು ಹಾಗೂ ಅವುಗಳ ನಿವಾರಣೆ ಪ್ರಾರಂಭದ ಪುಟಗಳನ್ನು ತುಂಬಿದೆ. ಡಾ. ಹೋಹಾಗ್ ಮತ್ತು ಶ್ರೀಮತಿ ಹೋಹಾಗ್‌ರವರ ಆತಿಥ್ಯ ಸ್ವೀಕರಿಸಿ ಅಲ್ಲಿ ಅವರ ಮನೆಯಲ್ಲಿದ್ದು ಒಂದಿಷ್ಟು ಹೊರಗೆ ಸುತ್ತಿಬಂದ ಅನುಭವ ಕಥನ ಇಲ್ಲಿ ಬಂದಿದೆ. ಏಕೋ ಏನೋ ಈ ಪ್ರವಾಸ ಕಥನ ಬಾಹ್ಯ ವಿವರಗಳಿಂದ ತುಂಬಿಹೋಗಿ ಪ್ರವಾಸದ ಮಧುರ ನೆನಪುಗಳು ಸ್ಥಾಯಿಯಾಗಿ ನಿಲ್ಲುವುದೇ ಇಲ್ಲ. ನೆನಪಿನಲ್ಲಿ ಉಳಿಯಬಹುದಾದದ್ದು ಅತಿಥೇಯರಾದ ಶ್ರೀಮತಿ ಮತ್ತು ಡಾ. ಹೋಹಾಗ ಹಿರಿಯ ಮಗಳು ಕ್ರಿಶ್ಚಿಯಾನಾ ಜೊತೆಗಿನ ಮೈತ್ರಿಯ ಮಧುರ ಕ್ಷಣಗಳಷ್ಟೆ.

**ಜರ್ಮನಿ-ರಷ್ಯಾ:**

ಭಾರತದ ಸಾಂಸ್ಕೃತಿಕ ಸಂಬಂಧ ಸಂಸ್ಥೆಯವರು ಶಿವರಾಮ ಕಾರಂತರಿಗೆ ಕಮ್ಯುನಿಸ್ಟ್ ಜರ್ಮನಿ ಮತ್ತು ರಷ್ಯಾಗಳ ಪ್ರವಾಸದ ಅವಕಾಶವನ್ನು ಒದಗಿಸಿದರು.

ಈ ದೇಶಗಳಲ್ಲಿನ ಪ್ರವಾಸ ವ್ಯಕ್ತಿಗತ ಸಂತೋಷದ ಸಲುವಾಗಿ ಮಾಡಿದ್ದಲ್ಲ. ನಿರ್ದಿಷ್ಟ ಉದ್ದೇಶಕ್ಕಾಗಿಯೇ ಕೈಗೊಂಡ ಪ್ರವಾಸವೂ ಇದಲ್ಲ. ಕಾರಂತರೇ ಹೇಳುವಂತೆ "ಈ ಪ್ರವಾಸದ ಗುರಿ ಪಶ್ಚಿಮ ಜರ್ಮನಿ ಮತ್ತು ರಷ್ಯಾ ದೇಶಗಳಾಗಿದ್ದರೂ, ಅವು ನನ್ನ ಪಾಲಿಗೆ ರಾಜಕೀಯ ದೃಷ್ಟಿಯಿಂದ ಅಥವಾ ಸಂಪತ್ ಸಮೃದ್ಧಿಯ ದೃಷ್ಟಿಯಿಂದ ಮುಖ್ಯವೆನಿಸಿರಲಿಲ್ಲ. ಆದರೆ ಈ ಪ್ರವಾಸ ಆ ಎರಡು ದೇಶಗಳ ಬಗೆಗೆ ತಿಳಿಯುವ ಅವಕಾಶವನ್ನು ಒದಗಿಸಿದುವು..." ತಮ್ಮ ಪ್ರವಾಸದ ಅನುಭವಗಳನ್ನು **'ಅರಸಿಕರಲ್ಲ'** ಎಂಬ ಹೆಸರಿನ ಕೃತಿರೂಪದಲ್ಲಿ ಕಾರಂತರು ಹೇಳಿರುವರು. ಕೃತಿಗೆ 'ಅರಸಿಕರಲ್ಲ' ಎಂಬ ಹೆಸರನ್ನು ಕೊಟ್ಟಿರುವುದಕ್ಕೆ ಕಾರಣವನ್ನು ಕಾರಂತರು ಹೀಗೆ ಹೇಳಿರುವರು: "...ಆಸ್ತಿಕರಲ್ಲದವರು, ಕೇವಲ ಭೌತಿಕವಾದಿಗಳು ಮನುಷ್ಯರೇ ಅಲ್ಲ -ಎಂಬ ದೃಷ್ಟಿಯಿರುವವರ ಮುಂದೆ, ಬದುಕಿನ ಸವಿಯನ್ನು ಬೆಳೆಯಿಸುವ ಹಂಬಲ ಇರುವ ಜನಾಂಗಕ್ಕೆ ಅದು ಸಾಧ್ಯ ಎಂದು ತಿಳಿಸಲು. ತೀರ ವಸ್ತುವಾದಿ ರಾಷ್ಟ್ರಗಳಾದ ಕಮ್ಯೂನಿಸ್ಟ್ ಜರ್ಮನಿ, ರಷ್ಯಾಗಳು ಅದನ್ನು ಹೇಗೆ ಸಾಧಿಸಿವೆ ಎಂಬುದನ್ನು ತೋರಿಸಲು ಅವರು 'ಅರಸಿಕರಲ್ಲ' ಎಂಬ ಹೆಸರನ್ನು ಕೊಟ್ಟೆ."

ಕಾರಂತರ ಆಸಕ್ತಿ ವಿಶೇಷವಾಗಿ ಈ ಕಮ್ಯುನಿಸ್ಟ್ ರಾಷ್ಟ್ರಗಳ ಕಲಾಸಂಪತ್ತಿನ ಭವ್ಯತೆಯ ಕಡೆಗಿದೆ. ಹೀಗಾಗಿ ಅಲ್ಲಿನ ಸುಪ್ರಸಿದ್ಧ ಚಿತ್ರಶಾಲೆಗಳು ವಸ್ತು ಸಂಗ್ರಹಾಲಯಗಳು, ನಾಟಕಶಾಲೆಗಳು ಅವರ ಆಸಕ್ತಿಯ ಕೇಂದ್ರಗಳಾಗಿವೆ. ತಮ್ಮ ವಿದೇಶ ಪ್ರವಾಸದ ಮುಖ್ಯ ಉದ್ದೇಶ-ಒಂದಿಷ್ಟು ಪಾಶ್ಚಾತ್ಯ ರಂಗಭೂಮಿಯ ಪರಿಚಯ ಮಾಡಿಕೊಳ್ಳುವುದೆಂದು ಕಾರಂತರೇ ಹೇಳಿಕೊಂಡಿರುವರು. ಬರ್ಲಿನ್‌ನಲ್ಲಿ ಅವರು ನೋಡಿದ ತ್ರೀಪೆನ್ನಿ ಒಪೆರಾ; ಭೇಟಿಕೊಟ್ಟ ಮಕ್ಕಳ ನಾಟಕಶಾಲೆ, ಗೊಂಬೆ ರಂಗಭೂಮಿ, ಸರ್ಕಸ್ -ಇವುಗಳ ಬಗೆಗಿನ ವಿವರಣೆ ಓದುಗರಿಗೆ ಹೆಚ್ಚಿನ ತಿಳುವಳಿಕೆಯನ್ನು ನೀಡುತ್ತದೆ. ಬರ್ಲಿನ್‌ನಲ್ಲಿನ ರಂಗಕಲೆಗಳ ಶಿಕ್ಷಣ ಶಾಲೆಯಲ್ಲಿ ಕಾರಂತರು ಭಾಷಣ ಮಾಡಿ (ದಕ್ಷಿಣ ಕನ್ನಡದ ಯಕ್ಷಗಾನ ಆಟಗಳನ್ನು ಕುರಿತು) ತಾವು ತಂದಿದ್ದ 'ಯಕ್ಷರಂಗ'ದ 'ನಳದಮಯಂತಿ' ವಿಡಿಯೋ ಚಿತ್ರವನ್ನು ಅರ್ಧಗಂಟೆಯ ಕಾಲ ತೋರಿಸಿದರು. ನಂತರ ನಡೆದ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಆಫ್ರಿಕದಿಂದ ಮಾರ್ಕ್ಸ್‌ವಾದಿ ತತ್ವಗಳನ್ನು ಮೆಚ್ಚಿ ಬರ್ಲಿನ್‌ಗೆ ಬಂದ ಒಬ್ಬಾತ ಕಾರಂತರನ್ನು "ಇಂಥ ಅವಾಸ್ತವಿಕ ಕಥೆಗಳು ಏನು ಪ್ರಯೋಜನ ಕೊಟ್ಟಾವು?" ಎಂಬ ಪ್ರಶ್ನೆಯನ್ನು ಕೇಳಿದ. ಅದಕ್ಕೆ ಉತ್ತರವಾಗಿ ಕಾರಂತರು ಹೀಗೆಂದು ಹೇಳಿದರು; "ನಾನು ಅತಿ ನಾಸ್ತಿಕನೇ ಆಗಿರಬಹುದು. ಆ ನಾನು ಜನತೆಯ ಮಧ್ಯದಲ್ಲಿ ಬಾಳುವವನು. ಆ ಜನತೆಯ ಮನಸ್ಸು ಪುರಾತನ ಕಾಲದಿಂದ ಇಂದಿನ ತನಕ ಹರಿದು ಬಂದ ಸಂಸ್ಕೃತಿ ಪುರಾಣಾದಿ ವಿಷಯಗಳಿಂದ ರೂಪುಗೊಂಡದ್ದು. ಅದರ ಪ್ರಭಾವ ಜನತೆಯ ನಂಬಿಕೆ, ನಡತೆ,

ಮನಸ್ಸು, ನಡೆ-ನುಡಿಗಳನ್ನು ರೂಪಿಸುತ್ತದೆ. ಅಂಥ ಜನತೆ ನನ್ನಂತೆಯೇ ಇರಬೇಕಾಗಿಲ್ಲ-ರಂಗಭೂಮಿಯಂತಹ ಒಂದು ಮಾಧ್ಯಮ ಜನಜೀವನವನ್ನು ಚಿತ್ರಿಸಲು ಯತ್ನಿಸಿದಾಗ, ಅವರ ಬದುಕನ್ನು ರೂಪಿಸಿದ ಯಾವತ್ತು ಪ್ರಭಾವಗಳನ್ನೂ ಬಿಂಬಿಸುವ ಅವಶ್ಯಕತೆ ಇದ್ದೇ ಇದೆ." ಡ್ರೆಸ್‌ಡೆನಿನ ಬ್ಯಾಲೆ ಶಾಲೆಯ (ಪೆಲೂಕ ಸ್ಕೂಲಿನ) ಭೇಟಿಯ ವಿವರ ಕುತೂಹಲಕಾರಿಯಾಗಿದೆ. ೮೪ ವರ್ಷದ ಶ್ರೀಮತಿ ಪೆಲೂಕ ಓರ್ವ ಅಮೆರಿಕನ್ ಮಹಿಳೆ. ಆಕೆ ಯುವತಿಯಾಗಿದ್ದಾಗಲೇ ಇಲ್ಲಿಗೆ (ಜರ್ಮನಿಗೆ) ಬಂದು ನೆಲಸಿ ನೃತ್ಯದಲ್ಲಿ ಭಾವಾಭಿವ್ಯಕ್ತಿಯ (expression) ಒಂದು ಶೈಲಿಯನ್ನು ಸೃಷ್ಟಿಸಿದಳು. ಪ್ರಾರಂಭದಲ್ಲಿ ಜರ್ಮನಿಯಲ್ಲಿ ನೃತ್ಯಕ್ಕೆ ಹೇಳುವಂತಹ ಪ್ರೋತ್ಸಾಹವಿರಲಿಲ್ಲ. ಸಾಲದ್ದಕ್ಕೆ ಅವಳು ನಾಜಿ ಪಂಗಡದ ದ್ವೇಶಕ್ಕೆ ಗುರಿಯಾದಳು. ಮಹಾಯುದ್ಧ ಮುಗಿದು ಜರ್ಮನಿಯಲ್ಲಿ ಶಾಂತಿ ನೆಲೆಸಿದ ಮೇಲೆ ಪೆಲೂಕ ಮತ್ತೆ ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿಕೊಂಡು ನೃತ್ಯ ಶಾಲೆಯನ್ನು ತೆರೆದಳು. ಪೂರ್ವಜರ್ಮನಿಯ ಸೂತ್ರಧಾರಿಗಳಾದ ರಷ್ಯನರು ಅವಳಿಗೆ ಪ್ರೋತ್ಸಾಹ ನೀಡಿದ್ದರಿಂದ ಇತ್ತೀಚಿನ ಮೂವತ್ತು ವರ್ಷಗಳಲ್ಲಿ ಪೆಲೂಕ ನೃತ್ಯಕಲೆಯ ವಿಚಾರದಲ್ಲಿ ಸಾಕಷ್ಟು ಸಾಧನೆ ಮಾಡಿರುವಳು. ಅವಳ ಶಾಲೆ ಇಂದು ತನ್ನ ವಿಶಿಷ್ಟ ಸಾಧನೆಯಿಂದಾಗಿ ಅಂತರರಾಷ್ಟ್ರೀಯ ಪ್ರಸಿದ್ಧ ಪಡೆದಿದೆ.

ಮಾಸ್ಕೋದ ಚೆಕೊಸ್ಕಿ ಜಾನಪದ ನೃತ್ಯಶಾಲೆಯ ಭೇಟಿಯ ವಿವರಗಳೂ ಬೆಲೆಯುಳ್ಳವಾಗಿವೆ. ಅಲ್ಲಿನ ಕರಾಗೋಡು ನೃತ್ಯ ಅಕಾಡೆಮಿಯ ಜಾನಪದ ನೃತ್ಯಗಳನ್ನು ನೋಡುತ್ತಿದ್ದಾಗ ಕಾರಂತರಿಗೆ ಕೊಡಗಿನ ಹುತ್ತರಿ ಹಬ್ಬದ ವೇಳೆಯಲ್ಲಿ ಕೊಡಗಿನ ಗಂಡಸರು ಸಾಮೂಹಿಕವಾಗಿ ಕುಣಿಯುವುದು ನೆನಪಾಗುತ್ತದೆ. ಮೂವತ್ತಮೂರು ವರ್ಷಗಳ ಹಿಂದೆ ತಾವು ಪ್ಯಾರಿಸ್‌ನಗರಕ್ಕೆ ಹೋದಾಗ ಯುಗೋಸ್ಲಾವಿಯಾದ ಹಲವು ಜಾನಪದ ನೃತ್ಯಗಳನ್ನು ನೋಡಿದ್ದು, ಸ್ಪಾನಿಷ್ ಸ್ತ್ರೀ ಕಾರ್ಮೆನ್ ಅಮಾಯಾ ಎನ್ನುವವಳು ಇಂಥ ಜಾನಪದ ಕುಣಿತವನ್ನೇ ಇನ್ನಷ್ಟು ಸೂಕ್ಷ್ಮವಾಗಿ, ತಮ್ಮ ಬ್ಯಾಲೆಗಳಷ್ಟೇ ಭಾವಸಂಪನ್ನವಾಗಿ ಮಾಡಿ ಬಣ್ಣ ಬೆಡಗಿನಿಂದ, ಅರ್ಥವತ್ತಾಗಿ ಎರಡು ಮೂರು ತಾಸು ನಡೆಸಿದ ಅದ್ಭುತ ಪ್ರದರ್ಶನವನ್ನು ಕಾರಂತರು ನೆನೆಯುವರು.

ಕಾರಂತರ ಪ್ರವಾಸದುದ್ದಕ್ಕೂ ಮುಗಿಲು ಕವಿದ ಬಾನು, ಮಬ್ಬು ಕವಿದ ವಾತಾವರಣ, ಕೊರೆಯುವ ಚಳಿಗಾಳಿ. ಆದರೂ ಅವರ ನೋಡಿ ಕಲಿಯುವ ಉತ್ಸಾಹ ಕುಗ್ಗಿಲ್ಲ. ತಮ್ಮ ಪ್ರವಾಸದಲ್ಲಿ ಸಂಗಾತಿಯಾಗಿ ಬಂದವರು ರಂಗಮಾಧ್ಯಮದಲ್ಲಿ ಸ್ನಾತಕರು, ಮೂಕಾಭಿನಯ ನಿಷ್ಣಾತರು. ಅವರು ಕಾರಂತರ ಜೊತೆ ಪ್ರವಾಸದುದ್ದಕ್ಕೂ ಹೊಂದಿಕೊಳ್ಳಲಿಲ್ಲ. ಅವರ ನಿಜ ನಾಮಧೇಯವನ್ನು ಮರೆಸಿ 'ಮಿನಿಸ್ವಾಮಿ' ಎಂದು ಕಾರಂತರು ಅವರನ್ನು ಕರೆದಿರುವರು. ಕಾರಂತರು ತಮ್ಮ ಸಂಗಾತಿಗೂ ತಮಗೂ ಇದ್ದ ಅಂತರವನ್ನು ಹೀಗೆ ಗುರುತಿಸುವರು: "...ಸ್ವಭಾವದ ಅಂತರ, ಸಂಪತ್ತಿನ ಅಂತರ,

ಉತ್ಸಾಹದ ಅಂತರ, ವಿದ್ವತ್ತಿನ ಅಂತರ, ಧಾರಾಳವಾಗಿತ್ತು. ಆತ ಪ್ರಾಧ್ಯಾಪಕ, ವೃತ್ತಿಯಲ್ಲಿ ಸ್ನಾತಕೋತ್ತರ ಪದವೀಧರ, ಅಜ್ಞರನ್ನು ಪ್ರಾಜ್ಞರನ್ನಾಗಿ ಮಾಡಲು ಹುಟ್ಟಿದವ. ಇನ್ನೂ ಕಲಿಯುವ ಉತ್ಸಾಹ ನನಗೆ. ನನ್ನ ಪಾಲಿನ ವಿದ್ಯಾರ್ಥಿದೆಸೆ ಕಳೆದಿರಲೇ ಇಲ್ಲ. ನಮ್ಮ ಉಭಯತರಲ್ಲಿನ ಈ ಭೇದ, ನಮ್ಮ ಪ್ರಯಾಣದ ಉದ್ದಕ್ಕೂ ಸೌಹಾರ್ದ ಮತ್ತು ಸರಳ ಸ್ನೇಹಗಳ ದಾರಿಯಲ್ಲಿ ಸಾಕಷ್ಟು ಅಡಚಣೆಯನ್ನು ತಂದಿತ್ತು." ಕಾರಂತರ ಬರಹಗಳಲ್ಲಿನ ವ್ಯಂಗ್ಯ ಈ ಪ್ರವಾಸ ಕಥನದಲ್ಲೂ ಅಲ್ಲಲ್ಲಿ ಕಾಣಬರುತ್ತದೆ. "...ಮಿನಿಸ್ವಾಮಿಯ ಇಂಗ್ಲಿಷ್ ಆತ ಬಂದ ಪ್ರಾಂತದ ಜನರು (ಉತ್ತರ ಭಾರತದವರು) ಸೇವಿಸುವ ತೈಲದ ವಾಸನೆಯನ್ನು ಬೀರುತ್ತಿತ್ತು. ನನ್ನ ಇಂಗ್ಲೀಷಿಗೆ ಕರ್ನಾಟಕ ದೇಶದ ತೈಲದ ನಾತ ಬರುತ್ತದೆ ಎಂದು ನಿಶ್ಚಯವಾಗಿ ತಿಳಿದಿದ್ದ."; "ಯುರೋಪಿನ ಸೇಬುಗಳಾಗಲಿ ನಮ್ಮ ವಿಮಾನದಲ್ಲಿ ನನಗೆ ದೊರಕಿದ ಸೇಬಾಗಲಿ ಇದ್ದಕ್ಕಿದ್ದಂತೆ ಕಚ್ಚಿ ತಿನ್ನುವ ಹಣ್ಣುಗಳಲ್ಲ. ಉಪ್ಪಿನಕಾಯಿ ಮಾಡಿ ತಿನ್ನಬಲ್ಲ ಹಣ್ಣುಗಳು..."; "ಆ ದಿನದ ಉತ್ಸವದ (ಬರ್ಲಿನ್‌ನಲ್ಲಿ ನಡೆದ ಭಾರತ-ಜರ್ಮನಿ ಉತ್ಸವದ) ಆರಂಭಕ್ಕೇ ದೀಕ್ಷಿತರು ಆದಿತಾಳದಲ್ಲಿ ರಚಿಸಿದ ಹಂಸಧ್ವನಿ ರಾಗದ ಗಣಪತಿ ಸ್ತುತಿಯ ವಾದನವಿದ್ದಿತು. ನಮ್ಮವರು ಹಂಚಿದ ಕರಪತ್ರದಲ್ಲಿ ಆ ಹಾಡಿನ ಪ್ರಥಮ ಪಂಕ್ತಿಯನ್ನು 'ನಾಥಾಪಿ ಗಣಪತಿಂ' ಎಂದು ಅಚ್ಚು ಹಾಕಬೇಕೇ? ವಾಸ್ತವಕ್ಕೂ ನನಗೆ ಆ ಸ್ತುತಿಪದ್ಯದ ಬಗ್ಗೆ ಮೊದಲಿನಿಂದಲೂ ಅನಾದರವಿತ್ತು. ಆ ಪದ್ಯದ ಬಂಧ ಗಣಪತಿಯನ್ನು ಬೆದರಿಸುವ ರೀತಿಯದೇ ಹೊರತು ಎಂದೂ ನುಡಿಸುವ ಹಾಡು ಅದಲ್ಲ ಎಂದು ನಮ್ಮ ಸಂಗೀತವನ್ನು ತಿಳಿದವರಿಗೆ, ಇಲ್ಲಿ ಆಚ್ಚಾದ ಕಾರ್ಯಕ್ರಮ ಕಣ್ಣಿಗೆ ಬಿದ್ದರೆ ಅದರಲ್ಲಿ 'ವಾತಾಪಿ ಗಣಪತಿಂ' ಹೋಗಿ 'ನಾಥಾಪಿ ಗಣಪತಿಂ' ಆದುದನ್ನು ಓದಿದರೆ ಹೇಗೆನಿಸೀತು?" ಕಾರಂತರ ಮಾತಿನಲ್ಲಿ ಮೂಡುವ ವ್ಯಂಗ್ಯಕ್ಕೆ ಈ ಉದಾಹರಣೆಗಳು ಸಾಕು. ಭಾರತದಿಂದ ವಿದೇಶಗಳಿಗೆ ಸಾಂಸ್ಕೃತಿಕ ನಿಯೋಗಗಳನ್ನು ಕಳುಹಿಸುವಾಗ ನಡೆಯುವ ಚಾಣಾಕ್ಷ ರಾಜಕೀಯಗಳನ್ನೂ ಕಾರಂತರು ಪ್ರಸ್ತಾಪಿಸಿರುವರು (ಪುಟ ೧೦).

ಈ ಪ್ರವಾಸಕಥನ ಕಾರಂತರ ನೋಡಿ ಕಲಿಯುವ ಉತ್ಸಾಹವನ್ನು ಸೊಗಸಾಗಿ ತಿಳಿಯಪಡಿಸುತ್ತದೆ. ಅವರ ಪಕ್ವವಾದ ಮನಸ್ಸು ತಮ್ಮ ಅನುಭವಗಳನ್ನು ಬರಹ ರೂಪದಲ್ಲಿ ದಾಖಲು ಮಾಡುವಾಗಲೂ ಎಚ್ಚರವಾಗಿದೆ. ಇದರಿಂದಾಗಿ ಪ್ರವಾಸಾನುಭವ ರಸವತ್ತಾಗಿ ನಿರೂಪಣೆಗೊಂಡಿದೆ.

**ಪ್ಯಾರಿಸ್:**

ಇಂಡೋ-ಫ್ರೆಂಚ್ ತಾಂತ್ರಿಕ ಸಹಕಾರ ಒಪ್ಪಂದ ಯೋಜನೆಯ ಮೂಲಕ ನವರತ್ನರಾಂರವರು ಪ್ಯಾರಿಸ್ಸಿಗೆ ಹೋಗಿ ಬಂದರು. ಪ್ಯಾರಿಸ್ಸಿನ ವಾಸ್ತವ್ಯದಲ್ಲಿ ಹೊಸ

ದೇಶ-ಬಾರದ ಭಾಷೆಗಳ ನಡುವೆ ಪಡೆದ ಅನುಭವಗಳು, ಫ್ರೆಂಚ್ ಜನಜೀವನ, ವಿಲಾಸಯುಕ್ತ ಭೋಗದ ಬದುಕು -ಇವುಗಳನ್ನು ತಮ್ಮ ಮಡದಿಗೆ ಪತ್ರಮುಖೇನ ಬರೆದು ತಿಳಿಸಿರುವರು. **ಪ್ಯಾರಿಸ್ಸಿನಿಂದ ಪ್ರೇಯಸಿಗೆ** ಎಂಬ ಅವರ ಈ ಕೃತಿಯಲ್ಲಿ ಇಪ್ಪತ್ತು ಸ್ವಾರಸ್ಯಪೂರ್ಣವೂ ಸುದೀರ್ಘವೂ ಆದ ಪತ್ರಗಳಿವೆ. ಮನದನ್ನೆಗೆ ಬರೆದ ಪತ್ರಗಳಾದ್ದರಿಂದ ಪತ್ರದ ಒಕ್ಕಣೆ ಲಘುವಾದ ಮನರಂಜನೆಯ ಶೈಲಿಯಲ್ಲಿದೆ. ಆ ಕಾರಣದಿಂದಲೂ ಏನೋ ಪ್ರವಾಸಕಥನ ಕುತೂಹಲವನ್ನು ಮೀಟುತ್ತಾ ಓದಿಸಿಕೊಂಡು ಹೋಗುತ್ತದೆ. ಭಾಷೆ ತಿಳಿಯದೆ ಲೇಖಕರು ಪಟ್ಟ ಅವಸ್ಥೆ ಕೇಳಿ ನಗು ಸಹಜವಾಗಿಯೇ ಬರುತ್ತದೆ. ಮ್ಯಾಚ್‌ಬಾಕ್ಸ್ ಕೇಳಿದಾಗ, ಅಲ್ಲ, ಮ್ಯಾಚ್‌ಬಾಕ್ಸ್ ಬೇಕೆಂದು ಅಭಿನಯಿಸಿ ಇಂಗಿತ ತಿಳಿಸಿದಾಗ ಕೌಂಟರಿನಾಕೆ ಕೊಟ್ಟದ್ದು ಅಂದವಾಗಿ ಪ್ಯಾಕ್ ಮಾಡಿದ ವಿರೇಚಕ ಮಾತ್ರೆಗಳು; ಪ್ರವಾಸಿಯೊಬ್ಬ ಕುಡಿಯಲು ನೀರು ಬೇಕೆಂದು ಅಭಿನಯ ಪೂರ್ವಕವಾಗಿ ಕೇಳಿದಾಗ ಕೊಟ್ಟದ್ದು ದ್ರಾಕ್ಷಾರಸ ಇಲ್ಲವೇ ಬೀರು!!! "ಇವರ ಭಾಷೆಯನ್ನು ನಾವು ಕಲಿಯದಿದ್ದರೆ ಕುಡಿಯಲು ನೀರಿಲ್ಲದೆ ಪ್ರಾಣಬಿಡುವುದು ಖಂಡಿತ" ಎಂಬ ಪ್ರವಾಸಿಯೊಬ್ಬನ ಉದ್ಗಾರ ಸಂಕಟದಿಂದ ಬಂದದ್ದು. ಹೆಣ್ಣು-ಮದಿರೆ-ಹೊನ್ನು ಪ್ಯಾರಿಸ್ಸಿನ ಜೀವನದಲ್ಲಿ ಪ್ರಧಾನವಾಗಿರುವುದನ್ನು ಲೇಖಕರು ಕಂಡಿರುವರು. ಅಷ್ಟೇ ಅಲ್ಲ, ಈ ರಂಗಿನ ಜೀವನದ ಅಂತರಾಳದಲ್ಲಿ ದಾರಿದ್ರ್ಯವೂ ಇರುವುದನ್ನು ಗಮನಿಸಿರುವರು. ಮೈಮುರಿತದ ದುಡಿಮೆಯಲ್ಲಿ, ನಯ ನಾಜೂಕಿನಲ್ಲಿ, ಮೃದುಮಧುರ ಮಾತುಕತೆಯಲ್ಲಿ, ಶೃಂಗಾರ ವಿಲಾಸಗಳಲ್ಲಿ ಫ್ರೆಂಚರು ಮೇಲುಗೈ. ಮೋಜಿನ ಹೆಣ್ಣುಗಳೇ ಪ್ಯಾರಿಸ್ಸಿನಲ್ಲೂ ತುಂಬಿಲ್ಲ, ಸಭ್ಯ ಗೃಹಿಣಿಯರೂ ಅಲ್ಲಿರುವರು. ಸಾರ್ವಜನಿಕ ಸ್ಥಳಗಳಲ್ಲಿ ನಿರ್ಲಜ್ಜೆಯಿಂದ ನಡೆದುಕೊಳ್ಳುವ ಹೆಣ್ಣು ಗಂಡುಗಳನ್ನು ನೋಡಿ ಫ್ರೆಂಚರ ಸಂಸ್ಕೃತಿಯನ್ನು ಅಳೆಯಬಾರದು. ಫ್ರೆಂಚ್ ತಂದೆತಾಯಿಯರಿಗೆ ಈ ವಾತಾವರಣದಲ್ಲಿ ಬೆಳೆಯುತ್ತಿರುವ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತೆ ಇದ್ದೇ ಇದೆ ಎಂದು ಲೇಖಕರು ಹೇಳುವರು. ಆ ಸಮಾಜದ ಲೈಂಗಿಕ ಸ್ವಾತಂತ್ರ್ಯದ ಅತಿತನದ ಬಗೆಗೆ ವಿಚಾರ ಮಾಡಿರುವರು. ಈ ಸಮಸ್ಯೆಯ ಬಗೆಗೆ ಫ್ರೆಂಚರಿಗಿರುವ ಕಳವಳವನ್ನು ಲೇಖಕರು ಗುರುತಿಸಿರುವರು. ಪ್ಯಾರಿಸ್ಸಿನ ಪ್ರೇಕ್ಷಣೀಯ ಸ್ಥಳಗಳ ಬಗೆಗೆ ವಿವರ ನೀಡುವಲ್ಲಿ ಲೇಖಕರ ವಿಷಯ ಸಂಗ್ರಹಣೆ ಮೆಚ್ಚುವಂತಿದೆ. ಪ್ಯಾರಿಸ್ಸಿನ ಅಂದು-ಇಂದುಗಳ ತುಲನಾತ್ಮಕ ವಿವೇಚನೆ ವಿಚಾರಾರ್ಹವಾಗಿದೆ. ಸ್ವಿಜರ್ಲೆಂಡ್, ಜರ್ಮನಿ, ಇಂಗ್ಲೆಂಡ್ ದೇಶಗಳ ಪ್ರವಾಸೀ ಅನುಭವಗಳೂ ಕೃತಿಯಲ್ಲಿ ಬಂದಿದ್ದು ಅವು ತೀರಾ ಸಪ್ಪೆಯಾಗಿ ನಿರೂಪಿತವಾಗಿವೆ. ಲೇಖಕರಲ್ಲಿ ಕುತೂಹಲ ಆಸಕ್ತಿಗಳು ಈಡುಜೋಡಾಗಿರುವುದರಿಂದ ಅವು ನಿರೂಪಣೆಯಲ್ಲೂ ಮೈಗೂಡಿ ಓದುಗರನ್ನು ರಂಜಿಸುತ್ತದೆ.

ಬೆಂಗಳೂರು ಬಾನುಲಿಯ ವಸಂತ ಕವಲಿಯವರು ಒಳ್ಳೆಯ ಕಲಾವಿದರೆಂಬುದು ಅದರ ಶ್ರೋತೃಗಳೆಲ್ಲರಿಗೂ ತಿಳಿದಿರುವ ವಿಚಾರ. ಒಳ್ಳೆಯ ಹಿಂದೂಸ್ತಾನೀ

ಸಂಗೀತಗಾರರೆಂಬುದು ಬಹುಜನರಿಗೆ ತಿಳಿಯದ ಸಂಗತಿ. ರಾಗ : ತಾನ ಸೇನ ದಡದಲ್ಲಿ ಎಂಬ ಅವರ ಇತ್ತೀಚಿನ ಪ್ರವಾಸ ಕಥನದಲ್ಲಿ ಅವರ ಆಸಕ್ತಿಯ ಮತ್ತೊಂದು ಮಗ್ಗುಲವಾದ ಸಂಗೀತದ ಬಗೆಗೆ ನಮಗೆ ಪರಿಚಯವಾಗುತ್ತದೆ. ಸಂಗೀತಗಾರರಾಗಿ ಪ್ಯಾರಿಸ್ ಪ್ರವಾಸ ಕೈಗೊಂಡ ವಸಂತ ಕವಲಿಯವರು, ತಮ್ಮ ಪ್ರವಾಸ ಕಾಲದಲ್ಲಿ ತಾವು ಕೊಟ್ಟ ಹಲವು ಸಂಗೀತ ಕಛೇರಿಗಳ ಬಗೆಗೆ ಕೃತಿಯಲ್ಲಿ ಹೆಚ್ಚಾಗಿ ಪ್ರಸ್ತಾಪಿಸಿರುವರು. ಆ ಕಾರಣದಿಂದಾಗಿ ಈ ಪ್ಯಾರಿಸ್ ಯಾತ್ರೆ ಸಂಗೀತ ಯಾತ್ರೆಯಾಗಿ ಪರಿಣಮಿಸಿದೆ. ಸಭೆಗೆ ಜನ ಹೇಗೆ ಸೇರಿದ್ದರು, ಯಾವ ಯಾವ ಹಾಡುಗಳನ್ನು ಯಾವ ಯಾವ ರಾಗಗಳಲ್ಲಿ ಹೇಳಲಾಯಿತು, ತಮ್ಮ ಸಂಗೀತ ಸಭೆಯ ಮೇಲೆ ಎಂತಹ ಪರಿಣಾಮ ಬೀರಿತು, ಸಂಗೀತಪ್ರಿಯರ ಪ್ರತಿಕ್ರಿಯೆ ಹೇಗಿತ್ತು? ಇವುಗಳ ಬಗೆಗೆ ವಿವರಣೆ ಹೆಚ್ಚಾಗಿ ಬಂದಿದೆ. 'ಅವತ್ತಿನ ಸಂಗೀತ ಕಛೇರಿ ಬಹಳ ಯಶಸ್ವಿಯಾಯಿತು' ಎಂಬ ತೃಪ್ತಭಾವದ ಹೇಳಿಕೆಯೊಡನೆ ಒಂದೊಂದು ಸಭೆಯ ಫಲಶ್ರುತಿಯ ವರದಿ ಕೃತಿಯಲ್ಲಿ ಬರುತ್ತದೆ.

ಪ್ರಾರಂಭದಲ್ಲಿ ತಬಲಾ ನುಡಿಸಲು ಒಬ್ಬ ತಬಲಜೀ ಸಿಗದೆ ಪಟ್ಟಪಾಡು, ಕೊನೆಗೆ ಪ್ಯಾರಿಸ್ಸಿಗೆ ಬಂದಿದ್ದ ಒಬ್ಬ ದಿಲ್ಲಿಯ ತಬಲಜೀಯು ದೊರೆತು ಆತ ಒಳ್ಳೆಯ ಸಾಥಿ ಆಗುವನೊ, ಇಲ್ಲವೋ ಎಂಬುದನ್ನು ಪರೀಕ್ಷಿಸಲು ಮನೆಯಲ್ಲಿಯೇ ಸಂಗೀತ ಕಛೇರಿ ನಡೆಸಿದುದು -ಇವೆಲ್ಲವುಗಳ ವಿವರ ಹಲವಾರು ಪುಟಗಳಲ್ಲಿ ತುಂಬಿಹೋಗಿದೆ. ತಮ್ಮದು ಆಗ್ರಾ ಘರಾನೆ ಎಂಬ ಅಭಿಮಾನ ಕವಲಿಯುವರದು. "ನಮ್ಮ ಆಗ್ರಾ ಘರಾನೆಯವರಿಗೆ ಒಳ್ಳೇ ತಬಲಜೀ ಬೇಕು. ಅಲ್ಲದೆ ನಾವು ಮಾಡುವ ಲಯಕಾರಿ ಕೆಲಸ-ಲಯಕಾರಿ ತಾನ, ಬೋಲ್, ತಾನ ಇವುಗಳ ಕಾಲಕ್ಕೆ ತಬಲಜೀಯೂ ಸ್ವಲ್ಪ ಉಸ್ತಾದಿಯನ್ನು ತೋರಿಸಿ ತಕ್ಕಮಟ್ಟಿಗೆ ನಮ್ಮ ಜೊತೆಗೆ ಸ್ಪರ್ಧೆಗೆ, ಐರಾಟಕ್ಕೆ ನಿಂತು ತನ್ನ ಪ್ರತಿಯೋಗಿತಾ ಮನೋಭಾವವನ್ನು ತೋರಿಸಿದರೆ ಅದು ಆಗ್ರಾ ಘರಾನೆಯವರಿಗೆ ವಿಶೇಷವಾದ ಕುಮ್ಮಕ್ಕನ್ನು, ಹುಮ್ಮಸ್ಸನ್ನು ತುಂಬುತ್ತದೆ" ಎಂದು ಹೇಳುವ ಕವಲಿಯವರು ಮುಂದೆ, ತಬಲಜೀಗಳು ಒಮ್ಮೊಮ್ಮೆ ಸಭೆಯನ್ನು ತಮ್ಮೆಡೆಗೆ ಸೆಳೆಯಲು ಪ್ರಯತ್ನಿಸಿ ತುಂಬಿದ ಸಭೆಯಲ್ಲಿ ಹಾಡುಗಾರರನ್ನು ತಕ್ಕಮಟ್ಟಿಗೆ ಅವಮಾನಕ್ಕೆ ಗುರಿಮಾಡುವುದರಲ್ಲಿ ಒಂದು ವಿಶೇಷವಾದ ಕ್ರೂರ ಆನಂದ ಪಡೆಯುವರು. ಆದ್ದರಿಂದ ತಬಲಜೀಯ ಮನೋಭಾವ ಹೀಗೆ ಎನ್ನುವುದು ಮೊದಲೇ ಗೊತ್ತಿದ್ದರೆ ಒಳ್ಳೆಯದು ಎಂಬ ತಮ್ಮ ಸಂದೇಹ-ಭಯಗಳನ್ನು ನಮ್ಮೊಡನೆ ಹಂಚಿಕೊಳ್ಳುವರು.

ಕವಲಿಯವರ ಪ್ರಧಾನ ಕಥನದಲ್ಲಿ ಉದ್ದಕ್ಕೂ ಅವರ ಸಂಗೀತ ಕಾರ್ಯಕ್ರಮಗಳ ಜಯಭೇರಿಯ ನಿನಾದವೇ ಕೇಳಿಬರುತ್ತದೆ. 'ಮಿಜೊಂದ ರಾದಿಯೊ'ದಲ್ಲಿ ಕವಲಿಯವರು ಕೊಟ್ಟ ಸಂಗೀತ ಕಛೇರಿಯ ಚಿತ್ರ ಅವರ ವೈಭವೀಕರಣ ಶೈಲಿಗೆ ಒಂದು ಸೊಗಸಾದ ನಿದರ್ಶನ. ಸಭೆಯ ಪೂರ್ವದಲ್ಲಿಯೇ ಆಕಾಶವಾಣಿಯವರು

ಕೈಗಿತ್ತ ನಾಲ್ಕು ಸಾವಿರ ಫ್ರಾಂಕ್‌ಗಳ (ಸು. ಎಂಟು ಸಾವಿರ ರೂ.ಗಳು) ಸಂಭಾವನೆ, ಸಭೆಯನ್ನು ತಾವು ಪ್ರವೇಶಿಸಿದ ರೀತಿ, ಕಾರ್ಯಕ್ರಮವನ್ನು ಧ್ವನಿಮುದ್ರಿಸಿಕೊಳ್ಳಲು ಪ್ರೇಕ್ಷಕರು ಕ್ಯಾಸೆಟ್ ಟೇಪ್‌ರೆಕಾರ್ಡರನ್ನು ತಮ್ಮ ಮುಂದಿಟ್ಟದ್ದು, ಕಾರ್ಯಕ್ರಮಕ್ಕೆ ಮೊದಲೇ ನೆಳಲು, ಬೆಳಕು, ಧ್ವನಿ ಸಂಯೋಜನೆಗಳನ್ನು ಬಹಳ ಶ್ರಮವಹಿಸಿ ಮಾಡಿದ್ದು -ಹೀಗೆ ಬೇಕಾದ್ದು ಬೇಡವಾದದ್ದು ಎಲ್ಲವನ್ನೂ ವರದಿ ಮಾಡುವರು. ಪ್ಯಾರಿಸ್ಸಿನ ಆಕಾಶವಾಣಿ ಕೇಂದ್ರವರು ಸಂದರ್ಶನವೊಂದನ್ನು ಏರ್ಪಡಿಸಿ ಹಲವಾರು ಪ್ರಶ್ನೆಗಳನ್ನು ಕೇಳಿ ಕವಲಿಯವರಿಂದ ಸೂಕ್ತ ಉತ್ತರ ಪಡೆದು ಅದನ್ನು ತಕ್ಷಣವೇ ಫ್ರೆಂಚ್ ಭಾಷೆಗೆ ಅನುವಾದಿಸಿ ಪ್ರಸಾರ ಮಾಡಿದರು. ಸಂದರ್ಶಕರು ಕವಲಿಯವರನ್ನು 'ಸಂಗೀತಗಾರನು ಹೇಗಿರಬೇಕು?' ಎಂಬ ಪ್ರಶ್ನೆಯನ್ನು ಕೇಳಿದರು. ಅದಕ್ಕೆ ಯಾವ ಪೂರ್ವಸಿದ್ಧತೆಯೂ ಇಲ್ಲದೇ ಕವಲಿಯವರು ನಿರರ್ಗಳವಾಗಿ ಒಂದೂವರೆ ಪುಟದ ವಿಚಾರಪೂರ್ಣ ಭಾಷಣ ಕೊಡುವರು. ಕವಲಿಯವರು ತಮ್ಮ ಪ್ರವಾಸನುಭವವನ್ನು ಟೇಪ್‌ರೆಕಾರ್ಡರ್ ಮುಂದೆ ಕುಳಿತು ಹೇಳಿ ದಾಖಲಿಸಿದ್ದರಿಂದಲೋ ಏನೋ ಅವರ ವಿವರಣೆಗಳಲ್ಲಿ ವಾಚಾಳಿತನ ಸ್ವಲ್ಪ ಹೆಚ್ಚಾಗಿಯೇ ಸೇರಿಬಿಟ್ಟಿದೆ.

ಪ್ರವಾಸಕಥನವು ಸಾಮಾನ್ಯವಾಗಿ ಪ್ರವಾಸಿಯು ಸಂದರ್ಶಿಸಿದ ಪ್ರದೇಶಗಳ ಭೌಗೋಳಿಕ ಸೊಗಸನ್ನೂ, ವಿಶೇಷವಾಗಿ ಜನಜೀವನವನ್ನೂ, ಸಾಂಸ್ಕೃತಿಕ ಮಹತ್ವವನ್ನೂ ಸ್ವಾರಸ್ಯಪೂರ್ಣವಾಗಿ ತಿಳಿಯಪಡಿಸುತ್ತದೆ. ಆದರೆ ಕವಲಿಯವರ ಈ ಪ್ರವಾಸ ಕಥನದಲ್ಲಿ ಅಂತಹ ಗುಣಗಳೇನೂ ಕಂಡುಬರುವುದಿಲ್ಲ. ಅವರು ಪ್ಯಾರಿಸ್, ಲಂಡನ್‌ಗಳಲ್ಲಿ ಸಂಚಾರ ಕೈಗೊಂಡಿದ್ದರೂ ಪ್ಯಾರಿಸ್ ಪ್ರವಾಸವೇ ಪುಸ್ತಕದ ಬಹುಭಾಗವನ್ನು ಆಕ್ರಮಿಸಿಕೊಂಡಿದೆ. ಆದರೂ ಪ್ರವಾಸಿಯಾಗಿ ಪ್ಯಾರಿಸ್ ಪಟ್ಟಣವನ್ನು ನೋಡಿದ್ದು, ಜನಜೀವನವನ್ನು ತಿಳಿದದ್ದು ಬಹಳ ಕಡಿಮೆ. ಅವರ ಕಾಲವೆಲ್ಲಾ ಸಂಗೀತದ ತಾಲೀಮಿನಲ್ಲಿಯೇ ಕಳೆದಿದೆ. ಆ ಸ್ಥಳಕ್ಕೆ ಅವರು ಅಪರಿಚಿತರಿದ್ದುದರಿಂದ, ಭಾಷೆ ತಿಳಿಯದ್ದರಿಂದ ಎಲ್ಲಿಗೆ ಹೋಗಬೇಕಾದರೂ ತಮ್ಮ ತಂಗಿ ಇಲ್ಲವೇ ಭಾವನವರನ್ನು ಕರೆದುಕೊಂಡು ಹೋಗಬೇಕಾಗುತ್ತಿತ್ತು. ಈ ಕಾರಣದಿಂದಾಗಿಯೂ ಅವರು ನೋಡಿದ್ದೂ ಬಹಳ ಕಡಿಮೆ ಹೇಳಿದ್ದೂ ಹೆಚ್ಚಿಲ್ಲ. ಲಂಡನ್‌ನಲ್ಲಿ ಮಾತ್ರ ಇವರ ಸುತ್ತಾಟ ಕಾಣಬರುತ್ತದೆ. ಸ್ಟ್ರಾಟ್‌ಫರ್ಡ್‌ನಲ್ಲಿ ತಾವು ನೋಡಿದ ನಾಟಕ, ಲಂಡನ್‌ನಲ್ಲಿ ನೋಡಿದ ಲೈಂಗಿಕ ಚಿತ್ರಗಳು -ಇವೆರಡನ್ನೂ ತೂಗಿ ನೋಡುತ್ತ 'ನನ್ನ ಶೇಕ್ಸ್‌ಪಿಯರನ ಲಂಡನ್ನು ಈ ಮಟ್ಟಕ್ಕಿಳಿಯಿತೇ' ಎಂದು ಲೇಖಕರು ವ್ಯಸನಪಟ್ಟಿರುವರು. ಅವರು ಕೊಡುವ ಹೈಡ್‌ಪಾರ್ಕಿನ ವರ್ಣನೆ ಆಕರ್ಷಕವಾಗಿದೆ.

ವಸಂತಕವಲಿಯವರು ಒಳ್ಳೆಯ ಕಲಾವಿದರು. ಅವರು ಸಾಂಸ್ಕೃತಿಕ ರಾಯಭಾರಿಯಾಗಿ ಪ್ಯಾರಿಸ್ ಲಂಡನ್ ನಗರಗಳನ್ನು ಸುತ್ತಿರುವರು. ಪಾಶ್ಚಾತ್ಯರಿಗೆ

ನಮ್ಮ ಸಂಗೀತದ ರಸದೌತಣ ನೀಡಿರುವರು. ಇವರ ಸಂಗೀತದ ಪ್ರಸಿದ್ಧಿಯನ್ನು ಕೇಳಿ ಪ್ಯಾರಿಸ್‌ನ ಬೇರೆ ಬೇರೆ ಭಾಗಗಳಲ್ಲಿ ಸಂಗೀತ ಕಛೇರಿಗೆ ಇವರನ್ನು ಆಹ್ವಾನಿಸಿದುದಷ್ಟೇ ಅಲ್ಲ, ತುಂಬು ಮನಸ್ಸಿನಿಂದ ಸಂಗೀತ ಕೇಳಿ ಗೌರವಿಸಿರುವರು. ಅಲ್ಲಿನ ಸೋನೋ ಡಿಸ್ಕ್ ಕಂಪನಿಯವರು ಕವಲಿಯವರ ಸಂಗೀತದ 'ಲಾಂಗ್‌ಪ್ಲೇ' ರೆಕಾರ್ಡ್ ಮಾಡಿ ಸಾರ್ಥಕ ರೀತಿಯಲ್ಲಿ ಅವರನ್ನು ಸನ್ಮಾನಿಸಿರುವರು. ಈ ಪ್ರವಾಸ ಕಥನ 'ಪ್ರವಾಸಿ ಕವಲಿ'ಯವರ ಪರಿಚಯ ಮಾಡಿಕೊಡುವುದರ ಬದಲು 'ಕಲಾವಿದ ಕವಲಿ'ಯವರ ಪರಿಚಯ ಮಾಡಿಕೊಡುತ್ತದೆ. ಇದರಲ್ಲಿ ಆತ್ಮಕಥನದ ವಿವರಗಳು ಹೆಚ್ಚಾಗಿದ್ದು ಪ್ರವಾಸಿಯ 'ಅನುಭವ ಕಥನ' ಕಡಿಮೆ ಪ್ರಮಾಣದಲ್ಲಿದೆ. ಮಾತಿಗೆ ಸ್ವಲ್ಪ ಹಿಡಿತ, ಆತ್ಮಶ್ಲಾಘನೆಗೊಂದಿಷ್ಟು ಸಂಯಮ ದೊರೆತು, ಪ್ರವಾಸದ ದಟ್ಟ ಅನುಭವಗಳು ತಮ್ಮ ಸುರುಳಿ ಬಿಚ್ಚಿದ್ದರೆ ಈ ಕೃತಿ ಇನ್ನಷ್ಟು ಸಹನೀಯವಾಗುತ್ತಿತ್ತು; ಪರಿಣಾಮಕಾರಿಯಾಗುತ್ತಿತ್ತು.

ನಾಗತಿಹಳ್ಳಿ ಚಂದ್ರಶೇಖರ ಅವರಿಗೆ ಎರಡು ತಿಂಗಳ ಫ್ರಾನ್ಸ್ ಪ್ರವಾಸ ಒದಗಿಬಂದದ್ದು ಆಕಸ್ಮಿಕವಾಗಿ, ಗೆಳೆಯ ಸುರೇಶ್ ಹೆಬ್ಳೀಕರ್ ಅವರಿಂದ. ಫ್ರಾನ್ಸ್‌ಗೆ ಹೋಗಲು ತಮಗೆ ಬಂದ ಅವಕಾಶವನ್ನು ಸುರೇಶ್ ಹೆಬ್ಳೀಕರ್ ತಮ್ಮ ಗೆಳೆಯನಿಗಾಗಿ ಬಿಟ್ಟುಕೊಟ್ಟರು. ಮುಂಬೈನಲ್ಲಿರುವ ಈಸ್ಟ್‌ವೆಸ್ಟ್ ಕಲ್ಚರಲ್ ಅಸೋಸಿಯೇಷನ್ ಒಂದು ಸಾಂಸ್ಕೃತಿಕ ವಿನಿಮಯ ಸಂಸ್ಥೆ. ಈ ಸಂಸ್ಥೆ ದೇಶದ ವಿವಿಧ ರಾಜ್ಯಗಳ ತರುಣರನ್ನು ಫ್ರಾನ್ಸ್‌ಗೆ ಕಳುಹಿಸಲಿತ್ತು. ನಾಗತಿಹಳ್ಳಿ ಈ ಅವಕಾಶ ಬಳಸಿಕೊಂಡು ಫ್ರಾನ್ಸ್ ದೇಶದಲ್ಲಿ ಸುತ್ತಾಡಿ ಬಂದರು. ಅವರ ಪ್ರವಾಸದಲ್ಲಿ ಅಮೇರಿಕೆಯು ಸೇರಿದ್ದರೂ ಆ ದೇಶವನ್ನು ಅವರು ಭಾಗಶಃ ನೋಡಿಬಂದರು. ಹೀಗಾಗಿ ಪ್ರವಾಸ ಕಥನದ ತುಂಬ ಫ್ರಾನ್ಸ್ ಪ್ರವಾಸಾನುಭವ ಆವರಿಸಿಕೊಂಡುಬಿಟ್ಟಿದೆ. ತಮ್ಮ ಪ್ರವಾಸ ಮುಗಿಸಿಬಂದ ಉತ್ಸಾಹದಲ್ಲೇ ನಾಗತಿಹಳ್ಳಿ ತಮ್ಮ ಅನುಭವಗಳಿಗೆ ಒಂದು ರೂಪ ಕೊಟ್ಟು 'ಅಯನ' ಎಂಬ ಕೃತಿ ರೂಪದಲ್ಲಿ ಪ್ರಕಟಿಸಿದರು. ಅದಕ್ಕೆ ಪ್ರತಿಕ್ರಿಯೆ ಹೇಗೆ ಬಂದಿತೆಂಬುದನ್ನು ಅವರು ಹೀಗೆ ಹೇಳಿಕೊಂಡಿರುವರು: "ಒಬ್ಬರು ಹೇಳಿದರು- 'ನಾನೊಂದು ದೇಶದಲ್ಲಿ ಏಳುವರ್ಷ ಇದ್ದೆ. ಒಂದಕ್ಷರ ಬರೆಯಲಾಗಿಲ್ಲಿಲ್ಲ. ನೀವು ಎರಡು ತಿಂಗಳಲ್ಲಿ ಫ್ರಾನ್ಸ್ ಬಗ್ಗೆ ಹೇಗೆ ಬರೆದ್ರಿ?' ಅವರ ದನಿಯಲ್ಲಿ ಕುಹಕವಿತ್ತು. ನಾನು ಹೇಳಿದೆ "ಎಷ್ಟು ವರ್ಷ ಇರ್ತೀವಿ ಅನ್ನೋದು ಮುಖ್ಯ ಅಲ್ಲ, ಹೇಗಿರ್ತೀರಿ ಅನ್ನೋದು ಮುಖ್ಯ... ಒಳಗಣ್ಣು ತೆರೆಯದೆ ಇದ್ದವರಿಗೆ ನೂರು ವರ್ಷ ಕೂಡಾ ಏನೂ ಅನ್ನಿಸಲ್ಲ."

ನಾಗತಿಹಳ್ಳಿಯವರ ಈ ಪ್ರವಾಸಕಥನದ ಪ್ರಮುಖ ಆಕರ್ಷಣೆಯೆಂದರೆ ನಗೆಯ ಲೇಪನದ ಆಹ್ಲಾದಕರ ನಿರೂಪಣೆ. ಫ್ರಾನ್ಸ್‌ನ ಕಲೆ, ಸಾಹಿತ್ಯ, ಸಂಸ್ಕೃತಿಗಳ ಪರಿಚಯವನ್ನು ತಮ್ಮ ಪ್ರವಾಸಕಾಲದಲ್ಲಿ ಪಡೆಯಬೇಕೆಂಬ ಉತ್ಸಾಹ ಲೇಖಕರಲ್ಲಿದೆ. ಅದಕ್ಕಾಗಿ ಬ್ರೆಡ್ಡು ತಿಂದುಕೊಂಡು ಅಲೆದಾಡಿದ್ದಾರೆ. ಕಂಡಕಂಡವರನ್ನು

ಮಾತನಾಡಿಸಿದ್ದಾರೆ. ತಮ್ಮ ಸುತ್ತಾಟದಲ್ಲಿ ವೃದ್ಧರ ಏಕಾಕಿತನವನ್ನು ಗಮನಿಸಿರುವ ನಾಗತಿಹಳ್ಳಿ, ಯುವಜನರು ಆಲಸಿಗಳಾಗುತ್ತಿರುವುದು, ದಿಕ್ಕುಗೆಡುತ್ತಿರುವುದು, ಮಾದಕವಸ್ತುಗಳ ದಾಸರಾಗುತ್ತಿರುವುದು ವೃದ್ಧರ ಚಿಂತೆಗೆ ಕಾರಣವಾಗಿರುವುದನ್ನು ಲಕ್ಷಿಸಿರುವರು. ಅವರು ಫ್ರಾನ್ಸ್‌ನ ಯುವಜನರ ಸಮಸ್ಯೆಯ ಬಗೆಗೆ ವಿಚಾರಮಾಡುತ್ತಾ ಭಾರತದ ಕಡೆ ಹೊರಳುವರು "ನಮ್ಮದು ಸಮಸ್ಯೆಗಳನ್ನು ಸಮಸ್ಯೆಗಳಿಂದ ಬಿಡಿಸುತ್ತಾ ಹೊಸ ಸಮಸ್ಯೆಗಳ ಸುಳಿಗೆ ಸಿಕ್ಕಿಬೀಳುತ್ತಾ, ಯಾವ ಸಮಸ್ಯೆಗಳೂ ಇತ್ಯರ್ಥವಾಗದೆ ಉಳಿದ ಸಮಸ್ಯಾತ್ಮಕ ನಾಡು" ಎಂದು ವ್ಯಂಗ್ಯವಾಡುವರು (ಪು. ೬೫).

ಅತಿಥೇಯ ಜಾನ್ ನಾಗತಿಹಳ್ಳಿಯವರನ್ನು ತನ್ನ ಅಣ್ಣನ ದ್ರಾಕ್ಷಿ ಹೊಲಕ್ಕೆ ಕರೆದುಕೊಂಡು ಹೋದ ಅಲ್ಲಿನ ಸಮೃದ್ಧಿ ಸಂತೃಪ್ತಿ ನೋಡಿದ ಅವರು "ಏನು ಮಣ್ಣು ಅದು. ಏನು ಭೂಮಿತಾಯಿ ಅವಳು. ನನಗೆ ಒಂದು ಮಾತು ಖಾತರಿಯಾಗಿ ಅನ್ನಿಸಿತು. ಈ ಮಣ್ಣು ಎಲ್ಲರೂ ನೆಮ್ಮದಿಯಾಗಿ ಬದುಕುವಷ್ಟು ವಿಶಾಲವೂ ಶ್ರೀಮಂತವೂ ಆಗಿದೆ. ಭಾರತೀಯರಿಗೆ ಏನೋ ಆಗಿದೆ. ಎಲ್ಲ ಹಾಳುಗೆಡುವಿದ್ದಾರೆ. ಪುಟಾಣಿ ರಾಜ್ಯಗಳೆಲ್ಲಾ ಅಷ್ಟೊಂದು ಬೋಗ್ಯ ಮಾಡಿರುವಾಗ ನಾವು ಬೀಳುಬಿಟ್ಟು ಕುಳಿತಿದ್ದೀವಲ್ಲಾ ತಪ್ಪು ಎಲ್ಲಿದೆ? ಹೊಲ ಖಾಲಿ ಇದ್ದರೂ ಉಣ್ಣುವ ಬಾಯಿಗಳು ಮಾತ್ರ ಹೆಚ್ಚುತ್ತಿದ್ದರೆ ಹೇಗೆ? ನಮ್ಮ ರೈತ ಸಾಲದಿಂದ ಮುಕ್ತನಾಗುವ ದಿನಗಳೇ ಕಾಣುವುದಿಲ್ಲ. ಜಡ್ಡುಗಟ್ಟಿರುವ ವ್ಯವಸಾಯ ವಿಧಾನಗಳು, ಜನರ ತಂಟೆಗೆ ಹೋಗದ ವ್ಯವಸಾಯ ವಿಶ್ವವಿದ್ಯಾನಿಲಯಗಳು ಅತಿವೃಷ್ಟಿ, ಅನಾವೃಷ್ಟಿಗಳು, ಸಾಲ ನೀಡುವ ಸೋಗುಗಳು, ಬೆಳೆ ನುಂಗುವ ಮಧ್ಯವರ್ತಿಗಳು, ಚಳುವಳಿಗಳಲ್ಲಿ ದಿಕ್ಕೆಟ್ಟ ಸಮುದಾಯ, ರೈತಾಪಿ ಜನರನ್ನು ಅಲಕ್ಷ್ಯ ಮಾಡುವ ನಾಗರೀಕ ಸಮಾಜ, ಅಧಿಕಾರಶಾಹಿಗಳು -ಈ ವಿಷವರ್ತುಲವನ್ನು ಹೇಗೆ ಸರಿಪಡಿಸುವುದು?" ಎಂದು ಚಿಂತಿಸುವರು (ಪು. ೮೧).

ಪ್ಯಾರಿಸ್‌ನಲ್ಲಿ ಕುತೂಹಲಕ್ಕೆ ನೈಟ್‌ಕ್ಲಬ್ಬಿಗೆ ಹೋಗಿದ್ದ ನಾಗತಿಹಳ್ಳಿಯವರು ಅದರ ವಿವರ ಕೊಡಹೋಗುವುದಿಲ್ಲ. ಅದಕ್ಕೆ ಕಾರಣ "ಓದುಗರಿಗಿಂತ ಹೆಂಡತಿಯ ಪ್ರತಿಕ್ರಿಯೆಗಳು ಹಿಂಸಾರೂಪದಲ್ಲಿರುತ್ತವೆಯಾದ್ದರಿಂದ" ಎನ್ನುವರು. ಲೇಖಕರ ರಂಜನೆಯ ಬರವಣಿಗೆಗೆ ಈ ಉದಾಹರಣೆ ಸಾಕು.

"ಭಾರತೀಯ ಸಂಜೆ" ಕಾರ್ಯಕ್ರಮದಲ್ಲಿ ನಾಗತಿಹಳ್ಳಿಯವರನ್ನು ಭೇಟಿ ಮಾಡಿದ ಮುಸ್ಲಿಂ ಹುಡುಗಿ ಹೌರಾ ಮುಗ್ಧ ಪ್ರಶ್ನೆಯೊಂದನ್ನು ಕೇಳುವಳು: "ಭಾರತದಲ್ಲಿ ಮುಸ್ಲಿಂಮರನ್ನು ತುಂಬಾ ಹೀನಾಯವಾಗಿ ನಡೆಸಿಕೊಳ್ಳುತ್ತಾರಂತೆ. ಹಿಂದೂಗಳು ಅವರನ್ನು ಚಿತ್ರಹಿಂಸೆ ಮಾಡುತ್ತಾರಂತೆ. ಹೌದೆ?" ಈ ವಿಷಯವನ್ನು ಆ ಮುಗ್ಧ ಹುಡುಗಿಯ ತಲೆಯಲ್ಲಿ ಬಲವಂತವಾಗಿ ತುರುಕಿದವನು ಅವಳ ಅಣ್ಣನೆಂಬುದು ಹೌರಾ

ಜೊತೆಗೆ ನಡೆಸಿದ ಮಾತುಕತೆಯಿಂದ ನಾಗತಿಹಳ್ಳಿ ತಿಳಿಯುವರು. ಆಕೆ ತನ್ನ ಅಣ್ಣನಿಗೆ ಹೆದರಿ ನಾಗತಿಹಳ್ಳಿಯವರ ಜೊತೆ ಮಾತನಾಡುವಾಗ ಬಹಳ ಆತಂಕದಿಂದಿದ್ದುದನ್ನು ಗಮನಿಸಿದ ಅವರು "ನಿಮಗೆ ನನ್ನ ಜೊತೆ ಮಾತನಾಡುವುದು ಕಷ್ಟವಾಗಿದ್ದರೆ ಮಾತನಾಡುವುದೇ ಬೇಡ" ಎನ್ನುವರು.

ನ್ಯೂಯಾರ್ಕ್‌ಸಿಂದ ಮುಂಬೈಗೆ ಬಂದಾಗ ನಾಗತಿಹಳ್ಳಿಯವರ ದೊಡ್ಡ ಸೂಟ್ ಕೇಸ್ ನೋಡಿ ಸಂಶಯಗೊಂಡ ಕಸ್ಟಮ್ಸ್‌ನವರು ಅದನ್ನು ತೆಗೆಸಿ ನೋಡಿದರು. ಅದರಲ್ಲಿ ಬರೀ ಪುಸ್ತಕಗಳಿದ್ದುದನ್ನು ಕಂಡು 'ಅಮೇರಿಕಾದಿಂದ ಪುಸ್ತಕ ತರ್‍ತಾ ಇದ್ದೀಯಾ? ಐ ಪಿಟಿ ಯು!' ಎಂದು ಅನುಕಂಪ ಸೂಚಿಸಿ ಬೀಳ್ಕೊಟ್ಟರಂತೆ. ತಮ್ಮನ್ನು ತಾವೇ ಲೇವಡಿ ಮಾಡಿಕೊಳ್ಳುವ ನಾಗತಿಹಳ್ಳಿಯವರ ಬರೆಹ ಓದುತ್ತಿದ್ದಂತೆಯೇ ನಗೆಯುಕ್ಕಿಸುತ್ತದೆ.

ತಿಪ್ಪೇಸ್ವಾಮಿಯವರು **ಕಲಾವಿದ ಕಂಡ ಫ್ರಾನ್ಸ್** ಎಂಬ ಪ್ರವಾಸ ಕಥನದಲ್ಲಿ ಫ್ರಾನ್ಸ್‌ನ ವಿದ್ಯಾರ್ಥಿಜೀವನದ ಕಿರುಪರಿಚಯ ಮಾಡಿಕೊಟ್ಟಿರುವರು. ಅವರು ಕೆಫೆಯೊಂದರಲ್ಲಿ ವಿದ್ಯಾರ್ಥಿಯೊಬ್ಬ ಡ್ರಗ್ಸ್ ಸೇವಿಸಿ ಅನ್ಯಮನಸ್ಕನಾಗಿ ಆಕಾಶದ ಕಡೆ ನೋಡುತ್ತ ಕುಳಿತಿರುವುದನ್ನು ಕಂಡರು. ತಮ್ಮ ಟೇಬಲ್ ಎದುರಿಗೆ ಕುಳಿತ ಇಂಗ್ಲೀಷ್ ಪ್ರಾಧ್ಯಾಪಕ ಈಗಲ್‌ಟನ್‌ರವರ ಜೊತೆ ಫ್ರಾನ್ಸ್‌ನ ವಿದ್ಯಾರ್ಥಿಜೀವನದ ಬಗ್ಗೆ ವಿಚಾರಿಸಿದರು. ಈಗಲ್‌ಟನ್ ಹೀಗೆ ವಿವರಣೆ ನೀಡಿದರು: "ನಮ್ಮಲ್ಲಿ ಪ್ರೈಮರಿ ಶಾಲೆಯಿಂದ ಪ್ರೌಢಶಾಲೆಯ ತನಕ ವಿದ್ಯಾಭ್ಯಾಸದ ಜವಾಬ್ದಾರಿ ತಂದೆ-ತಾಯಿಗಳದು. ಪ್ರೌಢಶಾಲೆಗೆ ಬಂದ ನಂತರ ನಮ್ಮಲ್ಲಿ ಬೆಳೆದ ಹುಡುಗ-ಹುಡುಗಿಯರಲ್ಲಿ ಸ್ವಾತಂತ್ರ್ಯಭಾವ ಸ್ವಚ್ಛಂದದ ಘಟ್ಟ ಮುಟ್ಟುತ್ತದೆ. ಡೇಟಿಂಗ್‌ನಲ್ಲಿ ಲೈಂಗಿಕ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾರೆ. ಯಾವ ನಿರ್ಬಂಧವೂ ಇಲ್ಲದೆ ಕಾಮುಕಲೋಕಕ್ಕೆ ಕಾಲಿಡುತ್ತಾರೆ. ಅದು ತಪ್ಪು ಎಂದು ಅವರ ತಂದೆ ತಾಯಿಗಳಾಗಲೀ, ಅಧ್ಯಾಪಕರುಗಳಿಗಾಗಲೀ ತಿಳಿಯುವುದಿಲ್ಲ. ಶಾಲೆಗಳ ಒಳಗೂ ಹೊರಗೂ ಮೈಮರೆತು ಪ್ರೇಮೋನ್ಮಾದದಲ್ಲಿ ವರ್ತಿಸುತ್ತಾರೆ. ಇದು ತಮಗೆ ಸಂಬಂಧಪಟ್ಟ ವಿಷಯವಲ್ಲವೆಂದೇ ಭಾವಿಸುವ ಉಪಾಧ್ಯಾಯರೂ ನಮ್ಮಲ್ಲಿದ್ದಾರೆ. ಪದವಿ ತರಗತಿಗಳಿಗೆ ವಿದ್ಯಾರ್ಥಿಗಳು ಹೋದ ಕೂಡಲೇ ಸಮಸ್ಯೆ ಬಹುಮಟ್ಟಿಗೆ ಪರಿಹಾರವಾಗುತ್ತದೆ. ಹುಡುಗ ಮನೆಬಿಟ್ಟು ಹೋಗುತ್ತಾನೆ. ಅವರ ತಂದೆತಾಯಿಗಳಿಗೆ ಅವರ ವಿದ್ಯಾಭ್ಯಾಸದ ಜವಾಬ್ದಾರಿ ಇರುವುದಿಲ್ಲ. ಕಾಲೇಜಿಗೆ ಸೇರಿ ಓದಬೇಕಾದರೆ ತಾನೇ ಸಂಪಾದಿಸಿಕೊಂಡು ಓದಬೇಕು. ಹೋಟೇಲು; ಅಂಗಡಿಗಳಲ್ಲಿ ಬೆಳಗ್ಗೆ ಸಂಜೆ ಒಪ್ಪೊತ್ತಿನ ಕೆಲಸಗಳು ಸಿಗುತ್ತವೆ. ನಾಲ್ಕು ಗಂಟೆ ದುಡಿದರೆ ಸಾಕು ಊಟವಸತಿ ಬಟ್ಟೆ ಫೀಸಿಗೆ ಬೇಕಾಗುವಷ್ಟು ಹಣ ದೊರೆಯುತ್ತದೆ. ಅಲ್ಲಿನ ವಿದ್ಯಾರ್ಥಿಗಳಿಗೆ ಕಾಮ ಒಂದು ಸಮಸ್ಯೆಯೇ ಅಲ್ಲ, ಹುಡುಗ ತಾನು ಪ್ರೀತಿಸಿದ ಹುಡುಗಿಯೊಂದಿಗೆ ವಾಸವಾಗಿರುತ್ತಾನೆ. ಲಗ್ನ ಆಗಬೇಕೆಂಬ

ನಿರ್ಬಂಧವಿಲ್ಲ. ಮಕ್ಕಳಾಗದಂತೆ ನೋಡಿಕೊಳ್ಳುತ್ತಾರೆ. ಒಬ್ಬರಿಗೊಬ್ಬರಿಗೆ ತಮ್ಮ ಸ್ನೇಹ ಬೇಡ ಎನಿಸಿದಾಗ ಬಿಟ್ಟುಬಿಡುತ್ತಾರೆ. ದೇಶವಿದೇಶಗಳಲ್ಲಿ ಸ್ವಚ್ಛಂದವಾಗಿ ಕಾಮುಕತನದಲ್ಲಿ ತಿರುಗಾಡಿಕೊಂಡು ಬರುತ್ತಾರೆ. ಜೀವನದಲ್ಲಿ ಜಿಗುಪ್ಸೆಗೊಂಡವರು ಈ ಹುಡುಗನಂತೆ ಡ್ರಗ್ಸ್ ಸೇವಿಸಿ ಮೈಮರೆಯುತ್ತಾರೆ, ಆರೋಗ್ಯ ಕೆಡಿಸಿಕೊಳ್ಳುತ್ತಾರೆ" (ಪು. ೭೬-೭೭).

ತಿಪ್ಪೇಸ್ವಾಮಿಯವರು ಓರ್ವ ಕಲಾವಿದನ ಕಣ್ಣಿನಲ್ಲಿ ಫ್ರಾನ್ಸ್‌ನ್ನು ನೋಡಿರುವರು. ಹೀಗಾಗಿ ಅವರ ಪ್ರವಾಸದುದ್ದಕ್ಕೂ ಕಾಣಬರುವುದು ಫ್ರಾನ್ಸ್‌ನ ಕಲೆಯ ಬಗೆಗಿನ ಆರಾಧನೆ ಮೆಚ್ಚುಗೆ. ಕಲಾ ಪ್ರದರ್ಶನಕ್ಕೆ ಅವರು ತಂಡದೊಂದಿಗೆ ಫ್ರಾನ್ಸ್‌ಗೆ ಹೋದದ್ದರಿಂದ ಆತಿಥೇಯ ಫ್ರಾನ್ಸ್ ಆ ತಂಡದವರಿಗೆ ತನ್ನ ದೇಶವನ್ನು ತೋರಿಸಿದೆ. ಹೀಗಾಗಿ ಇಲ್ಲಿನ ಪ್ರವಾಸಕ್ಕೊಂದು ಇತಿಮಿತಿಯಿದೆ.

ಪಿ.ಆರ್. ತಿಪ್ಪೇಸ್ವಾಮಿಯವರ **ಕಲಾವಿದ ಕಂಡ ಫ್ರಾನ್ಸ್** ಕಲಾವಿದನೊಬ್ಬ ಫ್ರಾನ್ಸ್ ದೇಶವನ್ನು ಸುತ್ತಿದ ಅನುಭವ ಕಥನ. ಕಲಾತಂಡವೊಂದರ ನೇತೃತ್ವವಾಗಿ ೧೯೯೧ರಲ್ಲಿ ಕೈಗೊಂಡ ಪ್ರವಾಸದ ಪ್ರತಿಫಲ ಈ ಪ್ರವಾಸ ಕಥನ. ಅವರಿಗೆ ತಿರುಗಾಟದ ಹುಚ್ಚು ಹತ್ತಿದುದು ಅಜ್ಜನಿಂದ. ಅವರು ಗ್ರಾಮಾಂತರ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದರಿಂದ ಅವರನ್ನು ತಮ್ಮ ಹಳ್ಳಿಗಳಿಗೆ ಆಹ್ವಾನಿಸುತ್ತಿದ್ದರು. ಅವರ ಜೊತೆ ಚಕ್ಕಡಿಗಾಡಿಯಲ್ಲಿ ತಿಪ್ಪೇಸ್ವಾಮಿಯವರು ಹೋಗುತ್ತಿದ್ದರು. ಹೀಗೆ ಪಯಣ ಮಾಡುವಾಗ ಕಂಡ ಕಾಡುಮೇಡುಗಳು, ಬೆಟ್ಟಗುಡ್ಡಗಳು, ಗುಡಿಗೋಪುರಗಳು, ಗ್ರಾಮೀಣ ಪರಿಸರದ ಸುಂದರ ಪ್ರಕೃತಿ ದೃಶ್ಯಗಳು ಅವರ ಬದುಕನ್ನು ರೂಪಿಸಲು ಕಾರಣವಾದುವು. ಕಲಾವಿದರಾಗಿ ಅವರು ದೇಶದ ಹಲವು ಪ್ರಾಂತ್ಯಗಳಲ್ಲಿ ಸಂಚರಿಸಿದ್ದರು. ಫ್ರಾನ್ಸ್‌ಗೆ ಪ್ರವಾಸ ಹೊರಟದ್ದು ಹದಿನೈದು ದಿವಸಗಳ ಕಾಲಮಿತಿಯಲ್ಲಿ. "ಒಬ್ಬ ವ್ಯಕ್ತಿ ಹೊರದೇಶಕ್ಕೆ ಹೋದಾಗ ಅಲ್ಲಿಯ ಜನಜೀವನದ ಒಳಹೊಕ್ಕು ನೋಡಬೇಕಾದರೆ ಸಾಕಷ್ಟು ಕಾಲ ಅಲ್ಲಿರಬೇಕು ಹಾಗೂ ಮುಖ್ಯವಾಗಿ ಅಲ್ಲಿಯ ಭಾಷೆ ತಿಳಿದಿರಬೇಕು" ಎನ್ನುವ ಮೂಲಕ ತಮ್ಮ ಮಿತಿಯನ್ನು ಲೇಖಕರು ತಿಳಿದಿರುವರು.

ತಿಪ್ಪೇಸ್ವಾಮಿ ಪ್ಯಾರಿಸ್‌ನಗರದ ಕಲಾಜಗತ್ತಿನ ಬಗ್ಗೆ ತುಂಬು ಅಭಿಮಾನದಿಂದ ಮಾತನಾಡಿರುವರು: "ಇಲ್ಲಿ ಕಲೆ ಕಟ್ಟಡಗಳೊಳಗಲ್ಲದೆ ಹೊರಗೂ ಚೆಲ್ಲುವರಿದಿರುವುದು ಕಾಣುತ್ತದೆ. ಫ್ರೆಂಚ್ ಜನರ ಕಲಾಭಿರುಚಿ ಅವರ ಉಡುಪು, ಉದ್ಯಾನ, ಮನೆಗಳಿಂದಲೇ ಮೊದಲಾಗುತ್ತದೆ..." (ಪು. ೧೦೩). "ಪ್ಯಾರಿಸ್‌ನಲ್ಲಿ ಕಲೆ ಸಂಸ್ಕೃತಿಗಳಿಗಾಗಿ ಇಲ್ಲಿನ ಜನ ತುಂಬಾ ತ್ಯಾಗಮಾಡಿದ್ದಾರೆ. ಬೀದಿ ಬೀದಿಯಲ್ಲಿ ಕಡೆದ ಮೂರ್ತಿಗಳು. ಎಲ್ಲೆಲ್ಲಿಯೂ ಕಲೆ, ಕಲೆ..." (ಪು. ೧೦೨) 'ಲುವರ' ಮ್ಯುಸಿಯಂನ್ನು ತನ್ಮಯವಾಗಿ ವರ್ಣಿಸುವಲ್ಲಿ ತಿಪ್ಪೇಸ್ವಾಮಿಯವರ ಕಲಾಸಕ್ತಿ ಗರಿಗೆದರುತ್ತದೆ. ಅಲ್ಲಿನ ಭವ್ಯ

ಕಲಾಕೃತಿಗಳು, ಚಿತ್ರಗಳನ್ನು ನೋಡಿ ಸುಖಿಸಿದ ಲೇಖಕರು ಈ ಸಂಗ್ರಹಾಲಯದಲ್ಲಿ ಎಷ್ಟು ವೇಳೆ ಕಳೆದರೂ ಸಾಲದ ಎನ್ನುವರು (ಪು. ೯೪).

**ಎತ್ತಣಿಂದೆತ್ತ** ಮೀನಾ ಮೈಸೂರು ಅವರ ಫ್ರಾನ್ಸ್ ಪ್ರವಾಸ ಕಥನ. ಹಲವು ಕಾರಣಗಳಿಗಾಗಿ ಈ ಪ್ರವಾಸಕಥನ ಮುಖ್ಯವಾಗಿದೆ. ಸಂಪ್ರದಾಯಸ್ಥ ಮಧ್ಯಮವರ್ಗದ ಕುಟುಂಬದಿಂದ ಬಂದ ಮೀನಾ ಎರಡು ಬಾರಿ ಫ್ರಾನ್ಸ್ ಪ್ರವಾಸ ಮಾಡಿದ ಸಂದರ್ಭದಲ್ಲಿ ಒದಗಿಬಂದ ಅನುಭವಗಳ ಆಪ್ತಕಥನ ಇಲ್ಲಿದೆ. ಇದರ ಜೊತೆಗೆ ಮೊದಲ ಬಾರಿ ಫ್ರಾನ್ಸ್‌ಗೆ ಹೋಗಲು ಕಾರಣಳಾದ ಜೋಸಿ ವರ್ಗಿಸ್ ಎಂಬ ಫ್ರೆಂಚ್ ಮಹಿಳೆಯ ದುರಂತಕಥೆ ಪ್ರವಾಸ ಕಥನದ ಅವಿಭಾಜ್ಯಭಾಗವಾಗಿದೆ. ಜೋಸಿಯ ಜೊತೆ ಫ್ರಾನ್ಸ್‌ಗೆ ಹೋದಾಗ ಆ ನೆಪದಲ್ಲಿ ಬೆಳೆಯುವ ಸಂಬಂಧಗಳು ಮಾನವೀಯ ನೆಲೆಯಲ್ಲಿ ಒಂದು ಅದ್ಭುತಲೋಕವನ್ನೇ ಅನಾವರಣ ಮಾಡಿ ಬಿಡುತ್ತವೆ. ನನಗೆ ಇದೊಂದು ಪ್ರವಾಸ ಕಥನವಾಗಿ ತೋರದೆ ಸಂಪ್ರದಾಯಸ್ಥ ಕುಟುಂಬದಿಂದ ಬಂದ ಹೆಣ್ಣೊಬ್ಬಳು ಭಿನ್ನ ಪರಿಸರಕ್ಕೆ ಸ್ಪಂದಿಸುತ್ತಾ ಹೋಗುವ, ಮನುಷ್ಯ ಸಂಬಂಧಗಳಲ್ಲಿ ಮಾರ್ದವತೆಯನ್ನು ಕ್ಷಣಕ್ಷಣಕ್ಕೂ ಅನುಭವಿಸುತ್ತಾ ಹೋಗುವ ಒಂದು ಕಥಾಚಿತ್ರ ಹರಡಿಕೊಳ್ಳುವುದನ್ನು ನಾನು ಗಮನಿಸಿರುವೆನು. ಲೇಖಕಿ ಮೀನಾರವರ ಸಂವೇದನಾಶೀಲ ಮನಸ್ಸು ತೀರಾ ಸೂಕ್ಷ್ಮವಾದದ್ದು. ತನ್ನ ಅನುಭವಕ್ಕೆ ಬಂದ ಪುಟ್ಟ ಸಂಗತಿಯನ್ನೂ ಆಕೆ ಗಮನಿಸುತ್ತಾರೆ, ತಮ್ಮ ಪ್ರವಾಸ ಕಥನದಲ್ಲಿ ದಾಖಲಿಸುತ್ತಾರೆ. ಸೂಕ್ಷ್ಮವಾಗಿ ಗಮನಿಸುವ, ದಕ್ಕಿದ ಅನುಭವವನ್ನು ಆಪ್ತವಾಗಿ ಭಾಷೆಯಲ್ಲಿ ಮೂಡಿಸುವ ಅಪ್ರತಿಮ ಗುಣ ಮೀನಾರವರಲ್ಲಿದೆ. ಅವರು ಫ್ರಾನ್ಸಿಸ್‌ನನ್ನು ಸಂಗಾತಿಯಾಗಿ ಆರಿಸಿಕೊಂಡರು. ತನ್ನ ಗಂಡನ ತವರಿಗೆ ಹೋಗಿ ಅಲ್ಲಿ ಅವರ ಬಂಧು-ಮಿತ್ರರ ಜೊತೆ ಬೆರೆಯುವ ಸಂದರ್ಭದಲ್ಲಿ ದೇಶ, ಭಾಷೆ, ಆಚಾರ-ವಿಚಾರ, ಊಟೋಪಚಾರ, ನಡಾವಳಿ -ಹೀಗೆ ಸಂಪೂರ್ಣ ವಿಭಿನ್ನ ಪರಿಸರ, ಪ್ರಪಂಚವೊಂದರಲ್ಲಿ ವ್ಯವಹರಿಸುವಾಗ ಮೀನಾ ಎರಡು ಭಿನ್ನ ಸಂಸ್ಕೃತಿಗಳ ಸಂಘರ್ಷವನ್ನು ಗುರುತಿಸುತ್ತಾ ಹೋಗುವರು. ಸಂಪ್ರದಾಯಸ್ಥ ಪರಿಸರದಲ್ಲಿ ಬೆಳೆದ ಮೀನಾರವರ ಮುಂದೆ ಗಕ್ಕನೆ ಮುಕ್ತ ಸಮಾಜದ ವೈಪರೀತ್ಯಗಳು ತೆರೆದುಕೊಳ್ಳುತ್ತಾ ಹೋದಾಗ ಅವರಿಗೆ ನಾಚಿಕೆ. ಸಮುದ್ರದ ದಂಡೆಯ ಬೀಚುಗಳಲ್ಲಿ ಸೂರ್ಯಸ್ನಾನ ಮಾಡುವಾಗ ಬೆತ್ತಲೆ ಮಲಗುವ ಹೆಣ್ಣು-ಗಂಡುಗಳನ್ನು ಕಂಡಾಗ ತಲೆತಗ್ಗಿಸುವರು. ವಿಚ್ಛೇದನ ಪಡೆದ ಗಂಡು-ಹೆಣ್ಣುಗಳ ಸಂಪರ್ಕಕ್ಕೆ ಬಂದಾಗ ಅವರ ಸ್ವೈರವೃತ್ತಿ ಕಂಡು ಗಾಬರಿಯಾಗುವರು. ವಿಚ್ಛೇದನ ಪಡೆದೂ ಸ್ನೇಹವನ್ನು ಉಳಿಸಿಕೊಂಡಿರುವ ದಾಂಪತ್ಯ ಒಂದು ಕಡೆ; ವಿಚ್ಛೇದನ ಪಡೆದವರ ಸಂಖ್ಯೆಯೇ ಹೆಚ್ಚಾಗಿರುವ ಸಂದರ್ಭದಲ್ಲಿ ಗಾಢವಾದ ಪ್ರೀತಿಯಲ್ಲಿ ದಾಂಪತ್ಯದ ಸವಿಯನ್ನನುಭವಿಸುತ್ತಿರುವ ಆಲೀಸ್ ಬ್ರುನೋ ದಂಪತಿಗಳು ಇನ್ನೊಂದು ಕಡೆ.

ಸಲಿಂಗಕಾಮಿಗಳ ಬದುಕಿನಲ್ಲಿ ಹಾಯ್ದು ಹೋದ ದುರಂತದ ಎಳೆಗಳು ಮತ್ತೊಂದು ಕಡೆ. ಹೀಗೆ ಮನುಷ್ಯ ಸಂಬಂಧಗಳಲ್ಲಿ ಕಾಣಿಸಿಕೊಳ್ಳುವ ಬಿರುಕುಗಳ ಚಿತ್ರವನ್ನು ಫ್ರಾನ್ಸ್‌ನ ಕುಟುಂಬ ಜೀವನದಲ್ಲಿ ಹಾರ್ದಿಕ ಒಡನಾಟ ಪಡೆದಾಗ ಮೀನಾರವರು ಕಾಣುವರು.

ಜೋಸಿಯ ತಾಯಿ ಹೆಲೆನ್ ತನ್ನ ೭೧ನೇ ವಯಸ್ಸಿನಲ್ಲಿ ಗಂಡ ತೀರಿಕೊಂಡಾಗ ಆನಂತರದ ದಿನಗಳಲ್ಲಿ ಮೂವರು ಗೆಳೆಯರೊಂದಿಗೆ ಬಾಳಿ, ವೈವಿಧ್ಯಮಯ ವೈವಾಹಿಕ ಬದುಕನ್ನು ಅನುಭವಿಸಿದ ಚಿತ್ರ ಆ ದೇಶ ಕೊಟ್ಟ ಮುಕ್ತ ಲೈಂಗಿಕಸ್ವಾತಂತ್ರ್ಯಕ್ಕೆ ಸಾಕ್ಷಿ (ಪು. ೧೭೨). ಗಂಡ ತೀರಿಕೊಂಡ ನಂತರ ಮತ್ತೊಬ್ಬನನ್ನು ವಿವಾಹವಾಗುವುದು ಅಥವಾ ವಿವಾಹವಾಗದೆ ಜೊತೆಗೂಡಿ ಇರುವುದು ಅಲ್ಲಿ ಅಪರಾಧವೇನಲ್ಲ. ಜೋಸಿ ಹಾಗೂ ಅವಳ ತಾಯಿಯ ಸಂಬಂಧ ಮಧುರವಾಗಿಯೇನೂ ಇರಲಿಲ್ಲ. ಅವರಿಬ್ಬರೂ ಆಕ್ರಮಣಕಾರಿ ಸ್ವಭಾವದವರು. ಯಾರೂ ಸೋಲು ಒಪ್ಪದ ಕಾರಣ ರಾಜಿಯ ಪ್ರಶ್ನೆಯೆ ಇಲ್ಲ. ಆದ್ದರಿಂದಲೇ ಇಬ್ಬರು ಜೊತೆಯಾಗಿ ಬಹಳ ಕಾಲ ಬದುಕಲು ಸಾಧ್ಯವೇ ಇಲ್ಲ ಎನ್ನುವಳು ಜೋಸಿ. ಅವಳು ರಜೆಯೆಂದು ತಾಯಿಮನೆಗೆ ಬರುವುದು ರಜವನ್ನು ಯಾವ ಕಟ್ಟುಪಾಡುಗಳಿಲ್ಲದೆ ಆರಾಮಾಗಿ ಬೇಕಾಬಿಟ್ಟಿ ಕಳೆಯಲೆಂದು; ಅವಳ ಕ್ಯಾನ್ಸರ್‌ಗೆ ಕಿಮೋಥೆರಪಿ ಮಾಡಿಸಿಕೊಳ್ಳಲೆಂದು. ಜೋಸಿಯೇ ಒತ್ತಾಯಮಾಡಿ ಮೀನಾರವರನ್ನು ಫ್ರಾನ್ಸಿಗೆ ಕರೆದುಕೊಂಡು ಹೋದುದು. ಆಕೆ ಫ್ರಾನ್ಸಿನ ಶಿಷ್ಟಾಚಾರ ಬಲ್ಲವಳು. ಜೋಸಿಯ ಗೆಳತಿಯ ಗಂಡನ ಪರಿಚಯವಾದಾಗ ಸಹಜವಾಗಿ ಮೀನಾ 'ಏನು ಓದಿದ್ದೀರಿ?' ಎಂದು ಕೇಳಿಬಿಟ್ಟರು. ಆಗ ಜೋಸಿ ಕೆರಳಿ "ಇದೇ ಭಾರತೀಯರ ಬುದ್ಧಿ ನೋಡು. ಏನು ಓದಿದ್ದೀರಿ? ಏನು ಕೆಲಸ ಮಾಡುತ್ತೀರಿ? ಎಷ್ಟು ಸಂಪಾದಿಸುತ್ತೀರಿ? ಅಂತ ಕೇಳಿ ಹಣ ಪದವಿ ಅಂತಸ್ತುಗಳ ಮೇಲೆ ಮನುಷ್ಯರನ್ನು ಅಳೆಯುತ್ತೀರಿ. ಮನುಷ್ಯರನ್ನು ಕೇವಲ ಮನುಷ್ಯರಂತೆ ಕಾಣಿರಿ" ಎಂದು ರೇಗಿಬಿಟ್ಟಳು (ಪು. ೧೬). ಇನ್ನೊಂದು ಸಂದರ್ಭದಲ್ಲಿ ಜೋಸಿಯ ಗೆಳತಿ ಜಾಕಲಿನ್ ಭಾರತದಿಂದ ಬಂದ ಮೀನಾರವರಿಗೆ ಒಂದು ಪ್ಯಾಕೆಟ್ ಕೊಟ್ಟು 'ನಿನಗೆ ಒಳ್ಳೆಯದಾಗಲಿ' ಎಂದರು. ಮೀನಾರವರು ಥ್ಯಾಂಕ್ಸ್ ಹೇಳಿ ಅದನ್ನು ಟೇಬಲ್ ಮೇಲೆ ಇಟ್ಟರು. ಕೂಡಲೇ ಜೋಸಿ "ನೀನು ಈ ದೇಶದಲ್ಲಿರುವವರೆಗೂ ಯಾರಾದರೂ ಏನನ್ನಾದರೂ ಕೊಟ್ಟರೆ 'ಬೇಡ'ವೆಂದು ಜಂಬ ಮಾಡಬಾರದು. ಪ್ರೀತಿಯಿಂದ ಅದನ್ನು ಸ್ವೀಕರಿಸಬೇಕು. ಕೊಟ್ಟ ಕವರನ್ನು ಅವರ ಎದುರೆ ತೆರೆದು ಅದರೊಳಗಿರುವುದನ್ನು ನೋಡಿ ಚೆನ್ನಾಗಿದೆ 'ಮರ್ಸಿಬಕು' ಎಂದು ಹೇಳಿ ಮತ್ತೆ ಮುತ್ತು ಕೊಡುವುದರ ಮೂಲಕ ವಂದನೆ ಸಲ್ಲಿಸಬೇಕು, ಇದು ಇಲ್ಲಿಯ ರೂಢಿ" ಎಂದು ಮೀನಾಳನ್ನು ಎಚ್ಚರಿಸುವಳು (ಪು.೧೭೮).

ಜೋಸಿ ಫ್ರೆಂಚ್ ಮಹಿಳೆ. ಭಾರತೀಯನನ್ನು ಮದುವೆಯಾಗಿ ಮೈಸೂರಿಗೆ ಬಂದಳು. ಆಕೆ ಎನೆಡ್ಜಾ ಎಂಬ ಸಂಸ್ಥೆಯನ್ನು ಮೈಸೂರಿನ ನಾಚನಹಳ್ಳಿಪಾಳ್ಯದ (ಈಗಿನ

ಜೆ.ಪಿ.ನಗರ) ಮಕ್ಕಳ ಶೈಕ್ಷಣಿಕ-ಆರೋಗ್ಯ ಮತ್ತು ಸಮುದಾಯದ ಏಳಿಗೆಗಾಗಿ ಸ್ಥಾಪಿಸಿದಳು. ಅಂದು ಪ್ರಾರಂಭಿಸಿದ ಶಾಲೆ ಇಂದು ಮಹದೇವಪುರದ ರೈಲ್ವೆ ಗೇಟಿನ ಬಳಿ ಸ್ವಂತ ಕಟ್ಟಡದಲ್ಲಿ ನಡೆಯುತ್ತಿದೆ. ಸು. ೫೩೦ ಮಕ್ಕಳು ಈ ಸಂಸ್ಥೆಯ ಫಲಾನುಭವಿಗಳು. ಜೋಸಿ ಫ್ರಾನ್ಸ್‌ನ ಐಭೋಗದ ನಿರ್ಭಿಡೆಯ ಬದುಕಿಗೆ ವಿದಾಯ ಹೇಳಿ ಇಲ್ಲಿಗೆ ಬಂದು ಸಂಸ್ಥೆಯನ್ನು ಕಟ್ಟಿ ಬೆಳೆಸಿದಳು. ಈ ಸಂಸ್ಥೆಗಾಗಿ ಫ್ರಾನ್ಸ್‌ನಿಂದ ಹಣ ಸಂಗ್ರಹಿಸಿ ತಂದಳು. ತನ್ನ ತಾಯಿಯನ್ನೂ ಬಿಡದೆ ಪ್ರತಿವರ್ಷ ಹತ್ತು ಸಾವಿರ ಫ್ರಾಂಕುಗಳಿಗೂ ಮೇಲ್ಪಟ್ಟು ಹಣವನ್ನು ವಸೂಲಿಮಾಡಿಕೊಂಡು ಬರುತ್ತಿದ್ದಳು. ಅವಳು ತನ್ನ ಸುತ್ತಮುತ್ತಲಿನವರನ್ನು ನಂಬಿದಳು. ನಂಬಿದವರು ಮೋಸಮಾಡಿ ಅವಳಿಂದ ಹಣ ಸೂರೆಮಾಡಿದರು. "ತುಂಬಾ ಆಕ್ರಮಣಕಾರಿ ಸ್ವಭಾವದ ಜೋಸಿ ತನ್ನ ಮೂಗಿನ ನೇರಕ್ಕೆ ಮಾತ್ರ ಮಾತನಾಡುತ್ತಿದ್ದಳು. ತನಗಿಂತ ಬುದ್ಧಿವಂತರನ್ನು, ಅವರ ಸಲಹೆ ಸೂಚನೆಗಳನ್ನು ಅವಳೆಂದೂ ಸಹಿಸುತ್ತಿರಲಿಲ್ಲ. ಬಹಳ ಬುದ್ಧಿವಂತಿಕೆಯಿಂದ ಹೀಗೆ ಅವಳಿಗೆ ಬೆಣ್ಣೆ ಸವರಿದವರನ್ನು ಅತಿ ನಂಬಿದಳು. ಅಂತಹವರಿಗೆ ಉದಾರವಾಗಿ ಸಹಾಯ ಮಾಡಿದಳು ಕೂಡ!... ಎನೆಡ್ಚಾದಿಂದ ನೂರಾರು ಮನೆಗಳು, ಜನರು ಉದ್ಧಾರವಾದರು. ಜೋಸಿಯನ್ನು ಮನೆಯ ದೇವರೆಂದೇ ಕೆಲವರು ಭಾವಿಸಿದರು. ನಾಚನಹಳ್ಳಿಪಾಳ್ಯದ ಜನರ ಆರೋಗ್ಯ ಸುಧಾರಿಸುವಲ್ಲಿ, ಜನರ ಆರ್ಥಿಕ ಮಟ್ಟ ಸುಧಾರಿಸುವಲ್ಲಿ ಜೋಸಿಯ ಪಾತ್ರ ಅಗಾಧವಾದುದು. ಒಳ್ಳೆಯ ಜನರಿಗೆ, ಒಳ್ಳೆಯ ಕೆಲಸ ಮಾಡಿದವರಿಗೆ ಒಳ್ಳೆಯದಾಗುತ್ತದೆಂಬ ವಾಡಿಕೆಯ ಮಾತು, ಜೋಸಿಯ ಬದುಕಲ್ಲಂತೂ ಆಗಲೇ ಇಲ್ಲ, ದುರಂತದಲ್ಲಿ ಕೊನೆಗೊಂಡಿತು. ತಾನು ಕ್ಯಾನ್ಸರ್‌ನಿಂದ ಸಾಯುತ್ತಿದ್ದೇನೆಂಬ ಅರಿವಿದ್ದರೂ ಜೋಸಿ ತನ್ನ ನಂತರ ಸಂಸ್ಥೆಯನ್ನು ಸಮರ್ಥವಾಗಿ ನಡೆಸಿಕೊಂಡು ಹೋಗುವಂತಹ ಜನರನ್ನು ಅಲ್ಲಿ ಬೆಳೆಸಲಿಲ್ಲ, ಒಂದು ಕ್ರಮಬದ್ಧವಾದ ವ್ಯವಸ್ಥೆಯನ್ನೂ ಮಾಡಲಿಲ್ಲ" (ಪು. ೨೪೬). ಜೋಸಿಗೆ ತನ್ನ ಕೊನೆಗಾಲದಲ್ಲಿ ತನಗೆ, ತನ್ನ ಸಂಸ್ಥೆಗೆ ನಂಬಿದ ಜನ ಮಾಡಿದ ದ್ರೋಹ ಅರಿವಾಯಿತು. ಅಷ್ಟರಲ್ಲಿ ಕಾಲ ಮಿಂಚಿತ್ತು. ಆಕೆ ನಂಬಿದ ಜನ ಹೇಗೆ ವಿಶ್ವಾಸದ್ರೋಹ ಮಾಡಿದರು, ಯಾರ್‍ಯಾರು ಎಷ್ಟೆಷ್ಟು ಹಣವನ್ನು ಏನೆಲ್ಲ ನೆಪ ಹೇಳಿ ನಾಟಕ ಮಾಡಿ ಕಿತ್ತರು ಎಲ್ಲಾ ವಿವರಗಳನ್ನು ಹೇಳಿಕೊಂಡು ಅವರುಗಳ ಕಪಿಮುಷ್ಟಿಯಲ್ಲಿ ತಾನು ಸಿಕ್ಕಿರುವುದಾಗಿ ಆಪ್ತಗೆಳತಿ ಮೀನಾರವರ ಜೊತೆ ಹೇಳಿ ಗಳಗಳನೆ ಅತ್ತೇಬಿಟ್ಟಳು. ಆದರೆ ಅವಳೇ ಮಾಡಿದ ತಪ್ಪಿನಿಂದಾಗಿ ಕೊನೆಗಾಲದಲ್ಲಿ ಕ್ಯಾನ್ಸರ್‌ನ ಕೊನೆ ಹಂತದ ಭೀಕರ ನೋವಿನಿಂದ ದೈಹಿಕವಾಗಿ ನರಳುವುದರ ಜೊತೆಗೆ ಸಂಸ್ಥೆಯಲ್ಲಾದ ಭಾರಿ ದಗಾ ವಂಚನೆಗಳನ್ನು ಕಂಡು ಮಾನಸಿಕವಾಗಿಯೂ ನರಳಿ ನರಳಿ ಸತ್ತಳು. ಅವಳ ಸಾವಿನ ಕ್ಷಣದಲ್ಲೂ ಅವಳ ಸುತ್ತಲಿನ ಕೆಲ ಜನ ಅವಳ ಅಸಹಾಯಕ ಸ್ಥಿತಿಯನ್ನು ಚೆನ್ನಾಗಿ ದುರುಪಯೋಗಪಡಿಸಿಕೊಂಡರು. ಅವಳಿಂದ ಚೆನ್ನಾಗಿ

[illegible] "[illegible]" [illegible]

[illegible]
ಕ್ಕಿದ ಕಾಸು ಹೋಗಿತು. ಫ್ರಾನ್ಸಿಸ್ಸಿ ಕೂಲಿ ಕೆಲಸ ಮಾಡುವ ಆ ವ್ಯಕ್ತಿಯ ಮನೆ ತೀರಾ ಸಾಮಾನ್ಯವಾಗಿದ್ದಿತು. [illegible] ಜೊತೆಗೆ ಕಷ್ಟದ ಕೆಲಸ ಮಾಡಿ ಭಾರತದ ಆ ವಸ್ತು ಕುಟುಂಬಕ್ಕೆ ಹಣ ಕಳುಹಿಸುತ್ತಿದ್ದರು. ಆ ಮಹಾನುಭಾವರು ನೆರವು ಕೇಳಿ ಪತ್ರ ಬಂದ ಮೇಲೆ ಇಪ್ಪತ್ತು ಫ್ರಾಂಕ್ ಕೂಡಲೇ ಕಳುಹಿಸಿದರು! [illegible] ಆ ಘಟನೆ ಕಣ್ಣು ತೆರೆಯಿಸಿತು: "ಆ ಸಹಾಯಹಸ್ತದ ಅಂತಃಕರಣ ನನಗೆ ಅಚ್ಚರಿ ತಾರದೆ ಇರಲಿಲ್ಲ... ಹೊರದೇಶದ ಈ ಜನ ನಮ್ಮೂರಿನ [illegible] ಜನರಿಗೆ [illegible] ನನ್ನನ್ನು ಭಾವುಕನನ್ನಾಗಿಸಿತು. ಅದರಲ್ಲೂ ಈತ ನನಗೆ [illegible] ತಿನ್ನಲು ಸಾಕಾಗುವಷ್ಟಿದೆ, ಜೊತೆಗೆ ದುಡಿಯಲು ಶಕ್ತಿಯಿದೆ; ಒಂದು ಹೊತ್ತಿಗೂ ತಿನ್ನಲು ಗತಿಯಿಲ್ಲದ ಆ ಜನ ಒಂದು ಹೊತ್ತಾದರೂ

ನೆಮ್ಮದಿಯಾಗಿ ತಿನ್ನಲಿ -ಎಂದು ಉದಾರತೆ ತೋರಿದ್ದನ್ನು ನಾನು ಮಾತ್ರ ಎಂದೂ ಮರೆಯಲಾರೆ. ನಾವೇ ನಮ್ಮವರಿಗೆ ಎಂದೂ ಈ ಬಗೆಯ ಸಹಾಯ ಮಾಡುವ ಬಗ್ಗೆ ಚಿಂತಿಸಿರಲಿಲ್ಲ" ಎಂದು ಆತ್ಮಾವಲೋಕನ ಮಾಡಿಕೊಳ್ಳುವರು (ಪು. ೩೨).

ಜೋಶಿಯ ಗೆಳತಿ ಫ್ರಾನ್ಸ್‌ನ ೭೬ ವರ್ಷದ ಮೇರಿ ಲೂಯಿಸ್, ಕೂಲಿ ಕೆಲಸ ಮಾಡುತ್ತ ಭಾರತದ ಬಡ ಕುಟುಂಬವನ್ನು ಆ ದತ್ತು ತೆಗೆದುಕೊಂಡ ಭಾವುಕ ವ್ಯಕ್ತಿಗಿಂತ ಭಿನ್ನರು. ಭಾರತದ ಕರುಣಾಜನಕ ಸ್ಥಿತಿಯನ್ನು ಫೋಟೋಗಳ ಮೂಲಕ ತೋರಿಸಿ ನೆರವು ಕೇಳಲು ಬಂದ ಭಾರತೀಯರನ್ನು ಮೇರಿ ಲೂಯಿಸ್ "ನಾನು ಎರಡು ಸಲ ಭಾರತಕ್ಕೆ ಬಂದು ಭಾರತದ ಉದ್ದಗಲಕ್ಕೂ ಸಾಕಷ್ಟು ಓಡಾಡಿದ್ದೇನೆ. ನಿಮ್ಮ ದೇಶವನ್ನು ಚೆನ್ನಾಗಿ ನೋಡಿದ್ದೇನೆ. ನೀವು ಹೇಳುವಂತಹ ಪರಿಸ್ಥಿತಿ ಅಲ್ಲೇನೂ ಇಲ್ಲ" ಎಂದು ಹಣ ಕೇಳಲು ಬಂದವರನ್ನು ಬೈದು ಓಡಿಸಿದ್ದರಂತೆ. ಅದನ್ನು ಕೇಳಿದ ಲೇಖಕಿ "ಭಾರತೀಯಳಾದ ನಾನು ತಲೆ ತಗ್ಗಿಸಿದೆ. ಕಷ್ಟಪಟ್ಟು ದುಡಿದು ತಿನ್ನುವುದನ್ನು ಬಿಟ್ಟು, ನಮ್ಮ ದೇಶದ ಮಾನ-ಮರ್ಯಾದೆಯನ್ನು ಹರಾಜು ಹಾಕಿ, ಪರಿಸ್ಥಿತಿಯನ್ನು ಹೀನಾಯವಾಗಿ ಬಣ್ಣಿಸಿ ಸುಳ್ಳು ಸುಳ್ಳೇ ಹೇಳಿ ಹಣ ಗಳಿಸುವುದನ್ನೇ ವೃತ್ತಿಯನ್ನಾಗಿಸಿಕೊಂಡ ವಂಚಕರನ್ನು ನೆನೆದು ಹಲ್ಲು ಕಡಿದೆ. ನನ್ನ ಜನರಿಗೆ ಆತ್ಮಗೌರವದ ಅಗತ್ಯದ ಅರಿವಾಗಿಸುವುದಾದರೂ ಹೇಗೆಂಬ ಚಿಂತೆಯ ಹುಳು ತಲೆಹೊಕ್ಕಿತು" ಎಂದು ಹೇಳುವರು (ಪು. ೧೬೭).

ಪೆರಿಪಿನ್ಯೊವನ್ನು ಕೇಂದ್ರ ನೆಲೆಯಾಗಿಟ್ಟುಕೊಂಡು ಮೀನಾ ಸುತ್ತಮುತ್ತ ಪ್ರವಾಸ ಕೈಗೊಳ್ಳುವರು. ಅವರು ಸ್ವಯಂ ಸೇವಾ ಸಂಸ್ಥೆಗೆ, ವೃದ್ಧಾಶ್ರಮಕ್ಕೆ ಭೇಟಿ ನೀಡಿದ ಅನುಭವಗಳು ಚೆನ್ನಾಗಿ ಬಂದಿವೆ. ರೈತಾಪಿ ಜನರ ಭೇಟಿ ಮಾಡಿದಾಗ ಭಾರತದ ಸಣ್ಣ ಹಿಡುವಳಿದಾರರ ಸಮಸ್ಯೆ ಫ್ರಾನ್ಸ್‌ನಲ್ಲೂ ಕಾಡುತ್ತಿದೆ. ಭಾರತದಲ್ಲಿ ಗ್ಯಾಟ್ ಒಪ್ಪಂದವನ್ನು ಸಣ್ಣ ಹಿಡುವಳಿದಾರರು ವಿರೋಧಿಸುತ್ತಿರುವಂತೆ ಫ್ರಾನ್ಸ್‌ನಲ್ಲೂ ವಿರೋಧಿಸುತ್ತಿರುವರು. ಗ್ಯಾಟ್ ಒಪ್ಪಂದ ಬಡ ರೈತನಿಗೆ ಸಾವಿನ ಪ್ರತಿರೂಪವಾಗಿದೆ. ಇದಕ್ಕೆಲ್ಲಾ ಮುಖ್ಯ ಕಾರಣ ಅಮೇರಿಕಾ ದೇಶವು ನಮ್ಮನ್ನು ನಿರ್ದೇಶಿಸಿ ನಿಯಂತ್ರಣದಲ್ಲಿಟ್ಟುಕೊಳ್ಳಲು ಮಾಡುತ್ತಿರುವ ತಂತ್ರ ಎಂದು ಜೋಶಿ ಅಮೇರಿಕಾದ ಬಗ್ಗೆ ಕಿಡಿ ಕಾರುವಳು (ಪು. ೪೨). ಭಾರತದಲ್ಲಿ ಸಣ್ಣ ರೈತ ಮಗಳು ಮದುವೆಗೆ ಬಂದಳೆಂದರೆ ಇದ್ದ ಚೂರುಪಾರು ಹೊಲಗದ್ದೆಯನ್ನು ಮಾರಿ ಮದುವೆ ಮಾಡಿ ಮತ್ತೂ ಬಡವರಾಗುವುದನ್ನು ತಪ್ಪಿಸಲು ರೈತರು ತಮಗೆ ಮಕ್ಕಳು ಹುಟ್ಟಿದ ಕೂಡಲೇ ಇರುವ ತುಂಡು ಜಮೀನಿನಲ್ಲೇ ಐದಾರು ಟೀಕ್ ಸಸಿಗಳನ್ನು ನೆಟ್ಟು ಬೆಳೆಸಿ ಮಕ್ಕಳಿಗೆ ೨೦ ವರ್ಷವಾದಾಗ ಆ ಮರಗಳನ್ನು ಮಾರಿ ಮಗಳ ಮದುವೆ ಮಾಡಿ ಎಂದು ಜೋಶಿ ಮೈಸೂರಿನ ಗ್ರಾಮೀಣ ರೈತರಿಗೆ ತಾನು ಅರಿವು ಮೂಡಿಸುತ್ತಿರುವುದನ್ನು ಪ್ರಸ್ತಾಪಿಸುವಳು (ಪು. ೪೧).

ಫ್ರೆಂಚರ ಕಲಾಪ್ರೇಮ, ಸೌಂದರ್ಯಪ್ರಜ್ಞೆ, ಪ್ರವಾಸಪ್ರಿಯತೆ, ಆತಿಥ್ಯ, ಸಾಮಾಜಿಕ ಭದ್ರತೆ, ಸಾವಿನ ಸಂದರ್ಭದಲ್ಲಿ ಸಂಸ್ಕಾರ ಕ್ರಿಯೆ - ಹೀಗೆ ಮೀನಾ ಫ್ರಾನ್ಸಿನ ಸಾಮಾಜಿಕ ಬದುಕಿನ ಒಂದೊಂದೇ ಎಳೆಯನ್ನು ಪ್ರಸ್ತಾಪಿಸುತ್ತಾ ಹೋಗುವರು. ಹೀಗೆ ವರ್ಣನೆ ಮಾಡುವಾಗ ಸಣ್ಣ ವಿವರಗಳೂ ಮರೆಯಾಗದಂತೆ ವಿವರಿಸುವ ಮೀನಾರವರ ಬರವಣಿಗೆಯ ಹಿಂದೆ ಸೂಕ್ಷ್ಮಗ್ರಾಹಿಯಾದ ಭಾರತೀಯ ಮನಸ್ಸೊಂದಿದೆ. ತನಗೆ ಹೊಸತೆನಿಸಿದ್ದನ್ನು ದಾಖಲಿಸುತ್ತಾ ಹೋಗುವರು. ಹೋಟೆಲ್ ತಾಜ್‌ಮಹಲ್‌ನ ಕಮಲ್-ಮೀರಾ ದಂಪತಿಗಳು, ಜೋಸಿಯಾನ, ಮಲ್ಲಿಕಾ, ರ‍್ಹೋಜೆ - ಇವಿತಾ ದಂಪತಿಗಳು, ಫ್ರಾನ್ಸಿಸ್‌ನ ಅಕ್ಕ ಬೆನದಿತ, ಡಾ. ಆಲೀವರ್, ಹೆಲೆನ್, ಜೋಸಿ -ಹೀಗೆ ವ್ಯಕ್ತಿ ಚಿತ್ರಗಳು ಸೊಗಸಾಗಿ ಮೂಡಿವೆ. 'ಎತ್ತಣಿಂದೆತ್ತ' ಓದುತ್ತಿದ್ದಂತೆ ನನಗೆ ಮೆಚ್ಚಿಗೆಯಾದದ್ದನ್ನು ಪುಸ್ತಕದಲ್ಲಿ ಗುರುತು ಮಾಡುತ್ತಾ ಹೋದೆ. ಇಡೀ ಪುಸ್ತಕ ಈ ಕೆಂಪುಶಾಯಿಯ ಗುರುತಿನಿಂದ ತುಂಬಿಹೋಯಿತು. "ಹೊಸಲೋಕವೊಂದಕ್ಕೆ ಮುಖಾಮುಖಿಯಾಗುವ ಮೀನಾಳ ಚೇತನ ಇಲ್ಲಿ ಕಾಣುತ್ತ, ಕಾಣಿಸುತ್ತ ವಿಸ್ತಾರಗೊಳ್ಳುತ್ತದೆ. ಈ ಪ್ರವಾಸಕಥನದಂತೆ ಹೊಸ ಲೋಕವನ್ನು ಪರಿಚಯಿಸುತ್ತಲೇ ಆತ್ಮನ ಶೋಧವೂ ಆಗುವ ಇನ್ನೊಂದು ಕಥನ ಕನ್ನಡದಲ್ಲಿ ಇಲ್ಲವೆನ್ನಬಹುದೇನೊ" ಎಂಬ ಡಾ. ಯು.ಆರ್. ಅನಂತಮೂರ್ತಿಯವರು 'ಬ್ಲರ್ಬ್'ನಲ್ಲಿ ಹೇಳಿರುವ ಮಾತು ಈ ಕೃತಿಗೆ ಸಮರ್ಪಕವಾದ ವಿವಕ್ಷೆಯ ಮಾತು ಎಂದು ಅನ್ನಿಸಿತು. ಮೀನಾ ತಮ್ಮ ಪ್ರಿಯಕರ ಫ್ರಾನ್ಸಿಸ್‌ನೊಂದಿಗೆ ಮೈಸೂರಿನಲ್ಲಿ ನೆಲೆಸಿದರೆ, ಈ ಪ್ರವಾಸಕಥನದ ಕೊನೆಯಲ್ಲಿ ಬರುವ ನಥಾಲಿ-ಲಕ್ಷ್ಮಣರ ಅಮರಪ್ರೇಮ ಅವರನ್ನು ದಕ್ಷಿಣ ಫ್ರಾನ್ಸ್‌ನ ಸಮುದ್ರತೀರದ ಊರೊಂದರಲ್ಲಿ ನೆಲೆಸುವಂತೆ ಮಾಡಿತು. ಬಾಂಬೆಯ ಕೂಲಿಕಾರ ಹುಡುಗ ಲಕ್ಷ್ಮಣನನ್ನು ಫ್ರಾನ್ಸಿನ ನಥಾಲಿ ಪ್ರೀತಿಸಿದ್ದು ಒಂದು ಸಿನಿಮಾ ಕತೆಯಂತೆ ತೋರಿದರೂ ಅದು ವಾಸ್ತವ ಪ್ರೇಮಕಥೆ. 'ಇಂಡೋ ಫ್ರೆಂಚ್ ಒಸಗೆ' ಎಂಬ ಶೀರ್ಷಿಕೆಯಲ್ಲಿ ಈ ಪ್ರವಾಸ ಕಥನದ ಒಂದು ಭಾಗವಾಗಿ ಆ ಪ್ರೇಮಕಥೆ ಬರುತ್ತದೆ.

ಎತ್ತಣಿಂದೆತ್ತ ಎಂಬ ಪ್ರವಾಸ ಕಥನ ಮೀನಾರವರ ಮೊದಲ ಪ್ರಯತ್ನವೆಂಬುದನ್ನು ನನಗೆ ನಂಬಲಾಗಲೇ ಇಲ್ಲ. ಏಕೆಂದರೆ, ಅಪರಿಚಿತ ಕಣ್ಣಿಗೆ ಹೊಸ ನೋಟಗಳು ಉಂಟುಮಾಡುವ ಬೆರಗು ಅವರ ಬರವಣಿಗೆಯಲ್ಲಿ ರೂಪ ಪಡೆಯುತ್ತಾ ಹೋಗುವುದನ್ನು ಕಂಡಾಗ ಗುಪ್ತ ಪ್ರತಿಭೆಯೊಂದರ ಅಸದೃಶ ಶಕ್ತಿ ನನ್ನನ್ನು ವಿಸ್ಮಿತನನ್ನಾಗಿ ಮಾಡಿತು. ಯಾರಲ್ಲಿ ಎಂತಹ ಶಕ್ತಿ ಅಡಗಿದೆಯೋ ಏನೋ! ಅದು ವ್ಯಕ್ತವಾದಾಗಲೇ ನಮಗದರ ಬೆಲೆ ಅರಿವಿಗೆ ಬರುವುದು. ಬೆಂಗಳೂರಿನಿಂದ ಮುಂಬೈಗೆ ವಿಮಾನದಲ್ಲಿ ಪ್ರಯಾಣಿಸಿದ ಮೊದಲ ಅನುಭವವೇ ಸೊಗಸಾಗಿ ಬಂದಿದೆ: "ವಿಮಾನ ಮೇಲೇರತೊಡಗಿದಂತೆ ನನಗೆ ಜೈಂಟ್‌ವೀಲ್‌ನಲ್ಲಿ ಕೂತಂತೆ ಅನ್ನಿಸಿತು. ವಿಮಾನ

ಸಮಾನಾಂತರ ರೇಖೆಯಲ್ಲಿ ಚಲಿಸತೊಡಗಿದಾಗ, ಕಣ್ಣುಗಳು ಕಿಟಕಿಯಾಚೆ ಹೊರಳಿದವು. ಕೆಳಗೆ ಲಕ್ಷಾಂತರ ಬಣ್ಣ ಬಣ್ಣದ ದೀಪಗಳು ಕಣ್ಣು ಮಿಟುಕಿಸುತ್ತಿದ್ದವು. ಬೆಳಕು ಕಾಣುತ್ತಿದ್ದ ಮನೆಗಳು, ಭಾರಿ ಕಟ್ಟಡಗಳು ದೀಪಾವಳಿಯಲ್ಲಿ ಹೊತ್ತಿಸಿಟ್ಟ ಸಾಲುಹಣತೆಗಳಂತೆ ಬೆಳಗುತ್ತಿದ್ದ, ಹೊಳೆಯುತ್ತಿದ್ದ ದೀಪಗಳು ಏಕಾಏಕಿ ಮಂಕಾಗಿಬಿಟ್ಟವು. ಆಮೇಲೆ ಎಲ್ಲವೂ ಶೂನ್ಯ. ಕತ್ತಲನ್ನು ಸೀಳುತ್ತಾ ಸಾಗುತ್ತಿರುವ ವಿಮಾನದ ರೆಕ್ಕೆಯಲ್ಲಿ ಹಾಯುತ್ತಿದ್ದ ಫಳಕ್‌ಫಳಕ್ ಎಂಬ ಮಿಂಚಿನಂತಹ ಬೆಳಕಿನ ಹೊರತು ಮತ್ತೇನೂ ಕಾಣುತ್ತಿರಲಿಲ್ಲ. ಕೆಲವೊಮ್ಮೆ ಆ ಬೆಳಕು ಸಿಡಿಲು ಹೊಡೆದಂತೆ ಭಾಸವಾಗುತ್ತಿತ್ತು. ಹೊರಗಿನ ಕತ್ತಲು ನನ್ನ ಕಣ್ಣಿಗೂ ಆವರಿಸಿ, ಕಣ್ಣು ಕತ್ತಲಿಟ್ಟಂತಾಗಿ ಕೂತಲ್ಲೇ ತಡವರಿಸಿದೆ" (ಪು. ೨).

ಮೊದಲ ಸಲ ಮೀನಾ ಬಾಂಬೆಯಿಂದ ಪ್ಯಾರಿಸ್‌ಗೆ ಕುವೈತ್ ಏರ್‌ಬಸ್‌ನಲ್ಲಿ ಹೊರಟಾಗಿನ ಅನುಭವ ಕಾವ್ಯಮಯವಾಗಿದೆ: "ಮಳೆ ಜಿನುಗುತ್ತಿತ್ತು. ಮಳೆಯಿಂದಾಗಿ ಹುಲ್ಲನ್ನು ಹೊರತುಪಡಿಸಿ ಗಾರೆಯ ನೆಲವೆಲ್ಲಾ ನೀರಿನಂತೆ, ಕೆಳಗೆ ನಿಂತ ವಿಮಾನಗಳು ನೀರೊಳಗಿನ ಮೀನಿನಂತೆ ಕಾಣುತ್ತಿದ್ದವು. ವಿಮಾನ ಮೇಲೆ ಏರುತ್ತಿದ್ದಂತೆ ಹಿಂದಿನ ರಾತ್ರಿ ದೀಪಗಳ ಝಗಮಗದಲ್ಲಿ ಅಮರಾವತಿಯಂತೆ ಕಂಗೊಳಿಸಿದ ಮುಂಬಯಿ, ಈಗ ಸೂರ್ಯನ ನಿಚ್ಚಳ ಬೆಳಕಲ್ಲಿ, ಮಿಂದು ಮಡಿಯಾಗಿದ್ದರೂ ಕತ್ತಲಲ್ಲಿ ಬಚ್ಚಿಟ್ಟಿದ್ದ ಗುಟ್ಟನ್ನೆಲ್ಲಾ ಬಟ್ಟಂಬಯಲಾಗಿಸಿಕೊಂಡು ನಾಚಿಕೊಂಡಂತೆ ಕಾಣಿಸಿತು. ಮೇಲೆ ಮೇಲೆ ಹೋದಂತೆ ಊರು, ಕೊಳಗೇರಿ, ಸಮುದ್ರ ಎಲ್ಲವೂ ಮಾಯವಾಗಿ ಬಿಟ್ಟಿತು. ಭೂಮಿಯ ಲವಲೇಶವೂ ಕಾಣುತ್ತಿಲ್ಲ. ಮಳೆಯೂ ಇಲ್ಲ, ಸೂರ್ಯನ ಬೆಳಕು ಪ್ರಕಾಶಮಾನವಾಗಿತ್ತು. ಎತ್ತೆತ್ತ ನೋಡಿದರೂ... ಮೋಡಗಳು, ಮೋಡಗಳು, ಮೋಡಗಳೇ. ನಮ್ಮ ಹಿಂದಿನ ಕಂಪನಿ ನಾಟಕಗಳಲ್ಲಿನ ಕೈಲಾಸಪರ್ವತದ ವರ್ಣನೆಯಿದ್ದಂತೆ ಭಾಸವಾಗುತ್ತಿತ್ತು. ಬೂದು ಮತ್ತು ಬಿಳಿಯ ಬಣ್ಣದ ಮೋಡಗಳ ನಡುವೆ ವಿಮಾನ ಸಾಗುತ್ತಿತ್ತು. ಆದರೆ ವಿಮಾನ ಚಲಿಸುತ್ತಿದೆಯೋ ಇಲ್ಲವೋ ಎಂಬುದು ಕೂಡ ಅರಿವಾಗದಂತೆ, ಆರಾಮವಾಗಿ ಕುಳಿತಿದ್ದೆವು..." (ಪು. ೫).

ಎರಡನೆಯ ಬಾರಿ ಫ್ರಾನ್ಸ್‌ಗೆ ಹೋಗಲು ದೆಹಲಿಯಿಂದ ಬಾರ್ಸಿಲೋನಾಕ್ಕೆ ಥಾರೋಂ ಎಂಬ ಏರ್‌ವೇಸ್‌ನಲ್ಲಿ ಟಿಕೆಟ್ ಪಡೆದ ಮೀನಾ ಟಿಕೆಟ್‌ಕೊಳ್ಳುವಾಗ ಸಸ್ಯಾಹಾರಿ ಎಂಬುದನ್ನು ಬರೆಸುವುದನ್ನು ಮರೆತರು. ಹೀಗಾಗಿ, ಎರಡೂ ಕಡೆ ಪ್ರಯಾಣದಲ್ಲಿ ಊಟವಿಲ್ಲದೆ ಕೇವಲ ಬ್ರೆಡ್ ತಿಂದು ಸಮಾಧಾನಪಟ್ಟು ಕೊಳ್ಳಬೇಕಾಯಿತು. ಪ್ರಯಾಣದ ನಡುವೆ ಬುಕಾರೆಸ್ಟ್‌ನ ವಿಮಾನ ನಿಲ್ದಾಣದಲ್ಲಿ ನೀರಿಗಾಗಿ ಪರದಾಡುತ್ತ ಮಹಡಿಯಲ್ಲಿದ್ದ ಬಾರ್‌ಗೆ ಹೋಗಿ ಕುಡಿಯಲು ನೀರು ಕೇಳಲು 'ಸಾದಾ ನೀರು ಬೇಕಾದರೆ ಮೂರು ಡಾಲರ್ ಕೊಡಿ' ಎಂದರು. ಮೀನಾರವರ

ಬಳಿ ಡಾಲರ್ ಇರಲಿಲ್ಲ. 'ಭಾರತದ ರೂಪಾಯಿ ಇದೆ, ಫ್ರಾನ್ಸಿನ ಫ್ರಾಂಕ್ ಇದೆ' ಎಂದು ಮೀನಾ ಹೇಳುತ್ತಿರುವಷ್ಟರಲ್ಲಿ 'ಡಾಲರ್ ಇದ್ದರೆ ವ್ಯವಹರಿಸಿ ಇಲ್ಲದಿದ್ದರೆ ತೊಂದರೆ ಕೊಡಬೇಡಿ' ಎಂದು ಬಾರ್‌ನವರು ಮುಖ ತಿರುಗಿಸಿದರು. ಕೊನೆಗೆ ಬಾಯಾರಿಕೆ ನೀಗಿಕೊಳ್ಳಲು ನಿರ್ವಾಹವಿಲ್ಲದೆ ಟಾಯ್‌ಲೆಟ್ ನಲ್ಲಿಯಿಂದ ನೀರನ್ನು ಹಿಡಿದು ಕುಡಿಯಬೇಕಾಯಿತು (ಪು. ೪). ಮೊದಲ ಸಲ ಪ್ಯಾರಿಸ್‌ಗೆ ಕುವೈತ್ ಏರ್‌ಬಸ್‌ನಲ್ಲಿ ಹೊರಟಾಗ ಟಾಯ್‌ಲೆಟ್‌ಗೆ ಹೋದಾಗ ಒಳಗಿನಿಂದ ಬಾಗಿಲು ತೆರೆಯಲು ಬಾರದೆ ಮೀನಾ ಬಾಗಿಲನ್ನು ಅಲ್ಲಾಡಿಸಿದರು. ಗಗನಸಖನೊಬ್ಬ ಹೊರಗಿನಿಂದ ಬಾಗಿಲು ತೆಗೆಯಲು ಸಹಕರಿಸಿದ. ಹೊರಬಂದಾಗ ಮೀನಾರವರಿಗೆ ಅವನ ಮುಖ ನೋಡಲು ಸಂಕೋಚವಾಯಿತಂತೆ (ಪು. ೫). ಇಂತಹ ಸಣ್ಣ ಸಣ್ಣ ವಿವರಗಳು ಪ್ರವಾಸ ಕಥನದಲ್ಲಿ ಆಕರ್ಷಕವಾಗಿ ಮೂಡಿಬಂದಿವೆ. ಹೋಟೆಲ್ ತಾಜ್‌ಮಹಲ್‌ನ ಕಮಲ್‌ನ ದೃಷ್ಟಿಯಲ್ಲಿ ಹಣವೇ ಪ್ರಧಾನ, ತಾನು ಹುಟ್ಟಿದ ದೇಶ ಅಪ್ರಧಾನ. ಅವನು ಫ್ರೆಂಚ್ ಜನ ಬುದ್ಧಿವಂತರು, ಭಾರತೀಯರು ದಡ್ಡರು ಎಂದು ವಾದಿಸಿದಾಗ ಮೀನಾ ಅವನನ್ನು ಅಲ್ಲಗಳೆಯಲಾರದೆ ನಿರುತ್ತರರಾದರು. 'ಸುಮ್ಮನಿರಲಾರದೆ ಜೇನುಗೂಡಿಗೆ ಕೈಯಿಕ್ಕಿ ಜೇನುಹುಳುಗಳನ್ನು ಮೈಮೇಲೆ ಬಿಟ್ಟುಗೊಂಡಂತಾಯಿತು ನನ್ನ ಸ್ಥಿತಿ' ಎಂದು ಮೀನಾ ಹೇಳುವರು (ಪು.೨೦). ಎರಡನೆ ಬಾರಿ ಫ್ರಾನ್ಸಿಗೆ ಭೇಟಿಕೊಟ್ಟಾಗ ಮೀರಾ ತನ್ನ ಗಂಡನ ಮನೆ ಹುಡುಕಿದ ಸಾಹಸದ ಕಥೆಯ ವಿವರ ನಗು ತರಿಸುತ್ತದೆ (ಪು. ೧೩೫-೧೩೭). "ಭಾಷೆ ತಿಳಿಯದ, ನನ್ನದಲ್ಲದ ಊರಲ್ಲಿ ನಡುರಾತ್ರಿ ಗಲ್ಲಿ ಗಲ್ಲಿಗಳ ನಡುವೆ ಗಿರಗಿರನೆ ಸುತ್ತಿದ್ದು ಆ ಪುಟ್ಟ ಅಂಗೈ ಅಗಲದ ಊರಲ್ಲೂ ಕಳೆದುಹೋಗುವ ಭಯ, ಆತಂಕ, ಮನೆ ಪತ್ತೆಮಾಡಲಾಗದೆ ಒದ್ದಾಡಿದ್ದು... ಈಗ ನೆನೆದರೆ ನನ್ನ ಬಗ್ಗೆ ನನಗೇ ಅಯ್ಯೋ ಪಾಪ ಅನ್ನಿಸುತ್ತದೆ!" ಎಂದು ತಮ್ಮನ್ನೇ ಮೀನಾ ನಗೆಗೆ ಗುರಿಮಾಡಿಕೊಳ್ಳುವರು.

ಫ್ರಾನ್ಸ್ ದೇಶದ ಒಳವಿವರಗಳು ಇಷ್ಟು ಚೆನ್ನಾಗಿ ಈ ಪ್ರವಾಸ ಕಥನದಲ್ಲಿ ತೆರೆದುಕೊಳ್ಳುವುದು. ಮೀನಾ ಈ ದೇಶದ ಸೊಸೆ ಎನ್ನುವ ಕಾರಣಕ್ಕಾಗಿಯಲ್ಲ; ಅಥವಾ ತನ್ನ ಗೆಳತಿ ಜೋಸಿಯ ತವರು ಎನ್ನುವ ಕಾರಣಕ್ಕಾಗಿಯಲ್ಲ. ಫ್ರಾನ್ಸ್‌ಗೆ ಭೇಟಿ ಕೊಡಲು, ಅದರ ಸಾಮಾಜಿಕ ಬದುಕನ್ನು ಇಷ್ಟು ತೀವ್ರವಾಗಿ ಅಧ್ಯಯನ ಮಾಡಲು ಸಾಧ್ಯವಾದುದು ಗೆಳತಿ ಜೋಸಿ ಹಾಗೂ ಗಂಡ ಫ್ರಾನ್ಸಿಸ್‌ರವರಿಂದಾಗಿ. ಭಾರತೀಯ ಪ್ರಸನ್ನ ಮನಸ್ಸೊಂದು ಇಲ್ಲಿ ಮುಕ್ತವಾಗಿ ವಿಹರಿಸಿದೆ. ಆ ದೇಶದ ಸಂಸ್ಕೃತಿ, ಕಲೆ, ಜನಜೀವನ, ಸಮೃದ್ಧಿ, ಅರೆಕೊರೆ -ಹೀಗೆ ಎಲ್ಲವನ್ನೂ ಕಂಡಿದೆ. ಈ ಪ್ರವಾಸ ಕಥನದ ಕೊನೆಯಲ್ಲಿ ಅಲ್ಲಮಪ್ರಭುವಿನ 'ಎತ್ತಣ ಮಾಮರ ಎತ್ತಣ ಕೋಗಿಲೆ...' ಎಂಬ ವಚನದ ಉಲ್ಲೇಖ ಬಂದಿದೆ. ಆ ವಚನದಲ್ಲಿ ಪುನರಾವೃತ್ತಿಯಾಗುವ ಆಶ್ಚರ್ಯದ ಸಂಕೇತವಾಗಿ

'ಎತ್ತಣಿಂದೆತ್ತ' ಎಂಬ ಪದ ಬರುತ್ತದೆ. ಈ ಪ್ರವಾಸ ಕಥನ ಓದಿ ಮುಗಿಸಿದಾಗ ಪ್ರಭುವಿನ 'ಎತ್ತಣಿಂದೆತ್ತ' ಸಂಬಂಧವೆನ್ನುವ ಪ್ರಶ್ನೆ ಹಾಗೂ ಅದರೊಂದಿಗೇ ವ್ಯಕ್ತವಾಗುವ ಬೆರಗು ಏಕಕಾಲದಲ್ಲಿ ನಮ್ಮನ್ನು ಕಾಡುತ್ತದೆ.

ಪ್ರೊ. ಎಸ್. ರಾಮಸ್ವಾಮಿಯವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು. ಇಂಗ್ಲೆಂಡ್‌ನ ಪ್ರವಾಸ ಕಥನವನ್ನು **ಇಂಗ್ಲೆಂಡ್‌ನಲ್ಲಿ ಅಲೆಮಾರಿ** ಎಂಬ ಹೆಸರಿನಲ್ಲಿ ಬರೆದಿದ್ದಾರೆ. ಈಗ ಫ್ರಾನ್ಸ್‌ದೇಶದಲ್ಲಿ ಎರಡು ಬಾರಿ ಸುತ್ತಾಡಿರುವುದರಿಂದ 'ಫ್ರಾನ್ಸ್‌ನಲ್ಲಿ ಅಲೆಮಾರಿ' ಪ್ರವಾಸ ಕಥನ ಬಂದಿದೆ.

ಪ್ರೊ. ಎಸ್. ರಾಮಸ್ವಾಮಿಯವರ ಆಸಕ್ತಿಯ ಹರಹು ದೊಡ್ಡದು. ಅವರು ಸಾಹಿತ್ಯ, ಇತಿಹಾಸ, ಕಲೆ, ನಾಟಕ, ಸಿನೆಮಾ -ಹೀಗೆ ತಮ್ಮದೇ ಆದ ಅಭಿರುಚಿ ರೂಢಿಸಿಕೊಂಡಿರುವವರು. ಹೀಗಾಗಿ ಇವೆಲ್ಲವೂ ಈ ಪ್ರವಾಸ ಕಥನದಲ್ಲಿ ಅವಕಾಶ ಪಡೆದುಕೊಳ್ಳುತ್ತವೆ. ಈ ಅಲೆಮಾರಿತನದ ವಿಶೇಷವೆಂದರೆ ಸಂಪೂರ್ಣ ಸ್ವಾತಂತ್ರ್ಯ. "ಎಲ್ಲೋ ಒಂದು ಕಡೆಗೆ ಹೋಗಬೇಕೆಂದು ಹೊರಟು ದಾರಿಯಲ್ಲಿ ಮತ್ತೇನೋ ಕಣ್ಣಿಗೆ ಬಿದ್ದು ಅಲ್ಲಿಗೆ ಪಾದ ಬೆಳೆಸುವುದು ಸಾಮಾನ್ಯವಾದ ಅನುಭವ. ಅವರಿಗೆ ಯಾವ ಒನ್ ವೇ ನಿಯಮವೂ ಇಲ್ಲ. ಹೋದ ರಸ್ತೆಯಲ್ಲೇ ಯಾವಾಗ ಬೇಕಾದರೂ ವಾಪಸ್ಸು ತಿರುಗಬಹುದು. ಅಲೆಮಾರಿಯ ವೃತ್ತಾಂತದ ಶೈಲಿಯೂ ಅಷ್ಟೆ. ಅದರಲ್ಲಿ ಒಂದು 'ಮೆಥಡ್'ಇಲ್ಲ. ಸಂಪೂರ್ಣ ಸ್ವಾತಂತ್ರ್ಯದ ಸಂಕೇತವಾದ ಸ್ವೇಚ್ಛಾವೃತ್ತಿ ಮಾತ್ರ ವಿಹರಿಸುತ್ತದೆ. ಹಿಂದೆ ಹೋಗಿದ್ದ ಸ್ಥಳಗಳಿಗೇ ಮತ್ತೆ ಭೇಟಿ ಕೊಡುವ ಮನಸ್ಸಾದರೆ ಈ ಅಲೆಯುವ ಮನ ಪ್ಯಾರಿಸ್‌ನ ಬ್ರಿಜ್ ಯಾವುದಾದರೊಂದನ್ನು ದಾಟಿ ಬಂದ ದಾರಿಗೆ ಸುಂಕವಿಲ್ಲವೆಂದು ಹಿಂತಿರುಗಬಹುದು. ಏನನ್ನೋ ಹೇಳಲು ಹೊರಟು ಮತ್ತೇನನ್ನೋ ಸ್ಮರಿಸಿಕೊಂಡು ಅಲ್ಲಿಗೆ ಓಡಬಹುದು...' (ಪು. ೩೩). ಈ ಮಾತನ್ನು ಅವರ ಪ್ರವಾಸ ಕಥನಕ್ಕೆ ಚೆನ್ನಾಗಿ ಅನ್ವಯಿಸಬಹುದು. "ಪುಸ್ತಕ ಪಂಡಿತನು ಪುಸ್ತಕಗಳ ಹಾಳೆಗಳನ್ನು ಓದಿ ತಿರುವಿ ಹಾಕುವ ಉತ್ಸಾಹದಿಂದ ಪಟ್ಟಣಗಳನ್ನು, ದೇಶಗಳನ್ನು, ಬೀದಿಗಳನ್ನು, ಕಟ್ಟಡಗಳನ್ನು, ಮ್ಯೂಸಿಯಂಗಳನ್ನು ಜನರನ್ನು ತಿರುವಿ ಹಾಕುವುದರಿಂದ ಅವನನ್ನು ಆಕರ್ಷಿಸುವ ಪಟ್ಟಣಗಳು, ಬೀದಿಗಳು ವಿರಳ!" ಎಂದು ಅವರು ಅಭಿಪ್ರಾಯ ಪಡುವರು (ಪು. ೮).

ಲೇಖಕರು ಹೇಳುವಂತೆ ಪ್ರಪಂಚದ ಅತ್ಯಂತ ಸುಂದರವಾದ ಸೊಬಗಿನ ಪಟ್ಟಣ ಪ್ಯಾರಿಸ್. ಫ್ರೆಂಚ್‌ನವರ ಪ್ರಕಾರ ಇದೊಂದು 'Universal truth' - ಪ್ರಪಂಚದ ನಾಗರಿಕರೆಲ್ಲರೂ ಒಪ್ಪಲೇಬೇಕಾದ ಸತ್ಯ! ಬರ್ನಾಡ್ ಷಾನ 'ಮೈ ಫೇರ್ ಲೇಡಿ' ನಾಟಕದ ಹಿಗಿನ್ಸ್ ಫ್ರೆಂಚರ ಬಗ್ಗೆ ಒಂದು ಜೋಕ್ ಮಾಡುವನು:

"ಫ್ರೆಂಚರು ಕಾರ್ಯತಃ ಏನನ್ನು ಮಾಡಲೂ ಹೇಸುವುದಿಲ್ಲ. ಆದರೆ ಅವರು ಅವರ ಭಾಷೆಯ ಪದೋಚ್ಚಾರಣೆಯ ಬಗ್ಗೆ ವಹಿಸುವ ಶ್ರದ್ಧೆ ಅನುಕರಣೀಯ" ಫ್ರಾನ್ಸ್ ದೇಶದಲ್ಲಿ ಫ್ರೆಂಚ್ ಭಾಷೆ ಬರದಿದ್ದರೆ ವ್ಯವಹರಿಸುವುದು ಬಹಳ ಕಷ್ಟ. ಇಂಗ್ಲಿಷ್ ಅಲ್ಲಿ ನಿಷಿದ್ಧ. ಅವರ ಪ್ರಕಾರ ಫ್ರೆಂಚ್ ಸುಸಂಸ್ಕೃತರು. ಸಂಪ್ರದಾಯಸ್ಥರು, ಕಲಾವಿದರು, ಬರಹಗಾರರು ಬಲ್ಲ ಭಾಷೆ. ಇಂಗ್ಲಿಷ್ ವಾಣಿಜ್ಯ. ವರ್ತಕತ್ವ ಹಣವನ್ನೇ ಪ್ರಧಾನವಾಗಿ ಪರಿಗಣಿಸುವ ಲೌಕಿಕರ ಭಾಷೆ.

ಫ್ರೆಂಚರ ಸಾಹಿತ್ಯ ಪ್ರೀತಿಯ ಬಗ್ಗೆ, ಸಾಹಿತ್ಯಾಭಿಮಾನದ ಬಗ್ಗೆ ಲೇಖಕರು ಹೀಗೆ ಹೇಳುವರು: "...ಅಲ್ಲಿನ ಸಾಮಾನ್ಯ ಜನರಿಗೂ ತಮ್ಮ 'ಕ್ಲಾಸಿಕ್' ಎನ್ನಿಸಿಕೊಳ್ಳುವ ಸಾಹಿತ್ಯ ಕೃತಿಗಳ ಬಗ್ಗೆ ಪರಿಜ್ಞಾನವಿದೆ. ಪುಸ್ತಕ ಮಾರಾಟಗಾರನಲ್ಲ- ಒಬ್ಬ ಟ್ಯಾಕ್ಸಿ ಡ್ರೈವರ್ ಸಹ-ಜೊಲ, ಬಾಲ್‌ಜಾಕ್, ಮೋಲಿಯೇರ್, ಲ ಫಾನ್‌ಟೇನ್, ಹ್ಯೂಗೋ, ಫ್ಲೋ ಬೇರ್ ಇವರ ಬಗ್ಗೆ ಅವನೊಬ್ಬ ವಿಶ್ವವಿದ್ಯಾನಿಲಯದ ಅಧ್ಯಾಪಕನೋ ಎನ್ನುವ ಮಟ್ಟದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಇದೇನೂ ಸಾಹಿತ್ಯ ವಿಮರ್ಶೆಯಲ್ಲವಾದರೂ ತನ್ನ ದೇಶದ, ಭಾಷೆಯ ಬರಹಗಾರರ ಬಗೆಗೆ ಅವನಿಗಿರುವ ಆಸಕ್ತಿ, ಶ್ರದ್ಧೆ ಮತ್ತು ಸ್ವಾಭಿಮಾನವನ್ನು ತೋರಿಸುತ್ತದೆ. ಅವನಿಗೆ ಟ್ಯಾಕ್ಸಿಯಲ್ಲಿ ಗಿರಾಕಿಗಳು ಸಿಗದಿದ್ದಾಗ- ಅವರಿಗೋಸ್ಕರ ಕಾಯುತ್ತಾ ಕಾರನ್ನು ನಿಲ್ಲಿಸಿರುವಾಗ- ಅವನು ಓದುತ್ತಿರುವುದು ವೃತ್ತ ಪತ್ರಿಕೆಗಿಂತ ಮಿಗಿಲಾಗಿ ಒಂದು 'ಕ್ಲಾಸಿಕ್' ಬರಹಗಾರನ ಕೃತಿ! ನೀವು ಟ್ಯಾಕ್ಸಿಗೆ ಹತ್ತಿದ ನಂತರ ಅವನು ಅದರ ಬಗ್ಗೆ ನಿಮಗೆ ಒಂದು ಭಾಷಣವನ್ನು ಕೊಡಬಲ್ಲ- ನೀವು ಅವನನ್ನು ಆ ವಿಷಯ ಕುರಿತು ಮಾತನಾಡಿಸಿದರೆ ಮಾತ್ರ!" (ಪು.೧೩).

ಫ್ರಾನ್ಸ್‌ನ ಅತ್ಯಂತ ಪ್ರಾಚೀನ ಪ್ರದೇಶವಾದ ನೋತ್ರಾ ದಾಮ್‌ನ ಅದ್ಭುತ ಗಾಥಿಕ್ ಶೈಲಿಯ ವಾಸ್ತು ಶಿಲ್ಪವನ್ನು, ಅದರಲ್ಲಿರುವ ದೊಡ್ಡ ಗಂಟೆಯನ್ನು, ಹ್ಯೂಗೋ ಬರೆದಿರುವ 'ಹಂಚ್ ಬ್ಯಾಕ್ ಆಫ್ ನೋತ್ರದಾಮ್' ಎಂಬ ಕಾದಂಬರಿ ಎರಡು ಬಾರಿ ಸಿನಿಮಾ ಆಗಿರುವುದನ್ನು, ಅದರ ನಾಯಕರುಗಳಾದ ಛಾರ್ಲ್ಸ್ ಲಾಟನ್ ಹಾಗೂ ಅಂಥೋನಿ ಕ್ವಿನ್‌ರವರ ಅಭಿನಯವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುವರು. ದಿ ಲೆಫ್ಟ್ ಬ್ಯಾಂಕ್ ನಲ್ಲಿರುವ ಪ್ಯಾರಿಸ್ ವಿಶ್ವವಿದ್ಯಾಲಯ, ಅಲ್ಲಿನ ಕೆಫೆಗಳಲ್ಲಿ ಗಂಟೆಗಟ್ಟಲೆ ಕೂತು, ಓದುವ ಬರೆಯುವ, ಚರ್ಚಿಸುವ ಬುದ್ಧಿಜೀವಿಗಳ ಬಗೆಗೆ ತೀರ ಭಾವುಕತೆಯಿಂದ ನುಡಿಯುವರು. ಹೊಸ ಹೊಸ ಪ್ರಕಾರಗಳು ಸಾಹಿತ್ಯದಲ್ಲಾಗಲೀ, ವಾಸ್ತುಶಿಲ್ಪದಲ್ಲಾಗಲೀ, ಸಂಗೀತದಲ್ಲಾಗಲೀ, ಚಿತ್ರಕಲೆಯಲ್ಲಾಗಲೀ, ಚಲನಚಿತ್ರಗಳಲ್ಲಾಗಲೀ, ಗಣಿತ-ಭೌತಶಾಸ್ತ್ರಗಳಲ್ಲಾಗಲೀ, ಯಾವುದೇ ಮಾನವನ ಚಟುವಟಿಕೆಗೆ ಸಂಬಂಧಪಟ್ಟ ವಿಷಯವೇ ಆಗಲಿ- ಇವೆಲ್ಲವೂ 'ದಿ ಲೆಫ್ಟ್ ಬ್ಯಾಂಕ್', 'ಲ್ಯಾಟಿನ್ ಕ್ವಾರ್ಟರ್'ನಲ್ಲೇ

ಹುಟ್ಟಿ ಬೆಳೆಯುವುದು. ಸಾರ್ತ್ರ್ ಹೇಳುವುದು ತಮಗೆ ಅರ್ಥವಾಗದಿದ್ದರೂ ಅವನನ್ನು ನೋಡಬೇಕೆಂದು ನಾಲ್ಕೈದು ರಾತ್ರಿ ಲೆಫ್ಟ್ ಬ್ಯಾಂಕ್‌ನ 'ಸಾ ಜರ್ಮೇನ್ ದಿ ಪ್ರೇ' ಮಗ್ಗುಲಲ್ಲಿ ಕಾದು ಕುಳಿತ ಈ ಉಂಬ್ರಮಾರಿಯ ಆಸೆ ಈಡೇರದಿದ್ದುದರ ವಿವರವೂ ಇಲ್ಲಿ ದಾಖಲಾಗಿದೆ. ಫ್ರಾನ್ಸ್‌ನವರಾಗಿ ಧಾರವಾಡದ ವಸುಂಧರಾರವರನ್ನು ವಿವಾಹವಾಗಿ ಫ್ರಾನ್ಸ್‌ನಲ್ಲಿ ನೆಲೆಸಿರುವ ಸಂಸ್ಕೃತ ವಿದ್ವಾಂಸ ಫಿಲಿಯೋಸಾರವರ ಕಚ್ಚೆ ಪಂಚೆ ಸಾತ್ವಿಕ ನೋಟವನ್ನು ಗಮನಿಸಿ ಅವರು ಮೈಸೂರಿನವರಲ್ಲವೆಂದು ನಂಬುವುದೇ ಕಷ್ಟ ಎನ್ನುವರು. (ಪು. ೧೯).

ಪ್ಯಾರಿಸ್‌ನ Metro ರೈಲುಗಳಲ್ಲಿನ ಸಂಚಾರದ ವಿಶಿಷ್ಟಾನುಭವಗಳು, ಪ್ಯಾರಿಸ್‌ನ ಚಾರಿತ್ರಿಕ ಸ್ಮಾರಕಗಳು, ಪ್ಯಾರಿಸ್‌ನ 'ಪ್ಲಾಸ್'ಗಳು, ಪ್ಯಾರಿಸ್‌ನಲ್ಲಿ ನೋಡಬೇಕಾದ ಸ್ಥಳಗಳು, ಲೂರ್ವ್ ಮತ್ತು ಮ್ಯೂಸಿಯಂಗಳು, ಫ್ರೆಂಚ್ ಸಾಹಿತ್ಯ ಚರಿತ್ರೆಯ ಪಕ್ಷಿನೋಟ, ಆಧುನಿಕ ಫ್ರೆಂಚ್ ರಂಗಭೂಮಿ, ಏಕ್ಸ್, ಆನ್- ಪ್ರೊವಾನ್ಸ್, ಮಾರ್ಸ್ ಪಟ್ಟಣ 'ರಿವಿಯೇರಾ' -ಹೀಗೆ ಪ್ರೊ. ರಾಮಸ್ವಾಮಿಯವರು ತಮ್ಮದೇ ಆದ ಶೈಲಿಯಲ್ಲಿ ಒಂದೊಂದರ ಬಗೆಗೂ ವಿವರ ನೀಡುತ್ತಾ ಹೋಗುವರು. ನಾಟಕ ಮತ್ತು ರಂಗಪ್ರಿಯತೆ, ಬೆಂಗಳೂರಿನ ಲಿಟಲ್ ಥಿಯೇಟರ್ -ಇವು ಪ್ರವಾಸ ಕಥನದಲ್ಲಿ ಬರುವ ಗಮನಾರ್ಹ ಭಾಗಗಳು. ರಂಗ ಚಟುವಟಿಕೆಗಳ ಬಗೆಗಿನ ಅವರ ಆಸಕ್ತಿ ಕುತೂಹಲಕಾರಿಯಾದುದು. ಪ್ರವಾಸ ಕಥನದ ಉದ್ದಕ್ಕೂ ಅಲ್ಲಿ ಇಲ್ಲಿ ಬರುವ ಚಲನಚಿತ್ರಗಳ ಪ್ರಸ್ತಾಪ ಅವರ ಇನ್ನೊಂದು ಆಸಕ್ತಿಯ ಕ್ಷೇತ್ರದ ಬಗೆಗೆ ವಿವರ ನೀಡುತ್ತದೆ.

ಪ್ರೊ. ಎಸ್. ರಾಮಸ್ವಾಮಿಯವರದು ಸರಳ ಬರವಣಿಗೆಯಾದರೂ ಈ ಪುಟ್ಟ ಪ್ರವಾಸ, ಕಥನದ ಗರ್ಭದಲ್ಲಿ ಅವರ ಆಳವಾದ ವ್ಯಾಸಂಗದ, ಆಸಕ್ತಿಯ ವಿವರಗಳು ದಾಖಲಾಗಿವೆ. ಅವರು ತಮ್ಮನ್ನು ತಾವೇ ವಿಡಂಬನೆಗೆ ಗುರಿಪಡಿಸಿಕೊಳ್ಳಬಲ್ಲರು. ಹಾಗೆಯೇ ಬೇರೆಯವರನ್ನೂ ಲಘುವಾಗಿ ಹಾಸ್ಯ ಮಾಡುವರು. ಪ್ಯಾರಿಸ್‌ನ ಕೆಫೆಗಳ ಮಾಣಿಗಳ ಟಿಪ್ಸ್ ಬಗ್ಗೆ ಅವರು ಮಾಡುವ ಲೇವಡಿ ಓದಿಯೇ ಅನುಭವಿಸಬೇಕು. (ಪು. ೪೦-೪೧). ಅಲ್ಲಿ ಪ್ರಾಸಂಗಿಕವಾಗಿ ಚಾರ್ಲಿ ಚಾಪ್ಲಿನ್‌ನ ಚಿತ್ರವೊಂದರ ತುಣುಕನ್ನು ಪ್ರಸ್ತಾಪಿಸಿರುವರು. ಚಾಪ್ಲಿನ್ ಒಂದು ರೆಸ್ಟೋರಾದಲ್ಲಿ ತಿಂಡಿ ತಿಂದು ಬಿಲ್ ಕೊಡಲು ಹಣವೇ ಇಲ್ಲದಾಗ ಪಕ್ಕದ ಟೇಬಲ್‌ನಲ್ಲಿ ಒಬ್ಬ ಹಣವಂತ ತಿಂದು ತೇಗಿ ವೇಟರ್‌ಗೆ ಬಿಲ್ ಜೊತೆಗೆ ದೊಡ್ಡ 'ಟಿಪ್' ಬಿಟ್ಟಾಗ ಚಾಪ್ಲಿನ್ ವೇಟರ್ ಬರುವುದಕ್ಕೆ ಮುಂಚೆಯೇ ಪಕ್ಕದವನು ಹೋದ ತಕ್ಷಣವೇ ಅಲ್ಲಿಗೆ ಹಾರಿ ಹೋಗಿ ಅವನು ಬಿಟ್ಟಿರುವ 'ಟಿಪ್' ಅನ್ನು ತಾನು ತೆಗೆದುಕೊಂಡು ಅದರಲ್ಲಿಯೇ ತನ್ನ ಬಿಲ್ಲನ್ನು ಕೊಟ್ಟು ವೇಟರ್‌ಗೆ ಒಂದು 'ಟಿಪ್ಸ್' ಅನ್ನೂ ಬಿಟ್ಟು ಹೊರ ನಡೆಯುತ್ತಾನೆ! ಅವನು ಮಾಡಿದ ಸಲಾಮನ್ನು ಸ್ವೀಕರಿಸಿ ಸಂತೋಷಪಡುತ್ತಾನೆ.

ಫ್ರಾನ್ಸ್ ಪ್ರವಾಸ ಕಥನಗಳಲ್ಲಿ ಪ್ಯಾರಿಸ್‌ನ ಮುಕ್ತ ಪ್ರಣಯಕೇಳಿಯ ಬಗೆಗೆ ವಿವರಗಳು ತುಂಬಿರುವುದನ್ನು ನಾನು ಓದಿರುವೆನು. ಎಸ್. ರಾಮಸ್ವಾಮಿಯವರು ತಮ್ಮ ಸದಭಿರುಚಿಯ ಕಾರಣದಿಂದಾಗಿ ಆ ಕಡೆ ಇಣುಕಿಸುವುದ್ದ ಹೋಗಿಲ್ಲ, ಆಸಕ್ತಿ ಹರಿಸಿಲ್ಲ. ಅವರದು ತಿದ್ದಿ ತೀಡಿದ ಕಣ್ಣು ಮನಸ್ಸು. ಜೊತಗೆ ಈ ಅಲೆಮಾರಿಗೆ ಒಳ್ಳೆಯ ಸಾಹಿತ್ಯದ ಹಿನ್ನೆಲೆಯಿದೆ. ಒಳ್ಳೆಯದನ್ನು ಮೆಚ್ಚುವ ಸಹೃದಯವಿದೆ. ಈ ಪುಸ್ತಕದ ಒಂದೇ ಒಂದು ಕೊರತೆಯೆಂದರೆ, ಕಣ್ಣಿರಿಯುವ ಮುದ್ರಣ ತಪ್ಪುಗಳು. ಬಾದಾಮಿ ಗೋಡಂಬಿ ಬೆರಸಿ ಹದವಾಗಿ ಸಿದ್ಧಪಡಿಸಿದ ಪಾಯಸದಲ್ಲಿ ಕಲ್ಲು ಸಿಕ್ಕ ಅನುಭವವಾಗುತ್ತದೆ.

**ಆಫ್ರಿಕ:**

ದೇಜಗೌರವರ ದಿನಚರಿ ರೂಪದಲ್ಲಿರುವ **ಆಫ್ರಿಕಾಯಾತ್ರೆ** ಹಾಗೂ **ವಿಸು ವಿಭೀಷಣರ ನಾಡಿನಲ್ಲಿ** ಕ್ರಮವಾಗಿ ಆಫ್ರಿಕಾ ಮತ್ತು ಇಸ್ರೇಲ್, ಶ್ರೀಲಂಕಾಗಳ ಅವರ ಪ್ರವಾಸಾನುಭವವನ್ನು ನಿರೂಪಿಸುವ ಎರಡು ಪುಟ್ಟ ಕೃತಿಗಳಾಗಿವೆ.

'ಆಫ್ರಿಕಾಯಾತ್ರೆ'ಯಲ್ಲಿ ನೈಜೀರಿಯಾ ಮತ್ತು ಘಾನಾ ರಾಷ್ಟ್ರಗಳ ಸುತ್ತಾಟದ ಅನುಭವಗಳ ಪ್ರಧಾನವಾಗಿ ಬಂದಿವೆ. ಯಾತ್ರೆಯ ಕೊನೆಯಲ್ಲಿ ಲೇಖಕರು ಕೆನ್ಯಾ ರಾಷ್ಟ್ರಕ್ಕೂ ಭೇಟಿ ನೀಡಿದ್ದರೂ ಅಲ್ಲಿ ಅವರ ತಂಗಣೆ ಒಂದೆರೆಡು ದಿನಗಳಾದ್ದರಿಂದ ಹೆಚ್ಚಿಗೆ ಏನನ್ನೂ ಹೇಳಲಾಗಿಲ್ಲ. ಆಫ್ರಿಕನ್ನರು ಹಿಂದಿನಿಂದಲೂ ದರ್ಪ, ದೌರ್ಜನ್ಯಗಳಿಗೆ ಗುರಿಯಾಗಿ ಜಗತ್ತಿನ ಯಾವ ರಾಷ್ಟ್ರವೂ ಅನುಭವಿಸದಷ್ಟು ಕಷ್ಟನಷ್ಟಗಳನ್ನು ಅನುಭವಿಸಿದರು. ಆದರೂ ಅತ್ಯಂತ ಮೇಧಾವಿಗಳಾದ ಅವರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡರು. ಸಂಸ್ಕೃತಿಯ ಅಂಗವಾದ ಜಾನಪದ ಸಂಪತ್ತು ಅಲ್ಲಿ ಅಪಾರವಾಗಿರುವುದನ್ನು ಲೇಖಕರು ಕಂಡಿರುವರು. "ಆಫ್ರಿಕದ ಯಾವ ಭಾಗಕ್ಕೆ ಹೋದರೂ ಜಾನಪದ ವಿಷಯ ಹೊರೆಹೊರೆಯಾಗಿ ಬಿದ್ದಿದೆ. ಗೀತೆಗಳೇ, ಸಂಗೀತವೇ, ಕುಣಿತವೇ, ಗದ್ಯಗಳೇ, ಬಹುಶಃ ಸದ್ಯದಲ್ಲಿ ಅಲ್ಲಿರುವಷ್ಟು ಜಾನಪದ ಸಂಗೀತಗಳು ಪ್ರಪಂಚದ ಬೇರೆ ಕಡೆ ಇಲ್ಲವೆಂದೇ ತೋರುತ್ತದೆ.ಇನ್ನೂ ಶೇಕಡಾ ೯೦ ಜನ ಹಳ್ಳಿಯಲ್ಲಿ ಇರುತ್ತ, ನಾಗರಿಕತೆಯ ಜಾಲದಲ್ಲಿ ಸಿಕ್ಕಿಕೊಳ್ಳದಿರುವಾಗ, ಆ ಕಲೆಗಳು ಸ್ವಸ್ವರೂಪದಲ್ಲಿ ಯಥೇಚ್ಛವಾಗಿ ದೊರೆಯುತ್ತವೆ" ಎಂದು ಹೇಳುವರು (ಪು. ೪೮). ಅಲ್ಲಿ ಪ್ರತಿಯೊಬ್ಬ ಆಫ್ರಿಕೀಯನೂ ತನ್ನನ್ನು ತಾನು ತಿಳಿಯುವುದರಲ್ಲಿ, ಇತಿಹಾಸ, ಸಂಸ್ಕೃತಿಯನ್ನು ಅರಿಯುವುದರಲ್ಲಿ ಎಷ್ಟು ಆಸಕ್ತನಾಗಿರುವನೆಂಬುದನ್ನು ಲೇಖಕರು ಹೇಳುತ್ತಾ "ಆಫ್ರಿಕೀಯತೆಯ ರಕ್ಷಣೆಯಲ್ಲಿ ಅವನು ಸದಾ ಆಸಕ್ತನಾಗಿದ್ದಾನೆ. ಯಾವ ವಿಶ್ವವಿದ್ಯಾನಿಲಯವನ್ನು ಹೊಕ್ಕರೂ ನಮಗೆ ಮೊದಲು ಕಾಣುವುದು ಆಫ್ರಿಕೀಯತಾ ವ್ಯಾಸಂಗದ ಇಲಾಖೆ. ಆ ಜನರ ಬಾಳಿನ ಗುರಿ ಏನೆಂಬುದು ಇದರಿಂದ ವ್ಯಕ್ತವಾಗುತ್ತದೆ"

ಎಂದಿರುವರು (ಪು.೫). ಆಫ್ರಿಕೀಯರ ಹಾಗೂ ಭಾರತೀಯರ ಅದರಲ್ಲೂ ದಾಕ್ಷಿಣಾತ್ಯರ ನಡುವೆ ಕಾಣುವ ಸಾಂಸ್ಕೃತಿಕ ಬಾಂಧವ್ಯವನ್ನು ಲೇಖಕರು ತಾವು ಹೋದಲ್ಲೆಲ್ಲಾ ಗುರುತಿಸಿರುವರು. ಆಫ್ರಿಕನ್ ಕುಟುಂಬವೊಂದರ ನಡುವೆ ಲೇಖಕರು ಬೆರೆತಾಗ "ಅವರು ನಮ್ಮಂತೆಯೇ ಮಾನವರು ಸುಸಂಸ್ಕೃತರು, ಶೀಲವಂತರು, ಉದಾರಿಗಳು, ಧರ್ಮನಿಷ್ಠರು ಎಂಬ ಭಾವನೆ ಪ್ರಥಮ ಬಾರಿಗೆ" ಉಂಟಾಯಿತಂತೆ. ಅಷ್ಟೇ ಅಲ್ಲ, ಅವರ ಮನಸ್ಸು "ಇತಿಹಾಸಪೂರ್ವ ಕಾಲದ ಭರತಖಂಡದ ಪರಿಸ್ಥಿತಿಯನ್ನು ಕಲ್ಪಿಸಿಕೊಂಡಿತು. ಭರತಖಂಡ ಮತ್ತು ಆಫ್ರಿಕಾ ಖಂಡಗಳ ನಡುವೆ ಸಾಗರವಿಲ್ಲದಿದ್ದ, ಎರಡು ಭೂಖಂಡಗಳು ಒಂದಾಗಿದ್ದ ಕಾಲವನ್ನು ನೆನೆಯಿತು. ಭಾರತೀಯ ಸಂಸ್ಕೃತಿಯ ಕೆಳಪದರಲ್ಲಿ ನೀಗ್ರೋ ಸಂಸ್ಕೃತಿಯ ಅವಶೇಷಗಳಿರಬೇಕೆಂಬ ಮಾನವ ಜನಾಂಗ ವಿಜ್ಞಾನಿಗಳ ವಾದದಲ್ಲಿ ನನಗೆ ನಂಬಿಕೆ ಮೂಡಿತು. ನನ್ನ ದೇಹದಲ್ಲಿಯೂ ನೀಗ್ರೋ ಜನರ ಶಾರೀರಿಕ ಚಿಹ್ನೆಗಳು ಕೆಲವಾದರೂ ಇದ್ದಿರಬಹುದೆಂದು ತೋರಿತು..." (ಪು. ೨೮-೨೯). ಅಲ್ಲಿನ ಜಾನಪದ ಕಲೆಗಳ ಪ್ರದರ್ಶನವನ್ನು ನೋಡುತ್ತಿದ್ದಾಗ ಲೇಖಕರಿಗೆ "ದಕ್ಷಿಣ ಕನ್ನಡ ಜಿಲ್ಲೆಯ ಯಾವುದೋ ಬಯಲು ರಂಗಮಂದಿರದಲ್ಲಿ ಕುಳಿತಿದ್ದಂತೆ ಅನುಭವವಾಗುತ್ತಿತ್ತು" (ಪು. ೩೬). ಇಬದಾನ್‌ಗೆ ಹೋಗುವಾಗ ಮಾರ್ಗ ಮಧ್ಯೆ ಹಳ್ಳಿಯೊಂದರಲ್ಲಿ ಸ್ವಲ್ಪ ಹೊತ್ತು ನಿಂತು ನೋಡಿದಾಗ ಭಾರತೀಯ ಹಳ್ಳಿಯ ದೃಶ್ಯವನ್ನೇ ಲೇಖಕರು ಕಂಡರು. ಇಲ್ಲಿಯ ಭಾಷೆಗಳಿಗೂ ದ್ರಾವಿಡ ಭಾಷೆಗಳಿಗೂ ಸಂಬಂಧವಿರಬೇಕೆಂಬ ಅನಿಸಿಕೆ ಭಾಷಾ ವಿಜ್ಞಾನದ ಅಧ್ಯಾಪಕರ ಜೊತೆ ಚರ್ಚಿಸುತ್ತಿದ್ದಾಗ ಲೇಖಕರಿಗೆ ಉಂಟಾಯಿತು (ಪು. ೪೮-೪೯). ಇಷ್ಟೆಲ್ಲಾ ಸಾಮ್ಯಗಳನ್ನು ಕಂಡ ಅವರು "ಇಂಡಿಯಾ ದೇಶದಲ್ಲಿ ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ಆಫ್ರಿಕಾ ಅಧ್ಯಯನ ಸಂಸ್ಥೆಗಳು ಸ್ಥಾಪನೆಯಾಗುವುದಾದರೆ ಆಫಿಕ್ರಾ ಜನರ ಮತ್ತು ದಕ್ಷಿಣ ಇಂಡಿಯಾದ ಜನರ ಭಾಷೆ, ಸಂಸ್ಕೃತಿ, ಸಮಾಜ ಮೊದಲಾದವುಗಳನು ಕುರಿತಾದ ತೌಲನಿಕ ವ್ಯಾಸಂಗ ನಡೆಸಲು ಸಾಧ್ಯವಾಗುತ್ತದೆ" ಎನ್ನುವರು (ಪು. ೫೦).

ಕಾಮನ್‌ವೆಲ್ತ್ ವಿಶ್ವವಿದ್ಯಾಲಯಗಳ ಒಕ್ಕೂಟ ಸಭೆಯಲ್ಲಿ ಲೇಖಕರು ಪಾಲ್ಗೊಂಡಿದ್ದರಿಂದ ಅಲ್ಲಿ ನಡೆದ ಕಾರ್ಯಕಲಾಪಗಳು, ಭಾಗವಹಿಸಿದ ಪಾನಗೋಷ್ಠಿಗಳು-ಇವೆಲ್ಲದರ ವರ್ಣನೆ ಪುಸ್ತಕದುದ್ದಕ್ಕೂ ಬರುತ್ತದೆ. ಭಾರತೀಯ ಮಿತ್ರರ ಮನೆಯಲ್ಲಿ ನಡೆದ ಊಟೋಪಚಾರಗಳ ವರ್ಣನೆಯೂ ಆಗಾಗ್ಗೆ ಬಂದಿದೆ. ಈ ಗ್ರಂಥದಲ್ಲಿ ಮುಖ್ಯಭಾಗ ಕೊನೆಯಲ್ಲಿ ಬರುವ 'ಎಚ್ಚೆತ್ತ ಆಫ್ರಿಕಾ' ಎಂಬ ದೀರ್ಘ ಪ್ರಬಂಧವಾಗಿದೆ. ಲೇಖಕರು ಇಲ್ಲಿ ಆಫ್ರಿಕದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಇತಿಹಾಸವನ್ನೂ, ಭಾಷೆ ಸಾಹಿತ್ಯಗಳನ್ನೂ ಕುರಿತು ಸಾಕಷ್ಟು ವಿಸ್ತಾರವಾಗಿ ವಿವೇಚಿಸಿರುವರು.

ಟಿ.ಆರ್. ನಾಗಪ್ಪನವರ **ಆಫ್ರಿಕದ ಒಂದು ನೋಟ** ಆಫ್ರಿಕದ ಪ್ರವಾಸ ಕಥನವಲ್ಲ, ಆಫ್ರಿಕದ ಬಗೆಗೆ ಒಂದು ಪರಿಚಯ ಪುಸ್ತಕ. ಪ್ರಾರಂಭದಲ್ಲಿ ಲೇಖಕರು ಆಫ್ರಿಕದ ಕಿರುಪರಿಚಯ ಮಾಡಿಕೊಟ್ಟಿರುವರು. ಆಫ್ರಿಕಾಕ್ಕೆ ಯೂರೋಪಿಯನ್ನರು ವಲಸೆ ಬಂದುದು, ಭಾರತ-ಆಫ್ರಿಕ ಸಂಬಂಧ, ಆಫ್ರಿಕಾದ ಅಭಿವೃದ್ಧಿಗೆ ಭಾರತದ ನೆರವು, ಆಫ್ರಿಕಾದಲ್ಲಿ ಜನಸಂಖ್ಯಾ ಸ್ಫೋಟ, ಆಫ್ರಿಕಾದಲ್ಲಿ ಮಂತ್ರ ಮತ್ತು ಮಾಟ, ಹೆರಿಗೆ, ಕನ್ಯಾಶುಲ್ಕ, ಮಕ್ಕಳ ರಕ್ಷಣೆ ಮತ್ತು ಕಲ್ಯಾಣ -ಹೀಗೆ ವೈವಿಧ್ಯಮಯವಾದ ವಿಷಯಗಳ ನಿರೂಪಣೆಯನ್ನು ಸಾಮಾನ್ಯರಿಗೂ ತಿಳಿಯುವಂತೆ ಹೇಳಲು ಲೇಖಕರು ಪ್ರಯತ್ನಿಸಿರುವರು. ಪುಸ್ತಕದ ಕೊನೆಯಲ್ಲಿ ತಾನ್ಜೇನಿಯಾ ಬಗ್ಗೆ ಪರಿಚಯ ಕೊಡಲಾಗಿದೆ.

**ಆಸ್ಟ್ರೇಲಿಯಾ**

ಅಳಿಯ-ಮಗಳ ಆಹ್ವಾನದ ಮೇರೆಗೆ ಮೂರು ತಿಂಗಳು ಆಸ್ಟ್ರೇಲಿಯಾ ಪ್ರವಾಸ ಮಾಡಿದ ಅನುಭವವನ್ನು **ಆಸ್ಟ್ರೇಲಿಯಾದಲ್ಲಿ ಎಪ್ಪತ್ತು ದಿನಗಳು** ಎಂಬ ಪ್ರವಾಸ ಕಥನದಲ್ಲಿ ಸಾಹಿತಿ ಟಿ. ಮಹಾಬಲೇಶ್ವರ ಭಟ್ಟರು ದಾಖಲಿಸಿರುವರು. ತಮ್ಮ ೭೦ ದಿನಗಳು ಎಂಬ ಪ್ರವಾಸ ಕಥನದಲ್ಲಿ ಸಾಹಿತಿ ಟಿ. ಮಹಾಬಲೇಶ್ವರ ಭಟ್ಟರು ದಾಖಲಿಸಿರುವರು. ತಮ್ಮ ೭೦ ದಿನಗಳ ಪ್ರವಾಸ ಕಾಲದಲ್ಲಿ ಲೇಖಕರು ಸಿಡ್ನಿ, ಹೆಲೆನ್ಸ್ ಬರ್ಗ್, ಉಲ್ಲಂಗನ್, ಮೇಹಿಲ್, ಕ್ಯಾನ್ಬೆರಾಗಳನ್ನು ಸಂದರ್ಶಿಸಿದರು. ಪ್ರವಾಸಕಥನ ಪ್ರಾರಂಭವಾಗುವುದು ಪ್ರವಾಸದ ಪೂರ್ವಸಿದ್ಧತೆ ಹಾಗೂ ಆ ಸಂದರ್ಭದಲ್ಲಿ ಎದುರಾದ ತೊಡಕುಗಳು, ಪರಿಪಾಟಲುಗಳ ವಿವರಣೆಯೊಂದಿಗೆ. ಆಸ್ಟ್ರೇಲಿಯಾದಲ್ಲಿ ಪ್ರಜೆಗಳ ನೈರ್ಮಲ್ಯಪ್ರಿಯತೆ, ಶಿಸ್ತು, ಕಾನೂನಿನ ಪರಿಜ್ಞಾನ ಹಾಗೂ ಗೌರವಗಳನ್ನು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಭಟ್ಟರು ವಿವರಿಸುವರು. ಅಂತರಿಕ್ಷದಲ್ಲಿ ಹಾರಾಟ, ಸಿಡ್ನಿ ಜನಜೀವನ, ದೈತ್ಯಾಕಾರದ ಷಾಪಿಂಗ್ ಕಾಂಪ್ಲೆಕ್ಸ್, ಉಲ್ಲಂಗನ್ ನಾನ್‌ಟೈನ್ ಟೆಂಪಲ್, ಶ್ರೀಮುರುಗನ್ ಟೆಂಪಲ್, ರಾಜಧಾನಿ ಕ್ಯಾನ್ಬೆರಾ, ಹೊಸ ಪಾರ್ಲಿಮೆಂಟ್ ಭವನ, ವಾರ್ ಮೆಮೋರಿಯಲ್, ನ್ಯಾಷನಲ್ ಲೈಬ್ರರಿ, ಹಾಸ್ಪಿಟಲ್, ಆಸ್ಟ್ರೇಲಿಯನ್ನರ ದಾಂಪತ್ಯ ಜೀವನ, ಒಲಂಪಿಕ್ ಕ್ರೀಡಾಂಗಣ, ಸಿಡ್ನಿಸಿಟಿ, ಪ್ರಾಣಿ ಪಕ್ಷಿಗಳ ಬಗೆಗಿನ ಅಕ್ಕರೆ -ಹೀಗೆ ವೈವಿಧ್ಯಮಯ ಸಂಗತಿಗಳ ಪ್ರಸ್ತಾಪ ಅನುಭವರೂಪದಲ್ಲಿ ಪ್ರವಾಸ ಕಥನದಲ್ಲಿ ಮೈದಾಳಿದೆ.

ಆಸ್ಟ್ರೇಲಿಯಾದ ಬ್ಲಾಕ್‌ಟಾನ್ ವೆಸ್ಟ್‌ನ ಪಾಯಿಂಟ್ ಷಾಪಿಂಗ್ ಸೆಂಟರ್ ನೋಡಿದ ಭಟ್ಟರು ಪೆರಮಟಾ ವೆಸ್ಟ್‌ಫೀಲ್ಡ್ ಷಾಪಿಂಗ್ ಕಾಂಪ್ಲೆಕ್ಸ್‌ನ ಅಗಾಧತೆಯ ಜೊತೆ ತುಲನೆ ಮಾಡಿರುವರು. ಮೇಹಿಲ್‌ನ ಮುರುಗನ್ ಟೆಂಪಲ್, ಆಸ್ಟ್ರೇಲಿಯಾದ ನ್ಯಾಷನಲ್ ಲೈಬ್ರರಿ, ಕ್ಯಾನ್ಬೆರಾದ ಆರ್ಟ್ ಗ್ಯಾಲರಿಯಲ್ಲಿನ ಪುಸ್ತಕಗಳ ಬಗ್ಗೆ ಓದುಗರಿಗೆ

ಆಧುನಿಕ ತಂತ್ರಜ್ಞಾನದ ಮೂಲಕ ವಿವರ ನೀಡುವ ಅಲ್ಲಿನ ವ್ಯವಸ್ಥೆ, ಮಕ್ಕಳ ಆಸ್ಪತ್ರೆಯ ಕೊಠಡಿಯಲ್ಲಿನ, ಅತ್ಯಾಧುನಿಕ ವ್ಯವಸ್ಥೆ, ಆ ದೇಶದಲ್ಲಿ ವಿದ್ಯಾವಂತರಿಗೆ ಸಿಗುವ ಗೌರವ ಇವುಗಳ ಬಗ್ಗೆ ಮೆಚ್ಚುಗೆಯ ಮಾತನಾಡಿರುವರು. ಜಾಫ್ಲಿಸ್ ಗಾರ್ಡನ್ ನೋಡಿದ ಭಟ್ಟರಿಗೆ ಬೆಂಗಳೂರಿನ ಲಾಲ್‌ಬಾಗ್ ಎಷ್ಟೋ ಮೇಲೆನಿಸುತ್ತದೆ. ಅಲ್ಲಿನ ಮುಕ್ತ ಲೈಂಗಿಕ ಜೀವನ ನೋಡಿ ಭಟ್ಟರು ಹೇಸಿಗೆಪಟ್ಟುಕೊಳ್ಳುವರು. ಆ ದೇಶದ ಜನತೆಗೆ ಎಲ್ಲ ಸೌಲಭ್ಯಗಳಿದ್ದೂ ಸಾಮಾಜಿಕ ಕಟ್ಟುಪಾಡುಗಳ ಚೌಕಟ್ಟಿಲ್ಲದಿರುವುದನ್ನು ಲೇಖಕರು ಹೇಳುವರು.

ಪ್ರೊ. ಬಿ. ವಿರೂಪಾಕ್ಷಪ್ಪನವರ **ನನ್ನ ಸಿಂಗಪುರ ಮತ್ತು ಆಸ್ಟ್ರೇಲಿಯಾ ಪ್ರವಾಸದ ಅನುಭವಗಳು** ಕೃತಿಯ ಹೆಸರೇ ವಿವರಿಸುವಂತೆ ಎರಡು ರಾಷ್ಟ್ರಗಳಲ್ಲಿ ನಡೆಸಿದ ಪ್ರವಾಸದ ಅನುಭವ ಕಥನ. ಮೆಲ್ಬರ್ನ್ ಪಟ್ಟಣದಲ್ಲಿ ವಾಸವಿರುವ ಮಗಳು-ಅಳಿಯರ ಆಹ್ವಾನದ ಮೇರೆಗೆ ಲೇಖಕರು ಆಸ್ಟ್ರೇಲಿಯಾ ಪ್ರವಾಸ ಕೈಗೊಂಡರು. ಅಲ್ಲಿ ಅವರು ಇದ್ದದ್ದು ಮೂರು ತಿಂಗಳು ಮಾತ್ರ. ತಮ್ಮ ತಂಗಣೆಯ ಅವಧಿಯಲ್ಲಿ ಅವರು ಅಲ್ಲಿನ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದರು. ಆಸ್ಟ್ರೇಲಿಯಾದ ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆ, ಅಲ್ಲಿನ ಸರಕಾರ, ಜನಜೀವನ, ಹವಾಮಾನ, ಶಿಕ್ಷಣ, ಉದ್ದಿಮೆ, ಕೃಷಿ, ಆರೋಗ್ಯ -ಹೀಗೆ ಎಲ್ಲ ವಿಷಯಗಳ ಬಗ್ಗೆ ಲೇಖಕರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿವರಿಸಿರುವರು.

ಆಸ್ಟ್ರೇಲಿಯಾದಲ್ಲಿ ಕಂಡುಬರುವುದು ಪಾಶ್ಚಾತ್ಯ ಸಂಸ್ಕೃತಿ; ಸ್ವಲ್ಪ ಅಮೆರಿಕೆಯನ್ನು ಹೋಲುತ್ತದೆ. ಲೇಖಕರು ಅಲ್ಲಿನ ಭಾರತೀಯ ಸಂಜಾತರ ಜನಜೀವನದಲ್ಲಿ ಭಾರತೀಯ ಸಂಸ್ಕೃತಿ ಎಷ್ಟರಮಟ್ಟಿಗೆ ಬಳಕೆಯಲ್ಲಿದೆ ಎಂಬುದರ ಜಿಜ್ಞಾಸೆ ನಡೆಸಿದವರು. ಭಾರತೀಯ ಸಂಸ್ಕೃತಿ ಹಾಗೂ ಆಸ್ಟ್ರೇಲಿಯನ್ ಸಂಸ್ಕೃತಿಯ ಬಗೆಗೆ ತುಲನಾತ್ಮಕ ವಿವೇಚನೆಯೂ ಇಲ್ಲಿ ನಡೆದಿದೆ. ವಿಷಯ ಸಂಗ್ರಹಣೆಯಲ್ಲಿ ಲೇಖಕರು ತೋರಿರುವ ಆಸಕ್ತಿ ಮೆಚ್ಚುವಂತಹದು. ಪ್ರವಾಸ ಕಥನ ವಿವರಣಾತ್ಮಕವಾಗಿರುವುದರಿಂದ ಆಸ್ಟ್ರೇಲಿಯಾಕ್ಕೆ ಪ್ರವಾಸ ಹೋಗುವವರಿಗೆ ಒಂದು ಒಳ್ಳೆಯ ಮಾರ್ಗದರ್ಶಿಯಂತಿದೆ.

ಲೇಖಕರ ಸಿಂಗಪುರ ಪ್ರವಾಸ ಒಂದು ದಿನದ್ದು. ಗೊರೂರರ ಸಂಬಂಧಿಗಳಾದ ಕೃಷ್ಣಪ್ರಸಾದ್ ಹಾಗೂ ಅವರ ಪತ್ನಿ ಶಾಂತಾ ಅವರ ಆತಿಥ್ಯದಲ್ಲಿ ಸಿಂಗಪುರದ ಪ್ರವಾಸಿ ತಾಣಗಳನ್ನೆಲ್ಲ ನೋಡಿದರು. ಒಂದು ದಿನದ ಮಿತಿಯ ಪ್ರವಾಸವಾದದ್ದರಿಂದ ಇಲ್ಲಿ ಪ್ರವಾಸ ಕಥನ ಲಂಬಿಸಿಲ್ಲ.

**ಇಸ್ರೇಲ್ ಹಾಗೂ ಶ್ರೀಲಂಕಾ:**

'ಏಸು ವಿಭೀಷಣರ ನಾಡಿನಲ್ಲಿ' ಕೃತಿಯಲ್ಲಿ ದೇಜಗೌರವರ ಪ್ರವಾಸಾನುಭವದ ಬಹುಭಾಗವನ್ನು ಇಸ್ರೇಲ್ ಆಕ್ರಮಿಸಿಕೊಂಡಿದೆ. ಇಸ್ರೇಲ್ ಪ್ರವಾಸಕ್ಕೆ ಕಾರಣರಾದವರು

ಅಲ್ಲಿನ ಪುನರ್ವ್ಯವಸ್ಥಾಪನಾ ಕೇಂದ್ರದ ನಿರ್ದೇಶಕರಾದ ರಾನನ್‌ವೆಯಿತ್. ಇಸ್ರೇಲ್ ಅತ್ಯಾಧುನಿಕ ಸಣ್ಣ ರಾಷ್ಟ್ರ. ಅಲ್ಲಿ ಮಳೆ ಕಡಿಮೆ ಆದರೂ ಅವರು ಸಾಧಿಸಿರುವ ಪ್ರಗತಿ ಅದ್ಭುತ. ಜೆರೊಸಲೇಮ್ ಇಸ್ರೇಲಿನ ಮುಖ್ಯ ಪಟ್ಟಣ. ಏಸು ಹುಟ್ಟಿದ ಪವಿತ್ರ ಭೂಮಿಯನ್ನು ನೋಡುತ್ತಿದ್ದಂತೆಯೇ ಲೇಖಕರು ತನ್ಮಯರಾಗಿ ದೇವಪುತ್ರ ಏಸುವಿನ ಮಹಿಮಾತಿಶಯಗಳನ್ನು ನೆನೆಯುವರು. ತಮ್ಮನ್ನು ಆ ಮಹಾತ್ಮನ ನಾಡಿಗೆ ಕೈಹಿಡಿದು ಕರೆದೊಯ್ದ ಭಗವತ್‌ಶಕ್ತಿಗೆ ಮನಸ್ಸಿನಲ್ಲಿಯೇ ಮಣಿಯುವರು. ಅಷ್ಟೇ ಅಲ್ಲ, ಅವರ ಮನದಲ್ಲಿ ಬುದ್ಧನೇ ಏಸುವಾಗಿ, ಏಸುವೇ ಬಸವೇಶ್ವರನಾಗಿ ಜನಿಸಿರಬೇಕೆಂಬ ಕಲ್ಪನೆ ಗರಿ ಮೂಡುತ್ತದೆ (ಪು. ೩೨-೩೩). ಜರೂಸಲೇಮ್ ನಗರವನ್ನೇ ಮನದಲ್ಲಿ ತುಂಬಿಕೊಂಡ ಲೇಖಕರು ಭಾವನಾವಿವಶರಾಗಿ "ಪ್ರಪಂಚದಲ್ಲಿ ಅದರಂಥ ಪುರಾತನ ನಗರ ಮತ್ತೊಂದಿಲ್ಲ. ಆದರಂತೆ ಮೂರು ಸಾವಿರ ವರ್ಷಗಳ ಅವಿಚ್ಛಿನ್ನ ಇತಿಹಾಸ ಹೊಂದಿರುವ ನಗರ ಬೇರೊಂದಿಲ್ಲ..." ಇತ್ಯಾದಿಯಾಗಿ ವಿಚಾರ ಮಾಡುವರು. ಯಹೂದ್ಯರ ಇತಿಹಾಸವನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿರುವ ಲೇಖಕರು, ಅವರು ಅನುಭವಿಸಿದಷ್ಟು ಕಷ್ಟ ಕಿರುಕುಳಗಳನ್ನು ಬೇರಾವ ಜನಾಂಗವೂ ಅನುಭವಿಸಿದಂತಿಲ್ಲ ಎಂದು ಹೇಳಿ, ಆ ಜನರ ಸಾಹಸ ಸಿದ್ಧಿಗಳನ್ನು ನೆನೆದು ಪುಳಕಗೊಳ್ಳುವರು (ಪು.೩೩-೩೫). ಕಿರ್‍ಯಾತ್‌ಗಾಟ್‌ನ ಭಾರತೀಯ ಯಹೂದ್ಯರ ತಾಂಡ್ಯಕ್ಕೆ ಭೇಟಿಕೊಟ್ಟ ಲೇಖಕರು ಮರುಭೂಮಿಯಲ್ಲಿ ನೀರಾವರಿ ಕೃಷಿಯನ್ನು ಕಂಡು ವಿಸ್ಮಯಗೊಳ್ಳುವರು. ಅಲ್ಲಿನ ಗೆಲಿಲಿ ಸರೋವರದ ಸಿಹಿನೀರನ್ನು ಐದಾರು ಹಂತಗಳಲ್ಲಿ ಮೇಲೆತ್ತಿ ನಾಲೆಯಲ್ಲಿ ನೀರು ಆವಿಯಾಗಿ ಹೋಗದಂತೆ, ನೆಲ ಕುಡಿದುಬಿಡದಂತೆ ಪೈಪ್‌ಗಳ ಮೂಲಕ ನೀರನ್ನು ಪಂಪ್ ಮಾಡುವುದನ್ನು ನೋಡಿದಾಗ ಅವರ ಕಣ್ಮುಂದೆ ಭಾರತದ ಚಿತ್ರ ನಿಲ್ಲುತ್ತದೆ.

ನಮ್ಮಲ್ಲಿನ ಜಲಸಮೃದ್ಧಿ, ಸಸ್ಯಸಂಪತ್ತು, ಭೂವೈವಿಧ್ಯ ಜಗತ್ತಿನ ಬಹು ರಾಷ್ಟ್ರಗಳಲ್ಲಿ ಸಿಗುವುದಿಲ್ಲ. ಆದರೂ ನಮ್ಮ ಬಡತನ ಹಿಂಗಲಿಲ್ಲವೆನ್ನುವ ವ್ಯಥೆ ಮನಸ್ಸನ್ನು ಹಿಂಡುತ್ತದೆ (೩೯-೪೦). ಲೇಖಕರು ಕಿಬುಟ್ಟಿ ಹಾಗೂ ಮೊಷಾವ್ ಸಮಾಜಗಳ ಸ್ವರೂಪ ಹಾಗೂ ವ್ಯವಸ್ಥೆಯ ಬಗೆಗೆ ವಿಸ್ತಾರವಾಗಿ ಹೇಳಿರುವರು (ಪು. ೪೦-೪೭). ಅಲ್ಲಿನ ವಿಜ್ಞಾನಿಗಳು ತಮ್ಮ ಸಂಶೋಧನೆಗೂ ಜನಜೀವನಕ್ಕೂ ಸಂಬಂಧ ಕಲ್ಪಿಸುವುದನ್ನು ನೋಡಿದ ಲೇಖಕರು ನಮ್ಮ ವಿಜ್ಞಾನಿಗಳ ಇವರಿಂದ ಪಾಠ ಕಲಿಯಬಾರದೆ? ಎಂದು ಚಿಂತಿಸುವರು.

ಲೇಖಕರ ಐರ್ಲೆಂಡ್ ಪ್ರವಾಸ ವೈಯಕ್ತಿಕವಾದುದು. ಮಗಳು-ಅಳಿಯ-ಮೊಮ್ಮಗಳನ್ನು ನೋಡುವ ಸಲುವಾಗಿ ಹೋದುದು. ಹೆಂಗರುಳಿನ ದೇಜಗೌ ವ್ಯಕ್ತಿಚಿತ್ರ ಇಲ್ಲಿ ನಮಗೆ ಕಾಣಸಿಗುತ್ತದ. ದೇಜಗೌ ತಮ್ಮ ಅಳಿಯನಿಗೆ ಬರೆದಿರುವ ಪತ್ರ ಅವರ

ಕೋಮಲ ಮನಸ್ಸಿಗೆ ಮಗಳ ಆಗಲಿಕೆಯಿಂದಾದ ನೋವು -ದುಃಖ ಎಷ್ಟೆಂಬುದನ್ನು ಹೇಳುತ್ತದೆ.

ವಯಸ್ಕರ ಶಿಕ್ಷಣ ಗೋಷ್ಠಿಯಲ್ಲಿ ಭಾಗವಹಿಸಲೆಂದು ಶ್ರೀಲಂಕೆಗೆ ಹೋಗಿ ಬಂದ ದೇಜಗೌ ತಮ್ಮ ಅನುಭವಗಳನ್ನು **'ವಿಭೀಷಣನ ನಾಡಿನಲ್ಲಿ'** ಎಂಬ ಭಾಗದಲ್ಲಿ ಕೊಟ್ಟಿರುವರು. ಈ ಅನುಭವ ಕಥನದಲ್ಲಿ ನಿಲ್ಲುವ ಭಾಗವೆಂದರೆ ಸ್ವರ್ಗಸದೃಶವಾದ ಕ್ಯಾಂಡಿಯ ಭವ್ಯ ನೋಟ (ಪು. ೧೨೧-೧೨೨). ಪ್ರಾತಃಕಾಲ ಸಂಜೆ, ರಾತ್ರಿ ವೇಳೆಗಳಲ್ಲಿ ಪ್ರಕೃತಿಯ ಸೌಂದರ್ಯ ಭಿನ್ನ ಭಿನ್ನ ರೂಪು ತಾಳುವುದನ್ನು ನೋಡಿಯೇ ಅನುಭವಿಸಬೇಕು. ದೇಜಗೌ ವರ್ಣಿಸುವಂತೆ "ಬೆಳಗಿನ ಸೌಂದರ್ಯ ಮೆಲ್ಲಮೆಲ್ಲನೆ ಕಣ್ಣು ತೆರೆಯುವಂತ ಉಸಿರಾಡುವಂತೆ ತೋರುತ್ತದೆ. ಹಕ್ಕಿಗಳ ಹಾಡು ಸೌಂದರ್ಯವನ್ನು ಎಚ್ಚರಿಸುವಂತೆ, ನೇಸರಿನ ಹೊಂಗಿರಣಗಳು ಸೌಂದರ್ಯವನ್ನು ಮುಟ್ಟಿ ಮುಟ್ಟಿ ಜಾಗ್ರತಗೊಳಿಸುವಂತೆ ಭಾಸವಾಗುತ್ತದೆ" (ಪು. ೧೨೨). ಕ್ಯಾಂಡಿಯ ಬಟಾನಿಕಲ್ ಗಾರ್ಡನ್ಸ್ ನೋಡಿದ ದೇಜಗೌ ಕವಿ ಕಲ್ಪನೆಯ ಉದ್ಯಾನವಾದ ನಂದನವನವನ್ನು ಇಲ್ಲಿ ವಾಸ್ತವವಾಗಿ ಕಂಡರು. "ಅಲ್ಲಿಯ ಮರಗಳೊಂದಿಗೆ ಮರವಾಗಿ, ಬಳ್ಳಿಗಳೊಂದಿಗೆ ಬಳ್ಳಿಯಾಗಿ, ಸಸಿಗಳೊಂದಿಗ ಸಸಿಯಾಗಿ ಎಷ್ಟು ಹೊತ್ತಾದರೂ ಕಾಲ ಕಳೆಯಬಹುದು. ಅನ್ನ ಬೇಕಿಲ್ಲ, ನೀರು ಬೇಕಿಲ್ಲ, ನಿದ್ರೆಯೂ ಬೇಕಾಗುವುದಿಲ್ಲ" ಅದನ್ನು ನೋಡುತ್ತಿದ್ದರೆ ಎನ್ನುವ ದೇಜಗೌರವರಿಗೆ "ಮುಂದಿನ ಜನ್ಮ ಇರುವುದಾದರೆ ಕ್ಯಾಂಡಿಯಲ್ಲಿಯೇ ಹುಟ್ಟಬೇಕು" ಎಂಬ ಆಸೆ (ಪು. ೧೨೪).

ಭಾರತ-ಸಿಂಹಳ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದನ್ವಯ ಎರಡು ವರ್ಷಗಳ ಕಾಲ ಸಿಲೋನಿನಲ್ಲಿದ್ದ ಕುದ್ಕಾಡಿ ವಿಶ್ವನಾಥ ರೈ ಅವರು ತಮಗಾದ ಅನುಭವಗಳನ್ನು **'ಲಂಕಾ ದರ್ಶನ'**ದಲ್ಲಿ ಹೇಳಿರುವರು. ಈ ಪ್ರವಾಸ ಕಥನದಲ್ಲಿ ಪ್ರಧಾನವಾಗಿ ಲೇಖಕರು ನೋಡಿದ ಹಾಗೂ ಕಲಿತ ನೃತ್ಯಗಳ ವಿವರಗಳು ಬರುತ್ತವೆ. 'ಕೊಹೊಬ ಕಂಕಾರಿಯ' ಸಮಾರಂಭದ ಮೂಲದ ಕುರಿತ ಕಥೆ; ಕ್ಯಾಂಡಿಯನ್ ಸಂಪ್ರದಾಯ ನೃತ್ಯವಾದ 'ಯಕ್ ಅನುವಮ' ಹಾಗೂ ಸಿಲೋನಿನ 'ಕ್ಯಾಂಡಿ ಪರಹರ' ಉತ್ಸವ -ಇವುಗಳ ಬಗೆಗಿನ ವಿವರಣೆ (ಪು. ೧೯-೨೩:೩೩-೩೯); ಸರ್ಕಾರ ಏರ್ಪಡಿಸುವ ನೃತ್ಯ ಕಾರ್ಯಕ್ರಮಗಳ ಹಿಂದೆ ಇರುವ ಅಧಿಕಾರಿಗಳ ಕೈವಾಡ (ಪು ೬೦-೬೩) -ಇವೆಲ್ಲ ವಿಸ್ತಾರವಾಗಿ ಬಂದಿವೆ. ಲೇಖಕರಿಗೆ ಸಿಲೋನಿನ ವಾಸ್ತವ್ಯದಲ್ಲಿ ಆದ ಕೆಲವು ಅನುಭವಗಳಿಂದಾಗಿ "ಸಿಲೋನಿನಲ್ಲಿ ಸುಳ್ಳು ಹೇಳಿಕೊಂಡು ಜೀವಿಸುವವರು ತುಂಬಾ ಮಂದಿಯಿದ್ದಾರೆ. ಕಲೆ, ಧರ್ಮ, ಜ್ಯೋತಿಷ್ಯ, ಹಸ್ತಸಾಮುದ್ರಿಕ, ತಾಯಿತ, ಮಂತ್ರ, ಭಸ್ಮ, ಮಾಟ, ಪೀಡೆ, ಪ್ರೇತ, ಭೂತ ಎಲ್ಲಾ ವಿಷಯಗಳಲ್ಲಿಯೂ ಸುಳ್ಳು ನಂಬಿಕೆಯನ್ನು ಜನರಲ್ಲಿ ಉಂಟುಮಾಡಿ ಸುಲಿಗೆ ನಡೆಯುತ್ತವೆ. ಬೌದ್ಧ ಧರ್ಮೀಯರಲ್ಲಿಯೇ ಮೂಢ ನಂಬಿಕೆಗಳು ಹೆಚ್ಚು..."

(ಪು.೫೩) ಎನ್ನುವರು. ಸಿಲೋನಿನ ಸರ್ಕಾರದ ಪ್ರಸಾರ ಇಲಾಖೆಯ ವತಿಯಿಂದ 'ಮಹಾವೆಲಿ' ನೃತ್ಯ ನಾಟಕ ಏರ್ಪಾಟಾದಾಗ ಅಧಿಕಾರಿಗಳು ತಮ್ಮ ಇಷ್ಟಾನಿಷ್ಟದಂತೆ ನಡೆದುಕೊಂಡು, ಗುಪ್ತ ಯೋಜನೆಯಲ್ಲಿ ಭಾಗಿಗಳಾದುದು ಲೇಖಕರಿಗೆ ನೋವಾಗಿದೆ: "ಎಲ್ಲಿ ನೋಡಿದರೂ ಕೆಲವು ಮಂದಿ ಮುಖ್ಯಸ್ಥಾನವನ್ನು ವಹಿಸಿಕೊಂಡು ಸಾಮಾನ್ಯ ಜನತೆಯನ್ನು ಸುಲಿಗೆ ಮಾಡುತ್ತಾರೆ. ನಾಡಿನ ಶಕ್ತಿಗಳಾಗಿ ಬೆಳೆಯಬೇಕಿದ್ದ ವ್ಯಕ್ತಿಗಳನ್ನು ಮುರಿದು ಮೂಲೆಪಾಲು ಮಾಡಿ ದುಷ್ಟಶಕ್ತಿಗಳು ಕುಣಿಯಹತ್ತಿದ್ದಾಗ, ಶಾಂತಿಯ ಪ್ರತಿರೂಪವಾಗಿ ಅರಳಬೇಕಾದ ಕಲೆಯೆಲ್ಲಿಂದ ಬರಬೇಕು' ಎಂದು ಆ ನೋವಿನಲ್ಲಿ ಪ್ರಶ್ನಿಸುವರು (ಪು. ೬೩). ಈ ಯೋಜನೆಗಳೆಲ್ಲದರ ಹಿಂದೆ ರಾಜಕೀಯ ಓಟಿನ ಪ್ರಚಾರ ಅಡಕವಾಗಿದೆ" ಎನ್ನುವರು.

ಸಿಲೋನಿನ ಮುಖ್ಯ ದೇವಾಲಯಗಳನ್ನು ಸಂದರ್ಶಿಸಿದ ಲೇಖಕರು ಭಕ್ತರು ಆ ದೇವಾಲಯಗಳ ಬಗೆಗೆ ತೋರುವ ಭಕ್ತಿ ಭಾವನೆಗಳನ್ನು ವಿಸ್ತಾರವಾಗಿ ನಿರೂಪಿಸಿರುವರು. 'ಕತರಗಮ' ದೇವರ ಬಗೆಗೆ ಭಕ್ತರು ತೋರುವ ಭಕ್ತಿ, ಇಷ್ಟಾರ್ಥ ಪೂರೈಕೆಗಾಗಿ ಹೊಂದುವ ದೇಹದಂಡನೆ ವಿವರಯುಕ್ತವಾಗಿದೆ. ಕಾವಡಿ ಆಚರಣೆಗಳಲ್ಲಿ ಒಂದಾದ ಹಕ್ಕಿಕಾವಡಿ (ಪರಾವ್ ಕಾವಡಿ)ಯಲ್ಲಿ ದೇಹದಂಡನೆ ಎಷ್ಟು ಭಯಂಕರವಾಗಿದೆ ಎಂಬುದನ್ನು ಲೇಖಕರು ಹೇಳುತ್ತಾ "ನೀರು ಮೊಗೆಯುವ ಏತದಂತಹ ಕಂಬದಿಂದ ತೂಗಾಡುವ ಗಾಳಗಳಿಂದ ಕಾವಡಿ ಹರಕೆ ಹೊತ್ತವನ ದೇಹದ ಭಾಗಗಳಿಗೆ ಚುಚ್ಚಿ ಹಕ್ಕಿಯಂತೆ ತೂಗಾಡಿಸುತ್ತಾರೆ. ಹಾಗೆ ತೂಗಾಡುತ್ತಿರುವ ಮನುಷ್ಯನಿರುವ ಕಂಬಗಳನ್ನು ಇಟ್ಟುಕೊಂಡು ಚಕ್ರದ ಗಾಡಿಯಲ್ಲಿ ಮೆರವಣಿಗೆ ಮಾಡುತ್ತಾರೆ. ಕಬ್ಬಿಣದ ಗಾಳಗಳನ್ನು ಚುಚ್ಚಿದ ಗಾಯಕ್ಕೆ ವಿಭೂತಿಯನ್ನು ಹಚ್ಚಿರುತ್ತಾರೆ. ಆದರಿಂದ ರಕ್ತ ಬರುವುದಿಲ್ಲ ಮತ್ತು ಆ ವ್ಯಕ್ತಿ ನೋವಿನಿಂದ ನರಳುವಂತೆ ಕಾಣುವುದಿಲ್ಲ. ಇದಕ್ಕೆ ವಿಜ್ಞಾನಿಗಳು ಏನು ಹೇಳುತ್ತಾರೊ ತಿಳಿಯುವುದಿಲ್ಲ" ಎಂದಿರುವರು (ಪು.೭೦). ಭಕ್ತಿಯ ಆಚರಣೆಗಳನ್ನು ವಿಜ್ಞಾನದ ವಿಶ್ಲೇಷಣೆಗೆ ಒಳಪಡಿಸುವುದು ಒಪ್ಪುವ ಮಾತು. ಆದರೆ ಕೆಲವೊಮ್ಮೆ ಸೃಷ್ಟಿಯ ರಹಸ್ಯವೆಲ್ಲವನ್ನೂ ಬಿಡಿಸಿ ಹೇಳಲಾಗದ ಒಂದು 'ಮಿತಿ' ವಿಜ್ಞಾನಿಗಳ ಪಾಲಿಗೂ ಬರುತ್ತದೆ. ಹಾಗಾದಾಗ ಅವರನ್ನು ಮೂರ್ಖರೆನ್ನುವುದು ಸರಿಯಲ್ಲ.

ಸಿಲೋನಿನಲ್ಲಿ ನಡೆದ ಗಾಂಧೀಜಿಯವರ ಶತಮಾನೋತ್ಸವ, ಪುಟ್ಟಪರ್ತಿ ಶ್ರೀಸಾಯಿಬಾಬಾರವರ ನಲ್ವತ್ತೆರಡನೆಯ ಜಯಂತ್ಯುತ್ಸವ ಕಾರ್ಯಕ್ರಮಗಳ ವಿವರಗಳು (ಪು. ೪೩-೫೧); ಮೃತರೊಬ್ಬರ ಅಂತಿಮಯಾತ್ರೆಯಲ್ಲಿ ಪಾಲ್ಗೊಂಡ ಅನುಭವಗಳು (ಪು. ೨೩-೨೭); ರಾಜಕೀಯ ವಿಚಾರಗಳು (ಪು. ೮೬-೯೨); ಸಿಂಹಳೀಯರ ಜೀವನಕ್ರಮ (ಪು. ೯೩-೧೦೫); ಗಂಡು-ಹೆಣ್ಣುಗಳ ನಡುವಣ ಸಂಬಂಧ-ಇವೆಲ್ಲವು ಮೇಲುನೋಟದ ವರದಿಯ ಹಾಗೆ ಬಂದಿವೆ.

ಲೇಖಕರು ಸಿಲೋನಿನ ತಮ್ಮ ವಾಸ್ತವ್ಯದಲ್ಲಿ ಚಿತ್ರವಿಚಿತ್ರ ಹುಡುಗಿಯರ ನಡುವೆ ಎರಡು ವರ್ಷ ಕಳೆದುದನ್ನು ನೆನಪು ಮಾಡಿಕೊಳ್ಳುತ್ತ, ರಕ್ಷಕ ದೈವವಾಗಿ ತಾಯಿ ಇದ್ದುದರಿಂದ ತಾವು ಎಲ್ಲಿಯೂ ಎಡವಿ ಬೀಳದೆ ಪಾರಾಗಿ ಬರಲು ಸಾಧ್ಯವಾಯಿತು ಎಂದು ಹೇಳಿಕೊಂಡಿರುವರು. ತಮ್ಮನ್ನು ತಾವೇ ಹೊಗಳಿಕೊಳ್ಳುವ ಲೇಖಕರ ಈ ವರ್ತನೆ ಬಾಲಿಶವೆನ್ನಿಸುತ್ತದೆ.

'ಲಂಕಾದರ್ಶನ' ಹೇರಳವಾದ ವಿವರಗಳನ್ನು ಒಳಗೊಂಡಿದ್ದರೂ ಲೇಖಕರ ಪಾಲಿಗೆ ಸಿಲೋನಿನ ತಮ್ಮ ವಾಸ್ತವ್ಯದ ಅನುಭವವನ್ನು ಜೀವಂತವಾಗಿ ಓದುಗರ ಮುಂದಿಡಲು ಸಾಧ್ಯವಾಗಿಲ್ಲ; ಎರಡು ವರುಷಗಳ ಲೇಖಕರ ಜೀವನಾನುಭವಗಳು ಆಳವಾಗಿ ನಮ್ಮ ಮನಸ್ಸಿನಲ್ಲಿ ಬೇರುಬಿಡುವುದಿಲ್ಲ. ಈ ಸೋಲಿಗೆ ಕಾರಣ ಹೀಗಿರಬಹುದು:

೧) ಸಂಗ್ರಹಿಸಿದ ವಿವರಗಳನ್ನು ವ್ಯವಸ್ಥಿತ ರೂಪದಲ್ಲಿ ಹೇಳದಿರುವುದು.

೨) ಅನುಭವದ ನಿರೂಪಣೆಗೆ ಅಗತ್ಯವಿರುವ ಜೀವಂತ ಭಾಷೆ ಲೇಖಕರ ಪಾಲಿಗೆ ದಕ್ಕದಿರುವುದು.

**ಮಾಲ್ದಿವ್ಸ್ ದ್ವೀಪಗಳು**

ಶ್ರೀಲಂಕೆಗೆ ೪೪೦ ಕಿ.ಮೀ. ದೂರವಿರುವ ಮಾಲ್ದಿವ್ಸ್ ದ್ವೀಪಗಳಿಗೆ ಶ್ರೀ ಪಾಟೀಲ ಪುಟ್ಟಪ್ಪನವರು ತಮ್ಮ ಪತ್ನಿಯೊಡನೆ ಎರಡು ತಿಂಗಳ ಕಾಲ ಪ್ರವಾಸ ಕೈಗೊಂಡಾಗಿನ ಅನುಭವಗಳ ಕಥನ **ಮಾಲ್ದಿವ್ ದ್ವೀಪಗಳು** ಎಂಬ ಕೃತಿಯಲ್ಲಿ ಮೂಡಿಬಂದಿದೆ. ಇದರಲ್ಲಿ ಆ ದ್ವೀಪ ಸಮೂಹದ ಚರಿತ್ರೆ, ಅಲ್ಲಿನ ಸಾಮಾಜಿಕ ಜೀವನ, ರಾಜಕೀಯ ವಿಧಾನ, ಸರಕಾರದ ಕಾರ್ಯನಿರ್ವಹಣೆ, ಪ್ರೇಕ್ಷಣೀಯ ಸ್ಥಳಗಳು-ಇವುಗಳ ಬಗೆಗೆ ಆಕರ್ಷಕವಾದ ವಿವರಣೆಗಳಿವೆ. ಲೇಖಕರ ನಿರೂಪಣಾ ವಿಧಾನದಲ್ಲಿನ ಅವರದೇ ಆದ ವಿಶಿಷ್ಟ ಶೈಲಿ ಆಹ್ಲಾದಕಾರಿಯಾಗಿದೆ.

**ಬಹರೈನ್:**

**ಬಹರೈನ್ ದರ್ಶನ** ಕುದ್ಮಾಡಿ ವಿಶ್ವನಾಥ ರೈರವರು ತಮ್ಮ ಪತ್ನಿಯೊಂದಿಗೆ ಬಹರೈನ್‌ಗೆ ಹೋದ ಸಂದರ್ಭದ ಅನುಭವವನ್ನು ಪ್ರವಾಸಕಥನ ರೂಪದಲ್ಲಿ ಕೊಟ್ಟಿರುವರು. ಬಹರೈನ್‌ನಂತಹ ಮುಸ್ಲಿಂ ರಾಷ್ಟ್ರದಲ್ಲಿ ನಡೆದ ತುಳು ಉತ್ಸವದ ವಿವರಗಳು ಬಹರೈನ್‌ನ ಯಕ್ಷರಂಗ ಸಂಸ್ಥೆ ಹಾಗೂ ಅದರ ಚಟುವಟಿಕೆಗಳು ಬಹರೈನ್‌ನ ಜುವೆಲರಿ ಅರಬಿಯಾ ೨೦೦೧ ಉತ್ಸವ, ಜೇಂಟ್, ಸೂಪರ್ ಮಾರುಕಟ್ಟೆ, ಇಂಡಿಯನ್ ಸ್ಕೂಲ್, ನ್ಯಾಷನಲ್ ಫೋಟೋಸರ್ವಿಸ್ ಸಂಸ್ಥೆ; ಬಹರೈನ್‌ನಲ್ಲಿನ ಮುಸ್ಲಿಂ ಜನರ ಹಾಗೂ ಹಿಂದೂಗಳ ಸಾಮಾಜಿಕ ಆಚರಣೆಗಳು, ಬಹರೈನ್‌ನ ಆರೋಗ್ಯ

ಚಿಕಿತ್ಸಾಲಯಗಳು, ಶೇಕ್‌ಗಳ ಹವ್ಯಾಸಗಳು, ಬಹರೈನ್‌ನ ಮ್ಯೂಸಿಯಂ, ಪ್ರಜಾಪ್ರಭುತ್ವ ಪದ್ಧತಿಗಳು; ಬಹರೈನ್‌ನಲ್ಲಿರುವ ಕನ್ನಡ ಸಂಘ, ಕರ್ನಾಟಕ ಸೋಷಿಯಲ್ ಕ್ಲಬ್, ವೃದ್ಧರ ಕ್ಲಬ್, ತುಳುವ ಸಮಾಜ; ಬಹರೈನ್‌ನಲ್ಲಿ ಯೋಗ ಶಿಕ್ಷಣ -ಹೀಗೆ ಲೇಖಕರು ತುಂಬು ಉತ್ಸಾಹದಿಂದ ಅಲ್ಲಿನ ಬಹುಮುಖಿಯಾದ ಚಟುವಟಿಕೆಗಳನ್ನು ತುಂಬು ಉತ್ಸಾಹದಿಂದ ಪರಿಚಯ ಮಾಡಿಕೊಟ್ಟಿರುವರು.

ಬಹರೈನ್‌ನಲ್ಲಿ ೨೦೦೧ರಲ್ಲಿ ನಡೆದ ತುಳು ಉತ್ಸವದಲ್ಲಿ ಅಧ್ಯಕ್ಷರಾಗಿ ಪಾಲುಗೊಳ್ಳಲು ಹಾಗೂ ಮಗಳ ಹೆರಿಗೆಯ ಸಂದರ್ಭದಲ್ಲಿ ಉಪಸ್ಥಿತರಿರಲು ಕುದ್ಕಾಡಿ ವಿಶ್ವನಾಥ ರೈ ದಂಪತಿಗಳು ಬಹರೈನ್‌ಗೆ ಪ್ರವಾಸ ಕೈಗೊಂಡರು. ಕಲಾವಿದರಾದ ಕುದ್ಕಾಡಿ ವಿಶ್ವನಾಥ ರೈ ಅವರಿಗೆ ಬಹರೈನ್‌ನಲ್ಲಿರುವ ಬಂಧುಗಳು ಮಿತ್ರರು ನೃತ್ಯ ನಾಟಕಗಳನ್ನು ಪ್ರದರ್ಶಿಸುವುದಕ್ಕೆ ಅವಕಾಶ ಮಾಡಿಕೊಟ್ಟರು. ಈ ಅವಕಾಶವನ್ನು ಬಳಸಿಕೊಂಡು ಅವರು ತುಳುನಾಡು, ಕರ್ನಾಟಕ ಹಾಗೂ ಭಾರತವನ್ನು ಸಾಂಸ್ಕೃತಿಕವಾಗಿ ತೋರಿಸಲು ಪ್ರಯತ್ನಿಸಿ ಎಲ್ಲರ ಮೆಚ್ಚುಗೆ ಗಳಿಸಿದರು. ದಕ್ಷಿಣ ಕನ್ನಡದ ನೆಲದ ಗುಣವೊ ಏನೋ. ಅಲ್ಲಿನ ಯಾರೇ ಬೇರೆಡೆ ಹೋಗಲಿ ಅವರು ತಮ್ಮ ನೆಲದ ಸಾಂಸ್ಕೃತಿಕ ರಂಗ ಚಟುವಟಿಕೆಯಾದ ಯಕ್ಷಗಾನವನ್ನು ಪ್ರದರ್ಶಿಸುವವರೇ; ಚಂಡಮದ್ದಳೆ ಬಾರಿಸುವವರೇ; ಅದರ ನಾದದ ಗತ್ತಿಗೆ ಕುಣಿಯುವವರೇ! ಲೇಖಕರು ಬಹರೈನ್‌ನಲ್ಲಿ ಇದ್ದಷ್ಟು ದಿನ ಆ ಮುಸ್ಲಿಂ ಜನಾಂಗದೊಂದಿಗೆ ಸೌಹಾರ್ದವ ಸಂಬಂಧವಿರಿಸಿಕೊಂಡು, ಅಲ್ಲಿಗೆ ವಲಸೆ ಹೋದ ದಕ್ಷಿಣ ಕನ್ನಡದ ಗೆಳೆಯರ-ಬಂಧುಗಳ ಆದರಾತಿಥ್ಯವನ್ನು ಸವಿದಿರುವರು. ದಿನನಿತ್ಯದ ಅನುಭವವನ್ನು ದಿನಚರಿ ರೂಪದಲ್ಲಿ ಬರೆದಿಡುವ ಪದ್ಧತಿಯನ್ನು ಅನುಸರಿಸುತ್ತಿದ್ದ ಲೇಖಕರು ಅಲ್ಲಿನ ತಂಗಣೆಯ ಕೆಲವೊಂದು ಮುಖ್ಯ ಘಟನೆಗಳನ್ನು ಪ್ರತ್ಯೇಕವಾಗಿ ಬರೆದಿಟ್ಟುಕೊಂಡಿದ್ದರು. ಅದು ಪ್ರವಾಸ ಕಥನ ರೂಪದಲ್ಲಿ 'ಬಹರೈನ್ ದರ್ಶನ'ವಾಗಿ ಹೊರಬಂದಿದೆ.

**ಬಾಂಗ್ಲಾದೇಶ:**

ಬಾಂಗ್ಲಾದೇಶದ ಸ್ವಾತಂತ್ರ್ಯಾ ನಂತರ ಭಾರತೀಯ ಸಾಹಿತಿಯೋರ್ವ ಆ ದೇಶವನ್ನು ಸಂದರ್ಶಿಸಿ ಪಡೆದ ಸಂಸ್ಮರಣೀಯ ಅನುಭವ ಕಥನ ರಾವಬಹದ್ದೂರರ **'ನಾನು ಕಂಡ ಬಂಗ್ಲಾದೇಶ'**. ತಮ್ಮ ಪ್ರವಾಸ ಕಾಲದಲ್ಲಿ ರಾವಬಹದ್ದೂರರವರು ಪೂರ್ವ ಪಾಕೀಸ್ತಾನದ ಜನತೆ ಪಶ್ಚಿಮ ಪಾಕೀಸ್ತಾನದ ದಬ್ಬಾಳಿಕೆಯನ್ನು ಹೇಗೆ ಎದುರಿಸಿತು? ಆ ಭೀಕರ ಹೋರಾಟದಲ್ಲಿ ಜನ ಎದುರಿಸಿದ ಕಷ್ಟನಷ್ಟಗಳೇನು? ಪಶ್ಚಿಮ ಪಾಕೀಸ್ತಾನದವರ ಮೃಗೀಯ ವರ್ತನೆಯನ್ನು ಹೇಗೆ ಎದುರಿಸಿದರು? ಸಾವು-ನೋವು, ಚಿತ್ರವಿಚಿತ್ರ ಹಿಂಸೆ, ಮಾನಹರಣ -ಇವುಗಳೇ ಮೊದಲಾದವು ಹೇಗೆ ಜನತೆಯನ್ನು

ತತ್ತರಿಸಿತು? ಈ ಪ್ರಶ್ನೆಗಳಿಗೆ ಉತ್ತರವಾಗಿ ಕರುಣಾಜನಕ, ಹೃದಯ ವಿದ್ರಾವಕ ಕಥೆಗಳನ್ನು ಕಿವಿಯಾರೆ ಕೇಳಿ, ಜನರ ಧೈರ್ಯ-ಸಾಹಸ, ಸೋಲು-ಗೆಲುವು, ಮಾನ-ಅವಮಾನಗಳ ವಿವರಣೆಯನ್ನು ಕಿವಿಮುಟ್ಟ ಕೇಳಿ ಪೂರ್ವ ಪಾಕೀಸ್ತಾನೀಯರ ಆ ಗೆಲುವಿನ ಹಿಂದಿರುವ ಅಪೂರ್ವ ತ್ಯಾಗ-ಬಲಿದಾನ-ಸಾಹಸಗಳನ್ನು ಕಣ್ಣಾರೆ ಕಂಡು ಆ ವ್ಯಥೆಯ ಕಥೆಯನ್ನು ರಾವಬಹದ್ದೂರರು ಮನಮುಟ್ಟವಂತೆ ನಿರೂಪಿಸಿರುವರು. ಲೇಖಕರು ಬಾಂಗ್ಲಾದೇಶದ ಉದ್ದಕ್ಕೂ ಸಂಚರಿಸಿ ಜನರನ್ನು ಕಂಡು, ಅವರ ದುಗುಡ ದುಮ್ಮಾನಗಳ ಕಥೆಯನ್ನು ಅವರ ಬಾಯಿಂದಲೇ ಕೇಳಿ, ಬರೆದ ಗ್ರಂಥ ಇದಾಗಿರುವುದರಿಂದ ಇದಕ್ಕೊಂದು ಮಹತ್ವದ ಸ್ಥಾನವಿದೆ. ಸ್ವಾತಂತ್ರ್ಯಾನಂತರ ಬಾಂಗ್ಲಾದೇಶದ ಜನತೆ ಎದುರಿಸಿದ ಸಮಸ್ಯೆಗಳೇನು? ಸ್ವಾರ್ಥಿಗಳ ಲಾಭ ಬಡುಕರ ಜಾಲ ಜನತೆಯನ್ನು ಹೇಗೆ ಶೋಷಿಸಿತು? ಶೇಕ್‌ಮುಜಿಬುರ್ ರೆಹಮಾನ್‌ರವರ ಸರಕಾರ ಜನಹಿತಕ್ಕಾಗಿ ಅವಿಶ್ರಾಂತವಾಗಿ ಹೇಗೆ ದುಡಿಯುತ್ತಿದೆ?* ತಮ್ಮ ರಾಷ್ಟ್ರನಾಯಕನ ಬಗೆಗೆ ಅವರಿಗಿರುವ ಗೌರವ-ಆದರ-ಅಭಿಮಾನಿಗಳು ಎಂತಹುದು? ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ವಿವರಣೆ ಪುಸ್ತಕದುದ್ದಕ್ಕೂ ಬಂದಿದೆ.

ಸೋನಾರ್ ಬಾಂಗ್ಲಾ ಉದಯವಾದ ಮೇಲೆ ಆ ನಾಡಿಗೆ ಆದರ ಸ್ಥಿತಿಗತಿಗಳನ್ನು ಅಭ್ಯಸಿಸಲು ಹೋದ ಕನ್ನಡ ಸಾಹಿತಿಗಳಲ್ಲಿ ರಾವ್‌ಬಹದ್ದೂರರು ಮೊದಲಿಗರು. ಅವರ ಪ್ರತ್ಯಕ್ಷ ಅನುಭವಗಳು ರೋಚಕವಾಗಿವೆ. ಅಭಿವೃದ್ಧಿ ಸ್ಥಿತಿಗಾಗಿ ನಿತ್ಯವೂ ಹೋರಾಡುತ್ತಿರುವ ರಾಷ್ಟ್ರವೊಂದರ ಸ್ಥೂಲಚಿತ್ರ ಈ ಕೃತಿಯಿಂದ ಓದುಗನಿಗಾಗುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಒಂದು ರಾಷ್ಟ್ರ ಸ್ವತಂತ್ರವಾಗಲು ಎಂತಹ ಮಹಾನ್ ತ್ಯಾಗಕ್ಕೆ ತನ್ನನ್ನು ತಾನೇ ಒಡ್ಡಿಕೊಂಡಿತು, ಜನತೆ ಎಂತಹ ಸ್ಥೈರ್ಯವನ್ನು ವ್ಯಕ್ತಪಡಿಸಿತು; ಸಾಹಸವನ್ನು ಪ್ರದರ್ಶಿಸಿತು, ಮಾನಾಪಮಾನಗಳಿಗೆ ಗುರಿಯಾಯಿತು? -ಈ ಎಲ್ಲದರ ಒಂದು ಪೂರ್ಣಚಿತ್ರ ಈ ಅಧ್ಯಯನ ಪ್ರವಾಸದಿಂದ ಲಭ್ಯವಾಗುತ್ತದೆ.

**ಶ್ರೀಲಂಕಾ-ನೇಪಾಳ-ಬೀರುತ್-ಇರಾನ್-ಅಫ್ಘಾನಿಸ್ತಾನ್-ಹಾಂಕಾಂಗ್-ಜಪಾನ್**

ಶಿವರಾಮ ಕಾರಂತರ **ಪೂರ್ವದಿಂದ ಅತ್ಯಪೂರ್ವಕ್ಕೆ** ಕೃತಿಯ ಅವರ ನಾಲ್ಕನೆಯ ಪ್ರವಾಸಕಥನ. ಶ್ರೀಲಂಕಾ, ನೇಪಾಳ, ಬೀರುತ್, ಇರಾನ್, ಅಫ್ಘಾನಿಸ್ತಾನ್, ಹಾಂಕಾಂಗ್ ಹಾಗೂ ಜಪಾನ್ ಈ ದೇಶಗಳಲ್ಲಿ ಕಾರಂತರು ಆಗಾಗ್ಗೆ ನಡೆಸಿದ ಪ್ರವಾಸದ ಅನುಭವವನ್ನು ಕುರಿತ ಕೃತಿಯಿದು. ನಿಶ್ಚಿತ ಅವಧಿಯ ಈ ಪ್ರವಾಸಗಳೆಲ್ಲವೂ ಸುದೀರ್ಘವಾದುವಲ್ಲ. ಇಲ್ಲಿನ ಪ್ರವಾಸಗಳಲ್ಲಿ ಜಪಾನಿನ ಪ್ರವಾಸ ಹದಿನೇಳು ದಿವಸಗಳ

* ಲೇಖಕರು ಬಾಂಗ್ಲಾದೇಶಕ್ಕೆ ಪ್ರವಾಸ ಹೋದ ಕಾಲದಲ್ಲಿ ಶೇಕ್ ಮುಜಿಬುರ್ ರೆಹಮಾನ್ ಬದುಕಿದ್ದರು.

ವ್ಯಾಪಕತೆ ಪಡೆದಿದೆ. ಉಳಿದುವೆಲ್ಲಾ ಚುಟುಕಿನವು. ಕಾರಂತರಿಗೆ ಸಂಚಾರವು ಅವರ ಬದುಕಿನ ಅವಿಭಾಜ್ಯ ಅಂಗವಾಗಿರುವುದರಿಂದ ಅದು ಅವರ ಸಾಹಿತ್ಯಕ್ಕೆ ಜೀವಕಳೆಯನ್ನು ಒದಗಿಸಿದೆ. ಅವರೇ ಹೇಳಿರುವಂತೆ ಪ್ರವಾಸ ಅವರ ಪಾಲಿನ ನಿತ್ಯದ ವಿದ್ಯಾಭ್ಯಾಸ. ಕಾರಂತರು ಓರ್ವ ಸಾಮಾನ್ಯ ಟೂರಿಸ್ಟ್ ಆಗಿ ದೇಶವನ್ನು ಸುತ್ತಲು ಹೊರಡುವುದಿಲ್ಲ. ಸಂಸ್ಕಾರಗೊಂಡ ಅವರ ಕಣ್ಣು ಮನಗಳು ತಾವು ನೋಡಿದ ದೇಶ ಹಾಗೂ ಜನಗಳ ಮೂಲಕ ಸಂಸ್ಕೃತಿಯನ್ನು ತಿಳಿಯಲು ಪ್ರಯತ್ನಿಸಿದೆ. ಕಾಲದ ಪರಿಮಿತಿಯಲ್ಲಿ ಜನಗಳನ್ನು ಹಾಗೂ ಅವರ ಒಲವು ನಿಲವು, ಸಂಸ್ಕಾರ, ಆಚಾರ ವಿಚಾರಗಳನ್ನು ಗ್ರಹಿಸಲು ಸಾಧ್ಯವಾಗದಾದಾಗ, ತಮ್ಮ ಪರಿಮಿತಿಯಲ್ಲೇ ಆಯಾದೇಶದ ಸಾಂಸ್ಕೃತಿಕ ಸಂಪತ್ತನ್ನು ಅರ್ಥೈಸಲು ಪ್ರಯತ್ನಿಸಿರುವರು. ಕಾರಂತರು ತಮ್ಮ ಪ್ರವಾಸಕಥನದಲ್ಲಿ ತಾವು ನೋಡಿದ ದೇಶಗಳ ಪ್ರಾಚೀನ ಇತಿಹಾಸ, ವೀಕ್ಷಣಾರ್ಹ ಪ್ರಮುಖ ಸ್ಥಳಗಳು; ಸಂಗೀತ, ನೃತ್ಯ, ನಾಟಕ, ಚಿತ್ರಕಲೆ -ಹೀಗೆ ಇವೆಲ್ಲವುಗಳ ಪರಿಚಯವನ್ನು ಮಾಡಿಕೊಡುವುದರ ಮೂಲಕ ಓದುಗರ ಜ್ಞಾನದ ಪರಿಧಿಯನ್ನು ವಿಸ್ತರಿಸಿರುವರು. ಅಫ್ಘಾನಿಸ್ಥಾನದ ಬಾಮಿಯಾದಲ್ಲಿರುವ ಎರಡು ಬೃಹತ್ ಗುಮ್ಮಟಗಳನ್ನು ನೋಡಲು ಹೊರಟ ಅವರ ಕುತೂಹಲಾಸಕ್ತಿಗಳು ಇಂದಿನ ಯುವಕರನ್ನು ನಾಚಿಸುತ್ತದೆ. ನಮ್ಮಲ್ಲಿ ಉದ್ಯಮಿಗಳು ವಿವಿಧ ರೀತಿಗಳಿಂದ ಲಾಭವನ್ನು ಗಳಿಸುವ ಅಡ್ಡದಾರಿಗಳಲ್ಲಿ ಸಾಗಿರುವುದನ್ನೂ ಜಪಾನ್ ದೇಶವು ಈ ದಾರಿಯನ್ನು ತುಳಿಯದೆ ದುಡಿಮೆ-ಸಂಶೋಧನೆ, ಗಿರಾಕಿಗಳ ಒಲುಮೆ, ಆಧುನಿಕತೆಯ ಪ್ರತಿಯೊಂದು ಲಾಭವನ್ನು ಬೆಳೆಯಿಸಿಕೊಂಡು ಜಗತ್ತನ್ನು ಸ್ಪರ್ಧಿಸುವ ದೇಶವಾಗಿ ಸಾಗುತ್ತಿರುವುದನ್ನೂ ಕಾರಂತರು ಚೆನ್ನಾಗಿ ತುಲನೆ ಮಾಡಿರುವರು.

**ಹಾಂಕಾಂಗ್-ಜಪಾನ್:**

ಪ್ರೊ. ಕು.ಶಿ. ಹರಿದಾಸ ಭಟ್ಟರು ತಮ್ಮ **ಜಗದಗಲ** ಪ್ರವಾಸ ಕಥನದಲ್ಲಿ ಹಾಂಕಾಂಗ್ ಹಾಗೂ ಜಪಾನ್ ದೇಶಗಳಿಗೆ ಯಕ್ಷಗಾನ ಮೇಳದ ಜೊತೆ ಪ್ರವಾಸ ಹೋಗಿ ತಮ್ಮ ಅಲ್ಲಿನ ಅನುಭವಗಳನ್ನು 'ಹಾಂಕಾಂಗ್‌ನಲ್ಲಿ ಐದು ದಿನ' ಮತ್ತು 'ಜಪಾನಿನಲ್ಲಿ ನಮ್ಮ ಯಕ್ಷಗಾನ' ಎಂಬ ಲೇಖನಗಳಲ್ಲಿ ಹೇಳಿರುವರು. ಹಾಂಕಾಂಗ್‌ನ ಆರ್ಟ್ ಸೆಂಟರ್‌ನವರು ಯಕ್ಷರಂಗದವರಿಗೆ ಮೂರು ದಿನ ಯಕ್ಷಗಾನ ಪ್ರದರ್ಶನ ನೀಡಲು ಆಹ್ವಾನ ನೀಡಿದರು. ಅವರ ಆಹ್ವಾನವನ್ನು ಒಪ್ಪಿ ಅಲ್ಲಿಗೆ ಹೋದ ತಮ್ಮ ಅನುಭವವನ್ನು ಲೇಖಕರ ಇಲ್ಲಿ ನಿರೂಪಿಸಿರುವರು.

ಯಕ್ಷಗಾನ ಪ್ರದರ್ಶನಕ್ಕಾಗಿ ಟೋಕಿಯೋವಿಗೆ ಸಂದರ್ಶನ ಕೊಟ್ಟ ಸಂದರ್ಭದಲ್ಲಿ ಯಕ್ಷಗಾನ ಮೇಳ ಪಡೆದ ಅಭೂತಪೂರ್ವ ಯಶಸ್ಸನ್ನು, ಅಲ್ಲಿನ ವಿದ್ವಾಂಸರು ತೋರಿದ ಆಸಕ್ತಿಯನ್ನು, ವಿಚಾರಗೋಷ್ಠಿಯೊಂದರಲ್ಲಿ ಯಕ್ಷಗಾನದ ಬಗೆಗೆ ನಡೆದ ಚರ್ಚೆಯನ್ನು

ಲೇಖಕರು ವಿವರಿಸಿರುವರು. ಹಾಂಕಾಂಗ್-ಜಪಾನ್ ದೇಶಗಳ ಪ್ರವಾಸ ಕಥನದಲ್ಲಿ ಲೇಖಕರು ತಾವು ನೋಡಿದ ಸ್ಥಳಗಳ, ಜನರ ಸಾಮಾಜಿಕ ಜೀವನದ ಪರಿಚಯ ಮಾಡಿಕೊಡುವುದಿಲ್ಲ. ಆದರ ಬದಲಾಗಿ ಸಾಂಸ್ಕೃತಿಕ ಪ್ರತಿನಿಧಿಯಾಗಿ ಈ ಎರಡು ದೇಶಗಳಿಗೆ ಯಕ್ಷಗಾನವನ್ನು ಪರಿಚಯಿಸಲು ಹೊರಟಾಗ ಅಲ್ಲಿನ ಜನ ಅದನ್ನು ಹೇಗೆ ಸ್ವೀಕರಿಸಿದರು, ಜನರ ಪ್ರತಿಕ್ರಿಯೆ ಹೇಗಿದ್ದಿತು, ಇರುವ ಇತಿಮಿತಿಯಲ್ಲೇ ತಮ್ಮ 'ಯಕ್ಷರಂಗ' ಹೇಗೆ ಪ್ರದರ್ಶನ ನೀಡಿ ಜನಮೆಚ್ಚುಗೆ ಪಡೆಯಿತು, ಭೌತಿಕವಾಗಿ ಮುಂದುವರಿದ ಆ ದೇಶದ ಜನಗಳು ತೋರಿದ ಕಲಾಪ್ರಜ್ಞೆ ಎಂತಹುದು-ಈ ವಿವರಗಳನ್ನು ಲೇಖಕರ ನೀಡಿರುವರು.

ಜಪಾನಿನ ಒಸಾಕದಲ್ಲಿ ನಡೆದ **ಎಕ್ಸ್‌ಪೊ-೭೦** ವಿಶ್ವವ್ಯಾಪಾರ ಮೇಳಕ್ಕೆ ಮೈಸೂರು ಸರಕಾರ ಯುವಜನದ ನಿಯೋಗವೊಂದನ್ನು ಕಳುಹಿಸಿದ್ದಿತು. ಈ ನಿಯೋಗದ ಸದಸ್ಯರು ಹದಿನೈದು ದಿನಗಳ ಜಪಾನ್ ಪ್ರವಾಸದ ತಮ್ಮ ಅನುಭವಗಳನ್ನು ಲೇಖನ ರೂಪದಲ್ಲಿ ಬರೆದರು. ಅವುಗಳ ಸಂಗ್ರಹವೇ ಈ ಕೃತಿ. ಇದರ ಸಂಪಾದಕರು ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಕೆ.ಎಸ್. ನಿರಂಜನರವರು. ಪ್ರವಾಸದ ಅನುಭವಗಳನ್ನು ಎಲ್ಲರೂ ಇಂಗ್ಲೀಷ್ ಭಾಷೆಯಲ್ಲಿ ಬರೆದು ಕಳುಹಿಸಿದರು. ಅವುಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಲಾಗಿದೆ; ಪ್ರವಾಸಿಗಳು ಕನ್ನಡ ನಾಡಿನ ಯುವಜನರು. ಅನುಭವದ ನಿರೂಪಣೆಗೊಂಡುದು ಆಂಗ್ಲಭಾಷೆಯಲ್ಲಿ. ಎಂತಹ ದುರ್ದೈವದ ಸಂಗತಿ!

ಇಲ್ಲಿನ ಎಲ್ಲ ಲೇಖನಗಳೂ ಗುಣಗಾನದ ನೆಲೆಯಲ್ಲಿವೆ; ಸುಖಸಂಕಥಾ ಪ್ರಹಸನದಂತಿವೆ. ಮನಸ್ಸಿಟ್ಟು ಹುಡುಕಿದರೂ ಎಲ್ಲಿಯೂ ಸಮತೋಲನ ಬರವಣಿಗೆ ಕಾಣಸಿಗುವುದಿಲ್ಲ.

**ಸಿ.ಎಸ್. ಅಂಗಡಿಯವರು ೧೯೭೦ರಲ್ಲಿ ಜಪಾನಿನಲ್ಲಿ ಜರುಗಿದ ಎಕ್ಸ್‌ಪೋ-೭೦ ಪ್ರದರ್ಶನವನ್ನು ನೋಡಿ ಅನುಭವ ಪಡೆಯಲು ಕರ್ನಾಟಕದಿಂದ ಹೋದ ಪ್ರತಿನಿಧಿಗಳಲ್ಲಿ ಒಬ್ಬರು. ಜಪಾನ್ ಪ್ರವಾಸದ ಅನುಭವಗಳು ಸಾಹಿತಿಯಲ್ಲದ ಶ್ರೀ ಅಂಗಡಿಯವರ ಪ್ರವಾಸಕಥನವಿದು. ಹತ್ತು ಭಾಗಗಳಲ್ಲಿ (ದೃಷ್ಟಾಂತಗಳಲ್ಲಿ) ಒಡಮೂಡಿರುವ ಈ ಪ್ರವಾಸ ಕಥನದಲ್ಲಿ ಸಿಂಗಪೂರ್, ಹಾಂಗ್‌ಕಾಂಗ್, ಒಸಾಕಾ, ಟೋಕಿಯೋ, ಇಂದಿನ ಜಪಾನ್, ಬಾಂಕಾಕ್ -ಈ ಪಟ್ಟಣಗಳ ವರ್ಣನೆ ಸತ್ವಪೂರ್ಣವಾಗಿದೆ. ಶ್ರೀ ಅಂಗಡಿಯವರಿಗೆ ನೋಡುವ ಕಣ್ಣಿದೆ, ಗ್ರಹಿಸುವ ಮನಸ್ಸಿದೆ, ಗ್ರಹಿಸಿದ್ದನ್ನು ಸ್ಫುಟವಾಗಿ ಸರಳವಾಗಿ ಹೇಳುವ ಕಲೆಗಾರಿಕೆಯಿದೆ. ಅವರ ಹೃದಯ ಸಂಸ್ಕಾರ, ದೇಶಾಭಿಮಾನ, ಭಾರತೀಯ ಜನತೆಯ ಬಗೆಗಿನ ಅನುಕಂಪ, ಕಳಕಳಿ ಕೃತಿಯುದ್ದಕ್ಕೂ ಪ್ರಕಟಗೊಂಡಿದೆ.**

ಶ್ರೀ ಅಂಗಡಿಯವರ ಪ್ರವಾಸ ಕಥನ ನಿರೂಪಣೆಯಲ್ಲಿ ಹೆಚ್ಚಿನ ವಿವರಗಳಿಗೆ, ಪರಿಶ್ರಮಪೂರ್ಣವಾದ ವಿಷಯ ಸಂಗ್ರಹಣೆಯಿದೆ. ತಾವು ನೋಡಿದ ಪಟ್ಟಣಗಳ ಪ್ರೇಕ್ಷಣೀಯ ಸ್ಥಳಗಳು, ವ್ಯಾಪಾರೋದ್ಯಮ, ಆಹಾರ-ವಿಹಾರ-ವಿನೋದಗಳು ಇವುಗಳ ವರ್ಣನೆ ಪ್ರವಾಸ ಕಥನದಲ್ಲಿ ಬಂದಿದ್ದರೂ ಎಕ್ಸ್‌ಪೋ-೭೦ರ ಪರಿಚಯ ಇದರ ಪ್ರಧಾನ ಭಾಗವಾಗಿದೆ. ಎಕ್ಸ್‌ಪೋದ ಐದು ಮಳಿಗೆಗಳ ವಿವರಪೂರ್ಣವಾದ ದಾಖಲೆಯಿದೆ. ೧೯೬೯ರ ಜಪಾನಿನ ಅಂಕಿ-ಅಂಶಗಳ ವಿವರಗಳಿವೆ. ಜಪಾನೀಯರ ಸಾಹಸ ಪ್ರವೃತ್ತಿ, ಅತಿಥಿ ಸತ್ಕಾರಪ್ರಿಯತೆ, ಉದ್ಯಮಶೀಲತೆ, ವೈಜ್ಞಾನಿಕ ಪ್ರಗತಿ, ವ್ಯವಸಾಯದಲ್ಲಿನ ಸುಧಾರಣೆ, ಹಡಗು ನಿರ್ಮಾಣ, ವಿಮಾನ ತಯಾರಿಕೆ, ಚಿತ್ರಕಲೆ, ನೃತ್ಯ, ನಾಟಕ, ಗೆಯಷಾ ಸ್ತ್ರೀಯರು -ಹೀಗೆ ವೈವಿಧ್ಯಮಯವಾದ ವಿಷಯಗಳ ಸ್ವಾರಸ್ಯಕರವಾದ ವಿವರಣೆ ಕಂಡುಬರುತ್ತದೆ. ಪ್ರಗತಿಶೀಲ ರಾಷ್ಟ್ರವಾದ ಜಪಾನಿನ ಸಾಧನೆ-ಸಿದ್ಧಿಗಳನ್ನು ಅಂಕಿ-ಅಂಶಗಳ ಮೂಲಕ ವಿವರಿಸಿರುವುದು ಇಲ್ಲಿನ ವಿಶೇಷವಾಗಿದೆ. ಇಂಫಾಲಕ್ಕೆ ಬಂದಾಗ ಶ್ರೀ ಸುಭಾಷ್‌ಚಂದ್ರ ಬೋಸ್‌ರ ಸ್ಮರಣೆ ರೋಮಾಂಚಕವಾಗಿದೆ. ಭಾರತೀಯರು ಜಪಾನೀಯರಿಂದ ಕಲಿಯಬಹುದಾದ ಪಾಠಗಳನ್ನು ಲೇಖಕರು ವಿವರಿಸಿರುವರು.

೧೯೮೧ರಲ್ಲಿ ಬೆಂಗಳೂರಿನ ಭಾರತೀಯ ದೂರವಾಣಿ ಕಾರ್ಖಾನೆಯವರು ಟಿ.ಆರ್. ಗುರುರಾಜಾರಾವ್‌ರವರನ್ನು ಹೆಚ್ಚಿನ ತರಬೇತಿಗೆಂದು ಜಪಾನ್ ದೇಶಕ್ಕೆ ಕಳುಹಿಸಿತು. ಜಪಾನ್ ದೇಶಕ್ಕೆ ಹೋಗುವವರೆಗೆ ಉಪಯುಕ್ತವಾಗಲೆಂದು ಶ್ರೀಯುತರು ಈ ದೇಶದ ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಮುನ್ನಡೆಯನ್ನು ಕುರಿತ ಪರಿಚಯಾತ್ಮಕವಾದ **ನಾ ಕಂಡ ಜಪಾನ್** ಎನ್ನುವ ಕೃತಿರಚನೆ ಮಾಡಿರುವರು. ಈ ಕೃತಿ ಟೂರಿಸ್ಟ್ ದೃಷ್ಟಿಯನ್ನು ಹೊಂದಿರುವ ಕಾರಣ ಜಪಾನ್ ದೇಶದ ಸ್ಥೂಲ ಪರಿಚಯ, ಜಪಾನ್ ಭಾಷೆ, ವಾಯುಗುಣ, ಸಾರಿಗೆ ವ್ಯವಸ್ಥೆ, ವಸತಿಗೃಹಗಳು, ಆಹಾರ ಪದ್ಧತಿ, ವ್ಯವಸಾಯಸ್ಥರು, ಕ್ರೀಡೆಗಳು, ಕಲೆ, ಪ್ರೇಕ್ಷಣೀಯ ಸ್ಥಳಗಳು, ಪ್ರಮುಖ ಹಬ್ಬಗಳು, ಕೈಗಾರಿಕೆ -ಹೀಗೆ ಮಾರ್ಗದರ್ಶಿ(ಗೈಡ್)ಯೋಪಾದಿಯಲ್ಲಿ ರಚನೆಗೊಂಡಿದೆ. ಕೊನೆಯಲ್ಲಿ ಪ್ರವಾಸಿಗಳಿಗೆ ವ್ಯವಹರಿಸಲು ಅನುಕೂಲವಾಗಲೆಂದು ಅತಿ ಉಪಯುಕ್ತವಾದ ಪದಗಳು ಹಾಗೂ ವಾಕ್ಯಗಳ ಪಟ್ಟಿಯನ್ನು ಕೊಟ್ಟಿರುವರು. ಜಪಾನ್ ದೇಶದ ಬಗೆಗೆ ವ್ಯಾಪಕವಾದ ತಿಳುವಳಿಕೆ ನೀಡಬಲ್ಲ ಈ ಕೃತಿಯಲ್ಲಿ ಆ ದೃಷ್ಟಿಯಿಂದಲೇ ವಿಷಯ ಸಂಗ್ರಹಣೆ ಮಾಡಿದಂತೆ ತೋರುತ್ತದೆ.

ಯೂರೋಪು ಮತ್ತು ಅಮೆರಿಕಾ ದೇಶಗಳಲ್ಲಿ ಪ್ರವಾಸ ಮಾಡಿದ ಶ್ರೀಮತಿ ಜಯಲಕ್ಷ್ಮಿ ಹಾಗೂ ಪ್ರೊ. ಶ್ರೀನಿವಾಸಯ್ಯ ದಂಪತಿಗಳು ಪೂರ್ವದೇಶಗಳಾದ ಜಪಾನ್, ಚೈನಾ, ಥಾಯ್‌ಲ್ಯಾಂಡ್, ಸಿಂಗಪುರಗಳಲ್ಲಿ ಪ್ರವಾಸ ಮಾಡಿ ತಮ್ಮ ಅನುಭವಗಳನ್ನು **ಜಯಶ್ರೀ ಕಂಡ ಅಪೂರ್ವ** ಎಂಬ ಕೃತಿಯಲ್ಲಿ ನಿರೂಪಿಸಿರುವರು. ತಾವು ನೋಡಿದ ದೇಶಗಳ ಪ್ರವಾಸಿ ಆಕರ್ಷಣೆಯ ಸ್ಥಳಗಳ ಸ್ಥೂಲ ಪರಿಚಯವನ್ನು ಪ್ರವಾಸಿಗರ

ಅನುಕೂಲಕ್ಕೆ ಕೊಟ್ಟಿರುವಂತಿದೆ. ಮಧ್ಯೆ ಮಧ್ಯೆ ಆ ದೇಶದ ವಿದ್ಯಾಭ್ಯಾಸ ಕ್ರಮ, ನಾಗರೀಕತೆ, ಕೈಗಾರಿಕಾ ಪ್ರಗತಿ, ಜನಜೀವನ ಇವುಗಳ ಬಗೆಗೂ ಹೇಳಿರುವರು. ಜಪಾನಿನ ರಾಜಧಾನಿ ಟೋಕಿಯೋ ೧೯೨೩ರಲ್ಲಿ ಭಯಂಕರವಾದ ಭೂಕಂಪದಿಂದ ಅರ್ಧಕ್ಕಿಂತ ಹಾಳಾಯಿತು. ಎರಡನೆ ಮಹಾಯುದ್ಧದಲ್ಲಿ ಟೋಕಿಯೋದಲ್ಲಿ ಎಲ್ಲಾ ಕೈಗಾರಿಕಾ ಕೇಂದ್ರಗಳು ಬಾಂಬಿನ ಹಾವಳಿಗೆ ತುತ್ತಾದವು. ಯುದ್ಧ ಮುಗಿದ ಮೇಲೆ ಟೋಕಿಯೋ ಅಮೆರಿಕದ ಆಡಳಿತಕ್ಕೆ ಒಳಪಟ್ಟು ೧೯೪೫ರಿಂದ ನಷ್ಟವನ್ನೆಲ್ಲ ತುಂಬಿಕೊಂಡು ಆಧುನಿಕ ನಗರವಾಗಿ ಮೇಲೆದ್ದ ಚಿತ್ರ ಸ್ಫೂರ್ತಿಯುತವಾಗಿದೆ. ಉಪಯುಕ್ತ ಮಾಹಿತಿಗಳಿಂದ ಕೂಡಿರುವ ಈ ಕೃತಿ ಪ್ರವಾಸಿಗರಿಗೆ ಮಾರ್ಗದರ್ಶಿಯಂತಿದೆ.

ಪ್ರೊ. ಸಿ.ಹೆಚ್. ಮರಿದೇವರು **ಆಗ್ನೇಷಿಯಾ ಮತ್ತು ಜಪಾನ್ ರಾಷ್ಟ್ರಗಳಲ್ಲಿ ಮರಿದೇವರು** ಎಂಬ ತಮ್ಮ ಪ್ರವಾಸಕಥನದ ಅರಿಕೆಯಲ್ಲಿ ತಾವು ೧೯೮೨ರಲ್ಲಿ ಸಂದರ್ಶಿಸಿದ ಐದು ರಾಷ್ಟ್ರಗಳಲ್ಲಿನ ಜನರ ನಡೆ-ನುಡಿ, ವೇಶಭೂಷಣಗಳು, ಸಂಸ್ಕೃತಿ, ಕೃಷಿ, ರಾಜಕೀಯ, ವಿಜ್ಞಾನ, ತಾಂತ್ರಿಕಜ್ಞಾನ ಇತ್ಯಾದಿಗಳೆಲ್ಲವನ್ನೂ ಕಂಡು ಕೇಳಿ ನೋಡಿ ಓದಿದಭಾಗಗಳ ಬಹುತೇಕ ಅಂಶಗಳನ್ನು ಈ ಪ್ರವಾಸ ಕಥನದಲ್ಲಿ ತಂದಿರುವುದಾಗಿ ಹೇಳಿರುವರು. ಈ ಪುಸ್ತಕವನ್ನು ಓದುವುದರ ಮೂಲಕ ಥಾಯ್ ಲ್ಯಾಂಡ್, ಹಾಂಕಾಂಗ್, ಜಪಾನ್, ಮಲೇಶಿಯಾ ಮತ್ತು ಸಿಂಗಪೂರ್‌ಗಳನ್ನು ನನ್ನೊಂದಿಗೆ ಸಂದರ್ಶಿಸಿ ಬರಬಹುದು! ಎಂದಿರುವರು. ಅವರು ಪ್ರವಾಸಕಾಲದಲ್ಲಿ ಪ್ರವಾಸಿ ಸಂಸ್ಥೆಯಿಂದ ತಮಗಾದ ಅನ್ಯಾಯವನ್ನು ಪ್ರಸ್ತಾಪಿಸಿರುವರು "... ಜಪಾನ್ ಏರ್‌ಲೈನ್ಸ್ ವತಿಯಿಂದ ಬಂದಿದ್ದ ಶ್ರೀಮತಿ ಕೋಮಲ್ ಪೂರಿ ಎಂಬ ರಾಕ್ಷಸಿ ಮತ್ತು ಪ್ರದೇಶ ಕೃಷಿಕ ಸಮಾಜದ ವತಿಯಿಂದ ಬಂದಿದ್ದ ಧೋತ ಒಡ್ಡಿಹೈದ ದೊಡ್ಡಶೆಟ್ಟಿ ಇವರುಗಳಿಂದ ಜಪಾನಿನ ಆಶಿವೇಕ್ ಮುಂದೆಯೇ ಹಾದುಹೋದಾಗ್ಯೂ ಅದನ್ನು ಕಣ್ತುಂಬ ನೋಡಿ ಆನಂದಿಸುವ ಸೌಭಾಗ್ಯ ನಮ್ಮ ಪಾಲಿಗೆ ಇಲ್ಲವಾಯ್ತು. ಜಪಾನಿನ ೫೦ ಅಡಿ ಎತ್ತರದ ಬುದ್ಧನ ವಿಗ್ರಹವಿರುವ 'ನಾರ' ಎಂಬ ಸ್ಥಳ ಮತ್ತು ಜಪಾನಿನಲ್ಲಿ ಬುದ್ಧನ ಮೂಲವಿಗ್ರಹವಿರುವ ಕಾಮಕೂರ ಎಂಬ ಸ್ಥಳಗಳು ನಮಗೆ ಕೊಟ್ಟ ಕಾರ್ಯಕ್ರಮ ಪಟ್ಟಿಯಲ್ಲಿದ್ದರೂ ಆ ಸ್ಥಳಗಳಿಗೆ ನಮ್ಮ ತಂಡವನ್ನು ಕರೆದೊಯ್ಯಲಿಲ್ಲ. ಕಾರಣ, ಹಣದುಳಿಕೆ ಮತ್ತು ಗಳಿಕೆ ಮೇಲಿನ ಇಬ್ಬರು ಚಂಡಾಲರಿಂದ. ಲಂಚಕೋರರು ಪ್ರವಾಸವೇರ್ಪಡಿಸಿದರೆ ಅವರು ಪ್ರವಾಸಿಗರಿಗೆ ಮೋಸ, ನಯವಂಚನೆ, ದಗಲ್ ಬಾಜೀತನ ಎಲ್ಲವನ್ನೂ ಮಾಡುತ್ತಾರೆ..." (ಅರಿಕೆ, ಪು. XV).

ಏನೇ ಇರಲಿ, ಪ್ರೊ. ಮರಿದೇವರು ತಾವು ನೋಡಿದ್ದನ್ನು ಕೇಳಿದ್ದನ್ನು ಹಾಗೂ ಓದಿದ್ದನ್ನು ತನ್ಮಯವಾಗಿ ವರ್ಣಿಸಿರುವರು. ಇಲ್ಲಿ ಮುಖ್ಯವೆನ್ನಿಸುವುದು ಅವರು ಪ್ರವಾಸಕಾಲದಲ್ಲಿ ಪ್ರವಾಸಿಸ್ಥಳಗಳ ಬಗೆಗೆ ಕಲೆಹಾಕಿರುವ ಅಪಾರ ಪ್ರಮಾಣದ ಮಾಹಿತಿ, ಹಾಂಕಾಂಗ್‌ನಲ್ಲಿ ಭಿಕ್ಷುಕರನ್ನು ನೋಡಿದ ಲೇಖಕರಿಗೆ ಆಶ್ಚರ್ಯ ಕಾದಿತ್ತು. ಅವರು ಯಾರನ್ನೂ ಕಾಡುತ್ತಿರಲಿಲ್ಲ, ಬೇಡುತ್ತಿರಲಿಲ್ಲ. ಅವರ ಸ್ಥಿತಿ ಚಿಂತಾಜನಕ. ದಿನವಿಡೀ

ಬಟ್ಟೆಹಾಸಿ ಕುಳಿತರೂ ಯಾರೂ ಕಾಸು ಎಸೆಯುತ್ತಿರಲಿಲ್ಲ. ಯಾರಿಗೂ ಅವರ ಕಡೆ ಲಕ್ಷ್ಯವಿಲ್ಲ; ಅನುಕಂಪವಿಲ್ಲ; ಮಾನವೀಯತೆಯ ಕುರುಹೂ ಸಹಾ ಕಾಣಲಿಲ್ಲ (ಪು.೭೧). ಕುತೂಹಲದ ಕಣ್ಣು ಮತ್ತು ಮನಸ್ಸು ಹೊಸದನ್ನು, ಅದ್ಭುತವೊಂದನ್ನು ಹುಡುಕುತ್ತ ನೋಡಿ ಸಂತೋಷಪಡುತ್ತದೆ. ವರ್ಣನೆಗಳಲ್ಲಿ ಆ ಸಂತೋಷ, ಸಂಭ್ರಮ ಇಣಿಕಿಹಾಕುತ್ತದೆ. ಚೀನಾದೇಶದ ಚಕ್ರವರ್ತಿಯ ಉಡುಪುಧರಿಸಿ ಕ್ಯಾಮರಾಮುಂದೆ ನಿಂತರೆ ಫೋಟೋವಾದರೂ ಸರಿಯಾಗಿ ಬರಬೇಡವೆ? 'ಬಹುಶಃ ವೀಡಿಯೋ ಟೇಪ್ ಕ್ಯಾಮರಾ ಕೂಡ ನಾನು ಚಕ್ರವರ್ತಿಯಾಗುವುದನ್ನು ಸಹಿಸಲಿಲ್ಲವೆಂದು ತೋರುತ್ತದೆ' ಎಂದು ಲೇಖಕರು ತಮ್ಮನ್ನು ತಾವೇ ಗೇಲಿ ಮಾಡಿಕೊಳ್ಳುವರು (ಪು.೯೦). ವಿಷಯ ಸಣ್ಣದಿರಲಿ, ದೊಡ್ಡದಿರಲಿ ಲೇಖಕರು ಕೊಡುವ ವಿವರಣೆ ಅವರ ಆಸಕ್ತಿಯನ್ನು, ಶ್ರದ್ಧೆಯನ್ನು ಬೆರಳುಮಾಡಿ ತೋರಿಸುತ್ತದೆ. ಲೇಖಕರು ವಿಷಯ ಸಂಗ್ರಹಣೆಯಷ್ಟೇ ಮಾಡಿಲ್ಲ, ಅದನ್ನು ಅಚ್ಚುಕಟ್ಟಾಗಿ ಸಾಹಿತ್ಯಕವಾಗಿ ನಿರೂಪಿಸಿರುವರು. ಎಷ್ಟೋ ಕಡೆ ಅವರ ವರ್ಣನೆ ಕಾವ್ಯಮಯವಾಗಿವೆ (ಉದಾಹರಣೆಗೆ ಪುಟ ೬೬-೬೭); ಕೆಲವೊಮ್ಮೆ ವರ್ಣನೆ ಅತಿತನದಿಂದ ಕೂಡಿ ದೋಷವೂ ಆಗುತ್ತದೆ (ಪು. ೬೧-೬೨).

## ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್

**ದಿವ್ಯಮೌನದ ದೇಶಗಳಲ್ಲಿ** ಎಂಬ ಹೆಸರಿನ ಆಸ್ಟ್ರೇಲಿಯಾ ಹಾಗೂ ನ್ಯೂಜಿಲ್ಯಾಂಡ್ ದೇಶಗಳ ಪ್ರವಾಸಾನುಭವ ಕಥನವನ್ನು ಶಿವಕುಮಾರ್‌ರವರು ಬರೆದಿರುವರು. ಪ್ರವಾಸಕ್ಕೆ ವಯಸ್ಸಿನ ನಿರ್ಬಂಧವಿಲ್ಲ. ಅದಕ್ಕೆ ಬೇಕಾದದ್ದು ಹಣ, ಸಮಯ ಹಾಗೂ ಹೊಸ ದೇಶಗಳ ಪ್ರಾಕೃತಿಕ ಸಂಪತ್ತು, ಜನ-ಮನ, ಸಂಸ್ಕೃತಿ, ಆಚಾರ-ವಿಚಾರಗಳನ್ನು ಗ್ರಹಿಸುವ ಉತ್ಸಾಹೀ ಮನಸ್ಸು; ಅಪರಿಚಿತ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಸುಖಿಸುವ ಕಣ್ಣು ಮತ್ತು ಹೃದಯ. ಪ್ರಪಂಚ ಎಷ್ಟು ವಿಶಾಲವಾಗಿದೆ, ವೈವಿಧ್ಯಮಯವಾಗಿದೆ, ಸ್ವಾರಸ್ಯಪೂರ್ಣವಾಗಿದೆ ಎಂಬುದರ ಅರಿವಾಗುವುದು ನಾವು ಪ್ರವಾಸ ಹೋದಾಗಲೇ; ಪ್ರಪಂಚದ ಬಗೆಗಿನ ನಮ್ಮ ತಿಳಿವಳಿಕೆ ಎಷ್ಟು ಅಲ್ಪ ಪ್ರಮಾಣದ್ದೆಂಬುದು ತಿಳಿಯುವುದು ಆಗಲೇ.

ತ್ರಿವೇಣಿ ಶಿವಕುಮಾರ್‌ರವರಿಗೆ ಕನ್ನಡ ಸಾಹಿತ್ಯದ ಓದಿನ ಹಿನ್ನೆಲೆಯಿದೆ. ಸುತ್ತಣ ಪರಿಸರ-ಪ್ರಪಂಚವನ್ನು ಅರ್ಥಮಾಡಿಕೊಳ್ಳುವ ಮೂಲಕ ಅವರ ಮನಸ್ಸು ಒಂದು ಹದವನ್ನು ಕಂಡುಕೊಂಡಿದೆ; ಸಂಸ್ಕಾರವನ್ನು ಪಡೆದುಕೊಂಡಿದೆ. ಪ್ರಸನ್ನ ಮನಸ್ಸನ್ನು, ಆಲೋಚನಾಕ್ರಮವನ್ನು, ಬದುಕನ್ನು ಗ್ರಹಿಸುವ ಅವರ ರೀತಿಯನ್ನು ನಾವು ಅವರ ಪ್ರವಾಸ ಕಥನಗಳ ಮೂಲಕ ಅರಿಯಬಹುದಾಗಿದೆ. ಪ್ರವಾಸ ಕಥನವೆಂಬುದು ಅನುಭವಗಳ ಸಾಹಿತ್ಯಕ ನಿವೇದನೆಯಾಗಿದ್ದರೂ ಅಲ್ಲಿ ನಿವೇದನೆಯ ಸಂದರ್ಭದಲ್ಲಿ ಪ್ರಸನ್ನ ಮನಸ್ಸೊಂದು ವಿವಿಧ ಸಂದರ್ಭಗಳಲ್ಲಿ ಸ್ಪಂದಿಸಿದ ದಾಖಲೆಯಿದೆ. ತ್ರಿವೇಣಿ

ಶಿವಕುಮಾರ್‌ರವರು ಪ್ರವಾಸ ಹೊರಟದ್ದು ಗಂಡ ಹಾಗೂ ಮಗನ ಜೊತೆ ಸಾಮೂಹಿಕ ಪ್ರವಾಸದಲ್ಲಿ. ಹೀಗಾಗಿ ಅಲ್ಲಿ ಏಕಾಕಿ ಪ್ರವಾಸಕ್ಕೂ ಗುಂಪು ಅಥವಾ ಸಮೂಹ ಪ್ರವಾಸಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ಸಮೂಹ ಪ್ರವಾಸ ಏರ್ಪಡಿಸುವ ಪ್ರವಾಸಿ ಏಜೆಂಟರಿಂದಾದ ಕಹಿ ಅನುಭವ ಈ ಪ್ರವಾಸಿ ಕಥನದ ಒಂದು ತುಣುಕು. ಆದರೂ ಆ ಕಹಿ ಅನುಭವ ದುಬಾರಿಯಾದದ್ದು. ಗುಂಪು ಪ್ರವಾಸ ಕೈಗೊಳ್ಳುವವರಿಗೆ ಒಂದು ಎಚ್ಚರಿಕೆಯ ಗಂಟೆ. ಪ್ರವಾಸಿ ಏಜೆಂಟ್ ಪ್ರವಾಸ ಹೊರಡುವ ಮೊದಲೇ ಎಲ್ಲರಿಂದಲೂ ಅರ್ಧ ಹಣವನ್ನು ವಸೂಲು ಮಾಡಿದ್ದ. ಕೆಲವರು ಪೂರ್ತಿ ಹಣ, ಮತ್ತೆ ಕೆಲವರು ಮುಕ್ಕಾಲು ಹಣ ಕೊಟ್ಟಿದ್ದರು. ನಂಬಿಸಿ ಮಾಡಿದ ವಂಚನೆಯ ಕಥೆಯ ವಿವರ ಓದಿದಾಗ ಆ ಜಾಲದ ರಹಸ್ಯ ಗೊತ್ತಾಗುವುದು. (ಪು. ೧೪-೨೨). ಗುಂಪು ಪ್ರವಾಸದಲ್ಲಿ ಸಹ ಪ್ರವಾಸಿಗಳ ಮನಸ್ಸನ್ನು ಗ್ರಹಿಸುವಲ್ಲಿ ಲೇಖಕಿ ಯಶಸ್ವಿಯಾಗಿರುವರು. ಪ್ರವಾಸದ ನೆಪದಲ್ಲಿ ಮಧ್ಯಮ ಹಾಗೂ ಎಳೆಯ ವಯಸ್ಸಿನ ಮನಸ್ಸುಗಳು ಬೆರೆಯಲೇ ಇಲ್ಲ; ಕೊನೆಯವರೆವಿಗೂ ಪ್ರತ್ಯೇಕತೆಯನ್ನು ಕಾಪಾಡಿಕೊಂಡ ಆ ಮನಸ್ಸುಗಳು ಪರಸ್ಪರ ಕಷ್ಟಸುಖಗಳನ್ನು ಹಂಚಿಕೊಳ್ಳಲೇ ಇಲ್ಲ; ಪ್ರವಾಸದುದ್ದಕ್ಕೂ ಬಿಗಿದ ತುಟಿಗಳು ನಿಷ್ಪಂದ ಮನಸ್ಸುಗಳು ಪ್ರತ್ಯೇಕ ಕಂಪಾರ್ಟ್‌ಮೆಂಟ್‌ಗಳು.

ಹಲವು ದೇಶಗಳಲ್ಲಿ ಸುತ್ತಾಡಿದ ಅನುಭವದ ಹಿನ್ನೆಲೆಯಲ್ಲಿ ತ್ರಿವೇಣಿ ಶಿವಕುಮಾರ್‌ರವರ ಚಿಂತನೆಗಳಲ್ಲಿ ವೈಶಾಲ್ಯವಿದೆ. ತಮಗೆ ದಕ್ಕುವ ಚಾಕ್ಷುಷ ಅನುಭವಗಳನ್ನು ಆತ್ಮಸಾತ್ ಮಾಡಿಕೊಂಡು ಅವನ್ನು ಸರಳವಾಗಿ ತಿಳಿಸುವ ಭಾಷಿಕ ಸಂಪತ್ತು ಲೇಖಕಿಗಿದೆ. ಜೊತೆಗೆ ಭಾವುಕ ಮನಸ್ಸು. ಬ್ರಿಸ್ಬೇನ್ ನಗರದ ಗ್ರಿಫಿತ್ ಯೂನಿವರ್ಸಿಟಿಯ ಮುಂದೆ ನಿಂತಾಗಿನ ಅನುಭವವನ್ನು ಓದಿದಾಗ ಆ ಭಾವುಕ ಮನಸ್ಸಿನ ಪರಿಚಯವಾಗುತ್ತದೆ. ತಾವು ನೋಡಿದ ಸ್ಥಳಗಳ ಮಾಹಿತಿ ನೀಡುವ ಉತ್ಸಾಹ ಲೇಖಕಿಯದು. ಅದಕ್ಕಾಗಿ ಅವರು ಪ್ರಚಾರ ಭಿತ್ತಿಗಳ ನೆರವು ಪಡೆಯುವರು. ಪ್ರವಾಸಿ ಗೈಡ್ ನೀಡುವ ವಿವರಗಳನ್ನು ಗಮನವಿಟ್ಟು ಕೇಳಿ ದಾಖಲಿಸಿಕೊಳ್ಳುವರು. ಹೀಗಾಗಿ ಇಲ್ಲಿ ಪ್ರವಾಸದುದ್ದಕ್ಕೂ ತೆರೆದುಕೊಂಡ ಮನಸ್ಸು ತಾನು ಕಂಡದ್ದನ್ನು ಸುಖಿಸಿದ್ದನ್ನು ದಾಖಲಿಸುತ್ತಾ ಹೋಗುತ್ತದೆ.

ಗೋಲ್ಡ್ ಕೋಸ್ಟ್‌ನ ಸೀವರ್ಲ್ಡ್‌ನಲ್ಲಿ ಡಾಲ್ಫಿನ್ ಷೋ, ಸೀಲ್ ಷೋ ಇತ್ಯಾದಿಗಳನ್ನು ನೋಡುವಾಗ ಹಿಂದೆಯೇ ನೋಡಿದ್ದ ಹಾಂಕಾಂಗ್‌ನ ಓಷನ್ ಪಾರ್ಕ್. ಬ್ಯಾಂಕಾಕ್‌ನ ಸಫಾರಿ ವರ್ಲ್ಡ್, ಸಿಂಗಪುರ್‌ನ ಸಂತೋಷಾ ಐಲೆಂಡ್‌ಗಳ ನೆನಪಾಗುತ್ತದೆ. ಹೀಗಾಗಿ ಅದರಲ್ಲಿ ಲೇಖಕಿಗೆ ಹೊಸ ಅನುಭವವೇನೂ ಆಗುವುದಿಲ್ಲ (ಪು. ೩೪). ತಮ್ಮ ಪ್ರವಾಸಾನುಭವ ಕೇವಲ ಪಕ್ಷಿನೋಟದ್ದು. ಇದಕ್ಕಾಗಿ ಲಕ್ಷಗಟ್ಟಲೆ ಹಣ ಖರ್ಚು ಮಾಡಿಕೊಂಡು ಬಂದು ಎಲ್ಲವನ್ನೂ ಬರಿ ಹೊರಗಿನಿಂದ ನೋಡಿ ಬರುತ್ತಿದ್ದೇವಲ್ಲ ಎಂಬ ಲೇಖಕಿಯ ಮನಸ್ಸಿನ ದುಗುಡ ಸಹಜವಾದದ್ದು.

ಗುಂಪು ಪ್ರವಾಸದಲ್ಲಿ ಸಾವಧಾನವಾಗಿ ನಿಂತು ನೋಡುವ ಅವಕಾಶವಿಲ್ಲ. ಅದು ಅದರ ದೊಡ್ಡ ಕೊರತೆ. ನಿಶ್ಚಿತ ಸ್ಥಳಗಳನ್ನು ಬೇಗಬೇಗನೆ ನೋಡಿ ಸಾಗುವ, ಬಸ್/ ವಿಮಾನದಲ್ಲಿ ಕುಳಿತು ನೋಡಿ ಸಮಾಧಾನಪಟ್ಟುಕೊಳ್ಳುವ ಮನೋಭಾವಕ್ಕೆ ಗುಂಪು ಪ್ರವಾಸದಲ್ಲಿ ಅವಕಾಶವಿದೆ; ವಿರಾಮವಾಗಿ ನೋಡಿ ಅನುಭವಿಸುವ ಅವಕಾಶವಿಲ್ಲ. 'ಏನನ್ನೂ ನೋಡದೆ ಇರುವುದಕ್ಕಿಂತ ಇಷ್ಟನ್ನಾದರೂ ನೋಡುವುದು ಒಳ್ಳೆಯದಲ್ಲವೇ' ಎಂಬುದು ಶಿವಕುಮಾರ್‌ರವರ ಸಮಾಧಾನದ ನಿಲುವು (ಪು. ೩೭-೩೮). ಏರ್ ಪೋರ್ಟ್‌ನಲ್ಲಿನ ತಪಾಸಣೆಯ ಅನುಭವಗಳು ಉದಾಹರಣೆಗೆ ಚಿನ್ನದ ಒಡವೆಗಳನ್ನೆಲ್ಲಾ ತೆಗೆದಿಟ್ಟು ಮೆಟಲ್ ಡಿಟೆಕ್ಟರ್ ಡೋರ್‌ನಿಂದ ಹೊರಬಂದರೂ ಎಚ್ಚರಿಕೆ ಗಂಟೆ ಹೊಡೆದುಕೊಳ್ಳುತ್ತಲೇ ಇರುತ್ತಿತ್ತು. ಅದಕ್ಕೆ ಕಾರಣ, ಮಹಿಳೆಯೊಬ್ಬಳು ಧರಿಸಿದ್ದ ಮೈಸೂರು ಸಿಲ್ಕ್‌ಸೀರೆಯ ಶುದ್ಧಚಿನ್ನದ ಜರಿ! (ಪು. ೩೮). ಸಾಂಸ್ಕೃತಿಕ ಬೇರುಗಳನ್ನು ಕಳಚಿಕೊಂಡ ಮುಕ್ತಾ ಹಾಗೂ ಮಹೇಂದ್ರ ದಂಪತಿಗಳ ನೋವಿನ ಕಥೆ ಈ ಪ್ರವಾಸ ಕಥನದಲ್ಲಿ ಬಂದಿದೆ (ಪು. ೧೩೬-೧೪೦). ಅದು ವಲಸೆಹೋಗುವವರು ಅನುಭವಿಸಬೇಕಾದ ಏಕಾಕಿ ರಿಕ್ತಸ್ಥಿತಿ.

ಭಾರತೀಯ ಹಣಕ್ಕೆ ಇರುವ ಕೊಳ್ಳುವ ಶಕ್ತಿ ವಿದೇಶಗಳಿಗೆ ಹೋದಾಗ ಇರುವುದಿಲ್ಲ. ಭಾರತೀಯ ಮನಸ್ಸು ಭಾರತೀಯ ಹಣದ ಲೆಕ್ಕಾಚಾರದಲ್ಲೇ ವ್ಯವಹರಿಸಬಯಸುತ್ತದೆ. ಸಿಂಗಪೂರಿನ ಚಾಂಗೀ ಏರ್‌ಪೋರ್ಟ್‌ನಲ್ಲಿ ಜೋಡಿಸಿಟ್ಟ ವಸ್ತುಗಳ ಬೆಲೆ ಕೇಳಿದ ಲೇಖಕಿ ಆ ದುಬಾರಿ ಬೆಲೆಯ ವಸ್ತುಗಳನ್ನು ಕೊಳ್ಳಲಾಗದೆ "ಸ್ಲೋ ಮೋಷನ್‌ನಲ್ಲಿ ವಸ್ತುಗಳನ್ನು ವೀಕ್ಷಿಸುತ್ತಿದ್ದ ನಾವು ಫಾಸ್ಟ್ ಮೋಷನ್‌ನಲ್ಲಿ ಅಂಗಡಿಯಿಂದ ಹೊರಬಂದೆವು. ಒಂದು ಲೋಟಾ ಕಾಫಿಗೆ ನಾಲ್ಕು ಸಿಂಗಪೂರ್ ಡಾಲರ್! ಅಂದ್ರೆ ನಮ್ಮನೂರು ರೂಪಾಯಿ!" ಎಂದು ಹೌಹಾರಿದರು. ರೋಟೋರೋ ನಗರವು ಲೇಖಕಿಗೆ ಒಂದು ದೊಡ್ಡ ಕುದಿಯುತ್ತಿರುವ ಪಾತ್ರೆಯಾಗಿ, ಶಾಶ್ವತವಾಗಿ ಉರಿಯುತ್ತಿರುವ ಒಲೆಯ ಮೇಲಿದೆಯೇನೋ ಎಂದೆನ್ನಿಸಿತು. ಅಲ್ಲಿನ ಕುದಿಯುತ್ತಿರುವ ಕೆಸರಿನ ಕೊಳದಲ್ಲಿನ ಕೆಸರನ್ನು ಟ್ಯೂಬ್‌ಗಳಲ್ಲಿ ತುಂಬಿ ಸೊವನೀರ್ ಷಾಪ್‌ಗಳಲ್ಲಿ ಮಾರಾಟಕ್ಕಿಟ್ಟಿದ್ದನ್ನು ನೆನಪಿಸಿಕೊಂಡು ಆ ಜನರ ಹಣ ಮಾಡುವ ದಂಧೆಗೆ ಬೆರಗುಗೊಳ್ಳುವರು. ಆ ಕೆಸರಿನ ಟ್ಯೂಬ್‌ಗಳಿಗೆ ಎಂಟು-ಹತ್ತು ಡಾಲರ್ ಬೆಲೆ! ದುಡ್ಡಿಗೆ ಇಲ್ಲಿ ಬೆಲೆಯೇ ಇಲ್ಲವಲ್ಲ ಎಂದು ಲೇಖಕಿ ಉದ್ಗಾರ ತೆಗೆಯುವರು (ಪು. ೬೦).

ಹೆಚ್ಚಿನ ಜನಸಂಖ್ಯೆಯಿಲ್ಲದ ದಿವ್ಯ ಮೌನದ, ನಿರ್ಭಾವುಕ ಮನಸ್ಸಿನ ಈ ದೇಶಗಳಲ್ಲಿ ಸಂಚರಿಸಿದಾಗ ಕಂಡುಬಂದ ನೀರವ ಸ್ಮಶಾನ ಮೌನಕ್ಕಿಂತ ತಮ್ಮ ಗೌಜುಗದ್ದಲದ ಭಾರತ ಎಷ್ಟು ಚಂದವಿದೆ. ಈ ಗಲಾಟೆ ಎಷ್ಟು ಹಿತವಾಗಿದೆ! ಎಂದು ಭಾವುಕರಾಗಿ ಲೇಖಕಿ ನುಡಿಯುವರು. "ಏನಿಲ್ಲ ನಮ್ಮ ಭಾರತದಲ್ಲಿ ಇಲ್ಲವಾದದ್ದೆಂದರೆ ಆ ದಿವ್ಯ ಮೌನ" ಎಂಬ ಮಾತಿನೊಂದಿಗೆ ಈ ಪ್ರವಾಸ ಕಥನ ಮುಕ್ತಾಯಗೊಳ್ಳುತ್ತದೆ.

ಯಾವುದೇ ಪ್ರವಾಸ ಕಥನಕ್ಕೆ ತನ್ನದೇ ಆದ ಇತಿಮಿತಿಗಳಿವೆ. ತ್ರಿವೇಣಿ ಶಿವಕುಮಾರ್‌ರವರು ತಮ್ಮ ಅನುಭವಕ್ಕೆ ದಕ್ಕುವಷ್ಟನ್ನು ತಮ್ಮದೇ ಆದ ರೀತಿಯಲ್ಲಿ ಮಾತಿನಲ್ಲಿ ಸೆರೆಹಿಡಿದಿರುವರು. ಓದುಗರಿಗೆ ತಾನು ನೋಡದ ಆದರೆ ಓದಿಕೊಂಡಿರುವ ಸ್ಥಳಗಳ ಪರೋಕ್ಷಾನುಭವವನ್ನು ಈ ಪ್ರವಾಸ ಕಥನ ತನ್ನದೇ ಆದ ಮಿತಿಯಲ್ಲಿ ತಿಳಿಸಿಕೊಡುತ್ತದೆ. ಮೊದಲೇ ಹೇಳಿದ ಹಾಗೆ ಇದು ಏಕಾಕಿ ಪ್ರವಾಸವಲ್ಲ, ಗುಂಪು ಪ್ರವಾಸ. ಆದರಿಂದಾಗಿಯೇ ಈ ಪ್ರವಾಸ ಕಥನಕ್ಕೊಂದು ಮಿತಿ ಸಹಜವಾಗಿ ಬಂದುಬಿಡುತ್ತದೆ.

**ಲಂಡನ್:**

ಪ್ರೊ. ವಿ.ಕೃ. ಗೋಕಾಕರು ಕನ್ನಡ ನವೋದಯ ಕಾವ್ಯದ ಆದ್ಯ ಪ್ರವರ್ತಕರಲ್ಲಿ ಒಬ್ಬರು, ಕನ್ನಡದ ಶ್ರೇಷ್ಠ ವಿಮರ್ಶಕರು, ಕಾದಂಬರಿಕಾರರು. **ಸಮರಸವೇ ಜೀವನ** ಅವರಿಗೆ ಕೀರ್ತಿ ತಂದ ಬೃಹತ್ ಕಾದಂಬರಿ. ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳಲ್ಲಿ ಒಳ್ಳೆಯ ವಾಗ್ಮಿಗಳು. (ವಿದೇಶದಲ್ಲಿ ಪ್ರೊ. ಗೋಕಾಕ್‌ರವರು ವಿದ್ಯಾಭ್ಯಾಸ ಮಾಡುತ್ತಿದ್ದಾಗ ಒಮ್ಮೆ ವೆಲ್ಸ್ ಪ್ರಾಂತ್ಯದ ಕೂಲಿಕಾರನೊಬ್ಬ ಅವರು ಸೊಗಸಾಗಿ ಇಂಗ್ಲೀಷಿನಲ್ಲಿ ಮಾತನಾಡುವುದನ್ನು ಕೇಳಿ 'You speak English as if You had been born and bred in England') ಎಂದು ಉದ್ಗಾರ ತೆಗೆದನಂತೆ. ಅವರ ವಿದೇಶಾನುಭವಗಳನ್ನು ಹೇಳುವ ಕೃತಿ **ಸಮುದ್ರದಾಚೆಯಿಂದ**. ಪ್ರವಾಸ ಕಥನ ಬರೆಯಬೇಕೆಂಬ ಉದ್ದೇಶದಿಂದ ಹೊರಬಂದ ಕೃತಿ ಇದಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಓದುವ ಪ್ರೊ॥ ಗೋಕಾಕರಿಗೆ ಅವಕಾಶ ದೊರೆತಿದ್ದಿತು. ವಿದೇಶದಲ್ಲಿ ನೆಲೆನಿಂತಾಗ ಅಲ್ಲಿ ತಮಗಾದ ಅನುಭವಗಳನ್ನು ಅಭ್ಯಾಸ ಮುಗಿದ ನಂತರ ಸಿಕ್ಕಷ್ಟು ವೇಳೆಯಲ್ಲಿ ಆಪ್ತಮಿತ್ರರಿಗೆ ಹಾಗೂ ಹೃದ್ಬಾಂಧವರಿಗೆ ಪತ್ರಮುಖೇನ ಅವರು ಬರೆದರು. ಸಮಯ ಸಾಧಿಸಿ ದಿನಚರಿಯಲ್ಲೂ ತಮ್ಮ ಅಂದಂದಿನ ಅನುಭವಗಳನ್ನು ಬರೆದಿಟ್ಟರು. ಹೀಗೆ ಪತ್ರಗಳ ಸಂಗ್ರಹದಲ್ಲಿ ಮತ್ತು ದಿನಚರಿಯ ಪುಟಗಳಲ್ಲಿ ಮೂಡಿಬಂದ ಅನುಭವಗಳ ಒಂದು ವ್ಯವಸ್ಥಿತ ರೂಪ ಈ ಕೃತಿಯಾಗಿದೆ. ಲೇಖಕರೇ ಪ್ರಾರಂಭದಲ್ಲಿ ಹೇಳಿಕೊಂಡಿರುವಂತೆ ಇದು 'ಆಂಗ್ಲದೇಶದ ಒಂದು ವಿಶಿಷ್ಟ ಕಾಲಾವಧಿಯ ಚಿತ್ರ.' ಇದರಲ್ಲಿ 'ಜೀವನದ ಶಾಶ್ವತ ಒಲವು ನಿಲವುಗಳು ಬಿಂಬಿತವಾಗಿವೆ.' ಈ ದಿನಚರಿಯಲ್ಲಿ 'ವಿವರವಾಗಿ ಬಿಡಿಸುತ್ತಿರುವುದು ಆಂಗ್ಲ ಜೀವನದ ಅನುಭವ.' "ಇಲ್ಲಿಯ ದಿನಚರಿಯಲ್ಲಿ ಪ್ರವಾಸವಿಲ್ಲ, ಪರಕೀಯ ಸಂಸ್ಕೃತಿಯ ಸಂಪರ್ಕದಿಂದ ಉಂಟಾದ ಪರಿಣಾಮಗಳನ್ನು ನಿರೂಪಿಸಲು ಪ್ರಯತ್ನಿಸಿದ್ದೇನೆ. ಭಾರತ, ಕರ್ನಾಟಕ, ಸಂಸ್ಕೃತಿಗಳ ಸಮ್ಮಿಲನ, ಸಾಹಿತ್ಯ ಇವೇ ಮೊದಲಾದ ವಿಷಯಗಳು ನಾನು ಕಂಡ ಇಲ್ಲವೆ ಅನುಭವಿಸಿದ ಉದಾಹರಣೆಗಳ ಹಿಂದೆ ಅಡಗಿವೆ."

ಕೃತಿಯಲ್ಲಿ ಉದ್ದಕ್ಕೂ ನಿರೂಪಣೆಗೊಂಡಿರುವ ವಿಷಯಗಳಲ್ಲಿ ಏಕರೂಪತೆಯಿಲ್ಲ. ಕಾರಣ, ಅಂದಂದಿನ ಅನುಭವಗಳು ಮನದ ಮೇಲೆ ಮಾಡಿದ ತೀವ್ರ ಪರಿಣಾಮ ಸಂಕೀರ್ಣ ಸ್ವರೂಪದ್ದು, ಮನಸ್ಸನ್ನು ಕಲಕಿದೆ. ಪ್ರಚೋದಿಸಿದ ಸಂಗತಿಗಳು ಚಿತ್ತದ ಆ ಸ್ಥಿತಿಯಲ್ಲಿಯೇ ಮಾತಿನ ರೂಪಧಾರಣೆ ಮಾಡಿವೆ. ಆದ್ದರಿಂದ ಇಲ್ಲಿ ವಿಷಯ ವೈವಿಧ್ಯ ಸಹಜ. ಪ್ರೊ. ಗೋಕಾಕರು ತಮ್ಮ ತಂಗುಣೆಯ ಸೀಮಿತ ಅವಧಿಯಲ್ಲಿ ಪಡುವಣ ಸಮಾಜ ಹಾಗೂ ಅದರ ರಂಗುರಂಗಾದ ಜೀವನವನ್ನು, ಜನರ ರೀತಿ ನೀತಿ, ಒಲವು ನಿಲವುಗಳನ್ನು ಪ್ರಧಾನವಾಗಿ ಇಲ್ಲಿ ಹೇಳಲು ಪ್ರಯತ್ನಿಸಿರುವರು. ಭಾರತೀಯರ ಬಗೆಗೆ ಇರುವ ಬ್ರಿಟಿಷರ ಧೋರಣೆ ಕುರಿತ ಕಹಿ ಅನುಭವಗಳಿವೆ. ಅಂತಹ ಒಂದು ಅನುಭವದ ನಿರೂಪಣೆ ಹೀಗೆ ಬಂದಿದೆ:

"ಇಂದು ನಾನು ಹಾಗೂ ಕಾ...ರು ಲಾಯಲ್ಸ್ ಹೋಟಲಿನಲ್ಲಿ ಚಹ ಕುಡಿಯುತ್ತ ಕುಳಿತಿದ್ದೆವು. ಹತ್ತಿರದ ಟೇಬಲ್ಲಿನ ಬದಿಗೆ ಒಂದು ಆಂಗ್ಲ ಕುಟುಂಬವಿತ್ತು; ಗಂಡ, ಹೆಂಡತಿ, ಸುಮಾರು ಎರಡು ಮೂರು ವರುಷದ ಒಂದು ಮಗು. ನಮ್ಮನ್ನೇ ಆ ಮಗುವು ನೋಡುತ್ತಿತ್ತು. ಆಗ ಮಗುವಿನೆಡೆ ತಿರುಗಿ ನಾವು ಮಾತನಾಡಿಸಿದೆವು. ಇದು ಆ ತಂದೆಗೆ ಸರಿಬರಲಿಲ್ಲ. 'Nigger' ಎಂದು ಒದರೆಂದು ಮೆಲ್ಲಗೆ ಕಿವಿಯೂದಿದನು. ಆಗ ಆ ಮಗುವು 'Nigger' ಎಂದು ನಮ್ಮನ್ನು ಸಂಬೋಧಿಸಿ ಕೂಗ ಹತ್ತಿತು. ತಾಯಿತಂದೆಗಳಿಬ್ಬರೂ ನಗುತ್ತ ನೋಡುತ್ತ ಕುಳಿತರು. ಹೀಗಿದೆ ಇಲ್ಲಿಯ ಸ್ಥಿತಿ. ತಂದೆ ಮಗುವಿಗೆ ಕೊಡುವ ಶಿಕ್ಷಣವಿದು. ಸರಕಾರವು ಜನತೆಗೆ ಕೊಡುವ ಶಿಕ್ಷಣವಿದು. ಆಂಗ್ಲ ವಾಙ್ಮಯ ಪ್ರೇಮಿಗಳು-ಶೇಕ್ಸ್‌ಪಿಯರನ ಭಕ್ತರು -ಇದನ್ನು ನೆನಪಿನಲ್ಲಿಡಬೇಕು. ಶೇಕ್ಸ್‌ಪಿಯರನ ದೇಶದಲ್ಲಿ ಬರೀ ಕಾವ್ಯವಿಲ್ಲ, ಸುಶ್ರಾವ್ಯವಾದ 'Nigge' ಎಂಬ ಶಬ್ದವು ಕೇರಿ ಕೇರಿಗಳಲ್ಲಿ ನಿನದಿಸುತ್ತದೆ. ಬರ್ನಾಡ್ ಷಾನು ಹೇಳಿದ್ದಾನೆ: "The word 'Nigger' will cost us an empire one day" (ಪು. ೧೮೨). ಇದೇ ರೀತಿಯ ಅವಮಾನದ ನೋವನ್ನು "ಭಾರತೀಯನೊಬ್ಬನು ಸಣ್ಣ ಕೇರಿಗಳೊಳಗಿಂದ ಮುಂದೆ ಸಾಗಿದರೆ 'ಬ್ಲಾಕೀ' ಎಂದು ಹುಡುಗರು ಕಲ್ಲು ತೆಗೆದುಕೊಂಡು ಬೆನ್ನು ಹತ್ತುತ್ತಾರೆ" (ಪು. ೨೮೫) ಎಂಬಲ್ಲೂ ಕಾಣಬಹುದು.

ಸ್ವಾತಂತ್ರ್ಯಪೂರ್ವದಲ್ಲಿ ರೂಪುಗೊಂಡ ಕೃತಿ ಇದಾಗಿರುವುದರಿಂದ ಬಿಸಿನೆತ್ತರಿನ ಪ್ರೊ।। ಗೋಕಾಕರು ಬಂಧನಮುಕ್ತ ಭಾರತದ ಕನಸು ಕಾಣುವರು. ಆಯ್.ಸಿ.ಎಸ್. ತರಬೇತಿಗಾಗಿ ಬಂದ ಭಾರತೀಯರು ಬ್ರಿಟಿಷ್ ಸಾರ್ವಭೌಮತ್ವಕ್ಕೆ ತಮ್ಮ ವ್ಯಕ್ತಿತ್ವವನ್ನು ಮಾರಿಕೊಂಡು ಆಂಗ್ಲರನ್ನು ಅನುಕರಿಸಹೊರಟುದನ್ನೂ, ಅವರ ರೀತಿ ನೀತಿಗಳನ್ನು, ಅವರ ಸಂಯಮರಹಿತ ವಿಲಾಸೀ ಮನೋಭಾವವನ್ನೂ ಲೇಖಕರು ಚೆನ್ನಾಗಿ

ಕೊಟ್ಟಿರುವರು. ವಿದೇಶದಲ್ಲಿ ವಿದ್ಯಾಭ್ಯಾಸಕ್ಕೆಂದು ಬಂದ ಭಾರತೀಯರು ಅಲ್ಲಿನ ವಿಲಾಸೀ ಜೀವನಕ್ಕೆ ಮಾರುಹೋಗಿ ಶೀಲ ಚಾರಿತ್ರ್ಯಗಳಿಗೆ ಹೇಗೆ ತಿಲಾಂಜಲಿ ಕೊಟ್ಟರೆಂಬುದನ್ನೂ, ಮನಸ್ಸಿನ ಮೇಲೆ ಹತೋಟಿಯಿಲ್ಲದ ಅವರು ಹೇಗೆ ಹೆಣ್ಣುಗಳ ಬೆನ್ನು ಹತ್ತಿದರೆಂಬುದನ್ನೂ ಹಲವಾರು ನಿದರ್ಶನಗಳ ಮೂಲಕ ತಿಳಿಯಪಡಿಸಿರುವರು. ಆಂಗ್ಲರು ನಮ್ಮನ್ನು ಆಳುತ್ತಿರುವವರು. ಅವರ ನಾಗರೀಕತೆ, ಸ್ವಚ್ಛಂದ ಜೀವನ, ಭಾರತೀಯರನ್ನು ಅವಮಾನಿಸುವ ರೀತಿ -ಇವುಗಳನ್ನು ಕಟುವಾಗಿ ಟೀಕಿಸಿದರೂ ಶೆಲ್ಲಿ, ಕೀಟ್ಸ್, ಶೇಕ್ಸ್‌ಪಿಯರ್ ಮೊದಲಾದ ಕವಿಗಳನ್ನು ಆರಾಧಿಸುವ, ಪ್ರೊ॥ರೆನ್, ಪ್ರೊ॥ ವಾಯಿಲ್ಡ್ ಮೊದಲಾದ ವಿದ್ವಾಂಸರ ಆಳವಾದ ವಿದ್ವತ್ತನ್ನು, ಜ್ಞಾನದ ಪರಿಪಕ್ವತೆಯನ್ನು ಬಹುವಾಗಿ ಮೆಚ್ಚುವ ಗುಣವೂ ಲೇಖಕರಲ್ಲಿದೆ. ಭಾಷಾಶಾಸ್ತ್ರದಲ್ಲಿ ವೇದಾಂತವನ್ನು ಕಾಣುವ ಪ್ರೊ॥ ರೆನ್ ಶಬ್ದಗಳ ವ್ಯುತ್ಪತ್ತಿಯನ್ನು ಕುರಿತು ಮಾತನಾಡಿದರೆ "ಕವಿಯು ಜಗತ್ತಿನ ಮೂಲವನ್ನು ಕುರಿತು ಮಾತನಾಡಿದ ಹಾಗಾಗುತ್ತದೆ" ಎಂದು ಲೇಖಕರು ಹೃದಯತುಂಬಿ ನುಡಿಯುವರು. ಲಂಡನ್ನಿನಲ್ಲಿದ್ದ ಭೂಗರ್ಭಶಾಸ್ತ್ರದ ಪ್ರೊಫೆಸರ್ ಒಬ್ಬರು ಕಾರ್ಯನಿಮಿತ್ತ ಆಕ್ಸ್‌ಫರ್ಡಿಗೆ ಹೋಗಿದ್ದರು. ಗಾಡಿಯಲ್ಲಿ ಬರುವಾಗ ಅವರಿಗೆ ಹಾದಿಯಲ್ಲಿ ಕೆಲವು ಗಣಿಕಲ್ಲುಗಳು ಕಣ್ಣಿಗೆ ಬಿದ್ದವು. ಮುಂದಿನ ನಿಲ್ದಾಣೆಯಲ್ಲಿ ಇಳಿದು ಹಳಿಗುಂಟ ನಡೆದು ಬಂದು ಆ ಕಲ್ಲುಗಳನ್ನು ಹೊತ್ತುಕೊಂಡು ಮರಳಿ ನಿಲ್ದಾಣೆಗೆ ಒಂದು ಕಾಲೇಜಿಗೆ ಅಲ್ಲಿಂದಲೇ ಫೋನು ಮಾಡಿದರು: 'ನಾಲ್ಕು ಗಂಟೆಗಿದ್ದ ಕ್ಲಾಸನ್ನು ಆರು ಗಂಟೆಗೆ, ತಗೆದುಕೊಳ್ಳುತ್ತೇನೆ; ಕೆಲವು ಕಲ್ಲುಗಳು ಸಿಕ್ಕಿವೆ; ಅವನ್ನು ತರಲು ತಡವಾಯಿತು' ಎಂದು. ಆರುಗಂಟೆಗೆ ತರಗತಿಗೆ ಬಂದ ಆ ಪ್ರೊಫೆಸರ್ ಹರ್ಷಭರಿತರಾಗಿ ಈ ಕಲ್ಲುಗಳನ್ನು ಮೇಜಿನ ಮೇಲಿಟ್ಟು ಎರಡು ತಾಸು ಉಪನ್ಯಾಸ ಮಾಡಿದರಂತೆ. ಅಲ್ಲಿನ ಪ್ರಾಧ್ಯಾಪಕರ ಕಲಿಕೆಯ ಉತ್ಸಾಹಕ್ಕೆ ಇದೊಂದು ನಿದರ್ಶನವಷ್ಟೆ.

ಆಕ್ಸ್‌ಫರ್ಡ್‌ನಲ್ಲಿ ನಡೆದ ಚರ್ಚೆಗಳು, ಸೇರಿದ ಗೋಷ್ಠಿಗಳು, ಕೇಳಿದ ಉಪನ್ಯಾಸಗಳು ಆಂಗ್ಲರ ವಿಚಾರಧಾರೆಯನ್ನು ಅರಿಯಲು ನೆರವಾದರೆ, ಮಿಸೆಸ್ ಟರ್ನರ್‌ಳಂತಹ ಪಾತ್ರಚಿತ್ರಣ ಗಮನಿಸಿದ ಮೇಲೆ ನಮಗೆ ಎಲ್ಲ ಕಾಲದಲ್ಲೂ ಎಲ್ಲ ದೇಶಗಳಲ್ಲೂ ಇಂತಹ ಪಾತ್ರ ಇರತಕ್ಕದ್ದೆ ಎಂಬ ನಿರ್ಣಯಕ್ಕೆ ಬರಲು ಸಹಾಯವಾಗುತ್ತದೆ. ಲೇಖಕರು ವಾಸವಿದ್ದ ಮನೆಯೊಡತಿ ಮಿಸೆಸ್ ಟರ್ನರ್. ತಾಯಿಯ ಅಂತಃಕರಣವುಳ್ಳ ಮುಗ್ಧ ಮನಸ್ಸಿನ ಮಾತಿನಮಲ್ಲಿ, ಈ ಪುಸ್ತಕವನ್ನು ಓದಿ ಮುಗಿಸಿದ ಮೇಲೂ ನಮ್ಮ ನೆನಪಿನಾಳದಲ್ಲಿ ನಿಲ್ಲುತ್ತಾಳೆ. ಆಕ್ಸ್‌ಫರ್ಡ್ ವಿದ್ಯಾರ್ಥಿಯಾದ ಪ್ರೊ॥ ಗೋಕಾಕರು ಆ ವಿಶ್ವವಿದ್ಯಾಲಯವನ್ನು ಬಹಳವಾಗಿ ಮೆಚ್ಚಿಕೊಂಡಿರುವರು. 'ತಕ್ಷಶಿಲಾ ವಿಶ್ವವಿದ್ಯಾಲಯದ ಕಲ್ಪನೆ ಬೇಕಾದರೆ ಆಕ್ಸ್‌ಫರ್ಡನ್ನು ಕಾಣಬೇಕು' (ಪು.೮೫) ಎಂಬ ತುಂಬು ಅಭಿಮಾನ ಲೇಖಕರದು. ಯೂನಿವರ್ಸಿಟಿ ಕಾಲೇಜಿನ

ವಿದ್ಯಾರ್ಥಿಯಾಗಿದ್ದ ಶೆಲ್ಲಿಯು 'The Necessity of Atheism' ಎಂಬ ಪುಸ್ತಕದ ಪ್ರತಿಗಳನ್ನು ಹಂಚಿದ ಕಾರಣಕ್ಕಾಗಿ ಅವನನ್ನು ಕಾಲೇಜಿನ ಅಧಿಕಾರಿಗಳು ಹೊರಹಾಕಿದರು. ಶೆಲ್ಲಿ ವಿಶ್ವವಿಖ್ಯಾತ ಕವಿಯಾಗಿ ಮರಣ ಹೊಂದಿದ ಮೇಲೆ ಅವನ 'ಸ್ಮಾರಕ ಮಂದಿರ'ವನ್ನು ಕಾಲೇಜಿನಲ್ಲಿ ನಿರ್ಮಿಸಲಾಗಿದೆ. ಬಿಳಿಯ ಕಲ್ಲಿನ ಶೆಲ್ಲಿಯ ಪ್ರತಿಮೆಯ ಬಳಿ ಕಾವ್ಯವನಿತೆ(Muse) ಅಳುತ್ತ ಕುಳಿತಿದ್ದಾಳೆ. ಅಲ್ಲಿಯೇ ಇರಿಸಿದ ಪರಿಚಯ ಪತ್ರಿಕೆಯಲ್ಲಿ ಕೀಟ್ಸ್ ಬಗೆಗೆ ಬರೆದ. ಈ ಸಾಲುಗಳನ್ನು ಉದ್ಧರಿಸಲಾಗಿದೆ:

> "He has outsoared the shadow of our night.
> Envy and calomny and hate and pain
> will touch him not."

ಶೆಲ್ಲಿಯ ಆರಾಧಕರಾದ ಪ್ರೊ|| ಗೋಕಾಕರು "ಓರ್ವ ಮಹಾಕವಿಯನ್ನು ಅವಮಾನಗೊಳಿಸಿದ ಕಾಲೇಜು ಇನ್ನಾವ ರೀತಿಯಲ್ಲಿ ತನ್ನ ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಬೇಕು? ಮತ್ತಾವ ರೀತಿಯಲ್ಲಿ ಈ ಕವಿಯನ್ನು ಮನ್ನಿಸಬೇಕು" ಎಂದು ಕೇಳಿರುವರು. ಬೋಡ್ಲೆಯನ್ ಲಾಯಬ್ರರಿಗೆ ಹೋಗುವ ಮಗ್ಗುಲಲ್ಲಿಯೆ ಶೆಲ್ಲಿಯ ಎರಡು ಉತ್ತಮ ಚಿತ್ರ (Portrait) ಗಳನ್ನು ಹಾಕಿರುವರು. ಈ ಚಿತ್ರಗಳು ನನಗೆ ಸ್ಫೂರ್ತಿದಾಯದ ಎಂದು ಹೇಳಿಕೊಳ್ಳುವ ಪ್ರೊ|| ಗೋಕಾಕರು, ಶೆಲ್ಲಿ ಹಾಗೂ ಬೇಂದ್ರೆ ಈ ಇಬ್ಬರು ಕವಿಗಳು ನನ್ನ ಅಂತರಿಕ ಜೀವನವನ್ನು ಮಾಗಿಸಿದರು ಎಂದು ಅಭಿಮಾನದಿಂದ ಹೇಳಿಕೊಂಡಿರುವರು (ಪು.೯೧). ಕೀಟ್ಸ್ ಕವಿಯ ಬಗೆಗಿನ ಲೇಖಕರ ಮನದಾಳದ ಪ್ರೀತಿ ಗೌರವಗಳು ಅವನ ಮನೆ ಹಾಗೂ ವಸ್ತು ಸಂಗ್ರಹಾಲಯಗಳನ್ನು ಸಂದರ್ಶಿಸಿದಾಗ ಮಾತಿನಲ್ಲಿ ತೊಯ್ದು ಬಂದಿವೆ. ಈ ಸಂದರ್ಭದಲ್ಲಿ ಮನದಲ್ಲಿ ಮೂಡಿದ ಭಾವನೆಗಳನ್ನು ಮಾತಿನಲ್ಲಿ ಹೇಳಿಕೊಳ್ಳುವಾಗಿನ ತನ್ಮಯೀ ಭಾವ ನಮ್ಮನ್ನು ಅಚ್ಚರಿಗೊಳಿಸುತ್ತದೆ. ಅವರ ಮನಸ್ಸು ಹೀಗೆ ಅಂದುಕೊಳ್ಳುತ್ತದೆ:

"ಕವಿಯೆ! ನಿನ್ನ ಪ್ರತಿಭೆಯು ನನ್ನ ಅಂತರಂಗವನ್ನೇ ಕಲಕಿದೆ; ಅದು ಅಲ್ಲಿ ಮನೆಮಾಡಿಕೊಳ್ಳಲಿ. ಸ್ವತಂತ್ರ ರಾಷ್ಟ್ರದ ನಿರಂಕುಶ ಕವಿಯು ನೀನು; ನನ್ನ ದೇಶವೂ ಸ್ವತಂತ್ರವಾಗಲಿ, ನೀನು ಕವಿಯಾದರೆ ಸಾಕಿತ್ತು. ನಾನು ಕಾರ್ಯಕರ್ತನೂ ಆಗಬೇಕು, ರಾಷ್ಟ್ರ ನಿರ್ಮಾಣದಲ್ಲಿ ಕಾರ್ಯವನ್ನು ಹೊರಬೇಕು, ನನ್ನ ಸಮಾಜದ ಅಸ್ತಿವಾರವನ್ನು ನಿಲ್ಲಿಸಬೇಕು, ಇವಕ್ಕೆಲ್ಲ ನಿನ್ನ ದೈವವು ಸಾಕಾಗಲಾರದು. ನಿನ್ನ ಪ್ರತಿಭೆಗೆ ನನ್ನ ದೈವವನ್ನು ಜೋಡಿಸುವಂತೆ ದೇವರು ಕರುಣಿಸಲಿ!" (ಪು. ೧೪೦)

ಸ್ಟ್ರಾಟ್‌ಫರ್ಡ್ ಶೇಕ್ಸ್‌ಪಿಯರ್‌ನ ಜನ್ಮಸ್ಥಾನ. ಇದು ಜಗತ್ತಿಗೇ ಪುಣ್ಯಕ್ಷೇತ್ರವಾಗಿದೆ. ಶೇಕ್ಸ್‌ಪಿಯರ್‌ನ ಸಮಾಧಿಯನ್ನು ಕಂಡು ಕೈಮುಗಿದು ಬರುವುದು ತಮ್ಮ ಜೀವನದ

ಮಹದಾಕಾಂಕ್ಷೆಯೆಂದು 'ಶ್ರೀ'ಯವರು ಒಮ್ಮೆ ತಮ್ಮ ಭಾಷಣದಲ್ಲಿ ಹೇಳಿದ್ದರು. ತಮ್ಮ ಮೆಚ್ಚಿನ ನಾಟಕಕಾರ ಶೇಕ್ಸ್‌ಪಿಯರ್‌ನ ನೆನಪು ಹಸಿರಾಗುವಂತೆ ಅಭಿಮಾನಿಗಳು ಅವನು ಹುಟ್ಟಿದ ಮನೆ, ಅವನು ಓದಿದ ಶಾಲೆ, ಕಟ್ಟಿಸಿದ ಮನೆ; ಪತ್ನಿ ಏನ್‌ಹ್ಯಾತಳ ಮನೆ; ಕವಿಯು ಏನ್ನಳೊಡನೆ ಕೂಡಿ ಕುಳಿತ 'ಸೆಟಲ್' ಇಲ್ಲವೆ ಕಟ್ಟಿಗೆಯ ಸಣ್ಣ 'ಕೋಚ್'; ಅವರು ಉರಿಸುತ್ತಿದ್ದಿರಬಹುದಾದ ದೀಪ, ಮಲಗುತ್ತಿದ್ದಿರಬಹುದಾದ 'ರಶ್' ಚಾಪೆ -ಇವೆಲ್ಲವನ್ನು ಅವು ಇರುವ ರೀತಿಯಲ್ಲಿಯೇ ಜತನಮಾಡಿರುವರು. ಕವಿಯು ಇಲ್ಲಿ ಹುಟ್ಟಿದ, ಇಲ್ಲಿ ಓದಿದ, ಈ ವಸ್ತುಗಳನ್ನೇ ಬಳಸಿದ ಎಂದು ಹೇಳುವುದರ ಮೂಲಕ ಸಂದರ್ಶಕರನ್ನು ನಂಬಿಸುತ್ತಿರುವರು. ಅವುಗಳನ್ನು ನೋಡಿದ ತೃಪ್ತಭಾವ ಸಂದರ್ಶಕರಿಗೂ ಉಂಟಾಗುತ್ತಿದೆ. ಅಂಗ್ಲರು ಇತಿಹಾಸಪ್ರಿಯರು ಎಂದು ವ್ಯಂಗ್ಯವಾಗಿ ಹೇಳುವ ಲೇಖಕರು, "ಶೇಕ್ಸ್‌ಪಿಯರ್‌ನು ಕಲಿತಮಾತ್ರಕ್ಕೆ ಈ ಶಾಲೆಯಲ್ಲಿ ಸರಸ್ವತಿಯು ಪ್ರಕಟಳಾದಾಳೆ? ಬೌದ್ಧಮತವನ್ನು ಸ್ವೀಕರಿಸಿ ಎಲ್ಲರೂ ಬುದ್ಧರಾಗಲಿಲ್ಲ. ಶೇಕ್ಸ್‌ಪಿಯರ್‌ನ ತರುವಾಯ ಇಲ್ಲಿ ಕಲಿತವರಲ್ಲಿ ಕೆಲವರು ಅಯ್.ಸಿ.ಎಸ್. ಪಾಸಾಗಿದ್ದಾರೆ; ಪಂಡಿತರಾಗಿದ್ದಾರೆ ಈವರೆಗೆ ಒಬ್ಬನೂ ಕವಿಯಾಗಿಲ್ಲ" ಎಂದು ನಗೆಯಾಡುವರು (ಪು.೨೨೫-೨೨೬).

ಸ್ವತಂತ್ರ ರಾಷ್ಟ್ರದ ಜೀವನವು ಹಲವಾರು ದಿಕ್ಕುಗಳಿಂದ ಲೇಖಕರ ಮೇಲೆ ತಮ್ಮ ಒತ್ತು ಮುದ್ರೆಯನ್ನು ಬೀರಿದೆ. ಈ ಸಮೃದ್ಧವಾದ ಜೀವನಾನುಭವಗಳನ್ನು ದಿನಚರಿಯಲ್ಲಿ ಸ್ಫುಟವಾಗಿ ಮೂಡಿಸಲು ಲೇಖಕರು ಪ್ರಯತ್ನಿಸಿರುವರು. ವೈವಿಧ್ಯಮಯವಾದ ಈ ಜೀವನಾನುಭವಗಳು ಸರಳವಾಗಿವೆ, ಬೋಧಪ್ರದವಾಗಿವೆ. ಇಲ್ಲಿ ಚಿತ್ರಿತವಾಗಿರುವ 'ಮೂಡಣದ ಒಂದು ದೃಷ್ಟಿ, ಪಡುವಣದ ಸಮೃದ್ಧ ಆದರೆ ಸೀಮಿತ ಜೀವನ' ಪ್ರೊ|| ಗೋಕಾಕರ ಸಮತೂಕದ ಅಭ್ಯಾಸದಿಂದಾಗಿ ಬೆಲೆಯುಳ್ಳದ್ದಾಗುತ್ತದೆ.

ಇಂಗ್ಲೆಂಡಿನ ರಾಜಧಾನಿಯಾದ ಲಂಡನ್ನನ್ನೇ ತಮ್ಮ ವಿಷಯದ ಕೇಂದ್ರವಾಗಿಟ್ಟು ಕೊಂಡು ತಮ್ಮ ನಿಡುಗಾಲದ ವಾಸ್ತವ್ಯದಲ್ಲಿ ಅದನ್ನು ಕಂಡ ಬಗೆಯನ್ನು ವಿಶಿಷ್ಟವಾಗಿ ಡಾ|| ಪಿ.ಎಸ್. ಶಂಕರ್‌ರವರು ತಮ್ಮ **ನೆನಪಿನ ಸುಳಿಯಲ್ಲಿ ಲಂಡನ್** ಎಂಬ ಕೃತಿಯಲ್ಲಿ ಬಣ್ಣಿಸಿರುವರು. ಅವರು ತೆರೆದ ಮನಸ್ಸಿನಿಂದ ಯಾವ ಧೋರಣೆಗಳಿಗೂ ಒಳಗಾಗದೆ ತಮ್ಮ ಅನುಭವಕ್ಕೆ ಬಂದ ಸಣ್ಣ ದೊಡ್ಡ ಸಂಗತಿಗಳನ್ನೆಲ್ಲಾ ಪ್ರಸ್ತಾಪಿಸಿರುವರು. ಆ ಜನರೊಡನೆ ಬೆರೆತು ಅವರ ಸಂಸ್ಕೃತಿ ಆಚಾರ-ವಿಚಾರಗಳನ್ನು ಅರಿಯಲು ಸಾಧ್ಯವಾದಷ್ಟು ಪ್ರಯತ್ನ ಮಾಡಿರುವರು. ತಮ್ಮ ವಿಶ್ಲೇಷಣೆಗೆ ಅವರು ಕೊಟ್ಟಿರುವ ಶೀರ್ಷಿಕೆಗಳಿಂದಲೇ ಈ ಪುಸ್ತಕದ ರೂಪರೇಷೆಯನ್ನು ನಾವು ರೂಪಿಸಿಕೊಳ್ಳಬಹುದು. ಅಂದರೆ, ಪರಕೀಯನೊಬ್ಬನ ಕಣ್ಣಿಗೆ ಲಂಡನ್ ಒಳಗಾದಾಗ ಅವನು ಅಲ್ಲಿ ಏನೇನನ್ನು

ಕುತೂಹಲದ ಕಣ್ಣುಗಳಿಂದ ನೋಡಿದನು? ಅವನ ಅನುಭವ ಪ್ರಪಂಚಕ್ಕೆ ಒದಗಿ ಬಂದ ವಿಷಯಗಳಾವುವು? ಸಾಮಾಜಿಕ ಸ್ಥಿತಿ-ಗತಿಯ ಸ್ವರೂಪವೆಂತಹುದು? ಶಿಕ್ಷಣ ಯಾವ ರೀತಿಯದು? ಆರೋಗ್ಯ ರಕ್ಷಣೆಯಲ್ಲಿ ಅವರು ತೋರುವ ಶ್ರದ್ಧೆ ಎಂತಹದು? ಅವರ ಮನರಂಜನೆ ಯಾವ ಮಟ್ಟದ್ದು?- ಈ ಎಲ್ಲ ಸಂಗತಿಗಳನ್ನು ಕ್ರೋಡೀಕರಿಸಿ ಸರಳವಾಗಿ ವಿವರಿಸುವ ಪ್ರಯತ್ನವನ್ನು ಲೇಖಕರು ಮಾಡಿರುವರು. ಜನಜೀವನವನ್ನು ತೀರಾ ಹತ್ತಿರದಿಂದ (ಬಹುಕಾಲದ ವಾಸ್ತವ್ಯದಿಂದ) ಚೆನ್ನಾಗಿ ಅಭ್ಯಸಿಸಿದ ಲೇಖಕರು ಆ ಬದುಕಿನ ನಾನಾ ಮುಖಗಳನ್ನು ಅದು ಇರುವಂತೆಯೇ ಪರಿಚಯ ಮಾಡಿಕೊಟ್ಟಿರುವರು. ಆ ಜೀವನವಿಧಾನದಲ್ಲಿನ ಒಳಿತು- ಕೆಡುಕುಗಳನ್ನು ಭಾರತೀಯ ಪರಿಸರದೊಡನೆ ತುಲನೆ ಮಾಡುತ್ತಾ ಪ್ರಾಮಾಣಿಕವಾಗಿ ಮುಚ್ಚುಮರೆಯಿಲ್ಲದೆ ತಮ್ಮ ಅನಿಸಿಕೆಗಳನ್ನು ಲೇಖಕರು ತಿಳಿಸಿರುವರು. ವಿವರಣೆಗಳಲ್ಲಿ ಅತಿತನ ಇಲ್ಲದೆ, ಅತಿಶಯೋಕ್ತಿ ಬಳಸದೆ ತಮ್ಮ ಅನುಭವಗಳನ್ನು, ಅನಿಸಿಕೆಗಳನ್ನು ಕೊಟ್ಟಿರುವುದು ಲೇಖಕರ ಪ್ರಾಮಾಣಿಕ ಬರಹಕ್ಕೆ ಸಾಕ್ಷಿಯಾಗಿದೆ.

**ಇಟಲಿ:**

ಇಟಲಿಯ ಇಸ್ವೇ ಅಧ್ಯಯನ ಸಂಸ್ಥೆಯಲ್ಲಿ ಆರುತಿಂಗಳು ಅಧ್ಯಯನ ನಡೆಸಲು ಹೋದ ಕು.ಶಿ. ಹರಿದಾಸಭಟ್ಟರ ಪ್ರವಾಸಾನುಭವ ಕಥನ- **ಇತಾಲಿಯ ನಾನು ಕಂಡಂತೆ.** ಲೇಖಕರೇ ಹೇಳಿಕೊಂಡಿರುವಂತೆ "ಇತಾಲಿಯದ ಆರ್ಥಿಕ ಅಧ್ಯಯನ ಸಂಸ್ಥೆಯಲ್ಲಿ ಅಭಿವೃದ್ಧಿಯ ಮೂಲ ಸೂತ್ರಗಳ ಚಿಂತನೆ-ಚರ್ಚೆ, ಪ್ರತ್ಯಕ್ಷ ನಿದರ್ಶನ, ಕ್ಷೇತ್ರಪರ್ಯಟನೆ, ಇತಾಲಿಯಾ ತೆಂಕ ಮತ್ತು ಬಡಗದ ಮನರಂಜಕ ಪ್ರವಾಸ ಇಷ್ಟನ್ನೊಳಗೊಂಡ ಒಂದು ಅವಿಸ್ಮರಣೀಯ ಅದ್ವಿತೀಯ ಅಧ್ಯಯನಪರ್ವದ ಕಥೆ" ಇಲ್ಲಿ ಬಿತ್ತರಿಸಲಾಗಿದೆ. ಇತಾಲಿಯಾದ ಕ್ಷಿಪ್ರಗತಿಯ ಅಭಿವೃದ್ಧಿಯನ್ನು ಅಂಕಿ-ಸಂಖ್ಯೆಗಳ ಆಧಾರದಿಂದ ಗುರುತಿಸಿ, ನಮ್ಮ ಎರಡು ಪಂಚವಾರ್ಷಿಕ ಯೋಜನೆಗಳಿಂದ ಸಾಧಿಸಲಾಗದ್ದನ್ನು ಇತಾಲಿಯಾ ೧೨ ವರ್ಷಗಳಲ್ಲಿ ಸಾಧಿಸಿರುವುದನ್ನು ಲೇಖಕರು ಪ್ರಸ್ತಾಪಿಸಿರುವರು. ಈ ಪ್ರಗತಿಗೆ ಎಷ್ಟರಮಟ್ಟಿಗೆ ಬೌದ್ಧಿಕ ಆಧಾರಗಳು ನೆರವಿತ್ತಿವೆ ಎಂಬುದನ್ನು ವಿಶದವಾಗಿ ತಿಳಿಯಪಡಿಸಿರುವರು (ಪು. ೧೩೧).

ಇತಾಲಿಯನ್ ಕುಟುಂಬವೊಂದರಲ್ಲಿ ತೀರ ಆತ್ಮೀಯವಾಗಿ ಬೆರೆತು, ಅಲ್ಲಿನ ಗೃಹಸ್ಥಜೀವನದ ನಿಕಟ ಅನುಭವವನ್ನು ಲೇಖಕರು ಚೆನ್ನಾಗಿ ತಮ್ಮ ಲೇಖನಿಯಲ್ಲಿ ಮೂಡಿಸಿರುವರು. ಆ ಕುಟುಂಬದ ಮುಖ್ಯಸ್ಥ ಅಪಾನನ್ನು ತುಂಬಿದ ಮನದಿಂದ ನೆನೆಯುತ್ತಾ ಲೇಖಕರು "ಆರು ತಿಂಗಳ ಕಾಲ ಸತತವಾಗಿ ಸ್ನೇಹ ವರ್ಷವನ್ನು ಕರೆದು ಈ ದೂರ ದೇಶದಲ್ಲಿಯೂ ನಾನು ಏಕಾಂಗಿಯಲ್ಲವೆಂಬ ಭಾವನೆಯನ್ನು ಮೂಡಿಸಿ ನನ್ನ ಹೃದಯದಲ್ಲಿ ಪ್ರೀತಿ ವಿಶ್ವಾಸಗಳನ್ನು ತುಂಬಿಸಿದ ಅಪಾ ಮರೆಯಲಾಗದ ಮಹಾ ಜೀವ" ಎಂದಿರುವರು (ಪು. ೧೦೦).

ಇತಾಲಿಯಾದ ಇಸ್ಟೇ ಅಧ್ಯಯನ ಸಂಸ್ಥೆಯವರು ಒಳ್ಳೆಯ ನಡೆತೆಗೆಂದು ಮೆಚ್ಚಿ ಕೊಡುವ ಬಹುಮಾನ-ಅಮೇರಿಕಾದ ೧೮ ದಿವಸಗಳ ಸೌಲಭ್ಯಕ್ಕೆ-ಪಾತ್ರರಾದ ಲೇಖಕರು ತಮ್ಮ ಅಮೇರಿಕದ ಅನುಭವವನ್ನು ತೀರಾ ಚುಟುಕಾಗಿ ಪುಸ್ತಕದ ಕೊನೆಯಲ್ಲಿ ಹೇಳಿರುವರು.

ಇತಾಲಿಯಾ ಸಂದರ್ಶಿಸಿ ಎಂಟು ವರ್ಷ ಕಳೆದ ಮೇಲೆ ಡೈರಿಯ ಚುಟುಕು ಚೂರುಗಳ ಆಧಾರದ ಮೇಲೆ ನೆನಪಿನಲ್ಲುಳಿದಷ್ಟು ವಿಷಯಗಳನ್ನು ಈ ಪ್ರವಾಸ ಕಥನದಲ್ಲಿ ಮೆಲುಕು ಹಾಕಿರುವ ಲೇಖಕರ ಪ್ರಯತ್ನ ಮೆಚ್ಚುವಂತಹುದು. ಪುಸ್ತಕ ಮುದ್ರಣ ವಿನ್ಯಾಸ ಸೊಗಸಾಗಿದ್ದು ಅದನ್ನು ನೋಡುತ್ತಿದ್ದಂತೆಯೇ ಓದಬೇಕೆಂಬ ಕುತೂಹಲ ನಮ್ಮಲ್ಲಿ ಮೂಡುತ್ತದೆ.

ಎಚ್.ವಿ. ಶ್ರೀರಂಗರಾಜು ಅವರು ನಮ್ಮ ನಾಡಿನ ಖ್ಯಾತ ಶಿಕ್ಷಣವೇತ್ತರು. ಇಂಗ್ಲೆಂಡಿನಲ್ಲಿ ಅವರು ತಮ್ಮ ಮಡದಿ ಮತ್ತು ಕೊನೆಯ ಮಗಳೊಡನೆ ಪ್ರವಾಸ ಕೈಗೊಂಡದ್ದು ವೇಲ್ಸ್‌ನ ಕುಂಬ್ರಾನ್ ಪಟ್ಟಣದಲ್ಲಿ ನೆಲಸಿರುವ ಅಳಿಯ-ಮಗಳು ಮತ್ತು ಮೊಮ್ಮಗಳನ್ನು ನೋಡುವ ಸಲುವಾಗಿ, ಅವರ ಜೊತೆ ಸಂತೋಷದಿಂದ, ಕೆಲವು ಕಾಲ ಕಳೆಯುವ ಸಲುವಾಗಿ. ಅವರ ಪ್ರವಾಸ ಕಥೆ **ವೇಲ್ಸ್ ದಿನಚರಿ**ಯು ಪ್ರಧಾನವಾಗಿ ಇಂಗ್ಲೆಂಡಿನ ಸುತ್ತಮುತ್ತ ಇರುವ ಪ್ರೇಕ್ಷಣೀಯ ಸ್ಥಳಗಳ ಪರಿಚಯ ಮಾಡಿಕೊಡುತ್ತದೆ. ಪುಸ್ತಕದ ಕೊನೆಯ ಕೆಲವು ಪುಟಗಳು ಪ್ಯಾರಿಸ್ ಜಿನೀವಾಗಳ ಪರಿಚಯವನ್ನು ಚುಟುಕಾಗಿ ಮಾಡಿಕೊಡುತ್ತದೆ. ಶ್ರೀರಂಗರಾಜುರವರ ಈ ಪ್ರವಾಸಿ ಕಥನ ಕೇವಲ ಪ್ರವಾಸಿ ವರದಿಯಾಗದೆ ಮೌಲ್ಯನಿಷ್ಠ ಚೇತನವೊಂದರ ವಿಶಿಷ್ಟ ಚಿಂತನಾಂಶಗಳ ಅಮೂಲ್ಯ ದಾಖಲೆಯಾಗಿದೆ. ಇಲ್ಲಿ ಮುಕ್ತಮನಸ್ಸಿನ ವಿಚಾರಧಾರೆಗಳಿವೆ. ಅವರ ಮನಸ್ಸು ಇಂಗ್ಲೆಂಡಿನೊಂದಿಗೆ ಭಾರತ ಹಾಗೂ ರಷ್ಯಗಳನ್ನು ತುಲನೆ ಮಾಡುತ್ತದೆ. ತಮ್ಮ ಸುತ್ತಾಟದ ಅವಧಿಯಲ್ಲಿ ಕಂಡ ಒಳಿತನ್ನೂ ಕೆಡುಕನ್ನೂ ತುಲನಾತ್ಮಕವಾಗಿ ಅವರು ನಿರೂಪಿಸಿರುವರು. ಅವರೇ ಹೇಳಿರುವಂತೆ "ನನ್ನಂಥ ಪ್ರವಾಸಿಗ ಯಾವ ಒಂದು ಪೂರ್ಣ ವಿಶ್ವಾಸವೂ ಇಲ್ಲದೆ ಅಲ್ಲಲ್ಲಿ ತಿರುಗಾಡಿದಾಗ ಅದನ್ನೂ ಇದನ್ನೂ ಪ್ರಾಸಂಗಿಕವಾಗಿ ನೋಡಿದಾಗ ಚೆಲುವನ್ನೂ ಕಾಣುತ್ತಾನೆ ಅಲ್ಲದೆ ಕೊಳೆಯನ್ನೂ ಕಾಣುತ್ತಾನೆ. ಇಂಥ ನೋಟಗಳು ಜನರ ಜೀವನವನ್ನು ನೋಡಬಲ್ಲ ಕಿಂಡಿಗಳಾಗುತ್ತವೆ. ಆ ದೇಶದ ಜನರ ಆಕಾಂಕ್ಷೆ, ಅಭಿರುಚಿ, ಸಾಧನೆ, ಕೊರತೆ, ದೌರ್ಬಲ್ಯ ಮುಂತಾದವುಗಳ ಒಂದು ಸ್ಥೂಲದರ್ಶನ ಮಾಡಿಕೊಡುತ್ತವೆ ಈ 'ಕಿಂಡಿ' ನೋಟಗಳು (ಪು.೧೧೬-೧೧೭) ಬ್ರಿಟನ್, ಫ್ರಾನ್ಸ್, ಜರ್ಮನಿ ದೇಶಗಳ ರಾಯಭಾರಿ ಕಛೇರಿಗಳಲ್ಲಿ ಭಾರತೀಯರಿಗೆ ಹಾಗೂ ಇತರ ವರ್ಣೀಯರಿಗೆ ವೀಸಾ ಕೊಡಲು ಎತ್ತುವ ತಕರಾರುಗಳು, ಪಡೆಯಲು ಹೊರಟಾಗಿನ ಕಹಿ ಅನುಭವಗಳು ಈ ಕೃತಿಯ ಪ್ರಾರಂಭದಲ್ಲಿ ವರ್ಣಿತವಾಗಿದೆ.

'ಸೂರ್ಯ ಎಂದೂ ಮುಳುಗದ ಬ್ರಿಟಿಷ್ ಸಾಮ್ರಾಜ್ಯ' ಎಂಬ ಹೆಗ್ಗಳಿಕೆ ಈಗ ಸುಳ್ಳಾಗುತ್ತಿರುವುದನ್ನು ಲೇಖಕರು ತಮ್ಮ ಸುತ್ತಾಟದಲ್ಲಿ, ಕಂಡು ಈಗ ಬ್ರಿಟಿಷ್ ಸಾಮ್ರಾಜ್ಯದ ಮೇಲೆ ಸೂರ್ಯ ಅಸ್ತಮಿಸಿ ಬ್ರಿಟನ್ನು ವಿಶ್ವದ ರಾಷ್ಟ್ರಗಳಲ್ಲಿ ಸಾಧಾರಣ ರಾಷ್ಟ್ರವಾಗಿದೆ ಎಂಬ ಉದ್ಗಾರ ತೆಗೆದಿರುವರು. ಲಂಡನ್ನಿನಲ್ಲಿ ಭಾರತೀಯರು ಅನುಭವಿಸುತ್ತಿರುವ ನೋವು, ಅವಮಾನ ಗ್ರಂಥದ ಹಲವಡೆ ಪ್ರಸ್ತಾಪಿತವಾಗಿದೆ (ಪು.೫೮-೬೨). ತುಂಬು ಗರ್ಭಿಣಿಯೋರ್ವರು ಬಸ್ಸಿನಿಂದ ಇಳಿಯುತ್ತಿದ್ದಾಗ ಓರ್ವ ತುಂಡಾಡಿ ಹುಡುಗ ಬಲವಾಗಿ ಆಕೆಯ ಹೊಟ್ಟೆಯ ಮೇಲೆ ಪೆಟ್ಟು ಕೊಟ್ಟ. ಬಸ್ಸಿನಲ್ಲಿದ್ದವರಾಗಲೀ ಹೊರಗಿನವರಾಗಲೀ ಹುಡುಗನನ್ನು ಗದರಿಸಲೇ ಇಲ್ಲ. ಅವನು ಕ್ರೂರವಾಗಿ ನಗುತ್ತಿದ್ದನಂತೆ (ಪು.೬೦-೬೧). ಲಂಡನ್ನಿನಲ್ಲಿರುವ ಅನೇಕ ಭಾರತೀಯರು ನಿತ್ಯವೂ ಎದುರಿಸುತ್ತಿರುವ ಪರಿಸ್ಥಿತಿಯಿದು.

ಬ್ರಿಟನ್ನಿನ ಇಂದಿನ ಶಿಕ್ಷಣ ಪದ್ಧತಿಯ ಬಗೆಗೆ ಸುದೀರ್ಘವಾದ ವಿವರಣೆ ಪುಸ್ತಕದಲ್ಲಿ ಬಂದಿದ್ದು, ಆ ಬಗೆಗೆ ಸಂಬಂಧಪಟ್ಟ ಶಿಕ್ಷಣಾಧಿಕಾರಿಗಳ ಜೊತೆ ಚರ್ಚಿಸಿ ಅಧಿಕೃತವಾದ ತಿಳುವಳಿಕೆಯನ್ನು ಲೇಖಕರು ನೀಡಿರುವರು. ಅಲ್ಲಿನ ಪಬ್ಲಿಕ್ ಸ್ಕೂಲುಗಳು ಮತ್ತು ಇತರ ಖಾಸಗೀ ಶಾಲೆಗಳ ಬಗೆಗೆ ಇಡೀ ರಾಷ್ಟ್ರದಲ್ಲಿ ವಿಚಾರ ಮಂಥನ ನಡೆದಿರುವುದನ್ನು ಲೇಖಕರು ಪ್ರಸ್ತಾಪಿಸಿರುವರು. ಅಲ್ಲಿ ಸಾಕಷ್ಟು ವಿವಾದವಿರುವುದು ಪಬ್ಲಿಕ್ ಸ್ಕೂಲು ಹಾಗೂ ಖಾಸಗೀ ಶಾಲೆಗಳ ಬಗೆಗೆ. ಈ ಎರಡೂ ಬಗೆಯ ಶಾಲೆಗಳಿಗೆ ಭೇಟಿ ನೀಡುವ ಮೂಲಕ ಅಲ್ಲಿ ಎದ್ದಿರುವ ವಿವಾದದ ಬಗೆಗೆ ಸಮರ್ಪಕವಾದ ಮಾಹಿತಿ ಪಡೆಯಲು ಲೇಖಕರಿಗೆ ಸಾಧ್ಯವಾಗಿದೆ. ಆಕ್ಸ್‌ಫರ್ಡ್ ಕೇಂಬ್ರಿಡ್ಜ್‌ಗಳಲ್ಲಿ ಉಚ್ಚಶಿಕ್ಷಣ ಹೇಗೆ ನೀಡಲಾಗುತ್ತಿದೆ ಎಂಬುದರ ಬಗೆಗಿನ ವಿವರಣೆಯನ್ನು ಸಮರ್ಪಕವಾಗಿ ಹೇಳಿರುವರು. ಆಕ್ಸ್‌ಫರ್ಡ್‌ನಿಂದ ಹಿಂದಿರುಗುವಾಗ ಮಧ್ಯವಯಸ್ಸಿನ ಸೆರೆಕುಡುಕರ ಕೈಗೆ ಸಿಕ್ಕಿಬಿದ್ದ ಪ್ರಸಂಗ (ಪು. ೧೦೫-೧೦೭) ಆ ದೇಶದ ಇನ್ನೊಂದು ಮುಖದ ಪರಿಚಯ ಮಾಡಿಕೊಡುತ್ತದೆ. ಟ್ರಿನಿಟಿ ಕಾಲೇಜಿನಲ್ಲಿ ನ್ಯೂಟನ್ನಿನ ಪ್ರತಿಮೆಯನ್ನು ನೋಡಲೆಂದು ಲೇಖಕರು ಉತ್ಸಾಹದಿಂದ ಹೋದಾಗ ನ್ಯೂಟನ್ ಯಾರು ಎಂದು ಅಲ್ಲಿನ ಜನ ಪ್ರಶ್ನಿಸಿದರಂತೆ. ಆಗ ಲೇಖಕರು ಕಕ್ಕಾಬಿಕ್ಕಿಯಾದರು. ತಮ್ಮ ಪೌಂಡ್ ನೋಟಿನ ಮೇಲೆ ನ್ಯೂಟನ್ನನ ಚಿತ್ರವಿದ್ದರೂ ಅವನ ವಿಷಯ ತಿಳಿದುಕೊಳ್ಳುವ ಕುತೂಹಲವಿಲ್ಲವಲ್ಲಾ ಎನ್ನುವ ವ್ಯಥೆ ಒಂದು ರೀತಿಯದಾದರೆ, ಮಹಾಕವಿ-ನಾಟಕಕಾರ ಷೇಕ್ಸ್‌ಪಿಯರ್‌ನಿಗೆ ಲಂಡನ್ನಿನ ಜನ ಕೊಡುವ ಮಾರ್ಯಾದೆ ನೋಡಿ ನಮ್ಮ ಜನ ನಮ್ಮ ಮಹಾಕವಿಗಳ ಬಗೆಗೆ ತೋರುವ ಅನಾದರ ನೆನೆದು ಮತ್ತೊಂದು ರೀತಿಯ ವ್ಯಥೆ ಲೇಖಕರಿಗೆ. ಲಂಡನ್ನಿನ ಸುತ್ತಾಟದಲ್ಲಿ ಅವರಿಗೆ ಥೇಮ್ಸ್ ನದಿಗಿಂತ ಕಾವೇರಿ ಎಷ್ಟೋ ಚೆಲುವಾಗಿದೆ ಎನ್ನಿಸಿದೆ (ಪು.೩೪). ಬಕಿಂಗ್‌ಹ್ಯಾಮ್ ಅರಮನೆಗಿಂತ ನಮ್ಮ

ಮೈಸೂರು ಅರಮನೆಯ ಚೆಲುವು ಹೆಚ್ಚಿನದಾಗಿ ತೋರುತ್ತದೆ (ಪು.೩೬). ಸ್ವಿಟ್ಜರ್ಲೆಂಡ್‌ಗಿಂತ ಸಹ್ಯಾದ್ರಿಯ ಚೆಲುವು ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲ ಎನಿಸಿದೆ (ಪು. ೧೬೯). ಹೀಗೆ ಶ್ರೀರಂಗರಾಜುರವರ ಭಾವುಕ ಮನ ತಾಯ್ನಾಡಿನ ಬಗೆಗೆ ಅಭಿಮಾನ ತಾಳುತ್ತದೆ.

ಟುಸಾಡಳ ಮ್ಯೂಸಿಯಂನಲ್ಲಿ ಇಂದಿರಾಗಾಂಧಿಯವರ ಪ್ರತಿಮೆಯನ್ನು ಬಿಟ್ಟು ಬೇರಾವ ಭಾರತೀಯನ ಆಕೃತಿಯೂ ಇಲ್ಲದಿರುವುದನ್ನು ಕಂಡು ಲೇಖಕರ ಮನ ಮುದುಡಿದೆ. ಬೇರೆಲ್ಲ ರಾಷ್ಟ್ರನಾಯಕರ ಪ್ರತಿಮೆಗಳ ಮುಂದೆ ಸಾಕಷ್ಟು ಜನರಿದ್ದರೆ, ಇಂದಿರಾಗಾಂಧಿಯವರ ಪ್ರತಿಮೆಯ ಮುಂದೆ ಒಬ್ಬರೂ ಇರದಿದ್ದುದನ್ನು ಕಂಡು ಲೇಖಕರ ಹೆಮ್ಮೆಗೆ ಕುಟುಕಿದಂತಾಯಿತು (ಪು.೪೫).

ವೇಲ್ಸ್ ಮ್ಯೂಸಿಯಂನಲ್ಲಿ ರಾಬರ್ಟ್ ಕ್ಲೈವನಿಗಾಗಿ ಓರ್ವ ಕಲಾವಿದ ಮಾಡಿದ ಸುಂದರವಾದ ಬೆಳ್ಳಿಯ ಪಾತ್ರೆಯನ್ನು ಲೇಖಕರು ನೋಡಿ ನಮ್ಮ ಅಕ್ಕಸಾಲಿಗನ ಕಲಾಪ್ರೌಢಿಮೆಯ ಬಗೆಗೆ ಅಭಿಮಾನ ತಾಳಿದರು. ಭೋಜನಕೂಟದ ಆ ಬೆಳ್ಳಿಯ ಪಾತ್ರೆಯನ್ನು ಮಾಡಿಸಲು ಕ್ಲೈವ್ ಎಷ್ಟು ಜನ ಶ್ರೀಮಂತರಲ್ಲಿದ್ದ ಬೆಳ್ಳಿ ದೋಚಿಕೊಂಡನೋ; ಎಷ್ಟು ಜನ ಅಕ್ಕಸಾಲಿಗರು ಅರೆಹೊಟ್ಟೆ ಉಂಡು ದಿನವಿಡೀ ಕೆಲಸ ಮಾಡಿದರೋ ಎಂದು ಯೋಚಿಸಿರುವರು (ಪು. ೧೧೮).

ಕಾರ್ಡಿಫ್ ಸಂತೆಯ ವ್ಯಾಪಾರಿಗಳು ಭಾರತೀಯರು. ಲೇಖಕರು ಅವರಲ್ಲಿ ಕೊಳಕುತನ, ಅಪ್ರಾಮಾಣಿಕತೆ ಕಾಣುವರು. ಇವನ್ನು ನೀಗಿಕೊಂಡು ಇಲ್ಲಿ ಮಾಡುವಂತೆ ನಮ್ಮ ಊರಿನಲ್ಲಿಯೂ ಕಷ್ಟಪಟ್ಟು ಕೆಲಸ ಮಾಡಿದರೆ ನಮ್ಮ ದೇಶ ಚಿನ್ನದ ದೇಶವಾಗುವುದಿಲ್ಲವೆ ಎಂದು ವಿಚಾರ ಮಾಡಿರುವರು (ಪು. ೧೨೦). ತಮ್ಮ ಬಿಡುವಿನ ವೇಳೆಯನ್ನು ಸಾಹಸಪ್ರವೃತ್ತಿ ಹಾಗೂ ಮನೋರಂಜನೆಗೆ ಹೇಗೆ ಉಪಯೋಗಿಸಿಕೊಳ್ಳಬಹುದೆಂಬುದನ್ನು ಬ್ರಿಟಿಷರು ಬಲ್ಲರು. ಆ ಕಲೆ ನಮ್ಮವರಿಗೆ ತಿಳಿದಿಲ್ಲವಲ್ಲಾ ಎನ್ನುವ ನೋವು ಲೇಖಕರಿಗೆ ಉಂಟಾಗಿದೆ (ಪು. ೧೨೩-೧೨೫). ಬಿಹಾರಿನ ಬಾಗಾಮತಿ ದುರಂತದಲ್ಲಿ ಸತ್ತವರ ಸಂಖ್ಯೆ ೮೦೦೦ ಎಂದು ಬಿಬಿಸಿ ಸುಳ್ಳು ವರದಿ ನೀಡಿದಾಗ ಅದನ್ನು ಅಲ್ಲಗಳೆದು ಸರಿಯಾದ ಮಾಹಿತಿಯನ್ನು ಇಂಗ್ಲಿಷ್ ಜನಕ್ಕೆ ಬ್ರಿಟನ್ನಿನ ಭಾರತದ ಹೈಕಮಿಷನ್ ತಿಳಿಸಬಹುದಿತ್ತು. ಆ ಕರ್ತವ್ಯ ಚ್ಯುತಿಯನ್ನು ಕಂಡು "ಬ್ರಿಟನ್ನಿನಲ್ಲಿ ಹಾಯಾಗಿರುವುದಕ್ಕೆ ನಮ್ಮ ಹೈಕಮಿಷನ್ ಜನ ಇಲ್ಲಿಗೆ ಬರುತ್ತಾರೆ" ಎಂದು ಲೇಖಕರು ವ್ಯಂಗ್ಯವಾಡಿರುವರು (ಪು. ೧೨೮).

ಈ ಪ್ರವಾಸ ಕಥನ ಉದ್ದಕ್ಕೂ ತನ್ನ ಆಸಕ್ತಿಯನ್ನು ಉಳಿಸಿಕೊಂಡು ಓದಿಸಿಕೊಂಡು ಹೋಗುತ್ತದೆ. ಅಷ್ಟೇ ಅಲ್ಲದೆ, ಇದು ನಮ್ಮ ಜ್ಞಾನದ ಪರಿಧಿಯನು ವಿಸ್ತರಿಸುವುದರಿಂದ ಬೋಧಪ್ರದವೂ ಆಗಿದೆ.

## ಬ್ರಝಿಲ್

ಡಾ. ಸಿ. ನಾಗಭೂಷಣರವರು ವಿಜ್ಞಾನದ ಪ್ರಾಧ್ಯಾಪಕರು. 'ರೇಡಿಯೋ ಹವ್ಯಾಸಿ - ಹ್ಯಾಮ್' ಎನ್ನುವ ಪ್ರಚಾರೋಪನ್ಯಾಸಮಾಲೆಯ ಪುಸ್ತಕವನ್ನು ನಾನು ಹಿಂದೆ ಓದಿದ್ದೆ. ಆಗ ವಿಜ್ಞಾನ ವಿಷಯವನ್ನು ಕನ್ನಡದಲ್ಲಿ ಎಷ್ಟು ಸೊಗಸಾಗಿ ಹೇಳಿದ್ದಾರೆ ಎಂಬ ಮೆಚ್ಚುಗೆ ನನ್ನಲ್ಲಿ ಮೂಡಿದ್ದಿತು. ರೋಟರಿಯ ಜಿ.ಎಸ್.ಇ. ಟೀಮಿನ ಸದಸ್ಯರಾಗಿ ಬ್ರೆಜಿಲ್ ದೇಶದ ಪ್ರವಾಸ ಕೈಗೊಂಡ ಅವರು **ನಾ ಕಂಡ ಬ್ರಝಿಲ್** ಎಂಬ ಪ್ರವಾಸ ಕಥನ ಬರೆದಿರುವರು. ಪ್ರವಾಸದ ಅವಧಿಯಲ್ಲಿ ದಿನಚರಿಯ ರೂಪದಲ್ಲಿ ಆಯಾ ದಿನದ ಅನುಭವಗಳ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ಸವಿವರವಾಗಿ ಬರೆದಿದ್ದ ಲೇಖಕರು ಅವುಗಳ ಆಧಾರದ ಮೇಲೆ ಈ ಪ್ರವಾಸ ಕಥನ ರಚಿಸಿರುವರು. ಮೊದಲ ಇಪ್ಪತ್ತೆರಡು ಪುಟ ಪೀಠಿಕಾರೂಪದಲ್ಲಿ ಫ್ರಾಂಕ್‌ಫರ್ಟ್ ತಲುಪುವವರೆಗಿನ ವಿವರಗಳು ಅನವಶ್ಯಕವಾಗಿ ಲಂಬಿಸುತ್ತವೆ. ಲೇಖಕರು ಫ್ರಾಂಕ್‌ಫರ್ಟ್‌ನಲ್ಲಿ ಐದು ದಿವಸ ವ್ಯವಹಾರಕ್ಕಾಗಿ ಪೋರ್ಚುಗೀಸ್ ಭಾಷೆ ಕಲಿತರು. ಕೆಲವು ಪೋರ್ಚುಗೀಸ್ ಪದಗಳು ಕನ್ನಡ ಪದಗಳನ್ನು ಹೋಲುತ್ತಿದ್ದು ಅದೇ ಅರ್ಥ ಕೊಡುವುದನ್ನು ಅವರು ಗಮನಿಸುವರು. ಉದಾಹರಣೆಗೆ ಆಮೇಲೆ-ಆಮೆಲೊ; ತಾಯಿ-ಅಮಾಯಿ; ಚಹಾ-ಚಾ ಇತ್ಯಾದಿ. ಫ್ರಾಂಕ್‌ಫರ್ಟ್ ಹಾಗೂ ಹೈಡಲ್‌ಬರ್ಗ್ ನಗರ ಹಾಗೂ ಅವುಗಳ ಕೊಡುಗೆಯ ಪ್ರಸ್ತಾಪ ಪ್ರವಾಸ ಕಥನದಲ್ಲಿ ಚೆನ್ನಾಗಿ ಬಂದಿದೆ.

ದಕ್ಷಿಣ ಅಮೆರಿಕಾ ಖಂಡದ ಸುಮಾರು ಅರ್ಧದಷ್ಟನ್ನು ಆವರಿಸಿರುವ ಬ್ರಝಿಲ್ ದೇಶ ನಮ್ಮ ಭಾರತಕ್ಕಿಂತ ಎರಡೂವರೆ ಪಟ್ಟು ದೊಡ್ಡದು. ಈ ಖಂಡದ ಹೆಬ್ಬಾಗಿಲೇ ಬ್ರಝಿಲ್. ಬ್ರಝಿಲ್‌ನ ಭೌಗೋಳಿಕ ಸ್ವರೂಪವನ್ನು ಲೇಖಕರು ಕೊಟ್ಟಿರುವರು (ಪು. ೩೮-೪೦). ಸಾಲ್ವಡೋರ್ ದೇಶದ ಅತ್ಯಂತ ಪುರಾತನ ನಗರ. ಇಲ್ಲಿ ೩೬೫ ಚರ್ಚ್‌ಗಳಿವೆ. ಸರತಿಯಂತೆ ವರ್ಷದ ಒಂದೊಂದು ದಿನ ಸಾರ್ವಜನಿಕರ ಭೇಟಿಗಾಗಿ ತೆರೆಯುವರು. ಲೇಖಕರು ಭೇಟಿಕೊಟ್ಟ ಕಾರ್ಲೊ ಕೊಸ್ಟಾ ಪಿಂಟೊ ಮ್ಯೂಸಿಯಮ್ ಹೈದರಾಬಾದಿನ ಸಾಲಾರ್‌ಜಂಗ್ ಮ್ಯೂಜಿಯಮ್‌ನ್ನು ನೆನಪಿಸುತ್ತದೆ ಎನ್ನುವರು (ಪು. ೫೪). ಚಿನ್ನ, ತಾಮ್ರ, ಜಿಂಕ್, ಮ್ಯಾಂಗನೀಸ್, ವಜ್ರ, ಬೆಲೆಬಾಳುವ ಹರಳುಗಳು ಮುಂತಾದ ವಸ್ತುಗಳ ಉತ್ಪಾದನೆಯಲ್ಲಿ ಬ್ರಝಿಲ್ ಜಗತ್ತಿನಲ್ಲಿಯೇ ಪ್ರಮುಖ ಸ್ಥಾನ ಪಡೆದಿದ್ದು, ಅಲ್ಲಿನ ಗಣಿಗಳಿಗೆ ಭೇಟಿಕೊಟ್ಟ ವಿವರಗಳು ಪ್ರವಾಸ ಕಥನದ ಹೆಚ್ಚು ಭಾಗವನ್ನು ಆವರಿಸಿದೆ. ಬ್ರಝಿಲ್‌ನಲ್ಲಿ ಹಣದುಬ್ಬರ ಆರ್ಥಿಕ ಜೀವನದ ಮೇಲೆ ಪರಿಣಾಮ ಬೀರಿದ್ದು ಅಲ್ಲಿನ ರಿಸರ್ವ್ ಬ್ಯಾಂಕ್ ಹಣದುಬ್ಬರ ತಡೆಯಲು ತನ್ನ ಕರೆನ್ಸಿಯ ರಾಶಿಗೆ ಬೆಂಕಿ ಇಕ್ಕಿತಂತೆ' (ಪು. ೬೦).

"ಬ್ರಝಿಲ್ ದೇಶದ ಬೇರೆ ಬೇರೆ ರಾಜ್ಯಗಳಿಗೆ ರೋಟರಿ ಸಾಂಸ್ಕೃತಿಕ ರಾಯಭಾರಿಗಳಾಗಿ ಭೇಟಿ ನೀಡಿದ ಸದಸ್ಯರು ಆಯಾ ದೇಶಗಳಲ್ಲಿ ಸ್ವೀಕರಿಸಿದ ಆತಿಥ್ಯದ ವಿವರಗಳು ಇಲ್ಲಿನ ಪುಟ ತುಂಬಿವೆ. "ಬ್ರಝಿಲ್‌ಗೆ ಭೇಟಿಯಿತ್ತ ಎಲ್ಲರಿಗೂ ಇಲ್ಲಿನ ಪೋರ್ಚುಗೀಸ್ ಭಾಷೆ, ಸಂಸ್ಕೃತಿ, ಹಬ್ಬಗಳು, ಆಚರಣೆ ಬಗ್ಗೆ ಅಳಿಸಲಾರದ ಛಾಪು ಮೂಡದೇ ಇರಲಾರದು. ಗೋವಾ ರಾಜ್ಯದಲ್ಲಿ ಇಂತಹ ಕುರುಹು ಇನ್ನೂ ಉಳಿದುಕೊಂಡಿದೆ. ಈ ವರ್ಚಸ್ಸು ಭಾರತದಲ್ಲಿ ಹಬ್ಬಲು ಬ್ರಿಟಿಷರು ತಡೆಯದೇ ಇದ್ದಿದ್ದರೆ, ಬಹುಶಃ ನಮ್ಮ ದೇಶದ ತುಂಬೆಲ್ಲಾ ಪೋರ್ಚುಗೀಜ್ ಸಂಸ್ಕೃತಿ ವ್ಯಾಪಿಸಿ, ಭಾರತವೂ ಬ್ರಝಿಲ್‌ದ ಪ್ರತಿರೂಪವಾಗುತ್ತಿತ್ತು..." ಎಂದು ಲೇಖಕರು ತಮ್ಮ ಪ್ರವಾಸದ ಕೊನೆಯಲ್ಲಿ ಹೇಳಿರುವರು (ಪು. ೧೧೩).

ಬ್ರಝಿಲ್ ಹಾಗೂ ಭಾರತ ದೇಶಗಳ ತುಲನೆ ಮಾಡುವ ಲೇಖಕರು "ಭಾರತವನ್ನೇ ಸರಿಸುಮಾರಾಗಿ ಹೋಲುವ ಬ್ರಝಿಲ್ ಜತೆ ನಾವು ಅಷ್ಟೇನೂ ಗಾಢ ಸಂಬಂಧ ಇಟ್ಟುಕೊಂಡಿಲ್ಲ. ನಮ್ಮಲ್ಲಿಯಂತೆ ಅರಣ್ಯ, ನದಿ, ಹವಾಮಾನ ಎಲ್ಲ ಇಲ್ಲಿವೆ. ನಮ್ಮಲ್ಲಿದ್ದಂತೆ ಕಾಫಿ, ಕಬ್ಬು, ಆದಿವಾಸಿಗಳ ಅರಣ್ಯ ರೋದನ, ಗ್ಯಾಟ್ (GATT), ವಿಶ್ವ ಬ್ಯಾಂಕ್ ಸಾಲ, ಮಲೇರಿಯಾ, ಭ್ರಷ್ಟಾಚಾರ ಎಲ್ಲ ಇವೆ. ಹೇರಳ ನಿಸರ್ಗ ಸಂಪತ್ತು ಇದ್ದರೂ ಸುಧಾರಿತ ರಾಷ್ಟ್ರಗಳ ಅನುಕರಣೆ ಮಾಡಲು ಹೋಗಿ ಎಡಬಿಡಂಗಿಯಾಗುತ್ತಿರುವ ಎಲ್ಲ ತೃತೀಯ ವಿಶ್ವದ ಪ್ರಗತಿಶೀಲ ರಾಷ್ಟ್ರಗಳ ಲಕ್ಷಣಗಳೂ ಇದಕ್ಕಿವೆ. ಇಲ್ಲಿನ ಅಭೇದ್ಯ ಅಮೆಜಾನ್ ಕೊಳ್ಳದ ನೈಸರ್ಗಿಕ ಸಂಪತ್ತನ್ನೆಲ್ಲಾ ಅಮೆರಿಕಾ, ಕೆನಡಾಗಳಂಥ ಧನಿಕ ದೇಶಗಳಿಗೆ ಅಡವಿಡಲಾಗಿದೆ. ಇಲ್ಲಿನ ವಿಶಾಲ ನೈಸರ್ಗಿಕ ಸಂಪತ್ತನ್ನು ಎತ್ತಲು ಹೊರಗಿನವರು ನಡೆಸುವ ಹವಣಿಕೆಯಿಂದಾಗಿ ಇಲ್ಲಿನ ನಾಗರಿಕರಿಗೆ ಆಗುತ್ತಿರುವ ಎಲ್ಲ ತೊಂದರೆಗಳೂ ನಮ್ಮವರಿಗೆ ಪಾಠವಾಗುವಂತಿವೆ" ಎಂಬ ಮಾತುಗಳು ಚಿಂತನೆಗೆ ಅರ್ಹವಾಗಿವೆ.

ಭೂಮಿಯ ಆಚೆಯ ಮಗ್ಗುಲಲ್ಲಿರುವ ದೇಶಕ್ಕೆ ಹೋಗಿಬಂದರೂ ಕೊನೆಗೆ "ಭಾರತದ ನಾಗರೀಕತೆಯೇ ಅತ್ಯುತ್ತಮ, ನಮ್ಮ ಸಂಸ್ಕೃತಿಯೇ ಉಚ್ಚ, ಅತ್ಯಾತುರವಿಲ್ಲದ ಚಿಂತನಪರ ವಿಚಾರಶೀಲ ಜೀವನ ಇವೇ ನಮಗೆ ತುಂಬಾ ಪ್ರಿಯ" ಎಂಬ ತೀರ್ಮಾನಕ್ಕೆ ಬಂದಿದ್ದೇನೆ ಎಂದು ಲೇಖಕರು ತಮ್ಮ ಪ್ರವಾಸ ಕಥನವನ್ನು ಕೊನೆಗಾಣಿಸಿರುವರು (ಪು. ೧೧೬).

"ಕತ್ತೆ ಬ್ರಝಿಲ್ ದೇಶದಲ್ಲಿ ಅತ್ಯಂತ ಆದರಣೀಯ ಪ್ರಾಣಿ. ಅದರ ಕಾರ್ಯತತ್ಪರತೆ ಯಾವುದನ್ನೂ ಅತಿಯಾಗಿ ಹಚ್ಚಿಕೊಳ್ಳುವ ನಿರ್ಗುಣ ಮನೋಭಾವ; ಕೊಟ್ಟಿದ್ದು ತಿಂದು, ಕೊಟ್ಟಷ್ಟು ಹೊರೆ ಹೊರುವ ಕಷ್ಟ ಸಹಿಷ್ಣು ಪ್ರಾಣಿ. ಆದ್ದರಿಂದಲೇ

ಅದಕ್ಕೆ ಹೀರೋ ಪಟ್ಟ. ಇಡೀ ಬ್ರಝಿಲ್ ದೇಶವೇ ಕಷ್ಟ ಸಹಿಷ್ಣುಗಳ ನಾಡು" ಎಂದು ಲೇಖಕರು ಒಂದೆಡೆ ಹೇಳಿರುವರು (ಪು. ೧೦೦). ಇದೇನು ವ್ಯಂಗ್ಯದ ನೆಲೆಯಲ್ಲಿ ಸಾಂಕೇತಿಕವಾಗಿ ಹೇಳುತ್ತಿರುವರೆ? ಎಂಬ ಸಂಶಯ ಇದನ್ನು ಓದಿದ ಕ್ಷಣ ನನ್ನನ್ನು ಕಾಡಿತು. ಅತಿಥಿ ದೇಶದ ಬಗ್ಗೆ ಎಂತಹ ಹೋಲಿಕೆ!

**ಇತಾಲಿಯ-ಫಿನ್ಲೆಂಡ್-ಹಾಲೆಂಡ್:**

ಕು.ಶಿ. ಹರಿದಾಸಭಟ್ಟರ **ರಂಗಾಯನವು** ಇತಾಲಿಯ-ಫಿನ್ಲೆಂಡ್-ಹಾಲೆಂಡ್ ಈ ದೇಶಗಳ ಪ್ರವಾಸ ಕಥನ. ಭಟ್ಟರು ೧೯೮೪ರಲ್ಲಿ ರೋಮ್ ವಿಶ್ವವಿದ್ಯಾನಿಲಯದ ನಾಟಕಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಮರೊತ್ತಿಯವರ ಆಹ್ವಾನದ ಮೇರೆಗೆ ಸಂದರ್ಶಕ ಪ್ರಾಧ್ಯಾಪಕರಾಗಿ (ಎರಡು ತಿಂಗಳು) ರೋಮ್‌ಗೆ ಭೇಟಿ ನೀಡಿದರು. ಅಲ್ಲಿ ನಡೆದ ವಿಶ್ವ ರಂಗ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಫಿನ್ಲೆಂಡಿನ ತುರ್ಕು ವಿಶ್ವವಿದ್ಯಾನಿಲಯದ ಜಾನಪದಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಲಾರಿಹೊಂಕೋ ಅವರ ಆಮಂತ್ರಣದ ಮೇರೆಗೆ ಫಿನ್ಲೆಂಡಿಗೆ ಭೇಟಿ ನೀಡಿದರು. ಹಾಗೆಯೇ ಹಾಲೆಂಡಿಗೆ ಯಾನ್ ಮತ್ತು ರಜನಿ ದಂಪತಿಗಳ ಆಹ್ವಾನದ ಮೇರೆಗೆ ಹೋಗಿ ಬಂದರು. ಈ ಮೂರು ದೇಶಗಳಲ್ಲಿ ಕೆಲವು ದಿವಸ ವಾಸ್ತವ್ಯ ಹೂಡಿದ ಸಂದರ್ಭದ ಅನುಭವಗಳು **ರಂಗಾಯನದಲ್ಲಿ** ಮೂಡಿಬಂದಿವೆ.

ಪ್ರವಾಸ ಸಾಹಿತ್ಯದಲ್ಲಿ ಇದೊಂದು ಹೊಸ ಪ್ರಯೋಗ. ಟೂರಿಸ್ಟ್ ಮನೋಭಾವದ ಪ್ರವಾಸಿ ವರದಿ ಇಲ್ಲಿ ದಾಖಲಾಗದೆ, ವಿದ್ವಾಂಸರೊಬ್ಬರ ಸಾಂಸ್ಕೃತಿಕ ಯಾತ್ರೆಯ ಮಧುರ ಅನುಭವಗಳ ದಾಖಲೆಯಾಗಿದೆ. "ನನ್ನ ಪ್ರವಾಸ ಕಥನದಲ್ಲಿ ಆತ್ಮಚರಿತ್ರೆಯ ಅಂಶಗಳು ಬೆರೆತಿರುತ್ತದೆ, ವಿಸ್ತೃತವಾದ ವರದಿಯೂ ಇರುತ್ತದೆ" (ಪು.೧೩೪) ಎಂದು ಲೇಖಕರೇ ಒಂದೆಡೆ ಹೇಳಿಕೊಂಡಿರುವರು. ಪ್ರವಾಸ ಹೋಗಲು ತಾವು ಹಣ ಹೊಂದಿಸಿಕೊಂಡದ್ದು, ಫಿನ್ಲೆಂಡ್ ಹಾಗೂ ಹಾಲೆಂಡ್ ನೋಡಲು ತಾವು ವಿದೇಶೀ ಹಣವನ್ನು ಉಪವಾಸ ಮಾಡಿ ಉಳಿಸಿದ್ದು, ತಮ್ಮ ಮಾರ್ಗದರ್ಶಿನಿ ಬ್ರೂನಾಳ ಜೊತೆ ರೋಮ್‌ನಲ್ಲಿ ತಂಗಲು ಹೋಟೆಲ್ ಹುಡುಕಲು ಪಟ್ಟಪಾಡು, ನಾಪೋಲಿಯದ ತಮ್ಮ ಹಳೆಯ ಆತ್ಮೀಯ ಮಿತ್ರ ಅಪಾನ ಹೆಂಡತಿ-ಮಕ್ಕಳನ್ನು ಬ್ರೂನಾಳ ಜೊತೆ ಹೋಗಿ ಭೇಟಿಮಾಡಿದ್ದು (ಆ ವೇಳೆಗೆ ಅಪಾ ತೀರಿಕೊಂಡಿದ್ದು, ತಮ್ಮ ದುಃಖವನ್ನು-ಹಳೆಯ ಮಧುರ ಸ್ಮೃತಿಗಳನ್ನು ನೆನಪು ಮಾಡಿಕೊಂಡದ್ದು), ತಮ್ಮ ಮರೆವಿನಿಂದ ತಮಗೆ ೧೯,೦೦೦ ಲೀರೆ (೧೦ ಡಾಲರ್) ನಷ್ಟವಾದದ್ದು, ರೋಮ್‌ನ ರಾಯಭಾರಿ ಕಛೇರಿಯಲ್ಲಿ ತಮಗಾದ ಅನುಭವ, ವಿದೇಶೀ ಹಣವನ್ನು ಬಹಳ ಎಚ್ಚರಿಕೆಯಿಂದ ವಿನಿಯೋಗಿಸಲು ತಾವು ಕಡಿಮೆ ಖರ್ಚಿನಲ್ಲಿ ಊಟ ಸಿಗುವ ರೈಲ್ವೆ ಬುಫೆಯನ್ನು

ಅರಸಿ ಹೋದದ್ದು, ರೋಮ್‌ನಲ್ಲಿ ತಮ್ಮ ಹಣದ ಪರ್ಸ್ ಮರೆವಿನಿಂದ ಕಳೆದು ಹೋದದ್ದು -ಇತ್ಯಾದಿ ವೈಯಕ್ತಿಕ ಸಂಗತಿಗಳು ಅನವಶ್ಯಕವಾಗಿ ಲಂಬನಗೊಂಡಿವೆ. ಇವುಗಳ ಹೊರತಾಗಿ ಪ್ರವಾಸ ಕಥನದಲ್ಲಿ ಬಂದಿರುವ ಸಮೃದ್ಧವಾದ ಸಾಂಸ್ಕೃತಿಕ ವಿವರಗಳು ಮುಖ್ಯವೆನ್ನಿಸಿವೆ. ಪ್ರೊ. ಫೆರೂಜೋ ರೋಮ್‌ನಲ್ಲಿ ಐದು ದಿವಸಗಳ ಪರ್ಯಂತ ನಡೆಸಿದ ಅಂತರ ರಾಷ್ಟ್ರೀಯ ರಂಗಸಮ್ಮೇಳನದಲ್ಲಿ ಭಾಗವಹಿಸಿದ ಪ್ರೊ. ಭಟ್ಟರು ವಿಶ್ವರಂಗ ಚಟುವಟಿಕೆಗಳ ಬಗೆಗೆ ಅಲ್ಲಿ ನಡೆದ ವಿಚಾರವಿನಿಮಯದ ಕಿರುಪರಿಚಯ ಮಾಡಿಕೊಟ್ಟಿರುವರು. "ನಮ್ಮಲ್ಲಿ ಇನ್ನೊಂದು ರಾಜ್ಯದ ಬಗ್ಗೆ ಇರುವುದಕ್ಕಿಂತ ಹೆಚ್ಚಿನ ಆಸ್ಥೆ, ಆಸಕ್ತಿ, ಪರಿಜ್ಞಾನ, ಅನುಭವ ಇಲ್ಲಿನ ವಿದ್ವಾಂಸರಿಗೆ ಇರುವುದು ಒಂದು ವಿಶೇಷವೇನೆ" ಎನ್ನುವ ಪ್ರೊ. ಭಟ್ಟರು ನಮ್ಮ ವಿದ್ವಾಂಸರ ಕೂಪಮಂಡೂಕ ಜ್ಞಾನ, ತಮ್ಮ ಕಲೆಗಳ ಬಗೆಗೆ ಇರುವ ಅಜ್ಞಾನ, ಅಲ್ಪ ತಿಳುವಳಿಕೆ, ಹೊರಗೆ ಕಣ್ಣು ಹಾಯಿಸುವುದಿಲ್ಲವೆನ್ನುವಂಥ ಸ್ವರತಿಭಾವ, ನಮ್ಮದಲ್ಲದ ಕಲಾಪ್ರಕಾರದ ಬ್ಗಗ್ಗೆ ಕುತೂಹಲದ ಅಭಾವಗಳನ್ನು ಲೇಖಕರು ಎತ್ತಿ ಹೇಳಿರುವರು (ಪು.೫೦). ಯೂರೋಪು ಹೀಗಲ್ಲ ಎನ್ನುವ ಪ್ರೊ. ಭಟ್ಟರು ಯೂರೋಪು ನಮ್ಮಲ್ಲಿರುವುದಕ್ಕಿಂತ ಹೆಚ್ಚು ದ್ರವಶೀಲ, ಚುರುಕು ಎಂದು ಅಭಿಪ್ರಾಯಪಡುವರು. ಇಲ್ಲಿನ ಜನರ ಮನಸ್ಸು ಹೊರಗೆ ಹರಿಯುವ ಬಲವುಳ್ಳದ್ದು, ವ್ಯಾಪಾರದಂತೆ ಮನೋವ್ಯಾಪಾರವು ತನಗೆ ವಿಲಕ್ಷಣವೆಂದು ಕಂಡದ್ದನ್ನು ಅರ್ಥಮಾಡಿಕೊಳ್ಳಲು ಹವಣಿಸುವಂಥಾದ್ದು, ಮೂಗುಮುರಿಯುವಂಥಾದ್ದಲ್ಲ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಐರೋಪ್ಯ ನಿರ್ದೇಶಕರು ಏಶಿಯಾದ ರಂಗಸ್ಥಳವನ್ನು ಆಳವಾದ ಅಧ್ಯಯನಕ್ಕೆ ಈಡುಮಾಡಿದ್ದಾರೆ. ಅನುಭವ ಪಡೆಯಲು ಯತ್ನಿಸಿದ್ದಾರೆ. ಅದರೊಳಗಿನ ತಾಂತ್ರಿಕತೆಯನ್ನು ಮಾತ್ರವಲ್ಲದೆ ಶಕ್ತಿ ಕೇಂದ್ರವನ್ನು ಅಥವಾ ಬೀಜಗುಣವನ್ನು ಗುರುತಿಸುವುದು, ಇದರಲ್ಲೆಷ್ಟು ತಮ್ಮ ರಂಗಭೂಮಿಗೆ ಅನ್ವಯಿಸಬಹುದೋ ಅಷ್ಟನ್ನು ಸ್ವೀಕರಿಸಿ ಜೀರ್ಣಿಸಿ ತಮ್ಮದೇ ಕಲಾಸೃಷ್ಟಿಗೆ ಹೊಸ ರೂಪ, ಹೊಸ ಜೀವ ಕೊಡುವುದು ಇವರ ಉದ್ದೇಶ. ಈಗಾಗಲೇ ಇಲ್ಲಿನ ಉದ್ದಾಮ ನಿರ್ದೇಶಕರು ಬಾರ್ಬ (ಇಟಲಿ-ಡೆನ್ಮಾರ್ಕ್), ಗ್ರೊಟೊವಸ್ಕಿ (ಪೋಲೆಂಡ್), ಪೀಟರ್ ಬ್ರೂಕ್ (ಫ್ರಾನ್ಸ್) ಪೂರ್ವದೇಶಗಳಿಗೆ ತಮ್ಮ ತಂಡಗಳನ್ನು ಕರೆದುಕೊಂಡು ಹೋಗಿ ಅನೇಕ ಪ್ರಯೋಗಗಳನ್ನು ಮಾಡಿ ತೋರಿಸಿದ್ದಾರೆ. ಹಾಗಾಗಿ ರೋಮ್‌ನಲ್ಲಿ ನಡೆದ ವಿಶ್ವರಂಗ ಸಮ್ಮೇಳನ ಒಂದು ರೀತಿಯಲ್ಲಿ ಅವರ ಪ್ರತ್ಯೇಕ ಪ್ರತ್ಯೇಕ ಕೆಲಸಗಳನ್ನು ಒಂದೆಡೆ ಸೇರಿ ಸಮಗ್ರವಾಗಿ ಅವಲೋಕಿಸುವ ಕರ್ತವ್ಯವೇ ಆಗಿತ್ತು ಎಂದರೆ ತಪ್ಪಿಲ್ಲ" ಎಂದು ಸಮ್ಮೇಳನದ ಉದ್ದೇಶವನ್ನುವಿವರಿಸಿರುವರು, ಸಮರ್ಥಿಸಿರುವರು.

ಬಾಲಿ ಮತ್ತು ಭಾರತದಲ್ಲಿರುವ ಜಾನಪದ ನೃತ್ಯ ನಾಟಕಗಳ ಮೂಲ ಒಂದೇ ರಾಮಾಯಣ ಮತ್ತು ಭಾರತ ಎನ್ನುವ ಭಟ್ಟರು ಮೇಲಿಂದ ಮೇಲೆ ಪಾಶ್ಚಾತ್ಯ ಕಲೆ ನೋಡಲು ವಿದ್ವಾಂಸರು ಹೋಗುತ್ತಾರೆಯೇ ವಿನಾ ಭಾರತೀಯರು ಹೋಗುವುದೂ ಇಲ್ಲ, ನೋಡುವುದೂ ಇಲ್ಲ. ಇಂಥ ಆತುರ, ತುಲನಾತ್ಮಕ ಅಧ್ಯಯನ ಮುಂದಿನ ವರ್ಷಗಳಲ್ಲಾದರೂ ನಡೆಯಬೇಕು ಎಂಬ ತಮ್ಮ ಅಳಲನ್ನು ತೋಡಿಕೊಂಡಿರುವರು. ಏಷಿಯದ ರಂಗಭೂಮಿಯ ಮುಖ್ಯ ಪರಂಪರೆಯನ್ನೇ ನಾವು ಅರಿತಿಲ್ಲವಲ್ಲಾ ಎಂದು ಖೇದವಾಗುತ್ತದೆ ಎನ್ನುವ ಭಟ್ಟರು "ಹೇಗೆ ಆಧುನಿಕ ಇತಿಹಾಸದ ಅಧ್ಯಯನವೆಂದರೆ ನಮ್ಮಲ್ಲಿ ಆರೋಗ್ಯ ಐರೋಪ್ಯ -ಈಗೀಗ ಅಮೇರಿಕೆಯ-ಇತಿಹಾಸ ಅಧ್ಯಯನವೊ, ಹಾಗೆಯೇ ಕಲೆ ಎಂದರೆ ಪಾಶ್ಚಾತ್ಯ ದೇಶಗಳ ಕಲೆ ಎಂದು ಸೀಮಿತಗೊಳಿಸಿ ನಾವು ಕೆಟ್ಟಿದ್ದೇವೆ. ಅಮೇರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ಏಶಿಯದ ಅಧ್ಯಯನ ಏಕಪ್ರಕಾರವಾಗಿ ಸಾಗಿದೆ; ಐರೋಪ್ಯ ರಂಗತಜ್ಞರು ಏಶಿಯದ ಜೊತೆ ಸಂಭಾಷಣೆ ಮಾಡಲು ತೊಡಗಿದ್ದಾರೆ. ನಾವೇಕೆ ನಮ್ಮ ದೃಷ್ಟಿಯನ್ನು ಪೂರ್ವಕ್ಕೆ ಹರಿಯಿಸಬಾರದು? ಎಂದು ವಿಚಾರ ಮಾಡಿರುವರು (ಪು. ೫೨). ಕೂಲಂಕಷವಾಗಿ ಒಂದು ಜ್ಞಾನಭಾಗದ ಅಧ್ಯಯನ ಮಾಡಬೇಕಾದರೆ ವಿದೇಶೀಯರು ವರ್ಷಗಟ್ಟಲೆ ಆ ಭಾಷೆಯನ್ನೇ ಕಲಿತಾರು; ಆ ಭಾಷೆಯಲ್ಲೇ ಓದಿ ಯಾರು ಎನ್ನುವ ಭಟ್ಟರು ಇದಕ್ಕೆ ಉದಾಹರಣೆಯಾಗಿ "ಜಿಯಾಮಿಯನ್ನು ಜಪಾನಿ ಭಾಷೆಯಲ್ಲಿ ಓದಿ ವಿಮರ್ಶಿಸುವ ಪ್ರೊ. ಒರ್ತೋಲಾನಿ ಇತಾಲಿಯನರಾದರೂ ಈಗ ಅಮೇರಿಕದಲ್ಲಿ ದುಡಿಯುತ್ತಿದ್ದಾಳೆ. ಅವರು ಪ್ರಪಂಚದ 'ನೋ' ತಜ್ಞರಲ್ಲೊಬ್ಬರು" (ಪು.೫೨) ಎಂದಿರುವರು. ಇಲ್ಲಿ ವ್ಯಕ್ತವಾಗಿರುವ ಪ್ರೊ. ಭಟ್ಟರ ಕಳಕಳಿಯನ್ನು ನಾವು ಗ್ರಹಿಸಬೇಕಾಗಿದೆ, ವಿಚಾರ ಮಾಡಬೇಕಾಗಿದೆ.

ಸಮ್ಮೇಳನದಲ್ಲಿ ಸಾದರಪಡಿಸಲಾದ ರಂಗಚಿಂತನೆಗಳಿಗೆ ಸಂಬಂಧಿಸಿದ ಪ್ರಬಂಧಗಳ ಬಗೆಗೂ ಪ್ರೊ. ಭಟ್ಟರು ವಿಚಾರ ಮಾಡಿರುವರು. ಗ್ರೊಟೊವಸ್ಕಿ, ಪೀಟರ್ ಬ್ರೂಕ್, ಬಾರ್ಬಾ -ಇವರ ರಂಗಪ್ರಯೋಗಗಳ ಬಗೆಗೆ ಸ್ಥೂಲವಾದ ಪರಿಚಯ ಮಾಡಿಕೊಟ್ಟಿರುವರು (ಪು.೫೫-೫೯). ಪ್ರೊ. ಭಟ್ಟರಿಗೆ ಮರೊತ್ತಿ ಆತ್ಮೀಯರಾಗಿರು-ವುದರಿಂದಲೊ ಏನೋ ಅವರ ವ್ಯಕ್ತಿಚಿತ್ರ ಪ್ರವಾಸ ಕಥನದುದ್ದಕ್ಕೂ ಅಲ್ಲಿ ಇಲ್ಲಿ ಕಾಣಿಸಿಕೊಂಡು ಮಿಂಚಿ ಮಾಯವಾದರೂ ನಮ್ಮ ನೆನಪಿನಂಗಳದಲ್ಲಿ ಮರೆಯದೆ ಉಳಿಯುತ್ತದೆ. ಹಾಗೆಯೇ ಈ ಪ್ರವಾಸಕಥನದಲ್ಲಿ ಮರೆಯದೆ ಉಳಿಯುವ ಇನ್ನೊಂದು ವ್ಯಕ್ತಿ ಚಿತ್ರ ಲಾರಿ ಹೊಂಕೊ.

ಫಿನ್ಲೆಂಡಿನ ಪ್ರವಾಸ ಕಥನದಲ್ಲಿ ಪ್ರಮುಖವಾಗಿ ಆವರಿಸಿಕೊಂಡಿರುವುದು ಫಿನ್ ಸಾಹಿತ್ಯ ಪರಿಷತ್ತು ಹಾಗೂ ಅದರ ಕಾರ್ಯಚಟುವಟಿಕೆಗಳ ವ್ಯಾಪಕವಾದ ವಿವರಣೆ.

ಫಿನ್ ಸಾಹಿತ್ಯ ಪರಿಷತ್ತು ನಡೆಸಿರುವ ಜಾನಪದ ಶಾಸ್ತ್ರ ಸಂಗ್ರಹ ಪ್ರಬುದ್ಧವಾಗಿದ್ದು, ವಿಶ್ವದ ಗಮನ ಸಳೆಯುವಷ್ಟು ಕೀರ್ತಿಶಾಲಿಯಾಗಿದೆ. ಫಿನ್ಲೆಂಡಿನಲ್ಲಿ ನಡೆದಿರುವ ಜಾನಪದ ಕೆಲಸದ ವ್ಯಾಪಕತೆಯ ಪರಿಚಯವನ್ನು ಪ್ರೊ. ಭಟ್ಟರು ಮಾಡಿಕೊಟ್ಟಿರುವರು (ಪು.೮೮). ಅಷ್ಟೇ ಅಲ್ಲ ಫಿನ್ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳ, ಬಗೆಗೂ, ದಾಖಲಾತಿಗಳ ಬಗೆಗೂ ವಿವರಗಳನ್ನು ನೀಡಿರುವರು (ಪು.೯೧-೯೩).

ಪ್ರವಾಸ ಕಥನದ ಕೊನೆಯಲ್ಲಿ ಬರುವ ಹಾಲೆಂಡ್ ಪ್ರವಾಸಾನುಭವ ಕಥನ ಚುಟುಕಾಗಿದೆ. ಅತಿಥೇಯರಾದ ಯಾನ್ ಮತ್ತು ರಜನಿ ದಂಪತಿಗಳ ಜೊತೆ ಕಾಲ ಕಳೆದ ಮಧುರ ಸ್ಮೃತಿಗಳ ನೆನಪು ಇಲ್ಲಿದೆ. ಇಲ್ಲೂ ವೈಯಕ್ತಿಕ ಸಂಗತಿಗಳು ಅನವಶ್ಯಕವಾಗಿ ತಲೆಹಾಕುತ್ತವೆ, ವಿವರಣೆ ಲಂಬಿಸುವಂತೆ ಮಾಡುತ್ತವೆ.

ಈ ಪ್ರವಾಸ ಕಥನ ವಿಶೇಷವಾಗಿ ವೈಚಾರಿಕ ನೆಲೆಯನ್ನು ಹೊಂದಿದ್ದರೂ ನಮಗೆ ನಿರಾಶೆಯನ್ನೇನೂ ಉಂಟುಮಾಡುವುದಿಲ್ಲ. ಪ್ರೊ. ಭಟ್ಟರ ಲವಲವಿಕೆಯ ನಿರೂಪಣೆ, ತಮ್ಮನ್ನೇ ಲೇವಡಿ ಮಾಡಿಕೊಳ್ಳುವ ವಿನೋದಪರತೆ-ಇಲ್ಲಿನ ಆಕರ್ಷಣೆಗಳು. ಹಲವಾರು ಉತ್ತಮ ಛಾಯಚಿತ್ರಗಳನ್ನು ಒಳಗೊಂಡ ಈ ಪ್ರವಾಸಕಥನ ತನ್ನ ಸೀಮಿತ ಉದ್ದೇಶದಿಂದಾಗಿ, ಒಂದು ನಿರ್ದಿಷ್ಟ ವರ್ಗದ ಓದುಗರಿಗೆ ಪ್ರಿಯವಾಗುತ್ತದೆ. ಕೊನೆಯಲ್ಲಿ ಒಂದು ಜಪಾನಿ 'ನೋ' ನಾಟಕದ (ಸೊತೊಬಾ-ಕೊಮಾಚಿ) ಅನುವಾದವನ್ನು ಪ್ರೊ. ಭಟ್ಟರು ಒದಗಿಸಿಕೊಟ್ಟಿರುವರು. ಇದು ಮೆಚ್ಚುವಂತಹದು.

**ಮ್ಯಾಂಚೆಸ್ಟರ್**

ಡಿ.ಕೆ. ನಾಗರಾಜ್‌ರವರ ಪ್ರವಾಸ ಕಥನ **ನಾ ಕಂಡ ಮ್ಯಾಂಚೆಸ್ಟರ್**. ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡಿಗರ ಸಮ್ಮೇಳನಕ್ಕೆ ಆಹ್ವಾನಿತರಾದ ಹೋಗಿ ಗಮಕ, ಕನ್ನಡಗೀತೆಗಳು, ವಚನಗಳನ್ನು ಸುಶ್ರಾವ್ಯವಾಗಿ ಹಾಡಿ ಅವರು ಕನ್ನಡದ ಕಂಪನ್ನು ಅಲ್ಲಿ ಪಸರಿಸಿರುವರು. ಇಂಗ್ಲೆಂಡಿನಲ್ಲಿ ತಾವು ನೋಡಿದ ಸ್ಥಳಗಳ ಬಗ್ಗೆ ವಿವರವಾದ ಮಾಹಿತಿ ಸಂಗ್ರಹಿಸಿಕೊಟ್ಟಿರುವರು. ಇದೊಂದು ಪ್ರವಾಸಕಥನವಾಗಿರದೆ ಮಾಹಿತಿಕೋಶವಾಗಿದೆ. ಮಾಹಿತಿ ಸಂಗ್ರಹಿಸುವಲ್ಲಿನ ಅವರ ತೀವ್ರತರವಾದ ಆಸಕ್ತಿ, ಶ್ರದ್ಧೆ, ಉತ್ಸಾಹಗಳು ಈ ಪುಸ್ತಕವನ್ನು ಒಂದು ಒಳ್ಳೆಯ ಮಾರ್ಗದರ್ಶಕೃತಿಯಾಗಿ ಮಾಡಿದೆ. ಲೇಖಕರೇ ಹೇಳಿಕೊಂಡಿರುವಂತೆ ಬ್ರಿಟಿಷ್‌ಜನರ ಶೈಕ್ಷಣಿಕ, ಸಾಹಿತ್ಯಕ, ಸಾಮಾಜಿಕ, ರಾಜಕೀಯ ಮುಂತಾದ ವಿಷಯಗಳ ಬಗೆಗೆ ಅಂಕಿ ಅಂಶಗಳು ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಇಂಗ್ಲೆಂಡ್ ದೇಶದ ಬಗ್ಗೆ, ಹೆಚ್ಚಾಗಿ ಮ್ಯಾಂಚೆಸ್ಟರ್ ಬಗ್ಗೆ ಬರೆದು ಕೆಲವು ನಗರಗಳ ವಿಶೇಷವನ್ನು ಸಂಕ್ಷಿಪ್ತವಾಗಿ ತಿಳಿಸಿರುವುದಾಗಿ ಲೇಖಕರೇ ಹೇಳಿಕೊಂಡಿರುವರು.

**ಜಪಾನ್**

ಜಪಾನ್ ದೇಶದ ಪರಿಚಯ ಮಾಡಿಕೊಡುವ ಮೊದಲ ಪುಸ್ತಕವು ಬಹುಶಃ, ಮೈಸೂರ ಟ್ರೈನಿಂಗ್ ಕಾಲೇಜ್ ಅಸಿಸ್ಟೆಂಟ್ ಮಾಸ್ಟರ್ ಜೆ. ಕೃಷ್ಣಶಾಸ್ತ್ರಿ ಅವರ **ಜಪಾನ್ ಸಾಮ್ರಾಜ್ಯ** ಆಗಿರಬಹುದು. ಇದು ಪ್ರವಾಸ ಕಥನವಲ್ಲ, ಪರಿಚಯಾತ್ಮಕ ಕೃತಿ. ೧೯೦೮ ಡಿಸೆಂಬರ್ ತಿಂಗಳಿನಲ್ಲಿ ಕಂಠೀರವ ನರಸರಾಜ ಒಡೆಯರ್‌ರವರು ಸಪರಿವಾರರಾಗಿ ಜಪಾನ್ ದೇಶಧ ಯಾತ್ರೆ ಕೈಗೊಂಡರು. ಅವರು ಪ್ರವಾಸದಿಂದ ಮರಳಿದ ಮೇಲೆ ಅವರ ಸಂಗಡ ಜಪಾನ್‌ಯಾತ್ರೆ ಕೈಗೊಂಡು ಪ್ರತ್ಯಾಕ್ಷಾನುಭವವನ್ನು ಪಡೆದುಬಂದವರ ಮೂಲಕ ಅಲ್ಲಿನ ಆಶ್ಚರ್ಯಾತಿಶಯಗಳನ್ನು ಕೇಳಿ, ಇನ್ನೂ ಹೆಚ್ಚು ತಿಳಿಯಬೇಕೆಂಬ ಕುತೂಹಲದಿಂದ ಅನೇಕ ಇಂಗ್ಲಿಷ್ ಪುಸ್ತಕಗಳನ್ನು ಓದಿ, ಲೇಖಕರು ಈ ಗ್ರಂಥ ರಚನೆ ಮಾಡಿರುವರು. ಈ ಪುಟ್ಟ ಪುಸ್ತಕದಲ್ಲಿ ಜಪಾನಿನ ಭೌಗೋಳಿಕ ಸ್ಥಿತಿ, ಜಪಾನೀಯರ ಮತ, ವಿದ್ಯಾಭ್ಯಾಸಕ್ರಮ, ರಾಜ್ಯಭಾರಕ್ರಮ, ಸಾಮಾಜಿಕ ಪದ್ಧತಿಗಳು, ಆಹಾರ-ವಿಹಾರಗಳು, ವ್ಯವಸಾಯ-ಕಲೆ-ಕೈಗಾರಿಕೆ-ವ್ಯಾಪಾರಾದಿಗಳು ಇವುಗಳ ಬಗೆಗೆ ಸ್ಥೂಲವಾದ ವಿವರಣೆ ನೀಡಿರುವರು. ಪರಿಸಮಾಪ್ತಿಯಲ್ಲಿ ಜಪಾನಿನ ಪ್ರಗತಿಯ ಹಿನ್ನೆಲೆಯಲ್ಲಿ ಭಾರತದ ಹಿಂದುಳಿಕೆಯ ಬಗೆಗೆ ವಿಚಾರ ಮಾಡಿರುವರು. ಇಲ್ಲಿ ಲೇಖಕರ ನಿಜವಾದ ಕಳಕಳಿ ವ್ಯಕ್ತಗೊಂಡಿದೆ. "ನಮ್ಮ ಇಂಡಿಯಾ ರಾಜ್ಯವೆಲ್ಲ ವಿದ್ಯಾಭ್ಯಾಸ, ಕೈಗಾರಿಕೆ, ಕುಶಲವಿದ್ಯೆಗಳು, ದೇಶಾಭಿಮಾನ ರಾಜಭಕ್ತಿ ಇವುಗಳನ್ನು ಪಡೆದ ಜಪಾನಿನಂತೆಯೇ ಇತೋಪ್ಯತಿಯವಾಗಿ ಏಳಿಗೆಗೆ ಬರುವಂತೆ ದೇವರು ಅನುಗ್ರಹಿಸಲಿ" ಎಂದು ಗ್ರಂಥದ ಕೊನೆಯಲಿ ಹಾರೈಸಿರುವರು.

ವ್ಯಾಸಂಗಕ್ಕಾಗಿ ಭಾರತ ಸರಕಾರದಿಂದ ಆಯ್ಕೆಗೊಂಡು ಜಪಾನ್ ದೇಶವನ್ನು ನೋಡಿಬಂದ ಎಂ. ವೀರಪ್ಪನವರು ತಮ್ಮ **ಸಯೋನರ ಜಪಾನ್** ಎಂಬ ಕೃತಿಯಲ್ಲಿ ಜಪಾನೀಯರ ಜೀವನ ವಿಧಾನ, ಆಚಾರ-ವಿಚಾರ, ಕಲಾಪ್ರೇಮ, ಋಜು ಹಾಗೂ ಶುಚಿಜೀವನ, ಶ್ರದ್ಧಾಪೂರ್ಣ ದುಡಿಮೆ, ಶಿಸ್ತು, ಸ್ನೇಹಪರತೆ -ಇವೆಲ್ಲವುಗಳ ಬಗೆಗೆ ಅನುಭವಪೂರ್ಣ ವ್ಯಾಖ್ಯಾನ ನೀಡಿರುವರು. ಕನ್ನಡನಾಡಿನ ಸುಪ್ರಸಿದ್ಧ ಆಟಿಕೆ ತಯಾರಿಕರಲ್ಲಿ ಒಬ್ಬರಾದ ಅವರ ಈ ಬರವಣಿಗೆಯಲ್ಲಿ ಸರಳತೆಯಿದೆ, ಶುದ್ಧ ಅಂತಃಕರಣದಿಂದ ಮೂಡಿಬಂದ ವಿಚಾರಗಳಿವೆ. ಸುಸಂಸ್ಕೃತ ಮನಸ್ಸಿನ ಆಲೋಚನೆಗಳಿವೆ, ಒಳ್ಳೆಯದನ್ನು ಮೆಚ್ಚುವ ಹಾಗೂ ಅದನ್ನು ತೆರೆದ ಮನದಿಂದ ಬಣ್ಣಿಸುವ ಗುಣವಿದೆ, ಒಳ್ಳೆಯ ಕಲಾವಿದನೊಬ್ಬನ ಸೂಕ್ಷ್ಮಸಂವೇದನೆಗಳಿವೆ. ಪ್ರವಾಸಾನುಭವ ಪತ್ರಸಾಹಿತ್ಯ ರೂಪದಲ್ಲಿರುವುದು ಈ ಕೃತಿಯ ವಿಶಿಷ್ಟ ಅಂಶವಾಗಿದೆ.

೧೯೫೭ರಲ್ಲಿ ಟೋಕಿಯೋದಲ್ಲಿ ನಡೆದ ಪಿ.ಇ.ಎನ್. ಕಾಂಗ್ರೆಸ್ಸಿನಲ್ಲಿ ಭಾಗವಹಿಸಲು ಭಾರತೀಯ ಪ್ರತಿನಿಧಿಗಳಲ್ಲಿ ಒಬ್ಬರಾಗಿ ವಿ.ಕೃ. ಗೋಕಾಕ್‌ರವರು

ಜಪಾನ್ ದೇಶಕ್ಕೆ ಹೋಗಿದ್ದರು. ತಮ್ಮ ಪ್ರವಾಸದ ಅವಧಿಯಲ್ಲಿ ತಾವು ಭೇಟಿಮಾಡಿದ ಸಾಹಿತಿಗಳು, ಪ್ರಾಧ್ಯಾಪಕರುಗಳು ಅವರೊಡನೆ ನಡೆಸಿದ ಮಾತುಕತೆಗಳು; ಪಿ.ಇ.ಎನ್. ಕಾಂಗ್ರೆಸ್ ಅಧಿವೇಶನದ ಕಾರ್ಯಕಲಾಪಗಳ ವಿವರಗಳು -ಇವೇ ಪ್ರಧಾನವಾಗಿ **'ಸಮುದ್ರದೀಚೆಯಿಂದ'** ಎಂಬ ಈ ಕೃತಿಯಲ್ಲಿ ಬಂದಿವೆ. 'ಪೆನ್ ಕಾಂಗ್ರೆಸ್ಸಿನ ಫಲಶ್ರುತಿ' ಎಂಬ ಒಂದು ಅಧ್ಯಾಯದಲ್ಲಿ ಪ್ರವಾಸ ಸಾಹಿತ್ಯಕ್ಕೆ ಅನವಶ್ಯಕವಾದ ವಿವರಣೆಗಳು ತುಂಬಿಕೊಂಡಿವೆ. ಕೊನೆಯ ಎರಡು ಅಧ್ಯಾಯಗಳು ಜಪಾನಿ ನಾಟಕ ಹಾಗೂ ಜಪಾನಿ ಕಾವ್ಯಗಳನ್ನು ಕುರಿತಾಗಿದೆ.

ಲೇಖಕರ ಉದ್ದೇಶ 'ಪ್ರವಾಸ ಕಥನ' ಬರೆಯುವಂತೆ ತೋರುತ್ತಿಲ್ಲ. ಪ್ರವಾಸ ಮುಗಿಸಿ ಬಂದ ಮೇಲೆ ಕೆಲವು ಲೇಖನಗಳನ್ನು ಅವರು ಬರೆದರು. ಈ ಲೇಖನಗಳಿಗೆ ಮತ್ತಷ್ಟು ಬರಹ ಸೇರಿಸಿ ಅವರು ಅವಸರದಲ್ಲಿ ಪುಸ್ತಕ ಹೊರತಂದಂತಿದೆ. ಇದನ್ನು ಪ್ರವಾಸ ಕಥನವೆನ್ನುವುದರ ಬದಲು ಪ್ರಬಂಧ ಸಂಕಲವೆನ್ನುವುದು ಹೆಚ್ಚು ಸೂಕ್ತ.

ಸಿ.ಎಸ್. ಅಂಗಡಿಯವರ **ಜಪಾನ್ ಪ್ರವಾಸದ ಅನುಭವಗಳು** ಜಪಾನಿನಲ್ಲಿ ನಡೆದ 'Expo-೭೦' ಪ್ರದರ್ಶನಕ್ಕೆ ಹುಬ್ಬಳ್ಳಿಯ ಛೇಂಬರ್ ಆಫ್ ಕಾಮರ್ಸ್‌ನ ಸದಸ್ಯರ ತುಡದಲ್ಲಿ ಒಬ್ಬರಾಗಿ ಹೋಗಿ ಬಂದ ಅವರ ಅನುಭವಗಳ ಕಥನವಾಗಿದೆ. ತಾವು ನೋಡಿದ ವಿಸ್ಮಯ ಜಗತ್ತನ್ನು ಬೆರಗಾಗಿ ಬಣ್ಣಿಸುವುದರಲ್ಲಿ ಹೆಚ್ಚು ಲವಲವಿಕೆ ಹೊಂದಿರುವ ಲೇಖಕರು, ಅಂಕಿ ಅಂಶಗಳಿಂದ ತಾವು ನೋಡಿದ್ದರ ಬಗೆಗೆ ಮಾಹಿತಿ ನೀಡಿರುವರು. ಅವರಲ್ಲಿ ನೋಡಿದ್ದನ್ನೆಲ್ಲಾ ಹೇಳಬೇಕೆಂಬ ತವಕವಿದ್ದರೂ, ಅದಕ್ಕೆ ಸಮನಾಗಿ, ಅನುಭವ ನಿರೂಪಣೆಯಲ್ಲಿ ಮೈಮರೆಸುವಂತೆ ಮಾಡುವ ಸತ್ವಶಾಲಿ ಭಾಷೆಯ ಮೋಡಿಯಿಲ್ಲ. ಬರಹ ಭಾವತೀವ್ರತೆಗೆ ಒಳಗಾಗುವುದರಿಂದ ಸಮತೋಲನವನ್ನು ಅಲ್ಲಿ ನಿರೀಕ್ಷಿಸಲಾಗದು. ಉತ್ಸಾಹಕ್ಕೆ ಸ್ವಲ್ಪ ಕಡಿವಾಣ ಹಾಕಿದ್ದರೆ, ವಿವೇಚನೆಯಲ್ಲಿ ಪ್ರಧಾನ ಅಪ್ರಧಾನಗಳ ಬಗೆಗೆ ಗಮನಕೊಟ್ಟಿದ್ದರೆ ಗ್ರಂಥ ಇನ್ನಷ್ಟು ಪ್ರಯೋಜನಕಾರಿಯಾಗುತ್ತಿತ್ತು.

ಜಪಾನಿನಲ್ಲಿ ನಡೆದ 'Expo-೭೦' ಪ್ರದರ್ಶನ ನೋಡಲು ಹಾಗೂ ಜಪಾನ್, ಹಾಂಕಾಂಗ್‌ಗಳ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಲು ಕರ್ನಾಟಕದ ಯುವಜನ ತಂಡವೊಂದು ಸರಕಾರದ ನೆರವಿನಿಂದ ಎರಡು ವಾರಗಳ ಕಾಲ ಪ್ರವಾಸ ಕೈಗೊಂಡಿತು. ಹಾಗೆ ಹೊರಟ ೧೩೭ ಮಂದಿ ಪ್ರವಾಸಿಗಳಲ್ಲಿ ಒಬ್ಬರಾದ ಕೆ. ಅನಂತರಾಮುರವರು ಜಪಾನಿನ ಪ್ರಗತಿಯ ಬಗೆಗೆ ಹಾಗೂ ಆ ನಾಡಿನಿಂದ ನಾವು ಕಲಿಯಬಹುದಾದ ಪಾಠಗಳ ಬಗೆಗೆ ಉಪಯುಕ್ತ ಮಾಹಿತಿಗಳನ್ನು ತಮ್ಮ **ಉದಯ ರವಿಯ ನಾಡಿನಲ್ಲಿ** ಎಂಬ ಕೃತಿಯಲ್ಲಿ ನೀಡಿರುವರು. ಕೃತಿ ಕರ್ನಾಟಕದಲ್ಲಿ ಎಕ್ಸ್‌ಪೋ-೭೦ಕ್ಕೆ

ಸಂಬಂಧಿಸಿದಂತೆ ವಿದ್ಯಾರ್ಥಿಗಳು ನಡೆಯಿಸದ ಖಂಡನಾಪ್ರದರ್ಶನದ ಉಲ್ಲೇಖದೊಂದಿಗೆ ಪ್ರಾರಂಭವಾಗುತ್ತದೆ. ಯುವಜನ ತಂಡ ಕಷ್ಟದಿಂದ ಪ್ರವಾಸ ಕೈಗೊಂಡದ್ದು, ಪ್ರವಾಸ ಕಾಲದಲ್ಲಿ ಯುವಜನರು ತೋರಿದ ತಲೆತಗ್ಗಿಸುವ ವರ್ತನೆಗಳು, ಸಣ್ಣತನದ ನಡವಳಿಕೆಗಳು, ಜಪಾನಿನಲ್ಲಿ ನೋಡಿದ ಸ್ಥಳಗಳು, ನಡೆಸಿದ ಸಂಭಾಷಣೆಗಳು, ಪಡೆದ ಅನುಭವಗಳು -ಹೀಗೆ ಪ್ರವಾಸ ಕಥನದಲ್ಲಿ ವಿಷಯಗಳು ಹರಡಿಕೊಂಡಿವೆ. ವಿಷಯ ಸಂಗ್ರಹಣೆಯಲ್ಲಿ ಲೇಖಕರು ತೋರಿರುವ ಉತ್ಸಾಹ ಮೆಚ್ಚುವಂತಹದು. ಜಪಾನಿನ ಅದ್ಭುತ ಪ್ರಗತಿಯನ್ನು ವಿಸ್ಮಯ ನೇತ್ರಗಳಿಂದ ನೋಡಿ ಮೆಚ್ಚಿದ ಲೇಖಕರ ಮನಸ್ಸು ಬರಹದಲ್ಲೂ ಅದೇ ಮೆಚ್ಚುಗೆಯ ಭಾವವನ್ನು ಮೂಡಿಸಿದೆ. "ಜಪಾನಿಗಳು ಅಮೃತಪುತ್ರರು ವಿಷವನ್ನುಂಡೂ ವಿಷಕಂಠನಂತೆ ಅದನ್ನು ಅಮೃತವಾಗಿಸಿಕೊಂಡವರು. ಹೇಳಹೆಸರಿಲ್ಲದಂತಾಗಿದ್ದ ನಾಡನ್ನು ಎಲ್ಲರೂ ಹೆಸರು ಹೇಳುವಂತೆ ಕಟ್ಟಿಕೊಂಡ ಧೀಮಂತರು. ಅವರಿಗೆ ಸಿದ್ಧಿಸದ ಕೆಲಸವಿಲ್ಲ, ನಿಲುಕುದ ಜ್ಞಾನವಿಲ್ಲ, ಎಟುಕದ ಸಾಹಸವಿಲ್ಲ. ಅವರಿಗೆ ಕತ್ತಲೆಂಬುದೇ ಇಲ್ಲ, ಎಲ್ಲವೂ ಬೆಳಕು, ಬೆಳ್ಳಂಬೆಳಕು. ಜಪಾನಿಗಳಿಂದ ಮಾನವಕುಲಕ್ಕೆ ಮಾನ ಬಂದಿದೆ, ವಿಶ್ವಕ್ಕೆ ಬೆಲೆ ಸಂದಿದೆ. ಪರರಾಷ್ಟ್ರವೊಂದನ್ನು ಹಂಬಲವಿರುವವರೆಲ್ಲ ಜಪಾನಿನ ಯಾತ್ರೆಯನ್ನು ಕೈಗೊಳ್ಳಲಿ" (ಪು.೧೯) ಎಂಬ ಲೇಖಕರ ಮಾತುಗಳು ಆ ದೇಶದ ಬಗೆಗೆ ಅವರು ತಾಳಿರುವ ಅಭಿಮಾನ, ಮೆಚ್ಚುಗೆಗಳನ್ನು ಘನೀಕರಿಸಿವೆ. ಅವರ ಮುಗ್ಧ ಕಣ್ಣುಗಳಿಗೆ ಒದಗಿದ ನೋಟಗಳು, ಮನಸ್ಸು ಗ್ರಹಿಸಿದ ಅನುಭವಗಳು ಬಹುಶಃ ಈ ಬಗೆಯ ಆರಾಧನಾ ಭಾವಕ್ಕೆ ಪ್ರೇರಣೆ ನೀಡಿರಬಹುದು. ಕೃತಿಯುದ್ದಕ್ಕೂ ಈ ಮೆಚ್ಚುಗೆಯ ಭಾವವೇ ಕಾಣಬರುತ್ತದೆ. ಜಪಾನಿನ ಅದ್ಭುತವಾದ ರಭಸಗತಿಯ ಪ್ರಗತಿಯನ್ನು ಕಣ್ಣಾರೆ ನೋಡಿ ಮೆಚ್ಚಿದ ಲೇಖಕರ ಮನಸ್ಸು ತಮ್ಮ ದೇಶದ ಸ್ಥಿತಿಯೊಂದಿಗೆ ತುಲನೆ ಮಾಡಿದೆ. ನಮ್ಮ ದೇಶ ಅದರಂತೆ ಆಗುವುದು ಯಾವಾಗ? ಎಂದು ಆಲೋಚಿಸುತ್ತದೆ. ಹಾಗೆಯೇ, ನಮ್ಮ ಬಡತನ, ಅಜ್ಞಾನ, ರೋಗರುಜಿನಗಳು ತೊಲಗುವುದು ಯಾವಾಗ? ಎಂದು ಧ್ಯಾನಿಸುತ್ತದೆ. ಜಪಾನನ್ನು ನೋಡಿಯಾದ ಮೇಲೆ ಲೇಖಕರು ತಮ್ಮ ಅನಿಸಿಕೆಗಳನ್ನು ಪ್ರತ್ಯೇಕವಾಗಿ ಹೇಳಿರುವರು. ಅಲ್ಲಿ ಜಪಾನೀಯರ ವಿನಯಶೀಲತೆ, ಪರೋಪಕಾರೀ ಮನೋಭಾವ, ಪ್ರಾಮಾಣಿಕತೆ, ಸಮಯಪ್ರಜ್ಞೆ, ರಾಷ್ಟ್ರಪ್ರೇಮ, ಭಾಷಾಪ್ರೇಮ, ಆಸ್ತಿಕತೆ ಇತ್ಯಾದಿ ವಿಷಯಗಳ ಬಗೆಗೆ ತಮ್ಮ ಅನುಭವಪೂರ್ಣ ವಿಚಾರಧಾರೆಗಳನ್ನು ಮಂಡಿಸಿದರು. ಜಪಾನನ್ನು ನೋಡದೆಯೆ ಅದರ ಬಗೆಗೆ ವಿವರಗಳನ್ನು ತಿಳಿಯಬಯಸುವ ಓದುಗರಿಗೆ ನಿರಾಶೆ ಮಾಡದೆ ಲೇಖಕರು ಅನೇಕ ಉಪಯುಕ್ತ ವಿಷಯಗಳನ್ನು ತಿಳಿಸಿರುವರು. ಜಪಾನಿನ ಈ ಪ್ರಗತಿಯ ಚಿತ್ರ ತರುಣ ಪೀಳಿಗೆಗೆ ಸ್ವಲ್ಪಮಟ್ಟಿಗಾದರೂ ಸ್ಫೂರ್ತಿ ನೀಡುವಂತಾದರೆ ಲೇಖಕರ ಶ್ರಮ ಸಾರ್ಥಕವಾದುತೆಯೇ.

ಟಿ.ಆರ್. ಗುರುರಾಜಾರಾವ್‌ರವರ **ನಾ ಕಂಡ ಜಪಾನ್** ಜಪಾನ್ ದೇಶದ ಸಮಗ್ರ ಪರಿಚಯ ಮಾಡಿಕೊಡುವ ಒಂದು ಪುಟ್ಟ ಹಾಗೂ ಮಹತ್ವದ ಕೃತಿ. ೧೯೮೧ರಲ್ಲಿ ಭಾರತೀಯ ದೂರವಾಣಿ ಕಾರ್ಖಾನೆಯ ವತಿಯಿಂದ ಹೆಚ್ಚಿನ ತರಬೇತಿ ಪಡೆಯಲು ಜಪಾನ್ ದೇಶಕ್ಕೆ ಭೇಟಿ ನೀಡಿದ್ದ ಲೇಖಕರು ತಮ್ಮ ಈ ಪ್ರವಾಸ ಕಥನದಲ್ಲಿ ಸ್ವಂತ ಅನುಭವಗಳ ವರ್ಣನೆಗಿಂತ ಜಪಾನ್ ದೇಶದ ಸಂಸ್ಕೃತಿ, ಕಲೆ, ಹಬ್ಬ ಹರಿದಿನಗಳು, ಆಚಾರವಿಚಾರ, ಸಂಪ್ರದಾಯಗಳು, ಪ್ರೇಕ್ಷಣೀಯ ಸ್ಥಳಗಳು, ಕೈಗಾರಿಕೆಗಳು, ಕ್ರೀಡೆಗಳು, ವ್ಯವಸಾಯ, ಆಹಾರ, ವಸತಿಗೃಹಗಳು, ವಾಹನಗಳು, ವಾಯುಗುಣ, ಜಪಾನಿ ಭಾಷೆ -ಹೀಗೆ ವೈವಿಧ್ಯಮಯವಾದ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡಿರುವರು. ಜಪಾನ್ ದೇಶಕ್ಕೆ ಪ್ರವಾಸ ಕೈಗೊಳ್ಳುವ ಕನ್ನಡಿಗರಿಗೆ ಅನುಕೂಲವಾಗಲೆಂದು ದಿನನಿತ್ಯದ ಬಳಕೆಗೆ ಬೇಕಾಗುವ ಜಪಾನ್ ಭಾಷೆಯ ಅತಿ ಉಪಯುಕ್ತವಾದ ಪದಗಳು ಮತ್ತು ವಾಕ್ಯಗಳ ಪಟ್ಟಿಯನ್ನು (ಸು.೧೬ ಪುಟಗಳಲ್ಲಿ) ಕೊಟ್ಟಿರುವರು. ಲೇಖಕರೇ ಹೇಳಿರುವಂತೆ ಜಪಾನೀ ಭಾಷೆಯ ಪದವನ್ನು ಕನ್ನಡದಲ್ಲಿ ಉಚ್ಚಾರ ಮಾಡುವುದು ಬಹಳ ಕಠಿಣ. ಆದರೂ ಇದನ್ನು ಆದಷ್ಟು ಎಚ್ಚರವಹಿಸಿ ಸಿದ್ಧಪಡಿಸಲಾಗಿದೆ.

ಜಪಾನ್ ದೇಶದಿಂದ ಬರುತ್ತಿದ್ದ ವಸ್ತುಗಳ ಗುಣಮಟ್ಟ ಎರಡನೆ ಮಹಾಯುದ್ಧಕ್ಕೆ ಮೊದಲು ಅತ್ಯಂತ ಕೀಳುದರ್ಜೆಯದಾಗಿತ್ತು. ಇದನ್ನು ಜಪಾನ್ ದೇಶದ ಸೋನಿ ಕಂಪನಿಯ ಅಧ್ಯಕ್ಷರಾಗಿದ್ದ ಅಕಿಯೊ ಮೊರಿಟಾ ಅವರ ಸಂದರ್ಶನವೊಂದರ ಮಾತುಗಳಲ್ಲಿ ಗಮನಿಸಬಹುದು: "ನಾನು ಮೊದಲನೆಯ ಸಾರಿ ಅಮೆರಿಕಾ ಮತ್ತು ಯುರೋಪ್‌ಗಳಿಗೆ ೧೯೫೩ನೇ ಇಸವಿಯಲ್ಲಿ ಭೇಟಿಯಿತ್ತೆ. ಆಗ ನಾನು ಜಪಾನ್ ದೇಶದಲ್ಲಿ ತಯಾರಾದ ವಸ್ತುಗಳು ಬಹಳ ಅಸಹ್ಯವಾಗಿರುವುದನ್ನು ಕಂಡೆ. ಪಶ್ಚಿಮ ಜರ್ಮನಿಯ ಸ್ಟುಟ್‌ಗಾರ್ಟನ್ ಎಂಬಲ್ಲಿ ದಿನವೂ ಸಣ್ಣ ಐಸ್‌ಕ್ರೀಮಿನ ಜೊತೆ ಸಣ್ಣ ಬಿದಿರಿನ ಕೊಡೆಯಾಕಾರದ ಕಡ್ಡಿಯನ್ನು ಚುಚ್ಚಿದ್ದರು. ಐಸ್‌ಕ್ರೀಮ್ ತಂದು ಕೊಡುತ್ತಿದ್ದ ಸೇವಕ ಇದು ನಿನ್ನ ದೇಶದಿಂದ ಬಂದದ್ದು ಎಂದು ಹೇಳಿದ. ಅದನ್ನು ನೋಡಿ ನನಗೆ ಸಂಕೋಚವಾಯಿತು. ಅಂಗಡಿಯ ಸುತ್ತಮುತ್ತ ನೋಡಿದೆ. ಈ ಸಣ್ಣ ಅಸಹ್ಯವಾದ ವಸ್ತುವೊಂದನ್ನು ಬಿಟ್ಟರೆ ಬೇರೆ ಉತ್ತಮವಾದ ಯಾವ ವಸ್ತುಗಳೂ ಜಪಾನ್ ದೇಶದ್ದಾಗಿರಲಿಲ್ಲ. ಜಪಾನ್ ದೇಶದಲ್ಲಿ ತಯಾರಿಸಲ್ಪಟ್ಟಿದೆ ಎಂದರೆ ಅದು ಅಗ್ಗವಾಗಿಯೂ ಕೀಳುಮಟ್ಟದ್ದಾಗಿಯೂ ಇರುವ ವಸ್ತುವೆಂದೇ ಭಾವನೆ ಬರುತ್ತಿದ್ದಿತು."

ಆದರೆ ಇಂದು ಜಪಾನ್‌ದೇಶದ ಸ್ಥಿತಿ-ಗತಿಯೇ ಬದಲಾಗಿದೆ. ವಿಶ್ವದ ಶ್ರೇಷ್ಠ ವಸ್ತುಗಳು ತಮ್ಮ ಬ್ರ್ಯಾಂಡ್‌ನೊಂದಿಗೆ ಜಪಾನಿನಿಂದ ವಿಶ್ವದ ಎಲ್ಲೆಡೆ ಮಾರುಕಟ್ಟೆಗೆ ರವಾನೆಯಾಗುತ್ತಿವೆ. ಮಾರುಕಟ್ಟೆಯಲ್ಲಿ ಆ ವಸ್ತುಗಳಿಗೆ ತೀವ್ರ ಬೇಡಿಕೆ. ಬೇರೆ ದೇಶಗಳ ವಸ್ತುಗಳ ಜೊತೆ ಪೈಪೋಟಿ ನಡೆಯಿಸಿ ಗಟ್ಟಿಯಾಗಿ ನಿಲ್ಲಬಲ್ಲ ಶಕ್ತಿ ಜಪಾನ್‌ನಿಂದ ಬಂದ ಸರಕುಗಳಿಗಿವೆ. ಇದು ಜಪಾನ್ ದೇಶದ ಅದ್ಭುತ ಸಾಧನೆ.

ಜಪಾನ್ ದೇಶದಲ್ಲಿ ಜನಸಂಖ್ಯೆ ಹೆಚ್ಚು. ವ್ಯವಸಾಯಕ್ಕೆ ಉಪಯುಕ್ತವಾದ ಭೂಮಿ ಸುಮಾರು ಶೇ. ೧೬ರಷ್ಟು ಮಾತ್ರ ದೊರೆಯುತ್ತದೆ. ಇದು ಜಪಾನ್ ದೇಶದ ಮುಖ್ಯ ಸಮಸ್ಯೆ. ಜ್ವಾಲಾಮುಖಿ, ಟೈಫೂನ್, ಭೂಕಂಪ ಮೊದಲಾದ ಪ್ರಾಕೃತಿಕ ವಿಕೋಪಗಳಿಗೆ ಜಪಾನ್ ತತ್ತರಿಸಿಹೋಗಿದೆ. ಆದರೂ ಜಪಾನೀಯರು ಇದಕ್ಕೆ ಕಂಗಾಲಾಗಿ ಕೈಕಟ್ಟಿ ಕುಳಿತಿಲ್ಲ. ಅವನ್ನು ಧೈರ್ಯವಾಗಿ ಎದುರಿಸುವ ಮನೋಶಕ್ತಿ ಅವರಿಗೆ ದೈವದತ್ತವಾಗಿ ಬಂದಿದೆ. ಪ್ರಾಕೃತಿಕ ವಿಕೋಪಗಳು ಜರುಗಿದಾಗ ಏನು ಮಾಡಬೇಕೆಂಬುದರ ಬಗ್ಗೆ ಪ್ರತಿಯೊಬ್ಬ ಪ್ರಜೆಗೂ ತರಬೇತಿ ನೀಡಲಾಗಿದೆ.

ಕೈಗಾರಿಕೆ ಜಪಾನ್ ದೇಶದ ಮುಖ್ಯ ಉದ್ಯಮ. ಕೈಗಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳು ದೊರೆಯುತ್ತವಾದರೂ ಕೈಗಾರಿಕೆಗಳು ಬೆಳೆದಂತೆ ಅಲ್ಲಿ ಸಿಗುವ ಕಚ್ಚಾ ಪದಾರ್ಥಗಳು ದೇಶದ ಅವಶ್ಯಕತೆಯನ್ನು ಪೂರೈಸಲಾಗದೆ ಹೊರದೇಶಗಳಿಂದ ತರಿಸಿಕೊಳ್ಳಬೇಕಾಗುತ್ತದೆ. ಆಮದು ಮಾಡಿಕೊಂಡರೆ ಬೆಲೆ ಹೆಚ್ಚು ಕೊಡಬೇಕಾಗುತ್ತದೆ. ಹೀಗೆ ಆಮದುಮಾಡಿಕೊಂಡ ಕಚ್ಚಾ ಪದಾರ್ಥಗಳಿಂದ ಉಪಯುಕ್ತವಾದ ವಸ್ತುಗಳನ್ನು ತಯಾರಿಸಿ ಅವುಗಳನ್ನು ರಫ್ತು ಮಾಡಬೇಕು. ವಸ್ತುಗಳನ್ನು ರಫ್ತು ಮಾಡಬೇಕಾದರೆ ಅವುಗಳು ಆಯಾ ದೇಶದಲ್ಲಿ ಲಭ್ಯವಿರದಿರಬೇಕು. ಅಥವಾ ಆಯಾ ದೇಶಗಳಲ್ಲಿ ತಯಾರಿಸುವ ವಸ್ತುಗಳಿಗಿಂತ ಗುಣಮಟ್ಟದಲ್ಲಿ ಶ್ರೇಷ್ಠತರದ್ದಾಗಿಯೂ ಬೆಲೆಯಲ್ಲಿ ಕಡಿಮೆಯಾಗಿಯೂ ಇರಬೇಕು. ಜಪಾನು ತನ್ನ ಸಿದ್ಧ ವಸ್ತುಗಳನ್ನು ರಫ್ತು ಮಾಡದೆ ಬದುಕುವಂತಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದು ತನ್ನ ವಸ್ತುಗಳ ಗುಣಮಟ್ಟದ ಮೂಲಕ ಸ್ಪರ್ಧೆಯನ್ನು ಆತ್ಮವಿಶ್ವಾಸದಿಂದ ಎದುರಿಸುತ್ತದೆ. ಜಪಾನ್ ವಸ್ತುಗಳನ್ನು ಅತಿ ಶ್ರೇಷ್ಠ ಗುಣಮಟ್ಟದಲ್ಲಿ ತಯಾರಿಸುವ ಕಲೆಯನ್ನು ರೂಢಿಸಿಕೊಂಡಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಜಪಾನ್ ಎನ್ನುವುದು ಒಂದು 'Brand Name' ಈ ಹಂತ ತಲುಪಲು ಆ ದೇಶ ನಡೆಸಿದ ಅವಿರತ ಶ್ರಮ, ತೋರಿದ ಬುದ್ಧಿವಂತಿಕೆ, ಹಾಕಿಕೊಂಡ ಸಾಧನೆಯ ಗುರಿ, ಪ್ರಕಟಪಡಿಸಿದ ಆತ್ಮಸ್ಥೈರ್ಯ ಯಾರೇ ಆಗಲಿ ಗುರುತಿಸುವಂತಹದ್ದು. 'ನಾ ಕಂಡ ಜಪಾನ್' ಪ್ರವಾಸ ಕಥನವಲ್ಲ, ಆ ದೇಶದ ಪರಿಚಯವನ್ನು ಸಮಗ್ರವಾಗಿ ಮಾಡಿಕೊಡುವ ಒಂದು ಪ್ರಾಮಾಣಿಕ ಪ್ರಯತ್ನ.

**ಈಜಿಪ್ಟ್-ಚೀನಾ-ಸ್ಕಾಂಡಿನೇವಿಯಾ**

ಶ್ರೀಮತಿ ಸುಧಾಮೂರ್ತಿಯವರ **ಹಕ್ಕಿಯ ತೆರದಲಿ...** ಈಜಿಪ್ಟ್ ದೇಶದ ಪ್ರವಾಸ ಕಥನ. ಇದರ ಜೊತೆಗೆ ಚೀನಾ, ಸ್ಕಾಂಡಿನೇವಿಯಾ ದೇಶಗಳಲ್ಲಿಯೂ ಸಂಚರಿಸಿದ ಅನುಭವ ಕಥನ ಇಲ್ಲಿ ದಾಖಲಾಗಿದೆ. 'ನಾನು ಕಂಡ ಅನೇಕ ಕನಸುಗಳಲ್ಲಿ ಈ ಪ್ರಾಚೀನ ದೇಶಗಳೂ ಸೇರಿವೆ' ಎಂದು ಲೇಖಕಿ 'ಮುನ್ನುಡಿ'ಯಲ್ಲಿ

ಹೇಳಿಕೊಂಡಿರುವರು. ಉತ್ಸಾಹದ ಬರವಣಿಗೆ ಲೇಖಕಿಯದು. ತಾವು ನೋಡಿದ ಸ್ಥಳಗಳ ಬಗೆಗೆ ಒಳ್ಳೆಯ ಮಾಹಿತಿ ನೀಡಿರುವರು. ಆ ದೃಷ್ಟಿಯಿಂದ ಈ ಕೃತಿ ಮೆಚ್ಚುವಂತಿದೆ.

## ಮಾಲ್ಡೀವ್ಸ್

ವಿ.ಎಲ್. ರಾಮಚಂದ್ರರಾವ್‌ರವರ **ಮಾಲ್ಡೀವ್ಸ್ ದ್ವೀಪಗಳು** ಒಂದು ಪುಟ್ಟ ಪ್ರವಾಸ ಕಥನ. ಮಾಲ್ಡೀವ್ಸ್ ಒಂದು ದ್ವೀಪ ಸಮುಚ್ಚಯ. ಅದು ನಮಗೆ ತೀರಾ ಪರಿಚಯವಾದುದು 'ಸಾರ್ಕ್' ಕೂಟ ರಚನೆಯಾದ ಮೇಲೆ. ಭಾರತದ ಭಾಗವಾಗಿರುವ ಮಾಲ್ಡೀವ್ಸ್‌ಗೆ ತಮ್ಮ ಪತ್ನಿಯೊಂದಿಗೆ ಲೇಖಕರು ೧೯೮೦ರ ಫೆಬ್ರವರಿ ಮೊದಲನೇವಾರದಲ್ಲಿ ಹೋಗುವ ಅವಕಾಶ ದೊರೆಯಿತು. ಅಲ್ಲಿ ಅವರ ಮಗ ಭಾರತ ಸರಕಾರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಅಧಿಕಾರ ಸಂಸ್ಥೆಯಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿದ್ದರ ಕಾರಣ ವಿ.ಎಲ್. ರಾಮಚಂದ್ರರಾವ್ ದಂಪತಿಗಳು ಸುಮಾರು ಎರಡು ತಿಂಗಳು ಅಲ್ಲಿಗೆ ಹೋಗಿ ಇರಲು ಸಾಧ್ಯವಾಯಿತು. ಮಾಲ್ಡೀವ್ಸ್ ದ್ವೀಪಗಳು ಹಿಂದೂ ಮಹಾಸಾಗರದಲ್ಲಿ ಶ್ರೀಲಂಕಾದ್ವೀಪಕ್ಕೆ ನೈಋತ್ಯದಲ್ಲಿ ಸು. ೪೪೦. ಕಿ.ಮೀ.ಗಳಷ್ಟು ದೂರಕ್ಕೆ ಭೂಮಧ್ಯ ರೇಖಾಂಶದಲ್ಲಿದೆ. ಅದರ ಒಟ್ಟು ವಿಸ್ತೀರ್ಣ ೪೧,೫೦೦ ಚದುರ ಮೈಲಿಗಳು. ಈ ದ್ವೀಪಗಳು ಸುಮಾರು ಆರುಸಾವಿರ ವರ್ಷಗಳಷ್ಟು ಪ್ರಾಚೀನವಾದವುಗಳೆಂದು ಹೇಳಲಾಗಿದೆ. ಇವುಗಳು ಸಾಗರದಲ್ಲಿ ಮುಳುಗಿರುವ ದೊಡ್ಡ ಪರ್ವತಶ್ರೇಣಿಯ ಶಿಖರಗಳಾಗಿವೆ. ಇಲ್ಲಿ ಒಟ್ಟು ೧೪೦೦ ದ್ವೀಪಗಳಿದ್ದು, ಇವುಗಳಲ್ಲಿ ಸು. ೨೦೦ ದ್ವೀಪಗಳನ್ನು ಬಿಟ್ಟರೆ ಉಳಿದವುಗಳಲ್ಲಿ ಜನವಾಸವಿಲ್ಲ. ಮಾಲ್ಡೀವ್ಸ್‌ನ ರಾಜಧಾನಿಯಿರುವ ದ್ವೀಪಕ್ಕೆ 'ಮಾಲೇ' ಎಂದು ಹೆಸರು. ಇದು ಪ್ರಜಾಪ್ರಭುತ್ವರಾಷ್ಟ್ರವಾಗಿ ತನ್ನದೇ ಸರ್ಕಾರವನ್ನು ಹೊಂದಿದೆ.

**ಮಾಲ್ಡೀವ್ಸ್ ದ್ವೀಪಗಳು** ಪ್ರವಾಸ ಕಥನವೆನ್ನುವುದಕ್ಕಿಂತ ಪರಿಚಯಾತ್ಮಕ ಕೃತಿ ಎಂದರೆ ಒಪ್ಪುತ್ತದೆ. ಈ ದ್ವೀಪಗಳ ಪೂರ್ವಚರಿತ್ರೆ, ಜನಜೀವನ, ರಾಜಕೀಯ ಪದ್ಧತಿ, ಸರ್ಕಾರ, ಆರ್ಥಿಕ ವಿಷಯಗಳು, ಸಾಮಾಜಿಕ ಜೀವನ ಮತ್ತು ಪದ್ಧತಿಗಳು, ಪ್ರವಾಸಿ ದ್ವೀಪಗಳ ಅಧ್ಯಕ್ಷರು -ಹೀಗೆ ವಿಷಯ ವಿಂಗಡಣೆ ಮಾಡಿಕೊಂಡು ಮಾಲ್ಡೀವ್ಸ್ ದ್ವೀಪಗಳ ಪರಿಚಯವನ್ನು ಲೇಖಕರು ಚೆನ್ನಾಗಿ ಮಾಡಿಕೊಟ್ಟಿರುವರು. ಪುಸ್ತಕದ ಕೊನೆಯಲ್ಲಿ ೧೯೮೮ರ ನವೆಂಬರ್ ೩ ರಂದು ಬಾಡಿಗೆ ಸೈನಿಕರು ಇದನ್ನು ವಶಪಡಿಸಿಕೊಳ್ಳಲು ಪ್ರಯತ್ನ ನಡೆಸಿದುದರ ವಿವರ ಬಂದಿದೆ. ಈ ಕ್ಷಿಪ್ರಕ್ರಾಂತಿಯ ಸಂದರ್ಭದಲ್ಲಿ ಮಾಲ್ಡೀವ್ಸ್‌ನ ಅಧ್ಯಕ್ಷರು ಭಾರತದ ನೆರವು ಕೇಳಿದ್ದರಿಂದ ಭಾರತದ ವಾಯುಪಡೆ ಆಕ್ರಮಣಕಾರರನ್ನು ಓಡಿಸಿತು.

ಇಲ್ಲಿ ಪೊಲೀಸರಾಗಲಿ, ನ್ಯಾಯಸ್ಥಾನಗಳಾಗಲಿ, ವಕೀಲರಾಗಲಿ, ಸೈನ್ಯವಾಗಲಿ ಇಲ್ಲ. ಇಲ್ಲಿ ವಾಸಿಸುವವರು ಮುಸ್ಲಿಮರು. ಗಂಡಸರಿಗಿಂತ ಹೆಂಗಸರೇ ಇಲ್ಲಿ ಹೆಚ್ಚು. ಮೀನುಹಿಡಿಯಲು ಸಮುದ್ರದ ಮೇಲೆ ಹೋದ ಗಂಡಸರು ಬಿರುಗಾಳಿಗೆ ಸಿಕ್ಕಿ ಕಾಣೆಯಾಗುವರು; ಉದ್ಯೋಗವನ್ನರಸಿ ಬೇರೆ ದೇಶಗಳಿಗೆ ಪುರುಷರು ಹೋಗುವುದರಿಂದ ಇಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚು. ಈ ದ್ವೀಪಗಳ ವೈಶಿಷ್ಟ್ಯವೆಂದರೆ ಸೂರ್ಯೋದಯ ಸೂರ್ಯಾಸ್ತ ಎರಡನ್ನೂ ನೋಡಬಹುದು. ಇವೆರಡೂ ವಿಹಂಗಮ ದೃಶ್ಯಗಳು. ಪುಟ್ಟದಾದರೂ ವಿವರಗಳ ದೃಷ್ಟಿಯಿಂದ ಇದು ಮಹತ್ವದ ಕೃತಿ.

**ಅಮೇರಿಕಾ:**

ಪ್ರವಾಸ ಕಥನಗಳಲ್ಲಿ ಅಮೇರಿಕಾವನ್ನು ಕುರಿತ ಕೃತಿಗಳು ಕನ್ನಡದ ಹೆಚ್ಚಿನ ಸಂಖ್ಯೆಯಲ್ಲಿ ಬಂದಿವೆ. ಅಮೇರಿಕಾವನ್ನು ವಿದ್ಯಾರ್ಥಿಗಳಾಗಿ ಇಲ್ಲವೆ ಸಭೆ/ ಸಮ್ಮೇಳನಗಳಲ್ಲಿ ಭಾಗವಹಿಸುವವರಾಗಿ ಸಂದರ್ಶಿಸಿರುವರು ಹಲವರು. ಇವರಿಗೆ ಅಮೆರಿಕನ್ನರ ಜೀವನ ವಿಧಾನಗಳನ್ನು, ಅವರ ಸಾಮಾಜಿಕ ಸಮಸ್ಯೆಗಳನ್ನು, ಭೋಗ ಜೀವನವನ್ನು, ಸ್ವಾತಂತ್ರ್ಯದ ಹುರುಪಿನಲ್ಲಿ ಸ್ವಚ್ಛಂದದ ನಡೆಯನ್ನು, ಯಾಂತ್ರೀಕರಣ ಹಾಗೂ ಆರ್ಥಿಕ ಸುಭದ್ರತೆ ತಂದೊಡ್ಡಿರುವ ಸಮಸ್ಯೆಗಳನ್ನು ಹತ್ತಿರದಿಂದ ಅಭ್ಯಾಸ ಮಾಡಲು ಹಾಗೂ ಅಮೇರಿಕಾ ದೇಶವನ್ನು ಸಾವಕಾಶವಾಗಿ ನಿಂತು ನೋಡಲು ಕಾಲಾವಕಾಶಗಳು ದೊರೆತಿವೆ. ಹೆಚ್ಚಿನ ಶಿಕ್ಷಣಕ್ಕಾಗಿ, ವ್ಯಾಪಾರ ಸಲುವಾಗಿ, ಬಂಧು-ಬಾಂಧವರನ್ನು, ರಕ್ತ ಸಂಬಂಧಿಗಳನ್ನು ಭೇಟಿ ಮಾಡುವ ಕಾರಣವಾಗಿ, ಕೇವಲ ದೇಶ ನೋಡಬೇಕೆಂಬ ಉದ್ದೇಶದಿಂದಾಗಿ ಅಮೇರಿಕಾಕ್ಕೆ ಪ್ರವಾಸಿಗರಾಗಿ ಹೋದವರೂ ಸಾಕಷ್ಟು ಮಂದಿ ಇರುವರು. ಇವರ ತಂಗಣೆಯ ಅಲ್ಪ ಕಾಲಾವಧಿಯದಾದ್ದರಿಂದ ಇವರ ಪ್ರವಾಸ ಕಥನವು ಪ್ರವಾಸಿಗರಾಗಿ (Tourist) ಅಮೆರಿಕದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡುವಷ್ಟಕ್ಕೆ ಸೀಮಿತವಾಗುತ್ತದೆ. ಭಾರತೀಯ ಸಾಂಪ್ರದಾಯಿಕ ಸಮಾಜದಿಂದ ಬಂದ ಇವರಿಗೆ ಅಮೆರಿಕದ ಸಾಮಾಜಿಕ ಜೀವನ ಕುತೂಹಲದ್ದಾಗುತ್ತದೆ.

ಯಾಂತ್ರೀಕರಣ, ಔದ್ಯೋಗಿಕರಣಗಳು ಅಮೆರಿಕನ್ ಸಮಾಜದ ಮೇಲೆ ಬೀರಿರುವ ಮಹತ್ತರ ಪರಿಣಾಮಗಳನ್ನು ಗಮನಿಸುವಾಗ ಅವರೆಲ್ಲರೂ ಅಮೆರಿಕನ್ನರ ಸುಖೀಜೀವನವನ್ನಷ್ಟೇ ಕಂಡಿಲ್ಲ, ಅದರ ಇನ್ನೊಂದು ಮುಖವಾದ ಅಶಾಂತಿ, ಅತೃಪ್ತಿಯ ಬದುಕನ್ನೂ ಕಂಡಿರುವರು. ಕಾರಂತರಂತಹ ಒಬ್ಬಿಬ್ಬರು ಅಮೆರಿಕನ್ನರ ಕಲಾ ಶ್ರೀಮಂತಿಕೆ, ಸೌಂದರ್ಯೋಪಾಸನೆ, ಹಸಿರು ಸಂಪತ್ತಿನ ಬಗೆಗಿನ ತೀವ್ರಾಸಕ್ತಿ ಇವುಗಳನ್ನು ವಿಶೇಷವಾಗಿ ಗಮನಿಸಿರುವರು. ಅಮೆರಿಕನ್ನರ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಹಲವು ಮಜಲುಗಳ ಚಿತ್ರವನ್ನು ಡಾ. ವಿ.ಕೃ. ಗೋಕಾಕ್, ಡಾ. ಬಿ.ಜಿ.ಎಲ್.

ಸ್ವಾಮಿ, ಡಾ. ಕೃಷ್ಣಾನಂದ ಕಾಮತ್, ಡಾ. ಗೊರೂರು, ಪ್ರೊ. ಎ.ಎನ್. ಮೂರ್ತಿರಾವ್, ಡಾ. ಪ್ರಭುಶಂಕರ್, ಡಾ. ಜಿ.ಎಸ್. ಶಿವರುದ್ರಪ್ಪ -ಇವರೇ ಮೊದಲಾದವರು ಕೊಟ್ಟಿರುವರು.

ಅಮೇರಿಕ ಸಂಯುಕ್ತ ಸಂಸ್ಥಾನಗಳನ್ನು ಹೊಸದಾಗಿ ನೋಡಲು ಅಥವಾ ಕಲಿಯಲು ಹೋಗುವವರಿಗೆ ಸಹಾಯವಾಗಲಿ ಎಂದು ಸದುದ್ದೇಶದಿಂದ ಕನ್ನಡದಲ್ಲಿ ಎರಡು ಕೃತಿಗಳಿವೆ ಬಂದಿವೆ. ಮೊದಲನೆಯದು 'ಸಂಯುಕ್ತ ಸಂಸ್ಥಾನಗಳು ಪರಿಚಯ ಮಾಡಿಕೊಳ್ಳಿ' ಎಂಬುದು ನ್ಯೂಯಾರ್ಕಿನ ಅಂತರಾಷ್ಟ್ರೀಯ ಶಿಕ್ಷಣ ಪ್ರತಿಷ್ಠಾನದವರು ಪ್ರಕಟಿಸಿರುವ 'Meet the U.S.A.' ಎಂಬ ಆಂಗ್ಲ ಗ್ರಂಥದ ಕನ್ನಡ ರೂಪ. ಇದನ್ನು ಕನ್ನಡಿಸಿರುವವರು ಪ್ರೊ. ಜಿ. ವೆಂಕಟಸುಬ್ಬಯ್ಯ. ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ಬೇರೆ ಬೇರೆ ಕಾರಣಗಳಿಂದ ಬರುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ಅಂತಹವರಿಗೆ ಅದರ ಸಾಮಾನ್ಯ ಪರಿಚಯ ಮಾಡಿಕೊಡುವ ಅಗತ್ಯವಿದ್ದು ಆ ಉದ್ದೇಶದಿಂದಲೇ ಇದನ್ನು ಹೊರತರಲಾಗಿದೆ. ಎರಡನೆಯದು 'ಇಂದಿನ ಅಮೆರಿಕ' ಇದನ್ನು ಮದರಾಸಿನ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರು ಹೊರತಂದಿರುವವರು. ಪ್ರೊ. ಶ್ರೀಪತಿ ಶ್ರೀದೇವಿಯವರ ಮೂಲಕೃತಿಯನ್ನು ಕನ್ನಡಿಸಿರುವವರು ಎಂ.ವಿ. ಶ್ರೀನಿವಾಸ್‌ರವರು. ಇದರಲ್ಲಿ ಅಮೆರಿಕದ ಐತಿಹಾಸಿಕ ಹಿನ್ನೆಲೆ, ಸಂಪ್ರದಾಯ ಮತ್ತು ಸಂಸ್ಕೃತಿ, ಶಿಕ್ಷಣವ್ಯವಸ್ಥೆ, ಮತ-ಧರ್ಮ, ಜನತೆ, ಸಾಮುದಾಯಿಕ ಸಂಪರ್ಕ ಸಾಧನೆ -ಇದನ್ನು ಕ್ರಮವಾಗಿ ತಿಳಿಸಿದ್ದು ಈ ಕೃತಿಯು ಅಮೇರಿಕಾ ದೇಶದ ಸ್ಥೂಲ ಪರಿಚಯ ಮಾಡಿಕೊಡುತ್ತದೆ.

ಪ್ರೊ. ವೈ.ಆರ್. ಮೋಹನ್‌ರವರ **ಅಮೇರಿಕಾಯಣವು** ಅಮೆರಿಕೆಯ ಪ್ರವಾಸ ಕಥನವಲ್ಲ. ಅದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂಕ್ಷಿಪ್ತ ಇತಿಹಾಸವನ್ನು ವಿವರಿಸುವ ಹೆಬ್ಬೊತ್ತಿಗೆ. ಪ್ರೊ. ವೈ.ಆರ್. ಮೋಹನ್‌ರವರು ಬೆಂಗಳೂರಿನಿಂದ ವಲಸೆ ಹೋದ ಅಮೆರಿಕನ್ನರು; ಒಳ್ಳೆಯ ಸಮಾಜಶಾಸ್ತ್ರಜ್ಞರು. ಅಮೆರಿಕನ್ ಇತಿಹಾಸವನ್ನು ಚೆನ್ನಾಗಿ ಅಧ್ಯಯನ ಮಾಡಿ, ಹತ್ತಾರು ಮೂಲಗಳಿಂದ ಮಾಹಿತಿ ಕಲೆ ಹಾಕಿ ಮಹತ್ವದ ಕೃತಿಯನ್ನು ಕನ್ನಡಕ್ಕೆ ಕೊಟ್ಟಿರುವರು. ೨೧ ಅಧ್ಯಾಯಗಳಲ್ಲಿ ಅಮೆರಿಕದ ಭೌಗೋಳಿಕ ಪರಿಸರದ ಪರಿಚಯದಿಂದ ಪ್ರಾರಂಭಿಸಿ ವಸಾಹತು ಸ್ಥಾಪನೆಯಿಂದ ಹಿಡಿದು ಇತ್ತೀಚೆಗೆ ಅಧಿಕಾರದಿಂದ ನಿವೃತ್ತಿ ಹೊಂದಿದ ಅಧ್ಯಕ್ಷ ಬಿಲ್‌ಕ್ಲಿಂಟನ್‌ವರೆಗೆ ಮುಖ್ಯಾಂಶಗಳೇನನ್ನೂ ಬಿಡದೆ ಪರಿಚಯಿಸಿರುವರು. ಈ ಕೃತಿ ರಚನೆಗೆ ಪ್ರೇರಣೆ ಹೇಗೆ ಬಂದಿತು ಎಂಬುದನ್ನು ಲೇಖಕರೇ ಹೀಗೆ ಪ್ರಸ್ತಾವನೆಯಲ್ಲಿ ಹೇಳಿಕೊಂಡಿರುವರು: "...ನಾನು ಈ ದೇಶಕ್ಕೆ ಬಂದಾಗಿನಿಂದಲೂ ಈ ದೇಶದ ಬಗ್ಗೆ ಆಳವಾಗಿ ಆಲೋಚಿಸಿದ್ದೇನೆ, ವಿಸ್ಮಯಪಟ್ಟಿದ್ದೇನೆ

ಮತ್ತು ಮೆಚ್ಚುಗೆ ವ್ಯಕ್ತಪಡಿಸಿದ್ದೇನೆ. ಕೆಲವು ಪ್ರಾಚೀನ ದೇಶಗಳಿಗೆ ಹೋಲಿಸಿದರೆ ಅಮೇರಿಕಾ ಹೊಚ್ಚ ಹೊಸ ದೇಶ. ಕಾಲದ ದೃಷ್ಟಿಯಿಂದ ನೋಡಿದರೆ ನಾಲ್ಕೈದು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ದೇಶಗಳ ಮುಂದೆ ಅಮೇರಿಕ ಕೇವಲ ಎರಡು ಶತಮಾನಗಳು ತುಂಬಿ ಮೂರನೆಯ ಶತಮಾನಕ್ಕೆ ಕಾಲಿರಿಸಿರುವ ಪಡ್ಡೆ ದೇಶ. ಆದರೆ ಸಹಸ್ರಾರು ವರ್ಷಗಳ ಅವಧಿಯಲ್ಲಿ ಆ ದೇಶಗಳು ಸಾಧಿಸಲಾರದ ಅದ್ಭುತಗಳನ್ನು ಅಮೇರಿಕ ಅಲ್ಪಾವಧಿಯಲ್ಲಿ ವಿಸ್ಮಯಪಡುವಂತೆ ಸಾಧಿಸಿ ವಯಸ್ಸಿನಲ್ಲಿ ಪಡ್ಡೆಯಾದರೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ, ವಿಜ್ಞಾನದಲ್ಲಿ, ವಾಣಿಜ್ಯದಲ್ಲಿ, ಕೈಗಾರಿಕೆಯಲ್ಲಿ, ಕೃಷಿ-ಪಶುಪಾಲನೆಯಲ್ಲಿ ಮತ್ತು ನೆಲ, ಜಲ ಹಾಗೂ ಬಾಹ್ಯಾಕಾಶ ಸಂಶೋಧನೆಗಳಲ್ಲಿ ಮಿಕ್ಕ ಎಲ್ಲ ದೇಶಗಳನ್ನೂ ಮೀರಿಸಿ ಮುಂಚೂಣಿ ಸ್ಥಾನದಲ್ಲಿ ನಿಂತಿರುವ ಕೌತುಕವಾಗಿದೆ!"

"...ನಾನು ಭಾರತದಲ್ಲಿದ್ದಾಗ ನನಗೆ ಅಮೇರಿಕದ ಸ್ಥೂಲ ಪರಿಚಯವಿತ್ತೇ ವಿನಾ ನಿಕಟ ಪರಿಚಯದಿಂದ, ಕಣ್ಣಾರೆ ಕಂಡಾಗ ಉಂಟಾಗುವ ವಿಸ್ಮಯ ಅನುಭವಿಸಿರಲಿಲ್ಲ. ಅಮೇರಿಕಕ್ಕೆ ವಲಸೆ ಬಂದು ನೆಲೆಸಿದ ಮೇಲೆ ನಾನಾ ಪ್ರಾಂತ್ಯಗಳ ಪರ್ಯಟನೆ ಮಾಡಿ ಅಮೇರಿಕದ ಪ್ರಕೃತಿ ಸಂಪತ್ತನ್ನು ಕಂಡು ಬೆರಗಾಗಿದ್ದೇನೆ. ನಿತ್ಯಜೀವನದಲ್ಲಿ ಮತ್ತು ಕಾರ್ಯರಂಗದಲ್ಲಿ ಅಮೇರಿಕನ್ನರೊಡನೆ ವ್ಯವಹರಿಸುವಾಗ ಅವರ ನಡೆ, ನುಡಿ, ನಂಬಿಕೆಗಳು, ವ್ಯಕ್ತಿತ್ವ ಮತ್ತು ಪೂರ್ವಾಗ್ರಹಗಳ ಪರಿಚಯವಾಗಿ ಈ ಜನ ಎರಡು ಶತಮಾನಗಳೊಳಗೆ ಇಷ್ಟು ಸಮೃದ್ಧ ರಾಷ್ಟ್ರವನ್ನು ಹೇಗೆ ನಿರ್ಮಾಣ ಮಾಡಿದರು ಎನ್ನುವ ಪ್ರಶ್ನೆ ನನ್ನ ಕುತೂಹಲವನ್ನು ಕೆರಳಿಸಿ ಅಮೇರಿಕದ ಇತಿಹಾಸವನ್ನು ಕುರಿತ ಪುಸ್ತಕಗಳನ್ನು ಓದುವ ಹವ್ಯಾಸವನ್ನು ನಾನು ಬೆಳೆಸಿಕೊಂಡೆ..."

ವೈ.ಎಸ್. ಮೋಹನ್ ಅಮೇರಿಕದ ಇತಿಹಾಸವನ್ನು ಕನ್ನಡದಲ್ಲಿ ಸರಳವಾದ ಕಥನ (Narrative) ಶೈಲಿಯಲ್ಲಿ ಬರೆದಿರುವರು. ಬಹುಶಃ ಅಮೇರಿಕದ ಇತಿಹಾಸವನ್ನು ಭಾರತದಿಂದ ಹೋಗಿ ಅಲ್ಲಿ ನೆಲೆಸಿ ಲೇಖಕರು ಬರೆದಿರುವುದರಿಂದ ಇದಕ್ಕೊಂದು ವಿಭಿನ್ನ ದೃಷ್ಟಿಕೋನ ಪ್ರಾಪ್ತವಾಗಿದೆ. ಅಮೇರಿಕವನ್ನು ಕಂಡದ್ದು, ಗ್ರಹಿಸಿದ್ದು ಭಾರತೀಯವಾದ ಕಣ್ಣು, ಮನಸ್ಸು. ಪರಸ್ಪರ ವಿರುದ್ಧವಾದ ಎರಡು ಸಂಸ್ಕೃತಿಗಳ ಸಂಘರ್ಷದ ಹಿನ್ನೆಲೆ ಈ ಕೃತಿಗಿರಬೇಕಾಗಿತ್ತು. ಆದರೆ ಅದು ಬಂದಿಲ್ಲ. ಕಾರಣ, ಅಮೇರಿಕದ ಎರಡು ಶತಮಾನಗಳ ಗತ ಇತಿಹಾಸವನ್ನು ಸರಳವಾಗಿ ನಿರೂಪಣೆ ಮಾಡುವುದು, ಅಮೇರಿಕದ ಇತಿಹಾಸ ತಿಳಿಯಬೇಕೆನ್ನುವವರಿಗೆ ಒಂದು ಅಧಿಕೃತ ಪಠ್ಯವನ್ನು ಒದಗಿಸುವುದು ವೈ.ಎಸ್. ಮೋಹನ್‌ರವರ ಉದ್ದೇಶವಿರುವಂತಿದೆ. ಈ ಹೆಬ್ಬೊತ್ತಿಗೆಯ ರಚನೆ ಶ್ರಮದಾಯಿಯಾದದ್ದು. ತನ್ನ ಉದ್ದೇಶವನ್ನು ಪೂರೈಸುವಲ್ಲಿ ಈ ಕೃತಿ ಯಶಸ್ಸನ್ನು ಕಂಡಿದೆ.

ಅಮೇರಿಕಾಕ್ಕೆ ನಿತ್ಯವೂ ಬೇರೆ ಬೇರೆ ಕಾರಣಗಳಿಗಾಗಿ ಕನ್ನಡಿಗರು ಭೇಟಿ ಕೊಡುತ್ತಿರುವರು. ಈಗಂತೂ ಐಟಿ/ಬಿಟಿಯವರು ತಮ್ಮ ಪ್ರಾಜೆಕ್ಟ್ ಕೆಲಸಗಳಿಗಾಗಿ, ಹೆಚ್ಚಿನ ತರಬೇತಿಗಾಗಿ ಅಮೇರಿಕಾಕ್ಕೆ ತಮ್ಮ ತಜ್ಞರನ್ನು ಕಳುಹಿಸುತ್ತಲಿರುವರು. ಸಾಫ್ಟ್‌ವೇರ್ ಇಂಜನಿಯರ್‌ಗಳು ಉದ್ಯೋಗಕ್ಕಾಗಿ ಅಮೇರಿಕಾಕ್ಕೆ ವಲಸೆ ಹೋಗಿರುವರು. ಅಲ್ಲಿಗೆ ಹೋಗಿ ಬಂದವರೆಲ್ಲರೂ ತಮ್ಮ ಅನುಭವಗಳಿಗೆ ಸಾಹಿತ್ಯಕ ರೂಪ ಕೊಡಲು ಸಾಧ್ಯವಿಲ್ಲ. ಕೆಲವರಿಗೆ ಸಮಯದ ಅಭಾವವಿದ್ದರೆ ಮತ್ತೆ ಹಲವರಿಗೆ ಅಭಿವ್ಯಕ್ತಿಗೆ ಸಾಕಷ್ಟು ಭಾಷಾ ಸಂಪತ್ತಿಯಿರುವುದಿಲ್ಲ. ಕೆಲವರು ಸೋಮಾರಿತನದಿಂದ ಬರೆಯದೆ ಮುಂದೂಡಿರುವರು. ತಮ್ಮ ಪ್ರವಾಸಾನುಭವಗಳನ್ನು ಪುಸ್ತಕ ರೂಪದಲ್ಲಿ ಹೇಳಲು ಸಮಯ ಹಾಗೂ ವ್ಯವಧಾನವಿಲ್ಲದವರು ಪತ್ರಿಕೆಗಳಿಗೆ ಲೇಖನ ಬರೆದಿರುವರು.

ಅಮೆರಿಕಾಕ್ಕೆ ಅಲ್ಲಿನ ಜನರು ಪ್ರೀತಿಯಿಂದಿಟ್ಟಿರುವ ಹೆಸರು ಕೊಲಂಬಿಯಾ. ೧೯೪೮ರಿಂದ ೧೯೫೦ರವರೆವಿಗೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಪಡೆದು ವೈ.ಎಸ್. ಲೂಯಿಸ್‌ರವರು ಅಮೇರಿಕಾ ಯಾತ್ರೆ ಮಾಡಿಬಂದರು. ಅಮೆರಿಕೆಯಲ್ಲಿನ ವಾಸ್ತವ್ಯದಲ್ಲಿ ಅಲ್ಲಿನ ಜನರ ನಡೆ-ನುಡಿ-ಆಚಾರಗಳ ವಿಚಾರಗಳ ಬಗೆಗೆ ಭಾರತದಲ್ಲಿನ ತಮ್ಮ ಆಪ್ತಮಿತ್ರರಿಗೆ ಬರೆದ ಹತ್ತೊಂಬತ್ತು ಪತ್ರಗಳ ಗುಚ್ಛವೇ **'ಕೋಲಂಬಿಯಾ ಯಾತ್ರೆ'**. ವೈ.ಎಸ್. ಲೂಯಿಸ್‌ರವರು ಕವಿಗಳು. ಅವರ 'ಗಾನಲಹರಿ'ಯೆಂಬ ಕವನ ಸಂಕಲನ ಈ ಮೊದಲೆ ಬೆಳಕು ಕಂಡಿದೆ. ಪತ್ರರೂಪದಲ್ಲಿರುವ ಅವರ ಅಮೆರಿಕಾದ ಅನುಭವಗಳು ಸ್ವಾರಸ್ಯಪೂರ್ಣವಾಗಿವೆ. ಚುರುಕಿನ ವಿಷಯ ನಿರೂಪಣೆ ಈ ಕೃತಿಯ ವೈಶಿಷ್ಟ್ಯಗಳಲ್ಲೊಂದು. ಕೃತಿಯುದ್ದಕ್ಕೂ ಲೇಖಕರು ಸುತ್ತಾಡಿದ ಪ್ರದೇಶಗಳ ವಿವರಗಳಿವೆ. ಹಾಗೆಯೇ, ಸ್ನೇಹಮಯಿಯಾದ ಲೇಖಕರು ತಮ್ಮ ಅಮೇರಿಕಾದ ತಂಗಣೆಯಲ್ಲಿ ಪಡೆದ ಸ್ನೇಹಿತರು, ಅವರೊಡನೆ ಕಳೆದ ಆನಂದದ ರಸಮಯ ಸನ್ನಿವೇಶಗಳು, ಆಚರಿಸಿದ ಹಬ್ಬಗಳು -ಇವುಗಳ ಸೊಗಸಾದ ಚಿತ್ರವನ್ನೂ ತಮ್ಮ ಕೃತಿಯಲ್ಲಿ ಕೊಟ್ಟಿರುವರು. ತಾವು ಸಂದರ್ಶಿಸಿದ ಭಾಗದ ಜನರ ನಡೆ-ನುಡಿ, ಆಚಾರಗಳು, ಅವರ ಒಲವುಗಳು, ಅವರ ಊಟೋಪಚಾರಗಳು, ಅವರ ಸ್ನೇಹಪ್ರಿಯತೆ, ಭಾರತೀಯ ಸಂಗೀತ ನೃತ್ಯಗಳ ಬಗೆಗಿನ ತೀವ್ರವಾದ ಆಸಕ್ತಿ, ಅವರ ವರ್ಣವ್ಯವಸ್ಥೆ -ಹೀಗೆ ಲೇಖಕರ ಅನುಭವಪೂರ್ಣವಾದ ವಿವರಗಳು ಕೃತಿಯಲ್ಲಿ ದಾಖಲಾಗಿವೆ. ಅಮೆರಿಕಾದ ವರ್ಣವ್ಯವಸ್ಥೆಯಲ್ಲಿನ ದೋಷಗಳನ್ನು ಹೇಳುವಾಗ, ವಿದ್ಯಾಭ್ಯಾಸಕ್ಕೆಂದು ಬಂದ ಭಾರತೀಯ ವಿದ್ಯಾರ್ಥಿಗಳ ಹಮ್ಮಿನ ವರ್ತನೆಯನ್ನು ತಿಳಿಸುವಾಗ, ಲಂಡನ್ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಯಾದ ಮೇಲೆ ಉಂಟಾದ ನಿರಾಶೆಯನ್ನು ತಿಳಿಸುವಾಗ ಅವರ ಮುಕ್ತ ಮನಸ್ಸಿನ ಅನಿಸಿಕೆಗಳು ಮುಖ್ಯವಾಗುತ್ತವೆ. ಲೇಖಕರು ಕ್ರಿಶ್ಚಿಯನ್ ಆದರೂ ಭಾರತೀಯರು; ಹಿಂದೂ ಧರ್ಮದ ಅದರಲ್ಲೂ ರಾಮಕೃಷ್ಣಾಶ್ರಮದ ಭಕ್ತರು.

ಭಾರತೀಯ ಸ್ನೇಹಿತರೊಡನೆ ಬೆರೆಯುವಾಗ ಹಾಗೂ ಅಮೇರಿಕಾದ ಗೆಳೆಯರೊಡನೆ ಉಲ್ಲಾಸದಿಂದ ಕಾಲ ಕಳೆಯುವಾಗ ಅವರು ಹಿಂದೂವಾಗಿಯೇ ವರ್ತಿಸುವರು.

ನಾಡಿಗ ಕೃಷ್ಣಮೂರ್ತಿಯವರ **ಸಾಗರದಾಚೆಯು** ಹೆಚ್ಚಿನ ಶಿಕ್ಷಣಕ್ಕೆಂದು ಅಮೆರಿಕಾಕ್ಕೆ ತೆರಳಿದ ಅವರ ಅನುಭವ ಕಥನವಾಗಿದೆ. ಅಮೇರಿಕಾದಲ್ಲಿ ವ್ಯಾಸಂಗ ಮಾಡಲು ಅಗತ್ಯವಿದ್ದ ಹಣ ಹೊಂದಿಸಲು ಲೇಖಕರು ಪಟ್ಟ ಅಪಾರ ಶ್ರಮ ಅನಗತ್ಯವಾಗಿ ಕೃತಿಯ ಪ್ರಾರಂಭದಲ್ಲಿ ಬಂದಿದೆ. ಕಷ್ಟಪಟ್ಟು ಹಣ ಕಲೆಹಾಕಿ ಬಂಧು-ಬಳಗದವರಿಂದ ಬೀಳ್ಕೊಂಡು ಹಡಗನ್ನೇರಿ ಬಂಗಾರದ ಭೂಮಿಗೆ (= ಅಮೇರಿಕಾಕ್ಕೆ) ಕಾಲಿಡುವವರೆಗಿನ ಕಥಾಂಶ ಕೃತಿಯ ನೂರುಪುಟಗಳನ್ನು ವ್ಯಾಪಿಸಿದೆ. (ಬರಿಗೈಯಲ್ಲಿ ಅಮೇರಿಕಾಕ್ಕೆ ಹೊರಟ ತಮ್ಮ ಸಾಹಸವನ್ನು ವೈಭವೀಕರಿಸುವ ಧೋರಣೆ ಇಲ್ಲಿ ಎದ್ದುಕಾಣುತ್ತದೆ.) ಅಮೆರಿಕದ ಹವಾಮಾನ ಹಾಗೂ ಊಟ ಒಗ್ಗದೆ ಎರಡು ಬಾರಿ ಭಾರತಕ್ಕೆ ಹಿಂತಿರುಗಲು ನಿರ್ಧರಿಸಿ ಗಂಟುಮೂಟೆ ಕಟ್ಟಿ ಹೊರಟು ಎರಡೂ ಸಂದರ್ಭಗಳಲ್ಲಿ ನಿರ್ಧಾರ ಬದಲಿಸಿ ವಿದ್ಯಾಭ್ಯಾಸ ಪೂರೈಸಲು ಹಿಂತಿರುಗಿದ ಪ್ರಸಂಗವನ್ನು ಲೇಖಕರು ಸೊಗಸಾಗಿ ನಿರೂಪಿಸಿರುವರು. ಗಾಂಧೀಜಿ ಹಾಗೂ ಅವರ ತತ್ವಗಳ ಬಗೆಗೆ ಅಮೆರಿಕನ್ನರಿಗೆ ಲೇಖಕರು ನೀಡಿದ ಉಪನ್ಯಾಸಗಳು, ಅಮೆರಿಕದ ನಾಗರಿಕರಿಗೆ ಇರುವ ಸೌಕರ್ಯಗಳು, ಅಮೆರಿಕದ ವಿಶ್ವವಿದ್ಯಾಲಯಗಳು, ಅಮೆರಿಕದ ಪ್ರತಿಕೋದ್ಯಮ, ಅಮೆರಿಕದ ಮಹಿಳಾ ಪ್ರತಿಕೋದ್ಯಮಿಗಳು ಹಾಗೂ ಪತ್ರಿಕೋದ್ಯಮ ಶಾಲೆಗಳು -ಇವೇ ಮೊದಲಾದ ವಿಷಯಗಳ ಬಗೆಗಿನ ವಿವರಗಳು ಈ ಕೃತಿಯ ಬಹುಭಾಗವನ್ನು ಆಕ್ರಮಿಸಿದೆ. ಲೇಖಕರು ತಮ್ಮ ಆಸಕ್ತಿಯ ವಿಷಯವಾದ ಪತ್ರಿಕೋದ್ಯಮದ ಬಗೆಗೆ ಓದುಗರಿಗೆ 'ಬೋರ್' ಅನ್ನಿಸುವಷ್ಟು ಹೇಳಿರುವರು. ಈ ಕೃತಿ ಅಮೆರಿಕಾಕ್ಕೆ ಹೊಸದಾಗಿ ಒಂದು ಪುಟ್ಟ ಗೈಡ್ ರೀತಿಯಲ್ಲಿದೆ. ಅದಕ್ಕೆ ಹೊರತಾಗಿ ಗಾಢವಾದ ಪ್ರಭಾವವನ್ನು (ಈ ಕೃತಿ) ಓದುಗನ ಮನಸ್ಸಿನ ಮೇಲೆ ಬೀರುವುದೇ ಇಲ್ಲ.

ಆರು ವರ್ಷ ಅಮೆರಿಕಾದಲ್ಲಿ ನೆಲಸಿ ಅಮೆರಿಕನ್ನರೊಡನೆ ಬೆರೆಯುವ ಸಂದರ್ಭ ಬಂದಾಗ ತಮಗಾದ ಅನುಭವ ಅನಿಸಿಕೆಗಳನ್ನು ನವಿರಾದ ಹಾಸ್ಯದ ಮೇಲ್ಮೈಯಲ್ಲಿ ಡಾ. ಬಿ.ಜಿ.ಎಲ್. ಸ್ವಾಮಿಯವರು **ಅಮೆರಿಕದಲ್ಲಿ ನಾನು** ಎಂಬ ತಮ್ಮ ಕೃತಿಯಲ್ಲಿ ಹೇಳಲು ಪ್ರಯತ್ನಿಸಿರುವರು. ಎಲ್ಲೇ ಆಗಲಿ ಮನುಷ್ಯ ಸ್ವಭಾವ ಒಂದೇ. ಅಮೆರಿಕಾದಲ್ಲಿ ಬೇರೆಯಲ್ಲ, ಇಂಡಿಯಾದಲ್ಲಿ ಬೇರೆಯಲ್ಲ. "ಹಾಸ್ಯಾಸ್ಪದವಾದಾಗ ನಾವೂ ಅವರಂತೆಯೇ, ಅವರೂ ನಮ್ಮಂತೆಯೇ. ಸಂದರ್ಭಗಳ ಸ್ವರೂಪ ಬೇರೆ ಬೇರೆ ಇರಬಹುದು. ಹಾಗೆಯೇ ನಗುವ ಬಾಯ ಅಗಲವೂ ಆಳವೂ ಬಗೆ ಬಗೆಯಾಗಿರಬಹುದು." ಈ ಹಿನ್ನೆಲೆಯಲ್ಲಿ 'ಅಮೆರಿಕದಲ್ಲಿ ನಾನು'ವಿನ ಅನುಭವ ಚಿತ್ರಗಳು ಅರಳಿವೆ.

ಹಡಗಿನಲ್ಲಿ ಶೌಚಕ್ಕೆ ಕುಳಿತಾಗ ಏಕಾಂತ ಭಂಗ-ಅದರ ನಿವಾರಣೆಗಾಗಿ ಮಾಡಿದ ಪ್ರಯತ್ನ; ಅಮೆರಿಕನ್ ಸ್ತ್ರೀಯರ ಟೋಪಿಯ ಮೇಲಿನ ಮೆಚ್ಚು ಹುಚ್ಚು; ಸೀರಿಯ ಹಗರಣ; ಸೆಕ್ರೆಟರಿಯ ಥ್ರಿಲ್ ಹಾಗೂ ಅದರ ಪರಿಣಾಮ -ಇದೆಲ್ಲಾ ಅಮೆರಿಕನ್ನರ ಹುಚ್ಚಾ ಬಟ್ಟೆ ವರ್ತನೆಗಳ ಬಗೆಗೆ ನಗೆಯ ಕಚಗುಳಿ ಇಡುತ್ತವೆ. ಈ ಕೃತಿಯಲ್ಲಿನ ಅಮೆರಿಕನ್ನರ ಹುಚ್ಚಾಟಗಳ ಒಂದೆರಡು ಸ್ವಾರಸ್ಯ ಪ್ರಸಂಗಗಳನ್ನು ಹೇಳದಿದ್ದರೆ ಅವುಗಳ ಪೂರ್ಣ ಪರಿಚಯವಾಗುವುದಿಲ್ಲ.

**ಟೋಪಿಯ ಪ್ರಸಂಗ**

ಇಂಡಿಯಾ ಬಿಡುವುದಕ್ಕೆ ಮುನ್ನ ಲೇಖಕರನ್ನು ಅವರ ಗೆಳೆಯರು 'ಹ್ಯಾಟಿಲ್ಲದೆ ಪರದೇಶ ಪ್ರಯಾಣ ಮಾಡುವುದುಂಟೆ? ನಿನ್ನ ಸೂಟಿಗೊಂದು ಗಾಂಭೀರ್ಯ ಕೊಡುತ್ತದೆ ಅದಿದ್ದೇ ಇರಬೇಕು' ಎಂದು ಉಪದೇಶಿಸಿದರು. ಮನೆಯವರು 'ತಲೆಗೊಂದು ಸೂರಿಲ್ಲದೆ ಮನೆಯಿಂದ ಹೊರಕ್ಕೆ ತಲೆಯಿಡುವುದೇ ಅಮರ್ಯಾದೆ; ಇನ್ನು ಹಾಗೆಯೇ ದೇಶದಿಂದ ಆಚೆ ಹೋಗುವುದು ಪೋಕರಿತನದ ಪರಮಾವಧಿ' ಎಂದು ವಾದಿಸಿದರು. ಕೊನೆಗೆ ಲೇಖಕರು ಕಾಶ್ಮೀರದ ಕಲೆಗಾರಿಕೆಯ ಶೈಲಿಯ, ರಟ್ಟು ರಟ್ಟಾದ ಮಡಚುವ ತೆರೆದ, ಕಲಾಕುಶಲತೆಯ ಕಸೂತಿಯಿದ್ದ ಟೋಪಿಯನ್ನು ಆರಿಸಿದರು. ಆ ಟೋಪಿ ಅಮೆರಿಕನ್ನರನ್ನು ಎಷ್ಟು ಆಕರ್ಷಿಸಿತೆಂದರೆ, ಲೇಖಕರಿಗೆ ಕಾಣದಂತೆ, ಅವರ ಬೆನ್ನ ಹಿಂದೆ ಹತ್ತಾರು ಜನ ಗುಂಪು ಗುಂಪಾಗಿ ಒಂದೆರಡು ಸಂದರ್ಭಗಳಲ್ಲಿ ಹಿಂಬಾಲಿಸಿ ಬಂದರು. ಒಂದು ಸಂದರ್ಭದಲ್ಲಿ ಪೊಲೀಸಿನವನೊಬ್ಬ ಲೇಖಕರ ಬಳಿ ಬಂದು, ಇವರು ನಿಮಗೆ ತೊಂದರೆ ಕೊಡುತ್ತಾರೆಯೇ? ಬೇಸರ ಮಾಡುತ್ತಾರೆಯೇ? ಎಂದು ಶ್ರದ್ಧೆಯಿಂದ ಕೇಳಿದ್ದೂ ಉಂಟು.

ಲೇಖಕರು ಕೆಲಸ ಮಾಡುತ್ತಿದ್ದ ಸ್ಥಳಕ್ಕೂ ವಾಸಿಸುತ್ತಿದ್ದ ಸ್ಥಳಕ್ಕೂ ಹತ್ತು ನಿಮಿಷದ ನಡಿಗೆ. ನಿತ್ಯವೂ ಬಸ್ಸಿಗಾಗಿ ಮನೆಯ ಎದುರಿನ ಬಸ್‌ಸ್ಟಾಪ್‌ನಲ್ಲಿ ಕಾಯುತ್ತಿದ್ದಾಗ ಆ ವೇಳೆಗೆ ಅಲ್ಲಿಗೆ ಅರವತ್ತು ವರ್ಷದ ಮುದುಕಿಯೊಬ್ಬಳೂ ಇಪ್ಪತ್ತೈದು ವರ್ಷದ ಹುಡುಗಿಯೊಬ್ಬಳೂ ಬರುತ್ತಿದ್ದರು. ಒಂದು ದಿನ ಹಿರಿಯ ಗೆಳೆಯರೊಬ್ಬರ ಮನೆಗೆ ಔತಣಕ್ಕೆ ಹೋಗಬೇಕಿದ್ದುದರಿಂದ ಲೇಖಕರು ಟೋಪಿ ಹಾಕಿಕೊಂಡು ಬಸ್‌ಸ್ಟಾಪಿಗೆ ಬಂದರು. ಯಥಾ ಪ್ರಕಾರ ಮುದುಕಿ ಹುಡುಗಿಯರ ಭೇಟಿಯಾಯಿತು. ಅವರಿಗೆ ಟೋಪಿಯ ಮೇಲೆ ಕಣ್ಣು. ತಾವೇ ಮೇಲೆಬಿದ್ದು ಲೇಖಕರೊಡನೆ ಮಾತಿಗಿಳಿದರು, ಟೋಪಿಯನ್ನು ಬಹಳ ಕೊಂಡಾಡಿದರು. ಸುತ್ತು ಬಳಸಿನ ಮಾತಾದ ಮೇಲೆ ಮುದುಕಿ "ನೋಡಿ, ನಾಳೆ ಸಂಜೆ ಡೋರಿಯ (ಡೋರಿ ಇವಳ ಮಗಳು) ಕಾಲೇಜಿನಲ್ಲಿ ಒಂದು ಪಾರ್ಟಿ ಇದೆ. ಒಳ್ಳೆಯ ಬಟ್ಟೆಬರೆಗಳನ್ನು ಹಾಕಿಕೊಂಡು ಹೋಗಬೇಕಾಗಿದೆ.

ಇದಕ್ಕೋಸ್ಕರವಾಗಿಯೇ ನೋಡಿ ಈ ಗೌನನ್ನು ತೆಗೆದುಕೊಂಡಿದ್ದೇವೆ" ಎಂದು ಗೌನನ್ನು ಬಿಚ್ಚಿ ತೋರಿಸಿದಳು. ಗೌನು ಊದಾ ಬಣ್ಣದ್ದು. ಲೇಖಕರ ಟೋಪಿಯೂ ಅದೇ ಬಣ್ಣದ್ದು. ಗೌನಿಗೊಪ್ಪುವ ತಲೆ ತೊಡಿಗೆ ಇಲ್ಲದ್ದರಿಂದ ಟೋಪಿಯನ್ನು ಒಂದೆರೆಡು ದಿನಗಳ ಮಟ್ಟಿಗೆ ಎರವಲು ಕೊಡಿರೆಂದು ಪ್ರಾರ್ಥಿಸಿದಳು. 'ಇದು ಗಂಡಸರ ಟೋಪಿ ಇದನ್ನು ಧರಿಸಿದರೆ ಜನ ನೋಡಿ ನಗುವುದಿಲ್ಲವೆ' ಎಂದು ತಮ್ಮ ಅನುಮಾನವನ್ನು ಲೇಖಕರು ಈ ಮಹಿಳೆಯ ಮುಂದಿಟ್ಟರು. 'ನಕ್ಕರೆ ಅದು ಅವರ ಹುಚ್ಚುತನವನ್ನು ತೋರಿಸುತ್ತದೆ ಅಷ್ಟೆ!' ಎಂದಳು ಡೋರಿ. ಜನ ನಗುತ್ತಾರೆಂದು ನಾವು ಸುಂದರ ವಸ್ತುಗಳನ್ನು ತೊಡದಿರುವುದಕ್ಕಾಗುತ್ತದೆಯೇ? ನಮ್ಮ ಡೋರಿ ರೂಪವಂತೆ. ಅವಳ ಈ ಗೌನು ಸೊಬಗಿನ ಗಟ್ಟಿ. ಅದರೊಡನೆ ಈ ಟೋಪಿ ಸೇರಿದರೆ...!' ಎಂದು ಡೋರಿಯ ಅಮ್ಮ ಗಾಳಿಯಲ್ಲಿ ತೇಲಾಡಲು ಮೊದಲಿಟ್ಟರು. ಡೋರಿಯಂತೂ ಆನಂದಪರವಶಳಾದಂತೆ ಅಭಿನಯಿಸಿದಳು.

'ಈ ಟೋಪಿಯನ್ನು ನಾನು ಧರಿಸಿ ಪಾರ್ಟಿಗೆ ಹೋದೆನಾದರೆ ಅಲ್ಲಿನ ಕಣ್ಣುಗಳೆಲ್ಲವೂ ನನ್ನ ಮೇಲೆಯೇ. ಜನ ನಗುವುದಿಲ್ಲ ಈ ಅಪರೂಪ ಸೌಂದರ್ಯಕ್ಕೆ ಮನಸೋತು, ತಮ್ಮ ಹತ್ತಿರ ಇಲ್ಲವಲ್ಲಾ ಎಂದು ಅಸೂಯೆ ಪಟ್ಟುಕೊಳ್ಳುತ್ತಾರೆ' ಎಂದಳು ಡೋರಿ. ಲೇಖಕರು ತಾಯಿ-ಮಗಳ ವಾದಕ್ಕೆ ಸೋತು ತಮ್ಮ ಟೋಪಿಯನ್ನು ಕೊಟ್ಟರು. ಪಾರ್ಟಿಯಾದ ಮೂರು ದಿನಗಳ ಮೇಲೆ ಲೇಖಕರಿಗೆ ಡೋರಿಯ ಮನೆಯಿಂದ ಕರೆ ಬಂದಿತು. ಕರೆ ಮನ್ನಿಸಿ ಮನೆಗೆ ಹೋದರೆ ಮನೆಯ ಯಜಮಾನ ಬೇರೆ ಯಾರೂ ಅಲ್ಲ. ಅವರಿಗೆ ಪ್ರಯೋಗಶಾಲೆಯಲ್ಲಿ ಪಾಠ ಹೇಳುತ್ತಿದ್ದ ಪ್ರೊಫೆಸರುಗಳಲ್ಲಿ ಒಬ್ಬರು. ಟೀ ಕುಡಿಯುತ್ತ ಕುಶಲ ಸಂಭಾಷಣೆ ನಡೆಸಿಯಾದ ಮೇಲೆ ಡೋರಿ ಲೇಖಕರ ಕೈಗೆ ನ್ಯೂಸ್‌ಪೇಪರ್ ಕಟಿಂಗ್ ಒಂದನ್ನು ಕೊಟ್ಟಳು. ಅದರ ಒಕ್ಕಣೆ ಹೀಗಿತ್ತು:

"ಲಿಬರಲ್ ಆರ್ಟ್ಸ್ ಯೂನಿಯನ್‌ನ ಆಶ್ರಯದಲ್ಲಿ ನಡೆದ ಪಾರ್ಟಿಯಲ್ಲಿ ಡೋರಿ ತೊಟ್ಟುಕೊಂಡಿದ್ದ ಟೋಪಿ ಆಹ್ವಾನಿತರನ್ನೆಲ್ಲ ಬೆರಗುಗೊಳಿಸಿತು. ಅದರ ನವೀನತೆಯೂ, ಸೊಬಗೂ, ಚಾತುರ್ಯವೂ ಎಲ್ಲರನ್ನೂ ಮೆಚ್ಚಿಸಿತು. ನಮ್ಮಲ್ಲಿರುವ ಉಡುಪು ತಯಾರಿಕೆಯ ಕಲೆಗಾರರು ಈ ಟೋಪಿಯನ್ನು ಪರೀಕ್ಷಿಸುವುದು ಭವಿಷ್ಯದ ಫ್ಯಾಷನ್ ದೃಷ್ಟಿಯಿಂದ ಅವಶ್ಯಕವಾಗಿದೆ."

ಮಗಳು, ತಂದೆ, ತಾಯಿಯರಿಗೆ ಹಿಗ್ಗೋ ಹಿಗ್ಗು. ಏನೋ ಮಹತ್ಕಾರ್ಯವನ್ನು ಸಾಧಿಸಿದಷ್ಟು ಹೆಮ್ಮೆ, ಸಂತೋಷ. ಕಳೆದ ಮೂರು ದಿನಗಳಿಂದ ಅವರ ಮನೆಗೆ ತಂಡತಂಡವಾಗಿ ಜನರು-ಡೋರಿಯ ಗೆಳತಿಯರು ಮತ್ತು ಪಾರ್ಟಿಯ ವಿಷಯವನ್ನು ಪೇಪರುಗಳಲ್ಲಿ ಓದಿದವರು-ಟೋಪಿಯನ್ನು ಪರೀಕ್ಷಿಸಿ ತಮಗೂ ಅಂಥದೊಂದು

ಬೇಕೆಂದು ಕೇಳುತ್ತಿರುವರೆಂದೂ, ಪ್ರತಿದಿನವೂ ಹತ್ತಾರು ಜನ ಫೋನಿನಲ್ಲಿ ಇದೇ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆಂದೂ ಒಬ್ಬೊಬ್ಬರೂ ಬಿಡಿಸಿ ಬಿಡಿಸಿ, ತಿರುಗಿಸಿ ತಿರುಗಿಸಿ, ಉಪಮಾನ ಉಪಮೇಯ ಉದಾಹರಣೆಗಳೊಡನೆ ಹೇಳಿದರು. ಲೇಖಕರಿಗೆ ಪ್ರತ್ಯುತ್ತರವನ್ನು ಹೇಳಲೂ ತೋರಲಿಲ್ಲ. 'ಇದೇನು ಅಭ್ಯಾಸ!' ಹುಚ್ಚರನ್ನು ಕಂಡು ಮೆಚ್ಚುವವರನ್ನು ಹುಚ್ಚರೆಂದು ಕರೆಯಬೇಕೆ ಅಥವಾ ಬೆಪ್ಪರೆಂದು ಕರೆಯಬೇಕೆ?' ಎಂಬ ಪ್ರಶ್ನೆಯೊಂದು ಮಾತ್ರ ಒಂದೇ ಸಮನೆ ಅವರ ಮೆದುಳನ್ನು ಮೀಟುತ್ತಿತ್ತು.

**ಸೀರೆಯ ಕತೆ**

ಲೇಖಕರ ಗೆಳೆಯರೊಬ್ಬರ ಹೆಂಡತಿ ಉಟ್ಟಿದ್ದ ಸೀರೆಯನ್ನು ನೋಡಿದ ಅಮೆರಿಕನ್ ಮಹಿಳೆಯರು ದಂಗಾದರು. ಪ್ರದರ್ಶನಪ್ರಿಯರಾದ ಅವರು 'ದೇವರು ಸೌಂದರ್ಯಮಯವಾದ ಕಾಲುಗಳನ್ನು ನಮಗೆ ಕೊಟ್ಟಿರುವಾಗ ನಾವದನ್ನು ಪ್ರದರ್ಶಿಸಿಕೊಳ್ಳುವುದರಲ್ಲಿ ತಪ್ಪೇನಿದೆ?' ಎಂದು ಸವಾಲು ಹಾಕುವರು. ಇಂಥವರೂ ಸೀರೆಗೆ ಮನಸೋತರು. ಪಾರ್ಟಿಯಲ್ಲೂ ಉಟ್ಟು ಮೆರೆಯಬೇಕೆಂಬ ಆಸೆ ಹೊತ್ತರು. ಉಡುಪು ಮೈಯನ್ನು ಪೂರ್ತಿ ಮುಚ್ಚಿಬಿಟ್ಟು ದೇಹದ ಸ್ವಾಭಾವಿಕವಾದ ಸೌಂದರ್ಯವನ್ನು ಮರೆಮಾಡಬಾರದೆಂಬುದು ಇವರ ವಿಚಾರ. ಹೇಗಾದರೂ ಮಾಡಿ ಸೀರೆಯನ್ನುಡಬೇಕು ಆದರೆ, ಅದು ಮೊಣಕಾಲಿನಿಂದ ಮೇಲಕ್ಕಿರಬೇಕು ಎಂಬ ನಿಲುಮೆ ಅಷ್ಟೆ. ಈ ಆಸೆಯನ್ನು ಕಾರ್ಯರೂಪಕ್ಕೆ ಮೊದಲು ತಂದವಳು ಪೆಗ್ಗಿ. ತನ್ನ ಮನೆಯ ಕಾಕ್‌ಟೈಲ್ ಪಾರ್ಟಿಯಲ್ಲಿ ಸೀರೆಯುಟ್ಟು ಅತಿಥಿಗಳನ್ನು ಬರಮಾಡಿಕೊಳ್ಳಬೇಕೆಂಬ ತನ್ನ ಆಸೆಯನ್ನು ಗಂಡನೊಂದಿಗೆ ಪೆಗ್ಗಿ ಹೇಳಿಕೊಂಡಳು. ಗಂಡನಿಗೆ ಹೆಂಡತಿ ಸೀರೆಯನ್ನು ಅವಲಕ್ಷಣವಾಗಿ ಉಟ್ಟು ಅತಿಥಿಗಳ ಮುಂದೆ ನಗೆಪಾಟಲಿಗೆ ಗುರಿಯಾಗುವುದು ಇಷ್ಟವಿಲ್ಲ. ಹೆಂಡತಿ ಅತ್ತೂ ಕರೆದು ರಂಪ ಮಾಡಿದ್ದರಿಂದ ಆತ ಅನಿವಾರ್ಯವಾಗಿ ಒಪ್ಪಬೇಕಾಯಿತು. ಪಾರ್ಟಿ ನಿಶ್ಚಯವಾಯಿತು. ಅತಿಥಿಗಳಿಗೆ ಆಹ್ವಾನವೂ ಹೋಯಿತು. ಪೆಗ್ಗಿ ತನ್ನ ಹಿಂದೂ ಗೆಳತಿಯೊಬ್ಬಳಿಂದ ಸೀರೆ ಎರವಲು ಪಡೆದು ಉಟ್ಟು ತನ್ನ ಹಠ ಸಾಧಿಸಿಯೇ ಸಾಧಿಸಿದಳು. ಪೆಗ್ಗಿ ಅಂಚುಗಳೆರಡೂ ಸೇರುವಂತೆ ಸೀರೆಯನ್ನು ಮಡಿಸಿ ಅದರ ಎತ್ತರವನ್ನು ಅರ್ಧ ಮಾಡಿದ್ದಾಳೆ. ನಮ್ಮ ಹೆಂಗಸರು ಉಡುವಂತೆಯೇ ನೆರಿಗೆ ಹಿಡಿದು ಉಟ್ಟು, ಸೆರಗನ್ನು ಹೆಜ್ಜೆಯವರೆಗೂ ಇಳಿಬಿಟ್ಟಿದ್ದಾಳೆ. ಮನೆಯ ಮೆಟ್ಟಿಲ ಮೇಲೆ ನಿಂತು ಅತಿಥಿಗಳನ್ನು ನಿರೀಕ್ಷಿಸುತ್ತಾ ಬಂದವರನ್ನು ಸ್ವಾಗತಿಸುತ್ತಾ ಇದ್ದಳು. ಆಗಮಿಸಿದ್ದ ಅಮೆರಿಕನ್ ಮಹಿಳೆಯರಿಗೆ ಮೆಚ್ಚಿಗೆಯೋ ಮೆಚ್ಚಿಗೆ. ಅಲ್ಲಿನ ಹೆಂಗೆಳೆಯರ ಸಂಭಾಷಣೆ ಹೀಗೆ ಸಾಗಿತ್ತು:

Mrs. B: (ನಡುವಯಸ್ಸಿನ ತರುಣಿ. ಫ್ರಾನ್ಸಿನಲ್ಲಿ ಹುಟ್ಟಿ ಬೆಳೆದವಳು. ಫ್ರೆಂಚ್ ಸಂಸ್ಕೃತಿಯೊಂದೇ ನಾಗರಿಕವಾದದ್ದು ಎಂಬ ಪಂಥದವಳು): "ಅದೇನು ಕಳೆವಂತಳಾಗಿ

ಕಾಣುತ್ತಿಯೇ, ಪೆಗ್ಗಿ ನಿನಗೆ ಈ ಉಡುಗೆ ಒಪ್ಪುವಂತೆ ಫ್ರಾನ್ಸಿನಿಂದ ಬಂದ ಗೌನುಗಳು ಕೂಡ ಒಪ್ಪವು."

Mrs. S: (ಆಧುನಿಕ ಮಹಿಳೆಯರಿಗೆ ಫ್ಯಾಷನ್ ನಿರ್ಮಾಪಕರಲ್ಲೊಬ್ಬಳು, ಅರವತ್ತಕ್ಕೆ ಮೀರಿದ ವಯಸ್ಸು): "ನೀನಾವಾಗಲೂ ಚತುರೆ. ನವೀನ ಪದಾರ್ಥವೊಂದು ನಿನ್ನ ಕೈಗೆ ಬಂದರೆ ಅದೆಷ್ಟು ಸೌಂದರ್ಯದಿಂದ ಶೋಭಿಸುತ್ತದೆ. ಕಸವನ್ನೂ ರಸವಾಗಿಸುವ ಕಡುಜಾಣೆ ನೀನು."

Mrs. W: (ಯಾವಾಗಲೂ ದರ್ಪದ ಮೇಲಿರುವ ಪ್ರವೃತ್ತಿ. ಆ ವೇಳೆಗಾಗಲೇ ನಾಲ್ಕು ಲೋಟ ಕಾಕ್‌ಟೈಲ್ ಕುಡಿದಿದ್ದಳು. ನಡುವಯಸ್ಸು): "ನೀನಿನ್ನು ಸೀರೆಯನ್ನೇ ಏತಕ್ಕೆ ಉಪಯೋಗಿಸಬಾರದು-ಇಂಥ ಸಂದರ್ಭಗಳಲ್ಲಿ? ಒಂದು ನವೀನತೆಯಿಂದ, ಸೌಂದರ್ಯವಿದೆ, ಅದಕ್ಕೆ ತಕ್ಕಂತೆ ನಿನ್ನಲ್ಲಿ ಬೆಡಗು ಬಿನ್ನಾಣಗಳಿವೆ..."

Mrs. J: (ಇವಳ ವಯಸ್ಸು ೮೦ಕ್ಕೂ ಮೀರಿದೆ. ಕೆಲವು ತಿಂಗಳ ಹಿಂದೆ ತೀರಿಕೊಂಡಿದ್ದ ಪ್ರೊಫೆಸರರೊಬ್ಬರ ಹೆಂಡತಿ): "ನನ್ನ ಮುತ್ತಾತ-ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ, ಆದರೂ ಹೇಳಿಬಿಡುತ್ತೇನೆ-ಭಾರಿ ಕಡಲುಗಳ್ಳ. ಇಂಡಿಯ, ಚೀನ ದೇಶಗಳ ಪೂರ್ವ ತೀರದಿಂದ ಬೇಕಾದಷ್ಟು ಐಶ್ವರ್ಯ ಸಂಪಾದಿಸಿದ್ದ. ಅವನೊಂದು ಸೀರೆ ತಂದಿದ್ದ, ನೋಡಿ, -ಅದೇನು ಚೆಲುವು, ಅದೇನು ಬಣ್ಣ, ಅದೇನು ಕಸೂತಿ, ಅಹಹಹ!... ಅದನ್ನಿನ್ನೂ ನನ್ನ ಮನೆಯಲ್ಲಿ ಇಟ್ಟುಕೊಂಡಿದ್ದೇನೆ. ನಾನು ಚಿಕ್ಕವಳಾಗಿದ್ದುದಿನಿಂದ ಅದನ್ನು ಉಡಬೇಕೆಂಬ ಆಸೆ. ಆದರೆ ಉಡುವ ರೀತಿ ಗೊತ್ತಿಲ್ಲ... ನೋಡೆ ಪೆಗ್ಗಿ, ಈಗಲಾದರೂ ಹೇಳಿಕೊಡು, ಉಟ್ಟುಕೊಳ್ಳುತ್ತೇನೆ." (ಇವಳ ಕೋರಿಕೆಯ ಮೇರೆಗೆ ಒಮ್ಮೆ ಲೇಖಕರು ಇವಳ ಮನೆಗೆ ಹೋದಾಗ, ಇವಳ ಮುತ್ತಾತ ಕೊಳ್ಳೆ ಹೊಡೆದದ್ದು ಸೀರೆಯಲ್ಲ ಸಣ್ಣ ಸೈಜಿನ ಕಾಶ್ಮೀರದ ಶಾಲು! ಎಂಬುದು ತಿಳಿಯಬಂದಿತು.)

Mrs. T: (ನಡುವಯಸ್ಸಿನ ಹುಡುಗಿ. ಎಳೆವಯಸ್ಸಿನಲ್ಲಿ ಹೆಂಗಸರ ಉಡುಗೆ ತೊಡುಗೆಗಳ ಕಲೆಗಾರಿಕೆಯಲ್ಲಿ ಪರಿಣತೆಯಾಗಿದ್ದಳಂತೆ. ಈಗಲೂ ಇವುಗಳ ವಿಷಯವನ್ನು ಅಧಿಕಾರವಾಣಿಯಲ್ಲಿ ಹೇಳುತ್ತಿರುತ್ತಾಳೆ): "ನಮ್ಮ ಹಿಂದೂ ಮಹಿಳೆ ಸೀರೆಯುಟ್ಟಿರುವ ಶೈಲಿ ಸಾಂಪ್ರದಾಯಕವಾದದ್ದು. ಆದರೆ ನೀನುಟ್ಟಿರುವ ಮಾದರಿಯಲ್ಲಿ ಆಧುನಿಕತೆ ಮಿಳಿತವಾಗಿ, ಒಂದು ಹೊಸ ಮಾರ್ಗವೇ ಸೃಷ್ಟಿಯಾಗಿದೆ. ನನ್ನ ಮನಸ್ಸಿನಲ್ಲಿರುವುದನ್ನು ನಿಜವಾಗಿ ಹೇಳಲೆ? -ನನ್ನ ಬುದ್ಧಿಗೆ ನೀನುಟ್ಟಿರುವ ಶೈಲಿಯೇ ಸಾಂಪ್ರದಾಯಿಕ ಪದ್ಧತಿಗಿಂತ ಮೆಚ್ಚಾಗಿದೆ. ನಿನ್ನ ಮೇಲ್ಪಂಕ್ತಿಯನ್ನು ಹಿಂದೂ ಮಹಿಳೆಯರು ಅನುಸರಿಸಲೆಂಬುದೇ ನನ್ನ ಆಶಯ."

ಪೆಗ್ಗಿಯ ಕೈಯಲ್ಲಿ ಸೀರೆ ತಾಳಿದ ಅವಸ್ಥೆ, ಇದರ ವಿಷಯವಾಗಿ ಅಮೆರಿಕನ್ ಮಹಿಳೆಯರು ಪ್ರದರ್ಶಿಸಿದ ಸ್ವಾಭಾವಿಕವಾದ ಎಳೆತನ ಒಂದು ಬಗೆಯ ತಮಾಷೆಯದಾದರೆ, ಬನಾರಸ್ ಬುಟ್ಟ ಪೀತಾಂಬರದ ಸೀರೆಯನ್ನು ಈ ಅಮೆರಿಕನ್ ಮಹಿಳೆಯರು ಹಂಚಿಕೊಂಡ ವೈಖರಿ ಮತ್ತೊಂದು ಬಗೆಯ ತಮಾಷೆಯದು. ಲೇಖಕರ ಗೆಳೆಯನ ಮಡದಿ ಸ್ವದೇಶಕ್ಕೆ ಹಿಂತಿರುಗುವಾಗ 'ನಿಮ್ಮ ಗುರುತಿಗಾಗಿ ಏನನ್ನಾದರೂ ನಮ್ಮ ಹತ್ತಿರ ಬಿಟ್ಟುಹೋಗಿ, ಸೀರೆಯೊಂದನ್ನು ಕೊಟ್ಟರಂತೂ ನಮ್ಮ ಕೃತಜ್ಞತೆಯನ್ನು ಹೇಳತೀರದು' ಎಂದು ಬಾಯಿಬಿಟ್ಟು ತಮ್ಮ ಅಂತರಂಗದ ಆಸೆಯನ್ನು ಈ ಅಮೆರಿಕನ್ ಮಹಿಳೆಯರು ವ್ಯಕ್ತಪಡಿಸಿದರು. ಆಕೆ, ತನ್ನ ಒಳ್ಳೆಯ ಬನಾರಸ್ ಬುಟ್ಟ ಪೀತಾಂಬರದ ಸೀರೆಯೊಂದನ್ನು ಲೇಖಕರ ವಶ, ರೈಲು ಹೊರಡುವ ಅವಸರದಲ್ಲಿ ಕೊಟ್ಟಳು. ಮೇಲೆ ಹೇಳಲಾದ Mrs. B, Mrs. S, Mrs. W, ಹಾಗೂ Mrs. T ಈ ಮಹಿಳಾಮಣಿಯರು ಆ ಸೀರೆಯನ್ನು ಕತ್ತರಿಸಿ ಹಂಚಿಕೊಂಡ ಬಗೆಯನ್ನು ಲೇಖಕರ ಮಾತುಗಳಲ್ಲೇ ಕೇಳುವುದು ಇನ್ನೂ ತಮಾಷೆಯಾಗಿರುತ್ತದೆ:

Mrs. B: ಇವಳಿಗೆ ಸೊಸೆಯೊಬ್ಬಳಿದ್ದಾಳೆ. ಇವಳ ಪ್ರೇರಣೆಯಿಂದ ತನ್ನ ಪಾಲಿಗೆ ಬಂದ ಸೀರೆ ತುಂಡಿನ ಅಂಚು ಸೆರಗು ನಕಾಸೆಗಳನ್ನು ಕತ್ತರಿಸಿ ಬೇರೆ ಮಾಡಿದ್ದಾಳೆ. ಒಡಲಿನ ಚಿಂದಿ ಸೊಂಟಕ್ಕೆ ಸುತ್ತಿಕೊಳ್ಳುವುದಂತೆ; ಸೆರಗಿನ ಚೂರನ್ನು ಬೆನ್ನಿನ ಮೇಲೆ ಪಿನ್ನುಗಳ ಸಹಾಯದಿಂದ ಇಳಿಬಿಡುವುದಂತೆ! 'ಭೇಷ್' ಎಂದೆ.

Mrs. S: ಚಿಂದಿಯನ್ನು ಮೂರು ಸಮಭಾಗಗಳಾಗಿ ಕತ್ತರಿಸಿದ್ದಾಳೆ. ಎರಡು ಒಡಲಿನವು, ಇನ್ನೊಂದು ಸೆರಗಿನದು. ಇಬ್ಬರು ಹೆಣ್ಣು ಮಕ್ಕಳಲ್ಲಿ ಮೊದಲನೆಯವರಿಗೆ ಒಂದು ಒಡಲ ಚೂರನ್ನೂ ಸೆರಗಿನ ಚೂರನ್ನೂ ಕೊಟ್ಟಳು. ಎರಡನೆಯವಳ ಪಾಲಿಗೆ ಒಡಲಿನ ಚೂರೊಂದು ಮಾತ್ರ ದಕ್ಕಿತು. ಇವಳಿಗೆ ಇನ್ನೊಂದು ಸೆರಗಿನ ತುಂಡು ಎಲ್ಲಿಯಾದರೂ ತರಿಸಿಕೊಡುವುದಕ್ಕಾಗುತ್ತದೆಯೆ ಎಂದು ಕೇಳಿದಳು. 'ಭಲೆ, ನೋಡೋಣ' ಎಂದೆ.

Mrs.W: ಅಂಚನ್ನು ಹರಿದು ಬೇರೆ ಮಾಡಿದ್ದಳು. ಅದರಲ್ಲಿ ಒಂದು ಗಜದಷ್ಟನ್ನು ಕತ್ತರಿಸಿ ತನ್ನ ಗಂಡನ ಹ್ಯಾಟಿಗೆ ಸುತ್ತಿ ಅಲಂಕಾರ ಮಾಡಿದ್ದಳು; ಉಳಿದ ಅಂಚಿನಿಂದ ಅವನಿಗೆರೆಡು ಟೈಗಳನ್ನು ಹೊಲಿದಿದ್ದಳು. ಒಡಲಿನ ಚೂರನ್ನೂ ತನ್ನ ಫ್ರಾಕಿನ ಹಿಂದೆ ಬಾಲದಂತೆ ಇಳಿಬಿಟ್ಟುಕೊಂಡು 'ಈ ಫ್ಯಾಷನ್ ಹೇಗಿದೆ' ಎಂದು ಜರ್ಬಿನಿಂದ ಕೇಳಿದಳು. 'ಭವ್ಯವಾಗಿದೆ ನೋಡುವುದಕ್ಕೆ ಎರಡು ಕಣ್ಣುಗಳು ಸಾಲವು' ಎಂದೆ.

Mrs.T: ಒಡಲು ಅಂಚುಗಳಿಂದ ತನಗಾಗಿ ಒಂದು ಕುಪ್ಪಸ (ಬ್ಲೌಸ್) ಹೊಲೆದು ತಯಾರಿಸಿದ್ದಳು. ಸೆರಗಿನ ನಕಾಸೆಯನ್ನು ಚಿಂದಿಚಿಂದಿ ಮಾಡಿಟ್ಟುಕೊಂಡಿದ್ದಳು.' ಇದನ್ನು

ಏನು ಮಾಡುವಿರಿ?' ಎಂದು ಕೇಳಿದ್ದಕ್ಕೆ 'ಒಂದು ಹ್ಯಾಟು ಮಾಡಿಕೊಳ್ಳುತ್ತೇನೆ. ಅದರ ಕುಚ್ಚಿಗೆ ಈ ಜರತಾರಿಯ ಚುಂಗನ್ನು ಕಟ್ಟುತ್ತೇನೆ' ಎಂಬ ಉತ್ತರ ಬಂತು. 'ಎಂಥ ಚಾತುರ್ಯದ ಆಲೋಚನೆ' ಎಂದೆ.

ಲೇಖಕರು ಎಲ್ಲೇ ಪ್ರಸಂಗವನ್ನು ವಿಸ್ತರಿಸಿದರೂ ತಮ್ಮ ಇತಿಮಿತಿಯಲ್ಲೇ ಅಮೆರಿಕನ್ನರ ಹುಚ್ಚಾಟಗಳ ಒಂದು ಸ್ವಸಂಪೂರ್ಣವಾದ ಚಿತ್ರ ಕೊಟ್ಟಿರುವರು. ಅಮೆರಿಕನ್ನರ ಬೋಳೇತನ, ಸ್ವತಂತ್ರವಾಗಿ ಒಂದು ನಿಮಿಷ ನಿಂತು ವಿಚಾರ ಮಾಡಲೂ ಸಮಯವಿಲ್ಲದ ಅವರ ಯಾಂತ್ರಿಕ ಜೀವನ ಹೇಗೆ ಮತಪ್ರಚಾರಕರ ಸವಿಯಾದ ಮಾತುಗಳಿಗೆ, ಅವರು ಒಡ್ಡುವ ಆಮಿಷಗಳಿಗೆ ಬಲಿಯಾಗಿದೆ ಎಂಬುದು ಅವರ ವಿಚಿತ್ರ ನಡಾವಳಿಯ ಹಿನ್ನೆಲೆಯಲ್ಲಿ ವಸ್ತುಸ್ಥಿತಿಯನ್ನು ಚೆನ್ನಾಗಿ ಪರಿಚಯಿಸುತ್ತದೆ.

ಅಮೆರಿಕದಂತಹ ನಾಗರಿಕ ದೇಶದಲ್ಲೂ ಕೊಳ್ಳೆ ದರೋಡೆಗಳು ಸಾಮಾನ್ಯವೆನ್ನುವಂತೆ ಆಗುತ್ತಿರುತ್ತದೆ. ಬಾಸ್ಟನ್‌ನಲ್ಲಿ ಲೇಖಕರು ಕಾಲಿಟ್ಟ ಒಂದೆರಡು ವಾರಗಳಾದ ಮೇಲೆ ನಡೆದ ಘಟನೆಯಿದು. ರಾತ್ರಿ ಹನ್ನೊಂದರ ಸಮಯ. ಲ್ಯಾಬೋರೇಟರಿಯಲ್ಲಿ ಕೆಲಸ ಮಾಡಿ ಆ ಮನೆಗೆ ಹಾಲು ಬೆಳುದಿಂಗಳಿಗೆ ಮೈಯೊಡ್ಡಿ ಲೇಖಕರು ಹಿಂತಿರುಗುತ್ತಿದ್ದಾಗ ಜನಸಂಚಾರವಿಲ್ಲದ ರಸ್ತೆಯಲ್ಲಿ ೨೦-೨೫ ವಯಸ್ಸಿನ ಮುಖವಾಡದ ಮೂವರು ಯುವಕರು ಅಡ್ಡಗಟ್ಟಿ ಪಿಸ್ತೂಲು ತೋರಿಸಿ ಜೇಬಿನಲ್ಲಿರುವ ಹಣ ಕೊಡುವಂತೆ ಬೆದರಿಸಿದರು. ಮರು ಮಾತಿಲ್ಲದೆ ಲೇಖಕರು ಪರ್ಸ್ ತೆಗೆದು ಕೊಟ್ಟರು. ಪರ್ಸ್ ಕಸಿದವರು ಮತ್ತಾರೂ ಅಲ್ಲ ಅವರ ಶಿಷ್ಯರೇ; ತಾವು ಕಸಿದದ್ದು ತಮ್ಮ ಗುರುವಿನ ಪರ್ಸ್ ಎಂಬುದು ತಿಳಿದ ಮೇಲೆ, ಕ್ಷಮಾಪಣೆ ಕೇಳಿ ಪರ್ಸ್ ಹಿಂತಿರುಗಿಸಿ ಬರಲು ಅವರು ಬಂದರು. ಆ ನಾಟಕೀಯ ದೃಶ್ಯ ನಗೆಯ ಅಲೆಯೆಬ್ಬಿಸುತ್ತದೆ. ಸುಲಭವಾಗಿ ಜೀವನೋಪಾಯಕ್ಕೆ ಹಣ ಗಳಿಸುವ ಹೊಂಚಿಕೆಗೆ 'ರ್‍ಯಾಕೆಟ್' ಎನ್ನಲಾಗುವುದು. ಓಟಿನ ಬೇಟೆಗೆ ಹೊರಟವರೂ ಹೇಗೆ ಇದರ ನೆರವು ಪಡೆಯುವರೆಂಬುದರ ಸ್ವಾರಸ್ಯಕರವಾದ ವಿವರಣೆ (ಪು. ೮೬-೯೩) ಓದಿದಾಗ ಅಮೆರಿಕನ್ನರ ಉಚ್ಚ ಸಂಸ್ಕೃತಿಯ ಬಗೆಗೆ ಗೌರವಾದರ ಭಾವನೆ ಹೊಂದಿರುವವರಿಗೆ ಕಸಿವಿಸಿಯಾಗುತ್ತದೆ. ನಂಬಲಾಗದ, ನಂಬದಿರಲಾಗದ ಪೇಚಿನ ಸ್ಥಿತಿಗೆ ಒದಗುತ್ತದೆ.

ಈ ಪುಸ್ತಕ ಓದಿ ಮುಗಿಸಿದ ಮೇಲೂ ನಮ್ಮ ಚಿತ್ತದಲ್ಲಿ ಶಾಶ್ವತವಾಗೆ ನೆಲೆಗೊಳ್ಳುವ ನಗೆಯ ಮೂರ್ತಿಗಳು ಮಿಸ್ಟರ್ ಮತ್ತು ಮಿಸಸ್ ಟಬ್. ಮಾತು ಮಾತಿಗೂ ನಗೆಪಾಟಲಿಗೀಡಾಗುವ ಈ ದಂಪತಿಗಳ ನುಡಿ-ನಡೆಗಳು ಓದುಗರನ್ನು ಚೆನ್ನಾಗಿ ನಗಿಸುತ್ತವೆ. ಮಿಸಸ್ ಟಬ್‌ಳ ಮೂರ್ಖವಾದ ಹಾಗೂ ಮಿಸ್ಟರ್ ಟಬ್‌ನ ಮರೆಗುಳಿತನ ಓದುಗರನ್ನು ಮತ್ತೆ ಮತ್ತೆ ನಗುವಂತೆ ಮಾಡುತ್ತದೆ. ಲೇಖಕರು ಈ ಪಾತ್ರಗಳ ಸೃಷ್ಟಿಯಲ್ಲಿ

ಆರೋಗ್ಯಪೂರ್ಣವಾದ ನಗೆಯ ಪರಿಯನ್ನು ಸೊಗಸಾಗಿ ನಮ್ಮ ಅನುಭವಕ್ಕೆ ತಂದಿರುವರು. ಅವರೇ ಸಂದರ್ಭೋಚಿತವಾಗುವಂತೆ ಬರೆದಿರುವ ವ್ಯಂಗ್ಯಚಿತ್ರಗಳೂ ನಗೆಯನ್ನು ಸಹಜವಾಗಿ ಬಿರಿಸುತ್ತದೆ. 'ಹದಿನಾರಾಣೆ ಬಾಸ್ಟೋನಿಯನ್ ಮಹಿಳೆಯರು' ಬಾಸ್ಟನ್ನಿನ ಬೀಕನ್‌ಹಿಲ್ ಎಂಬ ಹರಹಿನಲ್ಲಿ ವಾಸಿಸುವವರು. ಅವರ ಸ್ವಾಭಿಮಾನ, ಹಟ, ಮಂದಬುದ್ಧಿ, ಅತಿರೇಕದ ವರ್ತನೆ -ಇವುಗಳನ್ನು ಲೇಖಕರು ನಗೆಯ ಮುಸುಕಿನಲ್ಲಿಯೇ ಪರಿಚಯಿಸಿರುವರು. ಸೋದಾಹರಣೆಗಳೊಂದಿಗೆ ಅವರ ಗುಣಗಳ ಪರಿಚಯ ಮಾಡಿಕೊಡುವ ಲೇಖಕರು ಮಾನವನ ಗುಣ ಎಲ್ಲಿಯೂ ಒಂದೇ ಎಂಬ ಭಾವನೆಯನ್ನು ಚೆನ್ನಾಗಿ ನಮ್ಮ ಮನದಲ್ಲಿ ಮೂಡಿಸುವರು.

'ಅಮೆರಿಕದಲ್ಲಿ ನಾನು' ಪ್ರವಾಸ ಕಥನವೂ ಅಲ್ಲ, ಪ್ರವಾಸಾನುಭವವೂ ಅಲ್ಲ. ಲೇಖಕರು ಅಮೆರಿಕನ್ನರೊಡನೆ ಕೆಲಕಾಲ ಒಡನಾಡಿದಾಗ ಅವರ ಅಡ್ಡಾದಿಡ್ಡಿ ವರ್ತನೆ, ಹುಚ್ಚು ಆಚಾರ-ವಿಚಾರಗಳು ಕಂಡುಬಂದವು. ಅವುಗಳಿಗೆ ನಗೆಯ ರೂಪು ಕೊಡುವ ಪ್ರಯತ್ನವನ್ನು ಲೇಖಕರು ಮಾಡಿರುವರು. ಈ ನಗೆಯ ವಿಷಯಗಳ ಹಿಂದೆ, ವಿಚಾರ ಮಾಡಲು ನಮಗೆ ಹಲವು ಮಗ್ಗಲುಗಳಿಗೆ; ಲಘು ಮನೋಭಾವದಿಂದ ಅದನ್ನು ಓದಿ ನಕ್ಕು ಮರೆಯಲೂ ಅವಕಾಶವಿದೆ.

"ನಮ್ಮಂತೆಯೇ ಅಮೇರಿಕನ್ನರು ಅಮೆರಿಕನ್ನರಂತೆಯೇ ನಾವು-ಕೊಂಚೆ ಚೇಷ್ಟೆಗಳಲ್ಲಿ; ಇದಿಷ್ಟೇ ಈ ಅನುಭವ ಚಿತ್ರಗಳ ತಾತ್ಪರ್ಯ; ಅಮೆರಿಕಕ್ಕೆ ಬೆಲೆ ಕಟ್ಟುವುದಲ್ಲ" -ಎಂಬ ಲೇಖಕರ ಅರಿಕೆಯಲ್ಲಿನ ಈ ಮಾತು ಕೃತಿ ರಚನೆಯ ಉದ್ದೇಶವನ್ನು ಸ್ಪಷ್ಟಪಡಿಸಿದೆ.

ಅಮೆರಿಕಕ್ಕೆ ಹೋಗಿಬಂದವರು ಅದನ್ನು ಅಪ್ಸರೆಯರ ನಾಡು, ಶ್ರೀಮಂತಿಕೆಯ ಬೀಡು, ಭೂಲೋಕದ ಸ್ವರ್ಗ ಎಂದೆಲ್ಲಾ ವರ್ಣಿಸಿರುವರು. ಆ ಬರೆಹಗಳಲ್ಲಿ ಹೆಚ್ಚಿನವು 'ಕುತೂಹಲವನ್ನು ಕೆರಳಿಸುವಂತಹವು, ವಾಸ್ತವಿಕತೆಯಿಂದ ದೂರವಾದವು. ಅವು ಅವರ ವೈಯಕ್ತಿಕ ಅನುಭವಗಳ ಶೇಕಡಾ ಹತ್ತರಷ್ಟು ಮಾತ್ರ ಇರಬಹುದು ಎಂದರೆ ಅತಿಶಯೋಕ್ತಿಯಾಗಲಾರದು... ಎಂದು ಹೇಳುವ ಡಾ. ಕೃಷ್ಣಾನಂದ ಕಾಮತರು ಭಾರತೀಯರಾಗಿದ್ದುಕೊಂಡೇ ಅಮೆರಿಕನ್ನರ ಜೀವನ ವಿಧಾನವನ್ನು, ವಿಚಾರಗಳನ್ನು, ಹವ್ಯಾಸಗಳನ್ನು ಅಭ್ಯಸಿಸಿ **'ನಾನೂ ಅಮೇರಿಕೆಗೆ ಹೋಗಿದ್ದೆ'** ಎಂಬ ಕೃತಿಯಲ್ಲಿ ತಮ್ಮ ಅನುಭವವನ್ನು ನಿರೂಪಿಸಿರುವರು. ಶ್ರೀಯುತರು ಅಮೇರಿಕನ್ನರನ್ನು ತೂಗಿ ನೋಡಬೇಕೆಂಬ ಹಂಬಲದಿಂದ ಅವಕಾಶ ದೊರೆತಾಗಲೆಲ್ಲಾ ಅಮೆರಿಕನ್ ಸ್ನೇಹಿತರೊಂದಿಗೆ, ಅಮೆರಿಕನ್ ಕುಟುಂಬಗಳೊಡನೆ ವಾಸಿಸಿ, ಅವರೊಂದಿಗೆ ಒಂದಾಗಿ ಇರಲು ಯತ್ನಿಸಿ ಅವರನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವರು.

ಪುಸ್ತಕದ ಮೊದಲ ಭಾಗದಲ್ಲಿ ಅಮೇರಿಕನ್ನರ ಅರ್ಥಹೀನ ನಡಾವಳಿಗಳು, ಶಿಕ್ಷಣಕ್ರಮ, ಆರೋಗ್ಯದ ಬಗೆಗಿನ ಕಾಳಜಿ, ಅನೈತಿಕ ಕಾಮವ್ಯವಹಾರ, ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿಗಳಿಂದ ನಡೆಯುವ ಕಳ್ಳತನಗಳು, ನೀಗ್ರೋಗಳ ಕೀಟಲೆ, ವಿದ್ಯಾರ್ಥಿಗಳಲ್ಲಿನ ಅಶಿಸ್ತು-ಅರಾಜಕತೆ, ಸ್ತ್ರೀ ಪುರುಷರ ಸಮಾನತೆ, ಭಾರತೀಯ ಅಡುಗೆಯ ಬಗೆಗೆ ಆಸಕ್ತಿ -ಇವುಗಳನ್ನು ಕುರಿತ ತಮ್ಮ ಅನುಭವ-ಅನಿಸಿಕೆಗಳಿವೆ. ತಾವು ಸಾವಿರಾರು ಅಮೇರಿಕನ್ನರನ್ನು ಹತ್ತಿರದಿಂದ ನೋಡಿ ಪರೀಕ್ಷಿಸಿದ್ದರ ಪರಿಣಾಮವಾಗಿ ಅಮೆರಿಕನ್ ಸ್ತ್ರೀ ಪುರುಷರ ಬಗೆಗೆ ಕುತೂಹಲಕಾರಿಯಾದ ಕೆಲವು ಅಂಶಗಳು ತಿಳಿದು ಬಂದುವು ಎಂದು ಲೇಖಕರು ಅವುಗಳ ಪಟ್ಟಿ ಮಾಡಿರುವರು (ಪು. ೩೩-೩೬). ಈ ಕುತೂಹಲಕಾರಿ ಸಂಗತಿಗಳು ಭಾರತೀಯರ ಪಾಲಿಗೆ ನಿಜಕ್ಕೂ ಆಶ್ಚರ್ಯವೆನ್ನಿಸುತ್ತವೆ; ಅಮೆರಿಕನ್ ಸಮಾಜ ತಮ್ಮ ಯುವಕ ಯುವತಿಯರಿಗೆ ಕೊಟ್ಟಿರುವ ಸ್ವಾತಂತ್ರ್ಯ 'ವಿಪರೀತ'ವೆನ್ನಿಸುತ್ತದೆ.

ಪುಸ್ತಕದ ಎರಡನೆ ಭಾಗದಲ್ಲಿ ಅಮೇರಿಕನ್ ಕುಟುಂಬಗಳೊಡನೆ ಸ್ನೇಹ ಸಂಬಂಧ ಬೆಳೆಸಿ ಭಾರತೀಯರ ಬಗೆಗೆ ಅವರಲ್ಲಿ ಮೂಡಿದ್ದ ತಪ್ಪು ತಿಳುವಳಿಕೆಯನ್ನು ನಿವಾರಿಸಿದುದು, ಭಾರತ ಹಾಗೂ ಭಾರತೀಯರ ಜೀವನ ವಿಧಾನಗಳ ಬಗೆಗೆ ಗೌರವ ಭಾವನೆ ಅವರಲ್ಲಿ ಮೂಡುವಂತೆ ಮಾಡಲು ಸಮರ್ಪಕ ರೀತಿಯಲ್ಲಿ ಅವರ ಸಂದೇಹಗಳಿಗೆ ಉತ್ತರ ನೀಡಿ ಅವರ ಮನದ ಕಿಲ್ಬಿಷ ಪರಿಹರಿಸಿದುದು ಪ್ರಧಾನವಾಗಿ ಬಂದಿದೆ. ಅಮೆರಿಕನ್ ಮಿತ್ರರೊಡನೆ ಸಂಭಾಷಿಸುವಾಗಲೂ ಅವರಿಂದ ಅಪ್ರಿಯವಾದ ಹಾಗೂ ಭಾರತೀಯರ ಜೀವನ ವಿಧಾನ, ಆಚಾರ-ವಿಚಾರ, ನಡಾವಳಿಗಳ ಬಗೆಗೆ ಮಾತು ಕೇಳಬೇಕಾಗಿ ಬಂದಾಗ ಅವರ ಮಾತಿನ ದಾಳಿಗೆ ಹೆದರದೆ, ಸೋಲದೆ ಧೈರ್ಯವಾಗಿ ಉತ್ತರಿಸಿದ್ದು ಹಾಗೂ ಅವರಲ್ಲಿ ಲೇಖಕರು ಸದ್ಭಾವನೆ ಮೂಡಿಸಿದ್ದು ಮುಖ್ಯವಾಗಿ ಬಂದಿದೆ. ತಾವು ನಡೆಸಿದ ಚರ್ಚೆಯ ವಿವರಗಳನ್ನು ಸ್ವಾರಸ್ಯಪೂರ್ಣವಾಗಿ ಲೇಖಕರು ಇಲ್ಲಿ ನೀಡಿರುವರು.

ಮೂರನೆಯ ಭಾಗದಲ್ಲಿ, ಮಧ್ಯಮವರ್ಗಕ್ಕೆ ಸೇರಿದ ಅಮೆರಿಕನ್ನರು ಜೀವನದುದ್ದಕ್ಕೂ ಸುಖ-ಸೌಕರ್ಯ, ವೇಳೆ-ಇವುಗಳಿಗಾಗಿ ನಡೆಸುವ ಸತತ ಹೋರಾಟ, ಪಡುವ ಮಾನಸಿಕ ಶ್ರಮ ಹಾಗೂ ಬಳಲಾಟಗಳ ಪರಿಚಯವನ್ನು ಲೇಖಕರು ವಸ್ತುನಿಷ್ಠವಾಗಿ ಕೊಟ್ಟಿರುವರು (ಪು. ೧೨೧-೧೨೭). ಅಮೆರಿಕದಲ್ಲಿ ಸತ್ತರೂ ಹಣದ ಸಮಸ್ಯೆ ಅವರ ಬೆನ್ನುಬಿಡುವುದಿಲ್ಲ. ಅಲ್ಲಿ ಶವಸಂಸ್ಕಾರವೂ ಒಂದು ವ್ಯಾಪಾರವೇ. ಆ ಕೆಲಸ ಮಾಡಲು ವ್ಯಾಪಾರಿಗಳಿರುವರು. ಒಬ್ಬ ವ್ಯಕ್ತಿ ಮೃತನಾದರೆ ಈ ವ್ಯಾಪಾರಿಗಳಿಗೆ ಫೋನ್ ಮಾಡಿದರೆ ಸಾಕು ಅವರು ಸಮಸ್ತ ಜವಾಬ್ದಾರಿಯನ್ನೂ ಹೊರುವರು.

ಅಮೆರಿಕನ್ ಸಂಸಾರವೊಂದರಲ್ಲಿ ಗಂಡ ಸತ್ತಾಗ ವಿಧವೆಯಾದವಳಿಗೆ ಕೊನೆಗೆ ಉಳಿಯುವುದು ಅಂತ್ಯಕ್ರಿಯೆಗಾಗಿ ತಗಲಿದ ವೆಚ್ಚದ ಬಿಲ್ಲುಗಳು, ವ್ಯಾಪಾರಿಗಳ ಫೋನಿನ ಕರೆ, ಆಗೊಮ್ಮೆ ಈಗೊಮ್ಮೆ ಸ್ವತಃ ಬರುತ್ತಿದ್ದ ಉದ್ದರಿ ಕೊಟ್ಟ ವ್ಯಾಪಾರಿಗಳು (ಪು.೧೨೮). ಈ ವ್ಯಾಪಾರಿಗಳು ಪತಿಯ ಗೌರವಾರ್ಥವಾಗಿ ಉತ್ತಮ ಸಮಾಧಿಯನ್ನು ನಿರ್ಮಿಸಬೇಕೆಂದು ಪತ್ನಿಯನ್ನು ಪ್ರೇರೇಪಿಸಿ ಅವಳು ತನ್ನ ನಿರ್ಣಯ ಕೊಡುವ ಮೊದಲೇ ಹತ್ತು ಸಾವಿರ ಡಾಲರುಗಳ ಸಾಲ ತೆಗೆಯಿಸಿ, ಆ ಸಾಲದ ಅಗ್ನಿಯಲ್ಲೇ ಸತಿಹೋಗುವ ಏರ್ಪಾಟು ಮಾಡುವರು (ಪು.೧೨೭). ಅಮೆರಿಕನ್ನರ ಬದುಕಿನಲ್ಲಿ ಹಣ ನಿರ್ವಹಿಸುವ ಪಾತ್ರವನ್ನು, ಅದರಿಂದಾಗುವ ದುರಂತದ ರುದ್ರರಮಣೀಯತೆಯನ್ನು ಕಂಡು ಒಮ್ಮೆಗ ಗಾಬರಿಗೊಳ್ಳುವಂತೆ ಲೇಖಕರು ಆ ಸಮಾಜದ ನೈಜ ಚಿತ್ರವನ್ನು ಕೊಟ್ಟಿರುವರು.

- ಅಮೆರಿಕೆಯಲ್ಲಿ ಉಚ್ಚಶಿಕ್ಷಣ ಪಡೆದ ಪ್ರತಿಭಾವಂತ ಭಾರತೀಯರಿಗೆ ತಮ್ಮ ನಾಡಿನಲ್ಲಿಯೇ ಯೋಗ್ಯ ಉದ್ಯೋಗ, ಪ್ರೋತ್ಸಾಹ ದೊರೆಯದೆ ದಟ್ಟ ನಿರಾಶೆಗೆ ಒಳಗಾಗಿ, ಉತ್ಸಾಹ ಭಂಗಿತರಾದ ಅವರು ಪಡುವಣ ದೇಶಗಳಿಗೆ ಮತ್ತೆ ಹಿಂತಿರುಗಲು ಕಾರಣವಾಗಿರುವ 'ವಾತಾವರಣ'ದ ಬಗೆಗೆ ಗಂಭೀರವಾಗಿ ನಾವು ಚಿಂತಿಸುವಂತೆ ಮಾಡಿರುವರು. 'ಪ್ರತಿಭಾ ಪಲಾಯನ'ಕ್ಕೆ ಕಾರಣವಾಗುವ 'ಪರಿಸ್ಥಿತಿ'-ಲೇಖಕರು ಕೊಟ್ಟಿರುವುದು-ವಾಸ್ತವವಾಗಿಯೂ ಸತ್ಯ. ಅಮೆರಿಕದಲ್ಲಿ ನೆಲಸಿರುವ ಭಾರತೀಯ ವಿಜ್ಞಾನಿಗಳ ಮನವೊಲಿಸಿ ಅವರನ್ನು ಭಾರತಕ್ಕೆ ಮರಳಿ ಕರೆಯಿಸಿಕೊಳ್ಳುವ ಪ್ರಯತ್ನವನ್ನು ಭಾರತ ಸರಕಾರ ಮಾಡಿತು. ಅದಕ್ಕಾಗಿಯೇ ಬಂದ ಅಧಿಕಾರಿಯೋರ್ವರು ವಿದೇಶದಲ್ಲಿ ನೆಲೆಸಿರುವ ಭಾರತೀಯರನ್ನು ಸಂದರ್ಶನಕ್ಕೆ ಕರೆದರು. ತಮ್ಮ ದೇಶದ ಸೇವೆ ಮಾಡಲು ಆಸೆ ಹಾಗೂ ಉತ್ಸಾಹಗಳಿಂದ ಸಾವಿರಾರು ಮೈಲಿ ಪ್ರಯಾಣದ ಆಯಾಸವನ್ನು ಲೆಕ್ಕಿಸದೆ ಬಂದ ಅಭ್ಯರ್ಥಿಗಳನ್ನು ಐದು ನಿಮಿಷಗಳಲ್ಲಿ ಆ ಅಧಿಕಾರಿ ಸಂದರ್ಶನ ಮುಗಿಸಿ ಹೊರಗೆ ಕಳುಹಿಸಿದರು. ಈ ಕಟು ಅನುಭವ ನಿರಾಶೆಯನ್ನಷ್ಟೇ ಅಲ್ಲ, ಬೇಸರವನ್ನೂ ತರಿಸಿತು. ಭಾರತೀಯ ವಿಜ್ಞಾನಿಗಳ ಮನವೊಲಿಸಲು ಅಮೇರಿಕಾಕ್ಕೆ ಬಂದ ಈ ಅಧಿಕಾರಿ ಮಾಡಿದ್ದಾದರೂ ಏನನ್ನು- ತನ್ನ ವೈಯಕ್ತಿಕ ಕೆಲಸಗಳನ್ನು. ಇಂತಹ ನಾಚಿಕೆಗೇಡಿನ ಪ್ರಸಂಗವನ್ನು ತಮಗಾದ ಕಟು ಅನುಭವದ ಹಿನ್ನೆಲೆಯಲ್ಲಿ ಲೇಖಕರು ಹೇಳಿರುವರು. ಜನ್ಮಕೊಟ್ಟ ನಾಡಿನ ಸೇವೆ ಮಾಡಬೇಕೆಂಬ ಕನಸು ತುಂಬಿಕೊಂಡು ಭಾರತಕ್ಕೆ ಬಂದು ಅಲ್ಲಿನ ರಾಜಕೀಯವನ್ನೂ, ಜಾತಿ-ವಶೀಲಿ-ಲಂಚಗಳ ತಾಂಡವ ನೃತ್ಯವನ್ನು ನೋಡಿ, ತಮ್ಮ ಸಂಶೋಧನೆ ಅಧ್ಯಯನಗಳಿಗೆ ಅಲ್ಲಿ ಒಳ್ಳೆಯ ವಾತಾವರಣ, ಪ್ರೋತ್ಸಾಹ-ಗಳಿಲ್ಲದ್ದನ್ನು ಕಂಡು ಅಮೇರಿಕಾಕ್ಕೇ ಹಿಂತಿರುಗಿ ಬಂದ ಭಾರತೀಯರ ಹಲವು ಉದಾಹರಣೆಗಳನ್ನು ಕೊಟ್ಟು, ಲೇಖಕರು ವಾಸ್ತವಿಕ ಸ್ಥಿತಿಯ ಪರಿಚಯ ನಮಗಾಗುವಂತೆ ಮಾಡಿರುವರು.

ಡಾ. ಕೃಷ್ಣಾನಂದ ಕಾಮತರು ಮಾತುಗಾರರು. ತಮ್ಮ ಸಿಹಿ-ಕಹಿ ಅನುಭವಗಳನ್ನು ಓದುಗ ತನ್ಮಯವಾಗಿ ಕೇಳುವಂತೆ ಹೇಳಬಲ್ಲ ಜಾಣ್ಮೆ ಅವರಲ್ಲಿದೆ. ಅದಕ್ಕೆ ಬೇಕಾದ ಅಧ್ಯಯನಸಂಪನ್ನ ಸಾಮಗ್ರಿಗಳೂ ಅವರಲ್ಲಿ ಯಥೇಚ್ಛವಾಗಿದೆ. ಅವರ ಅಮೆರಿಕದ ನಾಲ್ಕು ವರ್ಷಗಳ ವಾಸ್ತವ್ಯದಲ್ಲಿ, ಸುತ್ತಾಟದಲ್ಲಿ ಸಾಕಷ್ಟು ಜನ-ಮನವನ್ನು ಅಭ್ಯಸಿಸಿರುವರು. ಅಮೆರಿಕನ್ನರ ಬದುಕಿನಲ್ಲಿ ಒಳಿತನ್ನು ಮೆಚ್ಚಿದಂತೆ ಅಲ್ಲಿನ ಕೆಡಕನ್ನೂ ನಿರ್ಭಿಡೆಯಿಂದ ಹೇಳಿರುವರು. ಅವರ ವಿಸ್ತಾರವಾದ ಅಧ್ಯಯನದಿಂದ ಅಮೆರಿಕನ್ನರ ಜೀವನ ತೋರಿಕೆಗೆ ಕಾಣುವಷ್ಟು ಸುಖಮಯವಾಗಿಲ್ಲ. ವೈಜ್ಞಾನಿಕವಾಗಿ ಅವರು ಎಷ್ಟೇ ಮುಂದುವರಿದ್ದರೂ, ಆರ್ಥಿಕ ಸ್ಥಿತಿ ಎಷ್ಟೇ ಉತ್ತಮವಿದ್ದರೂ, ಸುಖ-ಸೌಲಭ್ಯಗಳು ಎಷ್ಟೇ ಇದ್ದರೂ ಅವರ ಬದುಕು ನೆಮ್ಮದಿಯನ್ನು ಪಡೆದಿಲ್ಲ. ಅವರ ಬದುಕು ಹೇಗೆ ನಿಶ್ಚಿತ ನೆಲೆಯಿಲ್ಲದೆ ಯಾಂತ್ರಿಕವಾಗಿ ಸಾಗುತ್ತಿದೆ ಎಂಬುದನ್ನು ಲೇಖಕರು ಸ್ವಾರಸ್ಯವಾಗಿ ಸಂಭಾಷಣೆಯೊಂದರ ಮೂಲಕ ಹೀಗೆ ತಿಳಿಸುವರು:

ಅಮೆರಿಕನ್ ಮಹಿಳೆಯೊಬ್ಬಳನ್ನು ಸಂದರ್ಶಿಸಿದ ವಿದೇಶೀಯನೊಬ್ಬ ಅವಳ ಮನೆ, ಹುಟ್ಟಿದ ಊರು ಇತ್ಯಾದಿಗಳ ಬಗೆಗೆ ಕೇಳಿದನಂತೆ. ಅದಕ್ಕೆ ಅವಳು "ನಾನು ರೂಪಗೊಂಡಿದ್ದು ಕಾರಿನಲ್ಲಿ, ಹುಟ್ಟಿದ್ದು ಆಸ್ಪತ್ರೆಯಲ್ಲಿ, ಬೆಳೆದದ್ದು ಮಕ್ಕಳಾಡಿಸುವವರ (Baby Sitter) ಆರೈಕೆಯಲ್ಲಿ, ಆಟವಾಡಿದ್ದು ಕಿಂಡರ್‌ಗಾರ್ಟನ್ನಿನಲ್ಲಿ, ವಿದ್ಯಾಭ್ಯಾಸ ನಡೆದದ್ದು ಶಾಲೆ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ, ಮದುವೆಯಾದದ್ದು ಚರ್ಚಿನಲ್ಲಿ, ಈಗ ವಾಸಿಸುತ್ತಿರುವುದು ಟ್ರೇಲರ್ ಬಸ್ಸಿನಲ್ಲಿ... ನನಗೆ ಮನೆ ಊರು ಎಲ್ಲಿದೆ?" ಎಂದು ಮರುಸವಾಲು ಹಾಕಿದಳಂತೆ! (ಪು. ೨೦).

"ನನ್ನ ಕೆಲ ಅನುಭವಗಳನ್ನು ಯಥಾವತ್ತಾಗಿ ಓದುಗರಿಗೆ ನಿವೇದಿಸಿದರೆ ಅಮೆರಿಕನ್ನರ ವೈವಿಧ್ಯಪೂರ್ಣ ಜೀವನ ಪರಿಚಯವಾಗಿ ಒಂದು ಒಳ್ಳೆಯ ತಿಳುವಳಿಕೆಗೆ ಮಾರ್ಗವಾದೀತು" ಎಂದು ಲೇಖಕರು ನಂಬಿರುವರು ಅವರ ಈ ಪ್ರವಾಸಾನುಭವಗಳನ್ನು ಓದಿದ ಮೇಲೆ ಅವರ ಮೇಲಿನ ನಂಬುಗೆ ನಮಗೆ ನಿರಾಶೆಯನ್ನುಂಟು ಮಾಡುವುದಿಲ್ಲ. ಸ್ವಪ್ರಶಂಸೆಯ ಹಾಗೂ ತಮ್ಮ ಪಾಕಪ್ರಾವೀಣ್ಯತೆಯ ಬಗೆಗೆ ಲೇಖಕರು ಹೇಳುವಾಗ ಸ್ವಲ್ಪ ಉತ್ಸಾಹವನ್ನು ಅದುಮಿಟ್ಟಿದ್ದರೆ ಈ ಕೃತಿ ಇನ್ನಷ್ಟು ಸಹನೀಯವಾಗುತ್ತಿತ್ತು.

ಅಮೆರಿಕಾದ ಓಹಾಯೊ ಸ್ಟೇಟ್ ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷ ಕಾಲ ನೆಲೆಸಿ, ಅಲ್ಲಿನ ಸಮಾಜಶಾಸ್ತ್ರ ವಿಭಾಗದಲ್ಲಿ ಅಧ್ಯಯನ ಮಾಡಿದ ಶ್ರೀಮತಿ ಲಲಿತ ಸುಬ್ಬರಾವ್‌ರವರು ತಮ್ಮ ಅಮೆರಿಕದ ಅನುಭವಗಳನ್ನು '**ನಾನು ಮತ್ತು ಅಮೆರಿಕ**' ಎಂಬ ತಮ್ಮ ಕೃತಿಯಲ್ಲಿ ಕೊಟ್ಟಿರುವರು. ಗಂಡ ಹಾಗೂ ಮಕ್ಕಳೀರ್ವರನ್ನು ಒಂದು

ವರುಷದವರೆವಿಗೆ ಬಿಟ್ಟು ಕಂಡರಿಯದ ನಾಡಿನಲ್ಲಿ ಏಕಾಂಗಿಯಾಗಿ ವಿದ್ಯಾಭ್ಯಾಸ ಮಾಡಹೊರಟ ಶ್ರೀಮತಿಯವರ ಧೈರ್ಯ ಹಾಗೂ ವಿದ್ಯಾಕಾಂಕ್ಷೆ ಮೆಚ್ಚುವಂತಹದು.

ಅವರ ಪ್ರವಾಸಾನುಭವ ಓಹಯೋದಿಂದ ಪ್ರಾರಂಭವಾದರೂ ಅಮೆರಿಕದ ನೆಲ ಮುಟ್ಟುತ್ತಿದ್ದಂತೆಯೇ ಅವರಿಗೆ ಭಾರತ ಹಾಗೂ ಅಮೆರಿಕ ಜನರ ರೀತಿನೀತಿಗಳ ಬಗೆಗೆ ಜಿಜ್ಞಾಸೆ ಪ್ರಾರಂಭವಾಗುತ್ತದೆ. ಅಂತರರಾಷ್ಟ್ರೀಯ ವಿದ್ಯಾರ್ಥಿಗೃಹದಲ್ಲಿ ನೆಲಸಿ ಕಾಲೇಜಿಗೆ ಸೇರುವವರೆಗಿನ ವಿವರಗಳ ಎಳೆ ಒಂದೂ ಬಿಡದಂತೆ ವಿಸ್ತಾರವಾಗಿ ತಿಳಿಸುವ ಉತ್ಸಾಹವನ್ನು ಲೇಖಕಿ ತಾಳಿರುವರು. ಅವರು ತಮ್ಮ 'ಮುಗ್ಧ' ಕಣ್ಣುಗಳಿಂದ ನೋಡಿದ ಆಶ್ಚರ್ಯಗಳನ್ನೆಲ್ಲಾ ಹಾಗೂ ತಾವು ಜೊತೆಗಾತಿಯರೊಂದಿಗೆ ನಡೆಸಿದ 'ಮುಗ್ಧ' ಸಂಭಾಷಣೆಗಳನ್ನೆಲ್ಲಾ ವರದಿ ಮಾಡಿರುವರು. ಓಹಯೋ ವಿಶ್ವವಿದ್ಯಾಲಯದ ಶಿಕ್ಷಣ ಕ್ರಮವನ್ನು ಕಿರಿದರಲ್ಲೆ ಪರಿಚಯಿಸಿರುವರು. ತಮಗೆ ಒದಗಿ ಬಂದ ಅನುಕೂಲಗಳು; ತಾವು ಅಧ್ಯಯನಕ್ಕೆ ಆರಿಸಿಕೊಂಡ ವಿಷಯ ಬದಲಾವಣೆ ಮಾಡಲು ಪಟ್ಟ ಕಷ್ಟ -ಇವೆಲ್ಲವನ್ನೂ ಅನವಶ್ಯಕವಾಗಿ ಬೆಳೆಸಿರುವರು. ಅಮೆರಿಕನ್ನರ ಸಂಸಾರದೊಡನೆ ಒಂದೆರಡು ದಿನ ಇದ್ದು ಅವರ ಜೀವನ ಕ್ರಮ, ಕಲೆ ಸಂಸ್ಕೃತಿಗಳ ಪರಿಚಯ ಪಡೆದುದು; ತಮ್ಮ ವಿದ್ಯಾಭ್ಯಾಸಕ್ಕೆ ನೆರವಿತ್ತ ಪಿ.ಇ.ಓ. ಮಹಿಳಾ ಮಂಡಳಿಯ ಔದಾರ್ಯದಿಂದ ಕೂಡಿದ ಪ್ರೀತಿಯ ಆತಿಥ್ಯ ಸವಿದುದು ಇವೆಲ್ಲವುಗಳೂ ವಿವರವಾಗಿ ಬಂದಿದ್ದು, ಇಲ್ಲೂ ಅನುಭವ ನಿರೂಪಣೆಯಲ್ಲಿ ಲೇಖಕಿಯ ಉತ್ಸುಕತೆಯನ್ನು ನಾವು ಪ್ರಧಾನವಾಗಿ ಕಾಣುತ್ತೇವೆ.

ಪುಸ್ತಕದ ಉತ್ತರಾರ್ಧವು, ಲೇಖಕಿ ವಿದ್ಯಾಭ್ಯಾಸ ಮುಗಿಸಿ ಚಿಕಾಗೊ, ಮೌಂಟ್ ಪ್ಲೆಸೆಂಟ್, ಡೆನ್‌ವರ್, ಫ್ಲಾಗ್‌ಸ್ಟಾಫ್, ಗ್ರಾಂಡ್ ಕ್ಯಾನಿಯನ್, ಸಾಲ್ಟ್‌ಲೇಕ್ ಸಿಟಿ, ಸ್ಯಾನ್‌ಫ್ರಾನ್ಸಿಸ್ಕೋ -ಈ ಪ್ರದೇಶಗಳು ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗಾಗಿ ನಡೆಸಿದ ಪ್ರಯತ್ನವನ್ನು ಹೇಳುತ್ತದೆ. ಟೂರಿಸ್ಟ್ ಆಗಿ ಮುಖ್ಯ ಸ್ಥಳಗಳ ವೀಕ್ಷಣೆ ನಡೆಸಿದ ಲೇಖಕಿಯ ವಿವರಣೆ ಆಸಕ್ತಿ ಕೆರಳಿಸುವಂತೆ ಬಂದಿಲ್ಲ. ಬಹುಶಃ ಇವರಿಗೆ ಹದವಾದ ಭಾಷೆ ಅನುಭವ ನಿರೂಪಣೆಗೆ ಒದಗಿಬಂದಿಲ್ಲದಿರುವುದೇ ವಿವರಣೆ ನೀರಸವಾಗಿ ವರದಿ ರೂಪದಲ್ಲಿ ಕೊಡಲು ಕಾರಣವಾಗಿರಬಹುದು.

ಅಮೆರಿಕ ವಿಶ್ವವಿದ್ಯಾಲಯವೊಂದರಲ್ಲಿ ತಮಗೆ ಪ್ರವೇಶ ಸಿಕ್ಕಿದುದೇ ದೊಡ್ಡದು ಎಂಬ ಧನ್ಯತಾಭಾವ ಪ್ರವಾಸ ಕಥನದುದ್ದಕ್ಕೂ ಅಲ್ಲಲ್ಲಿ ಇಣಕಿ ನೋಡುತ್ತದೆ. 'ನಾನು ಮನೆ ಬಿಟ್ಟಾಗಿನಿಂದ ಬರುವತನಕವೂ ನನ್ನ ಸಹಪಾಠಿಯಾಗಿ ನಾನು 'ಶ್ರೀ ನಿರ್ವಿಘ್ನ ವಿನಾಯಕ ಸರ್ವಸಿದ್ಧಿ ವಿನಾಯಕ'ನ ವಿಗ್ರಹವನ್ನು ಹ್ಯಾಂಡ್‌ಬ್ಯಾಗ್‌ನಲ್ಲಿಟ್ಟುಕೊಂಡೇ ಇರುತ್ತಿದ್ದೆ. ಆ ಭಗವಂತನ ಕೃಪೆ ಇದ್ದು ಪ್ರಪಂಚವನ್ನೆಲ್ಲಾ ಸುತ್ತಿ ಬರಲು ಅನೇಕ

ವಿಧದ ಸಹಾಯ ದೊರೆತು ಈ ಲೇಖನ ಬರೆಯಲು ಕೂಡಾ ಆ ಭಗವಂತನ ಪ್ರೇರಣೆಯೇ ಕಾರಣವಾಗಿದೆ' (ಪು. ೧೫೬) ಎಂಬ ಲೇಖಕಿಯ ಮಾತುಗಳು ಅವರ ಮುಗ್ಧತೆಯನ್ನೂ, ಅಮೆರಿಕವೆಂದರೆ 'ಇಡೀ ಪ್ರಪಂಚ'ವೆನ್ನುವ ಬಾಲಿಷವಾದ ಭಾವವನ್ನೂ ಪರಿಚಯಿಸುತ್ತದೆ ರಮಣಿಯ ಮಾನಾಪಹರಣ ಮಾಡಲು ಮುಸುಕುಧಾರಿ ದುಷ್ಟನೊಬ್ಬನು ಪ್ರಯತ್ನಿಸಿದಾಗ ಆಕೆ "ಭಗವಂತ, ಶ್ರೀಕೃಷ್ಣಪರಮಾತ್ಮ ದ್ರೌಪದೀ ದೇವಿಯ ಮಾನರಕ್ಷಣೆ ಮಾಡಿದ ನೀನು ಈ ಕುಲಾಂತಕನ ಕೈಯಿಂದ ನನ್ನನ್ನು ಬಿಡುಗಡೆ ಮಾಡಪ್ಪ" ಎಂದು ದೇವರನ್ನು ಬೇಡಿದಳಂತೆ! (ಪು.೧೦೦) ಲಾಸ್‌ವೇಗಾಸ್‌ನ ಬಸ್‌ನಿಲ್ದಾಣದಲ್ಲಿ ಲೇಖಕಿ ನಿಂತಿದ್ದಾಗ, ಆಗುಂತಕನೊಬ್ಬ ಓಡಿಬಂದು ಏದುಸಿರು ಬಿಡುತ್ತ ಭಯಭೀತನಾಗಿ ಸುತ್ತಮುತ್ತ ದೃಷ್ಟಿ ಚೆಲ್ಲುತ್ತಾ ನಿಲ್ಲುವನು. ಅವನನ್ನು ನೋಡಿ ಭಯಗೊಂಡ ಲೇಖಕಿ "ಭಗವಂತಾ ನೀನೇ ನನಗೆ ಗತಿ. ನನ್ನನ್ನು ಕಾಪಾಡಪ್ಪ" ಎಂದು ದೇವರ ಧ್ಯಾನ ಮಾಡಿದರಂತೆ. ಅಷ್ಟೇ ಅಲ್ಲ, ಅವರಿಗೆ ಆಗ ಮಹಾಭಾರತದ ದ್ರೌಪದಿಯ ಮಾನಾಪಹರಣ ಜ್ಞಾಪಕಕ್ಕೆ ಬರುತ್ತಿದ್ದಿತಂತೆ (ಪು.೧೫೫) ಈ ರೀತಿಯ ಬರವಣಿಗೆ ಅಲ್ಲಲ್ಲಿ ಕಾಣಲು ಸಿಗುತ್ತದೆ.

ಅಮೆರಿಕದ ಜನರ ಸೌಜನ್ಯ, ಧಾರಾಳ ಗುಣ, ಸ್ನೇಹಪ್ರಿಯತೆ ಇತ್ಯಾದಿಗಳಿಗೆ ಮನಸೋತ ಲೇಖಕಿ ತಮ್ಮ ಪ್ರವಾಸದಲ್ಲಿ ಕಂಡುಂಡ ಈ ವಿಶೇಷಗುಣವನ್ನು ಮನಸಾರೆ ಹೊಗಳಿರುವರು. ಒಟ್ಟಿನಲ್ಲಿ, ಕುತೂಹಲವನ್ನು ಮಿಾಟುವಂತೆ ಅನುಭವ ಕಥನ ಇಲ್ಲಿ ನಿರೂಪಣೆಗೊಳ್ಳದಿದ್ದರೂ, ಹೊಸ ಅನುಭವಗಳನ್ನು ನಮ್ಮ ಪಾಲಿಗೆ ನೀಡದಿದ್ದರೂ ಓರ್ವ ಭಾರತೀಯ ಸ್ತ್ರೀ ತನ್ನದೇ ಆದ ನೋಟದಲ್ಲಿ ಅಮೆರಿಕವನ್ನು ಕಂಡದ್ದನ್ನು ಪ್ರಾಮಾಣಿಕವಾಗಿ ಹೇಳಲು ಪ್ರಯತ್ನಿಸಿರುವುದು ಈ ದೃಷ್ಟಿಯಿಂದ ಈ ಕೃತಿ ಸ್ವಾಗತಾರ್ಹ.

ಶ್ರೀ ಕೆ.ಗಣೇಶ ಮಲ್ಯರು 'ರೋಟರಿ ಗ್ರೂಪ್ ಸ್ಟಡಿ ಎಕ್ಸ್‌ಛೇಂಜ್' ಪ್ರೋಗ್ರಾಂನ ಅಂಗವಾಗಿ ಸಾಂಸ್ಕೃತಿಕ ರಾಯಭಾರಿಗಳಾಗಿ ಅಮೆರಿಕಾ ಹಾಗೂ ಕೆನಡಾ ದೇಶಗಳಲ್ಲಿ ಎರಡು ತಿಂಗಳು ಪ್ರವಾಸ ಮಾಡಿ ಪಡೆದ ಅನುಭವಗಳನ್ನು **ಅಮೆರಿಕದಲ್ಲಿ ಅರವತ್ತು ದಿನಗಳು** ಎಂಬ ತಮ್ಮ ಕೃತಿಯಲ್ಲಿ ಹೇಳಿರುವರು.

ಪ್ರವಾಸ ಕಾಲದಲ್ಲಿ ಮೂರು ದಿನಗಳಿಗೊಮ್ಮೆ ಅಮೆರಿಕನ್ ಹಾಗೂ ಕೆನಡಿಯನ್ ಕುಟುಂಬದಲ್ಲಿ ಇರುತ್ತಾ ಹೋಗಿ ಅವರೊಡನೆ ಬೆರೆತು ವಿಚಾರ ವಿನಿಮಯ ನಡೆಸಿದುದರ ಸ್ವಾರಸ್ಯಪೂರ್ಣವಾದ ವರದಿಯನ್ನು ಈ ಕೃತಿಯಲ್ಲಿ ಲೇಖಕರು ಕೊಟ್ಟಿರುವರು. ಪ್ರವಾಸದುದ್ದಕ್ಕೂ ವಿಸ್ಮಯದಿಂದ ಕಣ್ಣರಳಿಸುತ್ತಾ ಅಮೆರಿಕನ್ ಹಾಗೂ ಕೆನಡಿಯನ್ ಜೀವನ ವಿಧಾನಗಳನ್ನು ಪರಿಶೀಲಿಸಿ ತಮ್ಮ ಸಂತಸವನ್ನು ಅದುಮಿಡಲಾಗದೆ ಆಶ್ಚರ್ಯೋದ್ಗಾರಗಳನ್ನು ತೆಗೆದಿರುವರು. ಅಮೆರಿಕನ್ನರ ಅತಿಯೆನ್ನಿಸುವ ವಿಲಾಸೀ

ಜೀವನದಲ್ಲಿ ಅತೃಪ್ತಿಯ ಹೊಗೆಯಾಡುತ್ತಿರುವುದನ್ನು, ತಮ್ಮದೇ ಆದ ಪ್ರಾಚೀನ ಸಂಸ್ಕೃತಿಯಿಲ್ಲದ ಈ ಜನ ಭಾರತದತ್ತ ಆಸಕ್ತಿಪೂರ್ಣ ದೃಷ್ಟಿ ಹರಿಸಿರುವುದನ್ನು, ಭಾರತೀಯ ಧರ್ಮ ಹಾಗೂ ವೇದಾಂತಗಳ ಬಗೆಗೆ ತೀವ್ರವಾದ ಆಸಕ್ತಿ ಮೈಗೂಡಿಸಿ-ಕೊಂಡಿರುವುದನ್ನು ಲೇಖಕರು ತಮ್ಮ ಅಧ್ಯಯನದಿಂದ ಕಂಡುಕೊಂಡು ಅದನ್ನು ಉತ್ಸಾಹದಿಂದ ಹೇಳಿರುವರು. ಭಾರತದ ಬಗೆಗೆ ಅಮೆರಿಕನ್ ಜತೆಗಿರುವ ವಿಶ್ವಾಸ ಪ್ರೀತಿಗಳನ್ನು ತಾವು ಸಂಚರಿಸಿದ ಕಡೆಗಳಲ್ಲೆಲ್ಲಾ ಕಂಡು ಅನುಭವಿಸಿದ ಲೇಖಕರು ಅದನ್ನು ಬಾಯ್ತುಂಬ ಹೇಳಿರುವರು. ಅವರ ಅದ್ಭುತ ಪ್ರಗತಿ, ಶುಚಿತ್ವದ ಬಗೆಗೆ ಅವರಿಗಿರುವ ಕಾಳಜಿ ಇವನ್ನು ಮನಸಾರೆ ಹೊಗಳುವ ಲೇಖಕರು ಅವರ ಗೃಹಸೌಖ್ಯದಲ್ಲಿನ ಅಸಾಮರಸ್ಯವನ್ನು ಕುರಿತು ತಮ್ಮ ಬೇಸರವನ್ನು ವ್ಯಕ್ತಪಡಿಸಿರುವರು. ಪ್ರವಾಸದಲ್ಲಿ ಅಮೆರಿಕಾ ಹೆಚ್ಚಿನ ದಿನಗಳನ್ನು ಆಕ್ರಮಿಸಿಕೊಂಡದ್ದರಿಂದ ಕೆನಡಾದ ಪ್ರವಾಸಕಥನ ಕೊನೆಯಲ್ಲಿ ಬರುತ್ತದೆ. ಲೇಖಕರಿಗೆ ಅಮೆರಿಕದ ಮೇಲಿರುವಷ್ಟು ಅಭಿಮಾನ ಏಕೋ ಏನೋ ಕೆನಡಾದ ಮೇಲೆ ಇದ್ದಂತೆ ತೋರುವುದಿಲ್ಲ. ಕೆನಡಾ ಪ್ರವಾಸದಲ್ಲಿ ನಯಾಗಾರ ಜಲಪಾತದ ವರ್ಣನೆಯೇ ಹೆಚ್ಚು ಬಂದಿದ್ದು, ಹರಕು ಮುರುಕು ವಿವರಗಳು ಉಳಿದ ಇತರ ಪ್ರೇಕ್ಷಣೀಯ ಸ್ಥಳಗಳ ಬಗೆಗೆ ಬಂದಿದೆ. ಇಲ್ಲಿಯ ವರ್ಣನೆಗಳೆಲ್ಲವೂ ಬರಿಯ ವಿಷಯದ ಮಟ್ಟದಲ್ಲಿ ನಿಲ್ಲುತ್ತವೆ. ವರ್ಣನೆಯಲ್ಲಿ ಬರುವ ಊರಾಗಲೀ, ವ್ಯಕ್ತಿಯಾಗಲೀ, ದೃಶ್ಯವಾಗಲೀ ಜೀವತುಂಬಿ ಕಣ್ಣ ಮುಂದೆ ನಿಲ್ಲುವುದೇ ಇಲ್ಲ.

ಶ್ರೀ ಬಿ.ವಿ. ರಾಮನ್‌ರವರು ಇಂಗ್ಲಿಷಿನಲ್ಲಿ ಮೊದಲು ಬರೆದಿದ್ದ **ಅಮೆರಿಕದಲ್ಲಿ ಓರ್ವ ಹಿಂದು** ಎಂಬ ಗ್ರಂಥವನ್ನು ಶ್ರೀ ಎನ್.ಎಸ್. ಸೀತಾರಾಮಶಾಸ್ತ್ರಿಯವರು ಕನ್ನಡಕ್ಕೆ ಅನುವಾದಿಸಿರುವರು. ಶ್ರೀ ಬಿ.ವಿ. ರಾಮನ್‌ರವರು ಅಖಿಲ ಭಾರತ ಖ್ಯಾತಿಯ ಜ್ಯೋತಿರ್ ವಿಜ್ಞಾನದ ಪ್ರತಿಪಾದಕರಾಗಿ ಯೂರೋಪು, ಅಮೆರಿಕಾ ದೇಶಗಳ ಪ್ರವಾಸ ಕೈಗೊಂಡ ಲೇಖಕರು. ತಾವು ಪ್ರವಾಸದ ಅವಧಿಯಲ್ಲಿ ಭೇಟಿಮಾಡುವ ಸ್ಥಳಗಳು; ಭಾಗವಹಿಸಿದ ಜೋತಿಷ್ಯ ಸಮ್ಮೇಳನಗಳು; ಭೇಟಿಮಾಡಿದ ಮಹಾಶಯರುಗಳು ಹಾಗೂ ಅವರೊಡನೆ ನಡೆಸಿದ ಚರ್ಚೆಗಳು; ಭಾರತೀಯ ಜ್ಯೋತಿಶ್ಶಾಸ್ತ್ರದ ಬಗೆಗೆ ಮಾಡಿದ ಭಾಷಣಗಳು ಇವೇ ಮೊದಲಾದವುಗಳ ವಿವರಗಳನ್ನು ಒಳಗೊಂಡ ಈ ಕೃತಿ ಪ್ರವಾಸ ಸಾಹಿತ್ಯವಾಗಿ ನಮ್ಮನ್ನು ಅಷ್ಟಾಗಿ ಆಕರ್ಷಿಸುವುದಿಲ್ಲ. ಜ್ಯೋತಿಶ್ಶಾಸ್ತ್ರದ ಬಗೆಗೆ ನಂಬುಗೆ, ಶ್ರದ್ಧೆಯುಳ್ಳವರಿಗೆ ಇದು ರುಚಿಯಾಗುತ್ತದೇನೋ! ಅನುವಾದ ಮೂಲಾನುಸಾರಿಯಾಗಿ ಬಂದಿದ್ದು ಓದಿಸಿಕೊಂಡು ಹೋಗುತ್ತದೆ.

ಶ್ರೀ ಶಿವರಾಮ ಕಾರಂತರ **ಅಪೂರ್ವ ಪಶ್ಚಿಮ** ಯೂರೋಪು ಪ್ರವಾಸಾನುಭವವನ್ನು ಸಾವಕಾಶವಾಗಿ ಮಾಡಿಕೊಟ್ಟರೆ, ಅವರ ಇತ್ತೀಚಿನ ಪ್ರವಾಸ

ಕಥನವಾದ **ಪಾತಾಳಕ್ಕೆ ಪಯಣ** ಅಮೆರಿಕ ಸಂಯುಕ್ತ ರಾಷ್ಟ್ರಗಳ ಒಂದು ತಿಂಗಳ ಸುತ್ತಾಟದ ಅನುಭವಗಳನ್ನು ತೀವ್ರಗತಿಯಲ್ಲಿ ಮಾಡಿಕೊಡುತ್ತದೆ. ಕಾರಂತರೇ ಹೇಳುವಂತೆ 'ಇದೊಂದು ವಿಹಂಗಮ ನೋಟ.' ಆ ದೇಶವನ್ನು ನೋಡಿ ತಿಳಿಯಬೇಕು, ಸಂತೋಷ ಪಡಬೇಕು ಎಂಬ ಬಯಕೆಯಿಂದ ಕಾರಂತರು ಆ ದೇಶಕ್ಕೆ ಹೋದದ್ದು. 'ಕಲಿಯಲು ಹೋದ' ಅವರ ವಿಶಿಷ್ಟ ಅನುಭವಗಳು ಯಥೇಚ್ಛವಾಗಿ ಇದರಲ್ಲಿದೆ.

ಕಾರಂತರ ಈ ಒಂದು ತಿಂಗಳ ಅನುಭವ ಸ್ವಂತದ್ದು. ಅವರು ಮಿತ್ರರಾಷ್ಟ್ರ ಅತಿಥಿಯಾಗಿಯೊ, ಇಲ್ಲವೆ ಸರಕಾರದ ಪರವಾಗಿಯೇ ಸಂಚಾರ ಹೋದವರಲ್ಲ, ಆತ್ಮೀಯ ಮಿತ್ರರ ಆಹ್ವಾನದ ಮೇರೆಗೆ ಅಮೇರಿಕಾಕ್ಕೆ ಹೋದದ್ದು. ಕಾಲದ ಮಿತಿಯಿಂದಾಗಿ, ಅವರು ಅಮೆರಿಕನ್ ಕುಟುಂಬದ ಜೊತೆಗೆ ಪರಿಚಯವನ್ನು ಬೆಳೆಯಿಸಲು ಆಗಲಿಲ್ಲ. ಹಾಗೆಯೇ ಅವರ ಬದುಕು-ವಿಚಾರ-ಆಚಾರಗಳ ಬಗೆಗೆ ಅಭ್ಯಾಸ ನಡೆಸಲೂ ಆಗಲಿಲ್ಲ. ಅವರ ಪ್ರವಾಸದ ಪ್ರಥಮ ಉದ್ದೇಶ ಚಿತ್ರಶಾಲೆಗಳನ್ನು ನೋಡುವುದು. ಎರಡನೆಯದು, 'ಅಮೆರಿಕನ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ' ಹಾಗೂ ಒಂದೆರೆಡು ನಾಟಕಗಳನ್ನು ನೋಡುವುದು. ಮೂರನೆಯದು, ಪ್ರಕೃತಿಯದು, ಪ್ರಕೃತಿಯ ಕಣ್‌ತಣಿಸುವ ವಿಲಾಸ ವಿಭ್ರಮಗಳನ್ನು ನೋಡುವುದು. ಅವಕಾಶ ಸಿಕ್ಕಿದರೆ ವಿಶ್ರಾಮ ಸ್ಥಳಗಳಾದ ಪಾರ್ಕುಗಳನ್ನು, ಪುರುಸೊತ್ತಿದ್ದರೆ ಹಡ್ಸನ್ ನದಿಯ ಮೇಲೆ ತೇಲಿ 'ಸ್ಟೇಚು ಆಫ್ ಲಿಬರ್ಟ್'ಯನ್ನು ನೋಡುವುದು (ಪು. ೨೪).

ಕಾರಂತರದು ಕಲಾವಿದನ ಕಣ್ಣು, ಮನಸ್ಸು. 'ನೋಡುವ ಕಣ್ಣಿದ್ದರೆ, ಅದಕ್ಕೆ ಬೇಕಾದ ತಿಳಿವಿನ ಹಿನ್ನೆಲೆಯಿದ್ದರೆ, ಹಣ ಮತ್ತು ಸಮಯದ ಸೌಕರ್ಯವಿದ್ದರೆ-ಇಲ್ಲಿ ಎಷ್ಟೋ ನೋಡಬಹುದು, ನಮ್ಮ ಪಾಲಿಗೆ ಹೊಸತಾದುದನ್ನು' (ಪು. ೪೧) ಎನ್ನುವ ಕಾರಂತರು, ಇರುವ ಸ್ವಲ್ಪ ಕಾಲಾವಧಿಯಲ್ಲೇ ಅಮೆರಿಕದಲ್ಲಿ ನೋಡಬೇಕಾದುದನ್ನೆಲ್ಲಾ ಕುತೂಹಲ ನೇತ್ರಗಳಿಂದ ನೋಡಿ ಆನಂದಿಸಿರುವರು. ಅವರಲ್ಲಿನ ಕಲಾವಿದನ ಕಣ್ಣು ತನಗೆ ಇಷ್ಟವಾದುದನ್ನು ಅರಸಿ ಹೋಗಿದೆ. ಮೆಟ್ರೋಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್ಸ್‌ನಲ್ಲಿ ಯೂರೋಪಿನ ಹಲವು ಕಲಾವಿದರ ಪ್ರಸಿದ್ಧ ಚಿತ್ರಗಳನ್ನು ನೋಡಿ ಮೆಚ್ಚಿದ ಕಾರಂತರು 'ಇಲ್ಲಿನ ಮಹಾ ಸಂಗ್ರಹವು ಆ ಜನಗಳ ಕಲೆಯನ್ನು ಕುರಿತ ಕುತೂಹಲ ಆಸಕ್ತಿಗಳಿಗೆ ಒಂದು ಸಾಕ್ಷಿ' ಎನ್ನುವರು (ಪು.೨೬). ಹಾಲೆಂಡಿನ ವೆನ್‌ಗಘ್‌ನ ಭೂದೃಶ್ಯದ ಚಿತ್ರ ಅವರ ಮನಸ್ಸಿನಲ್ಲಿ ಉಳಿಸಿದಾಗ 'ನನ್ನ ಪ್ರವಾಸಕ್ಕೆ ಕೇವಲ ಅದೊಂದೇ ಪ್ರತಿಫಲ ಸಾಕು (ಪು.೨೭) ಎಂದು ಭಾವಪರವಶರಾಗಿ ಸಂತೃಪ್ತ ಭಾವವನ್ನು ಪ್ರಕಟಿಸುವರು. ಮ್ಯೂಸಿಯಂ ಆಫ್ ಮಾಡರ್ನ್ ಆರ್ಟ್‌ನಲ್ಲಿರುವ ಆಧುನಿಕ ಚಿತ್ರ ಶಿಲ್ಪಗಳ ಮೆಚ್ಚುಗೆಯ ಅವಲೋಕನವಾಗಲೀ, ಅಮೆರಿಕನ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲಿರುವ

ಜಗತ್ತಿನ ಮೃಗಪಕ್ಷಿಗಳ ಸಂಗ್ರಹದಲ್ಲಿ ಕಾರಂತರು ಹೆಜ್ಜೆಹೆಜ್ಜೆಗೆ ಕಾಣುವ ವಿಸ್ಮಯ ಪ್ರಪಂಚವನ್ನಾಗಲೀ, ಸಿಕೋಯಾ ರಾಷ್ಟ್ರೀಯ ಅರಣ್ಯೋದ್ಯಾನದಲ್ಲಿ ಕಣ್‌ತಣಿಸುವ ನಿಸರ್ಗದ ಸುಂದರ ದೃಶ್ಯಗಳ ದೈತ್ಯವೃಕ್ಷಗಳ ಬಣ್ಣನೆಯನ್ನಾಗಲೀ, ಕೊಲೆರಾಡೊ ಕೊರಕಲಿನ ಅದ್ಭುತ ನೋಟವನ್ನಾಗಲೀ, ಗ್ರ್ಯಾಂಡ್ ಕೆನಿಯನ್‌ನ ಮನತಣಿಸುವ ಭವ್ಯತೆಯನ್ನಾಗಲೀ ಓದುವ ಓದುಗರ ಮನ ದಳದಳ ಅರಳುತ್ತದೆ. ಹಾಗೆಯೇ ಅವನ ಪ್ರಜ್ಞಾಕೋಶ ಶ್ರೀಮಂತವಾಗುತ್ತದೆ.

ಹಡ್ಸನ್ ನದಿ ದಂಡೆಯ ಮಗ್ಗುಲಿನ ಉನ್ನತ ಗುಡ್ಡವನ್ನೂ, ಅದರಲ್ಲಿ ಬೆಳೆದಿರುವ ಕಾಡಿನ ಸೊಂಪನ್ನೂ ಕಂಡು ಕಾರಂತರಿಗೆ ಅಸೂಯೆಯಾಯಿತಂತೆ. ಆಗ ಅವರ ಮನ ತಮ್ಮ ಸ್ವಂತ ಮನೆಯ ತೆಂಕಣದಲ್ಲಿರುವ ಗುಡ್ಡ ಬೆಟ್ಟಗಳ ಹಸುರನ್ನು ವರ್ಷ ವರ್ಷವೂ ಕ್ಷೌರ ಮಾಡುತ್ತಿರುವ ಸಸ್ಯ ವೈರಿಗಳನ್ನು ನೆನೆಯಿತು (ಪು.೪೦). ಸೈಂಟ್‌ಪಾಲ್ ನಗರಕ್ಕೆ ಹೋಗುವಾಗ ಹಾದಿಯ ಎರಡೂ ಕಡೆಯ ಗಿಡ ಮರಗಳ ಹಸುರನ್ನೂ, ಆಚೀಚೆ ಕಾಣಿಸುವ ತೆರವಾದ ಸ್ಥಳಗಳಲ್ಲಿ ಹಾಗೂ ರೈತರ ವಸತಿಗಳಲ್ಲಿ ಬೆಳೆದ ವಿವಿಧ ಪೈರುಗಳು ಮುಕ್ಕಳಿಸುವ ಹಸಿರಿನ ಸೊಂಪನ್ನೂ ನೋಡಿದ ಅವರ ಮನಸ್ಸು ತಮ್ಮ ದೇಶದ ವಿಶಾಲ ಪ್ರಸ್ಥಭೂಮಿಯಲ್ಲಿನ ಹಸುರಿಲ್ಲದ, ನೆಲ ಕೊರೆದು ಗಲ್ಲಿ ಗಲ್ಲಿಗಳಾದ ಚಿತ್ರವನ್ನೂ, ಗಿಡಮರಗಳ ಮೇಲೆ ಹಗೆತೊಟ್ಟ ತಮ್ಮ ಜನಗಳ ಬದುಕಿನ ನೆನಪನ್ನೂ ತಂದುಕೊಂಡಿತು (ಪು.೧೪೯).

ಕಾರಂತರು ಕಲಾಶಾಲೆಗಳ ಅಪೂರ್ವ ಚಿತ್ರ, ಶಿಲ್ಪ; ಪ್ರಕೃತಿಯ ಸುಂದರ ದೃಶ್ಯಗಳು; ಅಮೆರಿಕದ ಪ್ರಾಣಿ ಸಂಗ್ರಹಾಲಯಗಳು; ಪಾರ್ಕುಗಳು; ಬೃಹತ್ ಕಟ್ಟಡಗಳು -ಇವುಗಳಷ್ಟನ್ನೇ ತಮ್ಮ ಪ್ರವಾಸಾವಧಿಯಲ್ಲಿ ನೋಡಿ ಬರಲಿಲ್ಲ. ಅವರು ಆತ್ಮೀಯರ ಸ್ನೇಹದ ಸವಿಯನ್ನೂ ಉಂಡಿದ್ದಾರೆ; ಆಪ್ತರ ಜೊತೆ ನಕ್ಕು ನಲಿದಿದ್ದಾರೆ, ಚರ್ಚಿಸಿದ್ದಾರೆ, ಸುತ್ತಾಡಿದ್ದಾರೆ; ಅವರ ಆತಿಥ್ಯಕ್ಕೆ ಮನಸೋತಿದ್ದಾರೆ. ಆ ಸ್ನೇಹದ ಆತಿಥ್ಯದ ಸವಿಯನ್ನು ಉದ್ದಕ್ಕೂ ಕಾರಂತರು ಕಾಣಿಸಿದ್ದಾರೆ. ಅಂತರಾಳದಿಂದ ಒಸರಿ ಬರುವ ಸ್ನೇಹ, ಮಾನವೀಯ ಗುಣಗಳನ್ನು ಯಾರಲ್ಲಿಯೇ ಆಗಲಿ ಕಂಡರೆ ಮೆಚ್ಚುವ ಮನಸ್ಸು ಕಾರಂತರದು. ಅಮೆರಿಕನ್ನರ ಬದುಕಿನಲ್ಲಿ ಈ ಗುಣಗಳನ್ನು ಕಾರಂತರೂ ಒಂದು ಸಂದರ್ಭದಲ್ಲಿ ಕಂಡದ್ದು ಹೀಗೆ:

ಕಾರಂತರು ತಾವು ಉಳಿದುಕೊಂಡಿದ್ದ ಮಿತ್ರರ ಕುಟುಂಬದೊಂದಿಗೆ ಪ್ರವಾಸ ಹೊರಟಿದ್ದರು. ಮಾರ್ಗ ಮಧ್ಯೆ ಮಿತ್ರರ ಮಗಳು ತನ್ನ ತಂದೆಗೆ ತನ್ನ ಹುಟ್ಟುಹಬ್ಬದ ನೆನಪು ಕೊಟ್ಟಳು. ಊಟಕ್ಕೆ ಭೋಜನ ಶಾಲೆಯೊಂದರಲ್ಲಿ ಕುಳಿತಾಗ ಹುಟ್ಟುಹಬ್ಬದ ನೆನಪು ಬಂದಿತು. ಮಿತ್ರರು ಅಲ್ಲಿ ಊಟೋಪಚಾರಕ್ಕೆ ನಿಂತ ಯುವತಿಯೊಡನೆ

"ಏನಾದರೂ ಕೇಕ್ ಇದೆಯೇ? ಇವತ್ತು ಆಕೆಯ ಹುಟ್ಟಿದ ದಿನ" ಎಂದರು. ಆಕೆ ಪ್ರಯತ್ನಿಸುತ್ತೇನೆ ಎಂದಳು. ಸ್ವಲ್ಪ ಹೊತ್ತಿನಲ್ಲೇ ಆಕೆ ಬಂದಳು. ಒಂದು ತಟ್ಟೆಯಲ್ಲಿ ಕೇಕ್‌ನಂತಿರುವ ಏನನ್ನೋ ಇರಿಸಿಕೊಂಡು ಅದರ ಮೇಲೊಂದು ಕಾಗದದ ಬತ್ತಿಯ ದೀಪ ನಿಲ್ಲಿಸಿ ತಂದಳು. ಅವಳ ಬೆನ್ನಿಗೆ ಇನ್ನೂ ಆರೆಂಟು ಮಂದಿ ಯುವತಿಯರನ್ನೂ ತರುಣರನ್ನೂ ಆಕೆ ಕರೆದು ತರಬೇಕೇ? ಅವರೆಲ್ಲರೂ ಸಾಲಾಗಿ ನಿಂತು 'ಹ್ಯಾಪಿ ಬರ್ತ್‌ಡೇ ಟು ಯು' ಎಂಬ ಹಾಡನ್ನು ಹಾಡಿ ಕೊನೆಯಲ್ಲಿ 'ಟು ಯು ಆಶಾ' ಎಂದು ಸಹಾ ಸೇರಿಸಿದರು.

ಯಾವ ಊರಿನದೋ ಒಬ್ಬ ಹುಡುಗಿಗಾಗಿ, ಇನ್ನಾವ ಊರಿನಿಂದಲೊ ಬಂದ ಈ ಕೆಲಸದ ಯುವಕ ಯುವತಿಯರು ಹಾಗೆ ಹಾಡಿದ್ದು, ಒಂದು ಮಗುವಿನ ಹುಟ್ಟಿದ ಹಬ್ಬದ ಸಂತಸಕ್ಕೆ ಕೊರತೆ ಬರಬಾರದೆಂದು ಅವರು ತಾವಾಗಿಯೇ ಪ್ರದರ್ಶಿಸಿದ್ದು ಕಾರಂತರಿಗೆ ಅಚ್ಚರಿ ತಂದಿತು. ಆ ಸಂದರ್ಭದಲ್ಲಿ ಅವರಿಗೆ ಅನಿಸಿದ್ದಿಷ್ಟು "ಅನೇಕ ಬಾರಿ ಈ ನಾಡಿನ ಜನರ ವಿಷಯದಲ್ಲಿ ಅವರು ಲೌಕಿಕರು, ಅವರಲ್ಲಿ ಸ್ಪಿರಿಚ್ಯೂವಲಿಸಮು ಸಾಲದು, ಎಂದು ಗೊಣಗುವ ನಮಗೆ, ಜನರಲ್ಲಿ ಜೀವಂತ ಉಳಿದಿರುವ ಮಾನವೀ ಅನುಕಂಪವನ್ನು ಗುರುತಿಸಲು ಬಂದುದಾದರೆ, ನಾಲಗೆಯ ಆಧ್ಯಾತ್ಮಕ್ಕಿಂತಲೂ, ನಡವಳಿಕೆಯ ಆಧ್ಯಾತ್ಮ ದೊಡ್ಡದ್ದು." (ಪು. ೧೪೦-೧೪೧)

ಕಾರಂತರ ವ್ಯಕ್ತಿತ್ವ ಅವರ ನೇರ ಮಾತುಗಳಲ್ಲಿ ನಿಚ್ಚಳವಾಗಿ ಕಾಣುತ್ತದೆ. ಅವರು ತಮಗೆ ಮೆಚ್ಚಿಗೆಯಾದುದನ್ನು ಮುಕ್ತ ಮನಸ್ಸಿನಿಂದ ಹೇಳುವರು. ಮೆಚ್ಚಿಗೆಯಾಗದಿದ್ದನ್ನು, ತಮಗೆ ಅಪ್ರಿಯವೆನ್ನಿಸಿದ್ದನ್ನು ನೇರವಾಗಿ ಖಾರವಾಗಿ ಹೇಳುವರು. ಭಾರತದ ವಿದೇಶೀವಿನಿಮಯ ನೀತಿಯನ್ನು ಖಂಡಿಸುತ್ತಾ "ಪರದೇಶ ಜನಗಳು ಪವಿತ್ರ ಭಾರತಕ್ಕೆ ಬಂದು ಇಲ್ಲಿ ಏನೂ ಬೇಕಾದರೂ ತಮ್ಮ ಡಾಲರುಗಳನ್ನೋ, ಪೌಂಡುಗಳನ್ನೋ, ಮಾರ್ಕುಗಳನ್ನೋ, ಯೆನ್ನುಗಳನ್ನೋ ತಂದು ಸುರಿಯಬೇಕು. ಅವರ ಹಣ ಸಂಪಾದಿಸಲು ನಾವು 'ಪಂಚತಾರಾ' ಹೋಟಲುಗಳನ್ನು ಕಟ್ಟುತ್ತಾ ಹೋಗಬೇಕು. ನಮ್ಮ ಜನಗಳು ಮಾತ್ರ ಪರದೇಶಗಳಿಗೆ ಹೋಗಿ ಒಂದು ಕಾಸನ್ನೂ ವೆಚ್ಚ ಮಾಡಬಾರದು -ಎಂಬ ರಾಜಕೀಯ ನನಗಂತ ನಾಚಿಕೆ ತಂದಿತ್ತು" ಎಂದು ಟೀಕಿಸಿರುವರು (ಪು.೨). ಅಮೆರಿಕದಲ್ಲಿ ಒಂದೇ ಒಂದು ಮಿನಿಟಿನಲ್ಲಿ ದೇಶದ ಯಾವ ಮೂಲೆಗೆ ಬೇಕಾದರೂ ಟೆಲಿಫೋನ್ ಸಂಪರ್ಕ ಬೆಳೆಸಬಹುದಾದ ತಾಂತ್ರಿಕ ಮುನ್ನಡೆಯನ್ನು ಮೆಚ್ಚಿದ ಕಾರಂತರು "ಶೈಮಿನಿ ನಗರದ ಯಮರಾಯನೊಡನೆಯೂ ಮಾತನಾಡುವುದಾದರೆ ಸುಲಭ, ಕ್ಷಿಪ್ರ. ಆದರೆ ನಮ್ಮ ಟೆಲಿಫೋನು ಸಂಪಕ ಕಾದೇ ಸಾಕಾಗುತ್ತದೆ. ಕೇಳುವುದು ಕೇಳಿಸದೆ ಹೋಗಿ ದಂಡ ತೆರುವುದಲ್ಲದೆ ಇನ್ನೇನೂ ಇಲ್ಲ. ನಾವೂ ಆಧುನಿಕರೇ. ಬಹಳ ಬಹಳ

ಮುಂದುವರಿದಿದ್ದೇವೆ. ನಮಗೂ, ಅವರಿಗೂ ಇರುವ ವ್ಯತ್ಯಾಸವಿಷ್ಟೇ -ಅವರು ಈ ಜನ್ಮವನ್ನು ನಂಬಿದ್ದಾರೆ. ಈ ಕ್ಷಣ ಬೇಕಾದದ್ದೆಲ್ಲವನ್ನೂ ಮುಂದಿನ ಜನ್ಮದಲ್ಲಿ ಮಾಡಲು ಅವಕಾಶವಿದೆ; ಅವಸರವಿಲ್ಲ -ಎಂಬ ದೃಢ ನಂಬುಗೆಯವರು ನಾವು" (ಪು.೪೮) ಎಂದು ವ್ಯಂಗ್ಯವಾಡಿರುವರು ಅಮೆರಿಕನ್ನರದು ಯಾಂತ್ರಿಕ ಜೀವನ, ಅವಸರದ ಓಡಾಟ. ಹೀಗಾಗಿ ಆ ದೇಶದಲ್ಲಿ ಹೃದ್ರೋಗದಿಂದ ಸಾಯುವವರ ಸಂಖ್ಯೆ ಹೆಚ್ಚು ಎನ್ನುವ ನಮ್ಮವರನ್ನು ಕಾರಂತರು ನಿಜವಿರಬೇಕು ಅವರಿಗೆ ಇರುವ ಹೃದಯ, ಮುಖಗಳನ್ನು ನೋಡಿದರೆ, ಅದು ಗೊತ್ತಾಗುತ್ತದೆ. ಮನಸ್ಸು ತಿಳಿಯುತ್ತದೆ. ನಮ್ಮಲ್ಲಿರುವುದು ಮುಚ್ಚಿಕೊಂಡ ಹೃದಯಕಮಲವಾದುದರಿಂದ ಮಿಡಿಯುವುದು ಕಡಿಮೆ, ಸಮಾಧಿ ಸ್ಥಿತಿಯಲ್ಲಿರುವುದೇ ಹೆಚ್ಚು. ಹೀಗಾಗಿ ನಮಗೆ ಹೃದ್ರೋಗದ ಬಾಧೆ ಬಂದರೆ ಸಾಯುವ ತನಕವೂ ಗೊತ್ತಾಗುವುದಿಲ್ಲ" (ಪು.೪೯) ಎಂದು ತರಾಟೆಗೆ ತೆಗೆದುಕೊಂಡಿರುವರು. ಕಾರಂತರ ಮಾತುಗಳಲ್ಲಿ ಮೆಚ್ಚುವ ಚುಚ್ಚುವ ಎರಡೂ ಗುಣಗಳನ್ನು ನಾವು ಕಾಣುತ್ತಾ ಹೋಗುವೆವು.

ಕಾರಂತರು ತಮ್ಮ ಸುತ್ತಾಟದ ಮಿತ ಅವಧಿಯಲ್ಲಿ ತಮ್ಮ ಒಲವು ಆಸಕ್ತಿಗಳಿಗೆ ಅನುಗುಣವಾಗಿ ಅಡ್ಡಾಡಿರುವರು. ಆ ದೇಶವನ್ನು ನೋಡಿ ತಿಳಿಯಬೇಕು, ಸಂತೋಷಪಡಬೇಕು ಎಂಬ ಬಯಕೆಯಿಂದ ಹೋದ ಅವರು ತಮಗಾದ ಅನುಭವವನ್ನಷ್ಟೆ ಅಲ್ಲಿ ತಿಳಿಸಿರುವರು. "ಅಲ್ಲಿ ಏನೇನೆಲ್ಲ ಕೊಳಚೆ ಇದೆ ಎಂದು ಹುಡುಕಿ ತೋರಿಸಲು ಇಲ್ಲವೆ ನೋಡಲು, ನಾನು ಹೋದವನಂತು ಅಲ್ಲ" ಎಂದು ಕಾರಂತರೇ ತಮ್ಮ ಮುನ್ನುಡಿಯಲ್ಲಿ ಹೇಳಿಕೊಂಡಿರುವರು. ಅವರ ಈ ಸುತ್ತಾಟದ ಅನುಭವಗಳು ವಸ್ತುನಿಷ್ಠ ಹಾಗೂ ಸಂಪನ್ನ ಅನುಭವಗಳು ನಮ್ಮ ಬದುಕಿಗೆ, ಚೇತನಕ್ಕೆ ಹೊಸ ದಿಂಗತವನ್ನೂ ಆನಂದದ ಸವಿಯನ್ನೂ ತಂದುಕೊಡುತ್ತದೆ. ನಮ್ಮ ಸೀಮಿತ ಅನುಭವಕ್ಕೆ ಪ್ರಪಂಚಕ್ಕೆ, ಈ ವಿಪುಲವಾದ ಅನುಭವ ಪ್ರಪಂಚ ಸೇರುವುದರ ಮೂಲಕ ಅದು ಹಿಗ್ಗಬೇಕು, ವಿಶಾಲವಾಗಬೇಕು.

ಡಾ. ಪ್ರಭುಶಂಕರ ಅವರು ಕನ್ನಡದ ಪ್ರತಿಭಾವಂತ ವಿದ್ವಾಂಸರಲ್ಲಿ ಒಬ್ಬರು. **ಅಮೆರಿಕದಲ್ಲಿ ನಾನು, ಶಾಂತಿ** ಡಾ. ಪ್ರಭುಶಂಕರ ದಂಪತಿಗಳ ಅಮೆರಿಕಾ ಪ್ರವಾಸಾನುಭವವನ್ನು ಹೇಳುವ ಕೃತಿ. "ನನಗೆ ಚೆನ್ನ ಕಂಡದ್ದನ್ನು ನನ್ನ ಜನರಿಗೆ ತಿಳಿಸಬೇಕೆನ್ನುವ ಆಸೆ ನನ್ನದು. ನಾನು ಅಮೆರಿಕೆಯನ್ನು ನೋಡಿದ ರೀತಿ, ಅರ್ಥ ಮಾಡಿಕೊಂಡ ಬಗೆ ಉಳಿದವರಿಗಿಂತ ಬೇರೆಯಾಗಿರುವ ಸಾಧ್ಯತೆ ಇದೆ. ಅದೇನು ಎನ್ನುವುದನ್ನು ನನ್ನ ಕನ್ನಡ ಜನರಿಗೆ ತಿಳಿಯಹೇಳುವ ಉತ್ಸಾಹ ನನ್ನದು. ಆದ್ದರಿಂದ ಈ ಪುಸ್ತಕ ಬರೆಯುತ್ತಿದ್ದೇನೆ" ಎಂದು ಲೇಖಕರು ತಮ್ಮ ಕೃತಿರಚನೆಯ ಉದ್ದೇಶವನ್ನು ಮೊದಲಿಗೇ ಸ್ಪಷ್ಟಪಡಿಸಿರುವರು.

ಡಾ. ಪ್ರಭುಶಂಕರ ಅವರು ಅಮೆರಿಕವನ್ನು ಹೊರ ಪ್ರವಾಸಿಯಾಗಿ ನೋಡುವಾಗ ತಮ್ಮ ಮನದಲ್ಲಿ ಸಹಜವಾಗಿ ಆದ ಪ್ರತಿಕ್ರಿಯೆಯನ್ನು ಪ್ರಾಮಾಣಿಕವಾಗಿ ತಮ್ಮ ಪ್ರವಾಸ ಕಥನದಲ್ಲಿ ಹೇಳಲು ಪ್ರಯತ್ನಿಸಿರುವರು. ಪ್ರವಾಸ ಕಥನ ದಿನಚರಿ ರೂಪದಲ್ಲಿದ್ದು, ಅಮೆರಿಕನ್ ಜೀವನವನ್ನು ಹತ್ತಿರದಿಂದ ನೋಡುವ ಲೇಖಕರ ಆಸಕ್ತಿಯಿಂದಾಗಿ ಅನೇಕ ಸ್ವಾರಸ್ಯಕರ ವಿವರಗಳು ಪುಸ್ತಕದುದ್ದಕ್ಕೂ ಬರುತ್ತವೆ. ಅಮೆರಿಕದ ಸಾಮಾಜಿಕ ವ್ಯವಸ್ಥೆಯಲ್ಲಿ ತಂದೆ ಮಕ್ಕಳ ಸಂಬಂಧ ನಿಕಟವಾದುದಲ್ಲ. ತಂದೆ ತಾಯಿಗಳ ಜೊತೆ ವಯಸ್ಕರಾದ ಮಗ ಇಲ್ಲವೆ ಮಗಳು ಇರಲು ಇಷ್ಟಪಡುವುದಿಲ್ಲ, ಸ್ವತಂತ್ರವಾಗಿ ಇರಲು ಇಷ್ಟಪಡುವರು. ಹೀಗಾಗಿ ವೃದ್ಧ ತಂದೆ ತಾಯಿಯರು ಪ್ರೀತಿ ವಿಶ್ವಾಸಗಳ ಕೊರತೆಯಿಂದ ನರಳುವರು. ಒಂಟಿತನದ ಅನುಭವ ಅವರನ್ನು ಕಾಡುತ್ತಿರುತ್ತದೆ.* ಸರಕಾರ ಇವರ ಯೋಗಕ್ಷೇಮದ ಹೊಣೆ ಹೊತ್ತಿದ್ದರೂ ಇವರ ಶುಶ್ರೂಷೆ ಮಾಡಲು ವೃದ್ಧಾಲಯಗಳಿದ್ದರೂ ಕಾಲ

---

* ಪ್ರೊ. ಎ.ಎಸ್. ಮೂರ್ತಿರಾವ್‌ರವರೂ ಇಂತಹ ಒಂಟಿತನದ ಅನುಭವ ಕುರಿತ ಪ್ರಸಂಗವೊಂದನ್ನು ತಮ್ಮ 'ಅಪರವಯಸ್ಕನ ಅಮೆರಿಕಯಾತ್ರೆ' ಎಂಬ ಕೃತಿಯಲ್ಲಿ ಕೊಟ್ಟಿರುವರು (ಪು.೭೨). ಆ ಪ್ರಸಂಗವನ್ನು ಅವರಿಗೆ ಹೇಳಿದವರು ಅವರ ಮಿತ್ರ ಡಾ. ಗೋವಿಂದಸ್ವಾಮಿ. ಇದು ಘಟಿಸಿದ ಕಾಲ ೧೯೫೨-೫೩). ಗೋವಿಂದಸ್ವಾಮಿಯವರು ನ್ಯೂಯಾರ್ಕ್‌ನಲ್ಲಿದ್ದಾಗ ನಿತ್ಯವೂ ೬ ಗಂಟೆಯ ವೇಳೆಗೆ ಸಣ್ಣ ರೆಸ್ಟೋರೆಂಟ್ ಒಂದರಲ್ಲಿ ೭೦-೭೫ ವರ್ಷದ ಮುದುಕಿಯನ್ನು ತಪ್ಪದೆ ನೋಡುತ್ತಿದ್ದರು. ಒಮ್ಮೆ ಧೈರ್ಯ ಮಾಡಿ ಆಕೆಯನ್ನು ಮಾತನಾಡಿಸಿದರು. ಅವಳಿಂದ ತಿಳಿದುಬಂದ ವಿವರಗಳಿವು: ಆಕೆ ನ್ಯೂಯಾರ್ಕ್‌ನಲ್ಲಿ ಒಂಟಿಜೀವಿ. ಇಬ್ಬರು ಮಕ್ಕಳಲ್ಲಿ ಒಬ್ಬ ಮಗ ಆಸ್ಟ್ರೇಲಿಯಾದಲ್ಲೂ ಇನ್ನೊಬ್ಬ ಅಲಬಾಮದಲ್ಲೂ ಇರುವರು. ಅವರು ತಮ್ಮ ಕೆಲಸ ಬಿಟ್ಟು ತಾಯಿಯನ್ನು ನೋಡಲು ಬರುವುದು ಕಷ್ಟ. ಸಾಧ್ಯವಾದಾಗ ಫೋನು ಮಾಡುವರು. ತಾಯಿಯ ಹುಟ್ಟುಹಬ್ಬದ ದಿನ ಮರೆಯದೆ ಬರ್ತ್‌ಡೇ ಕಾರ್ಡು ಕಳಿಸುತ್ತಾರೆ. ಹೊಸ ವರ್ಷದ ಶುಭಾಶಯ ಕಳಿಸುತ್ತಾರೆ. ಪ್ರೊ.ಎ.ಎಸ್. ಮೂರ್ತಿರಾವ್‌ರವರು ಈ ಪ್ರಸಂಗ ಕುರಿತು ವಿವೇಚಿಸುತ್ತಾ "ವೃದ್ಧರಿಗೆ ಒಂಟಿತನ ಕಟ್ಟಿಟ್ಟದ್ದು-ಅಮೆರಿಕನ್ನರ ಮನಸ್ಸು ಅದಕ್ಕೆ ಒಗ್ಗಿಹೋಗಿದೆ. ಮಕ್ಕಳ ಸಹವಾಸದ ಅಭಾವವೇ ಅವರಿಗೆ ಸಾಮಾನ್ಯ ಸ್ಥಿತಿ. ಆಕೆಯ ಒಂಟಿತನ ಗೋವಿಂದಸ್ವಾಮಿಗೆ ಅರ್ಥವಾದದ್ದು ಅವರು ಭಾರತೀಯರಾದ್ದರಿಂದ" ಎಂದಿರುವರು (ಪು.೭೩).

ಡಾ. ಅನುಪಮಾ ನಿರಂಜನರು ತಮ್ಮ ಬರ್ಲಿನ್ ಪ್ರವಾಸ ಕಾಲದಲ್ಲಿ ಅಲ್ಲಿನ ಜನ ಒಂಟಿತನದಿಂದ ನರಳುವುದನ್ನು ಕಂಡಿರುವರು. ಅವರು ಭೇಟಿಯಾದ ವೃದ್ಧೆ ಅಲೆಗ್ಸಾಂಡ್ರಾ 'ವೃದ್ಧರು ಒಂಟಿಯಾಗಿ old mens home ನಲ್ಲಿ ಇರೋದಕ್ಕೆ ಬೇಸರ ಪಡೊಲ್ವೆ' ಎಂಬ ಅವರ ಪ್ರಶ್ನೆಗೆ "ಬೇಜಾರಾಗುತ್ತೆ ಏನ್ಮಾಡೋದು? ನಮ್ಮ ದೇಶದ ಜೀವನ ವ್ಯವಸ್ಥೆ ಬೇರೆ, ನಿಮ್ಮದು ಬೇರೆ. ಇದನ್ನು ಬದಲಾಯಿಸೋದಕ್ಕೆ ಸಾಧ್ಯವಿಲ್ಲ" ಎಂದು ಉತ್ತರಿಸುವಳು (ಸ್ನೇಹಯಾತ್ರೆ, ಪು. ೧೧೧).

ಕಳೆಯುವುದು ಕಷ್ಟ. ಲೇಖಕರು ಕೆಲವು ವೃದ್ಧರ ಜೊತೆ ಮಾತನಾಡಿದಾಗ ತಮಗೆ ಇರುವ ಕೊರತೆಯೇನು ಎಂಬುದನ್ನು ಹೇಳಿಕೊಳ್ಳುವುದಕ್ಕೆ ಅವರಿಗೆ ತುಂಬ ಸಂಕೋಚವಾಗುತ್ತಿದ್ದುದನ್ನು ಕಂಡುಕೊಂಡರು. "ಅಲ್ಲಿನ ವೃದ್ಧರ ನಿಟ್ಟುಸಿರು ಸಾಮಾಜಿಕ ವ್ಯವಸ್ಥೆಯ ಕೊರತೆಯನ್ನೆಲ್ಲಾ ಮನಕರಗುವಂತೆ ವರ್ಣಿಸುತ್ತದೆ (ಪು. ೭೨) ಎಂಬ ಲೇಖಕರ ವಿಚಾರ ನಮ್ಮ ಮನ ಕಲಕುತ್ತದೆ. ಅಮೆರಿಕದ ಜನಕ್ಕೆ ಚರ್ಚುಗಳ ಮೇಲಿನ ಆಸಕ್ತಿ ಹೋಗುತ್ತಿದೆ ಎಂಬ ಹೊಸ ಅಂಶವನ್ನು ಗುರುತಿಸಿದ ಲೇಖಕರು ಅದಕ್ಕೆ ಕಾರಣಗಳನ್ನು ಕ್ರಿಶ್ಚಿಯನ್ನರಾದ ಹಿರಿಯರೊಬ್ಬರೊಡನೆ ಸಂಭಾಷಿಸುವ ಸಂದರ್ಭದಲ್ಲಿ ಅವರಿಂದಲೇ ಹೇಳಿಸಿರುವರು. ಅವರು ಕೊಡುವ ಕಾರಣ ಇಷ್ಟೆ: "ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಪ್ರವಚನ ನೀಡುವ ಪಾದ್ರಿ ನಮ್ಮಂತೆಯೇ ಲೌಕಿಕ ವ್ಯಕ್ತಿ. ನಮಗೆ ಅವನಿಂದ ಭಾನುವಾರ ಬೆಳಿಗ್ಗೆ ತಿಳಿಯುವ ವಿಷಯ ಅವನಿಗೆ ಸಂಜೆ ತಿಳಿಯುತ್ತದೆ; ಏಕೆಂದರೆ ಹಿಂದಿನ ದಿನ ತಾನೆ ಅವನು ತನ್ನ ಪ್ರವಚನವನ್ನು ಬರೆದು ಸಿದ್ಧಪಡಿಸಿಕೊಳ್ಳುತ್ತಾನೆ." (ಪು. ೮೬)

ಭಾರತೀಯರು ಅಮೆರಿಕೆಯಲ್ಲಿ ಕೈತುಂಬ ಸಂಬಳ, ವಾಸಕ್ಕೆ ಸುಸಜ್ಜಿತವಾದ ಮನೆ, ಓಡಾಡಲು ಎರಡು ಮೂರು ಕಾರು -ಇವೆಲ್ಲವನ್ನೂ ಹೊಂದಿದ್ದರೂ ಅವರ ಬದುಕು ಸಮಾಧಾನಕರವಾಗಿಲ್ಲವೆಂಬುದನ್ನು ಹಲವು ಭಾರತೀಯ ಕುಟುಂಬಗಳನ್ನು ಸಂದರ್ಶಿಸಿ ಕಂಡುಕೊಂಡಿರುವರು. "ನೀವೇಕೆ ಭಾರತಕ್ಕೆ ಹಿಂತಿರುಗಿ ಹೋಗುವುದಿಲ್ಲ?" ಎಂದು ಅನೇಕರನ್ನು ಪ್ರಶ್ನಿಸಿದ್ದಾರೆ. ಎಲ್ಲರದೂ ಒಂದೇ ಬಗೆಯ ಉತ್ತರ: 'ಹೋಗುವ ಮನಸ್ಸಿದೆ, ತುಂಬ ಯೋಚಿಸುತ್ತಿದ್ದೇನೆ.' ವಾಸ್ತವ ಸಂಗತಿ ಬೇರೆ. ಅವರೆಲ್ಲರೂ ಇಲ್ಲಿಗೆ ಹೊಂದಿಕೊಂಡಿರುವರು. ಈಗ ಬಿಟ್ಟು ಹೋಗುವುದು ಬಹಳ ಕಷ್ಟ. ತಂದೆ-ತಾಯಿ ಬಂಧು-ಬಳಗಗಳನ್ನು ಅಗಲಿ ದೂರದಲ್ಲಿರುವ ಅವರಿಗೆ ಭೌತಿಕ ತೃಪ್ತಿಯಿದ್ದರೂ, ಆಂತರಿಕ ತೃಪ್ತಿಯಲ್ಲ. ಅವರಿಗೆ ಅವರದೇ ಆದ ಸಮಸ್ಯೆಗಳಿವೆ. ಅವುಗಳಿಗೆ ದಾರುಣವಾದ ಆಯಾಮಗಳಿವೆ. ಮನಕಲಕುವ ಘಟನೆಯೊಂದನ್ನು ಲೇಖಕರು ಕೊಡುವರು: ಭಾರತಕ್ಕೆ ಹಿಂತಿರುಗುವಾಗ ಲೇಖಕರು ತಮ್ಮ ಭಾರತೀಯ ಮಿತ್ರರ ಮನೆಗೆ ಹೋಗಿದ್ದರು. ಮಿತ್ರರಿಗೆ ವಯಸ್ಸಿಗೆ ಬರುತ್ತಿರುವ ಮಗಳೊಬ್ಬಳು. ರಾತ್ರಿ ೧೨ ಗಂಟೆಯಾದರೂ ಮಿತ್ರರ ಮಗಳು ಮನೆಗೆ ಬರಲಿಲ್ಲ. ಅವಳಿಗೆ ಫೋನ್ ಮಾಡಿ ಕರೆಯಿಸಲಾಯಿತು. ತಮ್ಮ ಮಕ್ಕಳ ಬಗ್ಗೆ ಇಂತಹ ದೂರುಗಳನ್ನು ಬೇರೆ ಕಡೆ ತಂದೆ ತಾಯಿಗಳು ಎತ್ತಿದ್ದರು. ಲೇಖಕರು ಆ ಸಂದರ್ಭದಲ್ಲಿ ಕೊಟ್ಟ ಉತ್ತರದ ಸಾರಾಂಶ ಇಷ್ಟು: "ನೋಡಿ ಇದೊಂದು ಸಗಟು ವ್ಯಾಪಾರ. ಅಮೆರಿಕನ್ ಸಮಾಜ ನಿಮಗೆ ಸೋಫಾಸೆಟ್, ಟೆಲಿಫೋನ್, ಬಟ್ಟೆ ಒಗೆಯುವ ಪಾತ್ರೆ, ತೊಳೆಯುವಯಂತ್ರ, ಟೆಲಿವಿಷನ್, ಮನೆ, ತಲೆಗೊಂದು ಕಾರು ಇಷ್ಟನ್ನು ಕೊಟ್ಟಿದೆ. ಇದರ ಜೊತೆಗೆ ಹೆಣ್ಣು ಮಕ್ಕಳು, ಗಂಡು ಮಕ್ಕಳು ಸ್ವತಂತ್ರವಾಗಿ

ಓಡಾಡುತ್ತಾರೆ. ಏನು ಮಾಡಬೇಕು ಎನ್ನುವ ಸಮಸ್ಯೆಯನ್ನೂ ಕೊಟ್ಟಿದ್ದ. ಬೇರೆ ಸಮಸ್ಯೆಗಳು ಇವೆ. ಅವು ನಿಮಗೂ ಗೊತ್ತು. ಈ ಸಮಾಜ ಕೊಡುವ ಹಣಬೇಕು ಅವು ಕೊಡುವ ಸಮಸ್ಯೆ ಬೇಡ ಎಂದರೆ ಯಾರು ಒಪ್ಪುತ್ತಾರೆ. ಅವನ್ನು ಅನುಭವಿಸಿಯೇ ತೀರಬೇಕು. ಇಷ್ಟಕ್ಕೂ ನೀವು ಇಲ್ಲಿಗೆ ಬರಲೇಬೇಕು ಎಂದು ಇವರೇನು ಅಕ್ಷತೆ ಕೊಟ್ಟು ಕರೆದಿಲ್ಲ. ಹೋಗುತ್ತೇವೆ ಎಂದರೆ ಹಿಡಿದು ನಿಲ್ಲಿಸಿಲ್ಲ. ಇಷ್ಟೆಲ್ಲಾ ಅರ್ಹತೆಗಳಿರುವ ನಿಮಗೆ ಭಾರತದಲ್ಲಿ ಮಾನವಾಗಿ ಜೀವನ ನಡೆಸುವಷ್ಟು ಸಿಕ್ಕುವುದಿಲ್ಲ ಎಂದರೆ ಯಾರೂ ನಂಬುವುದಿಲ್ಲ ಇದರ ಬಗ್ಗೆ ತೀರ್ಮಾನ ನಿಮಗೇ ಬಿಟ್ಟಿದ್ದು"(ಪು.೨೮).

ಆಸ್ಪತ್ರೆಯೊಂದಕ್ಕೆ ಭೇಟಿಕೊಟ್ಟ ಲೇಖಕರು ಅದರ ಒಳರೋಗಿಗಳಾಗಿ ಉಳಿಯುವರು ಪ್ರಭುಶಂಕರರು ಆಸ್ಪತ್ರೆಯ ಕೊಠಡಿಯ ವರ್ಣನೆ ಮಾಡಿರುವುದನ್ನು ಓದಿದಾಗ ನಾವು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಡುತ್ತೇವೆ. ವರ್ಣನೆ ಹೀಗಿದೆ: ಅದು ಆಸ್ಪತ್ರೆ ಎಂದು ನಮ್ಮ ಪೂರ್ವಾನುಭವದ ಯಾವ ದಾಖಲೆಗಳಿಂದಲೂ ಹೇಳುವಂತಿಲ್ಲ. ನಮ್ಮ ದೇಶದ ಪಂಚತಾರ ಹೋಟೆಲುಗಳ ಕೊಠಡಿಗಳು ಅವು ಎಂದು ಹೇಳಬಹುದು. ಅಷ್ಟರಮಟ್ಟಿನ ಸೌಕರ್ಯಗಳು ಅಲ್ಲುಂಟು. ಟೆಲಿವಿಷನ್‌ಗಳಂತೂ ಸಾಮಾನ್ಯ. ಅಲ್ಲದೆ ಕೆಲವು ಕಡೆ ಗೋಡೆಗಳ ಮೇಲೆ ಶ್ರೇಷ್ಠ ಕಲಾವಿದರ ಚಿತ್ರಗಳನ್ನೂ ಪ್ರದರ್ಶಿಸುತ್ತಾರೆ. (ಪು. ೯೨-೯೩)

ಬರ್ಕ್‌ಲಿ ವಿಶ್ವವಿದ್ಯಾಲಯದ ವೇದಾಂತ ಸಂಘಕ್ಕೆ ಲೇಖಕರು ಹೋದಾಗ ಅವರನ್ನು ವಿಶ್ವವಿದ್ಯಾಲಯದಲ್ಲೆಲ್ಲಾ ಸುತ್ತಾಡಿಸಿ ಬರಲು ಮೋನಿಕಾ ಎಂಬ ಸಂಶೋಧಕ ವಿದ್ಯಾರ್ಥಿನಿ ತನ್ನ ಕಾರಿನಲ್ಲಿ ಕರೆದುಕೊಂಡು ಹೋದಳು. ಈಕೆ ನಿತ್ಯವೂ ತನ್ನ ಕಾರನ್ನು ನಿಲ್ಲಿಸುವ ಸ್ಥಳದಲ್ಲಿ ಬಿಟ್ಟುಬರಲು ಹೋದರೆ, ಅಲ್ಲಿ ಆ ವೇಳೆಗೆ ಬೇರೆ ಯಾರೋ ಕಾರನ್ನು ನಿಲ್ಲಿಸಿಬಿಟ್ಟಿದ್ದರು. ಈಕೆ ತುಂಬಾ ಪೇಚಾಡಿಕೊಂಡು ಹದಿನೈದು ನಿಮಿಷ ಅಲ್ಲಿ ಇಲ್ಲಿ ಸುತ್ತಾಡಿ ಒಂದು ಜಾಗ ಕಂಡುಹಿಡಿದಳು. "ನಿಮ್ಮ ಮನೆ ಹತ್ತಿರವೆ ಇದೆ ಎನ್ನುತ್ತೀರಿ. ಇಷ್ಟು ಹತ್ತಿರಕ್ಕೆ ಕಾರು ಏಕೆ ತರುತ್ತೀರಾ? ನಡೆದುಕೊಂಡು ಬರಬಾರದೆ" ಎಂಬ ಲೇಖಕರ ಪ್ರಶ್ನೆಗೆ ಈಕೆ ಕೊಟ್ಟ ಉತ್ತರ ಹೀಗಿದೆ. "ನನ್ನ ತರಗತಿಗಳು ಮುಗಿದು ಮನೆಗೆ ಹೋಗುವುದಕ್ಕೆ ಸಂಜೆ ಏಳು ಅಥವಾ ಎಂಟು ಗಂಟೆ ಆಗಿಯೇ ಆಗುತ್ತದೆ. ನಾನೊಬ್ಬಳೇ ನಡೆದುಕೊಂಡು ಹೋದರೆ ನಾನು ಅತ್ಯಾಚಾರಕ್ಕೆ ಒಳಗಾಗುವುದು ಖಂಡಿತ." ಈ ವಿಶ್ವವಿದ್ಯಾನಿಲಯಗಳ ಆವರಣಗಳ ಇನ್ನೊಂದು ಭಯಂಕರ ಮುಖ ಇದು. ಅದಾದ ಕೆಲವೇ ನಿಮಿಷಗಳಲ್ಲಿ ನೋಟೀಸ್ ಬೋರ್ಡಿನ ಮೇಲೆ 'ಅತ್ಯಾಚಾರಗಳಿಂದ ಪಾರಾಗುವ ವಿಧಾನ' ಎಂಬುದರ ಮೇಲೆ ಎರಡು ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿದ್ದುದು ಲೇಖಕರ ಗಮನಕ್ಕೆ ಬಂದಿತು. (ಪು.೯೫)

ಹೋಮ್‌ಸ್ಟೆಡ್ ಹೈಸ್ಕೂಲ್‌ನಲ್ಲಿ ಲೇಖಕರ ಉಪನ್ಯಾಸ ಒಂದಿದ್ದಿತು. ಅಲ್ಲಿಗೆ ಶ್ರೀಮತಿ ವಾರ್ಡ್ ಫೆಲೋಸ್‌ರವರು ಲೇಖಕರನ್ನು ಕರೆದೊಯ್ದರು. ಇನ್ನೇನು ಕಾರಿನಿಂದ ಇಳಿಯಬೇಕೆನ್ನುವಷ್ಟರಲ್ಲಿ ಶ್ರೀಮತಿ ಫೆಲೋಸ್ ಹೇಳಿದ ಒಂದು ವಾಕ್ಯ ಲೇಖಕರನ್ನೂ ಅವರ ಪತ್ನಿಯನ್ನೂ ತಬ್ಬಿಬ್ಬುಗೊಳಿಸಿತು. ಶ್ರೀಮತಿ ಫೆಲೋಸ್ ಹೀಗೆ ಹೇಳಿದರು: please don't be shocked if boys and girls do in the classroom what they should be doing back home in their bed rooms (ಪು. ೧೨೬) ದೇವರು ದಯಾಮಯಿ ಉಪನ್ಯಾಸದ ವೇಳೆಯಲ್ಲಿ ಶ್ರೀಮತಿ ಫೆಲೋಸ್ ಹೇಳಿದಂತೆ ಘಟನೆಗಳೂ ನಡೆಯಲಿಲ್ಲ. ಅಮೇರಿಕನ್ ಸಮಾಜದಲ್ಲಿ ಹೈಸ್ಕೂಲಿಗೆ ಬರುವ ವೇಳೆಗೆ ಹುಡುಗ ಹುಡುಗಿಯರು ಗಟ್ಟಿಮುಟ್ಟಾಗಿ ಬೆಳೆದಿರುತ್ತಾರೆ, ಅವರು ಸ್ವಾತಂತ್ರ್ಯದ ಭಾವ ಸ್ವಚ್ಛಂದ ಸ್ವೈರತೆಗಳ ಘಟ್ಟವನ್ನು ಮುಟ್ಟಿರುತ್ತಾರೆ. ಲೈಂಗಿಕ ಭಾವನೆಗಳು ಮೊಳೆಯುತ್ತವೆ. ಯಾವ ನಿರ್ಬಂಧವೂ ಇಲ್ಲದಿರುವುದರಿಂದ ಕಾಮಪೂರ್ತಿಗಾಗಿ ಅವರು ಯಾರೂ ಕಾಯುವುದಿಲ್ಲ. ತಂದೆ ತಾಯಿಗಳ ಜವಾಬ್ದಾರಿ ದುಡ್ಡುಕೊಟ್ಟು ಅವರನು ಓದಿಸುವುದಷ್ಟೆ. ಆ ಅರಳುವ ವಯಸ್ಸಿನಲ್ಲೇ ಎಲ್ಲ ದುಶ್ಚಟಗಳೂ ಅವರನ್ನು ಅಪ್ಪಿರುತ್ತವೆ. ಔಷಧಗಳನ್ನು ಸೇವಿಸಿ ಮತ್ತರಾಗಿ ಬಿದ್ದಿರುವುದು ಆಗಿನಿಂದ ಪ್ರಾರಂಭ. ಹೋಮ್‌ಸ್ಟೆಡ್ ಹೈಸ್ಕೂಲಿನಲ್ಲಿ ಲೇಖಕರು ಒಬ್ಬ ಹುಡುಗ ಅನ್ಯಮನಸ್ಕನಾಗಿ ಆಕಾಶದತ್ತ ನೋಡುತ್ತ ಕುಳಿತಿರುವುದನ್ನು ಕಂಡರು. ಆತ ಔಷಧ ಸೇವಿಸಿದಂತೆ ತೋರುತ್ತಿತ್ತು. ಶ್ರೀಮತಿ ಫೆಲೋಸ್ ಹೇಳಿದರು: "ತುಂಬ ಪ್ರತಿಭಾಶಾಲಿಯಾದ ಹುಡುಗ, ಗಣಿತದಲ್ಲಂತೂ ಇವನನ್ನು ಮೀರಿಸುವವರೇ ಇಲ್ಲ. ಆದರೆ ನೋಡಿ ಈಗ ಡ್ರಗ್ಸ್ ತೆಗೆದುಕೊಂಡು ಬುದ್ಧಿ ಕಳೆದುಕೊಂಡಿದ್ದಾನೆ. ಈ ದಾರುಣ ಸಂಗತಿ ಕೇಳಿದ ಲೇಖಕರು "ನೀವೇ ಇದಕ್ಕೆ ಕಾರಣ ಅಲ್ಲವೆ?" ಎಂದು ಶ್ರೀಮತಿ ಫೆಲೋಸ್‌ಗೆ ಹೇಳಿದರು. "ಹಾಗೆಂದರೇನು" ಎಂದು ಶ್ರೀಮತಿ ಫೆಲೋಸ್ ಬೆಚ್ಚಿಬಿದ್ದು ಕೇಳಿದರು. "ನಿಮ್ಮ ತಲೆಮಾರಿನವರು ಸರಿಯಾಗಿದ್ದಿದ್ದರೆ ಈ ತಲೆಮಾರಿನವರು ತಕ್ಕಮಟ್ಟಿಗಾದರೂ ಇರುತ್ತಿದ್ದರು. ನಿಮ್ಮ ತಲೆಮಾರು ತಾನೆ ಸ್ವಾತಂತ್ರ್ಯ ಸ್ವಚ್ಛಂದತೆಗಳು ಬೇಕು ಎಂದು ಹಾರಾಡಿದ್ದು. ತಾಯಿಯಂತೆ ಮಗಳು, ನೂಲಿನಂತೆ ಸೀರೆ ಎಂದು ನಮ್ಮ ಕಡೆ ಒಂದು ಗಾದೆಯಿದೆ. ಏನು ಹೇಳುತ್ತೀರಿ?" ಎಂದು ಲೇಖಕರು ಶ್ರೀಮತಿ ಫೆಲೋಸ್‌ರವರನ್ನು ದುಃಖಮಿಶ್ರ ಕೋಪದಿಂದ ಕೇಳಿದರು. ಆ ಮಾತು ಕೇಳಿ ಆಕೆಯ ಮುಖದಲ್ಲಿ ಕಾಣಿಸಿಕೊಂಡ ಯಾತನೆಯನ್ನು ನೋಡಿದ ಲೇಖಕರಿಗೆ ಆ ಮಾತು ಯಾಕೆ ಹೇಳಿದೆನೂ ಎನ್ನಿಸಿತಂತೆ (ಪು. ೧೩೦-೧೩೧).

ಲೇಖಕರು ಗ್ರಾಂಡ್‌ಕ್ಯಾನಿಯನ್‌ನಲ್ಲಿ ರಿಪೇರಿ ಮಾಡುವ ಓರ್ವ ಕೆಲಸಗಾರನ ಯೋಗಕ್ಷೇಮ ವಿಚಾರಿಸಿದರು. ಗಂಡ ಹೆಂಡಿರು ಇಬ್ಬರೂ ದುಡಿಯುವರು. ಇಬ್ಬರ ಸಂಪಾದನೆ ತಿಂಗಳಿಗೆ ೧೨೦೦ ಡಾಲರ್. ಅವರಿಗೆ ಮಕ್ಕಳನ್ನು ಸಾಕುವ

ಚೈತನ್ಯವಿರಲಿಲ್ಲವಾದ್ದರಿಂದ ಮಕ್ಕಳನ್ನು ಮಾಡಿಕೊಳ್ಳಲಿಲ್ಲ. ಮಕ್ಕಳು ಬೇಕು ಅನ್ನಿಸಿದಾಗ ಅವರಿಗೆ ವಯಸ್ಸಾಗಿಬಿಟ್ಟಿತ್ತು. ಈಗ ವಿಯಟ್ನಾಂದ ಒಂದು ಮಗುವನ್ನು ದತ್ತು ತೆಗೆದುಕೊಂಡು ಸಾಕಲು ಅವರು ನಿಶ್ಚಯಿಸಿದ್ದಾರೆ. ಇವಿಷು ಅವನಿಂದ ತಿಳಿದು ಬಂದ ವಿಚಾರಗಳು. ಆ ಮಾತುಗಳನ್ನು ಕೇಳುತ್ತಿದ್ದಂತೆಯೇ ಲೇಖಕರ ಮನಸ್ಸಿನಲ್ಲಿ ಹಂದಿಯ ಮರಿಗಳಂತೆ ನಡೆದಾಡುತ್ತಿರುವ, ಹರಿದಾಡುತ್ತಿರುವ ಭಾರತದ ಸಹಸ್ರಾರು ಮಕ್ಕಳು ಸುಳಿದವು. "ಸಾಕಲು ಶಕ್ತಿಯಿರಲಿ ಇಲ್ಲದಿರಲಿ ನಮಗೆ ಮನೆ ತುಂಬ, ಮನೆಯಿಲ್ಲದಿದ್ದರೆ ಬೀದಿ ತುಂಬ, ಚರಂಡಿ ತುಂಬ ಮಕ್ಕಳು ಬೇಕು... ನಮ್ಮಲ್ಲಿ ಮಕ್ಕಳನ್ನು ಕೊಡುವವನೂ, ಪಾಲಿಸುವವನೂ, ಕೊನೆಗೆ ಮಕ್ಕಳನ್ನೂ ಅವರ ತಂದೆ ತಾಯಿಗಳನ್ನೂ ಬಡತನದ ಬೇಗೆಯಲ್ಲಿ ಹುರಿದು ಹಾಕುವವನೂ ಸರ್ವಶಕ್ತನಾದ ಭಗವಂತ ತಾನೆ" ಎಂದು ಲೇಖಕರು ವ್ಯಂಗ್ಯವಾಡಿರುವರು. "ಯಾವ ದೇಶದ ಯಾವ ತಂದೆತಾಯಿಗಳ ಮಕ್ಕಳಾದರೇನು, ಮಕ್ಕಳ ಮೇಲಿನ ಪ್ರೀತಿಗಾಗಿ ತಮ್ಮ ದುಡಿಮೆಯಿಂದ ಅವನನ್ನು ಸಾಕುತ್ತೇವೆ ಎಂದು ಹೇಳುತ್ತಿರುವ ವ್ಯಕ್ತಿ ನಲ್ಲಿ ರಿಪೇರಿ ಮಾಡುವವನು-ನನ್ನ ಕಣ್ಣಿಗೆ ದೊಡ್ಡ ಸಂತನಂತೆ ಕಂಡ" ಎಂದು ಲೇಖಕರು ಭಾವಪರವಶರಾಗಿ ನುಡಿದಿರುವರು (ಪು. ೧೮೧-೧೮೨). ಯಾರ ಮಕ್ಕಳಾದರೇನಂತೆ ತಮಗೆ ಮಕ್ಕಳು ಸಾಕುವ ಶಕ್ತಿ ಇದೆ ಎನ್ನುವ ದೃಢತೆ, ಔದಾರ್ಯ, ಹೃದಯ ವೈಶಾಲ್ಯ ಬಹಳ ದೊಡ್ಡದ್ದು.

ಅಮೆರಿಕ ಎಷ್ಟೇ ಪ್ರಗತಿ ಸಾಧಿಸಿದ್ದರೂ ಅಲ್ಲಿ ಪ್ರೀತಿ ವಿಶ್ವಾಸಗಳು ಹೃದಯ ಹೃದಯಗಳನ್ನು ಬೆಸಯಲೇ ಇಲ್ಲ. ಲೇಖಕರಿಗೆ ಅವರ ಮಿತ್ರರೊಬ್ಬರೂ ಅಮೆರಿಕನ್ ಸಮಾಜದಲ್ಲಿ ಕಾಣುವ ಬಹುದೊಡ್ಡ ಕೊರತೆ ಪ್ರೀತಿ-ವಿಶ್ವಾಸಗಳೆಂಬುದನ್ನು ಒಂದು ನಡೆದ ಘಟನೆಯ ಮೂಲಕ ವಿವರಿಸಿದರು. ಆ ಪ್ರಸಂಗ ಹೀಗಿದೆ: ಅಮೆರಿಕನ್ ಮಿತ್ರರಿಗೆ ಪರಿಚಿತನೊಬ್ಬನಿದ್ದನು. ಅವನ ತಾಯಿಗೆ ಕಾಯಿಲೆ ಎಂಬ ವರ್ತಮಾನ ಬಂದಿತು. ಈತ ಒಂದು ತಿಂಗಳಾದ ಮೇಲೆ ಆಸ್ಪತ್ರೆಗೆ ಹೋಗಿ ತಾಯಿಯನ್ನು ನೋಡಿದ. ಆಕೆ "ಏನಪ್ಪ ಹೀಗೆ ಮಾಡಿದೆ. ಒಂದು ತಿಂಗಳಿನಿಂದ ನೀನು ಬರುತ್ತೀಯೆ ಎಂದು ಕಾದಿದ್ದೇನೆ" ಎಂದರಂತೆ. ಈ ಪುಣ್ಯಾತ್ಮ "ನಿನಗೆ ಕಾಯಿಲೆ ಎಂಬುದು ಮರತೇ ಹೋಗಿತ್ತು" ಎಂದನಂತೆ. ಆಕೆ ಇನ್ನೂ ಬೇಸರ ಮಾಡಿಕೊಂಡದ್ದಕ್ಕೆ ಇವನು, "ಇದರಲ್ಲೇನು ವಿಶೇಷ ನೀನೂ ಎಷ್ಟೋ ವಿಷಯಗಳನ್ನು ಮರೆತುಬಿಡುವುದಿಲ್ಲವೆ?" ಎಂದನಂತೆ. ಎಂತಹ ಹೃದಯಶೂನ್ಯ, ವರ್ತನೆ; ಮಾತೆಯ ಮಮತೆಗೆ ಇಲ್ಲಿ ಬೆಲೆಯೇ ಇಲ್ಲವೆ? ಎಂಬ ಆಲೋಚನೆಯಾಯಿತು ಆ ಘಟನೆ ಓದಿದ ಮೇಲೆ. ಅಮೆರಿಕನ್ ಸಮಾಜದಲ್ಲಿ ತಂದೆಗೋ ತಾಯಿಗೋ ಆರೋಗ್ಯವಿಲ್ಲ ಎಂಬ ವರ್ತಮಾನ ಬಂದರೆ ಇವನು ಅವರು ಯಾವ ಊರಿನಲ್ಲಿ ಆಸ್ಪತ್ರೆಯಲ್ಲಿದ್ದಾರೊ ಈ ಊರಿನ ಒಂದು ಹೂವಿನ ಅಂಗಡಿಗೆ ಕಾಗದ ಬರಯುತ್ತಾನೆ ಅಥವಾ ಟೆಲಿಫೋನ್ ಮಾಡುತ್ತಾನೆ. ಆ ಅಂಗಡಿಯವನು

ಅವನು ಹೇಳಿದಷ್ಟು ಬೆಲೆಯ ಹೂವನ್ನು ಕಾಯಿಲೆಯವರಿಗೆ ಕಳುಹಿಸುತ್ತಾನೆ. ಹೂವಿನ ಖರ್ಚಿಗೆ ಹಣವನ್ನು ಮಗ ಕೊಡುತ್ತಾನೆ. ಅಲ್ಲಿಗೆ ಮಗನ ಜವಾಬ್ದಾರಿ ಹೋಯಿತಂತೆ (ಪು.೨೦೪). ಕ್ಲೀವ್‌ಲ್ಯಾಂಡ್‌ನಲ್ಲಿದ್ದ ಮಿತ್ರರ ಮನೆಗೆ ಲೇಖಕರು ಟ್ಯಾಕ್ಸಿಯೊಂದರಲ್ಲಿ ಹೋಗುತ್ತಿದ್ದಾಗ ಅದನ್ನು ನಡೆಸುತ್ತಿದ್ದ ಕಪ್ಪು ಹೆಂಗಸು ಮಾತಿನ ನಡುವೆ ಸಂಕೋಚದ ಧ್ವನಿಯಲ್ಲಿ "ನಿಮ್ಮ ದೇಶದಲ್ಲಿ ಜನ ಇನ್ನೂ ಹಸಿವಿನಿಂದ ಸಾಯುತ್ತಾ ಇದ್ದಾರೆಯೆ?" ಎಂದು ಕೇಳಿದರು. ಸಾನ್‌ಫ್ರಾನ್ಸಿಸ್ಕೋನಲ್ಲಿ ಸಿಟಿಜಸ್‌ನ ಪ್ರವರನೊಬ್ಬನು ಇದೇ ಪ್ರಶ್ನೆಯನ್ನು ಕೇಳಿದ್ದನು. "ನಿಮಗೆ ಯಾರು ಹೇಳಿದರು?" ಎಂದು ಲೇಖಕರು ಕೇಳಿದ್ದಕ್ಕೆ "ಚರ್ಚಿನ ಪಾದ್ರಿಗಳು" ಎಂಬ ಉತ್ತರ ಬಂದಿತು. ದುಡ್ಡು ಕೀಳುವುದಕ್ಕೆ ಇಂಡಿಯಾದಲ್ಲೂ ಆಫ್ರಿಕಾದಲ್ಲೂ ಜನ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ ಎಂದು ಪಾದ್ರಿಗಳು ಅಪಪ್ರಚಾರ ಮಾಡುತ್ತಿದ್ದಾರೆ. ಅವರಿಗೆ ಒಂದು ಡಾಲರನ್ನೂ ಕೊಡಬೇಡಿ ಎಂದು ಲೇಖಕರು ನಿಜಸಂಗತಿ ತಿಳಿಸಿ ಅವರನ್ನು ನಂಬಿಸಬೇಕಾಯಿತು. ಇಂಡಿಯಾದವರನ್ನು ಉದ್ಧಾರ ಮಾಡಲು ಪ್ರತಿಯೊಬ್ಬ- ರಿಂದಲೂ ತಿಂಗಳಿಗೆ ಕನಿಷ್ಠ ಹತ್ತು ಡಾಲರ್ ವಸೂಲು ಮಾಡುತ್ತಿರುವ ಪಾದರಿಗಳ ಮೋಸದ ಸಂಗತಿ ಕೇಳಿ ಹೇಸಿಗೆಯಾಗುತ್ತದೆ. ಅಮೆರಿಕನ್ನರಿಗೆ ತಿಳುವಳಿಕೆ ಕೊಡುವುದಕ್ಕೆ ನಮ್ಮ ಸರಕಾರ ಏನು ಮಾಡಿದೆ? ಎಷ್ಟು ರೀತಿಯ ಚಲನಚಿತ್ರಗಳನ್ನು ತೆಗೆದು ಅಲ್ಲಿನ ಸ್ಕೂಲು ಕಾಲೇಜುಗಳಲ್ಲಿ ಪ್ರದರ್ಶಿಸಬಹುದು. ಇನ್ನು ಎಷ್ಟೊಂದು ಬಗೆಯಲ್ಲಿ ನಮ್ಮ ದೇಶ ಎಂದರೇನು ಎಂಬುದನ್ನು ಆ ಜನರಿಗೆ ತಿಳಿಸುವುದು ಸಾಧ್ಯ. ಇದನ್ನು ಯೋಚನೆ ಮಾಡುವವರು ಯಾರು? ಎಂದು ಲೇಖಕರು ವಿಚಾರ ಮಾಡಿರುವರು. (ಪು. ೨೨೨-೨೨೬)

ಡಾ. ಪ್ರಭುಶಂಕರ ಅವರ ಈ ಪ್ರವಾಸ ಕಥನ ವಿಚಾರ ಪ್ರಚೋದಕವಾಗಿದೆ, ಹಾಗೆಯೇ ಬೋಧಪ್ರದವೂ ಆಗಿದೆ. ಅವರು ಪ್ರೇಕ್ಷಣೀಯ ಸ್ಥಳಗಳನ್ನು ಟೂರಿಸ್ಟ್ ಆಗಿ ನೋಡುವುದಕ್ಕಿಂತ ಅಮೆರಿಕನ್ ಸಮಾಜವನ್ನು ಬಹಳ ಹತ್ತಿರದಿಂದ ನೋಡುವುದರಲ್ಲಿ ಹೆಚ್ಚು ಆಸಕ್ತಿ ತೋರಿರುವರು. ಪ್ರವಾಸ ಕಥನ ವರ್ಣನಾತ್ಮಕವಾದುದು ಹಾಗೆಯೇ ಶೈಕ್ಷಣಿಕವಾದುದು. ಒಳ್ಳೆಯ ಪ್ರವಾಸ ಕಥನದಲ್ಲಿ ಅವೆರಡೂ ಅವಿಭಾಜ್ಯ ಘಟಕಗಳಾಗಿ ಬರಬೇಕು. ಡಾ. ಪ್ರಭುಶಂಕರ ಅವರ ಪ್ರವಾಸ ಕಥನದಲ್ಲಿ ಅವೆರಡೂ ಪರಸ್ಪರ ಪೂರಕವಾಗಿ ಬಂದಿವೆ. ಪುಸ್ತಕ ಓದಿ ಮುಗಿಸಿದ ಮೇಲೂ ಓದುಗನನ್ನು ಪ್ರಸ್ತಾಪಿತ ವಿಷಯಗಳ ಬಗೆಗೆ ಆಲೋಚನೆ ಮಾಡುವಂತೆ ಪ್ರೇರೇಪಿಸುವುದು ಒಳ್ಳೆಯ ಬರಹದ ಲಕ್ಷಣ. ಅಂತಹ ಒಳ್ಳೆಯ ಬರಹವನ್ನು ನಾವಿಲ್ಲಿ ಕಾಣುತ್ತೇವೆ.

ಡಾ. ಪ್ರಭುಶಂಕರ ಅವರು ಒಳ್ಳೆಯ ಮಾತುಗಾರರು. ಅವರ ಮಾತುಕತೆಗಳಲ್ಲಿ ಆತ್ಮೀಯತೆ ತೊಟ್ಟಿಕ್ಕಿದೆ. ಅಪರಿಚಿತ ಪ್ರಪಂಚವನ್ನು ಪರಿಚಿತ ಪ್ರಪಂಚವನ್ನಾಗಿಸಲು

ಅವರು ಸಮೀಪದ ತಮಗೆ ಬಳಕೆಯಿರುವ ಹೋಲಿಕೆಗಳನ್ನೇ ಕೊಡುವರು. ಚಂದ್ರ ಬಂದ ಎಂಬುದನ್ನು ಹೇಳುವಾಗ "ಅವನು ಬಂದ ಎಂದು ಹೇಳಬೇಕಾಗೇ ಇಲ್ಲ. ಯಕ್ಷಗಾನ ನಾಟಕದಲ್ಲಿ ಒಂದು ಪಾತ್ರ ಪ್ರವೇಶಿಸುವಂತೆ ನೃತ್ಯ ಮಾಡಿಕೊಂಡು ಬಂದ (ಪು. ೧೭) ವೆಂದು ಹೇಳಿ ಒಂದು ಸೊಗಸಾದ ಚಿತ್ರವನ್ನೇ ಮಾತಿನಲ್ಲಿ ಮೂಡಿಸುವರು. ಸ್ಯಾನ್‌ಫ್ರಾನ್ಸಿಸ್ಕೋವನ್ನು ಗುಡ್ಡದ ಮೇಲಿಂದ ನೋಡಿ ಪಡೆದ ಅನುಭವವನ್ನು ಹೇಳುವಾಗ "ಚಾಮುಂಡಿಬೆಟ್ಟದಿಂದ ರಾತ್ರಿ ಮೈಸೂರನ್ನು ನೋಡುವ ಅನುಭವ ದೊರಕುತ್ತದೆ" (ಪು.೫೫) ಎನ್ನುವರು. ಟಾಪೋ ಸರೋವರಕ್ಕೆ ಹೋಗಲು ೩೦ ಮೈಲಿ ಬೆಟ್ಟವನ್ನು ಏರುತ್ತಲೇ ಹೋಗಬೇಕು. ಆಗ "ಮೈಸೂರಿನಿಂದ ಊಟಿಗೆ ಹೋಗುವಾಗ ಕೊನೆಯ ೨೦ ಮೈಲಿ ಪ್ರಯಾಣದ ಅನುಭವವೆ ಇಲ್ಲೂ. ವ್ಯತ್ಯಾಸವೆಂದರೆ ಅಷ್ಟು ಕಡಿದಾದ ತಿರುವುಗಳು ವಿಶಾಲವಾಗಿವೆ" (ಪು.೫೮) ಎಂಬ ಪರಿಚಿತ ಹೋಲಿಕೆ ಕೊಡುವರು. ಟಾಪೋ ಇಂದ ಸ್ಯಾನ್‌ಫ್ರಾನ್ಸಿಸ್ಕೋಗೆ ಹಿಂತಿರುವಾಗ ಮಾರ್ಗಮಧ್ಯೆ ನೆಟ್‌ಟ್ರೀ ಎಂಬಲ್ಲಿ ಊಟಕ್ಕೆ ನಿಂತಾಗ ಬೆಂಗಳೂರು ಮೈಸೂರುಗಳ ಮಧ್ಯೆ ಮದ್ದೂರು ವಡೆಗಾಗಿ ಮದ್ದೂರಿನಲ್ಲಿ ಸ್ವಲ್ಪ ಹೊತ್ತು ನಿಲ್ಲುವ ನೆನಪು ಬರುತ್ತದೆ (ಪು.೬೬).

ಡಾ. ಪ್ರಭುಶಂಕರ ಅವರ ಬರಹದ ಮತ್ತೊಂದು ಗುಣ ಅವರು ಮಾತಿನಲ್ಲಿ ಹೊಮ್ಮಿಸುವ ವ್ಯಂಗ್ಯ. ತಮಗೆ ಅಸಮಾಧಾನವಾದಾಗಲೆಲ್ಲಾ ಕಟುವಾದ ಮಾತುಗಳಿಂದ ಚುಚ್ಚುತ್ತಾರೆ. ಅದು ನೊಂದ ಮನಸ್ಸಿನ ತಾಪ. ಆ ವ್ಯಂಗ್ಯ ಕತ್ತಿಯಷ್ಟೇ ಹರಿತವಾದುದು. ಉದಾಹರಣೆಗೆ ಕೆಲವನ್ನಿಲ್ಲಿ ನೋಡಬಹುದು: (ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಯೋರ್ವರನ್ನು ಕುರಿತು) "ಅಲ್ಲಿನ ಅಧಿಕಾರಿಗಳ ಜಾತಿಯವನಲ್ಲ ನಾನು, ವಂದಿಮಾಗಧನೂ ಅಲ್ಲ. ಅವರ ಪಾನಗೋಷ್ಠಿಗಳನ್ನು ಅದೂ ವಿಶ್ವವಿದ್ಯಾನಿಲಯದ ವೆಚ್ಚದಲ್ಲಿ ನಡೆಯುತ್ತಿದ್ದುದನ್ನು-ಬಹಿರಂಗವಾಗಿ ಟೀಕಿಸುವವನು" (ಪು.೭); (ದೆಹಲಿಯ ಅಶೋಕಾ ಹೋಟೆಲ್ ಕುರಿತು) ಅಲ್ಲಿನ ಅಂಗಡಿಗಳು ತಮ್ಮಲ್ಲಿನ ಸಾಮಾನುಗಳಿಗೆ ಹಾಕಿರುವ ಬೆಲೆ-ವಿದೇಶೀಯರನ್ನು ಸೂರೆಮಾಡುವ ಉದ್ದೇಶವನ್ನೊಂದೇ ಗಮನದಲ್ಲಿಟ್ಟಿವೆ. ಅಂಥ 'ನಕ್ಷತ್ರಖಚಿತ ಹೋಟೆಲುಗಳು ನಮ್ಮ ಅವಿವೇಕಕ್ಕೆ ಹಿಡಿದ ಕನ್ನಡಿಗಳು -ಇನ್ನು ಅಲ್ಲಿನ ಅಂಗಡಿಗಳು ದರೋಡೆಯ ಕೇಂದ್ರಗಳು" (ಪು.೧೫); "ಉಪಪ್ರಾಧ್ಯಾಪಕರನ್ನೂ ಪ್ರಾಧ್ಯಾಪಕರನ್ನೂ ಸಂದರ್ಭೋಚಿತವಾಗಿರಲಿ ಬಿಡಲಿ-ಎರಡನೆಯದೇ ಹೆಚ್ಚು-ಕಕ್ಕಸು ಮುಂತಾದ ಸಣ್ಣ ವಿಷಯಗಳ ಬಗೆಗೂ ದೂರುತ್ತಿದ್ದ ಉಪಕುಲಪತಿ ಮಹಾಶಯರು ನಿವೃತ್ತರಾದ ಕೂಡಲೇ ತಾವು ವಾಸಮಾಡಬೇಕಾಗಿದ್ದ ವಿಶ್ವವಿದ್ಯಾನಿಲಯದ ಕ್ವಾರ್ಟರ್ಸ್‌ನಲ್ಲಿ ತಮ್ಮ ನಾಯಿಗಳಿಗೂ ಒಂದು ಕೊಠಡಿ ಕಟ್ಟಿಸಿಕೊಂಡರು, ವಿಶ್ವವಿದ್ಯಾನಿಲಯದ ವೆಚ್ಚದಲ್ಲಿ! (ಪು.೧೨೦).

ಕುವೆಂಪುರವರು ಮುನ್ನುಡಿಯಲ್ಲಿ ಹೇಳಿರುವಂತೆ "...ಕಾದಂಬರಿಯ ಸ್ವಾರಸ್ಯವೂ ಭಾವ ಪ್ರಬಂಧದ ಆತ್ಮೀಯತೆಯೂ ಹೊಸೆದುಕೊಂಡು ಪ್ರವಾಸಕಥನ ಪ್ರವಹಿಸುತ್ತಿತ್ತು: ಕುತೂಹಲದ ಆಶ್ಚರ್ಯದ ಪರಿಹಾಸ್ಯದ ವ್ಯಂಗ್ಯದ ಭರ್ತ್ಸ್ಯನೆಯ ತರಂಗಗಳಲ್ಲಿ! ಯಾವುದೂ ಬರಿಯ 'ವಿಷಯ'ದ ಮಟ್ಟದಲ್ಲಿ ನಿಲ್ಲದೆ ಭಾವಾಂಚಿತವಾಗಿ 'ಪಕ್ವತೆ'ಯನ್ನು ಪಡೆದ 'ವಸ್ತು'ವಾಗುತ್ತಿತ್ತು. ಊರಾಗಲಿ ವ್ಯಕ್ತಿಯಾಗಲಿ ದೃಶ್ಯವಾಗಲಿ ಪ್ರಭುಶಂಕರ ವ್ಯಕ್ತಿತ್ವದ ರಸಮೂಷೆಯಲ್ಲಿ ಸಂಸ್ಕಾರಗೊಂಡು ಸಂಗದೂರವಾಗಿ ಶಮಪ್ರಚುರವಾಗಿಯೂ ದೂರಸಂಗವಾಗದೆ ದಳದಳ ಅರಳಿ ಆತ್ಮೀಯವಾಗುತ್ತಿತ್ತು."

ಡಾ. ಪ್ರಭುಶಂಕರರ ಈ ಪ್ರವಾಸಾನುಭವದಲ್ಲಿ ನಮ್ಮ ನೆನಪಿನಲ್ಲಿ ನಿಲ್ಲುವಂತ ಹವು-ಅವರು ಕೊಡುವ ವ್ಯಕ್ತಿ ಚಿತ್ರಗಳು. ಅವರು ಕೊಡುವ ಭಾರತೀಯ ಮಿತ್ರರ ಇಲ್ಲವೆ ರಾಮಕೃಷ್ಣಾಶ್ರಮದ ಇಲ್ಲವೆ ಭೇಟಿಯಾದ ಅಮೆರಿಕನ್ನರ ವ್ಯಕ್ತಿಚಿತ್ರಗಳು ತಮ್ಮದೇ ಆದ ವಿಶಿಷ್ಟ ಗುಣಗಳಿಂದ ನಮ್ಮನ್ನು ಆಕರ್ಷಿಸುತ್ತವೆ. ಅಮೆರಿಕವನ್ನು ಅವರು ಬರಿಯ ಸುತ್ತಾಟಗಳಿಂದ ಮಾತ್ರ ನೋಡುವುದಿಲ್ಲ. ತಾವು ನಡೆಸಿದ ಸಂದರ್ಶನಗಳಿಂದಲೂ ಅಮೆರಿಕವನ್ನು ಗ್ರಹಿಸುತ್ತಾರೆ. ಒಬ್ಬ ಕೂಲಿಕಾರನಿಂದ ಹಿಡಿದು ಒಂದು ವಿಶ್ವವಿದ್ಯಾಲಯದ ಸಹ ವೈಸ್ ಛಾನ್ಸಲರ್‌ರವರೆಗೆ ಅವರು ಭೇಟಿಯಾದ ಜನರಿರುವರು. ಹೀಗಾಗಿ ಅವರ ವ್ಯಕ್ತಿ ಚಿತ್ರಗಳಲ್ಲಿ ವೈವಿಧ್ಯತೆ ಸಹಜವಾಗಿ ಕಾಣಿಸಿಕೊಳ್ಳುತ್ತದೆ. ತಾವು ಭೇಟಿಯಾದ ಅಮೆರಿಕದ ಎಲ್ಲ ವೇದಾಂತ ಸಂಘಗಳ ಬಗೆಗೂ ವಿವರಣೆ ಕೊಟ್ಟಿರುವುದು ಓದುಗನ ಪಾಲಿಗೆ ಸ್ವಲ್ಪ ಹೆಚ್ಚೆನ್ನಿಸುತ್ತದೆ. ರಾಮಕೃಷ್ಣಾಶ್ರಮದ ಅತಿಥಿಯಾಗಿ ಡಾ॥ ಪ್ರಭುಶಂಕರ ದಂಪತಿಗಳು ಅಮೆರಿಕವನ್ನು ಪ್ರದಕ್ಷಿಣೆ ಮಾಡಿರುವುದರಿಂದ ವೇದಾಂತ ಸಂಘಗಳ ಬಗೆಗೆ ಅವರು ಸ್ವಲ್ಪ ಹೆಚ್ಚಿನ ಔದಾರ್ಯ ಮಾತಿನಲ್ಲಿ ತೋರ್ಪಡಿಸಿರುವರು. ಬಣ್ಣನೆಗಿಂತ ಮಿಗಿಲಾದ ಕೃತಜ್ಞತೆ ಮತ್ತೊಂದಿಲ್ಲವಲ್ಲವೆ!

**ಅಮೆರಿಕದಲ್ಲಿ ಗೊರೂರು** ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಕೈಗೊಂಡ ಅಮೆರಿಕ ಕೆನಡಗಳ ಪ್ರವಾಸಾನುಭವವನ್ನು ನಿರೂಪಿಸುವ ವಿಶಿಷ್ಟ ಕೃತಿ. ಗೊರೂರರು ಕನ್ನಡದ ಸುಪ್ರಸಿದ್ಧ ನಗೆ ಬರಹಗಾರರು. ಅವರ ಕಥೆ ಕಾದಂಬರಿಗಳನ್ನು ಓದಿರುವವರಿಗೆ ಅವರ ಬರಹದ ವೈಖರಿಯ ಪರಿಚಯವಾಗಿರುತ್ತದೆ. ಅಲ್ಲಿ ಅವರ ವಿಶಿಷ್ಟ ಶೈಲಿಯು ಓದುಗನ ಅನುಭವಕ್ಕೆ ಬಂದಿರುತ್ತದೆ. ಈ ಪ್ರವಾಸಾನುಭವವನ್ನು ಓದಿದ ಮೇಲೂ ಗೊರೂರರು ನೆನಪಿನಲ್ಲಿ ಉಳಿಯುತ್ತಾರೆ. ಗೊರೂರರು ಸಂಪ್ರದಾಯಸ್ಥರಾಗಿದ್ದರೂ ಅವರ ನಡಾವಳಿಯಲ್ಲಿ ಎಲ್ಲಿಯೂ ಅದು ಎದ್ದು ಕಾಣುವುದಿಲ್ಲ; ನಮ್ಮ ಅವರ ನಡುವೆ ಗೋಡೆಯನ್ನು ಕಟ್ಟುವುದಿಲ್ಲ; ಮಾಗಿದ ಮುಪ್ಪಿನಿಂದಾಗಿ ಅದು ತನ್ನ ಕಳೆಯನ್ನು ಕಳೆದುಕೊಂಡಿಲ್ಲ. ತಮ್ಮ ಸುತ್ತಣ ಜನ-ಮನ-

ಪ್ರಕೃತಿ -ಹೀಗೆ ಎಲ್ಲವನ್ನೂ ಪ್ರೀತಿಸುವ ಅವರು, ತಮ್ಮ ಹಾಗೂ ಅವುಗಳ ನಡುವೆ ಒಂದು ಮಧುರವಾದ ಸಂಬಂಧವನ್ನು ಬೆಳೆಯಿಸಿಕೊಂಡಿರುವರು. ಒಳ್ಳೆಯ ಸಂಸ್ಕಾರ ಹಾಗೂ ಓದಿನಿಂದ ಪಕ್ವವಾದ ಮನಸ್ಸು ಸಹಬಾಂಧವರ ಸುಖ ದುಃಖಗಳನ್ನು ಬಹುಬೇಗನೆ ಗ್ರಹಿಸುತ್ತದೆ. ಈ ಸುಖ ದುಃಖಗಳಿಗೆ ಮೂಲವಾಗಿರುವ ಜನಜೀವನವನ್ನು ತಮ್ಮ ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸಿ, ಸಮಸ್ಯೆಯನ್ನು ಗಂಭೀರವಾಗಿ ಪರಿಶೀಲಿಸಿ ನಿರ್ಣಯಿಸುವ ಅವರ ತೀರ್ಮಾನಗಳು ನಮಗೆಲ್ಲರಿಗೂ ಒಪ್ಪಿತವಾಗುತ್ತದೆ. ಬದುಕನ್ನು ನಗುನಗುತ್ತ ನೋಡುವ, ಅದರ ಹಲವು ಮಗ್ಗುಲಗಳ ಸಮಸ್ಯೆಯನ್ನು ಸರಸವಾಗಿ ಬಿಡಿಸಿ ತೋರುವ, ಸುತ್ತಣ ಪ್ರಪಂಚವನ್ನು ಬೆರಗುಗಣ್ಣಿನಿಂದ ನೋಡಿ ಬಹುಮುಖವಾದ ವೈಚಿತ್ರ್ಯಗಳಿಂದ ಸ್ಫುರಣೆಗೊಂಡು ಕವಿಯಾಗುವ ಗೊರೂರರ 'ವಿಶಿಷ್ಟ' ವ್ಯಕ್ತಿತ್ವವನ್ನು ನಾವು **ಅಮೆರಿಕದಲ್ಲಿ ಗೊರೂರು** ಎಂಬ ಅವರ ಕೃತಿಯಲ್ಲೂ ಕಾಣಬಹುದಾಗಿದೆ.

ಗೊರೂರರು ತಮ್ಮ ಪ್ರವಾಸ ಕಾಲದಲ್ಲಿ ನೋಡಿದ ಪ್ರೇಕ್ಷಣೀಯ ಸ್ಥಳಗಳ ವಿಸ್ತಾರವಾದ ವರ್ಣನೆಯನ್ನು ಅಂಕಿ ಸಂಖ್ಯೆ, ಪೂರ್ವೇತಿಹಾಸಗಳೊಡನೆ ಕೊಡುವುದರ ಜೊತೆಗೆ ತಮ್ಮ ತಂಗಣೆಯ ಕಾಲಾವಧಿಯಲ್ಲಿ ಅಮೆರಿಕದವರ ಜೀವನಕ್ರಮವನ್ನು ಹತ್ತಿರದಿಂದ ನೋಡಿ, ಅಮೆರಿಕನ್ನರ ಜೀವನದ ಸಾಫಲ್ಯ ವೈಫಲ್ಯಗಳನ್ನು ಸ್ವಾರಸ್ಯಪೂರ್ಣವಾಗಿ ವಿವರಿಸಿರುವರು. ವಿಪುಲ ಜೀವನಾನುಭವವುಳ್ಳ ವಯೋವೃದ್ಧರೂ ಜ್ಞಾನವೃದ್ಧರೂ ಆದ ಗೊರೂರರಂತಹ ಸಾಹಿತಿಗಳಿಂದ ಬಂದ ಈ ಕೃತಿ ಅನೇಕ ಕಾರಣಗಳಿಂದ ವಿಶಿಷ್ಟವಾಗಿದೆ. ಕನ್ನಡದಲ್ಲಿ ಬಂದಿರುವ ಅಮೆರಿಕ ಪ್ರವಾಸ ಕಥನಗಳಲ್ಲಿ ಅಪೂರ್ವದ್ದಾಗಿದೆ. ಗೊರೂರರು ಅಮೆರಿಕವನ್ನು ನೋಡಿದ ಅನುಭವ ಅದಾಗಿರುವುದರಿಂದ, ಅವರ ಮಟ್ಟಿಗೆ ಅವರ ಈ ಅನುಭವ ವಿಶಿಷ್ಟತರದ್ದಾಗುತ್ತದೆ. ಈ ಅನಿಸಿಕೆ ಗ್ರಂಥವನ್ನು ಓದಿ ಮುಗಿಸಿದ ಮೇಲೆ ಓದುಗನಿಗೂ ಆಗುತ್ತದೆ.

ಗೊರೂರರು ಅಮೆರಿಕವನ್ನು ಕೇವಲ ಅದರ ಚರಿತ್ರೆ, ಸಂಸ್ಕೃತಿ, ನಾಗರೀಕತೆ, ಜೀವನ ದರ್ಶನ -ಇವುಗಳ ಹಿನ್ನೆಲೆಯಲ್ಲಿ ನೋಡಿ, ಅವನ್ನು ತಮ್ಮ ಪ್ರವಾಸಕಥನದಲ್ಲಿ ಹೇಳುವ ಉದ್ದೇಶ ಹೊಂದಿಲ್ಲ. ಈ ರೀತಿಯದಾದ ಅನುಭವ ನಿರೂಪಣೆಗೆ ಅವರ ತಂಗಣೆಯ ಕಾಲಾವಧಿ ಸಾಲದು. ಅಮೆರಿಕನ್ನರ ಜೀವನಕ್ರಮವನ್ನು ಹತ್ತಿರದಿಂದ ನೋಡಿದಾಗ ಗೊರೂರಿಗೆ ಅನ್ನಿಸಿದ್ದಿಷ್ಟು; "ಅವರ ದೇಶವನ್ನು ಅವರು ಹೇಗೆ ಮಾಡಿಕೊಂಡಿದ್ದಾರೆ ಎಂಬುದು ಮಾತ್ರ ನನ್ನ ಕಣ್ಣಿಗೆ ಬೆಳ್ಳಂಬೆಳಕಾಗಿ ತೋರುತ್ತಿತ್ತು. ಪ್ರತಿಯೊಬ್ಬರಿಗೂ ವಿದ್ಯೆ, ಉದ್ಯೋಗ, ಟೆಲಿಫೋನ್, ಟೆಲಿವಿಶನ್, ಮನೆ, ಕಾರು, ವೈದ್ಯ ಸೌಲಭ್ಯ ಇವೆಲ್ಲವನ್ನೂ ಅಂಗಡಿಗಳಲ್ಲಿ-ಬಾಳೆಹಣ್ಣು ಅಥವಾ ಬೋಂಡಾಗಳನ್ನು ಕೊಂಡುಕೊಳ್ಳುವಂತೆ ಕೊಳ್ಳಬಹುದು. ಇವು ಸರ್ವರಿಗೂ ಸಮಾನ. ಇದರಲ್ಲಿ

ಹಿಂದುಳಿದವ ಮುಂದೆ ಬಂದವ ಎಂಬ ತಾರತಮ್ಯವಿಲ್ಲ. "ಸರ್ವೋ ವೈ ಸುಖಿನಸ್ಸಂತು" ಅಮೆರಿಕನ್ನರು ಇದನ್ನು ಸ್ವಾಭಾವಿಕವಾಗಿ ಯಾವ ಬೊಬ್ಬಾಟ, ಘೋಷಣೆ, ಪ್ರಚಾರ, ಆಡಂಬರದ ಮೆರವಣಿಗೆ, ರಸ್ತೆಗಳಲ್ಲೆಲ್ಲ ದೊಡ್ಡ ದೊಡ್ಡ ಫಲಕಗಳು, ಇವುಗಳಿಲ್ಲದೆ ಮೌನವಾಗಿ ಸಾಧಿಸಿದ್ದಾರೆ. ಅವರು ಬಹುಮಟ್ಟಿಗೆ ಪ್ರಾಮಾಣಿಕರು, ಕಷ್ಟ ಜೀವಿಗಳು, ನಿರಸೂಯರು, ಪ್ರತಿಯೊಬ್ಬರೂ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ಆಳ್ವಿಕೆ, ನಿತ್ಯ ವ್ಯವಹಾರಗಳಲ್ಲಿ ಪ್ರಾಮಾಣಿಕತೆ ಇದೆ. (ಅತಿ ಮೇಲ್ಮಟ್ಟದಲ್ಲಿ, ರಾಜಕೀಯದಲ್ಲಿ ಭ್ರಷ್ಟಾಚಾರ ಇರಬಹುದು. ಆದರೆ, ಭ್ರಷ್ಟಾಚಾರ ಜೀವನದ ಕಾರ್ಯಕ್ರಮಗಳ ಒಂದು ಅಂಗೀಕೃತ ಅಂಶವಾಗಿಲ್ಲ) ...ಸರ್ಕಾರಿ ಅಧಿಕಾರಿಗಳು ಜನರ ಕಾರ್ಯಗಳನ್ನು ತುಂಬ ವಿನಯ ಮತ್ತು ಚುರುಕಿನಿಂದ ಮಾಡಿಕೊಡುತ್ತಾರೆ. ಯಾವ ಆಫೀಸಿನಲ್ಲಿಯೂ ನೂಕು ನುಗ್ಗಲು ಜನಜಂಗುಳಿ, ತೀರ್ಮಾನವಾಗದ ಕಡತದ ರಾಶಿ ಇರುವುದಿಲ್ಲ. ಆಫೀಸ್ ಮುಖ್ಯಾಧಿಕಾರಿ ಮುಂದೆಯಾದರೂ ಕ್ಯೂ ಹೆಚ್ಚಾಗಿ ನಿಂತು, ಕೆಲಸ ನಿಧಾನವಾದರೆ ಬಂದು ಸರಿಪಡಿಸುತ್ತಾನೆ. ಜನ, ಅಧಿಕಾರಿಗಳನ್ನು ಕಾಡುವುದು, ಬೇಡುವುದು, ಅವರೊಂದಿಗೆ ಸವಿ ಮಾತನಾಡುವುದು ಯಾವುದೂ ಅವಶ್ಯವಿಲ್ಲ. ಕೆಲಸ ಆಗುವುದಾದರೆ ಇಪ್ಪತ್ತು ನಿಮಿಷಗಳಲ್ಲಿ ಮಾಡಿಕೊಟ್ಟು ಕಳುಹಿಸುತ್ತಾರೆ. ಇಲ್ಲದಿದ್ದರೆ ವಾಯಿದೆ ಹೇಳಿ ಕಳುಹಿಸುತ್ತಾರೆ. ಯಾವ ಅಧಿಕಾರಿಯೂ ಆಫೀಸಿನಿಂದ ಗೈರುಹಾಜರು ಆಗುವುದಿಲ್ಲ. ಕೆಲಸದ ಹೊರತು ಉಳಿದ ಸಲ್ಲಾಪಕ್ಕೆ ಎಡೆಯಿಲ್ಲ." (ಪು. ೩೧೬)

ಗೊರೂರರು ಎಲ್ಲಿಯೇ ಇರಲಿ ತಮ್ಮ ವೇಷ, ಭೂಷಣ, ಮಾತುಕತೆಗಳಿಂದ ಸುತ್ತಲಿನ ಜನರನ್ನು ಆಕರ್ಷಿಸುವವರು. ಅವರು ವಿದೇಶಕ್ಕೆ ಹೋದರೂ ಈ ಆಕರ್ಷಣೆ ತಪ್ಪಲಿಲ್ಲ. ಅಗಲವಾದ ಎಂಟೂವರೆ ಮೊಳ ಉದ್ದದ ದಪ್ಪನೂಲಿನ ಖಾದಿಯ ಪಂಚೆ-ಪಂಚೆಕಚ್ಚೆ, ಹಣೆಗೆ ಕೆಂಪು ನಾಮ, ಚಳಿಗಾಗಿ ತಲೆಗೆ ಒಂದು ಉಣ್ಣೆ ಶಾಲು ಮಫ್ಲರ್, ಕಾವಿಬಣ್ಣದ ನೀಳವಾದ ಜುಬ್ಬ, ಕಾಲಿಗೆ ದಪ್ಪವಾದ ಎಕ್ಕಡ, ತಲೆಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು ಬಿಳಿಗಡ್ಡ ಮೀಸೆ-ಹೀಗೆ ಅವರ ಮೈ ಉಡುಪುಗಳಲ್ಲಿ ಏಳೆಂಟು ಬಣ್ಣಗಳ ಹೊಳಪು. ಈ ವಿಚಿತ್ರ ವೇಷದಲ್ಲಿ ಒಮ್ಮೆ ಮನೆಯ ಎದುರಿನ ಶಾಲೆಗೆ ಗೊರೂರರು ಹೋಗಬೇಕಾಗಿ ಬಂದಿತು. ಅವರನ್ನು ಆ ವೇಷದಲ್ಲಿ ನೋಡಿದ ಮಕ್ಕಳು ಪೈಡ್‌ಪೈಪರ್, ಸಂಟಕ್ಲಾಸ್, ಪಿಕ್ವಿಕ್ ಎಂದೆಲ್ಲ ಕೂಗಿದರು. ಸ್ನೇಹಪ್ರಿಯರಾದ ಗೊರೂರರು ಅಪರಿಚಿತರೊಡನೆ ಬಹುಬೇಗ ಸ್ನೇಹ ಬೆಳೆಸುತ್ತಿದ್ದರು. ಬಹುಕಾಲದ ಗೆಳೆಯರೋ ಎನ್ನುವಂತೆ ಅವರೊಡನೆ ಆತ್ಮೀಯವಾಗಿ ವರ್ತಿಸುತ್ತಿದ್ದರು. ಅವರ ಸ್ವಭಾವಸಹಜವಾದ ಈ ಗುಣ ಅಪರಿಚಿತ ನಾಡಾದ ಅಮೆರಿಕದಲ್ಲಿ ಬಹುಜನ ಸ್ನೇಹಿತರನ್ನು ಸಂಪಾದಿಸಿಕೊಟ್ಟಿತು. ನಯಾಗಾರ ಜಲಪಾತ ನೋಡಲು ಹೋಗಿ ಟ್ಯಾಕ್ಸಿ

ಡ್ರೈವರನೊಬ್ಬನ ಮನೆಯಲ್ಲಿ ಗೊರೂರು ದಂಪತಿಗಳು ಒಂದು ರಾತ್ರಿ ತಂಗಿದ್ದು ಅವನ ಆತಿಥ್ಯ ಸ್ವೀಕರಿಸಿದ್ದು (ಪು. ೯೦-೯೫); ರಾಕೀ ಪರ್ವತದ ರಕ್ಷಣೆಯ ಜವಾಬ್ದಾರಿ ಹೊತ್ತಿದ್ದ ರಾಕೀರಾಮ್‌ರೊಡನೆ ಸ್ನೇಹ ಬೆಳೆಸಿದ್ದು (ಪು. ೧೧೨-೧೧೩); ರಾಕೀ ಪರ್ವತದ ಮೇಲಿನ ಹೋಟಲಿನಲ್ಲಿ ಅಮೆರಿಕದ ಭೂಶಾಸ್ತ್ರಜ್ಞರೊಡನೆ ಸ್ನೇಹ ಬೆಳೆಸಿ ಮಾತುಕತೆ (ಪು. ೧೩೫-೧೩೭); ಚರ್ಚ್‌ನ ಪೂಜೆಯಲ್ಲಿ ಪಾಲ್ಗೊಂಡು, ತಮ್ಮ ಮಾತುಗಾರಿಕೆಯಿಂದ ಹಾಗೂ ತಮಗೆ ಪ್ರಿಯವಾದ ಗಾಂಧಿ ತತ್ವಗಳಿಂದ ನೆರದಿದ್ದ ಪಾದರಿಗಳ ಜೊತೆ ಆತ್ಮೀಯತೆ ಬೆಳೆಸಿದ್ದು -ಹೀಗೆ ಹಲವಾರು ನಿದರ್ಶನಗಳನ್ನು ಅವರ ಸ್ನೇಹಪ್ರಿಯತೆಗೆ ಕೊಡಬಹುದು.

ಗೊರೂರರ ಲಘುಮನೋವೃತ್ತಿಯನ್ನು ಅವರು ಅಮೆರಿಕದಲ್ಲಿ ತೊಟ್ಟ ನಾನಾ ವೇಷಗಳು, ಆಟಗಳು ನಮಗೆ ಪರಿಚಯಿಸುತ್ತದೆ. ಜ್ಯೋತಿಷ್ಯಶಾಸ್ತ್ರದಲ್ಲಿ ನಂಬಿಕೆ ಇಲ್ಲದ ಗೊರೂರರು ಪೌರಸಭೆಗೆ ಉಮೇದುವಾರಳಾಗಿ ನಿಂತಿದ್ದ ಓರ್ವ ಮಹಿಳೆಯನ್ನು "ನೀವು ಜಯಗಳಿಸುವಿರಿ ನನಗೆ ಇದು ಖಾತರಿ" ಒಂದು ಭವಿಷ್ಯ ಹೇಳಿದರು. ಕಾಕತಾಳೀಯದಂತೆ ಆಕೆ ಜಯ ಗಳಿಸಿದಳು. ಏಕ್‌ದಂ ಗೊರೂರರು ಜ್ಯೋತಿಷಿಯಾಗಿ ಪ್ರಸಿದ್ಧರಾಗಿಬಿಟ್ಟರು. ನಿತ್ಯವೂ ನಾಲ್ಕಾರು ಮಂದಿಯಾದರೂ ಅವರಲ್ಲಿಗೆ ಜ್ಯೋತಿಷ್ಯ ಕೇಳಲು ಹಾಜರಾಗುತ್ತಿದ್ದರು! (ಪು. ೧೬೫-೨೭೧). ಮುಂದೆ ಅವರಿಗೆ ಜೋತಿಷ್ಯ ಭಕ್ತರ ಕೈಯಿಂದ ತಪ್ಪಿಸಿಕೊಳ್ಳುವುದು ಬಹಳ ಕಷ್ಟವಾಯಿತು. ಅಮೆರಿಕದಲ್ಲಿ ನೆಲೆಸಿದ್ದ ಭಾರತೀಯರೊಬ್ಬರಿಗೆ ತಮ್ಮ ತಾಯಿಯ ಶ್ರಾದ್ಧ ಮಾಡಿಸುವ ಬಯಕೆಯಾಯಿತು. ಯೋಗ್ಯ ಬ್ರಾಹ್ಮಣರು ಸಿಗದೆ ಮನಶ್ಶಾಂತಿಯಿಲ್ಲದೆ ಅವರು ಕೊರಗುತ್ತಿದ್ದರು. ಅವರ ಸ್ಥಿತಿ ನೋಡಿ ಗೊರೂರರು "ನಾನೂ ಪುರೋಹಿತನೆ. ಸತ್ತವರನ್ನು ಸ್ವರ್ಗಕ್ಕೆ ಕಳುಹಿಸುತ್ತೇನೆ. ಬದುಕಿರುವವರಿಗೆ ಮದುವೆ ಮಾಡಿಸುತ್ತೇನೆ. ಒಂದು ದಿನ ಪೂರ್ತ ಉಪವಾಸ ಇರಿ ಮರುದಿನ ಶ್ರಾದ್ಧ ಮಾಡೋಣ. ಎಲ್ಲ ಮನೆಯಲ್ಲಿಯೇ, ನಾನೇ ಪುರೋಹಿತ; ಬ್ರಾಹ್ಮಣ. ನನ್ನ ಹೆಂಡತಿ ವಡೆ, ರವೆಉಂಡೆ, ಸಜ್ಜಪ್ಪ ಎಲ್ಲ ಮಾಡುತ್ತಾಳೆ. ತಿಥಿ ಅಡಿಗೆ ಜೀವಮಾನವೆಲ್ಲ ಮಾಡಿ ಅವಳ ಮೈಕೈ ಜಡ್ಡುಗಟ್ಟಿದೆ, ಎಂದು ಹೇಳಿ ಮಿತ್ರರನ್ನು ಒಪ್ಪಿಸಿ ಮರುದಿವಸ ಶ್ರಾದ್ಧ ಮುಗಿಸಿಯೇ ಬಿಟ್ಟರು!(ಪು.೩೦೬-೩೦೭). ಪಾಕಶಾಸ್ತ್ರ ಪ್ರವೀಣರಾಗಿ, ಹಬ್ಬ ಹರಿದಿನಗಳಲ್ಲಿ ಮಾಡುವ ತಿಂಡಿಗಳ ಬಗೆಗೆ ಸಂಶೋಧನೆ ನಡೆಸಲು ಭಾರತಕ್ಕೆ-ಅದರಲ್ಲೂ ಗೊರೂರಿಗೆ-ಬಂದ ರಾಬರ್ಟ್‌ಗೆ ಸಲಹೆ ಸೂಚನೆ ನೀಡಿದರು (ಪು. ೨೩೭-೨೪೩). ಹುಳಿಯನ್ನು ತಯಾರಿ ಮಾಡುವ ವಿಧಾನವನ್ನು ಗೊರೂರರು ವರ್ಣನೆ ಮಾಡುವುದನ್ನು ನೋಡಿ: "ನಮ್ಮವರು ಒಳ್ಳೆ ಅಡಿಗೆಯನ್ನು ನಳಪಾಕ ಎಂದು ಹೇಳಿದುದು ಅತಿಶಯೋಕ್ತಿಯಲ್ಲ. ಅದೊಂದು ದೊಡ್ಡ ವಿದ್ಯೆ, ತಂತ್ರಶಾಸ್ತ್ರ. ಹುಳಿಯನ್ನದಲ್ಲಿ ಗೊಜ್ಜು ಮುಖ್ಯ. ಅದು ಸರಿಯಾದ ಹದದಲ್ಲಿ ಕುದಿದರೆ

ಲೇಹ್ಯದ ಹಾಗೆ ಇರುತ್ತದೆ. ಮನುಷ್ಯನ ದೇಹದ ಪ್ರತಿಯೊಂದು ಜೀವಾಣುವಿನಲ್ಲಿಯೂ ಅವನ ಪೂರ್ಣ ದೇಹರಚನೆಯ ಮೂಲಸ್ವರೂಪವಿರುವುದೆಂದು ವಿಜ್ಞಾನಿಗಳು ಹೇಳುತ್ತಾರೆ. ಹಾಗೆ ಹುಳಿಯನ್ನದ ಗೊಜ್ಜಿನ ಒಂದು ಕಡಲೆಕಾಳು ಗಾತ್ರದಲ್ಲಿಯೂ ಪೂರ್ಣ ಹುಳಿಯನ್ನದ ಸಾರಸರ್ವಸ್ವವಿರುತ್ತದೆ. ಗೊಜ್ಜಿನಿಂದ ಅನ್ನವನ್ನು ಕಲೆಸಬೇಕು. ಗೊಜ್ಜು ಸರಿಯಾದ ಹದದಲ್ಲಿದ್ದರೆ-ಉಪ್ಪು ಖಾರ ಹುಳಿ ಎಲ್ಲ ಸರಿಯಾಗಿ ಅನ್ನಕ್ಕೆ ಸೇರಿ, ಅನ್ನ ಉದುರು ಉದುರಾಗಿ ಉಳಿಯುವುದು. ಅನ್ನ ಕಳಿಯಾಗಲೇಕೂಡದು...' (ಪು.೨೪೨). ಗೊರೂರರು ಎಷ್ಟರ ಮಟ್ಟಿಗೆ ಪಾಕಶಾಸ್ತ್ರ ಪ್ರಿಯರೆಂದರೆ, ಅವರ ಅಮೆರಿಕ ವಾಸ್ತವ್ಯದಲ್ಲಿ, ಮಗಳ ಮನೆಯಲ್ಲಿದ್ದ ಕಾಲ ಹೊರತಾಗಿ, ಉಳಿದ ಕಾಲಗಳಲ್ಲಿ ಅಮೆರಿಕನ್ ಮಿತ್ರರ ಅಡಿಗೆ ಮನೆಗಳನ್ನೇ ಸ್ವಾದೀನ ಮಾಡಿಕೊಂಡರು! ಅಮೆರಿಕದ ಶಾಲೆಯ ಮಕ್ಕಳಿಗೆ ಗೊರೂರರು ಪಂಚತಂತ್ರದ ಕಥೆಗಳನ್ನು ಸ್ವಾರಸ್ಯವಾಗಿ ವಿವರಿಸುವುದರ ಮೂಲಕ ಪ್ರಿಯರಾದರು. ಕಥೆಯಲ್ಲಿ ಸಿಂಹದ ಪ್ರಸ್ತಾಪ ಬಂದಾಗ ಮಕ್ಕಳಿಗೆ ಅದು ಏನೆಂದು ಅರ್ಥವಾಗದಿದ್ದಾಗ ಗೋಲ್ಡ್‌ವಿನ್ ಮೇಯರ್ ಕಂಪನಿಯ ಚಿತ್ರಗಳ ಪ್ರಾರಂಭದ ಸಂಕೇತ ಅದೆಂದು ಹೇಳಿದಾಗ ಅರ್ಥವಾಯಿತಂತೆ! ಹಾಗೆಯೇ, ಖಾದಿಯ ಪ್ರಸ್ತಾಪ ಬಂದಾಗಲೂ ಮಕ್ಕಳಿಗೆ ಅದು ಏನೆಂದು ಅರ್ಥವಾಗಲಿಲ್ಲ. 'ಎಲ್ಲೆಲ್ಲಿಯೂ ಬಿಸಿನೀರು-ತಣ್ಣೀರು ನಲ್ಲಿಯಲ್ಲಿ ಹರಿಯುತ್ತಿರುವಾಗ ಭಾವಿಯನ್ನು ನೋಡುವುದೆಲ್ಲಿ?' ಎನ್ನುವ ಗೊರೂರರು ಮಕ್ಕಳಿಗೆ ಕಷ್ಟಪಟ್ಟು ಭಾವಿ ಎಂದರೇನೆಂದು ತಿಳಿಸಿದರಂತೆ! (ಪು. ೧೯೯). ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡುವಾಗ ಗೊರೂರರು ರಾಮಾಯಣ, ಮಹಾಭಾರತ, ಉಪನಿಷತ್ತು, ಕಾಳಿದಾಸನ ಕೃತಿಗಳು-ಇವುಗಳನ್ನು ಕುರಿತು ಹೇಳಿ ಜನಪ್ರಿಯರಾದರು. ಅವರ ಪ್ರಭಾವ ಎಷ್ಟರ ಮಟ್ಟಿಗೆ ವಿದ್ಯಾರ್ಥಿಗಳ ಮೇಲೆ ಆಗಿತ್ತೆಂದರೆ, ಒಂದು ಕಾಲೇಜಿನ ಸುಮಾರು ಇಪ್ಪತ್ತೈದು ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳು ಸಹಿಮಾಡಿ ಅವರ ಉಪನ್ಯಾಸಗಳನ್ನು ಮೆಚ್ಚಿ ಗೊರೂರರಿಗೆ ಕಾಗದ ಬರೆದರು. ಆ ಕಾಗದಲ್ಲಿನ ಮುಖ್ಯಾಂಶ ಹೀಗಿದೆ; "We will always remember the beautiful words you spoke, the charming songs you sang and your keen sense of humour. The two hours you spent with us, will make our class room work so much more meaningful. The message that you said if respet and courage are words of wisdom, that we will not forget." (p. 261)

"ನನ್ನನ್ನು ಅಮೆರಿಕದಲ್ಲಿ ಬಚಾಯಿಸಿದುದು ವೇದಗಳ ಅನೇಕ ಪಠಣ, ಉಪನಿಷತ್ತುಗಳ ವಿವರಣೆ, ಸಂಸ್ಕೃತ ಕವಿತೆಗಳ ನಾನಾ ಬಗೆಯ ಛಂದಸ್ಸು, ಸಂಸ್ಕೃತ ಹಾಸ್ಯ ಶ್ಲೋಕಗಳು..." (ಪು. ೨೫೬) ಎಂದು ಗೊರೂರರೇ ಒಂದೆಡೆ

ಹೇಳಿಕೊಂಡಿರುವರು. ಕನ್ನಡಿಗರು ಸಭೆ ಸಮ್ಮೇಳನಗಳನ್ನು ಏರ್ಪಡಿಸಿ ಗೌರವಿಸಿದಾಗ ಎಲ್ಲೆಲ್ಲಾ ತಮಗೆ ಪ್ರಿಯವಾದ ಜನಪದ, ಹಾಸ್ಯ ಹಾಗೂ ಶೃಂಗಾರ ಗೀತೆಗಳನ್ನು ತಪ್ಪದೆ ಹಾಡಿ ಗೊರೂರರು ರಂಜಿಸಿರುವರು. ಆಲ್ಬರ್ಟ್ ವಿಶ್ವವಿದ್ಯಾಲಯದ ಸಭೆಯೊಂದರಲ್ಲಿ "ಓಲೆಕಾರ ನಿನಗೆ ಒಳ್ಳೆ ಹೆಂಡತಿ ಯಾಕೊ। ನೀ ಹೋದೆ ದೇಶ ತಿರುಗೂತ ನಿನ ನಾರಿ। ಕಂಡೋರ್ಗೆ ಬಾಯ ಬಿಡುತಾಳೆ" ಎಂಬ ಜಾನಪದ ಗೀತೆ ಹೇಳಿದಾಗ ಸಭೆಯಲ್ಲಿದ್ದ ಕನ್ನಡ-ತಮಿಳು-ತೆಲುಗು-ಮಹಾರಾಷ್ಟ್ರ ನಾಡಿನವರು ದೊಡ್ಡ ದನಿಯಲ್ಲಿ ನಕ್ಕರು. ಗುಜರಾತಿ ಹಿಂದಿ ಬಂಗಾಳಿ ಪಂಜಾಬಿ ಭಾಯಿಗಳಿಗೆ ಅದರ ಅರ್ಥ ಮೊದಲಿಗೆ ತಿಳಿಯಲಿಲ್ಲ. ಅದರ ವಿವರಣೆ ಕೊಟ್ಟಾಗ ಅವರಿಗೂ ನಗು ಬಂದಿತು (ಪು.೬೩). ಅಮೆರಿಕನ್ ವಿದ್ಯಾರ್ಥಿಗಳಿಗೆ ಬಹಳ ಮೆಚ್ಚಿಗೆಯಾದುದು ಗೊರೂರರು ತಮ್ಮದೇ ಆದ ಧಾಟಿಯಲ್ಲಿ ಹಾಡಿದ ಜಾನಪದ ಹಾಡುಗಳು. ಒಂದು ಸಂದರ್ಭದಲ್ಲಿ ಗೊರೂರರು

"ಈ ಪ್ರಾಯದಾಗ ಕುಡು ಕೈಯ
ಒಲ್ಲೆ ಅನಬೇಡ, ಒಲ್ಲೆ ಅನಬೇಡ
ನಡೆ ರಂಗಮಾಲದಾಗ
ಬಂದು ಕೂಡ, ನನಜೋಡ ನನಜೋಡ
ಈ ಹರೆಯ ಹೋದಮೇಲೆ ಸರದ
ಅಲ್ಲಿಂದ ಬರದ ಈಗಿನ ಧಮಕ"

ಎಂದು ಹಾಡು ಹೇಳಿ ಅದರ ಅರ್ಥ ವಿವರಿಸಿದಾಗ ವಿದ್ಯಾರ್ಥಿಗಳು ಎದ್ದು ನಿಂತು ಚಪ್ಪಾಳೆ ಹೊಡೆದು ಹುರ ಹುರ ಎಂದರು. ಸ್ವಲ್ಪ ವಯಸ್ಸಾದ ಉಪಾಧ್ಯಾಯರು "ಯವ್ವನ ಎಷ್ಟು ಬೇಗ ಜಾರಿಹೋಗಿ ಮಧ್ಯವಯಸ್ಸು ಬಂದು ಬಿಡುತ್ತದೆ!" ಎಂದರಂತೆ (ಪು. ೨೬೨).

ಅಪ್ಪಟ ಗಾಂಧೀ ಅನುಯಾಯಿಗಳೂ ತತ್ವನಿಷ್ಠರೂ ಶಾಂತಿಪ್ರಿಯರೂ ಆದ ಗೊರೂರರು ತಾವು ಹೋದಲ್ಲೆಲ್ಲಾ ಗಾಂಧೀಜಿಯ ಬದುಕು ತತ್ವಗಳನ್ನು ಬೋಧಿಸಿದರು (ಪು. ೧೭೯); ಶಾಂತಿ ಸಂದೇಶವನ್ನು ಸಾರಿದರು (ಪು. ೨೪೩).

ನಗೆಗಾರ ಗೊರೂರರು ತಮ್ಮ ಪ್ರವಾಸ ಕಥನದುದ್ದಕ್ಕೂ ತಿಳಿಯಾದ ನಗೆಯನ್ನು ಹರಡಿರುವರು. ಅವರು ಅನುಭವಗಳನ್ನು ಸರಸವಾಗಿ, ತಿಳಿಯಾದ ಹಾಸ್ಯದಿಂದ, ಮನಮುಟ್ಟುವಂತೆ ಹೇಳುವರು. ಈ ಮನೋಭಾವದಿಂದಾಗಿ ಓದುಗ ಪ್ರಸಂಗಗಳಲ್ಲಿ ಆಸಕ್ತನಾಗುತ್ತಾನೆ, ಅಲ್ಲಿನ ನಗೆಯ ಕಚಗುಳಿಯಿಂದ ಪುಳಕಿತನಾಗಿ ಪ್ರಸನ್ನಚಿತ್ತದಿಂದ ಅನ್ಯಮನಸ್ಕನಾಗದೆ ಓದಿನಲ್ಲಿ ತಲ್ಲೀನನಾಗುತ್ತಾನೆ. ಈ ವಿಶಿಷ್ಟ ಗುಣ ೩೨೩ ಪುಟಗಳ ಈ ಹೊತ್ತಗೆಯನ್ನು ಬಿಟ್ಟೂ ಬಿಡದೆ ಓದಿಸಿಕೊಂಡು ಹೋಗುತ್ತದೆ. ವಿದ್ಯುತ್‌ಚಾಲಿತ

ಲಿಫ್ಟ್‌ನ್ನುನಡೆಸಲು ತಿಳಿಯದೆ ಭೂಮಿಯ ಮೇಲೆ ಇಳಿಯದೆ ಪಾತಾಳದಲ್ಲಿ-ಜನರು ಬಾರದ ಒಂದು ಹಳೆಯ ಕಾರುಗಳ ನಿಲ್ದಾಣದಲ್ಲಿ- ಇಳಿಯಬೇಕಾಗಿ ಬಂದ ಪ್ರಸಂಗ (ಪು. ೧೭-೧೮); ಟೈಂ ಸ್ವಿಚ್ ಆಫ್ ಮಾಡಲು ತಿಳಿಯದೆ ಪಟ್ಟಪಾಡು, ಸಹಾಯ ಯಾಚಿಸಿ ಎದುರಿಗಿನ ಪ್ರೈಮರಿ ಶಾಲೆಗೆ ಹೋದಾಗ ವಿಚಿತ್ರವೇಷದ ಇವರನ್ನು ನೋಡಿ ಶಾಲೆಯ ಮಕ್ಕಳೆಲ್ಲಾ ಹೆದರಿ ಶಾಲೆಯೊಳಗೆ ಓಡಿದ ಘಟನೆ (ಪು. ೨೨-೨೮); ಮಾಸ್ಕೋ ಸರ್ಕಸ್ ನೋಡಲು ಹೋಗಿದ್ದಾಗ ಅಲ್ಲಿನ ಬಾತ್‌ರೂಂ ಬಾಗಿಲು ತೆಗೆಯಲು ಬರದೆ ಗಾಬರಿಯಲ್ಲಿ ಫೈರ್ ಅಲಾರಂ ಬೆಲ್ ಮಾಡಿ ಸರ್ಕಸ್ ಕಂಟ್ರಾಕ್ಟ್‌ದಾರನ ಆಪ್ತಕಾರ್ಯದರ್ಶಿಯ ಕೋಪಕ್ಕೆ ಗುರಿಯಾದುದು ಹಾಗೂ ಆತ 'ಮೊಕದ್ದಮೆ ಹೂಡುತ್ತೇನೆ' ಎಂದು ಹೆದರಿಸಿದಾಗ ಸ್ಥೈರ್ಯ ಕಳೆದುಕೊಳ್ಳದೆ 'ಕೆರೆ ಒಡೆದವನ ಹತ್ತಿರ ಗೋಮಟೆ ಕಿತ್ತುಕೊಂಡರು' ಎಂಬ ಗಾದೆಯನ್ನು ಹೇಳಿ ಅದರ ಸ್ವಾರಸ್ಯವನ್ನು ಅವನಿಗೆ ವಿವರಿಸಿ ತಮ್ಮ ಹಾಸ್ಯಸ್ವಭಾವದಿಂದ ಅವನ ಮನಸ್ಸನ್ನು ಗೆದ್ದು ಮೈಮೇಲೆ ಬಂದ ವಿಪತ್ತಿನಿಂದ ಪಾರಾದುದು (ಪು. ೧೩೨-೧೩೩) ಈ ಬಗೆಯ ಸ್ವಾರಸ್ಯ ಪ್ರಸಂಗಗಳು ನಮ್ಮ ಮನಸ್ಸನ್ನು ಅರಳಿಸುತ್ತವೆ.

ಅವರ ನವಿರಾದ ಹಾಸ್ಯಕ್ಕೆ ಪುಸ್ತಕದಲ್ಲಿ ಬೇಕಾದಷ್ಟು ನಿದರ್ಶನಗಳನ್ನು ಕೊಡಬಹುದು. ನಿದರ್ಶನಕ್ಕೆ ಒಂದೆರಡನ್ನು ನೋಡಬಹುದು: ಅಮೆರಿಕನ್ನರಿಗೆ ನಾಯಿ ಅತಿ ಪ್ರೀತಿಯ ಪ್ರಾಣಿ. ಒಮ್ಮೆ ನಾಯಿಯೊಂದು ಬೊಗಳುತ್ತಾ ಗೊರೂರರನ್ನು ಸಮೀಪಿಸಿತು. ಅವರು ಅದನ್ನು ಸ್ವಲ್ಪ ಗದರಿಸಿದರು. ಆಗ ಅದರ ಯಜಮಾನ ಗೊರೂರರ ಬಳಿ ಬಂದು "ಗದರಿಸಬೇಡಿ, ನನ್ನ ನಾಯಿಯನ್ನು ನೀವು ಹಾಗೆ ದಬಾಯಿಸಬಾರದು. ಮೃದುವಾಗಿ ಮಾತನಾಡಿ" ಎಂದನಂತೆ (ಪು. ೨೦೫). ಅಮೆರಿಕದ ಬೆಕ್ಕುಗಳು ದಷ್ಟಪುಷ್ಟವಾಗಿರುವುದನ್ನು ಗಮನಿಸಿದ ಗೊರೂರರು ಅವು ಡಬ್ಬಗಳಲ್ಲಿ ಶೇಖರವಾದ ಆಹಾರವನ್ನು ತಿಂದು ಕೊಬ್ಬಿ ಮೊದ್ದು ಪ್ರಾಣಿಗಳಾಗಿವೆ. ಇಲಿ ತಾನು ತಿನ್ನುವ ವಸ್ತು ಎಂಬುದನ್ನೇ ಅದು ಮರೆತಂತೆ ತೋರುತ್ತದೆ..." (ಪು.೨೦೫) ಎನ್ನುವರು. ರಷ್ಯನ್ ಸರ್ಕಸ್ ಒಂದರಲ್ಲಿ ಪ್ರಾಣಿಗಳನ್ನು ಪಳಗಿಸಿ ರಿಂಗ್ ಮಾಸ್ಟರ್ ಆಗಿದ್ದವಳು ಓರ್ವ ರಷ್ಯನ್ ತರುಣಿ. ಅವಳ ಲಾವಣ್ಯ, ದೇಹ ಸೌಷ್ಟವ, ಮಾಟವಾದ ಅಂಗಾಂಗಗಳು, ಚುರುಕು, ಲವಲವಿಕೆ, ನಿರ್ಭಯ ಆತ್ಮಪ್ರತ್ಯಯ ಇವು ಎಂಥವರ ಮೆಚ್ಚುಗೆಯನ್ನೂ ಗಳಿಸುತ್ತಿದ್ದುವು. ಅವಳನ್ನು 'ಅತ್ಯಂತ ಸುಂದರಿ' ಎಂದು ಮೆಚ್ಚಿದ ಗೊರೂರರು "ಪ್ರಾಣಿಗಳೂ ಸಹ ಸೌಂದರ್ಯದ ಪೂಜಾರಿಗಳೇನೊ? ಆದುದರಿಂದಲೇ ಅವು ಅಷ್ಟು ಸರಾಗವಾಗಿ ಅವಳ ಅಧೀನಕ್ಕೆ ಒಳಗಾಗಿದ್ದವು" ಎಂದು ನಗೆಯಾಡುವರು (ಪು.೧೩೪). ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾಗ ಗೊರೂರು ಗಗನಸಖಿಯನ್ನು 'Have you got anything which is not meat, egg or fish' ಎಂದು ಕೇಳಿದರಂತೆ.

ಅದಕ್ಕೆ 'Yes, we have chicken, bacon fork ham etc' ಎಂದು ಉತ್ತರಿಸಿದಳು. ಗೊರೂರರು ಅವಳ ಮಾತು ಕೇಳಿ ಅರೆಕ್ಷಣ ಸ್ತಂಭೀಭೂತರಾಗಿರಬೇಕು.

ತಿಳಿಯಾದ ಹಾಸ್ಯ ಹೇಗೆ ಅವರ ಬರಹದಲ್ಲಿ ಹಾಸುಹೊಕ್ಕಾಗಿದೆಯೊ ಹಾಗೆಯೇ ಲಘು ವ್ಯಂಗ್ಯಬೆರೆತ ನಗೆಯೂ ಬೆರತಿದೆ. ಕಾರು ಪಾರ್ಕಿಂಗ್‌ಗೆ ಸ್ಥಳಾವಕಾಶ ಸಿಗದೆ, ಕಾರನ್ನು ನೆಲಮಾಳಿಗೆ ಪಾರ್ಕಿಂಗ್ ಲಾಟ್‌ನಲ್ಲಿ ಗಂಡ ಬಿಟ್ಟರೆ, ಹೆಂಡತಿ ಕಾರು ಓಡಿಸಿದರೆ ಇನ್ಸೂರೆನ್ಸ್ ಪ್ರೀಮಿಯಂ ಕಟ್ಟಬೇಕು, ಅಪಘಾತವಾದರೆ ಕೋರ್ಟು ವಿಧಿಸುವ ದುಬಾರಿ ದಂಡ ಕಟ್ಟಬೇಕು-ಈ ತಾಪತ್ರಯಗಳೇ ಬೇಡವೆಂದು ಅವಳೂ ನೆಲ ಮಾಳಿಗೆಯ ಪಾರ್ಕಿಂಗ್‌ಲಾಟ್‌ನಲ್ಲಿ ಕಾರನ್ನು ತಳ್ಳಿ ಗಂಡ ಹೆಂಡಿರು ನಡೆದುಕೊಂಡೇ ಹೋಗಬೇಕಾಗಿ ಬಂದುದನ್ನು ಗಮನಿಸಿದ ಗೊರೂರರು "ಹೀಗೆ ವೈಭವದಲ್ಲಿಯೂ ದಾರಿದ್ರ್ಯ; ಸಮೃದ್ಧಿಯಲ್ಲಿಯೂ ಕೊರತೆ. ಅಮೆರಿಕದಲ್ಲಿ ಇಂಥ ವಿರೋಧಾಭಾಸಗಳಿವೆ" ಎಂದು ವ್ಯಂಗ್ಯವಾಡಿರುವರು (ಪು. ೨೦). ಎಂಪೈರ್ ಸ್ಟೇಟ್ ಬಿಲ್ಡಿಂಗ್‌ನ ಮೆಟ್ಟಿಲುಗಳನ್ನು ಗೊರೂರರು ನಡೆದುಕೊಂಡೇ ಹತ್ತುತ್ತಿದ್ದಾಗ ಯಾರೋ ಅವರನ್ನು "ಛೆ ಛೆ ಎಲ್ಲಾದರೂ ಉಂಟೆ? ಇಲ್ಲಿ ಯಾರೂ ನಡೆದು ಹತ್ತುವುದೇ ಇಲ್ಲ. ಲಿಫ್ಟ್ ಇರುವುದೇ ಅದಕ್ಕಾಗಿ" ಎಂದರು. ಅದಕ್ಕೆ ಗೊರೂರರು ನಗುತ್ತ ಹೀಗೆಂದರು: "ನಾವು ಕೈಕಾಲುಗಳನ್ನು ಉಪಯೋಗಿಸದಿದ್ದಲ್ಲಿ ಅವು ಬಿದ್ದೇ ಹೋಗಬಹುದು. ದೇವರು ಇವನಿಗೆ ಈ ಅಂಗಗಳು ಬೇಕಿಲ್ಲವೆಂದು ಅವುಗಳನ್ನು ನಮ್ಮಿಂದ ಕಸಿದುಕೊಳ್ಳಬಹುದು. ನಿಮಗೇನೂ ಕೈಕಾಲು ಇಲ್ಲದಿದ್ದರೂ ನಡೆಯುತ್ತೆ. ಮೋಟಾರು ಲಿಫ್ಟ್‌ಗಳು ನಿಮ್ಮ ಸೇವೆಗೆ ಬರುತ್ತವೆ. ಆದರೆ ನಮಗೆ ಕೈಕಾಲು ಉಪಯೋಗಕ್ಕೆ ಬರದಿದ್ದರೆ ನಮ್ಮ ಕಥೆ ಮುಗಿದಂತೆಯೆ. ನಮ್ಮ ಬಸ್ಸುಗಳಲ್ಲಿ ನಾವು ನಿಂತುಕೊಳ್ಳುವುದಕ್ಕಾಗಿಯಾದರೂ ನಮ್ಮ ಕಾಲುಗಳು ಗಟ್ಟಿಯಾಗಿರಬೇಕು..." (ಪು.೪೩). ನ್ಯೂಯಾರ್ಕ್‌ನಲ್ಲಿ ಸಿಟಿಬಸ್‌ನಲ್ಲಿ ಕುಳಿತಾಗ-ಕಳೆದ ಅನೇಕ ವರುಷಗಳಿಂದಲೂ ಅನುಭವಿಸದಿದ್ದ ಆಶ್ಚರ್ಯವೂ ನಮಗೆ ಉಂಟಾಯಿತು ಎನ್ನುವ ಗೊರೂರರು "ಸಿಟಿಬಸ್ ಆದರೂ ಕ್ಯೂ ಇರಲಿಲ್ಲ. ಬಸ್ಸು ಗೊತ್ತಾದ ಕಾಲಕ್ಕೆ ಸರಿಯಾಗಿ ಠಾಕೋಠಾಕ್ ಬಂದಿತು...." ಎಂದು ಹೇಳಿ, ನಮ್ಮಲ್ಲಿನ ಬಸ್‌ಪ್ರಯಾಣದ ಆತುರಕಾತರ ನೂಕುನುಗ್ಗಲು ತುಳಿತ ಎಳೆತಗಳ ಅನುಭವದ ಹಿನ್ನೆಲೆಯಲ್ಲಿ ನಗೆಯಾಡುವರು (ಪು. ೩೨-೩೩). ಎಲ್ವಿಸ್‌ಪ್ರಿಸ್ಲೀಯು ಸತ್ತ ಒಂದು ತಿಂಗಳಿನೊಳಗಾಗಿ ಅವನ ಹಣವನ್ನು ಕದ್ದುಕೊಂಡು ಹೋಗುತ್ತಾರೆಂಬ ಸುದ್ದಿಯನ್ನು ಕೇಳಿದ ಗೊರೂರರ ಪ್ರತಿಕ್ರಿಯೆಯಿದು: "ಅಮೆರಿಕದವರು ಯಾವುದರಲ್ಲಿಯೂ ಹಣಸಂಪಾದನೆಯ ಗುರಿಯನ್ನೇ ಮುಖ್ಯವಾಗಿಟ್ಟುಕೊಂಡಿರುತ್ತಾರೆ. ಇತರ ವಿಷಯಗಳ ದೃಷ್ಟಿ ಇಲ್ಲವೇ ಇಲ್ಲ ಎಂದಲ್ಲ. ಆದರೆ ಅವೆಲ್ಲ ಗೌಣ. ಯಾವುದೂ ವ್ಯಾಪಾರಕ್ಕೆ ಒದಗಬೇಕು. ಹೆಣದಿಂದಲೂ ಅವರು ಹಣ ಸಂಪಾದನೆ ಮಾಡಲು ಪ್ರಯತ್ನಿಸುತ್ತಾರೆ" (ಪು. ೧೦೨).

ಅಮೆರಿಕನ್ನರ ವ್ಯಾಪಾರೀ ಮನೋಭಾವವನ್ನು ಮತ್ತೊಂದು ಸಂದರ್ಭದಲ್ಲಿ ಗೊರೂರರು ಹೀಗೆ ಲೇವಡಿ ಮಾಡುವರು: "ಅಮೆರಿಕದಲ್ಲಿ ಯಾವುದೂ ವ್ಯಾಪಾರವಾಗಬೇಕು, ವ್ಯಾಪಾರೀ ಸಾಧನವಾಗಬೇಕು. ಹಾಗಾದರೆ ಅದು ಎಷ್ಟೇ ಅಲ್ಪವಾದುದಾಗಿರಲಿ, ತುಚ್ಛವಾದುದಾಗಿರಲಿ ಅದಕ್ಕೆ ಒಂದು ಸ್ಥಾನ ಸಿಕ್ಕುತ್ತದೆ. ದೇವರು ಸಹ ವ್ಯಾಪಾರವಾಗುವ ಒಂದು ಮಾಲು ಆಗಿ ಬಂದರೆ, ಎಲ್ಲ ಅಮೆರಿಕನ್ನರೂ ಅತ್ಯಂತ ಗಾಢವಾದ ಭಕ್ತರಾಗುವುದರಲ್ಲಿ ಸಂದೇಹವಿಲ್ಲ." ಅಮೆರಿಕನ್ನರು ಕೇಳುವುದು ಒಂದೇ ಪ್ರಶ್ನೆ: 'ಅದು ಡಾಲರ್ ಆಗುತ್ತದೆಯೆ?' (ಪು. ೨೦೨). ವಿಶ್ವದ ಪ್ರತಿಭಾನ್ವಿತರನ್ನೆಲ್ಲಾ ತನ್ನೆಡೆಗೆ ಆಕರ್ಷಿಸುತ್ತಿರುವುದರ ರಹಸ್ಯ ಅದರ ಡಾಲರ್‌ನಲ್ಲಿದೆ ಎಂದು ಹೇಳುವ ಗೊರೂರರು ಆ ಸರ್ವಶಕ್ತಿ ಡಾಲರ್‌ನ ಮಹಿಮೆಯನ್ನು ಹೀಗೆ ವ್ಯಾಖ್ಯಾನಿಸುವರು: "ಎಲ್ಲ ಜನಾಂಗದವರ ವ್ಯಷ್ಟಿ ಅಮೆರಿಕದ ಸಮಷ್ಟಿಯಲ್ಲಿ ಮೂರ್ತೀಭವಿಸುತ್ತದೆ. ಅಮೆರಿಕದ ಅಭಿವೃದ್ಧಿ ತಮ್ಮ ಅಭಿವೃದ್ಧಿ ಎರಡೂ ಅವರಿಗೆ ಒಂದೇ ಆಗಿಬಿಡುತ್ತದೆ. ಇದಕ್ಕೆ ಕಾರಣ, ಅಮೆರಿಕದ ಸರ್ವಶಕ್ತಿ ಡಾಲರ್. ತನ್ನಲ್ಲಿಗೆ ಬಂದವರು ತನ್ನನ್ನೇ ಪ್ರೀತಿಸಿ ತನ್ನಲ್ಲಿಯೇ ಉಳಿದು, ತನ್ನಲ್ಲಿಯೇ ಲೀನವಾಗುವಂತೆ ಮಾಡುವ ಶಕ್ತಿ ಅಮೆರಿಕಕ್ಕೆ ಇದೆ..." (ಪು.೩೧).

ಸಾವಕಾಶವಾಗಿ ನಿಂತು ನೋಡಿದ್ದರ ಬಗೆಗೆ ವಿಶದವಾಗಿ ಹೇಳುವುದು ಗೊರೂರರ ಸ್ವಭಾವ. ವ್ಯಕ್ತಿಯೇ ಆಗಲಿ, ಪ್ರಕೃತಿಯೇ ಆಗಲಿ, ಸನ್ನಿವೇಶವೇ ಆಗಲಿ, ಸಾಮಾಜಿಕವಾದ ಅನಿಸಿಕೆಯೇ ಆಗಲಿ ಗೊರೂರರ ಲೇಖನಿಯಲ್ಲಿ ಮೂಡುವಾಗ ತನ್ನ ತಾಜಾತನವನ್ನು ಉಳಿಸಿಕೊಳ್ಳುತ್ತದೆ. ಗೊರೂರರ ಲೇಖನಿಯ ಮತ್ತೊಂದು ಗುಣವೆಂದರೆ ವಿಷಯ ನಿರೂಪಣೆ ಮಾಡುವಾಗ ಆದಷ್ಟು ವಸ್ತುನಿಷ್ಠವಾಗಿ ಉಪಯುಕ್ತ ಮಾಹಿತಿಗಳನ್ನು ಒಳಗೊಳ್ಳುತ್ತದೆ. ಎಲ್ವಿಸ್ ಪ್ರಿಸ್ಲೀ, ನಯಾಗಾರ ಜಲಪಾತ-ರಾಕೀ- ಪರ್ವತ-ಗ್ಲೇಸಿಯರ್ಸ್-ನ್ಯಾಷನಲ್ ಪಾರ್ಕ್, ವೈಜ್ಞಾನಿಕ ಪ್ರಗತಿ, ಟಿ.ವಿ. ಬಂದದ್ದರಿಂದ ಆದ ಸಾಮಾಜಿಕ ದುಷ್ಪರಿಣಾಮಗಳು, ಅಮೆರಿಕನ್ ಸಮಾಜದಲ್ಲಿ ಬೆಳೆಯುತ್ತಿರುವ ಹಿಂಸಾಪ್ರವೃತ್ತಿ ಇತ್ಯಾದಿ ವಿಷಯಗಳನ್ನು ಕುರಿತ ವರ್ಣನೆ ಗೊರೂರರ ಬರಹದ ಸ್ವರೂಪವನ್ನು ಪರಿಚಯಿಸುತ್ತದೆ.

ಗೊರೂರರು ಲಾಕಪ್ಪಿನಲ್ಲಿ ಒಂದು ರಾತ್ರಿ ಕಳೆದ ಪ್ರಸಂಗ ಬಲು ಸ್ವಾರಸ್ಯಕರವಾಗಿದೆ. ಮಿನಿಪೋಲೀಸ್ ನಗರಕ್ಕೆ ಮಿತ್ರರನ್ನು ನೋಡಲು ಗೊರೂರರು ಹೋಗಿದ್ದಾಗ ರಾತ್ರಿ ವೇಳೆಯಲ್ಲಿ ಹಾದಿ ತಪ್ಪಿದ್ದರು. ಕಣ್ಣಿಗೆ ಬಿದ್ದ ಪೋಲೀಸನಿಗೆ ತಮ್ಮ ಸಮಸ್ಯೆ ಹೇಳಿಕೊಳ್ಳಲು ಗೊರೂರರನ್ನು ಆತ ತನ್ನ ಮನೆಗೇ ಕಾರಿನಲ್ಲಿ ಕರೆದೊಯ್ದ. ಅಲ್ಲಿ ಬ್ರೆಡ್, ಹಾಲು, ಹಣ್ಣು, ಬಿಸ್ಕತ್‌ಗಳ ರಾತ್ರಿ ಊಟವಾಯಿತು. ಊಟವಾದ ನಂತರ ಪೋಲೀಸಿನವ "ನಮ್ಮ ಮನೆಯ ಹಾಸಿಗೆ ಅನೇಕ ದಿನಗಳಿಂದ ಉಪಯೋಗಿಸದೆ ಇರುವುದರಿಂದ ಧೂಳು ತುಂಬಿದೆ. ನೀವು ಏನೂ ತಿಳಿದುಕೊಳ್ಳದಿದ್ದರೆ, ಮಗ್ಗುಲಲ್ಲಿ ನನ್ನ ವಶದಲ್ಲಿಯೇ ಒಂದ ಲಾಕಪ್ ಇದೆ. ಗಾಳಿ ಬೆಳಕು ಸ್ವಚ್ಛವಾದ ಹಾಸಿಗೆ, ವಾರಕ್ಕೆರಡು

ಸಲ ಕ್ರಿಮಿನಾಶಕ ಸಾರಣೆ, ಅಲ್ಲಿ ಮಲಗಿಬಿಡಿ, ನಿಮಗೆ ಸೊಗಸಾದ ನಿದ್ರೆ ಬರುತ್ತೆ" ಎಂದನು. ರಾತ್ರಿ ಗೊರೂರರಿಗೆ ಸೊಗಸಾದ ನಿದ್ರೆಯೂ ಬಂದಿತು. ಬೆಳಗಾದ ನಂತರ ಅವರಿಗೆ ಅವರ ಮಿತ್ರರ ಮನೆಯೂ ದೊರಕಿತಂತೆ! (ಪು. ೨೨೮-೨೨೯)

ನೀಗ್ರೋಗಳು ಹಾದಿಯಲ್ಲಿ ನಡೆಸುವ ದರೋಡೆ, ಕೊಲೆಗಳ ಬಗೆಗೆ ಕೇಳಿದ್ದ ಗೊರೂರರಿಗೆ ಒಮ್ಮೆ ಆದ ಅನುಭವ ಈ ಬಗೆಯದು: ನ್ಯೂಯಾರ್ಕ್‌ನ ನೆಲ ಮಾಳಿಗೆಯ ರೈಲಿನಲ್ಲಿ ಗೊರೂರರು ಪ್ರಯಾಣ ಮಾಡುತ್ತಿದ್ದಾಗ ತಮ್ಮನ್ನು ಯಾರೋ ಅಪರಿಚಿತನೊಬ್ಬ ಹಿಂಬಾಲಿಸಿ ಬರುತ್ತಿರುವ ಸಂಶಯ ಬಂದಿತು. ಆ ಕಪ್ಪು ಮನುಷ್ಯನಿಂದ ತಮಗೆ ಅಪಾಯ ತಪ್ಪಿದ್ದಲ್ಲ ಎಂಬ ಹೆದರಿಕೆ ಆಯಿತು. ಆ ಸ್ಥಿತಿಯಲ್ಲಿ ಆತ ಗೊರೂರರನ್ನು ಮಾತನಾಡಿಸಿದ: "ನೀವು ಕನ್ನಡದವರೆ?" ಎಂದು. ಚಾಕು ಎಲ್ಲಿ ಹೊರಬರುತ್ತದೋ ಎಂದು ತಳಮಳಿಸುತ್ತಿದ್ದ ಗೊರೂರರಿಗೆ ಸಮಾಧಾನವಾಯಿತು. ಕಣ್ಣಿನಿಂದ ಆನಂದಭಾಷ್ಪ ಉದುರಿತು. ಗದ್ಗದ ಕಂಠದಿಂದಲೇ "ನೀವಾರು?" ಎಂದು ಗೊರೂರರು ಕೇಳಿದರು. ಅದಕ್ಕೆ ಆತ "ನಾನು ಗೋವೆಯ ಕನ್ನಡಿಗ. ನೀವು ಕನ್ನಡಿಗರಿರಬಹುದೆಂಬ ಸಂಶಯವಿತ್ತು. ನಾನು ಇಲ್ಲಿ ಬಂದು ಕೆಲವರ್ಷಗಳಾಗಿದ್ದರೂ ಒಬ್ಬ ಕನ್ನಡಿಗನ ಪರಿಚಯವೂ ನನಗೆ ಆಗಿಲ್ಲ. ಕನ್ನಡ ಮಾತು ಕಿವಿಗೆ ಬೀಳುವುದೆ ಎಂದು ಹಸಿದಿದ್ದೆ, ಕಾತುರನಾಗಿದ್ದೆ. ನಿಮ್ಮ ಕೈಯಲ್ಲಿದ್ದ ಡೈರಿ ನೋಡಿ ಧೈರ್ಯದಿಂದ ಮಾತನಾಡಿಸಿದೆ" ಎಂದನು.

ವಾಷಿಂಗ್‌ಟನ್‌ನಲ್ಲಿ ಗೊರೂರರು ಹಾಗೂ ಅವರ ಪತ್ನಿ ದಾರಿ ತಪ್ಪಿದರು. "ಇಲ್ಲೆ ಎಲ್ಲೊ ಒಂದು ಅಡ್ಡರಸ್ತೆ ಅದರಲ್ಲಿ ತಿರುಗಬೇಕು" ಎಂದು ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದಾಗ ಇದಕ್ಕಿದ್ದಂತೆ ಒಂದು ದಪ್ಪ ಗಡಸು ಧ್ವನಿ ಕನ್ನಡದಲ್ಲಿ "ನೀವು ಎಲ್ಲಿಗೆ ಹೋಗಬೇಕು" ಎಂಏತು. ಭಾಷೆಯ ಬಂಧನ ನಿಜವಾಗಿ ವರ್ಣನಾತೀತ. ಹೊರನಾಡಿನಲ್ಲಿ ಬಹಳ ದಿವಸಗಳ ನಂತರ ಇನಿದಾದ ಕನ್ನಡ ನುಡಿಯನ್ನು ಕೇಳಿದಾಗ ಗೊರೂರರಿಗೆ ಆದ ಆನಂದ ವರ್ಣನಾತೀತ. ಗೊರೂರರು ಹೇಳುತ್ತಾರೆ: "ತಾಯಿ ನಮ್ಮನ್ನು ಹೊತ್ತು ಹೆತ್ತು ಕೆಲವು ವರ್ಷ ಸಲಹುವಳು. ಆದರೆ ಭಾಷೆ ನಮ್ಮನ್ನು ಜೀವಮಾನವೆಲ್ಲ ಸಲಹುವುದು. ಅನಿರೀಕ್ಷಿತವಾಗಿ ಕನ್ನಡದಲ್ಲಿ ಅವನ ಪ್ರಶ್ನೆ ಕೇಳಿ ನನಗೆ ಸಂಭ್ರಮವೇ ಉಂಟಾಯಿತು." (ಪು. ೨೮೩)

ಗೊರೂರರು ಅಮೆರಿಕದಲ್ಲಿ ಸುತ್ತಾಡುತ್ತಿದ್ದರೂ ಅವರ ವ್ಯಕ್ತಿತ್ವ ಅದರಲ್ಲಿ ಕರಗಿ ಹೋಗುವುದಿಲ್ಲ. ಅಮೆರಿಕದಲ್ಲಿ ಅವರ ದೇಹವಿದ್ದರೂ ಮನಸ್ಸು ಮಾತ್ರ ಹಳ್ಳಿಯಲ್ಲಿಯೆ ಇರುತ್ತದೆ. ಹರೇಕೃಷ್ಣ ಪಂಥದವರೊಡನೆ ವಿಚಾರ ವಿನಿಮಯ ನಡೆಸುತ್ತಿದ್ದಾಗ-ಪ್ರಶ್ನೋತ್ತರ ಸಂದರ್ಭದಲ್ಲಿ ನಾಮದ ಮೇಲೆ ಬಿಸಿ ಚರ್ಚೆಯಾಗುತ್ತಿದ್ದಾಗ ಗೊರೂರರ ಮನಸ್ಸಿಗೆ ಅನ್ನಿಸಿದುದು ಇಷ್ಟೆ: "ಒಂದು ಗಳಿಗೆ ಅದು ನನಗೆ ಅಮೆರಿಕ ಎಂಬುದೇ ಮರೆತುಹೋಗಿ

ದಕ್ಷಿಣದೇಶದ ಯಾವುದೋ ಹಳ್ಳಿಯ ವೈದಿಕರ ಸಭೆ ಇರಬಹುದೇ?" (ಪು. ೧೫೦) ಎಂದು. ನ್ಯೂಯಾರ್ಕಿನ ಕನ್ನಡಿಗ ಡಾ. ಚಂದ್ರಶೇಖರ್‌ರವರ (ಡಾ. ಚಂದ್ರು ಇರುವುದು ಜಮೈಕಾ ಎಸ್ಟೇಟ್‌ನಲ್ಲಿ. ಆದ್ದರಿಂದ ಇವರನ್ನು ಗೊರೂರರು ಹಾಸ್ಯಕ್ಕೆ ಜಮೈಕಾ ಎಸ್ಟೇಟ್‌ನ ಜೋಡಿದಾರರು ಎಂದು ಕರೆದಿರುವರು) ಮನೆಯಲ್ಲಿ ಬೆಳಗಿನ ಜಾವ ಕಣ್ಣು ಬಿಡುವ ವೇಳೆಗೆ ಕಿವಿಯ ಮೇಲೆ ಲಕ್ಷ್ಮೀಸ್ತೋತ್ರ, ಪುರಂದಾಸರ ಹಾಡುಗಳು ಬಿದ್ದುವು. ನ್ಯೂಯಾರ್ಕಿನಲ್ಲಿ ಕನ್ನಡ ಹಾಡನ್ನು ಕೇಳಿದ ಗೊರೂರರಿಗೆ ಒಂದು ಕ್ಷಣ "ಇದ್ದಕ್ಕಿದ್ದಂತೆ ವಾತಾವರಣ ಕರ್ನಾಟಕದ ಹಳ್ಳಿಯಂತೆ ತೋರಿತು."(ಪು. ೨೪೮)

ಗೊರೂರರು ದೇಶ ಸುತ್ತಿಬಂದರೂ ಅವರ ಹುಟ್ಟಿದ ನೆಲದ ಮೇಲಣ ಅಭಿಮಾನ ಬತ್ತಲಿಲ್ಲ. ಅವರು ಇಲ್ಲಿನ ನಾಗರೀಕತೆ, ಸಂಸ್ಕೃತಿ, ಭಾಷೆ, ಜನ, ಪ್ರಕೃತಿ, ಜೀವನ, ಗಿಡ ಮರ, ಬಿಡುವು, ಅತ್ಯಾತುರವಿಲ್ಲದ ಚಿಂತನಪರ ವಿಚಾರಶೀಲ ಜೀವನ, ಆರ್ಷೇಯ ಧರ್ಮ, ಧಾರ್ಮಿಕ ಪುರುಷರು-ಅತ್ಯುತ್ತಮ ಎಂದು ನಂಬಿದವರು. ಇವುಗಳಿಗೆ ಸರಿಸಾಟಿಯಾದುದು ಪ್ರಪಂಚದಲ್ಲಿ ಬೇರೆಲ್ಲೂ ಇಲ್ಲವೆನ್ನುವ ಅಭಿಮಾನ, ಮೆಚ್ಚುಗೆ-ನಮ್ಮದು ಬಡದೇಶವಾದರೂ-ಅದು ನಮಗೆ ಒಗ್ಗಲಿಲ್ಲ. ಇಲ್ಲಿ ನೆಮ್ಮದಿ ಬಿಡುವು ಸ್ವಾಸ್ಥ್ಯ ಸ್ವಾತಂತ್ರ್ಯ ಅಲ್ಲಿ ದೊರಕಲಿಲ್ಲ." ಪ್ರವಾಸ ಮುಗಿಸಿ ಬಂದ ಮೇಲೆ ಗೊರೂರರಿಗಾದ ಅನಿಸಿಕೆ ಇದು.

ಗೊರೂರರ ಸ್ವದೇಶ ಪ್ರೇಮ ಅವರ ಪ್ರವಾಸ ಕಥನದಲ್ಲೂ ಹಲವಾರೂ ಕಡೆ ಇಣುಕಿಹಾಕಿದೆ. ಅವರು ಇಲ್ಲಿನ ನೆಲ, ಜಲ, ಬಾನು, ಕಾನು, ಬೆಟ್ಟ, ಗುಡ್ಡ, ಜನಮನ ಇವನ್ನು ಪ್ರೀತಿಸುವಷ್ಟು ಪ್ರಪಂಚದ ಬೇರಾವುದನ್ನೂ ಪ್ರೀತಿಸಲಾರರು. ರಾಕೀ ಪರ್ವತವನ್ನು ನೋಡಲು ಹೋಗಿದ್ದಾಗ ಅಲ್ಲಿ ಅಮೆರಿಕದ ಓರ್ವ ಭೂಗರ್ಭ ಶಾಸ್ತ್ರಜ್ಞರ ಪರಿಚಯ ಲಾಭ ಗೊರೂರರಿಗಾಯಿತು. ಆ ಮಹಾಶಯರು ಪ್ರಕೃತಿಯ ಆಶ್ಚರ್ಯಕರ ವೈಚಿತ್ರ್ಯಗಳಲ್ಲಿ ಒಂದಾದ ಗ್ಲೇಸಿಯರ್ಸ್ ಬಗ್ಗೆ ಮಾತನಾಡುತ್ತಾ "ಜಗತ್ತಿನಲ್ಲಿ ಇಂತಹ ಆಕರ್ಷಣೆ ಮತ್ತೊಂದಿಲ್ಲ" ಎಂದು ಹೇಳಿದಾಗ ಗೊರೂರರು ಆ ಮಾತನ್ನು ಒಪ್ಪದೆ ಅವರಿಗೆ ಹಿಮಾಲಯ ಪರ್ವತದ ಹಿರಿಮೆಯನ್ನು ವಿವರಿಸಹೊರಟರು (ಪು. ೧೦೫). ಮತ್ತೊಂದು ಸಂದರ್ಭದಲ್ಲಿ ಎಂಪೈರ್ ಭವನವನ್ನು ನೋಡಲು ಗೊರೂರರು ತಮ್ಮ ಅಮೆರಿಕನ್ ಮಿತ್ರರೊಡನೆ ಹೋಗಿದ್ದಾಗ ಮಿತ್ರರು ತಮ್ಮ ಮಾತಿನ ನಡುವೆ ಎಂಪೈರ್ ಭವನ ಅತ್ಯದ್ಭುತ ಎಂದು ನಾಲ್ಕಾರು ಸಲ ಹೇಳಿದರು. ಅಷ್ಟೇ ಆಗಿದ್ದರೆ ಸರಿಹೋಗುತ್ತಿತ್ತು. ಆ ಮಿತ್ರರು ಗೊರೂರರನ್ನು ನೀವು ಹಾಗೆ ಭಾವಿಸುವಿರಲ್ಲವೆ? ಎಂದು ಕೇಳಿಬಿಟ್ಟರು. ಮಿತ್ರರ ಈ ಅಭಿಮಾನ ಗೊರೂರರಿಗೆ ಚುಚ್ಚಿದಂತಾಯಿತು. ಅವರು ತಮ್ಮ ಮಿತ್ರರಿಗೆ ಹೀಗೆಂದರು: ನಿಜವಾಗಿ ಇದೊಂದು ದೊಡ್ಡ ಸಾಧನೆ. ಆದರೆ ಭಾರತದ ಸಾಧನೆಗೆ ಹೋಲಿಸಿದರೆ ಇದೇನೂ ಅಂಥ ಹೆಚ್ಚಲ್ಲ. ನೀವು ನೆಲದ ಮೇಲೆ ಸಾವಿರ ಅಡಿ ಕಟ್ಟಿದ್ದರೆ, ಭಾರತದ ಇಂಜಿನೀಯರುಗಳು ನೀರಿನ ಮೇಲೆ ಭಾಕ್ರಾನಂಗಲ್ ಕಟ್ಟೆಯನ್ನು ಸಾವಿರ

ಅಡಿ ಕಟ್ಟಿದ್ದಾರೆ. ಇನ್ನು ಕಲಾದೃಷ್ಟಿಯಿಂದ ನೋಡಿದರೆ ಶತಮಾನಗಳ ಹಿಂದೆ ಸೃಷ್ಟಿಯಾದ ನಮ್ಮ ದೇಶದ ತಾಜಮಹಲ್, ಬೇಲೂರು, ಹಳೇಬೀಡು ದೇವಾಲಯಗಳು, ಶ್ರವಣ ಬೆಳುಗೊಳದ ಭವ್ಯಮೂರ್ತಿ, ದಕ್ಷಿಣ ಭಾರತದ ದೇದೀಪ್ಯಮಾನ ಕಲಾಕೃತಿಗಳಾದ ಬೃಹತ್ ದೇವಾಲಯಗಳು, ಇವುಗಳಿಗೆ ಹೋಲಿಸಿದರೆ, ಈ ಕಲ್ಲು ಮರಳು ಕಬ್ಬಿಣ ಸಿಮೆಂಟ್ ರಾಸಿ ಬರಿಯ ಮಕ್ಕಳಾಟಿಕೆ." ಗೊರೂರರ ಈ ಉದ್ರೇಕದ ಮಾತನ್ನು ಕೇಳಿ ಅವರ ಮಿತ್ರರಿಗೆ ಸ್ವಲ್ಪ ಆಶ್ಚರ್ಯವೇ ಆಯಿತಂತೆ. (ಪು. ೪೫)

ಭಾರತದ ಪ್ರಕೃತಿ ಸೌಂದರ್ಯವನ್ನು ಬಹಳವಾಗಿ ಮೆಚ್ಚಿಕೊಂಡಿರುವ ಗೊರೂರರು "ಪ್ರಕೃತಿ ಸೌಂದರ್ಯದ ದೃಷ್ಟಿಯಲ್ಲಿ ಭಾರತ ಅಮೆರಿಕವನ್ನು ಮೀರಿಸಿದೆ. ಇಲ್ಲಿ ನಾನಾ ಬಗೆಯ ವೈವಿಧ್ಯಗಳಿವೆ, ವೈಶಿಷ್ಟ್ಯಗಳಿವೆ. ಮರ, ಬಳ್ಳಿ, ಬೆಟ್ಟ, ಸರಸ್ಸು, ನದಿ, ಕಣಿವೆ, ಜಲಪಾತ, ಕಟ್ಟೆ, ಪುಷ್ಪ ಫಲಗಳು, ಮಾನವರು, ಭೂಮಿಯ ಫಲವತ್ತು ಎಲ್ಲದರಲ್ಲಿಯೂ ಅಮೆರಿಕಕ್ಕಿಂತ ಭಾರತದಲ್ಲಿ ಹೆಚ್ಚಿನ ವೈವಿಧ್ಯವೂ ಆಕರ್ಷಣೆಯೂ ಇದೆಯೆಂಬುದು ನನ್ನ ಮತ" ಎಂದು ತಮ್ಮ ಖಚಿತ ನಿಲುವನ್ನು ಒಂದೆಡೆ ತಿಳಿಸಿರುವರು (ಪು. ೧೦೬). ಭಾರತದ ಎಲ್ಲೆಡೆ ನೋಡಿಬಂದಿರುವ ಅನುಭವಿಯ ಮಾತಿದು. ಪ್ರವಾಸಿಗಳಾಗಿ ವಿದೇಶಗಳಲ್ಲಿ ಸುತ್ತಾಡಿ ಬಂದವರಲ್ಲಿ, ಈ ಬಗೆಯ ನಿಲುವು ನಾನು ನೋಡಿದ್ದು ಗೊರೂರರೊಬ್ಬರಲ್ಲೇ; ಗೊರೂರರ ಈ ಅಭಿಮಾನ ಸ್ವಲ್ಪ ಅತಿಯಾಯಿತೆಂದು ಬೇರೆಯವರಿಗೆ ಅನ್ನಿಸಬಹುದು. ಇದು ದುರಭಿಮಾನವೇನಲ್ಲ. ತನ್ನಲ್ಲಿನ ಒಳಿತನ್ನು ಕಾಣಲಾಗದ ಕಣ್ಣು ಬೇರೆಲ್ಲೂ ಅದನ್ನು ಗುರುತಿಸಲಾರದು. ತನ್ನ ಸೋದರಿಯನ್ನು ಪ್ರೀತಿಸಲಾರದವನು, ಬೇರಾರನ್ನೂ ಸೋದರಿ ಎಂದು ಪ್ರೀತಿಸಲಾರ. ಸ್ವದೇಶಾಭಿಮಾನ ಗೊರೂರರ ರಕ್ತದಲ್ಲಿ ಸೇರಿಹೋಗಿದೆ. ಅವರು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ನಿಂತು ಸೆರೆಮನೆ ಕಂಡವರು. ಗಾಂಧೀ ತತ್ವಗಳಿಗೆ ಮಾರುಹೋಗಿ ಖಾದಿ ಧರಿಸಿದವರು. ಸ್ವದೇಶ ಪ್ರೇಮದ ದೀಕ್ಷೆ ತೊಟ್ಟವರು. ಇಂದಿಗೂ ಅವರು ಹಳೆಯ ಗೊರೂರರೇ. ಸ್ವಾತಂತ್ರ್ಯ ಬಂದು ದೇಶದಲ್ಲಿ ಏನೆಲ್ಲ ಬದಲಾವಣೆಗಳಾಗಿದ್ದರೂ ಗೊರೂರರು ಮಾತ್ರ ಬದಲಾಗಲಿಲ್ಲ, ಅವರ ದೇಶಪ್ರೇಮ ಬತ್ತಿ ಹೋಗಲಿಲ್ಲ. ಹಾಗೆ ನೋಡಿದರೆ, ಸ್ವಾತಂತ್ರ್ಯಾನಂತರ ಸ್ವದೇಶಪ್ರೇಮ ಎಷ್ಟು ಜನರಲ್ಲಿ ಸ್ಥಾಯಿಯಾಗಿ ಉಳಿದಿದೆ? ಎಷ್ಟರಮಟ್ಟಿಗೆ ಅಪ್ಪಟವಾಗಿದೆ? ಇವು ನಾವು ಇಂದು ಕೇಳಿಕೊಳ್ಳಬೇಕಾದ ಪ್ರಶ್ನೆ. ಅಮೆರಿಕಕ್ಕೆ ಹೋಗಿ ಯಾವ ಪದಾರ್ಥವನ್ನೂ ಕೊಂಡುಕೊಳ್ಳದೆ, ಮಿತ್ರರು ಧಾರಳವಾಗಿ ಬಳಸಿ ಎಂದು ಕೊಟ್ಟಿದ್ದ ಅವರ ಕ್ರೆಡಿಟ್ ಕಾರ್ಡುಗಳನ್ನು ಮತ್ತೆ ಅವರಿಗೆ ವಾಪಸ್ಸು ಕೊಟ್ಟು ಭಾರತಕ್ಕೆ ಬರಿಗೈಯಲ್ಲಿ ಬಂದ 'ಕೀರ್ತಿ' ಗೊರೂರರದು; ಏನನ್ನೂ ತರದ ಗೊರೂರರ ಮೇಲೆ ಅವರ ಬಂಧುಗಳ ಕೋಪ ಇನ್ನೂ ಶಾಂತವಾಗಿಲ್ಲವಂತೆ (ಪು.೩೨೩). ಬಹುಶಃ ಈ ತಪ್ಪಿಗಾಗಿ ಅವರನ್ನು ಅವರ ಬಂಧುಗಳು ಕ್ಷಮಿಸಲಾರರು.

ಗೊರೂರರ ಭಾಷೆ ವರ್ಣನಪರವಾದಾಗ ತೀರಾ ಸರಳವಾಗುತ್ತದೆ. ಒಮ್ಮೊಮ್ಮೆ ಗೊರೂರರ ಅಂತರಂಗದಲ್ಲಿನ ಕವಿ ಎಚ್ಚರಗೊಳ್ಳುವನು. ಆಗ ವರ್ಣನೆ ಭಾವಗೀತಾತ್ಮಕ-ವಾಗುತ್ತದೆ. ಉದಾಹರಣೆಗೆ ಕೆಲವನ್ನು ನೋಡಬಹುದು: "ಉಕ್ಕಿನ ಬೆಳ್ಳಿಯ ಆ ಮೆಟ್ಟಿಲುಗಳೂ, ಅದೃಶ್ಯ ಕರಗಳಿಂದ ಚಾಲಿತವಾಗಿ, ಸರ್ಪದ ಮೈನಂತೆ ಹೊಳೆಯುವ ಕಣ್ಣುಗಳುಳ್ಳವಾಗಿ, ತೇಲಿಕೊಂಡು ಬರುವಾಗ, ಮೊದಲ ಹೆಜ್ಜೆಯನ್ನಿಡಲು ಅಭ್ಯಾಸವಿಲ್ಲದವರಿಗೆ ಕಾಲನ್ನು ಎಳೆದುಕೊಂಡು ಪಾತಾಳಕ್ಕೇ ಹೋಗಿಬಿಡುವವೋ ಎಂದು ಭಯವಾಗುತ್ತದೆ." (ಪು. ೧೦); "ನದಿಯ ನೀರು ಬೆಳ್ಳಿಯ ತಗಡಿನಂತೆ ಪ್ರಖರವಾಗಿ, ಅದರ ಮೇಲೆ ಉದ್ದಕ್ಕೂ ಎತ್ತರದಲ್ಲಿ ಹತ್ತಿಯ ತಳು ಪೊರೆಯಂತೆ ಮಂಜು ಮುಸುಕಿದ್ದು, ನದಿ ನನಗೆ ತುಂಬ ಆಕರ್ಷಣೀಯವಾಗಿ ಕಾಣಿಸಿತು." (ಪು.೧೬) (ಪು.೧೬) ಎಂಪೈರ್ ಭವನದ ಮೇಲೆ ನಿಂತು ನೋಡಿದಾಗ "ಅಲ್ಲಲ್ಲಿ ಬೆಳ್ಳಿಯ ಹಚ್ಚಡಗಳಂತೆ ಹೊಳೆಯುತ್ತಿರುವ ಕೆರೆಗಳು ಸರೋವರಗಳು" ಕಾಣಿಸಿದವು. (ಪು.೪೧); "ಒಂದೆಡೆ ಪ್ರಕೃತಿ ನಿರ್ಮಿಸಿರುವ ಸ್ವಾಭಾವಿಕ ಅದ್ಭುತ ರಮ್ಯ; ಮತ್ತೊಂದೆಡೆ ಅದಕ್ಕೆ ಪ್ರತಿಯಾಗಿ ಅಥವಾ ಸಮಾನವಾಗಿ, ಮನುಷ್ಯ ತನ್ನ ಶಕ್ತಿಯಿಂದ ನಿರ್ಮಿಸಿರುವ ಒಂದರೊಂದಿಗೆ ಒಂದು ಸ್ಪರ್ಧಿಸುತ್ತಲಿದೆಯೋ ಎಂಬಂತಿದೆ ಈ ಬೃಹತ್ ಪೌರುಷ ಪ್ರಕಾಶನ ಗಗನಚುಂಬಿ ಭವನ." (ಪು.೪೧); "ಆ ಎತ್ತರದಲ್ಲಿ ನಿಂತು ಸುತ್ತಲ ನೂರಾರು ಮೈಲಿಗಳ ವಿಸ್ತಾರ ಜಗತ್ತನ್ನೂ, ೬೦ ಮೈಲಿ ದೂರದಲ್ಲಿ ಸಮುದ್ರದಲ್ಲಿ ಸಂಚರಿಸುತ್ತಿದ್ದ ಹಡಗುಗಳನ್ನೂ ನೋಡಿದಾಗ, ನಾನು ನನ್ನ ಸಣ್ಣ ಹಳ್ಳಿ ಇವೆಲ್ಲ ಮರೆತೇ ಹೋಗಿ, ನಾನು ವಿಶಾಲ ಜಗತ್ತಿನ ಭಾಗವು ಅಖಿಲ ಮಾನವಕೋಟಿಯ ಭಾಗವು ಆದ ಅನುಭವವುಂಟಾಯಿತು. ಸಾಂಕೇತಿಕವಾಗಿ ನಾವು ಎಷ್ಟು ಎತ್ತರದಿಂದ ಜಗತ್ತನ್ನು ನೋಡುತ್ತೇವೆಯೋ, ಅಷ್ಟು ಮಾನವಕೋಟಿಯ ಸಹಭಾಗಿಯಾಗುತ್ತೇವೆಂಬ ಭಾವ ನನ್ನಲ್ಲಿ ದೃಢವಾಯಿತು. ಹೀಗೆ ಬ್ರಹ್ಮಾಂಡದೊಂದಿಗೆ ಅಖಿಲ ವಿಶ್ವದೊಂದಿಗೆ ನನ್ನ ಮಿಳನದಿಂದ ನನಗೆ ಸಮಸ್ತ ಆಯಾಸವು ಪರಿಹಾರವಾಗಿ ಮನಸ್ಸು ಹಗುರವೇ ಆಯಿತು." (ಪು. ೪೩-೪೪ ); "ಸುತ್ತಲೂ ವಿಶಾಲವಾದ ಪರ್ವತ ಶಿಖರಗಳು; ಅವುಗಳ ಮೇಲೆ ಪೂರ್ತ ಕರಗಿಸಿದ ಬೆಳ್ಳಿಯ ತಗಡಿನಂತೆ ಮುಚ್ಚಿರುವ, ಪ್ರಖರವಾದ ಹೊಳಪಿನ ಹಿಮರಾಶಿ; ಮೇಲಿಂದ ಬೆಳಗಿನವರೆಗೆ ಹದಿನಾಲ್ಕರಿಂದ ಮೂವತ್ತು ಮೈಲಿ ವಿಶಾಲವಾದ ಸರೋವರಗಳು. ಹೀಗೆ ಕಣ್ಣಿಗೆ ಕಾಣುವವರೆಗೆ, ಪ್ರದೇಶವೆಲ್ಲ ಒಂದು ಅಗಾಧ ಬೆಳ್ಳಿಯ ಬಟ್ಟಲಿನಂತೆ ತೋರುವುದು. ಇನ್ನೂ ಅನೇಕ ಕಡೆ ಮಂಜು ನೆಲದ ಮೇಲೆ ಬಿದ್ದು, ಪಾದರಸದ ರಾಶಿಯಂತೆ ಥಳಥಳಿಸುತ್ತಿರುವುದು." (ಪು. ೧೦೪)

ನಯಾಗಾರದ ಹೋಟಲ್ಲಿನ ಸಂಭಾಗಣದ ಭೋಗವಿಲಾಸದ ವರ್ಣನೆಯನ್ನು ಗೊರೂರರ ಮಾತುಗಳಲ್ಲೇ ಕೇಳಬೇಕು: "ಅದು ಅತ್ಯಂತ ಸುಂದರವಾಗಿ ಅಲಂಕರಿಸಿದ್ದ

ವಿಶಾಲವಾದ ಸಂಭಾಗಣ. ಅದು ಒಳಗಡೆ ರೀತಿಯ ಗೋಳಾಕಾರವಾಗಿ ಆಕಾಶದಂತೆ ದಿಗಂತ ಅಂಚಿನಲ್ಲಿ ಕಾಣುತ್ತಿದೆಯೋ ಎಂಬ ರೀತಿ ಬಾಗಿದ್ದ ಮೇಲ್ಹಾವಣಿ. ಅದರ ವರ್ಣ, ತೆಳುವಾದ ನೀಲಿ. ಆ ದೀಪ ವಿನ್ಯಾಸ, ಭವನದ ಮೇಲ್ಹಾವಣಿಯ ವೈಶಾಲ್ಯಕ್ಕೆ ಒಂದು ಮಿತಿ ಇದ್ದರೂ, ಅನಂತವಾದ ಮಿತಿಯಿಲ್ಲದ ಆಕಾಶದಂತೆ ಕಣ್ಣು ಕಾಣುವವರೆಗೆ ಪಸರಿಸಿರುವಂತೆ ತೋರುತ್ತಿದ್ದಿತು. ಗೋಡೆಗಳಿಗೆಲ್ಲ ನಿಲುಗನ್ನಡಿ ಸೇರಿಸಿದುದರಿಂದ, ಇದ್ದ ಅಗಲ ವೈಶಾಲ್ಯ ಸಹ, ಅಪಾರವಾಗಿದ್ದಿತು. ಸುಗಂಧ ಸೆಂಟು ಪರ್‌ಫ್ಯೂಮ್ ಪ್ಯಾರಿಸ್, ಜಾಸ್ಮೈನ್ ಇವುಗಳ ಘಾಟು ಬಾಗಿಲಿಗೇ ಹೊಡೆಯುತ್ತಿದ್ದಿತು. ಒಂದು ಮೃದುವಾದ ಹಿತವಾದ ಆತುರ-ಕಾತರವಿಲ್ಲದ, ಮನಸ್ಸನ್ನೂ ಮತ್ತುಗೊಳಿಸುವ, ಸಾಂತ್ವನಗೊಳಿಸುವ ಒಂದೇ ನಾದದ ವಾದ್ಯ ಸಂಗೀತ, ಭವನವೆಲ್ಲ ತುಂಬಿತ್ತು. ದೇವಲೋಕದ ಅದ್ಭುತ ಸೌಂದರ್ಯದಂತಹ ಮೈಯಿನ ಮಾಟವಾದ ಆಕಾರದ ಎಂತಹ ಜಿತೇಂದ್ರಿಯರ ಎದೆಯನ್ನೂ ನಡುಗಿಸುವ ಯುವತಿಯರ ಗಡಣ; ನಾವು ನಿದ್ರೆಯಿಂದ ಎಚ್ಚೆತ್ತು ಕನಸು ಕಾಣುತ್ತಿರುವೆವೋ ಎಂದು ನಮ್ಮ ಕಣ್ಣುಗಳನ್ನು ತಿಕ್ಕಿ ತಿಕ್ಕಿ ನೋಡಿದೆವು... ಒಂದು ಸಂದರ್ಭದಲ್ಲಿ ವೇದಾಂತಿ ಬರ್ಟ್‌ರೆಂಡ್ ರಸಲ್‌ರವರೇ ಅಮೆರಿಕದ ಮಹಿಳೆಯರನ್ನು 'Women of supreme and tremensdous beauty' ಸುರಸುಂದರಿಯರು ಎಂದು ಕರೆದರು. ಭವನದಲ್ಲಿ ಹೆಚ್ಚಾಗಿ ತುಂಬಿದ್ದವರು ಅವರೇ. "ವರುಣಸೂನು ಜಯಂತ ನಳಕೂಬರರು, ಸಮ್ಮುಖವನೊಮ್ಮೆ ಕಾಣದೆ, ವರುಷವೋಲೈಸುವರು ಸೌಧದ ದಾರವಟ್ಟದಲಿ" "ವಿಗಡ ತಪಸಿನ ದೇವದೈತ್ಯರ ಮುಕುಟವಾಂತುದು ವಾಮಪಾದವು" ಎಂದೂ ಊರ್ವಶಿಯ ವರ್ಣನೆಯಲ್ಲಿ ಕುಮಾರವ್ಯಾಸ ಹೇಳಿದುದು ನನ್ನ ನೆನಪಿಗೆ ಬಂದಿತು. ಅಲ್ಲಿ ಊರ್ವಶಿ,ಮೇನಕಾ, ರಂಭೆ, ಘೃತಾಚಿ, ತಿಲೋತ್ತಮೆ ಎಲ್ಲರೂ ಇದ್ದರು..." (ಪು. ೮೭-೮೮)

ಲಾಸ್ ಎಂಜಲಿಸ್ ನಗರವನ್ನು 'ರಾಕ್ಷಸರ ನಗರ' ಎಂದು ಗೊರೂರರು ಕರೆದಿರುವರು. ಅದಕ್ಕೆ ಕಾರಣ ಅಲ್ಲಿ ನಿಶೆ ಇಲ್ಲ. ಯಾವಾಗಲೂ ಹಗಲು. ಗೊರೂರರ ಸರಳ ಆದರೆ ಪರಿಣಾಮಕಾರಿಯಾದ ವರ್ಣನೆಗೆ ಲಾಸ್ ಏಂಜಲಿಸ್ ಒಂದು ಸೊಗಸಾದ ಉದಾಹರಣೆ:

"ನಗರದ ಉದ್ದಕ್ಕೂ ಸಮುದ್ರ ದಡ. ಇದಕ್ಕೆ ಲಾಂಗ್ ಬೀಚ್ ಎಂದೇ ಹೆಸರು. ಸಮುದ್ರದಿಂದ ಹತ್ತು ಅಡಿ ದೂರದಲ್ಲಿಯೇ ಭಾರಿ ಭಾರಿ ಭವನಗಳು, ಹೋಟಲುಗಳು, ಕೊಠಡಿಗಳು-ಹೆಚ್ಚು ಕಡಿಮೆ ಸಮುದ್ರವು ಕಟ್ಟಡಗಳ ಕಾಲು ತೊಳೆಯುತ್ತಿರುತ್ತದೆ. ಒಂದು ಕಡೆ, ಅವಿರತವಾಗಿ ಚಲಿಸುತ್ತ ಯಂತ್ರದಿಂದಲೊ ಎಂಬಂತೆ ಭ್ರಮಣೆಯನ್ನು ಹೊಂದುತ್ತಿರುವ ನಗರ, ಮತ್ತೊಂದಡೆ ಹಗಲು ರಾತ್ರಿ ಎನ್ನದೆ ಮಿಂಚಿನ

ಹೊಳಹಿನೊಂದಿಗೆ ಅಲೆಗಳನ್ನು ಎಬ್ಬಿಸುತ್ತ, ನಗರದ ಜಂಗಮ ಜೀವಕ್ಕೆ ಸರಿಸಾಟಿ ಅವಿಚ್ಛಿನ್ನವಾಗಿ ತರಂಗನಾದವನ್ನು ಎಬ್ಬಿಸುತ್ತಿರುವ ಸಮುದ್ರ. ಈಗ ನೋಡಿದರೆ, ನಮಗೆ ಸಮುದ್ರ ಮತ್ತು ನಗರ ಒಂದರತಾಳಕ್ಕೆ ಒಂದು ಕುಣಿಯುತ್ತಿದೆಯೋ ಎಂಬಂತೆ ತೋರುತ್ತದೆ. ಒಂದರೊಡನೊಂದು ಸ್ಪರ್ಧಿಸುತ್ತಿದೆಯೋ ಎಂದು ತೋರುತ್ತದೆ. ಸ್ಪರ್ಧಿಸಿದರೂ ಕೊನೆಗೆ ಸಮುದ್ರವೇ ಗೆಲ್ಲಬಹುದೇನೊ, ಯಾಕೆಂದರೆ ಸಮುದ್ರ ಪ್ರಕೃತಿ; ಮೊದಲು ಹುಟ್ಟಿದುದು; ಪಂಚಭೂತಗಳಲ್ಲಿ ಅದು ಪ್ರಬಲವಾದುದು... ಯಾರಿಗೆ ಗೊತ್ತು ಪಾಶ್ಚಿಮಾತ್ಯ ರಾಷ್ಟ್ರಗಳು ಹೀಗೆಯೇ ಯಾಂತ್ರಿಕ ನಾಗರೀಕತೆಯನ್ನು ಅಭಿವೃದ್ಧಿ ಪಡಿಸುತ್ತ-ಕೊನೆಗೆ ಜಗತ್ತಿಗೆ ಮಾನವನ ಅವಶ್ಯಕತೆಯೇ ಇಲ್ಲವೆಂಬಂತೆ ಮಾಡಿದರೆ-ಲಾಸ್ ಏಂಜಲಿಸ್ ಹೋಗಿ ಸಮುದ್ರವೇ ಉಳಿಯಬಹುದು." (ಪು.೧೯೧-೧೯೨) "ಕಷ್ಟಪಟ್ಟು ಕೆಲಸ ಮಾಡುವುದರಲ್ಲಿ, ವ್ಯಕ್ತಿ ಪ್ರಾಮಾಣಿಕತೆಯಲ್ಲಿ, ಸ್ವಚ್ಛತೆಯಲ್ಲಿ, ಅಸೂಯಾರಾಹಿತ್ಯದಲ್ಲಿ, ನಾಡನ್ನು ಸರ್ವಸೌಖ್ಯವಾಗಿ ಮಾಡುವುದರಲ್ಲಿ ಅಮೆರಿಕದವರು ಒಂದು ಆದರ್ಶವಾಗಬಲ್ಲರು." (ಪು. ೧೦೬)

"ಅಮೆರಿಕದಲ್ಲಿ ನಮಗೆ ಎದ್ದು ಕಾಣುವ ಅಂಶವೆಂದರೆ ಅಮೆರಿಕ ಸರ್ಕಾರ ಮತ್ತು ಜನತೆ ಸರ್ವರಿಗೂ ಸರ್ವಸೌಖ್ಯವನ್ನು ಒದಗಿಸಿರುವುದು. ಅದು ಬಹುಜನರ ಬಹುಸುಖವಲ್ಲ, ಸರ್ವರ ಸರ್ವಸುಖ, ಅಲ್ಲಿಯ ಸರ್ಕಾರ ಜನತೆಗೂ ಜನತೆ ಪರಸ್ಪರರಿಗೂ ಸತತವಾದ ಸೇವೆ ಮಾಡುವುದರಲ್ಲಿ ಅಲಸಿಕೆಯಿಲ್ಲದೆ ತೊಡಗಿದೆ. ಅಮೆರಿಕ ಜಗತ್ತಿನ ಅತ್ಯಂತ ಧನಿಕ ಮತ್ತು ಸಮೃದ್ಧವಾದ ರಾಷ್ಟ್ರ ಎಂತೋ ಹಾಗೆಯೇ, ತುಂಬ ಕಷ್ಟಪಟ್ಟು ಕೆಲಸವನ್ನು ಮಾಡುವ, ದೇಶವನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಜನತೆಯ ರಾಷ್ಟ್ರ. ಈ ಭಾಗದಲ್ಲಿ ನಾವು ಅಮೆರಿಕದಿಂದ ಕಲಿತು ಆಚರಿಸಬೇಕಾದ ಅಂಶಗಳು ಅನೇಕ ಇವೆ." (ಲೇಖಕನ ಮಾತು, ಪು. XXIII)

ಮೇಲಿನ ಮಾತುಗಳು ಗೊರೂರರು ಅಮೆರಿಕದ ಸರ್ವಾಂಗೀಣ ಪ್ರಗತಿಯನ್ನು ಕಣ್ಣಾರೆ ನೋಡಿ ಪ್ರಾಮಾಣಿಕವಾಗಿ ಮೆಚ್ಚಿ ಆಡಿದ ಮಾತುಗಳು. ಇವು ಬರಿಯ ಹೊಗಳಿಕೆಯ ಮಾತಲ್ಲ, ನಮ್ಮನ್ನು ಎಚ್ಚರಿಸುವ ಮಾತುಗಳೂ ಆಗಿವೆ. ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ, ಅಣುಶಕ್ತಿ ಸಹವಾಸ-ಇವೆಲ್ಲವುಗಳಿಂದ ಅಮೆರಿಕ ಇಂದು ಮುಂದುವರಿದ ಬಲಿಷ್ಠ ರಾಷ್ಟ್ರವಾಗಿದೆ. ಇವುಗಳ ಉಪಯೋಗ ಪಡೆದ ಅಮೆರಿಕ, ಅತ್ಯಾಧುನಿಕ ವಿಜ್ಞಾನದ ಎಲ್ಲ ಸೌಕರ್ಯಗಳನ್ನು ಪಡೆದ ಅಮೆರಿಕ ಇದೀಗ ಕಣ್ಣು ಬಿಡುತ್ತಿರುವ ಭಾರತದಂತಹ ಬೆಳೆಯುತ್ತಿರುವ ರಾಷ್ಟ್ರಕ್ಕೆ ವಿಸ್ಮಯದ ಬಾಗಿಲುಗಳನ್ನು ಒಂದೊಂದಾಗಿ ತೆಗೆದು ತೋರಿಸಿ ದಂಗುಬಡಿಸಬಹುದು. ಈ ಸಮೃದ್ಧಿ ವೈಭವಗಳ ನಡುವೆ ಅಮೆರಿಕನ್ನರು ಸುಖಿಯಾಗಿರುವರೆ? ಈ ಪ್ರಶ್ನೆಗೆ ಉತ್ತರವನ್ನು ಗೊರೂರರು

ಹುಡುಕಿದ್ದಾರೆ. ಅಮೆರಿಕದ ಸುತ್ತಾಟದಲ್ಲಿ ಗೊರೂರರು ಅದರ ಸುಖದ ಒಂದು ಮುಖವನ್ನೂ ಕಂಡಿದ್ದಾರೆ.

ಅಮೆರಿಕದಲ್ಲಿ ಟೆಲಿವಿಷನ್‌ನಿಂದಾಗಿ ಅನೇಕ ಕೇಡುಗಳು ಸಂಭವಿಸುತ್ತದೆ. ಮೊದಲನೆಯದಾಗಿ ಅಮೆರಿಕದ ಜನ ಮಾತನಾಡುವುದೇ ಕಡಿಮೆ. ಟೆಲಿವಿಷನ್ ಬಂದ ಮೇಲಂತೂ, ಒಬ್ಬರನ್ನೊಬ್ಬರು ನೋಡಿ ಮಾತನಾಡುವುದಕ್ಕೆ ಹೋದರೂ, ಟೆಲಿವಿಷನ್ ನೋಡುತ್ತಾ ಮೌನವಾಗಿ ಕುಳಿತುಬಿಡುವರು. ಮನೆಯಲ್ಲಿ ತಂದೆ ತಾಯಿ ಮಕ್ಕಳಲ್ಲಿ ಸಂಭಾಷಣೆ ಕಡಿಮೆಯಾಗಿದೆ. ಟೆಲಿವಿಷನ್ ನೋಡುವುದರಿಂದ ಬಾಲಾಪರಾಧಗಳೂ ಹೆಚ್ಚುತ್ತಿವೆ. ಈ ಅಪರಾಧಗಳಲ್ಲಿ ಕಳುವಿನಿಂದ ಹಿಡಿದು ಖೂನಿಯವರೆಗೆ ಇವೆ. ಕಳವು, ಕೊಲೆ ಮಾಡುವುದನ್ನು ಟೆಲಿವಿಷನ್ ನೋಡಿ ಕಲಿಯುತ್ತಿದ್ದಾರೆ.

ಬಾಲಾಪರಾಧಿಗಳು ನ್ಯಾಯಾಲಯಗಳಿಗೆ ತಲೆನೋವಾಗಿವೆ. ಈಚಿನ ದಿನಗಳಲ್ಲಿ ಹಿಂಸಾ ಪ್ರವೃತ್ತಿ ಹೆಚ್ಚಾಗಿ ಖೂನಿ ಸಹಾ ಅಮೆರಿಕದ ಬಾಲಕರಿಗೆ ಆಟವಾಗಿದೆ. ಕೊಲೆ ಲೂಟಿ ಅಮೆರಿಕನ್ ಸಮಾಜದಲ್ಲಿ ಸಾಮಾನ್ಯವಾಗಿಬಿಟ್ಟಿದೆ. ಗೊರೂರರು ಹೇಳುವಂತೆ ಅದರ ಘೋರ ಸ್ವರೂಪ ಹೇಗಿದೆಯೆಂದರೆ. "ಒಬ್ಬ ಮಹಿಳೆಗೆ ಲಾಟರಿಯಲ್ಲಿ ಒಂದು ಮಿಲಿಯನ್ ಡಾಲರ್ ಬಂತು. ಆಕೆಗೆ ಭಯ ಹತ್ತಿಕೊಂಡಿತು. ತನ್ನ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಬಾರದೆಂದು ಆಕೆ ಲಾಟರಿ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಳು. ಅವರು ಪ್ರಕಟಿಸಲಿಲ್ಲ. ಆದರೆ ಜನ ಬಿಡಬೇಕಲ್ಲ? ಎಲ್ಲರಿಗಿಂತ ಹೆಚ್ಚಾಗಿ ಪತ್ರಿಕೆಯವರು ಬಿಡಬೇಕಲ್ಲ? ಕೊನೆಗೆ ಹೆಸರನ್ನು ಪತ್ತೆ ಹಚ್ಚಿ, ಪ್ರಕಟಿಸಿಯೇ ಬಿಟ್ಟರು. ಗೊರೂರರಿಗೆ ಅಲ್ಲಿಯವರೆಗೆ ಆಕೆಯ ಕೊಲೆ ಅಥವಾ ಲೂಟಿ ಆದ ಸುದ್ದಿ ಬಂದಿರಲಿಲ್ಲ!" (ಪು.೨೧೧)

'ನನ್ನದು ಅಲೆಮಾರಿ ಸ್ವಭಾವ' ಎಂದು ಗೊರೂರರು ಒಂದೆಡೆ ಹೇಳಿಕೊಂಡಿರುವರು. ಇದು ಅವರಿಗೆ ಸಮೃದ್ಧವಾದ ಅನುಭವ ಸಂಪತ್ತನ್ನು ತಂದುಕೊಟ್ಟಿದೆ. ಗೊರೂರರು ಅಮೆರಿಕೆಯನ್ನು ಹತ್ತಿರದಿಂದ ನೋಡಿ, ಜನರೊಡನೆ ಕಲೆತು ಬಹು ದೊಡ್ಡ ಅನುಭವವನ್ನು ಗಳಿಸಿರುವರು. ಈ ಅನುಭವಗಳಲ್ಲಿ ಬಹುಪಾಲು ಗೊರೂರರಿಗೆ ಮಾತ್ರ ಆಗುವಂಥಹವು. ಸರಸ ಶೈಲಿಯ ಈ ಪ್ರವಾಸಾನುಭವವನ್ನು ಓದುವುದರಿಂದ ನಮ್ಮ ಜ್ಞಾನದ ದಿಂಗತವು ಇನ್ನಷ್ಟು ವಿಸ್ತರಿಸುವುದಲ್ಲಿ ಸಂಶಯವಿಲ್ಲ. ಡಾ. ಹಾ.ಮಾ. ನಾಯಕರು ಹೇಳುವಂತೆ "ನಮ್ಮ ನಾಡವರು ಇಂಥದೊಂದು ಪುಸ್ತಕವನ್ನು ಓದುವ ಅವಕಾಶವನ್ನು ಕಳೆದುಕೊಳ್ಳಬಾರದು."

ಪತ್ರಿಕಾರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ನಾಗರಾಜರಾವ್‌ರವರು ಈಗ್ಗೆ ಹತ್ತು ವರ್ಷಗಳ ಹಿಂದೆ ಅಮೆರಿಕನ್ ಸರಕಾರದ ಅತಿಥಿಯಾಗಿ ಅಮೆರಿಕೆ-ಯನ್ನೊಳಗೊಂಡ ಹನ್ನೆರಡು ರಾಷ್ಟ್ರಗಳ ಸಂಚಾರ ಕೈಗೊಂಡಿದ್ದರು. ತಮ್ಮ ಎರಡು ತಿಂಗಳ ಪ್ರವಾಸಾವಧಿಯಲ್ಲಿ ತಮಗೊದಗಿದ ಅನುಭವ ಅನಿಸಿಕೆಗಳನ್ನು ಬರಹರೂಪದಲ್ಲಿ ಹೇಳಿರುವರು. ಲೇಖಕರು ತಮ್ಮ ಪ್ರವಾಸದ ಕಾಲಾವಧಿಯಲ್ಲಿ ಅಮೆರಿಕೆಯೊಂದನ್ನು ಬಿಟ್ಟು ಉಳಿದ ರಾಷ್ಟ್ರಗಳಲ್ಲಿ ಬಹಳದಿನ ಇರಲಿಲ್ಲ. ಅಲ್ಲಿ ಇದ್ದುದು ಕಡಿಮೆ ಎಂದರೆ ಎರಡು ದಿನ ಹೆಚ್ಚೆಂದರೆ ಏಳು ದಿನ ಮಾತ್ರ. ಹೀಗಾಗಿ ಅವರ ಅನುಭವ ಕಥನವಲ್ಲ ಅಮೆರಿಕಗೆ ಮಾತ್ರ ಸೀಮಿತವಾಗುತ್ತದೆ. ತಮ್ಮ ಸುತ್ತಾಟದಲ್ಲಿ ಅಮೆರಿಕೆಯಲ್ಲಿನ ಒಳಿತನ್ನು ಮಾತ್ರ ಹೇಳಿರುವ ಅವರು, ಅಲ್ಲಿನ ಹಿಂಸಾಚಾರ, ಅತ್ಯಾಚಾರ, ಸ್ವೇಚ್ಛಾಜೀವನ-ಇವುಗಳ ಬಗೆಗೆ ಏನನ್ನೂ ಹೇಳುವುದಿಲ್ಲ. "ಇವುಗಳನ್ನು ವರ್ಣಿಸುವುದರಿಂದ ನಮಗೇನು ಪ್ರಯೋಜನ? ನಮ್ಮದು ಹಿಂದುಳಿದ ದೇಶ. ಇತರರಲ್ಲಿಯ ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ನಾವು ನಮ್ಮ ದೇಶವನ್ನು ಮುಂದೆ ತರಬೇಕಾಗಿದೆ. ದೇಶದ ಅಭಿವೃದ್ಧಿಗಾಗಿ ಎಷ್ಟು ಶ್ರಮಿಸಿದರೂ ಸಾಲದು. ಈ ದೃಷ್ಟಿಯಿಂದ ನಾನು ಅಮೆರಿಕೆಯ ಇನ್ನೊಂದು ಮುಖವನ್ನು ವರ್ಣಿಸುವ ಗೋಜಿಗೆ ಹೋಗಿಲ್ಲ" ಎಂದು ಲೇಖಕರೇ ಹೇಳಿಕೊಂಡಿರುವರು.

ಅಮೆರಿಕೆಯ ಜನಜೀವನವನ್ನು ಭಾರತದ ಇಂದಿನ ಸ್ಥಿತಿಯೊಡನೆ ತುಲನೆ ಮಾಡುತ್ತ "ಅಮೆರಿಕೆಯಿಂದ ನಾವು ಕಲಿಯುವುದು ಬಹಳವಿದೆ. ಅಲ್ಲಿಯ ಜನರ ಶಿಸ್ತು, ಸಮಯನಿಷ್ಠೆ, ದೇಶಪ್ರೇಮ, ಜ್ಞಾನಾರ್ಜನೆಗಾಗಿ ಇರುವ ಹಂಬಲ, ಸ್ವಾವಲಂಬನೆ, ಉದ್ಯೋಗಪ್ರಿಯತೆ, ದುಡಿಮೆಯ ಗೌರವ ಇವು ಅನುಕರಣೀಯ-ವಾಗಿವೆ. ಆ ಜನರಲ್ಲಿ ಇಂಥ ಗುಣಗಳಿವೆಯೆಂದೇ ಅಮೆರಿಕೆಯೂ ಇಂದು ಜಗತ್ತಿನ ಬಲಾಢ್ಯ ಹಾಗೂ ಶ್ರೀಮಂತ ರಾಷ್ಟ್ರವಾಗಿ ಮೆರೆದಾಡತೊಡಗಿತು" ಎಂಬ ಮೆಚ್ಚುಗೆಯ ಮಾತನ್ನಾಡಿರುವರು. ವೈಜ್ಞಾನಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿದಿರುವ ಒಂದು ದೇಶವನ್ನು ಇದೀಗ ತಾನೇ ಮುಂದುವರಿಯಲು ಅಪಾರವಾಗಿ ಶ್ರಮಿಸುತ್ತಿರುವ, ಪರಾವಲಂಬನೆಯಿಂದ ಸ್ವಾವಲಂಬನೆಗೆ ಹೊರಳುತ್ತಿರುವ ದೇಶದೊಂದಿಗೆ ಹೋಲಿಸುವುದು ನ್ಯಾಯವೂ ತರ್ಕಬದ್ಧವೂ ತರ್ಕಬದ್ಧವೂ ಅಲ್ಲ. ಲೇಖಕರು ಅಮೆರಿಕಾ ದೇಶದ ಆಮಂತ್ರಿತ ಅತಿಥಿಗಳಾಗಿರುವುದರಿಂದ ಆ ದೇಶದ ಆತಿಥ್ಯ ಸ್ವೀಕರಿಸಿ ಒಂದು ಸುಪ್ರೀತಮನದಲ್ಲಿ ಅದನ್ನು ಮೆಚ್ಚಿ ಹೊಗಳುವುದರಲ್ಲಿ ಅರ್ಥವಿದೆ. ಆದರೆ, ಅಮೆರಿಕವನ್ನು ಭಾರತದೊಡನೆ ಹೋಲಿಸುವುದರಲ್ಲಿ ಅರ್ಥವಿಲ್ಲ. ಅಮೆರಿಕದ ಬಗೆಗಿನ ಮೆಚ್ಚುಗೆ ಹಾಗೂ ಗೌರವ ಭಾವನೆಗಳು ಕೃತಿಯುದ್ದಕ್ಕೂ ಮೈದಾಳಿ ನಿಂತಿದೆ. ಕೃತಿಗಿಟ್ಟಿರುವ ಹೆಸರೂ ಅದನ್ನೇ ಧ್ವನಿಸುತ್ತದೆ.

ಅಮೆರಿಕೆಯನ್ನು ಒಮ್ಮುಖವಾಗಿ ನೋಡುವ **ನಾರಿ ನಿನಗೆ ನಮೋ ನಮೋ** ಹತ್ತು ಅಧ್ಯಾಯಗಳನ್ನು ಒಳಗೊಂಡಿದೆ. ಅಮೆರಿಕನ್ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ವೈವಾಹಿಕ ಜೀವನದ ಸಿಹಿ-ಕಹಿಗಳು, ಸ್ತ್ರೀ ಪುರುಷರ ಸಂಬಂಧ, ಲೈಂಗಿಕ ಸ್ವೇಚ್ಛಾಚಾರ, ಜೀವನಕ್ರಮ, ಸಂಪರ್ಕ ಮಾಧ್ಯಮಗಳು, ಶಿಕ್ಷಣ ಹಾಗೂ ಆರೋಗ್ಯ ರಕ್ಷಣೆ, ಶ್ರಮಪೂರ್ಣ ದುಡಿಮೆ, ವ್ಯಾಪಾರ ವಹಿವಾಟು, ಅಮೆರಿಕದಲ್ಲಿ ನೆಲೆಸಿರುವ ಭಾರತೀಯರ ಹೋರಾಟದ ಬದುಕು ಮತ್ತು ಅವರ ಸ್ಥಿತಿ-ಗತಿ ಹೀಗೆ ಭಿನ್ನ ಭಿನ್ನ ನೆಲೆಯ ಸಾಮಾಜಿಕ ಅಧ್ಯಯನಕ್ಕೆ ಅಂಟಿಕೊಂಡೇ ಲೇಖಕರ ವಿವೇಚನೆ ಬಂದಿದೆ. ಕೊನೆಯಲ್ಲಿ ತಮ್ಮ ಸುತ್ತಾಟದ ಅವಧಿಯಲ್ಲಿ ತಮಗಾದ ಸ್ವಾರಸ್ಯಕರ ಅನುಭವಗಳಲ್ಲಿ ಕೆಲವನ್ನು ಲೇಖಕರು ಪ್ರಸ್ತಾಪಿಸಿರುವರು.

ಶ್ರೀ ನಾಗರಾಜರಾವ್‌ರವರ ಈ ಪ್ರವಾಸೀ ಅನುಭವ ಹೊಸದಾಗಿ ಅಮೆರಿಕ ಪ್ರವಾಸ ಮಾಡುವವರಿಗೆ ಕೈಪಿಡಿಯಂತಿದೆ. ಅಲ್ಲಿನ ಪ್ರೇಕ್ಷಣೀಯ ಸ್ಥಳಗಳ ವಿವರಗಳಾಗಲೀ, ಸಾಂಸ್ಕೃತಿಕ ಕೊಡುಗೆಗಳ ಪ್ರಸ್ತಾಪವಾಗಲೀ ಕೃತಿಯಲ್ಲಿ ಎಲ್ಲೂ ಬರದೆ ಇರುವುದು ಈ ಕೃತಿಯ ವೈಶಿಷ್ಟ್ಯ. ಸುತ್ತಾಟದ ಅನುಭವಗಳನ್ನು ಮೆಲುಕು ಹಾಕುವುದಕ್ಕಿಂತ ಅಮೆರಿಕೆಯ ಸಾಮಾಜಿಕ ಜೀವನದ ಒಳಿತು ಕೆಡಕುಗಳ ಅಧ್ಯಯನದ ಕಡೆಗೇ ಲೇಖಕರ ಒಲವು ಹೆಚ್ಚು. ಭಾರತೀಯ ಪತ್ರಕರ್ತನೊಬ್ಬನ ಪತ್ರಿಕಾವರದಿಯ ಧೋರಣೆ ಇಲ್ಲಿ ವಿಶಿಷ್ಟವಾಗಿ ಕಾಣುವಂತಹುದು. ಆಶ್ಚರ್ಯ ಹಾಗೂ ಮುಗ್ಧ ಸ್ಥಿತಿಯಲ್ಲಿ ಸಾಮಾಜಿಕ ಅಧ್ಯಯನವು ನಡೆಯುವುದರಿಂದ, ಅದು ಮೇಲುನೋಟದ ಸ್ತುತಿಪರವಾದ ಅಧ್ಯಯನ ಹಾಗೂ ಅವರ ವರದಿಯಾಗಿದೆ. ಅದಕ್ಕೊಂದು ವೈಜ್ಞಾನಿಕ ನೆಲೆಗಟ್ಟಿಲ್ಲದ ಕಾರಣ ಅಶಾಸ್ತ್ರೀಯವಾಗಿದೆ. ಅಮೆರಿಕೆಯ ಜೀವನವಿಧಾನ ಹಾಗೂ ಭಾರತೀಯ ಜೀವನವಿಧಾನ ಭಿನ್ನ ಸ್ವರೂಪದ್ದು. ಅವುಗಳ ತುಲನೆ ಮಾಡುವುದು ಹಿಂದೆ ಹೇಳಿದಂತೆ ಸರಿಯಲ್ಲ. ಒಳ್ಳೆಯ ಕಾಗದ, ಮುದ್ರಣಗಳಿಂದ ಪುಸ್ತಕ ಅಂದಗೊಂಡಿದ್ದು ಕೈಗೆತ್ತಿಕೊಂಡು ಪುಟ ತಿರುಗಿಸುವ ಆಸೆ ಓದುಗನಿಗಾಗುತ್ತದೆ. ತೀರಾ ಪರಿಚಿತವಿರುವ ಸಾಧಾರಣ ಸಂಗತಿಗಳಿಗ ಬಣ್ಣಕಟ್ಟಿ ಹೇಳುವ ಪ್ರಯತ್ನ ಲೇಖಕರು ಮಾಡುವುದರಿಂದ, ಒಳ್ಳೆಯ ಪ್ರವಾಸಾನುಭವ ಓದಿದ ತೃಪ್ತಿ ಓದುಗನಿಗೆ ಆಗುವುದಿಲ್ಲ.

ಪ್ರೊ. ಎ.ಎನ್. ಮೂರ್ತಿರಾಯರು ಕನ್ನಡದ ಮೊದಲ ಪಂಕ್ತಿಯ ಪ್ರಬಂಧಕಾರರು. ಕೆಲವರುಷಗಳ ಹಿಂದೆ ಅವರ 'ಚಿತ್ರಗಳು-ಪತ್ರಗಳು' ಎಂಬ ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕಾರ ಪಡೆಯಿತು. ಇತ್ತೀಚಿನ ಅವರ 'ಅಪರ ವಯಸ್ಕನ ಅಮೆರಿಕಾ ಯಾತ್ರೆ' ಪ್ರವಾಸ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆ. ೧೯೭೩ ಹಾಗೂ ೧೯೭೬ರಲ್ಲಿ ಎರಡು ಬಾರಿ ಅಮೆರಿಕಾ ಯಾತ್ರೆ ಮಾಡಿ ಬಂದ ಅವರ

ಅನುಭವ ಕಥನವೇ ಇದಾಗಿದೆ. ಪೂರ್ವ ಪಶ್ಚಿಮಗಳ ಮುಖಾಮುಖಿ ಇಲ್ಲಿನ ಪ್ರಮುಖ ವಸ್ತು. ಅಮೆರಿಕನ್ ಬೀಗರು, ಮಗ-ಸೊಸೆ-ಮೊಮ್ಮಕ್ಕಳು ಇವರ ನಡುವೆ ಕೆಲಕಾಲ ಇದ್ದು ಕೌಟುಂಬಿಕ ಮಧುರ ಸಂಬಂಧದ ಎಳೆಗಳು ತಂದುಕೊಡುವ ಸಲಿವನ್ನು ಸವಿಯಬೇಕೆಂಬುದೇ ಪ್ರೊ. ರಾವ್‌ರವರ* ಅಮೆರಿಕ ಯಾತ್ರೆಯ ಪ್ರಮುಖ ಉದ್ದೇಶ. ಆ ವ್ಯಾಜದಲ್ಲಿಯೇ, ಪರಿಪಕ್ವವಾದ ಸುಸಂಸ್ಕೃತ ಚೇತನವೊಂದು-ತೀರಾ ಸಂಪ್ರದಾಯವಾದಿಯಲ್ಲದ ಆದರೆ ಭಾರತೀಯ ಪರಂಪರೆಯ ಮಹತ್ವದ ಬಗೆಗೆ ಅಭಿಮಾನವುಳ್ಳ ಮನಸ್ಸೊಂದು-ತಾನು ಬೆಳೆದ ಪರಿಸರಕ್ಕೆ ವಿರುದ್ಧವಾದ ಪರಿಸರದೊಂದಿಗೆ ರಾಜಿ ಮಾಡಿಕೊಂಡು, ಬಹಳ ಬೇಗ ಅದಕ್ಕೆ ಹೊಂದಿಕೊಂಡು, ಎದ್ದಿದ್ದ-ಏಳಬಹುದಾಗಿದ್ದ ಮನೋವ್ಯಾಪಾರಗಳಿಗೆ ಸಂಬಂಧಿಸಿದ ಗೋಡೆಗಳನ್ನು ಕೆಡವಿ, ತಮ್ಮ ಹಾಗೂ ಅವರ ಭಾವನೆಗಳಿಗೆ ಘರ್ಷಣೆಯಾಗದಂತೆ ಬಾಂಧವ್ಯದ ಬಂಧವನ್ನು ಗಟ್ಟಿಗೊಳಿಸಿ, ಅನುನಯದಿಂದ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಕುದುರಿಸಿ ಹಂಚಿಕೊಂಡು ಹೇಗೆ ಸುಖಿಸಿತೆಂಬುದನ್ನು ಈ ಕೃತಿಯಲ್ಲಿ ನಾವು ಓದುವೆವು. ಎಲ್.ಎಸ್. ಶೇಷಗಿರಿರಾವ್‌ರವರು ಒಂದೆಡೆ ಅಭಿಪ್ರಾಯ ಪಡುವಂತೆ "ಮನುಷ್ಯ ಸ್ವಭಾವದ ಓರೆಕೋರೆಗಳನ್ನು ಕ್ಷುದ್ರತನವನ್ನೂ ಕಂಡೂ ಅವುಗಳ ಆಘಾತವನ್ನು ಅನುಭವಿಸಿಯೂ ಮನುಷ್ಯನಲ್ಲಿ ಗೌರವವನ್ನೂ ಅಭಿಮಾನವನ್ನೂ ಉಳಿಸಿಕೊಂಡ, ಸಂಪ್ರದಾಯಕ್ಕೆ ಗಂಟು ಬೀಳದಿದ್ದರೂ ಪರಂಪರೆಯ ಮಹತ್ವವನ್ನು ಗುರುತಿಸುವ, ಜೀವನವನ್ನು ಗಂಭೀರವಾಗಿ ಕಂಡು ಚಿಂತಿಸುವಾಗಲು ಹಾಸ್ಯ ಪ್ರವೃತ್ತಿ-ತುಂಟತನಗಳನ್ನು ಕಳೆದುಕೊಳ್ಳದ, ಬುದ್ಧಿಜೀವಿಯಾದರೂ ಅಂತಃಕರಣದ ಪಾತ್ರವನ್ನು ಅರಿಯುವ, ಪ್ಲೇಟೋ-ಅರಿಸ್ಟಾಟಲ್ ವ್ಯಾಸ-ವಾಲ್ಮೀಕಿಗಳನ್ನು ಪ್ರೀತಿಯಿಂದ ಅಧ್ಯಯನ ಮಾಡಿದಂತೆಯೇ ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್, ಇಬ್ಸನ್‌ರನ್ನೂ ಅಧ್ಯಯನ ಮಾಡಬಲ್ಲ, 'ಗ್ರೇಟರ್ ದ್ಯಾನ್ ಎ ಥೌಸಂಡ್ ಸನ್ಸ್', 'ಸ್ಮಾಲ್ ಈಸ್ ಬ್ಯೂಟಿಫುಲ್,' 'ಫ್ಯೂಚರ್ ಷಾಕ್'ಗಳಿಗೆ ಸ್ಪಂದಿಸಬಲ್ಲ ಜೀವನದ ಅನುಭವ ಇಲ್ಲಿ ನಿರೂಪಣೆ ಪಡೆದಿದೆ."

ಮಗ ಅಮೆರಿಕನ್ ಹುಡುಗಿಯೊಡನೆ ವಿವಾಹವಾಗುತ್ತೇನೆ ಎಂದಾಗ, ಹುಡುಗಿಯ ತಾಯಿ ತಂದೆಯರಿಗೆ ಆ ಮದುವೆ ಇಷ್ಟವಿಲ್ಲದಿದ್ದಾಗ ಪ್ರೊ. ರಾಯರು ನಡೆದುಕೊಂಡ ರೀತಿ ಬಹಳ ಮೆಚ್ಚುವಂತಹದು. ತಮ್ಮ ಮಗನಿಗೆ ಅವರು 'ಬೇಡ' ಎನ್ನಲಿಲ್ಲ, ತಮ್ಮ ಸಮ್ಮತಿಯನ್ನೂ ಕೊಡಲಿಲ್ಲ. 'ಯೋಚಿಸಿ ನಿನ್ನಿಷ್ಟದಂತೆ ಮಾಡು' ಎಂದರು. ಮಗ

* ಇನ್ನು ಮುಂದೆ ಪ್ರೊ. ಎ.ಎನ್. ಮೂರ್ತಿರಾವ್‌ರವರನ್ನು ಪ್ರೊ. ರಾವ್ ಎಂದು ಸಂಬೋಧಿಸುತ್ತೇನೆ.

ಎರಡು ವಾರ ರಜೆ ಪಡೆದು ಇಂಡಿಯಾಕ್ಕೆ ಬಂದ. ಅವನು ವಾಪಸು ಹೋಗುವಾಗ ಪ್ರೊ. ರಾವ್‌ರವರು ತಮ್ಮ ವೈದಿಕ ಅಶೀರ್ವಾದ ಮಂತ್ರವನ್ನು-ಅದರ ಕೆಲವು ಭಾಗಗಳು ಅವರಿಗೆ ಬಹಳ ಮೆಚ್ಚು -ಇಂಗ್ಲಿಷಿಗೆ ಭಾಷಾಂತರಿಸಿ (ಹೊಸ ಸೊಸೆ) ನ್ಯಾನ್ಸಿಗೆ ಅವುಗಳನ್ನೊಳಗೊಂಡ ಕಾಗದ ಬರೆದು ಅದಕ್ಕೆ ಹೆಂಡತಿ, ತಾವು, ತಮ್ಮ ತಮ್ಮಂದಿರು ಎಲ್ಲರಿಂದಲೂ ಸಹಿಮಾಡಿಸಿ ಮಗನ ಕೈಯಲ್ಲಿ ಕೊಟ್ಟು ಕಳುಹಿಸಿದರು. ಮುಂದೆ ಮಗ ಹೆಂಡತಿ ಮಕ್ಕಳೊಡನೆ ಒಮ್ಮೆ ಮೈಸೂರಿಗೆ ಬಂದು ಹೋಗುವುದಾಗಿ ತಂದೆಗ ಪತ್ರ ಬರೆದ. ಪ್ರೊ. ರಾಯರಿಗೆ ಒಂದು ಆತಂಕವಿದ್ದಿತು. ಸೊಸೆ ಮನೆಗೆ ಬಂದಾಗ ಹೆಂಡತಿ ಹೇಗೆ ನಡೆದುಕೊಳ್ಳುವಳೋ ಎಂದು. ಮಗ, ಸೊಸೆ, ಮೊಮ್ಮಗಳು ಮನೆಗೆ ಬಂದರು. ಬಂದೊಡನೆ ಸೊಸೆ ಅತ್ತೆಗೆ ನಮಸ್ಕಾರ ಮಾಡಿದಳು. ಮಾರನೆಯ ದಿನ ಸೊಸೆ ಅಡಿಗೆಮನೆಯ ಬಾಗಿಲಿನ ಬಳಿ ಬಂದು ವಿನಯದಿಂದ, ನಗುಮುಖದಿಂದ "ನಾನು ಎಲ್ಲಿಯವರೆವಿಗೆ ಬರಬಹುದು?" ಎಂದು ಕೇಳಿದಳು. "ನೀನು ನಮ್ಮ ಮನೆಯ ಸೊಸೆ ಎಲ್ಲಿ ತಿರುಗಾಡಲು ತಾನೆ ಅಡ್ಡಿಯೇನು?"

"ನಾನು ನಿಮ್ಮನ್ನು ಏನೆಂದು ಕರೆಯಲಿ?"

"ಎಲ್ಲರೂ ನನ್ನನ್ನು ಜಯಮ್ಮ ಎಂದು ಕರೆಯುತ್ತಾರೆ ನೀನೂ ಹಾಗೇ ಕರಿ."

ಹೀಗೆ ಮೊದಲಿಗೆ ಸಂಭಾಷಣೆ ಅತ್ತೆ ಸೊಸೆಯರ ನಡುವೆ ಆಯಿತು. ಇದಾದ ಮೂರು ನಾಲ್ಕು ದಿನಗಳಲ್ಲೇ ಗೌರಿಯಹಬ್ಬ ಬಂತು. ಆವತ್ತು ಪ್ರೊ. ರಾಯರು ನೋಡಿದ ದೃಶ್ಯವನ್ನು ಅವರೆಂದಿಗೂ ಮರೆಯಲಾರರು:

"ನ್ಯಾನ್ಸಿ ಸ್ನಾನ ಮಾಡಿ ತಲೆ ಬಾಚಿ ಜಡೆ ಹೆಣೆದುಕೊಂಡು (ಆ ವೇಳೆಗಾಗಲೇ ಅವಳು ಕೇಶವನ್ನು ಉದ್ದವಾಗಿ ಬೆಳೆಸಿದ್ದಳು) ಹಣೆಗೆ ಕುಂಕುಮ ಇಟ್ಟು ಜಯಲಕ್ಷ್ಮಿ (ಪ್ರೊ. ರಾವ್‌ರವರ ಹೆಂಡತಿ) ಹೇಳಿಕೊಟ್ಟಂತೆ ಅವಳ ಮಗ್ಗುಲಲ್ಲಿ ಕುಳಿತು ಗೌರೀ ಪೂಜೆ ಮಾಡುತ್ತಿದ್ದಳು. ನನ್ನ ಕಣ್ಣಲ್ಲಿ ನೀರು ಬಂದದ್ದನ್ನು ಯಾರೂ ಕಾಣದಿರಲೆಂದು ನಾನು ಅಲ್ಲಿಂದ ಹೊರಟುಹೋದೆ. ಒಂದು ಕಡೆ ತಾನು ನಂಬಿದ ದೈವ, ಸಾವಿರಾರು ವರ್ಷಗಳಿಂದ ಬಂದ ನಿಯಮಗಳು, ವಿಧಿ ನಿಷೇಧಗಳು; ಮತ್ತೊಂದು ಕಡೆ ಕ್ರೈಸ್ತ ಮತಾನುಯಾಯಿಯಾದ ಹೆಣ್ಣು, ಹಿಂದೆ ಮಾಂಸ ತಿನ್ನುತ್ತಿದ್ದವಳು-ಇವೊಂದೂ ಜಯಲಕ್ಷ್ಮಿಯ ನೈಸರ್ಗಿಕ ಹಿರಿತನಕ್ಕೆ ಕುಂದುತರಲಿಲ್ಲ. ಗೌರೀದೇವಿಯ ವರದಹಸ್ತ ತನಗೆ ಬೇಕಾದರೆ ನನ್ನ ಸೊಸೆಗೆ ಬೇಡವೆ?... ಇವಳೊಡನೆ ನಲವತ್ತು ವರ್ಷ ಸಂಸಾರಮಾಡಿದ್ದೆ, ಆದರೂ ಅವಳ ಔದಾರ್ಯದ ಮತ್ತು ಘನತೆಯ ಔನ್ನತ್ಯವನ್ನು ತಿಳಿದಿರಲಿಲ್ಲ; ಅವಳನ್ನು ಮನಸಾರ ಹೊಗಳಬೇಕಾಗಿತ್ತು. ಹಾಗೆ ಮಾಡಲಿಲ್ಲ, ನನ್ನ ಮೆಚ್ಚಿಕೆ ಮನಸ್ಸಿನಲ್ಲೇ ಉಳಿದುಹೋಯಿತು."

ಸ್ಟಾನ್ಲಿಯೂ ಈ ಅತ್ತೆಗೆ ತಕ್ಕ ಸೊಸೆ. 'ಪೂಜೆ ಮಾಡುತ್ತೀಯಾ' ಎಂದು ಕೇಳಿದೊಡನೆ ಒಪ್ಪಿದಳು. ಹಿಂದೂ ಅತ್ತೆಗಿದ್ದಂತೆಯೇ ಕ್ರೈಸ್ತ ಸೊಸೆಗೂ ಸಾವಿರಾರು ವರ್ಷದಿಂದ ಬಂದ ವಿಧಿ ನಿಷೇಧಗಳಿದ್ದುವು. 'ಹೂವು ಮಂತ್ರಾಕ್ಷತೆಗಳನ್ನು ಪೂಜೆ ಮಾಡು' ಎಂದಾಗ ಅವಳಿಗೆ ಬೈಬಲ್‌ನಲ್ಲಿ ಬರುವ ಆಜ್ಞೆಗಳಲ್ಲಿ ಒಂದಾದ 'Thou shalt not make unto thee a graven image' ('ನೀನು-ಪೂಜೆಗಾಗಿ-ಕಡೆದ ಮೂರ್ತಿಯನ್ನು ನಿರ್ಮಿಸಕೂಡದು') ಎಂಬುದು ನೆನಪಿಗೆ ಬಂದು ಪೂಜೆ ಮಾಡಲು ಮನಸ್ಸು ಹಿಂಜರಿಯಿತಂತೆ. ಜಯಲಕ್ಷ್ಮಿಯಂತೆಯೇ ಅವಳೂ ಈ ಹಿಂಜರಿಕೆಯನ್ನು ಅದುಮಿದಳು."

ಪೂರ್ವ ಪಶ್ಚಿಮಗಳು ಎಂದಿಗೂ ಒಂದಾಗಲಿಕ್ಕೆ ಸಾಧ್ಯವಿಲ್ಲ ಎಂಬ ಮಾತು ಪ್ರೊ. ರಾವ್ ದಂಪತಿಗಳ ವರ್ತನೆಯಿಂದ ಸುಳ್ಳಾಯಿತು. ಈ ದಂಪತಿಗಳ ಮನಸ್ಸು ಎಷ್ಟು ವಿಶಾಲವಾದದ್ದು, ಸುಸಂಸ್ಕೃತವಾದುದು ಎಂಬುದನ್ನು ಹೇಳುವುದಕ್ಕಾಗಿ ಇಷ್ಟೆಲ್ಲ ಹೇಳಬೇಕಾಯಿತು. ತಮ್ಮ ಅಮೆರಿಕನ್ ಬೀಗರ ಆತಿಥ್ಯವನ್ನು ಸ್ವೀಕರಿಸುವಾಗ, ಪರಸ್ಪರ ಅರ್ಥಮಾಡಿಕೊಡಿಕೊಳ್ಳುವುದರಿಂದ ಎಂತಹ ಸೌಹಾರ್ದ ವಾತಾವರಣವನ್ನು ನಿರ್ಮಿಸಬಹುದೆಂಬುದನ್ನು ಪ್ರೊ. ರಾವ್ ತೋರಿಸಿಕೊಟ್ಟಿರುವರು. ಅವರದು ದೊಡ್ಡ ಚೇತನ, ಉದಾತ್ತ ಸಂಸ್ಕೃತಿ.

ಅಮೆರಿಕನ್ನರ ಶಿಸ್ತು, ಅಚ್ಚುಕಟ್ಟುತನ, ಅತಿಥಿ ಸತ್ಕಾರಪ್ರಿಯತೆ, ಕಲಾ ಪ್ರೇಮ -ಇವನ್ನೆಲ್ಲಾ ಮೆಚ್ಚಿದ್ದರೂ ಅಲ್ಲಿನ ಸಮಾಜದಲ್ಲಿ ನಿತ್ಯ ನಡೆಯುವ ಖೂನಿ, ಲೈಂಗಿಕ ಅತ್ಯಾಚಾರಗಳಲ್ಲಿನ ಹಿಂಸಾಪ್ರವೃತ್ತಿಯನ್ನು ಕಟುವಾಗಿ ಟೀಕಿಸಿರುವರು. ಇವುಗಳ ಬಗೆಗೆ ಪತ್ರಿಕೆಗಳಲ್ಲಿ ಅಸಹ್ಯ ಹಾಗೂ ಭಯಂಕರ ವಾರ್ತೆಗಳುಇಲ್ಲದ ದಿನಗಳೇ ಇಲ್ಲ. ನಿರಪರಾಧಿಗಳನ್ನು ನಿಷ್ಕರುಣೆಯಿಂದ ಕೊಲ್ಲುವ, ಹೆಣ್ಣಿನ ಮೇಲೆ ಅತ್ಯಾಚಾರ ಮಾಡುವ ಈ ಮನೋವೃತ್ತಿ ಎಷ್ಟು ಅಸಹ್ಯವಾದುದು. ಈ ರಾಕ್ಷಸೀ ಮನೋಭಾವದ ಜನರ ಭಯವೆಂಬ ಹೆಡೆತಲೆಯ ಹಾವಿನ ಅರಿವು ಅಮೆರಿಕನ್ ಸಮಾಜದಲ್ಲಿ ಹೇಗೆ ಜೀವಂತವಾಗಿದೆ ಎಂಬುದನ್ನು ಪ್ರೊ. ರಾವ್ ಚೆನ್ನಾಗಿ ಹೇಳಿರುವರು. ಕೊಲೆಗೂ ಹಿಂಸಾಕೃತ್ಯಗಳಿಗೂ ಹಿನ್ನೆಲೆಯಾಗಿ ನಾನಾ ಕಾರಣಗಳಿರುವುದುಂಟು. ಅಮೆರಿಕದಲ್ಲಿ ಅನೇಕ ವೇಳೆ ಕೊಲೆಪಾತಕನಿಗೂ ಕೊಲೆಯಾದವನಿಗೂ ಯಾವ ಸಂಬಂಧವೂ ಇಲ್ಲದೆ ಕೊಲೆ ನಡೆದಿರುವುದುಂಟು.* ಇದು ಕೊಲೆಗಾಗಿ ಕೊಲೆ, ಹಿಂಸೆಗಾಗಿ ಹಿಂಸೆ. ಪ್ರೊ.ರಾವ್

* ಗೊರೂರರೂ ಇಂತಹ ಕೆಲವು ನಡೆದ ಘಟನೆಗಳ ಉಲ್ಲೇಖವನ್ನು ತಮ್ಮ ಪ್ರವಾಸಕಥನದಲ್ಲಿ ಮಾಡಿರುವರು (ನೋಡಿ: ಅಮೆರಿಕದಲ್ಲಿ ಗೊರೂರು, ಪು.೨೦೬-೨೧೧).

ತಮ್ಮ ಅಮೆರಿಕ ವಾಸ್ತವ್ಯದಲ್ಲಿ ಕೇಳಿದ ಭಯಾನಕವಾದ ಘಟನೆಯಿದು: ಕೊಲೆಗಾರಿಕೆಯಲ್ಲಿ ನುರಿತವನೊಬ್ಬ ಇನ್ನೊಬ್ಬನಿಗೆ 'ಕೊಲೆ ಮಾಡಬೇಕಾದರೆ ಇಂಥಿಂಥ ಸಿದ್ಧತೆ ಮಾಡಿಕೊಳ್ಳಬೇಕು, ಕೊಲೆ ಮಾಡತಕ್ಕ ರೀತಿ ಹೇಗೆ' ಎಂದು ಉಪದೇಶ ಕೊಟ್ಟನಂತೆ. ಆ ಶಿಷ್ಯ ಖೂನಿ ಮಾಡಿ ಮುಗಿಸಿದ. ಆದರೆ ತನ್ನ ಗುರು ಹೇಳಿದ ಕ್ರಮವನ್ನು ಅನುಸರಿಸದೆ ಬೇರೆ ಯಾವುದೋ ಕ್ರಮ ಅನುಸರಿಸಿದ. ಆ ಗುರು Perfectionist. ಕಾರ್ಯ ನಡೆಯಿತೆಂದ ಮಾತ್ರಕ್ಕೆ ಅವನಿಗೆ ತೃಪ್ತಿಯಿಲ್ಲ, ಅದು ವಿಧ್ಯುಕ್ತವಾದ ರೀತಿಯಲ್ಲೇ ನಡೆಯಬೇಕು. ದೇವರನ್ನು ಸುತ್ತುಗಟ್ಟಿದ ಮಾತ್ರಕ್ಕೆ ಪುಣ್ಯ ಬಂದೀತೆ? ಪ್ರದಕ್ಷಿಣ ವಿಧಿಯನ್ನು ಅನುಸರಿಸಿಯೇ ಸುತ್ತುಗಟ್ಟಿ ಬರಬೇಕು! ಆದ್ದರಿಂದ ಕೇವಲ ಮಾತಿನ ಉಪದೇಶ ಸಾಲದೆಂದು ಆ ಗುರು ತಾನೇ ಒಬ್ಬನನ್ನು ಕೊಂದು 'ಕೊಲ್ಲಬೇಕಾದ್ದು ಹೀಗೆ' ಎಂದು ತೋರಿಸಿಕೊಟ್ಟ. ಕೊಲೆಯಾದವನಿಗೂ ಈ ಗುರು ಶಿಷ್ಯರಿಗೂ ಯಾವ ಬಗೆಯ ಸಂಬಂಧವಾಗಲಿ ಪರಿಚಯವಾಗಲಿ ಇಲ್ಲ. ಅವನು ಇವರ ಮಿತ್ರನೂ ಅಲ್ಲ, ಶತ್ರುವೂ ಅಲ್ಲ-ಕೇವಲ ಪಾಠ ಹೇಳುವುದಕ್ಕಾಗಿ ನಡೆಸಿದ ಪ್ರಯೋಗವೊಂದರಲ್ಲಿ ಪಶು! ಈ ಕೊಲೆಯಲ್ಲಿ ಕಾಮ, ಅದರಿಂದ ಹುಟ್ಟುವ ಕ್ರೋಧ, ಅದರಿಂದ ಹುಟ್ಟುವ ಸಮ್ಮೋಹ, ಇತ್ಯಾದಿಗಳ ಕಾಟವೇನೂ ಇಲ್ಲ. ಅದೊಂದು ಅಸಹ್ಯ ರೀತಿಯ ನಿಷ್ಕಾಮಕರ್ಮ! ಇದು ವಾಸ್ತವವಾಗಿ ನಡೆದದ್ದಂತೆ. ಇದನ್ನು ನೆನೆದರೇ ಮೈ ನಡುಗುತ್ತದೆ. ಮಾನವನಾದಲ್ಲಿ ಇಂತಹ ಪ್ರವೃತ್ತಿ ಹೇಗೆ ನೆಲೆಗೊಂಡಿತು." (ಪು.೬೫).

ಎರಡು ಭಿನ್ನ ಭಿನ್ನ ಸಂಸ್ಕೃತಿಗಳ ಅಧ್ಯಯನ ಪ್ರೊ. ರಾವ್‌ರವರಿಗೆ ಪ್ರಿಯವಾದ ವಿಷಯ. ಮನೆಯಲ್ಲಿ, ಗೆಳೆಯರ ನಡುವೆ ನಡೆಯುವ ಚರ್ಚೆಯಲ್ಲಿ ಸ್ವಲ್ಪ ಮಟ್ಟಿಗೆ ಇದು ನಡೆದಿದೆ. 'ಅತಿಥಿ-ಅತಿಥೇಯ ಸಂಬಂಧ ಭಾರತದಲ್ಲಿ ಮತ್ತು ಅಮೆರಿಕದಲ್ಲಿ' ಎಂಬ ಶೀರ್ಷಿಕೆಯ ಕೆಳಗೆ (ಪು. ೯೭-೧೦೨) ಇದು ಸುದೀರ್ಘವಾಗಿ ನಡೆದಂತೆ ತೋರುತ್ತದೆ. ಭಾರತೀಯ ಪರಂಪರೆಯ ಬಗೆಗೆ, ಜೀವನ ವಿಧಾನದ ಬಗೆಗೆ, ಆಲೋಚನಾಕ್ರಮದ ಬಗೆಗೆ ಎಷ್ಟರ ಮಟ್ಟಿನ ತಿಳುವಳಿಕೆ ಇವೆಯೋ ಅಷ್ಟೇ ಪ್ರಮಾಣದಲ್ಲಿ ಅಲ್ಲದಿದ್ದರೂ ಸ್ಥೂಲವಾಗಿಯಾದರೂ ಪಾಶ್ಚಾತ್ಯ ಜೀವನ ಕ್ರಮ ಹಾಗೂ ಆಲೋಚನಾ ವಿಧಾನಗಳ ಪರಿಚಯ ಪ್ರೊ. ರಾವ್‌ರವರಿಗೆ ಇರುವುದರಿಂದ ಪೂರ್ವ ಪಶ್ಚಿಮ ದೇಶಗಳ ಸಂಸ್ಕೃತಿಯ ತೌಲನಿಕ ಅಧ್ಯಯನ ಅವರಿಗೆ ಸುಲಭವಾಗಿದೆ.

---

ಸಿನಿಮಾ ನಟಿಯೋರ್ವಳನ್ನು ಪ್ರೀತಿಸಿದ್ದ ಕೋಟ್ಯಾಧೀಶ್ವರನ ಪುತ್ರನೊಬ್ಬ, ನಟಿಯ ಮನಸೆಳೆಯಲು ಯಾವ ರೀತಿಯಲ್ಲಾದರೂ ಪ್ರಸಿದ್ಧನಾಗಿ ಬಿಡಬೇಕೆಂದು ಅಮೆರಿಕಾದ ಅಧ್ಯಕ್ಷ ರೇಗನ್ನರನ್ನು ಗುಂಡುಹಾರಿಸಿ ಕೊಲ್ಲ ಹೊರಟ ಘಟನೆಯನ್ನು ಶ್ರೀಮತಿ ನೀಳಾದೇವಿಯವರು ತಮ್ಮ ಪ್ರವಾಸಕಥನದಲ್ಲಿ ಉಲ್ಲೇಖಿಸಿರುವರು. (ನಾ ಕಂಡ ಅಖಂಡ, ಪು. ೨೬-೨೯)

ಭಾರತವನ್ನು ಅದರಲ್ಲೂ ತಾವು ಬೆಳೆದು ದೊಡ್ಡವರಾಗಿ ಬದುಕಿನ ಸಾರ್ಥಕ ವೇಳೆಯನ್ನೆಲ್ಲಾ ಕಳೆದ ಅಕ್ಕಿ ಹೆಬ್ಬಾಳನ್ನು, ಮೈಸೂರನ್ನು ಪ್ರೊ|| ರಾವ್ ಬಹಳವಾಗಿ ಪ್ರೀತಿಸುವರು. ಆ ಪ್ರೀತಿ ಎಷ್ಟು ಆಳವಾಗಿ ಬೇರುಬಿಟ್ಟಿದೆ ಎಂದರೆ ಅವರ ದೇಹ ಅಮೆರಿಕದಲ್ಲಿದ್ದರೂ ಒಮ್ಮೊಮ್ಮೆ ಅಂತರ್ಮುಖಿಯಾದಾಗ ತಮ್ಮದೇ ಆದ ಸಂಪ್ರದಾಯದ ಆಚರಣೆಯ ಸೊಬಗನ್ನು ಒಳಗಣ್ಣು ಕಾಣಬಯಸುತ್ತದೆ; ತಾವು ಕಳೆದ ಬಹುಕಾಲದ ಆತ್ಮೀಯವಾದ ಪರಿಸರ, ಸ್ನೇಹಿತರುಗಳನ್ನು ಮನಸ್ಸು ಧ್ಯಾನಿಸುತ್ತಿರುತ್ತದೆ. ಮೊಮ್ಮಗ ಸುನೀಲನ ಜನ್ಮೋತ್ಸವದ ಸಂದರ್ಭದಲ್ಲಿ ಅವರ ಒಳಗಣ್ಣು ಅಕ್ಕಿ ಹೆಬ್ಬಾಳಿನಲ್ಲಿ ನಡೆಯುವ ಹುಟ್ಟುಹಬ್ಬದ ಸಂಭ್ರಮದ ಆಚರಣೆಯನ್ನು ಕಾಣುತ್ತದೆ. ವಿದೇಶೀಯವಾದ ಬರ್ತ್‌ಡೇ ಪಾರ್ಟಿಯ ಚಿತ್ರದ ಮಗ್ಗುಲಲ್ಲೇ ಮತ್ತೊಂದು ಸ್ವದೇಶೀಯವಾದ ಹುಟ್ಟುಹಬ್ಬದ ಚಿತ್ರ ರೂಪುಗೊಳ್ಳುತ್ತದೆ (ನೋಡಿ: ಪು. ೫೮-೬೦). ಅಮೆರಿಕದಲ್ಲಿ ಮಗನ ಮನೆಯಲ್ಲಿ ಸೊಸೆ ಬೇಕಾದ ಊಟ ಉಪಚಾರ ನಡೆಸುತ್ತಿದ್ದರೂ ಮೊಮ್ಮಗ ನಲಿಸುತ್ತಿದ್ದರೂ ಒಂಟಿತನ ಪ್ರೊ|| ರಾವ್‌ರವರನ್ನು ಕಾಡುತ್ತದೆ. ಮನಸ್ಸು ಕಳೆದುಹೋದ, ಮರಳಲಾಗದ ಸುಖವನ್ನು ನೆನೆಯುತ್ತದೆ; ಸತ್ತು ಹೋದ ಮಿತ್ರರುಗಳನ್ನು ನೆನೆಯುತ್ತದೆ; ಆತ್ಮೀಯ ಮಿತ್ರರಾದ ತೀ.ನಂ.ಶ್ರೀ. ಅವರಿಂದ ಆರೇಳು ವರ್ಷಗಳ ಕೆಳಗೆ ಬಂದಿದ್ದ ಒಂದು ಪತ್ರವನ್ನು ನೆನೆಯುತ್ತದೆ. ಮುಂದಣ ವಿವರಗಳನ್ನು ಅವರ ಮಾತುಗಳಲ್ಲೇ ಕೇಳಿ: ಶ್ರೀಕಂಠಯ್ಯ ಈಗ ಚಾಲತಿಯಲ್ಲಿರುವ ಪಾಶ್ಚಾತ್ಯ ಪದ್ಧತಿಯಂತೆ ತಾರೀಖು ಕಾಣಿಸುವ ಬದಲು 'ಆಷಾಡಸ್ಯ ಪ್ರಥಮ ದಿವಸೇ' ಎಂದು ಬರೆದಿದ್ದುದನ್ನು ನೋಡಿ ಅವರಿಗೆ ಮರುಳು ಗಾಡಿನಲ್ಲಿ ಓಯೆಸಿಸ್ಸನ್ನು ಕಂಡಂತಾಯಿತು. 'ಮೇಘದೂತ'ದ ಆ ಪಂಕ್ತಿಗಳೂ ಚಿತ್ರಗಳೂ ನೆನಪಿಗೆ ಬಂದವು.

> ಆಷಾಡಸ್ಯ ಪ್ರಥಮ ದಿವಸೇ ಮೇಘಮಾಶ್ಲಿಷ್ಟಸಾನುಂ।
> ವಪ್ರಕ್ರೀಡಾ ಪರಿಣತಗಜ ಪ್ರೇಕ್ಷಣೀಯ ದದರ್ಶ॥

ಮನಸ್ಸಿನಲ್ಲಿ ಸ್ವಿಚ್ ಒಂದನ್ನು ಒತ್ತಿದಂತಾಗಿ ಅದು ಕಾಲದಲ್ಲಿ ಹಿಂದು ಹಿಂದಾಗಿ ಪ್ರಯಾಣ ಮಾಡಿತು. 'ಮೇಘದೂತ'ದ ಇತರ ಪದ್ಯಗಳು, ಅದರ ಕಾವ್ಯಗುಣದ ವಿಷಯವಾಗಿ ನಾವು ನಡೆಸಿದ ಚರ್ಚೆ, ಕಪಿಮುಷ್ಟಿ ಹಿಡಿದು ಸಮರ್ಥಿಸಿದ ಅಭಿಪ್ರಾಯಗಳು, ನೆನಸಿಕೊಂಡ ಇತರ ಕಾವ್ಯಗಳು, ಹಾಸ್ಯ ಕುಚೋದ್ಯ-ಸಾ ವಿದಗ್ಧ ಪರಿಷತ್... ತಾಃ ಕಥಾಃ -ಅವೆಲ್ಲ ಸ್ಮೃತಿಪಥಕ್ಕೆ ಹೋಗಿ ಅದೆಷ್ಟು ವರ್ಷಗಳಾದವೊ! ಸ್ಮೃತಿಯಲ್ಲಿ ಸಹ ಅವು ಮಂಕಾಗತೊಡಗಿವೆ. ಮಹಾರಾಜಾ ಕಾಲೇಜಿನ ಮಿತ್ರವರ್ಗ ನಿರ್ಮಿಸಿಕೊಂಡಿದ್ದ ದಿವ್ಯ ಪ್ರಪಂಚ ಒಡೆದುಹೋಯಿತು. ಅಳಿದುಳಿದವರ ಮನಸ್ಸಿನಲ್ಲಿ 'ಕಾಂತಿಮತ್ಖಂಡಮೇಕಂ' (ಮತ್ತೆ 'ಮೇಘದೂತ' ನೆನಪಿಗೆ ಬರುತ್ತಿದೆ!) ಇನ್ನೂ

ಇರಬಹುದೇನೋ, ಅಷ್ಟೆ. ಶ್ರೀಕಂಠಯ್ಯನೇ ಆ ಕಾಗದ ಬರೆದ ಕೆಲವು ತಿಂಗಳಲ್ಲಿ ತೀರಿಕೊಂಡರು... (ಪು. ೭೩-೭೪). ಸ್ನೇಹ ವಿಶ್ವಾಸಗಳೇ ಬದುಕಿನ ಬಹುದೊಡ್ಡ ಸಂಪತ್ತೆಂದು ನಂಬಿದ್ದ, ಹಾಗೆಯೇ ಬದುಕನ್ನು ನಡೆಸಿದ್ದ ಈ ಜೀವ ಅಂತರ್ಮುಖಿ-ಯಾದಾಗ ಹೊಂದುವ ಭಾವವಿವಶತೆ ನಮ್ಮ ಮನಸ್ಸನ್ನು ಒಂದು ಕ್ಷಣ ಹಿಡಿದು ನಿಲ್ಲಿಸುತ್ತದೆ. ಈ ಹೃದಯ ಶ್ರೀಮಂತಿಕೆಯ ಬಗೆಗೆ ಆಲೋಚಿಸಿದಾಗ ಇಂದಿನ ದಿನಗಳಲ್ಲಿ ಅದು ಕಾಣದೇ ಹೋಗುತ್ತಿರುವುದನ್ನು ನೆನೆದು ಜೀವಕ್ಕೆ ಚಡಪಡಿಕೆಯಾಗುತ್ತದೆ.

ಅಮೆರಿಕನ್ ಸಮಾಜ ಯಾವುದಕ್ಕೆ ಎಷ್ಟು ಬೆಲೆ ಕೊಡಬೇಕೊ ಅಷ್ಟು ಕೊಡದೆ ಸಾಧಾರಣತ್ವಕ್ಕೆ ಅಸಾಧಾರಣತ್ವ ಆರೋಪಿಸುವುದನ್ನು ಹಲವಾರು ಸಂದರ್ಭಗಳಲ್ಲಿ ನೋಡಿ ಪ್ರೊ|| ರಾವ್‌ರವರು ಗೇಲಿ ಮಾಡಿರುವರು. ಗಲೀನ ಸೀಸದ ಗಣೆಯನ್ನು ಕುರಿತು ಹೇಳುವ ಮಾತುಗಳಲ್ಲಿ (ಪು.೧೫೫); 'ಮೆಕ್ಸಿಕಸ್ ವಿಲೇಜ್' ಎಂಬ ಹೆಸರಿನ ಹೋಟಲ್ಲಿನ ತೋಸ್ತಾದ (Toastada) ಮತ್ತು ಎಂಚಲಾದ (Enchilada) ಗಳನ್ನು ವೆಯ್ಟರ್ ತಂದು ಮುಂದಿಟ್ಟಾಗ ಆಡುವ ಸ್ವಗತಗಳಲ್ಲಿ (ಪು. ೧೬೦); ಇಟಾಲಿಯನ್ ರೆಸ್ಟೋರಾಂಟುಗಳಲ್ಲಿ ಸಿಕ್ಕುವ ಮೆಕರೋನಿ (Macaroni) ಮತ್ತು ಸ್ಪಘೆಟಿ (Spaghetti) ಗಳನ್ನು ಕುರಿತು ಆಡುವ ಮಾತುಗಳಲ್ಲಿ (ಪು.೧೬೧); ಯಾರಿಗಾದರೂ ಸಲಹೆ ಕೊಡುವುದಿದ್ದಲ್ಲಿ ಅಮೆರಿಕನ್ನರು ಹೇಳುವ ('I should like to sell you this idea') ಎಂಬ ವ್ಯಾಪಾರೀ ಮನೋಭಾವ ನುಡಿಗಟ್ಟಿನಲ್ಲಿ (ಪು. ೧೩೬); ಅಮೆರಿಕನ್ ಟಿ.ವಿ ಪ್ರಚಾರ ವೈಖರಿಯ ಬಗೆಗೆ ಆಡುವಲ್ಲಿ (ಪು. ೧೩೬-೧೩೯) ಅವರ ಲಘು ಹಾಸ್ಯ ಬೆರೆತ ಗೇಲಿಯ ಮನೋಭಾವವನ್ನು ನಾವು ಗುರುತಿಸಬಹುದು. ಕೆಲವಡೆ ತಮ್ಮನ್ನು ತಾವೇ ವಿಡಂಬಿಸಿಕೊಳ್ಳುವ, ಅಪರೂಪಕ್ಕೆ ಒಮ್ಮೊಮ್ಮೆ ಬೇರೆಯವರನ್ನು ಮನ ನೋಯದಂತೆ ಗೇಲಿಮಾಡುವ ಅವರ ಪ್ರವೃತ್ತಿ ಅವರ ಬರಹವನ್ನು ಚೇತೋಹಾರಿಯಾಗಿಸಿದೆ.

ಪ್ರೊ|| ರಾವ್‌ರವರ ಈ ಅನುಭವದ ಕಥನದಲ್ಲಿ ಮೇಲಿಂದ ಮೇಲೆ ನನ್ನನ್ನು ಆಕರ್ಷಿಸಿದ್ದು ಗರಿಮುರಿಯಾದ, ಅಡಕವಾಗಿ ಒಪ್ಪ ಓರಣಗಳಿಂದ ಸಿಂಗಾರಗೊಂಡ, ಶಿಸ್ತಿನ ಸಂಯಮದ ಭಾಷೆ. (ಊಟಕ್ಕೆ ಉಪ್ಪಿನಕಾಯಿ ರುಚಿ ಕೊಡುವಂತೆ ಅವರ ಮಾತಿನ ಮಧ್ಯೆ ಸಂಸ್ಕೃತ ಶ್ಲೋಕಗಳು ಅರ್ಥಾನುಸಾರಿಯಾಗಿ ಬರುತ್ತವೆ. ಇದರಿಂದ ಮಾತಿಗೆ ಸವಿ ಹೆಚ್ಚುತ್ತದೆ, ಬಣ್ಣವೇರುತ್ತದೆ. ಒಬ್ಬ ಇಂಗ್ಲಿಷ್ ಪ್ರೊಫೆಸರ್ ಇಷ್ಟು ಸೊಗಸಾಗಿ ಭಾಷೆ ಬಳಸುವುದನ್ನು ನೋಡಿ-ಹಲವಾರು ವರ್ಷಗಳಿಂದ ಕನ್ನಡ ಭಾಷೆ ಸಾಹಿತ್ಯ ಕಲಿಸುತ್ತಿರುವ ನನ್ನಂಥವನಿಗೇ ಇನ್ನೂ ಆ ಭಾಷಾಸಿದ್ಧಿ ಕರಗತವಾಗದಿರುವುದನ್ನು ನೋಡಿ-ಅಚ್ಚರಿಯಾಗಿದೆ; ಮುಚ್ಚುಮರೆ ಏಕೆ ಸ್ವಲ್ಪ ಅಸೂಯೆಯೂ ಆಗಿದೆ. ಚಿತ್ತಾಕರ್ಷಕ

ವರ್ಣನೆ ಅವರ ಈ ಪುಸ್ತಕದ ಮತ್ತೊಂದು ಗಮನಾರ್ಹ ಗುಣ. ಪ್ರೊ|| ರಾವ್‌ರವರು ಪಾಶ್ಚಾತ್ಯರಲ್ಲಿ ಬಳಕೆಯಲ್ಲಿರುವ ತೊಟ್ಟಿ ಸ್ನಾನವನ್ನು ಮೆಚ್ಚಿ ವರ್ಣಿಸುವುದನ್ನು ಕೇಳಿದಾಗ ನಮಗೂ ಆ ಸುಖಾನುಭವ ಪಡೆಯುವ ಆಸೆ ಉಂಟಾಗುತ್ತದೆ. ಆ ವರ್ಣನೆ ಹೀಗೆ ಬರುತ್ತದೆ:

"ನಾನು ನನ್ನದೇ ಆದ ಸ್ನಾನಕ್ರಮವನ್ನು (ಅದು ಹಿಂದೆಯೇ ಪೇಟೆಂಟಾಗಿದ್ದಿರಬಹುದಾದರೂ ನನ್ನ ಸ್ವಂತ ಪ್ರತಿಭೆಗೆ ಹೊಳೆದದ್ದು) ಮೊದಲ ಬಾರಿಗೆ ಆಚರಣೆಗೆ ತಂದೆ. ತೊಟ್ಟಿಯಲ್ಲಿ ಮೈಮುಳುಗುವಷ್ಟು ನೀರು ತುಂಬುವುದು; ಉಷ್ಣತೆ ಯಥಾ ಸುಖಂ. ಆಮೇಲೆ ಗಡಿಯಾರದ ಕಡೆ ತಿರುಗದೆ ಮೈಬೆವರುವವರೆಗೆ, ಮೈಯಿನ ನದರೂ ಮನಸ್ಸಿನ ಆಲಸ್ಯವೂ ಕಳೆಯುವವರೆಗೆ ನೀರು ತಣ್ಣಗಾದಂತೆಲ್ಲ ಬಿಸಿನೀರು ಸೇರಿಸುತ್ತ ಮಲಗಿರುವುದು; ಆಮೇಲೆ ಆ ನೀರನ್ನೆಲ್ಲ ಬಿಟ್ಟು ಸಾಬೂನು ಉಜ್ಜಿಕೊಂಡು ತುಂತುರು ನಲ್ಲಿಯನ್ನು (ಷವರ್) ತಿರುಗಿಸಿ ಕಾಲುಘಂಟೆ ಅದರ ಕೆಳಗೆ ಕೂತಿರುವುದು; ಒರಸಿಕೊಂಡು ಅರ್ಧಘಂಟೆ ಹಾಸಿಗೆಯಲ್ಲಿ ಅಡ್ಡಂಕಿ ಹಾಕಿ ನಿದ್ದೆ ಮಾಡಿಬಿಡುವುದು. ಶ್ರೀ ಕುವೆಂಪು ಅವರು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿರುವ 'ಅಜ್ಜಯ್ಯನ ಅಭ್ಯಂಜನ' ಈಗ ಸುಲಭಸಾಧ್ಯವಲ್ಲ -ಹಿಂದಿನ ಅಜ್ಜಯ್ಯಗಳು ತಮ್ಮ ಅಭ್ಯಂಜನಕ್ಕಾಗಿ ಮಲೆನಾಡಿನ ಕಾಡುಗಳನ್ನೆಲ್ಲ ಸುಟ್ಟುಹಾಕಿದ್ದಾರೆ. ಅದನ್ನು ಬಿಟ್ಟರೆ ಎರಡನೆಯ ಸ್ಥಾನ ನಾನು ಹೇಳಿದ ಸ್ನಾನಕ್ರಮಕ್ಕೆ ಸಲ್ಲಬೇಕು. ಅದು ತೀರ ಸರಳವಾದ ಕ್ರಮ; ಆದರೂ ಸ್ನಾನವಾದ ಮೇಲೆ ಮೈಯಿನ ಬಿಗುವೆಲ್ಲ ಇಳಿದು ಹೋಗುತ್ತದೆ. ನರಗಳು ಸಡಿಲವಾಗುತ್ತವೆ; ಮಲಗಿದೊಡನೆ ನಿದ್ದೆ ಬರುತ್ತದೆ; ಆಲಸ್ಯವೆಲ್ಲ ಕಳೆದು ಮೈ ಮನಗಳೆರಡೂ ಮತ್ತೊಂದು ಒಬ್ಬೆ ಆಲಸ್ಯಕ್ಕೆ ಸಿದ್ಧವಾಗುತ್ತವೆ. ನಾನು ಇನ್ನೊಂದು ಬಾರಿ ಮನೆಕಟ್ಟಿದರೆ, ಅದಕ್ಕಾಗಿ ಸಾಲ ಮಾಡುವುದು ಸಾಧ್ಯವಾದರೆ, ಮತ್ತು ಸಾಲವನ್ನು ತೀರಿಸುವುದು ಅನವಶ್ಯಕವಾದರೆ-ಮೇಲೆ ಬಣ್ಣಿಸಿದಂಥ ಬಚ್ಚಲಮನೆಯನ್ನು ಕಟ್ಟಲೇಬೇಕು!" (ಪು. ೧೧-೧೪)

ಜೋಗ್ ಜಲಪಾತವನ್ನೂ ಅದರ ಪಕ್ಕದಲ್ಲಿ ನಯಾಗಾರಾ ಜಲಪಾತವನ್ನೂ ಮಾತಿನಲ್ಲಿ ತೂಗಿನೋಡುವ ಸಂದರ್ಭದಲ್ಲಿ ಅವರ ಸೌಂದರ್ಯಪ್ರಜ್ಞೆಗೆ ಒದಗಿಬಂದ ಅಪೂರ್ವವಾದ ಅನುಭವ ತನಗೆ ತಾನೇ ಅರಳಿನಿಲ್ಲುತ್ತದೆ. ಅದನ್ನು ಓದಿಯೆ ಅನುಭವಿಸಬೇಕು:

"...ಡಿಸೆಂಬರ್‌ನಲ್ಲಿ ನಾನು ಮೊದಲಸಲ ಅದನ್ನು (ಜೋಗ್ ಜಲಪಾತವನ್ನು ನೋಡಿದ್ದು ೧೯೨೫ರ ಸುಮಾರಿನಲ್ಲಿ. ಆಗ ಕಾಡು ಇನ್ನೂ ದಟ್ಟವಾಗಿದ್ದ ಕಾಲ. ರಸ್ತೆಯ ಒಂದು ತಿರುವನ್ನು ದಾಟಿದೊಡನೆ ಕಾಡಿನ ಮರೆಯಲ್ಲಿದ್ದ ನದಿ (ಜಲಪಾತ ಇನ್ನೂ ಕಾಣುತ್ತಿರಲಿಲ್ಲ) ಹಠಾತ್ತಾಗಿ ಕಣ್ಣಿಗೆ ಬಿತ್ತು.

And on a sudden, to The level lake
And the the golnes of the Winter moon.

(ಹಠಾತ್ತಾಗಿ ಕಾಣಿಸಿತು, ಆ ಮಟ್ಟಸವಾದ ಸರೋವರ, ಮತ್ತು ಅದರ ಮೇಲೆ ನೀಳವಾಗಿ ಹಬ್ಬಿದ ಶಿಶಿರಚಂದ್ರನ ಪ್ರಭೆ)

ನಾನು ಕಂಡದ್ದು ಸರೋವರವಲ್ಲ. ನದಿಯ ಹರವು; ಚಂದ್ರನ ಪ್ರಭೆಯೂ ಅಲ್ಲ; ಸೂರ್ಯನದ್ದು. ಆದರೂ ಟೆನಿಸನ್‌ನ ಆ ಪಂಕ್ತಿಗಳನ್ನು ಹೇಳಿಕೊಂಡ ನೆನಪಿದೆ. ಆಗ ನನ್ನ ಅನುಭವಕ್ಕೆ ಬಂದದ್ದು ಸುಂದರವಾದ ನೋಟ ಮಾತ್ರವಲ್ಲ, 'ದರ್ಶನ'. ಅದರಲ್ಲಿ ದೈವಾಂಶ ಕಂಡು ಅದು ಪವಿತ್ರ ಎನ್ನಿಸಿತು-ವರ್ಡ್ಸ್‌ವರ್ತನ ಕವನಗಳಲ್ಲಿ ತೊಯ್ದಿದ್ದ ಮನಸ್ಸಿಗೆ. ಆ ಅನುಭವ ಇನ್ನೂ ಮಸುಕಾಗಿಲ್ಲವಾದರೂ ಆ 'ದರ್ಶನ'ವಾದದ್ದು ಅದೊಂದೇ ಸಾರಿ. ಅಲ್ಲಿಂದೀಚೆಗೆ-ಕಾಡೆಲ್ಲ ತೆಳುವಾಗಿದೆ, ಜನರ ಗೊಂದಲ ಹೆಚ್ಚಿದೆ, ನನ್ನ ಕಣ್ಣಿನ ಮೇಲೆ ಬಳಕೆಯ ಪರೆ ಬಂದಿದೆ! ಇದೆಲ್ಲದರಿಂದಾಗಿ ಆ ದೃಶ್ಯವನ್ನು ಕಂಡಾಗ ಹಿಂದಿನ ಉತ್ಸಾಹ, 'ಭಕ್ತಿ' ಉಕ್ಕಿಬರಲೊಲ್ಲದು. ಆ ಕಣಾಸಿನ ಕಾಂತಿ ಹೊರಟು ಹೋಯಿತೆಂದು ಒಪ್ಪುತ್ತೇನೆ.

ಶರಾವತಿಯನ್ನು ಜಂಜಾಲಿನಲ್ಲಿ ದಾಟಿದೆನೆಂಬ ನೆನಪು. ಜಲಪಾತದ ಬಳಿಗೆ ಬಂದಾಗ ನನ್ನಲ್ಲಿದ್ದ ರಮ್ಯ ಮನೋವೃತ್ತಿ ದೃಶ್ಯದ ಮನೋಹರತೆಯನ್ನು ಹೆಚ್ಚಿಸಿತು. ಆದರೂ ನಾನು ನಿರೀಕ್ಷಿಸಿದ್ದಕ್ಕೂ ವಾಸ್ತವವಾಗಿ ಕಂಡದ್ದಕ್ಕೂ ಅಂತರವಿತ್ತು. ನದಿ ನಾಲ್ಕು ಸಣ್ಣ ಭಾಗಗಳಾಗಿ ಒಡೆದು ಧುಮುಕುವುದರಿಂದ ಸೃಷ್ಟಿಯಾದದ್ದು ಚೆಲುವು, ಮನೋಹರತೆ. ಆದರೆ ಪ್ರಕೃತಿಯ ಪ್ರಚಂಡ ಶಕ್ತಿಯ ಮತ್ತು ಭವ್ಯತೆಯ ಅರಿವಾಗಲಿಲ್ಲ. ಆ ಭವ್ಯತೆ ನಾಲ್ಕು ಸೀಳಾಗಿ ಹಂಚಿಹೋಯಿತು. ರಾಜ, ರಾಣಿ, ರೋರರ್, ರಾಕೆಟ್ ಯಾವುದೊಂದಕ್ಕೂ ಪ್ರಮಾಣ ಸಾಲದು. ಪ್ರಪಾತದ ಬಡುವೊಂದರ ಮೇಲೆ ಬಿದ್ದು ಹರಡಿಕೊಳ್ಳುವ 'ರಾಣಿ'ಯಲ್ಲಿ ಕಾಣುವುದು ಪ್ರಿಯತಮನ ತೊಡೆಯ ಮೇಲೆ ಬಿದ್ದು ಹರಡಿ ವಸನದೊಡನೆ ಕುಳಿತ ಯುವತಿಯ ಚಿತ್ರ. ಶಿವನ ಜಟೆಯನ್ನು ಜಗ್ಗಿಸುವ ಗಂಗೆಯ ರಭಸದ ಚಿತ್ರವಲ್ಲ-ಏಕಾಗಬೇಕು! ಅದನ್ನು ನಿರೀಕ್ಷಿಸಿದ್ದು ಸರಿಯಲ್ಲ. ಕೊಟ್ಟ ಚೆಲುವನ್ನು ಸವಿಯದೆ ಬೇರೊಂದಿಲ್ಲವಲ್ಲ ಎಂದು ತಪಿಸಬಾರದು. ಇದನ್ನು ಇಲ್ಲಿ ಪ್ರಸ್ತಾಪಿಸಿರುವುದರ ಉದ್ದೇಶ: ಅಂದು ನನಗಾದ ಅನುಭವ, ಅದೇ ಜೋಗದಲ್ಲಿ (ಆಗಸ್ಟ್‌ನಲ್ಲಿ) ಆದ ಬೇರೊಂದು ಅನುಭವ, ನಯಾಗರದಲ್ಲಿ ಆದ ಅನುಭವ-ಈ ಮೂರು ಬಗೆಯ ಸೌಂದರ್ಯಗಳ ಸ್ವರೂಪವನ್ನು ನಿರ್ದೇಶಿಸುವುದು.

ನನಗೆ ಮೇಲೆ ಹೇಳಿದ 'ಬೇರೊಂದು ಅನುಭವ' ಆದದ್ದು ಆಗಸ್ಟ್ ತಿಂಗಳ ಸುಮಾರಿನಲ್ಲಿ ಶರಾವತಿ ತುಂಬಿ ಹರಿಯುವ ಮಳೆಗಾಲದಲ್ಲಿ... ಆಗಸ್ಟ್ ಮೊದಲನೆಯ

ವಾರದಲ್ಲಿ. ಅವತ್ತು ಮಳೆ ಕುಂಬದ್ರೋಣವಾಗಿ ಕರೆಯುತ್ತಿತ್ತು. ಗಾಳಿ ಹುಚ್ಚೆದ್ದು ಘಳಿಗೆಗೊಂದು ಕಡೆಯಿಂದ ಬೀಸುತ್ತಿತ್ತು. ಅದರ ಸಂತತವಾದ ಭೋರ್ಗರೆತದೊಡನೆ ಪಾತಾಳದಿಂದ ಬಗೆದು ಬಂದ ಭೋರ್ಗರೆತವು ಸೇರಿ ಕಿವಿ ಕಿವುಡಾಯಿತು. ಪ್ರಪಾತದ ಬಳಿ ಹೋಗಿ ನಿಂತಾಗ ನಮ್ಮ ತಲೆಯಿಂದ ಸಣ್ಣ ನದಿಗಳು ಇಳಿದದ್ದು ಹಾಗಿರಲಿ, ಮಳೆ ರಾಚಿ ರಾಚಿ ಮುಖಕ್ಕೆ ಅಪ್ಪಳಿಸುತ್ತಿತ್ತು.

ಅಲ್ಲಿ ಏನೇನೂ ಕಾಣುವುದಿಲ್ಲ, ಮಂಜು ಕವಿದಿರುತ್ತೆ ಎಂದು ಜನ ಹೇಳಿದ್ದು ಸುಳ್ಳಲ್ಲ; ಪೂರ್ತಿ ನಿಜವೂ ಅಲ್ಲ. ಅಂದು ನಾನು ಕಂಡ ದೃಶ್ಯದಲ್ಲಿ ಈ ಉಂಟು ಇಲ್ಲಗಳ ಕ್ರಮ ನಿಯಮಗಳಿಲ್ಲದ ಆಕಾಂಡತಾಂಡವು ಮುಖ್ಯವಾದೊಂದು ಅಂಶ. 'ನಾಸದೀಯ ಸೂಕ್ತ'ದ ಕವಿ ಕಂಡದ್ದು ಇಂಥ ದೃಶ್ಯವಿರಬೇಕು. ಆಗ ಯಾವುದೂ ಇರಲಿಲ್ಲ; ಇಲ್ಲದಿರಲಿಲ್ಲ. ವಾಯುವಿರಲಿಲ್ಲ (ವಾಯುವಿತ್ತು ಕೂಡ!) ಆಕಾಶವಿರಲಿಲ್ಲ. ಅಲ್ಲಿ ನೀರಿತ್ತೆ? ಆಳತೆಗೆ ಸಿಕ್ಕದ ಆಳವಿತ್ತೆ? ಇದ್ದದ್ದಲ್ಲೆ Chaos ಗೊಂದಲ; ರೂಪವಿಲ್ಲ ರೇಷೆಯಿಲ್ಲ. ಯಾವುದೋ ಅಸೀಮಶಕ್ತಿ ಆ ಗೊಂದಲದ ಮೇಲೆ ಆಡಿ ಕವಿದಿದ್ದ ಮಂಜನ್ನು ಆಗಾಗ ಚದುರಿಸಿತು. ಹಠಾತ್ತಾಗಿ ಮಂಜನ್ನೂ ಮಳೆಯನ್ನೂ ಸೀಳಿಕೊಂಡು ಬಿಸಿಲು ಬಂತು; ಮಂಜಿನ ಮಾಸಲು ಬಿಳುಪು ಒಡೆದು ಚಂಚಲವಾಗಿಯಾದರೂ ಏಳು ಬಣ್ಣಗಳು ಕಾಣಿಸಿಕೊಂಡವು. ಸೃಷ್ಟಿಗೆ ಪ್ರೇರಕಶಕ್ತಿಯಾದ ಕಾಮ ಬಿಲ್ಲು ಹಿಡಿದು ಬಂದನೇನೊ! ಗೊಂದಲದ ಒಡಲಿನಿಂದ ಹೊರಟ ಜಲರಾಶಿ ವಿಶ್ವವನ್ನೇ ನಡುಗಿಸುವಂತೆ ಧುಮುಕುವುದು ಕಂಡಿತು. ರೂಪವಿಲ್ಲದಿದ್ದದ್ದು ರೂಪ ತಳೆಯಲಾರಂಭಿಸಿತು. ಈ ದೃಶ್ಯ ಕಂಡಿತು, ಕಾಣದಾಯಿತು, ಮತ್ತೆ ಕಂಡಿತು. ಒಂದೊಂದು ಕ್ಷಣ ಸೋತು ಹಿಮ್ಮೆಟ್ಟಿದಂತಿದ್ದರೂ ಮತ್ತೆ ಮುನ್ನುಗ್ಗಿ ಸೃಷ್ಟಿಶಕ್ತಿ ಜಯದೆಡೆಗೆ ಸಾಗಿದಂತಿತ್ತು. ಇದು ಚೆಲುವು ಮಾತ್ರವಲ್ಲ; ಇದರ ರಸ ಶೃಂಗಾರವಲ್ಲ, ಅದ್ಭುತ; ಇದು ಲಾಸ್ಯವಲ್ಲ, ತಾಂಡವ, ಭಯಂಕರ, ದಿವ್ಯಸುಂದರ, ರುದ್ರರಮ್ಯ!

ನಾವು ನಯಾಗಾರವನ್ನು ನೋಡಿದ ದಿನ ಅಲ್ಲೂ ಮಳೆಯಿತ್ತು, ಸ್ವಲ್ಪ ಮಂಜೂ ಇತ್ತು. ಆದರೆ ಪ್ರಪಾತವೂ ನೀರ್ಬೀಳೂ ಸ್ಪಷ್ಟವಾಗಿ, ಅದ್ಭುತವಾಗಿ ಅದಮ್ಯ ಶಕ್ತಿಯುಳ್ಳದ್ದಾಗಿ ಕಾಣುತ್ತಿತ್ತು. ಈ ನದಿಯ ಪಾತ್ರ ವಿಸ್ತಾರವೂ ಇಲ್ಲಿ ಹರಿಯುವ ನೀರಿನ ಪ್ರಮಾಣವೂ ಹೆಚ್ಚಾದ್ದರಿಂದ ಡಿಸೆಂಬರಿನ ಜೋಗದಲ್ಲಿ ಕಾಣದ ಬೃಹತ್ತೂ ಭವ್ಯತೆಯೂ ಇಲ್ಲಿ ಕಾಣುತ್ತದೆ. ನಾವು ಆಗಸ್ಟ್ ತಿಂಗಳಲ್ಲಿ ಜೋಗದಲ್ಲಿ ಕಂಡದ್ದು ಪ್ರಳಯದಿಂದ ಪ್ರಪಂಚ ಅರಳುತ್ತಿರುವ ಕಾಲದ ಭಯಾನಕ ಆಂದೋಲನ. ಇಲ್ಲಿ ಕಂಡದ್ದು ಆಂದೋಲನದ ಪರಿಣಾಮ" (ಪು. ೧೪೭-೧೪೮).

ಪ್ರೊ. ರಾವ್‌ರವರ ಈ ಅನುಭವಕಥನದಲ್ಲಿ ಅಮೆರಿಕದ ಪ್ರೇಕ್ಷಣೀಯ ಸ್ಥಳಗಳ ವೀಕ್ಷಕ ವಿವರಣೆ ಕಡಿಮೆ ಪ್ರಮಾಣದಲ್ಲಿದ್ದು, ಅಮೆರಿಕನ್ ಸಮಾಜದ ಆಳವಾದ

ಅಧ್ಯಯನ ಹೆಚ್ಚಿನ ಪ್ರಮಾಣದಲ್ಲಿದೆ. ಅವರೇ 'ಅರಿಕೆ'ಯಲ್ಲಿ ಹೇಳಿಕೊಂಡಿರುವಂತೆ "ಇದರಲ್ಲಿ ಅಮೆರಿಕದಲ್ಲೇ ಆದ ಅನುಭವಗಳ ಜೊತೆಗೆ ಅದರಿಂದ ಪ್ರಚೋದಿತವಾಗಿ ಮನಸ್ಸಿನ ಮೇಲ್ಪದರಕ್ಕೆ ಬಂದ ಹಳೆಯ ಅನುಭವಗಳೂ ಸೇರಿವೆ." ಮಗ ಸೊಸೆ ಇವರ ವ್ಯಾಜದಿಂದ ಹೊಸ ಸಂಬಂಧದೊಡನೆ ಸ್ನೇಹ-ವಿಶ್ವಾಸಗಳನ್ನು ಹಮ್ಮಿಕೊಂಡು ಅವರೊಡನೆ ನಡೆಸಿದ ಮಾತುಕತೆಗಳಲ್ಲಿ ಅವರಿಂದ ಕಲಿಯಬಹುದಾದದ್ದನ್ನು ಕಲಿತು ಹಾಗೂ ಅವರಿಗೆ ತಿಳಿಯ ಹೇಳಬೇಕಾದ್ದನ್ನು ನಯವಾಗಿ ಹೇಳಿ ಹೀಗೆ ತನ್ನ ಹಾಗೂ ಸುತ್ತಣ ಬಂಧು-ಮಿತ್ರರೊಡನ ಮಧುರ ಮೈತ್ರಿಯನ್ನು ಬೆಳೆಯಿಸಿದ ಪ್ರೊ|| ರಾವ್‌ರವರ ಅನುಭವಗಳು ವಿಶಿಷ್ಟವಾದವುಗಳು. ವಯಸ್ಸಲ್ಲದ ವಯಸ್ಸಿನಲ್ಲಿ ಪ್ರೊ|| ರಾವ್ ಅಮೆರಿಕ ಪ್ರವಾಸ ಕೈಗೊಂಡರು. ಒಂದು ವಿಧದಲ್ಲಿ ಈ ಯಾತ್ರೆ ಅರ್ಥಪೂರ್ಣವಾದುದು. ಮೈ ಮನಗಳು ಹಣ್ಣಾಗಿ ಪಡೆಯುವ ಅನುಭವಗಳಿಗೂ, ಬಿಸಿನೆತ್ತರಿನ ಪ್ರಾಯದ ಗೊತ್ತು ಗುರಿಯಿಲ್ಲದ ಅನುಭವಗಳಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿದೆ. ಪ್ರೊ|| ರಾವ್‌ರವರು ಓದಿನಿಂದ, ಅನುಭವದಿಂದ, ಜನ-ಮನದೊಡನೆ ಬಹುಕಾಲ ಬೆರೆತು ಸುಖ-ದುಃಖಗಳನ್ನು ಹಂಚಿಕೊಂಡಿರುವುದರಿಂದ ಅವರ ಮನಸ್ಸು ಪಕ್ವವಾಗಿದೆ, ವಿಶಾಲವಾಗಿದೆ, ಸುಸಂಸ್ಕೃತವಾಗಿದೆ. ಮಾಗಿದ ಮನಸ್ಸಿನ ಪ್ರೊ|| ರಾವ್‌ರವರ ಅಮೆರಿಕಾಯಾತ್ರೆಯಲ್ಲಿ ವರ್ಣನಾಂಶಕ್ಕಿಂತ ಚಿಂತನಾಂಶ ಹೆಚ್ಚಾಗಿರುವುದು ಸಹಜ. ಕೃತಿಗಿಟ್ಟಿರುವ ಹೆಸರು ಎಲ್ಲ ವಿಧದಿಂದಲೂ ಅರ್ಥಪೂರ್ಣವಾಗಿದೆ. ಪ್ರೊ|| ಎಲ್.ಎಸ್. ಶೇಷಗಿರಿರಾಯರು ಹೇಳುವಂತೆ ಇದು 'ಯಾವ ಭಾಷೆಯ ಸಾಹಿತ್ಯಕ್ಕಾದರೂ ಗೌರವ ತಂದು ಕೊಡುವ ಕೃತಿ'. ಇದನ್ನು ಓದುವುದರಿಂದ, ಕನ್ನಡಿಗರು ಬಹುದೊಡ್ಡ ಅನುಭವ ಸಂಪತ್ತನ್ನೂ ತಮ್ಮದಾಗಿಸಿಕೊಳ್ಳಬಹುದು.

ಶ್ರೀಮತಿ ಸುಧಾಮೂರ್ತಿಯವರ **ಅಟ್ಲಾಂಟಿಕ್‌ದಾಚೆಗೆ** ಬಹುತೇಕ ಅಮೇರಿಕಾ ಪ್ರವಾಸ ಕಥನ. ಪುಸ್ತಕದ ಕೊನೆಯ ೨೩ ಪುಟಗಳಲ್ಲಿ ಫ್ರಾನ್ಸ್‌ನ ಅನುಭವ ಕಥನ ಬಂದಿದೆ. ಬಾಸ್ಟನ್, ಬಫೆಲೋ, ಚಿಕ್ಯಾಗೋ, ಲಾಸ್‌ವೇಗಾಸ್, ಕ್ಯಾಲಿಫೋರ್ನಿಯಾ, ಲಾಸ್‌ಏಂಜಲ್ಸ್, ಸ್ಯಾನ್‌ಫ್ರಾನ್ಸಿಸ್ಕೊ, ಹ್ಯೂಸ್ಟನ್, ನ್ಯೂಆರ್ಲಿಯನ್ಸ್, ವಾಷಿಂಗ್‌ಟನ್, ನ್ಯೂಯಾರ್ಕ್ -ಇವೇ ಮೊದಲಾದ ಪಟ್ಟಣಗಳ ಸುತ್ತಮುತ್ತಣ ಪ್ರೇಕ್ಷಣೀಯ ಸ್ಥಳಗಳಿಗೆ ಶ್ರೀಮತಿ ಮೂರ್ತಿಯವರು ಭೇಟಿ ನೀಡಿ ಪಡೆದ ಅನುಭವಗಳ ನಿರೂಪಣೆ ಈ ಪ್ರವಾಸ ಕಥನದಲ್ಲಿ ಬಂದಿದೆ. ಏಕಾಕಿ ಪ್ರವಾಸಿಯಾಗಿ ಹೊರಟ ದಿಟ್ಟ ಹೆಣ್ಣು ಶ್ರೀಮತಿ ಮೂರ್ತಿಯವರು. ಅವರು ತಮಗಿರುವ ಅಲ್ಪಕಾಲಾವಧಿಯಲ್ಲಿ ೧೫,೦೦೦ ಮೈಲು ಪ್ರವಾಸವನ್ನು ಬಸ್ಸಿನಿಂದ, ವಿಮಾನದಿಂದ, ರೈಲಿನಿಂದ, ಹೆಲಿಕಾಪ್ಟರಿನಿಂದ, ಪುಟ್ಟ ಹಡಗಿನಿಂದ ಮಾಡಿರುವರು. "ಅಪರಿಚಿತ ದೇಶದಲ್ಲಿ ನಾನು ಒಬ್ಬಳೇ ಎಲ್ಲ ಸ್ಥಳಗಳಿಗೂ

ಹೋದಾಗ ನನಗೆ ಆಗಿರುವ ಅನುಭವವನ್ನು, ನನ್ನ ದೃಷ್ಟಿಯಲ್ಲಿ ಯಾವುದು ಮಹತ್ವವಿದೆ ಅಂತಹ ಪ್ರಸಂಗವನ್ನು ನಾನು ಬರೆದಿರುವೆ." ('ಮೊದಲ ಮಾತು') ಎನ್ನುವ ಶ್ರೀಮತಿ ಮೂರ್ತಿ ಅವರಿಗೆ "ನನ್ನ ಅನುಭವ ಕೇವಲ ನನ್ನದೇ ಮಾತ್ರ ಹೊರತು ಯಾವುದೇ ಕೈಗಡದ್ದಲ್ಲ, ಅಥವಾ ಅಧಿಕಾರಯುತ ವಿಮರ್ಶೆಯೂ ಅಲ್ಲ" (ಪು. ೧೦೮) ಎನ್ನುವ ದಿಟ್ಟತನವೂ ಇದೆ.

ಏಕಾಕಿ ಪ್ರವಾಸ ಶ್ರೀಮತಿ ಮೂರ್ತಿಯವರಿಗೆ ಸುಲಭವೇನಾಗಿರಲಿಲ್ಲ. ಅದು ಮಧುರವೂ ಹೌದು, ಕಹಿಯೂ ಹೌದು. ಅವರೇ ಹೇಳಿರುವಂತೆ "ಕೆಲವು ಕೆಟ್ಟ ಅನುಭವಗಳು ನನ್ನ ಧೈರ್ಯ, ಮಾನಸಿಕ ಸ್ವಾಸ್ಥ್ಯಗಳನ್ನೇ ಹಲವಾರು ಬಾರಿ ಅಲುಗಿಸಿದವು. ಅಪರಿಚಿತ ದೇಶದಲ್ಲಿ ಹೋಟೆಲದಲ್ಲಿ ಒಂಟಿಯಾಗಿರಬೇಕಾಗಿ ಬಂದಾಗ ಅಳುಕಿದ್ದೇನೆ. ಗ್ರ್ಯಾಂಡ್‌ಕ್ಯಾನಿಯನ್ನು ಕೊಳ್ಳದ ಹೋಟೆಲ್ ಕಟ್ಟಡವಿಯಲ್ಲಿದ್ದ ಚಿಕ್ಕ ಬಂಗಲೆಯಲ್ಲಿ ನಾನೊಬ್ಬಳೇ ಇದ್ದೆ. ದಟ್ಟ ಅರಣ್ಯದ ಹೊರತು ಮತ್ತೇನೂ ಗೋಚರಿಸಲಿಲ್ಲ. ಅಂತೆಯೇ ಲಾಸ್‌ಏಂಜಲ್ಸ್‌ನ ಕಿರುಮನೆಯಲ್ಲಿ ಕೇವಲ ಒಂದು ಮುದಿಬೆಕ್ಕಿನ ಜೊತೆಯಲ್ಲಿ ಎಂಟು ದಿನ ಕಳೆದಿರುವೆ. ರಾತ್ರಿಯ ವೇಳೆ ವಾಷಿಂಗ್‌ಟನ್ನಿನಲ್ಲಿ ಲಿಂಕನ್ನಿನ, ಜೆಫರಸನ್ ಸ್ಮಾರಕ ನೋಡಲು ಹೋದಾಗ ಆ ಭವ್ಯ ಸ್ಮಾರಕದೆದುರು ನಾನೊಬ್ಬಳೇ ಇದ್ದುದು ಈಗ ನೆನಪಾದರೂ ಅದ್ದೇಗೆ ನಾನು ಹೋಗಿ ಬಂದೆನೋ ಅನಿಸುವುದು! ನ್ಯೂಯಾರ್ಕಿನ ಅನುಭವವಂತೂ ಮರೆಯಲಾರದಂಥದ್ದೇ! (ಶ್ರೀಮತಿ ಮೂರ್ತಿಯವರನ್ನು ನೋಡಿ ಸಂಶಯಗೊಂಡ ಓರ್ವ ಸಿ.ಬಿ.ಐ. ಆಫೀಸರ್ ಅವರನ್ನು ಹಿಂಬಾಲಿಸಿ ಬಂದು ಕೊನೆಗೆ ಹೀಗೆ ಬುದ್ಧಿವಾದ ಹೇಳಿದನಂತೆ "Never travel by train at Newyork after 6-30 P.M."

ಪ್ರವಾಸ ಎಷ್ಟೇ ಕಷ್ಟಕರವೆನಿಸಿದ್ದರೂ ಚಿರಕಾಲ ನೆನಪಿನಲ್ಲುಳಿಯುವ ಮಧುರ ಅನುಭವಗಳನ್ನು ಅದು ಬಳುವಳಿಯಾಗಿ ಅವರಿಗೆ ಕೊಟ್ಟಿದೆ. ಪ್ರವಾಸದ ಕಹಿ ಅನುಭವಗಳು ಅವರಿಗೆ ಪಾಠವನ್ನೂ ಕಲಿಸಿದ್ದರೂ ಅನುಭವಗಳು "ನಾನು ಪ್ರವಾಸವನ್ನು ಮತ್ತೆ ಮಾಡಲು ಬಯಸುವೆ, ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಲ್ಲವೆ?" (ಪು. ೧೦೭) ಎಂದು ಅವರಿಂದ ಉದ್ಗಾರ ಹೊರಡಿಸಿದೆ.

ಶ್ರೀಮತಿ ಮೂರ್ತಿಯವರು 'Foder U.S.A. 1979' ಎಂಬ ಪುಸ್ತಕದ ಸಹಾಯದಿಂದ, ಪಟ್ಟಣಗಳ ನಕಾಶೆಯ ಸಹಾಯದಿಂದ, ಅಮೆರಿಕಾದ ಪ್ರಮುಖ ಪ್ರವಾಸೀ ತಾಣಗಳ ಸುತ್ತಾಟ ನಡೆಸಿರುವರು. ತಾವು ನೋಡಿದ ಸ್ಥಳಗಳ ವಿವರವಾದ ವರ್ಣನೆಯನ್ನು ಅವರು ಮಾಡಿರುವರು. ಒಮ್ಮೊಮ್ಮೆ ಇವರು ಕೊಡುವ ವಿವರಗಳನ್ನು

ಗಮನಿಸಿದಾಗ ಇವರಲ್ಲಿ ಎಲ್ಲವನ್ನೂ ವಿವರಿಸಿ ಹೇಳಬೇಕೆನ್ನುವ ತವಕ ಪ್ರಧಾನವಾಗಿ ಬಿಡುತ್ತದೆ. ಈ ವಿವರಗಳು ಸಾಹಿತ್ಯಕವಾಗಿ ನಿರೂಪಣೆಗೊಳ್ಳುವಾಗ ಮನಸ್ಸನ್ನು ಸೆರೆಹಿಡಿಯುವ ಗುಣವನ್ನು ಪಡೆದುಕೊಳ್ಳದೆ ವರದಿರೂಪದ್ದಾಗಿಬಿಡುತ್ತದೆ. ಆದರೂ, ಗ್ರ್ಯಾಂಡ್ ಕ್ಯಾನಿಯನ್, ಡಿಸ್ನಿಲ್ಯಾಂಡ್, ಹಾಲಿವುಡ್, ಲೂವ್ರ್ ವಸ್ತು ಸಂಗ್ರಹಾಲಯ, ವರ್ಸಾಯ್ ಅರಮನೆ -ಇವುಗಳನ್ನು ನೋಡಿದಾಗಿನ ಅನುಭವಗಳ ವಿವರಣೆ ವಿದ್ವೆಯಿಂದ ಸಂಸ್ಕಾರಗೊಂಡ ಚೇತನವೊಂದರ ಸರಳ ನಿರೂಪಣೆ ಎನ್ನಿಸದಿರದು. ಶ್ರೀಮತಿ ಮೂರ್ತಿಯವರದು ಸುರಿತ ಬರವಣಿಗೆ. ಅವರ ಈ ಹಿತಮಿತವಾದ ಪ್ರವಾಸೀ ಅನುಭವಗಳು ಬೆಲೆಯುಳ್ಳವಾಗಿವೆ, ಆ ದೇಶಗಳಿಗೆ ಭೇಟಿ ನೀಡುವವರಿಗೆ ಮಾರ್ಗದರ್ಶಿಯಾಗಿದೆ. ನನಗೆ ತೀರಾ ಮೆಚ್ಚುಗೆಯಾದದ್ದು ಅವರ 'ಏಕಾಕಿ ಪ್ರವಾಸ'ದ ದಿಟ್ಟತನ. ಈ ಸಾಹಸ, ಧೈರ್ಯ ಕೆಲವೇ ಜನರಿಗಿದೆ ಎನ್ನುವ ವಿಚಾರ ಪುಸ್ತಕ ಓದಿ ಮುಗಿಸಿದಾಗ ನನಗೆ ಉಂಟಾಗಿದೆ. ಆ ಕಾರಣಕ್ಕಾಗಿಯೇ ನನಗೆ ಅವರ ಈ ಪ್ರವಾಸಕಥನ ಮೆಚ್ಚುಗೆಯೂ ಆಗಿದೆ.

ಶ್ರೀಮತಿ ನೀಳಾದೇವಿಯವರ **ನಾ ಕಂಡ ಅಖಂಡ** ದಿನಚರಿ ರೂಪದ ಅಮೇರಿಕಾ ಪ್ರವಾಸ ಕಥನ. ನೀಳಾದೇವಿಯವರು ಕನ್ನಡದ ಪ್ರಸಿದ್ಧ ಕಾದಂಬರಿಕಾರ್ತಿ. ತಮ್ಮ ಪತಿಯೊಡನೆ ಮಗಳು-ಅಳಿಯನನ್ನು ನೋಡಲು ನಾಲ್ಕು ತಿಂಗಳು ಅಮೇರಿಕಾ ಪ್ರವಾಸ ಹೋದಾಗಿನ ಅವರ ಅನುಭವಗಳು ಇಲ್ಲಿ ನಿರೂಪಣೆಗೊಂಡಿವೆ. ನಿರೂಪಣೆ, ತಿಳಿಯಾದ ಹಾಸ್ಯದಿಂದ ಕೂಡಿದ್ದು ಓದುಗರಿಗೆ ಎಲ್ಲೂ ಬೇಸರ ತರಿಸುವುದಿಲ್ಲ. ಅಮೇರಿಕಾದ ಸಾಮಾಜಿಕ ಜೀವನದಲ್ಲಿನ ವಿಶೇಷಾಂಶಗಳನ್ನು ಭಾರತೀಯ ಸಾಮಾಜಿಕ ಜೀವನದ ಜೊತೆಗೆ ಅಲ್ಲಲ್ಲಿ ತುಲನೆ ಮಾಡುವ ಲೇಖಕಿ ಅಲ್ಲಿನ ಜನಕ್ಕೆ ಕಾಲದ ಅಮೂಲ್ಯದ ಬಗೆಗೆ ಪ್ರಜ್ಞೆಯಿರುವುದನ್ನು ಗಮನಿಸಿ, ಕಾಲದ ಜೊತೆ ಸ್ಪರ್ಧೆ ಹೂಡಿರುವ ಅವರು ಬದುಕನ್ನು ಸುಖಮಯವಾಗಿಸಿಕೊಳ್ಳಲು ಯಂತ್ರಗಳಿಗೆ ಮೊರೆ ಹೋಗಿರುವುದನ್ನು ಚೆನ್ನಾಗಿ ನಿರೂಪಿಸಿರುವರು. ಅಮೇರಿಕಕ್ಕೆ ಯುವಜನರ ಸಮಸ್ಯೆ ಒಂದು ತಲೆನೋವಾಗಿರುವುದನ್ನು ಘಟನೆಯೊಂದರ ಮೂಲಕ ವಿವರಿಸಿರುವರು. ಚಿತ್ರನಟಿಯೋರ್ವಳನ್ನು ಪ್ರೇಮಿಸಿದ ಕೋಟ್ಯಾಧೀಶ್ವರನೊಬ್ಬನ ಮಗ ಅವಳ ಗಮನ ಸೆಳೆಯಲು ಅಧ್ಯಕ್ಷ ರೇಗನ್‌ರವರನ್ನು ಗುಂಡಿಟ್ಟು ಕೊಲ್ಲಲ್ಲು ಹೊರಟನಂತೆ (ಪು. ೨೭-೨೯). ಅಮೆರಿಕದ ಜೀವನಕ್ರಮದಲ್ಲಿನ ಸರಿಸಮಾನತೆ, ಸಾಮಾಜಿಕ ಸಮಸ್ಯೆಯಾದ ವೃದ್ಧಾಪ್ಯ-ಕಾಡುವ ಒಂಟಿತನ, ಮದುವೆಯ ಗೋಜಲುಗಳು, ಅಮೇರಿಕನ್ನರ ಸ್ವಚ್ಛತೆ, ರಸ್ತೆಯಲ್ಲಿನ ಸಂಚಾರಿ ಸೌಲಭ್ಯಗಳು, ಆಸ್ಪತ್ರೆಗಳಲ್ಲಿನ ಶಿಸ್ತು ಸೌಹಾರ್ದತೆ, ನೈರ್ಮಲ್ಯ ಹಾಗೂ ಸ್ನೇಹಮಯ ವಾತಾವರಣ, ರೋಗಿಗಳನ್ನು ಬದುಕಿಸಲು ಅವರು ಪಡುವ

ಶ್ರಮ, ವ್ಯಯಿಸುವ ಹಣ -ಇವೆಲ್ಲವೂ ಈ ಕೃತಿಯಲ್ಲಿ ಜೀವಂತ ವಿವರಣೆ ಪಡೆದುಕೊಂಡಿವೆ. ಲೇಖಕಿ ತಮ್ಮ ಪ್ರವಾಸಾನುಭವದಲ್ಲಿ ಅಮೆರಿಕನ್ನರ ಜೀವನ ವಿಧಾನ, ಸೌಲಭ್ಯಗಳು, ಸಮಸ್ಯೆಗಳು -ಇವುಗಳ ವಿಶ್ಲೇಷಣೆ ನಡೆಸಲು ಹೆಚ್ಚಿನ ಪ್ರಯತ್ನ ಮಾಡಿರುವರು. ಇಲ್ಲಿ ಪ್ರವಾಸದ ವಿವರಗಳು ಹೆಚ್ಚಿಗೆ ಬಂದಿಲ್ಲ. ನಯಾಗಾರಾ ಫಾಲ್ಸ್, ಕೆನಡಿ ಸ್ಪೇಸ್ ಸೆಂಟರ್, ಸೈಪ್ರಸ್‌ಗಾರ್ಡನ್, ಡೆಟೋನಾ ಬೀಚ್, ಡಿಸ್ನಿ ಪ್ರಪಂಚಗಳ ಪ್ರವಾಸಾನುಭವ ಹಿತಮಿತವಾಗಿ ವರ್ಣಿತವಾಗಿವೆ. ಪ್ರವಾಸಕಥನದ ಕೊನೆಯಲ್ಲಿ ಲೇಖಕಿಗೆ ಆದ ಪತಿಯ ವಿಯೋಗದ ಆಘಾತ ಹೃದಯ ಮಿಡಿಯುತ್ತದೆ. ಅನುಭವಿ ಬರಹಗಾರ್ತಿಯ ಪರದೇಶದಲ್ಲಿನ ಕೆಲವು ತಿಂಗಳ ತಂಗಣೆಯ ಅನುಭವಗಳು ಸದಭಿರುಚಿಯವುಗಳಾಗಿವೆ. ಲೇಖಕರಿಗೆ ಅಮೆರಿಕನ್ ಕುಟುಂಬಗಳೊಡನೆ ನೇರ ಸಂಪರ್ಕವಿಲ್ಲದಿದ್ದರೂ ತಮ್ಮ ಸೀಮಿತ ಪರಿಜ್ಞಾನದ ಹಿನ್ನೆಲೆಯಲ್ಲಿ ತಾವು ಕಂಡು ಕೇಳಿದ, ಅಮೆರಿಕನ್ನರ ಸಾಮಾಜಿಕ ಜೀವನದ ಅಧ್ಯಯನ-ವಿಶ್ಲೇಷಣೆ ನಡೆಸಿರುವರು. ಅವರ ವಿಶ್ಲೇಷಣೆ ಮೆಚ್ಚುವಂತಿದೆ.

**ನಾನು ಕಂಡ ಅಮೆರಿಕ** ಡಾ|| ರಾ.ಯ. ಧಾರವಾಡಕರ ಅವರು ೬-೫-೧೯೮೭ ರಿಂದ ೨೭-೪-೧೯೮೮ರವರೆಗೆ ಅಮೆರಿಕೆಯಲ್ಲಿ ತಂಗಿದ್ದಾಗಿನ ತಮ್ಮ ಅನುಭವ, ಅನಿಸಿಕೆಗಳನ್ನು ಸ್ವಾರಸ್ಯಕರವಾಗಿ ದಾಖಲಿಸಿರುವರು. ಅಮೆರಿಕವನ್ನು ೧೯೬೪, ೧೯೮೩ ಹಾಗೂ ೧೯೮೭ -ಹೀಗೆ ಮೂರು ಬಾರಿ ಸಂದರ್ಶಿಸಿರುವರು. ಅವರಿಗೆ ಅಮೆರಿಕೆ ಕುತೂಹಲದ ನಾಡಾಗಿದೆ. ತಮ್ಮ ಪ್ರವಾಸಕಥನದ ಉದ್ದೇಶವನ್ನು ಅವರು ಹೀಗೆ ವಿವರಿಸಿರುವರು: ಯಾವುದೇ ದೇಶದ ಬಗ್ಗೆ, ಪರಿಸರದ ಬಗ್ಗೆ, ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಒಂದು ಪ್ರತಿಕ್ರಿಯೆ ಇರುತ್ತದೆ. ಆ ಅನುಭವದಲ್ಲಿ ಎಷ್ಟೋ ಮಟ್ಟಿನ ಸಾರ್ವತ್ರಿಕತೆ ಇರಬಹುದಾದರೂ ಅದರಲ್ಲಿಯೂ ವ್ಯಕ್ತಿನಿಷ್ಠ ಪರಿಭೇದವಿರುತ್ತದೆ. ಭೌತಿಕ ವಸ್ತುಗಳಾದ ಕಟ್ಟಡಗಳು, ನಿಸರ್ಗ ಸೌಂದರ್ಯ-ಇವುಗಳ ಬಗ್ಗೆ ಭಾವನೆ ಒಂದೇ ಆಗಿರಬಹುದು. ಆದರೆ, ವ್ಯಕ್ತಿ ಮತ್ತು ಘಟನೆಗಳ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಗೂ ಭಿನ್ನ ಭಿನ್ನವಾದ ಅನುಭವವುಂಟಾಗುವುದು ಸಾಧ್ಯ. ರಾಜಕಾರಣ, ಆಡಳಿತ, ಇತಿಹಾಸ, ಸಂಗೀತ, ಉಳಿದ ಲಲಿತ ಕಲೆಗಳು ಇಲ್ಲವೆ ಸಾಹಿತ್ಯದ ಹಿನ್ನೆಲೆಯಿದ್ದವರಿಗೆ ಅವರವರ ಅನುಭವ, ದೃಷ್ಟಿಕೋನ, ಹಿನ್ನೆಲೆ, ಅಧ್ಯಯನಗಳ ದೃಷ್ಟಿಯಿಂದ ಆ ಆ ವಿಷಯಗಳು ಹೆಚ್ಚು ಹೆಚ್ಚು ರಸಮಯವಾಗುತ್ತವೆ." (ಮೊದಲ ಮಾತು, ಪು. vi)

ದಕ್ಷಿಣದ ಆರೆಂಜ್‌ಬರ್ಗ್, ಉತ್ತರದ ಪಿಟ್ಸ್‌ಬರ್ಗ್, ಲೂಸಿಯಾನಾ ರಾಜ್ಯದ ನ್ಯೂ ಆರ್ಲಿಯನ್ಸ್-ಈ ಪ್ರದೇಶಗಳಲ್ಲಿ ಹಲವು ತಿಂಗಳು ಕಳೆದದ್ದಲ್ಲದೆ, 'ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಸಂದರ್ಶಿಸಿ' ಎಂಬ ರಿಯಾಯಿತಿ ಪ್ರವಾಸಿ ಯೋಜನೆಯ

ಆಶ್ರಯದಲ್ಲಿ ಹತ್ತು ಹನ್ನೆರಡು ಸ್ಥಳಗಳನ್ನು ಸಂದರ್ಶಿಸಿ ತಮ್ಮ ಪ್ರವಾಸೀ ಅನುಭವಗಳನ್ನಷ್ಟೇ ವಿವರಿಸದೆ, ಆ ಸಮಾಜದ ಬಾಹ್ಯ ಸ್ವರೂಪ, ಒಳರಚನೆ, ಈ ಸಮಾಜದ ಒಳಗಿನ ಸಂವೇದನೆಗಳ ಬಗೆಗೂ ವಿಚಾರ ಮಾಡಿರುವರು. ಭಾರತೀಯರ ಸಭೆ-ಸಮಾರಂಭಗಳಲ್ಲಿ ಭಾಗವಹಿಸಿ ಅವರ ಆತಿಥ್ಯ ಸ್ವೀಕರಿಸಿ ಅವರ ನೋವು-ನಲಿವುಗಳನ್ನೂ ಹಂಚಿಕೊಂಡಿರುವರು. ಅಮೆರಿಕೆಯಲ್ಲಿದ್ದರೂ ಭಾರತೀಯತೆಯನ್ನು ಉಳಿಸಿಕೊಳ್ಳಲು ಮಾನಸಿಕವಾಗಿ ಹೆಣಗಾಡುತ್ತಿರುವ ಭಾರತೀಯ ಕುಟುಂಬಗಳ ಬಗೆಗೆ ವಿವರ ನೀಡಿರುವರು. ಭಾರತೀಯ ಕೌಟುಂಬಿಕ ನೆಲೆಗಟ್ಟಿನಲ್ಲಿಯೇ ತಮ್ಮ ಮಕ್ಕಳು ಬೆಳೆಯಬೇಕು ಎಂಬ ಮಹದಾಶೆ ಅನಿವಾಸೀ ಭಾರತೀಯ ತಂದೆ-ತಾಯಿಗಳಿಗಿದ್ದರೂ ಮಕ್ಕಳು ಅದಕ್ಕೆ ಹೊಂದಿಕೆಯಾಗದಿರುವುದರ ಸೂಕ್ಷ್ಮ ಚಿತ್ರವನ್ನೂ ಲೇಖಕರು ಕೊಟ್ಟಿರುವರು. ಭಾರತೀಯರ ಪ್ರತಿಭೆ, ಕಷ್ಟದ ದುಡಿಮೆ, ಯಶೋಗಾಥೆ ಇವನ್ನೂ ವಿಸ್ತಾರವಾಗಿ ಹೆಮ್ಮೆಯಿಂದ ತಿಳಿಯಪಡಿಸಿರುವರು. ಅಮೆರಿಕೆಯ ವಿಸ್ತೀರ್ಣ, ಜನಸಂಖ್ಯೆ, ಅಲ್ಲಿಯ ನದೀ ಸರೋವರಗಳು, ಬೆಟ್ಟಗಳು, ಅಮೆರಿಕೆಯ ರಾಜ್ಯಗಳು, ರಾಷ್ಟ್ರಗೀತೆ, ರಾಷ್ಟ್ರಧ್ವಜ -ಹೀಗೆ ಅಮೇರಿಕಾ ಪ್ರವಾಸಿಗೆ ಬೇಕಾದ ಎಲ್ಲ ಮಾಹಿತಿಗಳು ಈ ಪ್ರವಾಸ ಕಥನದಲ್ಲಿ ಕಂಡುಬರುತ್ತದೆ.

ಡಾ|| ಧಾರವಾಡಕರ ಅವರ ಜೀವನಾಸಕ್ತಿ ಅದ್ಭುತವಾದುದು. ಅಮೆರಿಕನ್ನರ ಜೀವನವಿಧಾನವನ್ನು ತಿಳಿಯುವುದಕ್ಕಾಗಿ ಅಮೆರಿಕನ್ ಮಿತ್ರರ ಮನೆಗಳಿಗೆ ಹೋಗಿ ಬಂದಿರುವರು. ತಾವು ನೋಡಿದ ಸ್ಥಳಗಳ ಬಗ್ಗೆ ವಿವರಗಳನ್ನು ಸಾಕಷ್ಟು ನೀಡಿರುವರು. ಅವು ಅಮೂಲ್ಯವಾಗಿವೆ. ಪ್ರವಾಸಿಗೆ ಕವಿಹೃದಯವಿದ್ದರೆ ಪ್ರವಾಸಿಯ ನೋಟವೆಲ್ಲವೂ ಹೃದ್ಯವಾಗುತ್ತದೆ. ಸಾಹಿತಿ ಡಾ|| ರಾ.ಯ. ಧಾರವಾಡಕರ ಅವರ ಬರಹ ಇಲ್ಲಿ ಚೇತೋಹಾರಿಯಾಗಿದೆ, ಕಣ್ಣಿಗೆ ಕಟ್ಟುವಂತೆ ವಿವರ ನೀಡುತ್ತದೆ. ನಮಗೆ ಹೊಸ ಪ್ರಪಂಚವೊಂದರ ಪರಿಚಯ ಮಾಡಿಕೊಡುತ್ತದೆ. ನಯಾಗಾರಾ ಜಲಪಾತದ ವರ್ಣನೆಯಾಗಲೀ, ಡಿಸ್ನಿ ಜಗತ್ತಿನ ವಿವರಗಳಾಗಲೀ ಪ್ರಭುಪಾದರ ಬಂಗಾರದ ಅರಮನೆಯಲ್ಲಿ ಕನ್ನಡದ ಹರಿದಾಸರ ಕೀರ್ತನೆಗಳನ್ನು ಕೇಳಿದಾಗಿನ ಅಪೂರ್ವ ಅನುಭವವಾಗಲೀ ರಸವತ್ತಾಗಿವೆ. ತಾವು ನೋಡಿದ ದೊಡ್ಡ ಇಲ್ಲವೆ ಸಣ್ಣ ಪ್ರವಾಸೀ ಸ್ಥಳಗಳ ಬಗೆಗೂ ಅಂಕಿ-ಅಂಶಗಳೊಂದಿಗೆ, ಸಾಕಷ್ಟು ವಿವರಗಳೊಂದಿಗೆ ಅನುಭವ ಕಥನ ನೀಡಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಅಮೆರಿಕಾದಲ್ಲಿನ ವೈಚಿತ್ರ್ಯಗಳನ್ನು ಕುರಿತು ಬರೆದಿರುವ ಭಾಗ ನವಿರಾದ ಹಾಸ್ಯದಿಂದ ಕೂಡಿದೆ. ಅಮೆರಿಕನ್ ಸಮಾಜದ ವಿಚಿತ್ರ ವರ್ತನೆಗಳ ಬಗೆಗಿನ ವ್ಯಂಗ್ಯ ಓದುಗನ ಮನಮುಟ್ಟುತ್ತದೆ, ನಗೆತರಿಸುತ್ತದೆ. 'ಅಮೆರಿಕೆಯ ಹಬ್ಬಗಳು' -ಒಂದು ಒಳ್ಳೆಯ ಪ್ರಬಂಧದ ಗುಣ ಪಡೆದಿವೆ. ಹಬ್ಬಗಳ ಬಗೆಗಿನ ವಿವರ ಕಲೆಹಾಕುವಲ್ಲಿ ಲೇಖಕರ ಶ್ರಮ ವ್ಯಕ್ತವಾಗುತ್ತದೆ.

ಧಾರವಾಡಕರ ಅವರು ಒಳ್ಳೆಯ ವಿದ್ವಾಂಸರು, ಸರಸಿಗಳು. ಅವರ ಈ ಎರಡು ಗುಣಗಳನ್ನು ಮೇಳೈಸಿಕೊಂಡು ಈ ಪ್ರವಾಸಕಥನ ನಮ್ಮನ್ನು ಆಲೋಚಿಸುವಂತೆ ಮಾಡುತ್ತದೆ. ಹಾಗೂ ನಮ್ಮೊಂದಿಗೆ ಲಘು ಹರಟೆಗೆ ಇಳಿಯುತ್ತದೆ.

ಅಮೆರಿಕದ ಕೆನಡಿ ನಿಲ್ದಾಣದಿಂದ ನೆವಾರ್ಕ್ ನಿಲ್ದಾಣಕ್ಕೆ ಕರೆದೊಯ್ದ ರಿಚರ್ಡ್‌ನನ್ನು ಲೇಖಕರು "ತುಂಬಾ ಉಪಕಾರ ಮಾಡಿದೆ, ಥ್ಯಾಂಕ್ಸ್" ಎಂದು ಅಭಿನಂದಿಸಿದಾಗ ಅದಕ್ಕೆ ಅವನು "No thanks in words. say it with dollars. Give me five dollars For thanks" ಎಂದನಂತೆ!

ಅಮೆರಿಕದ ನಿವಾಸಿ ಶಿವಾನಂದ್‌ರವರ ಹೆಂಡತಿ ಗರ್ಭಿಣಿಯಾದರು. ಅವರ ಮಿತ್ರರು ಕೂಡಲೇ ಮ್ಯಾಟರ್ನಿಟಿ ಇನ್‌ಷೂರೆನ್ಸ್ ಮಾಡಿಸು ಎಂದರು. ಶಿವಾನಂದ್‌ರವರ ಪತ್ನಿ ಗರ್ಭವತಿ ಎಂದು ತಿಳಿದ ಇನ್‌ಷೂರೆನ್ಸ್ ಏಜೆಂಟ್ "Who insurse a damaged car' ಎಂದನಂತೆ! ಶಿವಾನಂದರ ಪತ್ನಿಗೆ ಹೆರಿಗೆಯಾಯಿತು. ಹೆರಿಗೆಯ ಬಿಲ್ಲು ನಾಲ್ಕು ಸಾವಿರ ಡಾಲರ್!

ಡಾ|| ರಾ.ಯ. ಧಾರವಾಡಕರ ಅವರ ಬರವಣಿಗೆಯ ಶೈಲಿಗೆ ಮೇಲಿನ ಎರಡು ಉದಾಹರಣೆ ಸಾಕು. ಅವರ ಬರಹದಲ್ಲಿ ಉದ್ದಕ್ಕೂ ಈ ಬಗೆಯ ನಗೆಯಿದೆ, ವ್ಯಂಗ್ಯವಿದೆ.

ರಂಜನ ಭಟ್ಟರ **'ಕುಬೇರ ರಾಜ್ಯದ ಚಿತ್ರ-ವಿಚಿತ್ರ'**ದಲ್ಲಿ ಅಮೆರಿಕೆಯ ವಾಸ-ಪ್ರವಾಸದ ಅನುಭವ ನಿರೂಪಣೆಯು ಅತ್ಯಂತ ಆಕರ್ಷಕವಾಗಿ ಬಂದಿದೆ. ಲೇಖಕರು ಅಮೆರಿಕವನ್ನು ಕುಬೇರನ ರಾಜ್ಯವೆಂದು ಕರೆದಿರುವರು. ಅವರಿಗೆ ಅಲ್ಲಿನ ಜನಜೀವನ, ರೀತಿ ರಿವಾಜು ಎಲ್ಲವೂ ಚಿತ್ರವಿಚಿತ್ರವಾಗಿ ಕಂಡಿವೆ. ಅಮೆರಿಕೆಯ ಪ್ರವಾಸ ಎರಡು ಬಾರಿ ಮಾಡಿದ ಲೇಖಕರು ಅಲ್ಲಿಯ ವಾಸ ಪ್ರವಾಸಗಳಲ್ಲಿ ತಮ್ಮನ್ನು ತಟ್ಟಿದ, ತಡವಿದ ಅನುಭವಗಳ ನಿರೂಪಣೆ ಮಾಡಿರುವರು. ಲೇಖಕರೇ ಹೇಳಿರುವಂತೆ "ಹೊಸ ಜಗತ್ತಿನ ಹೂಬಿಸಿಲಲ್ಲಿ ಜಗತ್ತಿನಿಂದ ಹೋದ ತೆರೆದೆದೆಯ ಆಗಂತುಕನಿಗೆ ಅನಿಸಿದ ಭಾವನೆಗಳ, ಮೂಡಿದ ಅನುಭವಗಳ ಸಂಕಲನ ಇಲ್ಲಿದೆ. ತೋರಿದ ಅನುಭವಗಳಿಗೆ, ಮೂಡಿದ ಭಾವನೆಗಳಿಗೆ ಮಾತಿನ ವೇಷ ತೊಡಿಸುವ ಸಾಹಸ ಇಲ್ಲಿದೆ!" ಎರಡು ಭಾಗಗಳಲ್ಲಿ ಪ್ರವಾಸಾನುಭವ ತನ್ನ ಹೆಜ್ಜೆ ಮೂಡಿಸಿದೆ.

ಕುಬೇರನ ರಾಜ್ಯದಲ್ಲಿ ಎಲ್ಲವೂ ಸರಿಯಾಗಿಲ್ಲ, ನೆಮ್ಮದಿಯಿಂದಿಲ್ಲ. ಶ್ರೀಮಂತ ದೇಶದ ಜನರ ವಿಲಾಸೀ ಬದುಕು, ಮಿಸ್ಟರ್ ಗೋಲ್ಡ್‌ವಿಕ್‌ರಂತಹ ವೃದ್ಧರ ಹತಾಶೆಯ ಬದುಕು, ಮೈಮುರಿಯುವಂತೆ ದುಡಿದರೂ ಪಾವೆಲ್ಲರಂತಹ ಶ್ರೀಮಂತ ರೈತರ ನೆಮ್ಮದಿಯಿಲ್ಲದ ಬದುಕು-ಅವರ ನೋವಿನ ಎಳೆಯನ್ನು ಸೂಚಿಸುತ್ತದೆ. ಕುಬೇರರಾಜ್ಯದ

ಜಾಹೀರಾತು ಪ್ರಪಂಚದ ಚಿತ್ರವಿಚಿತ್ರ ಆಕರ್ಷಣೆಗಳು ನಮ್ಮನ್ನು ಗಾಬರಿಗೊಳಿಸುತ್ತವೆ. ಈ ಶ್ರೀಮಂತ ರಾಜ್ಯದಲ್ಲಿ ಒಬ್ಬರು ಸಾಯುವುದೂ ಬದುಕಿರುವವರ ಪಾಲಿಗೆ ಎಷ್ಟು ದುಬಾರಿ ಎಂಬ ಕಟುಸತ್ಯ 'ಮೃತ್ಯುವಿನ ಸಮ್ಮುಖದಲ್ಲಿ' ಎಂಬ ಅಧ್ಯಾಯದಲ್ಲಿ ವ್ಯಕ್ತಗೊಂಡಿದೆ. ಶ್ರೀಮಂತ ಮನೆತನದಲ್ಲಿ ಹುಟ್ಟಿಬಂದೂ ತಮ್ಮನ್ನು ತಾವೇ ಅರ್ಪಿಸಿಕೊಂಡು ಸಂತರಂತೆ ಜೀವನ ನಡೆಸುವ ಬರ್ಟ್ ದಂಪತಿಗಳು ; ಗಾರ್ಡನ್ನರ ಅಜ್ಞಾನದ ದುರುಪಯೋಗ ಮಾಡುವ ಡಾಂಟೆಯಂತಹ ಅಪ್ರಮಾಣಿಕರು; ಡಾನ್ ನೀಲೆಯಂತಹ ನಡುವಯಸ್ಸಿನ ಯುವಕರ ಹತಾಶೆಯ ಪ್ರೇಮಪ್ರಕರಣಗಳು-ಹೀಗೆ ಈ ಕುಬೇರ ರಾಜ್ಯದ ಚಿತ್ರವಿಚಿತ್ರ ಪ್ರಜೆಗಳು ನಮ್ಮ ಮನಸ್ಸನ್ನು ಸೆಳೆಯುವರು.

ಕೃತಿಯ ಎರಡನೆಯ ಭಾಗದಲ್ಲಿ 'ಮನೆ ಆತಿಥ್ಯ ಸಂಸ್ಥೆ' (Home Hospitality Association) ನೆರವಿನಿಂದ ಅಮೆರಿಕದ ಸುತ್ತಮುತ್ತ ಪ್ರವಾಸ ಕೈಗೊಂಡ ಲೇಖಕರ ಅನುಭವ ಇಲ್ಲಿ ವಿವರಣೆಗೊಂಡಿದೆ. ಮೊದಲ ಭಾಗದಲ್ಲಿ ಜನ-ಮನವನ್ನು ಅರಿಯಲು ಪ್ರಯತ್ನಿಸಿದಂತೆ ಎರಡನೆಯ ಭಾಗದಲ್ಲೂ ಮಾಡಲಾಗಿದೆ. ಅಮೆರಿಕದ ಜನರ ಮೋಜಿನ ಜೀವನದ ಜೊತೆಗೆ ಅವರ ಶಿಸ್ತಿನ ಜೀವನವನ್ನೂ, ಪರದೇಶಿಗಳಿಗೆ ಅವರು ನೀಡುವ ಆತಿಥ್ಯವನ್ನೂ, ತೋರುವ ಸ್ನೇಹ ಸೌಹಾರ್ದ ಭಾವಗಳನ್ನೂ ಲೇಖಕರು ಚೆನ್ನಾಗಿ ಪರಿಚಯಿಸಿರುವರು. ಕನ್ನಡ ಕವಿಗಳ ಭಾವಪೂರ್ಣ ಕವಿತೆಯ ಸಾಲು ಸಾಲುಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿರುವ ಲೇಖಕರು ತಮ್ಮ ಅನುಭವಗಳನ್ನು ಒಮ್ಮೊಮ್ಮೆ ಕಾವ್ಯಾತ್ಮಕವಾಗಿ ಬಣ್ಣಿಸಿರುವುದೂ ಉಂಟು. ಅಮೆರಿಕದ ಜನರ ಜೊತೆ ಅವರ ಕುಟುಂಬದ ಜೊತೆ ಬೆರೆಯುವುದರ ಮೂಲಕ ಲೇಖಕರು ಅಲ್ಲಿನ ಸಾಮಾಜಿಕ ಹಾಗೂ ಕೌಟುಂಬಿಕ ಜೀವನದ ಚಿತ್ರವನ್ನೂ ಅದರಲ್ಲಿನ ನೋವು ನಲಿವುಗಳನ್ನೂ ಕೊಟ್ಟಿರುವರು. ಇದು ಈ ಪ್ರವಾಸಕಥನದ ವೈಶಿಷ್ಟ್ಯವೆನ್ನಬಹುದು. ಅಮೆರಿಕೆಯ ಇತಿಹಾಸ ಭೂಗೋಲವನ್ನಾಗಲೀ, ಆ ದೇಶದ ಅಂಕಿ ಸಂಖ್ಯೆಗಳ ಕೋಷ್ಟಕವನ್ನಾಗಲೀ, ನೋಡಿದ್ದನ್ನೆಲ್ಲಾ, ಸಂಗ್ರಹಿಸಿದ ವಿವರಗಳನ್ನೆಲ್ಲಾ ತಿಳಿಸಬೇಕೆನ್ನುವ ಚಪಲವನ್ನಾಗಲೀ ನಾವು ಈ ಪ್ರವಾಸಕಥನದಲ್ಲಿ ಕಾಣುವುದಿಲ್ಲ. ಈ ಕಾರಣಕ್ಕಾಗಿ ಈ ಪ್ರವಾಸಕಥನ ಮೌಲಿಕವಾಗುತ್ತದೆ.

**ನಾನೊಬ್ಬ ಭಾರತೀಯ ಪ್ರವಾಸಿ** ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರಾದ ವ್ಯಾಸರಾಯ ಬಲ್ಲಾಳರ ಐದು ತಿಂಗಳ ಅಮೆರಿಕ ಪ್ರವಾಸ ಕಥನ. ಪ್ರವಾಸಿ ತಂಡವೊಂದರ ಜೊತೆ ಯುರೋಪಿನ ನಾಲ್ಕೈದು ರಾಷ್ಟ್ರಗಳ ಹಾಗೂ ಅಮೆರಿಕದ ಪ್ರವಾಸ ಕೈಗೊಂಡ ಲೇಖಕರಿಗೆ ತಮ್ಮ ಪ್ರವಾಸದ ಇತಿಮಿತಿ ತಿಳಿದಿದೆ. "ಇಲ್ಲಿ ನಿರ್ದಿಷ್ಟ ಅವಧಿಯಲ್ಲಿ ನೋಡಬೇಕಾಗಿರುವ, ಪ್ರೇಕ್ಷಣೀಯವೆಂದು ಜನಸಾಮಾನ್ಯರ ದೃಷ್ಟಿಯಲ್ಲಿ ಆಶಿಸುವ,

ಆಕರ್ಷಣೆಗಳಿಗಷ್ಟೆ ಒತ್ತು. ಹೀಗಾಗಿ ಹೋಗುವ ಸ್ಥಳಗಳಲ್ಲಿ ಮುಖ್ಯವಾದ ಎಲ್ಲವನ್ನೂ ನೋಡಲು ಸಾಧ್ಯವಾಗುವುದೆಂಬ ಆಸೆ ಕಟ್ಟಿಕೊಳ್ಳುವಂತಿಲ್ಲ. ತಂಡದ ಮಾರ್ಗದರ್ಶಕರು ಕರೆದೊಯ್ಯುದಲ್ಲಿಗೆಲ್ಲ ಹೋಗಿ ಸಾಧ್ಯವಾಗುವಷ್ಟನ್ನು ನೋಡಬೇಕು. ಆಮ್‌ಸ್ಟರ್‌ಡಾಮ್-ನಲ್ಲಿದ್ದೂ ನನಗೆ ರೆಂಬ್ರಾಂಟ್ ಸಂಗ್ರಹಾಲಯ ನೋಡಲಾಗಲಿಲ್ಲ. ಲಂಡನ್‌ನಲ್ಲಿದ್ದೂ ಬ್ರಿಟಿಷ್ ಮ್ಯೂಸಿಯಂ ಅನ್ನು, ವಾಷಿಂಗ್‌ಟನ್ ತಿರುಗಿಯೂ ಸ್ಮಿತ್ಸೋನಿಯನ್ ಇನ್‌ಸ್ಟಿಟ್ಯೂಟನ್ನು ಹೊರಗಿನಿಂದ ನೋಡಿದ್ದೆ ಬಂತು. ಪ್ರವಾಸಿಗಳ ತಂಡಗಳಲ್ಲಿ ಸೇರಿಕೊಂಡಾಗ ಪ್ರವಾಸಿಗಳ ಆಕರ್ಷಣೆಗಳಿಗೇ ಮಹತ್ವ. ನಾನು ನೋಡಿದಂತೆ ನಮ್ಮ ತಂಡದಲ್ಲಿದ್ದ ಭಾರತೀಯರಲ್ಲಿ ಹೆಚ್ಚಿನವರಿಗೆ ಎಲ್ಲಿ ಏನನ್ನು ಕೊಂಡೇವು ಎಂಬ ಚಿಂತೆಯೇ ಪ್ರಮುಖ ಆಕರ್ಷಣೆ..." (ಪು.೧೪) ಇದು ಲೇಖಕರಿಗಾಗುವ ಅನುಭವ, ಬಹುಶಃ ಪ್ರವಾಸಿಗಳ ತಂಡದಲ್ಲಿ ಸೇರಿದಾಗ ಎಲ್ಲ ಬುದ್ಧಿಜೀವಿಗಳಿಗಾಗುವ ಅನುಭವ.

ಲೇಖಕರು ಮೂರು ತಿಂಗಳ ಅಮೆರಿಕೆಯಲ್ಲಿ ವಾಸ್ತವ್ಯ ಮಾಡಿದ್ದರು. ಅವರು ಪ್ರವಾಸಿಗಳ ತಂಡದೊಂದಿಗೆ ಪ್ರವಾಸ ಹೊರಟದ್ದು ಮುಖ್ಯವಾಗಿ ಕೌಟುಂಬಿಕ ಕಾರಣಗಳಿಗಾಗಿ: ಅಮೆರಿಕದ ತೀರ ದಕ್ಷಿಣಕ್ಕಿರುವ ಫ್ಲೋರಿಡಾ ರಾಜ್ಯದ ಪೆನ್ಸಕೋಲದಲ್ಲಿರುವ ಮಗಳು ಅಳಿಯ ಮೊಮ್ಮಕ್ಕಳನ್ನೂ, ನ್ಯೂಜೆರ್ಸಿಯಲ್ಲಿರುವ ಸೋದರ ಹಾಗೂ ಆತನ ಮಡದಿ ಮಕ್ಕಳನ್ನೂ ನೋಡಿ ಅವರ ಜೊತೆ ಸ್ವಲ್ಪ ಕಾಲ ಕಳೆಯಬೇಕೆಂಬ ಉದ್ದೇಶ ಅವರದು. ಅಮೆರಿಕವನ್ನು ವಿರಾಮವಾಗಿ ನಿಂತು ನೋಡಲು ಲೇಖಕರಿಗೆ ಸಾಧ್ಯವಾಗಿಲ್ಲ. ಅವರೇ ಒಂದೆಡೆ ಹೀಗೆ ಹೇಳಿರುವರು: "ಈ ಅವಸರದ ಸುತ್ತಾಟದಿಂದೇನು ಪ್ರಯೋಜನವೆಂಬ ಕೊರಗನ್ನು ಅಮೆರಿಕ ಪ್ರವಾಸ ಕಾಲದಲ್ಲಿ ನಾನು ಅನುಭವಿಸಿದ್ದೇನೆ. ನಾನು ಹೋದ ಯಾವುದೇ ಶಹರದ ಕಲೆ, ಸಂಸ್ಕೃತಿ ಸಂಸ್ಕಾರಗಳನ್ನು ಪೋಷಿಸುವ, ಕನ್ನಡಿಸುವ, ಸಂಗ್ರಹಾಲಯಗಳನ್ನು ಬಿಡುವಾಗಿ ನೋಡುವ ಅವಕಾಶವಿಲ್ಲ. ಸ್ಥಳಿಕ ನಿವಾಸಿಗಳೊಡನೆ ಬಿಡುವಿನಲ್ಲಿ ಬೆರೆತು ಮಾತನಾಡುವ ಅವಕಾಶವಿಲ್ಲ. 'ನೋಡಿದ್ದೇನೆ' ಎಂಬ ಮಾತಿನಿಂದ ಹೆಚ್ಚಿನ ಬೆಲೆಬಾಳುವ ಅನುಭವ ನಮ್ಮದಾಗುವುದಿಲ್ಲ" (ಪು.೬೨). ವಲಸೆ ಹೋಗಿ ನೆಲೆಸಿದ ಭಾರತೀಯರ ಸ್ವಭಾವ ನಿರೀಕ್ಷಣೆಯೇ ನನ್ನ ಪ್ರವಾಸದ ಮುಖ್ಯ ಉದ್ದೇಶ ಎಂದು ಲೇಖಕರು ಹೇಳಿರುವರು (ಪು.೫೭). ಭಾರತದಿಂದ ಅಮೆರಿಕಕ್ಕೆ ಹೋಗಿ ನೆಲೆಸಿರುವ ಭಾರತೀಯರು ಪೂರ್ವ ಮತ್ತು ಪಶ್ಚಿಮ ಮತ್ತು ಪಶ್ಚಿಮ ರಾಷ್ಟ್ರಗಳ ಎರಡು ಸಂಸ್ಕೃತಿಗಳ ಸಂಘರ್ಷವನ್ನು ಇದಿರಿಸುವಾಗ ಅವರ ಭಾರತೀಯತ್ವ ಸ್ವಾತಂತ್ರ್ಯದ ನಾಲ್ಕು ದಶಕಗಳಲ್ಲಿ ದೊರಕಿಸಿ ಕೊಟ್ಟಿರುವ ಅನನ್ಯತೆ (identity) ಎಷ್ಟು ಪರಿಣಾಮಕಾರಿಯಾದುದು ಎಂಬುದನ್ನು ಮೇಲಿಂದ ಮೇಲೆ ತಿಳಿಯುವ ಕುತೂಹಲ ಲೇಖಕರದು. ಹೀಗಾಗಿ ಲೇಖಕರು

ಅಮೆರಿಕೆಯನ್ನು ಪ್ರವಾಸಿಯಾಗಿ ನೋಡಿದ್ದಕ್ಕಿಂತ ಹೆಚ್ಚಾಗಿ "ಭಾರತೀಯನಾಗಿ ದೀರ್ಘಕಾಲ ಅಮೆರಿಕದಲ್ಲೆ ನೆಲೆಸಬಯಸುವ ಭಾರತೀಯ ನಾಗರಿಕನ ಭಾರತೀಯತ್ವ ಪೂರ್ವಪಶ್ಚಿಮಗಳ ಸಾಂಸ್ಕೃತಿಕ ಸಂಘರ್ಷದಲ್ಲಿ ಹೇಗೆ ಉಳಿದೀತು" ಎಂಬ ಚಿಂತನೆಯನ್ನು ಬೆನ್ನಟ್ಟಿ ಹೋಗಿರುವರು. ಅಮೆರಿಕೆಯಲ್ಲಿ ನೆಲಸಿರುವ ಭಾರತೀಯರನ್ನು ಭೇಟಿಮಾಡುವ ಸಂದರ್ಭ ಬಂದಾಗಲೆಲ್ಲ ಲೇಖಕರು ಕೇಳುವ ಪ್ರಶ್ನೆ ಒಂದೇ "ಈ ವಿಭಿನ್ನ ಸಂಸ್ಕೃತಿಗಳ ಸಂಘರ್ಷವನ್ನು ಇದಿರಿಸಬೇಕಾದ ನೀವು ಯಾವ ರೀತಿಯ ಸಮನ್ವಯ ಸಾಧಿಸಲು ಸಮರ್ಥರಾಗಿದ್ದೀರಿ?" ಈ ಪ್ರಶ್ನೆಗೆ ಖಚಿತವಾದ ಉತ್ತರ ಎಲ್ಲೂ ದೊರೆತಿಲ್ಲ (ಪು.೬೭).

ಅರಿಜೋನಾ ವಿಶ್ವವಿದ್ಯಾಲಯದ ವಾಕ್‌ಶ್ರವಣ ವಿಜ್ಞಾನದ ಪ್ರಾಧ್ಯಾಪಕ ಡಾ॥ ದೀಕ್ಷಿತ್‌ರವರು ಅಭಿಪ್ರಾಯಪಡುವಂತೆ ಒಂದು ಅನನ್ಯತೆಗಾಗಿ (identity) ಅಮೆರಿಕದಲ್ಲಿ ನೆಲೆಸಿರುವ ಹಿಂದುಗಳು ತಡಕಾಡುತ್ತಿದ್ದಾರೆ. ಬೇರು ಹುಡುಕಲೆಂದು ದೇವಸ್ಥಾನಗಳು ಮುಟ್ಟಿಕೊಳ್ಳುತ್ತವೆ. ಪಿಟ್ಸ್‌ಬರ್ಗ್‌ನಲ್ಲಿರುವ ವೆಂಕಟೇಶ ದೇವಾಲಯ, ನ್ಯೂಯಾರ್ಕ್‌ದ ಫ್ಲಶಿಂಗ್‌ನಲ್ಲಿರುವ ಗಣೇಶ ದೇವಾಲಯ, ಹ್ಯೂಸ್ಟನ್‌ನ ಮೀನಾಕ್ಷಿ ದೇವಾಲಯ -ಇವುಗಳನ್ನು ನಿರ್ಮಿಸುವ ಉದ್ದೇಶದ ಹಿನ್ನೆಲೆಯಲ್ಲಿ ಭಾರತೀಯತೆಯ ಬೇರುಗಳನ್ನು ಭದ್ರಪಡಿಸುವ ಉದ್ದೇಶವಿರುವಂತಿದೆ. ಅಮೆರಿಕದಲ್ಲಿ ಹುಟ್ಟಿ ವಿಶ್ವದಾದ್ಯಂತ ಹರಡುತ್ತಿರುವ 'ಕೃಷ್ಣಪಂಥ'ವೂ ಇಂಥದೊಂದು ಸಾಂಸ್ಕೃತಿಕ ಸಂಘರ್ಷವನ್ನೇ ಸೂಚಿಸುತ್ತದೆಂದು ಲೇಖಕರು ಅಭಿಪ್ರಾಯಪಡುವರು (ಪು.೧೦೬).

ಡಾ॥ ಲಲಿತಾ ಕುಮಾರಶೇಖರ ಅವರು ಹೇಳುವಂತೆ-ಅಮೆರಿಕೆಯಲ್ಲಿ ಭಾರತೀಯ ಅನನ್ಯತೆ ಅಪ್ರಸ್ತುತ. ಇಲ್ಲಿ ಇರಬೇಕಾದದ್ದು ಹಿಂದೂ ಅನನ್ಯತೆ ಮಾತ್ರ. ಇದೂ ವಿಚಾರಾರ್ಹ. ಏಕೆಂದರೆ, ಅಮೆರಿಕೆಯಲ್ಲಿ 'ನಾನು ಭಾರತೀಯ' ಎಂದು ಅಭಿಮಾನದಿಂದ ಹೇಳುವುದು ಕಷ್ಟ. ಇಲ್ಲಿ ಸಾಕಷ್ಟು ಭಾಷೆ, ಪ್ರದೇಶಗಳ ಗುಂಪುಗಳು, ದೇವಾಲಯಗಳು, ಗುರುದ್ವಾರಗಳೆಲ್ಲ ಇವೆ. ಲೇಖಕರು ಹೇಳುವಂತೆ ಭಾರತದಲ್ಲೆ ಭಾರತೀಯ ಯಾರು ಎಂದು ಕೇಳಬೇಕಾದಂಥ ಜಾತಿ, ಭಾಷೆ, ಪ್ರದೇಶ, ಪಂಗಡಗಳ ಸಾಮಾಜಿಕ ಸಂದರ್ಭವಿರುವಾಗ, ಅಮೆರಿಕಾದಲ್ಲಿ ಈ ಪ್ರಶ್ನೆ, ಈ ಹುಡುಕಾಟ ಅಸ್ವಾಭಾವಿಕವೆಂದೆನಿಸುವುದಿಲ್ಲ. ಆದರೆ ವಿಷಾದದ ಮಾತೆಂದರೆ, ಅಮೆರಿಕದಲ್ಲಿ ಈ ಭಿನ್ನತೆಗಳನ್ನು ಅಳಿಸಬಹುದಾದ ಸಾಧ್ಯತೆ ಕಂಡುಕೊಳ್ಳಲು ಸಹಕಾರಿಯಾಗಬಹುದಾದ ಸಾಮಾಜಿಕ ವಾತಾವರಣವಿದೆ. ಆದರೆ ನನಗೆನಿಸಿದಂತೆ, ಇದಕ್ಕೆ ಅಗತ್ಯವಾಗಿ ಇರಬೇಕಾದ ಕುತೂಹಲವಾಗಲೀ, ಸಂಘಟಿತ ಪ್ರಯತ್ನಗಳಾಗಲೀ ಕಂಡುಬರುವುದಿಲ್ಲ (ಪು. ೧೦೯). ಭಾರತೀಯರನ್ನು ಹತ್ತಿರ ತರುವ ಪತ್ರಿಕೆ 'ಇಂಡಿಯಾ ಎಬ್ರಾಡ್'

ವಿವಾಹ ಸಂಬಂಧದ ಜಾಹೀರಾತಗಳಿಂದ ಪ್ರಸಿದ್ಧವಿದೆ. ಇಲ್ಲೂ ಜಾತಿ, ಭಾಷೆ, ಪ್ರದೇಶ, ಪಂಗಡಗಳು ಮುಖ್ಯವಾಗಿ ಭಾರತೀಯರು ತಮ್ಮ ಅಸ್ಮಿತೆಯನ್ನು ಗುರುತಿಸಿಕೊಳ್ಳುವಾಗ ದ್ವೀಪಗಳಾಗುವರು. ಅಮೆರಿಕದಲ್ಲಿ ನೆಲಸಿರುವ ಭಾರತೀಯರು ತಮ್ಮ ಮಕ್ಕಳು ತಮ್ಮ ಆಚಾರ, ಪದ್ಧತಿ, ಪರಂಪರಾಗತ ಸಂಸ್ಕೃತಿಗಳನ್ನು ಬಿಡಬಾರದೆನ್ನುವ ಭೀತಿಯಿಂದಾಗಿ ದೇವಸ್ಥಾನ, ಗುರುದ್ವಾರಗಳನ್ನು ಕಟ್ಟಿಕೊಳ್ಳುವ ಉದ್ದೇಶವಿರುವಂತಿದೆ.

'Vision of India' ಟಿ.ವಿ. ಕಾರ್ಯಕ್ರಮದಲ್ಲಿ ಅಕ್ಕಿ, ಬೇಳೆ, ಜೀನಿಸು, ಭಾರತೀಯ ಸೀರೆಗಳು, ಖಾದ್ಯ ಪದಾರ್ಥಗಳು ಎಲ್ಲಿ ಸಿಗುತ್ತವೆ ಎನ್ನುವ ಜಾಹೀರಾತುಗಳನ್ನು ನೋಡಿದಾಗ ಲೇಖಕರಿಗೆ ಬೇಸರವಾಯಿತು. ಅದಕ್ಕೆ ಕಾರಣ, ಅತ್ಯಂತ ಉಚ್ಚಮಟ್ಟದ ಶಿಕ್ಷಣ ದೊರಕಿಸಿಕೊಂಡು ಅಮೆರಿಕದಲ್ಲಿ ನೆಲೆಸಿರುವ ಭಾರತೀಯರಿಗೆ ನಮ್ಮ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸಿಕೊಳ್ಳುವ ಕುತೂಹಲವೂ ಇಲ್ಲದಿರುವುದು! ಅಮೆರಿಕದ ಜೀವನ ಒದಗಿಸಿಕೊಡುವ, ಐಷಾರಾಮಕ್ಕೆ ಪೋಷಕವಾಗಿರುವ, ವರ್ತಮಾನ ನಿಯಂತ್ರಿತ ಸಾಂಸ್ಕೃತಿಕ ಪರಿಸರಕ್ಕೆ ಅವರೂ ಒಗ್ಗಿಕೊಂಡು ತಮ್ಮ ಸಾಂಸ್ಕೃತಿಕ ಬೇರುಗಳನ್ನು ಅವರು ಅಕ್ಕಿ ಬೇಳೆಗಳಲ್ಲಿ ಹುಡುಕುತ್ತಿರುವುದು! (ಪು. ೭೧-೭೨). ಇಲ್ಲಿ ಧ್ವನಿತವಾಗುವ ವ್ಯಂಗ್ಯ ಅರ್ಥಪೂರ್ಣವಾಗಿದೆ.

ವ್ಯಾಸರಾಯ ಬಲ್ಲಾಳರ ಸೋದರ ರಘುವೀರ ಅವರು ಓದಿದ್ದು, ಸಂಶೋಧನೆ ನಡೆಸಿದ್ದು ಜೀವರಸಾಯನ ವಿಜ್ಞಾನದಲ್ಲಿ. ತಮಗೆ ತಮ್ಮ ಸಂಶೋಧನೆಯ ಕ್ಷೇತ್ರದಲ್ಲಿ ನಿರೀಕ್ಷಿತ ಪ್ರಮಾಣದ ಯಶಸ್ಸು ದೊರೆಯದಿದ್ದಾಗ ಅವರು ಶಿಕ್ಷಣ ಕ್ರಮದ ಒಂದು ಶಿಸ್ತಿನಿಂದ ಇನ್ನೊಂದು ಶಿಸ್ತಿಗೆ ಜಿಗಿದರು. ವೈದ್ಯಕೀಯ ಶಿಕ್ಷಣ ಪಡೆದ ಅವರು ಈಗ ನ್ಯೂಜೆರ್ಸಿಯಲ್ಲಿ ವೈದ್ಯಕೀಯ ವೃತ್ತಿ ಆರಂಭಿಸುವುದು ಆ ದೇಶ-ತನ್ನವರಿಗೆ ಕೊಟ್ಟಿರುವ ಆಯ್ಕೆಯ ಸ್ವಾತಂತ್ರ್ಯಕ್ಕೆ ಒಂದು ಸೊಗಸಾದ ಉದಾಹರಣೆಯಾಗಿದೆ. ಮಗಳ ಮನೆಯಲ್ಲಿದ್ದಾಗ (ಪೆನ್ಸಿಕೋಲಾದಲ್ಲಿ) ಲೇಖಕರು ಅಮೆರಿಕನ್ ಕುಟುಂಬ ಜೀವನ ವಿಧಾನವನ್ನು ತಿಳಿಯಲು ಪ್ರಯತ್ನಿಸಿರುವರು. ಸಮೂಹ ಮಾಧ್ಯಮಗಳನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳುತ್ತಿರುವ ಅಮೆರಿಕನ್ನರ ಬಗೆಗೆ ಲೇಖಕರ ಮೆಚ್ಚುಗೆಯಿದೆ.

ಇಲ್ಲಿನ ಪ್ರವಾಸ ಕಥನದಲ್ಲಿ ಹಲವು ದೇಶಗಳನ್ನು ನೋಡಿದ್ದರ ತುಂಬು ವಿವರಗಳು ದಾಖಲಾಗಿಲ್ಲವೆಂಬುದು ನಿಜವಾದರೆ ಪ್ರಸ್ತುತ ಅದೇ ಪ್ರಧಾನವಾದುದಲ್ಲ. ನಾವು ಈ ವಿವರಗಳನ್ನು ಇತರರು ಬರೆದಿರುವ ಪ್ರವಾಸ ಕಥನಗಳಲ್ಲಿ ನೋಡಬಹುದಾಗಿದೆ. ಎರಡು ವಿಭಿನ್ನ ಸಂಸ್ಕೃತಿಗಳ ಸಂಘರ್ಷದ ಬಗೆಗಿನ ಚಿಂತನೆ ಇಲ್ಲಿ ಪ್ರಧಾನವಾದುದು.

ಈ ನಿಟ್ಟಿನಲ್ಲಿ ಆಲೋಚಿಸಿದವರು, ತಮ್ಮ ಸಂಪರ್ಕಕ್ಕೆ ಬಂದವರ ಜೊತೆ ಮುಕ್ತವಾದ ಚರ್ಚೆ ನಡೆಸಿದವರು ಬಹುಶಃ ವ್ಯಾಸರಾಯ ಬಲ್ಲಾಳರೊಬ್ಬರೇ. ಈ ಕಾರಣಕ್ಕಾಗಿ ಈ ಕೃತಿ ವಿಶಿಷ್ಟವೆನ್ನಿಸುತ್ತದೆ. ಕೇಂದ್ರಿತ ಆಲೋಚನೆಯ ಹಲವು ಮಗ್ಗಲುಗಳನ್ನು ನಾವು ಇಲ್ಲಿ ಕಾಣುತ್ತೇವೆ. ಲೇಖಕರ ಸೂಕ್ಷ್ಮವಾದ ಗ್ರಹಣಶಕ್ತಿಯನ್ನೂ ಸಮಸ್ಯೆಯ ಬಗೆಗೆ ಗಾಢವಾಗಿ ಆಲೋಚಿಸುವ ಮನೋಭಾವವನ್ನೂ ನಾವಿಲ್ಲ ಮೆಚ್ಚುತ್ತೇವೆ. ಈ ಕೃತಿಯ ಇನ್ನೊಂದು ಮೆಚ್ಚುವ ಅಂಶ, ಪ್ರೌಢವಾದ ಭಾಷೆ ಹಾಗೂ ಲೇಖಕರಿಗೆ ಅದರ ಮೇಲಿರುವ ಪ್ರಭುತ್ವ. ಅಮೂರ್ತತೆಯಿಂದ ಮೂರ್ತತೆಗೆ ಆಲೋಚನೆಗಳನ್ನು ಹರಿಯಬಿಡುವಾಗ ಲೇಖಕನ ಭಾಷೆ ಪ್ರಧಾನ ಪಾತ್ರವಹಿಸುತ್ತದೆ. ನವ್ಯ ವಿಮರ್ಶನಕಾರರು ಭಾಷೆಯನ್ನು ಸಂವಹನಕ್ಕೆ ಹೇಗೆ ಬಳಸಿಕೊಂಡರೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ನಮ್ಮಲ್ಲಿ ಭಾಷೆಯನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವವರಲ್ಲಿ ಚಿತ್ತಾಲರು ಹಾಗೂ ವ್ಯಾಸರಾಯ ಬಲ್ಲಾಳರು ಮುಖ್ಯರಾದವರು.

ಡಾ. ಜಿ.ಎಸ್. ಶಿವರುದ್ರಪ್ಪನವರ ಮೂರನೆಯ ಪ್ರವಾಸ ಕಥನ **ಅಮೆರಿಕದಲ್ಲಿ ಕನ್ನಡಿಗ**. "ನಾನು ಅಮೆರಿಕದಲ್ಲಿ ನಮ್ಮ ಕನ್ನಡಿಗರ ನಡುವೆ ಇದ್ದರೂ, ಅಮೆರಿಕನ್ನರ ಬದುಕಿನೊಂದಿಗೆ ಬೆರೆಯುವ ಅವಕಾಶ ದೊರೆಯದೇ ಹೋದರೂ, ಅಮೆರಿಕ ಜೀವನವನ್ನು ಒಬ್ಬ ಭಾರತೀಯನಾಗಿ ನಾನು ಗಮನಿಸಿದ್ದೇನೆ" ಎಂದು ಲೇಖಕರೇ ಪ್ರಾರಂಭದಲ್ಲಿ ಹೇಳಿಕೊಂಡಿರುವರು. ಈ ಪ್ರವಾಸಕ್ಕೆ ತನ್ನದೇ ಆದ ಕೆಲವು ಇತಿಮಿತಿಗಳಿವೆ. ಇದು ಲೇಖಕರು ಸ್ವಂತ ಖರ್ಚಿನಲ್ಲಿ ಕೈಗೊಂಡ ಅಮೆರಿಕದ ಎರಡು ತಿಂಗಳ ಏಕಾಕಿ ಪ್ರವಾಸ. ಅಲ್ಲಿ ಇದ್ದದ್ದು ಕನ್ನಡಿಗರ ಜೊತೆ ಮತ್ತು ಕನ್ನಡಿಗರ ನಡುವೆ. ಸೀಮಿತ ಅವಧಿಯಲ್ಲಿ ಅಮೆರಿಕದ ಕೆಲವು ಭಾಗಗಳಲ್ಲಿ ಸುತ್ತಾಡಿ ತಾವು ಕಂಡ, ತಮಗೆ ಅನಿಸಿದ ಕೆಲವು ಸಂಗತಿಗಳನ್ನು ಲೇಖಕರು ಈ ಪುಸ್ತಕದಲ್ಲಿ ಹೇಳಿರುವರು. ತಾವು ಭೇಟಿ ಮಾಡಿದ ಕನ್ನಡಿಗರು, ಅವರ ಸುಂದರವಾದ ಮನೆಯಲ್ಲಿ ನಡೆದ ಆತಿಥ್ಯ ಭಾಗವಹಿಸಿದ ಕನ್ನಡ ಸಂಘಗಳು ಹಾಗೂ ಅವುಗಳ ಚಟುವಟಿಕೆಗಳು -ಇವು ಪ್ರಧಾನವಾಗಿ ಈ ಪ್ರವಾಸ ಕಥನದಲ್ಲಿ ಬರುವುದರಿಂದ 'ಅಮೆರಿಕದಲ್ಲಿ ಕನ್ನಡಿಗ' ಎಂಬ ಹೆಸರು ಈ ಕೃತಿಗೆ ಒಪ್ಪುತ್ತದೆ. ಕನ್ನಡಿಗರು ಅಲ್ಲಿ ಬದುಕುತ್ತಿರುವ ರೀತಿ, ಅದರಲ್ಲಿನ ಏಕತಾನತೆಯನ್ನು ಲೇಖಕರು ಚೆನ್ನಾಗಿ ಗುರುತಿಸುವರು. ವಾರದಲ್ಲಿ ಐದು ದಿನಗಳ ದುಡಿಮೆಯಿಂದ ಬಳಲಿದ ಅಲ್ಲಿನ ಕನ್ನಡಿಗರಿಗೆ ತಮ್ಮ ದೇಶ ಭಾಷೆ ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಸಂಬಂಧ ಕಲ್ಪಿಸಿಕೊಳ್ಳಲು ಕನ್ನಡ ಸಂಘಗಳು ಕೊಂಡಿಯಂತಿವೆ. ಹಬ್ಬಗಳಂದು ಇಲ್ಲವೆ ಸಾಂಸ್ಕೃತಿಕ ಸಮಾವೇಶಗಳಂದು ನೂರಾರು ಮೈಲಿಗಳಿಂದ ಬಂದು ಒಂದೆಡೆ ಸೇರುವ ಅವರು ತಾಯ್ನಾಡಿನ ಮಧುರ ನೆನಪನ್ನು (ಸಾಹಿತ್ಯ ಗೋಷ್ಠಿ, ಸಂಗೀತ,

ನೃತ್ಯ, ನಾಟಕಗಳ ಮೂಲಕ) ತಂದುಕೊಳ್ಳುವರು, ಆ ಮೂಲಕ ಸಂತೋಷಿಸುವರು. ಲೇಖಕರು ಅಮೆರಿಕದಲ್ಲಿನ ಕನ್ನಡಿಗರನ್ನು ಸಂಪರ್ಕಿಸಿದ್ದು ಅಲ್ಲಿನ ಕನ್ನಡ ಸಂಘ ಸಂಸ್ಥೆಗಳ ಮೂಲಕ. ಹೀಗಾಗಿ ಈ ಕೃತಿಯ ಕೇಂದ್ರ ಅಮೆರಿಕನ್ ಅಲ್ಲ, ಅಮೆರಿಕದಲ್ಲಿನ ಕನ್ನಡಿಗ. ಲೇಖಕರು ಕೈಗೊಂಡ ಪ್ರವಾಸದ ಉದ್ದಕ್ಕೂ ಅವರ ಸಾಹಿತ್ಯ ಯಾತ್ರೆ, ಕನ್ನಡಿಗರ ನಡುವೆ ನಿಂತು ಆಡಿದ ಮಾತುಗಳು ಹಿನ್ನೆಲೆಯಾಗಿವೆ. ಅವರು ಅಮೆರಿಕನ್ನರ ಸಾಮಾಜಿಕ ಜೀವನ ವಿಧಾನವನ್ನು ಕನ್ನಡಿಗರ ಪರಿಸರದಿಂದ ನಿಂತು ನೋಡುವುದರಿಂದ ನಾವು ಹೆಚ್ಚಿನದೇನನ್ನೂ ನಿರೀಕ್ಷಿಸುವಂತಿಲ್ಲ. ಆದರೂ ಅವರ ಸೂಕ್ಷ್ಮವಾದ ನೋಟ ಅಮೆರಿಕನ್ನರ ಬದುಕಿನ ಹಲವು ವಿಶಿಷ್ಟ ಲಕ್ಷಣಗಳನ್ನು ಗುರುತಿಸುತ್ತದೆ. ಟೀವಿಯಲ್ಲಿ ಕಳೆದವಾರ ತಾನು ಡೇಟಿಂಗ್ ಹೋದ ಹುಡುಗನ ಜೊತೆ ಆದ ಅನುಭವಗಳನ್ನು ಕುರಿತು ಹುಡುಗಿಯರಿಬ್ಬರು ಹೇಳಿಕೊಳ್ಳುವ ಕಾರ್ಯಕ್ರಮವನ್ನು ನೋಡಿದ ಲೇಖಕರು "ಅಬ್ಬಾ ಧೈರ್ಯವೇ, ಯಾವುದಕ್ಕೂ ಮುಚ್ಚುಮರೆ ಹಾಗೂ ಖಾಸಗಿ ಎಂಬ ಮಾತುಗಳಿಗೆ ಇಲ್ಲಿ ಅರ್ಥವೇ ಇಲ್ಲವೆ!" ಎಂದು ಉದ್ಗಾರ ತೆಗೆಯುವರು. ಒಮ್ಮೆ ಟ್ರೈನಿನಲ್ಲಿ ಟಿಕೆಟ್ಟಿಲ್ಲದೆ ಪ್ರಯಾಣ ಮಾಡಬೇಕಾಗಿ ಬಂದಾಗ ಕಂಡೆಕ್ಟರ್ ಅದನ್ನು ಮಹಾಪರಾಧವಲ್ಲವೆಂದು ಭುಜಹಾರಿಸಿ ದುಡವಸೂಲಿ ಮಾಡಿ ಮಾರ್ಯಾದೆಯಿಂದ ನಡೆಯಿಸಿಕೊಂಡ ಸೌಜನ್ಯವನ್ನು ನೆನೆಯುವರು. ಪುಟ್ಟ ಮಗುವೊಂದು ತಾನು ತಾಯಿಯಿಂದ ಪಡೆದ ಚಾಕಲೇಟಿಗೆ ಸುತ್ತಿದ್ದ ಬಣ್ಣದ ಹೊದಿಕೆಯನ್ನು ಸಮೀಪದಲ್ಲೇ ಇದ್ದ ಕಸದ ಬುಟ್ಟಿಗೆ ಹಾಕಿದ್ದನ್ನು ನೋಡಿ ಕಸವನ್ನು ಎಲ್ಲೆಂದರಲ್ಲಿ ಎಸೆಯಬಾರದೆಂಬ ತಿಳುವಳಿಕೆಯನ್ನು ಆ ಮಗು ಹುಟ್ಟಿದುದಿನಿಂದಲೇ ತನ್ನ ಪ್ರಜ್ಞೆಯೊಳಗೆ ತಂದುಕೊಂಡಿರುವುದನ್ನು ಮೆಚ್ಚುವರು. ಅಟ್ಲಾಂಟಿಕ್ ಸಿಟಿಯ ಜೂಜಿನ ಕಟ್ಟೆಯಲ್ಲಿ ವಯಸ್ಸಾದವರೇ ಹೆಚ್ಚಿಗೆ ಇದ್ದುದ್ದಕ್ಕೆ ಕಾರಣವನ್ನು ಮಕ್ಕಳಿಂದ ಕಡೆಗಣಿಸಲ್ಪಟ್ಟ ಅವರ ಏಕಾಕಿತನದ ಮನೋವ್ಯಥೆಯಲ್ಲಿ ಗುರುತಿಸುವರು.

ಅಮೆರಿಕದಲ್ಲಿ ಇದ್ದಷ್ಟು ದಿವಸ ಅವರು ಸಾಧ್ಯವಿದ್ದಷ್ಟು ಪ್ರವಾಸೀ ಆಕರ್ಷಣೆಯ ಕೇಂದ್ರಗಳಿಗೆ ಭೇಟಿಕೊಟ್ಟಿರುವರು. ಎಲ್ಲೋಸ್ಟೋನ್ ಪಾರ್ಕ್, ಸ್ಯಾನ್ ಫ್ರಾನ್ಸಿಸ್ಕೋದ ಬಿಗ್ ಬೇಸಿನ್ ರೆಡ್‌ವುಡ್ ಫಾರೆಸ್ಟ್ (ಇದನ್ನು ಪ್ರವೇಶಿಸಿದಾಗ ಲೇಖಕರಿಗೆ ಕರ್ನಾಟಕದ ಸಹ್ಯಾದ್ರಿ ಪರ್ವತದ ಅಂತರಂಗವನ್ನು ಹೊಕ್ಕಂತಾಯಿತಂತೆ.) ಲಾಸ್ ಏಂಜಲೀಸ್ ಯೂನಿವರ್ಸಲ್ ಸ್ಟುಡಿಯೋ, ಜಗತ್ತಿನ ಏಳು ಮಹಾದ್ಭುತಗಳಲ್ಲಿ ಒಂದಾದ ಗ್ರ್ಯಾಂಡ್ ಕ್ಯಾನಿಯನ್, ಆರ್ಲೆಂಡೋದಲ್ಲಿನ ಡಿಸ್ನಿ ಜಗತ್ತು, ನಯಾಗಾರ ಜಲಪಾತ -ಇವುಗಳನ್ನು ನೋಡಲು ಹೋದಾಗಿನ ಅನುಭವಗಳ ವಿವರಗಳು ಆಕರ್ಷಕವಾಗಿ ನಿರೂಪಣೆಗೊಂಡಿವೆ. ಲೇಖಕರ ಆಕರ್ಷಕ ಬರವಣಿಗೆ ಪ್ರವಾಸ ಕಥನವನ್ನು ಬಿಡದೆ ಓದಿಸಿಕೊಂಡು ಹೋಗುತ್ತದೆ.

ಪ್ರೊ|| ವಿ. ಪುಟ್ಟಮಾದಪ್ಪನವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು; ಮೈಸೂರು ವಿಶ್ವವಿದ್ಯಾಲಯದ ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಅವರು ಎರಡು ಬಾರಿ ಅಮೆರಿಕೆಯ ಪ್ರವಾಸ ಕೈಗೊಂಡಿರುವರು. ೧೯೮೧ರಲ್ಲಿ ಮೊದಲಬಾರಿಗೆ ಅವರು ಅಮೆರಿಕಾಗೆ ಭೇಟಿಕೊಟ್ಟಾಗ ಬೇಸಿಗೆ ಕಾಲ. ಆಗಿನ ತಮ್ಮ ಅನುಭವಗಳನ್ನು **ನೆಮ್ಮಿಗೆಯ ನಾಡು** ಎಂಬ ಪ್ರವಾಸ ಕಥನದಲ್ಲಿ ಹೇಳಿರುವರು. ೧೯೮೩ರಲ್ಲಿ ಎರಡನೆಯ ಬಾರಿ ಆ ದೇಶಕ್ಕೆ ಭೇಟಿಕೊಟ್ಟಾಗ ಚಳಿಗಾಲ. ಲೇಖಕರೇ ಹೇಳುವಂತೆ "೧೯೮೩ರಲ್ಲಿ ಅಮೆರಿಕಾದಲ್ಲಿ ಹಿಂದೆಂದೂ ಇಲ್ಲದಷ್ಟು ಚಳಿ, ದೇಶದಲ್ಲೆಲ್ಲ ಒಂದೆರಡು ಕಡೆ ಬಿಟ್ಟರೆ-ಮಂಜಿನ ರಾಶಿ. ನನ್ನ ಪಾಲಿಗೆ ಅಂಥ ಚಳಿ ಮತ್ತು ಮಂಜು ಹೊಸತಾದ್ದರಿಂದ ಹೊರಗೆ ಓಡಾಡಲೂ ಕಷ್ಟ. ಚಳಿಯ ತೀವ್ರತೆ, ಮಂಜಿನ ಹೊಡೆತ ಅಷ್ಟಿದ್ದರೂ ಕಳೆದ ಬಾರಿಗಿಂತಲೂ ಈ ಬಾರಿ ನಾನು ಆ ದೇಶದ ಹೆಚ್ಚು ಭಾಗವನ್ನು ನೋಡಿ ಬಂದೆ. ಹಲವಾರು ಪ್ರೇಕ್ಷಣೀಯ ಸ್ಥಳಗಳಿಗೆ, ವಿಶ್ವವಿದ್ಯಾನಿಲಯಗಳಿಗೆ, ಶಾಲೆಗಳಿಗೆ ಭೇಟಿಕೊಟ್ಟೆ, ಹೆಚ್ಚು ವಿಷಯವನ್ನು ಸಂಗ್ರಹಿಸಿದೆ. ಚಳಿಯಲ್ಲಿ ದೇಹ ನಡುಗುತ್ತಿದ್ದರೂ ಮುಖದಲ್ಲಿ ನಗೆಯನ್ನು ತುಂಬಿಕೊಂಡು ಮೂರು ತಿಂಗಳ ಕಾಲ ಅಮೆರಿಕಾದಲ್ಲಿ ಪ್ರವಾಸ ಮಾಡಿ ಬಂದೆ." ಲೇಖಕರು ತಮ್ಮ ಇಬ್ಬರು ಹೆಣ್ಣು ಮಕ್ಕಳನ್ನು. ಮೊಮ್ಮಗನನ್ನು ಅಳಿಯಂದಿರನ್ನು ನೋಡಿಬರಲು ಹಿರಿಯ ಮಗಳ ಜೊತೆ ಅಮೆರಿಕಾಕ್ಕೆ ಹೋಗಿದ್ದರು. ಮೊದಲನೆಯ ಮಗಳು ಇದ್ದುದು ನ್ಯೂಯಾರ್ಕ್‌ನಲ್ಲಿ; ಎರಡನೆಯ ಮಗಳು ಇದ್ದುದು ಡಲ್ಲಾಸ್‌ಗೆ ಸುಮಾರು ೧೭೫ ಮೈಲಿ ದೂರದಲ್ಲಿದ್ದ ಅಬಿಲೀನ್‌ನಲ್ಲಿ. ಇದು ಟೆಕ್ಸಾಸ್ ಪ್ರಾಂತ್ಯದಲ್ಲಿದೆ. ಎರಡೂ ಕಡೆ ಓಡಿಯಾಡಿದ ಲೇಖಕರು ತಮ್ಮ ಅನುಭವಗಳನ್ನು **'ಮಂಜಿನ ಮಡಿಲಲ್ಲಿ'** ಎಂಬ ಕೃತಿಯಲ್ಲಿ ಹೇಳಿರುವರು. ಲೇಖಕರು ಅಮೆರಿಕದ ಹಲವು ಭಾಗಗಳನ್ನು ಸುತ್ತಾಡಿ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿರುವರು. ಅವುಗಳ ವಿವರ ಸಾಕಷ್ಟು ವಿಸ್ತೃತವಾಗಿ ಈ ಪ್ರವಾಸ ಕಥನದಲ್ಲಿ ಬಂದಿದೆ. ನ್ಯೂಯಾರ್ಕ್‌ನ ಸ್ಕೂಲ್ ಫಾರ್ ದ ಡಫ್‌ಗೆ ಭೇಟಿನೀಡಿದ್ದು (ಪು. ೧೦೫-೧೧೪), ನ್ಯೂಯಾರ್ಕ್ ವಿಶ್ವವಿದ್ಯಾಲಯ ಗ್ರಂಥಾಲಯಕ್ಕೆ ಭೇಟಿನೀಡಿದ್ದು (ಪು. ೨೧೪-೨೧೯), ಬಾಸ್ಟನ್‌ನಲ್ಲಿರುವ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿನೀಡಿದ್ದು (ಪು. ೨೨೪-೨೨೭), ನ್ಯೂಜೆರ್ಸಿಯ ಸಿಕಾಕಸ್‌ಗೆ ಸುಮಾರು ೬೦ ಮೈಲಿ ದೂರದಲ್ಲಿರುವ ಮನ್‌ಮೌತ್ ಕಾಲೇಜಿಗೆ ಭೇಟಿನೀಡಿದ್ದು (ಪು. ೨೨೯-೨೩೮) -ಇಲ್ಲೆಲ್ಲ ಪ್ರಯತ್ನಪೂರ್ವಕವಾಗಿ ವಿವರಗಳು ಬಿಚ್ಚಿಕೊಳ್ಳುತ್ತವೆ. ಲೇಖಕರ ವಿವರಗಳನ್ನು ದಾಖಲಿಸುವ ಪ್ರವೃತ್ತಿಯಿಂದಾಗಿ ಒಮ್ಮೊಮ್ಮೆ ಈ ಪ್ರವಾಸ ಕಥನ ಸರಳುತ್ತದೆ.

ಅಮೆರಿಕನ್ನರ ಸಾಮಾಜಿಕ ಜೀವನ ವಿಧಾನವನ್ನು ಲೇಖಕರು ನೋಡಿ, ಕೇಳಿ ಸ್ವಾರಸ್ಯಕರವಾಗಿ ತಿಳಿಸಿರುವರು. ಪ್ರವಾಸ ಕಥನದ ಕೊನೆಯಲ್ಲಿ (ಪು. ೨೫೯-೧೭೮)

ಇದು ಬಂದಿದ್ದು, ಅಮೆರಿಕಾದ ಜನ ಮತ್ತು ಅವರ ಸಮಾಜದ ಬಗ್ಗೆ ಒಂದು ಸ್ಪಷ್ಟ ಚಿತ್ರವನ್ನು ಕೊಡುತ್ತದೆ. ತಾವು ಟಿ.ವಿ.ಯಲ್ಲಿ ನೋಡಿದ ಸಿನಿಮಾಗಳ ಬಗ್ಗೆಯಷ್ಟೇ ಅಲ್ಲದೆ ತಾವು ವೀಕ್ಷಿಸಿದ ಒಳ್ಳೆಯ ಕಾರ್ಯಕ್ರಮಗಳ ಬಗ್ಗೆಯೂ ವಿವರಗಳನ್ನು ಲೇಖಕರು ನೀಡಿರುವರು. ಆರ್ಥಿಕವಾಗಿ ಮುಂದುವರಿದ ರಾಷ್ಟ್ರವಾದ ಅಮೆರಿಕೆಯಲ್ಲಿ ಜನತೆಗೆ ಒದಗಿಬಂದಿರುವ ಸುಖ ಭೋಗಗಳು, ಗಂಡು-ಹೆಣ್ಣು ಸಮಾನತೆಯ ಹಮ್ಮಿನಲ್ಲಿ ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರುವುದು, ವೈವಾಹಿಕ ಸಂಬಂಧವಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಬಿರುಕು ಕಾಣಿಸಿಕೊಂಡಿರುವುದು, ಕೌಟುಂಬಿಕ ನೆಲೆಯಲ್ಲಿ ಆರ್ಥಿಕ ಸ್ವಾತಂತ್ರ್ಯದಿಂದಾಗಿ ಮಾನವೀಯ ಸಂಬಂಧಗಳು ಸಡಿಲಗೊಳ್ಳುತ್ತಿರುವುದು, ವರ್ಣದ್ವೇಷ, ಸಮೃದ್ಧಿಯ ನಡುವೆಯೂ ಕೊಲೆ ಸುಲಿಗೆ ದರೋಡೆಗಳು ನಡೆಯುತ್ತಿರುವುದು, ಉದಾರವಾದ ನ್ಯಾಯದಾನ ಪದ್ಧತಿ -ಹೀಗೆ ಹಲವು ನೆಲೆಗಳಲ್ಲಿ ಅಮೆರಿಕನ್ ಸಮಾಜವನ್ನು ಲೇಖಕರು ಸೊಗಸಾಗಿ ಹಾಗೂ ಸ್ವಾರಸ್ಯಕರವಾಗಿ ವಿಶ್ಲೇಷಿಸುವರು. ಪ್ರಾಧ್ಯಾಪಕರಾಗಿದ್ದರಿಂದ ಅವರ ವಿಚಾರಧಾರೆಗಳಿಗೆ ಒಂದ ಕ್ರಮಬದ್ಧತೆ, ಒಪ್ಪ ಓರಣಗಳು ತಲೆದೋರಿವೆ. ಈ ದೃಷ್ಟಿಯಿಂದ ಈ ಪ್ರವಾಸ ಕಥನ ಮುಖ್ಯವಾಗುತ್ತದೆ. ಅಮೆರಿಕದ ಜನರ ಬದುಕಿನ ಅನೇಕ ಒಳಮಗ್ಗುಲುಗಳ ಪರಿಚಯ ಈ ಕೃತಿಯಿಂದಾಗುತ್ತದೆ.

ಪ್ರೊ|| ಎನ್. ನಂಜುಡಶಾಸ್ತ್ರಿಗಳು ಅಮೆರಿಕ ಪ್ರವಾಸ ಕೈಗೊಂಡದ್ದು ಕೌಟುಂಬಿಕ ಕಾರಣಗಳಿಗಾಗಿ, ಅವರು ಅಲ್ಲಿ ವಾಸ್ತವ್ಯ ಮಾಡಿದ್ದುದು ಏಳೆಂಟು ತಿಂಗಳು ಮಾತ್ರ. ಮಿಚಿಗನ್, ಗ್ರ್ಯಾಂಡ್ ರ್‍ಯಾಪಿಡ್ಸ್, ಫಿಲಡೆಲ್ಫಿಯಾ, ವಾಷಿಂಗ್‌ಟನ್ ಡಿ.ಸಿ., ಫ್ಲಾರಿಡಾ -ಹೀಗೆ ನೋಡಲೇಬೇಕಾದ ಸ್ಥಳಗಳಿಗೆ ಭೇಟಿ ಕೊಟ್ಟಿರುವರು. "ಎಲ್ಲ ಪ್ರವಾಸಿಗಳು ನೋಡಿದ್ದನ್ನೇ ನಾವು ನೋಡಿದರೂ ನಮ್ಮದೃಷ್ಟಿ ಯಾತ್ರಿಕರ ದೃಷ್ಟಿಯಾಗಿ ಇತರರ ಕಣ್ಣಿಗೆ ಕಾಣದ, ದೃಷ್ಟಿಗೆ ಗೋಚರಿಸದ ಕೆಲವು ಅಂಶಗಳು ನಮ್ಮ ಮನಸ್ಸಿಗೆ ನಾಟಿದವೆಂದು ನನ್ನ ಅನಿಸಿಕೆ" ಎಂಬ ಲೇಖಕರ ಮಾತಿನಲ್ಲಿ ಸತ್ಯಾಂಶವಿದೆ. ಪ್ರೊ|| ನಂಜುಂಡಶಾಸ್ತ್ರಿಗಳು ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡವರು; ವಯಸ್ಸಿನಿಂದ ಪಕ್ವವಾದವರು. ಅವರ ಶಿಸ್ತಿನ ವ್ಯಾಪಕ ಓದಿನಿಂದಾಗಿ, ಆಧ್ಯಾತ್ಮಿಕ ತಿಳುವಳಿಕೆಯಿಂದಾಗಿ ಅವರ ಮನಸ್ಸು ಹದಗೊಂಡಿದೆ. ಅವರ ನೋಟದಲ್ಲಿ ಸಂಸ್ಕಾರಜನ್ಯವಾದ ಶುಚಿ, ರುಚಿಯಿದೆ. ನೋಡಿದ್ದನ್ನು ಕಣ್ಣಿಗೆ ಕಟ್ಟುವಂತೆ ತಿಳಿಸುವ ಸೊಗಸಾದ ಭಾಷಾಜ್ಞಾನವಿದೆ. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದುದರಿಂದ ಅವರು ಅಮೆರಿಕ ದೇಶದ ಬಗೆಗೆ ಪೂರ್ವ ಭಾವಿಯಾಗಿ ಸಾಕಷ್ಟು ತಿಳಿದಿರುವರು; ಹೇಳಬೇಕಾದುದನ್ನು ಹೇಗೆ ಎಷ್ಟು ಹೇಳಬೇಕೆಂಬ ವಿವೇಕವಿದೆ.

ಆದ್ದರಿಂದ ಲೇಖಕರ **ಅಮೆರಿಕ-ಭಾರತೀಯನ ದೃಷ್ಟಿಯಲ್ಲಿ** ಎಂಬ ಪ್ರವಾಸ ಕಥನ ಬೇರೆ ಪ್ರವಾಸ ಕಥನಗಳಿಂದ ಭಿನ್ನವಾಗಿ ನಿಲ್ಲುತ್ತದೆ.

ಕೃತಿಯ ಹೆಸರೇ ಅವರ ಪ್ರವಾಸ ಕಥನದ ದೃಷ್ಟಿಕೋನವನ್ನು ತಿಳಿಸುತ್ತದೆ. ಅವರು ಭಾರತೀಯರಾಗಿ ಅಮೆರಿಕವನ್ನು ನೋಡುವರು. ಪ್ರವಾಸ ಕಥನದಲ್ಲಿ ಲೇಖಕರನ್ನು ಡಾ|| ನಾರಾಯಣ್‌ರವರು "ಅಮೆರಿಕದಲ್ಲಿ ನೀವು ನೆಲೆಸಲು ಬಯಸುವಿರಾ?" ಎಂದು ಕೇಳುವರು. ಅದಕ್ಕೆ ಅವರು "ಖಂಡಿತವಾಗಿ ಇರಲಾರೆ" ಎನ್ನುವರು. "ಕೆಲಸ ಕಾರ್‍ಯವಿಲ್ಲದೆ, ವೃದ್ಧಾಪ್ಯಕ್ಕೆ ಪಾದಾರ್ಪಣೆ ಮಾಡಿ ನಾನು ಪರಾವಲಂಬಿಯಾಗಿ ಬಾಳಲು ಇಷ್ಟವಿಲ್ಲವೆಂದೋ, ಇದಕ್ಕೂ ಮಿಗಿಲಾಗಿ ವಿಭಿನ್ನ ಸಂಸ್ಕೃತಿ, ಜೀವನಗತಿ, ಬಾಳದೃಷ್ಟಿ, ವಿಶಿಷ್ಟ ಮೌಲ್ಯಗಳು ಮತ್ತು ವಾತಾತವರಣದಲ್ಲಿ ಬೆಳೆದ ನಾನು ಆ ದೇಶದ ಸತ್ವರಹಿತ, ಸಹ್ಯವಲ್ಲದ, ಚೇತನವಿಲ್ಲದ, ಅನಾಧ್ಯಾತ್ಮಿಕ ರೀತಿನೀತಿಗಳಿಗೆ ಹೊಂದಿಕೊಂಡಿರುವುದು ಸಾಧ್ಯವೇ ಇಲ್ಲ... ಭಾರತ ಶ್ರೀಮಂತ ದೇಶವಲ್ಲದಿದ್ದರೂ ಕೊಳೆ ಕಸ ಕಾಯಿಲೆಗಳಿಂದ ತುಂಬಿದ್ದರೂ, ಜನನಿಬಿಡವಾಗಿದ್ದರೂ ಸಹನೆ ಅನುಕಂಪಗಳಿಂದ ಹೃದಯ ಶ್ರೀಮಂತಿಕೆಯಿಂದ, ಮಾನವೀಯತೆಯಿಂದ, ಸುಸಂಸ್ಕೃತ ಜೀವನದಿಂದ, ಪಾರಮಾರ್ಥಿಕ ನಿಕ್ಷೇಪದಿಂದ ಕೂಡಿದ್ದು ವೀರಸನ್ಯಾಸಿ ಸ್ವಾಮಿ ವಿವೇಕಾನಂದರು ವರ್ಣಿಸಿರುವ ಪುಣ್ಯಭೂಮಿಯಾಗಿ, ತಪೋಧಾಮವಾಗಿ, ವೇದಾಂತ ವಾರಿಧಿಯಾಗಿ, ಧರ್ಮಕ್ಷೇತ್ರವಾಗಿ ಸದಾಕಾಲಕ್ಕೂ ಉಳಿದಿರುತ್ತದೆ. ಇಲ್ಲಿ ವಾಸಿಸಿ ಪುನೀತರಾಗುವುದನ್ನು ಬಿಟ್ಟು ಬೆಡಗು ಬಿನ್ನಾಣಗಳ ಥಳಕು ಮೆರಗುಗಳ ಮಾಯಾ ಮೋಹಿನಿಯ ಅಪ್ಪುಗೆಯಲ್ಲಿ ಸಾಯಲು ಯಾರು ಬಯಸುತ್ತಾರೆ?" ಎಂದು ಲೇಖಕರು ಉದ್ವೇಗ ಹಾಗೂ ಆವೇಶದ ಉತ್ತರ ನೀಡುವರು (ಪು. ೧೩೧-೧೩೨).

ಹೀತ್‌ರೌ ವಿಮಾನನಿಲ್ದಾಣದಲ್ಲಿ ಗುಡಿಸಿ, ಸಾರಿಸಿ, ಶೌಚಗೃಹಗಳನ್ನು ತೊಳೆಯುವ ಕೆಲಸಕ್ಕೆ ನೇಮಿತರಾಗಿರುವವರಲ್ಲಿ ಬಹುಮಂದಿ ಭಾರತೀಯ ಮಹಿಳೆಯರು. ಅವರು ಭಾರತದ ಹಳ್ಳಿಗಳಲ್ಲಿ ಇಂತಹ ಕೆಲಸವನ್ನು ಮಾಡಲು ಹಿಂಜರಿಯುವರು. ಆದರೆ ಅವರು ದೂರದೇಶದಲ್ಲಿ ದುಡ್ಡಿನಾಸೆಗೆ ಅದೇ ಕೆಲಸವನ್ನು ಮಾಡುತ್ತಿರುವುದು (ಪು. ೧೬); ಮೊಮ್ಮಗಳನ್ನು ರಮಿಸಲು ವಿಮಾನದ ಹೊರಗೆ ಹೋಗಿದ್ದಾಗ ಲೇಖಕರ ಸೊಗಸಾದ ಬಿಳಿಯ ಶಾಲು, ಮಗಳಿಗಾಗಿ ಹೊಲಿಸಿದ್ದ ಸಿಲ್ಕ್ ಬ್ಲೌಸ್ ಇತ್ಯಾದಿ ಕೆಲವು ವಸ್ತುಗಳನ್ನು ವಿಮಾನದ ಒಳಗೆ ಸ್ವಚ್ಛಗೊಳಿಸಲು ಬಂದಿದ್ದ ಆ ನಿಲ್ದಾಣದ ಭಾರತೀಯ ಮಹಿಳೆಯರು ಕದ್ದೊಯ್ದುದು (ಪು .೧೭); ಅಮೆರಿಕದ ಕೆಲವು ಕೇಂದ್ರ ಸ್ಥಳಗಳಲ್ಲಿ 'ಅಮೆರಿಕದವರಾಗಿಯೇ ಉಳಿಯಿರಿ, ಅಮೆರಿಕದ್ದನ್ನೇ

ಕೊಳ್ಳಿರಿ' ಎಂಬ ಘೋಷಣಾ ವಾಕ್ಯಗಳನ್ನು ಓದಿದಾಗ ಸ್ವದೇಶಾಭಿಮಾನದ ತೀವ್ರ ಕೊರತೆ ಭಾರತದಲ್ಲಿ ಮಾತ್ರವಲ್ಲ, ಎಂಬ ಅನಿಸಿಕೆಯುಂಟಾದುದು (ಪು. ೩೩); ಅಮೆರಿಕದಲ್ಲಿ ಭಾರತೀಯರು ದಕ್ಷರೂ ಪ್ರತಿಭಾವಂತರೂ ಆಗಿದ್ದರೂ ಎರಡನೆ ದರ್ಜೆಯ ಪೌರರಾಗಿರುವುದು (ಪು. ೧೨೯) -ಇವೆಲ್ಲವನ್ನು ಲೇಖಕರ ಒಳ ಮನಸ್ಸು ಸೂಕ್ಷ್ಮವಾಗಿ ಗ್ರಹಿಸುತ್ತದೆ. ಅಮೆರಿಕದಲ್ಲಿ ಭಿಕ್ಷಾಟನೆ ಕಾನೂನುಬಾಹಿರವಾಗಿದ್ದರೂ ಆ ಸಂಪದ್ಭರಿತ ದೇಶದಲ್ಲಿ ಬಡತನದಿಂದಾಗಿ ಭಿಕ್ಷೆ ಬೇಡುವವರನ್ನು ಅವರು ಕಾಣುವರು (ಪು. ೧೧೮); ರಸ್ತೆಯ ಬದಿಯಲ್ಲಿ ಡಬ್ಬಗಳಲ್ಲಿ ತಿನಿಸುಗಳನ್ನು ಮಾರುವುದು ನಮ್ಮಲ್ಲಿ ಸಾಮಾನ್ಯ ನೋಟ. ಆದರೆ ಫಿಲಿಡೆಲ್ಫಿಯಾದಲ್ಲಿ ಲೇಖಕರು ಇದನ್ನು ನೋಡುವರು (ಪು. ೧೧೯). ಲೇಖಕರು ತಾವು ಓದಿದ ಪ್ರೌಢ ಲೇಖನವೊಂದರಲ್ಲಿ ಬಂದಿರುವ ವಾಕ್ಯವನ್ನು ಉದ್ಧರಿಸುತ್ತಾ "ಅಮೆರಿಕಾದಲ್ಲಿ ಪ್ರಗತಿಯೆ? ಜರ್ಮನ್ ವಿಜ್ಞಾನಿಯೊಬ್ಬನನ್ನು ಅಪಹರಿಸುವ ಮೂಲಕ, ರಷ್ಯದ ರಹಸ್ಯವೊಂದನ್ನು ಕದಿಯುವ ಮೂಲಕ ಅಥವಾ ಜಪಾನೀಯರ ನಿರ್ವಹಣದ ಪದ್ಧತಿಗಳನ್ನು ಎರವಲು ಪಡೆಯುವ ಮೂಲಕ ಅದು ಸಾಧಿಸಲ್ಪಡುತ್ತದೆ" ಎನ್ನುವ ನಿರ್ಭೀತಿಯಿಂದ ನುಡಿದ ಬಿಚ್ಚು ಮನಸ್ಸಿನ ಮಾತನ್ನು ಮೆಚ್ಚಿಕೊಳ್ಳುವರು (ಪು.೩೩).

'ಅಮೆರಿಕಾದಲ್ಲಿ ನಿತ್ಯ ಜೀವನ' ಎಂಬ ಶೀರ್ಷಿಕೆಯಲ್ಲಿ ಬಂದಿರುವ ವಿವರಗಳು ಈಗಾಗಲೇ ನಾವು ಕೇಳಿರುವವುಗಳೇ ಆಗಿವೆ. ಹೊಸದಾಗಿ ಅಮೆರಿಕನ್ನರ ಜೀವನ ವಿಧಾನವನ್ನು ತಿಳಿಯಬಯಸುವವರಿಗೆ ಇಲ್ಲಿನ ವಿವರಗಳು ಕುತೂಹಲಕಾರಿಯಾಗಿವೆ. ಈ ಪ್ರವಾಸ ಕಥನದ ಆಕರ್ಷಣೆ ಅದರ ನಿರೂಪಣೆಯಲ್ಲಿದೆ. ಲೇಖಕರ ಹೇಳುವುದನ್ನು ಅರ್ಥಪೂರ್ಣವಾಗಿ ಮನಮುಟ್ಟುವ ರೀತಿಯಲ್ಲಿ ಹೇಳುವರು. ಅವರ ಭಾಷೆಗೆ ತನ್ನದೇ ಆದ ಓಜಸ್ಸಿದೆ. ಅರೆನೀರ್‌ಮನೆ, ಮುಂಗವಚ, ಸಾಗಣೆತೊಟ್ಟಿ, ತೊಟ್ಟಿಸ್ನಾನ ವೃಷ್ಟಿಸ್ನಾನ, ಶೀತಕ, ನಿಸ್ತಂತು ಧ್ವನಿಗ್ರಾಹಕ, ನಿರ್ವಾಯು ಚೋಷಕ, ಸರ್ವಸಾಮಗ್ರಿ ಮಳಿಗೆ, ಇಳಿಕು ಕಿಂಡಿ, ಒಳಕುಂದುವಿಕೆ -ಹೀಗೆ ಕನ್ನಡ ನುಡಿಗಟ್ಟುಗಳು ಅವರ ವಿಚಾರ ಮೂಸೆಯಲ್ಲಿ ಕಮ್ಮಟಗೊಂಡು ಬಳಕೆಯಾಗಿವೆ.

ತಮ್ಮ ಪ್ರವಾಸಕಥನದ ಕೊನೆಯಲ್ಲಿ ತಮ್ಮ ಪ್ರವಾಸ ಸಮೀಕ್ಷೆಯನ್ನು ಲೇಖಕರು ಮಾಡಿರುವರು. ಅಮೆರಿಕನ್ನರ ಜೀವನದಲ್ಲಿನ ಒಳಿತು-ಕೆಡುಕುಗಳನ್ನು ಸಮಚಿತ್ತದಿಂದ ವಿಮರ್ಶೆ ಮಾಡಿರುವರು. ಅಲ್ಲಿ ನೆಲೆಸಿರುವ ನಮ್ಮ ಯುವ ಪೀಳಿಗೆಗೆ ಹೀಗೆ ಸಂದೇಶ ನೀಡಿರುವರು: "ಯೌವನಾವಸ್ಥೆಯಲ್ಲಿಯೇ ಅಲ್ಲಿಗೆ ಹೋಗಿ, ತಮ್ಮ ಜ್ಞಾನಕ್ಷೇತ್ರದ ಪರಿಪೂರ್ಣತೆ ಮತ್ತು ಪರಿಪಕ್ವತೆಯನ್ನು ಪಡೆದು, ಹೆಸರುಗಳಿಸಿ ಹಣವನ್ನು ಹೇರಳವಾಗಿ

ಸಂಪಾದಿಸಿ, ನಮ್ಮ ಜನ ತಾಯ್ನಾಡಿಗೆ ಮರಳಿ, ತಮ್ಮ ಜ್ಞಾನಾರ್ಜನೆಯ ಲಾಭವನ್ನು ನಮ್ಮ ಪ್ರಜೆಗಳಿಗೆ ಹಂಚಬೇಕು. ಈಗ ಆಗುತ್ತಿರುವಂತೆ, ಅಲ್ಲಿಯ ಹಣಗಳಿಕೆಗೆ ಮರುಹೋಗಿ ಅಲ್ಲಿಯ ಜೀವನಕ್ರಮ, ಸುಖಾಭಿಲಾಷೆ ಮತ್ತು ಭೋಗಲಾಲಸೆಗೆ ತುತ್ತಾಗಬಾರದು. ಏಕೆಂದರೆ, ತಾಯ್ನಾಡಿನ ಕರೆ, ಬಂಧು ಬಳಗದವರ ಬೇಡಿಕೆ, ಹುಟ್ಟಿಬೆಳೆದ ಸಮಾಜಕ್ಕೆ ಸಲ್ಲಿಸಬೇಕಾದ ಕರ್ತವ್ಯ ಕಾಣಿಕೆ ಇವುಗಳನ್ನು ತಳ್ಳಿಹಾಕಿ, ಒಂದು ವಿಧವಾದ ಧರ್ಮದ್ರೋಹವನ್ನೆಸಗಬಾರದು. ಎಲ್ಲಕ್ಕಿಂತ ಮಿಗಿಲಾಗಿ, ಸಾವಿರಾರು ವರ್ಷಗಳ ಸುದೀರ್ಘ ಮತ್ತು ಸದೃಢ ಸಂಸ್ಕೃತಿಯ ಪರಂಪರೆಯಲ್ಲಿ ಬೆಳೆದು, ಪಾಶ್ಚಾತ್ಯ ವಿದ್ವಾಂಸರ ಮನಸ್ಸನ್ನು ಸೂರೆಗೊಂಡಿರುವ, ಪಾಶ್ಚಾತ್ಯ ವಿಜ್ಞಾನಿಗಳ ಪಾರಮಾರ್ಥಿಕವಲ್ಲದ ದೃಷ್ಟಿಯನ್ನು ಅಧ್ಯಾತ್ಮದೆಡೆಗೆ ಬದಲಾಯಿಸಿರುವ ನಮ್ಮ ವಿಶಿಷ್ಟ ದರ್ಶನಗಳು ಮತ್ತು ಸನಾತನ ಧರ್ಮವನ್ನು ವಿದೇಶಕ್ಕೆ ತೆರಳಿದ, ಅಲ್ಲಿ ಕಾರ್ಯನಿರತರಾಗಿರುವ, ಅಲ್ಲಿ ನೆಲೆಸಿರುವ ಭಾರತೀಯರು ಮರೆಯಕೂಡದು" (ಪು. ೧೮೨).

ಶ್ರೀ ಕೆ.ಎನ್. ಕೃಷ್ಣಮೂರ್ತಿರಾಯರು ನಿವೃತ್ತ ಮುಖ್ಯೋಪಾಧ್ಯಾಯರು. ಅವರು ಅಮೆರಿಕಾ ಪ್ರವಾಸ ಕೈಗೊಂಡದ್ದು ಮಗಳು-ಅಳಿಯ-ಮೊಮ್ಮಕ್ಕಳನ್ನು ನೋಡುವ ಸಲುವಾಗಿ. ಅವರ **ಅಮೆರಿಕಾ ಪ್ರವಾಸದ ಅನುಭವಗಳು** ಎಂಬ ಪ್ರವಾಸ ಕಥನದ ಪ್ರಾರಂಭದಲ್ಲಿ ಮದ್ರಾಸಿನ ಕಾನ್ಸುಲೇಟ್ ಕಚೇರಿಯಲ್ಲಾದ ಕಹಿ ಅನುಭವ ಬಂದಿದೆ. ವೀಸಾ ಕೊಡುವುದಕ್ಕೆ ಸಂದರ್ಶನದ ನಾಟಕ ನಡೆಸುವುದು, ಅದರಲ್ಲೂ ವಯಸ್ಸಾದವರಿಗೆ, ಕ್ರೌರ್ಯ ಎನ್ನಿಸುತ್ತದೆ ಲೇಖಕರಿಗೆ. ಒಮ್ಮೆ ಅವರ ಪತ್ನಿ ವೀಸಾಕ್ಕೆ ಅರ್ಜಿ ಹಾಕಿದರು. ಸಂದರ್ಶನಕ್ಕೆ ಬಂದಿತು. ಅಧಿಕಾರಿ "ಏತಕ್ಕೆ ಹೋಗಬೇಕು?" ಎಂದು ಪ್ರಶ್ನಿಸಿದ. "ಮಗಳ ಹೆರಿಗೆಗಾಗಿ" ಎಂದು ನಿಜವನ್ನೇ ನುಡಿದರು. "ಅಲ್ಲಿ ಆಸ್ಪತ್ರೆಯಿದೆ, ವೈದ್ಯರಿದ್ದಾರೆ, ನೀನು ಹೋಗುವ ಅವಶ್ಯಕತೆಯಿಲ್ಲ" ಎಂದು ಅಧಿಕಾರಿ ನಿರಾಕರಿಸಿಬಿಟ್ಟ. "ಭಾವನೆಗಳೇ ಇಲ್ಲದ ಈ ಮರದ ಕೊರಡನ್ನು ಯಾವ ತಾಯಿ ಹೆತ್ತಳೋ?" ಎಂದುಕೊಂಡರು ಲೇಖಕರ ಪತ್ನಿ. ಇದಾದ ಎರಡು ತಿಂಗಳ ಮೇಲೆ ಅವರು ಪುನಃ ಅರ್ಜಿ ಹಾಕಿಕೊಂಡರು. ಈ ಸಾರಿ ಸತ್ಯ ಹೇಳಲಿಲ್ಲ, ಕೂತ ಕಡೆಗೆ ಮನೆಗೇ ಬಂತು ವೀಸಾ. ಸುಳ್ಳಿಗೆ ಎಷ್ಟು ಬೆಲೆ! ಎಂದು ಲೇಖಕರು ವ್ಯಂಗ್ಯವಾಡುವರು (ಪು.೮).

ಲೇಖಕರ ಪ್ರವಾಸದ ಅನುಭವಗಳು ಅಮೆರಿಕೆಯನ್ನು ಕುರಿತಂತೆ ಮೆಚ್ಚುಗೆಯ ರೀತಿಯಲ್ಲಿದೆ. ಬೆಂಗಳೂರಿನಿಂದ ಹೋದ ಲೇಖಕರಿಗೆ ತುಂಬಾ ಅಚ್ಚರಿ ತಂದ

ಸಂಗತಿಯೆಂದರೆ, ಮಗಳ ಮನೆಯಲ್ಲಿ ನೀರು ಮತ್ತು ವಿದ್ಯುತ್ತು ನಿರಂತವಾಗಿ ಸರಬರಾಜು ಆಗುತ್ತಿದ್ದುದು. ಅಮೆರಿಕನ್ನರ ಪ್ರಾಮಾಣಿಕತೆ, ಪೌರಜ್ಞಾನ, ಸ್ವಾತಂತ್ರ್ಯಪ್ರಿಯತೆ, ಶುಚಿತ್ವತೆ, ನ್ಯಾಯಪಕ್ಷಪಾತತನ, ಲೇಖಕರಿಗೆ ಪ್ರಿಯವಾಗಿದೆ ಅಮೆರಿಕದಲ್ಲಿ ಕಳ್ಳತನವಿಲ್ಲದಿರುವುದು, ಕಸವನ್ನು ರಸವನ್ನಾಗಿ ಮಾಡುವುದು (ಕಸವನ್ನು ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸು-ತ್ತಿರುವುದು), ಗಾರ್ಬಲಜಿ ಕಾಲೇಜಿನ ಪಠ್ಯಕ್ರಮದಲ್ಲಿ ಸೇರ್ಪಡೆಯಾಗಿರುವುದು, ಸರ್ವಸಂಗ್ರಹ ಮಳಿಗೆಗಳಲ್ಲಿನ ಸುಲಭ ವ್ಯಾಪಾರಕ್ರಮ, ಸಲಿಂಗ ಕಾಮಿಗಳ ನ್ಯೂಯಾರ್ಕಿನ ಶಾಲೆ, ವಿವಾಹ ವಿಚ್ಛೇದನ, ಟೀನ್ ಏಜ್ ಬಾಲಕಿಯರು ಮದುವೆಯಿಲ್ಲದೆ ಗರ್ಭವತಿಯರಾಗುವುದು, ಟಿಪ್ಸ್ (ಭಕ್ಷೀಸು) ಕೊಡಲೇಬೇಕೆನ್ನುವ ದಾಕ್ಷಿಣ್ಯಪರ ನಡತೆ, ಸ್ಥಿತಿಗತಿ, ಬಾಡಿಗೆ ಗರ್ಭ, ಕರುಣೆಯ ಕೊಲೆ-ಹೀಗೆ ಪ್ರವಾಸಕಥನದಲ್ಲಿ ವೈವಿಧ್ಯಪೂರ್ಣ ವಿಷಯಗಳು ವಿವರಣೆಗೊಂಡಿವೆ.

ಈ ಪ್ರವಾಸಕಥನದಲ್ಲಿ ಲೇಖಕರು ಎಲ್ಲವನ್ನೂ ಅಂಕಿ ಅಂಶಗಳ ಮೂಲಕ ವಿವರಿಸಬೇಕೆನ್ನುವ ಉತ್ಸಾಹ ತಾಳಿರುವಂತಿದೆ. ಉದಾಹರಣೆಗೆ ಲಾಸ್‌ಏಂಜಲಿಸ್‌ನಲ್ಲಿ ಭಾನುವಾರ ಪ್ರಕಟವಾಗುವ ಪತ್ರಿಕೆಯಲ್ಲಿ ೬೮೪ ಪುಟಗಳಿರುವುದನ್ನು ಹೇಳಿ, ಯಾವ ಯಾವ ವಿಭಾಗಗಳಿಗೆ ಎಷ್ಟೆಷ್ಟು ಪುಟಗಳು ಮೀಸಲಾಗಿವೆಯೆಂಬುದನ್ನು ತಿಳಿಸುವರು (ಪು. ೨೫); ನ್ಯೂಯಾರ್ಕ್ ಟೈಂಸ್ (೪೪೪ ಪುಟಗಳು) ಪತ್ರಿಕೆಯ ಪುಟಮಿತಿ-ಗಳನ್ನೊಳಗೊಂಡ ವಿಭಾಗದ ವಿವರಗಳನ್ನು ನೀಡುವರು (ಪು.೨೬); ಮೆಡಿಕಲ್ ಇನ್‌ಶೂರೆನ್ಸ್ ಮಾಹಿತಿ ನೀಡುವರು (ಪು.೨೭); ಐದು ರೀತಿಯ ಮಾದರಿ ಮನೆಗಳ ವಿವರಗಳನ್ನು ಕೊಟ್ಟಿರುವರು (ಪು. ೩೧-೩೩).

ಡಿಸ್ನೆಲ್ಯಾಂಡ್, ಲಾಸ್‌ವೇಗಾಸ್, ಗ್ರ್ಯಾಂಡ್ ಕ್ಯಾನ್ಯನ್, ಬ್ರೈಸ್ ಕ್ಯಾನ್ಯನ್, ನ್ಯಾಷನಲ್ ಪಾರ್ಕ್, ಸಾನ್ ಡಿಯಾಗೋನ ಸಾಗರ ಪ್ರಪಂಚ, ಹಂಟಿಂಗ್‌ಟನ್‌ನ ಬಟಾನಿಕಲ್ ಗಾರ್ಡನ್, ಸ್ಯಾನ್‌ಫ್ರಾನ್ಸಿಸ್ಕೊ, ಯೋಸಿಮಿಟಿ -ಈ ಪ್ರೇಕ್ಷಣೀಯ ಸ್ಥಳಗಳ ಭೇಟಿಯ ವಿವರಗಳು ಈ ಪ್ರವಾಸ ಕಥನದಲ್ಲಿ ಚೆನ್ನಾಗಿ ಮೂಡಿಬಂದಿವೆ.

ಪ್ರವಾಸ ಕಥನದಲ್ಲಿ ಕೌಟುಂಬಿಕ ವಿವರಗಳನ್ನು ಆದಷ್ಟು ಕಡಿಮೆಮಾಡಬೇಕು. ತಮ್ಮ ಹೆಣ್ಣು ಮಕ್ಕಳ ವಾದ ನಿಪುಣತೆ (ಪು.೧-೪), ಮೊಮ್ಮಗ ನಿಖಿಲ ಜಾಣತನ (ಪು. ೭೨), ಅಳಿಯ ಎಚ್.ಎನ್. ನರಸಿಂಹಮೂರ್ತಿಯ ವಿದ್ವತ್ತು-ಪ್ರತಿಭೆ, ವೈವಿಧ್ಯಮಯ ಆಸಕ್ತಿ, ಸ್ನೇಹಪರ ಮನೋಭಾವ (ಪು. ೧೫೦-೧೫೩), ಷಡ್ಡಕ ಕುಕ್ಕೆ ಸೀತಾರಾಮಾಶಾಸ್ತ್ರಿಗಳ ವಿರಕ್ತ ಜೀವನ, ವಿದ್ವತ್ತು, ನಟನಾ ಕೌಶಲ್ಯ, ಅಸಾಧಾರಣ ದೈವಭಕ್ತಿ (ಪು. ೧೮೪-೧೮೬), ಷಡ್ಡಕನ ಮಗ-ಸೊಸೆ (ಗೋಪಿ-ನಳಿನಿ)ಯರ ಪ್ರಶಂಸೆ

(ಪು. ೧೮೬) -ಹೀಗೆ ಈ ಪ್ರವಾಸಕಥನದಲ್ಲಿ ಅನವಶ್ಯಕವಾಗಿ ತಮಗೆ ಪ್ರಿಯರಾದವರ ಪ್ರಶಂಸೆ ಕಾಣಿಸಿಕೊಳ್ಳುತ್ತದೆ. ಆದರೂ ಈ ಪ್ರವಾಸ ಕಥನ ಉದ್ದಕ್ಕೂ ಆಸಕ್ತಿಯನ್ನು ಉಳಿಸಿಕೊಂಡು ಹೋಗುತ್ತದೆ; ಅಮೆರಿಕೆಯ ಬಗೆಗೆ ಸಾಕಷ್ಟು ಮಾಹಿತಿಗಳನ್ನು ನೀಡುತ್ತದೆ.

**ಜಯಶ್ರೀ ಕಂಡ ಆ ಅಮೆರಿಕವು** ಡಾ|| ಹೊ. ಶ್ರೀನಿವಾಸಯ್ಯ ಹಾಗೂ ಅವರ ಪತ್ನಿ ಶ್ರೀಮತಿ ಜಯಲಕ್ಷ್ಮಿ ಜೊತೆಗೂಡಿ ಕೈಗೊಂಡ ಅಮೆರಿಕಾ ಪ್ರವಾಸದ ಅನುಭವ ಕಥನ. ಇಲ್ಲಿ ಡಾ|| ಶ್ರೀನಿವಾಸಯ್ಯನವರು ತಮ್ಮ ಪ್ರವಾಸಾನುಭವವನ್ನು ನಿರೂಪಿಸಿರುವರು. ಅಮೆರಿಕದಲ್ಲಿ ನೆಲಸಿರುವ ತಮ್ಮ ಅನೇಕ ಮಂದಿ ಮಿತ್ರರ ಮನೆಯಲ್ಲಿ ಅತಿಥ್ಯ ಪಡೆದು ನೋಡಬೇಕಾದ ಸ್ಥಳಗಳನ್ನು ನೋಡಿರುವರು. ಹೀಗಾಗಿ ಇಲ್ಲಿ ಪ್ರವಾಸವೀಕ್ಷಣೆಯ ವಿವರಗಳಿಗಿಂತ ಅತಿಥ್ಯ ಪಡೆದ ಮಿತ್ರರ ಕೌಟುಂಬಿಕ ವಿವರಗಳೇ ಹೆಚ್ಚಿಗೆ ಬಂದಿದೆ. ತಮ್ಮ ಪ್ರತಿಭೆಗೆ ಇಲ್ಲಿ ಪುರಸ್ಕಾರ, ಪ್ರೋತ್ಸಾಹ ಸಿಗದೆ ಅಮೆರಿಕಾದಲ್ಲಿಯೇ ನೆಲಸಬೇಕಾಗಿ ಬಂದ ಕರ್ನಾಟಕದ ಹಲವು ಮಂದಿ ಪ್ರತಿಭಾವಂತರ ಪರಿಚಯ ಇಲ್ಲಿ ನಮಗಾಗುತ್ತದೆ. ಡೆಲ್‌ವೇರ್, ನ್ಯೂಯಾರ್ಕ್, ವಾಷಿಂಗ್‌ಟನ್, ಫ್ಲಿಂಟ್, ಪಿಟ್ಸ್‌ಬರ್ಗ್, ಚಿಕಾಗೊ, ಲಾಸ್‌ಏಂಜಲಿಸ್, ಹವಾಯ್ -ಈ ಭಾಗಗಳಲ್ಲಿ ಸಂಚರಿಸಿದಾಗಿನ ಅನುಭವಗಳು ಇಲ್ಲಿ ದಾಖಲಾಗಿದೆ. ತಾವು ನೋಡಿದ ಸ್ಥಳಗಳ ಪ್ರಾಚೀನ ಇತಿಹಾಸ, ವೈಶಿಷ್ಟ್ಯಗಳನ್ನು ಲೇಖಕರು ದೊರೆಯುವ ಲಿಖಿತ ಪ್ರವಾಸಿ ಸಾಮಗ್ರಿಗಳನ್ನು ಆಧರಿಸಿ ಹೇಳಿರುವರು. ಕರ್ನಾಟಕದ ತಮ್ಮ ಮಿತ್ರರ ಜೊತೆ ಕೆಲವು ದಿವಸ ಇದ್ದಾಗ ಅವರ ಸಮಸ್ಯೆಗಳನ್ನು ಅರಿಯುವ ಪ್ರಯತ್ನವನ್ನು ಲೇಖಕರು ಮಾಡಿರುವರು. ಉದಾಹರಣೆಗೆ ಅನಿವಾಸಿ ಭಾರತೀಯರ ಮಕ್ಕಳ ಸಮಸ್ಯೆ. ಓರ್ವ ಯುವತಿ ಪ್ರಶ್ನಿಸುವ ರೀತಿಗೆ ನಾವು ಬೆರಗಾಗುತ್ತೇವೆ. ಅಮೆರಿಕದಲ್ಲಿ ಹುಟ್ಟಿ ಅಲ್ಲಿಯ ಪ್ರಜೆಗಳಿಗಾಗಿ ಅಮೆರಿಕದ ಪ್ರಜೆಗಳಂತೆ ಏಕೆ ಬೆಳೆಯಬಾರದು? ಭಾರತದ ಯುವಕರಂತೆ ಬೆಳೆಯುವ ನಿರ್ಬಂಧ ನಮಗೇಕೆ? ದೇವಸ್ಥಾನಕ್ಕೆ ಏಕೆ ಹೋಗಬೇಕು? ಸಂಗೀತ ಕಲಿಯದಿದ್ದರೆ ನಷ್ಟವೇನು? ಹೆಚ್ಚಾಗಿ ಟಿ.ವಿ. ನೋಡಬಾರದು, ಶನಿವಾರ ಭಾನುವಾರ ಎಲ್ಲಿಯೂ ಹೋಗಬಾರದು ಎಂಬ ನಿರ್ಬಂಧ ಸರಿಯೆ? ಅಮೆರಿಕದ ಗಂಡು ಹುಡುಗರು ಕೆಟ್ಟವರು ಎಂಬ ತಪ್ಪುಗ್ರಹಿಕೆಯಿಂದ ಅವರ ಜೊತೆ ಸ್ನೇಹ ಬೇಡವೆಂಬ ನಿಮ್ಮ ನಿರ್ಬಂಧವೇಕೆ? ಚಿಕ್ಕ ವಯಸ್ಸಿನಲ್ಲಿ ನೀವು ಭಾರತದಲ್ಲಿ ಏನು ಮಾಡಿದಿರೊ ಅದೇ ರೀತಿ ನಿಮ್ಮ ಮಕ್ಕಳಾದ ನಾವು ಅಮೆರಿಕಾದಲ್ಲಿ ನಡೆಯಬೇಕೆಂದು ಏಕೆ ಹೇಳುವಿರಿ? ಇದು ಹೇಗೆ ಸಾಧ್ಯ? ನೀವು ಹೇಳುವ ಹಾಗೆ ಮಾಡಬೇಕಾದರೆ ನೀವೇಕೆ ಅಮೆರಿಕದೇಶಕ್ಕೆ ಬಂದಿರಿ? ಇಲ್ಲಿ ಏಕೆ ನೆಲಸಿದಿರಿ? ಈ ಪ್ರಶ್ನೆಗಳಿಗೆ ಉತ್ತರಿಸಲು ಅನೇಕರಿಗೆ ಕಷ್ಟವಾಯಿತಂತೆ. (ಪು.೬೬).

ವಿದ್ಯೆಗೆ ಕಲಿಯಲು ವಯಸ್ಸಿನ ಮಿತಿಯಿಲ್ಲವೆಂಬುದಕ್ಕೆ ನಿದರ್ಶನವಾದ ೮೦ ವಯಸ್ಸಿನ ಮುದುಕಿ (ಪು.೭೮); ಭಾರತದಲ್ಲಿಯಂತೆ ಅಮೆರಿಕಾದಲ್ಲೂ ಅನಕ್ಷರಸ್ಥರಿರುವುದು; ಸು. ೬ ಲಕ್ಷ ಯುವಕರು ಸಾಕ್ಷರತಾ ಕಾರ್ಯದಲ್ಲಿ ತೊಡಗಿರುವುದು; ಲಾಸ್‌ಏಂಜಲಿಸ್ ಒಂದರಲ್ಲೇ ಹತ್ತು ಸಾವಿರಕ್ಕಿಂತ ಹೆಚ್ಚು ಜನರು ಈ ಕಾರ್ಯದಲ್ಲಿ ತೊಡಗಲು ನೋಂದಾಯಿಸಿಕೊಂಡಿರುವುದು (ಪು. ೧೦೩); ಅತ್ಯಂತ ಶ್ರೀಮಂತ ರಾಷ್ಟ್ರಗಳಲ್ಲಿ ಒಂದಾದ ಅಮೆರಿಕಾದಲ್ಲೂ ಭಿಕ್ಷೆ ಬೇಡುವವರಿರುವುದು (ಪು. ೧೩೫) ಪ್ರವಾಸಕಾಲದಲ್ಲಿ ಲೇಖಕರು ಕಂಡ ಕುತೂಹಲಕಾರಿ ಸಂಗತಿಗಳು.

ಲೇಖಕರು ಅಮೆರಿಕಾದಲ್ಲಿ ತಾವು ನೋಡಿದ್ದನ್ನು ದಾಖಲಿಸುವ ಸಂದರ್ಭದಲ್ಲಿ ವಿವರಗಳನ್ನು ನೀಡುವಾಗ ಔಚಿತ್ಯಪ್ರಜ್ಞೆಯನ್ನು ಪ್ರಕಟಿಸಿರುವರು. ಉದಾಹರಣೆಗೆ ನಯಾಗಾರಾ ಜಲಪಾತ, ಡಿಸ್ನಿಲ್ಯಾಂಡ್, ಯೂನಿವರ್ಸಲ್ ಸ್ಟುಡಿಯೋ ಇವುಗಳಿಗೆ ಹೆಚ್ಚಿನ ವಿವರಣೆ ಅಗತ್ಯವೆನ್ನಿಸಿ ವಿಷಯ ಸಂಗ್ರಹಣೆ ಮಾಡಿ ನೀಡಿರುವುದು.

ಲೇಖಕರು ಇಲ್ಲಿ ಓರ್ವ ಪ್ರವಾಸಿಯಾಗಿ (ಟೂರಿಸ್ಟ್) ತಮ್ಮ ಅನುಭವಗಳನ್ನು ವಿವರಿಸುತ್ತಾ ಹೋಗಿದ್ದು, ಆ ಮಿತಿಯಲ್ಲಿಯೇ ಕೃತಿಯ ಸಾರ್ಥಕ್ಯವನ್ನು ಕಂಡುಕೊಂಡಿರುವರು. ಭಾರತೀಯರ ಅದರಲ್ಲೂ ಕರ್ನಾಟಕದ ಮಿತ್ರರ ಮನೆಗಳಲ್ಲಿಯೇ ಹೆಚ್ಚಿನ ವಾಸ್ತವ್ಯ ಮಾಡಿರುವುದರಿಂದ ಅಮೆರಿಕನ್ನರ ಸಾಮಾಜಿಕ ಬದುಕಿನ ಅಧ್ಯಯನ ಸಾಧ್ಯವಾಗಿಲ್ಲ. ಬಹುಶಃ ಪ್ರವಾಸದ ಪರಿಮಿತಿಯ ಕಾಲಾವಧಿಯೂ ಇದಕ್ಕೆ ಕಾರಣವಾಗಿರಬಹುದು.

ಲೇಖಕರಾದ ಶ್ರೀನಿವಾಸಯ್ಯನವರಿಗೆ ಅದಮ್ಯ ಜೀವನೋತ್ಸಾಹವಿದೆ. ತಮ್ಮ ವಯಸ್ಸಲ್ಲದ ವಯಸ್ಸಿನಲ್ಲಿ ಪತ್ನಿಯೊಂದಿಗೆ ವಿದೇಶ ಸಂಚಾರ ಕೈಗೊಂಡು ತಮ್ಮ ಅನುಭವಗಳನ್ನು ಸಾಹಿತ್ಯಕವಾಗಿ ನಿರೂಪಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಅವರ ಪ್ರವಾಸ ಕಥನಗಳಿಗೆ 'ಟೂರಿಸ್ಟ್' ಮನೋಭಾವ ಬರದೆ ಹೆಚ್ಚಿನ ಆಯಾಮಗಳು ದೊರಕಿದ್ದರೆ ಅವರ ಪ್ರವಾಸ ಸಾಹಿತ್ಯಕ್ಕೆ ಇನ್ನಷ್ಟು ಬೆಲೆ ಬರುತ್ತಿತ್ತು. ಬಹುಶಃ ತಮ್ಮ ಮಿತಿಯನ್ನು ಅವರು ಕಂಡುಕೊಂಡಿರಬಹುದು.

ಗುರುಮೂರ್ತಿ ಪೆಂಡಕೂರು ಅವರ 'ಅವಕಾಶಗಳ ಅಮರಾವತಿ' ಆರು ತಿಂಗಳು ಅಮೇರಿಕೆಯಲ್ಲಿ ತಂಗಣೆ ಮಾಡಿದ್ದ ಸಂದರ್ಭದ ಅನುಭವ ಕಥನ. ಪ್ರವಾಸ ಕಥನಗಳಲ್ಲಿ ಅಮೇರಿಕಾದ್ದು ಸಿಂಹಪಾಲು. ನಾನಾ ಕಾರಣಗಳಿಗಾಗಿ ಅಲ್ಲಿಗೆ ಭೇಟಿ ಕೊಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜಾಗತೀಕರಣ, ಉದಾರೀಕರಣಗಳ ನೆಪದಲ್ಲಿ ಈಗ ಜಗತ್ತು ಹತ್ತಿರ ಹತ್ತಿರ ಬರುತ್ತಿವೆ; ಸಾಮಾಜಿಕ-ಸಾಂಸ್ಕೃತಿಕ ಬದುಕಿನಲ್ಲಿ ಕ್ಷಿಪ್ರ

ಪ್ರಗತಿ ಕಾಣಿಸಿಕೊಳ್ಳುತ್ತಿದೆ; ಕೊಳ್ಳುಬಾಕ ಸಂಸ್ಕೃತಿಯ ಫಲವಾಗಿ ವಿದೇಶದಲ್ಲಿನ ವಸ್ತುಗಳು ಈಗ ಮುಕ್ತ ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯುತ್ತಿವೆ; ನಗರ, ಪಟ್ಟಣಗಳಲ್ಲಿ ನಾಗರಿಕ ಸೌಲಭ್ಯಗಳು ಭೋಗಜೀವನಕ್ಕೆ ಬಹುಬೇಗ ತೆರೆದುಕೊಳ್ಳುತ್ತಿವೆ. ಸಾಫ್ಟ್‌ವೇರ್ ಕಂಪನಿಗಳು ತಳವೂರಿ ಸ್ಪರ್ಧೆಯಲ್ಲಿ ಒಂದು ಮತ್ತೊಂದನ್ನು ಮೀರುವ ಹಂತದಲ್ಲಿ ಸಾಮಾಜಿಕ ಬದುಕಿನಲ್ಲಿ ಆರ್ಥಿಕ ಸಮೃದ್ಧಿಯನ್ನು ತಂದುಕೊಡುವುದರ ಜೊತೆಗೆ ಕೌಟುಂಬಿಕ ಬದುಕಿನಲ್ಲಿ ಕೆಲವು ಸಮಸ್ಯೆಗಳನ್ನೂ ತಲ್ಲಣಗಳನ್ನೂ ಹುಟ್ಟುಹಾಕುತ್ತಿವೆ, ನಿದ್ರೆಗೆಡಿಸುತ್ತಿವೆ. ಅಮೇರಿಕಾ ಭೋಗಸಂಸ್ಕೃತಿಯಲ್ಲಿ ಓಲಾಡುತ್ತಿರುವುದನ್ನು ಒಂದು ರೂಪಕವಾಗಿ ಬಳಸಿಕೊಳ್ಳುವ ಗುರುಮೂರ್ತಿಯವರು ಅದಕ್ಕೆ ಪರ್ಯಾಯವಾಗಿ ಭಾರತೀಯ ಸಂಸ್ಕೃತಿಯಲ್ಲಿನ ಕರ್ಮಭೂಮಿಯನ್ನು ಕೊಡುವರು. ಈ ರೂಪಕದ ಸ್ವಾರಸ್ಯವನ್ನು ಎಚ್.ಎಸ್. ವೆಂಕಟೇಶಮೂರ್ತಿ ತಮ್ಮ 'ಮುನ್ನುಡಿ'ಯಲ್ಲಿ ಚೆನ್ನಾಗಿ ವಿವರಿಸಿರುವರು. ಗುರುಮೂರ್ತಿಯವರು ಹಲವಾರು ಬಾರಿ ದೇಶ ಸಂಚಾರ ಮಾಡಿರುವುದರಿಂದ ಆಶ್ಚರ್ಯದ ಕಣ್ಣುಗಳಿಂದ ತಾವು ನೋಡಿದ ದೇಶದ ಇಂದ್ರನಗರಿಯ ವೈಭವವನ್ನು ವರ್ಣಿಸುವುದಿಲ್ಲ. ಮುಕ್ತಮನಸ್ಸಿನ ಅವರು ಅಮೆರಿಕಾವನ್ನು ನೋಡಿದ್ದು ನಿಬ್ಬೆರಗಿನಿಂದಲ್ಲ, ಸಮದೃಷ್ಟಿಯ ಹಿನ್ನೆಲೆಯಲ್ಲಿ. "ಅಲ್ಲಿಯದೆಲ್ಲಾ ಶ್ರೇಷ್ಠವಲ್ಲ, ಪರಮ ಪವಿತ್ರವಲ್ಲ ಮತ್ತು ಅನುಕರಣೀಯವೂ ಅಲ್ಲ. ಈ ಸಮದೃಷ್ಟಿಯ ಹಿನ್ನೆಲೆಯಲ್ಲಿ ನಾನು ನನ್ನ ಪ್ರವಾಸದ ಅನುಭವವನ್ನು ಸವಿದಿದ್ದೇನೆ... ಯಾವುದೇ ಪೂರ್ವಾಗ್ರಹವಿಲ್ಲದೆ, ಮುಕ್ತಮನಸ್ಸಿನಿಂದ ಆ ನಾಡಿನಲ್ಲಿ ತಿರುಗಾಡಿ ಸಂತೋಷ ಪಟ್ಟಿದ್ದೇನೆ... ಅತ್ಯಂತ ವೇಗದಿಂದ ಅಮೆರಿಕನ್ ಅಥವಾ ಪಾಶ್ಚಿಮಾತ್ಯ ಅರ್ಥವ್ಯವಸ್ಥೆ, ಜೀವನಶೈಲಿಗೆ ಧಾವಿಸುತ್ತಿರುವ ನಮ್ಮ ದೇಶಿಗರು ಅಮೆರಿಕೆಯನ್ನು ನೋಡುವ ದೃಷ್ಟಿ ಬದಲಾಗಬೇಕು ಎನಿಸುತ್ತದೆ." (ಲೇಖಕರ 'ನಾಲ್ಕು ಮಾತು')

ಮಗ ರಮೇಶ ಸುಪ್ರಸಿದ್ಧ 'Intel' ಕಂಪನಿಯಲ್ಲಿ ಇಂಜಿನಿಯರ್. ಸೊಸೆ ರೆಬೆಕಾ ವಿದೇಶೀಯಳು. ಪ್ರೀತಿಸಿ ಮದುವೆಯಾದ ಅವರನ್ನು ಮುಕ್ತಮನಸ್ಸಿನಿಂದ ಗುರುಮೂರ್ತಿ ದಂಪತಿಗಳು ಸ್ವೀಕರಿಸಿದರು. ಈ ಹೃದಯವೈಶಾಲ್ಯಕ್ಕೆ ಜಾತಿ ದೇಶ ಭಾಷೆ ಸಂಸ್ಕೃತಿಗಳು ಅಡ್ಡಿಬರಲಿಲ್ಲ. ಇರುವಷ್ಟು ದಿವಸಗಳನ್ನು 'ಮಧುರ' ಸ್ಮೃತಿಯಾಗಿಸಿಕೊಳ್ಳುವ ಹವಣಿಕೆಯಲ್ಲಿ ಪೂರ್ವ-ಪಶ್ಚಿಮಗಳು ಒಂದಾದವು. ಗುರುಮೂರ್ತಿ ಹೇಳುವರು ನಮ್ಮ ಆರು ತಿಂಗಳ ಈ ಪ್ರವಾಸ ಅನುಭವ, ದರ್ಶನ ಮತ್ತು ಪ್ರೀತಿಯ ಸಿಂಚನಗಳಿಂದ ತುಂಬಿ ಈ ಆರು ತಿಂಗಳು ನಮ್ಮ ಜೀವನದ 'ಮಧುರ ಸಮಯ' ಎನಿಸುವ ಹಾಗೆ ಆಯಿತು. ಮಗ ರಮೇಶ್, ಸೊಸೆ ರೆಬೆಕಾ ತುಂಬಾ ಪ್ರೀತಿಯಿಂದ, ಎಚ್ಚರಿಕೆಯಿಂದ ನಮ್ಮ ಅನುಕ್ಷಣ ಮಧುರವಾಗಿರಲು ಹೆಣಗಿದರು. ನೀರಿನಂತೆ ಹಣ ಮತ್ತು ಅವರ ಸಮಯವನ್ನು ನಮಗಾಗಿ ನೀಡಿದರು. ನಾವು ಅವರಿಗೆ ಭಾರವಾಗದಂತೆ ನಮ್ಮ

ಪ್ರವಾಸವನ್ನು ಹೂವಿನಂತೆ ಹಗುರವಾಗುವಂತೆ ವರ್ತಿಸಿ ನಡೆದೆವು. "ಮಕ್ಕಳು ನಮ್ಮನ್ನು, ನಾವು ಮಕ್ಕಳನ್ನು ಅರ್ಥಮಾಡಿಕೊಳ್ಳುವುದರಲ್ಲಿದ ಪ್ರೀತಿಯ ಬೆಲೆ. ದೂರದ ಅಮೇರಿಕಾದಲ್ಲಿ ಹುಟ್ಟುಹಬ್ಬ, ಹಬ್ಬಗಳ ಆಚರಣೆಯ ನೆಪದಲ್ಲಿ ಮನಸ್ಸುಗಳು ಇನ್ನೂ ಹತ್ತಿರ ಬರುತ್ತವೆ; ಸಂತೋಷವನ್ನು ಕೊಟ್ಟು ಪಡೆಯುತ್ತವೆ. ಬದುಕಿನ ಅರ್ಥ ಇದಕ್ಕಿಂತ ಬೇರೆ ಏನಿದೆ?"

ಗುರುಮೂರ್ತಿಯವರು ಭಾರತೀಯ ಧಾರ್ಮಿಕ ಶ್ರದ್ಧೆಯ ಮನಸ್ಸು. ಪೂರ್ವ ದೇಶದ ಪರಂಪರೆಯ ಬಗೆಗೆ ಹೆಮ್ಮೆ. ಆದರೂ ಪಾಶ್ಚಾತ್ಯ ನೆಲದಲ್ಲಿ ಓಡಾಡುವಾಗ ತನ್ನ ಸಮತೋಲನ ಕಳೆದುಕೊಳ್ಳುವುದಿಲ್ಲ. ಆ ದೇಶ ಕೊಡುವ ಎಲ್ಲ ಬಗೆಯ ಸುಖ ಸಂತೋಷಗಳನ್ನು ಅವರು ಮುಕ್ತಮನಸ್ಸಿನಿಂದ ಸವಿಯುವರು. ಆ ದೇಶದ ಬುದ್ಧಿವಂತಿಕೆಯ ಮನಸ್ಸು, ನೋಡುವ ಪ್ರೇಕ್ಷಣೀಯ ಸ್ಥಳಗಳನ್ನೂ ತನ್ನ ಆರ್ಥಿಕ ಪ್ರಗತಿಗೆ ಹೇಗೆ ಪೂರಕವಾಗಿ ಬಳಸಿಕೊಳ್ಳುತ್ತದೆಂಬುದನ್ನು ಗುರುಮೂರ್ತಿ ಸೂಕ್ಷ್ಮವಾಗಿ ಗಮನಿಸುವರು (ಪು. ೯೪). ಗುರುಮೂರ್ತಿಯವರದು ಕುತೂಹಲದ ಮನಸ್ಸು. ಅವರು ಅಮೆರಿಕದ ಬದುಕನ್ನು ಗ್ರಹಿಸಲು ಅಲ್ಲಿನ ಭಾರತೀಯ / ಅಮೆರಿಕನ್ ಕುಟುಂಬಗಳ ಜೊತೆ ಸಖ್ಯ ಬೆಳಸುವರು. ಊಟೋಪಚಾರಗಳಲ್ಲಿ ಭಾಗವಹಿಸುವರು, ವಿಚಾರ ವಿನಿಮಯ ನಡೆಸುವರು, ರೈತರ ಫಾರಂಗಳಿಗೆ ಭೇಟಿ ಕೊಡುವರು, ಸೊಸೆ ರೆಬೆಕಾಳ ತಂದೆಯ ಜೊತೆಗೆ ಮಧುರವಾದ ಸ್ನೇಹ ಬೆಳಸುವರು, ಅವರ ಜೊತೆ Max ಮೆಟ್ರೋ ರೈಲಿನಲ್ಲಿ ಸಂಚಾರ ಹೊರಡುವರು, ಗ್ರೆಷಾಂನ ಬೀದಿ ಬೀದಿ ಅಲೆಯುವರು, ಪೋರ್ಟ್‌ಲ್ಯಾಂಡ್ ಕೇಂದ್ರ ಗ್ರಂಥಾಲಯ ಸೇರಿ ಸುತ್ತಮುತ್ತ ಗೊತ್ತುಗುರಿಯಿಲ್ಲದೆ ತಿರುಗಾಡುವರು (ಪು. ೮೦). ಭಾರತೀಯವಾದ, ಹದಗೊಂಡ, ಎಲ್ಲದರಲ್ಲೂ ಪ್ರೀತಿಯಿರುವ ಸ್ವಚ್ಛ ಮನಸ್ಸು ಅಮೆರಿಕಾದ ಪ್ರೇಕ್ಷಣೀಯ ತಾಣಗಳನ್ನೆಲ್ಲಾ ನೋಡಿ ಆನಂದಿಸುತ್ತದೆ. ಅವು ಕಣ್ಣು ಮತ್ತು ಮನಸ್ಸಿಗೆ ಕೊಡುವ ಆನಂದದ ಸವಿಯನ್ನು ಅನುಭವಿಸುತ್ತದೆ. ಅಮೆರಿಕಾದ ಯಾಂತ್ರಿಕ ಬದುಕಿನಲ್ಲೂ ತಮ್ಮ ಇರುವಿಕೆಯ ಕ್ಷಣಗಳು ವ್ಯರ್ಥವಾಗದಂತೆ ಸುತ್ತಾಡುವ, ಗ್ರಂಥಾಲಯಗಳಿಗೆ ಭೇಟಿ ಕೊಡುವ, ಬಾಯಿಗೆ ಇಷ್ಟವಾದದ್ದನ್ನು ಸವಿಯುವ, ಪರಿಚಿತರು ಹೊಸದಾಗಿ ಪರಿಚಯವಾದವರ ಜೊತೆ ಮುಕ್ತವಾಗಿ ಹರಟುವ, ಇಷ್ಟವಾದ ಸಿನಿಮಾಗಳನ್ನು ನೋಡುವ ಮೂಲಕ ಆ ಮಧುರ ಕ್ಷಣಗಳನ್ನು ಸಾರ್ಥಕಪಡಿಸಿಕೊಳ್ಳುವ ಗುರುಮೂರ್ತಿಯವರ ಉತ್ಸಾಹ ಕಳೆದುಕೊಳ್ಳದ ಚೈತನ್ಯ ನನಗೆ ಮೆಚ್ಚುಗೆಯಾಯಿತು. ಕೇವಲ ಪ್ರವಾಸಿ ಮಾಹಿತಿಗಳಷ್ಟನ್ನೇ ನೀಡದೆ, ಪಾಶ್ಚಾತ್ಯ ಸಮಾಜದ ಬದುಕಿನ ಏರಿಳಿವುಗಳನ್ನು, ತಲ್ಲಣಗಳನ್ನು; ಹಾಗೆಯೇ ಸಂತೃಪ್ತಿಯ ಸಮಾಧಾನದ ಬದುಕು ನಡೆಸುತ್ತಿರುವ ಜೀವಗಳನ್ನು ಹಾಗೂ ಅವರ ಶ್ರುತಿಬದ್ಧ ಜೀವನ ವಿಧಾನವನ್ನು ತೆರೆದ ಕಣ್ಣುಗಳಿಂದ ಗ್ರಹಿಸುತ್ತಾ ಸಾರುವ ಗುರುಮೂರ್ತಿಯವರ ಈ

ಪ್ರವಾಸ ಕಥನ ಬೇರೆಯ ಪ್ರವಾಸ ಕಥನಗಳಿಂದ ಭಿನ್ನವಾಗುವುದು ಈ ನೆಲೆಯಲ್ಲಿಯೇ. ಇದಕ್ಕೆ ಚಿಕ್ಕ ಉದಾಹರಣೆಯಾಗಿ ಸೊಸೆ ರೆಬೆಕಾಳ ಜನ್ಮದಿನದ ಸಂತೋಷ-ಸಂಭ್ರಮಗಳ ವಿವರಗಳನ್ನೇ ನೋಡಬಹುದು (ಪು. ೮೦). ಲೇಖಕರ ಉತ್ಸಾಹದ ಬರವಣಿಗೆಗೆ ಅವರು ಹೇರ್‌ಕಟ್ ಮಾಡಿಸಿಕೊಂಡ ಸಂದರ್ಭದ ವಿವರಗಳಲ್ಲಿ ನೋಡಬಹುದು (ಪು. ೭೦).

ಗುರುಮೂರ್ತಿಯವರು ಇಂದಿನ ಯುವ ಪೀಳಿಗೆಗೆ ಅಮೇರಿಕಾ ಏಕೆ ಅಮರಾವತಿಯಾಗುತ್ತಿದೆ ಎಂಬುದರ ಜಿಜ್ಞಾಸೆ ನಡೆಸುವರು (ಪು. ೩೪). ತಮ್ಮ ತಿರುಗಾಟದಲ್ಲಿ ಭಾರತೀಯರನ್ನು ಕಂಡಾಗಲೆಲ್ಲಾ ಆಗುವ ಖುಷಿ, ಉಕ್ಕುವ ಸಂಭ್ರಮದಲ್ಲಿ ಆ ಸಂತೋಷ 'ಏನು ಕೊಟ್ಟರೂ ಸಿಗುವುದಿಲ್ಲ' ಎಂದು ಲೇಖಕರು ಪುಳಕಿತರಾಗಿ ಭಾವಸ್ಪಂದನದಿಂದ ಒಂದು ಕ್ಷಣ ಪರವಶರಾಗಿ ನುಡಿಯುವರು (ಪು. ೫೯). ಕಾರು, ಲಾರಿ, ಸೈಟು, ಮನೆ ಮಾರಾಟಕ್ಕಿರುವಂತೆ ಒಂದು ಊರು ಮಾರಾಟಕ್ಕಿದ್ದುದನ್ನು ಲೇಖಕರು ಅಮೆರಿಕಾದ ಬದುಕಿನ ವೈಪರೀತ್ಯಗಳಿಗೆ ಉದಾಹರಣೆಯಾಗಿ ಕೊಡುವರು (ಪು. ೬೯). ಅಮೆರಿಕದ ಆಕಳಿನ ೧೪ ಆಶ್ಚರ್ಯಕರ ಸಂಗತಿಗಳನ್ನು ಸ್ವಾರಸ್ಯಕರವಾಗಿ ಪ್ರಸ್ತಾಪಿಸುವರು (ಪು.೮೮).

ಗುರುಮೂರ್ತಿಯವರು ತಮ್ಮ ತಂಗಣೆಯ ಆರು ತಿಂಗಳ ಅವಧಿಯಲ್ಲಿ ಇಡೀ ಅಮೇರಿಕಾವನ್ನು ನೋಡಲು ಹೋಗಿಲ್ಲ, ವಿವರಿಸಲು ಪ್ರಯತ್ನಿಸಿಲ್ಲ. ಅವರದು ಅಮೆರಿಕಾದ ಒಂದು ಭಾಗದ ಸುತ್ತಾಟದ ಅನುಭವಗಳ ದಾಖಲೆ. ಅದಷ್ಟೇ ಆಗಿದ್ದರೆ ಈ ಪ್ರವಾಸ ಕಥನ ಅಮುಖ್ಯವಾಗಿಬಿಡುತ್ತಿತ್ತು. ಅದರಾಚೆಗೆ ಮನುಷ್ಯ ಸಂಬಂಧಗಳು, ಎಷ್ಟು ಪರಿಯಲ್ಲಿ ಸುತ್ತಲಿನ ಬದುಕಿನ ಜೊತೆ ಭಾಗಿಯಾಗಿ ಸಂತೋಷವನ್ನು ಹೊಂದಬಹುದು ಎನ್ನುವುದರ ಕುತೂಹಲದ ನೋಟವೂ ಇದರಲ್ಲಿದೆ. ಆ ಕಾರಣಕ್ಕಾಗಿ ಈ ಪ್ರವಾಸ ಕಥನ ನಮ್ಮ ಆಸಕ್ತಿಗೆ ಗ್ರಾಸವಾಗುತ್ತದೆ.

ಶ್ರೀ ದೇವೇಂದ್ರಪ್ಪ ಬಸವಂತಪ್ಪ ಪಾಟೀಲರ **ಸಪ್ತಸಾಗರದಾಚೆ** ಅಮೆರಿಕಾದ ಪ್ರವಾಸ ಕಥನ. ಅವರ ಮಗ ರವೀಂದ್ರ ಅಮೇರಿಕಾದ ಕ್ಲೆಮ್ಸನ್ ವಿಶ್ವವಿದ್ಯಾಲಯದಲ್ಲಿ ಎಂ.ಎಸ್. ಪದವಿ ಪಡೆದು ಬೇರೆಡೆ ಕೆಲಸ ದೊರಕಿಸಿಕೊಂಡು ಈಗ ಅಟ್ಲಾಂಟಾದ ಉಪನಗರವಾದ ಕೆನ್ನೆಸಾದಲ್ಲಿ ವಾಸವಿರುವರು. ಮಗನ ಆಹ್ವಾನದ ಮೇರೆಗೆ ಶ್ರೀ ದೇವೇಂದ್ರಪ್ಪ ಬಸವಂತಪ್ಪ ಪಾಟೀಲರು ತಮ್ಮ ಪತ್ನಿಯೊಂದಿಗೆ ಮೇ ೨೦೦೫ರಲ್ಲಿ ಅಮೇರಿಕಾ ಪ್ರವಾಸ ಕೈಗೊಂಡರು. ಕೆನ್ನೆಸಾವನ್ನು ಕೇಂದ್ರ ಮಾಡಿಕೊಂಡು ಅಮೇರಿಕಾದ ಮುಖ್ಯಸ್ಥಳಗಳಲ್ಲಿ ಪ್ರವಾಸ ಕೈಗೊಂಡು ತಮ್ಮ ಅನುಭವಗಳನ್ನು ಸಂಕ್ಷಿಪ್ತವಾಗಿ ತಿಳಿಸಿರುವರು. ಫ್ಲೋರಿಡಾ ರಾಜ್ಯದ ಒರ್ಲ್ಯಾಂಡೋ, ವಾಶಿಂಗ್ಟನ್ ಡಿ.ಸಿ., ಕೆನಡಾ

- ಹೀಗೆ ಅವರು ಪ್ರವಾಸ ಮಾಡಿದ ಸ್ಥಳಗಳಲ್ಲಿ ನೋಡಲೇಬೇಕಾದ ಮುಖ್ಯ ಪ್ರವಾಸಿ ತಾಣಗಳನ್ನು ತಮ್ಮ ಅನುಭವಕ್ಕೆ ನಿಲುಕಿದ ರೀತಿಯಲ್ಲಿ ವಿವರಿಸಿರುವರು. 'ಅಮೆರಿಕೆಯ ಜನಜೀವನ' ಎಂಬ ಭಾಗದಲ್ಲಿ ಲೇಖಕರ ಕುತೂಹಲದ ದೃಷ್ಟಿಯನ್ನು ಗಮನಿಸಬಹುದು. ಅಲ್ಲಿನ ವೈದ್ಯಕೀಯ ವ್ಯವಸ್ಥೆಯನ್ನು ನೋಡಿ ಬೇಸರಗೊಳ್ಳುವರು. "ಇಲ್ಲಿ ಯಾವ ವೈದ್ಯರೂ ಯಾವ ಕಾಲಕ್ಕೂ ತುರ್ತು ಕರೆ ಇದ್ದರೂ ಕೂಡ ಯಾರ ಮನೆಗೂ ಸಂದರ್ಶನ ನೀಡುವುದಿಲ್ಲ. ಎಷ್ಟೇ ಗಂಭೀರ ಪರಿಸ್ಥಿತಿಯಲ್ಲಿ ರೋಗಿಯಿದ್ದರೂ ಕೂಡ ಆರೋಗ್ಯ ವಿಮಾ ಪತ್ರ ಹೊಂದಿದ್ದರೆ ಮಾತ್ರ ವಿಶೇಷ ಆಸ್ಥೆಯಿಂದ ಚಿಕಿತ್ಸೆ ನೀಡುತ್ತಾರೆ. ಇಲ್ಲವಾದಲ್ಲಿ ಅದು ಕಠಿಣ. ಇದು ಸರಕಾರಿ ಆಡಳಿತಕ್ಕೊಳಪಟ್ಟ ರುಗ್ಣಾಲಯದ ವ್ಯವಸ್ಥೆಯಾದರೆ, ಖಾಸಗಿ ವೈದ್ಯರು ಆರೋಗ್ಯ ವಿಮಾಪತ್ರ ಇಲ್ಲದವರಿಗೆ ಚಿಕಿತ್ಸೆ ನೀಡುವುದೇ ಇಲ್ಲ. ಒಂದು ವೇಳೆ ಹಾಗೆ ಚಿಕಿತ್ಸೆ ನೀಡುವುದಾದರೆ ದುಬಾರಿ ವೆಚ್ಚ. ಒಂದು ವಿಶೇಷ ಸಂಗತಿಯೆಂದರೆ, ಭಾರತೀಯ ತಜ್ಞ ವೈದ್ಯರಿಲ್ಲದ ಆಸ್ಪತ್ರೆ ಅಮೆರಿಕೆಯಲ್ಲಿ ಇಲ್ಲವೇ ಇಲ್ಲವೆಂಬುದನ್ನು ಮರೆಯಲಾಗದು. ಆದರೂ ಈ ಕ್ಷೇತ್ರದಲ್ಲಿ ಮಾನವೀಯತೆಯ ಕೊರತೆಯಿದೆಯೆಂದು ಧಾರಾಳವಾಗಿ ಹೇಳಬಹುದು" (ಪು. ೭೯) ಎಂದಿರುವರು.

ಶ್ರೀ ದೇವೇಂದ್ರಪ್ಪ ಬಸವಂತಪ್ಪ ಪಾಟೀಲರದು ಅತಿಶಯೋಕ್ತಿಯ ಬರವಣಿಗೆಯಲ್ಲ. ಅವರು ಯಾವುದನ್ನು ಲಂಬಿಸಿ ಬರೆಯುವುದಿಲ್ಲ. ಉದಾಹರಣೆಗೆ ಅವರು ನೋಡಿದ ನಯಾಗಾರ ಜಲಪಾತದ ರೋಮಾಂಚಕ ಅನುಭವವನ್ನು ತೀರಾ ವೈಭವೀಕರಿಸಿಲ್ಲ. ಪುಟ್ಟದಾಗಿದ್ದರೂ ಆ ಅನುಭವ ಮನಸ್ಸಿಗೆ ಮುಟ್ಟುತ್ತದೆ. ಕೆನಡಿ ಸ್ಪೇಸ್ ಸೆಂಟರ್ ಬಗೆಗಿನ ವಿವರಗಳು, ಅಮೆರಿಕೆಯ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ ಬಗೆಗಿನ ವಿವರಗಳು, ನ್ಯೂಯಾರ್ಕ್‌ನ ಪ್ರೇಕ್ಷಣೀಯ ಸ್ಥಳಗಳ ಪರಿಚಯ ಚೆನ್ನಾಗಿ ಮೂಡಿಬಂದಿವೆ. ಶ್ವೇತಭವನದ ಮುಂದೆ ಓರ್ವ ಮುಸ್ಲಿಂ ಮಹಿಳೆ ಬುಷ್ ಅವರ ಆಯ್ಕೆಯನ್ನು ವಿರೋಧಿಸಿ ೨೦೦೨ರಿಂದ ಪ್ರತಿಭಟನಾ ಸತ್ಯಾಗ್ರಹವನ್ನು ಕೈಗೊಂಡಿದ್ದು ದಪ್ಪಕ್ಷರಗಳಲ್ಲಿ ಬರೆದ ವಿರೋಧಿ ಘೋಷಣೆಗಳನ್ನು ಬಿತ್ತರಿಸುತ್ತ ಆ ಕ್ಷೇತ್ರಕ್ಕೆ ಕಾಲಿಡುವ ಪ್ರೇಕ್ಷಕರ ಗಮನ ಸೆಳೆಯುವುದನ್ನು ನೋಡಿ ಆಶ್ಚರ್ಯಗೊಂಡ ಲೇಖಕರು "ಅವಳ ಮೊರೆ ಇನ್ನೂ ಅಧಿಕಾರಿಗಳ ಕಿವಿ ಮುಟ್ಟಿಲ್ಲ, ಅಷ್ಟೇ ಅಲ್ಲದೆ ಈ ಪ್ರದರ್ಶನಕ್ಕೆ ಯಾರೂ ಆಕ್ಷೇಪಿಸಿ ಅಡೆತಡೆ ಒಡ್ಡಿಲ್ಲ ಹಾಗೂ ಅವಳ ಪ್ರದರ್ಶನವನ್ನು ಪ್ರತಿಬಂಧಿಸಿಯೂ ಇಲ್ಲ" ಎಂದಿರುವರು. ಇದು ಆ ದೇಶ ತನ್ನ ಪ್ರಜೆಗಳಿಗೆ ಕೊಟ್ಟಿರುವ ಮುಕ್ತ ಸ್ವಾತಂತ್ರ್ಯಕ್ಕೊಂದು ಉದಾಹರಣೆ.

**ಸಪ್ತಸಾಗರದಾಚೆ** ಅಮೆರಿಕಾ ಹಾಗೂ ಕೆನಡಾ ದೇಶಗಳ ಪ್ರಮುಖ ಪ್ರವಾಸಿ ಸ್ಥಳಗಳ ಪರಿಚಯವನ್ನು ಮುಖ್ಯ ಗುರಿಯಾಗಿ ಹೊಂದಿದ್ದರೂ ಈ ಪುಟ್ಟ ಪ್ರವಾಸ

ಕಥನ ತನ್ನದೇ ಆದ ಇತಿಮಿತಿಯನ್ನು ಹೊಂದಿದೆ. ಲೇಖಕರ ಎಲ್ಲೂ ಅತಿಯಾಗಿ ವಿವರಿಸದ ಮುಖ್ಯ ಸಂಗತಿಗಳನ್ನು ಮಾತ್ರ ಇಲ್ಲಿ ಹೇಳಿರುವುದರಿಂದ ಪ್ರವಾಸ ಕಥನ ತನ್ನ ಪ್ರಾಮಾಣಿಕತೆಯನ್ನು ಉಳಿಸಿಕೊಂಡಿದೆ.

ಶ್ರೀಮತಿ ಸುಶೀಲಾ ಕೊಪ್ಪರ ಅವರ **ಪಡುವಣದ ಪತ್ರಮಾಲೆ** ಪತ್ರಗಳ ರೂಪದಲ್ಲಿರುವ ಪ್ರವಾಸ ಸಾಹಿತ್ಯ. ಲೇಖಿಕಿ ಕೆನಡಾ, ಪಿಟ್ಸ್‌ಬರ್ಗ್, ನ್ಯೂಯಾರ್ಕ್ ವಾಷಿಂಗ್‌ಟನ್ ಇವೇ ಮೊದಲಾದೆಡೆ ಪ್ರವಾಸ ಕೈಗೊಳ್ಳುವರು. ಅವರು ತಾವು ನೋಡಿದ ಸ್ಥಳಗಳ ವಿವರಗಳನ್ನಷ್ಟೇ ಹೇಳುವುದಿಲ್ಲ, ಅಲ್ಲಿನ ರಾಜಕೀಯ ಸಾಮಾಜಿಕ ಸಂಗತಿಗಳ ಬಗೆಗೂ ವಿಶ್ಲೇಷಿಸುವರು. ಕೆನಡಾದ ಅಧ್ಯಕ್ಷ ಚುನಾವಣೆಯಿಂದ ಹಿಡಿದು ಅಲ್ಲಿನ ಜನರ ಬೊಜ್ಜು ಕರಗಿಸುವ ಸಮಸ್ಯೆಯವರೆಗೆ ವಿವರವಾಗಿ ಅವರು ವಿಚಾರ ಮಾಡುವರು. ಗಂಡು-ಹೆಣ್ಣುಗಳ ಸಂಬಂಧ, ಸ್ವಾತಂತ್ರ್ಯದ ಹೆಸರಿನಲ್ಲಿ ಮುರಿದ ಮನಗಳು, ಮನೆಗಳು; ತಬ್ಬಲಿ ಮಕ್ಕಳು ಹಾಗೂ ಅವರ ಮಾನಸಿಕ ಅಶಾಂತಿ -ಹೀಗೆ ಅವರು ಅಮೆರಿಕೆಯ ಸಾಮಾಜಿಕ ಸಮಸ್ಯೆಗಳ ಬಗೆಗೆ ಗಾಢವಾಗಿ ಚಿಂತಿಸುವರು. ವಿದೇಶದಲ್ಲಿ ನೆಲಸಿದ ಭಾರತೀಯರ ಮನಸ್ಸಿನ ತೊಳಲಾಟಗಳನ್ನು ಸಾಕಷ್ಟು ಚೆನ್ನಾಗಿಯೇ ಕೊಟ್ಟಿರುವರು. ಯಾವುದೇ ಸಮಸ್ಯೆಯನ್ನು ಗ್ರಹಿಸುವಲ್ಲಿ, ವಿಶ್ಲೇಷಿಸುವಲ್ಲಿ ಲೇಖಕಿಯ ಸೂಕ್ಷ್ಮವಾದ ಒಳನೋಟಗಳು ಬೆರಗುಗೊಳಿಸುವಂತಿದೆ. ತಾವು ನೋಡಿದ್ದನ್ನು ತಿಳಿಸುವಲ್ಲಿ ಅವರ ನಿರೂಪಣೆ ಪರಿಣಾಮಕಾರಿಯಾಗಿದೆ. ಫ್ಯಾಷನ್ ಬಗೆಗೇ ಆಗಲೀ, ನಯಾಗಾರ ಜಲಪಾತದ ಅದ್ಭುತ ಚೆಲುವನ್ನು, ರುದ್ರ ರಮಣೀಯತೆಯನ್ನು ತಿಳಿಸುವಲ್ಲೇ ಆಗಲೀ, ಡಿಸ್ನಿಲ್ಯಾಂಡ್ ಡೆಟ್ರಾಯಿಟ್ ವರ್ಣನೆಯೇ ಆಗಲೀ ಅವರ ಬರವಣಿಗೆ ಪ್ರಬುದ್ಧತೆಯನ್ನು ಪ್ರಕಟಪಡಿಸುತ್ತದೆ. ಲೇಖಕಿ ಪತ್ರಕರ್ತೆಯಾಗಿರುವುದರಿಂದ ಎಲ್ಲವನ್ನೂ ಸೂಕ್ಷ್ಮವಾಗಿ ನೋಡುವ, ಹದವಾದ ಭಾಷೆಯಲ್ಲಿ ಸವಿವರವಾಗಿ ಸ್ವಾರಸ್ಯಪೂರ್ಣವಾಗಿ ತಿಳಿಸುವ ವಿಶೇಷ ಗುಣ ಅವರಲ್ಲಿದೆ.

ಶ್ರೀಮತಿ ಜಯಾ ರಾಜಶೇಖರ್‌ರವರು **ಮರಳಿ ಬಂದ ಮಧುಮಾಸದಲ್ಲಿ** ಇಂಗ್ಲೆಂಡ್ ಅಮೇರಿಕಾ ದೇಶಗಳಲ್ಲಿ ತಾವು ಇದ್ದ ಕೆಲವೇ ತಿಂಗಳುಗಳ ಅವಧಿಯ ಅನುಭವಗಳನ್ನು ಶಾಬ್ದಿಕವಾಗಿ ನಿರೂಪಿಸಿರುವರು. ಇಲ್ಲಿನ ವಿವರಗಳು ಭಾರತೀಯ ಕುಟುಂಬಗಳ ಜೊತೆ ಕಳೆದ ಮಧುರ ಕ್ಷಣಗಳ ನಿರೂಪಣೆಯಷ್ಟಕ್ಕೇ ಸೀಮಿತವಾಗುತ್ತದೆ. ತಮ್ಮ ಪತಿ, ಮಗ, ಸೊಸೆ, ಮಿತ್ರರು ಹಾಗೂ ಅವರ ಕುಟುಂಬ ಈ ಮಿತಿಯಲ್ಲಿಯೇ ಅನುಭವ ವಿವರಣೆಗೊಳ್ಳುತ್ತದೆ. ನೋಡಿದ ಸ್ಥಳಗಳ ಬಗೆಗಿನ ವಿವರಣೆಯಲ್ಲೂ ನಿರುತ್ಸಾಹ. 'ನನಗೆ ಪ್ರಯಾಣವೆಂದರೇ ಬೇಸರ' ಎಂಬ ಲೇಖಕಿಯ ಮಾತಿನಲ್ಲಿ ಈ ನಿರುತ್ಸಾಹಕ್ಕೆ ಕಾರಣವನ್ನು ಹುಡುಕಬಹುದು. ವಾತ್ಸಲ್ಯಮಯಿಯಾದ ಲೇಖಕಿಗೆ

ಇಂಗ್ಲೆಂಡ್ ಅಮೇರಿಕಾ ದೇಶಗಳಿಗೆ ಹೋದರೂ ಕೌಟುಂಬಿಕ ನೆಲೆಯ ಆಚೆಗೆ ತಮ್ಮ ಅನುಭವವನ್ನು ವಿಸ್ತರಿಸಲು, ಕನ್ನಡಿಗ-ಭಾರತೀಯ ಕುಟುಂಬಗಳ ಆಚೆಗೆ ಸ್ನೇಹಹಸ್ತವನ್ನು ಚಾಚಲು ಆಗುತ್ತಿಲ್ಲ. ಮಮತಾಮಯಿಯಾದ ತಾಯಿ ಹೆಂಗರುಳು ಮಗ ಅಜಿತ್ ತಾವು ಬರುವ ಮುನ್ನವೆ ಮನೆಗೆ ಬೇಕಾದ ಸಾಮಾನುಗಳನ್ನೆಲ್ಲಾ ತಂದಿಟ್ಟಿದನ್ನು ಕಂಡು ಮಗನ ಬಗೆಗೆ ಅಭಿಮಾನಪಡುತ್ತದೆ; ನಾವು ಭಾಗ್ಯವಂತರು ಎಂದು ಹಿಗ್ಗುತ್ತದೆ; ಮಗ ಓದಿದ ಕಾಲೇಜು ನೋಡಿ ಬರುವಾಗ ಸುಖದುಃಖ ಸಮ್ಮಿಶ್ರಭಾವ ಮರುಕಳಿಸುತ್ತದೆ; ಮಗ ಮೆಚ್ಚಿದ ಹುಡುಗಿ ತನ್ನ ಧರ್ಮೀಯಳಲ್ಲದಿದ್ದರೂ ಮಗನ ಸಲುವಾಗಿ ಸೊಸೆಯಾಗಿ ಒಪ್ಪಿಕೊಳ್ಳುತ್ತದೆ; ಗಂಡನ ಪ್ರತಿಭೆ, ವಿಶ್ರಾಂತಿಯಿಲ್ಲದ ದುಡಿಮೆ ತ್ಯಾಗಪೂರ್ಣವಾದ ಬದುಕನ್ನು ಮೇಲಿಂದ ಮೇಲೆ ನೆನೆಯುತ್ತದೆ; ರಾವ್‌ನ ಹೆಂಡತಿ ಪದ್ಮಾ ಒಂದು ತಿಂಗಳ ಮಗುವನ್ನು ಕಟ್ಟಿಕೊಂಡು ತಾನೊಬ್ಬಳೆ ಮನೆಗೆಲಸ, ಮಗುವಿನ ಆರೈಕೆ, ಅತಿಥಿ ಸೇವೆ ಇವೆಲ್ಲವನ್ನೂ ತೂಗಿಸಿಕೊಂಡು ಹೋಗುವುದನ್ನು ಕಂಡು "ತವರಿನಲ್ಲಿದ್ದರೆ ಅವರಮ್ಮ ಅವಳಮ್ಮ ಇನ್ನೂ ಮಂಚ ಬಿಟ್ಟು ಕೆಳಗಿಳಿಯಲು ಬಿಡುತ್ತಿರಲಿಲ್ಲವೇನೊ. ಇಲ್ಲಿ ಯಾರು ಕೇಳಬೇಕು" ಎಂದು ಚಿಂತಿಸುತ್ತದೆ.

ಕೌಟುಂಬಿಕ ಚಿತ್ರಗಳ ನಡುವೆಯೂ ವಸ್ತುನಿಷ್ಠವಾಗಿ ಆಲೋಚಿಸುವ ಲೇಖಕಿ ಇಂಗ್ಲೇಂಡಿನಲ್ಲಿ ನೋಡಿದ ಭಾರತೀಯ ಕುಟುಂಬಗಳಲ್ಲಿನ ನೀರಸ ಜೀವನ ರೀತಿ, ಬದುಕಿನ ಏಕತಾನತೆಗಳನ್ನು ಕಂಡು ಅಲ್ಲಿನ ಯುವತಿಯರಿಗೆ "ನೀವೆಲ್ಲಾ ಎಲ್ಲಾದರೂ ಕೆಲಸಕ್ಕೆ ಸೇರಿ. ನಿಮ್ಮ ಕಾಲ ಸುಮ್ಮನೆ ವ್ಯರ್ಥವಾಗುತ್ತಿದೆ ಎನ್ನಿಸುತ್ತಿದೆಯಲ್ಲವೆ? ಅದೂ ಕೆಲಸ ಮಾಡಲು ಶಕ್ತಿಯಿರುವ ನಿಮ್ಮ ಈ ಯೌವನದ ದಿನಗಳನ್ನು ಸಾರ್ಥಕವಾಗಿ ಕಳೆಯಲು ಯಾವುದಾದರೂ ಒಂದು ರೀತಿಯಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಿ. ಕೆಲಸಮಾಡಿ, ಇಲ್ಲವೆ ನಿಮಗೆ ಅಭಿರುಚಿಯಿರುವ ಹವ್ಯಾಸವನ್ನು ಬೆಳೆಸಿಕೊಳ್ಳಿ" ಎಂದು ಕಿವಿಮಾತು ಹೇಳಿರುವರು. ಅಮೆರಿಕಾದಲ್ಲಿ ಪುರುಷನಷ್ಟೇ ಸಮಾನತೆ ಸ್ತ್ರೀಗೂ ಇದೆಯೆಂಬ ತಪ್ಪು ಕಲ್ಪನೆಯನ್ನು ಖಂಡಿಸುವ ಲೇಖಕಿ "ಬುದ್ಧಿಜೀವಿಗಳು ಜವಾಬ್ದಾರಿಯಂತಹ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲಿ 'ಮಹಿಳೆ' ಎಂಬ ಕಾರಣಕ್ಕಾಗಿ ಆಕೆಯನ್ನು ಇದರಿಂದ ದೂರವಿಡುತ್ತಾರೆ. ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪಕವೃತ್ತಿ ಒಂದೇ ಆದರೂ ಪುರುಷ ಅಧ್ಯಾಪಕರುಗಳಿಗಿಂತ ಮಹಿಳಾ ಅಧ್ಯಾಪಕರುಗಳಿಗೆ ವೇತನ ಕಡಿಮೆ! ನಮ್ಮಲ್ಲಿ ಗಂಡಾಳಿಗಿಂತ ಹೆಣ್ಣಾಳಿಗೆ ಕೂಲಿ ಕಡಿಮೆ ಕೊಡುವುದಿಲ್ಲವೇ ಹಾಗೆ!" ಎಂದು ಅಲ್ಲಿ ವಸ್ತುಸ್ಥಿತಿ ಬೇರೆಯೇ ಇರುವುದನ್ನು ತಿಳಿಸುವರು. 'ನಮ್ಮನ್ನು ನೋಡಿ ನಿಮಗೆ ಏನನ್ನಿಸುತ್ತದೆ ನಿಜ ಹೇಳಿ ಅಕ್ಕಾ' ಎಂದು ಅಶೋಕರವರು ಕೇಳಿದ್ದಕ್ಕೆ ಲೇಖಕಿ ಹೀಗೆ ಉತ್ತರಿಸುವರು: "ನೀವು ನಮ್ಮೂರಲ್ಲೇ ಇದ್ದರೆ ಹುಡುಗತನ ಕಳೆದುಕೊಳ್ಳದೆ, ಇನ್ನೂ ಕೆಲವು ಕಾಲ ಎಳೆಯರಾಗಿಯೇ ಇರುತ್ತಿದ್ದಿರಿ. ಈಗ ನಿಮ್ಮ ವಯಸ್ಸಿಗಿಂತ

ಪ್ರಬುದ್ಧರಾಗಿ, ಗಂಭೀರವಾಗಿ ಕಾಣಿಸುತ್ತೀರಿ. ಜೀವನದ ಎಲ್ಲ ಸಮಸ್ಯೆಗಳಿಗೂ ಏಕಾಂಗಿಯಾಗಿ ತಲೆಯೊಡ್ಡಿ ಬಹುಬೇಗ ದೊಡ್ಡವರಾಗಿಬಿಟ್ಟಿರಿ. ಅಮೆರಿಕೆಗೆ ಕಳಿಸಿದ ಮಕ್ಕಳು ಕೆಟ್ಟುಹೋಗಿಬಿಡುತ್ತಾರೆಂದು ನಮ್ಮಲ್ಲಿ ತಪ್ಪು ತಿಳುವಳಿಕೆ ಬಂದುಬಿಟ್ಟಿದೆ. ಆದರೆ ಇಲ್ಲಿ ನೋಡುವಾಗ ಇಲ್ಲಿಗಿಂತ ನಮ್ಮ ದೇಶದಲ್ಲೇ ಯುವಕರಿಗೆ ಕೆಡುವ ಸಾಧ್ಯತೆ ಜಾಸ್ತಿ ಎನ್ನಿಸಿತು. ಇಲ್ಲಿ ನಾಳೆಯ ಅನ್ನದ ಯೋಚನೆ ನೀವೇ ಮಾಡಬೇಕು, ನಿಮ್ಮ ತಂದೆ ತಾಯಿ ಮಾಡುವಂತಿಲ್ಲ. ಆದ್ದರಿಂದ ಕೆಡುವುದಕ್ಕೆ ಸಮಯವೇ ಇರುವುದಿಲ್ಲ. ನಮ್ಮ ಕಡೆಗಿಂತ ಕೆಡುವ ಸಂಖ್ಯೆ ಇಲ್ಲಿ ವಿರಳ ಅನ್ನಿಸುತ್ತೆ. ಎಳೆಯತನ ಅಮೂಲ್ಯವಾದುದು. ಅದನ್ನು ಬೇಗ ಕಳೆದುಕೊಂಡಿರಿ. ನೀವಿಲ್ಲಿ ಸುಖದಲ್ಲಿದ್ದರೂ ಅದನ್ನು ಹಂಚಿಕೊಂಡು ಆ ಸುಖ ಹೆಚ್ಚು ಮಾಡುವವರಿಲ್ಲ. ಇಲ್ಲಿಯ ಸಮೃದ್ಧಿಯನ್ನು ಬಿಟ್ಟುಬರಲೂ ಆಗದೆ, ನಮ್ಮಲ್ಲಿಯ ಸಂತೃಪ್ತಿಯನ್ನು ಪಡೆಯಲೂ ಆಗದೆ ತ್ರಿಶಂಕು ಸ್ವರ್ಗದಲ್ಲಿದ್ದೀರಿ." ಈ ಮಾತುಗಳು ಪ್ರಬುದ್ಧ ಚೇತನದ ಗಂಭೀರ ವಿಚಾರವಾಗಿ ತೋರುತ್ತದೆ.

ಲೇಖಕಿ ಭಾರತ-ಅಮೆರಿಕಾ ದೇಶಗಳ ವಸ್ತುಸ್ಥಿತಿಯನ್ನು ಹಲವೆಡೆ ತುಲನೆ ಮಾಡಿರುವರು. ಇದನ್ನು ಗ್ರಾಹಕರ ಸೌಕರ್ಯ, ಮಕ್ಕಳ ಬೆಳವಣಿಗೆ- ಈ ಅಧ್ಯಾಯಗಳಲ್ಲಿ ನಾವು ಕಾಣಬಹುದು. ಲೇಖಕಿಗೆ "ಸೀರೆ ಅಂಗಡಿ ಕಡೆ ತಿರುಗಿ ನೋಡೋಲ್ಲ ಅಂದುಕೊಂಡಿದ್ದವಳು ೮-೧೦ ಸೀರೆ ಕೊಂಡುಕೊಂಡೆ" ಎಂದು ತಮ್ಮನ್ನು ತಾವೇ ಛೇಡಿಸಿಕೊಳ್ಳುವ ಆರೋಗ್ಯವಂತ ಮನಸ್ಸೂ ಇದೆ. ಏರ್‌ಪೋರ್ಟ್‌ನಲ್ಲಿ ಸಾಮಾನು ಸಾಗಿಸುವ ಪೋರ್ಟರ್ ಇನ್ನೊಬ್ಬ ಪ್ರಯಾಣಿಕನೊಂದಿಗೆ ಭಕ್ಷೀಸಿಗಾಗಿ ನಡೆದುಕೊಂಡ ರೀತಿ ಗಮನಿಸಿದ ಲೇಖಕಿ 'ಮನುಷ್ಯರ ರೀತಿ ನೀತಿ; ಭಾರತವಾದರೇನು ಅಮೆರಿಕೆಯಾದರೇನು ಎಲ್ಲವೂ ಒಂದೇ' ಎನ್ನುವರು. ನಿವೃತ್ತ ವೈದ್ಯರೊಬ್ಬರು ತಮ್ಮ ೮೦ನೇ ವಯಸ್ಸಿನಲ್ಲಿ ಬೇರೆಯವರಿಗೆ ತಾವು ಹೊರೆಯಾಗಿರಬಾರದೆಂದು ಬಡಗಿಯ ಸಹಾಯಕನಾಗಿ ಕೆಲಸ ಮಾಡುವುದನ್ನು ಕಂಡ ಲೇಖಕಿ ಬಸವಣ್ಣ ಮೊದಲಾದವರು ಹೇಳಿದ ಕಾಯಕ ಸಿದ್ಧಾಂತದ ನಿಜವಾದ ಅರ್ಥವನ್ನು ಅಲ್ಲಿ ಗ್ರಹಿಸುವರು.

ಲೇಖಕಿಗೆ ತನ್ನ ಅರಿವಿನ ಮಿತಿಯ ತಿಳುವಳಿಕೆಯಿದೆ. ಪ್ರವಾಸಕಥನ ಬರೆಯ ಬೇಕಾದರೆ ಅದಕ್ಕೆ ಆಯಾ ದೇಶದ ವಿಸ್ತಾರ ನೋಟದ ಅವಶ್ಯಕತೆಯಿದೆ ಎಂಬ ಅರಿವು ಇದೆ. ಆದರೂ ತಮ್ಮ ಮಿತಿಯಲ್ಲಿಯೇ ಶ್ರೀಮತಿ ಜಯಾ ರಾಜಶೇಖರ್‌ರವರು ಇನ್ನಷ್ಟು ಚೆನ್ನಾಗಿ, ವ್ಯಾಪಕವಾಗಿ ತಮ್ಮ ಪ್ರವಾಸದ ಅನುಭವಗಳನ್ನು ಹೇಳಬಹುದಿತ್ತು. ಸ್ವತಃ ಲೇಖಕಿಯಾದ ಅವರಿಗೆ ತಾವು ನೋಡಿದ ದೇಶ-ಜನ-ಮನವನ್ನು ಸೂಕ್ಷ್ಮವಾಗಿ ಅವಲೋಕಿಸುವ ಅವಕಾಶವಿದ್ದಿತು.

ಕುಲಶೇಖರಿಯವರ **ಬೊಗಸೆಬುತ್ತಿ** ಅಮೆರಿಕಾದ ಪ್ರವಾಸ ಕಥನ. ಅದರ ಪ್ರಾರಂಭದ ಭಾಗ ನೋವಿನದು. ಇಂಜನಿಯರ್ ಮಗ ಕಷ್ಟಪಟ್ಟು ಓದಿ ಅಮೇರಿಕಾಕ್ಕೆ ಹೋಗಿ ಅಲ್ಲಿ ಎಂ.ಎಸ್. ಮಾಡಿ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಸಂಪಾದಿಸಿ ಮದುವೆಯಾಗಲು ಭಾರತಕ್ಕೆ ಬರುವನು. ಮದುವೆಯಾದ ಒಂದು ವಾರದಲ್ಲೇ ಕಾರಿನ ಅಪಘಾತಕ್ಕೆ ಒಳಗಾಗಿ ಬೆನ್ನುಮೂಳೆ ಮುರಿದು ಆಸ್ಪತ್ರೆ ಸೇರಿದ. ಮಣಿಪಾಲ್ ಆಸ್ಪತ್ರೆಯಲ್ಲಿ ಆಪರೇಷನ್ ಆಗಿಯೂ ದೇಹದ ಅರ್ಧಭಾಗದ ಶಕ್ತಿ ಕಳೆದುಕೊಂಡು (ಪ್ಯಾರಾಪ್ಲೀಜಿಯಾ) ಓಡಾಡಲಾಗದೆ ಪರಾಶ್ರಯಿಯಾದ. ಐದಾರುತಿಂಗಳು ಫಿಸಿಯೋಥೆರಪಿ ಚಿಕಿತ್ಸೆಗೆ ಒಳಗಾಗಿ ಅವನು ಮತ್ತೆ ಅಮೇರಿಕಾಕ್ಕೆ ತೆರಳಿ ಅಲ್ಲಿನ ಪುನಶ್ಚೇತನ ಕೇಂದ್ರದ ನೆರವಿನಿಂದ ತನ್ನ ಬದುಕನ್ನು ಮತ್ತೆ ಧೈರ್ಯದಿಂದ ಪ್ರಾರಂಭಿಸಿ ಪರಾಶ್ರಯಿಯಾಗದೆ ಜೀವನ ನಡೆಯಿಸಿ ಅದರಲ್ಲಿ ಯಶಸ್ಸನ್ನು ಕಂಡ ಯುವಕನೊಬ್ಬನ ಹೋರಾಟದ ಕಥೆ ಪ್ರವಾಸ ಕಥನದ ಪೂರ್ವಭಾಗದಲ್ಲಿ ಬಂದಿದೆ. ಮಗನ ಯಶಸ್ಸನ್ನು ನೋಡಿ ಆನಂದಿಸಲು ಅಮೆರಿಕಾಕ್ಕೆ ಹೊರಟ ತಾಯಿ (ಕುಲಶೇಖರಿ) ತಮ್ಮ ಪ್ರವಾಸದ ಅನುಭವಗಳನ್ನು ಬೊಗಸೆಬುತ್ತಿಯಾಗಿ ನಿರೂಪಿಸಿರುವರು.

ಅಮೆರಿಕಾದ ಜೀವನವಿಧಾನವನ್ನು ಅವರು ಕುತೂಹಲದಿಂದ ಗಮನಿಸಿರುವರು. ಅಲ್ಲಿನ ವಲಸಿಗರಿಂದಾದ ಸಂಕ್ರಮಣ ಸಂಸ್ಕೃತಿಯ ನಡುವೆಯೂ ಅವರು ತಮ್ಮ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ನಡೆಸಿರುವ ಪ್ರಯತ್ನವನ್ನು ಲೇಖಕಿ ಗಮನಿಸುವರು (ಪು. ೨೮). ತಮ್ಮ ಮಗನಿಗೆ ಪುನರುಜ್ಜೀವನ ನೀಡಿದ ಪುನಶ್ಚೇತನಕೇಂದ್ರ (rehabilitation)ವನ್ನು 'ದೇವಾಲಯ' ವೆಂದೂ, ತಮ್ಮ ಮಗನಲ್ಲಿ ಆತ್ಮವಿಶ್ವಾಸ ಮೂಡುವಂತೆ ಮಾಡಿ ಪವಾಡ ಮೆರೆಸಿದ 'ದೈವ'ವೆಂದೂ ಲೇಖಕಿ ಭಾವುಕರಾಗಿ ಕರೆದಿರುವರು. ಅಲ್ಲಿ ಅಂಗವಿಕಲರಿಗಾಗಿ ವಿಶೇಷ ಆಸಕ್ತಿತೋರಿ ಅವರಿಗೆ ಬೇಕಾದ ಅಗತ್ಯ ಶಿಕ್ಷಣ ನೀಡುತ್ತಿರುವುದನ್ನು ವಿವರಿಸಿರುವರು (ಪು. ೩೭. ೩೯).

'ಕುಲಶೇಖರಿ'ಯವರು ಅಮೆರಿಕಾದ ಪ್ರೇಕ್ಷಣೀಯ ಸ್ಥಳಗಳ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಟ್ಟಿರುವರು. ಪ್ರವಾಸ ಕಥನವನ್ನು ಅಂಕಿ ಅಂಶಗಳ ವಿವರಣೆಗಳಿಂದ ತುಂಬಿಸಹೋಗದೆ ತಾವು ನೋಡಿದ್ದನ್ನ, ಸಂತೋಷಪಟ್ಟಿದ್ದನ್ನು ಸರಳವಾಗಿ ಲೇಖಕಿ ಹೇಳಿರುವರು. ವಾಷಿಂಗ್‌ಟನ್, ಕ್ಯಾಲಿಫೋರ್ನಿಯಾ, ಸ್ಯಾನ್ ಫ್ರಾನ್ಸಿಸ್ಕೊ -ಹೀಗೆ ತಾವು ನೋಡಿದ ಅಮೇಕಾದೇಶದ ಪ್ರವಾಸೀ ಆಕರ್ಷಣೆಗಳ ಕಿರುಪರಿಚಯ ಇಲ್ಲಿ ಬಂದಿದೆ. ಅಮೆರಿಕಾದ ಜನಜೀವನದ ಬಗೆಗಿನ ವಿವರಣೆ (ಪು.೮೪-೯೦). ಮಗಳ ಹೆರಿಗೆ, ಹೆರಿಗೆಯಾದ ಒಂದು ತಿಂಗಳಿಗೇ ಮಗಳು ಮತ್ತೆ ಕೆಲಸಕ್ಕೆ ಹೊರಟದ್ದು, ಅನಿವಾಸಿ ಭಾರತೀಯರ ಸಮಸ್ಯೆಗಳು, ಭಾರತೀಯರು ಹಾಗೂ

ಅಮೆರಿಕನ್ನರ ನಡುವೆ ಇರುವ ವ್ಯತ್ಯಾಸಗಳು (ಪು. ೯೨-೯೮) -ಹೀಗೆ ವಿವರಗಳು ಗ್ರಂಥದಲ್ಲಿ ತಲೆಹಾಕಿವೆ. ಆರು ತಿಂಗಳ ಅಮೇರಿಕಾ ವಾಸದಲ್ಲಿ ಆ ದೇಶ ಲೇಖಕಿಗೆ "ಅನೇಕ ಸುಂದರ ಅನುಭವಗಳನ್ನು ದೇಣಿಗೆಯಾಗಿ ನೀಡಿತು. ಹೊಸ ದೇಶದ ಪರಿಸರ ಬದುಕಿನಲ್ಲಿ ಹೊಸ ಆಸೆಯನ್ನು ಸ್ಫುರಿಸಿತು. ನವಚೇತನ ನೀಡಿತು; ಒಂದು ವಿಧದಲ್ಲಿ ಪುನರ್ಜನ್ಮ ನೀಡಿತು". (ಪು. ೧೦೩) ಎಂದು ಲೇಖಕಿ ಧನ್ಯತೆಯ ಮಾತುಗಳನ್ನಾಡಿರುವರು.

ಶ್ರೀಮತಿ ರಾಜಾಮಣಿಯವರು ತಮ್ಮ ಪತಿ ಶ್ರೀ ಸಿ.ಕೆ. ನಾಗರಾಜರಾಯರೊಂದಿಗೆ ಲಂಡನ್ ಮತ್ತು ಯೂರೋಪಿನ ಹಲವು ರಾಷ್ಟ್ರಗಳಲ್ಲಿ ಸುಮಾರು ಒಂದು ತಿಂಗಳೂ, ಕೆನಡಾ ಅಮೆರಿಕಾಗಳಲ್ಲಿ ಸುಮಾರು ಎರಡು ತಿಂಗಳೂ ಮಾಡಿದ ಪ್ರವಾಸದ ವರ್ಣನೆ **ಸುವರ್ಣ ಮಧುಚಂದ್ರ** ಎಂಬ ಕೃತಿಯಲ್ಲಿ ಮೂಡಿದೆ. ೧೯೩೪ರಲ್ಲಿ ಮದುವೆಯಾದ ಅವರಿಗೆ ೧೯೮೪ ಮದುವೆಯ ಚಿನ್ನದ ಪಬ್ಬದ ವರ್ಷ. ಮದುವೆಯಾದ ೫೦ ವರ್ಷದ ನಂತರ ವಿದೇಶ ಪ್ರವಾಸದ ಭಾಗ್ಯ ಈ ದಂಪತಿಗಳಿಗೆ ದೊರೆಯಿತು. ಇದು ಅವರಿಗೆ ಸುವರ್ಣ ಮಧುಚಂದ್ರ. ಆ ಕಾರಣದಿಂದಲೇ ಈ ಕೃತಿಗೆ 'ಸುವರ್ಣ ಮಧುಚಂದ್ರ' ಎಂಬ ಅರ್ಥಪೂರ್ಣವಾದ ಹೆಸರಿಡಲಾಗಿದೆ. ಈ ಪ್ರವಾಸದ ಸಂದರ್ಭದಲ್ಲಿ ಶ್ರೀಮತಿ ರಾಜಾಮಣಿಯವರಿಗೆ ೬೩ ವರ್ಷ, ಸಿ.ಕೆ. ನಾಗರಾಜರಾಯರಿಗೆ ೭೯ ವರ್ಷಗಳು. ಶ್ರೀಮತಿ ರಾಜಾಮಣಿಯವರು ಸಾಮಾನ್ಯ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು. ಆರು ಹೆಣ್ಣು ಎರಡು ಗಂಡು ಮಕ್ಕಳ ತಾಯಿಯಾಗಿ ಬದುಕು ಕಲಿಸಿದ ಅನುಭವಗಳಿಂದ ಅವರು ಮಾಗಿರುವರು; ಸುಪ್ರಸಿದ್ಧ ಲೇಖಕರ ಪತ್ನಿಯಾಗಿ ಉತ್ತಮ ಸಂಸ್ಕಾರವನ್ನೂ ಅಭಿರುಚಿಯನ್ನೂ ರೂಢಿಸಿಕೊಂಡಿರುವರು.

**ಸುವರ್ಣ ಮಧುಚಂದ್ರ**ದಲ್ಲಿ ಲೇಖಕಿ ಕಂಡ ಹಲವು ದೇಶಗಳ ಪ್ರೇಕ್ಷಣೀಯ ಸ್ಥಳಗಳ ಪ್ರಾಥಮಿಕ ಮಾಹಿತಿಗಳಿವೆ. ಮೊದಲ ಬಾರಿ ವಿದೇಶ ಪ್ರವಾಸ ಮಾಡಿದಾಗ ಒದಗಿಬಂದ ಹೊಸ ಹೊಸ ಅನುಭವಗಳು ಅವರಿಗೆ ಅಚ್ಚರಿಯನ್ನುಂಟುಮಾಡಿವೆ. ಅವರು ತಮಗೆ ಪ್ರವಾಸ ಒದಗಿಸಿದ ಎಲ್ಲ ಹೊಸ ಅನುಭವಗಳಿಗೂ ಕುತೂಹಲದಿಂದ ತೆರೆದುಕೊಂಡಿರುವರು. ಆಶ್ಚರ್ಯವೂ ಮುಗ್ಧವೂ ಆದ ಕಣ್ಣಿನಿಂದ ಅಪರಿಚಿತ ಪ್ರದೇಶಗಳನ್ನು ಭಾರತೀಯ ಪ್ರವಾಸಿಯಾಗಿ ನೋಡುವಾಗ ಅವರು ಸಂಪ್ರದಾಯಸ್ಥ ಬ್ರಾಹ್ಮಣ ಮಹಿಳೆಯಾಗಿಯೇ ನೋಡುವರು. ಅವರ ಜೀವನದೃಷ್ಟಿ, ಅಭಿರುಚಿ ಸಂಪ್ರದಾಯಪರವಾದುದು. ಈ ಪ್ರವಾಸ ಕಥನದ ವೈಶಿಷ್ಟ್ಯವೆಂದರೆ, ಇದರ ಅವಿಭಾಜ್ಯ ಭಾಗವಾಗಿ ಶ್ರೀ ಸಿ.ಕೆ. ನಾಗರಾಜರಾಯರೇ ತುಂಬಿಕೊಂಡಿರುವುದು. ತಮ್ಮ ಪತಿಯ

ವ್ಯಕ್ತಿತ್ವ, ಕೀರ್ತಿಯನ್ನು ಚಿತ್ರಿಸುವಲ್ಲಿ ಲೇಖಕಿಗೆ ವಿಶೇಷವಾದ ಸಂತೋಷವಿದೆ. "ಸುವರ್ಣ ಮಧುಚಂದ್ರ" ಕಥನದ ಬೌದ್ಧಿಕ ತಾತ್ವಿಕ ಅಂಶಗಳು ರಾಯರವೇ. ಕಥನದ ಮುಖ್ಯ ಪಾತ್ರವಾಗಿದ್ದು ಹಲವು ಸಂದರ್ಭಗಳಲ್ಲಿ ಅವರು ತಮ್ಮ ವಿಚಾರಗಳನ್ನು ಪ್ರತಿಪಾದಿಸುವುದನ್ನು ಶ್ರೀಮತಿ ರಾಜಾಮಣಿಯವರು ವರದಿ ಮಾಡಿದ್ದಾರೆ" ಎಂಬ ಹಾ.ಮಾ. ನಾಯಕರ 'ಮುನ್ನುಡಿ'ಯ ಮಾತಿನಲ್ಲಿ ಸತ್ಯಾಂಶವಿದೆ.

ಶ್ರೀಮತಿ ರಾಜಾಮಣಿಯವರು ಪ್ರವಾಸ ಕಾಲದಲ್ಲಿ ತಾವು ಕಂಡದ್ದನ್ನೆಲ್ಲಾ ವಿವರಿಸಲು ಪ್ರಯತ್ನಿಸಿರುವರು. ಅವರ ಸೂಕ್ಷ್ಮ ನಿರೀಕ್ಷಣೆ, ಅನುಭವಗಳನ್ನು ಬರವಣಿಗೆಗೆ ಇಳಿಸುವಾಗ ವಹಿಸುವ ಸಂಯಮ, ಹೊಸದನ್ನು ತಿಳಿಯಬೇಕೆನ್ನುವ ವಯಸ್ಸಿಗೆ ಮೀರಿದ ಲವಲವಿಕೆ-ಜೀವನೋತ್ಸಾಹಗಳನ್ನು ಪುಸ್ತಕದಲ್ಲಿ ಓದಿ ಕಂಡಾಗ ಅವರ ಬಗೆಗೆ ಸಹಜವಾಗಿಯೇ ಗೌರವ ಹಾಗೂ ಮೆಚ್ಚುಗೆ ಮೂಡುತ್ತದೆ.

೧೯೯೦ರಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಅಮೆರಿಕಾಕ್ಕೆ ಕೊಟ್ರೇಶಿ ಕನಸು ಚಿತ್ರದ ಪ್ರತಿಯೊಂದಿಗೆ ಹೋದರು. ಟೀಕೆ, ಟಿಪ್ಪಣಿ, ಮೆಚ್ಚು, ರೊಚ್ಚು ಇವೆಲ್ಲದರೊಂದಿಗೆ ಹಾಸ್ಯದ ತೆಳುಲೇಪ ಸೇರಿಸಿ ಲವಲವಿಕೆಯಿಂದ ತಮ್ಮ ಪ್ರವಾಸ ಕಥನ **ಅಮೆರಿಕಾ! ಅಮೆರಿಕಾ**ವನ್ನು ಅವರು ನಿರೂಪಿಸಿರುವರು. ಅವರು ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಸಿ ನ್ಯೂಯಾರ್ಕ್‌ನ ಜೆ.ಎಫ್. ಕೆನಡಿ ವಿಮಾನ ನಿಲ್ದಾಣದಲ್ಲಿ ಇಳಿದಾಗ ವಿಮಾನ ಕೇವಲ ಎಂಟು ಗಂಟೆ ತಡವಾಗಿ ಮುಟ್ಟಿತ್ತು. ನಾಗತಿಹಳ್ಳಿ ಏರ್ ಇಂಡಿಯಾದ ಸಮಯಪಾಲನೆಯನ್ನು ಒಂದು ಹಾಸ್ಯ ಚಟಾಕಿಯ ಮೂಲಕ ಟೀಕಿಸುವರು: ಒಂದು ದಿವಸ ಏರ್ ಇಂಡಿಯಾ ನಿಗದಿತ ಸಮಯಕ್ಕೆ ಕರಾರುವಾಕ್ಕಾಗಿ ಇಳಿಯಿತು. "ಅರೆ ಎಂಥ ಸಮಯ ಪರಿಪಾಲನೆ!" ಎಂದು ಭಾರತೀಯನೊಬ್ಬ ಉದ್ಗಾರ ತೆಗೆದ. ಆ ಮೆಚ್ಚುಗೆಯ ಮಾತು ಕೇಳಿದ ಪಕ್ಕದಲ್ಲಿದ್ದ ಇನ್ನೊಬ್ಬ ಭಾರತೀಯ "ಅಯ್ಯಾ ಮೂರ್ಖ ಇದು ನಿನ್ನೆ ಸಂಜೆ ಬರಬೇಕಾಗಿದ್ದ ವಿಮಾನ. ಕರಾರುವಾಕ್ಕಾಗಿ ಇಪ್ಪತ್ನಾಲ್ಕು ಗಂಟೆ ತಡವಾಗಿ ಬಂದಿದೆ!" ಎಂದ (ಪು. ೬). ಆ ವಿಮಾನ ನಿಲ್ದಾಣ ಕೆಲವೇ ನಿಮಿಷಗಳಲ್ಲಿ ಪ್ರಯಾಣಿಕರ ನಿರ್ಗಮನದಿಂದ ಪ್ರಶಾಂತವಾಯಿತು. ಅಲ್ಲಿ ಉಳಿದವರು ನಾಗತಿಹಳ್ಳಿ ಹಾಗೂ ಓರ್ವ ಇರಾನಿನ ಮುದುಕಿ. ವಿಮಾನ ನಿಲ್ದಾಣದಲ್ಲಿ ಎದುರುಗೊಳ್ಳುತ್ತೇನೆ ಎಂದು ಆಶ್ವಾಸನೆ ನೀಡಿದ್ದ ನಾಗತಿಹಳ್ಳಿಯ ಮಿತ್ರ ಕೈಕೊಟ್ಟಿದ್ದ. ಇರಾನಿನ ಮುದುಕಿಯ ಮಗ ಇನ್ನೂ ಬಂದಿರಲಿಲ್ಲ. ಇರಾನಿ ಮುದುಕಿ ತನ್ನ ಮೈಮೇಲೆ ಅಪಾರ ಚಿನ್ನದ ಒಡವೆಗಳನ್ನು ಹೇರಿಕೊಂಡಿದ್ದಳು. ವಿಮಾನ ನಿಲ್ದಾಣದಲ್ಲಿ ಮುದುಕಿಯ ಲಗೇಜು ಅಪಹರಿಸಲು ಕರಿಯರ ಗುಂಪೊಂದು ಸೇರತೊಡಗಿತು. ಮುದುಕಿಯ ಮೈಮೇಲಿನ ಚಿನ್ನ ಅವರ ಕಣ್ಣು ಕುಕ್ಕುತ್ತಲಿತ್ತು. 'ಹೊರಗೆ ಯಾರೋ ಕರೆಯುತ್ತಿದ್ದಾರೆ ಬಾ' ಎಂದು

ಕತ್ತಲೆಗೆ ಕರೆದೊಯ್ಯಲು ಅವರು ಹವಣಿಸುತ್ತಿದ್ದರು. ಆ ಮುದುಕಿಯನ್ನು ಕರಿಯರಿಂದ ಸಂರಕ್ಷಿಸಲು ಪಟ್ಟ ಪಾಡು, ಅದರಲ್ಲಿ ಯಶಸ್ವಿಯಾದುದರ ಕಥನದೊಂದಿಗೆ ಈ ಕೃತಿ ಪ್ರಾರಂಭವಾಗುತ್ತದೆ.

'ಕೊಟ್ರೇಶಿಯ ಕನಸು' ಸಿನಿಮಾವನ್ನು ಅಮೇರಿಕಾದ ಮಿತ್ರರಿಗೆ ತೋರಿಸಲು ಹದಿನಾಲ್ಕು ರೀಲುಗಳ ಡಬ್ಬವನ್ನು ಹೊತ್ತುತಂದಿದ್ದರು ನಾಗತಿಹಳ್ಳಿ. ಮದರಾಸು ವಿಮಾನ ನಿಲ್ದಾಣದಲ್ಲಿ ಕಸ್ಟಂಸ್ ಅಧಿಕಾರಿ ಆ ಡಬ್ಬವನ್ನು ಬಿಚ್ಚಿ ನೋಡಿ 'ಕಮರ್ಷಿಯಲ್ ಪ್ರಾಡೆಕ್ಟ್ ಅಲ್ಲ ತಾನೆ?' ಎಂದು ಕೇಳಿದ್ದು, ಅದಕ್ಕೆ ಕೊಟ್ಟ ವಿವರಣೆಯಿಂದ ಅಧಿಕಾರಿ ತೃಪ್ತನಾಗದೆ ಇದ್ದದ್ದು, ಆಗ ಸಿನಿಮಾನಟ ಪ್ರಕಾಶ್‌ರೈ ಮಧ್ಯ ಪ್ರವೇಶಿಸಿ ಪಕ್ಕಾ ಸಿನಿಮಾಶೈಲಿಯಲ್ಲಿ ರಾಷ್ಟ್ರ ಪ್ರಶಸ್ತಿಯ ಸರ್ಟಿಫಿಕೇಟ್ ತೋರಿಸಿ ರಾಷ್ಟ್ರಪ್ರಶಸ್ತಿ ಬಂದ ಚಿತ್ರಗಳು ಕಮರ್ಶಿಯಲ್ ಆಗಿ ದುಡ್ಡುಮಾಡೋದನ್ನು ನೋಡಿದ್ದೀರೀನ್ರಿ?" ಎಂದರು (ಪು. ೧೦). ಸಿಂಗಪುರದಿಂದ ಸ್ಯಾನ್‌ಫ್ರಾನ್ಸಿಸ್‌ಗೆ ಹೋಗುವ ವಿಮಾನವನ್ನು ಏರಲು ಹೊರಟಾಗ ವಿಮಾನವನ್ನು ಶುಚಿ ಮಾಡುತ್ತಿದ್ದ ಸಿಬ್ಬಂದಿ ತಡೆದುದನ್ನು ಹೇಳುವಾಗ ದಿನ ಮುಂಚೆ ಬಂದ ನೆಂಟರನ್ನು ನೋಡುವಂತೆ ನೋಡಿದರು" ವಿಮಾನದಲ್ಲಿ ಅರ್ಧಕ್ಕಿಂತ ಕಡಿಮೆ ಪ್ರಯಾಣಿಕರು ಇದ್ದುದನ್ನು ಹೇಳುವಾಗ "ಕೊಟ್ರೇಶೀ ಕನಸು ಬಿಡುಗಡೆಯಾದ ದಿನ ಮೇನಕಾ ಚಿತ್ರಮಂದಿರದಲ್ಲಿ ಜನರಿದ್ದರಲ್ಲ- ಅಷ್ಟು" ಎನ್ನುವ ಲೇಖಕರ ಮಾತು (ಪು. ೧೧೨-೧೨) ನಮ್ಮ ಬಿಗಿದ ಮುಖವನ್ನು ಅರಳಿಸುತ್ತದೆ. ತಮ್ಮ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಪಾಕಿಸ್ತಾನಿ ಸುಂದರಿಯ ಭೀಕರ ನೆಗಡಿ, ಅವಳ ಭಯಾನಕ ಸೀನು, ಮೂಗು ಒರೆಸಿ ಬಿಸಾಕಿದ ಲಕ್ಷಾಂತರ ಪೇಪರ್ ನ್ಯಾಪ್‌ಕಿನ್‌ಗಳು, ಅವಳ ನೆಗಡಿಯ ತಾತ್ಕಾಲಿಕ ನಿವಾರಣೆಗೆಂದು ತಾವು ಕೊಟ್ಟ ಅಮೃತಾಂಜನ, ಬೆನಜೀರ್ ಭುಟ್ಟೋ ತಂಗಿಯಂತೆ ಕಾಣುತ್ತಿದ್ದ ಅವಳು ನೆಗಡಿ ಕಡಿಮೆಯಾದ ಮೇಲೆ ಅದರ ಕ್ರೆಡಿಟ್ಟನ್ನು ಅಮೃತಾಂಜನ್‌ಗೆ ಕೊಡದೆ ಪಕ್ಕದಲ್ಲಿದ್ದ ಖುರಾನ್ ಕೈಗೆತ್ತಿಕೊಂಡು ಕಣ್ಣಿಗೊತ್ತಿಕೊಂಡದ್ದು, ಪಾಕಿಸ್ತಾನದ ಸಾಮಾಜಿಕ ಬದುಕಿನ ಬಗೆಗೆ ಅವಳೊಂದಿಗೆ ಏನಾದರೂ ಮಾತನಾಡಬೇಕೆಂದು ನಾಗತಿಹಳ್ಳಿ ಮಾತಿಗಿಳಿದಾಗ ಅವಳಿಗೆ ಆರು ತಿಂಗಳ ಹಿಂದೆ ಮದುವೆ ಮಾಡಿಕೊಂಡು ಹೋದ ತನ್ನ ಗಂಡನನ್ನು ಕೂಡಲು ಅಮೆರಿಕೆಗೆ ಹೊರಟಿದ್ದ ವಿಷಯ ಬಿಟ್ಟರೆ ಬೇರೇನೂ ಸಾಮಾಜಿಕ ತಿಳುವಳಿಕೆ ಇರಲಿಲ್ಲವೆಂಬುದನ್ನು ತಿಳಿದು 'ಸುಂದರಿಯರೆಲ್ಲ ಜಾಣೆಯರಾಗಿರಲೇಬೇಕೆಂಬ ನಿಯಮವೆಲ್ಲಿದೆ? ಎಂಬ ಜ್ಞಾನೋದಯವಾದುದು (ಪು. ೧೨-೧೩) -ಹೀಗೆ ಗೇಲಿಮಾಡುತ್ತ ಸಾಗುವ ಪ್ರವಾಸ ಕಥನ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಭೂಕಂಪವನ್ನು ಎದುರಿಸಲು ಅಮೇರಿಕಾ ಸರ್ಕಾರ ತೆಗೆದುಕೊಂಡಿರುವ ಮುನ್ನೆಚ್ಚರಿಕೆ, ಭೂಕಂಪವಾದಾಗ ಜನತೆ ಏನು ಮಾಡಬೇಕು ಎಂಬುದರ ತಿಳಿವಳಿಕೆಯನ್ನು ನಾಗತಿಹಳ್ಳಿ ಕಲೆಹಾಕಿ ತಿಳಿಸುವರು

(ಪು. ೩೭-೩೮) ಪ್ರಕೃತಿ ವಿಕೋಪದ ಇಂತಹ ಸಂದರ್ಭಗಳಲ್ಲಿ ಅಮೆರಿಕಾದ ಜನತೆ, ಮಾಧ್ಯಮಗಳು ಹೇಗೆ ಎಚ್ಚರ ವಹಿಸುತ್ತವೆ; ಜನತೆ ಹೇಗೆ ಉದಾರವಾಗಿ ಸ್ಪಂದಿಸುತ್ತಾರೆ ಎಂಬುದನ್ನು ತಿಳಿಸುತ್ತಾ ಭಾರತದಲ್ಲಿ ಇಂತಹ ಸಂದರ್ಭದಲ್ಲಿ ಜನತೆ ಹೇಗೆ ವರ್ತಿಸುತ್ತದೆ ಎಂಬುದನ್ನು ತುಲನೆ ಮಾಡುವರು: "...ನಮ್ಮಲ್ಲಿ ಮಾತುಗಳು ಭಾವನಾತ್ಮಕ ನೆಲೆಯಲ್ಲೇ ಖರ್ಚಾಗುತ್ತವೆ. ದಾನ ಕೊಡುವವರೇ ವಿರಳ. ದೇವರು, ಧರ್ಮ, ದೇವಸ್ಥಾನ ಕಟ್ಟಲು ಮುಂದಾಗುವಷ್ಟು ಪ್ರಮಾಣದಲ್ಲಿ ನಿಸರ್ಗ ದುರಂತಗಳಾದಾಗ ಜನ ಮುಂದೆ ಬಂದು ನೆರವಾಗುವುದಿಲ್ಲ. ಮುಂದೆ ಬಂದು ನೆರವು ನೀಡಿದ ಹಣ, ವಸ್ತುಗಳನ್ನೂ ದುರುಪಯೋಗಪಡಿಸಿಕೊಳ್ಳುವ ಖದೀಮ ನಾಯಕರು ಬೇರೆ ಎಂದು ಟೀಕಿಸುವರು (ಪು. ೩೮). ಫೀನಿಕ್ಸ್ ನಗರದಿಂದ ೬೦ ಮೈಲಿ ದೂರದ 'ಟಿಂಗ್ ಪಾಲೋವರ್ಡಿ ನ್ಯೂಕ್ಲಿಯರ್' ಜನರೇಟಿಂಗ್ ಸ್ಟೇಷನ್ ಬಗೆಗೆ ಕೊಡುವ ಮಾಹಿತಿ, ಅದರ ಸೀನಿಯರ್ ಡಿಸೈನ್ ಎಂಜನಿಯರ್ ಹಿರೀಸಾವೆ ರಾಮಚಂದ್ರರ ಸಾಧನೆಯ ಬಗೆಗಿನ ಮಾಹಿತಿಯ ಜೊತೆಗೆ ಕರ್ನಾಟಕ ಕೈಗಾ ಅಣುಸ್ಥಾವರದ ಗೋಳ ಬಿರುಕುಬಿಟ್ಟು ಆದಂತಹ ನಷ್ಟ, ಈ ನಷ್ಟಕ್ಕೆ ಕಾರಣರಾದ ಭ್ರಷ್ಟ ವ್ಯವಸ್ಥೆಯ ಬಗೆಗೆ ನಾಗತಿಹಳ್ಳಿ ವಿವರವಾಗಿ ಪ್ರಸ್ತಾಪಿಸಿರುವರು (ಪು. ೪೦-೪೬). ನಯಾಗಾರಾ ಜಲಪಾತದ ವರ್ಣನೆಯ ಸೊಗಸು ಓದಿಯೇ ಅನುಭವಿಸಬೇಕು. ನಾಗತಿಹಳ್ಳಿ ನಮಗೆ ಹೆಚ್ಚು ಹತ್ತಿರವಾಗುವುದು ಇಂತಹ ವರ್ಣನಾಭಾಗಗಳಲ್ಲಿ.

ನಾಗತಿಹಳ್ಳಿಯವರ ಈ ಪ್ರವಾಸ ಕಥನದ ಇನ್ನೊಂದು ಮುಖ್ಯಭಾಗ 'ಕೊಟ್ರೇಶೀ ಕನಸು' ಚಿತ್ರವನ್ನು ಕರ್ನಾಟಕದಿಂದ ವಲಸೆ ಹೋದ ಕನ್ನಡಿಗರಿಗೆ ತೋರಿಸಿದ್ದು; ಊರಿಂದೂರಿಗೆ ಪಯಣಿಸುವಲ್ಲೂ ಅನೇಕ ಮಂದಿ ಮಿತ್ರರಾದದ್ದು ಅವರ ಪರಿಚಯ, ಆತಿಥ್ಯದ ವಿವರಗಳು ದಾಖಲಾಗಿರುವುದು; ಡಾ. ಗೋವಿಂದಸ್ವಾಮಿಯವರ ವ್ಯಕ್ತಿ ಚಿತ್ರ ಚೆನ್ನಾಗಿ ಬಂದಿದೆ (ಪು. ೮೩-೮೪).

ನಾಗತಿಹಳ್ಳಿಯವರ ಜನಪ್ರಿಯ ಚಿತ್ರ ಅಮೆರಿಕಾ! ಅಮೆರಿಕಾ!! ದ ಚಿತ್ರೀಕರಣ ವಿವರಗಳು ಈ ಪ್ರವಾಸ ಕಥನದ ಒಂದು ಭಾಗವಾಗಿ ಬಂದಿದೆ (ಪು. ೮೭-೧೪೫).

ಸ್ಯಾನ್‌ಹುಸೆ ನಗರದಲ್ಲಿ ಬೆಳಗಿನ ನಾಲ್ಕಕ್ಕೇ ಮನೆ ಬಿಟ್ಟು ಜಾಗಿಂಗ್‌ಗೆ ಹೊರಟ ನಾಗತಿಹಳ್ಳಿ ದಾರಿತಪ್ಪಿದರು. ಪರ್ಸ್ ತಂದಿರಲಿಲ್ಲ, ಮನೆಯ ಏಳು ಅಂಕಿಯ ದೂರವಾಣಿ ಸಂಖ್ಯೆಯ ನೆನಪೂ ಬರುತ್ತಿಲ್ಲ. ಎದುರಿಗೆ ಬರುತ್ತಿದ್ದ ದಾರಿಹೋಕನೊಬ್ಬ ಬರುತ್ತಿರುವುದನ್ನು ಕಂಡ ನಾಗತಿಹಳ್ಳಿ ದಾರಿ ಕೇಳಲು ತಮಗೆ ಬರುತ್ತಿದ್ದ ಇಂಗ್ಲೀಷ್‌ನ್ನು ಹೊಂದಿಸಿಕೊಳ್ಳುತ್ತಿರುವಾಗಲೇ, ಆತ 'ಕುಡ್ ಯು ಪ್ಲೀಸ್ ಗಿವ್ ಮಿ ಟ್ವೆಂಟಿಫೈವ್ ಸೆಂಟ್ಸ್' ಅಂದ. ಆ ನೋವಿನಲ್ಲೂ ನಗು ಬಂತು. 'ಸಾರಿ ಐ ಡೋಂಟ್ ಹ್ಯಾವ್'

ಎಂದು ನಾಗತಿಹಳ್ಳಿ ಹೇಳಿ ಅವನನ್ನು ಬೀಳ್ಕೊಟ್ಟರು (ಪು. ೧೯) -ಇಂತಹ ನಗೆಬುಗ್ಗೆಗಳು ಈ ಪ್ರವಾಸ ಕಥನದ ಅವಿಭಾಜ್ಯ ಭಾಗ.

ಕೊಲರೊಡೋ ನದಿ ಸಾವಿರಾರು ವರ್ಷಗಳಿಂದ ಹರಿದು ಕೊರೆದು ಉಂಟುಮಾಡಿರುವ ವಿನ್ಯಾಸಗಳೇ ಗ್ರ್ಯಾಂಡ್ ಕ್ಯಾನಿಯನ್. ೧,೩೦,೦೦೦ ಚ.ಕಿ.ಮೀ. ವ್ಯಾಪ್ತಿ ಹರಡಿರುವ ಇದರ ಕೊಂಚ ಭಾಗವನ್ನು ನೋಡಬೇಕಾದರೂ ವಿಮಾನ ಏರಬೇಕು. ಜಾನ್ ವೆಸ್ಲಿ ಪಾವೆಲ್" ಇದು ದೇವರ ಗ್ರಂಥಾಲಯ; ಈ ಬಂಡೆಗಳು ದೇವರು ಬರೆದ ಮಹಾಕಾವ್ಯದ ಶಿಲ್ಪ ಸಂಪುಟಗಳು" ಎಂದು ಉದ್ಗಾರ ತೆಗೆದಿರುವುದನ್ನು ನಾಗತಿಹಳ್ಳಿ ಉಲ್ಲೇಖಿಸುವರು. ವಿಮಾನವೇರಿ ಗ್ರ್ಯಾಂಡ್ ಕ್ಯಾನಿಯನ್ ನೋಡಿದ ತಮ್ಮ ಅನುಭವವನ್ನು ನಾಗತಿಹಳ್ಳಿ ಸೊಗಸಾಗಿ ನಿರೂಪಿಸಿರುವರು. "ಗ್ರ್ಯಾಂಡ್ ಕ್ಯಾನಿಯನ್ ನೋಡಲು ವಿಮಾನವೇ ಬೇಕೆಂದಿಲ್ಲ. ಶಕ್ತಿ, ಸಮಯವಿದ್ದರೆ ಕಾಲುನಡಿಗೆಯಲ್ಲೂ ನೋಡಬಹುದು. ಅನೇಕ view point ಗಳಿವೆ. ಹೇಸರಗತ್ತೆಗಳ ಮೇಲೂ ಹೋಗಿ ನೋಡಬಹುದು. ಹೇಗೆ ಹೋಗುತ್ತೇವೆ ಎಂಬುದು ಮುಖ್ಯವಲ್ಲ; ಹೇಗೆ ನೋಡುತ್ತೇವೆ ಎಂಬುದಷ್ಟೇ ಮುಖ್ಯ..." ಎಂದಿರುವರು (ಪು. ೨೭). ಹಾಗೆಯೇ ಮಿಸ್ಸರಿ ಸ್ಟಾಟ್‌ನ ವರ್ಣನೆ ಚೆನ್ನಾಗಿದೆ. ಸ್ಯಾನ್‌ಫ್ರಾನ್ಸಿಸ್ಕೋ ಭೂಕಂಪದಿಂದ ನಾಶವಾಗಬಹುದನ್ನುವ ಊಹೆ. ಆದರೂ ಅಲ್ಲಿನ ಜನ ಮಾತ್ರ ಯಾವ ಆತಂಕಕ್ಕೂ ಒಳಗಾಗದ ಹಗ್ಗದ ಮೇಲೆ ಜಗಿಯುತ್ತ, ದೋಣಿ ಮೇಲೆ ತೇಲುತ್ತ ಆರಾಮವಾಗಿದ್ದರೆ. ವರ್ತಮಾನದಲ್ಲಿ ಸುಖಿಸುವ ಅವರಿಗೆ ಈ ಕ್ಷಣವಷ್ಟೇ ಮುಖ್ಯ ಎಂದು ನಾಗತಿಹಳ್ಳಿ ಹೇಳುವರು (ಪು. ೩೫).

ನಾಗತಿಹಳ್ಳಿ ಅಮೆರಿಕಾವನ್ನು ನೋಡುವ ಮೂಲಕ ಅದರ ವೈಶಿಷ್ಟ್ಯಗಳನ್ನು ಗಮನಿಸುತ್ತ ಬರುವರು. ಅಮೆರಿಕಾದ ಪತ್ರಿಕಾ ಮಾಧ್ಯಮ, ಶಿಕ್ಷಣಕ್ರಮ, ವಿಶ್ವವಿದ್ಯಾಲಯಗಳು, ಅಮೆರಿಕದಲ್ಲಿ ನೆಲೆಸಿರುವ ಭಾರತೀಯರು ಮತ್ತು ಅವರ ಸಮಸ್ಯೆಗಳು, ವಂತಿಕೆ ವಸೂಲಿಗೆ ಬರುವ ಎಲ್ಲ ಜಾತಿಯ ಸ್ವಾಮಿಗಳು ಹಾಗೂ ಅವರ ಮಂಗಾಟಗಳು -ಇವನ್ನು ಒಂದು ಅಧ್ಯಾಯದಲ್ಲಿ ಚರ್ಚಿಸಿದರೆ, ಇನ್ನೊಂದು ಅಧ್ಯಾಯದಲ್ಲಿ ಅಮೆರಿಕನ್ನರ ಜೀವನ ಹಾಗೂ ಹವ್ಯಾಸಗಳ ಪ್ರಸ್ತಾಪ ಮಾಡುವರು (ಪು. ೪೬-೧೮೭) ಅಮೇರಿಕದಲ್ಲಿ ನೆಲೆಸಿರುವ ಕನ್ನಡಿಗರು ಹಾಗೂ ಅವರ ಕನ್ನಡ ಸಂಘಗಳ ಬಗೆಗಿನ ಪರಿಚಯ ಒಂದು ಅಧ್ಯಾಯದಲ್ಲಿ ಬಂದಿದೆ. ನಗುವಿನ ಬುಗ್ಗೆಯಾಗಿರುವ ಪುತಿನ ಮಗಳು ಅಲಮೇಲು ಹಾಗೂ ಅವರ ಪತಿ ನಾರಾಯಣ್ ಅಮೆರಿಕನ್ನಡ ಪತ್ರಿಕೆಯ ಹರಿಹರೇಶ್ವರ - ನಾಗಲಕ್ಷ್ಮಿ ದಂಪತಿಗಳು ನೆನಪಿನಲ್ಲಿ ಉಳಿಯುವರು. ನ್ಯೂಯಾರ್ಕಿನ ನೈಟ್‌ಕ್ಲಬ್‌ನಲ್ಲಿ ನಗ್ನಸುಂದರಿಯೊಬ್ಬಳ ಜೊತೆ ನಡೆಸಿದ

ಸಂದರ್ಶನ; ಹಾಲಿವುಡ್, ಆಸ್ಕರ್ ಪ್ರಶಸ್ತಿ, ಡಿಸ್ನಿಲ್ಯಾಂಡ್, ವಾರ್ನರ್‌ಬ್ರದರ್ ಸ್ಟುಡಿಯೋ, ಅಮೆರಿಕಾದ ಶ್ವೇತ ಭವನ, ನ್ಯಾಷನಲ್ ಗ್ಯಾಲರಿ ಆಫ್ ಆರ್ಟ್, ಇವೆಲ್ಲ ವಿವರಣೆಗಳೊಂದಿಗೆ ದಾಖಲಾಗಿದೆ.

ನಾಗತಿಹಳ್ಳಿಯವರ ಈ ಪ್ರವಾಸ ಕಥನ ನನಗೆ ಮುಖ್ಯವಾಗುವುದು ಅದರ ಸರಸ ನಿರೂಪಣೆ, ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸುವಲ್ಲಿ ಅದು ನಿರ್ವಹಿಸಿರುವ ಪಾತ್ರ ಈ ಎರಡು ಕಾರಣಗಳಿಗಾಗಿ. ಇಲ್ಲಿ ಸಮೃದ್ಧ ಮಾಹಿತಿಗಳಿವೆ ನಿಜ. ಆದರೆ, ಬೇರೆ ಪ್ರವಾಸ ಕಥನಗಳಂತೆ ಮಾಹಿತಿಗಳಿಂದಲೇ ತುಂಬಿಹೋಗಿಲ್ಲವೆನ್ನುವ ಸಮಾಧಾನ.'

ಮಾನವಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಕೆ.ಜಿ. ಗುರುಮೂರ್ತಿಯವರು **ಅಮೆರಿಕೆಯಲ್ಲಿ ಪ್ರವಾಸ** ಎಂಬ ಕೃತಿ ರಚಿಸಿರುವರು. ಅಮೆರಿಕೆಯ ವರ್ಜಿನಿಯಾ ರಾಜ್ಯದ ವಿಲಿಯಮ್ಸ್ ಬರ್ಗ್‌ನಲ್ಲಿ ಸೇರಲಿದ್ದ ಒಂದು ಅಂತರರಾಷ್ಟ್ರೀಯ ಸಮಾವೇಶಕ್ಕೆ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಲೇಖಕರು ಹೋಗಿದ್ದರು. ಅಮೆರಿಕಾದಲ್ಲಿ ಅದರ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗ ನೆಲೆಸಿರುವರು. ಅಮೆರಿಕಾಕ್ಕೆ ಹೋಗುವ ಮೊದಲು ಮತ್ತು ಅಲ್ಲಿಗೆ ಹೋದಮೇಲೆ ಸಾಕಷ್ಟು ಮಾಹಿತಿ ಸಂಗ್ರಹಿಸಿ ಅಪಾರ ಶ್ರದ್ಧೆಯಿಂದ ಈ ಪ್ರವಾಸ ಕಥನ ಸಿದ್ಧಪಡಿಸಿರುವರು. "ನನ್ನ ಈ ಒಂದು ಸಣ್ಣ ಪ್ರವಾಸ ಹಾಗೂ ಪುಸ್ತಕ ಈ ಅನ್ಯಸಂಸ್ಕೃತಿಯೊಂದನ್ನು ಕನ್ನಡಿಗರಿಗೆ ಪರಿಚಯಸುವಲ್ಲಿ ಮಾಡಿದ ಒಂದು ಸಣ್ಣ, ಆದರೆ, ಪ್ರಾಮಾಣಿಕ ಪ್ರಯತ್ನ ಎಂದು ನಮ್ರವಾಗಿ ಹೇಳಬಯಸುತ್ತೇನೆ" ಎಂದು ಲೇಖಕರು 'ಪ್ರಸ್ತಾಪನೆ'ಯಲ್ಲಿ ಹೇಳಿಕೊಂಡಿರುವರು ಪುಸ್ತಕದ ಪ್ರಾರಂಭದ ೪೩ ಪುಟ ಪಾಸ್‌ಪೋರ್ಟ್, ವೀಸಾ, ಟಿಕೆಟ್ ಕಾದಿರಿಸುವುದು -ಇತ್ಯಾದಿಗಳ ಪುರಾಣವೇ ಆಗಿದೆ. ಇಷ್ಟೆಲ್ಲ ವಿವರಗಳನ್ನು ದಾಖಲಿಸುವುದರ ಅಗತ್ಯ ಭಾರತದಲ್ಲಿ ವಿದೇಶಗಳಿಗೆ ಪ್ರವಾಸ ಮಾಡುವುದು ಎಷ್ಟು ಪ್ರಯಾಸ ಎನ್ನುವುದನ್ನು ತಿಳಿಸಲಿಕ್ಕಾಗಿ.

ಡಾ. ಕೆ.ಜಿ. ಗುರುಮೂರ್ತಿಯವರದು ವಿವರಣಾತ್ಮಕ ಶೈಲಿ. ಎಲ್ಲವನ್ನೂ ತಿಳಿಯ ಹೇಳುವ ಉತ್ಸಾಹ. ಉದಾಹರಣೆಗೆ ಅವರು ವಿಮಾನಯಾನದ ಅನುಭವವನ್ನು ಸು. ೧೯ ಪುಟಗಳಲ್ಲಿ (ಪು. ೫೧-೬೯) ದಾಖಲಿಸಿರುವರು. ಫಿಲಿಫೈನ್ಸ್‌ನಲ್ಲಿ ಉನ್ನತ ಶಿಕ್ಷಣ ಪಡೆದಿದ್ದ ಲೇಖಕರು ಸ್ನೇಹಪರರು. ವಿಮಾನಯಾನದಲ್ಲಿ ಪರಿಚಯವಾದ ಫಿಲಿಪೈನ್ಸ್‌ದೇಶದ ಗಗನಸಖಿ ಒಂದು ಕ್ಯಾಂಟ್ ಸಿಗರೇಟು ಪ್ಯಾಕ್ ಕಾಣಿಕೆಯಾಗಿ ಕೊಡಹೊರಟಾಗ ಯೂರೋಪಿನ ದೇಶಗಳಲ್ಲಿ ಅದರಲ್ಲೂ ಸ್ಪೇನಿನಲ್ಲಿ ಮಗ ಹುಟ್ಟಿದಾಗ ಸಿಹಿ ಹಂಚುವಂತೆ ಸಿಗಾರು ಹಂಚುವುದನ್ನು ನೆನಪಿಸಿ ನಗೆ ಚಾಟಿಕೆಯ ಮೂಲಕ ಅವಳಿಗೆ ಚುರುಕು ಮುಟ್ಟಿಸುವರು. ಅವಳು ನಾಚಿ ನೀರಾಗಿ 'ನೀನೊಬ್ಬ ಕೆಟ್ಟ ಮುದುಕಪ್ಪ'

ಎಂದು ಹುಸಿಗೋಪ ತೋರುವಳು. ಅಷ್ಟಕ್ಕೇ ಬಿಡದೆ ಅವಳನ್ನು ಮುದುಕಪ್ಪ ಎನ್ನುತ್ತೀಯ, ಪ್ಯಾಕ್‌ಗಟ್ಟಲೆ ಸಿಗರೇಟು ಕೊಡಬರುತ್ತೀಯ ಇವನ್ನು ಸೇದಿ ನಿನ್ನ ದೇಶದ ಈ ಸ್ನೇಹಿತ ಬೇಗ ಸಾಯಲಿ ಎಂದು ನಿನ್ನ ಆಸೆಯೇ?' ಎಂದು ಕೆಣಕಿ ಸಿಗರೇಟಿಗೆ ಬದಲಾಗಿ ಒಂದು ಕೋಲಾ ಡಬ್ಬಿ ಪಡೆಯುವರು ಆಕೆಯಿಂದ ಉಚಿತವಾಗಿ (ಪು. ೭೯).

ಈ ಪ್ರವಾಸ ಕಥನದ ವೈಶಿಷ್ಟ್ಯವೆಂದರೆ ಎರಡು ಭಿನ್ನ ಸಂಸ್ಕೃತಿಗಳ ಪರಿಸರದಲ್ಲಿ ಬೆಳೆದ ಅಮೆರಿಕನ್ನರು ಹಾಗೂ ಭಾರತೀಯರ ಜೀವನಶೈಲಿಯ ತುಲನಾತ್ಮಕ ಅಧ್ಯಯನ ಅಧ್ಯಾಯ ನಾಲ್ಕು ಮತ್ತು ಐದನೆಯದರಲ್ಲಿದೆ. ಆರನೆಯ ಅಧ್ಯಾಯದಲ್ಲಿ ಅಮೆರಿಕೆಯಲ್ಲಿ ನೆಲೆಸಿರುವ ಭಾರತೀಯರು ಹಾಗೂ ಅವರ ಸಮಸ್ಯೆಗಳ ಬಗೆಗೆ ವಿಶ್ಲೇಷಣೆ ನಡೆಸಿರುವರು. ಅಮೆರಿಕದ ಜೀವನಶೈಲಿಗೆ ಹೊಂದಿಕೊಳ್ಳಲಾಗದ ವಿವಾಹದ ಭಾರತೀಯ ಗಂಡು ಹಾಗೂ ಹೆಣ್ಣು ಭಾರತಕ್ಕೆ ಮರಳಿದ ಎರಡು ಘಟನೆಗಳ ವಿವರ ಎರಡೂ ದೇಶಗಳ ಸಾಮಾಜಿಕ ಅಧ್ಯಯನಕ್ಕೆ ನೇರವಾಗಿ ಸಂಬಂಧಪಡುತ್ತವೆ (ಪು. ೧೧೫-೧೧೬). ಅಮೆರಿಕದ ಅನಿವಾಸಿ ಭಾರತೀಯರ ಮದುವೆಯ ಸಮಸ್ಯೆಗಳು, ವೃದ್ಧಾಪ್ಯದ ಸಮಸ್ಯೆಗಳು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಗಾಗಿವೆ. ವಿದೇಶದಲ್ಲಿ ನೆಲೆಸಿದ್ದ ಕರ್ನಾಟಕ ಮೂವರು (ಅಯ್ಯನದೇವ ಅಂಗಡಿ, ಡಾ. ಮೆಣಸಿನಕಾಯಿ ಹಾಗೂ ಡಾ. ಈಶ್ವರನ್) ತಮ್ಮ ಇಳಿವಯಸ್ಸಿನಲ್ಲಿ ಭಾರತಕ್ಕೆ ನೆಲೆಸಲು ಬಂದು ಇಲ್ಲಿನ ಪರಿಸರಕ್ಕೆ ಹೊಂದಿಕೊಳ್ಳಲಾಗದೆ ಕಷ್ಟ ಅನುಭವಿಸಿದ್ದರ ವಿವರ ಆರನೆಯ ಅಧ್ಯಾಯನ ಕೊನೆಯಲ್ಲಿ ಬಂದಿದೆ (ಪು. ೧೨೩-೧೨೫). ಡಾ. ಕೆ.ಜಿ. ಗುರುಮೂರ್ತಿ-ಯವರು ಮಾನವಶಾಸ್ತ್ರದ ಪ್ರಾಧ್ಯಾಪಕರಾಗಿ ಅಮೆರಿಕಾವನ್ನು ಸುತ್ತಿದ್ದರಿಂದಾಗಿ ಅವರ ಪ್ರವಾಸ ಕಥನ ಪ್ರವಾಸಿಯೊಬ್ಬನು ನೋಡಿದ ಸ್ಥಳಗಳ ಅನುಭವಕಥನಕ್ಕಿಂತ ಎರಡು ಸಂಸ್ಕೃತಿಗಳ ನಡುವಿನ ಸಂಘರ್ಷ ಹಾಗೂ ಸಾಮಾರಸ್ಯದ ಕಥನವೇ ಹೆಚ್ಚಾಗಿದೆ. ಅವರ ಅಮೆರಿಕನ್ನರ ಜೀವನವಿಧಾನವನ್ನು ಓರ್ವ ಮಾನವಶಾಸ್ತ್ರಜ್ಞರಾಗಿ ವಿವೇಚಿಸುವರು. ಅವರು ಕುತೂಹಲಾಸಕ್ತಿಗಳು ವ್ಯಕ್ತಿಕೇಂದ್ರಿತವಾಗುವುದರಿಂದ ವ್ಯಕ್ತಿ ಸಮಸ್ಯೆಗಳ ವಿಶ್ಲೇಷಣೆಗೆ ಅವರು ತೊಡಗುವರು. ಅಲ್ಲಿ ವ್ಯಕ್ತಿ ಹಾಗೂ ಸಮಾಜ ಸಮಸ್ಯೆಯ ಮೂಲ ನೆಲೆಯಾಗಿರುವುದನ್ನು ಅವರು ಗಮನಿಸುವರು. ಕಾಲೇಜು ಶಿಕ್ಷಣಕ್ಕಾಗಿ ಟ್ಯಾಕ್ಸಿ ನಡೆಸುವ ಹೆಣ್ಣುಮಗಳೊಬ್ಬಳು ತನ್ನ ಧ್ಯೇಯದ ಸಾಧನೆಗಾಗಿ ತನ್ನ ಮದುವೆಯನ್ನೂ ಮುಂದೂಡಿ ಹೆಚ್ಚು ದುಡಿಯುತ್ತಿರುವ ಘಟನೆಯನ್ನು ಪ್ರತ್ಯಕ್ಷ ಕಂಡ ಲೇಖಕರು ಅಮೆರಿಕದ ಕುಟುಂಬ ವ್ಯವಸ್ಥೆಯಲ್ಲಿನ ಒಡಕನ್ನು- ವಿವಾಹ ವಿಚ್ಛೇದನವನ್ನು- ಹಾಗೂ ಅದರ ಬೆನ್ನಹಿಂದೆಯೇ ಬರುವ ಸಮಸ್ಯೆಗಳ ಸ್ವರೂಪವನ್ನು ಭಾರತೀಯ ಕೌಟುಂಬಿಕ ವ್ಯವಸ್ಥೆಯೊಂದಿಗೆ ವಿಶ್ಲೇಷಿಸುವರು, ತುಲನೆ ಮಾಡುವರು (ಪು. ೧೩೬-೧೪೧).

ಒಮ್ಮೊಮ್ಮೆ ಈ ಪ್ರವಾಸ ಕಥನದಲ್ಲಿ ವಿಷಯಕ್ಕೆ ಹೊರತಾದ ಚರ್ಚೆ ತಲೆಹಾಕಿ ಬಿಡುತ್ತದೆ. ಉದಾಹರಣೆಗೆ ದಿವೋನ್ ನಗರದ ಗಾಂಧೀಜಿ ರಸ್ತೆಯ ಬಗ್ಗೆ ವಿವರ ನೀಡುತ್ತ ಲೇಖಕರು ಗಾಂಧೀಜಿಯ ಕಡೆಗೆ ವಿಷಯಾಂತರ ಮಾಡಿಬಿಡುವರು (ಪು. ೧೪೮-೧೫೭).

ಅಮೇರಿಕಾದ ಮನೆಗಳು, ಶಿಕಾಗೋದ ವಸ್ತುಸಂಗ್ರಹಾಲಯಗಳು, ಶೀದ್ ಜಲಚರಪ್ರಾಣಿ ಸಂಗ್ರಹಾಲಯ, ಶಿಕಾಗೋ ಫೀಲ್ಡ್ ಮ್ಯೂಸಿಯಂ, ಆಡ್ಲರ್ ತಾರಾ ವೀಕ್ಷಣಾಲಯ, ವಿಸ್ಕಾನ್‌ಸಿನ್ ಡೆಲ್ಸ್‌ನ ಪ್ರವಾಸಿ ಸ್ಥಳಗಳು, ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಪಶುಪಾಲನೆ, ಕ್ಯಾಲಿಫೋರ್ನಿಯಾ ರೈತರ ಮೇಳ, ನೆವಾಡ ರಾಜ್ಯದ ಜೂಜು, ಸೂಳೆಗಾರಿಕೆ, ಅರೆನಗ್ನ ನೃತ್ಯಗಳು, ಸ್ಯಾನ್‌ಫ್ರಾನ್ಸಿಸ್ಕೋದ ಸೇತುವೆಗಳು ಹಡ್ಸನ್ ದ್ವೀಪದಲ್ಲಿನ ಸ್ವತಂತ್ರದೇವತೆಯ ವಿಗ್ರಹ, ಎಲ್ಲಿಸ್‌ದ್ವೀಪದ ವಲಸೆಗಟ್ಟೆಯ ಸ್ಮಾರಕ, ನ್ಯೂಯಾರ್ಕಿನ ಬ್ರಾಡ್‌ವೇ ಶೋಗಳು, ಅಮೆರಿಕನ್ ಮ್ಯೂಜಿಯಂ ಆಫ್ ನ್ಯಾಚುರಲ್ ಹಿಸ್ಟರಿ ವಸ್ತುಸಂಗ್ರಹಾಲಯ, ಮ್ಯೂಜಿಯಂ ಆಫ್ ಮಾಡ್ರನ್ ಆರ್ಟ್ ಸಂಗ್ರಹಾಲಯ -ಹೀಗೆ ವೈವಿಧ್ಯಮಯವಾದ ವಿಷಯಗಳು ಈ ಪ್ರವಾಸಕಥನದ ಉತ್ತರಾರ್ಧದಲ್ಲಿ ವಿವರಣೆ ಪಡೆದುಕೊಂಡಿವೆ. ಇಲ್ಲಿನ ಲೇಖಕರ ಕುತೂಹಲಾಸಕ್ತಿ, ವಿಷಯ ಸಂಗ್ರಹಣೆ ಮೆಚ್ಚುವಂತಹದ್ದು.

ವೆಂಕಟಸ್ವಾಮಿಯವರ **ಅಮೇರಿಕಾದಲ್ಲಿ ನನ್ನ ಅನುಭವಗಳು** ಹೆಸರೇ ಹೇಳುವಂತೆ ಅಮೇರಿಕಾ ದೇಶದ ಪ್ರವಾಸ ಕಥನ. ಅಮೇರಿಕಾಕ್ಕೆ ಅವರದು ಖಾಸಗಿ ಭೇಟಿ - ಮಗಳು ಅಳಿಯರ ಭೇಟಿಯ ನೆಪದಲ್ಲಿ ಆದುದು. ಲೇಖಕರು "ಅಮೇರಿಕಾದಲ್ಲಿದ್ದದ್ದು ೪೭ ದಿನಗಳು ಮಾತ್ರ. ಸುತ್ತಾಡಿದಂತಹ ಪ್ರದೇಶ, ಭೇಟಿ ನೀಡಿದಂತಹ ಸ್ಥಳಗಳು ಕೇವಲ ಶೇಕಡಾ ೧೦ ಇರಬಹುದು. ಆದರೂ ದೇಶದ ಸಮಗ್ರ ಚಿತ್ರ ನನ್ನ ಕಣ್ಣು ಕಟ್ಟಿದಂತೆ ಭಾಸವಾಗುತ್ತಿತ್ತು. ಅಂದಮಾತ್ರಕ್ಕೆ ದೇಶದ ಪ್ರತಿಯೊಂದು ವಿಷಯ ನನಗೆ ಅರಿವಾಗಿತ್ತು ಎಂದರ್ಥವಲ್ಲ" ಎಂದು ಲೇಖಕರೇ ಒಂದೆಡೆ ಹೇಳಿರುವರು (ಪು.೧೨೨). ಅಮೇರಿಕಾವನ್ನು ನೋಡಿದ ಮೇಲೆ ತಮ್ಮ ಅನಿಸಿಕೆಗಳಲ್ಲಿ ಲೇಖಕರು ಪ್ರವಾಸಕಥನದ ಕೊನೆಯಲ್ಲಿ ಕೊಟ್ಟಿರುವರು. ಅವುಗಳಲ್ಲಿ ಹೆಚ್ಚಿನವು ಸಾಮಾನ್ಯ ನೆಲೆಯ ಸಂಗತಿಗಳು. ಲೇಖಕರು ತಾವು ನೋಡಿದ ಸ್ಥಳಗಳ ವಿವರಗಳನ್ನು ವಿಸ್ತಾರವಾಗಿ ನೀಡಿಲ್ಲದಿರುವುದು ಮೆಚ್ಚುವ ಅಂಶ. ಏಕೆಂದರೆ, ಅಮೇರಿಕಾದ ಪ್ರವಾಸ ಕಥನಗಳಲ್ಲಿ ಪ್ರವಾಸಿತಾಣಗಳ ಬಗೆಗೆ ದೊರೆಯುವ ಲಿಖಿತ ಮಾಹಿತಿಗಳನ್ನು ಬಳಸಿಕೊಂಡು ವಿವರವಾಗಿ ವರ್ಣನೆ ಮಾಡಿರುವವರೇ ಹೆಚ್ಚು. ಈ ಕಚ್ಚಾ ಸಾಮಗ್ರಿಗಳನ್ನು ಎಷ್ಟು ಬೇಕೋ ಅಷ್ಟನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿರುವವರು ಕಡಿಮೆ. ವೆಂಕಟಸ್ವಾಮಿಯವರ ಪ್ರವಾಸದ ಅನುಭವಗಳು

ಈ ದೃಷ್ಟಿಯಿಂದ ಮೆಚ್ಚುವಂತಹದ್ದು. ನಯಾಗಾರಾ ಜಲಪಾತ ನೋಡಿದಾಗ ಅವರಿಗೆ ನಮ್ಮ ರಾಜ್ಯದ ಜೋಗ್, ಶಿವನಸಮುದ್ರ ಜಲಪಾತಗಳು ನೆನಪಾಗುತ್ತವೆ. ಇವು ಸ್ವಾಭಾವಿಕವಾಗಿ ಅತಿ ಎತ್ತರದಿಂದ ಧುಮುಕುವುದನ್ನು ನೋಡಲು ಬಹಳ ಸುಂದರವಾಗಿರುತ್ತವೆ. ಆದರೆ, ಇವು ನಯಾಗಾರದಷ್ಟು ಪ್ರಸಿದ್ಧಿ ಪಡೆದಿಲ್ಲ. ಅದಕ್ಕೆ ಸಮರ್ಪಕವಾದ ಕಾರಣಗಳನ್ನೂ ಲೇಖಕರು ಕೊಟ್ಟಿರುವರು (ಪು. ೧೦೩). ಪಾಸ್ಪೋರ್ಟ್, ವೀಸಾ ಪಡೆಯಲು ಅನುಸರಿಸಬೇಕಾದ ವಿಧಾನ, ಸರಕಾರಿ ಸೇವೆಯಲ್ಲಿರುವವರು ಅನುಸರಿಸಬೇಕಾದ ಕ್ರಮ, ವೀಸಾವು ಕಳೆದುಹೋದಾಗ ಅವುಗಳ ನಕಲು ಪಡೆಯಲು ಅನುಸರಿಸಬೇಕಾದ ವಿಧಾನ, ಪ್ರವಾಸದ ಪೂರ್ವಸಿದ್ಧತೆ - ಇಂತಹ ಅನವಶ್ಯಕ ವಿವರಗಳು ಈ ಪ್ರವಾಸ ಕಥನದಲ್ಲಿ ತುಂಬಿಹೋಗಿದೆ. ಅಮೇರಿಕಾದಲ್ಲಿ ರಸ್ತೆ ಕಾನೂನನ್ನು ಎಷ್ಟು ಕಡ್ಡಾಯವಾಗಿ ಪಾಲಿಸುತ್ತಾರೆ ಎಂಬುದಕ್ಕೆ ಲೇಖಕರು ತಪ್ಪುದಂಡ ಕೊಟ್ಟ ನಿದರ್ಶನವೊಂದನ್ನು ಕೊಟ್ಟಿರುವರು (ಪು.೫೪). ನಮ್ಮ ದೇಶದಲ್ಲಿ ಸಾರ್ವಜನಿಕ ಸೌಲಭ್ಯಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವರು. ಆ ಹಣ ಸ್ವಲ್ಪವೂ ಪೋಲಾಗದೆ ಖರ್ಚಾದರೆ ಅಮೇರಿಕಾದಲ್ಲಿರುವ ವ್ಯವಸ್ಥೆ ಇಲ್ಲಿಯೂ ಸಹ ನಿರ್ಮಾಣ ಮಾಡಬಹುದು. ಆದರೆ ನಮ್ಮ ಸಾಮಾಜಿಕ ಭ್ರಷ್ಟ ವ್ಯವಸ್ಥೆ ಇದಕ್ಕೆ ಹೇಗೆ ಅಡ್ಡಿಯಾಗಿದೆ ಎಂಬುದನ್ನು ವೆಂಕಟಸ್ವಾಮಿಯವರು ಚೆನ್ನಾಗಿ ವಿವರಿಸಿರುವರು (ಪು. ೫೨,೫೩). ನಮ್ಮ ದೇಶದ ವಾಸ್ತವ ಸ್ಥಿತಿಯನ್ನು ಸಮೃದ್ಧ ದೇಶವಾದ ಅಮೇರಿಕಾದ ಜೊತೆಗೆ ಹಲವೆಡೆ ತುಲನೆ ಮಾಡುವರು. ತಮ್ಮ ಹಳ್ಳಿಯಲ್ಲಿ ೧೯೭೦ರವರೆವಿಗೂ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲದೆ ಚಿಮಿಣಿ ದೀಪದ ಬೆಳಕಿನಲ್ಲೇ ತಮ್ಮ ವಿದ್ಯಾಭ್ಯಾಸ ಪೂರೈಸಿದ್ದನ್ನು ನೆನೆಯುವರು (ಪು.೩೯). ಮುಂಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಭ್ಯನಂತ ನಟಿಸಿ, ಪರ್ಸ್ ಕಳುವಾಗಿದೆ ಅದರಲ್ಲಿದ್ದ ಹಣ ಮತ್ತು ಏರ್‌ಟಿಕೆಟ್ ಕಳೆದುಹೋಗಿದೆ ಎಂದು ನಂಬಿಸಿ ೮೫೦ ರೂಪಾಯಿ ಪಡೆದು ವಂಚಿಸಿದ ಮಹಾನುಭಾವನೊಬ್ಬನ ಕಥೆ ಸ್ವಾರಸ್ಯಕರವಾಗಿ ಬಂದಿದೆ. ಹಳ್ಳಿಯ ನಿರಕ್ಷರಕುಕ್ಷಿ ವಯೋವೃದ್ಧೆಯೊಬ್ಬಳು ಅಮೇರಿಕಾಕ್ಕೆ ಒಬ್ಬಂಟಿಯಾಗಿ ಪ್ರಯಾಣ ಬೆಳೆಸಿದ್ದನ್ನು ಗಮನಿಸಿ, ಆಕೆಯ ಧೈರ್ಯವನ್ನು ನೋಡಿ ಮೆಚ್ಚಿದ ಲೇಖಕರು ಅವಳಲ್ಲಿ ತಮ್ಮ ತಾಯಿಯ ಪ್ರತಿರೂಪವನ್ನು ಕಾಣುವರು (ಪು. ೧೭-೨೦).

ವೆಂಕಟಸ್ವಾಮಿಯವರು ಲೋಕಸೇವಾ ಆಯೋಗದ ಸದಸ್ಯರು. ಅವರ ಈ ಪ್ರವಾಸ ಕಥನ ನಮಗೆ ಮೆಚ್ಚುಗೆಯಾಗುವುದು. ಅವರು ತಮ್ಮ ಅನುಭವಗಳನ್ನು ಆಪ್ತವಾಗಿ ತಿಳಿಸುವ ಕಾರಣಕ್ಕಾಗಿ. ಇದು ಅವರ ಮೊದಲ ಕೃತಿಯಾದರೂ ಬರವಣಿಗೆಯ ಶೈಲಿ ಸರಳವಾಗಿರುವುದರಿಂದ ಅನುಭವಗಳು ಹಿತವಾಗಿ ಪ್ರಭಾವ ಬೀರುತ್ತವೆ.

**ಕಣ್ಣಂಚಿನಲ್ಲಿ ಪೂರ್ವ ಪಶ್ಚಿಮ** ವನಜಾ ರಾಜನ್‌ರವರ ಪ್ರವಾಸ ಕಥನ. ಅಮೆರಿಕಾ, ಸಿಂಗಪೂರ್, ಭೂತಾನ್‌ಗಳ ಪ್ರವಾಸಾನುಭವ ಸಂಕ್ಷಿಪ್ತವಾಗಿ ಇಲ್ಲಿ ಬಂದಿದೆ. ಕ್ಯಾಲಿಫೋರ್ನಿಯಾ ರಾಜ್ಯದ ಫ್ರೀಮಾಂಟ್‌ನಲ್ಲಿ ಮಗ-ಸೊಸೆ ನಿರ್ಮಿಸಿದ ಮನೆಯ ಗೃಹಪ್ರವೇಶದಲ್ಲಿ ಭಾಗವಹಿಸುವ ನೆಪದಲ್ಲಿ ಅಮೆರಿಕೆಯ ಕೆಲಭಾಗಗಳ ಪ್ರವಾಸ ಲೇಖಕಿಗೆ ಸಾಧ್ಯವಾಯಿತು. ಲೇಖಕಿ ಪ್ರವಾಸವು ಮನುಷ್ಯನ ಬದುಕಿನಲ್ಲಿ ಹೊಸ ಹೊಸ ಪಾಠಗಳನ್ನು ಕಲಿಸುತ್ತದೆಂದು ಹೇಳುವರು. ಆ ಮಾತು ಅವರು ಪ್ರವಾಸದಿಂದ ಪಡೆದ ಅನುಭವಗಳಿಂದ ವೇದ್ಯವಾಗುತ್ತದೆ. ಪಿಟ್ಸ್‌ಬರ್ಗ್‌ನ ವೆಂಕಟರಮಣಸ್ವಾಮಿ ದೇವಸ್ಥಾನ, ಅಕ್ಟೋಬರ್ ತಿಂಗಳಲ್ಲಿ ಹ್ಯಾಲೋವಿನ್ ರಾತ್ರಿಯ ಆಚರಣೆ, ನಯಾಗರ ಫಾಲ್ಸ್, ಏರಿ ಸರೋವರ, ಪ್ರಭುಪಾದರ ಚಿನ್ನದ ಅರಮನೆ, ಸ್ಯಾನ್‌ಫ್ರಾನ್ಸಿಸ್ಕೋನ ಗೋಲ್ಡನ್ ಗೇಟ್ ಬ್ರಿಡ್ಜ್, ಆಲ್‌ಕಟ್ರಾನ್ ದ್ವೀಪ, ಮಾಂಟೆರಿ ಬೇ, ರೆಡ್‌ವುಡ್ ಫಾರೆಸ್ಟ್, ಕ್ಯಾಲಿಫೋರ್ನಿಯಾದ ತಾಹೋಲೇಕ್, ನೆವಾಡಾದ ಜೂಜುಗಟ್ಟೆಗಳು, ಫ್ರೀಮಾಂಟ್ ಬಳಿಯ ವಿಂಚೆಸ್ಟರ್ ಮಿಸ್ಟರಿ -ಇಲ್ಲಿನ ವೀಕ್ಷಣೆಯ ಅನುಭವಗಳು ಸರಳವಾಗಿ ಅಷ್ಟೇ ಚೆನ್ನಾಗಿ ಬಂದಿವೆ. ನಮ್ಮ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ನಡುವೆ ಅಜಗಜಾಂತರ ವ್ಯತ್ಯಾಸ ಎಂದು ಲೇಖಕಿ ಹೇಳುವರು. "ಆರು ತಿಂಗಳು ಇದ್ದು ಬರಬೇಕೆಂದು ಹೊರಟ ನಾನು ಮೂರು ತಿಂಗಳಲ್ಲಿಯೇ ಹಿಂತಿರುಗಿ ಬಂದೆ" ಎಂದು ಲೇಖಕಿ ತಮ್ಮ ಅಮೆರಿಕೆಯ ವಾಸ್ತವ್ಯ ಮೊಟಕಾದುದಕ್ಕೆ ಕಾರಣ ಕೊಟ್ಟಿಲ್ಲ. ಬಹುಶಃ ಅಲ್ಲಿನ ಭಯಂಕರ ಚಳಿ ಕಾರಣವಾದಂತೆ ಆ ದೇಶದಲ್ಲಿನ ಆತಂಕದ ಕ್ಷಣಗಳೂ ಕಾರಣವಾದಂತೆ ತೋರುತ್ತದೆ. ಸಿಂಗಪೂರ್, ಭೂತಾನ್ ಪ್ರವಾಸ ಚಿಕ್ಕದಾದರೂ ಚೆನ್ನಾಗಿ ನಿರೂಪಣೆಗೊಂಡಿದೆ.

**ಲೋಕಾಯಣ** ಕವಿ ದೊಡ್ಡರಂಗೇಗೌಡರು ಅಮೇರಿಕಾ, ಜರ್ಮನಿ, ಫ್ರಾನ್ಸ್, ಸಿಂಗಪುರ ಮೊದಲಾದ ಪ್ರಸಿದ್ಧ ದೇಶಗಳ ಪ್ರವಾಸಿ ಆಕರ್ಷಣೆಯ ಸ್ಥಾನಗಳ ಪರಿಚಯವನ್ನು ಕಾವ್ಯಮುಖೇನ ಮಾಡಿಕೊಡುವ ವಿಶಿಷ್ಟ ಪ್ರಯತ್ನವಿದು.

ಶ್ರೀಮತಿ ಪಾರ್ವತಮ್ಮ ಮಹಾಲಿಂಗ ಶೆಟ್ಟಿಯವರ **ಅಮೆರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ** ಅಮೆರಿಕಾದ ಪ್ರವಾಸ ಕಥನ. ಇದರಲ್ಲಿ ಎರಡು ಭಾಗಗಳಿವೆ. ಮೊದಲನೆಯದು ಅಮೆರಿಕಾದ ಇತಿಹಾಸ, ಎರಡನೆಯದು ಅಮೆರಿಕಾದ ಸುತ್ತಾಟದ ಅನುಭವಗಳು. ಲೇಖಕಿಯೇ ಹೇಳಿಕೊಂಡಿರುವಂತೆ ಇಪ್ಪತ್ತು ವರ್ಷಗಳಲ್ಲಿ ಅಮೆರಿಕಾಕ್ಕೆ ಏಳು ಸಲ ಹೋಗಿ ಬಂದಿರುವರು. ಸುಮಾರು ೩೨ ತಿಂಗಳು ಅಲ್ಲಿ ವಾಸಮಾಡಿರುವರು. ಮೊದಲಿನಿಂದಲೂ ಎಲ್ಲಾ ವಿಷಯಗಳಲ್ಲಿಯೂ ಆಸಕ್ತಿ, ಕುತೂಹಲ ಬೆಳೆಸಿಕೊಂಡಿರುವ ಲೇಖಕಿ ಅನೇಕ ವಿಷಯಗಳನ್ನು ಚಿಕಿತ್ಸಕ ಬುದ್ಧಿಯಿಂದ

ನೋಡಿರುವರು, ಯೋಚಿಸಿರುವರು, ಕೇಳಿ ತಿಳಿದುಕೊಂಡಿರುವರು. ಕುತೂಹಲಕಾರಿ-ಯಾದುವನ್ನು ನೆನಪಿಟ್ಟುಕೊಂಡು ವಿವರವಾಗಿ ಬರೆದಿರುವರು.

ಅಮೆರಿಕಾದಲ್ಲಿ ಭಾರತೀಯರ ಬಗ್ಗೆ ಅಮೆರಿಕನ್ನರ ಬಗ್ಗೆ ಎರಡು ಪ್ರತ್ಯೇಕ ಅಧ್ಯಾಯಗಳಲ್ಲಿ ಬರೆದಿರುವ ಲೇಖಕಿ ಅಮೆರಿಕಾದ ಮನೆಗಳು, ವಿದ್ಯಾಭ್ಯಾಸ ಪದ್ಧತಿ, ಪ್ರಯಾಣ ಸೌಲಭ್ಯಗಳು, ಆಸ್ಪತ್ರೆಗಳು - ವೈದ್ಯಕೀಯ ಸೇವೆ, ಶಾಂಪಿಂಗ್ ಸೆಂಟರುಗಳು, ಪ್ರೇಕ್ಷಣೀಯ ಸ್ಥಳಗಳು, ಹೈನುಗಾರಿಕೆ, ವೃದ್ಧಾಶ್ರಮ, ಶವಸಂಸ್ಕಾರ -ಹೀಗೆ ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನೆಲ್ಲ ವಿವರವಾಗಿ ಹೇಳಿರುವರು. ಕೆನಡಾಕ್ಕೆ ಹೋಗಿ ಅಲ್ಲಿ ನಯಾಗಾರ ಜಲಪಾತ ನೋಡಿ ಸುಖಿಸಿದ ಚಿತ್ರವೂ ಇದರಲ್ಲಿ ಬಂದಿದೆ. ಪುಸ್ತಕದ ಕೊನೆಯಲ್ಲಿ "ಇದ್ದುದನ್ನು ಇದ್ದಂತೆ, ಉತ್ಪ್ರೆಕ್ಷೆ ಇಲ್ಲದೆ ಬರೆದಿದ್ದೇನೆ. ಅಮೆರಿಕಾದವರ ಉತ್ತಮವಾದ ಯೋಗ್ಯವಾದ ಗುಣಗಳನ್ನು ಕಲಿಯಲು ಕೆಲವರಿಗಾದರೂ ಸಹಾಯವಾದರೆ ನನ್ನ ಈ ಶ್ರಮ ಸಾರ್ಥಕ ಎಂದು ತಿಳಿಯುತ್ತೇನೆ" ಎಂದು ಲೇಖಕಿ ಹೇಳಿರುವರು.

ವಸಂತೀ ಚಂದ್ರರ **ಭೋಗಭೂಮಿಯ ಮಡಿಲಲ್ಲಿ** ಅಮೆರಿಕಾ ಪ್ರವಾಸ ಕಥನ. ಲೇಖಕಿ ಅಮೆರಿಕಾದ ಬಗೆಗೆ ತುಂಬು ಅಭಿಮಾನ ಹೊಂದಿರುವುದು ಅವರ ಈ ಮಾತುಗಳಿಂದ ತಿಳಿದುಬರುತ್ತದೆ: ಅಮೆರಿಕೆಗೆ ಹತ್ತು ಸಾವಿರ ಹುಚ್ಚುಮುಖಗಳಿವೆ ಎಂಬುದಕ್ಕಾಗಿಯೇ ಅಲ್ಲಿಗೆ ಹೋದವರು, ಅದನ್ನು ನೋಡಿದವರೆಲ್ಲರೂ ಅದನ್ನು ಪ್ರೀತಿಸುತ್ತಾರೆ. ಅದರ 'ಧ್ವನಿಗಳನ್ನು', ಮಧುರಗೀತೆಗಳನ್ನು, ಪಿಸುಗುಟ್ಟುವಿಕೆಯನ್ನು, ರಹಸ್ಯಗಳನ್ನು ಅಕ್ಷರಕ್ಷರಗಳ ನಡುವಿನ ಅರ್ಥಗಳನ್ನು, ಅಂತರಾಳದ ಅದ್ಭುತ ಮಾರ್ಗ ವಿಶೇಷಗಳನ್ನು ಹಾಳೆಗಳಲ್ಲಿ ಮೂಡಿಸುವುದು ಸುಲಭ ಸಾಧ್ಯವಲ್ಲ. ಅವುಗಳಲ್ಲಿನ ಮಂತ್ರಶಕ್ತಿಯೇ ಬೇರೆ. ಅದು, ಲೋಕದ ಜನರನ್ನೆಲ್ಲ ತನ್ನ ಕಡೆಗೆ ಸುಲಭವಾಗಿ ಸೆಳೆದುಕೊಳ್ಳಬಲ್ಲ ಇಂದ್ರಜಾಲದ ಕೇಂದ್ರದಂತೆ, ಎಂದರೂ ಸರಿಯಾದೀತು. (ಪು. ೧೩)

ಮುಂದಿನ ಪುಟಗಳಲ್ಲಿ ಅಮೆರಿಕಾದ 'ಅಪೂರ್ವ ಅದ್ಭುತ'ಗಳು ವರ್ಣನೆಯ ರೂಪದಲ್ಲಿ ಬಿಚ್ಚಿಕೊಳ್ಳುತ್ತವೆ. ನ್ಯೂಯಾರ್ಕ್ ಬಗ್ಗೆ ಹೇಳುವ ಮಾತುಗಳಿವು: "ಹಗಲು ಮುಗಿಯದ ದೇಶವಿದು. ಕುತೂಹಲಕ್ಕೆ ತಣಿವಿರದ ಸಾಮ್ರಾಜ್ಯ, ಬೆಳಕು ಮತ್ತು ವೈವಿಧ್ಯಮಯ ಚಿತ್ರದರ್ಶನ, ವರ್ಣಮಯ ನಗರವಿದು. ಇಲ್ಲಿನ ನಿತ್ಯೋತ್ಸವದಲ್ಲಿ ಮನಸ್ಸಿಗೆ ಆಯಾಸವಿಲ್ಲ..." (ಪು.೧೪). "ಅಮೆರಿಕೆಯು ತನ್ನಷ್ಟಕ್ಕೆ ತಾನೇ ಭಾವನಾಮಯ ಕಾವ್ಯ. ಪ್ರಕೃತಿಯೆಲ್ಲ ಪ್ರಫುಲ್ಲಿತ, ಕುಸುಮಿತ. ಪ್ರಕೃತಿಯ ಮಡಿಲಲ್ಲಿ ನಾವು ಕಳೆಯುವ ಪ್ರತಿಯೊಂದು ಕ್ಷಣವೂ ಆನಂದಾಶ್ಚರ್ಯಪೂರ್ಣ. ಎಲ್ಲೆಲ್ಲೂ ಸಮೃದ್ಧಿ, ಸಂತೃಪ್ತಿ ತಾನೇ

ತಾನಾಗಿರುವ ಈ ನಾಡು ಅದು ಸಾಹಸಪೂರ್ಣ, ಕೌತುಕಮಯವೇ ಸೈ" (ಪು.೭೧) - ಇಂತಹ ಆಶ್ಚರ್ಯೋದ್ಗಾರಗಳು ಈ ಕೃತಿಯ ಉದ್ದಕ್ಕೂ ಕಂಡುಬರುತ್ತದೆ. ಲೇಖಕಿ ತಾನು ನೋಡಿದ ಸ್ಥಳಗಳ ಬಗೆಗೆ ಒಳ್ಳೆಯ ಮಾಹಿತಿ ನೀಡುವರು. ಅಮೆರಿಕಾದ ಸಾಮಾನ್ಯ ಜನಜೀವನದ ಪರಿಚಯವನ್ನು ಲೇಖಕಿ ಕೊಟ್ಟಿರುವರು (ಪು. ೯೬-೧೦೫) ಅಟ್ಲಾಂಟಿಕ್ ನಗರದ ಕ್ಯಾಸಿನೋಗಳ ಬಗೆಗೆ ವಿವರವಾದ ಮಾಹಿತಿಯನ್ನು ಲೇಖಕಿ ಕೊಟ್ಟಿರುವರು (ಪು. ೧೦೬-೧೨೨). ಮುಂದೆ ನಯಾಗಾರದ ವರ್ಣನೆಯನ್ನು ಭಾವಪರವಶರಾಗಿ ಮಾಡುವರು (ಪು ೧೨೪-೧೪೮). ಉದಾಹರಣೆಗೆ ಈ ಸಾಲುಗಳನ್ನು ಗಮನಿಸಬಹುದು.

"ನಯಾಗರಾದ ಈ ಪ್ರಧಾನ ಜಲಪಾತದ ಮುಂದೆ ನಿಂತಾಗ ಹೃದಯ ದೇವಮಂದಿರದಲ್ಲಿ ಸಹಸ್ರ ಗಂಟೆಗಳು ಮಧುರ ನಿನಾದದಿಂದ ಮೊಳಗುತ್ತವೆ. ಅವುಗಳ ಧ್ವನಿ ನಾವರಿಯದಂತೆಯೇ ಅಖಂಡ ಬ್ರಹ್ಮಾಂಡವನ್ನು ತುಂಬುತ್ತದೆ. ಪರಮಾತ್ಮ ಪ್ರಕೃತಿಯ ಸನ್ನಿಧಿಯಲ್ಲಿ ಅದ್ಭುತ ಆಶ್ಚರ್ಯಕರ ಪ್ರಚ್ಛನ್ನ ಸಚ್ಚಿದಾನಂದ ಚೆಲುವಿಗೆ ಮಾರುಹೋಗುತ್ತ ಮೂಕರಾಗುತ್ತೇವೆ. ಆನಂದಭಾಷ್ಪಗಳುದುರುತ್ತವೆ. ಕೊರಳ ನರಗಳುಬ್ಬಿ ಬರುತ್ತವೆ. ಜಲದೇವತೆಯ ಅಟ್ಟಹಾಸದ ರುದ್ರನಾಟ್ಯದ ಹೆಜ್ಜೆಯ ತುಳಿತಕ್ಕೆ ಸಿಕ್ಕು, ಮಾನವನ ಅಹಂಕಾರ ಸತ್ತು ಅದರ ಸೂತಕವೂ ಅದೇ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತದೆ! ಓ ಓ! ನಯಾಗರಾ ನಯನ ಮನೋಹರ!" (ಪು. ೧೪೮) ಹೀಗೆ ಕಾವ್ಯಮಯವಾಗಿ ತಮ್ಮ ಭಾವನೆಗಳನ್ನು ಲೇಖಕಿ ಹರಿಯಬಿಡುವರು.

ಬಿ.ಎಸ್. ಸಣ್ಣಯ್ಯನವರು ಕನ್ನಡದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು. ಅವರು ಮಗಳು, ಅಳಿಯ, ಮೊಮ್ಮಗಳು, ಮೊಮ್ಮಗ - ಈ ಎಲ್ಲರ ಸದ್ಭಾವನೆಯಿಂದ ಅಮೆರಿಕಾ ಪ್ರವಾಸ ಕೈಗೊಂಡು ತಮ್ಮ ಅನುಭವಗಳನ್ನು **ನಾನು ಹೋಗಿದ್ದೆ ಅಮೆರಿಕೆಗೆ** ಎಂಬ ಕೃತಿಯಲ್ಲಿ ದಾಖಲಿಸಿರುವರು. ಅಮೆರಿಕೆಯ ಪ್ರವಾಸದಲ್ಲಿ ಪ್ರಧಾನವಾದದ್ದು ಲಾಸ್ ಏಂಜಲಿಸ್‌ನ ಸುತ್ತಮುತ್ತ ಇರುವ ಸೀವರ್ಲ್ಡ್, ಡಿಸ್ನಿಲ್ಯಾಂಡ್ ಮತ್ತು ಸ್ವಲ್ಪ ದೂರದ ಗ್ರ್ಯಾಂಡ್ ಕ್ಯಾನನ್, ಹೂವರ್ ಬ್ರಿಡ್ಜ್, ಲಾಸ್ ವೇಗಸ್, ನಯಾಗಾರ, ನ್ಯೂಯಾರ್ಕ್, ವಾಷಿಂಗ್‌ಟನ್ ಮೊದಲಾದ ಪ್ರಸಿದ್ಧ ಪ್ರವಾಸಿ ತಾಣಗಳು. ಇದರ ಜೊತೆಗೆ ಅಮೆರಿಕೆಯ ಜನಜೀವನ, ಸಂಸ್ಕೃತಿ, ರಸ್ತೆ ನಿಯಮಗಳು - ಹೀಗೆ ಭಾರತೀಯ ಕಣ್ಣುಗಳು ಬೆರಗಿನಿಂದ ತಾನು ನೋಡಿದ್ದನ್ನು ಇಲ್ಲಿ ಪ್ರಾಮಾಣಿಕವಾಗಿ ದಾಖಲಿಸಿದೆ. ಇವೆಲ್ಲ ಸಾಮಾನ್ಯ ಸಂಗತಿಗಳಾಗಿದ್ದರೂ ಅಪರಿಚಿತವಾದ ಅಥವಾ ಭಿನ್ನ ಪರಿಸರ/ ವಾತಾವರಣದಲ್ಲಿ ಭಾರತೀಯ ಮನಸ್ಸು ಪ್ರಫುಲ್ಲಿತವಾಗಿ ಅರಳಿ ತನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿದೆ. ಬಿ.ಎಸ್. ಸಣ್ಣಯ್ಯನವರ ಪ್ರಾಮಾಣಿಕ ಹಾಗೂ ಪ್ರಾಂಜಲವಾದ

ವರ್ಣನೆಗಳಲ್ಲಿ ಅತಿಶಯೋಕ್ತಿಯ ಎಳೆಗಳನ್ನು ನಾವು ಕಾಣಲು ಸಾಧ್ಯವೇ ಇಲ್ಲ. ಈ ಇಳಿವಯಸ್ಸಿನಲ್ಲೂ ಜೀವನಾಸಕ್ತಿಯನ್ನು ಕಳೆದುಕೊಳ್ಳದೆ ಕೌಟುಂಬಿಕ ಪರಿಸರದಲ್ಲಿ ಸಂತೋಷವನ್ನು ಸವಿಯುವ ಬಿ.ಎಸ್. ಸಣ್ಣಯ್ಯನವರ ಇಲ್ಲಿನ ಪ್ರಾಮಾಣಿಕ ಅನುಭವಗಳು ಎಲ್ಲಿಯೂ ಹಾಳತವಾಗಿ ಬರುವುದಿಲ್ಲ. ಈ ಪ್ರವಾಸ ಕಥನದ ಕೊನೆಯಲ್ಲಿ ನಮ್ಮ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ನೆನೆದು ಅದರ ನಿರ್ಮೂಲನವಾಗದೆ ಭಾರತದ ಅಭಿವೃದ್ಧಿ ಸಾಧ್ಯವಿಲ್ಲವೆಂಬುದನ್ನು ಮನಗಾಣಿಸಲು ಸಿಂಗಪುರ್‌ನ ಮಾಪ್ ವೈ-ಎನ್‌ರ ಇಂಗ್ಲೀಷ್‌ನಲ್ಲಿರುವ (Silver Kris) ಎಂಬ ಕವಿತೆಯ ಮೂಲದೊಂದಿಗೆ ತಮ್ಮ ಕನ್ನಡಾನುವಾದವನ್ನೂ ಲೇಖಕರು ಕೊಟ್ಟಿರುವರು (ಪು. ೮೫-೮೭).

ಶಿರಸಿಯ ಪಿ.ಎಂ. ಹೆಗಡೆಯವರ **ಆಲ್ಮನೆಯಿಂದ ಆ್ಯನ್ ಆರ್ಬರ್‌ಗೆ** ಅಮೆರಿಕಾ ಪ್ರವಾಸ ಕಥನ. ೧೯೯೯ರಲ್ಲಿ ಅವರು ಪತ್ನಿಯೊಂದಿಗೆ ಮಗನಿದ್ದ ಕ್ರಾಫ್ಟನ್‌ಗೂ ಮಗಳಿದ್ದ ಆ್ಯನ್ ಆರ್ಬರ್‌ಗೂ ಹೋಗಿ ಆರು ತಿಂಗಳು ಅಲ್ಲಿ ವಾಸ್ತವ್ಯ ಹೂಡಿದ್ದರು. ಅಲ್ಲಿನ ತಂಗಣೆಯ ಅನುಭವಗಳನ್ನು ದಿನಚರಿ ರೂಪದಲ್ಲಿ ಪಿ.ಎಂ. ಹೆಗಡೆ ದಾಖಲಿಸಿರುವರು. ಅವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು. ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದವರು, ಆಧ್ಯಾತ್ಮ ಜೀವಿಗಳು, ಸಮಚಿತ್ತವನ್ನು ಕಾಪಾಡಿಕೊಂಡು ಬಂದವರು, ಒಳ್ಳೆಯ ಚಿಂತಕರು. ಈ ಪ್ರವಾಸ ಕಥನದಲ್ಲಿ ಅಮೆರಿಕಾದ ಅಂತರಂಗವನ್ನು ಅರಿಯುವ ಕುತೂಹಲ ವಿಶೇಷವಾಗಿದೆ; ಬಾಹ್ಯರೂಪದ ಅಮೆರಿಕಾವನ್ನು ಪ್ರವಾಸಿಯಾಗಿ ಕಂಡದ್ದು ಬಹಳ ಕಡಿಮೆ. ಅವರ ಸಂಯಮದ ಬರವಣಿಗೆಯಲ್ಲಿ ಚಿಂತನೆಗೆ ಹೆಚ್ಚು ಗಮನ. ಹೀಗಾಗಿ ನಯಾಗಾರಕ್ಕೆ ಹೋದರೂ ಪರವಶರಾಗಿ ಅದರ ಅದ್ಭುತ ಸೌಂದರ್ಯವನ್ನು ಪುಟಗಟ್ಟಲೆ ವರ್ಣಿಸ ಹೋಗುವುದಿಲ್ಲ. ಇದು ದಿನಚರಿ ರೂಪದ ಪ್ರವಾಸ ಕಥನವಾಗಿರುವುದರಿಂದ ಯಾವುದೇ ವಿವರಗಳು ಲಂಬಿಸುವುದಿಲ್ಲ. ಅವರ ಅಮೆರಿಕೆಯ ವಾಸ್ತವ್ಯದಲ್ಲಿ ಪುಸ್ತಕ, ಟಿ.ವಿ., ಪತ್ರಿಕೆ - ಇವು ಮುಖ್ಯ ಪಾತ್ರವಹಿಸಿವೆ. ಬೇಸರವಾದಾಗ ವಾಕಿಂಗ್ ಹೋಗುವರು. ಅವರು ಅಮೆರಿಕೆಯ ಸಾಮಾಜಿಕ ಬದುಕನ್ನು, ಶಿಕ್ಷಣ ಕ್ರಮವನ್ನು, ಕಾನೂನಿನ ಪರಿಪಾಲನೆಯನ್ನು ಗ್ರಹಿಸುವುದು ಟಿ.ವಿ. ಪತ್ರಿಕೆ ಹಾಗೂ ಜನರ ಸಂಪರ್ಕದ ಮೂಲಕ. ಅವರ ಸೂಕ್ಷ್ಮ ಪರಿಭಾವನೆಗೆ ಅಮೆರಿಕದ ವೈಪರೀತ್ಯಗಳು ಹಾಗೆಯೇ ಒಳ್ಳೆಯ ಅಂಶಗಳು ಕಣ್ಣಿಗೆ ಬೀಳುತ್ತವೆ. ತಾವು ಕಂಡ ಒಳ್ಳೆಯ ಅಂಶಗಳನ್ನು, ವೈಪರೀತ್ಯಗಳನ್ನು ಅವರು ದಾಖಲಿಸುತ್ತಾ ಹೋಗಿರುವರು. ಹೀಗಾಗಿ ನಾವು ಅಮೆರಿಕೆಯಿಂದ ಕಲಿಯಬೇಕಾದ್ದು ಕಲಿಯಬಾರದ್ದು ಎಲ್ಲವೂ ಇಲ್ಲಿ ಇದೆ. ನನಗೆ ಇಲ್ಲಿ ಅಚ್ಚರಿಯಾಗುವುದು ಅವರ ಮಾನಸಿಕ ಪ್ರಸನ್ನತೆ; ಒಳ್ಳೆಯದನ್ನು ಗುರುತಿಸುವ, ಓದಿನಿಂದ ತಿದ್ದಿ ತೀಡಿದ ಅವರ ಮನಸ್ಸು. ಅವರ ಆಸಕ್ತಿಯ ಕ್ಷಿತಿಜ ಎಷ್ಟು ದೊಡ್ಡದು,

ತಿಳಿಯಬೇಕೆನ್ನುವ / ತಿಳಿಸಬೇಕೆನ್ನುವ ಅವರ ಅದಮ್ಯ ಉತ್ಸಾಹ ಅವರ ದಿನಚರಿಯಲ್ಲಿ ಚಲ್ಲವರಿದಿದೆ. ಇಷ್ಟು ಜೀವನಪ್ರೀತಿ ಈ ಇಳಿವಯಸ್ಸಿನಲ್ಲೂ ಪ್ರಕಟಗೊಳ್ಳುವ ರೀತಿ ಕಂಡು ಆಶ್ಚರ್ಯವಾಗುತ್ತದೆ. ಅವರು ಅಮೆರಿಕೆಯಲ್ಲಿ ಸಮಾನ ಹಕ್ಕುಗಳಿಗಾಗಿ ಹೋರಾಡಿದ ರೋಸಾಪಾರ್ಕ್ಸ್ ಬಗ್ಗೆ, ಮಧ್ಯಮವರ್ಗದ ಜನರಿಗೂ ಕಾರು ದೊರೆಯುವಂತೆ ಮಾಡಿದ ಫೋರ್ಡ್ ಬಗ್ಗೆ, ೮೦ ವರ್ಷಗಳಾದರೂ ವಿಶ್ರಾಂತಿ ಪಡೆಯದೆ ಶಾಲೆಯೊಂದರಲ್ಲಿ ಇಂಗ್ಲಿಷ್ ವ್ಯಾಕರಣ ಬೋಧಿಸುತ್ತಿರುವ ಶ್ರೀ ಲಾಸನ್ ಬಗ್ಗೆ ಬರೆದಿರುವರು (ಪು ೬೩, ೬೪). ಡೆಟ್ರಾಯ್ಟ್ ಫ್ರೀ ಪ್ರೆಸ್‌ನಲ್ಲಿ ಬಂದ ಒಂದು ಪದ್ಯ ಅವರಿಗೆ ಬಹಳ ಹಿಡಿಸಿತು. ಅವರು ವೃತ್ತಿಯಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದರಿಂದ ಕಾವ್ಯಾತ್ಮಕ ಅಭಿವ್ಯಕ್ತಿಯ ಸಾಲುಗಳು ಅವರನ್ನು ಸಹಜವಾಗಿ ಆಕರ್ಷಿಸುತ್ತದೆ. ಪತ್ರಿಕೆಯಲ್ಲಿ ಬಂದ ವೆರೋನಿಕಾ ಎ.ಶಾಫ್‌ಸ್ಟಾಲ್‌ರವರ 'After a while' ಕವಿತೆಯನ್ನು ಕನ್ನಡಕ್ಕೆ ಕೊಟ್ಟಿರುವರು (ಪು. ೫೬-೫೭). ಲೇಖಕರು ಅಮೇರಿಕಾದಲ್ಲಿದ್ದಾಗ ಓದಿದ ಪುಸ್ತಕಗಳ ವಿವರ ಕೊಟ್ಟಿರುವರು. ಉದಾಹರಣೆಗೆ Autobiography of a Yogi, The Forged Coupon, The habits of highly effective people ಇತ್ಯಾದಿ (ಪು. ೮೨). ಅಧ್ಯಾತ್ಮದಲ್ಲಿ ಸಹಜವಾದ ಒಲವು ಲೇಖಕರಿಗೆ. ಅವರು ಸತ್ಯ ಸಾಯಿಬಾಬರ ಭಕ್ತರು. ಶ್ರೀ ಸತ್ಯಸಾಯಿಬಾಬ ೭೪ನೇ ಹುಟ್ಟುಹಬ್ಬದಂದು (೨೩.೧೧.೧೯೯೯) 'ನನ್ನ ಹೃದಯ ಪುಟಪರ್ತಿಯಲ್ಲಿದೆ. ಆ ವೈಭವವನ್ನು ನಾನು ಮತ್ತೆಂದು ನೋಡುವೆನೊ ಎಂದೆನಿಸಿದೆ' ಎಂದು ದಿನಚರಿಯಲ್ಲಿ ಬರೆದಿರುವರು (ಪು., ೫೯). ಭಾರತಕ್ಕೆ ಹಿಂತಿರುಗುವ ಸಂದರ್ಭದಲ್ಲಿ ಲೇಖಕರು ಶ್ರೀ ಸತ್ಯಸಾಯಿಬಾಬಾರ ಭಾವಚಿತ್ರದ ಮುಂದೆ ನಿಂತು ೧. ವಿಮಾನ ಉಡ್ಡಾಣ ರದ್ದಾಗಿ ನಮ್ಮ ಪ್ರಯಾಣಕ್ಕೆ ತೊಂದರೆ ಆಗದಂತೆ ೨. ಡೆಟ್ರಾಯ್ಟ್‌ನಿಂದ ಯಾರಾದರೂ ಭಾರತೀಯರು ನಮಗೆ ತೊಂದರೆಯಾಗದಂತೆ ಲಕ್ಷ್ಯವಹಿಸಿ ಬೆಂಗಳೂರಿನ ತನಕವೂ ಬರುವಂತೆ ಪ್ರಾರ್ಥಿಸಿದ್ದರು. ನನ್ನ ಎರಡೂ ಪ್ರಾರ್ಥನೆಗಳನ್ನು ಶ್ರೀ ಸತ್ಯಸಾಯಿಬಾಬಾ ನೆರವೇರಿಸಿದರು ಎಂದು ಭಾವುಕರಾಗಿ ನುಡಿಯುವರು (ಪು. ೧೦೭).

ಸುಖಕರವಾಗಿ ಬಾಳಲು ಬಾಯ್ಸ್ ಬಾವ್ ಡಿನ್‌ನು ಸೂಚಿಸಿದ ೧೦ ನಿಯಮಗಳನ್ನು ಲೇಖಕರು ಕೊಟ್ಟಿರುವರು (ಪು. ೯೭). ಡೆಟ್ರಾಯ್ಟ್‌ನಲ್ಲಿ Etiquettes ಕಲಿಸುವ ಸಂಸ್ಥೆ ಅಮೆರಿಕದಲ್ಲಿ ಕೆಲಸ ಮಾಡುವ ಜನರು ಅಮೆರಿಕೆಯವರು ಏನು ಮಾಡುತ್ತಾರೆಂಬುದನ್ನು ತಿಳಿದಿರುವುದು ಅವಶ್ಯವಿದೆ ಎಂದು ಕೊಟ್ಟಿರುವ ಸು. ೧೧ ಸಂಗತಿಗಳನ್ನು ಉಲ್ಲೇಖ ಮಾಡಿರುವರು (ಪು. ೯೫-೯೬).

ಅಮೆರಿಕದಲ್ಲಿ ಮಕ್ಕಳು ಹಾದಿ ತಪ್ಪುತ್ತಿರುವುದು, ಬೆಳೆದ ಮಕ್ಕಳಿಂದ ಸಮಾಜಘಾತಕ ಕಾರ್ಯಗಳಾಗುತ್ತಿರುವುದು, ತಾಯಿ-ತಂದೆಯರ ಹಿಡಿತ ತಪ್ಪಿರುವುದು;

ಅಮೆರಿಕಾದಲ್ಲಿ ವಯಸ್ಸಾದವರ ಪರಿಸ್ಥಿತಿ, ಅಮೆರಿಕಾದಲ್ಲಿನ ಗಂಡು-ಹೆಣ್ಣಿನ ವಿವಾಹ ಬಾಹಿರ ಸಂಬಂಧಗಳು -ಹೀಗೆ ಅಮೆರಿಕಾದ ಸಾಮಾಜಿಕ ಸಮಸ್ಯೆಗಳ ಚಿತ್ರ ಹಲವು ನಿದರ್ಶನಗಳ ಮೂಲಕ ನಮ್ಮ ತಿಳುವಳಿಕೆಗೆ ಬರುತ್ತದೆ.

ಒಟ್ಟಿನಲ್ಲಿ ಪ್ರವಾಸ ಕಥನದ ನೆಪದಲ್ಲಿ ಈ ದಿನಚರಿಯಲ್ಲಿ ಭಾರತೀಯರೊಬ್ಬರು ಅಮೆರಿಕಾ ವಾಸ್ತವ್ಯದಲ್ಲಿ ಕಂಡ ಹಲವು ವೈಚಿತ್ರ್ಯಗಳ, ವೈರುಧ್ಯಗಳ ಚಿತ್ರಗಳ ಜೊತೆಗೆ ಮಾನವೀಯ ಮೌಲ್ಯಗಳನ್ನು ಪ್ರತಿನಿಧಿಸುವ ಅನೇಕ ಪ್ರಸಂಗಗಳ ಉದಾಹರಣೆಗಳೂ ಇಲ್ಲಿ ದಾಖಲಾಗಿರುವುದು ಇಲ್ಲಿನ ವೈಶಿಷ್ಟ್ಯ.

**ಥಾಯ್‌ಲ್ಯಾಂಡ್-ಇಂಡೋನೇಷಿಯಾ**

ಗುರುಮೂರ್ತಿ ಪೆಂಡಕೂರು ಅವರ **ಓ! ಲಂಡನ್, ಅವಕಾಶಗಳ ಅಮರಾವತಿ ಅಮೇರಿಕಾ** ಓದಿದವರಿಗೆ ಅವರ ಇನ್ನೊಂದು ಪ್ರವಾಸ ಕಥನ 'ಥಾಯ್‌ಲ್ಯಾಂಡ್ ಇಂಡೋನೇಷಿಯಾ ತಿರುಗಾಟ' ಖುಷಿ ಕೊಡುವುದರಲ್ಲಿ ಏಕ[illegible] ಸೋ[illegible]ತಿದೆ ಎನ್ನಿಸಿತು. ಅದಕ್ಕೆ ಕಾರಣವನ್ನು ಹೀಗೆ ಕೊಡಬಹುದು. ೧. ಬಂಧು ಬಾಂಧವರ ಸವಿಯಾದ ಪರಿಸರದಲ್ಲಿ ಮೊದಲಿನ ಎರಡು ಕೃತಿಗಳು ಪ್ರವಾಸದ ಅನುಭವಗಳನ್ನು ಬಿಚ್ಚುತ್ತವೆ. ಬಹುಶಃ ಆತ್ಮೀಯ ಪರಿಸರದ ಕೊರತೆ 'ಥಾಯ್‌ಲ್ಯಾಂಡ್ ಇಂಡೋನೇಶಿಯಾ ತಿರುಗಾಟ'ದಲ್ಲಿ ಕಾಣುತ್ತದೆ. ಇಲ್ಲಿ ಪ್ರವಾಸಿಗ ಗುರುಮೂರ್ತಿ ವಿಜೃಂಭಿಸಿಬಿಡುವರು. ತಾವು ನೋಡಿದ ಸ್ಥಳಗಳ ವಿವರವಾದ ಮಾಹಿತಿಯನ್ನು ಕೊಡುವಲ್ಲಿ ಅವರ ಆಸಕ್ತಿ ಹೊರಳಿಬಿಡುವುದರಿಂದ ಇಲ್ಲಿ 'ಮಾಹಿತಿ' ಪ್ರಧಾನವಾಗಿಬಿಡುತ್ತದೆ, ಆತ್ಮೀಯ ನಿವೇದನೆ ಗೈರುಹಾಜರಾಗುತ್ತದೆ. ಹೀಗಾಗಿ ಇಲ್ಲಿನ ದೀರ್ಘ ವಿವರಣೆಗಳು ಪಕ್ಕಾ ಜ್ಞಾನಪಿಪಾಸುವಾದವನಿಗೆ ಬಹಳವಾಗಿ ಹಿಡಿಸುತ್ತವೆ. ಹೀಗೆಂದ ಮಾತ್ರಕ್ಕೆ ಪ್ರವಾಸ ಕಥನ ತನ್ನ ಮೌಲಿಕತೆಯಿಂದ ಹಿಂದೆ ಸರಿದಿದೆಯೆಂದರ್ಥವಲ್ಲ. ಇಲ್ಲಿ ನೋಡುವ ಕಣ್ಣು, ಗ್ರಹಿಸುವ ಮನಸ್ಸು ಶ್ರದ್ಧೆಯಿಂದ ಕೆಲಸ ಮಾಡಿದೆ. ಹೀಗಾಗಿ ಇಲ್ಲಿ ಬರುವ ಸ್ಥಳ ಮಾಹಿತಿಗಳೆಲ್ಲವೂ ಶಿಸ್ತುಬದ್ಧ ಅಧ್ಯಯನಕ್ಕೆ ಒಳಗಾಗುವ ಮೌಲಿಕತೆಯನ್ನು ಪಡೆದಿವೆ. ಥಾಯ್‌ಲ್ಯಾಂಡ್ ಮೇಲೆ ಭಾರತೀಯ ಪರಂಪರೆಯ ದಟ್ಟವಾದ ಪ್ರಭಾವವಿರುವುದನ್ನು ಲೇಖಕರು ಗುರುತಿಸುವರು. ದಕ್ಷಿಣ ಭಾರತದ ಅದರಲ್ಲೂ ತಮಿಳುನಾಡಿನ ವ್ಯಾಪಾರಸ್ಥರ, ಕಲಾವಿದರ, ಸಂತ-ಮಹಂತರ ಪ್ರಭಾವವು ಇಲ್ಲಿ ಅಪಾರ ಎಂದು ಲೇಖಕರು ಹೇಳುವರು. ಜಾವಾಕ್ಕೆ ೪೦ ಕಿ.ಮೀ. ದೂರದಲ್ಲಿರುವ ಬೋರೋಬುದುರ್ ಬುದ್ಧ ದೇಗುಲದ ವರ್ಣನೆ (ಪು. ೧೧೫-೧೨೧) ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ಕ್ರಿ.ಶ. ೭೬೨ರ 'ಶತು ಬೋಕೋ' ಶಿಲಾಶಾಸನವು ಬೋರೋಬುದುರ್ ದೇವಾಲಯವನ್ನು ವರ್ಣಿಸಿದೆ. ಆ ಶಾಸನದ ಕನ್ನಡಾನುವಾದವನ್ನು ಲೇಖಕರು

ಕೊಟ್ಟಿರುವರು. ಅನುವಾದ ಸೊಗಸಾಗಿದೆ. ಈ ಬೃಹತ್ ಬುದ್ಧ ದೇವಾಲಯದ ಮೇಲಂತಸ್ತಿನಲ್ಲಿ ನಿಂತಾಗ ತಮಗಾದ ದಿವ್ಯ ಅನುಭವವನ್ನು ಒಂದು ದೀರ್ಘ ಕವಿತೆಯ ಮೂಲಕ ಲೇಖಕರು ವ್ಯಕ್ತಪಡಿಸಿರುವರು (ಪು. ೧೨೩-೧೨೫). ಈ ದೇವಾಲಯದ ಚಿತ್ರವನ್ನು ವಿಮಾನದಿಂದ ತೆಗೆಯಲಾಗಿದ್ದು ಅದೊಂದು ಮಹಾಮೇರುವಿನಂತೆ, ಆ ಆಕೃತಿಯ ಶ್ರೀಚಕ್ರದಂತೆ ತೋರುತ್ತದೆ ಎಂದು ಲೇಖಕರು ಅಭಿಪ್ರಾಯಪಡುವರು (ಪು. ೧೨೫).

ಈ ಪ್ರವಾಸ ಕಥನದ ಪ್ರಾರಂಭದ ಕೆಲವು ಪುಟಗಳಲ್ಲಿ ಲೇಖಕರು ಪ್ರವಾಸಕ್ಕೆ ಪೂರ್ವದಲ್ಲಿ ಪತ್ನಿಯೊಂದಿಗೆ ಭೇಟಿಮಾಡಿದ ಬಂಧು-ಮಿತ್ರರ ಖಾಸಗಿ ವಿವರಗಳು ಸ್ವಾರಸ್ಯಕರವಾಗಿವೆ. ಅದು ಸ್ನೇಹಜೀವಿಯೊಬ್ಬರ ತುಂಬುಜೀವನ ಪ್ರೀತಿಯನ್ನೂ, ಕೌಟುಂಬಿಕ ಬಾಂಧವ್ಯದಲ್ಲಿ ಅವರು ಹಾಗೂ ಅವರ ಪತ್ನಿ ಪಡೆಯುವ ಸಂತೋಷವನ್ನೂ ವಿವರಿಸುತ್ತದೆ. ಮಿತ್ರರ, ಕುಟುಂಬದ ಸದಸ್ಯರ ಪ್ರೀತಿಯಲ್ಲಿ ತೊಯ್ದುಹೋಗುವ ಲೇಖಕರು ಒಂದೆಡೆ "ಈ ಸ್ಪಂದನವೇ ಬದುಕಿನ ಸಾರ್ಥಕತೆ" ಎಂದಿರುವರು. ಗುರುಮೂರ್ತಿಯವರ ಪ್ರವಾಸ ಕಥನಗಳನ್ನು ಓದುವಾಗ ಈ ಮಾತು ನಿಜವೆನ್ನಿಸುತ್ತದೆ. ಅವರ ಬದುಕಿನಲ್ಲಿ ತುಂಬಿಕೊಂಡಿರುವ ಈ ಸ್ನೇಹವರ್ತುಲ ಭೌತಿಕ ಸಂಪತ್ತಿಗಿಂತ ಮಿಗಿಲಾದುದೆನಿಸುತ್ತದೆ.

ಡಾ. ಕೆ.ಜಿ. ಗುರುಮೂರ್ತಿಯವರ ಈ ಪ್ರವಾಸ ಕಥನ ಎರಡು ರೀತಿಯಿಂದ ಮಹತ್ವದ್ದು. ೧. ಅವರು ಎರಡು ದೇಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನಡೆಸುವ ಸಾಂಸ್ಕೃತಿಕ ಸಂಘರ್ಷಗಳ ವಿಶ್ಲೇಷಣೆ. ೨. ಅವರ ಅಪಾರ ಆಸಕ್ತಿಯಲ್ಲಿ ವ್ಯಕ್ತವಾಗುವ ವ್ಯಾಪಕವಾದ ವಿಷಯ ಸಂಗ್ರಹಣೆ. ಇವುಗಳ ಜೊತೆಗೆ, ಅವರ ವೈಚಾರಿಕ ಚಿಂತನೆಗಳು, ವಿಷಯ ವಿಶ್ಲೇಷಣೆಯಲ್ಲಿ ಕೊಡುವ ಒಳನೋಟಗಳು, ಲವಲವಿಕೆಯ ನಿರೂಪಣೆ, ಸೂಕ್ಷ್ಮಗ್ರಾಹಿ ಮನಸ್ಸೊಂದು ಒಳ್ಳೆಯದನ್ನು ಗ್ರಹಿಸುತ್ತಾ, ಇಷ್ಟವಾಗದ್ದನ್ನು ಸಕಾರಣವಾಗಿ ಟೀಕಿಸುತ್ತಾ ಸಾಗುವ ರೀತಿ ಈ ಪ್ರವಾಸಕಥನದ ವಿಶೇಷಾಂಶಗಳು.

**ಅಲಾಸ್ಕ**

ದೇಜಗೌರವರ **ಜಗತ್ತಿನ ನಡುನೆತ್ತಿಯ ಮೇಲೆ** ಎಂಬ ಪ್ರವಾಸ ಕಥನ ಕೃತಿ ಉತ್ತರ ಧ್ರುವ ಸಮೀಪದ ದೊಡ್ಡ ದೇಶವಾದ ಅಲಾಸ್ಕವನ್ನು ಕುರಿತದ್ದು. ಈ ದೇಶ ಬುಡಕಟ್ಟುಗಳ ತವರು. ಆಧುನಿಕ ನಾಗರೀಕತೆಯ ಸೋಂಕಿನಿಂದ ಹೊರಗುಳಿದ ಆದಿಮ ಜನಾಂಗಗಳಲ್ಲಿ ಪೂರ್ವ ಇಂಡಿಯನ್ ಜನಾಂಗದವರೂ ಒಬ್ಬರು. ದೇಜಗೌರವರ ಅಲಾಸ್ಕ ಪ್ರವಾಸ ಕಥನವು ಲೇಖಕರೇ ಹೇಳಿಕೊಂಡಿರುವಂತೆ ಪ್ರವಾಸ ಗ್ರಂಥವೂ ಹೌದು, ಜಾನಪದ ಗ್ರಂಥವೂ ಹೌದು. ಪ್ರವಾಸದ ಸಿಹಿ ಅನುಭವಗಳ ಜೊತೆಗೆ

ಲೇಖಕರು ಆದಿಮ ಬುಡಕಟ್ಟು ಜನಾಂಗವಾದ ಪೂರ್ವ ಇಂಡಿಯನ್ನರ ಜೀವನ ವಿಧಾನವನ್ನು ಸಮರ್ಥವಾಗಿ ಅಧ್ಯಯನ ಮಾಡಿರುವರು. ದೇಜಗೌರವರೇ ಹೇಳಿದಂತೆ ಇಲ್ಲಿ ಕಲೆಹಾಕಿರುವ ಅಪೂರ್ವ ಮಾಹಿತಿ ಕಂಡು ಕೇಳಿ ಸಂಗ್ರಹಿಸಿದ್ದು, ಕೆಲವು ಗ್ರಂಥಗಳನ್ನೋದಿದ ಫಲವಾಗಿ ಮನಸ್ಸಿನಲ್ಲಿ ಶೇಖರಗೊಂಡ ಸಂಗತಿಗಳು.

ಅಲಾಸ್ಕಗೆ ಹೊರಟದ್ದು ಅಮೆರಿಕೆಯಿಂದ ಹಡಗಿನಲ್ಲಿ. ಅಮೆರಿಕೆಯ ಸಂಸ್ಥಾನಗಳಲ್ಲಿ ವಿಸ್ತೀರ್ಣದಲ್ಲಿ ಅಲಾಸ್ಕವೆ ದೊಡ್ಡದು. ವರ್ಷದ ಎಂಟು ತಿಂಗಳು ಮಳೆ ಮೋಡ ಮಂಜು ಚಳಿಗಾಳಿಗಳೊಡನೆ ಸೆಣಸಿ ಬದುಕು ನಡೆಸುತ್ತಿರುವವರು ಪೂರ್ವ ಇಂಡಿಯನ್ನರು. ಸೂರ್ಯ ಚಂದ್ರರಿಲ್ಲದ ಹಲವು ತಿಂಗಳು, ಕೆಲವು ತಿಂಗಳು ಮಧ್ಯರಾತ್ರಿ ಸೂರ್ಯ -ಈ ಪ್ರಕೃತಿ ವೈಚಿತ್ರ್ಯದ ನಡುವೆ ಸಾಹಸದ ಬದುಕು ನಡೆಸಿರುವ ಇವರ ಇತಿಹಾಸವನ್ನು ದೇಜಗೌ ತಮ್ಮ ಪ್ರವಾಸ ಕಥನದ ಪ್ರಾರಂಭದಲ್ಲಿಯೇ ಕೊಟ್ಟಿರುವರು (ಪು. ೫-೧೨). ಅಲಾಸ್ಕಕ್ಕೆ ಹೋಗಲು ಹಡಗು, ಪ್ರಯಾಣ ಮಾಡಿದಾಗಿನ ವಿವರಗಳು 'ಜಲಮಾನದ ಸುಖದಲೆಗಳ ಮೇಲೆ' ಎಂಬ ಒಂದು ಅಧ್ಯಾಯವನ್ನೇ ಆವರಿಸಿದೆ (ಪು. ೧೩-೩೬). ಮಾರ್ಗ ಮಧ್ಯೆ ತಾವು ನೋಡಿದ ಜೂನೋದ ಹಿಮನದಿಯನ್ನು ವಿಮಾನದಲ್ಲಿ ಕುಳಿತು ನೋಡಿದ ಪ್ರಕೃತಿಯ ದಿವ್ಯಲೀಲೆಯನ್ನು ದೇಜಗೌ ತನ್ಮಯವಾಗಿ ವಿವರಿಸಿರುವರು (ಪು. ೩೭-೩೮).

ದೇಜಗೌರವರ ಅಲಾಸ್ಕ ಪ್ರವಾಸದ ಮುಖ್ಯ ಗುರಿ ಪೂರ್ವದ ಇಂಡಿಯನ್ನರ ಜಾನಪದ ಕಲೆಗಳನ್ನು ನೋಡಬೇಕು, ಟೋಟೆಮ್ (=ಕುಲಬಾಂಧವ) ಸ್ತಂಭಗಳ ಮೂಲಸ್ವರೂಪ, ಇತಿಹಾಸವನ್ನು ಅಧ್ಯಯನ ಮಾಡಬೇಕು ಎಂಬುದಾಗಿದೆ. ಟೋಟೆಮ್ ಸಂಸ್ಕೃತಿಯ ಬಗೆಗಿನ ಅವರ ಆಸಕ್ತಿ ವಿಷಯಸಂಗ್ರಹಣೆಯಲ್ಲಿ ಪ್ರಕಟವಾಗಿದೆ. ಇಲ್ಲಿಯ ಅಧ್ಯಯನ ಓರ್ವ ಸಂಶೋಧಕನದು. ಇಲ್ಲಿ ಕೊಟ್ಟಿರುವ ಅಪೂರ್ವ ಮಾಹಿತಿಗಳು ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಜಾನಪದ ಅಭ್ಯಾಸಿಗಳಿಗೆ ಮೌಲಿಕವಾಗಿದೆ (ಪು. ೪೧-೫೬). ಈ ಪ್ರವಾಸಕಥನದ ಕೊನೆಯಲ್ಲಿ ಕೆಲವು ಟೋಟೆಮ್ ಕಥೆಗಳನ್ನು ಸಂಗ್ರಹಿಸಿಕೊಟ್ಟಿರುವುದು (ಪು-೯೬-೧೦೫) ಟೋಟೆಮ್ ಸಂಸ್ಕೃತಿಯ ಅಧ್ಯಯನ ಪೂರಕವಾಗುತ್ತದೆ.

**ಅಮರ ನೆನಪು ಅಮೆರಿಕಾ** ಡಾ.ಬಿ.ಎಸ್. ಸ್ವಾಮಿಯವರ ಅಮೆರಿಕಾ ಪ್ರವಾಸ ಕಥನ ಅಮೆರಿಕಾ ದೇಶದ ತುದಿಯಾದ ಕ್ಯಾಲಿಫೋರ್ನಿಯಾದಲ್ಲಿ ಅವರ ಮಗನಿದ್ದುದರಿಂದ ಈ ಪ್ರವಾಸ ಸಾಧ್ಯವಾಯಿತು. ಕ್ಯಾಲಿಫೋರ್ನಿಯಾ, ನ್ಯೂಯಾರ್ಕ್ ಮುಂತಾದ ಐದು ರಾಜ್ಯಗಳಲ್ಲಿ ಮೂರು ತಿಂಗಳು ಸುತ್ತಾಡಿ ಪಡೆದ ಅನುಭವವೇ ಈ ಪ್ರವಾಸಿ ಕಥನ. ಫೆಬ್ರವರಿಯಿಂದ ಮೇ ತಿಂಗಳವರೆಗೆ ಚಳಿಗಾಲ, ಮಳೆಗಾಲ

ಹಾಗೂ ಬೇಸಿಗೆ -ಹೀಗೆ ಮೂರು ಋತುಗಳ ಅನುಭವದ ಹಿನ್ನೆಲೆಯಲ್ಲಿ ಅಮೆರಿಕೆಯ ಕೆಲವು ಭಾಗಗಳ ಸುತ್ತಾಟದ ನೆನಪು ಮಧುರವಾಗಿದೆ. ಲೇಖಕರೇ ಹೇಳುವಂತೆ "ಅಮೆರಿಕಾದ ವಿವಿಧ ಜನಾಂಗಗಳು, ಸಂಸ್ಕೃತಿ, ಭಾಷೆ, ಆಚರಣೆ, ಆಚಾರ-ವಿಚಾರಗಳು, ಪ್ರಕೃತಿ ಸೌಂದರ್ಯದ ತಾಣಗಳು, ಕ್ರೀಡಾ ತಾಣಗಳು, ಮನರಂಜನಾ ಮಾಧ್ಯಮಗಳು ಒಂದೊಂದೂ ಎತ್ತರಕ್ಕೆ ನಿಂತು 'Great America' ಆಗುತ್ತದೆ. ಮನದ ಹಾಳೆಯಲ್ಲಿ ಅಚ್ಚೊತ್ತಿ ನಿಂತು ಸದಾ ಜ್ಞಾಪಿಸುವಂತೆ ಮಾಡುತ್ತದೆ..."

ಪ್ರವಾಸ ಕಥನ ಪಾಸ್‌ಪೋರ್ಟ್ ಪಡೆಯಲು ಪಟ್ಟ ಪ್ರಯಾಸದ ವಿವರಣೆಯೊಂದಿಗೆ ಪ್ರಾರಂಭವಾಗುತ್ತದೆ. ಹಲವು ಬಾರಿ ಪಾಸ್‌ಪೋರ್ಟ್ ಆಫೀಸಿಗೆ ಎಡತಾಕಿದರೂ ಅನುಗ್ರಹವಾಗದೆ ಇದ್ದದ್ದು ಲಂಚ ಕೊಟ್ಟ ಎರಡೇ ಎರಡು ದಿನಗಳಲ್ಲಿ ಆದ ಪವಾಡ ಈ ದೇಶದ ಭ್ರಷ್ಟ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ವೀಸಾ ಪಡೆಯುವಲ್ಲಿ ಆಗುವ ಬವಣೆ, ಕಹಿ ಅನುಭವ ಸಾಮಾನ್ಯವಾಗಿ ಎಲ್ಲರಲ್ಲೂ ಒಂದೇ ಬಗೆಯದ್ದು. ವೀಸಾ ನಮಗೆ ಸುಲಭವಾಗಿ ದೊರೆಯಿತು ಎಂದು ತಮ್ಮ ಪ್ರವಾಸ ಕಥನದಲ್ಲಿ ಹೇಳಿದವರೇ ಕಡಿಮೆ.

ಭಾರತೀಯ ಪರಿಸರಕ್ಕಿಂತ ಸಂಪೂರ್ಣ ಭಿನ್ನವಾದ ಕ್ಯಾಲಿಫೋರ್ನಿಯಾದ ಹೊಸ ಪ್ರಪಂಚದ ಅಚ್ಚರಿಯಾಗಿ ತೋರುತ್ತದೆ. ಸ್ಯಾನ್‌ಫ್ರಾನ್ಸಿಸ್ಕೋನಗರದ ಗೋಲ್ಡನ್ ಗೇಟ್‌ನ ವರ್ಣನೆ, ನಗರದ ಸುತ್ತಾಟದ ಸವಿರಾದ ಅನುಭವಗಳು ಚೆನ್ನಾಗಿ ನಿರೂಪಣೆಗೊಂಡಿವೆ. "ಎಷ್ಟು ನೋಡಿದರೂ ಮುಗಿಯುವುದಿಲ್ಲ. ಬೆಂಗಳೂರುನಗರ ಇದಕ್ಕಿಂತ ದೊಡ್ಡದಾಗಿದ್ದರೂ ಈ ಸೌಂದರ್ಯ, ಅಚ್ಚುಕಟ್ಟು, ಪರಿಶುದ್ಧತೆಯನ್ನು ಕಾಣಲಾಗದು" ಎಂದು ಮನಸ್ಸು ಸಹಜವಾಗಿಯೇ ತುಲನೆ ಮಾಡುತ್ತದೆ. ಅಮೆರಿಕ ವಾಸ್ತವ್ಯದಲ್ಲಿ ಅಲ್ಲಿನ ಜನಜೀವನವನ್ನು, ಬದುಕಿನ ರೀತಿಯನ್ನು, ಸೌಲಭ್ಯಗಳನ್ನು ಭಾರತೀಯ ಮನಸ್ಸು ಅಚ್ಚರಿಯಿಂದ ಗಮನಿಸುತ್ತಾ ಹೋಗುವುದನ್ನು ಈ ಪ್ರವಾಸ ಕಥನದ ಕೇಂದ್ರ ನೆಲೆಯಲ್ಲಿ ಗುರುತಿಸಬಹುದು. ಹೋಟೆಲ್‌ನ ಡಬಲ್‌ರೂಂಗೆ ೬೦ ಡಾಲರ್ (ಭಾರತದ ಹಣದ ಲೆಕ್ಕಾಚಾರದಲ್ಲಿ ೨೪೦೦/- ಎಂದು ಗುಣಿಸುವಾಗ) ನಮ್ಮ ದೇಶಕ್ಕೂ ಈ ದೇಶಕ್ಕೂ ಇರುವ ವ್ಯತ್ಯಾಸವನ್ನು ಕಾಣುತ್ತಾರೆ ಲೇಖಕರು. ಅಲ್ಲಿನ ಸಂಬಳಕ್ಕೆ ಆ ದುಡ್ಡಿನ ಬೆಲೆ, ಇಲ್ಲಿನ ಸಂಬಳಕ್ಕೆ ಈ ದುಡ್ಡಿನ ಬೆಲೆ ಎಂದು ಲೇಖಕರು ಸಮಾಧಾನ ತಂದುಕೊಳ್ಳುವರು (ಪು. ೫೨) ಲಾಂಸ್ ಏಂಜಲೀಸ್, ಡೌನ್‌ಟೌನ್‌ಗಳ ಪರಿಚಯ ಪುಟ್ಟದಿದ್ದರೂ ಚೆನ್ನಾಗಿ ಬಂದಿದೆ. ಅಮೆರಿಕದಲ್ಲಿ ಕೆಲಸವಿಲ್ಲದೆ ಕಾಲ ನೂಕುವುದು ಬಹಳ ಕಷ್ಟವೆನ್ನುವುದನ್ನು ಲೇಖಕರು ತಮ್ಮ ಅಮುಭವದ ಹಿನ್ನೆಲೆಯಲ್ಲಿ ಹಲವು ಬಾರಿ ಉದ್ಗರಿಸಿರುವರು (ಪು. ೫೭,೬೭). ಲಾಸ್‌ವೇಗಾಸ್‌ನ ವಿಲಾಸಿ ಬದುಕಿನ ಚಿತ್ರ

ಚೆನ್ನಾಗಿ ಬಂದಿದೆ (ಪುಟ ೮೪-೮೯), ಅಮೆರಿಕದ ಮುಕ್ತಕಾಮದ ಬದುಕು ಹಾಗೂ ಅದು ಹುಟ್ಟುಹಾಕಿದ ಸಮಸ್ಯೆಯ ಬಗೆಗೂ ಲೇಖಕರು ವಿಚಾರಮಾಡುವರು (ಪು. ೯೧-೯೨). ಅಮೆರಿಕಾದ ಸಮೂಹಮಾಧ್ಯಮಗಳ ಬಗೆಗೂ ಉಪಯುಕ್ತ ಮಾಹಿತಿಗಳಿವೆ (ಪು ೯೭-೧೦೦) ಕೆನಡಾದ ನಯಾಗಾರ ಜಲಪಾತದ ಬಗೆಗಿನ ವಿವರ ಈ ಪ್ರವಾಸ ಕಥನದ ಆಕರ್ಷಕ ಭಾಗ.

ಸಮೃದ್ಧಿಯ, ಸುಖದ, ಚೆಲುವಿನ ನಾಡಿನಲ್ಲಿದ್ದರೂ ಲೇಖಕರಿಗೆ ಎಂದಿಗೆ ಭಾರತ ನೋಡುವುದು? ನಮ್ಮೂರನ್ನು ಕಾಣುವುದು? ಎನ್ನುವ ತವಕದ ಪಂಜರದಲ್ಲಿ ಸೆರೆಸಿಕ್ಕಿದ ಗಿಳಿಯ ಅನುಭವ. ಎಷ್ಟೇ ಚೆಂದ ಸ್ಥಳವಿದ್ದರೂ ಅವುಗಳನ್ನು ಮತ್ತೆ ಮತ್ತೆ ನೋಡುವುದು ಸಾಕಪ್ಪ ಎನ್ನಿಸಿಬಿಟ್ಟಿತು. ಎಂದಿಗೆ ನಮ್ಮ ಗಾಳಿ ಸೇವಿಸುವುದು, ಎಂದಿಗೆ ನಮ್ಮ ನೀರು ಕುಡಿಯುವುದು, ನಿಂದಿಗೆ ನಮ್ಮ ಜನರೊಡನೆ ಬೆರೆಯುವುದು ಎನ್ನಿಸಿಬಿಟ್ಟಿತು" (ಪು. ೧೦೦)

ಅಮೇರಿಕಾ ಪ್ರವಾಸ ಮಾಡಿ ಭಾರತಕ್ಕೆ ಬಂದ ಮೇಲೆ, ಅಮೇರಿಕಾ ಅಮೇರಿಕಾವೇ, ಭಾರತ ಭಾರತವೇ! ಎಂದು ಲೇಖಕರು ಉದ್ಗಾರ ತೆಗೆಯುವರು (ಪು. ೧೨೪). ಎರಡೂ ದೇಶಗಳನ್ನು ತುಲನೆ ಮಾಡಿ ಯಾವುವೂ ಕಡಿಮೆ ಇಲ್ಲ" ಎನ್ನುವ ತೀರ್ಮಾನಕ್ಕೆ ಬರುವರು (ಪು. ೧೨೪), ನಮ್ಮ ಜನಸಂಖ್ಯೆ, ಅಶಿಸ್ತು, ಅಜ್ಞಾನ ನಮ್ಮ ಪ್ರಗತಿಗೆ ಅಡ್ಡಿಯಾಗಿದೆ. ಇಂದಿಗೂ ನಮ್ಮ ಜನರು ಮನಸ್ಸು ಮಾಡಿದರೆ ಈ ದೇಶವನ್ನು ನಂದನವನವನ್ನಾಗಿ ಮಾಡಬಹುದು. ನಮ್ಮಲ್ಲಿರುವ ಕಲೆ, ಸಂಸ್ಕೃತಿ, ಸಾಹಿತ್ಯ ಯಾವ ದೇಶದ ಜನರನ್ನಾದರೂ ತಲೆದೂಗಿಸುವುದು. ಆದರೆ ಅದನ್ನು ಶಿಸ್ತಿನಲ್ಲಿ ಇಡುವ, ಶುದ್ಧವಾಗಿಡುವ ಜನರನ್ನಾಕರ್ಷಿಸುವಂತೆ ಮಾಡುವ ಮನಸ್ಸು ಮಾಡಿದಾಗಲೇ ಅದು ಸಾಧ್ಯ ಅಲ್ಲವೇ? ಎಂಬ ತಮ್ಮ ನಿಲವಿನೊಂದಿಗೆ ಪ್ರವಾಸ ಕಥನವನ್ನು ಮುಗಿಸುವರು. ಅಮೆರಿಕದ ಸಾಮಾಜಿಕ ಜೀವನವನ್ನು ಕನ್ನಡ ಲೇಖಕನೊಬ್ಬ ತನ್ನದೇ ಆದ ರೀತಿಯಲ್ಲಿ ಗ್ರಹಿಸುವ, ಮೆಚ್ಚುವ, ಟೀಕಿಸುವ, ತುಲನೆಮಾಡುವ ಮೂಲಕ ಈ ಪ್ರವಾಸ ಕಥನಕ್ಕೆ ಬೇರೊಂದು ಆಯಾಮವನ್ನು ಕೊಡುವರು.

ಡಾ. ಬಿ.ಎಸ್. ಸ್ವಾಮಿಯವರು ಎರಡನೆ ಬಾರಿ ಅಮೇರಿಕಾಕ್ಕೆ ಪ್ರವಾಸ ಹೋದಾಗಿನ ಅನುಭವವನ್ನು ಒಂದು ಪುಟ್ಟ ಲೇಖನ ರೂಪದಲ್ಲಿ ತಮ್ಮ ಲೇಖನಗಳ ಸಂಕಲನವೊಂದರಲ್ಲಿ ಪ್ರಕಟಿಸಿರುವರು (ಸಾಹಿತ್ಯ ತರಂಗಿಣಿ, ದಾಮಿನಿ ಪ್ರಕಾಶನ, ನಂ. ೫೫೮ ೯ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು-೪೦೨, ೨೦೦೨) ಮೊದಲ ಬಾರಿ ಅಮೇರಿಕಾಕ್ಕೆ ಹೋದಾಗ ಸನ್ನಿವೇಲ್ ನಗರದಲ್ಲಿ ವಾಸ್ತವ್ಯವಿದ್ದಿತು. ಎರಡನೆ ಬಾರಿ ಪ್ರವಾಸದಲ್ಲಿ ಕ್ಯಾಲಿಫೋರ್ನಿಯಾ ರಾಜ್ಯದ ಫ್ರೀಮಾಂಟ್ ಕ್ರೀಕ್

ಸೈಡ್‌ನಲಿ ವಾಸ್ತವ್ಯ ಮಾಡಿದ್ದರು. ಅವರ ಈ ಬಾರಿಯ ವಾಸ್ತವ್ಯದ ಸ್ಥಳದಲ್ಲಿ ಆಚರಿಸಿದ ಹಾಲೋವಿನ್ ಹಬ್ಬದ ಆಚರಣೆಯ ವಿವರಗಳನ್ನು ತಮ ಪ್ರವಾಸ ಕಥನದಲ್ಲಿ ನೀಡಿರುವರು. ಹಾಗೆಯೇ, ತಾವು ನೋಡಿದ ಯೋಸೆಮಿಟಿ ನ್ಯಾಷನಲ್ ಪಾರ್ಕ್, ಸಿಲಿಕಾನ್ ವ್ಯಾಲಿಯ ವಿಂಚೆಸ್ಟರ್ ಮಿಸ್ಟರಿಹೌಸ್, ಸ್ಯಾನೋಸೆ ಸ್ಟೇಟ್ ಯೂನಿವರ್ಸಿಟಿ, ಮಾಂಟ್ರೆಕೊಲ್ಲಿಯ ಅಕ್ವೇರಿಯಂ, ಬರ್ಕ್ಲಿ ವಿಶ್ವವಿದ್ಯಾಲಯ, ಅಲ್ಕೆಟ್ರಾಜ್ ದ್ವೀಪ -ಇವುಗಳ ಬಗೆಗೂ ವಿವರ ನೀಡಿರುವರು, ಡಾ.ಬಿ.ಎಸ್. ಸ್ವಾಮಿಯವರು ಅಮೆರಿಕಾದಲ್ಲಿದ್ದಾಗಲೇ ನ್ಯೂಯಾರ್ಕ್ ನಗರದ ವಿಶ್ವ ವ್ಯಾಪಾರ ಕೇಂದ್ರದ ಎರಡು ಕಟ್ಟಡಗಳು, ವಾಷಿಂಗ್‌ಟನ್ ಪೆಂಟಗಾನ್ ಕಟ್ಟಡಗಳ ಮೇಲೆ ಭಯೋತ್ಪಾದಕರ ವಿಮಾನ ದಾಳಿಯಾಗಿ ಅವುಗಳ ಧ್ವಂಸ ಮಾಡಿದ ದಾರುಣ ಘಟನೆಯ ವಿವರಗಳೊಂದಿಗೆ ಪ್ರವಾಸ ಕಥನ ಮುಕ್ತಾಯಗೊಂಡಿದೆ. "ಸೆಪ್ಟೆಂಬರ್ ೧೧ರ ಭಯೋತ್ಪಾದಕರ ದಾಳಿಯಿಂದಾಗಿ ಅಮೆರಿಕಾದ ವಾತಾವರಣವೆ ಬದಲಾಯಿತು. ಅದರ ಜೊತೆಗೆ ಆಂತರಾಕ್ಸ್ ಬ್ಯಾಕ್ಟೀರಿಯಾ ಭೀತಿ, ಕೊಲ್ಲಿ ಪ್ರದೇಶದ ಗೋಲ್ಡನ್‌ಗೇಟ್ ಮೊದಲಾದ ಸೇತುವೆಗಳ ಧ್ವಂಸದ ಭಯ -ಹೀಗಾಗಿ ಎಲ್ಲಿ ಹೋಗುವುದೂ ಕಷ್ಟ ಸಾಧ್ಯವಾಯಿತು. ಕೊರೆವ ಚಳಿ ಬೇರೆ..." ಈ ಕಾರಣಗಳಿಂದಾಗಿ ಪ್ರವಾಸ ಹೆಚ್ಚಿಗೆ ಮಾಡಲಾಗದ್ದನ್ನು ಲೇಖಕರು ತಮ್ಮ ಲೇಖನದ ಪ್ರಾರಂಭದಲ್ಲಿಯೇ ಹೇಳಿಕೊಂಡಿರುವರು.

# ಭರತಖಂಡ ಪ್ರವಾಸ ಸಾಹಿತ್ಯ

**"India is a country of all seasons and all reasons"**

ವಿದೇಶೀಯರಿಗೆ ಭಾರತದ ಪ್ರವಾಸೀ ವಿಶೇಷತೆಯನ್ನು ಪರಿಚಯಿಸುವಾಗ ಬಹಳ ಅರ್ಥಪೂರ್ಣವಾಗಿ ಹೇಳುವ ಭಾರತವು ೩, ೨೮೭, ೨೬೩, ಚದುರ ಕಿಲೋ ಮೀಟರ್ ಅಳತೆಯ ಜಾಗವನ್ನು ಹೊಂದಿದ್ದು ಅದು ಆಕಾರದಲ್ಲಿ ಸುಮಾರು ಪಶ್ಚಿಮ ಯೂರೋಪನ್ನು ಹೋಲುತ್ತದೆ. ಅದು ಉತ್ತರದಿಂದ ದಕ್ಷಿಣಕ್ಕೆ ೩,೨೦೦ ಕಿಲೋ ಮೀಟರನ್ನು ಪೂರ್ವದಿಂದ ಪಶ್ಚಿಮಕ್ಕೆ ೩,೦೦೦ ಕಿಲೋ ಮೀಟರನ್ನೂ ಹೊಂದಿದೆ. ಅದರ ಕರಾವಳಿ ಪ್ರದೇಶವು ೬೦೮೩ ಕಿಲೋ ಮೀಟರ್. ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳು ಇಂಡೋನೇಷ್ಯಾವನ್ನು ಬಹುವಾಗಿ ತಾಗುವಂತಿದ್ದು ಅವು ಭಾರತಕ್ಕೆ ಸೇರಿದ ಭಾಗಗಳು. ಭಾರತ ಜನಸಂಖ್ಯೆ ಸು. ೯೦೦ ಮಿಲಿಯನ್. ವಿಶ್ವದ ಏಳುಮಂದಿ ಮಾನವರಲ್ಲಿ ಒಬ್ಬ ಭಾರತೀಯನಾಗಿರುತ್ತಾನೆ. ಅದರ ಜನಸಂಖ್ಯೆ ವರ್ಷಕ್ಕೆ ೧೪ ಮಿಲಿಯನ್‌ನಂತೆ ಏರುತ್ತಿದೆ.

ನಾವು ಪ್ರವಾಸ ಏಕೆ ಮಾಡಬೇಕು. ಪ್ರವಾಸದ ಪೂರ್ವಸಿದ್ಧತೆಗಳು, ಮನೆಯಲ್ಲಿನ ಏರ್ಪಾಡುಗಳು, ವ್ಯವಸ್ಥಿತ ಪ್ರವಾಸಗಳು (Conducted Tours), ಸ್ವಂತ ವಾಹನದಲ್ಲಿ ಪ್ರವಾಸ ಕೈಗೊಳ್ಳುವಾಗ ವಹಿಸಬೇಕಾದ ಎಚ್ಚರಿಕೆಗಳು ಅಖಿಲ ಭಾರತ ಪ್ರವಾಸದಲ್ಲಿ ಸಂಚಾರ ಸಾಧನಗಳು- ತಂಗಲು ಸ್ಥಳಗಳು, ಉತ್ತರ ಭಾರತ ಪ್ರವಾಸದಲ್ಲಿ ಯಾವುದನ್ನು ನೋಡಬೇಕು, ಕೊಳ್ಳಬೇಕು, ಪೂರ್ವ ಭಾರತದಲ್ಲಿ ನೋಡುವ ಸ್ಥಳಗಳಾವುವು, ಪಶ್ಚಿಮ ಮತ್ತು ಮಧ್ಯ ಭಾರತದಲ್ಲಿ ಪ್ರೇಕ್ಷಣೀಯ ಸ್ಥಳಗಳಾವುವು, ದಕ್ಷಿಣ ಭಾರತದಲ್ಲಿ ನೋಡುವ ಸ್ಥಳಗಳಾವುವು, ವಿದೇಶ ಯಾತ್ರೆಗೆ ಯಾವ ಸಿದ್ಧತೆ ಮಾಡಿಕೊಳ್ಳಬೇಕು. ಕೆಲವು ವ್ಯವಸ್ಥಿತ ವಿದೇಶಿ ಪ್ರವಾಸಗಳು -ಹೀಗೆ ದೇಶ ವಿದೇಶಗಳ ಪ್ರವಾಸಕ್ಕೆ ಸಂಬಂಧಿಸಿದಂತೆ ಪ್ರಯಾಣಿಕರಿಗೆ ಅಗತ್ಯ ಮಾಹಿತಿಗಳನ್ನು ಲೀಲಾಮಿರ್ಲೆಯವರು ತಮ್ಮ **ಪ್ರವಾಸ** ಎಂಬ ಪುಟ್ಟ ಪುಸ್ತಕದಲ್ಲಿ ಕೊಟ್ಟಿರುವರು.

ಭಾರತ ಬಹುತೇಕ ಭಾಗಗಳನ್ನು ಇಲ್ಲವೆ ದಕ್ಷಿಣ ಭಾರತ, ಉತ್ತರ ಭಾರತಗಳ ಪ್ರಸಿದ್ಧ ಭಾಗಗಳನ್ನು ಸಂದರ್ಶಿಸಿ ತಮ್ಮ ಅನುಭವಗಳನ್ನು ಸಾಹಿತ್ಯಿಕವಾಗಿ

ನಿರೂಪಿಸಿದವರು ಬೆರಳೆಣಿಕೆಯ ಮಂದಿ. ಟೂರಿಸ್ಟ್ ಆಗಿ ಆ ಮನೋಭಾವದಿಂದಲೇ ಭಾರತವನ್ನು ನೋಡಿದವರು ಬಹಳ ಜನ. ಕಲೆ, ಪ್ರಕೃತಿ, ಜನಜೀವನ, ಬದುಕು, ಸಂಸ್ಕೃತಿ ಹೀಗೆ ನಾನಾ ಮಜಲುಗಳಲ್ಲಿ ನಿಂತು ಭಾರತವನ್ನು ನೋಡಿದವರು, ಅಭ್ಯಾಸ ಮಾಡಿದವರು ಬಹಳ ಕಡಿಮೆ. ಕನ್ನಡಿಗರಾಗಿ ಹೀಗೆ ಸುತ್ತಾಡಿದವರಲ್ಲಿ ನಮ್ಮ ನೆನಪಿಗೆ ಥಟ್ಟನೆ ಬರುವವರು ಕಾರಂತರೊಬ್ಬರೇ. ಭಾರತದ ಭಾಗಗಳನ್ನು ಬೇರೆ ಬೇರೆ ಕಾರಣಗಳಿಗಾಗಿ ಸುತ್ತಾಡಿದವರು ಹಲವರಿರುವರು. ಉದಾಹರಣೆಗೆ ಸಿದ್ಧವನಹಳ್ಳಿ ಕೃಷ್ಣಶರ್ಮರು ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ವರ್ಧಾದ ಅವರ ಆಶ್ರಮಕ್ಕೆ ಬಂದು ಕೆಲಕಾಲ ಅಲ್ಲಿ ನೆಲೆನಿಂತರು. ಕೃಷ್ಣಶರ್ಮರು ಆಶ್ರಮದ ನಿತ್ಯ ಜೀವನವನ್ನು, ಅಲ್ಲಿನ ಜನರ ಸ್ವಭಾವಗಳನ್ನು, ಅಲ್ಲಿನ ಶಿಕ್ಷಣ ಕ್ರಮವನ್ನು ಸೊಗಸಾಗಿ ನಿರೂಪಿಸಿರುವರು. ವೀ.ಚಿ. ಹಿತ್ತಲಮನಿಯವರ ಪ್ರವಾಸ ಪ್ರಧಾನವಾಗಿ ಭಾರತದ ಹಲವೆಡೆಗಳಲ್ಲಿನ ಒಕ್ಕಲುತನದ ಅಭ್ಯಾಸ ಮಾಡುವುದಕ್ಕಾಗಿಯೇ ಆಗಿರುವಂತಿದೆ, ಕೃಷ್ಣಾನಂದ ಕಾಮತರು ಪಶ್ಚಿಮ ಬಂಗಾಲ ಹಾಗೂ ರಾಜಾಸ್ಥಾನದಲ್ಲಿ ತಮಗಾದ ಅನುಭವಗಳನ್ನು ಅಲ್ಲಿನ ಜನಜೀವನದ ಅಭ್ಯಾಸದೊಂದಿಗೆ ನಿರೂಪಿಸಲು ಯತ್ನಿಸಿರುವರು. ಎಚ್.ಎಸ್. ರಾಘವೇಂದ್ರರಾವ್‌ರವರು ಪಶ್ಚಿಮ ಬಂಗಾಳ ಹಾಗೂ ಒರಿಸ್ಸಾ ರಾಜ್ಯಗಳಲ್ಲೂ ಜೆ.ಪಿ. ಬಸವರಾಜುರವರು ಅಸ್ಸಾಂ ರಾಜ್ಯದಲ್ಲೂ ಪ್ರವಾಸ ಕೈಗೊಂಡಿದ್ದು ಆಯಾ ರಾಜ್ಯಗಳ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಕೊಡುಗೆಗಳ ಹಿನ್ನೆಲೆಯಲ್ಲಿ ಜನ-ಮನವನ್ನು ತಿಳಿಯುವ ಪ್ರಯತ್ನ ನಡೆಸಿರುವರು. ಇವರ ಕೃತಿಗಳು ಪ್ರವಾಸ ಸಾಹಿತ್ಯಕ್ಕೆ ಒಳ್ಳೆಯ ಕೊಡುಗೆಗಳಾಗಿವೆ.

ಕಾರಂತರು ತಾವು ಕಂಡ ನಿಸರ್ಗ ಹಾಗೂ ವಾಸ್ತು ಕೃತಿಗಳ ಸೊಬಗನ್ನು ಓದುಗರಿಗೆ ಹೇಳಲು ಪ್ರಯತ್ನಿಸಿರುವರು. ಶೇಡಬಾಳದಲ್ಲಿ ಶಾಂತಿನಿಕೇತನದಂತಹ ಆದರ್ಶ ವಿದ್ಯಾಪೀಠವನ್ನು ನಿರ್ಮಿಸುವ ಕನಸು ಹೊತ್ತು ಮಿರ್ಜಿ ಅಣ್ಣಾರಾಯರು ಭಾರತದ ಪ್ರಮುಖ ಭಾಗಗಳನ್ನು ಸುತ್ತಾಡಿರುವರು. ಎಚ್.ಜೆ.ಜೋಶಿಯವರು ಅಜಂತಾ ಎಲ್ಲೋರಾಗಳ ಕಲಾವೈಭವವನ್ನು ಹೇಳಲು ತವಕಿಸಿರುವರು. ಹೀಗೆ ಇಲ್ಲಿನ ಪ್ರವಾಸದ ಗುರಿಯಲ್ಲಿ ವೈವಿಧ್ಯವಿದೆ.

ಶಿವರಾಮ ಕಾರಂತರ **'ಅಬೂವಿನಿಂದ ಬರಾಮಕ್ಕೆ'** ಭಾರತದ ಪ್ರೇಕ್ಷಣೀಯ ಸ್ಥಳಗಳಲ್ಲಿ ಮುಖ್ಯವಾದ ಅಬೂ, ಅಜ್ಮೀರ, ಪುಷ್ಕರ, ಜಯಪುರ, ದಿಲ್ಲಿ, ಸಿಮ್ಲಾ, ಆಗ್ರಾ, ಕಾಶಿ, ಡಾಲ್ಮಿಯಾನಗರ, ಕಲ್ಕತ್ತೆ, ಬರಾಮ -ಈ ಪ್ರದೇಶಗಳ ಸಂಚಾರೀ ಕಥನವಾಗಿದೆ. ಕಾರಂತರು ನಿಸರ್ಗ ಹಾಗೂ ವಾಸ್ತು ಕೃತಿಗಳ ಸೊಬಗಿನ ವಿಶೇಷತೆಯನ್ನು ನೋಡಿ ಅನುಭವಿಸಲು ಕೈಗೊಂಡ ಪ್ರವಾಸ ಇದಾಗಿದೆ. ಇಲ್ಲಿ ನಿಸರ್ಗಪ್ರಿಯನೊಬ್ಬನ,

ಕಲಾರಾಧಕನೊಬ್ಬನ ಸಹೃದಯಪರವಾದ ವಿಹಾರವನ್ನು ಕೃತಿಯುದ್ದಕ್ಕೂ ನಾವು ಕಾಣುತ್ತೇವೆ. ಕಣ್ಣಿಗೆ ನಿಲುಕುವಂತೆ, ಮನಸ್ಸಿಗೆ ಮುಟ್ಟುವಂತೆ ವರ್ಣಿಸುವ ಅವರ ಬರವಣಿಗೆ ಇಲ್ಲಿ ಹೊಸ ಅನುಭವ ಪ್ರಪಂಚವನ್ನು ವಿಸ್ತರಿಸುತ್ತಾ ಹೋಗುತ್ತದೆ. ಲವಲವಿಕೆಯಿಂದ ಕೂಡಿದ ಅವರ ಕಥನ ಹಾಸ್ಯದ ಮಿಶ್ರಣದಿಂದಾಗಿ ಬೇಸರ ನಿವಾರಿಸುತ್ತಾ ಓದಿಸಿಕೊಂಡು ಹೋಗುತ್ತದೆ. ಸಹ ಪ್ರವಾಸೀಮಿತ್ರ ಶ್ರೀಪತಿಯ ನಗೆತರಿಸುವ ನಡಾವಳಿಗಳಿಂದಾಗಿ ಪ್ರವಾಸಕಥನ ಇನ್ನಷ್ಟು ಸಹನೀಯವಾಗುತ್ತದೆ. ಅದು ಬರಿಯ ಪ್ರದೇಶಗಳ ವರ್ಣನೆಯಲ್ಲೇ ಮುಕ್ತಾಯವಾಗುವುದಾದರೆ ಗುರಿಮುಟ್ಟ-ದಂತಾಗುವುದಿಲ್ಲ. ಹೊಸ ನೆಲವನ್ನು ನೋಡಿ ಅಲ್ಲಿನ ಪರಿಚಿತ ಅಪರಿಚಿತ ಮಿತ್ರರೊಡನೆ ಬೆರೆತು ಉಂಡು ತಿಂದು ಮನಸೇಚ್ಛೆ ಹರಟೆ ಹೊಡೆದು ಅಲ್ಲಿನ ಜನಜೀವನ, ಭಾಷೆ ಇತ್ಯಾದಿಗಳ ಬಗೆಗೂ ಸಾಧ್ಯವಾದಷ್ಟು ಮಾಹಿತಿ ಪಡೆದು ಕೊಟ್ಟಲ್ಲಿ ಪ್ರವಾಸ ಕಥನದ ಉದ್ದೇಶ ಈಡೇರಿದಂತಾಗುತ್ತದೆ. ಕಾರಂತರು ಗಡಿಬಿಡಿಯ ಪ್ರವಾಸ ಕೈಗೊಂಡವರಲ್ಲ. ಅವರದು ನಿರ್ದಿಷ್ಟ ಗೊತ್ತುಗುರಿಗಳಿಲ್ಲದೆ ಮನಬಂದಂತೆ ವಿಹರಿಸುವ ಪ್ರವೃತ್ತಿ. ಹೀಗಾಗಿ ಉಳಿದವರ ಅವಾಂತರ ಕಾರಂತರ ಪ್ರವಾಸಕ್ಕಿಲ್ಲ. ಅವರು ನೆಲದ ಸಿರಿಯನ್ನು ಕಂಡಿದ್ದಾರೆ, ಮನುಷ್ಯ ನಿರ್ಮಿತ ಕಲೆಯ ಮಹೋನ್ನತಿಯನ್ನು ನೋಡಿ ಮೆಚ್ಚಿದ್ದಾರೆ, ಸುತ್ತಣ ಬದುಕನ್ನು ಕಣ್ಣು-ಕಿವಿ ತೆರೆದು ನೋಡಿದ್ದಾರೆ, ಸ್ನೇಹಿತರ ಮಾತಿನ ಸವಿ ಉಂಡಿದ್ದಾರೆ, ಅತಿಥ್ಯಕ್ಕೆ ಮನಸೋತು ಮನೆಯವರಲ್ಲಿ ಒಬ್ಬರಾಗಿ ಓಡಾಡಿದ್ದಾರೆ. ಹೀಗಾಗಿ ಅವರ ಅನುಭವ ಪ್ರಪಂಚ ದೊಡ್ಡದು, ಅಷ್ಟೇ ಮಟ್ಟಿಗೆ ವಿಶಿಷ್ಟವಾದುದು.

ಸಿದ್ಧವನಹಳ್ಳಿ ಕೃಷ್ಣಶರ್ಮರ **'ವರ್ಧಾಯಾತ್ರೆ'**ಯು ಲೇಖಕರು ವರ್ಧಾದಲ್ಲಿ ಹಲವು ದಿವಸಗಳು ಬಾಪೂರವರೊಡನೆ ಇದ್ದು ಪಡೆದ ಅನುಭವಗಳ ಕಥನವಾಗಿದೆ. ಬಾಪೂರವರ ಆಶ್ರಮದಲ್ಲಿ ಬಾಪೂಜಿಯವರ ದಿನಚರಿ, ಶಿಷ್ಯ ಸಮೂಹದ ಆಚರಣೆ, ಸಾಮೂಹಿಕ ಪ್ರಾರ್ಥನೆ ಇವೆಲ್ಲವುಗಳ ಸೊಗಸಾದ ನಿರೂಪಣೆಯಿದೆ. ವರ್ಧಾದ ಬಾಪೂ ಆಶ್ರಮ ದೇಶದ ಮಹಾನ್ ನಾಯಕರುಗಳಿಂದ ಸದಾ ತುಂಬಿರುತ್ತಿತ್ತು. ಭಾರತದ ಸ್ವಾತಂತ್ರ್ಯ ಶಿಲ್ಪಿಗಳೆಲ್ಲರ ಪರಿಚಯ ಅಲ್ಲಿ ಸುಲಭ ಲಭ್ಯ. ಬಾಪೂಜಿಯವರ ಪರ್ಣಕುಟೀರ, ಬಜಾಜವಾಡಿಯ ಬಂಗಲೆ, ಮಗನವಾಡಿ ಮತ್ತು ಅಲ್ಲಿನ ಸಂಗ್ರಹಾಲಯ, ಜಮನಾ ಕುಟೀರ, ಸೇಗಾಂವ್, ನಾಲವಾಡಿ ಮೊದಲಾದ ಪವಿತ್ರ ಸ್ಥಳಗಳ ದರ್ಶನಲಾಭವು ನಮಗಿಲ್ಲಿ ಆಗುತ್ತದೆ. ಅಲ್ಲಿನ ಶಿಕ್ಷಣವನ್ನು ಕುರಿತು ಹೇಳುವಾಗ "ವರ್ಧಾ ಶಿಕ್ಷಣ ವಿಧಾನದಲ್ಲಿ ಏನೇನು ಅಡಗಿದೆಯೋ ಕಾಲವೇ ತಿಳಿಸಬೇಕು. ಆದರೆ ನಾವು ಕಲಿತ ವಿದ್ಯೆಗ ಜೀವನವು ಗಾವುದ ಗಾವುದ ದೂರವಿತ್ತೆಂಬುದು ಮಾತ್ರ ನನಗೆ ತಿಳಿದಿತ್ತು. ಅಂತಯೇ ಜೀವನದ ನಿಕಟ ಸಂಬಂಧವನ್ನು ಮನಸ್ಸಿನಲ್ಲಿಯೇ ಮಲುಕುಹಾಕುತ್ತ ಹಿಂತಿರುಗಿದೆ" (ಪು.೪೩) ಎಂದಿರುವರು. ಮುನ್ನುಡಿಯಲ್ಲಿ

ಬೇಂದ್ರೆಯವರು ಹೇಳಿರುವಂತೆ "ಕಥನ ಕೌಶಲ, ತತ್ತ್ವಗ್ರಥನ, ವರ್ಣನ, ವಿನೋದವಿಲಾಸ, ಮೊದಲಾದ ಅನೇಕ ಗುಣಗಳು ಕೃಷ್ಣಶರ್ಮರ ಮನಃಶಕ್ತಿಗಳ ಪರಿಪಾಕದೊಡನೆ ಸ್ವಚ್ಛಂದವಾಗಿ ಇಲ್ಲಿ ಬಂದಿವೆ." ಅವರ ನಿರೂಪಣೆಯಲ್ಲಿ ಸರಳತೆಯಿದೆ; ಓಜಸ್ಸಿನಿಂದ ಕೂಡಿದ ಭಾಷೆ ಅವರ ವಿಚಾರಗಳನ್ನು ಮಂಡಿಸುವಾಗ ಪರಿಣಾಮ ರಮಣೀಯವಾಗಿ ಶಕ್ತಿಶಾಲಿಯಾಗುತ್ತದೆ. ಅವರ ವಿನೋದದ ನುಡಿಗಳಲ್ಲಿ ತಿಳಿಯಾದ ಹಾಸ್ಯವಿದೆ. ಅರ್ಥಪೂರ್ಣ ಪದಪುಂಜಗಳಿಂದ ಕೂಡಿದ ವಾಕ್ಯಗಳು ಅವರ ವಿಶಿಷ್ಟ ಗದ್ಯಶೈಲಿಯ ಕುರುಹಾಗಿದೆ.

ಕೃಷ್ಣಶರ್ಮರ ಮತ್ತೊಂದು ಕೃತಿ **'ದೇಶೀ ಸಂಸ್ಥಾನಗಳಲ್ಲಿ'** ಪ್ರವಾಸಿಯೊಬ್ಬನು ತನ್ನ ಸುತ್ತಾಟದ ಕಾಲದಲ್ಲಿ ಕಂಡು ಕೇಳಿ ತಿಳಿದ ವಿಷಯಗಳನ್ನು ಸರಸವಾಗಿ ನಿರೂಪಿಸುವ ಪ್ರವಾಸಕಥನವಾಗಿದೆ. ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರ ಸಂಸ್ಥಾನಗಳ ಪ್ರವಾಸ ಕೈಗೊಂಡಾಗ ಲೇಖಕರಿಗೆ ಒದಗಿದ ವಿಶಿಷ್ಟ ಅನುಭವಗಳು ಅವರದೇ ಆದ ಅಪೂರ್ವ ಗದ್ಯಶೈಲಿಯಲ್ಲಿ ಮಿನುಗಿವೆ. "ಹತ್ತು ಊರು ತಿರುಗಿದವ ಅಲ್ಲಿನ ಕಾಲ ದೇಶ ವರ್ತಮಾನವನ್ನು ಸರಸವಾಗಿ ಬಣ್ಣಿಸುವ ಪ್ರವಾಸ ಸಾಹಿತ್ಯದ ರೀತಿ ಇದು" ಎಂದು ಲೇಖಕರು ಕೃತಿಯ ಬಗೆಗೆ ಹೇಳಿಕೊಂಡಿರುವ ಈ ಮಾತುಗಳು-ಪುಸ್ತಕ ಓದಿ ಮುಗಿಸಿದ ಮೇಲೆ-ಸಹಜವೆನ್ನಿಸುತ್ತವೆ.

**'ಭೂದಾನ ಯಜ್ಞ ಯಾತ್ರೆ'** ಕೃಷ್ಣಶರ್ಮರ ಇನ್ನೊಂದು ಕೃತಿ. ವಿನೋಬಾಜಿಯವರು ಉತ್ತರ ಪ್ರದೇಶದಲ್ಲಿ ಭೂದಾನ ಚಳುವಳಿಯ ಸಂದರ್ಭದಲ್ಲಿ ಮಾಡಿದ ಪಾದಯಾತ್ರೆಯ ಬಗೆಗಿನ ಒಂದು ವಿಸ್ತೃತ ಪರಿಚಯ ಇದಾಗಿದೆ. ಪಾದಯಾತ್ರೆಯ ನಿರೂಪಣೆ ಸ್ವಾರಸ್ಯಕರವಾಗಿದ್ದು ಪುಸ್ತಕ ಸುಸೂತ್ರವಾಗಿ ಓದಿಸಿಕೊಂಡು ಹೋದರೂ, ಇದರಲ್ಲಿ ಭೂದಾನ ಚಳುವಳಿಯ ಬಗೆಗಿನ ವಿಚಾರಗಳು ಪ್ರಧಾನವಾಗುವುದರಿಂದ ಪ್ರವಾಸದ ಕಾವು ಮನಸ್ಸನ್ನು ತಟ್ಟುವುದಿಲ್ಲ.

ರಾಘವೇಂದ್ರ ಪಾಟೀಲರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ೧೯೬೮ರ ಪ್ರವಾಸ ಅನುದಾನ ಯೋಜನೆಯ ನೆರವಿನಿಂದ ಮಹಾರಾಷ್ಟ್ರದಲ್ಲಿ ಪ್ರವಾಸ ಕೈಗೊಂಡು ತಮ್ಮ ಸಂಚಾರದ ಅನುಭವಗಳನ್ನು **'ಅಜ್ಞಾತ ಮುಂಬಯಿ'** ಎಂಬ ಕೃತಿಯಲ್ಲಿ ನಿರೂಪಿಸಿರುವರು. ಮಹಾನಗರ ಮುಂಬಯಿ ಕೈಗಾರಿಕೀಕರಣದ ಫಲವಾಗಿ ದಟ್ಟವಾಗಿ ಬೆಳೆದು ಇಂದು ಹಲವು ಸಮಸ್ಯೆಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಇಲ್ಲಿ ಮನುಷ್ಯ ಮನುಷ್ಯರ ನಡುವಣ ಸಂಬಂಧ ಹೇಗೆ ಅಜ್ಞಾತವಾಗುತ್ತಾ ಬರುತ್ತಿದೆ ಎಂಬುದರ ಬಗೆಗೆ ಸೂಕ್ಷ್ಮವೂ ಸಂವೇದನಾಶೀಲವೂ ಆದ ಮನಸ್ಸು ಚಿಂತಿಸಿದೆ. ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು ಕೃತಿಗೆ ಬರೆದಿರುವ 'ಮುನ್ನಡಿ'ಯಲ್ಲಿ ಕೃತಿಯ ವೈಶಿಷ್ಟ್ಯವನ್ನು

ಗುರುತಿಸುತ್ತಾ ಹೀಗೆ ಹೇಳುವರು: "ಪ್ರವಾಸ ಕೃತಿಗಳಂತೆ ಇದು ಬದುಕಿನ ಗ್ರಹಿಕೆಗಳನ್ನು ಸ್ಥೂಲ ವಿವರಗಳನ್ನು ಮಾತ್ರ ಗ್ರಹಿಸದೆ ಒಂದು ಸೃಷ್ಟಿಶೀಲ ಕೃತಿಯಂತೆ- ಈ ಸಂದರ್ಭದಲ್ಲಿ ಸಣ್ಣ ಕಥೆಯೊಂದರಂತೆ- ತಾನೇ ಒಂದು ಪ್ರತಿಮೆಯನ್ನು ಸೃಷ್ಟಿಸುತ್ತಾ, ಅದರ ಮುಖೇನ ಬದುಕಿನ ಸೂಕ್ಷ್ಮಗಳನ್ನು ಧ್ವನಿಸಲು ನೋಡುತ್ತಿದೆ. ಅದಕ್ಕಾಗಿಯೇ ಇದನ್ನು ನಾನು ವಿಶಿಷ್ಟ ಅರ್ಥದಲ್ಲಿ 'ಪ್ರವಾಸ ಕಥೆ' ಎಂದು ಕರೆಯುತ್ತೇನೆ, ಪ್ರವಾಸ ಕಥನ ಎಂತಲ್ಲ." ಲೇಖಕರು ಅನುಬಂಧ ರೂಪದಲ್ಲಿ ಮರಾಠೀ ದಲಿತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಾರಾಯಣ ಸುರ್ವೆ ಹಾಗೂ ಕೇಶವ ಮೆಶ್ರಾಮ ಇವರುಗಳ ಸಂದರ್ಶನವನ್ನು ಕೊಟ್ಟಿರುವರು.

**'ಶರಾವತಿಯಿಂದ ಸಾಬರಮತಿ'** ವೀ.ಚಿ. ಹಿತ್ತಲಮನಿ ಅವರ ಒಕ್ಕಲುತನದ ಪ್ರವಾಸ ಪ್ರಬಂಧವಾಗಿದೆ. ಅವರ ಪ್ರವಾಸ ಜೋಗದ ಜಲಪಾತದಿಂದ ಪ್ರಾರಂಭವಾಗುತ್ತದೆ. ನಿಸರ್ಗರಮಣೀಯತೆ ಅಲ್ಲಿ ನೆಲೆಗೊಂಡಿರುವುದನ್ನು ಕಂಡು ಅವರು ಅದನ್ನು 'ಗಂಧರ್ವಲೋಕ'ವೆಂದು ಕರೆಯುವರು. ಸಹ್ಯಾದ್ರಿಯ ಇಕ್ಕೆಲಗಳಲ್ಲಿಯ ಶೋಭಾಯಮಾನವಾಗಿ ಮೆರೆಯುವ ಉತ್ತರ ಕನ್ನಡ ಜಿಲ್ಲೆಯ ನಿಸರ್ಗದ ಅನುಪಮ ಸೌಂದರ್ಯವನ್ನು, ಆ ಜಿಲ್ಲೆಯ ಉದ್ದಗಲಕ್ಕೂ ಕಣ್ಣಾಡಿಸಿ ಬಂದ ಲೇಖಕರು ಮೆಚ್ಚಿ 'ಕನ್ನಡ ಕಾಶ್ಮೀರ'ವೆಂದು ಕರೆಯುವರು. ಅಲ್ಲಿನ ಸೌಂದರ್ಯವನ್ನು ಮೆಚ್ಚಿ ಆರಾಧಿಸಿದ ಕಣ್ಣು ಆ ಪ್ರಾಂತದ ಬಡತನವನ್ನು ಕಂಡು ಮರುಗಿದೆ. ಧಾರವಾಡ, ಬೆಳಗಾಂ, ಬಿಜಾಪುರ, ಪಾವಗಡ್, ಬಡೋದೆ, ದೋಹದ್, ಅಹಮಬಾದ್ -ಈ ಪ್ರದೇಶಗಳ ಲೇಖಕರ ಸಂಚಾರ ಪ್ರಧಾನವಾಗಿ ಒಕ್ಕಲುತನವನ್ನು ಅಧ್ಯಯನ ಮಾಡುವುದಕ್ಕಾಗಿ. ಆದಾಗ್ಯೂ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನ ಅವರ ಪ್ರವಾಸದ ಒಂದು ಭಾಗವಾಗಿದೆ. ಲೇಖಕರು ತಾವು ಸಂಚರಿಸಿದ ಸ್ಥಳಗಳಲ್ಲಿನ ಪ್ರಮುಖ ಬೆಳೆಗಳು, ಒಕ್ಕಲುತನದ ಪದ್ಧತಿಗಳು, ಸಂಶೋಧನಾ ಕೇಂದ್ರಗಳು ಇವುಗಳ ಪರಿಚಯ ಕೊಡುವುದರ ಜೊತೆಗೆ, ಆಯಾ ಪ್ರದೇಶದ ಪ್ರಗತಿಯ ವಿಹಂಗಮ ನೋಟವನ್ನೂ ಕೊಟ್ಟಿರುವರು. ನಮ್ಮ ಹಾಗೂ ನೆರೆನಾಡುಗಳ ಬಗೆಗೆ ನಾವು ಪರಿಚಯ ಪಡೆಯಲು ಈ ಕೃತಿ ಸಹಾಯ ಮಾಡುತ್ತದೆ. ಪ್ರವಾಸದ ವ್ಯಾಪ್ತಿ ಬಹಳ ದೊಡ್ಡದಿರುವುದರಿಂದ ವಿವರಣೆಗಳು ವರದಿರೂಪತಾಳುತ್ತದೆ; ಸಂಕ್ಷಿಪ್ತವಾಗುತ್ತದೆ.

ವಿವಿಧ ಲೇಖಕರು ದಕ್ಷಿಣ ಭಾರತದ ನಾಲ್ಕು ರಾಜ್ಯಗಳ (ಕರ್ನಾಟಕ, ಆಂಧ್ರ, ತಮಿಳುನಾಡು ಹಾಗೂ ಕೇರಳ) ಇಪ್ಪತ್ತೆರಡು ಸ್ಥಳಗಳನ್ನು ಸಂದರ್ಶಿಸಿ ಪಡೆದ ಅನುಭವಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ಪ್ರಯತ್ನ **'ನೋಡುವ ಬೀಡುಗಳು'** ಎನ್ನುವ ಕೃತಿಯಲ್ಲಿದೆ. ಇದರಲ್ಲಿ ಹೆಚ್ಚಿನ ಪ್ರೇಕ್ಷಣೀಯ ಸ್ಥಳಗಳನ್ನು ಕರ್ನಾಟಕ ಒಳಗೊಂಡಿದ್ದು ಪ್ರಸಿದ್ಧ ಕ್ಷೇತ್ರಗಳ ಅಧಿಕೃತ ಕೈಪಿಡಿ ಇದಾಗಿದೆ.

**'ಭಾರತ ಪ್ರವಾಸ ಚಿತ್ರಗಳು'** ಜಿ. ಮರುಳುಸಿದ್ಧಯ್ಯನವರು ಕಾಶಿ, ವಾರಣಾಸಿ, ಸಾಂಚಿ, ಅಜಂತಾ, ಎಲ್ಲೋರ, ಮಾಮಲ್ಲಪುರ, ಕಲ್ಯಾಣ-ಈ ಪುಣ್ಯ ಕ್ಷೇತ್ರ ಹಾಗೂ ಕಲಾಬೀಡುಗಳಲ್ಲಿ ಸಂಚರಿಸಿ ಪಡೆದ ಅನುಭವಗಳ ಕಥನ. ಎರಡು ಭಾಗಗಳಲ್ಲಿ ಬಂದ ಈ ಕೃತಿ ಮೊದಲನೆಯದರಲ್ಲಿ ನಮ್ಮ ನಾಡಿನ ಪ್ರಾಚೀನ ಸಂಸ್ಕೃತಿ, ಸಾಹಿತ್ಯ, ವಾಸ್ತುಶಿಲ್ಪ ಹಾಗೂ ಲಲಿತಕಲೆಗಳ ಕಿರುಪರಿಚಯವನ್ನು ಹೊಂದಿದೆ. ಎರಡನೆಯದರಲ್ಲಿ ಕರ್ನಾಟಕ ವಾಸ್ತು ಶಿಲ್ಪದ-ಚಾಲುಕ್ಯ, ಹೊಯ್ಸಳ, ವಿಜಯನಗರಗಳ-ವಿಸ್ತೃತವಾದ ಪರಿಚಯವನ್ನು ಕೊಡಲಾಗಿದೆ. ಈ ಬಗೆಯ ಅಧ್ಯಯನ ಪ್ರವಾಸಿಗರಿಗೆ ನಾಡಿನ ಸಾಂಸ್ಕೃತಿಕ ಕೊಡುಗೆಯ ಪರಿಚಯವನ್ನು ಮಾಡಿಕೊಡುತ್ತದೆ.

ಡಿ.ಟಿ. ರಂಗಸ್ವಾಮಿಯವರ **'ಭಾರತ ಯಾತ್ರೆ'**ಯು ಮದ್ರಾಸ್, ಕೇರಳ, ಮೈಸೂರು, ಆಂಧ್ರ, ಮುಂಬಯಿ, ಗುಜರಾತ್, ರಾಜಾಸ್ಥಾನ್, ಮಧ್ಯಪ್ರದೇಶ್, ಒರಿಸ್ಸಾ, ಬಿಹಾರ್, ಉತ್ತರಪ್ರದೇಶ್, ದೆಹಲಿ, ಪಂಜಾಬ್ -ಈ ರಾಜ್ಯಗಳಲ್ಲಿನ ಹಾಗೂ ಹಿಮಾಲಯದ ಅಮರನಾಥ, ಕೇದಾರನಾಥ, ಬದರೀನಾಥಗಳಲ್ಲಿನ ಪವಿತ್ರ ತೀರ್ಥಕ್ಷೇತ್ರಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುವ ಉದ್ದೇಶ ಹೊಂದಿದೆ. ಇದರಿಂದ ಪ್ರವಾಸಿಗರಿಗೆ ನೋಡುವಂತಹುದು ಎಲ್ಲೆಲ್ಲಿ ಏನೇನಿದೆ? ಎಂಬುದರ ಸಾಧಾರಣ ತಿಳುವಳಿಕೆಯಾಗುತ್ತದೆ. ಪ್ರಯತ್ನಪಟ್ಟಿದ್ದರೆ ಇನ್ನಷ್ಟು ಉಪಯುಕ್ತ ವಿವರಗಳನ್ನು ಲೇಖಕರು ಕೊಡಬಹುದಿತ್ತು. ಲೇಖಕರು ತಮ್ಮ ಪ್ರವಾಸದಲ್ಲಿ ಭಾರತದ ಪವಿತ್ರ ಕ್ಷೇತ್ರಗಳ ದರ್ಶನಕ್ಕೆ ಹೆಚ್ಚಿನ ಆಸಕ್ತಿ ತೋರಿರುವುದರಿಂದ ಅವರ ಉದ್ದೇಶ ಸೀಮಿತವಾಗುತ್ತದೆ. ಒಂದು ಒಳ್ಳೆಯ ಪ್ರವಾಸೀ ಕೈಪಿಡಿ ಕೊಡುವ ಅವಕಾಶವಿದ್ದರೂ ಅದನ್ನು ತಮ್ಮ ಸೀಮಿತ ಉದ್ದೇಶದಿಂದಾಗಿ ಇಲ್ಲಿ ಲೇಖಕರು ನೆರವೇರಿಸಲಾಗಲಿಲ್ಲ.

ಕೆ. ಕೊಟ್ರೇಗೌಡ ಅವರ **'ನಮ್ಮ ಪ್ರವಾಸ'**ದಲ್ಲಿ ಲೇಖಕರು ತಮ್ಮ ಮಿತ್ರರೊಡನೆ ಮಾಡಿದ ಅಖಿಲಭಾರತ ಪ್ರವಾಸಾನುಭವದ ಕಿರುಪರಿಚಯ ಕೊಟ್ಟಿರುವರು. ಪ್ರವಾಸಕಾಲದಲ್ಲಿ ತಾವು ಕಂಡ ಸ್ಥಳ ಹಾಗೂ ವ್ಯಕ್ತಿಗಳ ಬಗೆಗೆ ಕಿರುಟಿಪ್ಪಣಿಗಳ ರೀತಿಯಲ್ಲಿ ವಿವರಣೆ ನೀಡಿರುವರು. ಪ್ರವಾಸಾನುಭವವು ವರದಿಯ ರೂಪದಲ್ಲಿರುವುದರಿಂದ ಮನಸ್ಸಿನ ಮೇಲೆ ಹೇಳಿಕೊಳ್ಳುವಂತಹ ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ.

ಬೆ.ಗೊ. ರಮೇಶ್ ಹಾಗೂ ಡಾ. ಎನ್.ಜಿ. ಕೋಟೇಶ್‌ರವರ **'ಭಾರತ ದರ್ಶನ'** ಭಾರತದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೋಗುವವರಿಗಾಗಿಯೇ ಬರೆಯಲಾದ ಮಾರ್ಗದರ್ಶಿ. ಇದರ ಲೇಖಕರೇ ಇದನ್ನು ಪ್ರವಾಸಿಗರ ಕೈಪಿಡಿ ಎಂದು ಕರೆದಿರುವರು. ನೋಡುವ ಸ್ಥಳಗಳ ಸಂಕ್ಷಿಪ್ತ ಮಾಹಿತಿಗಳಲ್ಲದೆ ಆಯಾ ಪ್ರದೇಶಗಳ ಸಂಪೂರ್ಣ

ವಿವರಗಳಿರುವ ಪುಸ್ತಕಗಳು ಪ್ರವಾಸಿಗರಿಗೆ ಒಂದು ಪ್ರದೇಶದ ಇತಿಹಾಸ ಹಾಗೂ ಅದರ ಪ್ರೇಕ್ಷಣೀಯ ಸ್ಥಳಗಳ ಪರಿಚಯ ಮಾಡಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಭಾರತದ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಮುಖ್ಯವಾದ ಮಾಹಿತಿಗಳನ್ನು ಒಳಗೊಂಡಿರುವ 'ಭಾರತ ದರ್ಶನ' ವೆನ್ನುವ ಪುಸ್ತಕ ಒಂದು ಒಳ್ಳೆಯ ಕೈಪಿಡಿ.

ಎ.ವಿ. ಶಾಸ್ತ್ರಿಯವರ **'ಭಾರತದರ್ಶನ ಭಾಗ-೧'**ರಲ್ಲಿ ಸಮಗ್ರವಾಗಿ ಭಾರತವನ್ನು ಸುತ್ತಿ ಬಂದ ಒಂದು ಅನುಭವದ ನಿರೂಪಣೆ ಇದೆ. ಮದರಾಸಿನಿಂದ ಪ್ರವಾಸ ಪ್ರಾರಂಭವಾಗುತ್ತದೆ. ಭಾರತದ ಪ್ರಸಿದ್ಧ ಭಾಗಗಳನ್ನು ಪ್ರೇಕ್ಷಣೀಯ ಸ್ಥಳಗಳು, ಚಾರಿತ್ರಿಕ ಸಂಗತಿಗಳು, ಸ್ಥಳಪುರಾಣಗಳು, ದೊರೆಯುವ ಸೌಕರ್ಯಗಳು ಇವುಗಳೊಡನೆ ಪರಿಚಯಿಸುವ ಪ್ರಯತ್ನ ಇಲ್ಲಿದೆ. ಪ್ರವಾಸಿಗರಿಗೆ ಬೇಕಾದ ವಿವರಗಳು ಇಲ್ಲಿ ದೊರಯುತ್ತವೆ. ಭಾರತದ ಪ್ರಮುಖ ಭಾಗಗಳ ಸಂಚಾರಕ್ಕೆ ಅಗತ್ಯವಿರುವ ಮಾಹಿತಿಗಳನ್ನು ಇದು ಗೈಡ್ ರೂಪದಲ್ಲಿ ಒದಗಿಸಿಕೊಡುತ್ತದೆ. ಕೊನೆಯಲ್ಲಿ ಲೇಖಕರು ಕಠ್ಮಂಡು, ಕಾಶ್ಮೀರ, ಸಿಮ್ಲಾ, ಡೆಹರಾಡೂನ್, ಮಸ್ಸೂರಿ, ಹರಿದ್ವಾರ, ಋಷಿಕೇಶ, ಕೇದಾರ, ಬದರೀ ಇವುಗಳ ಯಾತ್ರಾನುಭವವನ್ನು ಕೊಟ್ಟಿರುವರು. ಹಾಗೆಯೇ ಭೇಟಿಕೊಟ್ಟ ಸ್ಥಳಗಳ ಪ್ರಯಾಣದ ಒಟ್ಟು ದೂರದ ಪಟ್ಟಿ (ಮೈಲಿಗಳಲ್ಲಿ) ರೈಲ್ವೆ, ಬಸ್ಸು, ನಗರ ಸಂಚಾರ ಹಾಗೂ ವಿಮಾನಯಾನ) ಕೊಟ್ಟಿರುವರು. ಪುಸ್ತಕ ಗಾತ್ರದಲ್ಲಿ ಕಿರಿದಾದರೂ (೯೨ ಪುಟ) ಯಾತ್ರಿಕರಿಗೆ ವಿವರಗಳನ್ನು ನೀಡುವಲ್ಲಿ ಹಿರಿದಾಗಿದೆ. ಪ್ರವಾಸಿ ಗೈಡ್ ಆಗಿರುವ ಇದರಲ್ಲಿ ಸಾಹಿತ್ತಿಕ ಮೌಲ್ಯಗಳನ್ನು ಅರಸುವುದಾಗಲೀ, ಜನಜೀವನ, ಕಲೆ, ಸಂಸ್ಕೃತಿ ಇತ್ಯಾದಿಗಳ ಬಗೆಗೆ ನಿರೀಕ್ಷಿಸುವುದಾಗಲೀ ಸರಿಯಲ್ಲ. ಲೇಖಕರು ಪ್ರವಾಸೋದ್ಯಮದಲ್ಲಿ ಪಳಗಿದವರು. ಶಾಸ್ತ್ರೀಸ್ ಟ್ರಾವಲ್ಸ್ ಎಂಬ ಸಂಸ್ಥೆಯ ಆಶ್ರಯದಲ್ಲಿ ಭಾರತದರ್ಶನ ಯಾತ್ರೆ ಏರ್ಪಡಿಸಿ ಪ್ರವಾಸಿಗರೊಡನೆ ತಾವೂ ಓರ್ವ ಪ್ರವಾಸಿಯಾಗಿ ಪ್ರವಾಸೀ ಬಾಂಧವರ ಸಲಹೆಯ ಮೇರೆಗೆ ಈ ಕಿರುಹೊತ್ತಗೆಯನ್ನು ಹೊರತಂದಿರುವರು. "ಆಳವಾಗಿ ಅಭ್ಯಾಸ ಮಾಡುವವರಿಗೆ, ಇಲ್ಲಿರುವ ಗ್ರಾಸ ಸಾಲದು. ಇದನ್ನು 'ಕೈಪಿಡಿ' ಎಂದು ಕರೆಯಬಹುದು ಅಷ್ಟೆ" ಎಂದು ಲೇಖಕರೇ ಹೇಳಿಕೊಂಡಿರುವರು. ಪುಸ್ತಕ ಓದಿ ಮುಗಿಸಿದ ಮೇಲೆ ಅದು ನಿಜವೆನ್ನಿಸುತ್ತದೆ.

**'ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ'** ಡಾ. ಬಿ.ಎಸ್. ಸ್ವಾಮಿಯವರ ದೇಶೀಯ ಪ್ರವಾಸ ಕಥನ. "ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಆಗಾಗ ಸುತ್ತಿದಾಗ ಆದ ಅನುಭವದ ಸಾರವೇ ಈ ಕೃತಿ" ಎಂದು ಲೇಖಕರು ಹೇಳುವರು. ನೋಡಿದ ಸ್ಥಳಗಳ ಬಗೆಗೆ ತಿಳಿದಷ್ಟು ಮಾಹಿತಿ ನೀಡುವುದು ಈ ಪ್ರವಾಸ ಕಥನದ ಮುಖ್ಯ ಗುರಿ. ಸ್ಥಳಗಳ ಕಾರಣಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಅಲ್ಲಲ್ಲಿ ಕೊಟ್ಟಿರುವರು.

ಪ್ರವಾಸದ ಕಹಿ ಅನುಭವಗಳೂ ಇಲ್ಲಿ ಬಂದಿವೆ (ಪು. ೧೮೦-೧೮೨). 'ನಾಸಿಕ್' ಎನ್ನುವ ಹೆಸರು ಆ ಊರಿಗೆ ಹೇಗೆ ಬಂದಿತು? ಗೋದಾವರಿ ನದಿ ಹೇಗಾಯಿತು? ವಿಷ್ಣುವಿಗೆ ಸುಂದರನಾರಾಯಣ ಎನ್ನುವ ಹೆಸರು ಹೇಗೆ ಬಂದಿತು? ಕಪಾಲೇಶ್ವರ ಲಿಂಗವಾದುದು ಹೇಗೆ? ಕುಂಭಮೇಳ ಜಾತ್ರೆ ಆರಂಭ ಹೇಗೆ ಆಯಿತು? ಹೀಗೆ ತಾವು ನೋಡಿದ ಸ್ಥಳಗಳ ಪುರಾಣವನ್ನು ಸಂಗ್ರಹಿಸಿಕೊಟ್ಟಿರುವರು (ನೋಡಿ: ಪು ೧೫೪-೧೫೭). ಈ ಪ್ರವಾಸ ಕಥನದ ವೈಶಿಷ್ಟ್ಯವೆಂದರೆ, ಮಾಹಿತಿ ಸಂಗ್ರಹಣೆ; ಈ ಕಾರಣಕ್ಕಾಗಿ ಇದು ಪ್ರವಾಸ ಕೈಗೊಳ್ಳುವವರಿಗೆ ಉಪಯುಕ್ತ ಮಾರ್ಗದರ್ಶಿಯಂತಿದೆ. ಲೇಖಕರ ಆಸಕ್ತಿ ಸ್ಥಳಪುರಾಣಗಳ ಸಂಗ್ರಹದಲ್ಲಿ ವಿಶೇಷವಾಗಿ ತೊಡಗಿದೆ. ಈ ಪೌರಾಣಿಕ ಕಥೆಗಳ ಹಿಂದಿರುವ ಮಿಥ್‌ನ್ನು ಒಡೆಯುವ, ವಿಶ್ಲೇಷಿಸುವ ಪ್ರವೃತ್ತಿ ಅವರದಲ್ಲ. ಅದನ್ನು ವಾಗ್ಪರಂಪರೆಯಲ್ಲಿ ಇರುವಂತೆ ದಾಖಲಿಸುವುದು ಅವರ ಪ್ರಾಮಾಣಿಕ ನಿಲವು. ನಿಶ್ಚಿತ ಕಾಲಾವಧಿಯ ಗುಂಪು ಪ್ರವಾಸವಾದದ್ದರಿಂದ ಕೆಲವೆಡೆ ವಿವರಗಳು ಸಂಕ್ಷಿಪ್ತಗೊಂಡಿವೆ.

ವಿವಿಧ ಲೇಖಕರಿಂದ ಬರೆಯಲಾದ ಇಪ್ಪತ್ತೆಂಟು ಸ್ಥಳಗಳ ಪರಿಚಯಾತ್ಮಕ ಲೇಖನಗಳ ಸಂಕಲನ **'ನೋಡುವ ಬೀಡುಗಳು'**. ಈ ಇಪ್ಪತ್ತೆಂಟು ಪ್ರೇಕ್ಷಣೀಯ ಸ್ಥಳಗಳಲ್ಲಿ ಹೆಚ್ಚಿನವು ಕರ್ನಾಟಕದವು. ಉಳಿದವು ಆಂಧ್ರ, ತಮಿಳುನಾಡು ಮತ್ತು ಕೇರಳ ಪ್ರಾಂತ್ಯಗಳಿಗೆ ಸೇರಿದವು. ದಕ್ಷಿಣ ಭಾರತದ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳ ಪರಿಚಯವನ್ನು ಈ ಕೃತಿ ಮಾಡಿಕೊಡುತ್ತದಾದರೂ ಬೇರೆ ಬೇರೆ ಲೇಖಕರಿಂದ ಪ್ರವಾಸಾನುಭವ ಬಂದಿರುವುದರಿಂದ ಬರವಣಿಗೆಯಲ್ಲಿ ಒಂದು ಮಧುರ ಬಂಧವಿಲ್ಲ. ದೊಡ್ಡ ಪುಟ್ಟ ಲೇಖನಗಳಿಂದ ಕೂಡಿರುವ ಈ ಕೃತಿ ಆಯಾ ಸ್ಥಳದ ಇತಿಹಾಸ, ದೇವಾಲಯಗಳ ರಚನೆ, ಶಿಲ್ಪಕಲಾ ವೈಭವ -ಇವೇ ಮೊದಲಾದುವನ್ನು ಒಳಗೊಂಡಿದೆ. ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿಷಯಗಳನ್ನು ವಿಪುಲವಾಗಿ ಸಂಗ್ರಹಿಸಿ ಕೊಡಲಾಗಿದೆ.

ಪ್ರಯಾಗ, ಪಟನ, ನಾಲಂದ, ರಾಜಗಿರಿ, ಗಯಾ, ಕಾಶಿ, ಕಲ್ಕತ್ತ ಈ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡ ಪುತ್ತಿಕ ಸುಬ್ರಹ್ಮಣ್ಯ ಆಚಾರ್ಯ (ರಸಿಕಪುತ್ತಿಗೆ)ರವರು **'ಕನ್ನಡದ ಕಣ್ಣು-ಉತ್ತರದ ಮಣ್ಣು'** ಎಂಬ ತಮ್ಮ ಕೃತಿಯಲ್ಲಿ ತಮಗೊದಗಿದ ಪ್ರವಾಸಾನುಭವಗಳನ್ನು ಹೇಳಿಕೊಂಡಿರುವರು. ಲೇಖಕರು ತಮ್ಮ ಕಣ್ಣು ಕಂಡದ್ದನ್ನು, ಮನಸ್ಸು ಅನುಭವಿಸಿದ್ದನ್ನು, ಬುದ್ಧಿ ತರ್ಕಿಸಿದ್ದನ್ನು ಯಾವ ಪೂರ್ವಾಗ್ರಹ ಬಾಧೆಯೂ ಇಲ್ಲದೆ ಹೇಳಿರುವರು.

ಹೊಲಸು, ನಾತ, ಮುದುಕ, ವಿದುರ, ಕುಷ್ಠರೋಗಿ, ಅಶಿಸ್ತು, ರಸ್ತೆಯಂಚಿನ ಕಕ್ಕಸ್ಸು, ಹಳೆಯ ಲಾರಿ ಗಟಾರಗಳು, ಹಿಂದಿಯ ಬೋರ್ಡುಗಳು, ನಂಪುಂಸಕತ್ವಾದಿ

ನಿವಾರಣ ಔಷಧಗಳ ಪ್ರಮೇಹಾಂತಕ ಗುಟಿಕೆಗಳ ಜಾಹೀರಾತಿನಿಂದ ತುಂಬಿದ ಗೋಡೆಗಳು -ಇದು ಲೇಖಕರು ಕೊಡುವ ಭಾರತದ ಪುಣ್ಯಧಾಮವಾದ ಅಲಹಾಬಾದಿನ ಚಿತ್ರ.

ಉತ್ತರದವರ ತೀವ್ರವಾದ ಹಿಂದೀ ಮೋಹ, ಅಲಹಾಬಾದಿನ ಪುಂಡರ ಕಾಟ, ದಕ್ಷಿಣ ಭಾರತವೆಂದರೆ ತಮಿಳುನಾಡೆಂಬ ಉತ್ತರದವರ ಅಜ್ಞಾನ, ಸದಾ ಗಲೀಜಿನ ಹತ್ತಿರದಿಂದ ಮಾತನಾಡಿಸಿದರೆ ಬಾಯಿಯಿಂದ ಹೊಗೆಸೊಪ್ಪಿನ ಭಂಗಿಯ ಶರಾಬಿನ ವಾಸನೆ ಬರುವ ಸಾಮಾನ್ಯ-ಅಲಹಾಬಾದಿನ ಯಾತ್ರೆಯಲ್ಲಿ ಎದ್ದು ಕಾಣುವ ಅಂಶಗಳು. ಪಟನಾ ನಗರವನ್ನು ಅತ್ಯಂತ ಕೊಳಕು ನಗರವೆಂದು ಹೇಳಲು ವಿದೇಶೀಯರು ಅಂಜರು ಎಂದು ಹೇಳುವ ಲೇಖಕರು, ಇತಿಹಾಸ ಪ್ರಸಿದ್ಧವಾದ ವೈಭವದಿಂದ ಮೆರೆದ ಈ ನಾಡು ಇಂದು ಎಲ್ಲ ವಿಧದಲ್ಲಿಯೂ ಕೊಳೆತು ನಾರುತ್ತಿದೆ ಎಂದು ಅದರ ಸ್ಥಿತಿಯನ್ನು ವರ್ಣಿಸಿರುವರು. ಗಯಾದವರ ಅಂತಃಕರಣಯುಕ್ತ ಆತಿಥ್ಯ, ರಸಿಕತೆ; ಕಲ್ಕತ್ತೆಯ ನಕ್ಸಲೀಯರ ಹಾವಳಿ; ಉತ್ತರದವರ ಹಿಂದೀ ಪ್ರೇಮ -ಇವು ಗ್ರಂಥದಲ್ಲಿ ಆಕರ್ಷಕ ಹಾಗೂ ವಿವರಯುಕ್ತವಾದ ಭಾಗಗಳು. ಅನುಭವ ನಿರೂಪಣೆಯಲ್ಲಿ ಸವಿರಾದ ಹಾಸ್ಯದ ಬಳಕೆ ಮಾಡಿರುವುದರಿಂದ ಗ್ರಂಥ ಹಗುರವಾಗಿ ಓದಿಸಿಕೊಂಡು ಹೋಗುತ್ತದೆ.

ಕೃಷ್ಣಾನಂದ ಕಾಮತರ ಎರಡನೆ ಪ್ರವಾಸಕಥನ **'ವಂಗದರ್ಶನ'** ಪಶ್ಚಿಮ ಬಂಗಾಲದ ಪ್ಲಾಸಿಯಲ್ಲಿ ಎರಡು ವರ್ಷ ನೆಲೆನಿಂತು ಪಶ್ಚಿಮ ಬಂಗಾಲದ ಜನತೆ ಹಾಗೂ ಅವರ ಜೀವನಕ್ರಮವನ್ನು ಹತ್ತಿರದಿಂದ ನೋಡಿ ಬರೆದ ಕೃತಿಯಿದು. ಲೇಖಕರು ವಾಸ್ತವ್ಯ ಮಾಡಿದ್ದ ಅಂದಿನ ದಿನಗಳಲ್ಲಿ ಪಶ್ಚಿಮ ಬಂಗಾಲ ಕಮ್ಯುನಿಸ್ಟರ ಪ್ರಭಾವದಿಂದಾಗಿ ಕುದಿಗಡಿಗೆಯಂತಿದ್ದಿತು. ತೀವ್ರ ಬಡತನದಿಂದ ನರಳುತ್ತಿದ್ದ ಅವರು ತಮ್ಮೆಲ್ಲ ಕಷ್ಟನಷ್ಟಗಳಿಗೆ ಕಾರಣಗಳೇನೆಂಬುದನ್ನು ಸಾವಧಾನವಾಗಿ ವಿವೇಚಿಸದೆ ಕಮ್ಯುನಿಸ್ಟರ ಪ್ರಭಾವ ಪ್ರೇರಣೆಗಳಿಗೆ ಸಿಕ್ಕಿ ದುಡಮ್ಮನೆ ಕ್ರುದ್ಧರಾಗಿ ಹಿಂಸಾಚಾರಗಳಿಗೆ ತೊಡಗಿದ್ದರು. ಆ ಅತೃಪ್ತ ಜನ ಮಾಡಿದ ಕೊಲೆ, ಸುಲಿಗೆ, ದರೋಡೆಗಳು ಭಾರತದ ನವೀನ ಇತಿಹಾಸದಲ್ಲಿ ಮರೆಯಲಾಗದ ಒಂದು ಅಧ್ಯಾಯ. ಉಳ್ಳವರ ಮೇಲೆ ಇಲ್ಲದವರ ಆಕ್ರೋಶವು ಕೊಲೆ ಇಲ್ಲವೆ ಸುಲಿಗೆಯಲ್ಲಿ ಪರ್ಯವಸಾನಗೊಳ್ಳುತ್ತಿತ್ತು. ನಕ್ಸಲೀಯರ ಚಟುವಟಿಕೆ ಅಲ್ಲಿನ ಜನತೆಗೆ ನೆಮ್ಮದಿ ಕೆಡಿಸಿತ್ತು. ಎಲ್ಲೆಲ್ಲೂ ಅರಾಜಕತೆ. ಸರಕಾರ ಈ ಎಲ್ಲ ಅನ್ಯಾಯ, ಕೊಲೆ, ಸುಲಿಗೆ, ಅತ್ಯಾಚಾರಗಳನ್ನು ನೋಡಿಯೂ ಸುಮ್ಮನೆ ಕೈಕಟ್ಟಿ ಕುಳಿತಿದ್ದಿತು. ಇದು ಜನತೆಯ ಶಾಂತಿಗೆ ಮತ್ತಷ್ಟು ಭಂಗ ತಂದಿತ್ತು. ಈ ರಕ್ತಕ್ರಾಂತಿಯ ಪ್ರಾತ್ಯಕ್ಷಿಕ ಅನುಭವ ನಮಗೆ 'ವಂಗದರ್ಶನ' ದಿಂದಾಗುತ್ತದೆ.

ಪಶ್ಚಿಮ ಬಂಗಾಲದ ಜನರ ಬಡತನ, ಅವಿದ್ಯೆ; ಎಳೆಯ ಮಕ್ಕಳ ಎಲ್ಲೆ ಮೀರಿದ ತುಂಟತನ ಹಾಗೂ ಉಪದ್ರವ; ಸಂಯುಕ್ತರಂಗ ಸರಕಾರ ಅಧಿಕಾರಕ್ಕೆ ಬಂದ ಮೇಲೆ

ಉಂಟಾದ ರಾಜಕೀಯ ಬದಲಾವಣೆಗಳು; ಸಮಾಜದ್ರೋಹಿಗಳ ಚಟುವಟಿಕೆಗಳಿಂದಾಗಿ ನಡೆದ ಕೊಲೆ, ಸುಲಿಗೆ, ದರೋಡೆಗಳು -ಹೀಗೆ ಇವೆಲ್ಲ ವಿವರಯುಕ್ತವಾಗಿ ಇಲ್ಲಿ ಚಿತ್ರಿತವಾಗಿವೆ. ಬಂಗಾಲಿಗಳು ಉಳಿದ ಭಾರತೀಯರಿಗಿಂತ ಹೇಗೆ ಭಿನ್ನರಿರುವರು? ಅವರ ವೈಶಿಷ್ಟ್ಯಗಳೇನು? ಎಂಬುದನ್ನು ಲೇಖಕರು ವಿಸ್ತಾರವಾಗಿ ಪಟ್ಟಿಮಾಡಿ ಹೇಳಿರುವರು (ಪು. ೧೭೩-೧೭೬). ಅದಲ್ಲದೆ, ಬಂಗಾಲಿಗಳ ಸೌಜನ್ಯರಾಹಿತ್ಯ ನಡಾವಳಿ, ಸ್ವಾರ್ಥ, ಜೀಣತನ, ಹುಸಿ ದೊಡ್ಡಸ್ತಿಕೆ, ಸಂಶಯ ಪ್ರವೃತ್ತಿ ಇತ್ಯಾದಿಗಳನ್ನು ಸಾಧಾರಪೂರ್ವಕವಾಗಿ ನಿರೂಪಿಸಿರುವರು (ಪು.೧೭೭-೧೯೪).

ಪಶ್ಚಿಮ ಬಂಗಾಲದ ಆ ರಕ್ತಕ್ರಾಂತಿಯ ದಿನಗಳಲ್ಲಿ ಜನಜೀವನದಲ್ಲಿ ರಾಜಕೀಯವು ಅವಿಭಾಜ್ಯವಾಗಿ ಮಿಳಿತಗೊಂಡಿದ್ದುದರಿಂದ ಆ ರಾಜಕೀಯ ಚಟುವಟಿಕೆಗಳ ಪರಿಣಾಮವಾಗಿ ತಲೆದೋರಿದ ಸಾಮಾಜಿಕ ಅಸ್ವಾಸ್ಥ್ಯದ ವಿಸ್ತೃತ ಪರಿಚಯವನ್ನು ಲೇಖಕರು ಕೊಟ್ಟಿರುವರು. ಪುಸ್ತಕದ ಉತ್ತರಾರ್ಧ ಈ ವಿವರಗಳಿಂದ ತುಂಬಿ ಹೋಗಿದೆ. ಆ ಸಮಾಜದ್ರೋಹಿಗಳ ಬಗೆಗಿನ ವಿಷಯಸಂಗ್ರಹಣೆ ಮೆಚ್ಚುವಂತಿದೆ. ಅವನ್ನು ಓದುತ್ತಿದ್ದಂತೆ ವಿವೇಕಾನಂದ, ಟಾಗೂರ್, ಸುಭಾಷ್‌ಚಂದ್ರಭೋಸರ ನಾಡಿಗೆ ತಲೆದೋರಿರುವ ಸ್ಥಿತಿ ಕಂಡು ಸಂಕಟವಾಗುತ್ತದೆ. ತಮ್ಮ ಪರಂಪರೆ ಸಂಸ್ಕೃತಿಗಳನ್ನು ಮರೆತು ಮಾವೋನನ್ನು ಅನುಸರಿಸುತ್ತಿರುವ, ನಕ್ಸಲಾಯಿಟ್ ಮಾರ್ಕ್ಸ್‌ವಾದಿ ಕಮ್ಯೂನಿಸ್ಟರ ಸಿದ್ಧಾಂತಗಳಿಗೆ ಮನಸ್ಸನ್ನು ತೆರುತ್ತಿರುವ ತರುಣ ಪೀಳಿಗೆಯನ್ನು ಕಂಡು ಕನಿಕರವಾಗುತ್ತದೆ.

'ವಂಗದರ್ಶನ' ಪ್ರವಾಸಕಥನವೆಂಬ ಶೀರ್ಷಿಕೆಯನ್ನು ಹೊಂದಿದ್ದರೂ ಅದರಲ್ಲಿ ಪಶ್ಚಿಮ ಬಂಗಾಲದ ಜನಜೀವನ ಹಾಗೂ ಅಲ್ಲಿನ ರಕ್ತಕ್ರಾಂತಿಯ ವಿವರಣೆಗಳು ಪ್ರಧಾನವಾಗಿ ಬಂದಿವೆ. ಲೇಖಕರು ತಾವು ನೋಡಿದ ಕಲ್ಕತ್ತಾ, ದಕ್ಷಿಣೇಶ್ವರಗಳನ್ನು ಸ್ವಲ್ಪದರಲ್ಲಿಯೇ ಪರಿಚಯಿಸಿಕೊಟ್ಟಿರುವರು. ಪಶ್ಚಿಮ ಬಂಗಾಲದ ವಾಸ್ತವ್ಯದಲ್ಲಿ ತಮ್ಮ ನಾಲಿಗೆಗೆ ಸಹ್ಯವಾದ ಕೆಲವು ಅಡುಗೆಗಳ (ಉದಾಹರಣೆಗೆ ಬಂಗಾಲಿ ಭಾತ್‌ಗಳು, ಪಲ್ಯಗಳು, ಸಾರು-ಹುಳಿಗಳು, ಮಿಠಾಯಿಗಳು) ತಯಾರಿಕೆಯ ವಿಧಾನವನ್ನೂ ಹೇಳಿರುವರು (ಪು. ೧೧೭-೧೨೧).

ಪಶ್ಚಿಮ ಬಂಗಾಲದ ಬಗೆಗೆ ತಮ್ಮ ಖಾರವಾದ ಅನುಭವಗಳನ್ನು ಲೇಖಕರು ಹೇಳಿರುವುದು ಇಲ್ಲಿನ ವಿಶೇಷವಾಗಿದೆ. ಕಲ್ಕತ್ತೆಯ ನೈಜ ಚಿತ್ರವನ್ನು ಫ್ರೆಂಚ್ ನಿರ್ದೇಶಕ ಲೂಯಿ ಮಾಲೆ ಟಲಿವಿಷನ್‌ನಲ್ಲಿ ತೋರಿಸಿದಾಗ ಭಾರತ ಸರಕಾರ ತಾಳಿದ ಧೋರಣೆಯನ್ನು ಕುರಿತು ಪ್ರಸ್ತಾಪಿಸುತ್ತ "ಪಾಶ್ಚಾತ್ಯರ ಲೈಂಗಿಕ ಜೀವನವನ್ನು ಕುರಿತು ಭಾರತದ ವರ್ತಮಾನ ಪತ್ರಿಕೆಗಳು ಬೇಕಾದಷ್ಟು ಲೇಖನ ಬರೆದು, ಛಾಯಾ ಚಿತ್ರಗಳನ್ನು

ಪ್ರದರ್ಶಿಸಿದಾಗ ಆಯಾ ದೇಶಗಳು ಪ್ರತಿಭಟಿಸಲಿಲ್ಲ. ಹಾಗಿದ್ದಾಗ ಭಾರತೀಯ ಬಡತನ, ಅಶಿಸ್ತು, ಅನಾರೋಗ್ಯಕರ ಸ್ಥಿತಿ ಮುಂತಾದುವನ್ನು ಪಾಶ್ಚಾತ್ಯರಿಗೆ ತೋರಿಸಿದರೆ ನಾವೇಕೆ ರುದ್ರಾವತಾರ ತಾಳಬೇಕು? ಯಾವುದೇ ಸಮಾಜದ ಕುಂದುಕೊರತೆಗಳನ್ನು ತೋರಿಸುವುದು ಯಾವುದೇ ದೇಶದ ವಿಚಾರವಂತರ, ಲೇಖಕರ, ಚಿತ್ರಕಾರರ, ಕಲಾಕಾರರ ಕರ್ತವ್ಯವಾಗಿದೆ. ದೇಶದ ದಾರುಣತೆಗೆ ಕಾರಣಗಳನ್ನು ಹುಡುಕಿ ಅವನ್ನು ಹೋಗಲಾಡಿಸಲು ಸರಕಾರ, ಜನತೆ ಪ್ರಯತ್ನಿಸಬೇಕೇ ಹೊರತು ವಾರ್ತಾಚಿತ್ರ-ಸಂಸ್ಥೆಗಳ ಗೋಣುಮುರಿಯುವುದರಿಂದ ಸಮಸ್ಯೆಗಳ ಪರಿಹಾರವಾಗುವುದುಂಟೆ?" (ಪು. ೧೫೩-೧೫೪) ಎಂದು ಭಾರತ ಸರಕಾರದ ಧೋರಣೆಯನ್ನು ಟೀಕಿಸಿರುವರು. ಪುಸ್ತಕದ ಕೊನೆಯಲ್ಲಿ ಬರುವ ಬಾಂಗ್ಲಾದೇಶದ ನಿರಾಶ್ರಿತರು ಭಾರತಕ್ಕೆ (ಅತೀ ಹೆಚ್ಚಿನ ಸಂಖ್ಯೆಯಲ್ಲಿ) ಬಂದು ನೆಲೆಸಿದ ಹಿನ್ನೆಲೆ; ಭಾರತ ಒಂಬತ್ತು ತಿಂಗಳು ಈ ನಿರಾಶ್ರಿತರನ್ನು ಕಾಪಾಡಲು ಕೋಟ್ಯಂತರ ರೂಪಾಯಿಗಳನ್ನು ವಿನಿಯೋಗಿಸಿದುದು; ಬಾಂಗ್ಲಾ ದೇಶೀಯರಿಂದ ಭಾರತೀಯರು ಕಷ್ಟಕಾಲದಲ್ಲಿ ತಮಗೆ ತೋರಿದ ಮಾನವೀಯ ಗುಣಕ್ಕೆ ಎಷ್ಟರಮಟ್ಟಿನ ಕೃತಜ್ಞತೆಯ ಫಲ ವ್ಯಕ್ತಗೊಂಡೀತು? -ಇವೆಲ್ಲವುಗಳ ಬಗೆಗಿನ ವಿವೇಚನೆಯಲ್ಲಿ ಲೇಖಕರ ಮುಚ್ಚುಮರೆಯಿಲ್ಲದ ವಿಚಾರಧಾರೆ ಹರಿದುಬಂದಿದೆ (ಪು. ೨೯೮-೨೯೯). ಅತಿವೃಷ್ಟಿ, ನೆರೆಹಾವಳಿ, ಪಿಡುಗು, ನಿರುದ್ಯೋಗಗಳು ಬಂಗ್ಲಾದೇಶ ಹಾಗೂ ಪಶ್ಚಿಮ ಬಂಗಾಲಗಳಲ್ಲಿ ವಿಪುಲವಾಗಿದ್ದು ಲೇಖಕರು ಅವರ ಸಮಸ್ಯೆಗಳನ್ನು ಕ್ರೋಡೀಕರಿಸಿ ಅವುಗಳ ಪರಿಹಾರ ಹೇಗೆ ಸಾಧ್ಯ? ಎಂಬುದನ್ನು ವಿಚಾರಮಾಡಿರುವರು (ಪು. ೨೯೮-೨೯೯).

ಪುಸ್ತಕದ ಶೀರ್ಷಿಕೆ ಲೇಖಕರ ಉದ್ದೇಶವನ್ನು ಹೇಳಿದೆ. ಪಶ್ಚಿಮ ಬಂಗಾಲದ ರಾಜಕೀಯ-ಸಾಮಾಜಿಕ ಜೀವನದ ಅಧ್ಯಯನವೇ ಈ ಕೃತಿಯಲ್ಲಿ ಪ್ರಧಾನವಾಗಿ ಬರುವುದರಿಂದ, ಇದನ್ನು ಪ್ರವಾಸ ಕಥನವೆಂದು ಕರೆಯುವುದು ಎಷ್ಟರ ಮಟ್ಟಿಗೆ ಸರಿ? ಎಂಬ ಪ್ರಶ್ನೆ ಬರುತ್ತದೆ. ಸಾಮಾನ್ಯ ಪ್ರವಾಸಿಯಾಗಿ ಆ ಮನೋಭಾವದಿಂದಲೇ ತನ್ನ ಅನುಭವಗಳನ್ನು ನಿರೂಪಣೆ ಮಾಡುವುದು ಒಂದು ವಿಧವಾದರೆ, ವಿದ್ಯೆ ಹಾಗೂ ಸಂಸ್ಕಾರಗಳಿಂದ ಹದವಾದ ವ್ಯಕ್ತಿಯೊಬ್ಬನು ಒಂದು ಪ್ರದೇಶದ ಯಾವುದೋ ಒಂದು ಉದ್ದೇಶದಿಂದ ಕೆಲವು ಕಾಲ ತಾತ್ಕಾಲಿಕವಾಗಿ ನೆಲೆ ನಿಂತು ಅಲ್ಲಿನ ರಾಜಕೀಯ ಸಾಮಾಜಿಕ ಜೀವನದ ಅಧ್ಯಯನದ ಹಿನ್ನೆಲೆಯಲ್ಲಿ ಜನರ ಸುಖ ದುಃಖಗಳನ್ನು, ಸಮಸ್ಯೆಗಳನ್ನು, ಸಾಂಸ್ಕೃತಿಕ ಕೊಡುಗೆಗಳನ್ನು ನಿರೂಪಿಸುವುದು ಇನ್ನೊಂದು ವಿಧಾನ. ಹಲವೆಡೆಗಳಲ್ಲಿ ಲೇಖಕರ ಒಲವು-ನಿಲುವುಗಳು, ದೃಷ್ಟಿ-ಮನೋಧರ್ಮಗಳು ಪ್ರಕಟವಾಗಿದ್ದರೂ, ಲೇಖಕರ ಕೆಲವು ನಿಲವುಗಳನ್ನು ಒಪ್ಪದಿದ್ದರೂ 'ಮಾಗದರ್ಶನ' ಒಂದು ವಿಶಿಷ್ಟ ಕೃತಿಯಾಗಿ ನಿಲ್ಲುತ್ತದೆ.

ಇವರದೇ ಆದ ಮತ್ತೊಂದು ಪ್ರವಾಸಕಥನ '**ನಾ ರಾಜಾಸ್ಥಾನದಲ್ಲಿ**'. ಇದು ನೀರಿಲ್ಲದ ಮರುಭೂಮಿ ರಾಜಾಸ್ಥಾನದ ಜನರ ಬದುಕನ್ನು ಪರಿಚಯಿಸುತ್ತದೆ. ರಾಜಾಸ್ಥಾನದ ಜೋಬನೇರಿನ ಕೃಷಿಕಾಲೇಜನಲ್ಲಿ ಮೂರು ವರುಷ ಸೇವೆ ಸಲ್ಲಿಸುವಾಗ ತಮಗಾದ ಕಟು ಅನುಭವಗಳನ್ನು ಲೇಖಕರು ಹೇಳಿರುವರು. ಶಿಕ್ಷಕರಾಗಿ ಹಿರಿದಾದ ಆದರ್ಶವನ್ನು ಸಾಧಿಸಬೇಕೆಂಬ ಕನಸನ್ನು ಹೊತ್ತು ನಿರಾಶರಾದ ಭಾರತೀಯ ವಿಜ್ಞಾನಿಯೊಬ್ಬರ ಆತ್ಮಕಥನ ಇದಾಗಿದೆ. ತಾವು ಆರಿಸಿಕೊಂಡ ಕಾರ್ಯಕ್ಷೇತ್ರದಲ್ಲಿನ ಹೊಲಸು ರಾಜಕೀಯ, ಸಂಶೋಧನೆಗೆ ಪ್ರೋತ್ಸಾಹವಿಲ್ಲದ ನಿರುತ್ಸಾಹೀ ವಾತಾವರಣ, ಸ್ವಾರ್ಥ ಸಾಧಕರ ನಡುವೆ ಉಸಿರಾಡಬೇಕಾದ ಅಸಹನೀಯ ದಿನಗಳು ಲೇಖಕರ ಪಾಲಿಗೊದಗಿದ ನಿರಾಶೆ ಹಾಗೂ ಸೋಲಿನ ತೀವ್ರಸ್ವರೂಪವನ್ನು ಪರಿಚಯಿಸುತ್ತವೆ. ಇವು ಅವರ ಅನುಭವಗಳ ಒಂದು ಮುಖವಷ್ಟೆ. ಇದರಿಂದಲೇ ವಸ್ತುಸ್ಥಿತಿಯ ಬಗೆಗೆ ನಿರ್ಣಯ ತೆಗೆದುಕೊಳ್ಳುವುದು ಅನ್ಯಾಯ.

ಇಂದಿನ ಶಿಕ್ಷಣದ ಅಧೋಗತಿಗೆ ಕಾರಣಗಳೇನು? ಅದರಲ್ಲಿ ವಿದ್ಯಾರ್ಥಿಗಳ ಪಾಲೆಷ್ಟು? ಶಿಕ್ಷಕರ ಪಾಲೆಷ್ಟು? ಇವಲ್ಲದೆ, ಮೇಲಧಿಕಾರಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ರಾಜಕಾರಣಿಗಳ ಸೂತ್ರದ ಬೊಂಬೆಗಳಾಗುವುದು, ಶಿಕ್ಷಕರು ತಮ್ಮ ಸ್ವಂತ ಪ್ರಗತಿಗಾಗಿ ಮೇಲಧಿಕಾರಿಗಳ ಮರ್ಜಿ ಕಾಯುವುದು, ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಲು ತಮ್ಮ ಅಧ್ಯಾಪಕರ ಚಾಕರಿ ಮಾಡುವುದು -ಈ ವಿಷವಾತಾವರಣದಲ್ಲಿ ಉತ್ತಮ ಶಿಕ್ಷಣ ಹಾಗೂ ಸಂಶೋಧನೆ ಹೇಗೆ ಶೂನ್ಯವಾಗುತ್ತಿದೆ? ಈ ಎಲ್ಲ ದಾರುಣ ಚಿತ್ರ ಇದರಿಂದ ಒದಗುತ್ತದೆ. "ಒಮ್ಮೆಯೂ ಹೊಲಗಳಿಗೆ ಹೋಗದೆ ಸೇಂಗಾಕಾಳು ಬೇರಿಗೆ ಆಗುತ್ತವೆಯೋ ಟೊಂಗೆಗೆ ಆಗುತ್ತವೆಯೋ ಎಂಬುದನ್ನು ತಿಳಿಯದ ಪ್ರಾಧ್ಯಾಪಕರು ಕೊಟ್ಟ ನೋಟ್ಸುಗಳನ್ನು ಕಂಠಪಾಠ ಮಾಡಿ ಅವರು ಸೂಚಿಸಿದ ಪ್ರಶ್ನೆಗಳಿಗೆ ಉತ್ತರ ತಯಾರಿಸಿ ಕೃಷಿ ಪದವೀಧರರಾದರೂ ಇಂಥವರಿಂದ ದೇಶದ ಕೃಷಿಯ ಉತ್ಪಾದನೆ ಹೇಗೆ ಹೆಚ್ಚಾಗಬೇಕು" (ಪು. ೧೦೮) ಎಂಬ ಲೇಖಕರ ಬೇಸರ, ದೇಶದ ಇಂದಿನ ವಾಸ್ತವಸ್ಥಿತಿಯ ದಾರುಣ ಚಿತ್ರವನ್ನು ಯಥಾವತ್ತಾಗಿ ನಿರೂಪಿಸುವಂತಿದೆ.

ಇದು ಲೇಖಕರು ರಾಜಾಸ್ಥಾನದ ವಾಸ್ತವ್ಯದಲ್ಲಿ ನಡೆಸಿದ ಹೋರಾಟದ ಬದುಕಿನ ವ್ಯಥೆಯ ಕಥೆ. (ಇಲ್ಲೂ ನಾವು ಕಥೆಯ ಒಂದು ಮುಖವನ್ನು ಕೇಳುತ್ತಿದ್ದೇವೆ). ತಮ್ಮ ಪ್ರತಿಭೆ, ಅನುಭವ, ಸಂಶೋಧನಾಸಕ್ತಿಗಳಿಗೆ ಒಳ್ಳೆಯ ವಾತಾವರಣವಿಲ್ಲದ್ದರ ಬಗೆಗೆ ಅವರ ಬಗೆಯಾಳದ ನೋವಿದೆ. ತಮ್ಮ ಅನುಭವ ಸದುಪಯೋಗವಾಗದೆ ಆ ಬಗ್ಗಡಗೊಂಡ ವಾತಾವರಣದಲ್ಲಿ ತಮ್ಮ ಉತ್ಸಾಹ ಬತ್ತಿಹೋದ ಬಗೆಗೆ ಅನೇಕ

ಪ್ರಸಂಗಗಳ ಉಲ್ಲೇಖವಿದೆ. ಅನ್ಯಾಯಗಳನ್ನು ಪ್ರತಿಭಟಿಸಲಾಗದ- ಪ್ರತಿಭಟಿಸಿದರೂ ಸಾರ್ಥಕವಾಗದ ವಿಷಮ ಪರಿಸ್ಥಿತಿಗೆ ತಮ್ಮನ್ನು ತಾವೇ ಒಡ್ಡಿಕೊಂಡು ಕಾಲಯಾಪನೆ ಮಾಡಿದ ತಮ್ಮ ನಿರ್ವೀರ್ಯ ಸ್ಥಿತಿಯ ಬಗೆಗೆ ಅವರ ಅವಮಾನಿತ ಆಕ್ರೋಶವಿದೆ. ಅವರ ಅಸಹನೆ ಹಿರಿಯ ಅಧಿಕಾರಿಗಳ ಕುಟಿಲ ಕಾರಾಗಾರವನ್ನು ಬಹಿರಂಗ-ಗೊಳಿಸುವಷ್ಟಕ್ಕೇ ಆಸ್ಫೋಟಿಸಿದೆ. ಶಿಕ್ಷಣರಂಗದ ಈ ಕ್ಷುಲ್ಲಕ ವಾತಾವರಣಕ್ಕೆ ಹೋರಾಡಿದ, ಲೇಖಕರ ಸಂಸಾರಿಕ ಜೀವನದ ಸುಖ-ದುಃಖಗಳ ಕಥೆ ವಿಸ್ತಾರವಾಗಿ ಬಂದಿದೆ. ಅಷ್ಟೇ ಅಲ್ಲ, ರಾಜಾಸ್ಥಾನದ ಜನರ ಜೀವನ ವಿಧಾನದ ಪರಿಚಯವೂ ಸಾಕಷ್ಟು ಪುಸ್ತಕದಲ್ಲಿ ಬಂದಿದೆ. ಇಲ್ಲಿ ಜಯಪುರ-ಜೋಬನೇರದ ಚಿತ್ರವನ್ನಷ್ಟೇ ಲೇಖಕರು ಕೊಟ್ಟಿರುವರು. ಈ ಎರಡು ಊರುಗಳಾಚೆಯ ವಿಶಾಲವಾದ ರಾಜಾಸ್ಥಾನದ ಜನರ ವೈವಿಧ್ಯಮಯವಾದ ಬದುಕನ್ನಾಗಲೀ, ಅಲ್ಲಿಯ ಸಾಹಿತ್ಯ-ಕಲೆಗಳ ಪರಿಚಯವನ್ನಾಗಲೀ ಲೇಖಕರು ವಿವರಿಸಿಲ್ಲ.

'ನಾ ರಾಜಾಸ್ಥಾನದಲ್ಲಿ' ವಾಸ್ತವವಾಗಿ ಒಂದು ವಿಶಿಷ್ಟ ಬಗೆಯ ಪ್ರವಾಸಕಥನ. ಒಂದು ಪ್ರದೇಶ ಪರಿಚಯದ ಜೊತೆಗೆ ಅಲ್ಲಿ ಹಲಕಾಲ ನೆಲಸಿದಾಗ ತಮಗೊದಗಿಬಂದ ಅನುಭವಗಳನ್ನೂ ಲೇಖಕರು ವಿಸ್ತಾರವಾಗಿ ಹೇಳಿರುವರು. 'ನೌಕರಿ'ಯ ವಿಶಿಷ್ಟ ಅನುಭವ ಪ್ರಪಂಚ ಇಲ್ಲಿ ತನಗೆ ತಾನೇ ಹರಡಿಕೊಂಡಿದೆ. ಆ ಮೂಲಕ ಶಿಕ್ಷಣರಂಗದಲ್ಲಿ ಕೊಳೆತು ನಾರುತ್ತಿರುವ ಹೊಲಸನ್ನು ಲೇಖಕರು ಬಯಲಿಗೆಳೆಯುವ ಪ್ರಯತ್ನ ಮಾಡಿದಂತಿದೆ. ಲೇಖಕರ ಪಾಲಿಗೆ ಒದಗಿದ ಕಹಿ ಅನುಭವಗಳು ವಸ್ತುಸ್ಥಿತಿಯ ದಾರುಣಾವಸ್ಥೆಯನ್ನು ಬಿಂಬಿಸುವಂತಿದ್ದರೂ ಅವು ಅವರ ಮನದ ನಿರಾಶೆ, ಆಕ್ರೋಶಗಳನ್ನು ಪ್ರತಿನಿಧಿಸುತ್ತವೆ. ಅವು ಲೇಖಕರ ಪಾಲಿನ ಏಕಮುಖ ವಿವರಣೆಯಾಗಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಇಲ್ಲೂ ಲೇಖಕರ ಒಲವು-ನಿಲವು, ದೃಷ್ಟಿ-ಮನೋಧರ್ಮಗಳು ಎದ್ದುಕಾಣುವಂತೆ ಪ್ರಕಟಗೊಂಡಿವೆ.

ಡಾ. ಕೃಷ್ಣಾನಂದ ಕಾಮತ್‌ರವರ 'ಬಸ್ತರ ಪ್ರವಾಸ'ವು ಮಧ್ಯಪ್ರದೇಶದ ಅತೀ ಹಿಂದುಳಿದ ಜಿಲ್ಲೆಯಾದ ಬಸ್ತರ್‌ನ ದಟ್ಟವಾದ ಕಾಡುಗಳಲಿ ಶತಶತಮಾನಗಳಿಂದ ಒಂದೇ ರೀತಿಯಲ್ಲಿ ಜೀವನ ನಡೆಸುತ್ತ ಬಂದಿರುವ ಆದಿವಾಸಿ ಜನಾಂಗವನ್ನು ತೀರಾ ಹತ್ತಿರದಿಂದ ಅಭ್ಯಸಿಸುವ ಏಕಮೇವ ಉದ್ದೇಶವನ್ನು ಹೊಂದಿದೆ. ಬಂದು ಜನಾಂಗಿಕ ಅಧ್ಯಯನವನ್ನು ಗಂಭೀರವಾಗಿ ಪರಿಗಣಿಸಿ ಕನ್ನಡದಲ್ಲಿ ಉನ್ನತ ಸಂಶೋಧನೆಯನ್ನು ಈಗಾಗಲೇ ವಿದ್ವಾಂಸರು ನಡೆಸಿರುವರು. ಈ ದಿಶೆಯಲ್ಲಿ 'ಬಸ್ತರ ಪ್ರವಾಸ'ವು ಸಾಗಿದ್ದರೂ ಉನ್ನತ ಸಂಶೋಧನೆಯ ಕಡೆಗೆ ಹೊರಳದೆ, ಲವಲವಿಕೆಯ ನಿರೂಪಣೆಯಿಂದಾಗಿ ಪ್ರವಾಸ ಸಾಹಿತ್ಯವಾಗಿ ಹೊರಳಿದೆ. ಲೇಖಕರು ಯಾವ ಪೂರ್ವನಿರ್ಧರಿತ

ಧೋರಣೆಗಳನ್ನೂ ಹೊಂದಿರದೆ ಈ ಆದಿವಾಸಿ ಜನಾಂಗದವರ ಜೊತೆ ವಿರಾಮವಾಗಿ ನಿಂತು ಅವರ ಜೀವನ ವಿಧಾನವನ್ನು, ನಂಬುಗೆಗಳನ್ನು, ಕಟ್ಟುಪಾಡುಗಳನ್ನು, ಬಡತನದಲ್ಲೂ ನೆಮ್ಮದಿಯನ್ನು ಕಂಡುಕೊಂಡಿರುವ ಅವರ ಹೃದಯ ಶ್ರೀಮಂತಿಕೆಯನ್ನು, ಎಳೆಯರ ಮುಕ್ತ ಲೈಂಗಿಕ ಸಂಬಂಧಗಳನ್ನು, ಬದಲಾವಣೆಗೆ ತಮ್ಮನ್ನು ಒಡ್ಡಿಕೊಳ್ಳಲು ಅವಕಾಶಗಳಿದ್ದರೂ ಅಡವಿಯ ಮಕ್ಕಳಾಗಿ ಅಲೆಮಾರಿ ಜೀವನವನ್ನೇ ಇಷ್ಟಪಡುವ ಅವರ ನಿಲುವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರುವರು.

೧೬೦ ಸೆಂ.ಮೀ.ಗಿಂತಲೂ ಅಧಿಕವಾಗಿ ಸುರಿವ ಮಳೆಯಿಂದಾಗಿ ಬಸ್ತರ್ ಜಿಲ್ಲೆಯ ಶೇಕಡಾ ೭೦ರಷ್ಟು ಭೂಭಾಗ ದಟ್ಟವಾದ ಕಾಡಿನಿಂದ ಕೂಡಿದೆ. ಈ ಜಿಲ್ಲೆಯಲ್ಲಿ ಹರಡಿಕೊಂಡಿರುವ ಈ ಆದಿವಾಸಿ ಜನಾಂಗದ ಕೆಲವು ಗುಂಪುಗಳು ಅಲೆಮಾರಿಗಳಾಗಿ ಕಾಡಿನಲ್ಲಿ ಜೀವನ ನಡೆಯಿಸಿರುವರು. ತಾತ್ಕಾಲಿಕವಾಗಿ ನಿಂತ ಎಡೆಯಲ್ಲಿ ಕುಮರಿ ಬೆಳೆ ತೆಗೆದು ಕೆಲಕಾಲ ಅಲ್ಲಿದ್ದು ನಂತರ ಹೊಟ್ಟೆಪಾಡಿಗಾಗಿ ಮತ್ತೊಂದೆಡೆಗೆ ಸಾಗಿಹೋಗುವ ಈ ಅಲೆಮಾರಿಗಳು ತಮ್ಮ ಚಲನಶೀಲ ಬದುಕಿನಲ್ಲೂ ನೆಮ್ಮದಿ ಕಂಡುಕೊಂಡಿರುವರು. ಜನಸಂಪರ್ಕದಿಂದ ದೂರವಿರುವ ಇವರು ಆದಿಮಾನವರ ರೀತಿಯಲ್ಲಿ ಉಡುಗೆ ತೊಡುಗೆ ಧರಿಸಿ ತಮ್ಮ ಹೊಟ್ಟೆಪಾಡಿಗೆ ಕಾಡನ್ನೇ ಆಶ್ರಯಿಸಿರುವರು. ಇವರಲ್ಲಿ ಸುಧಾರಣೆ ತರುವ ನೆಪವೊಡ್ಡಿ ಸರಕಾರದ ಅಧಿಕಾರಿಗಳು, ಪೋಲೀಸರು ಮೇಲಿಂದ ಮೇಲೆ ಇವರಿರುವ ಜಾಗಕ್ಕೆ ದಾಳಿ ನಡೆಸಿ ಇವರ ಏಕಾಂತ ಜೀವನಕ್ಕೆ ಧಕ್ಕೆ ತಂದಿರುವರು. ಆದಿವಾಸಿಗಳಲ್ಲಿ ಕೆಲವರು ಕಾಡುಕಡಿದು ನೆಲವನ್ನು ಸಮಮಾಡಿ ಸಾಗುವಳಿ ನಡೆಸಿರುವರು. ಅಕ್ರಮವಾಗಿ ಸಾಗುವಳಿ ಮಾಡುವರೆಂಬ ನೆಪವೊಡ್ಡಿ ಸರಕಾರಿ ಅಧಿಕಾರಿಗಳು ಇವರಿಗೆ ಕಿರುಕುಳ ಕೊಡುತ್ತಿರುವರು. ಈ ಜಮೀನನ್ನು ತಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಇವರು ಮುಖಂಡರಿಗೆ, ಅಧಿಕಾರಿಗಳಿಗೆ ದುಂಬಾಲು ಬೀಳಬೇಕಾಗಿದೆ. ಹಣ ಕೊಡದೇ ಸರಕಾರದಲ್ಲಿ ತಮ್ಮ ಕೆಲಸವಾಗುವುದಿಲ್ಲವೆನ್ನುವ ತಿಳುವಳಿಕೆಯೂ ಈಗ ಈ ಮುಗ್ಧಜನರಿಗೆ ಬಂದಿದೆ.

'ನೀವೇಕೆ ಸರಕಾರ ಕೊಡುವ ಸವಲತ್ತುಗಳನ್ನು ನಿರಾಕರಿಸಿ ಕಾಡಿನ ಮರೆಯಲ್ಲಿ ಕಷ್ಟದ ಜೀವನ ನಡೆಸುವಿರಿ?' ಎಂದು ಲೇಖಕರು ಕೇಳಿದ್ದಕ್ಕೆ ಆದಿವಾಸಿಗಳ ಮುಖಂಡ ಕೊತವಾಲನು ಹೀಗೆ ಹೇಳುವನು: 'ಬಾಬು ನಾವು ಕಾಡಿನ ಮಕ್ಕಳು. ಕಾಡುಕೋಣ, ಕಾಡು ಹಂದಿ, ಕರಡಿಗಳಿಗೆ ಕಾಡು ತ್ಯಜಿಸಿ ನಾಡಿನಲ್ಲಿ ಸುಖವಾಗಿರಲು ಸಾಧ್ಯವೆ? ಅನಾದಿಕಾಲದಿಂದಲೂ ನಾವೆಲ್ಲ ಈ ಗುಡ್ಡ ಬೆಟ್ಟ, ನದಿ ಕೊಳ್ಳ, ಪಶು ಪಕ್ಷಿಯೊಂದಿಗೆ ಒಂದಾಗಿ ಬಾಳಿದ್ದೇವೆ. ಮೀನಿಗೆ ನೀರು ಬಿಟ್ಟು ಬದುಕುಂಟೆ? ಜಗದಲಪುರದಲ್ಲಿ ಅರಮನೆಯಲ್ಲಿ ಇರುವಂತೆ ಮಾಡುತ್ತೇನೆಂದರೂ ನಾವು ಮಾತ್ರ ಈ ಕಾಡಿನಿಂದ

ಹೊರಬರಲು ಸಿದ್ಧರಿಲ್ಲ. ನನ್ನ ಈ ಕಿರಿಯಮಗ ಹುಟ್ಟಿದಾಗ ನಮ್ಮವರೆಲ್ಲ ವೋಟೆಡೊಂಗರ, ನಾರಾಯಣಪುರಗಳ ಆಸುಪಾಸು (ಅಕ್ಕಪಕ್ಕ)ದಲ್ಲಿ ಬೀಡುಬಿಟ್ಟಿದ್ದೆವು. ಆದರೆ ಅಲ್ಲಿ ರಸ್ತೆಗಳಾದವು. ಕಾರು ಜೀಪುಗಳು ಓಡಾಡಲಾರಂಭಿಸಿದವು. ದಿನಂಪ್ರತಿ ಬೇರೆ ಬೇರೆ ಅಧಿಕಾರಿಗಳ ಕಿರುಕುಳ ಪ್ರಾರಂಭವಾಯಿತು. ನಿರುಪಾಯವಾಗಿ ಈ ತಾಣಕ್ಕೆ ಬಂದೆವು... ಕಾನೂನಿನ ಪ್ರಕಾರ ವರ್ಷಕ್ಕೊಮ್ಮೆ ಕರ ಕೇಳಿದರೆ ಹೇಗಾದರೂ ಕೊಡಬಹುದು. ಅದು ಬಿಟ್ಟು ಪ್ರತಿ ವಾರವೂ ಬಂದು ಕಾಳುಕಡಿ, ಕುಕ್ಕುಟ, ಹುಲಿ ಹುಲ್ಲೆಗಳ ಚರ್ಮ, ಕೋಡು, ಕೋರೆಹಲ್ಲು, ಜೇನುತುಪ್ಪ, ಮದ್ಯ ಮೊದಲಾದವನ್ನು ಜಬರ್ದಸ್ತಿಯಿಂದ ಕೇಳಿದರೆ ನಾವು ಎಲ್ಲಿಂದ ಕೊಡುವುದು? ನಾವು ಕಡುಬಡವರು ಬಾಬು..." (ಪು. ೩೧-೩೨).

'ಈಗ ನೀವು ಆಯ್ದುಕೊಂಡ ತಾಣದಲ್ಲಿಯೇ ಕೃಷಿ ಮಾಡಿಕೊಂಡು ಆದಾಯ ಹೆಚ್ಚಿಸಿಕೊಳ್ಳಬಹುದಲ್ಲ' ಎಂಬ ಇನ್ನೊಂದು ಪ್ರಶ್ನೆಗೆ ಕೊತವಾಲ ಕೊಟ್ಟ ಉತ್ತರ ಹೀಗಿದೆ: "ಬಾಬುಜಿ ಅದಕ್ಕಾಗಿ (ಕೃಷಿಗೆ) ದನಕರುಗಳು ಅತ್ಯವಶ್ಯ. ಕಾಡೆತ್ತುಗಳು ಪ್ರೇಮಿಯನ್ನು ಸೇರುವುದಕ್ಕಾಗಿ ಆಗಾಗ ನಮ್ಮ ದೊಡ್ಡಿಗಳ ಮೇಲೆ ಹಲ್ಲೆ ನಡೆಸುತ್ತವೆ. ಅವುಗಳ ಸಹವಾಸದಲ್ಲಿ ನಮ್ಮ ಹಸುಗಳು ಹಾಲು ನಿರಾಕರಿಸಿಬಿಡುತ್ತವೆ. ದನದ ಮಾಂಸಕ್ಕೆ ಆಸೆಪಟ್ಟು ಹೆಬ್ಬುಲಿಗಳು ಆಗಾಗ ಆಕ್ರಮಣ ನಡೆಸುತ್ತವೆ... ಕೆಲವೊಮ್ಮೆ ನರಭಕ್ಷಕ ಹುಲಿಗಳ ಕಾಟ ಹೆಚ್ಚಾದಾಗ ನಾವೇ ವಾಸಸ್ಥಾನ ಬದಲಿಸಿಕೊಳ್ಳಬೇಕಾಗುತ್ತದೆ. ಕೃಷಿಗಾಗಿ ಎತ್ತುಗಳನ್ನು ಸಾಕಿದರಂತೂ ನಮ್ಮ ಸರ್ವನಾಶವಾಗುವುದು ಖಂಡಿತ."

'ಒಂದೆಡೆ ನಿಂತು ಕೃಷಿ ಮಾಡುವುದನ್ನು ಒಪ್ಪದಿದ್ದರೆ ಹೋಗಲಿ ಸರಕಾರ ಕೊಡಮಾಡುವ ಶಿಕ್ಷಣ ಔಷಧೋಪಚಾರಗಳನ್ನಾದರೂ ಸ್ವೀಕರಿಸಬಹುದಲ್ಲಾ?' ಎಂದು ಲೇಖಕರು ಬೇಕೆಂದೇ ಪ್ರಶ್ನೆ ಕೇಳಿದ್ದಕ್ಕೆ ಕೊತವಾಲ, ಕಾಡಿನ ಸಂತೃಪ್ತ ಜೀವನದ ಬಗೆಗೆ ಹೀಗೆ ಸಮಜಾಯಿಷಿ ನೀಡುವನು: 'ಮಗನಿಗೆ ತಂದೆ ಮಗಳಿಗೆ ತಾಯಿಗಿಂತ ದೊಡ್ಡ ಗುರುಗಳು ಯಾರಾದರೂ ಇದ್ದಾರೆಯೇ? ಬೇಟೆಯಾಡುವುದು, ಮೀನು ಹಿಡಿಯುವುದು, ಕಟ್ಟಿಗೆ ತರುವುದು, ಗುಡಿಸಲು ಕಟ್ಟುವುದು, ಪೆಂಡಾ (ಕಾಡಿನ) ಕೃಷಿ ಮಾಡುವುದು, ಮಹುವಾಮದ್ಯ ಮಾಡುವುದು, ವಾದ್ಯ ನುಡಿಸುವುದು, ನರ್ತಿಸುವುದು ಎಲ್ಲವನ್ನೂ ನಮ್ಮ ಎಳೆಯರಿಗೆ ಚಾಚೂ ತಪ್ಪದೇ ಕಲಿಸುತ್ತೇವೆ. ಇನ್ನಿತರರಂತೆ ನಾವೂ ಬೆನ್ನುಮುರಿ ದುಡಿಯುತ್ತೇವೆ. ಅಡುಗೆ ಮಾಡಿ ಉಣ್ಣುತ್ತೇವೆ. ಸುಖವಾಗಿ ನಿದ್ರಿಸುತ್ತೇವೆ. ಮದುವೆಯಾಗಿ ಮಕ್ಕಳನ್ನು ಪಡೆಯುತ್ತೇವೆ. ಶಾಲಾ ಶಿಕ್ಷಣವಿಲ್ಲದಿದ್ದರೂ ಜೀವನದಲ್ಲಿ ಯಾವ ಕೊರತೆಯನ್ನೂ ಮಾಡಿಕೊಂಡಿಲ್ಲ. ಕಾಡಿನ ಮಕ್ಕಳು ಗಟ್ಟಿಮುಟ್ಟಾಗಿದ್ದರೆ ಮಾತ್ರ ನಮಗೆ ಬದುಕು. ಸಣ್ಣಪುಟ್ಟ ಆರೋಗ್ಯದ ಸಮಸ್ಯೆಗಳಿದ್ದರೆ ನಾವೇ ಗಿಡಮೂಲಿಕೆ

ತೊಗಟೆ ಬೇರು ಪರ್ಣಗಳನ್ನು ಬಳಸಿ ಔಷದೋಪಚಾರ ಮಾಡಿಕೊಳ್ಳುತ್ತೇವೆ. ಹೆಚ್ಚಿನ ಕಾಯಿಲೆಯಾದರೆ ಅದು ಭೂತ ಪ್ರೇತಗಳ ಬಾಧೆಯಿಂದಾಗಿ ಅದಕ್ಕೆ ಪರಿಹಾರ ಸೂಚಿಸಲು ನಮ್ಮ ಮಂತ್ರವಾದಿ ಇದ್ದೇ ಇರುವ. ಮಕ್ಕಳ ಮನೋರಂಜನೆಗೆ ಘೋಟುಲು ಇದ್ದೇ ಇವೆ."

ಆದಿವಾಸಿ ಸ್ತ್ರೀಯರ ಪ್ರಕೃತಿದತ್ತವಾದ ದೇಹಸೌಂದರ್ಯ, ಕೇಶಾಲಂಕಾರ, ಉಡಿಗೆ-ತೊಡಿಗೆ, ಕ್ಯಾಮರ ಕಂಡರೆ ನಾಚಿ ಹೆದರಿ ಓಡಿಹೋಗುವ ಮನೋಭಾವ ಇವುಗಳ ವಿವರಣೆಯನ್ನು ಲೇಖಕರು ಸಾಕಷ್ಟು ಚೆನ್ನಾಗಿಯೇ ಮೂಡಿಸಿರುವರು. ರಾಜಕಾರಣಿಗಳ ನಯವಂಚನೆಯಿಂದ ಅರಸೊತ್ತಿಗೆಯ ಅಧಿಕಾರವನ್ನು ಕಳೆದುಕೊಂಡ ಆದಿವಾಸಿಗಳ ಅರಸ ಪ್ರವೀರಚಂದ್ರರ ಕರುಣಾಜನಕ ಕಥೆಯನ್ನು ಇಂದಿನ ರಾಜಕೀಯದ ವಿಡಂಬನೆಯಾಗಿ ಲೇಖಕರು ಬಳಸಿಕೊಂಡಿರುವರು. ಆದಿವಾಸಿಗಳ ಮುಗ್ಧತೆಯನ್ನು ತನ್ನ ಬಂಡವಾಳವನ್ನಾಗಿ ಮಾಡಿಕೊಂಡು ಅವರಿಗೆ ದೀಕ್ಷೆ ಕೊಡುವ ನೆಪದಲ್ಲಿ ಅವರನ್ನು ಸುಲಿದ ಕಂಠೀಬಾಬಾನ ಚಿತ್ರವನ್ನು ಲೇಖಕರು ಚೆನ್ನಾಗಿ ಮೂಡಿಸಿರುವರು. ಕಂಠೀಬಾಬಾನ ಪ್ರಭಾವಶಾಲೀ ವರ್ಚಸ್ಸನ್ನು ಆದಿವಾಸಿಗಳ ಮತಗಳಿಸುವಲ್ಲಿ ಬಳಸಿಕೊಂಡ ರಾಜಕಾರಣಿಗಳು ತುರ್ತು ಪರಿಸ್ಥಿತಿಯಲ್ಲಿ ಆತ ಸರಕಾರಕ್ಕೆ ಆದಾಯಕರ ಕೊಡದೇ ಸಂಪತ್ತನ್ನು ಕೂಡಿಹಾಕಿ ಮೋಸಮಾಡಿದ್ದಾನೆಂದು ಅವನ ಅಪಾರ ಸಂಪತ್ತನ್ನು ಜಪ್ತಿ ಮಾಡಿಸಿದ್ದಲ್ಲದೆ ಅವನನ್ನು ಬಂಧಿಸಿ ಕಾರಾಗೃಹದಲ್ಲಿಡಿಸಿದ್ದ ರಾಜಕಾರಣಿಗಳ ಗೋಮುಖವ್ಯಾಘ್ರತನವನ್ನು ಲೇವಡಿ ಮಾಡಿದಂತಿದೆ.

ಪ್ರವಾಸ ಸಾಹಿತ್ಯವು ಸಾಮಾಜಿಕ ಅಧ್ಯಯನದತ್ತಲೂ ಮುಖ ಮಾಡಬಹುದೆಂಬುದಕ್ಕೆ ಇಲ್ಲಿ ಸಾಕಷ್ಟು ನಿದರ್ಶನಗಳು ಸಿಗುತ್ತವೆ. ಈ ಪ್ರವಾಸ ಸಾಹಿತ್ಯದಲ್ಲಿ ಬರುವ ಘೋಟುಲ್ ಸಾಮಾಜಿಕ ಜೀವನ ಕುತೂಹಲಕಾರಿಯಾಗಿದೆ. ಘೋಟುಲ್ ಕಿರಿಯರಿಗೆಂದೇ ಇರುವ ಜೀವಂತ ವಿದ್ಯಾಲಯ. ಹಳ್ಳಿಯ ಹೊರಗೆ ಊರ ಜನರು ಪ್ರತ್ಯೇಕ ಸ್ಥಳವನ್ನು ಮೀಸಲಿಡುವರು. ಇಲ್ಲಿ ಆರು ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳೆಲ್ಲ ಇದರ ಸದಸ್ಯರು. ಉರಿಯುತ್ತಿರುವ ಬೆಂಕಿಯ ಸುತ್ತ ಕುಳಿತು ಹಾಡು, ಕುಣಿತ, ವಾದ್ಯ ನುಡಿಸುವುದು -ಇವುಗಳ ಮೂಲಕ ಮನರಂಜನೆ ಪಡೆಯುವರು. ಕತೆ, ಒಗಟು ಹೇಳುವುದು, ಒಬ್ಬರನ್ನೊಬ್ಬರು ಛೇಡಿಸಿ ಕೆರಳಿಸಿ ವಿನೋದವಾಡವುದು ಮುಂದುವರಿಯುತ್ತದೆ. ಇಲ್ಲಿ ಗಂಡು-ಹೆಣ್ಣುಗಳಿಗೆ ಮುಕ್ತ ಸ್ವಾತಂತ್ರ್ಯ. ಅವರು ತಮಗೆ ಸರಿಕಂಡವರ ಜೊತೆ ಮಲಗುವರು. ಪ್ರಕೃತಿಯ ಮಡಿಲಲ್ಲಿ ಯಾವ ವಿಕೃತಿಗೂ ಆಸ್ಪದವಿಲ್ಲದೆ ಗಂಡು-ಹೆಣ್ಣು ಪರಸ್ಪರ ಆಕರ್ಷಿತರಾಗಿ ಸುಖಿಸುವರು. ಪ್ರತಿಯೊಬ್ಬ ಸುಂದರ ಆಕರ್ಷಕ ಯುವತಿ ಒಂದಿಲ್ಲೊಂದು ದಿನ ಪ್ರತಿಯೊಬ್ಬ ಗಂಡಿನ ಜೊತೆ

ಕೂಡುವ ಅವಕಾಶವಿರುವುದರಿಂದ ಇಲ್ಲಿ ಪ್ರೇಮದಲ್ಲಿ ಅಸೂಯೆ, ವೈಮನಸ್ಸು, ನಿರಾಸೆಗಳಿಗೆ ಆಸ್ಪದವಿಲ್ಲ. ಘೋಟುಲದಲ್ಲಿನ ಚಟುವಟಿಕೆಗಳನ್ನು ಮನೋಜ್ಞವಾಗಿ ತಿಳಿಯಪಡಿಸುವ ಲೇಖಕರು ಕಾಡಿನ ಮಕ್ಕಳ ಅದ್ಭುತ ಜಗತ್ತೊಂದನ್ನು ಪರಿಚಯಿಸುವರು. ಘೋಟುಲದ ಗಂಡು-ಹೆಣ್ಣುಗಳು ಪರಸ್ಪರ ಕೆರಳಿಸುವ ಸಲುವಾಗಿ ಹಾಡುವ ಹಾಡುಗಳನ್ನು ಲೇಖಕರು ಸಂದರ್ಭೋಚಿತವಾಗಿ ಉಲ್ಲೇಖಿಸಿರುವರು. ಅವು ಸ್ವಾರಸ್ಯಪೂರ್ಣವಾಗಿವೆ, ಅರ್ಥಗರ್ಭಿತವಾಗಿವೆ.

ಈ ಪ್ರವಾಸ ಕಥನದ ಕೊನೆಯಲ್ಲಿ ಕಾಲು ಶತಮಾನಕ್ಕಿಂತಲೂ ಹೆಚ್ಚು ಕಾಲ ಆದಿವಾಸಿಗಳೊಂದಿಗೆ ಒಂದಾಗಿ ಬಾಳಿ ಬದುಕಿ ಅವರ ನೋವು ನಲಿವುಗಳನ್ನು ಅರ್ಥಮಾಡಿಕೊಂಡಿದ್ದ ವೆರಿಯರ್ ಎಲ್ವಿನ್ನರು ಕೇಂದ್ರ ಸರ್ಕಾರಕ್ಕೆ ಆದಿವಾಸಿ ಕಲ್ಯಾಣ ಯೋಜನೆಗೆ ಕೆಲವು ಸಲಹೆಗಳನ್ನು ಕೊಟ್ಟದ್ದನ್ನು ವಿವರಿಸಲಾಗಿದೆ. ಆದಿವಾಸಿಗಳ ಆಧುನೀಕರಣಕ್ಕೆ ಸರಕಾರ ನಡೆಸಿರುವ ಹಲವು ಯೋಜನೆಗಳನ್ನು ತಿಳಿಯಪಡಿಸಿ, ಅವುಗಳ ಪ್ರಯೋಜನ ಆದಿವಾಸಿಗಳಿಗೆ ಬರದೆ ಅವರು ಅಧಿಕಾರಿಗಳ ದರ್ಪ, ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾಗಿ ದೂರವೇ ಉಳಿದುದನ್ನು ಮಾರ್ಮಿಕವಾಗಿ ಹೇಳಿರುವರು.

'ಬಸ್ತರ ಪ್ರವಾಸ' ಪ್ರವಾಸ ಸಾಹಿತ್ಯವಾಗಿ ಆದಿವಾಸಿ ಜನಾಂಗವೊಂದರ ಸಾಮಾಜಿಕ ಜೀವನ ವಿಧಾನವನ್ನು, ಸಂಸ್ಕೃತಿಯನ್ನು ಬಹಳ ಸೊಗಸಾಗಿ ಪರಿಚಯಿಸುತ್ತದೆ, ನಮ್ಮ ಪ್ರಜ್ಞೆಯ ಕ್ಷಿತಿಜವನ್ನು ವಿಸ್ತರಿಸುತ್ತದೆ.

ಶೇಡಬಾಳದ ಮಿರ್ಜಿ ಅಣ್ಣಾರಾಯರು ಕೈಗೊಂಡ ಭಾರತಯಾತ್ರೆಯ ಕಥನ **'ನಾನು ಕಂಡ ನಾಡು'** ಎಂಬ ಅವರ ಕೃತಿಯಲ್ಲಿ ಬಂದಿದೆ. "ಇದರಲ್ಲಿ ಭ್ರಮಣ, ಚಿಂತನ, ವರ್ಣನಗಳು ಮುಪ್ಪುರಿಗೊಂಡಿವೆ. ಭಾರತದ ಅನೇಕ ಪ್ರಸಿದ್ಧ ಸ್ಥಳಗಳ ಚಿತ್ರಗಳು ಸೆಳೆಮಿಂಚುಗಳಂತೆ ಸರಿಯುತ್ತವೆ. ಲೇಖಕರ ಅಭ್ಯಾಸಪ್ರಿಯತೆಯ ಜೊತೆಗೆ ಅವರ ನವಿರಾದ ಹಾಸ್ಯ ಮತ್ತು ಲಲಿತಶೈಲಿಯ ಲಾಸ್ಯ ಸಂಗಮಿಸಿದೆ. ಇದು ಕನ್ನಡ ಪ್ರವಾಸ ಸಾಹಿತ್ಯದಲ್ಲಿ ಗಣ್ಯಸ್ಥಾನ ಪಡೆಯಬಲ್ಲ ಕೃತಿ."[೧]

ಗುರುನಾಥ ಜೋಶಿಯವರ **'ಕಾಶ್ಮೀರ ಪ್ರವಾಸ'** ಹೆಸರೇ ಹೇಳುವಂತೆ ಕಾಶ್ಮೀರದ ಪ್ರಕೃತಿ ಸೌಂದರ್ಯವನ್ನು ಸವಿಯಲು ಹೊರಟ ಪ್ರವಾಸವಾಗಿದೆ. ಇದು ಸಾಹಿತ್ತಿಕವಾಗಿ ಮಹತ್ವದ ಕೃತಿಯಲ್ಲದಿದ್ದರೂ ಕಾಶ್ಮೀರದ ಪ್ರೇಕ್ಷಣೀಯ ಸ್ಥಳಗಳನ್ನು ಪರಿಚಯಿಸುವಲ್ಲಿ, ಅಮರನಾಥ ಯಾತ್ರೆಯ ಅನುಭವಗಳನ್ನು ನಿರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಟೂರಿಸ್ಟ್ ಮನೋಭಾವ ಈ ಕೃತಿಯ ಉದ್ದಕ್ಕೂ ಕಾಣಬರುತ್ತದೆ. ಕೃತಿಯ ಕೊನೆಯಲ್ಲಿ 'ಕಾಶ್ಮೀರದ ಪ್ರವಾಸವನ್ನು ಕೊಡಲಾಗಿದೆ.'

ಪ್ರೊ. ಕು.ಶಿ. ಹರಿದಾಸಭಟ್ಟರ 'ಜಗದಗಲ' ಪ್ರವಾಸ ಕಥನವು ಕರ್ನಾಟಕ, ಮೇಘಾಲಯ, ಹಾಂಕಾಂಗ್, ಜಪಾನ್ -ಈ ನಾಲ್ಕು ನಾಡುಗಳಲ್ಲಿ ಮಾಡಿದ ಪ್ರವಾಸದ ಅನುಭವ ನಿರೂಪಣೆಯಾಗಿದೆ. 'ನನ್ನದು ಈ ಕನ್ನಡ ನಾಡು' ಎಂಬುದು, ಈ ಕೃತಿಯ ಮೊದಲ ಲೇಖನ. "...ಬುದ್ಧಿ ತಿಳಿದು, ಸ್ವಂತ ಖರ್ಚಿನಲ್ಲಿ ಓಡಾಡುವ ಶಕ್ತಿ ಮೂಡಿದ ಬಳಿಕ ಅಖಿಲ ಕರ್ನಾಟಕವನ್ನು ಸುತ್ತಾಡಿದ ಒಬ್ಬ ಯಾತ್ರಿಕನ ಅನುಭವ ಕಥನವನ್ನು ಇಲ್ಲಿ ಬಿತ್ತರಿಸುತ್ತೇನೆ. ಅಸ್ಪಷ್ಟ ಧ್ಯೇಯವಾದಿಯೊಬ್ಬ ತನ್ನ ಅಮೂರ್ತ ಭಾವನೆಗಳಿಗೆ ಬಾಯಿಕೊಡುವ ಮನುಷ್ಯರು ದೊರೆತಾರೇ ಎಂದು, ಕಂಡ ಕನಸುಗಳಿಗೆ ನೆಲೆ ಯಾವುದು ಎಂದು, ನಾಡಿನ ಭೂತಕಾಲದ ಸಂಪತ್ತಿನ ನೆಲೆ ಎಲ್ಲಿದೆ ಎಂದು, ವರ್ತಮಾನದ ಗೊಂದಲದ ನಡುವೆಯೂ ಚೆಲುವಿನ ಚಿಲುಮೆ ಅಡಗಿದೆಯೆ ಎಂದು, ಜನಜೀವನದ ಕಸುವು ಯಾವುದು ಎಂದು ಅರಸುತ್ತ, ತನ್ನ ಬದುಕಿನ ಅಲೆಮಾರಿ ಪರ್ವದಲ್ಲಿ ಕಣ್ಣಲ್ಲಿ ಕಂಡದ್ದನ್ನು, ಮನಸ್ಸಲ್ಲಿ ಉಂಡದ್ದನ್ನು ಒಪ್ಪಿಸುವ ಸಂಕಲ್ಪ ಮಾಡಿದ್ದಾನೆ... ತುಳುನಾಡಿನ ಹಳದಿ ಮಣ್ಣು, ಬಯಲುಸೀಮೆಯ ಕೆಮ್ಮಣ್ಣು, ಉತ್ತರ ಕರ್ನಾಟಕದ ಎರೆಮಣ್ಣು ಬಿಸಿಲಿಗೆ ಕಾಯುವಾಗ, ಮಳೆಗೆ ತೊಯ್ದಾಗ, ಪಚ್ಚೆಪಸುರಿನ ಪೈರಿನ ರೂಪದಲ್ಲಿ ಮಾಗಿದಾಗ, ಯಾತ್ರಿಕನ ಹೃತ್ತಂತಿ ಒಂದೇ ತೆರದಲ್ಲಿ ಮಿಡಿದಿದೆ..." ಎಂಬ ಲೇಖಕರ ಮಾತು ಬರಿಯ ಭಾವುಕತನದಿಂದ ಮೂಡಿದ್ದಲ್ಲ, ಹೃದಯಾಂತರಾಳದಿಂದ ಮೂಡಿಬಂದ ಸಹಜ ನುಡಿಗಳೆಂಬುದನ್ನು ಈ ಲೇಖನವನ್ನು ಓದಿ ಮುಗಿಸಿದಾಗ ಓದುಗನಿಗೆ ಉಂಟಾಗುತ್ತದೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಲಕ್ಕುಂಡಿ, ಇಟಗಿ, ಹಂಪೆ, ಮೈಸೂರು, ಮಂಗಳೂರು -ಹೀಗೆ ಸಾಂಸ್ಕೃತಿಕವಾಗಿ ಪ್ರಸಿದ್ಧವಿರುವ ಈ ಪ್ರದೇಶಗಳ ಸಮೃದ್ಧ ಕಲಾಸಂಪತ್ತಿ, ಜನರ ಬದುಕು ಬವಣೆ, ಆಸೆ-ನಿರಾಶೆ, ವಿಶಿಷ್ಟ ಸಂಸ್ಕೃತಿಗಳ ಪರಿಚಯವನ್ನು ಲೇಖಕರು ಮಾಡಿಕೊಟ್ಟಿರುವರು.

'ಮೇಘಾಲಯದ ಹಾದಿಯಲ್ಲಿ' ಎಂಬ ಲೇಖನದಲ್ಲಿ ಉಡುಪಿಯ ಯಕ್ಷಗಾನ ಕಲಾವಿದರ 'ಯಕ್ಷರಂಗ'ವನ್ನು ಅಸ್ಸಾಮಿಗೆ ಸಾಂಸ್ಕೃತಿಕ ವಿನಿಮಯಕ್ಕಾಗಿ ಕರೆದುಕೊಂಡು ಹೋದಾಗಿನ ಅನುಭವವನ್ನು ವಿವರಿಸಲಾಗಿದೆ. ಮೇಘಾಲಯ ಅಸ್ಸಾಮಿನ ಒಂದು ಭಾಗವಾಗಿದ್ದುದು ಈಗ ಪ್ರತ್ಯೇಕ ರಾಜ್ಯವಾಗಿದೆ. ಅಸ್ಸಾಮಿನ ಗುಡ್ಡಗಾಡಿನ ಜನರು ಪ್ರಕೃತಿಯ ನಡುವೆ ಬಾಳುತ್ತಿರುವ ಕಷ್ಟದ ಬದುಕನ್ನು ಲೇಖಕರು ತಮ್ಮ ಹತ್ತು ದಿನದ ಪ್ರವಾಸದಲ್ಲಿ ಕಂಡು ಚಿತ್ರಿಸಿರುವರು. ಆರ್ಥಿಕ ಪ್ರಗತಿಯ ದೃಷ್ಟಿಯಿಂದ ಅಸ್ಸಾಂ ಹಿಂದುಳಿದ ರಾಜ್ಯ. ವ್ಯಾಪಾರದ ಬಹುಪಾಲು ಮಾರವಾಡಿಗಳು, ಬಂಗಾಳಿಗಳಿಗೆ ಸೇರಿಹೋಗಿದೆ. ಕೃಷಿ ಅವರಿಗೆ ಗೌರವದ ಉದ್ಯೋಗ. ಯಕ್ಷರಂಗದ ಪ್ರಥಮ ಪ್ರದರ್ಶನ ಗೌಹತಿಯ ರವೀಂದ್ರ ಭವನದಲ್ಲಾಯಿತು. ಷಿಲ್ಲಾಂಗ್‌ನ ಕೇಂದ್ರೀಯ ವಿಶ್ವವಿದ್ಯಾ-ನಿಲಯದಲ್ಲಿ (ನೇಹು) ಕುಲಪತಿ ದೇವನೇಶನ್‌ರವರ ಪ್ರಯತ್ನದ ಫಲವಾಗಿ

ಷಿಲ್ಲಾಂಗ್‌ನಲ್ಲಿ 'ಯಕ್ಷರಂಗ' ಒಂದು ಪ್ರದರ್ಶನ ನೀಡಿತು. ಅಸ್ಸಾಂ ಹಾಗೂ ಮೇಘಾಲಯದ ಜನರ ಬದುಕು-ಬವಣೆಗಳ ಚಿತ್ರಣವೇ ಈ ಪ್ರವಾಸ ಕಥನದಲ್ಲಿ ಪ್ರಧಾನವಾಗಿದೆ.

ಜಾಣಗೆರೆ ವೆಂಕಟರಾಮಯ್ಯನವರ **'ಸುಡುಗುಂಡುಗಳ ನಾಡಲ್ಲಿ ಶಾಂತಿಯ ಕನಸು'** ಎಂಬ ಪ್ರವಾಸ ಕಥನವು ಪಂಜಾಬ್‌ನಲ್ಲಿ ಭಯೋತ್ಪಾದಕರ ಕಾರ್ಯಾಚರಣೆಯಿಂದಾಗಿ ಅಲ್ಲಿನ ಜನತೆ ಹೇಗೆ ತತ್ತರಿಸಿಹೋಗಿದ್ದರು? ನಿತ್ಯವೂ ನಿಷ್ಕಾರಣವಾಗಿ ಕೊಲೆಗಳಾಗಿ ಜನರು ಭೀತಿಯ ವಾತಾವರಣದಲ್ಲಿ ಹೇಗೆ ಜೀವ ಹಿಡಿದುಕೊಂಡಿದ್ದರು? ಅಲ್ಲಿನ ರಾಜಕೀಯ ವಿದ್ಯಮಾನಗಳೇನು? ಸ್ವರ್ಣಮಂದಿರದಲ್ಲಿ ನಡೆದ ಕಾರ್ಯಾಚರಣೆಗಳೇನು? -ಇವೆಲ್ಲವುಗಳ ಪ್ರತ್ಯಕ್ಷದರ್ಶಿಯಾಗಿ ವಿವರ ನೀಡುತ್ತದೆ. 'ಭಾರತೀಯ ಕಾರ್ಯನಿರತ ಪತ್ರಕರ್ತರ ಸಂಘ'ವು ಪಂಜಾಬ್‌ನಲ್ಲಿ ಹತ್ಯಾಕಾಂಡ ನಡೆಯುತ್ತಿದ್ದ ಕಾಲದಲ್ಲಿ ಶಾಂತಿಯಾತ್ರೆಗೆ ಒಂಬತ್ತು ಜನ ಪತ್ರಕರ್ತರನ್ನು ಅಲ್ಲಿಗೆ ಕಳುಹಿಸಿತು. ಆ ಶಾಂತಿಯಾತ್ರೆಯಲ್ಲಿ ಪಾಲ್ಗೊಂಡ ಲೇಖಕರು ತಮ್ಮ ಅನುಭವಗಳನ್ನು ಸೊಗಸಾಗಿ ತಿಳಿಯಪಡಿಸಿರುವರು. ಅವರ ನಿರೂಪಣೆ ಹಲವಡೆ ಘಟನೆಗಳು ನಮ್ಮ ಕಣ್ಣಮುಂದೆ ನಡೆದಂತೆ ಸಹಜತೆಯ ಮೆರುಗು ಪಡೆದಿದೆ.

ಭಾರತವನ್ನು ಪಾದಯಾತ್ರೆಯ ಮೂಲಕ ಸುತ್ತಿರುವ ಕೆ.ಸಿ. ಲಕ್ಷ್ಮೀನರಸಯ್ಯನವರು ನಿವೃತ್ತ ಶಿಕ್ಷಕರು, ಗಾಂಧೀಜಿಯವರ ತತ್ವಾನುಯಾಯಿಗಳು. ಹತ್ತು ಅಧ್ಯಾಯಗಳಲ್ಲಿ ತಮ್ಮ ಭಾರತ ಸಂಚಾರದ ಮರೆಯಲಾಗದ ಅನುಭವಗಳನ್ನು ದಾಖಲಿಸಿರುವರು.

ಕನ್ನಡದ ಪ್ರಸಿದ್ಧ ಕಥೆಗಾರರಲ್ಲಿ ಒಬ್ಬರೂ, ವೃತ್ತಿಯಲ್ಲಿ ಪತ್ರಕರ್ತರೂ ಆಗಿರುವ ಶ್ರೀ ಜಿ.ಪಿ. ಬಸವರಾಜುರವರು ೧೯೮೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರವಾಸ ಅನುದಾನ ಯೋಜನೆಯ ನೆರವು ಪಡೆದು ಅಸ್ಸಾಂ ರಾಜ್ಯದಲ್ಲಿ ಪ್ರವಾಸ ಕೈಗೊಂಡರು. ಅವರ ಪ್ರವಾಸೀ ಅನುಭವ ಕಥನವಾದ **'ನೀಲಾಚಲಗಳ ನಡುವೆ'** ತನ್ನ ಸೀಮಿತ ಉದ್ದೇಶಕ್ಕಷ್ಟೇ ಮೀಸಲಾಗದೆ ಅಸ್ಸಾಮಿನ ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ಪ್ರಾಕೃತಿಕ ಸಂಗತಿಗಳ ಆತ್ಮೀಯವಾದ ಪರಿಚಯವನ್ನೂ ಒಳಗೊಳ್ಳುತ್ತದೆ. ಪ್ರಾರಂಭದಲ್ಲಿ ಬರುವ ರೈಲಿನ ಅನುಭವಗಳ ನಿರೂಪಣೆ ಲೇಖಕರ ಆಕರ್ಷಕ ಬರವಣಿಗೆಗೆ ಸಾಕ್ಷಿಯಾಗಿದೆ. ಕುತೂಹಲದಿಂದ ಜನರ ಮನೋಭಾವಗಳನ್ನು ಗ್ರಹಿಸುವ, ಪ್ರಕೃತಿಯ ಸೊಗಸನ್ನು ಮೌನವಾಗಿ ಆಸ್ವಾದಿಸುವ ಕವಿಹೃದಯ ಲೇಖಕರಿಗಿದೆ. ವ್ಯಕ್ತಿಚಿತ್ರದಲ್ಲಿ ಲೇಖಕರ ಕುಸುರಿಕೆಲಸವನ್ನು ಕಾಣಬಹುದು. ಹಿರೇನ್ ಭಟ್ಟಾಚಾರ್ಯ, ಡಿ.ಐ.ಜಿ. ಹರೇಕೃಷ್ಣ ದೇಕಾ, ಡಾ|| ಅಹಮ್ಮದ್, ಭಜೇಂದ್ರನಾಥ ಸೈಕಿಯಾ-ಇವರೇ ಮೊದಲಾದವರ ವ್ಯಕ್ತಿಚಿತ್ರ ಇದಕ್ಕೆ ಸೊಗಸಾದ ಉದಾಹರಣೆ. ಅಸ್ಸಾಮಿ ಭಾಷೆಯ

ಅತ್ಯಂತ ಮಹತ್ವದ ಕವಿ ಹಿರೇನ್ ಭಟ್ಟಾಚಾರ್ಯರ ಮನೆಗೆ ಹೋದಾಗ ಅವರು ತಮ್ಮ ಕೈತೋಟದಲ್ಲಿ ಕೆಲಸ ಮಾಡುತ್ತಿದ್ದರು. ಲೇಖಕರಿಗೆ ಮಾಲಿಯಾಗಿ ಕಂಡ ಈ ಸರಳಜೀವನದ ಕವಿ ಪಾತಿಯಲ್ಲಿ ಬೀಜಗಳು ಮೊಳಕೆಯೊಡೆದು ಹಸಿರುಧಾರಣೆ ಪಡೆಯುತ್ತಿದ್ದಾಗ ಆ ಎಳೆಯ ಜೀವಗಳೊಡನೆ ವ್ಯವಹರಿಸುವಾಗ ಅತಿ ಸೂಕ್ಷ್ಮವಾಗಿ, ಮೃದುವಾಗಿ, ಕೋಮಲವಾಗಿ, ಪ್ರೀತಿಯ ಸೆಲೆ ಚಿಮ್ಮಿಸುತ್ತಿದ್ದುದು ಕಂಡುಬರುವುದು. ಕಾವ್ಯಕ್ರಿಯೆ ತೋಟದ ಮಾಲಿಯ ಕ್ರಿಯೆಯಿಂದ ಭಿನ್ನವಲ್ಲವೆಂದು ವಿಚಾರಮಾಡುವ ಲೇಖಕರು "ಈ ಸೂಕ್ಷ್ಮತೆ, ಮೃದುತ್ವ, ಕೋಮಲ ಸ್ಪರ್ಶ, ಪ್ರೀತಿಯ ಸೆಲೆ ಇಲ್ಲದಾದ ಕಾವ್ಯ ಸೃಷ್ಟಿಸುವುದು ಕಷ್ಟ. ಈ ಎಲ್ಲ ಗುಣಗಳಲ್ಲಿ ಮಡುಗಟ್ಟಿದೆ ಭಟ್ಟಾಚಾರ್ಯರ ಕಾವ್ಯ. ಪಾತಿಯಲ್ಲಿ ಮಾಡುವ ಕೆಲಸವನ್ನೇ ಈ ಭಟ್ಟಾಚಾರ್ಯರು ತಮ್ಮ ಕಾವ್ಯಕ್ಷೇತ್ರದಲ್ಲೂ ಮಾಡುತ್ತಿದ್ದಾರೆಂದು ಅನ್ನಿಸುತ್ತದೆ" ಎಂದಿರುವರು.

ಅಸ್ಸಾಮೀಯರ ಜೀವನ ವಿಧಾನ, ಪ್ರೀತಿಯ ಆತಿಥ್ಯ, ಸಾಂಸ್ಕೃತಿಕವಾದ ವಿಶಿಷ್ಟ ಸಂಪ್ರದಾಯಗಳು, ದುರ್ಗಾಪೂಜೆಯ ವೈಭವ, ಅಸ್ಸಾಮಿ ರಂಗಭೂಮಿ, ಬಿಹು ಗೀತೆಗಳು, ಬೋಡೋ ಚಳುವಳಿ ಸಮಸ್ಯೆ -ಹೀಗೆ ಈ ಪ್ರವಾಸ ಕಥನ ಎಲ್ಲವನ್ನೂ ಒಳಗೊಳ್ಳುತ್ತದೆ. ಇದರಿಂದಾಗಿ ಈ ಕೃತಿಗೆ ತನ್ನದೇ ಆದ ವೈಶಿಷ್ಟ್ಯವಿದೆ. ನಿರೂಪಣೆ ಹೃದ್ಯವಾಗಿ ಬರುವುದರಿಂದ ಅವರ ಅನುಭವಗಳು ನಮ್ಮ ಅನುಭವದ ಭಾಗವಾಗುತ್ತದೆ. ಲೇಖಕರು ವೃತ್ತಿಯಲ್ಲಿ ಪತ್ರಕರ್ತರಾಗಿರುವುದರಿಂದ, ಅವರ ಆಸಕ್ತಿ ಆ ಕ್ಷೇತ್ರದ ಕಡೆಗೆ ಸ್ವಲ್ಪ ಹೆಚ್ಚಿಗೆ ಹರಿದಿದೆ. 'ಅಧಿನಾಯಕ', 'ದಿ ಸೆಂಟಿನಲ್', 'ದಾಂನ್ ಮುಸಾ', 'ಜೋನಕಿ', 'ರಾಮಧೇನು' ಪತ್ರಿಕೆಗಳ ಬಗೆಗೆ ಅವರು ಕೊಡುವ ವಿವರಗಳು ಮುಖ್ಯವೆನಿಸುತ್ತವೆ. 'ಅಧಿನಾಯಕ' ಸಾಹಿತ್ಯಿಕ ಮಾಸಿಕವು ತನ್ನ ಪ್ರಚಾರಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಜಾಹಿರಾತು ನೀಡುತ್ತಿರುವುದನ್ನು ಕಂಡ ಲೇಖಕರು ಇಂಥ ಪರಿಪಾಠವನ್ನು ನಾವು ಕಂಡರಿಯೆವು ಎನ್ನುವರು. ಈ ಪತ್ರಿಕೆಯ ವಿಶೇಷವೆಂದರೆ, ಅದರ ಮಾರಾಟವೆಲ್ಲ ಸ್ಟಾಲ್‌ಗಳಲ್ಲಿ-ಮಾರುಕಟ್ಟೆಯಲ್ಲಿ. ಅಸ್ಸಾಮಿ ಸಾಹಿತ್ಯಿಕ ಚಟುವಟಿಕೆಗಳ ಬಗೆಗಿನ ಲೇಖಕರ ಆಸಕ್ತಿ ವಿಶೇಷವಾದದ್ದು. ಹಿರೇನ್ ಭಟ್ಟಾಚಾರ್ಯ, ಹರೇಕೃಷ್ಣ ಡೇಕಾ, ಭಜೇಂದ್ರನಾಥ ಸೈಕಿಯಾ, (ಕಾದಂಬರಿಕಾರ) ಭಟ್ಟಾಚಾರ್ಯ, ಕೇಶವ ಮೊಹಂತ -ಇವರ ಸಂದರ್ಶನಗಳ ಮೂಲಕ ಅಸ್ಸಾಮಿ ಭಾಷೆಯಲ್ಲಿ ನಡೆದಿರುವ ಸಾಹಿತ್ಯಿಕ ಚಟುವಟಿಕೆಗಳ ವಿವರ ದೊರೆಯುತ್ತದೆ. 'ಅಸ್ಸಾಂ ಸಾಹಿತ್ಯ ಸಭಾ' ಹಾಗೂ 'ಪ್ರಕಾಶನ ಪರಿಷತ್'ಗಳ ಪರಿಚಯವೂ ಈ ದಿಶೆಯಲ್ಲಿ ಇನ್ನಷ್ಟು ವಿವರ ನೀಡುತ್ತದೆ. ನಗುವ ಬೆಟ್ಟಗುಡ್ಡ, ಕಾಡು, ನದಿ, ಹೂವು, ಹಣ್ಣು, ಪ್ರಕೃತಿ -ಈ ಹಿನ್ನೆಲೆಯಿರುವ ಕವಿ, ಕಲಾವಿದರಿಗೆ ಇವುಗಳೇ ಅವರ ಸೃಜನಕ್ರಿಯೆಗೆ ಪ್ರೇರಣೆಗಳು. ಕಷ್ಟಪಟ್ಟು ದುಡಿಯುವ ಅಸ್ಸಾಮೀಯರ ಮುಖ್ಯವಾದ ಜಾತ್ಯತೀತವಾದ ಹಬ್ಬವೆಂದರೆ ಬಿಹು. ಬಿಹು ಗೀತೆ, ಬಿಹು ಕುಣಿತ-

ಗ್ರಾಮೀಣ ಜನರ ಹಾಡು, ಕುಣಿತಗಳಾಗಿವೆ. ಬಿಹೂ ಗೀತೆಗಳ ಪ್ರಭಾವ ಅಸ್ಸಾಮಿ ಕವಿಗಳ ಮೇಲೂ ಆಗಿದೆ. ಹಿರೇನ್ ಭಟ್ಟಾಚಾರ್ಯರು ಬಿಹೂ ಗೀತೆಗಳ ಪ್ರಭಾವ ತಮ್ಮ ಮೇಲೆ ಆಗಿದ್ದರೂ ಅವುಗಳ ನೆರಳಿನಲ್ಲಿ ನನ್ನ ಕಾವ್ಯವಿಲ್ಲ ಎನ್ನುವರು. ಅಷ್ಟೇ ಅಲ್ಲ, "ಬಿಹು ಗೀತೆಗಳ ಲವಲವಿಕೆ, ತೇಜಸ್ಸು, ಹುಮ್ಮಸ್ಸು ಜೀವನೋತ್ಸಾಹ, ಎಲ್ಲ ಅಸ್ಸಾಮಿಗಳ ಉಸಿರಿನೊಂದಿಗೆ ಬೆರೆಸಿರುತ್ತದೆ" ಎಂದು ಅವರು ಅಭಿಪ್ರಾಯಪಡುವರು.

ಪ್ರಕೃತಿಯ ಚೆಲುವಿನ ಪರಿಸರದಲ್ಲಿ ವಾಸಿಸುವ ಅಸ್ಸಾಮೀಯರಿಗೆ ಬ್ರಹ್ಮಪುತ್ರಾ ನದಿ ಆ ರಾಜ್ಯದ ಉದ್ದಕ್ಕೂ ಸಾಗಿಹೋಗಿ ಸಾವಿರಾರು ಜೀವಗಳಿಗೆ ಅನ್ನ ನೀಡುತ್ತದೆ. ಹಾಗೆಯೇ ಮಳೆಗಾಲದಲ್ಲಿ ಮನಬಂದಂತೆ ನುಗ್ಗಿ ದಡಗಳನ್ನು ಕೊರೆದು ದಂಡೆಯಲ್ಲಿರುವ ಮರ, ಗಿಡ, ಹೊಲ, ಗದ್ದೆಗಳನ್ನು, ಮನೆ-ಮಾರುಗಳತ್ತ ನುಗ್ಗುತ್ತಾ ಭಯಂಕರವಾಗಿ ಸಾಗುತ್ತದೆ. "ಇದರ ಏರಿಳಿತಗಳೊಂದಿಗೆ ಅಸ್ಸಾಮೀಯರ ಬದುಕಿನ ಏರಿಳಿತಗಳೂ ಇವೆ" ಎಂದು ಲೇಖಕರು ಹೇಳುವರು. ಪ್ರವಾಹದ ಹಾನಿಯ ವಿವರಗಳನ್ನು ಓದಿದಾಗ ಮೇಲಿನ ಮಾತು ಅರ್ಥಪೂರ್ಣವಾಗುತ್ತದೆ.

ಈ ಪ್ರವಾಸ ಸಾಹಿತ್ಯ ಓದುವಾಗ ಖುಷಿಯಾಗುತ್ತದೆ. ಏಕೆಂದರೆ, ಲೇಖಕರು ತಾವು ಭೇಟಿಕೊಟ್ಟ ಅಸ್ಸಾಂನ ಬದುಕಿನ ಎಲ್ಲ ಮಗ್ಗುಲುಗಳನ್ನೂ, ಸಾಧ್ಯವಿದ್ದಷ್ಟು ಮಟ್ಟಿಗೆ, ವಿವರಗಳ ಮೂಲಕ ಪರಿಚಯಿಸುವರು. ಅವರು ಎನ್.ಟಿ.ಆರ್. ಬಗೆಗೆ ಆಗಲಿ ಒರಿಸ್ಸಾದ ಮುಖ್ಯಮಂತ್ರಿ. ಜೆ.ಬಿ. ಪಟ್ನಾಯಕರ ಬಗ್ಗೆಯಾಗಲೀ ಮಾಡುವ ಟೀಕೆ ಮುಚ್ಚುಮರೆಯಿಲ್ಲದ್ದು. 'ಅರ್ಧ ಕೋಟಿ ಜನಸಂಖ್ಯೆಯ ಕಟಕ್ ಕೊಳಕು ನಗರ'; 'ಜನಸಾಗರ ಗಲೀಜು ಇತ್ಯಾದಿ ನೆನೆದು ಎಂದೆಂದಿಗೂ ಪುರಿಯನ್ನು ನೋಡಬಾರದು'; 'ಬಂಗಾಳಿಗಳು ಹುಟ್ಟಾ ಸೋಮಾರಿಗಳು' ಲೇಖಕರ ಇಂತಹ ಟೀಕೆಗಳು ಅವರ ವೈಯಕ್ತಿಕವಾದ ವಿಚಾರಗಳಾಗುತ್ತವೆ. ಪೋಲೀಸ್ ಇಲಾಖೆಯ ಅಡಿಷನಲ್ ಎಸ್ಪಿ ಡಾ॥ ಅಹ್ಮದ್‌ರವರ ಆತಿಥ್ಯದಲ್ಲಿ ಸಿಹಿ, ಚಹಾಗಳ ನಂತರ 'ಶೊರಾಯ್'ನಲ್ಲಿ ಎಲೆ ಅಡಿಕೆ ಬಂದಾಗ ಲೇಖಕರಿಗೆ ತಮ್ಮ ಮಿತ್ರ ಕಡಿದಾಳು ಶಾಮಣ್ಣನ ನೆನಪಾಗುತ್ತದೆ. "ನಮ್ಮ ಕಡಿದಾಳು ಶಾಮಣ್ಣ ಇದ್ದಿದ್ದರೆ ಪರಮ ಸಂತೋಷದಿಂದ ಅಡಿಕೆಯನ್ನು ಊದಿ ಬಾಯಿಗೆಸೆದು, ಎಲೆಗೆ ಸುಣ್ಣ ಹಚ್ಚುತ್ತಿದ್ದರು. ಅಡಿಕೆಯನ್ನು ಬೆಳೆಯುವ, ಹದ ಮಾಡುವ ಕ್ರಮ ಇತ್ಯಾದಿ ವಿಚಾರಿಸಿಕೊಳ್ಳುತ್ತಿದ್ದರು" ಎನ್ನುವಲ್ಲಿ ಬರವಣಿಗೆ ಆತ್ಮೀಯವಾಗುತ್ತದೆ.

ಎಚ್.ಎಸ್. ರಾಘವೇಂದ್ರರಾವ್ ಅವರ 'ಜನ-ಗಣ-ಮನ' ಬಂಗಾಳ ಹಾಗೂ ಒರಿಸ್ಸಾ ರಾಜ್ಯಗಳಲ್ಲಿ ಕೈಗೊಂಡ ಪ್ರವಾಸಾನುಭವ ಕಥನ. ಪ್ರದೇಶವೊಂದನ್ನು ಆಯ್ಕೆ ಮಾಡಿಕೊಂಡು ಅದರ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ

ನೆಲೆಗಳ ಅಧ್ಯಯನ ಮಾಡುವ ರೀತಿ ಈ ಕೃತಿಯ ವೈಶಿಷ್ಟ್ಯ. ಪ್ರವಾಸ ಸಾಹಿತ್ಯದಲ್ಲಿ ಈ ರೀತಿಯ ಅಧ್ಯಯನದ ಸಾಧ್ಯತೆಯನ್ನು ತೋರಿಸಿಕೊಟ್ಟವರು ಎಚ್.ಎಸ್. ರಾಘವೇಂದ್ರರಾವ್‌ರವರು. ಬಹುಶಃ ಪ್ರವಾಸ ಕಥನದಲ್ಲಿ ಇದು ಅನುಸರಣೀಯವಾದ ಮಾದರಿ, ಎಚ್.ಎಸ್. ರಾಘವೇಂದ್ರರಾವ್‌ರವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಮರ್ಶಕರಾಗಿ ಪ್ರಸಿದ್ಧರು. ಡಾ|| ಜಿ.ಎಸ್.ಎಸ್.ರವರು ಸರಿಯಾಗಿಯೇ ಗುರುತಿಸಿರುವಂತೆ "ಈ ಬರಹದಲ್ಲಿ 'ವಿಮರ್ಶಕ' ಹಿಂದಾಗಿ, ಅವರೊಳಗಿನ ಸಹೃದಯ-ಮಾನವೀಯ-ರಸಮಯ ವ್ಯಕ್ತಿತ್ವವ ಪ್ರಧಾನವಾಗಿದೆ. ಈ ಕಾರಣದಿಂದಾಗಿ, ಈ ಪ್ರವಾಸ ಕಥನ ತುಂಬ ಲವಲವಿಕೆಯಿಂದ ಆತ್ಮೀಯತೆಯಿಂದ ಓದುಗರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ."

ಈ ಪ್ರವಾಸ ಕಥನ ಗಣ-ಜನ-ಮನ ಎಂಬ ಮೂರು ಶೀರ್ಷಿಕೆಗಳಲ್ಲಿ ಹಂಚಿಹೋಗಿದೆ. ಲೇಖಕರೇ ಹೇಳುವಂತೆ "ಬಂಗಾಳದ 'ಜನ-ಗಣ-ಮನ'ಗಳ ಪಕ್ಷಿನೋಟವನ್ನು ಕೊಡುವ ಉದ್ದೇಶ ನನ್ನದು. ಇದು ಕೇವಲ ಅಲ್ಲಿನ ಪ್ರವಾಸೀ ಆಕರ್ಷಣೆಗಳ ಪರಿಚಯವಾಗಲೀ, ನಾನು ನೋಡಿದ ಕೆಲವು ಬುದ್ಧಿಜೀವಿಗಳ ವಿಚಾರಧಾರೆಯ ನಿರೂಪಣೆಯಾಗಲೀ, ಆಗಬಾರದೆಂದು ನನ್ನ ಬಯಕೆ. ಏಕೆಂದರೆ ಇದು 'ನಾನು' ನೋಡಿದ 'ಕಲ್ಕತ್ತಾ'. ಅದು ನಿಮಗೆ ಕೊಡುವ ಬಣ್ಣಗಳೆಂದರೆ ನನ್ನ ಕಣ್ಣು ಕೊಟ್ಟ ಬಣ್ಣಗಳು."

ಲೇಖಕರು ತಮ್ಮ ಪ್ರವಾಸಕ್ಕೆ ಸಾಕಷ್ಟು ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿರುವರು. ಬಂಗಾಳದ ರಾಜಕೀಯ, ಸಾಮಾಜಿಕ, ಸಾಹಿತ್ತಿಕ, ಸಾಂಸ್ಕೃತಿಕ ಬದುಕಿನ ಮಗ್ಗುಲುಗಳ ಪರಿಚಯ ಮಾಡಿಕೊಂಡಿರುವರು. ತಾವು ಭೇಟಿಯಾಗಬೇಕಾದ ವ್ಯಕ್ತಿಗಳ, ನೋಡಬೇಕಾದ ಸ್ಥಳಗಳ ಬಗೆಗೆ ಸಾಕಷ್ಟು ಮಾಹಿತಿಯನ್ನು ಪೂರ್ವಭಾವಿಯಾಗಿ ಕಲೆಹಾಕಿರುವರು. ಕಲ್ಕತ್ತಾದಲ್ಲಿ ನೋಡಬೇಕಾದ ಸ್ಥಳಗಳನ್ನು ತಮ್ಮದೇ ಆದ ಧಾಟಿಯಲ್ಲಿ ಲೇಖಕರು ಪರಿಚಯಿಸುತ್ತಾ ಹೋಗುವರು. ಜನಜೀವನವನ್ನು, ಅವರ ಬಡತನವನ್ನು, ಕಾರ್ಮಿಕ ಸಮಸ್ಯೆಯನ್ನು, ಬದುಕಿನ ಅನಿವಾರ್ಯ ಭಾಗವಾಗಿರುವ ರಾಜಕೀಯವನ್ನು ಚೆನ್ನಾಗಿ ವಿವರಿಸಿರುವರು. ವಿಶ್ವಭಾರತಿ ಮತ್ತು ಶಾಂತಿನಿಕೇತನಗಳನ್ನು ಸಂದರ್ಶಿಸಿದ ಭಾಗದಲ್ಲಿ ಲೇಖಕರ ಸ್ವತಂತ್ರವಾದ ವಿಚಾರ ವಿಮರ್ಶೆಯನ್ನು ಕಾಣಬಹುದಾಗಿದೆ. ವಿಶ್ವಭಾರತಿ ಮತ್ತು ಶಾಂತಿನಿಕೇತನಗಳು ಒಂದು ಕಾಲಕ್ಕೆ ರಾಷ್ಟ್ರೀಯತೆ ಹಾಗೂ ಆದರ್ಶಗಳ ಸಂಕೇತವಾಗಿದ್ದು ಇಂದು ಅವು ಮ್ಯೂಸಿಯಂ ಪೀಸ್ ಆಗಿರುವ ಕಹಿ ಸತ್ಯವನ್ನು ಲೇಖಕರು ಹೇಳುವರು. "ಜನ್ಮಜಾತವಾದ ಶ್ರೀಮಂತಿಕೆ, ನೊಬೆಲ್ ಪಾರಿತೋಷಕವು ತಂದುಕೊಟ್ಟ ಅಸಹಜ ಕೀರ್ತಿ ಮತ್ತು ತಮ್ಮ ಸಮಗ್ರ ಅಭಿಮಾನಕ್ಕೆ

ಒಡ್ಡಿದ ಪ್ರತಿಮೆಯಾಗಿ ರವೀಂದ್ರರನ್ನು ಸ್ವೀಕರಿಸಿದ ಬಂಗಾಳಿಗಳು ರವೀಂದ್ರ Mythಗೆ ಕಾರಣರಾದವರೆಂದು ನನಗೆ ತೋರುತ್ತದೆ" ಎಂಬ ಅವರ ಮಾತು ಅಪ್ರಿಯವಾದರೂ ಸತ್ಯವಾಗಿದೆ. ಖಜುರಾಹೊ ಮತ್ತು ಕೋನಾರ್ಕದ ಪರಿಚಯದಲ್ಲೂ ಲೇಖಕರ ಸ್ವತಂತ್ರ ಅನಿಸಿಕೆಗಳು ಮೂಡಿ ಬಂದಿದ್ದು, ವಿಚಾರಾರ್ಹವಾಗಿದೆ.

ಲೇಖಕರಿಗೆ ಆಸಕ್ತಿಯ ಸಂಗತಿಗಳು ಶಿಕ್ಷಣ ಮತ್ತು ಸಂಸ್ಕೃತಿಗಳಿಗೆ ಸಂಬಂಧಪಟ್ಟವು. ಹೀಗಾಗಿ ಅವರು ಭೇಟಿಮಾಡಿದ ಶಶಿಕುಮಾರ್ ಘೋಷ್, ಅಶುತೋಷ್ ಮುಖ್ಯೋಪಾಧ್ಯಾಯ, ಧೀರೇಂದ್ರನಾಥಕರ್, ಸುನೀಲ್ ಗಂಗೂಲಿ, ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಗೋಪಿನಾಥ ಮೊಹಂತಿ -ಇವರುಗಳ ಜೊತೆ ನಡೆಸಿದ ಚರ್ಚೆಯಿಂದ ಬಂಗಾಳ ಹಾಗೂ ಒರಿಸ್ಸಾಗಳ ಸಾಹಿತ್ಯಕ ಚಟುವಟಿಕೆಗಳ ಒಂದು ಸ್ಪಷ್ಟ ಚಿತ್ರ ದೊರೆಯುತ್ತದೆ. ಶಾಂತಿನಿಕೇತನದ ಕಲಾವಿದ ಕೆ.ಜಿ. ಸುಬ್ರಮಣ್ಯನ್‌ರವರ ಜೊತೆ ನಡೆಸಿದ ಚರ್ಚೆ ಸ್ವಾರಸ್ಯಕರವಾಗಿ ನಿರೂಪಿತವಾಗಿದೆ. ಗ್ರಂಥದ ಕೊನೆಯ ಭಾಗವಾದ 'ಮನ'ದಲ್ಲಿ ಕಲ್ಕತ್ತಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ಪರಿಚಯಿಸುವ ಉದ್ದೇಶವಿರುವಂತಿದೆ. ಲೇಖಕರು ಅಲ್ಲಿನ ಪ್ರದರ್ಶನ ಕಲೆಗಳಿಗೆ ಹೆಚ್ಚು ಮಹತ್ವ ಕೊಟ್ಟಿರುವರು.

'ಜನ-ಗಣ-ಮನ'ದಲ್ಲಿ ಲೇಖಕರು ತಮ್ಮ ಪ್ರವಾಸದ ಅನುಭವಗಳನ್ನು ಅತ್ಯಂತ ಆಕರ್ಷಕವಾಗಿ, ಕಲಾತ್ಮಕವಾಗಿ ನಿರೂಪಿಸಿರುವುದನ್ನು ಕಾಣವೆವು. ಬೇರೆಯವರ ಗುಣಾವಗುಣಗಳನ್ನು ವಿಮರ್ಶೆಗೆ ಗುರಿ ಮಾಡುವ ಲೇಖಕರು ತಮ್ಮನ್ನೂ ವಿಮರ್ಶೆಗೆ ಒಳಗು ಮಾಡಿಕೊಳ್ಳುವರು. ಲೇಖಕರ ನಿರೂಪಣಾ ಶೈಲಿ ಅತ್ಯಂತ ಉಲ್ಲಾಸಕಾರಿ-ಯಾದುದು. ಒಮ್ಮೊಮ್ಮೆ ಅವರ ಮಾತುಗಳಲ್ಲಿ ಹೊಮ್ಮಿಬರುವ ವ್ಯಂಗ್ಯ ಘಾತಕಕಾರಿಯಲ್ಲದಿದ್ದರೂ ಪರಿಣಾಮಕಾರಿಯಾಗಿರುತ್ತದೆ. ನವಿರಾದ ಬರವಣಿಗೆ ಚೇತೋಹಾರಿಯಾಗಿರುವುದರಿಂದ ಎಲ್ಲೂ ಬೇಸರ ತರಿಸದೆ ಓದಿಸಿಕೊಂಡು ಹೋಗುತ್ತದೆ. 'ಜನ-ಗಣ-ಮನ' ನಿಸ್ಸಂಶಯವಾಗಿ ಪ್ರವಾಸ ಸಾಹಿತ್ಯದಲ್ಲಿ ಅಪರೂಪದ ಕೃತಿ.

ಡಾ।। ಡಿ.ಬಿ. ರಾಮಚಂದ್ರಾಚಾರ್‌ರವರ **'ಮೂರು ವಾರ ಮೂರು ಕಡೆ'** ಕಲ್ಕತ್ತೆ, ಗಯೆ, ವಾರಣಾಸಿ-ಈ ಪಟ್ಟಣಗಳಲ್ಲಿ ನಡೆಸಿದ ಪ್ರವಾಸದ ಅನುಭವ ಕಥನ. 'ವಸ್ತು ನಿಷ್ಠ'ವಾದ ಈ ಪ್ರವಾಸಕಥನ ಲೇಖಕರ ವೈಯಕ್ತಿಕವಾದ ಚಿಂತನೆಗಳಿಂದಾಗಿ, ವಿಭಿನ್ನವಾದ ನೋಟಗಳಿಂದಾಗಿ ತನ್ನದೇ ಆದ ವೈಲಕ್ಷಣ್ಯವನ್ನು ಪಡೆದುಕೊಂಡಿದೆ. ಪ್ರವಾಸಾನುಭವವು ವಿಮರ್ಶಾತ್ಮಕವಾಗಿದ್ದು ವ್ಯಂಗ್ಯ, ವಿಡಂಬನೆ, ತಿಳಿಹಾಸ್ಯ, ತುಲನಾತ್ಮಕ ವಿವೇಚನೆ, ಚಿಕಿತ್ಸಕ ದೃಷ್ಟಿ -ಈ ಅಂಶಗಳಿಂದ ಇತರೆ ಪ್ರವಾಸಕಥನಗಳಿಂದ

ಸ್ವಲ್ಪಮಟ್ಟಿಗೆ ಭಿನ್ನವಾಗಿದೆ. ಮದ್ರಾಸ್ ಬಿಟ್ಟ ಮೇಲೆ ದಾರಿಯುದ್ದಕ್ಕೂ ಕಂಡ ದೃಶ್ಯದ ಚಿತ್ರವತ್ತಾದ ವಿವರಣೆಯನ್ನು ನೋಡಬಹುದು: "...ಕೊಳಚೆ, ಪಾಯಿಖಾನೆಗೆ ಕೂತ ಗಂಡು-ಹೆಣ್ಣುಗಳು, ದಟ್ಟದಾರಿದ್ರ್ಯದ ಮುರುಕು ಗುಡಿಸಲುಗಳು, ಹರಿಯುವ ಬಚ್ಚಲು ನೀರಿನಲ್ಲೇ ಸಂಭ್ರಮದಿಂದ ಆಡುತ್ತಿರುವ ಮಕ್ಕಳು, ಯಾರದೋ ಮೇಲಿನ ಆಕ್ರೋಶದಿಂದ ತೊಡೆಯ ಮೇಲಿನ ಮಗುವಿಗೆ ಬಡಿಯುತ್ತಿರುವ ತಾಯಂದಿರು, ಒಣಗಿದ ನೆಲ, ಬಾಡಿದ ಮುಖ ಹೊತ್ತ ಕಡ್ಡಿ ಕೈ-ಕಾಲುಗಳ ಮಾನುಷರೂಪಗಳು. ಎನ್.ಟಿ. ರಾಮರಾವ್ ಆಗಲಿ, ರಾಮಕೃಷ್ಣ ಹೆಗಡೆ ಆಗಲಿ, ಯಾರು ಬಂದರೂ ಈ ಬಡತನವನ್ನು ನಿರ್ಮೂಲನ ಮಾಡಿ, ಇವರ ಬದುಕನ್ನು ಸುಂದರಗೊಳಿಸಲು ಸಾಧ್ಯವೇ? ಎಂಬ ಪ್ರಶ್ನೆ ಕಾಡಲು ಪ್ರಾರಂಭವಾಗಿ ಪ್ರವಾಸದಿಂದ ಉಂಟಾಗಬಹುದಾಗಿದ್ದ ಆನಂದಕ್ಕೆ ಮುಳ್ಳಾಯಿತು" (ಪು. ೧೭-೧೮). ದಕ್ಷಿಣೇಶ್ವರದ ಕಾಳಿದೇವಾಲಯದ ಅಶುಚಿತ್ವವನ್ನು ಕಂಡ ಲೇಖಕರು "ಹಜಾರವನ್ನು ಪ್ರವೇಶಿಸಿದ ಭಕ್ತ ಎತ್ತಿ ನೋಡಿದರೆ ಸಾಕು ಮಾರುದ್ದ ಮಾರುದ್ದ ಇಲ್ಲದ, ಜಟೆಗಳಂತೆ ಆಲದ ಬಿಳಿಲಿನಂತೆ ನೇತಾಡುವುದನ್ನು ಕಂಡಾಗ; ಪಕ್ಕದ ಗೋಡೆಗೆ ಮೈ ತಗುಲಿಸಿ ಧರಿಸಿದ್ದ ಬಟ್ಟೆ ಕಪ್ಪಾಗಿ, ಬಟ್ಟೆಗೆ ಬೆಸ್ತರ ಬಲೆಯಂತೆ ಜೇಡನ ಬಲೆ ಅಂಟಿಕೊಳ್ಳುವಾಗ, ನೀವು ಇರುವುದು ದೇವಾಲಯವೋ ಅಥವಾ ಸಿಮೆಂಟು ಕಾರ್ಖಾನೆಯೋ ಎಂಬ ಅನುಮಾನ ಇಣುಕಿದರೆ ಆಶ್ಚರ್ಯವಿಲ್ಲ. ಗರ್ಭಗುಡಿಯಲ್ಲಿ ಅಲಂಕರಿಸಿರುವ ಕಾಳಿಯನ್ನು ಕಂಡಾಗ ಭಕ್ತಿಯಾಗಲಿ, ಭಯವಾಗಲಿ, ಸಂತೋಷವಾಗಲೀ ನನಗಂತೂ ಉಂಟಾಗಲಿಲ್ಲ" (ಪು. ೨೮) ಎಂದಿರುವರು. ವೈಭವಪೂರ್ಣವೂ ಸುಖೋಪೇತವೂ ಆದ ವಿವೇಕಾನಂದರ ವಾಸದ ಕೊಠಡಿಯನ್ನು ನೋಡಿದ ಲೇಖಕರಿಗೆ ವಿವೇಕಾನಂದರು ಸನ್ಯಾಸಿಯಾಗಿದ್ದರೋ ಅಥವಾ ರಾಜಕುಮಾರರಾಗಿ ಬದುಕಿದರೊ ಎಂಬ ಭ್ರಮೆಯುಂಟಾಗುತ್ತವೆ. (ಪು. ೩೦). ಆಶ್ರಮದ ಆವರಣದಲ್ಲಿ ಓಡಾಡುತ್ತಿರುವ ದಷ್ಟಪುಷ್ಟ ಸನ್ಯಾಸಿಗಳನ್ನು ಕಂಡ ಲೇಖಕರಿಗೆ "ಈ ಜನ ಆತ್ಮಸಾಧನೆಯ ನೆಪದಲ್ಲಿ ಅಂಗಸಾಧನೆಯನ್ನು ಚೆನ್ನಾಗಿ ನಡೆಸಿರುವ, ಸನಾತನ ಧರ್ಮವನ್ನು ಪೋಷಿಸುವುದರ ನೆಪದಲ್ಲಿ ದೇಹಪೋಷಣೆಯ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಿರುವ ವಿಚಾರ" ವೇದ್ಯವಾಗುತ್ತದೆ (ಪು. ೩೧).

ಕಾಳಿದೇವಿಯ ಮಂದಿರದಲ್ಲಿ ಕಾಣಬಂದ ದುರಾಸೆಯ ಸುಸಂಸ್ಕೃತನಲ್ಲದ ಪಂಡನ ವ್ಯಕ್ತಿಚಿತ್ರ ಕಣ್ಣಿಗೆ ಕಟ್ಟುವಂತಿದೆ: "ಪಂಡ ದಪ್ಪ ಮೀಸೆಯ ದಪ್ಪ ತೋಳಿನ ಸಾಧಾರಣ ಎತ್ತರದ ವ್ಯಕ್ತಿ. ಅವನು ಧರಿಸಿದ್ದ ಒಳಅಂಗಿ, ಧರಿಸಿದ್ದ ಪೈಜಾಮ, ಕುತ್ತಿಗೆ ಹತ್ತಿರ ಕಾಣುತ್ತಿದ್ದ ಜನಿವಾರ, ಹೆಗಲ ಮೇಲಿನ ಚೌಕಗಳು, ಮಸಿ ಹಿಡಿದ ಗೋಡೆಯಂತೆ ಆಗಿದ್ದವು. ಅವನು ಸ್ನಾನ ಮಾಡಿ, ಒಗೆದ ಬಟ್ಟೆ ಧರಿಸಿ ಎಷ್ಟು ದಿನ ಆಗಿತ್ತೋ! ದೇವಿಯ ಮುಂದೆಯೇ ಅವನು ಆಡಿದ್ದ ಅವಾಚ್ಯ ಶಬ್ದಗಳು, ಬಾಯಲ್ಲಿ ಅಗಿಯುತ್ತಿದ್ದ

ತಾಂಬೂಲ, ಒಳ ಅಂಗಿಯ ಕಿರಿಯ ಜೇಬಿನಲ್ಲಿ ಇಣುಕುತ್ತಿದ್ದ ಕಟ್ಟುಗಳನ್ನು ಕಂಡಾಗ, ಪಾವಿತ್ರ್ಯ ಎನ್ನುವುದು ಮರೆಯಾಗಿ ಅಪವಿತ್ರವಾದ ಸ್ಥಳಕ್ಕೆ ಪ್ರವೇಶ ಮಾಡಿದಂತೆ ಮನಸ್ಸು ಮುಜುಗರಕ್ಕೆ ಒಳಗಾಯಿತು" (ಪು.೩೫).

ಈ ಪ್ರವಾಸ ಕಥನದಲ್ಲಿ ರವೀಂದ್ರರ 'ಶಾಂತಿನಿಕೇತ'ನಕ್ಕೆ ಕೊಟ್ಟ ಭೇಟಿಯ ವಿವರ ವಿಸ್ತೃತವಾಗಿ ಬಂದಿದೆ. ಡಾ|| ಸೀತಾಂಶುರಾಯ್ ದಂಪತಿಗಳು, ಪಾರಿತೋಷ ಬಂದ್ಯೋಪಾಧ್ಯಾಯ ದಂಪತಿಗಳ ಜೊತೆಗಿನ ಭೇಟಿಯ ವಿವರ ಚೆನ್ನಾಗಿ ಬಂದಿದೆ. ತಮ್ಮನ್ನು ಭೇಟಿ ಮಾಡಲು ದೂರದಿಂದ ಬಂದ ಲೇಖಕರಿಗೆ ಕಥಕ್ಕಳಿ ಅಧ್ಯಾಪಕ ಗೋಪಾಲ್, ನಾಟಕದ ಇತಿಹಾಸ ಬೋಧಿಸುವ ಶಿವಶಂಕರ್, ನಾಟಕ ಹಾಗೂ ಅದರ ತಂತ್ರದ ಬಗೆಗೆ ಹೆಚ್ಚಿನ ತಿಳುವಳಿಕೆಯಿರುವ ಸುಬ್ರಹ್ಮಣ್ಯಂ -ಇವರು ತೋರಿಸಿದ ಪ್ರತಿಕ್ರಿಯೆ ನಿರಾಶಾದಾಯಕವಾದುದು, ಸೌಜನ್ಯರಹಿತವಾದುದು. ರವೀಂದ್ರರ ಗೀತರೂಪಕಗಳನ್ನು ಕನ್ನಡ ಕವಿಗಳ ಗೀತರೂಪಕಗಳೊಂದಿಗೆ ತುಲನೆ ಮಾಡಿರುವುದು ಮೆಚ್ಚುವ ಅಂಶ. ಬುದ್ಧಗಯೆ, ವಾರಣಾಸಿ, ಸಾರಾನಾಥ್, ಸಂಗಮಗಳಲ್ಲಿನ ಅನುಭವಗಳ ಚಿತ್ರ ಚುಟುಕಾಗಿದೆ. ಸಂಗಮದಲ್ಲಿ ಆಸೆಬುರುಕ ಪಂಡರ ಕಾಟಕ್ಕೆ ಗುರಿಯಾದ ಲೇಖಕರ ಅನುಭವ ಸ್ವಾರಸ್ಯಕರವಾಗಿದೆ.

ಎಚ್.ಜಿ. ಜೋಶಿ ಹಾಗೂ ಎಸ್.ವಿ. ಕೃಷ್ಣಮೂರ್ತಿರಾಯರು ಪತ್ರ ಸಾಹಿತ್ಯಕ್ಕೆ ಒಳ್ಳೆಯ ಕಾಣಿಕೆಗಳನ್ನು ಕೊಟ್ಟಿರುವರು. ಲೋಕಸಭಾ ಸದಸ್ಯರಾಗಿ ಎಸ್.ವಿ. ಕೃಷ್ಣಮೂರ್ತಿರಾಯರು ದಿಲ್ಲಿಯಲ್ಲಿ ತಂಗಿದ್ದಾಗ ತಮ್ಮ ಮಗಳಿಗೆ ಆಗಿಂದಾಗ್ಗೆ ಬರೆದ ಪತ್ರಗಳ ಸಂಕಲನವೇ **'ದಿಲ್ಲಿಯ ಪತ್ರಗಳು'**. ಇದರಲ್ಲಿ ದಿಲ್ಲಿಯ ಸುತ್ತುಮುತ್ತಲಿನ ಪ್ರೇಕ್ಷಣೀಯ ಸ್ಥಳಗಳ ಬಗೆಗೆ ವಿವರಣೆ ಇದೆ. ಎಚ್.ಜಿ. ಜೋಶಿಯವರ **'ಶಿಲಾಹೃದಯ'** ಅಜಂತಾ ಎಲ್ಲೋರಗಳ ಕಲಾ ವೈಭವವನ್ನು ಮನ ಮುಟ್ಟುವಂತೆ ಪರಿಚಯಿಸುವ ಕೃತಿಯಾಗಿದೆ.

ಶಾ.ಮಂ. ಕೃಷ್ಣರಾಯರ **'ದೇವಭೂಮಿ ಗೋಮಾಂತಕ'**ವು ಗೋವಾದ ಪೂರ್ವೇತಿಹಾಸ ಹಾಗೂ ಹಿಂದೂ ದೇವಾಲಯಗಳ ಸಮಗ್ರ ವಿವರಗಳನ್ನು ನೀಡುವ ಕೃತಿ. ಪರಿಚಯದ ನೆಲೆಯಲ್ಲಿ ಈ ಕೃತಿ ಇದ್ದರೂ, ವಿವರಗಳನ್ನು ನೀಡುವಾಗ ಆದಷ್ಟು ಸಾಕ್ಷ್ಯಾಧಾರಗಳನ್ನು ಕೊಟ್ಟಿರುವುದರಿಂದ ಅಭ್ಯಾಸಪೂರ್ಣವಾದ, ಕೇವಲ ವರದಿ ಮಾತ್ರವಾಗಿರುವ ಕೃತಿಯಾಗಿದೆ.

ಜಿ. ವೆಂಕಟಯ್ಯನವರ **'ಬನದ ಸೆರಗು'** ಚಾಮರಾಜನಗರದ ಮುಖಾಂತರ ಬನದ ಸೆರಗಿನಲ್ಲಿಯೇ ಈರೋಡಿನ ಕಡೆ ಕಾರಿನಲ್ಲಿ ಮಿತ್ರರೊಡನೆ ಪ್ರವಾಸ ಕೈಗೊಂಡಾಗಿನ ರೋಮಾಂಚಕ ಅನುಭವಗಳ ಕಥನವಾಗಿದೆ. ಪ್ರವಾಸ ಕಥನವ

ನಿರೂಪಣೆಯಲ್ಲಿ ಕಾದಂಬರಿಯ ಸಂಭಾಷಣಾ ತಂತ್ರವನ್ನು ಬಳಸಿಕೊಳ್ಳಲಾಗಿದೆ. ಇದು ಓದುಗನ ಮನದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಮೇಲಾಗಿ, ಇಲ್ಲಿ ಬರುವ ಅನುಭವಗಳು ಅರಣ್ಯಯಾತ್ರೆಯ ಅಪರೂಪದ ಅನುಭವಗಳಾಗಿರುವುದರಿಂದ ನಮ್ಮ ಕುತೂಹಲ ಸಹಜವಾಗಿ ಕೆರಳುತ್ತದೆ. ಸೊಗಸಾದ ಸಂಭಾಷಣೆ, ರೋಮಾಂಚಕ ಅನುಭವ, ಅರಣ್ಯ ಹಾಗೂ ನಿಸರ್ಗಗಳ ನವಿರೇಳಿಸುವ ವರ್ಣನೆ -ಇವುಗಳಿಂದಾಗಿ ಈ ಕೃತಿ ಬಿಟ್ಟೂಬಿಡದೆ ಓದಿಸಿಕೊಂಡು ಹೋಗುತ್ತದೆ. ಒಂದು ಕಾದಂಬರಿಯಂತೆ ಅನುಭವ ನಿರೂಪಣೆ ಸಾಗುತ್ತದೆ ಹಾಗೂ ಕಾಡಿನ ದಟ್ಟವಾದ ಅನುಭವ ಪ್ರಪಂಚವನ್ನು ನಮಗೆ ತಿಳಿಯಪಡಿಸುತ್ತದೆ. ಇದು ಈ ಕೃತಿಯ ವಿಶಿಷ್ಟ ಗುಣ.

ಪಾಟೀಲ ಪುಟ್ಟಪ್ಪನವರ **'ನಮ್ಮದು ಈ ಭರತಭೂಮಿ'** ಭಾರತದ ರಾಜ್ಯ ಹಾಗೂ ಪ್ರದೇಶಗಳ ಬಗೆಗೆ ವಿಹಂಗಮ ದರ್ಶನ ಮಾಡಿಸುವ ಕೃತಿ. ಲೇಖಕರು ಸಂಸತ್ ಸದಸ್ಯರಾಗಿದ್ದಾಗ ಭಾರತದ ಬಹಳಷ್ಟು ಭಾಗಗಳನ್ನು ನೋಡಿ ಬಂದು, ಆ ಭಾರತ ಯಾತ್ರೆಯ ಅನುಭವವನ್ನು ಲೇಖನಗಳ ಮೂಲಕ ಪ್ರಕಟಿಸಿದರು. ತಾವು ಸಂದರ್ಶಿಸಿದ ರಾಜ್ಯಗಳ ಬಗೆಗೆ, ಅಲ್ಲಿನ ಜನತೆಯ ಬಗೆಗೆ, ರಾಜಕೀಯದ ಬಗೆಗೆ ತಮ್ಮದೇ ಆದ ಧಾಟಿಯಲ್ಲಿ ಪರಿಚಯಾತ್ಮಕ ವಿವರಣೆಯನ್ನು ಲೇಖಕರು ಇಲ್ಲಿ ನೀಡಿರುವರು. "ಭಾರತ ಉದ್ದಗಲದಲ್ಲಿ ಒಂದು ಭಾಷೆ ಇಲ್ಲ, ಒಂದು ವೇಷವಿಲ್ಲ. ಊಟ-ಉಪಚಾರ ಬೇರೆ, ಜೀವನದ ರೀತಿ ಬೇರೆ. ಆದರೂ ತಾವು ಒಂದೇ ದೇಶಕ್ಕೆ, ಬುಡಕಟ್ಟಿಗೆ ಸೇರಿದವರೆನ್ನುವ ಬಲವಾದ ಭಾವನೆ ಈ ದೇಶದ ಜನರನ್ನು ಹಿಡಿದುಕೊಂಡಿದೆ. ಜನರನ್ನು ಅಗಲಿಸುವ ವ್ಯತ್ಯಾಸಗಳಿದ್ದರೂ, ಒಂದುಗೂಡಿಸುವ ಅಂಶಗಳು ಅಧಿಕವಾಗಿವೆ. ಮರದ ಟೊಂಗೆಗಳು ಅನೇಕವಾಗಿದ್ದರೂ ಅವೆಲ್ಲವೂ ಒಂದೇ ವೃಕ್ಷಮೂಲದಿಂದ ಪರಿಪೋಷಣೆಯನ್ನು ಪಡೆಯುತ್ತವೆ. ನೋಡಲಿಲ್ಲದ ನೆಲ ತಮ್ಮದು, ಕಾಣಲಿಲ್ಲದ ಜನ ತಮ್ಮವರು ಎನ್ನುವ ಅವ್ಯಕ್ತ ಬಾಂಧವ್ಯ ಜನರಲ್ಲಿ ತುಂಬಿಕೊಂಡಿರುವುದನ್ನು ದೇಶದ ಉದ್ದಕ್ಕೂ ಕಾಣಬಹುದು" ಎನ್ನುವಲ್ಲಿ ಲೇಖಕರ ವಿಶಾಲವಾದ ಮನೋಭಾವನೆಯನ್ನು ಗುರುತಿಸಬಹುದು.

ಶ್ರೀ ಮ.ನಿ.ಪ್ರ. ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು ಎಂಟುಮಂದಿ ಶ್ರೀಗಳು ಹಾಗೂ ಭಕ್ತರು ಜೊತೆಗೂಡಿ ನಡೆಸಿದ ದಕ್ಷಿಣ ಮತ್ತು ಉತ್ತರಭಾರತಗಳ **ಪ್ರವಾಸಕಥನ ಭಾರತ ಯಾತ್ರೆ**. ಇದು ಮಾರ್ಗದರ್ಶಿ ರೂಪದ ಪ್ರವಾಸ ಕಥನವಾಗಿರುವುದರಿಂದ ಪ್ರವಾಸಿಗರಿಗೆ ಮಾಹಿತಿ ನೀಡುವ ಒಳ್ಳೆಯ ಕೃತಿ.

ಶ್ರೀಮತಿ **ಪ್ರೇಮಾಭಟ್**‌ರವರ **'ಪೂರ್ವಾಂಚಲದಲ್ಲಿ ಕೆಲವು ದಿನಗಳು'** ತಮ್ಮ ಮಗ ಸೇನಾಪಡೆಯಲ್ಲಿ ಸಿವಿಲ್ ಡಿಪಾರ್ಟ್‌ಮೆಂಟಿನ ಬಾರ್ಡರ್ ರೋಡ್

ಆರ್ಗನೈಜೇಷನ್‌ಗೆ ಪ್ರತಿನಿಯೋಜನೆಯ ಮೇಲೆ ಡೆಂಟಲ್ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದುದರಿಂದ ಅಸ್ಸಾಂನ ಡೂಮ್ ಡುಮಾಗೆ ಪ್ರವಾಸ ಹೋಗಿದ್ದರು. ಡೂಮ್‌ಡುಮಾಗೆ ಹೋಗಲು ಕಲ್ಕತ್ತಾದಿಂದ ದಿಬ್ರುಗರ್‌ಗೆ ವಿಮಾನ ಸೌಲಭ್ಯವಿದೆ. ದಿಬ್ರುಗರ್‌ನಿಂದ ಡೂಮ್‌ಡುಮಾಗೆ ೬೦ ಕಿ.ಮೀ. ಅಂತರ. ಅಸ್ಸಾಂರಾಜ್ಯಕ್ಕೆ ಸೇರಿದ ಡೂಮ್‌ಡುಮಾ ಒಂದು ಚಿಕ್ಕ ಊರು. ಅಲ್ಲಿ ನೋಡುವಂತಹ ಆಕರ್ಷಣೀಯ ಸ್ಥಳಗಳಾಗಲಿ ಪ್ರೇಕ್ಷಣೀಯ ಸ್ಥಳಗಳಾಗಲಿ ಇಲ್ಲ. ಅಲ್ಲಿ ಪ್ರಧಾನ ಆಕರ್ಷಣೆಯೆಂದರೆ, ಸಮತಟ್ಟಾದ ಭೂಪ್ರದೇಶ. ಅದನ್ನು 'ಭೂದೇವಿಯನ್ನು ಹಸಿರು ಉಣ್ಣೆಯಿಂದ ಸಿಂಗರಿಸಿದಂತೆ ಕಾಣುತ್ತದೆ' ಎಂದು ವರ್ಣಿಸಿರುವರು (ಪು. ೨೨). ಅಸ್ಸಾಂನಲ್ಲಿ ಬಡತನ ಹಾಸುಹೊಕ್ಕಾಗಿದೆ. ಅಲ್ಲಿನ ಹೆಚ್ಚಿನ ಜನರು ಆರ್ಥಿಕವಾಗಿ ದುರ್ಬಲರು. ಅಲ್ಲಿನ ಟೀ ತೋಟಗಳ ಮಾಲೀಕರು ವಿದೇಶೀಯರು. ಆದಿವಾಸಿ ಅಸ್ಸಾಮೀಯರಿಂದ ಕಡಿಮೆ ಕೂಲಿಗೆ ಹೆಚ್ಚು ದುಡಿಸಿಕೊಳ್ಳುವರು. ಅಸ್ಸಾಂನಲ್ಲಿ ಮೂಲನಿವಾಸಿ ಅಸ್ಸಾಮಿಗಳಿಗಿಂತ ವಲಸೆ ಬಂದವರೆ ಹೆಚ್ಚು. ಅವರಲ್ಲಿ ಹೆಚ್ಚಿನವರು ಬಿಹಾರಿಗಳು, ಪಂಜಾಬಿಗಳು, ಬೆಂಗಾಲಿಗಳು, ಮಾರ್ವಾಡಿಗಳು. ಅಲ್ಪಸಂಖ್ಯಾತರಾದ ಅಸ್ಸಾಮಿಗಳು ಟೀ ತೋಟದಲ್ಲಿ ಕೂಲಿಗಳಾಗಿ ದುಡಿಯುತ್ತಿರುವುದೇ ಹೆಚ್ಚು. ಲೇಖಕಿ ಗಮನಿಸಿರುವಂತೆ 'ಹೆಚ್ಚು ಬುದ್ಧಿವಂತರಲ್ಲದ, ಮುಗ್ಧರಾದ ಈ ಜನ ಕಾಮಗಾರಿ ಕೆಲಸದಲ್ಲೂ ತೊಡಗಿರುವುದು ಕಂಡುಬರುತ್ತದೆ... ಅಲ್ಲಿ ಭಯೋತ್ಪಾದಕ ಉಲ್ಫಾಗಳ ಭೀತಿ ಬಿಟ್ಟರೆ, ಕಳ್ಳಕಾಕರ ಭಯವಿಲ್ಲ.' (ಪು. ೨೩)

ಉದಯಕ್ ಹೆಡ್‌ಕ್ವಾರ್ಟರ್ಸ್‌ನ ಶಿಸ್ತುಬದ್ಧ ಸೈನಿಕ ಜೀವನ; ಪಾರ್ಟಿಗಳಲ್ಲಿ ಹೆಣ್ಣು-ಗಂಡುಗಳು ಮುಕ್ತವಾಗಿ ಬೆರೆಯುವಿಕೆ, ನರ್ತನ ಕುಡಿತ; ತೀನ್ ಸುಕಿಯಾಕ್ಕಿ ಹೋಗಲು ಮಿನಿ ಬಸ್ಸಿನ ಪಯಣ; ಕುರಿಗಳನ್ನು ತುಂಬುವಂತೆ ಜನರನ್ನು ತುಂಬುವ ಡಬ್ಬದ ಮಾದರಿಯ ಲೊಡಕಾಸಿ ಬಸ್ಸುಗಳು ಹಾಗೂ ಅವುಗಳ ಛಿದ್ರ ಛಿದ್ರಗೊಂಡ ಸೀಟುಗಳು; ಬಸ್ಸಿನ ಒಡೆದುಹೋಗಿರುವ ಕಿಟಕಿ ಬಾಗಿಲುಗಳ ದಡಡಬ ಸದ್ದು ದಾರಿಯುದ್ದಕ್ಕೂ ಜನರನ್ನು ಹತ್ತಿಸಿಕೊಂಡು ಹೋಗುವ ಮಿನಿ ಬಸ್ಸುಗಳು ಒಳಗಿದ್ದಷ್ಟು ಹೊತ್ತು ಉಸಿರುಗಟ್ಟಿಸುವ ವಾತಾವರಣ. ಆ ವಸ್ತುಸ್ಥಿತಿಯನ್ನು ನಮ್ಮ ಕರ್ನಾಟಕದ ಪರಿಸರದ ಜೊತೆಗೆ ತುಲನೆ ಮಾಡುವರು. "ನಾವು ಎಷ್ಟೆಲ್ಲ ಸೌಕರ್ಯವಿದ್ದು ನಮ್ಮ ಕೆಎಸ್‌ಆರ್‌ಟಿಸಿಯನ್ನು ದೂರುತ್ತೇವೆ. ಹೊರಗಿನ ರಾಜ್ಯಗಳಿಗೆ ಭೇಟಿ ನೀಡಿದಾಗಲೇ ನಮ್ಮಲ್ಲಿರುವ ಮಹತ್ವ ಏನು ಎನ್ನುವುದು ನಮಗೆ ಅರಿವಾಗುವುದು. (ಪು.೩೦) ತೀನ್‌ಸುಖಿಯಾದ ರಿಕ್ಷಾ ಹಾವಳಿಯ ವಿವರ ಆ ಪರಿಸರದ ಚಿತ್ರವನ್ನು ನಮ್ಮ ಕಣ್ಮುಂದೆ ನಿಲ್ಲಿಸುತ್ತದೆ.

ತೀನ್‌ಸುಖಿಯಾಗೆ ಹೋಗುವ ಮಾರ್ಗ ಮಧ್ಯದಲ್ಲಿ ಸಿಗುವ ಶಿವಧಾಮ ಪ್ರಶಾಂತ ಸ್ಥಳದಲ್ಲಿದೆ. ದಕ್ಷಿಣದವರಿಗೆ ಶಿಲ್ಪಕಲಾವೈಭವವಿಲ್ಲದ ಶಿವಧಾಮ ಸಪ್ಪೆಯಾಗಿ ಕಾಣಬರುತ್ತದೆ." ಆದರೆ 'ಬಿರ್ಲಾ ಮಂದಿರದಂತೆ ಸೊಗಸಾಗಿದೆ' ಎಂದು ಲೇಖಕಿ ಹೇಳುವರು. ಅಸ್ಸಾಂನ ಮೇಘಾ ಸೀರೆಯ ಜರಿತಾರಿ ಅಂಚು ಸೆರಗಿಲ್ಲದ ಬರಿ ಕಸೂತಿಯಿಂದ ಕೂಡಿದ್ದು ಅದಕ್ಕಾಗಿಯೇ ದುಬಾರಿ ಬೆಲೆ ತೆರಬೇಕು. ೪೦-೫೦ ವರ್ಷ ಉಟ್ಟರೂ ಹಳೆಯದಾಗುವುದಿಲ್ಲವಂತೆ.

ಅಸ್ಸಾಂ ವಿಭಜನೆಹೊಂದುವ ಪೂರ್ವದಲ್ಲಿ ಕೇಂದ್ರ ಸರಕಾರದ ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದ ದೊಡ್ಡ ರಾಜ್ಯವಾಗಿದ್ದಿತು. ಅಲ್ಲಿನ ಜನತೆ ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟ ನಡೆಸಲು ನಾಗಾಲ್ಯಾಂಡ್, ಮಣಿಪುರ, ಅರುಣಾಚಲಪ್ರದೇಶ, ಮೇಘಾಲಯ, ತ್ರಿಪುರ, ಮಿಜೋರಾಂ ಮತ್ತು ಸಿಕ್ಕಿಂ ರಾಜ್ಯಗಳು ಅಸ್ಸಾಂನಿಂದ ವಿಭಜನೆಗೊಂಡು ಪ್ರತ್ಯೇಕ ರಾಜ್ಯಗಳಾಗಿ ವಿಂಗಡಣೆಗೊಂಡವು. ಅಸ್ಸಾ ಹಾಗೂ ಇನ್ನುಳಿದ ಕೆಲವು ರಾಜ್ಯಗಳಲ್ಲಿ ಉಗ್ರಗಾಮಿಗಳಿಂದಾಗುತ್ತಿರುವ ನರಹತ್ಯೆಯನ್ನು ಗಮನಿಸಿದಾಗ ಎಂಥವರ ಗುಂಡಿಗೆಯೂ ಹೊಡೆದುಕೊಳ್ಳುತ್ತದೆ. ಉಗ್ರಗಾಮಿ ಹಾಗೂ ಉಲ್ಫಾಗಳಲ್ಲಿ ನರಮೇಧಗಳಿಂದ ಈ ರಾಜ್ಯಗಳು ತತ್ತರಿಸಿವೆ. ಇದರ ಜೊತೆಗೆ ಬ್ರಹ್ಮಪುತ್ರಾ ಹಾಗೂ ಅದರ ಉಪನದಿಗಳ ಅಟ್ಟಹಾಸ ಬೇರೆ. ಮಳೆಗಾಲದಲ್ಲಿ ಇವುಗಳ ಅಟ್ಟಹಾಸ ರೌದ್ರತರವಾದುದು. ಲೇಖಕಿ ಹೇಳುವಂತೆ ಇಷ್ಟೆಲ್ಲದರ ನಡುವೆ ಖುಷಿಯ ಸಂಗತಿಯೆಂದರೆ ಇಲ್ಲಿನ ಜನರಿಗೆ ಪ್ರಕೃತಿಯಿಂದ ಎಲ್ಲಾ ರೀತಿಯ ಸೌಲಭ್ಯ ದೊರೆತಿದೆ. ನಿತ್ಯ ಹರಿದ್ವರ್ಣ ವನಸಿರಿಯ ಮಧ್ಯೆ, ಮೈದುಂಬಿ ಹರಿವ ನೀರಿನ ತೊರೆಯಿದೆ... ಪ್ರಕೃತಿಯ ವರದಾನದಿಂದ ಇಲ್ಲಿನ ಬಹುಮಂದಿ ರೋಗರುಜಿನಗಳಿಂದ ದೂರವೇ ಉಳಿದಿದ್ದಾರೆ. ತುಂಬು ಆರೋಗ್ಯದಿಂದ ಕಂಗೊಳಿಸುತ್ತಾರೆ. (ಪು. ೩೫)

ಮಗನ ಗಡಿ ಪ್ರದೇಶದ ತಾತ್ಕಾಲಿಕ ಸೇವೆಯ ನೆಪದಲ್ಲಿ ಲೇಖಕಿಗೆ ಅರುಣಾಚಲ ಪ್ರದೇಶದ ಉದ್ದಗಲವನ್ನೂ ನೋಡುವ ಅವಕಾಶ ದೊರೆಯಿತು. ಅಲ್ಲಿನ ಕಲ್ಪನಾತೀತ ಸೃಷ್ಟಿ ಸೌಂದರ್ಯ ಲೇಖಕಿಯನ್ನು ಆಕರ್ಷಿಸಿದೆ. ಕೇದಾರ ಬದರಿಕಾಶ್ರಮಗಳ ಸೌಂದರ್ಯವೇ ಬೇರೆ, ಇಲ್ಲಿಯ ಸೌಂದರ್ಯವೇ ಬೇರೆ. "ಇಲ್ಲಿಗೆಯಾತ್ರಾರ್ಥಿಗಳಾಗಿ ಬರಲು ದೇಗುಲಗಳಿಲ್ಲ. ಇತಿಹಾಸ ಪ್ರಸಿದ್ಧವಾದ ಸ್ಥಳಗಳಿಲ್ಲ. ಆದರೆ ಕಾಶ್ಮೀರ ಕಣಿವೆಯಲ್ಲೂ ಇಲ್ಲಿನಂತಹ ನೈಸರ್ಗಿಕ ಚೆಲುವು ಇದೆ." (ಪು. ೩೮).

ಒಂದೆಡೆ ಜಂತು ಹಾಗೂ ಡಿಮ್ಮೆಯ ಪರ್ವತಶ್ರೇಣಿಗಳ ರಮಣೀಯ ಸೌಂದರ್ಯ, ಇನ್ನೊಂದೆಡೆ ಪಾಗಲ್, ದಿಗಾರ್, ಸಿಯಾಂಗ್ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುವುದರಿಂದ ತೇಜು, ಡಿಮ್ಮೆ, ಹೈಲಿಯಾಂಗ್, ವೆಲ್ಲಾಂಗ್,

ತಿಬ್ಬೆಟ್ಟುಗಳಲ್ಲಿನ ಜನ ಈಚಿನ ದಡಕ್ಕೆ ಬರಲು ಸಾಧ್ಯವಿಲ್ಲದೆ ಮನೆಗೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಪಡೆಯಲಾಗದೆ ಅವರ ಪಾಡು ಯಾರಿಗೂ ಬೇಡ ಎನ್ನುವರು ಲೇಖಕಿ (ಪು. ೪೦).

ಅಪಾಯದ ಅಂಚಿನಲ್ಲೇ ರಸ್ತೆಯಲ್ಲಿ ಪ್ರಯಾಣ ಮಾಡುವುದು, ಆಗಾಗ ಭೂಕುಸಿತದಿಂದಾಗಿ ಜೀವಹಾನಿ, ರಸ್ತೆಬದಿಯ ಗುಡಿಸಲುಗಳ ಮೇಲೆ ಬಂಡೆಗಳುರುಳಿ ತಂದೊಡ್ಡುವ ಅಪಾಯ, ಮಕ್ಕಳು ಮರಿಗಳು ತೋಳಗಳ ಬಾಯಿಗೆ ಆಹಾರವಾಗುವುದು, ಇಷ್ಟೆಲ್ಲ ಅಪಾಯಗಳನ್ನು ಎದುರಿಸುತ್ತ ಕೂಲಿಗಳು ಕಾಮಗಾರಿ ಕೆಲಸ ಮಾಡುವುದು, ಹೀಗೆ ಪ್ರಕೃತಿಯ ಚಿರಸೌಂದರ್ಯದ ಹಿನ್ನೆಲೆಯಲ್ಲಿ ಇರುವ ಭಯಾನಕ ದೃಶ್ಯಾವಳಿಯನ್ನು ಲೇಖಕಿ ಮನಮುಟ್ಟುವಂತೆ ತಿಳಿಸಿರುವರು. ಗಡಿಭಾಗದಲ್ಲಿ ಕೆಲಸ ಮಾಡುವ ಅಧಿಕಾರಿಗಳ ಕುಟುಂಬದವರನ್ನು ಕಾಡುವ ಏಕಾಕಿತನ, ಹೆತ್ತವರು-ಹೊತ್ತವರು, ಬಂಧು-ಬಳಗದವರಿಂದ ದೂರವಿರುವ ಅನುವು ಆಪತ್ತುಗಳಿಗೂ ಸ್ಪಂದಿಸಲಾಗದ ಅಸಹಾಯಕತೆ, ಮಕ್ಕಳ ವಿದ್ಯಾಭ್ಯಾಸದ ಬಗೆಗಿನ ಕಕ್ಕುಲತೆ ಜಿ.ಕೆ. ಸಿಂಗ್‌ರವರ ಪತ್ನಿ ಅನಿತಾರವರ ವ್ಯಥೆಯಲ್ಲಿ ಕಂಡೂ ಕಾಣದಂತೆ ಇಣುಕಿಹಾಕಿದೆ (ಪು. ೪೯-೫೧).

ಗೌಹತಿಯ ಕಾಮಾಕ್ಯ ದೇವಸ್ಥಾನ ಹಾಗೂ ಬ್ರಹ್ಮಕುಂಡದ ವಿವರಣೆ ಚೆನ್ನಾಗಿ ಬಂದಿದೆ.

**ಅಂಡಮಾನ್:**

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ **'ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್'** ಕೃತಿಯಲ್ಲಿ ಮೊದಲನೆಯದು ಅಂಡಮಾನ್ ಪ್ರವಾಸಾನುಭವ; ಎರಡನೆಯದು ಈಜಿಪ್ಟಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ನೈಲ್ ಮಹಾನದಿಯನ್ನು ಕುರಿತ ಅಭ್ಯಾಸಪೂರ್ಣ ಬರೆಹ. ತೇಜಸ್ವಿ ಮೂಲತಃ ಪ್ರವಾಸಪ್ರಿಯರಲ್ಲ. ಆದರೆ ಅವರ ಅದಮ್ಯ ಕುತೂಹಲವು ಅಂಡಮಾನ್ ದ್ವೀಪಸ್ತೋಮದಲ್ಲಿನ ಜನಜೀವನ, ಸಸ್ಯಸಂಪತ್ತು ಹಾಗೂ ಅಲ್ಲಿನ ವಿಶಿಷ್ಟ ಅನುಭವಗಳನ್ನು ದಾಖಲಿಸುವ ರೀತಿ ತೇಜಸ್ವಿಯವರದೇ; ಇನ್ನೊಬ್ಬರಿಗೆ ಅದು ಸಾಧ್ಯವೇ ಇಲ್ಲ ಎನ್ನುವಂತಹ ಬರವಣಿಗೆಯ ಶೈಲಿ. 'ಮೊದಲ ಮಾತು'ವಿನಲ್ಲಿ ಹೇಳಿರುವಂತೆ "...ಕೇವಲ ಅನ್ವೇಷಣೆಯ ದೃಷ್ಟಿಯಿಂದಲೇ ಕೈಗೊಳ್ಳುವ ವಿದ್ವಾಂಸರ ಪ್ರವಾಸವೂ ಎಲ್ಲರಿಗೂ ಪ್ರಿಯವಾಗುವುದಿಲ್ಲ, ಪ್ರಿಯವಾಗಬೇಕಾದುದೂ ಇಲ್ಲ. ಆದರೆ ಇಲ್ಲಿ ಅನ್ವೇಷಣೆಯ ಕುತೂಹಲವಿದೆ, ಪೂರ್ಣವಾಗಿ ದಕ್ಕದುದಕ್ಕೆ ಹಾಸ್ಯದ ಮೊನೆಯಿದೆ; ಒಂದು ಮಿತ ಪ್ರವಾಸದ ಅನುಭವವೂ ಸಾಹಿತ್ಯವಾಗುವುದಕ್ಕೆ ಇದೊಂದು ನಿದರ್ಶನ."

ಈ ಪ್ರವಾಸ ಕಥನದಲ್ಲಿ ಸಮುದ್ರಯಾನದ ಸಾಹಸ, ಕುತೂಹಲ ಹಾಗೂ ತಿಳುವಳಿಕೆಗಳು ವಿಶಿಷ್ಟವಾದ ಅನುಭವ ಪ್ರಪಂಚದ ಕಡೆಗೆ ನಮ್ಮನ್ನು ಆಕರ್ಷಿಸುತ್ತದೆ. ಅವರ ಕಣ್ಣಿಗೆ ಬೀಳುವ ಜಲಸಂಬಂಧೀ ವಿಸ್ಮಯಗಳು-ವೈಚಿತ್ರ್ಯಗಳು ಬೇರೆಯವರ ಅನುಭವಕ್ಕೆ ಬರಲು ಸಾಧ್ಯವಿಲ್ಲ. ಏಕೆಂದರೆ, ತೇಜಸ್ವಿ ಯೋಚಿಸುವುದು, ಗುರುತಿಸುತ್ತಾ ಹೋಗುವುದು ಜಲ ಪ್ರಪಂಚದ ವಿವಿಧ ಮುಖಗಳನ್ನು. ಈ ವಿಶಿಷ್ಟಾನುಭವಗಳು ಅವರ ಓದಿನಿಂದ ಬಂದ ತಿಳುವಳಿಕೆಯ ಜೊತೆಗೆ ವಿಶೇಷವಾಗಿ ಹೆಣೆದುಕೊಳ್ಳುತ್ತವೆ. ಅವರ ಜಲಸಂಬಂಧೀ ಅನ್ವೇಷಣೆಯಲ್ಲಿನ ಜೀವಂತಿಕೆ ಅವರ ಹಾಸ್ಯದ, ಲವಲವಿಕೆಯ ನಿರೂಪಣೆಯತ್ತ ಹೊರಳುವುದರಿಂದ ಅವರು ಪ್ರಸ್ತಾಪಿಸುವ ಸಂಗತಿಗಳು ಮನಸ್ಸಿಗೆ ಭಾರವಾಗುವುದಿಲ್ಲ. ಅವರ ಅನುಭವ ಪ್ರಪಂಚದ ಜೊತೆಗೆ ಓದುಗನ ಕುತೂಹಲ ಸ್ಪಂದಿಸುವುದರಿಂದ ಈ ಪ್ರವಾಸ ಕಥನ ತನ್ನ ವಿಷಯದ ಭಾರದಿಂದ ಜಡವಾಗುವುದಿಲ್ಲ.

ರಹಮತ್ ತರೀಕೆರೆಯವರ **ಅಂಡಮಾನ್ ಕನಸು** ಅಂಡಮಾನ್‌ಗೆ ಗೆಳೆಯರೊಂದಿಗೆ ಹೋಗಿಬಂದ ಪ್ರವಾಸ ಕಥನ. "ಸಂತೆ ಮೈದಾನದಲ್ಲಿ ದನಗಳು ತಿರುಗುವಂತೆ ನಾನೂ ನನ್ನ ಗೆಳೆಯರೂ ಅಂಡಮಾನ್ ತಿರುಗಾಡಿ ಬಂದೆವು" ಎಂದು ಲೇಖಕರು ತಮ್ಮ ಕೃತಜ್ಞತೆಯ ಮಾತಿನಲ್ಲಿ ಹೇಳಿರುವರು. ತುಂಬು ಲವಲವಿಕೆಯ, ಪರಸ್ಪರ ಗೇಲಿಯ, ಸುತ್ತಾಟದ ಅನುಭವಗಳ ನಿವೇದನೆಯಲ್ಲಿ ಹಾಸ್ಯ ಅಥವಾ ನಗೆಯ ಲೇಪನದ, ವ್ಯಕ್ತಿಚಿತ್ರಗಳಲ್ಲಿ ಮೈಗೂಡಿರುವ ತೆಳು ವಿಡಂಬನೆ, ಜನಜೀವನದ ಬಗೆಗಿನ ಮುಕ್ತವಾದ ಅನಿಸಿಕೆ ಈ ಪ್ರವಾಸ ಕಥನದ ಪ್ರಧಾನ ಆಕರ್ಷಣೆ. ಈ ತರಹದ ತೆಳು ಹಾಸ್ಯದ (ಒಮ್ಮೊಮ್ಮೆ ವಿಕಟ ಹಾಸ್ಯದ) ಗದ್ಯ ಬರವಣಿಗೆ ಬೇರೆ ಪ್ರವಾಸ ಸಾಹಿತ್ಯದಲ್ಲಿ ಕಾಣಬರುವುದಿಲ್ಲ. ಆ ಕಾರಣಕ್ಕಾಗಿಯೇ ಈ **ಅಂಡಮಾನ್ ಕನಸು** ಆಪ್ಯಾಯಮಾನವಾಗುತ್ತದೆ. ಹಡಗಿನಲ್ಲಿ 'ಕ್ಯಾಬಿನ್' 'ಬಂಕರ್' ಎಂಬ ಎರಡು ವರ್ಗಗಳಿದ್ದುದನ್ನು ಲೇಖಕರು ಪ್ರಸ್ತಾಪಿಸುತ್ತ ಅವು ಹಡಗಿನ ಲೋಕದ ಸ್ವರ್ಗ-ನರಕಗಳೆನ್ನುವರು. ಅವುಗಳ ಸ್ವಾರಸ್ಯವನ್ನು ಲೇಖಕರ ಮಾತುಗಳಲ್ಲಿಯೇ ಸವಿಯಬೇಕು. "ಅಲೆಗಳಿಗೆ ಇಡೀ ಹಡಗು ಜೋಕಾಲಿಯಂತೆ ಓಲಾಟ ಮಾಡುವಾಗ ಹೆಚ್ಚು ಬಾಧೆಯಾಗುತ್ತಿದ್ದುದು ಉಪ್ಪರಿಗೆಯ ದೇವತೆಗಳಿಗೇ. ಕಡಲ ಕಾಯಿಲೆಗಳನ್ನು (Sea Sickness) ತಾಳಲಾಗದೆ, ಕ್ಯಾಬಿನ್ನಿನ ಸುಕುಮಾರ ಸ್ವಾಮಿಗಳು ಸದಾ ಮಂಚಗಳ ಮೇಲೆ ಬಿದ್ದುಕೊಂಡಿರುತ್ತಿದ್ದರು. ಬಂಕರೆಂಬ ಅಧೋಜಗತ್ತಿನ ಪ್ರಜೆಗಳು ನಿರಂಕುಶ ಮತಿಗಳು. ಎಲ್ಲೆಂದರಲ್ಲಿ ಹಾಯಾಗಿ ಅಡ್ಡಾಡುತ್ತಿದ್ದರು. ಇಂಗ್ಲಿಷಿನಲ್ಲಿದ್ದ ಅಪಮಾನಕಾರಿ ಬೋರ್ಡುಗಳನ್ನು ಓದಲು ಅವರಿಗೆ ಬರುತ್ತಿರಲಿಲ್ಲ. ಓದಲು ಬಂದರೂ ಬಹುಸಂಖ್ಯಾತರಾಗಿದ್ದ ಅವರು, ಅವನ್ನು ಕೇರ್ ಮಾಡುತ್ತಿರಲಿಲ್ಲ. ಮೂಲತಃ ಬಿಸಿಲು ಮಳೆ ತಾಳಿಕೊಂಡು ದುಡಿಮೆ ಮಾಡುವ ಬಂಕರಿನ ನರಮಾನವರು ದೈಹಿಕವಾಗಿ

ಒರಟಾಗಿದ್ದರು; ಬೀಡಿ ಸೇದುತ್ತ, ಎಲೆ ಅಡಿಕೆ ಜಗಿದು ಎಲ್ಲೆಂದರಲ್ಲಿ ಪಿಚಕಾರಿ ಹೊಡೆಯುತ್ತ, ಹರಟೆ ಕೊಚ್ಚುತ್ತ ಓಡಾಡಿಕೊಂಡಿದ್ದರು. ಸಾಮಾನ್ಯವಾಗಿ ಹಡಗಿನ ಅಧಿಕಾರಿಗಳು ಸೀಮೋಲ್ಲಂಘನೆ ಮಾಡಿ ಬರುತ್ತಿದ್ದ ಇವರನ್ನು ತಡೆಯ ಹೋಗುತ್ತಿರಲಿಲ್ಲ. ಯಾಕೆಂದರೆ, ತಮ್ಮ ಓಡಾಟಗಳಿಂದ ಹಡಗನ್ನು ಜೀವಂತವಾಗಿಡುತ್ತಿದ್ದವರೇ ಬಂಕರಿಗಳು. ಜಗಳ, ಗಲಾಟೆ, ಗಲೀಜು ಬಂಕರಿನಲ್ಲಿ ಹೆಚ್ಚು ಇದ್ದುದು ನಿಜ. ಅಪಾರವಾದ ಹರಟೆ, ಕೇಕೆ, ನಗುಗಳು ಹುಟ್ಟಿ ತುಳುಕಾಡುತ್ತಿದ್ದದ್ದೂ ಬಂಕರಿನಲ್ಲಿಯೇ. ತಮ್ಮ ಕಷ್ಟ-ಸುಖಗಳನ್ನು ಊಟ ತಿಂಡಿಯಂತೆ ಹಂಚಿಕೊಳ್ಳುತ್ತಿದ್ದ ಬಂಕರಿಗಳು, ಹಡಗು ಇಳಿಯುವ ಹೊತ್ತಿಗೆ ಅಗಲಲಾರದ ನೆಂಟರಾಗಿಬಿಡುತ್ತಿದ್ದರು. ನಾವು ಅನೇಕ ಗೆಳೆಯರನ್ನು ಸಂಪಾದಿಸಿದ್ದು ಇಲ್ಲೇ" (ಪು. ೧೭). ಹಡಗಿನ ಚಿಕ್ಕ ಜಗತ್ತಿನಲ್ಲಿ ದಿನಗಟ್ಟಲೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಕಷ್ಟ ಸುಖಗಳನ್ನು ಹಂಚಿಕೊಳ್ಳಲು ತುಡಿಯುವ ಸಹ ಪ್ರಯಾಣಿಕರ ಮನೋಸ್ಥಿತಿಯನ್ನು ಚೆನ್ನಾಗಿ ಗ್ರಹಿಸುವ ಲೇಖಕರು "ಬಾಯಿ ಸತ್ತವರನ್ನೂ ವಾಚಾಳಿಗಳನ್ನಾಗಿ ಮಾಡಬಲ್ಲ ಅದ್ಭುತಶಕ್ತಿ ಕಡಲಿಗೂ ಹಡಗಿಗೂ ಇದ್ದಂತಿದೆ" ಎಂದಿರುವರು (ಪು. ೨೦).

ರಹಮತ್ ತರೀಕೆರೆಯವರ ವರ್ಣನೆಯಲ್ಲಿನ ದೇಸೀಯತೆ ಓದುಗನನ್ನು ಸಹಜವಾಗಿ ಆಕರ್ಷಿಸುತ್ತದೆ. ಹ್ಯಾರಿಯಟ್ ಬೆಟ್ಟದ ತುದಿಯ ಮೇಲೆ ನಿಂತು ನೋಡುವಾಗಿನ ಅನುಭವವನ್ನೇ ನೋಡಬಹುದು: "...ನೀರ ಹಾಳೆಯಂತೆ ಹಬ್ಬಿರುವ ಕಡಲು, ಕಪ್ಪು ಚುಕ್ಕೆಗಳಂತೆ ಚಲಿಸುವ ದೋಣಿಗಳು, ನಡುವೆ ಕೆರೆಯಲ್ಲಿ ಮಲಗಿದ ಎಮ್ಮೆಯಂತೆ, ಮುರುಟಿದ ಗೆಣಸಿನಂತೆ ಕಾಣುವ ಹ್ಯಾವಲಾಕ್, ಪಾದ್ಗೆಟ್ ಮೀನಿನಂತಿರುವ ನೀಲ್, ರಸ್ತೆ ಮೇಲೆ ಎಮ್ಮೆ ತೊಪ್ಪೆ ಹಾಕಿದಂತಿರುವ ವೈಪರ್ ಮುಂತಾದ ದ್ವೀಪಗಳು ಮಬ್ಬಾಗಿ ಕಾಣುತ್ತಿದ್ದವು" (ಪು.೪೦). ಅಂಡಮಾನಿನ ದೆವ್ವ ಮಳೆಯನ್ನು ನೆನೆಯುತ್ತಾ ಕರ್ನಾಟಕದ ಆಗುಂಬೆಯ ಕಾಡುಗಳಲ್ಲಿ ಸುರಿವ ಮಳೆಯನ್ನು ಲೇಖಕರು ನೆನಪಿಗೆ ತಂದುಕೊಳ್ಳುವರು. ಕಾರ್ಬನ್ಸ್‌ಕೋವ್ ಬೀಚಿನಲ್ಲಿ ಈಜಾಡಲು ಹೋದ ಲೇಖಕರು ಕೇರಳದ ಕೋವಲಂ ಹಾಗೂ ಕರ್ನಾಟಕದ ಮರವಂತೆ, ಮುರ್ಡೇಶ್ವರಗಳ ಜೊತೆ ಸೊಗಸಾಗಿ ತುಲನೆ ಮಾಡುವರು. ಆ ತುಲನೆ ಅನುಭವಿಯೊಬ್ಬನ ಪ್ರಾಮಾಣಿಕ ಅನಿಸಿಕೆಗಳು: "ಕೋವಲಂನಲ್ಲಿ ಹೆಡೆಯೆತ್ತಿಕೊಂಡು ಬರುವ ಅಲೆಗಳು, ರೌದ್ರಾವತಾರದಲ್ಲಿ ರಪ್ಪೆಂದು ಬಡಿಯುವ ಬಗೆ, ಎಷ್ಟು ನೋಡಿದರೂ ಸಾಲದು. ಆದರೂ ಕೋವಲಂ ಅಲೆಗಳು ನೀರಾಟಕ್ಕೆ ಒರಟು. ಅಲ್ಲಿನ ಕಪ್ಪು ಮಿಶ್ರಿತ ಮರಳು ಚೆಂದವಲ್ಲ. ನಮ್ಮ ಮರವಂತೆಯ ದಡದಲ್ಲಿ ನಿಜವಾಗಿಯೂ ಸಕ್ಕರೆ ಮಳಲು ಇದೆ. ಆದರೆ ಅಲ್ಲಿ ಅಲೆಗಳು ಪಟಾಕಿ ಹೊಡೆದಂತೆ ಢಬಾರೆಂದು ಅಪ್ಪಳಿಸಿ, ಆಳಕ್ಕೆ ಹಿಸ್ಸೆಂದು ಮೊರೆಯುತ್ತ ಹಿಂಜರಿಯುವ ಬಗೆ, ಸಾವೇ ಕರೆದಷ್ಟು

ಭಯಾನಕ. ಕರ್ನಾಟಕದ ಸುರಕ್ಷಿತ ಕಡಲ ದಂಡೆಯೆಂದರೆ ಮುರ್ಡೇಶ್ವರ. ಎಷ್ಟು ದೂರ ಹೋದರೂ ಆಳವಿಲ್ಲ. ಊರ ಮಗ್ಗುಲಿಗೆ ಇರುವುದೆ ಶಾಪವಾಗಿ ಅದು ಸಾರ್ವಜನಿಕ ಶೌಚಾಲಯವಾಗಿ ಹೋಗಿದೆ" (ಪು. ೫೬).

ಅಂಡಮಾನಿನ ಮಳೆಯ ವರ್ಣನೆ ಭಾಷೆಯಲ್ಲಿ ಪಡೆದುಕೊಳ್ಳುವ ಜೀವಂತಿಕೆಯನ್ನು ಓದಿ ಮೆಚ್ಚಬೇಕು. ಗಾಳಿ ತೊಂಬತ್ತು ಪಾಲಾದರೆ ಮಳೆ ಹತ್ತು ಪಾಲು. ಎಲ್ಲೋ ಗುಹೆಯಲ್ಲಿ ಕೂಡಿಟ್ಟ ಗಾಳಿಯನ್ನು ಒಮ್ಮೆಲೇ ಹೊರಬಿಟ್ಟಂತೆ ಹೂಂಕರಿಸಿ ಮಾಡಿಕೊಂಡು ಎರಗತೊಡಗಿತು. ತೆಂಗಿನ ಮರಗಳು ನುಗ್ಗಾಗಿ ಹೋದವು. ಸಣ್ಣಪುಟ್ಟ ಗಿಡಗಳು ನಮಾಜು ಮಾಡುವಂತೆ ಬಾಗಿ ಬಾಗಿ ಏಳುತ್ತಿದ್ದವು. ರಸ್ತೆಬದಿ ನಿಲ್ಲಿಸಿದ್ದ ಸ್ಕೂಟರ್‌ಗಳು ರಪ್ಪನೆ ನೆಲಕ್ಕೆ ಬಿದ್ದವು. ಕ್ಷಣಾರ್ಧದಲ್ಲಿ ಕರ್ಫ್ಯೂ ಹೊಡೆದಂತೆ ಪೋರ್ಟ್‌ಬ್ಲೇರ್ ರಸ್ತೆ ನಿರ್ಜನವಾದವು. ಉಸಿರುಗಟ್ಟಿಸುವ ಈ ಗಾಳಿಮಳೆಗಳು ಅರ್ಧಗಂಟೆ-ಯಕ್ಷಗಾನ ಕುಣಿದು, ತಟ್ಟನೆ ಮಾಯವಾದವು. ಬಿದ್ದ ನೀರೆಲ್ಲ ಇಂಗಿ, ರಸ್ತೆಗಳು ತೊಳೆದಿಟ್ಟಂತಾಗಿ, 'ಇದೆಲ್ಲ ಮಾಮೂಲು' ಎಂಬಂತೆ ಜನ ಬೀದಿಗಿಳಿದು ಓಡಾಡತೊಡಗಿದರು. ಎಲ್ಲವೂ ಪೂರ್ವಯೋಜಿತ ನಾಟಕದಂತಿತ್ತು" (ಪು. ೫೭-೫೮). ಚಿಡಿಯಾಟಾಪಿನ ಡ್ರೈವರ್‌ನ ವ್ಯಕ್ತಿಚಿತ್ರವು ನೆನಪಿನಲ್ಲಿ ಉಳಿಯುವ ಒಂದು ಕಥಾನಕದ ಪಾತ್ರದಂತಿದೆ.

ರಹಮತ್ ತರೀಕೆರೆಯವರ ಅಂಡಮಾನ್ ಪ್ರವಾಸದ ವಿಶಿಷ್ಟ ಅನುಭವಗಳು ಕಾವ್ಯಾತ್ಮಕವಾಗಿ ತೆರೆದುಕೊಳ್ಳುತ್ತಿದ್ದರೂ ಏಕೋ ಏನೋ ಅಂಡಮಾನ್‌ನ ಬಾಹ್ಯಪ್ರಪಂಚವನ್ನಷ್ಟೇ ಅವರು ಸ್ಪರ್ಶಿಸುತ್ತಿರುವರೇನೋ ಎಂಬ ಅನಿಸಿಕೆ ನನ್ನಲ್ಲುಂಟಾಯಿತು. ದೇ.ನಾ. ಶ್ರೀನಿವಾಸಮೂರ್ತಿಯವರು ಕೊಡುವ ಅಂಡಮಾನ್ ಮೂಲ ನಿವಾಸಿಗಳ ಬದುಕಿನ ಚಿತ್ರ ರಹಮತ್ ತರೀಕೆರೆಯವರಲ್ಲಿ ಕಾಣಬರುವುದೇ ಇಲ್ಲ. ಜರವಾಗಳ ಬಗ್ಗೆ ರಹಮತ್ ಪ್ರಸ್ತಾಪಿಸುವರು ಆದರೆ, ಅವು ಪುಸ್ತಕಗಳಲ್ಲಿನ ಮಾಹಿತಿಗಳ ವರದಿಯಂತೆ ಕಾಣಬರುತ್ತದೆ (ಪು. ೧೦೭-೧೧೨). ದೇ.ನಾ. ಶ್ರೀನಿವಾಸಮೂರ್ತಿಯವರು ಜರವಾಗಳ ಭಯಗ್ರಸ್ತ ಬದುಕು, ನಾಗರಿಕ ಜೀವನಕ್ಕೆ ಪಕ್ಕಾಗದೆ ಸ್ವಂತಿಕೆಯನ್ನು ಉಳಿಸಿಕೊಳ್ಳಬೇಕೆನ್ನುವ ಅವರ ಹಪಾಹಪಿ, ಆಕ್ರಮಣಶೀಲ ಪ್ರವೃತ್ತಿ, ಆಚಾರ ವಿಚಾರ, ಧಾರ್ಮಿಕ ನಂಬುಗೆ, ಆಚರಣೆ -ಹೀಗೆ ಹತ್ತು ಹಲವು ಸಂಗತಿಗಳ ಅಧ್ಯಯನಕ್ಕೆ ಸಂವಾದಿಯಾಗಿ ರಹಮತ್‌ರವರ ಪ್ರವಾಸ ಕಥನ ತೆರೆದುಕೊಳ್ಳುವುದೇ ಇಲ್ಲ. ಬಹುಶಃ ಆ ರೀತಿಯ ಮನೋಭಾವ, ತೀವ್ರವಾದ ಕುತೂಹಲ, ಆಸಕ್ತಿ ದೇ.ನಾ.ಶ್ರೀ. ಅವರಿಗೆ ಇರುವಂತೆ ರಹಮತ್‌ರವರಿಗೆ ಇರದಿರುವುದು ಎರಡೂ ಪ್ರವಾಸ ಕಥನಗಳ ತುಲನೆ ಮಾಡಿದಾಗ ಕಂಡುಬರುತ್ತದೆ. ಇಬ್ಬರ

ಮನೋಲಹರಿ ಬೇರೆ ಇರುವುದರಿಂದ ಹೀಗೆ ತುಲನೆ ಮಾಡುವುದೂ ಸಾಧುವಲ್ಲವೇನೋ.

**ಅಲೆಮಾರಿಯ ಹೆಜ್ಜೆಗಳು** ಎಂ. ವೆಂಕಟಸ್ವಾಮಿಯವರ ಭಾರತ ಪರ್ಯಟನದ ಕತೆ. ಲೇಖಕರು ಭೂವಿಜ್ಞಾನಿ. ತಮ್ಮ ವೃತ್ತಿ ಸಂಬಂಧವಾಗಿ ಅವರು ದೇಶದ ಹಲವು ಪ್ರಾಂತಗಳಲ್ಲಿ ಕೆಲಸ ನಿರ್ವಹಿಸಿರುವರು. ಅವರು ಸುಮಾರು ಹತ್ತು ವರ್ಷಗಳ ಕಾಲ ಕರ್ನಾಟಕದ ಹೊರಗೆ ಉತ್ತರ ಭಾರತದಲ್ಲಿ ಅಂದರೆ ಉತ್ತರ ಈಶಾನ್ಯ ಭಾರತದ ಹಲವು ಪ್ರದೇಶಗಳಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಸಂಚರಿಸಿದ ಹಾಗೂ ಸಂಶೋಧನೆ ನಡೆಸಿದ ಪ್ರದೇಶಗಳ ಸುತ್ತಲಿನ ಜನರನ್ನು, ಅವರ ಪ್ರಾದೇಶಿಕ, ಸಾಂಸ್ಕೃತಿಕ ಕಲೆಗಳನ್ನು, ಅವರ ಆಚಾರ ವಿಚಾರ, ನಂಬಿಕೆಗಳು ಮತ್ತು ಅವರ ಭಾಷೆ, ವೇಷಭೂಷಣಗಳನ್ನು ಗಮನಿಸಿರುವರು. ಕುತೂಹಲಕ್ಕಾಗಿ ಮಾಹಿತಿಗಾಗಿ ಕೆಲವರನ್ನು ಸಂಪರ್ಕಿಸಿರುವರು, ಪುಸ್ತಕಗಳನ್ನು ಓದಿರುವರು. ಹೀಗೆ ತಮ್ಮಲ್ಲಿ ತುಡಿಯುತ್ತಿದ್ದ ಅನುಭವಗಳಿಗೆ ಲೇಖಕರು ಸ್ಪಂದಿಸಿದ ರೀತಿ ಈ ಪ್ರವಾಸ ಕಥನದಲ್ಲಿ ದಾಖಲಾಗಿದೆ. ಲಖ್ನೋ ನಗರ, ಉತ್ತರ ಪ್ರದೇಶ, ರಾಜಾಸ್ಥಾನ, ನಾಗಾಲ್ಯಾಂಡ್ ಪ್ರದೇಶಗಳ ಬಗ್ಗೆ ಈ ಪ್ರವಾಸ ಕಥನದಲ್ಲಿ ಹೆಚ್ಚಿನ ವಿವರಗಳಿವೆ. ಎಂ. ವೆಂಕಟಸ್ವಾಮಿಯವರ ನವಿರಾದ ಹಾಸ್ಯ ಶೈಲಿಯಿಂದಾಗಿ ಈ ಪ್ರವಾಸ ಕಥನ ಓದಿಸಿಕೊಂಡು ಹೋಗುತ್ತದೆ.

**ಲಕ್ಷದ್ವೀಪ**

ಲಕ್ಷದ್ವೀಪದಲ್ಲಿ ಸ್ಪಾರ್ಕ್‌ನ ಎಂಟು ಮಂದಿ ಸದಸ್ಯರು ಟ್ರೆಕ್ಕಿಂಗ್ ಮಾಡಿ ಬಂದ ಅನುಭವ ಕಥನವನ್ನು ಮುನಿಯಾಲ್ ಗಣೇಶ ಶೆಣೈ ಈ ಕಿರುಹೊತ್ತಗೆಯಲ್ಲಿ ಕೊಟ್ಟಿರುವರು. ಲೇಖಕರು ಈ ದ್ವೀಪಕ್ಕೆ ಲಕ್ಷದ್ವೀಪ ಎಂದು ಹೆಸರು ಬರಲು ಕಾರಣವೇನು ಎಂಬ ಜಿಜ್ಞಾಸೆ ನಡೆಸಿರುವರು. ಈ ದ್ವೀಪಗಳು ಕೆಲವು ಕಾಲ ಟಿಪ್ಪುಸುಲ್ತಾನನಿಗೂ ಸೇರಿದ್ದುವು. ಸ್ವಲ್ಪ ಕಾಲವಾದರೂ ಕರ್ನಾಟಕದ ಭಾಗವಾಗಿತ್ತು ಎನ್ನುವರು. "೧೭೯೯ರಲ್ಲಿ ಶ್ರೀರಂಗಪಟ್ಟಣದಲ್ಲಿ ಟಿಪ್ಪುಸುಲ್ತಾನ್‌ನ ಕುಸಿತವಾದಾಗ ಅಮಿನ್‌ದಿವಿ ದ್ವೀಪಗಳನ್ನು ಈಸ್ಟ್ ಇಂಡಿಯಾ ಕಂಪನಿ ವಶಪಡಿಸಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿ ಸೇರಿಸಿತು. ದಕ್ಷಿಣ ದ್ವೀಪಗಳನ್ನು ಮಲಬಾರು ಜಿಲ್ಲೆಗೆ ಸೇರಿಸಲಾಯಿತು. ಈ ವ್ಯವಸ್ಥೆ ೧೯೫೬ರ ನವಂಬರ್ ೧ನೇ ತಾರೀಖಿನವರೆಗೆ ಇತ್ತು. ಸ್ವತಂತ್ರ ಭಾರತ ಸರ್ಕಾರವು ಲಕ್ಷದ್ವೀಪವನ್ನು ಬೇರ್ಪಡಿಸಿ ಸ್ವತಂತ್ರವಾಗಿ ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿತು. ಕವರತ್ತಿ ದ್ವೀಪ ಲಕ್ಷದ್ವೀಪದ ಕೇಂದ್ರ ಕಛೇರಿಯಾಯಿತು." (ಪು. ೧೭).

೧೯೦೨ರಲ್ಲಿ ಅಮಿನಿಯಲ್ಲಿ ಒಂದು ಶಾಲೆ ತೆರೆದು ಈ ಶಾಲೆಯಲ್ಲಿ ಕನ್ನಡ, ಮಲೆಯಾಳಂ, ಗಣಿತ ಹೇಳಿಕೊಡುತ್ತಿದ್ದರು. ೧೯೦೫ರಲ್ಲಿ ಈ ದ್ವೀಪಗಳ ಆಡಳಿತ

ಭಾಷೆ ಮಲೆಯಾಳಂ ಆಯಿತು. ಇದಾದ ಕೆಲವೇ ತಿಂಗಳಲ್ಲಿ ಕನ್ನಡ ಕಲಿಸುವುದನ್ನು ನಿಲ್ಲಿಸಲಾಯಿತು ಎಂದು ಲೇಖಕರು ಹೇಳುವರು (ಪು. ೨೭). ಲಕ್ಷದ್ವೀಪ ಮುಸ್ಲಿಂ ಜನರ ರಾಜ್ಯ. ಹೀಗಾಗಿ ಇಲ್ಲಿ ಹಂದಿಗಳು ಇಲ್ಲ. ಇಲ್ಲಿನ ಕೋಳಿಗಳು ಬೆಳಗಿನ ಜಾವ ಕೊಕೊ ಕೋಕೋ ಎಂದು ಕೂಗುವುದಿಲ್ಲ. ಅವು ತಮ್ಮ ಪರಿವಾರ ಸಮೇತ ಕಡಲದಂಡೆಯಲ್ಲಿ ಹೇರಳವಾಗಿ ಬಿದ್ದಿರುವ ಸಮುದ್ರ ಗಿಡಗಳನ್ನು ಕೆದಕುತ್ತ ಅವುಗಳ ನಡುವೆ ಸಿಗುವ ಹುಳುಗಳನ್ನು ತಿನ್ನುತ್ತವೆ. ಇದರಿಂದ ಅವುಗಳಿಗೆ ಅಗತ್ಯವಿರುವ ಅವುಗಳ ನಡುವೆ ಸಿಗುವ ಹುಳುಗಳನ್ನು ತಿನ್ನುತ್ತವೆ. ಇದರಿಂದ ಅವುಗಳಿಗೆ ಅಗತ್ಯವಿರುವ ಪ್ರೋಟೀನು ಸಿಗುತ್ತದೆ. ಲಕ್ಷದ್ವೀಪದಲ್ಲಿ ಸ್ತ್ರೀಯರ ಸಂಖ್ಯೆ ಹೆಚ್ಚು. ಗಂಡಸರು ಮೀನಿನ ಮಾರಾಟ ಮಾಡಿ ಬಂದ ಹಣವನ್ನು ತಮ್ಮ ಪತ್ನಿಗೆ ಕೊಡುವರು. ಅವರು ತೆಂಗಿನ ನಾರಿನ ಹಗ್ಗವನ್ನು ಮಾರಿ ಹಣ ಗಳಿಸುವರು. ಹೀಗೆ ಗಳಿಸಿದ ಹಣವನ್ನು ಚಿನ್ನದ ಆಭರಣಗಳ ಮೇಲೆ ಹಾಕುವರು. ಇಲ್ಲಿನ ಯುವಕರಿಗೆ ವರದಕ್ಷಿಣೆ ಎಂದರೆ ಏನೆಂಬುದೇ ತಿಳಿದಿಲ್ಲ. ಕಳ್ಳತನ ಇಲ್ಲಿ ಇಲ್ಲ. ಬೇವಿನ ಕಡ್ಡಿಯಿಂದ ಹಲ್ಲುಜ್ಜಬಹುದೆಂಬುದು ಅವರಿಗೆ ತಿಳಿಯದು. ಲಕ್ಷದ್ವೀಪದಲ್ಲಿ ಕಡಲ ಸಾಹಸಿಗಳು ಹೆಚ್ಚಿನ ಸಂಖ್ಯೆಯಲ್ಲಿರುವರು. ಅಲ್ಲಿನ ಆಸ್ಪತ್ರೆಯ ಸೈಜಕಾಲಜಿಸ್ಟ್ ಆಗಿರುವ ರಸ್ಮತ್ ಬೇಗಂರವರು ಇಂತಹ ಕಡಲ ಸಾಹಸಿಗಳಲ್ಲಿ ಒಬ್ಬರು. ಅವರ ಜೀವನದಲ್ಲಿ ನಡೆದ ರೋಮಾಂಚಕಾರಿ ಘಟನೆಯೊಂದನ್ನು ಲೇಖಕರು ಪ್ರಸ್ತಾಪಿಸುವರು (ಪು. ೬೯). ಅರಬ್ಬಿ ಸಮುದ್ರದ ಏಕೈಕ ಪಕ್ಷಿಧಾಮದ ಪಿಟ್ಟಿ ಒಂದು ಅಪೂರ್ವ ದ್ವೀಪ. ಇಲ್ಲಿ ಮನುಷ್ಯರಿಲ್ಲ, ಟರ್ನ್ ಮತ್ತು ಪಕ್ಷಿಗಳು ಇಡಿಕಿರಿದಿರುತ್ತವೆ. ಲಕ್ಷದ್ವೀಪದ ರಾಜ್ಯಪಕ್ಷಿ ಟರ್ನ್ ಎಂದು ಘೋಷಿಸಲಾಗಿದೆ. ಇಲ್ಲಿ ಪಕ್ಷಿಗಳನ್ನು ಕೊಲ್ಲುವುದನ್ನೂ ಮೊಟ್ಟೆಗಳನ್ನು ಸಂಗ್ರಹಿಸುವುದನ್ನೂ ನಿಷೇಧಿಸಲಾಗಿದೆ. ಈ ದ್ವೀಪಕ್ಕೆ ಹೋದ ಅನುಭವ ಸೊಗಸಾಗಿ ಬಂದಿದೆ (ಪು.೫೮). ಪುಟ್ಟದಾದರೂ ಗಣೇಶ ಶೆಣೈ ಸೊಗಸಾದ ಪ್ರವಾಸ ಕಥನ ನೀಡಿರುವರು.

**ಪಂಜಾಬ್**

ಪಂಜಾಬ್‌ನ ಪಟಿಯಾಲಾದಲ್ಲಿ ನಡೆಯಲಿದ್ದ ರಾಷ್ಟ್ರಮಟ್ಟದ ಜಾನಪದ ಸಮಾರಂಭದಲ್ಲಿ ಭಾಗವಹಿಸಲು ಜನವರಿ ೨೦೦೦ದಲ್ಲಿ ಪಂಜಾಬ್ ಪರ್ಯಟನೆ ಕೈಗೊಂಡ ಜಿ.ಪಿ. ಬಸವರಾಜುರವರು ತಮ್ಮ ಅನುಭವ ಕಥನವನ್ನು ಪಂಚಮುಖಿ ಪಂಜಾಬ್‌ನಲ್ಲಿ ನಿರೂಪಿಸಿರುವರು. ಈ ಪರ್ಯಟನೆಯಲ್ಲಿ ಇವರ ಜೊತೆಗಿದ್ದ ಮಿತ್ರರು ಡಾ. ಹಿ.ಶಿ. ರಾಮಚಂದ್ರಗೌಡ ಹಾಗೂ ವೆಂಕಟಯ್ಯ. ಸ್ವರ್ಣಮಂದಿರದ ಕಾರ್ಯ ಚಟುವಟಿಕೆಯ ವಿವರಗಳಿಂದ ಪ್ರಾರಂಭವಾಗುತ್ತದೆ. ಹಳೆಯ ನೆನಪುಗಳು ಕೆದಕುತ್ತವೆ. ಸ್ವರ್ಣಮಂದಿರದಲ್ಲಿ ಭಿಂದ್ರನ್‌ವಾಲೆ, ಉಗ್ರಗಾಮಿಗಳು ಆಶ್ರಯ ಪಡೆದದ್ದು,

ಇಂದಿರಾಗಾಂಧಿ ೧೯೮೪ರಲ್ಲಿ ಆಪರೇಷನ್ ಬ್ಲೂ ಸ್ಟಾರ್ ಫಲವಾಗಿ ಸ್ವರ್ಣ ಮಂದಿರ ಸಂಕೀರ್ಣ ರಣರಂಗವಾದದ್ದು, ಗುಂಡುಗಳ ಚಕಮಕಿಯಲ್ಲಿ ಉಗ್ರಗಾಮಿಗಳ ಹೆಣಗಳ ರಾಶಿ ಬಿದ್ದದ್ದು, ಉಗ್ರಗಾಮಿಗಳು ಹರಮಂದಿರವನ್ನು ತಮ್ಮ ಅಡಗುದಾಣ ಮಾಡಿಕೊಂಡಾಗ ನಡೆಸಿದ ಗುಂಪಿನ ಕಾಳಗದ ವಿವರಗಳನ್ನು ಮಾರ್ಕ್ ಟುಲಿ ಮತ್ತು ಸತೀಶ್ ಜಾಕಬ್ ಅವರ **ಅಮೃತಸರ : ಶ್ರೀಮತಿ ಗಾಂಧಿಯ ಕೊನೆಯ ಸಮರ** ಎಂಬ ಕೃತಿಯ ನೆರವಿನಿಂದ ಲೇಖಕರು ನೀಡಿರುವರು (ಪು. ೭). ಭಕ್ತಿಯ ಅತ್ಯುತ್ಕಟಭಾವದಲ್ಲಿ ಇತಿಹಾಸ ಹೇಗೆ ಅಳಿಸಿಹೋಗುತ್ತದೆಂಬುದರ ವಿವರವನ್ನು ಈಗಿನ ಅಖಲ್ ತಖ್ತನ್ನು ನೋಡಿದ ಬಸವರಾಜು ಚೆನ್ನಾಗಿ ನೀಡುವರು (ಪು. ೧೧). ಸಿಖ್ ಧರ್ಮದಲ್ಲಿ ಸೇವೆಯ ಪರಿಕಲ್ಪನೆ ಮಾನವೀಯ ನೆಲೆಯಿಂದ ಹೊರಟದ್ದು. ವಚನಕಾರರಂತೆ ಸಿಖ್ ಧರ್ಮಗುರುಗಳೂ ಕಾಯಕಕ್ಕೆ ಘನತೆ ಗೌರವಗಳನ್ನು ತಂದವರು (ಪು. ೧೪); ಸಿಖ್ ಧರ್ಮ ಭಿಕ್ಷೆ ಬೇಡುವುದನ್ನು ಒಪ್ಪುವುದಿಲ್ಲ. ಆದರೆ ಇತರರಿಗೆ ನೆರವಾಗುವುದನ್ನು ನಿಷೇಧಿಸಿಲ್ಲ. ಹೀಗಾಗಿ ಗುರುದ್ವಾರದ ಮುಂದೆ ಭಿಕ್ಷುಕರಿರುತ್ತಾರೆ (ಪು. ೧೫). ತಪ್ಪು ಮಾಡಿದವರು ಎಷ್ಟೇ ದೊಡ್ಡವರಿರಲಿ ಶಿಕ್ಷೆ ಅನುಭವಿಸಲೇ ಬೇಕು. ಇದು ಧರ್ಮದ ಮುಖ್ಯಸ್ಥರ ಆದೇಶ. ಹೀಗಾಗಿ ಬರ್ನಾಲಾ ಗುರುದ್ವಾರದಲ್ಲಿ ಕುಳಿತು ಬೂಟ್ ಪಾಲಿಷ್ ಮಾಡಿದರು -ಹೀಗೆ ಭೂತ ವರ್ತಮಾನಗಳ ನಡುವೆ ನೆನಪುಗಳು ಲಗ್ಗೆಯಿಡುತ್ತವೆ. ಸ್ವಾತಂತ್ರ್ಯಪೂರ್ವದ ಜಲಿಯನ್ ಲಾಲಾಬಾಗ್ ಹತ್ಯಾಕಾಂಡದ ಬಗೆಗೂ ನೆನಪಿನ ವಿವರಗಳು ಬಿಚ್ಚಿಕೊಳ್ಳುತ್ತವೆ (ಪು. ೨೪-೨೭).

ಪಾಕಿಸ್ತಾನ ಮತ್ತು ಭಾರತದ ಗಡಿಯನ್ನು ಗುರುತಿಸಲು ಹಾಕಿರುರ ತಂತಿ ಬೇಲಿ; ಪಂಜಾಬ್‌ನಲ್ಲಿ ಪ್ರಸಿದ್ಧವಿರುವ ಬಾಂಗ್ಡಾದಂತೆ ಬೇರೆ ಬೇರೆ ಕಲಾಪ್ರಕಾರಗಳನ್ನು ಮಿಶ್ರಮಾಡಿ ಹೊಸ ಆಯಾಮವನ್ನು ಕೊಡಲು ಪ್ರಯತ್ನಿಸಿದಾಗ ಪೊಖರ್ ಇದನ್ನು ಉಳಿಸುವ ಛಲ ತೊಟ್ಟಿದ್ದು; ಝುಮ್ಮಿರ್ ಕಲೆಯನ್ನು ಅವಸಾನದ ಅಂಚಿನಿಂದ ಉಳಿಸಿದ್ದು, ತರುಣರ ತಂಡ ಕಟ್ಟಿ ಈ ಜಾನಪದ ನೃತ್ಯರನ್ನು ಒಂದು ದೇಸೀ ನೃತ್ಯಶೈಲಿಯಾಗಿ ಕಲಿಸಿದ್ದು -ಇವು ಪ್ರವಾಸ ಕಥನದಲ್ಲಿ ಮನೋಜ್ಞವಾಗಿ ನಿರೂಪಿತವಾಗಿವೆ. ನೋಡಿದ್ದನ್ನೆಲ್ಲಾ, ತಮ್ಮ ಅನುಭವಕ್ಕೆ ದಕ್ಕಿದ್ದನ್ನೆಲ್ಲ ಬರಹಕ್ಕೆ ಇಳಿಸುವ ಬರವಣಿಗೆಯ ವಿಧಾನ ಓದಲು ಬೋರುಹಿಡಿಸುತ್ತದೆ. **ನೀಲಾಚಲಗಳ ನಾಡಿನಲ್ಲಿ** ಪ್ರವಾಸ ಕಥನದಲ್ಲಿನ ಸೂಕ್ಷ್ಮವಾದ ಕುಸುರಿ ಕೆಲಸದ ಬರವಣಿಗೆ ಇಲ್ಲಿ ಮಾಯವಾಗಿಬಿಟ್ಟಿದೆ. ಪ್ರವಾಸ ಕಥನ ಓದಿ ಮುಗಿಸಿದ ಮೇಲೆ ಪಂಜಾಬ್‌ನ ಜನಜೀವನದ ವಿವರ ತೀರಾ ಸಪ್ಪೆಯೆನಿಸಿತು. ಬಹಳ ನಿರೀಕ್ಷೆ ಇಟ್ಟುಕೊಂಡು ಓದಿದಾಗ, ನಮ್ಮ ನಿರೀಕ್ಷೆ ಹುಸಿಯಾದಾಗ ಆಗುವ ನಿರಾಶೆ ಪಂಚಮುಖಿ ಪಂಜಾಬ್‌ನಲ್ಲಿ ಗಾಳಿಹೋದ ಸೈಕಲ್ ಟ್ಯೂಬಿನಂತಾಯಿತು.

## ಕರ್ನಾಟಕ-ನೇಪಾಳ : ಸಾಂಸ್ಕೃತಿಕ ಸಂಬಂಧಗಳ ಪ್ರಾಮಾಣಿಕ ಶೋಧ

ಡಾ. ಎಂ. ಚಿದಾನಂದ ಮೂರ್ತಿಯವರ **'ಕರ್ನಾಟಕ-ನೇಪಾಳ : ಸಾಂಸ್ಕೃತಿಕ ಸಂಬಂಧ'** ಎಂಬ ಕೃತಿ ಅದರ ಹೆಸರೇ ಹೇಳುವಂತೆ ಎರಡು ದೇಶಗಳ ನಿಕಟವಾದ ಸಾಂಸ್ಕೃತಿಕ ಸಂಬಂಧವನ್ನು ಆಧಾರಗಳೊಂದಿಗೆ ಪುನರ್‌ವ್ಯಾಖ್ಯಾನಿಸುವ ಒಂದು ಸಂಶೋಧಾತ್ಮಕ ಬರವಣಿಗೆ. ಅನ್ಯರು ಇಂತಹ ವಿಷಯಗಳ ಬಗೆಗೆ ಬರೆಯಹೊರಟಾಗ ಅದು ಸಾಂಸ್ಕೃತಿಕ ಪ್ರವಾಸವೊಂದರ ವಿವರಣೆಯಾಗಿ ತನ್ನ ಮಹತ್ವವನ್ನು ಕಳೆದುಕೊಂಡು ಬಿಡುವ ಸಾಧ್ಯತೆಯಿದ್ದಿತು. ಡಾ. ಎಂ. ಚಿದಾನಂದ ಮೂರ್ತಿಯವರು ಪ್ರಧಾನತಃ ಸಂಶೋಧಕರು, ಇತಿಹಾಸ ಹಾಗೂ ಸಂಸ್ಕೃತಿಯ ಬಗೆಗೆ ವಿಶೇಷ ಆಸಕ್ತಿಯುಳ್ಳವರು. ಹೀಗಾಗಿ ಈ ಕೃತಿಯಲ್ಲಿ ಪ್ರವಾಸಿ ಸಾಹಿತ್ಯವಾಗುವ ಅಪಾಯತಪ್ಪಿ ಎರಡೂ ದೇಶಗಳ ರಾಜಕೀಯ ಹಾಗೂ ಧಾರ್ಮಿಕ ಸಂಬಂಧಗಳ ತಲಸ್ಪರ್ಶಿ ಶೋಧ ಈ ಮಾನೋಗ್ರಾಫ್‌ನ ಕೇಂದ್ರ ನೆಲೆಯಾಗಿಬಿಡುತ್ತದೆ. ಅವರೇ ಹೇಳಿಕೊಂಡಿರುವಂತೆ ಹದಿನೈದು ದಿನಗಳ ನೇಪಾಳದ ಸಂಶೋಧನ ಪ್ರವಾಸ.

ಈ ಕೃತಿಯ ಕೊನೆಯ ಭಾಗದಲ್ಲಿ 'ನಿನ್ನೆಯನ್ನು ಮರೆತವನು ನಾಳೆಯನ್ನೆಂದೂ ಕಟ್ಟಲಾರ' ಎಂಬ ಘೋಷಣಾ ವಾಕ್ಯವಿದೆ. ಇದನ್ನು ಡಾ. ಎಂ. ಚಿದಾನಂದ ಮೂರ್ತಿಯವರು ಹೀಗೆ ವ್ಯಾಖ್ಯಾನಿಸುವರು: "ವ್ಯಕ್ತಿಯಂತೆಯೇ ಒಂದು ನಾಡು, ರಾಷ್ಟ್ರಕ್ಕೂ ನಿನ್ನೆ ಎಂಬುದು; ಎಂದರೆ ಅದರ ಗತಕಾಲ, ಅದರ ಚರಿತ್ರೆ ಮುಖ್ಯ. ವ್ಯಕ್ತಿಗೆ ಅವನ ನೆನಪು ಇದ್ದಂತೆ ನಾಡಿಗೆ ಅದರ ಇತಿಹಾಸ. ಒಂದು ನಾಡಿನ ಜನಕ್ಕೆ ಸ್ಫೂರ್ತಿ ಆ ಜನರ ಇತಿಹಾಸ, ಸಾಧನೆಗಳು. ಇಪ್ಪತ್ತನೆಯ ಶತಮಾನದ ಆರಂಭದ ಇಡೀ ಭಾರತದಲ್ಲಿ ಮಹಾರಾಷ್ಟ್ರ, ಬಂಗಾಳ ಮತ್ತು ತಮಿಳುನಾಡುಗಳು ತಮ್ಮ ಚರಿತ್ರೆ ಬಗ್ಗೆ ಜಾಗೃತಗೊಂಡು ಅಲ್ಲಿಂದ ಸ್ಫೂರ್ತಿಯನ್ನು ನಿರಂತರವಾಗಿ ಪಡೆದುವು. ಆ ಪ್ರದೇಶಗಳ ಜನರು ನಿಜವಾದ ಸ್ವಾಭಿಮಾನಿಗಳಾಗಿ ಬೆಳೆದರು. ಆ ನಾಡುಗಳಷ್ಟೇ ಶ್ರೇಷ್ಠ ಚರಿತ್ರೆಯನ್ನು ಪಡೆದಿರುವ ಕರ್ನಾಟಕದ ಜನರು ತಮ್ಮ ಚರಿತ್ರೆಯ ಬಗ್ಗೆ ಜಾಗೃತರಾಗದೇ ಉಳಿದಿರುವುದರ ಬಗ್ಗೆ ಆಲೂರು ವೆಂಕಟರಾಯರಂತಹ ನಾಡು-ನುಡಿ ಅಭಿಮಾನಿಗಳು ತೀವ್ರವಾಗಿಯೇ ನೊಂದರು. ಇಂದಿಗೂ ಕರ್ನಾಟಕದ ಜನಕ್ಕೆ ತಮ್ಮ ಪರಂಪರೆಯ ಪ್ರಜ್ಞೆ, ಬಗ್ಗೆ ಇರುವ ಅರಿವು ಸಾಲದು. ಆ ಅರಿವು ಇಲ್ಲದ್ದರಿಂದ ಅದು ಮೂಡಿಸಬಹುದಾದ ಅಭಿಮಾನದ ಕೊರತೆ ಕನ್ನಡಿಗರಲ್ಲಿ ವಿಶೇಷವಾಗಿ ಕಾಣಿಸುತ್ತಿದೆ" (ಪು. ೭೬). ಈ ಪುಸ್ತಕದ ರಚನೆಯ ಹಿನ್ನೆಲೆಯಲ್ಲಿ ಅವರಿಗೆ ಕನ್ನಡಿಗರ ನಿರಭಿಮಾನದ ಬಗೆಗೆ ಸಿಟ್ಟಿದೆ, ನೋವಿದೆ: "ಈ ಪುಸ್ತಿಕೆ ಕರ್ನಾಟಕದಲ್ಲಿ ಮಾತ್ರವಲ್ಲ, ಕರ್ನಾಟಕದ ಹೊರಗೂ ಕನ್ನಡಿಗರು ಏನು ಬಹು ದೊಡ್ಡದನ್ನು ಸಾಧಿಸಿದರು ಎಂಬುದರ ಕುರಿತಾಗಿದೆ.

ಕರ್ನಾಟಕದಿಂದ ಹೊರಗೆ ಹೋದವರು ತಮ್ಮ ಮೂಲ ನಾಡಿನಿಂದ ಸ್ಫೂರ್ತಿ ಪಡೆದು ತಾವು ನೆಲಸಿದ ಪ್ರದೇಶದ ಭಾಷೆ, ಕಲೆ, ಸಂಸ್ಕೃತಿಯನ್ನು ಬೆಳೆಸಿದರು; ಆ ಜನರ ಹಿತಕ್ಕಾಗಿ ಶ್ರಮಿಸಿದರು. ಅದನ್ನು ಕನ್ನಡಿಗರ ಅರಿವಿಗೆ ತರಲು ಈ ಕೃತಿ ಸಹಾಯಕವಾಗಲಿ ಎಂದು ಹಾರೈಸುತ್ತೇನೆ." ಈ ಸಾಲುಗಳು ಅವರ ಅಂತರಾಳವನ್ನು ಬಿಚ್ಚಿಡುವುದಷ್ಟೇ ಅಲ್ಲ, ಕೃತಿಯ ಅಂತರಾಳವನ್ನೂ ಬಿಚ್ಚಿಡುತ್ತದೆ.

ಏಳು ಅಧ್ಯಾಯಗಳ ಈ ಪುಟ್ಟ ಮಾನೋಗ್ರಾಫ್ ಸಂಶೋಧಕರೊಬ್ಬರು ಬರೆದ ಸಂಶೋಧನ ಪ್ರಬಂಧವೇ ಆಗಿದೆ. ಈ ಪ್ರಬಂಧದ ಮೊದಲ ೭೬ ಪುಟ ಸಂಶೋಧನ ಪಠ್ಯಭಾಗವಾದರೆ, ಪ್ರಬಂಧದ ಎರಡನೆಯ ಭಾಗ ಒಂಬತ್ತು ಅನುಬಂಧಗಳನ್ನು ಒಳಗೊಂಡಿದ್ದು ಮೊದಲನೆಯದಕ್ಕೆ ಪೂರಕವಾಗಿದೆ. ಅನುಬಂಧ-೯ರಲ್ಲಿ ತಮ್ಮ ಪ್ರವಾಸ ಕಾಲದ ಅಧ್ಯಯನದಲ್ಲಿ ಕಂಡುಕೊಂಡ ಕೆಲವು ಹೊಸ ಶೋಧಗಳ ಬಗೆಗೆ ಮಾಹಿತಿಯಿದೆ. ಕೃತಿಯ ಕೊನೆಯಲ್ಲಿ ಗ್ರಂಥಸೂಚಿ, ಶಬ್ದಸೂಚಿಗಳಿವೆ; ಪಠ್ಯಕ್ಕೆ ಸಂಬಂಧಿಸಿದಂತೆ ೮ ಛಾಯಾಚಿತ್ರಗಳಿವೆ. ಈ ಪ್ರಬಂಧದಲ್ಲಿ ಒಂದು ನಿರ್ದಿಷ್ಟ ಧ್ಯೇಯವಿದೆ; ನಿಜವಾದ ಸಂಶೋಧಕನ ಕುತೂಹಲವಿದೆ, ವಿವರಗಳ ಬೆನ್ನಹಿಂದೆ ಹೋಗಿ ಮೂಲ ಮಾಹಿತಿಗಳನ್ನು ಕಲೆಹಾಕುವ ಶ್ರದ್ಧೆ ಹಾಗೂ ಉತ್ಸಾಹಗಳಿವೆ; ಶಿಸ್ತು ಇದೆ.

ಡಾ. ಎಂ. ಚಿದಾನಂದ ಮೂರ್ತಿಯವರಿಗೆ ನೇಪಾಳದಲ್ಲಿ ಕನ್ನಡ ಶಾಸನಗಳು ದೊರಕುತ್ತಿರುವುದು ಮಹತ್ವದ ಹೊಸ ಸಂಗತಿಯಾಗಿದೆ; ಅಲ್ಲಿನ ಪಶುಪತಿ ದೇವಾಲಯದ ಅರ್ಚಕರು ಕರ್ನಾಟಕದವರು ಎಂಬ ಸಂಗತಿಯೂ ಮುಖ್ಯವೆನ್ನಿಸಿದೆ. ಪ್ರಾರಂಭದಲ್ಲಿ ಕರ್ನಾಟಕದ ಹೊರಗೆ ಆಳಿದ ಕರ್ನಾಟಕದ ದೊರೆಗಳ ವಿವರ ನೀಡುವರು. ಈ ಸಂಬಂಧವಾಗಿ ನೇಪಾಳದ ಜೊತೆಗಿನ ರಾಜಕೀಯ ಸಂಬಂಧವನ್ನು ಕುರಿತ ಮೊದಲ ಅಧ್ಯಯನವೂ ಅವರ ಕೃತಿಯ ಹಿರಿಮೆಯಾಗಿದೆ. ಇದರ ವಿವರಗಳು ೨ನೇ ಅಧ್ಯಾಯದಲ್ಲಿ ವಿಸ್ತೃತವಾಗಿ ಬಂದಿದೆ. ಈ ಕೃತಿಯ ಮೂರನೆಯ ಅಧ್ಯಾಯ ಕರ್ನಾಟಕಕ್ಕೂ ನೇಪಾಳಕ್ಕೂ ಇರುವ ಧಾರ್ಮಿಕ ಸಂಬಂಧವು ಮೂರು ಉಪಶೀರ್ಷಿಕೆಗಳಲ್ಲಿ ದೀರ್ಘವಾಗಿ ಚರ್ಚೆಗೊಂಡಿದೆ. ಕಲ್ಯಾಣಿ ಚಾಲುಕ್ಯರ ಆರನೇ ವಿಕ್ರಮಾದಿತ್ಯನು ಆಂಧ್ರ, ದ್ರಾವಿಡ, ನೇಪಾಳ ದೊರೆಗಳನ್ನು ತನ್ನ ಆಳ್ವಿಕೆಗೆ ಒಳಪಡಿಸಿದ್ದನು. ಅವನ ಸೇನಾ ದಂಡನಾಯಕನಾಗಿದ್ದವನು ನಾನ್ಯದೇವ. ಅವನು ೧೧೪೧ರಲ್ಲಿ ನೇಪಾಳದ ಮೇಲೆ ದಾಳಿಮಾಡಿ ಭಕ್ತಪುರ ಮತ್ತು ಪಾಟಣ್‌ಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಈತ ವಿದ್ವಾಂಸನಾಗಿದ್ದು ಭರತನ ನಾಟ್ಯಶಾಸ್ತ್ರದ ಮೇಲೆ 'ಭರತ ಭಾಷ್ಯ' ಎಂಬ ಭಾಷ್ಯ ಬರೆದಿರುವನು. ಸರಸ್ವತಿ ಹೃದಯಾಲಂಕಾರ ಎಂಬ ಹೆಸರಿನ ಈ ಗ್ರಂಥದ ಅಂತ್ಯದಲ್ಲಿ ತನ್ನನ್ನು 'ಕರ್ಣಾಟ ಕುಲ ಭೂಷಣ' ಎಂದು ಕರೆದುಕೊಂಡಿರುವನು.

ಇವನ ಹಿರಿಯ ಮಗ ಮಲ್ಲದೇವನು ನೇಪಾಳವನ್ನೂ ಕಿರಿಯಮಗ ಗಂಗದೇವನು ಮಿಥಿಲೆಯನ್ನೂ ಆಳಿದರು. ಅವರ ಬಳಿಕ ಬಂದ ನರಸಿಂಹದೇವನು ದಾಖಲೆಗಳಲ್ಲಿ 'ಕರ್ಣಾಟಾನ್ವಯ ಭೂಷಣ'ನೆನ್ನಿಸಿಕೊಂಡಿದ್ದರೂ 'ಕರ್ಣಾಟ' ರಾಜ್ಯವು ಅವನ ಕಾಲದಲ್ಲಿ ದುರ್ಬಲಗೊಂಡಿತು. ದೆಹಲಿ ಸುಲ್ತಾನ ಷಹಾಬುದ್ದೀನ್ ಮಹಮ್ಮದ್ ಘೋರಿಯನ್ನು ಅವನು ಎದುರಿಸಿದನಾದರೂ ಅವನಿಗೆ ಕಪ್ಪ ಕಾಣಿಕೆ ಕೊಟ್ಟು ಮಿಥಿಲೆಯನ್ನು ತನ್ನ ವಶದಲ್ಲಿ ಉಳಿಸಿಕೊಂಡನು. ಇವನ ನಂತರ ಬಂದವನು ಶಕ್ತಿಸಿಂಹ ದೇವ ಅಥವಾ ಶುಕ್ರದೇವ. ಇವನ ಕಾಲದಲ್ಲಿ 'ಕರ್ಣಾಟ' ರಾಜ್ಯ ವೈಭವ ಕೆಳಗಿಳಿಯಿತು. ಹಾಗೆ ಮತ್ತೆ ಅದನ್ನು ಉತ್ಕರ್ಷಕ್ಕೆ ಒಯ್ದವನು ಅವನ ನಂತರದ ಹರಿಸಿಂಹದೇವ. ಇವನು ೫೦ ವರ್ಷ ರಾಜ್ಯಭಾರ ಮಾಡಿದ್ದು ಇವನನ್ನು ಶಾಸನ ಹಾಗೂ ಸಾಹಿತ್ಯ ಕೃತಿಗಳು 'ಕರ್ನಾಟ ಕುಲ ಸಂಭವ', 'ಕರ್ನಾಟ ವಂಶೋದ್ಭವ', 'ಕರ್ನಾಟ ಚೂಡಾಮಣಿ' ಎಂದು ಮುಂತಾಗಿ ಕರೆದಿವೆ. ಇವನು ತನ್ನ ರಾಜ್ಯವನ್ನು ಹೆಚ್ಚು ವಿಸ್ತರಿಸಲು ಸಾಧ್ಯವಿರಲಿಲ್ಲವಾದ ಕಾರಣ ನೇಪಾಳದತ್ತ ಗಮನಹರಿಸಿ ಅದನ್ನು ತನ್ನ ರಾಜ್ಯದ ಭಾಗವಾಗುವಂತೆ ಮಾಡಿದನು. ಇವಿಷ್ಟು ವಿವರಗಳು ಎರಡನೇ ಅಧ್ಯಾಯದಿಂದ ತಿಳಿದುಬರುತ್ತದೆ. ನೇಪಾಳವನ್ನು ಆಳಿದ ಮಲ್ಲ ದೊರೆಗಳ ಬಗೆಗೂ ಸಾಕಷ್ಟು ವಿವರಗಳು ಈ ಅಧ್ಯಾಯದಲ್ಲಿ ಲಭ್ಯವಿದೆ. ಧಾರ್ಮಿಕ ಸಂಬಂಧಗಳಲ್ಲಿ ಪಶುಪತಿ ಮಹಾದೇವ ಮಂದಿರದ ಪೂಜಾರಿಗಳು ಕರ್ನಾಟಕದವರೇ ಆಗಿರುವುದನ್ನು ಡಾ. ಎಂ. ಚಿದಾನಂದಮೂರ್ತಿ ಅವರು ತಿಳಿಯಪಡಿಸುವರು. ನೇಪಾಳದ ತುಳಜಾ ಅಥವಾ ತಲೇಜು ಮೂಲತಃ ಪ್ರಾಚೀನ ಕರ್ನಾಟಕದ ತುಳಜಾ ಭವಾನಿಯೇ ಆಗಿರುವಳೆಂಬುದನ್ನು ಅವರು ವಿವರಿಸುವರು. ನೇಪಾಳದಲ್ಲಿರುವ ಜಂಗಂ ಕುಟುಂಬಗಳು ಕರ್ನಾಟಕದಿಂದ ಹೋಗಿ ನೆಲೆಸಿದ ಜಂಗಮರು ಎಂದು ಅವರು ಹೇಳುವರು. ಭಕ್ತಪುರದಲ್ಲಿ ಜಂಗಂ ಮಠದಲ್ಲಿನ ಎರಡು ಕನ್ನಡ ಶಾಸನಗಳನ್ನು ಅವರು ಉಲ್ಲೇಖಿಸುವರು. ಒಂದು ತಾಮ್ರಪತ್ರದಲ್ಲಿ "ಮಠಪತ್ತಿ ಶ್ರೀ ಚೆನ್ನವೀರ ದೇವರಿಗೆ ಮಹಾಮಂಹತ್ತಿನ ಪಾದೇ ಗತಿ ರುದ್ರಾಕ್ಷಿ ೧೩೦೦೦ ವಿಭೂತಿ ೩೦೦೦೦" ಎಂಬ ಪಾಠವಿರುವುದನ್ನು ಗುರುತಿಸುವರು. ಅಷ್ಟೇ ಅಲ್ಲ, ಅದೇ ಜಂಗಂ ಮಠದ ದಕ್ಷಿಣ ಪೂರ್ವದಲ್ಲಿನ (ಆಗ್ನೇಯ ದಿಕ್ಕಿನಲ್ಲಿ ಒಂದು ಒರಳುಕಲ್ಲಿನ ಮೇಲೆ ಸುತ್ತ ಅಂಚಿನಲ್ಲಿ ಕನ್ನಡ ಮತ್ತು ನೇಪಾಲಿ ಭಾಷೆಯ ಒಂದು ಸಾಲಿನ ಶಾಸನವಿರುವುದನ್ನು ನಮ್ಮ ಗಮನಕ್ಕೆ ತರುವರು. ಈ ಶಾಸನದ "ಮಠದ ಶ್ರೀ ಚನ್ನವೀರದವರು" ಎಂಬುದು ಕನ್ನಡ ಭಾಷೆ ಹಾಗೂ ಅಕ್ಷರಗಳಲ್ಲಿರುವುದನ್ನು ಸ್ಪಷ್ಟಪಡಿಸುವರು. ಆರನೆಯ ಅಧ್ಯಾಯದಲ್ಲಿ ನೇಪಾಳದಲ್ಲಿನ ಮೈಥಿಲಿ ಬ್ರಾಹ್ಮಣರು ಮೂಲತಃ ಕರ್ನಾಟಕದವರು, ಕರ್ನಾಟ ರಾಜರ ಜೊತೆ ನೇಪಾಳಕ್ಕೆ ಬಂದವರೆಂಬುದನ್ನು ವಿವರಿಸುವರು.

ಈ ಕೃತಿಯ ಉದ್ದಕ್ಕೂ ನೇಪಾಳ ಹಾಗೂ ಕರ್ನಾಟಕದ ಸಂಬಂಧಗಳನ್ನು ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಆಯಾಮಗಳ ಮೂಲಕ ಗುರುತಿಸುತ್ತ ಸಾಗುವುದರಿಂದ ಈ ಮಧುರ ಸಾಂಸ್ಕೃತಿಕ ಸಂಬಂಧ ಕೃತಕ ಭೌಗೋಳಿಕ ಗಡಿಗಳನ್ನೂ ದಾಟಿಹೋಗಿರುವ ಚಾರಿತ್ರಿಕ ಅಂಶಗಳನ್ನು ಆಧಾರಗಳೊಂದಿಗೆ ದೃಢಪಡಿಸುತ್ತ ಸಂಶೋಧಕ ಚಿದಾನಂದ ಮೂರ್ತಿಯವರು ನಮ್ಮ ಶ್ರೀಮಂತ ಗತ ಇತಿಹಾಸದ ಭವ್ಯ ಪುಟಗಳ ಕಡೆಗೆ ನಮ್ಮ ಗಮನ ಸೆಳೆಯುವರು. ಈ ಕೃತಿಯ ಪುಟ ಪುಟಗಳಲ್ಲೂ ಕನ್ನಡದ ಕಂಪು ಹರಡಿದೆ. ಮರೆತ ಇತಿಹಾಸದ ಈ ನವಿರಾದ ಕಂಪನ್ನು ನಮ್ಮ ಇಂದ್ರಿಯ ಗೋಚರವಾಗುವಂತೆ ಮಾಡುವಲ್ಲಿ ಅವರು ಪಟ್ಟಿರುವ ಶ್ರಮ ಯುವಕರನ್ನೂ ನಾಚಿಸುವಂತಹದ್ದು. ಕನ್ನಡ ವಿಶ್ವವಿದ್ಯಾಲಯ ಈ ಕೃತಿಯನ್ನು ಪ್ರಕಟಿಸುವ ಮೂಲಕ ಒಂದು ಮಹತ್ವದ ಕೊಡುಗೆಯನ್ನು ನೀಡಿದೆ. ಸಾಂಸ್ಕೃತಿಕ ರಾಯಭಾರಿತ್ವ ಎಂಬುದು ಒಂದು ಹುದ್ದೆಯ ಮೂಲಕ ಅಥವಾ ಎರಡೂ ದೇಶಗಳ ಕಲಾವಿದರನ್ನು ಪರಸ್ಪರ ಕರೆಯಿಸಿಕೊಂಡು ಗೌರವಿಸುವುದರ ಮೂಲಕ ಸಾಧ್ಯವಾಗುವುದಾದರೂ ಅದು ಇಂತಹ ಸಂಶೋಧನ ಕೃತಿಯ ಮೂಲಕವೂ ಆಗಬಹುದಾಗಿದೆ. ಇಂಥ ಒಂದು ಮೌಲಿಕ ಕೃತಿ ಕನ್ನಡಕ್ಕಷ್ಟೇ ಸೀಮಿತವಾಗಿ ಬಿಟ್ಟರೆ, ಅದರ ಸಾಂಸ್ಕೃತಿಕ ಮಹತ್ವವನ್ನು ಕುಬ್ಜಗೊಳಿಸಿದಂತಾಗಿಬಿಡುತ್ತದೆ. ಇದು ಮುಖ್ಯವಾಗಿ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗೆ ಅನುವಾದಗೊಂಡಾಗ ಮಾತ್ರ 'ಸಾಂಸ್ಕೃತಿಕ ರಾಯಭಾರಿತ್ವ' ಎಂಬುದಕ್ಕೆ ಸರಿಯಾದ ನ್ಯಾಯ ಸಲ್ಲಿಸಿದಂತಾಗುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಈ ನಿಟ್ಟಿನಲ್ಲಿ ವಿಚಾರ ಮಾಡಬಹುದಾಗಿದೆ.

## ತೀರ್ಥಯಾತ್ರಾ ಸಾಹಿತ್ಯ

**ತೀ**ರ್ಥವೆಂದರೆ ನದಿಯ ತೀರ. ನಮ್ಮವರ ತೀರ್ಥಯಾತ್ರೆಯ ಬಹುಭಾಗವು ಪ್ರದೇಶವನ್ನು ಒಳಗೊಂಡಿದೆ. ನಮ್ಮಲ್ಲಿ ಬಹುಕಾಲದಿಂದಲೂ 'ಪ್ರವಾಸ' ಎಂದರೆ ಯಾತ್ರೆ ಇಲ್ಲವೆ ಪುಣ್ಯಕ್ಷೇತ್ರ ಯಾತ್ರೆಗೆ ಸೀಮಿತವಾಗಿದ್ದಿತು. ನಮ್ಮ ಹಿಂದಿನ ರಿನವರು ಈ ಬಗೆಯ ಯಾತ್ರೆಗಳಿಂದ ಮಾನಸಿಕ, ಬೌದ್ಧಿಕ ವಿಕಾಸವಾಗುತ್ತದೆಂದು ದ್ದರು. ನೊಂದು ಬೆಂದು ಬಸವಳಿದ ಜೀವಕ್ಕೆ ಶಾಂತಿ ಸಮಾಧಾನಗಳು ಇದರಿಂದ ಾಗುತ್ತದೆಂದು ಭಾವಿಸಿದ್ದರು. ಸತ್ತ ತಮ್ಮ ಪಿತೃಗಳಿಗೆ ಬಂಧುಬಾಂಧವರಿಗೆ ಕಾಣಿಸಲು ಸದವಕಾಶವೆಂದು ತಿಳಿದಿದ್ದರು. (ಈ ಯಾತ್ರೆಯಲ್ಲಿ ಪ್ರಧಾನವಾದುದು ವೇ ಹೊರತಾಗಿ ಪಾರಲೌಕಿಕವಲ್ಲ.) ಕುವೆಂಪುರವರು ಹೇಳುವಂತೆ ರ್ಥಯಾತ್ರೆಗಳಿಂದಲೂ ಪುಣ್ಯಕ್ಷೇತ್ರಗಳಿಂದಲೂ ನೊಂದ ಜೀವಕ್ಕೂ ಬೆಂದ ಕ್ಕೂ ಶಾಂತಿ ಸಮಾಧಾನಗಳು ಮತ್ತೆ ಮತ್ತೆ ದೊರೆಯುತ್ತಿರುವುದರಿಂದಲೇ ಪ್ರಯಾಣದ ಕ್ಲೇಶ, ಕಷ್ಟ, ದುರ್ಗಮತೆ, ಅಪಾಯ, ಕಡೆಗೆ ಸಾವು, ಯಾವುದನ್ನೂ ದೆ ಮತ್ತೆ ಮತ್ತೆ ಅಂತಹ ಪ್ರವಾಸಗಳನ್ನು ಕೈಗೊಳ್ಳುತ್ತಿರುವುದಲ್ಲವೆ?"[೧] ಇದು ಬಗೆಯದಾದರೆ, ಲೌಕಿಕ ಭೋಗ ಭಾಗ್ಯಾದಿಗಳಿಂದ ಒದಗುವ ಸುಖಕ್ಕೂ ದ, ಇವುಗಳಿಂದ ಪಡೆಯಲಾಗದ, ಅನುಪಮವೂ ಅಲೌಕಿಕವೂ ಆದ ಸುಖದ ತ್ಕಾರಕ್ಕಾಗಿ ಮಾಡುವ ತೀರ್ಥಯಾತ್ರೆ ಇನ್ನೊಂದು ಬಗೆಯದು. ಇದನ್ನೇ ಪುರವರು 'ಊರ್ಧ್ವಮುಖಿ' ಪ್ರವಾಸ ಎಂದು ಕರೆದಿರುವರು. ಅದನ್ನು ಅವರು ವಿವರಿಸಿರುವರು: "ಆಧ್ಯಾತ್ಮಿಕ ಭೂಮಿಕೆಯಲ್ಲಿ ಮುಂದುವರಿಯುವುದಕ್ಕಾಗಿ, ವಿಕಾಸಕ್ಕಾಗಿ, ಭಗವಂತನಲ್ಲಿ ಶರಣಾಗತಿ ಮತ್ತು ಸರ್ವಸಮರ್ಪಣ ಬುದ್ಧಿ ಗಾಗಿ, ನಮ್ಮ ಯೋಗಕ್ಷೇಮವನ್ನು ಸಂಪೂರ್ಣವಾಗಿ ಭಗವಂತನ ಾವರೆಗಳಿಗೆ ಅರ್ಪಿಸಿ ಹೃದಯದಲ್ಲಿ ನಿರ್ಭರತೆಯ ಭಾವವನ್ನು ಯುವುದಕ್ಕಾಗಿ, ಅಹಂಕಾರ ವಿಸರ್ಜನೆಗಾಗಿ, ತಿತಿಕ್ಷೆಗಾಗಿ, ಆಧ್ಯಾತ್ಮದಲ್ಲಿ

---

ಸೋಮನಾಥಾನಂದರ 'ಹೈಮಾಚಲ ಸಾನ್ನಿಧ್ಯದಲ್ಲಿ' ಎಂಬ ಕೃತಿಯ ಮುನ್ನುಡಿ, ಪು. ೧೦

ಮುಂದುವರಿದ ಸಿದ್ಧಪುರುಷರ ಸಂಗ ಸಂಸರ್ಗ ಸಾನ್ನಿಧ್ಯ ಸಂಪಾದನೆಗಾಗಿ, ಶತಮಾನಗಳಿಂದಲೂ ಕೋಟ್ಯಂತರ ಭಕ್ತರ ಆರ್ತರ ಸಾಧಕರ ಸಿದ್ಧರ ಕರೆಗೇಳಿ ಮೊರೆಗೇಳಿ ಕೃಪೆಯಿಂದಿಳಿದ ಭಗವದನುಗ್ರಹ ಆವಿರ್ಭೂತವಾಗಿರುವ ಜಾಗ್ರತಮೂರ್ತಿ ಸ್ಥಾನಗಳ ಮಹಿಮಾದೀಪ್ತಿಯಿಂದ ಚೇತನದ ತಮಃಪರಿಹಾರ ಮಾಡಿಕೊಳ್ಳುವ ಅವಿದ್ಯಾವರಣಭಂಗ ಸಾಧನೆಗಾಗಿ ಮುಮುಕ್ಷು ಕೈಕೊಳ್ಳುವ ತೀರ್ಥಯಾತ್ರಾರೂಪವಾದ ಪ್ರವಾಸವ ಊರ್ಧ್ವಮುಖಿ ಎಂಬ ಹೆಸರಿಗೆ ಅರ್ಹವಾಗುತ್ತದೆ."[೧]

ನಮ್ಮಲ್ಲಿ ತೀರ್ಥಯಾತ್ರೆಗೆ ಹೊರಡುವವರ ಸಂಖ್ಯೆ ಅಪಾರ. ತಮ್ಮ ಆ ಯಾತ್ರೆಯ ಅನುಭವಗಳನ್ನು ಬರೆದವರು ಬಹಳ ಕಡಿಮೆ. ಯಾತ್ರೆಗೆ ಹೊರಟವರಲ್ಲಿ ಲೌಕಿಕ ಗುರಿ ಹೊಂದಿದವರ ಸಂಖ್ಯೆಯೇ ಹೆಚ್ಚು. ಕುವೆಂಪುರವರು ಹೇಳುವ ಊರ್ಧ್ವಮುಖಿ ಪ್ರವಾಸ ಕೈಗೊಂಡವರು ಬೆರಳೆಣಿಕೆಯ ಮಂದಿ.

ಸೋಮನಾಥಾನಂದ, ಮಹದೇವಿಯಮ್ಮ, ಡಾ|| ಜಿ.ಎಸ್. ಶಿವರುದ್ರಪ್ಪ ಇವರ ಕೃತಿಗಳು ಈ ಪ್ರಕಾರಕ್ಕೆ ಅನುಪಮವಾದ ಕೊಡುಗೆಗಳು.

ಕನ್ನಡದಲ್ಲಿ ಪ್ರವಾಸ ಸಾಹಿತ್ಯ ರಚನೆ ಆರಂಭಗೊಂಡುದು ತೀರ್ಥಯಾತ್ರಾ ಸಾಹಿತ್ಯದಿಂದಲೇ. ತೀರ್ಥಕ್ಷೇತ್ರ ಹಾಗೂ ಪ್ರಸಿದ್ಧ ದೇವಾಲಯಗಳ ದರ್ಶನಮಾತ್ರದಿಂದ ಇಹ-ಪರ, ಶಾಂತಿ-ಸಮಾಧಾನ ಲಭ್ಯವಾಗುತ್ತದೆ ಎಂದು ನಮ್ಮ ಹಿರಿಯರು ನಂಬಿದ್ದರಿಂದ, ಈ ನಂಬಿಕೆ ಅವರ ಬದುಕಿನಲ್ಲಿ ಆಳವಾಗಿ ಬೇರುಬಿಟ್ಟದ್ದರಿಂದ ಅವರಿಗೆ ಪ್ರವಾಸವೆಂದರೆ ತೀರ್ಥಯಾತ್ರೆ, ಗುಡಿಗುಂಡಾರಗಳ ದರ್ಶನ ಎಂಬ ಭಾವನೆ ಯಾಗಿದ್ದಿತು. ೧೮೮೫ರಲ್ಲಿ ಪ್ರಕಟವಾದ ಸೂರಿ ವಿಘ್ನೇಶ್ವರಶಾಸ್ತ್ರಿ ವೆಂಕಟರಮಣ ಶಾಸ್ತ್ರಿಯವರ **'ದಕ್ಷಿಣಯಾತ್ರಾ ಚರಿತ್ರೆ'** ಸದ್ಯಕ್ಕೆ ಕನ್ನಡದ ಮೊದಲ ಪ್ರವಾಸ ಗ್ರಂಥವಾಗಿದ್ದು, ದಕ್ಷಿಣ ಭಾರತದ ಪವಿತ್ರ ಕ್ಷೇತ್ರಗಳ ಪರಿಚಯವನ್ನು ಇದು ಓದುಗರಿಗೆ ಮಾಡಿಕೊಡುತ್ತದೆ. ಈ ಕೃತಿ ನಮ್ಮ ಹಿಂದಣ ತಲೆಮಾರಿನವರ ಭಾವನೆಗಳನ್ನು ಸ್ವಲ್ಪ ಮಟ್ಟಿಗೆ ಪ್ರತಿನಿಧಿಸುತ್ತದೆಂದರೆ ತಪ್ಪಾಗಲಾರದು.

ಸ್ವಾಮಿ ಸೋಮನಾಥಾನಂದರ **'ಹೈಮಾಚಲ ಸಾನ್ನಿಧ್ಯದಲ್ಲಿ'** ಎಂಬ ಕೃತಿಯಲ್ಲಿ ಹರಿದ್ವಾರದಿಂದ ಬದರಿಗೆ ನಡೆಸಿದ ತೀರ್ಥಯಾತ್ರೆಯ ಅನುಭವ ನಿರೂಪಣೆ ಬಂದಿದೆ. ಸ್ವಾಮಿ ಸೋಮನಾಥಾನಂದರು ಹಿಂದೂಧರ್ಮದ ಸಾರಸರ್ವಸ್ವವನ್ನು ವೈಚಾರಿಕ ಹಿನ್ನೆಲೆಯಲ್ಲಿ ಅರ್ಥೈಸಿಕೊಂಡ ಜ್ಞಾನಿಗಳು; ಪರಮ ವಿರಕ್ತರು; ಅರ್ಥವಿಲ್ಲದ ಸಂಪ್ರದಾಯ, ಮೂಢ ಆಚಾರ, ಅಂಧಶ್ರದ್ಧೆಗಳನ್ನು ಒಪ್ಪದ ಸನಾತನಿಗಳು, ಸುಸಂಸ್ಕೃತರು.

---

೧. ಅದೇ, ಪು. ೮-೯

ಅವರ ಈ ಪ್ರವಾಸ ಕಥನವು ಕುವೆಂಪುರವರು ಕರೆದಿರುವಂತೆ 'ಪವಿತ್ರಯಾತ್ರೆಯ ತೀರ್ಥಸಾಹಿತ್ಯ.'

ಈ ಪ್ರವಾಸ ಕಥನದಲ್ಲಿ ಹಿಮಾಲಯದ ಮನೋಹರ ಪ್ರಕೃತಿ ದೃಶ್ಯಗಳ ವರ್ಣನೆಗಳು ಪ್ರತಿಭಾವಂತ ಕವಿಯೋರ್ವನ ಅಂತರಂಗದಿಂದ ಹೊಮ್ಮಿ ಬಂದ್ಮಂತಿವೆ. ಈ ವರ್ಣನೆಗಳು ರಮ್ಯನುಡಿಚಿತ್ರಗಳನ್ನು ಅಲ್ಲಲ್ಲಿ ಬಿಡಿಸಿವೆ. ತಿಳಿಯಾದ ಹಾಸ್ಯದ ಬಳಕೆ, ವಿನೋದದ ಮರೆಯಲ್ಲಿನ ತೀಕ್ಷ್ಣವಲ್ಲದ ವಿಡಂಬನೆ, ಪವಿತ್ರ ಕ್ಷೇತ್ರಗಳಿಗೆ ಸಂಬಂಧಿಸಿದ ಚರಿತ್ರೆ, ಸ್ಥಳಪುರಾಣಗಳ ಸಂಬಂಧವಾದ ವಿವರಣೆ, ಸಂದರ್ಭೋಚಿತವಾಗಿ ಮಾಡಿರುವ ಸ್ತುತಿ ಸ್ತೋತ್ರಗಳು ಪ್ರವಾಸದ ಸ್ವಾರಸ್ಯವನ್ನು ಮತ್ತಷ್ಟು ಹೆಚ್ಚಿಸಿವೆ.

ಸ್ವಾಮಿ ಸೋಮನಾಥಾನಂದರ **'ಅಮರನಾಥ ಯಾತ್ರೆ'**ಯು ತನ್ನ ಹೃದಯಂಗಮ ನಿರೂಪಣೆಯಿಂದ ನಮ್ಮನ್ನೂ ಅಮರನಾಥ ಯಾತ್ರೆ ಮಾಡಿಸುತ್ತದೆ. "ಪವಿತ್ರ ತೀರ್ಥಕ್ಷೇತ್ರಗಳ ಬಗೆಗಿನ ಲೇಖಕರ ಹಿತಮಿತ ಮೃದು ವರ್ಣನೆಗಳಿಂದ ನಾವು ಭಾವಪರವಶರಾಗುತ್ತೇವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಲೇಖಕರ ಸುಸಂಸ್ಕೃತ ಭಗವದ್ಭಕ್ತಿನಿಷ್ಠೆ ಕವಿಸಹಜ ನಿರ್ಮಲಾಂತಃಕರಣ -ಇವುಗಳ ಪರಿಚಯ ಓದುಗರಿಗಾಗುತ್ತದೆ. ಪ್ರತಿಯೊಂದು ಸನ್ನಿವೇಶದಲ್ಲಿಯೂ ಭಾರತೀಯ ದೃಷ್ಟಿಯೇನೆಂಬುದನ್ನು ಕಂಡುಕೊಳ್ಳಲು ಯತ್ನಿಸಿದ್ದಾರೆ..."[೧]

ಸ್ವಾಮಿ ಜ್ಞಾನ ಘನಾನಂದರ **'ಕೈಲಾಸ-ಮಾನಸ-ಸರೋವರ ಯಾತ್ರೆ'**ಯು ನೀಲಗಿರಿಯಿಂದ ಹಿಮಗಿರಿಯವರೆಗಿನ ಯಾತ್ರೆಯ ವಿಶಿಷ್ಟ ಅನುಭವವನ್ನು ಪರಿಚಯಿಸುವ ಕೃತಿಯಾಗಿದೆ.

ಕೃಷ್ಣನಾರಾಯಣ ಗೋಸಾವಿಯವರ **'ಹಿಮಾಲಯದರ್ಶನ'**ವು ಅವರ ಹಿಮಾಲಯ ಸಂಚಾರದ ಅದ್ಭುತ ಅನುಭವಗಳನ್ನು ಮನೋಜ್ಞವಾಗಿ ತಿಳಿಸುವ ಕೃತಿಯಾಗಿದೆ. ಗೋಸಾವಿಯವರು ಇಪ್ಪತ್ತೈದಕ್ಕೂ ಹೆಚ್ಚಿನ ಬಾರಿ ಹಿಮಾಲಯದ ಯಾತ್ರೆ ಕೈಗೊಂಡಿರುವರು. ಅವರ ಸಂಚಾರದಲ್ಲಿ ಅನೇಕ ಸಲ ಸಾವು-ಬದುಕಿನ ಪ್ರಸಂಗಗಳು ಬಂದಿವೆ. ಆದಾಗ್ಯೂ ಅವರು ಪ್ರವಾಸ ನಿಲ್ಲಿಸಲಿಲ್ಲ. ತಮ್ಮ ಇಡೀ ಬದುಕನ್ನೆ ಈ ಯಾತ್ರೆಗಾಗಿ ಮೀಸಲಿಟ್ಟಿರುವ ಗೋಸಾವಿಯವರು ತಮ್ಮ 'ಹಿಮಾಲಯ ದರ್ಶನ'ದಲ್ಲಿ ವಿಪುಲವಾದ ವಿಷಯ ಸಂಗ್ರಹಣೆ ಮಾಡಿಕೊಟ್ಟಿರುವರು. ಅವರ ಅನುಭವ

---

೧. ಬಿ.ಎ. ವಿವೇಕ ರೈ: ಕನ್ನಡದಲ್ಲಿ ಪ್ರವಾಸ ಸಾಹಿತ್ಯ: ಪ್ರಬುದ್ಧ ಕರ್ನಾಟಕ ೫೨.೩, ಪು. ೧೦೦.

ನಿರೂಪಣೆ ಅತ್ಯಂತ ಅಚ್ಚುಕಟ್ಟಾಗಿದ್ದು, ಹಿಮಾಲಯ ದರ್ಶನಾಕಾಂಕ್ಷಿಗಳಿಗೆ ಹೆಚ್ಚಿನ ಮಾರ್ಗದರ್ಶನ ನೀಡುವಂತಿದೆ.

ಜಿ.ಎ. ನರಸಿಂಹಮೂರ್ತಿಯವರ **'ಆಸೇತು ಹಿಮಾಚಲಯಾತ್ರೆ'**ಯು ಧನುಷ್ಕೋಟ ಹಾಗೂ ಹಿಮಾಚಲ ಈ ಎರಡು ಮೇರೆಗಳ ನಡುವಿರುವ ಪುಣ್ಯಕ್ಷೇತ್ರಗಳ ಪರ್ಯಟನಾನುಭವ ಕಥನವಾಗಿದೆ. ಈ ಪುಣ್ಯಕ್ಷೇತ್ರಗಳಿಗೆ ಹೋಗುವ ಆಸ್ತಿಕ ಭಕ್ತರು ಹೇಗೆ ಸಿದ್ಧತೆ ನಡೆಸಿಕೊಳ್ಳಬೇಕು, ಹೀಗೆ ಪ್ರಯಾಣ ಮಾಡಬೇಕು, ನೋಡಲು ಏನೇನಿದೆ, ಪ್ರೇಕ್ಷಣೀಯ ಸ್ಥಳಗಳು ಎಷ್ಟೆಷ್ಟು ಅಂತರದಲ್ಲಿವೆ? -ಹೀಗೆ ಯಾತ್ರಾರ್ಥಿಗಳಿಗೆ ಬೇಕಾಗುವ ಸಕಲ ವಿವರಗಳನ್ನು ಲೇಖಕರು ಶ್ರಮವಹಿಸಿ ಪೂರೈಸಿರುವರು. ಇದರಲ್ಲಿ ರೈಲು, ಬಸ್ಸು, ಪಾದಚಾರಿ ಮಾರ್ಗಗಳನ್ನೂ, ನದಿ ಹಾಗೂ ಪರ್ವತ ಶ್ರೇಣಿಗಳನ್ನೂ ಸೂಚಿಸುವ ನಕ್ಷೆ (Map) ಇರುವುದರಿಂದ ಪ್ರವಾಸಿಗಳಿಗೆ ಅನುಕೂಲವಾಗಿದೆ. ಲೇಖಕರು ಪುಸ್ತಕದ ಮೊದಲ ಅನುಬಂಧದಲ್ಲಿ ಕೇದಾರನಾಥ್, ಬದರೀನಾಥ್, ಯಮುನೋತ್ರಿ, ಗಂಗೋತ್ರಿ-ಈ ಚತುರ್ಧಾಮಗಳಿಗೆ ಹಾಗೂ ಕೈಲಾಸ ಮತ್ತು ಮಾನಸ ಸರೋವರಗಳಿಗೆ ಹೋಗಬಯಸುವವರಿಗೆ ಮಾರ್ಗಸೂಚನೆಯನ್ನು ಕೊಟ್ಟಿರುವರು. ಕೈಲಾಸ ಮತ್ತು ಮಾನಸ ಸರೋವರ ಯಾತ್ರಾರ್ಥಿಗಳಿಗೆ ಮಾರ್ಗದ ಹವಾಸೂಚನೆ, ದೊರೆಯುವ ಆಹಾರ ಪದಾರ್ಥ, ಸಿಗುವ ಸೌಕರ್ಯಗಳು -ಇವುಗಳ ಬಗೆಗೆ ವಿವರ ನೀಡಿರುವರು. ಎರಡನೆಯ ಅನುಬಂಧದಲ್ಲಿ ಬೆಂಗಳೂರಿನಿಂದ ಹೊರಟು ಹಿಮಾಲಯ, ರಾಮೇಶ್ವರಗಳ ಯಾತ್ರೆ ಮುಗಿಸಿ ಮರಳಿ ಬೆಂಗಳೂರಿಗೆ ಬರುವವರೆಗೆ ಕ್ರಮವಾಗಿ ಯಾತ್ರಿಕರಿಗೆ ದೊರೆಯುವ ಅನುಕೂಲಗಳು ಅಂದರೆ-ಛತ್ರಗಳು, ಸ್ಟೇಷನ್‌ನಿಂದ ಇರುವ ದೂರ, ವಾಹನ ಸೌಕರ್ಯ ಹಾಗೂ ಅದಕ್ಕೆ ತಗಲಬಹುದಾದ ಖರ್ಚು, ಛತ್ರದ ಬಾಡಿಗೆ ಇತ್ಯಾದಿ ಮುಖ್ಯ ವಿವರಗಳನ್ನು ಕೊಡಲಾಗಿದೆ. ಮೂರನೆಯ ಅನುಬಂಧದಲ್ಲಿ ನಾನಾ ಸ್ಥಳಗಳ ದೂರ ಮತ್ತು ದರಗಳ ಪಟ್ಟಿ ಕೊಡಲಾಗಿದೆ. ಒಟ್ಟಿನಲ್ಲಿ ಈ ಕೃತಿ ಆಸೇತು ಹಿಮಾಲಯ ಪ್ರವಾಸ ಮಾಡುವವರಿಗೆ ಮಾರ್ಗದರ್ಶಿಯಾಗಿ ಸಹಾಯ ನೀಡುತ್ತದೆ. ಇಷ್ಟು ವಿಪುಲ ಮಾಹಿತಿಗಳಿಂದ ಬಂದಿರುವ ಕೃತಿ ಇದೊಂದೇ ಎಂದರೆ ಅತಿಶಯೋಕ್ತಿಯಾಗಲಾರದು.

ಡಾ|| ಜಿ.ಎಸ್. ಶಿವರುದ್ರಪ್ಪನವರ ಪ್ರವಾಸ ಕಥನಗಳಲ್ಲಿ ವಿಶಿಷ್ಟವಾದುದು, ಹೆಚ್ಚು ಕಾವ್ಯಾತ್ಮಕವಾದುದು **'ಗಂಗೆಯ ಶಿಖರಗಳಲ್ಲಿ'** ಎಂಬ ಕೃತಿ. ೧೯೮೪ರ ಮೇ ತಿಂಗಳಲ್ಲಿ ಹಿಮಾಲಯದ ನಾಲ್ಕು ಧಾಮಗಳೆಂದು ಹೆಸರಾದ ಗಂಗೋತ್ರಿ, ಯಮುನೋತ್ರಿ, ಬದರೀ, ಕೇದಾರಗಳಿಗೆ ಹತ್ತು ದಿನಗಳ ಕಾಲ ಕೈಗೊಂಡ ಪ್ರವಾಸವನ್ನು ಕುರಿತ ಒಂದು ಪುಟ್ಟ ಕಥನವಿದು. ಲೇಖಕರೇ ಹೇಳಿರುವಂತೆ "ಈ ಕಥನ ವಯ್ಯಕ್ತಿಕವಾದ

ಯಾವ ವ್ಯವಹಾರವನ್ನೂ ದಾಖಲಿಸದೆ, ಕೇವಲ ನನಗೆ ಹಾಗೂ ನಾನು ಕಂಡ ನೋಟಗಳಿಗೆ, ನಾನು ತೋರಿದ ಪ್ರತಿಕ್ರಿಯೆಗಳಿಗೆ ಮಾತ್ರ ಸೀಮಿತವಾಗಿದೆ."

ಹರಿದ್ವಾರದಿಂದ ಪ್ರವಾಸಕಥನ ಪ್ರಾರಂಭವಾಗುತ್ತದೆ. ಗಂಗಾನದಿಯ ಬ್ರಹ್ಮಕುಂಡದಲ್ಲಿ ನಡೆಯುವ ಆರತಿಯ ಕಾರ್ಯಮಯವಾದ ವರ್ಣನೆ ಮೊದಲಿಗೇ ಬರುತ್ತದೆ. ಹರಿದ್ವಾರದ ಪ್ರಾಚೀನ ಉಲ್ಲೇಖ, ಮಹಾಭಾರತದಲ್ಲಿ ಹರಿದ್ವಾರವನ್ನು ಗಂಗಾದ್ವಾರವೆಂದು ಹಲವು ಸಲ ಕರೆದಿರುವುದು, ಅದರಲ್ಲಿನ ದ್ರೋಣಾಚಾರ್ಯರ ಹುಟ್ಟಿನ ಪ್ರಸಂಗ, ಅರ್ಜುನ-ಉಲೂಪಿಯರ ಪ್ರೇಮಪ್ರಸಂಗ ಗಂಗಾದ್ವಾರದಲ್ಲಿಯೇ ನಡೆದಿರುವುದು -ಇವುಗಳ ನೆನಪು ಮಾಡಿಕೊಡುವರು. ಅರ್ಚಕರು ಹರಿಯುವ ಗಂಗಾನದಿಗೆ ನಾಲ್ಕಾರು ಎತ್ತರದ ದೀಪಾರತಿಯನ್ನು ಹಿಡಿದು, ಇಡೀ ನದಿಯನ್ನೇ ಅರ್ಚಿಸುವ ಈ ಅಪೂರ್ವ ದೃಶ್ಯವನ್ನು ಕಂಡ ಲೇಖಕರು "ದೇವಸ್ಥಾನದ ಆವರಣದೊಳಗೆ ನಡೆಯುವ ಪೂಜೆಯ ಸಾಂಪ್ರದಾಯಿಕ ಕಟ್ಟನ್ನು ಕಳಚಿಕೊಂಡು ಮನುಷ್ಯನ ಆರಾಧನೆ ಈ ಮುಕ್ತವಾದ ನೆಲೆಗೆ ಬಂದು, ಹರಿಯುವ ನದಿಯನ್ನೇ ದೇವರೆಂದು ಪೂಜೆ ಸಲ್ಲಿಸುವುದರ ಮೂಲಕ ಮತ್ತೆ ಮನುಷ್ಯತ್ವ ತನ್ನ ಪ್ರಪ್ರಾಚೀನತೆಯನ್ನು ಒಂದೇ ನಗೆತಕ್ಕೆ ತಲುಪಿದ ಭಾವನೆ ನನಗೆ ಉಂಟಾಯಿತು. ಪ್ರಾಚೀನ ಮಾನವನು ನಿಸರ್ಗದೊಂದಿಗೆ ಒಂದು ಕಾಲಕ್ಕೆ ಸ್ಥಾಪಿಸಿಕೊಂಡ ಈ ಸಹಜ ಸಂಬಂಧ, ಅನಂತರದ ಚರಿತ್ರೆಯಲ್ಲಿ ಕೇವಲ ಸಂಪ್ರದಾಯವಾಗಿ ಸ್ಥಗಿತಗೊಂಡು ತನ್ನ ಅರ್ಥವನ್ನೆ ಕಳೆದುಕೊಂಡಿತ್ತು; ಆದರೆ ಇದೀಗ, ಇಂಥ ಆಚರಣೆಗಳ ಸಂದರ್ಭದಲ್ಲಿ, ಮನುಷ್ಯ ಮರೆತುಹೋದ, ಮತ್ತು ಪ್ರಾಚೀನವಾದ ತನ್ನ ಹಾಗೂ ನಿಸರ್ಗದ ನಡುವಣ ಸಹಜ ಸಂಬಂಧವನ್ನು ಮತ್ತೆ ಹೀಗೆ ನೆನಪು ಮಾಡಿಕೊಳ್ಳುವುದರ ಮೂಲಕ ಅಥವಾ ಸ್ಥಾಪಿಸಿಕೊಳ್ಳುವುದರ ಮೂಲಕ ಆ ದಿವ್ಯಾನುಭವವನ್ನು ಪುನರಭಿನಯಿಸುತ್ತಿದ್ದಾನೆ ಅಥವಾ ಪುನರನುಭವಿಸುತ್ತಿದ್ದಾನೆ ಎಂದು ಅನ್ನಿಸಿತು. ಈ ನದಿ, ಈ ಬೆಟ್ಟ, ಈ ಬಯಲು, ಈ ಆಕಾಶ ಇವು ನಿಜವಾದ ದೇವರಲ್ಲದೆ, ಗುಡಿಯೊಳಗಿನ ನಾಲ್ಕು ಗೋಡೆಗಳ ನಡುವೆ, ಉಸಿರು ಕಟ್ಟಿಸುವ ಧೂಪ-ದೀಪ-ನೈವೇದ್ಯ-ಮಂತ್ರಾದಿಗಳ ಮಧ್ಯೆ ಗರ್ಭಗುಡಿಯ ಮಂದವಾದ ಮಂಕು ಬೆಳಕಿನ ವಾತಾವರಣದಲ್ಲಿ, ವಿಗ್ರಹವನ್ನು ದೇವರೆಂದು ಭಾವಿಸಿ, ಪೂಜಿಸುವ ಪ್ರವೃತ್ತಿ ಎಷ್ಟೊಂದು ಸಂಕುಚಿತವಾದದ್ದು, ಈ ಮುಕ್ತ ನಿಸರ್ಗಾರಾಧನೆಯ ಮುಂದೆ!" ಎಂದು ವಿಚಾರಮಾಡುವರು.

ಹರಿದ್ವಾರದಿಂದ ಮುಂದಕ್ಕೆ ಒಂದೊಂದು ಮುಖ್ಯ ಸ್ಥಳಕ್ಕೂ ತನ್ನದೇ ಆದ ಪುರಾಣ ಕಥೆಗಳಿವೆ. ಇಲ್ಲಿ ಪುರಾಣ, ಚರಿತ್ರೆ, ಪರಂಪರಾಗತ ನಂಬಿಕೆ -ಇವು ಒಂದರ ಜೊತೆಗೊಂದು ಬಿಡಿಸಲಾಗದಂತೆ ಹೆಣೆದುಕೊಂಡಿವೆ. ಹಿಮಾಲಯದ ನಾಲ್ಕು

ಧಾಮಗಳಿಗೆ ಹೋಗುವ ಮಾರ್ಗದಲ್ಲಿಯೇ (ಇದನ್ನು ಉತ್ತರ ಖಂಡವೆಂದೂ, ಪುರಾಣಗಳಲ್ಲಿ ಕೇದಾರಖಂಡ ಕಿನ್ನರ ದೇಶವೆಂದೂ, ವೇದಗಳ ಕಾಲಾನಂತರ ಬ್ರಹ್ಮರ್ಷಿದೇಶವೆಂದೂ, ಮಹಾಭಾರತದಲ್ಲಿ ಪಾಂಚಾಲದೇಶವೆಂದೂ ಕರೆಯಲಾಗಿದೆ) ಪಾಂಡವರು ಸ್ವರ್ಗಾರೋಹಣ ಮಾಡಿದರೆಂದು ಹೇಳುತ್ತ, ಟ್ಯಾಕ್ಸಿಯಲ್ಲಿ ಕೂತು ಪರ್ವತದ ಏರಿಳಿವುಗಳಲ್ಲಿ ಪ್ರಯಾಣ ಮಾಡುತ್ತಿದ್ದ ಲೇಖಕರು ತಾವು ಕಂಡ ಸ್ವರ್ಗೀಯ ಸಮಾನವಾದ ಈ ನಿಸರ್ಗ ವೈಭವವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿರುವರು. ಕವಿಮನದ ಆನಂದಾನುಭೂತಿಯನ್ನು ಅವರ ಈ ಮಾತುಗಳು ಸೆರೆಹಿಡಿದಿವೆ: "(ಟ್ಯಾಕ್ಸಿಯು) ಮುಂದಕ್ಕೆ ಏರುತ್ತಾ ಇಳಿಯುತ್ತಾ ಹೋದಹಾಗೆ, ತಟಕ್ಕನೆ ಒಂದರ ಹಿಂದೊಂದು ಪರ್ವತ ಪಂಕ್ತಿಗಳು ಪ್ರತ್ಯಕ್ಷವಾಗುತ್ತಿದ್ದವು. ಹೋದ ಹೋದಂತೆ ಇಕ್ಕೆಲಗಳಲ್ಲಿ ನಮ್ಮನ್ನು ತಬ್ಬಿ ಹಿಡಿದುಕೊಂಡಂತಿದ್ದ ಪರ್ವತ ಪಂಕ್ತಿಗಳು ಥಟ್ಟನೆ ಮಾಯವಾಗಿ, ಮತ್ತೆ ಬೇರೊಂದು ದಿಕ್ಕಿನಲ್ಲಿ ಮೈಲಿ ಮೈಲಿಗಳಗಲಕ್ಕೆ ತೆರೆದುಕೊಳ್ಳುವ ಕಂದರಗಳೂ, ಅವುಗಳ ನಡುವೆ ಮಧ್ಯಾಹ್ನದ ಬಿಸಿಲಲ್ಲಿ ಥಳಥಳಿಸಿ ಹರಿಯುವ ಎಷ್ಟೋ ಹೊಳೆಗಳೂ ನಮ್ಮನ್ನು ಸೆಳೆದುಕೊಳ್ಳುತಿದ್ದವು. ಮತ್ತೆ ಇದ್ದಕ್ಕಿದ್ದಂತೆ ಅಮರಿಕೊಳ್ಳುವ ಬೆಟ್ಟದ ಗೋಡೆಗಳಲ್ಲಿ, ಈ ಎತ್ತರದ ಬೆಟ್ಟಗಳನ್ನು ಹೇಗೋ ಓಲೈಸಿಕೊಂಡು, ಅವುಗಳು ಕನಿಕರದಿಂದ ಅನುಗ್ರಹಿಸಿದ ಅವಕಾಶಗಳಲ್ಲಿ, ತೆವಳುತ್ತಿದ್ದ ರಸ್ತೆಯಂಚಿಗೇ, ಆಳವಾಗಿ ಬಾಯ್ದೆರೆದ ಕಮರಿಗಳೂ, ಆ ಕಮರಿಗಳ ತಳದಲ್ಲಿ ಕನವರಿಸುವ ಒಂದೋ ಎರಡೋ ಮನೆಗಳೂ ಗೋಚರಿಸುತ್ತಿದ್ದವು. ಮತ್ತೆ ಆ ಕಮರಿಗಳ ತಳದಿಂದ ನಿಧಾನವಾಗಿ, ಧೀರವಾಗಿ ಮೇಲಕ್ಕೆ ಮೈಕೊಡವಿಕೊಂಡು ಕೋಡುಗಳನ್ನೆತ್ತಿ ನಿಲ್ಲುವ ಬೃಹದಾಕಾರದ ಪರ್ವತಗಳ ತುಂಬಾ ದೇವದಾರು ವೃಕ್ಷಗಳು ಕೆಲವಡೆ ದಟ್ಟವಾಗಿ ಮತ್ತೆ ಕೆಲವಡೆ ವಿರಳವಾಗಿ ಬೆಳೆದುಕೊಂಡಿದ್ದವು. ಮತ್ತೆ ಕೆಲವಡೆ ಏನೊಂದೂ ಬೆಳೆಯದ ನಿರ್ಭಾವ ಬೃಹದಾಕಾರಗಳು! ಇಂಥ ಬೋಳು ಬೆಟ್ಟಗಳ ಮೈಯನ್ನು, ನೆತ್ತಿಯಿಂದ ತಳದವರೆಗೆ ಕೃಷಿಗಾಗಿ ಮೆಟ್ಟಿಲು ಮೆಟ್ಟಿಲಾಗಿ ಅಗಲಕ್ಕೆ ಕಡಿದು ರೂಪಿಸಿದ ಸಾಹಸವೂ ಬೆರಗುಗೊಳಿಸುವಂತಿತ್ತು..."

ಹನುಮಾನ್ ಚಟ್ಟಿಯಿಂದ ಯಮುನೋತ್ರಿಗೆ ಕಂಡಿಯಲ್ಲಿ ಕುಳಿತು ಮೂರು ನಾಲ್ಕು ಅಡಿ ಅಗಲದ ಅತ್ಯಂತ ಅಪಾಯಕಾರಿಯಾದ ದಾರಿಯಲ್ಲಿ ನಡೆಸಿದ ಪ್ರಯಾಣದ ವರ್ಣನೆಯೂ ಚೇತೋಹಾರಿಯಾಗಿದೆ. ಗಂಗೋತ್ರಿಯಲ್ಲಿ ಕಂಡ ಗಂಗೆಯ ಬಗೆಗಿನ ಉಲ್ಲೇಖಗಳು, ಭಾರತೀಯರ ಮನದಲ್ಲಿ ಗಂಗೆಯ ಬಗೆಗಿನ ಭಾವನಾತ್ಮಕ ಸಂಬಂಧಗಳನ್ನು ಕುರಿತು ಲೇಖಕರು ವಿಸ್ತಾರವಾಗಿಯೇ ಪ್ರಸ್ತಾಪಿಸಿರುವರು. ಗಂಗೋತ್ರಿಯ ಶಿಖರ ಸಮುಚ್ಚಯಗಳು ಧ್ಯಾನದಲ್ಲಿ ತೊಡಗಿದ ದೇವತಾತ್ಮಗಳಂತೆ

ಅವರಿಗೆ ಭಾಸವಾಗುವುದು. "ನಿರಭ್ರವಾದ ನೀಲಿಯ ಹಿನ್ನೆಲೆಯಲ್ಲಿ ಹಾಲು-ಬಿಳಿ ಮಂಜಿನ ಶಿಖರಗಳನ್ನು ಚಾಚಿಕೊಂಡ ಏರಿಳಿತಗಳ ಮಧ್ಯೆ, ಗಂಗೆ ಉಗಮಿಸುವ ಶಿವಲಿಂಗ ಎಂಬ ಹೆಸರಿನ ಶಿಖರ, ಭಸ್ಮೋದ್ಧೂಳಿತವಾದ ಶಿವನಂತೆ ಧ್ಯಾನ ಮಗ್ನವಾಗಿತ್ತು" ಎನ್ನುವರು. ಗಂಗಾವತರಣದ ಕಥೆ ಶಿವಪರವಾಗಿ ಹಾಗೂ ವಿಷ್ಣುಪರವಾಗಿ ಪುರಾಣಗಳಲ್ಲಿ ಹೇಗೆ ಒಡಮೂಡಿದೆ ಎಂಬುದನ್ನೂ ಗಂಗೆಯ ಅಹಂಕಾರ-ರಭಸಗಳು ಶಿವನ ಜಟಾಜೂಟದ ತಡೆಯಿಂದ ಹೇಗೆ ದಮನಗೊಂಡವೆಂಬ ಸಂಗತಿಯನ್ನೂ ಪುರಾಣ ಕಾವ್ಯ ಕಲೆಗಳು ತಮ್ಮ ವಸ್ತುವನ್ನಾಗಿ ಮಾಡಿಕೊಂಡಿವೆ ಎಂಬುದನ್ನು ವಿಸ್ತಾರವಾಗಿ ತಿಳಿಸಿರುವರು. ಸಂಜೆಯ ಇಳಿಬಿಸಿಲಿನಲ್ಲಿ ಆ ಭವ್ಯ ಶಿಖರಗಳು ಚಿನ್ನದ ಕಲಶಗಳಾಗಿ ರೂಪುಗೊಳ್ಳುತ್ತಿದ್ದುದನ್ನು ಕಂಡ ಲೇಖಕರು ಶಿಖರಗಳ ಹಿಂದೆ ಶಿಖರಗಳು ಕ್ರಮ ಕ್ರಮೇಣ ಹೊನ್ನ ಬಣ್ಣದಿಂದ ಹಳದಿಯಾಗಿ, ಆ ಹಳದಿ ಬೂದು ಬಣ್ಣವಾಗಿ, ನಿರಭ್ರವಾದ ಆಕಾಶ ಪಟಲದಲ್ಲಿ ಗಂಭೀರ ಮೌನವೊಂದನ್ನು ಘನೀಭವಿಸುತ್ತಿದ್ದವೆನ್ನುವರು.

ಗಂಗೋತ್ರಿಯಿಂದ ಕೇದಾರನಾಥಕ್ಕೆ ಹೋಗುವ ಮಾರ್ಗದಲ್ಲಿ ಕಂಡುಬಂದ ಗುಡ್ಡಗಾಡಿನ ಸಾಮಾನ್ಯ ಜನದ ಚೆಲುವು ಲೇಖಕರನ್ನು ಬೆರಗಾಗಿಸಿದೆ. ಜಲಪಾತವೊಂದರ ಬಳಿ ನೀರಿನ ಬಿಂದಿಗೆ ಹಿಡಿದು ನಿಂತ ಸದೃಢ ಶರೀರದ, ದುಂಡುಮುಖದ, ಹೊನ್ನಿನ ಬಣ್ಣದ ಚೆಲುವೆಯೋರ್ವಳನ್ನು ನೋಡಿದ ಲೇಖಕರಿಗೆ ಶಿವನನ್ನು ಮದುವೆಯಾದ ಪಾರ್ವತಿಯೂ ಹೀಗೆಯೇ ಇದ್ದಿರಬೇಕೆಂದು ಅನ್ನಿಸಿತಂತೆ. ಗೌರಿಕುಂಡದಿಂದ ಕೇದಾರಕ್ಕೆ ಹೋಗಬೇಕಾದರೆ ಸುಮಾರು ಐದುಸಾವಿರ ಅಡಿಗಳೆತ್ತರಕ್ಕೆ ಏರಬೇಕು. ಈ ಏರುವೆಯ ದಾರಿ, ಉದ್ದಕ್ಕೂ ಮಂದಾಕಿನೀ ನದಿಯ ಅಂಚಿನಲ್ಲೇ ಸಾಗುತ್ತದೆ. ವಿದೇಶೀಯ ಯುವಕ ಯುವತಿಯರು ಅಲ್ಲಲ್ಲಿ ನಿಂತು, ಪ್ರಪಾತದಲ್ಲಿ ನೊರೆಗರೆದು ಉರುಳುವ ಪ್ರವಾಹದತ್ತ ಕಣ್ಣಾಗುತ್ತ, ಬೆಟ್ಟದೆತ್ತರದಿಂದ ಹಾರಿಳಿದು ದುಮುಕಿ ನದಿಗೆ ಸೇರುವ ಜಲಪಾತಗಳ ಎದುರು ಮುಗ್ಧವಾಗಿ ನಿಲ್ಲುತ್ತ, ಶಿಖರಗಳನ್ನು ಕಂಡಲ್ಲಿ ತಟ್ಟನೆ ಕೂತು ಅದರ ಸೊಗಸನ್ನು ಆಸ್ವಾದಿಸುತ್ತ ಬರುತ್ತಿದುದನ್ನೂ, ನಮ್ಮ ಜನರು ಆಯಾಸ ಪರಿಹಾರಕ್ಕೆ ನಿಂತಾಗ ಅಥವಾ ಕೂತಾಗ, ಎರಡೂ ಕಡೆಯ ಪರ್ವತದ ರುದ್ರ ಸೌಂದರ್ಯವನ್ನು ಕಣಿವೆಯಲ್ಲಿ ಉಲ್ಲಾಸವನ್ನು ಚಿಮ್ಮಿಸುತ್ತಾ ಹರಿಯುವ ಮಂದಾಕಿನಿಯ ಪ್ರವಾಹವನ್ನೂ ಕುತೂಹಲ ವಿಸ್ಮಯ ಗೌರವಗಳಿಂದ ನೋಡುವುದನ್ನೂ ಗಮನಿಸುವ ಲೇಖಕರು ಶತ ಶತಮಾನಗಳಿಂದಲೂ ಇಷ್ಟೊಂದು ದೇಹಶ್ರಮವನ್ನೂ ಲೆಕ್ಕಿಸದೆ ಗಂಗೋತ್ರಿ ಯಮುನೋತ್ರಿ ಬದರಿ ಕೇದಾರಗಳಂಥ ಪರ್ವತಾಗ್ರದ ತೀರ್ಥಕ್ಷೇತ್ರಗಳಿಗೆ ಯಾಕೆ ಹೀಗೆ ಜನ ಯಾತ್ರೆ ಬರುತ್ತಾರೆ? ಕೇವಲ ದೇವರ ದರ್ಶನಕ್ಕೆ?

ಪುಣ್ಯ ಸಂಪಾದನೆಗೆ? ಎಂದು ಪ್ರಶ್ನಿಸಿಕೊಂಡು ವಿಚಾರ ಮಾಡುತ್ತಾ ಈ ಯಾತ್ರೆಗಳಿಗೆ ಬೇರೊಂದು ಉದ್ದೇಶವಿರುವುದನ್ನು ಕಂಡುಕೊಳ್ಳುವರು. "ಒಂದು ಕಾಲಕ್ಕೆ ನಮಗೂ ಈ ನಿಸರ್ಗಕ್ಕೂ ಇದ್ದಂಥ ದಟ್ಟವಾದ ಸಂಬಂಧ ನಾವು ನಾಗರಿಕರಾಗುತ್ತಾ, ಆಗುತ್ತಾ ಎಲ್ಲೋ ಬಿರುಕು ಬಿಟ್ಟುಕೊಂಡು, ನಮಗೂ ಅದಕ್ಕೂ ಒಂದು ಕಂದಕವೇರ್ಪಟ್ಟಂತೆ ತೋರುತ್ತದೆ. ಈ ಬಗೆಯ ತೀರ್ಥಯಾತ್ರೆಗಳ ನೆವದಿಂದ ಮನುಷ್ಯ, ತನ್ನ ಅಸ್ತಿತ್ವದ ಒಂದು ಭಾಗವಾದ ಈ ಮಹತ್ತಾದ ನಿಸರ್ಗದೊಂದಿಗೆ, ಎಂದೋ ಆಕಸ್ಮಾತ್ತಾಗಿ ಕಳೆದುಕೊಂಡ ಸಂಬಂಧವನ್ನು ಮತ್ತೆ ಸ್ಥಾಪಿಸಿಕೊಳ್ಳುವ ಪ್ರಯತ್ನದಲ್ಲಿ ಇದ್ದಾನೇನೊ" ಎಂದು ವಿಚಾರಮಾಡುವರು.

ಕೇದಾರನಾಥನ ದರ್ಶನಕ್ಕೆ ಹೋದಾಗ ಲೇಖಕರಿಗೆ ದೇವಸ್ಥಾನವು ಮುಂಜಾನೆಯ ಚಿನ್ನದ ಬೆಳಕಿನಲ್ಲಿ ಆಗತಾನೇ ಕೆತ್ತಿ ತಂದು ಇರಿಸಿದ ಶಿಲ್ಪಕಲಾ ಕೃತಿಯಂತೆ ತೋರುವುದು. ಕೇದಾರನಾಥನನ್ನು ಭಕ್ತಾದಿಗಳು ಕೈಮುಟ್ಟಿ ಪೂಜಿಸುವಾಗಿನ ಅವರ ಧನ್ಯತೆಯ ಭಾವನೆಗೆ ಲೇಖಕರು ನಿಶ್ಶಬ್ದವಾಗಿ ಸ್ಪಂದಿಸಿ, ಕ್ಷಣಕಾಲ ರೋಮಾಂಚಿತರಾಗಿ "ಕೇದಾರನಾಥ ಅನ್ನುವುದು ವಾಸ್ತವವಾಗಿ ಒಂದು ಮೂರ್ತಿ ಅಲ್ಲ; ಲಿಂಗವೂ ಅಲ್ಲ. ಅದೊಂದು ಶಿಲಾಖಂಡ. ಹೊರಗೆ ನಾವು ಕಾಣುವ ಮಹಾಪರ್ವತದ ಒಂದು ಸಂಕ್ಷಿಪ್ತರೂಪ. ಬೆಟ್ಟವೊಂದರ ಶಿಖರಾಕೃತಿಯ ಮೈಯನ್ನು ಮೂರು ನಾಲ್ಕು ಅಡಿಗಳಿಗೆ ಭಟ್ಟಿಯಿಳಿಸಿದರೆ ಹೇಗೋ ಹಾಗಿರುವ ಒಂದು ಶಿಲಾಕೃತಿ. ಅಂದರೆ ಹೊರಗೆ ಕಾಣುವ ಪರ್ವತವನ್ನೆ ಇಲ್ಲಿ ಒಳಗೆ ಸಾಂಕೇತಿಕವಾಗಿ ಪೂಜಿಸುತ್ತಾರೆ ಎಂದಂತಾಯಿತು. ಹರಿದ್ವಾರದಲ್ಲಿ ಇಡೀ ಗಂಗಾನದಿಯನ್ನು ಪೂಜೆ ಮಾಡುವುದರ ಹಿಂದೆ ಯಾವ ಅರ್ಥವಂತಿಕೆ ಇದೆಯೋ ಅದೇ ಇಲ್ಲಿ ಪುನರಾವರ್ತನೆಗೊಂಡಿದೆ. ಮಹಾಪರ್ವತವನ್ನೇ ಒಳಗಿನ ಗರ್ಭಗುಡಿಯಲ್ಲಿ ಪ್ರತಿಮೆಯನ್ನಾಗಿ ಭಾವಿಸುವ ಮನೋಧರ್ಮದಲ್ಲಿ ಈ ಮಹಾಪರ್ವತಗಳು, ನದಿಗಳು, ಇವೇ ತಾನೆ ನಮ್ಮ ದೇವರುಗಳು?" ಎಂದು ವಿಚಾರಮಾಡುವರು.

ನಿಸರ್ಗದ ಪ್ರಚಂಡಶಕ್ತಿಯ ಉನ್ಮತ್ತ ಅಭಿವ್ಯಕ್ತಿಯಂತೆ ಹಿಮಾಲಯ ಲೇಖಕರಿಗೆ ಕಾಣುವುದು. ನಾಗರಿಕತೆಯ ಆದಿಮಕಾಲದಿಂದಲೇ ಜನಮನದಲ್ಲಿ ದೈವೀಭಾವನೆಯನ್ನು ಆಧ್ಯಾತ್ಮಿಕ ಅರ್ಥವಂತಿಕೆಯನ್ನು ಪಡೆದುಕೊಂಡು ಕವಿಗಳ ಸಂತರ ಕಲಾವಿದರ ಹಾಗೂ ಅಸಂಖ್ಯ ಯಾತ್ರಿಕರ ಆಕರ್ಷಣೆಯ ಹಾಗೂ ಗೌರವದ ವಸ್ತುವಾಗಿರುವುದಕ್ಕೆ ಲೇಖಕರು ಹಲವಾರು ಕಾರಣ ಕೊಟ್ಟಿರುವರು. ಬದರಿಯ ಕಡೆಗೆ ಹೊರಟ ಲೇಖಕರು ಜೋಷೀಮಠಕ್ಕೆ ಬಂದಾಗ ಅದರ ಮಹತ್ವವನ್ನು ತಿಳಿಸುವರು. ಬದರಿ ಪ್ರಾಚೀನ ಕಾಲದಿಂದಲೂ ಯೋಗಭೂಮಿಯಾಗಿರುವುದನ್ನು ಪುರಾಣಗಳ ಉಲ್ಲೇಖಗಳ ಮೂಲಕ

ವಿವರಿಸುವರು. ಇರುಳು ಕಳೆದು ಹೊತ್ತು ಮೂಡುವ ಮೊದಲೇ ಬದರಿಯ ದೇವಸ್ಥಾನದ ಎದುರು ಒಂದು ವಿಸ್ಮಯ ಪ್ರಪಂಚವನ್ನೇ ಲೇಖಕರು ಕಾಣುವರು: "ಜನ ಪಶ್ಚಿಮದಿಕ್ಕಿಗೆ ಮುಖ ಮಾಡಿ, ಕಣ್ಣುಗಳ ತುಂಬ ಆಶ್ಚರ್ಯವನ್ನು ತುಂಬಿಕೊಂಡವರಂತೆ ನಿಂತಿದ್ದಾರೆ. ನಾನೂ ನೋಡಿದರೆ, ಸ್ವರ್ಗೀಯವಾದ ದೃಶ್ಯ. ಪಶ್ಚಿಮಗಗನದಲ್ಲಿ ಕೆತ್ತಿ ನಿಲ್ಲಿಸಿದಂತೆ ಎತ್ತರವಾದ ನೀಲಕಂಠ ಪರ್ವತದ ಇಡೀ ಮೈಯೆಲ್ಲಾ ಬಂಗಾರವಾಗಿ ಥಳಥಳಿಸುತ್ತಿದೆ. ಅದರ ತ್ರಿಕೋನಾಕಾರವಾದ ಶಿಖರ, ಪರ್ವತ ಮಹಾದೇಗುಲದ ಚಿನ್ನದ ಕಲಶದಂತೆ ಮಿನುಗುತ್ತಿದೆ. ಅದರ ಕೆಳಗೆ, ಮುಂಬೆಳಗಿನ ಕಾಂತಿಗೆ ಮೈಯೊಡ್ಡಿಕೊಂಡ ಬದರಿಯ ದೇಗುಲ; ಅದರ ಮೇಲಿನ ಧ್ವಜ; ಅದರ ಎದುರಿಗೆ ಹರಹಿಕೊಂಡ ಊರು, ಎಲ್ಲವೂ ಆಗ ತಾನೇ ಯಾವನೋ ಮಾಂತ್ರಿಕನಿಂದ ನಿರ್ಮಿತವಾದ ಸುಂದರ ಮಿಥ್ಯೆಯಂತೆ ಭಾಸವಾಯಿತು. ಆದರೆ, ಅದರ ಹಿನ್ನೆಲೆಗಿನ ಬಂಗಾರದ ಬೆಟ್ಟ ಮಾತ್ರ ಸತ್ಯಸ್ಯಸತ್ಯವೆಂಬಂತೆ ನಿಶ್ಚಲವಾಗಿತ್ತು. ಸುಮಾರು ಮುಕ್ಕಾಲುಗಂಟೆಯವರೆಗೆ ಸ್ತಂಭೀಭೂತರಾಗಿ, ಕಾಲುಗಳನ್ನೆ ಬೇರೂರಿ ನಿಂತ ನಾವು, ಕ್ರಮಕ್ರಮೇಣ ಪೂರ್ವದಿಕ್ಕಿನ ಬೆಟ್ಟದ ಕಣಿವೆಗಳನ್ನು ದಾಟಿ ಮೇಲೇರಿದ ಸೂರ್ಯನ ಕಿರಣಗಳು, ಆ ಬಂಗಾರವನ್ನು ಥಳಥಳಿಸುವ ಬೆಳ್ಳಿಯನ್ನಾಗಿಸುವ ಪವಾಡವನ್ನು ನೋಡುತ್ತಿದ್ದೆವು. ಆ ಬೆಳ್ಳನೆಯ ಪರ್ವತ ಕಾಳಿದಾಸನು ವರ್ಣಿಸಿದ 'ತ್ರಿದಶ ವನಿತೆಯರ ದರ್ಪಣ'ವಾಗುವುದನ್ನು ಕಂಡ ನಂತರ, ನಮ್ಮ ಅಂದಿನ ವಾಸ್ತವಗಳಿಗೆ ಹಿಂದಿರುಗಿದೆವು."

ಗಂಗೋತ್ರಿಯ ಗಂಗೆಯ ಹರಿವಿನ ಹತ್ತಿರದಲ್ಲಿ ಸ್ನಾನ ಮಾಡುತ್ತಿದ್ದವರನ್ನು ನೋಡಿ ತಾವೂ ಹಾಗೆ ಮಾಡಲು ಹೋಗಿ ಕಾಲುಗಳನ್ನು ಆ ನೀರಿಗೆ ಸೋಂಕಿಸಿದರು. ಕೂಡಲೆ ಕಾಲುಗಳಿಗೆ ಛಳಿಯ ಚೇಳು ಕುಟುಕಿದ ಹಾಗಾಯಿತು. "ಕೂಡಲೇ ಕಾಲುಗಳನ್ನು ಮಿಂಚಿನ ವೇಗದಿಂದ ಹಿಂದಕ್ಕೆ ಎಳೆದುಕೊಂಡು, ಕೌರವ ಸೇನೆಯನ್ನು ಕಂಡು ದೌಡೋಡಿದ ಉತ್ತರಕುಮಾರನ ಹಾಗೆ ಸ್ನಾನವೂ ಬೇಡ, ಏನೂ ಬೇಡ ಎಂದು ಹಿಂದಕ್ಕೆ ಬಂದೆ." (ಪು. ೪೨-೪೩); ರಾಂಬಾರಾಕ್ಕೆ ಹೋಗುವ ದಾರಿಯಲ್ಲಿ ಕಂಡಿಯಲ್ಲಿ ಕುಳಿತ ತಮ್ಮ ಮನೆಯವರನ್ನು ನೋಡಿದ ಲೇಖಕರು "ಮೈತುಂಬಾ ಶಾಲು ಹೊದ್ದು, ತಲೆಗಳಿಗೆ ಉಣ್ಣೆಯ ಮಫ್ಲರುಗಳನ್ನು ಸುತ್ತಿಕೊಂಡು ಕಂಡಿಯ ಬಿದಿರುಬುಟ್ಟಿಯಲ್ಲಿ ಮುದುರಿಕೊಂಡು ಕೂತಿದ್ದ ನಮ್ಮ ಮನೆಯವರಿಬ್ಬರೂ ಗ್ರಾಮ ದೇವತೆಯರಂತೆ ವಿರಾಜಮಾನರಾಗಿದ್ದರು" (ಪು. ೮೦); ಬದರಿಯಲ್ಲಿ ಕಾಣಿಸಿದ 'ಇಡ್ಲಿ-ದೋಸೆ' ಎಂಬ ಬೋರ್ಡ್ ಕಂಡ ಕೂಡಲೆ ಆ ಹೋಟೆಲಿಗೆ ಹೋದಾಗ "ಇಡ್ಲಿಯೇನೋ ಬಂತು. ಆದರೆ ಆ ಇಡ್ಲಿಗಳು ಸಾಂಬಾರಿನೊಳಗೆ ನೆನೆದು ಮೆತ್ತಗಾಗಿ, ನಾವು ಅವುಗಳನ್ನು ತಿನ್ನಬೇಕಾದರೆ ಕೊನೇಪಕ್ಷ ಸಂಜೆಯತನಕವಾದರೂ ಕಾದುಕೊಂಡು ಕೂರಬೇಕಾಗಿತ್ತು;

ಅಷ್ಟೆ." (ಪು. ೧೦೨) ಇಂತಹ ನಗೆ ಮಿನುಗಿಸುವ ಮಾತುಗಳು ಅಲ್ಲಲ್ಲಿ ಬಂದು ಕೃತಿಗೆ ಶೋಭೆ ತಂದಿದೆ. "ಗಂಗಾ ನದಿಯಲ್ಲಿ ಸ್ನಾನ ಮಾಡುವುದರಿಂದ ಪುಣ್ಯ ಸಂಪಾದನೆಯಾಗುತ್ತದೆ, ಸದ್ಗತಿ ಪ್ರಾಪ್ತವಾಗುತ್ತದೆ ಎಂದು ನಾನೆಂದೂ ತಿಳಿದವನಲ್ಲ. ಆದರೆ, ಈ ಒಂದು ಭಾವನೆಯಿಂದ ಇಲ್ಲಿಗೆ ಬಂದು ಸ್ನಾನ ಮಾಡುವ ಇಷ್ಟೊಂದು ಜನರ ನಂಬಿಕೆಯನ್ನು ನಾನು ಸಂಶಯದಿಂದ, ಅಥವಾ ಅಗೌರವದಿಂದ ನೋಡುವುದಿಲ್ಲ. ಅವರವರ ನಂಬಿಕೆ ಅವರವರಿಗೆ, ಅದನ್ನು ಪ್ರಶ್ನಿಸಲು ಅಥವಾ ಕೀಲ್ಗಳೆದು ನೋಡಲು ನನಗೇನು ಅಧಿಕಾರವಿದೆ? ಅವರಿಗಿರುವ ಈ ಭಾವನೆ ಬಹುಶಃ ಈ ಹಿಮಾಲಯದಷ್ಟೇ ಪ್ರಾಚೀನವಾದುದು" ಎನ್ನುವಲ್ಲಿ ಅನ್ಯರ ಭಾವನೆಗಳಿಗೆ ಗೌರವ ಕೊಡುವ ಲೇಖಕರ ಪ್ರಾಂಜಲ ಮನಸ್ಸಿನ ಬಗೆಗೆ ನಮ್ಮಲ್ಲಿ ಸಹಜವಾಗಿ ಆದರ ಮೂಡುತ್ತದೆ.

ಈ ಪ್ರವಾಸವು ಪುಣ್ಯಕ್ಷೇತ್ರಗಳಲ್ಲಿ ಆಗಿದ್ದರೂ ಪುಣ್ಯಸಂಪಾದನೆಗಾಗಿ ಮಾಡಿದ ಪ್ರವಾಸವಲ್ಲ. ಭಾರತದ ಭವ್ಯಪರಂಪರೆಯೊಂದಿಗೆ ಈ ಪುಣ್ಯಕ್ಷೇತ್ರಗಳ ಸಂಬಂಧವಿರುವುದರಿಂದ ಲೇಖಕರಿಗೆ ಈ ಪ್ರವಾಸದಲ್ಲಿ ಹೆಚ್ಚಿನ ಕುತೂಹಲ, ಆಸಕ್ತಿ. ಸಾಕಷ್ಟು ವಿಷಯ ಸಂಗ್ರಹಣೆಯನ್ನು ಪ್ರವಾಸಕ್ಕೆ ಪೂರ್ವಭಾವಿಯಾಗಿ ಲೇಖಕರು ಮಾಡಿ ಕೊಂಡಿರುವರು. ಗಂಗೆ, ಹಿಮಾಲಯಗಳ ಬಗೆಗಿನ ಸಾಂಸ್ಕೃತಿಕವಾದ ಆಕರ್ಷಣೆಯ ಜೊತೆಗೆ ಪ್ರಾಕೃತಿಕ ಸೌಂದರ್ಯದ ಆಕರ್ಷಣೆಯೂ ಬಲವಾಗಿರುವುದರಿಂದ ಈ ಪ್ರವಾಸಕಥನ ಲೇಖಕರ ಇನ್ನಿತರ ಪ್ರವಾಸಕಥನಗಳಿಂದ ಭಿನ್ನವಾಗಿ ನಿಲ್ಲುತ್ತದೆ. ಈ ನೆಲದ ಭವ್ಯ ಪರಂಪರೆಯ ಪರಿಚಯ ಲೇಖಕರಿಗೆ ಇರುವುದರಿಂದ ಹಾಗೂ ಪ್ರಾಕೃತಿಕ ಚೆಲುವನ್ನು ವಿರಾಮವಾಗಿ ನಿಂತು ನೋಡಿ ಅನುಭವಿಸುವ ಕಣ್ಣು ಮತ್ತು ಮನಸ್ಸು ಇಲ್ಲಿ ಪ್ರಧಾನವಾಗಿ ಕೆಲಸ ಮಾಡಿರುವುದರಿಂದ ಈ ಪ್ರವಾಸ ಕಥನಕ್ಕೆ ವಿಶಿಷ್ಟ ಸ್ಥಾನವಿದೆ. ಪ್ರವಾಸಪ್ರಿಯರಾದ ಡಾ।। ಜಿ.ಎಸ್.ಎಸ್. ರವರು ಕನ್ನಡದ ಸುಪ್ರಸಿದ್ಧ ಕವಿಗಳೂ, ವಿಮರ್ಶಕರೂ ಆಗಿರುವುದರಿಂದ ಈ ಪ್ರವಾಸ ಕಥನದಲ್ಲಿ ಅವರ ಭಾವನೆಗಳು ಕಾವ್ಯಮಯವಾಗಿವೆ, ವಿಚಾರಧಾರೆಗಳು ಚಿಂತನಾರ್ಹವಾಗಿದೆ.

ಶ್ರೀಮತಿ ಸುಮನಾ ವಿಶ್ವನಾಥ್‌ರವರು ಮತ್ತೂರು ಕೃಷ್ಣಮೂರ್ತಿಯವರ ಜೊತೆ ೪೦ ಮಂದಿ ಪ್ರವಾಸಿಗರು ಕಾಶೀಯಾತ್ರೆ ಮಾಡಿದ ಅನುಭವವನ್ನು **ಮತ್ತೂರರೊಂದಿಗೆ ಕಾಶೀಯಾತ್ರೆ**ಯಲ್ಲಿ ಕೊಟ್ಟಿರುವರು. ಇದೊಂದು ವಿಶಿಷ್ಟ ಪ್ರಯತ್ನ. ಮತ್ತೂರು ಕೃಷ್ಣಮೂರ್ತಿಗಳು ಕನ್ನಡದ ಹೆಸರಾಂತ ಲೇಖಕರು ಮೇಲಾಗಿ ಒಳ್ಳೆಯ ಪ್ರವಚನಕಾರರು. ಅವರ ಮಾರ್ಗದರ್ಶನದಲ್ಲಿ ನಡೆದ ಕಾಶೀಯಾತ್ರೆ ಒಂದು ಅನುಭವಪೂರ್ಣ ಬರಹ. ಕಾಶೀಯಾತ್ರೆ ಮಾಡುವವರಿಗೆ ಮಾರ್ಗದರ್ಶಿ ಪುಸ್ತಕ. ಇದರಲ್ಲಿ ಮತ್ತೂರರೊಂದಿಗೆ ಕೆಲವರು ಮಿತ್ರರು ೧೯೯೯ರಲ್ಲಿ ಕೇದಾರ- ಬದರಿಯಾತ್ರೆ ಮಾಡಿದರು. ಯಾತ್ರಿಕರ

ಪೈಕಿ ಒಬ್ಬರಾದ ಶ್ರೀಮತಿ ಗೀತಾ ಶ್ರೀನಿವಾಸನ್‌ರವರು ಹಿಮಾಲಯ ಯಾತ್ರೆಯ ಅನುಭವಗಳನ್ನು ಬರೆದಿದ್ದರು. ಅದನ್ನೂ ಇದರಲ್ಲಿ ಕೊಡಲಾಗಿದೆ. ಆಸ್ತಿಕ ಭಕ್ತರಿಗೆ ಕಾಶೀ, ಹಿಮಾಲಯ ಯಾತ್ರೆ ಮಾಡಲು ಬೇಕಾದ ಸಕಲ ಮಾಹಿತಿಗಳೂ ಇದರಲ್ಲಿ ಲಭ್ಯವಿದೆ. ಈ ಪುಸ್ತಕ ಪ್ರವಾಸಿ ಮಾಹಿತಿಯನ್ನು ಹೊಂದಿದ್ದರೂ ಅದಕ್ಕೆ ಪೂರಕವಾಗಿ ನೂರಾರು ವರ್ಣ ಚಿತ್ರಗಳು ಇಲ್ಲಿ ಸೇರ್ಪಡೆಯಾಗಿವೆ.

ಶ್ರೀಶೈಲ, ನಂದಿ, ಬಾದಾಮಿ, ಬನಶಂಕರಿ, ಮಹಾಕೂಟ, ಐಹೊಳೆ, ಪಟ್ಟದಕಲ್ಲು, ಕೆಮ್ಮಣ್ಣುಗುಂಡಿ, ದಕ್ಷಿಣದ ದೇವಾಲಯಗಳು, ಪಾಂಡಿಚೇರಿ, ಕಾಶ್ಮೀರ, ಹಿಮಾಲಯದ ಮಡಿಲು, ಶ್ರೀನಗರ, ತ್ರಿವೇಣೀ ಸಂಗಮ, ಬನಾರಸ್, ಕನ್ಯಾಕುಮಾರಿ, ಉದಕಮಂಡಲ, ಗೌಹತಿ, ಅಜಂತ-ವೇರೂಳ, ಚಂಡಿಗಡ್, ಸಿಮ್ಲಾ-ಹೀಗೆ ಪ್ರಸಿದ್ಧ ಪುಣ್ಯಕ್ಷೇತ್ರ ಹಾಗೂ ಪ್ರೇಕ್ಷಣೀಯ ಸ್ಥಳಗಳ ಪರಿಚಯ ಮಾಡಿಕೊಡುವುದಕ್ಕೆ 'ಶ್ರೀಗಿರಿಯಿಂದ ಹಿಮಗಿರಿಗೆ' ಎಂಬ ಪ್ರವಾಸ ಕಥನದಲ್ಲಿ ಶ್ರೀಮತಿ ಶಾಂತಾದೇವಿ ಮಾಳವಾಡರವರು ಪ್ರಯತ್ನಿಸಿರುವರು. ಅವರು ತಮಗೆ ಅನುಕೂಲವಾದಾಗ ಪ್ರವಾಸ ಹೋಗಿ ನೋಡಿ ಬಂದ ಸ್ಥಳಗಳನ್ನು ಕುರಿತು ಇಲ್ಲಿ ಬರೆದಿರುವರು. ಇಲ್ಲಿ ಪ್ರವಾಸ ಹೋಗಿ ಬಂದ ಸ್ಥಳಗಳ ಇತಿಹಾಸ, ಸ್ಥಳ ಮಹಾತ್ಮೆ, ಪ್ರೇಕ್ಷಣೀಯ ಭಾಗಗಳು -ಇವೆಲ್ಲವುಗಳ ಪರಿಚಯಾತ್ಮಕ ವಿವರಣೆಯನ್ನು ಸಾಮಾನ್ಯ ಓದುಗನಿಗಾಗಿ ಕೊಟ್ಟಿರುವರು. ಪ್ರೇಕ್ಷಣೀಯ ಸ್ಥಳಗಳನ್ನು ಬಣ್ಣಿಸುವಾಗ ಹಾಗೂ ಅಲ್ಲಿನ ಅನುಭವಗಳನ್ನು ಹೇಳುವಾಗ ಅವರ ಬರಹ ಚೇತೋಹಾರಿಯಾಗುತ್ತದೆ. ಅವರ ವಿಷಯ ಸಂಗ್ರಹಣೆಯಲ್ಲಿ ಒಪ್ಪ ಓರಣಗಳಿವೆ, ನಿರೂಪಣೆಯಲ್ಲಿ ಉತ್ಸಾಹವಿದೆ, ಬರಹದಲ್ಲಿ ಲಾಲಿತ್ಯವಿದೆ. ಹೀಗಾಗಿ, ಅವರ **'ಶ್ರೀಗಿರಿಯಿಂದ ಹಿಮಗಿರಿಗೆ'** ಎಂಬ ಪ್ರವಾಸ ಕಥನ ನಮ್ಮನ್ನು ನಿರಾಶೆಗೊಳಿಸುವುದಿಲ್ಲ. ಭಾರತ ಪ್ರವಾಸಕ್ಕೆಗೊಳ್ಳುವವರಿಗೆ ಇದು ಒಳ್ಳೆಯ ಮಾರ್ಗದರ್ಶಿಯೂ ಆಗುತ್ತದೆ.

ಬಿ.ವಿ. ವಿದ್ಯಾನಂದ ಶೆಣೈ ಅವರ **'ಭಾರತ ದರ್ಶನ'** ಭಾರತದ ಭವ್ಯ ಪರಂಪರೆ ಹಾಗೂ ಸಾಂಸ್ಕೃತಿಕ ಇತಿಹಾಸದ ಪರಿಚಯ ಮಾಡಿಕೊಡುವ ಕೃತಿ. ಶೆಣೈರವರು ಸದ್ಯ ರಾಷ್ಟ್ರೋತ್ಥಾನ ಪರಿಷತ್ತಿನ ನಿರ್ವಾಹಕ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದು, ಕಳೆದ ಎರಡು ದಶಕಗಳಿಂದ ಅವರು ನಾಡಿನ ಪುಣ್ಯ ಕ್ಷೇತ್ರಗಳನ್ನೂ ಐತಿಹಾಸಿಕ ಸ್ಥಳಗಳನ್ನೂ ಕೇಂದ್ರವಾಗಿಸಿಕೊಂಡು ಕರ್ನಾಟಕದಾದ್ಯಂತ ಪ್ರವಾಸ ಕೈಗೊಂಡು 'ಭಾರತ ದರ್ಶನ' ಉಪನ್ಯಾಸ ಮಾಲೆಗಳಿಂದ ರಾಷ್ಟ್ರದ ಬಗೆಗೆ ಅಭಿಮಾನ ಮೂಡುವಂತೆ ಮಾಡಿರುವವರು. 'ಭಾರತ ದರ್ಶನ' ಶೆಣೈ ಅವರು ಮಾಡಿದ ಉಪನ್ಯಾಸಗಳ ಸಾರರೂಪ. ಒಂದು ಸಾವಿರ ಉಪನ್ಯಾಸಗಳ ನೆನಪಿಗಾಗಿ ಇದರ ಮುದ್ರಿತ ರೂಪ ಹೊರಬಂದಿದೆ. ಲೇಖಕರೇ ಹೇಳಿರುವಂತೆ "ಭಾರತದ ರಾಷ್ಟ್ರೀಯ ಏಕಾತ್ಮತೆಯ ಸೂತ್ರಗಳು ಇದರ ಇತಿಹಾಸ, ಭೂಗೋಳ, ಧರ್ಮ, ದರ್ಶನ ಮತ್ತು ಸಂಸ್ಕೃತಿಯಲ್ಲಿ ವಿಪುಲವಾಗಿ

ಕಂಡುಬರುತ್ತವೆ. ಇಲ್ಲಿನ ನದೀ ದಡಗಳಲ್ಲಿ ನಮ್ಮ ಪೂರ್ವಜರು ವಿಶ್ವಕಲ್ಯಾಣದ ಚಿಂತನೆ ನಡೆಸಿದರು. ಗಿರಿ-ಗಹ್ವರಗಳು ಅವರ ಪಾದಸ್ಪರ್ಶ ಹಾಗೂ ತಪಸ್ಸಿನಿಂದ ಧನ್ಯವೆನಿಸಿದವು. ಅವರ ಸಾಧನೆಗಳಿಗೆ ಸಾಕ್ಷಿಗಳಂತಿರುವ ಸರೋವರಗಳು ತನು ಮನದ ತಾಪವನ್ನು ಶಮನಗೊಳಿಸಿದವು; ಈ ನೆಲದ ಕಣಕಣದೊಂದಿಗೆ ಬೆಸೆದುಕೊಂಡಿರುವ ಪುಣ್ಯದ ಚಿಂತನೆ, ಇಡೀ ದೇಶದಲ್ಲಿ ವ್ಯಾಪಿಸಿರುವ ಸಮಾನ ಸಾಂಸ್ಕೃತಿಕ ನಡವಳಿಕೆ ಇವುಗಳಿಂದ ನಿರ್ಮಾಣವಾಗುವ ಆತ್ಮೀಯ ಭಾವನೆ, ಸಾಧುಸಂತ- ವಿದ್ವಾಂಸರ ಪರ್ಯಟನ ಹಾಗೂ ಪ್ರವಚನಗಳಿಂದ ಜಾಗ್ರತಗೊಳ್ಳುವ ಆಧ್ಯಾತ್ಮಿಕ ಚೇತನ ಹಾಗೂ ಇಡೀ ದೇಶದಲ್ಲಿ ಸ್ವೀಕೃತವಾಗಿರುವ ಸಮಾನ ಜೀವನ ಮೌಲ್ಯಗಳು -ಇವು ಈ ದೇಶಕ್ಕೆ ಆತುರತೆಯನ್ನು ನೀಡಿರುವ ಸಂಗತಿಗಳಾಗಿವೆ.''

'ಭಾರತ ದರ್ಶನ'ವನ್ನು ಪ್ರವಾಸ ಕಥನವೆಂದು ಕರೆಯಬೇಕೆ? ಅಥವಾ ಭಾರತದ ಸಾಂಸ್ಕೃತಿಕ ಇತಿಹಾಸದ ಪರಿಚಯವೆಂದು ಕರೆಯಬೇಕೆ? ಎಂಬುದು ಮುಖ್ಯ ಪ್ರಶ್ನೆ. ಪ್ರವಾಸಿಗರೊಬ್ಬರು ತಾನು ಪ್ರವಾಸ ಮುಗಿಸಿ ಬಂದ ಮೇಲೆ ತನ್ನ ಅನುಭವಗಳನ್ನು ಕಥನರೂಪದಲ್ಲಿ ನಿರೂಪಿಸುವುದು ಪ್ರವಾಸ ಕಥನದ ಮುಖ್ಯ ಲಕ್ಷಣ. ಪ್ರವಾಸದ ಅನುಭವಗಳು ಸಾಹಿತ್ಯಕವಾಗಿ ಅಭಿವ್ಯಕ್ತಗೊಳ್ಳುವುದರಿಂದ ಇದನ್ನು ಪ್ರವಾಸ ಸಾಹಿತ್ಯ (Travalogue) ಎನ್ನುವರು. ಶ್ರೀ ಬಿ.ವಿ. ವಿದ್ಯಾನಂದ ಶೆಣೈರವರ 'ಭಾರತ ದರ್ಶನ'ದ ಮುಖ್ಯ ಗುಣ ವೈಭವೀಕರಣ. ತೀರ್ಥಯಾತ್ರೆಯಿಂದ ಆಗುವ ಲಾಭದ ಬಗೆಗೆ ಹೇಳುತ್ತಾ "ಮಹಾತ್ಮರು ಒಂದೆಡೆಯಿಂದ ಇನ್ನೊಂದೆಡೆಗೆ ಸಂಚರಿಸುವುದರ ಮೂಲಕ ತಮ್ಮ ಚರಣ ಸ್ಪರ್ಶದಿಂದ ಇಡೀ ಭೂಮಿಯನ್ನು ಪಾವನಗೊಳಿಸಿದ್ದಾರೆಂದು ಭಾಗವತದಲ್ಲಿ ಹೇಳಿದೆ. ತೀರ್ಥಗಳನ್ನು ಸಂದರ್ಶಿಸುವ ನೆಪದಲ್ಲಿ ಅವರು ತೀರ್ಥವನ್ನೇ ಪವಿತ್ರಗೊಳಿಸಿದ್ದಾರೆ. ಶರೀರದಲ್ಲಿನ ಕೆಲವು ಅವಯವಗಳು ಹೆಚ್ಚು ಪವಿತ್ರವೆನಿಸಿರುವಂತೆಯೇ ಭೂಮಿಯಲ್ಲಿನ ಕೆಲವು ಸ್ಥಳಗಳು ಹೆಚ್ಚು ಪವಿತ್ರವೆನಿಸಿವೆ..." (ಪು. ೨೫) ಎನ್ನುವರು. ಹಾಗೆಯೇ "ಯಾತ್ರೆಯನ್ನು ನಾನಾ ಕಾರಣಗಳಿಗಾಗಿ ಮಾಡುತ್ತಾರೆ. ಮನುಷ್ಯನ ಆತ್ಮದಲ್ಲಿಯೇ ಯಾತ್ರೆಯ ಅವಶ್ಯಕತೆಗೆ ಒಂದು ಆಧಾರವಿದ್ದಂತೆ ತೋರುತ್ತದೆ. ಅವನ ಜೀವನವೇ ಯಾತ್ರೆ ಇದ್ದಂತೆ. ಈ ಪ್ರವಾಸದಲ್ಲಿ ಜಗನ್ನಿವಾಸನ ಅಂಶವಾದ ತಾನು ತನ್ನ ನಿಜ ನಿವಾಸವನ್ನು ಹುಡುಕುತ್ತಾ ಹೋಗುತ್ತಾನೆ. ಹೊಳೆ ಕಡಲನ್ನರಸುತ್ತಾ ಸಾಗುವಂತೆ ಮನುಷ್ಯನು ತನ್ನ ಅತ್ಯಲದಿಂದ ಅಥವಾ ಅಹಂಕಾರದಿಂದ ಮೇಲೇರಲು ಪ್ರಯತ್ನಿಸಬೇಕು, ಅದಕ್ಕಿರುವ ದಾರಿಯೊಂದೇ ಭೂಮವಾದುದಕ್ಕೆ, ವಿಸ್ತಾರವಾದುದಕ್ಕೆ, ಚಿರನೂತನವಾದುದಕ್ಕೆ, ನಿರ್ದಿಗಂತವಾದ ಅನುಭವಾಭಿ ಮುಖವಾಗಿ ಸಾಗುವುದು ಇದೇ ಮಾನವ ಚೇತನದ ಮಹೋನ್ನತ ಸಾಹಸ.'' ಇಲ್ಲೆಲ್ಲಾ ಶಾಬ್ದಿಕ ಚಮತ್ಕಾರ ಶಬ್ದಗಳ ದುಂದುಮೆಯಾಗುತ್ತದೆ. ಲೇಖಕರು ಏನನ್ನು ಹೇಳುತ್ತಿದ್ದಾರೆ, ಯಾರಿಗೆ ಹೇಳುತ್ತಿದ್ದಾರೆ ಎಂಬುದೇ ಪ್ರಶ್ನೆಯಾಗಿ ನಿಲ್ಲುತ್ತದೆ.

ಪ್ರವಾಸ ಮೂರು ಮುಖಗಳಲ್ಲಿ ಅಂದರೆ ಅಧೋಮುಖ, ಸಮತೋಲಮುಖ, ಊರ್ಧ್ವಮುಖಗಳಲ್ಲಿ ನಡೆಯುತ್ತದೆ ಎಂದು ಹೇಳಿ ಅದನ್ನು ಲೇಖಕರು ವಿವರಿಸುವರು (ಪು. ೨೬). ಆಶ್ಚರ್ಯವೆಂದರೆ, ಹೀಗೆ ಪ್ರವಾಸವನ್ನು ಮೊದಲಿಗೆ ವರ್ಗೀಕರಿಸಿದವರು ಕುವೆಂಪುರವರು 'ಹೈಮಾಚಲ ಸಾನ್ನಿಧ್ಯದಲ್ಲಿ' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ. ಲೇಖಕರು ಮೂಲವನ್ನು ಉಲ್ಲೇಖಿಸುವ ಸೌಜನ್ಯವನ್ನೂ ತೋರದೆ ಈ ಅಭಿಪ್ರಾಯಗಳು ತಮ್ಮವೇ ಎನ್ನುವ ಧಾಟಿಯಲ್ಲಿ ವಿವರಿಸುವರು.

ಲೇಖಕರು ಈ ಪುಸ್ತಕದಲ್ಲಿ ಹತ್ತಾರು ಮೋಕ್ಷದಾಯಕ ನಗರಗಳು, ಪರ್ವತಗಳು, ನದಿಗಳು, ದೇಶದ ಮುಖ್ಯಧಾರೆಯಿಂದ ದೂರವಿರುವ ತೀರ್ಥಗಳು, ಮಹಾತ್ಮರ ಜನ್ಮಸ್ಥಳಗಳು, ಬಲಿದಾನದ ಪ್ರೇರಕ ತೀರ್ಥಗಳು... ಮೊದಲಾದ ಸಂಗತಿಗಳನ್ನು ಜೋಡಿಸುವ ಪ್ರಯತ್ನ ನಡೆದಿದೆ. ಒಟ್ಟಿನಲ್ಲಿ ಭಾರತೀಯ ಏಕಾತ್ಮಕತೆಯ ದರ್ಶನವಾಗಲೆಂದೇ ನಾವೀಗ ಪ್ರವಾಸ ಹೊರಟಿದ್ದೇವೆ" ಎನ್ನುವರು (ಪು. ೨೭). ಲೇಖಕರ ಸ್ವಂತ ಅನುಭವದ ನಿರೂಪಣೆ ಪ್ರವಾಸ ಸಾಹಿತ್ಯದ ಮುಖ್ಯ ಲಕ್ಷಣವಾಗಿರುವಾಗ ಇಲ್ಲಿ ಶೆಣೈರವರು ತಮ್ಮ 'ಭಾರತ ದರ್ಶನ'ಕ್ಕೆ ಲಿಖಿತ ಆಧಾರಗಳ ಪಟ್ಟಿ ಕೊಟ್ಟಿರುವರು. ಟ್ರಾವಲಾಗ್ ಹಾಗೂ ಟ್ರಾವಲ್ ಲಿಟರೇಚರ್ ಇವೆರಡರ ನಡುವೆ ಗುರುತಿಸಬಹುದಾದ ವ್ಯತ್ಯಾಸಗಳಿವೆ. ಶೆಣೈರವರದು ಟ್ರಾವಲ್ ಲಿಟರೇಚರ್ ಅರ್ಥಾತ್ ಪ್ರವಾಸಿ ಮಾಹಿತಿ, ಪ್ರವಾಸಿ ಕೈಪಿಡಿ. 'ಭಾರತ ದರ್ಶನ'ದಲ್ಲಿ ಪರ್ವತ ಮಹಾತ್ಮೆ ಮತ್ತು ಪ್ರಮುಖ ಪರ್ವತಗಳು, ನದಿ ಮಹಾತ್ಮೆ ಮತ್ತು ಪ್ರಮುಖ ನದಿಗಳು, ಸಪ್ತ ಮೋಕ್ಷದಾಯಕ ನಗರಗಳು, ದ್ವಾದಶ ಜ್ಯೋತಿರ್ಲಿಂಗಗಳು, ಶಕ್ತಿ ಪೀಠಗಳು, ಇತರ ತೀರ್ಥಗಳು ಎಂದು ಆರು ಮುಖ್ಯ ವಿಭಾಗಗಳಿವೆ.

ಕುರುಕ್ಷೇತ್ರ, ನಾಲಂದ, ತಕ್ಷಶಿಲಾ, ಅಮೃತಸರ, ಸಾರಾನಾಥಗಳು ತೀರ್ಥಗಳ ವಿಭಾಗದಲ್ಲಿ ಹೇಗೆ ಸೇರ್ಪಡೆಯಾಗುತ್ತದೋ ತಿಳಿಯದು. ಪ್ರವಾಸಿ ಕ್ಷೇತ್ರಗಳ ಬಗೆಗೆ ಮೂಲ ಮಾಹಿತಿಗಳನ್ನು ನೀಡುವಲ್ಲಿ ಶೆಣೈರವರ ಎಲ್ಲ ಶ್ರಮ ಕ್ರೋಢೀಕರಣಗೊಂಡಿದೆ. ಒಟ್ಟಿನಲ್ಲಿ ಇದೊಂದು ಪ್ರವಾಸಿ ಮಾಹಿತಿ ಕೋಶ.

'ಜಗಜ್ಜನನಿ ಭಾರತ' ಎಂಬ ಉಪ ಶೀರ್ಷಿಕೆಯು (chapter) ಲೇಖಕರ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ವಿಶ್ವದ ಬೇರೆ ಬೇರೆ ದೇಶಗಳಿಗೂ ಭಾರತಕ್ಕೂ ಇರುವ ಸಂಬಂಧದ ನಿರೂಪಣೆ ಇಲ್ಲಿ ಮುಖ್ಯವಾಗಿಬಿಡುತ್ತದೆ. 'ಮಾತೃ ಅರ್ಚನಾ' ಎಂಬ ಅಧ್ಯಾಯದ ಪ್ರಾರಂಭದ ಸಾಲುಗಳು ಹೀಗಿವೆ:

"ಜಗತ್ತಿನ ಜನಗಳೇ ಇಲ್ಲಿಗೆ ಈ ಭಾರತ ಭೂಮಿಗೆ ಬನ್ನಿ, ನಿಮಗೆ ಅಗತ್ಯವಿರುವ ನಡವಳಿಕೆಗಳೆಲ್ಲವನ್ನೂ ಇಲ್ಲಿಯ ಉತ್ತಮ ಜನ ಕಲಿಸುತ್ತಾರೆ..." ಕೃತಿಯ ಕೊನೆಯಲ್ಲಿ 'ಇವು ನಿಮಗೆ ತಿಳಿದಿರಲಿ' ಎಂಬ ಶೀರ್ಷಿಕೆಯಲ್ಲಿ ನಮ್ಮ ದೇಶದ ಸಂಸ್ಕೃತಿ, ಪರಂಪರೆ,

ಇತಿಹಾಸಗಳ ಬಗೆಗೆ ಮಾಹಿತಿಗಳನ್ನು ನೀಡಲಾಗಿದೆ. ಪುಸ್ತಕದ ಕೊನೆಗೆ ಸಾಂಸ್ಕೃತಿಕ ಭಾರತದ ಭೂಪಟವನ್ನು ಕೊಡಲಾಗಿದೆ.

ಈ ಪುಸ್ತಕದ ರಚನೆಯ ಮೂಲ ಉದ್ದೇಶ ಪ್ರವಾಸ ಕಥನವಾಗಿರದೆ ಹಿಂದೂ ಸಂಸ್ಕೃತಿಯ ಭವ್ಯತೆ, ಆ ಸಾಂಸ್ಕೃತಿಕ ಪರಂಪರೆಯ ಪ್ರಾಚೀನತೆ ಹಾಗೂ ವೈಭವಗಳ ಪರಿಚಯ ಮಾಡಿಕೊಡುವುದೇ ಆಗಿದೆ. ಹಿಂದೂ ಸಂಸ್ಕೃತಿಯ ವೈಭವೀಕರಣ ಕೃತಿಯ ಒಳ ಆಶಯವಾಗಿದೆ. 'ಹಿಂದೂ, ಹಿಂದುಸ್ಥಾನ ಹಾಗೂ ಹಿಂದುತ್ವದ ಕುರಿತಾದ ಕೆಲವು ಮಾಹಿತಿಗಳು' ಎಂಬ ಶೀರ್ಷಿಕೆಯ ಕೆಳಗೆ ಬರುವ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಹಿಂದುತ್ವದ, ಪ್ರಚಾರ ಸಾಹಿತ್ಯವಾಗಿ "ಭಾರತ ದರ್ಶನ" ರೂಪುಗೊಂಡಿರುವಂತೆ ತೋರುತ್ತದೆ. 'ಭಾರತ-ದರ್ಶನ' ಮುದ್ರಣ ರೂಪದಲ್ಲಲ್ಲದೆ ಧ್ವನಿಸುರುಳಿಯ ರೂಪದಲ್ಲೂ ಹೊರಬಂದಿದ್ದು, ಇದರ ೫೦ ಸಾವಿರ ಸೆಟ್‌ಗಳು ಮಾರಾಟವಾಗಿ ದಾಖಲೆ ಸ್ಥಾಪಿಸಿದೆ ಎಂಬ ಪ್ರಕಾಶಕರ ಮಾತು ನಮ್ಮ ನಿಲುವಿಗೆ ಪೂರಕವಾಗಿ ಬರುತ್ತದೆ.

ಅದೇನೇ ಇರಲಿ, ಶ್ರೀ ಬಿ.ವಿ. ವಿದ್ಯಾನಂದ ಶೆಣೈರವರು ಹಲವಾರು ವರ್ಷಗಳ ಪರಿಶ್ರಮದಿಂದ ಭಾರತದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯ ಮಾಡಿಕೊಟ್ಟಿರುವರು. ಅವರ ಬರವಣಿಗೆಯ ಶೈಲಿಯನ್ನು ಗಮನಿಸಿದಾಗ ಅದರಲ್ಲಿ ಒಂದು ಆಕರ್ಷಣೆಯಿದೆ. ಒಳ್ಳೆಯ ಶಾಬ್ದಿಕ ಸಂಪತ್ತು ಅವರಿಗಿರುವುದರಿಂದ ಒಳ್ಳೆಯ ಉಪನ್ಯಾಸಕರೂ ಆಗಿರುವಂತೆ ತೋರುತ್ತದೆ. ಹಿಂದೂ ಸಂಸ್ಕೃತಿಯ ಅನನ್ಯ ಉಪಾಸಕರಾಗಿರುವುದರಿಂದ ಅದನ್ನು ಇತರರಿಗೂ ತಿಳಿಯಪಡಿಸಬೇಕೆನ್ನುವ ತೀವ್ರತರವಾದ ವಾಂಛೆ ಇಲ್ಲಿ ಸದ್ದಿಲ್ಲದೆ ಕೆಲಸ ಮಾಡಿದೆ. ಭಾರತ ಹಾಗೂ ಅದರ ಉಚ್ಚ ಸಂಸ್ಕೃತಿಯ ಬಗೆಗೆ, ಪರಂಪರೆಯ ಬಗೆಗೆ ಯುವಪೀಳಿಗೆಗೆ ಪರಿಚಯ ಮಾಡಿಕೊಡುವ ಹಿನ್ನೆಲೆಯಲ್ಲಿ ಇಲ್ಲಿನ ಮಾಹಿತಿಗಳು ಬೆಲೆ ಪಡೆದುಕೊಳ್ಳುತ್ತವೆ.

ಲಲಿತಾಶಾಸ್ತ್ರಿಯವರ **'ಹಿಮವಂತನ ನಾಡಿನಲ್ಲಿ'** ಹಿಮಾಲಯ ಪ್ರವಾಸ ಕಥನ ಹರಿದ್ವಾರ, ಹೃಷಿಕೇಶ, ಶ್ರೀನಗರ, ಕೇದಾರ, ಬದರಿ -ಈ ಪುಣ್ಯಕ್ಷೇತ್ರಗಳ ಪರಿಚಯ- ಸಾಮಾನ್ಯ ಪ್ರವಾಸಿಗರಿಗಾಗಿ- ಮಾಡಿಕೊಡಲಾಗಿದೆ.

ಶಮಂತರವರ **'ಕಾಲ್ನಡಿಗೆಯಲ್ಲಿ ಹಿಮಾಲಯಕ್ಕೆ ರಮ್ಯಸಾಹಸ'** ಹಿಮಾಲಯದ ಟ್ರೆಕ್ಕಿಂಗ್ ಅನುಭವ ಕಥನವಾಗಿ ಎರಡು ಭಾಗಗಳಲ್ಲಿ ಬಂದಿದೆ. ಶಮಂತ ಅವರು ತಮ್ಮ ಹತ್ತಿರದ ಸಂಬಂಧಿ ಶಾಲಾಹುಡುಗನಿಗೆ ತಮ್ಮ ಚಾರಣದ ಅನುಭವಗಳನ್ನು ಡೈರಿ ರೂಪದಲ್ಲಿ ನಿರೂಪಿಸಿರುವರು. ಪಂಜಾಬ್ ಬಾರ್ಡರ್‌ನಲ್ಲಿ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅಲ್ಲಿನ ಜನರ ಬಡತನ, ಠಾಕೂರ್ ಸಂಸ್ಕೃತಿ, ಹಾದಿ ಮಧ್ಯೆ ಬಸ್ ನಿಲ್ಲಿಸಿ ಬಸ್ ಸಿಡಿಸುವ ಭಯೋತ್ಪಾದಕರ ಕರಾಳಕೃತ್ಯಗಳು, ಹಿಮಾಲಯದ ತಪ್ಪಲಿನ

ಕ್ಯಾಂಪ್ ಜೀವನ, ಬೀಯಾಸ್ ನದಿಯನ್ನು ಹಗ್ಗದ ಮೇಲೆ ನಡೆದು ದಾಟುವುದು, ಚಾರಣದ ಸಾಮೂಹಿಕ ಜೀವನ ಹಾಗೂ ಗುಂಪಿನ ಸುತ್ತಾಟಲ್ಲಿ ಪರಸ್ಪರ ರೇಗಿಸುವುದು, ಕುಸಿಜಗಳವಾಡುವುದು, ಹೆಸರಿಡುವುದು, ತಮಾಷೆ ಮಾಡುವುದು, ಕಷ್ಟಸುಖ ಹಂಚಿಕೊಳ್ಳುವುದು, ಊರಿಂದ ತಂದ ಕುರುಕಲು ತಿಂಡಿ ಹಂಚಿಕೊಂಡು ತಿನ್ನುವುದು, ಪ್ರಕೃತಿ ಸೌಂದರ್ಯವನ್ನು ಆರಾಧಿಸುತ್ತ ಮುಂದಕ್ಕೆ ನಡೆಯುವುದು, ಕ್ಯಾಂಪ್‌ಫೈರ್‌ನಲ್ಲಿ ಹಾಡಿ ನಲಿಯುವುದು, ಬೆಳಗಿನ ಚಳಿಯಲ್ಲಿ ನಡುಗುತ್ತಾ ಟೆಂಟ್ ಒಳಗೆ ಬೆಚ್ಚಗೆ ಹೊದ್ದುಕೊಂಡು ಮಾತನಾಡುವುದು -ಹೀಗೆ ತಮ್ಮ ದೈನಂದಿನ ರೂಟೀನ್‌ಆದ ಬದುಕಿಗೆ ಭಿನ್ನವಾಗಿರುವ ಶಿಸ್ತಿನ ಚೌಕಟ್ಟಿನಲ್ಲೇ ಸ್ವತಂತ್ರವಾಗಿರುವ ಚಾರಣದ ದಿನಗಳ ಸವಿ ಮೆಲುಕು ಇಲ್ಲಿದೆ. "ಆ ದಿನದ ಮುಂಜಾನೆ ಎಳೆಬಿಸಿಲು ನಗುನಗುತ್ತಾ ಗುಡ್ ಮಾರ್ನಿಂಗ್ ಹೇಳಿತು" (ಪು. ೭೨) "ಯಾರೀ ವ್ಯಕ್ತಿ? ರಾಜ್ಯವಿಲ್ಲದ ರಾಜ ರಾಜಕುಮಾರ್" (ಪು. ೭೮) "ಗಾಜಿನ ಬಟ್ಟಲಲ್ಲಿ ಕಿತ್ತಳೆರಸ ತುಂಬಿದರೆ ಹೇಗಿರುತ್ತೋ ಹಾಗೆ ಸೂರ್ಯ ಕೆಂಪಗೆ ಹೊಳೆಯುತ್ತಿದ್ದ." (ಪು. ೮೧) -ಇಂತಹ ಸಾಲುಗಳು ಬರವಣಿಗೆಯ ಸೊಗಸಿಗೆ ಉದಾಹರಣೆಗಳಾಗಿವೆ. ಎರಡನೆ ಭಾಗ ಟ್ರೆಕ್ಕಿಂಗ್‌ನ ಹತ್ತನೇ ದಿವಸದಿಂದ ಪ್ರಾರಂಭವಾಗುತ್ತದೆ. ೩೦೦೦ ಅಡಿ ಎತ್ತರದ ಕೌಲಿಪಾಸ್ ಹತ್ತಿ ೪೦೦೦ ಅಡಿ ಕೆಳಗೆ ಇಳಿಯುವ ಚಾರಣದ ಅನುಭವ ಸೊಗಸಾಗಿ ಬಂದಿದೆ. ಮಂಜಿನ ಹಾದಿಯಿಲ್ಲಿ ಕಷ್ಟಪಟ್ಟು ನಡೆದು ಕೌಲಿಪಾಸ್ ಸೇರಿದಾಗ ಹಿಮಾಲಯದ ಆ ಅತಿ ಸುಂದರಸ್ಥಳದ ವರ್ಣನೆಯನ್ನು ಓದಿಯೇ ಅನುಭವಿಸಬೇಕು. ಆ ಸ್ಥಳ ಮುಟ್ಟಿದಾಗ "ಎಲ್ಲೆಲ್ಲೂ ಮುಂಜಾವಿನ ಫೊಂ ಬೆಳಕು ಹರಡಿತ್ತು. ಬಣ್ಣ ಬಣ್ಣದ ಹೂಗಳು ನಮ್ಮನ್ನು ಸ್ವಾಗತಿಸಲೆಂದೇ ಅರಳಿವೆಯೇನೋ ಎನ್ನುವಂತೆ ಮಂದಹಾಸ ಬೀರುತ್ತಿದ್ದವು. ಪ್ರಕೃತಿಯ ಸಂಪೂರ್ಣ ಸೊಬಗು ಈ ಸ್ಥಳದಲ್ಲಿದೆ. ಇಷ್ಟೆಲ್ಲ ಕಷ್ಟಪಟ್ಟು ಮೇಲೆ ಬಂದದ್ದಕ್ಕೂ ಸಾರ್ಥಕವಾಯಿತು ಎನ್ನುವ ಭಾವ ತುಂಬಿತ್ತು. ಜೀವನದಲ್ಲಿ ದೊಡ್ಡದೇನನ್ನೋ ಸಾಧಿಸಿದೆನೆಂಬ ಭಾವನೆ. ಯಾವ ಪರೀಕ್ಷೆ ಪಾಸಾದಾಗಲೂ ಇಂತಹ ಭಾವನೆ ಮೂಡಿರಲಿಲ್ಲ. ಎತ್ತ ನೋಡಿದರತ್ತ ಪರ್ವತ, ವೃಕ್ಷಗಳು, ಗಂಭೀರ ರುದ್ರರಮಣೀಯತೆ ಎದ್ದು ತೋರುತ್ತಿತ್ತು. ಇಂತಹ ಸ್ಥಳಗಳಲ್ಲೇ ನಮ್ಮ ಋಷಿ ಮುನಿಗಳು ತಪಸ್ಸನ್ನಾಚರಿಸುವುದು, ಸತ್ಯದರ್ಶನ ಪಡೆದು ಕೊಳ್ಳುವುದಲ್ಲವೆ? ಖಂಡಿತ ಈ ಸ್ಥಳದಲ್ಲಿ ಯಾವುದೇ ವ್ಯಕ್ತಿ ಬದಲಾಗುವಂತಹ ಶಕ್ತಿಯಿದೆ. ದೇವರು, ದೇವತೆ -ಇವೆಲ್ಲ ಸುಳ್ಳು, ಅದನ್ನು ಮೀರಿದ ಶಕ್ತಿಯಿದೆ. ಇಲ್ಲ ಮನಸ್ಸು ಸ್ಪಂದಿಸಬಲ್ಲುದು ಅವರ್ಣನೀಯ ಅನುಭವ ನೀಡಬಲ್ಲದು ಎನ್ನಲು ಈ ಸ್ಥಳವೇ ಸಾಕ್ಷಿ. ಯಾವುದೋ ಚಿತ್ರಕ್ಕೆ ದೇವರೆಂದು ಹೆಸರು ನೀಡಿ ನಮಸ್ಕರಿಸುತ್ತೇವೆ. ಇಂತಹ ಸ್ಥಳದಲ್ಲಿ ದೊರಕುವ ಅತೀತ ಅನುಭವ ಶಬ್ದಗಳಿಂದ ಸಾಧ್ಯವಿಲ್ಲ. ಯಾವ ನಾಸ್ತಿಕನೂ ಇಂಥ ಪರಿಸರದಲ್ಲಿ ಅಂತರಾತ್ಮನ ಅತೀತತೆಯ ಬಗ್ಗೆ ಯೋಚಿಸದಿರಲಾರ. ಸಾಕ್ಷಾತ್ಕಾರವಾಗುವುದಾದರೆ ಇಲ್ಲೇ ಆಗಬಹುದು." (ಪು. ೩೦-೩೧)

ಯೂತ್ ಹಾಸ್ಟಲ್ ಅಸೋಸಿಯೇಷನ್ ಆಫ್ ಇಂಡಿಯಾದವರು ಟ್ರೆಕ್ಕಿಂಗ್‌ಗೆ ಬಂದವರಿಗೆ ಸರ್ಟಿಫಿಕೇಟ್ ಕೊಟ್ಟಾಗ ಶಮಂತ ಹೇಳುವರು:

ನಾನು ನೋಡಿಲ್ಲದ ಕೇಳಿಲ್ಲದ ಯಾವುದೋ ವಿಷಯಗಳನ್ನು ಓದಿ, ಉರುಪಚ್ಚಿ ಪಾಸಾಗುವುದಕ್ಕೂ ನಮ್ಮದೇ ಪರಿಶ್ರಮ, ಅನುಭವಕ್ಕೊಂದು ಸರ್ಟಿಫಿಕೇಟ್ ಪಡೆಯುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ಸರ್ಟಿಫಿಕೇಟ್ ನನಗೆ ಹೇಳಿಕೊಳ್ಳಲು ಖುಷಿಯಾಗುತ್ತಿದೆ" (ಪು. ೬೪).

ಗಟ್ಟಿಯಾಗಿರೋ ಜೀನ್ಸ್ ಪ್ಯಾಂಟ್ ಹಾಕ್ಕೊಂಡು ಅದನ್ನು ಬದಲಿಸದೆ ಹದಿಮೂರು ದಿನಗಳನ್ನು ಹಿಮಾಲಯದ ಚಾರಣದಲ್ಲಿ ಕಳೆದ ಅನುಭವಗಳ ಮಧುರ ಸ್ಮೃತಿಯನ್ನು ಇಲ್ಲಿ ಶಮಂತರವರು ದಾಖಲಿಸಿರುವರು. ಇದು ಮಕ್ಕಳಿಗಾಗಿ ಬರೆದ ಪುಸ್ತಕವೆಂದು ಹೇಳಿ ಕೊಂಡಿದ್ದರೂ ಅಲ್ಲಿನ ಲವಲವಿಕೆಯ ತಿಳಿಹಾಸ್ಯದ ಬರವಣಿಗೆಯ ಸೊಗಸು ದೊಡ್ಡವರಿಗಾಗಿಯೇ. ಜಸ್ವಂತ್ ಸಿಂಗ್‌ನನ್ನು ಹಿಟ್ಲರ್, ರವಿಯನ್ನು ಚಾಪ್ಲಿನ್, ಶಮಂತಳನ್ನು ಜಾಂಬವತಿ, ಮಂಜನನ್ನು ಹರಕ ಮಂಜ ಎಂದೆಲ್ಲಾ ಹೆಸರಿಟ್ಟು ಲೇವಡಿ ಮಾಡುವ ಇಲ್ಲಿನ ತಿಳಿಹಾಸ್ಯ ಆಸ್ವಾದನೀಯವಾದುದು.

ಹ.ರಾ. ಪುರೋಹಿತರು ತಿರುಪತಿಯಿಂದ ಪ್ರಾರಂಭಿಸಿ ರಾಮೇಶ್ವರ, ಕನ್ಯಾಕುಮಾರಿಯವರೆಗಿನ ದಕ್ಷಿಣ ಭಾರತದ ಎಲ್ಲಾ ಯಾತ್ರಾಸ್ಥಳಗಳನ್ನು ಸು. ಒಂದು ತಿಂಗಳ ಕಾಲಾವಧಿಯಲ್ಲಿ ಪ್ರವಾಸ ಮಾಡಿ ಬರೆದ ಪ್ರವಾಸಿ ಕೈಪಿಡಿ **'ರಾಮೇಶ್ವರ ಕನ್ಯಾಕುಮಾರಿ ದರ್ಶನ'**. ಈ ಕೈಪಿಡಿ ಪ್ರವಾಸಿಗಳಿಗೆ ತುಂಬ ಉಪಯುಕ್ತವಾಗಿದ್ದು, ವಿವರವಾದ ಸ್ಥಳದ ಮಾಹಿತಿಗಳನ್ನು ಒಳಗೊಂಡಿದೆ. ಪ್ರವಾಸ ಕೈಗೊಂಡ ಒಂದೊಂದು ಸ್ಥಳದ ಬಗೆಗೂ ಸೊಗಸಾಗಿ ವಿವರಣೆ ನೀಡುವ ಮೂಲಕ ಲೇಖಕರು ಪ್ರವಾಸ ಕೈಗೊಳ್ಳುವವರಿಗೆ ಮಾರ್ಗದರ್ಶಿಯಾಗಿರುವರು.

ಪಿ.ಆರ್. ಜಯಲಕ್ಷ್ಮಮ್ಮನವರ **ಬದರೀ ಯಾತ್ರೆ***ಯು ಬದರಿಯಾತ್ರೆ ಹೊರಡುವವರಿಗೆ ಒಂದು ಕೈಪಿಡಿಯಂತಿದೆ. ತೀರ್ಥಯಾತ್ರೆಯಿಂದ ಮನಸ್ಸಿಗೆ ನೆಮ್ಮದಿ, ಆತ್ಮಕ್ಕೆ ಸಂತೋಷ, ಇಹ-ಪರ ಸಾಧನೆ ಲಭ್ಯವಾಗುತ್ತದೆಂಬ ಭಾವನೆ ಇರುವವರು ನಡೆಸುವ ಪ್ರವಾಸದಂತೆ 'ಬದರೀ ಯಾತ್ರೆ'ಗೆ ಸಂಬಂಧಿಸಿದ ಈ ಕೃತಿಯೂ ಇದೆ. "ಇದು ಪ್ರವಾಸ ಸಾಹಿತ್ಯಕ್ಕಿಂತ ಹೆಚ್ಚಾಗಿ ಕ್ಷೇತ್ರ ಪರಿಚಯದ ಪುಸ್ತಕ ಎಂದರೆ ಎಲ್ಲವನ್ನೂ ಹೇಳಿದಂತಾಗುತ್ತದೆ."[೧]

---

೧. ಬಿ.ಎ. ವಿವೇಕ ರೈ : ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಪ್ರಬುದ್ಧ ಕರ್ಣಾಟಕ, ಸಂ. ೫೨.೩, ಪು. ೧೦೩.

* ಈ ಚಿಪ್ಪೆಯ ಕೃತಿಯನ್ನು ನಾನು ಖುದ್ದಾಗಿ ಅವಲೋಕಿಸಿಲ್ಲ.

ಯು. ರಾಘವೇಂದ್ರ ಕೃಷ್ಣಭಟ್ಟರ **ರಜತ ಪೀಠದಿಂದ ರಜತಾದ್ರಿಗೆ*** ಎಂಬ ಸಚಿತ್ರ ಪ್ರವಾಸ ಗ್ರಂಥವು ಉಡುಪಿಯಿಂದ ಹೊರಟು ಕೇದಾರನಾಥ, ತುಂಬನಾಥ, ಬದರೀನಾಥದವರೆಗಿನ ಯಾತ್ರೆಯನ್ನು ಸವಿಸ್ತಾರವಾಗಿ ತಿಳಿಸುತ್ತದ.[೧] ಮೈಸೂರು ರಾಮಕೃಷ್ಣಾಶ್ರಮದ ಪ್ರಕಟನೆಯಾದ **ಸೋಮನಾಥ ಯಾತ್ರೆ*** ಶ್ರೀಕಂಠಶಾಸ್ತ್ರಿಯವರ **ಮಾನಸ ಸರೋವರ ಮತ್ತು ಕೈಲಾಸ ಕ್ಷೇತ್ರಾಪಕರಣ*** ಎಂ. ವೆಂಕಟಾಚಲಭಟ್ಟರ **ಕಾಶ್ಮೀರ ಅಮರನಾಥ ಯಾತ್ರೆ*** ಭದ್ರಗಿರಿ ಕೇಶವದಾಸರ **ದಾಸಕೀರ್ತನ ಮಂಡಳಿಯ ಪ್ರಥಮ ಯಾತ್ರೆ,** ಕೆ. ಗಣೇಶಮಲ್ಯರ **ಶರಾವತಿಯಿಂದ ಗೋದಾವರಿವರೆಗೆ,** ಹ.ರಾ. ಪುರೋಹಿತರ **ಶ್ರೀ ಬದರಿ ಕೇದಾರ ದರ್ಶನ** ಹಾಗೂ **ರಾಮೇಶ್ವರ ಕನ್ಯಾಕುಮಾರಿ ದರ್ಶನ,** ವಿ. ನಾರರವರ **ಯಾತ್ರಿಕನ ಪತ್ರಗಳು,** ಹೆಚ್.ಆರ್. ನಾಗರಾಜ್‌ರವರ **ಹಿಮಾಚಲ ಪ್ರದೇಶ*** ಕೋ. ಚನ್ನಬಸಪ್ಪನವರ **ದಕ್ಷಿಣೇಶ್ವರ ದರ್ಶನ***, ಟಿ. ಚಂದ್ರರಾಜಶೆಟ್ಟಿಯವರ **ಮಂಗಳೂರಿನಿಂದ ಮಧುರೆಗೆ*** -ಇವು ಹೆಸರಿಸಬಹುದಾದ ತೀರ್ಥಯಾತ್ರಾ ಸಾಹಿತ್ಯ ಕೃತಿಗಳು. ಜಿ. ವೆಂಕಟಯ್ಯನವರ **ಚಿನ್ನದ ಗಿರಿಯ ಯಾತ್ರೆ*** ಹಾಗೂ ಕೆ. ಗೋಪಾಲಕೃಷ್ಣರಾಯರ **ತಿರುಪತಿಯ ಯಾತ್ರೆ** ತಿರುಪತಿ ವೆಂಕಟರಮಣನ ದರ್ಶನಕ್ಕಾಗಿ ನಡೆಸಿದ ಯಾತ್ರಾ ಕಥನವಾಗಿದೆ. "ಪ್ರವಾಸ ಸಾಹಿತ್ಯವಾದರೂ ಇವು ಕಾದಂಬರಿಯಂತೆ ಆಕರ್ಷಕವಾಗಿವೆ. ಬರವಣಿಗೆಯ ಶೈಲಿಯಲ್ಲಿ ಕ್ಷೇತ್ರ ಪರಿಚಯದ ರೀತಿಯಲ್ಲಿ ಸೊಗಸು ಇದೆ."[೧] ರಾಯಚೂರು ಜಿಲ್ಲೆಯಲ್ಲಿಯ ಶ್ರೀಕ್ಷೇತ್ರ **ಕುರುವಪುರ ಕುರುಂಡಿಯ ಪರಿಚಯ, ಸವದತ್ತಿಯ ಎಲ್ಲಮ್ಮಾ, ಸಂಪೂರ್ಣ ಶ್ರೀಶೈಲ ಮಹಾಕ್ಷೇತ್ರ ದರ್ಶನ, ಹೊಂಬುಜ ಕ್ಷೇತ್ರ, ಕಾರ್ಕಳದ ಚರಿತ್ರೆ** ಮುಂತಾದ ಗ್ರಂಥಗಳಲ್ಲಿ ಕ್ಷೇತ್ರ ಪರಿಚಯದ ಜೊತೆಗೆ ಆಯಾ ಕ್ಷೇತ್ರದ ಪುಣ್ಯಮೂರ್ತಿಗಳ ಬಗೆಗಿನ ಹಾಡುಗಳನ್ನೂ ನಾವು ನೋಡಬಹುದು.[೧]

ಎಸ್. ಶಂಕರನಾರಾಯಣ ಭಟ್ಟರು **ಕೈಲಾಸ ಮಾನಸ ಸರೋವರಕ್ಕೆ** ಯಾತ್ರೆ ಹೊರಟು ತಮ್ಮ ಅನುಭವಗಳನ್ನು ಬರಹರೂಪದಲ್ಲಿ ಕೊಟ್ಟಿರುವರು. ಪ್ರವಾಸಿಗರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಕಾಲು ನಡಿಗೆಯಲ್ಲಿ ಹೋಗಬೇಕಾದ ಸ್ಥಳ, ನೋಡಬೇಕಾದ ಸ್ಥಳ, ತಂಗಬೇಕಾದ ಸ್ಥಳ, ಎಲ್ಲಿ ಹೆಚ್ಚಿನ ಸೌಲಭ್ಯಗಳು ದೊರೆಯುತ್ತವೆ ಎಂಬೆಲ್ಲ ವಿವರಗಳನ್ನು ವಿಸ್ತೃತವಾಗಿ ಹೇಳಿರುವರು. ಇದು ಕೈಲಾಸ ಮಾನಸ ಸರೋವರಕ್ಕೆ ಯಾತ್ರೆ ಕೈಗೊಳುವವರಿಗೆ ಕೈಪಿಡಿಯಂತಿದೆ.

ಎಂ. ರಾಜಗೋಪಾಲ್‌ರವರ **ಸಾಕಾರದಿಂದ ನಿರಾಕಾರಕ್ಕೆ** ಕೈಲಾಸ ಮಾನಸಸರೋವರದ ಪ್ರವಾಸ ಕಥನ. ಅದು ಅನುಭವ ಕಥನವೂ ಮಾರ್ಗದರ್ಶಿ

---

೧. ನೋಡಿ : ವರದರಾಜ ಹುಯಿಲಗೋಳ : ಪ್ರವಾಸ ಸಾಹಿತ್ಯ, ಪ್ರಬುದ್ಧ ಕರ್ನಾಟಕ, ಚಿನ್ನದ ಹಂಚಿಕೆ (ಸಾಹಿತ್ಯ ಸಂಪುಟ) ಪು. ೩೪೭.

ಕ್ಲೈಪಿಡಿಯೂ ಆಗಿದೆ. ಲೇಖಕರು ತಮ್ಮ ಕೃತಿಯನ್ನು ಐದು ಭಾಗಗಳಾಗಿ ವಿಂಗಡಿಸಿಕೊಂಡಿರುವರು. ತಾವು ಹೊರಟ ಮಾರ್ಗ, ಚಾರಣದ ಹಾದಿ, ಶಿಬಿರ, ಪ್ರಕೃತಿಯ ಸೊಗಸು, ಹವಾಮಾನ ವೈಪರೀತ್ಯ, ಪ್ರವಾಸ ಕಾಲದಲ್ಲಿ ಸಹಯಾತ್ರಿಗಳ ಸ್ವಭಾವ, ಶಿಬಿರದಲ್ಲಿ ತಂಗಿದ್ದಾಗ ನೀರು ವಿದ್ಯುಚ್ಛಕ್ತಿಯ ಕೊರತೆ, ಶೌಚಾಲಯದ ಅಸಹ್ಯಸ್ಥಿತಿ, ಮೂಲಭೂತ ಆವಶ್ಯಕತೆಗಳ ಬಗ್ಗೆ ಗಮನಹರಿಸದ ಅಧಿಕಾರಿಗಳ ವರ್ತನೆ- ಇವು ಈ ಪ್ರವಾಸಕಥನದಲ್ಲಿ ಚರ್ಚಿತ ವಿಷಯಗಳು. ಚೀನಾದೇಶದಲ್ಲಿ ಚೀನೀಯರು ಭಾರತೀಯರನ್ನು ಅಸಭ್ಯವಾಗಿ, ಕೀಳಾಗಿ ಕಾಣುವುದು, ಬೇಕೆಂದೇ ಅವಹೇಳನ ಮಾಡುವುದು ಲೇಖಕರಿಗೆ ನೋವು ತಂದ ಸಂಗತಿ. ಕೈಲಾಸ, ಮಾನಸದಂತಹ ನಿರ್ಮಲ ಪ್ರದೇಶದಲ್ಲಿಯೂ ಮಾನವನಿರ್ಮಿತ ಗಲೀಜು, ಪರಿಸರ ಮಾಲಿನ್ಯವನ್ನು ಕಂಡು ಲೇಖಕರಿಗೆ ಆಶ್ಚರ್ಯವಾಗುತ್ತದೆ. ಜೀವಕ್ಕೆ ಯಾವುದೇ ಭರವಸೆಯಿಲ್ಲದೆ ನಡೆಸಿದ ಈ ಪ್ರವಾಸದಲ್ಲಿ ಮುಖ್ಯವಾಗಿ ಎದುರಾದದ್ದು, ಹವಾಮಾನ ವೈಪರೀತ್ಯ. ಇದರ ಜೊತೆಗೆ ಸಂಪರ್ಕಾಧಿಕಾರಿಯ ಉದ್ಧಟತನ, ಗೈಡ್‌ನ ಉಡಾಫೆ, ಘೋಡಾವಾಲಾ- ಗಳಿಂದ ಕಳ್ಳತನ, ಸಹಯಾತ್ರಿಗಳ ಒಳಜಗಳಗಳು ವಿವರಗಳು -ಈ ಎಲ್ಲ ಪ್ರವಾಸ ಕಥನದಲ್ಲಿ ಬಂದಿವೆ.

ಗುರುಮೂರ್ತಿ ಪೆಂಡಕೂರು ತಮ್ಮ ತಾಯಿ - ತಂದೆ - ಪತ್ನಿಯ ಜೊತೆ ಅಮರನಾಥ ಪ್ರವಾಸ ಮಾಡಿದ್ದು ೧೯೭೭ರಲ್ಲಿ. ಕಳೆದ ೨೫ ವರ್ಷಗಳ ಅವಧಿಯಲ್ಲಿ ಆ ಪ್ರವಾಸದ ಅನುಭವಗಳನ್ನು ಆಗಷ್ಟು ಈಗಷ್ಟು ಗುರುತು ಹಾಕಿದ್ದರು. ಆ ದೀರ್ಘಾವಧಿ ಕಾಲದಲ್ಲಿ ಬದುಕು ನೀಡಿದ ಕಷ್ಟಕೋಟಲೆಗಳಲ್ಲಿ ಯಾತನಾಪೂರ್ವದಲ್ಲಿ ಅಮರನಾಥದ ಅನುಭವಗಳು ಕಮರಿಹೋಗಬೇಕಿತ್ತು. ಆಶ್ಚರ್ಯವೆಂದರೆ, ಪ್ರವಾಸ ಮುಗಿಸಿದ ಹೊಸತರಲ್ಲೇ ಅನುಭವಗಳನ್ನು ಶಾಬ್ದಿಕವಾಗಿ ದಾಖಲಿಸಿದ ಅನುಭವ ಕಥನದ ರೀತಿಯಲ್ಲಿಯೇ ಇಲ್ಲಿನ ಬರವಣಿಗೆ ತಾಜಾತನದಿಂದ ಕೂಡಿದೆ.

ಅಮರನಾಥ ಪ್ರವಾಸದಲ್ಲಿ ಪ್ರಕೃತಿಯ ಅದ್ಭುತ ರಮ್ಯ ನೋಟಗಳು ಕಣ್ಣು-ಮನಗಳಿಗೆ ಆನಂದದಾಯಿಯಾಗಿರುವಂತೆ ಹೆಜ್ಜೆ ಹೆಜ್ಜೆಗೂ ಅಪಾಯದ ಅಂಚಿನಲ್ಲಿ ಸಾಗುವ ಪಯಣ ಭಯಾನಕವೂ ಆಗಿದೆ. ಕಡಿದಾದ ದಾರಿ, ಕುಸಿಯುವ ನೆಲ, ದಿಢೀರನೆ ಸುರಿಯುವ ಮಳೆ, ರಕ್ತ ಹೆಪ್ಪುಗಟ್ಟಿಸುವ ಚಳಿ, ಇದ್ದಕ್ಕಿದ್ದ ಹಾಗೆ ಕೈಕೊಡುವ ಆರೋಗ್ಯ -ಇಂತಹ ಪರಿಸ್ಥಿತಿಯಲ್ಲೂ ಅಮರನಾಥನ ದರ್ಶನಕ್ಕಾಗಿ ಅಪಾಯದ ಅರಿವಿದ್ದೂ ಭಕ್ತಿ, ಶ್ರದ್ಧೆಗಳೇ ನಚ್ಚುಗೆಯಾಗಿ ಪ್ರವಾಸ ಕೈಗೊಳ್ಳುವ ಜನಪ್ರವಾಹ ಒಂದು ಕಡೆ; ಬೆಳಗಿನ ನಾಲ್ಕುವರೆ ಗಂಟೆಯ ಬ್ರಾಹ್ಮಿಮುಹೂರ್ತದ ಸಮಯ, ರಕ್ತ ಹೆಪ್ಪುಗಟ್ಟುವಂತಹ ಚಳಿ, ಗಾಳಿ, ತುಂತುರು ಮಳೆಯಲ್ಲಿ ಹತ್ತಾರು ಸಾವಿರ ನಾಗಾ ಸಾಧುಗಳು ಬೆತ್ತಲೆಯಾಗಿ, ಜಟಾಜೂಟಗಳನ್ನು ಹರಡಿಕೊಂಡು ಕೈಯಲ್ಲೊಂದು ಕಮಂಡಲು, ಕೋಲು ಹಿಡಿದವರು ಶಂಕರಾಚಾರ್ಯರ ಛಡಿಯನ್ನು ಮುಂದೆ

ಮಾಡಿಕೊಂಡು, ಜಯಘೋಷ ಮಾಡುತ್ತಾ ಅಮರನಾಥ ಯಾತ್ರೆ ಮಾಡುವ ಸಾಧು ಸನ್ಯಾಸಿಗಳ ಕಾರಾವಾನ್ ಇನ್ನೊಂದು ಕಡೆ. ಲೇಖಕರಿಗೆ ಇದೊಂದು ಅದ್ಭುತವಾಗಿ ಕಾಣುತ್ತದೆ. ಗುರುಮೂರ್ತಿ ತಮ್ಮನ್ನು ತಾವೇ ಕೇಳಿಕೊಳ್ಳುವರು, ದೈವದ ಮೇಲಿನ ಅಚಲವಾದ ಭಕ್ತಿಶ್ರದ್ಧೆಗಳಿಗೆ ಕಾಲ ಯಾವುದಾದರೇನು ಎಂದು: "ಇದು ಯಾವ ಯುಗವೋ? ಭಾರತದ ಜೀವನಧಾರೆಯಲ್ಲಿ ಅನೇಕ ಬಾರಿ ಕಾಲಗತಿ ಸ್ತಂಭಿಸಿಬಿಡುತ್ತದೆ. ಮುಕ್ತಿಗಾಗಿ ವಾರಣಾಸಿಯ ಗಂಗೆಗೆ ಬೀಳುವರೂ, ಮೋಕ್ಷಕ್ಕಾಗಿ ಜಗನ್ನಾಥ ರಥಚಕ್ರದೆಡೆಗೆ ಧಾವಿಸಿ ಸಾಯುವವರೂ, ನಾನಾರೀತಿಯ ದೈಹಿಕ ಹಿಂಸೆ ಮಾಡಿಕೊಳ್ಳುವಂತಹ, ಬೆಂಕಿಯ ಮೇಲಿನ ನಡೆ, ಗುಗ್ಗುಳ ಇತ್ಯಾದಿ ನಡೆವಾಗ ಕಾಲಗತಿಯು ಎಲ್ಲೋ ಸ್ತಂಭಿಸಿದಂತಾಗುತ್ತದೆ" (ಪು. ೪೨).

ಭೋಲೇನಾಥನ ಮೇಲಿನ ಅಚಲವಾದ ಭಕ್ತಿ, ಶ್ರದ್ಧೆ, ನಂಬಿಕೆಯನ್ನು ಗುರುಮೂರ್ತಿಯವರ ವೈಚಾರಿಕಪ್ರಜ್ಞೆ ಒರೆಹಚ್ಚಿ ನೋಡವುದು ಪಹಲೇಗಾಂವ್‌ನ ಗೌರೀಶಂಕರ ದೇವಾಲಯದಲ್ಲಿ. ಅಲ್ಲಿ ನೆರೆದಿದ್ದ ಸಾಧು ಸನ್ಯಾಸಿಗಳನ್ನು ಭಜನೆಯ ಗುಂಪುಗಳನ್ನು ನೋಡಿದ ಅವರು "ಗಾಂಜಾ ಹಾಕಿ ಚಿಲುಮೆ ಸೇದುತ್ತಾ ಕುಳಿತು ಸ್ವರ್ಗವನ್ನೇ ಕಾಣುತ್ತಿದ್ದ ಗುರುಮಹಾರಾಜರುಗಳು, ಅವರ ನಡುವೆ ಮುಕ್ತಿಯ ಸಮಾಧಿಯ ಬೆನ್ನುಹತ್ತಿದ ಬಿಳಿಯರು, ಅಲ್ಲಲ್ಲಿ ಒಲೆಹೂಡಿ ರೊಟ್ಟಿ ಖಿಚಡಿ ಮಾಡಿಕೊಳ್ಳುತ್ತಿದ್ದ ಸಾಧುಗಳು, ಸಂಸಾರಿಗಳು, ನಿರಂತರ ಭಜನೆ ನಡೆಸಿದ್ದ ಭಕ್ತ ಸಮೂಹದವರು. ಇದೊಂದು ವಿಚಿತ್ರವಾದ ಪ್ರತ್ಯೇಕ ಪ್ರಪಂಚ. ಇಪ್ಪತ್ತನೇ ಶತಮಾನದ ಆಧುನಿಕ ನಗರ ಭಾರತ ಪ್ರಪಂಚಕ್ಕೂ ಈ ಪುರಾತನ ಭಾರತ ಪ್ರಪಂಚಕ್ಕೂ ಯಾವ ಸಂಬಂಧವೂ ಇಲ್ಲ. ಇವರಿಗೆ ಚಳಿಯ ಭಯವಿಲ್ಲ. ಮಳೆಯ ಹೆದರಿಕೆಯಿಲ್ಲ. ಸರಕಾರದ ಎಚ್ಚರಿಕೆಯ ಗುರುತಿಲ್ಲ. ಅವರನ್ನು ವಿಚಾರಿಸಿದರೆ ಅವರು ಹೇಳಿದ್ದು... ಹಿಮಾಲಯ ಪ್ರಾಂತದಲ್ಲಿ ಅದೂ ಶ್ರಾವಣದಲ್ಲಿ ಮಳೆ ಸುರಿಯದಿದ್ದರೆ ಮತ್ತೇನು ಸುರಿದೀತು. ನಮಗೆ ಭಸ್ಮಲೇಪವೇ ಸಾಕು, ಶಿವನಾಮಸ್ಮರಣೆ ಮಾಡುತ್ತಾ ಹೊರಟರೆ ಆಯಿತು" (ಪು. ೩೮). ಆ ಭಕ್ತರ ವಿಶ್ವಾಸ ಎಷ್ಟು ಗಟ್ಟಿಯಾದುದು, ಕವಿದುಬರುವ ಎಲ್ಲ ಆಪತ್ತುಗಳಿಗೂ ಹೆದರದೆ ಎದೆಯೊಡ್ಡಿ ನಿಲ್ಲುವ ಭೋಲೇನಾಥನ ಮೇಲಿನ ಆ ಭಕ್ತಿಯ ಆಳವೆಷ್ಟೆಂಬುದರ ಪರಿಚಯವಾಗುತ್ತದೆ.

ಚಂದನವಾಡಿಯಿಂದ ಶೇಷನಾಗದ ದಾರಿ ಕಡಿದಾದದ್ದು, ಅಪಾಯಕಾರಿ ಮತ್ತು ಕಷ್ಟಕರ. ಅದರ ವಿವರ ಪ್ರವಾಸ ಕಥನದಲ್ಲಿ ಚೆನ್ನಾಗಿ ಬಂದಿದೆ (ಪು. ೪೬). ಚಂದನವಾಡಿಯು ಸಮುದ್ರಮಟ್ಟದಿಂದ ೯,೫೦೦ ಅಡಿ ಎತ್ತರದಲ್ಲಿದೆ. ಅಲ್ಲಿ ನಿಂತು ನೋಡಿದಾಗ ಗುರುಮೂರ್ತಿಯವರ ಕವಿಮನಸ್ಸು ಗರಿಗೆದರುತ್ತದೆ. "ಸುತ್ತಲೂ ಹಿಮಾಚ್ಛಾದಿತ ಪರ್ವತಗಳು. ಆ ಪರ್ವತದ ಮೈಮೇಲೆ ಅಲ್ಲಲ್ಲಿಂದ ಹರಿದುಬರುವ ಒಯ್ಯಾರದ ನಿರ್ಝರಿಣಿಗಳು. ಮೇಲೆ ನೋಡಿದರೆ ಅನಂತದ ಭವ್ಯ ದರ್ಶನ. ಕೆಳಗೆ

ನೋಡಿದರೆ ಎಣೆಯಿಲ್ಲದ ಹಸಿರಿನ ಚೆಲುವು... ಆ ಸೌಂದರ್ಯವನ್ನು ಕಣ್ತುಂಬ ತುಂಬಿಕೊಳ್ಳುವ ಆಶೆ. ಹಾಗೆ ನೆನೆದಾಗ ತಪಸ್ಸಿಗೆ ಕುಳಿತ ಶಿವ ಮಹಾದೇವನ ನೆನಪಾಗುತ್ತದೆ. ರವಿವರ್ಮನು ಚಿತ್ರಿಸಿದ ಆ ತಪೋಮೂರ್ತಿ, ಅವನ ಹಿನ್ನೆಲೆಯಲ್ಲಿ ಹಿಮಹೊದ್ದ ಕೈಲಾಸ ಅಥವಾ ಬೆಳ್ಳಿಬೆಟ್ಟ, ಅವನ ಸತಿಸುತರು ಎಲ್ಲ ನೆನಪಾಗುತ್ತವೆ. ಪರ್ವತ ಸಾಲಿನ ಮೇಲೆಲ್ಲ ಬೆಳೆದುನಿಂತ ದೇವದಾರು ಮರಗಳು ಅತಿ ಸುಂದರವಾಗಿ ಕಾಣುತ್ತವೆ..." (ಪು. ೪೫). ಪಿಸುಘಾಟಿ ಶಿಖರ ಹಾಗೂ ಶೇಷನಾಗ ಸರೋವರದ ವರ್ಣನೆಯ ಚೆಲುವು (ಪು. ೪೭,೪೮). ಈ ಪ್ರವಾಸ ಕಥನದಲ್ಲಿ ಕಣ್ಣಿಗೆ ಕಟ್ಟುವಂತಿದೆ.

. ಮಹಾಗುಣಸ್ ಶಿಖರದಲ್ಲಿ ೩೦-೪೦ ನಿಮಿಷ ಕಳೆದಾಗ ಮನದಲ್ಲಿ ಆದ ಆನಂದದ ಅನುಭವವನ್ನು ಗುರುಮೂರ್ತಿ ಹೀಗೆ ಹೇಳುವರು: "...ಆ ತಂಗಾಳಿ, ಅಲ್ಲಿಯ ಆ ಭಯಮಿಶ್ರಿತ ಆನಂದ ಮರೆಯಲಾರದ ಅನುಭವಗಳು... ಬದುಕಿನ ದಾರಿಯಲ್ಲಿ ಇಂತಹ ಮಧುರ ಕ್ಷಣಗಳೇ ದೇವರು ಅನುಗ್ರಹಿಸಿದ ಅಮೃತನಿಧಿಯೆನ್ನ-ಬಹುದು. ಅಂಥ ಸ್ಥಳದಲ್ಲಿ ನಿಂತಾಗ ನನ್ನಂಥವನಿಗೂ 'ಚಿದಾನಂದ ರೂಪಾ ಶಿವೋಹಂ ಶಿವೋಹಂ' ಎಂಬ ಸ್ತೋತ್ರದ ಅನುರಣನವಾಗಿ ಪುಳಕಗೊಂಡೆನು. ಇನ್ನೊಮ್ಮೆ ಬರಲಸಾಧ್ಯವಾದ ಜೀವನದಲ್ಲಿ ಒಮ್ಮೆ ಮಾತ್ರ ಮಾಡಬಹುದಾದ ಇಂತಹ ಕಡುಕಷ್ಟತರ ಯಾತ್ರೆಯಲ್ಲಿ ಈ ಸಂತಸಾನುಭವದ ಕ್ಷಣಗಳೇ ಪ್ರತಿಫಲ" (ಪು. ೫೬). ಇದೇ ಭಾವ ಹರಿಸಿಂಗ್ ಟಾಪ್‌ನಲ್ಲಿ ನಿಂತು ಕೆಳಗೆ ನೋಡಿದಾಗಲೂ ಗುರುಮೂರ್ತಿಯವರಿ-ಗಾಗುತ್ತದೆ (ಪು. ೬೧). ಹರಿಸಿಂಗ್‌ಟಾಪ್‌ನಿಂದ ಕೆಳಗೆ ಕಿರುದಾರಿಯಲ್ಲಿ ಒಂದೆರಡು ಮೈಲು ಹಿಮದ ಮೇಲೆ ಸಾಗುತ್ತ ಸಾಗುತ್ತ ಅಮರನಾಥನ ಕಣಿವೆಗೆ ಪಾದಾರ್ಪಣ ಮಾಡುವರು. ಅಮರಗಂಗಾದ ಎರಡೂ ಕಡೆ ಕಣ್ಣು ಕಾಣುವವರೆಗೆ ಅರಳಿ ಮುಖಮಾಡಿ ನಿಂತ ಹೂಗಳು. ಸಾವಿರಾರು ತರಹೆಯ ಹೂಗಳು ಈ ಶಿವನ ತೋಟದಲ್ಲಿ ಅರಳಿರುವುದನ್ನು ಕಂಡ ಗುರುಮೂರ್ತಿಯವರು ಇಲ್ಲಿಗೆ ಸಸ್ಯಶಾಸ್ತ್ರಜ್ಞರಾದ ಬಿ.ಜಿ.ಎಲ್. ಸ್ವಾಮಿ ಬರಬೇಕಿತ್ತು ಎಂದು ನೆನೆದುಕೊಳ್ಳುವರು (ಪು. ೬೩).

ತಾವು ಕೇಳಿದ ಅನೇಕ ಪುರಾಣ ಕಥೆಗಳ, ಐತಿಹ್ಯಗಳ ಹಿನ್ನೆಲೆಯಲ್ಲಿ ಅಮರನಾಥ ಪ್ರವಾಸ ಕಥನ ಸಾಗುತ್ತದೆ. (ಪು. ೪೭, ೫೨, ೫೩, ೫೮ ಇದಕ್ಕೆ ಉದಾಹರಣೆಯಾಗಿ ಕೊಡಬಹುದು).

ಅಮರನಾಥ ಗುಹೆಯ ದರ್ಶನ ಮಾಡಿದಾಗ ಗುರುಮೂರ್ತಿಯವರು ಸಿಸ್ಟರ್ ನಿವೇದಿತಾ ಬರೆದ 'ಸ್ವಾಮಿ ವಿವೇಕಾನಂದ ಅಮರನಾಥ ಯಾತ್ರೆ'ಯ ನೆನಪಾಗುತ್ತದೆ. ಅವರು ಮಾಡಿದ ಗುಹೆಯ ವರ್ಣನೆ, ಗುಹೆಯಲ್ಲಿ ಕಾಲಿಟ್ಟೊಡನೆ ಅವರಿಗಾದ ಅನುಭೂತಿ ಇವೆಲ್ಲವನ್ನೂ ದಾಖಲಿಸಿರುವರು (ಪು. ೬೬). ಬೃಹತ್ತಾದ ಗುಹೆ. ಎತ್ತರದ ಪೀಠದ ಮೇಲೆ ಸುಮಾರು ಆರಡಿ ಎತ್ತರದ ಬಿಳಿ ಹಸಿರಿನ ಬಣ್ಣದ ಗಟ್ಟಿ ಹಿಮಲಿಂಗ. ಪಕ್ಕದಲ್ಲಿ ದೇವಿ ಪಾರ್ವತಿಯ ಸಂಕೇತವಾಗಿ ಒಂದಡಿ ಎತ್ತರದ ಲಿಂಗ. ಇನ್ನೊಂದು

ಪಕ್ಕದಲ್ಲಿ ಅರ್ಧ ಅಡಿ ಎತ್ತರದ ವಿನಾಯಕ ಪ್ರತೀಕ. ಅಮರನಾಥ ಸ್ವಾಮಿಯನ್ನು ಮನಸ್ಸಿನ ತುಂಬಾ, ಹೃದಯದ ತುಂಬಾ ಪಂಚಪ್ರಾಣಗಳಲ್ಲಿ ತುಂಬಿಕೊಂಡ ಗುರು ಮೂರ್ತಿಯವರು ಧನ್ಯತೆಯ ಭಾವದಲ್ಲಿ ನಿಲ್ಲುವರು. 'ಅಮರನಾಥನ ಆಕರ್ಷಣೆ ಅದೆಂಥದ್ದೆಂದು ಬಣ್ಣಿಸಲಸಾಧ್ಯ' ಎನ್ನುವರು. ಆ ಸಂದರ್ಭದಲ್ಲಿ ಅವರ ತಾಯಿ ರಚಿಸಿದ ಆಶುಪದ್ಯವನ್ನು ಕೊಡುವರು (ಪು. ೬೭-೬೮). ಸ್ವಾಮಿ ವಿವೇಕಾನಂದರು ರಚಿಸಿದ ಒಂದು ಶಿವಸ್ತೋತ್ರವನ್ನು ನೆನಪಿಸಿಕೊಳ್ಳುವರು (ಪು. ೬೯).

ಕೃತಿ ಅಮರನಾಥ ಪ್ರವಾಸವಾದರೂ ಅದರ ಪ್ರಾರಂಭದಲ್ಲಿ ಹೈದರಾಬಾದ್, ದಿಲ್ಲಿಯ ಪ್ರವಾಸಾನುಭವಗಳೂ ಸೇರಿವೆ. ಸಾಲಾರ್‌ಜಂಗ್ ಮ್ಯೂಸಿಯಂ ನೋಡಿದಾಗ ಕೊಪ್ಪಳದ ನವಾಬನಾಗಿದ್ದ ಸಾಲಾರ್‌ಜಂಗ್ ಬಗ್ಗೆ ಅವರಿಗಿದ್ದ ಅಸಹನೆ ವ್ಯಂಗ್ಯದ ರೂಪ ತಾಳುತ್ತದೆ. ಸಾಲಾರ್‌ಜಂಗ್ ಕೊಪ್ಪಳದ ನವಾಬನಾಗಿ ಕೊಪ್ಪಳಕ್ಕೆ ಏನೂ ಮಾಡದೇ ಜನರನ್ನು ಸುಲಿದು, ಆ ದುಡ್ಡಿನಲ್ಲಿ ಸಿಕ್ಕ ಸಿಕ್ಕದ್ದು ಖರೀದಿಸಿದ. ಆತ ಅಪುತ್ರವಂತನಾಗಿ ಸತ್ತಮೇಲೆ ಅವನ ಸಂಗ್ರಹವನ್ನೆಲ್ಲಾ ಕೂಡಿಸಿ ಕೇಂದ್ರದ ಮಂತ್ರಿಗಳಾಗಿದ್ದ ಮೌಲಾನಾ ಅಜಾದ್ ಮತ್ತು ಪ್ರೊ. ಹುಮಾಯುನ್ ಕಬೀರ್‌ರವರು ಒಂದು ಮ್ಯೂಸಿಯಂ ಮಾಡಿದ್ದನ್ನು ಅವರು ನೆನೆಯುವರು (ಪು. ೧೫). ಹೈದರಾಬಾದಿನಲ್ಲಿ ತಂಗಿದ್ದಾಗ ತಂದೆ-ತಾಯಿ, ಪತ್ನಿಯೊಂದಿಗೆ 'ಮನದೇಶಂ' ಎಂಬ ಸಿನಿಮಾ ನೋಡಲು ಹೋದ ಗುರುಮೂರ್ತಿಯವರು ಆ ಸಿನಿಮಾದಲ್ಲಿ ಪ್ರಾರಂಭದಿಂದಲೂ ತೋರಿಸಿದ್ದು ಕುಡಿತ, ಜೂಜು, ಕಳ್ಳತನ ಮತ್ತು ವೇಶ್ಯಾವಾಟಿಕೆ. ಅದನ್ನು ನೋಡಿ ಜಿಗುಪ್ಸೆಗೊಂಡು ಅರ್ಧದಲ್ಲೇ ಎದ್ದುಬಂದರಂತೆ (ಪು. ೧೬). ಗುರುಮೂರ್ತಿಯವರು ದೆಹಲಿಯಲ್ಲಿ ಭೇಟಿಮಾಡಿದ ನಾನಾಜಿ ದೇಶಮುಖರ ವ್ಯಕ್ತಿಚಿತ್ರವನ್ನು ಸ್ಫುಟವಾಗಿ ಕೊಟ್ಟಿರುವರು (ಪು. ೧೭-೧೮). ಕಾಶ್ಮೀರದ ಹಜರತ್ ಬಲ್ ಮಸೀದಿಯಲ್ಲಿ ಮಹಮದ್ ಪೈಗಂಬರರ ಕೂದಲೊಂದನ್ನು ಸಂರಕ್ಷಿಸಿ ಇಡಲಾಗಿದೆ ಎಂದು ಹೇಳುತ್ತಾ ಸಿಂಹಳದ ಕ್ಯಾಂಡಿಯಲ್ಲಿ ಬುದ್ಧನ ಹಲ್ಲೊಂದನ್ನು ಸಂರಕ್ಷಿಸಿ ಇಡಲಾಗಿರುವುದನ್ನು ವ್ಯಂಗ್ಯದ ನೆಲೆಯಲ್ಲಿ ಗೇಲಿಮಾಡುತ್ತಾ "ಎಂತಹ ದ್ವಂದ್ವ : ಬುದ್ಧನೂ ಪೈಗಂಬರರೂ ಪ್ರತಿಮಾ ಅಥವಾ ಸಂಕೇತ ಪೂಜೆಯನ್ನು ವಿರೋಧಿಸಿದವರು" ಎಂದಿರುವರು (ಪು. ೨೩). ಇದೇ ಬಗೆಯ ವ್ಯಂಗ್ಯ "ಕಾಶ್ಮೀರದಲ್ಲಿ ಆಸ್ತಿಪಾಸ್ತಿ ಮಾಡುವ ಹಕ್ಕಿಲ್ಲ. ನಮ್ಮ ಸಂವಿಧಾನದ ೩೭೦ನೇ ಕಲಮಿನ ಪ್ರಕಾರ ಕಾಶ್ಮೀರದ ಶರಣ್‌ಸಿಂಗ್, ಡಾ. ಫರೂಕ್, ಮುಫ್ತಿ ಮಹಮದ್ ಮುಂತಾದವರು ಭಾರತದ ಯಾವ ಊರಲ್ಲಾದರೂ ಆಸ್ತಿಪಾಸ್ತಿ ಮಾಡಬಹುದು, ಚುನಾವಣೆಗೆ ನಿಲ್ಲಬಹುದು. ಆದರೆ ಸರ್ದಾರ್ ಪಟೇಲರು ಕೂಡಾ ಕಾಶ್ಮೀರದಲ್ಲಿ ನೆಲೆಸುವಂತಿಲ್ಲ. ಇದೊಂದು ವಿಚಿತ್ರ ವ್ಯವಸ್ಥೆ" ಎಂಬ ಸಾಲುಗಳಲ್ಲಿ ಬಂದಿದೆ (ಪು. ೪೧).

'ಅಮರನಾಥ ಪ್ರವಾಸ'ದ ಬರವಣಿಗೆಯ ಶೈಲಿ ಭಾವಪೂರ್ಣವಾದುದು; ತನ್ಮಯವಾದ ಬರವಣಿಗೆ ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ.

ಕೆ. ಸತ್ಯನಾರಾಯಣ ಅವರ **ಸದ್ದು! ದೇವರು ಸ್ನಾನ ಮಾಡುತ್ತಿದ್ದಾರೆ** ಕೈಲಾಸ-ಮಾನಸ ಸರೋವರದ ಪ್ರವಾಸ ಕಥನ. ಲೇಖಕರೇ ಹೇಳುವಂತೆ "...ಮಾನಸ ಸರೋವರ ಕೈಲಾಸದ ಅಗಾಧತೆಯ ಮುಂದೆ ನಾವು ಪಡೆಯುವ, ಪಡೆಯಬಹುದಾದ ಅನುಭವವೆಲ್ಲ ತುಂಬಾ ಸೀಮಿತವಾದದ್ದು ಎಂದು ಅನ್ನಿಸುತ್ತದೆ. ಇತ್ತ ಧಾರ್ಮಿಕ ಸ್ವಭಾವದ ಮನುಷ್ಯನೂ, ಅತ್ತ ತೀರಾ ನಾಸ್ತಿಕನೂ ಅಲ್ಲದ ನಾನು ನನ್ನ ಅನುಭವ-ಅನಿಸಿಕೆಗಳನ್ನು ಯಾವ ಪರಿಭಾಷೆಯಲ್ಲಿ ಬರೆದರೆ ಸೂಕ್ತವೆನಿಸಬಹುದು ಎಂಬ ಅನುಮಾನವು ನನ್ನನ್ನು ಕಾಡಿದೆ...

ನೆನಪು, ದಿನಚರಿ, ಮರುಸೃಷ್ಟಿ -ಇವೆಲ್ಲವನ್ನೂ ಆಧರಿಸಿ, ಬೆರೆಸಿ ಬರೆದಿರುವ ಈ ಕೃತಿ ಪ್ರವಾಸ ಮಾಹಿತಿ ಒದಗಿಸುವ ಬರವಣಿಗೆಯಲ್ಲ. ಅಲ್ಲಲ್ಲಿ ಮಾಹಿತಿಯ ಅಂಶ ಸೇರಿಕೊಂಡಿದ್ದರೂ ಬಹುಪಾಲು ಬರವಣಿಗೆ ಪ್ರಸಂಗ, ಸ್ಥಳ, ವ್ಯಕ್ತಿಗಳ ಸುತ್ತ ಅವೆಲ್ಲವೂ / ಅವರೆಲ್ಲರೂ ಒದಗಿ ಬಂದ ಕ್ರಮದಲ್ಲೇ ರಚಿಸಲ್ಪಟ್ಟಿದೆ. ಈ ಮಾತನ್ನು ಸ್ಪಷ್ಟೀಕರಣಕ್ಕೆಂಬಂತೆ ಹೇಳುತ್ತಿದ್ದರೂ ನನಗೆ ಆ ಭಾವನೆಯಲ್ಲಿ ಹೆಚ್ಚು ಆತ್ಮವಿಶ್ವಾಸವಿಲ್ಲ. Sunstroke, ಆಮಶಂಕೆಯಿಂದ ಬಳಲಿದ ಕೆಲದಿನಗಳ ಅನುಭವದ ನೆನಪು ಮಸುಕು ಮಸುಕಾಗಿ ಮಾತ್ರ ಉಳಿದಿದೆ. ಆಮ್ಲಜನಕದ ಪ್ರಯಾಣ ಕಡಿಮೆಯಿದ್ದ, ಸಮುದ್ರಮಟ್ಟದಿಂದ ಇಪ್ಪತ್ತು ಸಾವಿರ ಅಡಿ ಎತ್ತರದಲ್ಲಿ ಓಡಾಡುತ್ತಿದ್ದಾಗ ನನ್ನ ಪ್ರಜ್ಞೆಯೇ ಅಷ್ಟು ಚುರುಕಾಗಿರಲಿಲ್ಲ. ಆ ಒಂದೆರಡು ದಿನಗಳಲ್ಲಿ ನಾನು ಏನು ಮಾಡಿದೆ, ಹೇಗೆ ನಡೆದಾಡಿದೆ ಎಂಬುದೆಲ್ಲ ನನಗೊಬ್ಬನಿಗೇ ಮಾತ್ರವಲ್ಲ, ತಂಡದ ಇತರ ಸದಸ್ಯರಿಗೂ ಅಸ್ಪಷ್ಟ. ಹೀಗೆಲ್ಲಾ ಇರುವಾಗ ಪ್ರವಾಸಾನುಭವವನ್ನು ಕುರಿತು ಬರೆಯಬಹುದೇ ಬೇಡವೇ ಎಂಬ ಅನುಮಾನ ಕಾಡುತ್ತಿದ್ದಾಗ ನೆರವಿಗೆ ಬಂದದ್ದು, ಜಾನ್ ಕ್ರಾಕೌರ್‌ನ In to thin air ಎಂಬ ಪುಸ್ತಕ. ಹಿಮಾಲಯದ ಆವರಣದಲ್ಲಿ ಸಾಮಾನ್ಯರು ಪಡೆಯಬಹುದಾದ ಅನುಭವಗಳೆಲ್ಲ ಯಾವತ್ತೂ ಮಸುಕು ಮಸುಕಾಗಿರುತ್ತದೆಯೆಂದು ಸೂಚಿಸುವ ಈ ಪುಸ್ತಕ ೧೯೯೬ರಲ್ಲಿ ಹಿಮಾಲಯದ ಶಿಖರದಲ್ಲಿ ನಡೆದ ಅವಘಡಗಳನ್ನು ಕುರಿತದ್ದು. ಈ ಪುಸ್ತಕವನ್ನು ಮತ್ತೆ ಮತ್ತೆ ಓದಿದ ಮೇಲೆಯೆ ನನಗೆ ನನ್ನ ತೀರಾ ಸಾಧಾರಣ ಅನುಭವವನ್ನು ಕೂಡ ನಾಲ್ಕು ಜನರೊಡನೆ ಹಂಚಿಕೊಳ್ಳಬಹುದೆಂಬ ಧೈರ್ಯ ಬಂದದ್ದು." (ಕೆಲವು ಮಾತುಗಳು)

ಕೆ. ಸತ್ಯನಾರಾಯಣ ಅವರ ಬರವಣಿಗೆಯಲ್ಲಿನ ಪ್ರಾಮಾಣಿಕತೆ ಮೇಲಿನ ಅವರ ಮಾತುಗಳು ಉದಾಹರಣೆಗಳು. ಅವರ ಪ್ರವಾಸ ಕಥನದ ಬರವಣಿಗೆ ಅಸಾಂಪ್ರದಾಯಿಕವಾದದ್ದು. ಅವರ ಪ್ರವಾಸಾನುಭವ ಎರಡು ನೆಲೆಗಳಲ್ಲಿ ತಮ್ಮ ಅನುಭವಗಳಿಗೆ ಶಾಬ್ದಿಕರೂಪ ಕೊಡುತ್ತಾ ಹೋಗುತ್ತದೆ. ಮೊದಲನೆಯದು ಪ್ರವಾಸ

ಹೊರಟವರ ನಡುವೆ ತಾವೂ ಓರ್ವ ಪ್ರವಾಸಿಗರಾಗಿ ನಿಂತು ಸಹಜೀವಿಗಳ ವರ್ತನೆಗಳನ್ನು ವಿಡಂಬನೆಯ ನೆಲೆಯಲ್ಲಿ ಲೇವಡಿ ಮಾಡುತ್ತಾ ಹೋಗುವುದು; ಒಂದು ಪುಟ್ಟ ಪ್ರಬಂಧ ಅಥವಾ ಸಣ್ಣಕಥೆಯ ಚೌಕಟ್ಟಿಗೆ ತಮ್ಮ ಅನುಭವಗಳನ್ನು ವರ್ಗಾವಣೆ ಮಾಡುವುದು. ಇದಕ್ಕೆ 'ನಾನು ತಳ್ಳಿದ ಚೀನಾ ಬಂಡಿ' ಒಂದು ಒಳ್ಳೆಯ ಉದಾಹರಣೆ. ಮಾನವರ ವರ್ತನೆ ಎಲ್ಲಾ ಕಡೆಯೂ ಒಂದೇ ಎಂಬ ಸಾಮಾನ್ಯ ಸಂಗತಿಯನ್ನು ತಕಲ್‌ಕೋಟೆಯ ಚೀನಾ ಪೊಲೀಸ್ ಅಧಿಕಾರಿಯೊಬ್ಬನ ದರ್ಪದ ಕಥನದೊಂದಿಗೆ ವಿಶದೀಕರಿಸುವುದು. ಮೇಲಧಿಕಾರಿಯ ದರ್ಪದ ಆದೇಶವನ್ನು ಅವನ ಕೆಳಗಿನವರು ಎಷ್ಟು ಲಘುವಾಗಿ ಸ್ವೀಕರಿಸಿದರು, ಲೇವಡಿ ನೆಲೆಯಲ್ಲಿ ಧಿಕ್ಕರಿಸಿದರು ಎನ್ನುವುದು, ಚೀನಾ ದೇಶದ ಗಡಿ ಪೊಲೀಸರು ಚೀನಿ ಕರೆನ್ಸಿ, ಯುವಾನ್ ಇನ್ನೂ ಏನಾದರೂ ಬೇಕೆ? ಎಂದು ಲೇಖಕರನ್ನು ಲಾಭದ ವ್ಯಾವಹಾರಿಕ ನೆಲೆಯಲ್ಲಿ ಪ್ರಶ್ನಿಸುವುದು -ಇವುಗಳನ್ನು ಉಲ್ಲೇಖಿಸುವುದರೊಂದಿಗೆ ಪ್ರವಾಸ ಕಥನ ತನ್ನ ಇನ್ನೊಂದು ಆಯಾಮದ ಕಡೆಗೆ ಹೊರಳುತ್ತದೆ. ಕೈಲಾಸ ಮಾನವ ಸರೋವರ ಯಾತ್ರೆಯಲ್ಲಿ ಉಂಟಾದ ಸಾವು-ನೋವುಗಳ ಪಟ್ಟಿಯನ್ನು ಕುಲಕರ್ಣಿ ಒಪ್ಪಿಸುವುದರ ಹಿನ್ನೆಲೆಯಲ್ಲಿ ಸಾವಿನ ಅಂಚಿನಲ್ಲೇ ನಡೆಯುವ ಆ ಯಾತ್ರೆಯ ದಾರುಣತೆಯನ್ನೂ ಜೀವಕ್ಕೆ ಒದಗಿಬರುವ ಆಪತ್ತಿನ ಕ್ಷಣಗಳನ್ನೂ ಲೇಖಕರು ತಿಳಿಯಪಡಿಸುವರು. ಕೈಲಾಸದಲ್ಲಿ ಬರ್ಮಾ ಬಜಾರ್, ಹಿಮಾಲಯದಲ್ಲಿ ಸ್ತ್ರೀಕಂಠಯ್ಯಗಳು ಶುದ್ಧ ಲೇವಡಿಯ ಬರಹಗಳು. ತಾವು ಯಾತ್ರೆ ಹೊರಟಿರುವುದರ ಗಾಂಭೀರ್ಯವನ್ನೇ ಮರೆತು ವರ್ತಿಸುವ ವ್ಯಕ್ತಿಗಳನ್ನು, ಅವರ ವರ್ತನೆಗಳನ್ನು ವಿಡಂಬನೆ ಮಾಡುವಾಗ ಲೇಖಕರ ಪ್ರತಿಭೆ ಪಾತ್ರ ಚಿತ್ರಣದಲ್ಲಿ ತನ್ನ ಅನನ್ಯತೆಯನ್ನು ಪ್ರಕಟಪಡಿಸುತ್ತದೆ. ಆರ್.ಎಸ್.ಎಸ್.ನವರ ಹೈಟೆಕ್ ಸ್ವಾಗತ, ಅವರ ತ್ಯಾಗ ನಮಗೆ ಬೇಡ -ಎಂಬೆರಡು ಪ್ರಬಂಧಗಳು ಪ್ರವಾಸ ಕಥನದ ಚೌಕಟ್ಟಿಗೆ ಹೊಂದುವುದಿಲ್ಲ.

ಈ ಪ್ರವಾಸ ಕಥನಕ್ಕೊಂದು ಸೃಜನಶೀಲ ಬರವಣಿಗೆಯ ಆಯಾಮ ದೊರೆಯುವುದು ಎರಡನೆಯ ನೆಲೆಯಲ್ಲಿ. ಇಬ್ಬರು ದಕ್ಷಿಣ ಭಾರತೀಯರ ಸಾಧನೆ, ಸದ್ದು! ದೇವರು ಸ್ನಾನ ಮಾಡುತ್ತಿದ್ದಾರೆ ಎಂಬ ಎರಡು ಪ್ರಬಂಧಗಳಲ್ಲಿ ಕೈಲಾಸ-ಮಾನಸ ಸರೋವರದ ಅಂತರಂಗದ ದರ್ಶನ ನಮಗಾಗುತ್ತದೆ. ಕೃತಿಯ ಶೀರ್ಷಿಕೆಯ ಸದ್ದು! ದೇವರು ಸ್ನಾನ ಮಾಡುತ್ತಿದ್ದಾರೆ ಎಂಬ ಪ್ರಬಂಧದ ಮೂಲಕ ಅವರ ಸೃಜನಶೀಲ ಬರವಣಿಗೆಯ ಕಡೆಗೆ ಹೊರಳುತ್ತದೆ. ಪ್ರವಾಸ ಸಾಹಿತ್ಯದಲ್ಲಿ ಸೃಜನಶೀಲ ಬರವಣಿಗೆ ಸಾಧ್ಯವೇ ಇಲ್ಲ ಎನ್ನುವವರಿಗೆ ಮೇಲಿನ ಲೇಖನ ಒಂದು ಸವಾಲಾಗುತ್ತದೆ. ನಾನು ಈ ಲೇಖನವನ್ನು ಎರಡು ಮೂರು ಬಾರಿ ಓದಿದಾಗಲೇ ಕೈಲಾಸ-ಮಾನಸ ಸರೋವರಗಳ ಪರಿಕ್ರಮದ ಅಪೂರ್ವತೆಯ ಅನುಭವವಾಯಿತು.

ಕೆ. ಸತ್ಯನಾರಾಯಣ ಅವರ ಬರವಣಿಗೆಯಲ್ಲಿನ ವೈಚಾರಿಕ ಚಿಂತನೆಯ ನೆಲೆಗಟ್ಟಿನ ಪರಿಚಯವಿರುವವರಿಗೆ ಅವರ ಈ ಪ್ರವಾಸ ಕಥನ ಪ್ರಿಯವಾಗುತ್ತದೆ. ತಮ್ಮ ಅನುಭವಗಳ

ಗಟ್ಟಿಯಾದ ಪಾತಳಿಯಲ್ಲಿ ಅನುಭವದ ಶೋಧ ನಡೆಯುವುದರಿಂದ ಲೌಕಿಕ ವರ್ತನೆಗಳು ಹಾಗೂ ಅಲೌಕಿಕ ಅನುಭವಗಳು ಪರಸ್ಪರ ಡಿಕ್ಕಿ ಹೊಡೆಯುತ್ತವೆ. ಪ್ರವಾಸ ಕಥನದಲ್ಲೂ ವ್ಯಕ್ತಿಚಿತ್ರ ಹೇಗೆ ಅರಳಿ ನಿಲ್ಲಬಲ್ಲುದೆಂಬುದಕ್ಕೆ ಮಿನಿಗ್ಯೂರ್ ಪಾತ್ರ ಒಂದು ಒಳ್ಳೆಯ ಉದಾಹರಣೆ. ನಾರಾಯಣಸ್ವಾಮಿ, ಪ್ರಣವಾನಂದರ ವ್ಯಕ್ತಿತ್ವ ಎಲ್ಲೂ ವೈಭವೀಕರಣಗೊಳ್ಳದೆ ಚಿತ್ರಣಗೊಂಡಿದೆ. ಇಂತಹ ಸಾಧಕರು ನಮ್ಮ ಅರ್ಥಪ್ರಧಾನ ಸಂಸ್ಕೃತಿಯ ಕಾಲದಲ್ಲಿ Role Modelಗಳು ಆಗುವುದು ಸಾಧ್ಯವಿಲ್ಲ ಎಂಬ ಲೇಖಕರ ನಿಲವು ಸರಿಯಿದೆ. ಸ್ವಾಮಿ ಪ್ರಣವಾನಂದರ ಕೈಲಾಸ-ಮಾನಸ ಸರೋವರ ಪ್ರವಾಸದ ವಿವರಗಳನ್ನು ಓದಿದ ಲೇಖಕರು ಆದರಿಂದ ತುಂಬಾ ಪ್ರಭಾವಿತರಾಗಿರುವರು. ೨೩ ವರ್ಷಗಳ ಕಾಲ ಹಿಮಾಲಯದಲ್ಲಿ ವಾಸವಿದ್ದು, ೧೯೩೪-೩೫ರಲ್ಲಿ ಸ್ವಾಮಿಗಳು ಇಡೀ ಒಂದು ವರ್ಷ ಗಂಗೋತ್ರಿಯಲ್ಲೇ ಉಳಿದು ಗಂಗೆಯ ಉಗಮಸ್ಥಾನವಾದ ಗೋಮುಖಕ್ಕೆ ಅನೇಕ ಸಲ ಹೋಗಿಬಂದಿದ್ದರು. ಇಂತಹ ಅದ್ಭುತ ಸಾಧಕರ ಪ್ರವಾಸದ ವಿವರಗಳು ಲೇಖಕರ ಮೇಲೆ ಪ್ರಭಾವ ಬೀರಿದ್ದು, ಅದನ್ನು ಅವರು ಪ್ರಾಮಾಣಿಕವಾಗಿ ಒಪ್ಪಿಕೊಂಡಿರುವರು.

**ಬೆಳ್ಳಿ ಬೆಟ್ಟಗಳ ನಡುವೆ** ಡಾ|| ಬಿ.ಎಸ್. ಸ್ವಾಮಿಯವರು ಕಾಶ್ಮೀರ, ದೆಹಲಿ, ಆಗ್ರಾ, ಹರಿದ್ವಾರ ಹೃಷಿಕೇಶ -ಇವುಗಳಲ್ಲಿ ನಡೆಸಿದ ಪ್ರವಾಸದ ಅನುಭವ ಕಥನ. ೩೬ ಪುಟಗಳ ಈ ಪುಟ್ಟ ಕೃತಿಯಲ್ಲಿ ಪ್ರೇಕ್ಷಣೀಯ ಸ್ಥಳಗಳ ಪರಿಚಯವಿದೆ. ಪರಿಚಯಾತ್ಮಕ ನೆಲೆಯಲ್ಲಿರುವುದರಿಂದ ಇದನ್ನು ಒಂದು ಮಾರ್ಗದರ್ಶಿ ಸಾಹಿತ್ಯವಾಗಿ ಸ್ವೀಕರಿಸಬಹುದು.

ಶ್ರೀಮತಿ ಗಿರಿಜಾ ಬಾಯಿರವರ **ಭಾರತದ ಭವ್ಯ ನದಿಗಳು** ಹಾಗೂ **ನಮ್ಮ ನದಿಗಳು** ಭಾರತದ ಮುಖ್ಯ ನದಿಗಳು ಹಾಗೂ ಪವಿತ್ರ ಕ್ಷೇತ್ರಗಳನ್ನು ಪರಿಚಯಿಸುವ ಕೃತಿಗಳು. ಮೊದಲನೆಯದು ವಿಸ್ತೃತವಾಗಿದ್ದು, ಎಲ್ಲ ಬಗೆಯ ಓದುಗ ವರ್ಗಕ್ಕೂ ಒಗ್ಗುವಂತಹದು. ಎರಡನೆಯದು ಗಾತ್ರದಲ್ಲಿ ಪುಟ್ಟದು, ಬಹುಶಃ ಮಕ್ಕಳಿಗಾಗಿ ಬರೆದುದು. ಭಾರತದ ನದಿಗಳು ಹಾಗೂ ಪುಣ್ಯಕ್ಷೇತ್ರಗಳು ನಮ್ಮ ಧಾರ್ಮಿಕ ಭಾವನೆಯನ್ನೂ ಉದಾತ್ತ ಸಂಸ್ಕೃತಿಯನ್ನೂ, ನಮ್ಮ ಭಾವೈಕ್ಯತೆಯನ್ನು ಪರಂಪರಾಗತವಾಗಿ ಕಾಪಾಡಿಕೊಂಡು ಬರಲು ಹೇಗೆ ಸಹಾಯಕವಾಗಿವೆ ಎಂಬುದನ್ನು ಈ ಗ್ರಂಥದಲ್ಲಿ ವಿಸ್ತೃತವಾಗಿ ಹೇಳಲಾಗಿದೆ.

ಜಯದೇವಪ್ಪ ಜೈನಕೇರಿಯವರ **ಸಂಜನ ದರುಶನ** ದೆಹಲಿ, ಅಮೃತಸರ, ಶಿಮ್ಲಾ, ಆಗ್ರಾ, ಕೇದಾರ, ಬದರಿ - ಈ ಪ್ರವಾಸಿ ತಾಣಗಳಲ್ಲಿ ಮೂವತ್ತು ದಿವಸ ನಡೆಸಿದ ಪ್ರವಾಸದ ಅನುಭವಗಳ ಕಥನ. ಹಿಮಾಲಯವು ಶಿವನ ತಪೋಭೂಮಿ. ಸಂಜನ ಎಂದರೆ ಶಿವ. ಅದು ಲೇಖಕರ ಮೊಮ್ಮಗಳ ಪ್ರೀತಿಯ ಹೆಸರೂ ಕೂಡ.

ಹಿಮಾಲಯದ ದರುಶನ ಹಾಗೆಯೇ ದೆಹಲಿಯಲ್ಲಿರುವ ಮೊಮ್ಮಗಳ ಜೊತೆ ಕಳೆದ ಸಂತೋಷದ ಕ್ಷಣಗಳು ಈ ಪ್ರವಾಸ ಕಥನದ ಕೇಂದ್ರಬಿಂದು. ಉತ್ತರಭಾರತ ಪ್ರವಾಸ ಮಾಡುವವರಿಗೆ ಈ ಕೃತಿ ಒಳ್ಳೆಯ ಮಾಹಿತಿ ನೀಡುತ್ತದೆ. ಬದರಿ-ಕೇದಾರ-ಹಿಮಾಲಯದ ವರ್ಣನೆಗಳು ಜಯದೇವಪ್ಪನವರ ಸೃಜನಶೀಲ ಪ್ರತಿಭೆಗೆ ಸಾಕ್ಷಿಯಾಗಿವೆ. ಹಿಮಾಲಯದ ಹುಟ್ಟು, ಬೆಳವಣಿಗೆ, ಹಿಮಾಲಯ - ವಿದೇಶೀಯರ ದೃಷ್ಟಿಯಲ್ಲಿ ಮತ್ತು ಯೋಗಿಗಳ ದೃಷ್ಟಿಯಲ್ಲಿ - ಈ ವಿವರಗಳು ಪ್ರವಾಸ ಕಥನದಲ್ಲಿ ಚೆನ್ನಾಗಿ ಬಂದಿವೆ. ಕೃತಿಯ ಕೊನೆಯಲ್ಲಿ 'ಪ್ರವಾಸ ಸಾಹಿತ್ಯ ನನ್ನ ದೃಷ್ಟಿಯಲ್ಲಿ' ಎಂಬ ಪುಟ್ಟ ಪ್ರಬಂಧವೂ ಇದೆ.

ಬಿ.ಎಸ್. ವಿರೂಪಾಕ್ಷಪ್ಪನವರ **ಶಬರಿಮಲೆ ಯಾತ್ರಾ ನೋಡಿಯು** ಶಬರಿಮಲೆ ಅಯ್ಯಪ್ಪ ಯಾತ್ರೆಯ ಅನುಭವ ಕಥನವಾಗಿದೆ. ಲೇಖಕರು ವೃತ್ತಿಯಲ್ಲಿ ವಕೀಲರು, ಅಯ್ಯಪ್ಪ ಸ್ವಾಮಿಯ ನಿಷ್ಠಾವಂತ ಭಕ್ತರು. ಅವರು ಹೇಳುವಂತೆ "ಈ ಯಾತ್ರೆ ಜೀವನಯಾತ್ರೆಯ ಪ್ರತೀಕ. ಜೀವಾತ್ಮ ಪರಮಾತ್ಮನನ್ನು ಅರಸುವ ಪರಿ. ಅನುಭವದಿಂದ ಅರಿವು ಮೂಡಿಸುವುದೇ "ಅಯ್ಯಪ್ಪ ಯಾತ್ರೆಯ ವಿಶೇಷ. ಲೇಖಕರು ಆಸ್ತಿಕರಾಗಿ ಮಾಲೆ ಹಾಕಿಸಿಕೊಂಡು ಶಬರಿಮಲೆಗೆ ಹಲವು ಬಾರಿ ಯಾತ್ರೆ ಮಾಡಿದ್ದು, ಅಲ್ಲಿಗೆ ಹೋಗುವುದು ಹೇಗೆ? ಅನುಸರಿಸಬೇಕಾದ ವ್ರತ ನಿಯಮಗಳೇನು? ಇತ್ಯಾದಿ ವಿವರಗಳನ್ನು ಸಹ ಯಾತ್ರಿಕರಿಗಾಗಿ ಇಲ್ಲಿ ವಿವರವಾಗಿ ಪ್ರಸ್ತಾಪಿಸಿರುವರು. ಶಬರಿಮಲೆಯಾತ್ರೆಯ ಎಲ್ಲ ನಿಯಮಾವಳಿಗಳಲ್ಲಿಯೂ 'ಒಂದೊಂದು ತತ್ವವಿರುವುದನ್ನು, ಒಳ ಅರ್ಥಗಳಿರುವುದನ್ನು (ಪು. ೩೩-೩೯) ವಿವರಿಸಲು ಪ್ರಯತ್ನಿಸಿರುವರು. ಪ್ರಶ್ನೋತ್ತರ ತಂತ್ರದ ಮೂಲಕವೂ ಅಯ್ಯಪ್ಪಸ್ವಾಮಿ ಯಾತ್ರೆ ಹಾಗೂ ಆದರ ಮಹತ್ವವನ್ನು ಲೇಖಕರು ತಿಳಿಯಪಡಿಸಿರುವರು. ಪುಸ್ತಕದ ಕೊನೆಯಲ್ಲಿ ೧೦೮ ಅಯ್ಯಪ್ಪನ ಶರಣುಗಳನ್ನು ಹೇಳಲಾಗಿದೆ. ಒಟ್ಟಿನಲ್ಲಿ ಈ ಪುಸ್ತಕ ಅಯ್ಯಪ್ಪಸ್ವಾಮಿಯ ಭಕ್ತರಿಗೆ, ಶಬರಿಮಲೆ ಯಾತ್ರಿಕರಿಗೆ 'ಗೈಡ್' ರೀತಿಯಲ್ಲಿದೆ.

ಕೆ. ಕೊಟ್ರೇಗೌಡರು ತಮ್ಮ ಮಿತ್ರರಾದ ವೈ.ಎಂ. ಗಂಗಾಧರಪ್ಪನವರ ಜೊತೆಗೂಡಿ ಭಾರತಾದ್ಯಂತ ಕೈಕೊಂಡ ಪ್ರವಾಸ ಕಥನ **ನಮ್ಮ ಪ್ರವಾಸ**. ಇದೊಂದು ಟೂರಿಸ್ಟ್ ಬರೆಹ. ಪ್ರವಾಸ ಮಾಡಿದ ಸ್ಥಳಗಳ ಬಗೆಗೆ ಚುಟುಕಾದ ವಿವರಣೆಯಿದೆ.

ವಸಂತೀಚಂದ್ರರ **ಮೌನ ಮೋಹಿನಿ** ಭಾರತದ ಪುಣ್ಯಭೂಮಿಗಳಲ್ಲಿ ಮಾಡಿದ ಪ್ರವಾಸ. ಇದನ್ನು ಅಧ್ಯಾತ್ಮ ಪ್ರವಾಸ ಕಥನಮಾಲೆ ಎಂದು ಲೇಖಕರು ಕರೆದಿರುವರು. ಪುಸ್ತಕದ ಕೊನೆಯ ಲೇಖನವಾದ 'ಸನಾತನ ಧರ್ಮ ಮತ್ತು ಊರ್ಧ್ವಮುಖ ಯಾತ್ರಿಕ'ದಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ದೇವಮಂದಿರಗಳ ಮಹತ್ವವನ್ನು ತಿಳಿಸಿರುವರು.

ಬಿ.ಹೆಚ್. ಕೊಪ್ಪರ್‌ರವರ **ಪ್ರವಾಸ ಸಾಹಿತ್ಯ** ಹೆಸರಿಗೆ ಪ್ರವಾಸ ಸಾಹಿತ್ಯವಾದರೂ ಒಳಗೆ ಬೇರೆ ಬೇರೆ ವಿಷಯಗಳನ್ನು ಕುರಿತ ಲೇಖನಗಳಿವೆ. ಉದಾಹರಣೆಗೆ ಜಾಗತಿಕ ಕೃಷಿ ಮೇಳ, ವಿಲಕ್ಕಿ ಸಾಹಿತ್ಯ (ಸಚಿತ್ರ), ಸವಿಮಂಡಿಗೆಯ ರುಚಿ, ತುಳಸಿ ಮಹಿಮೆ, ಸಂಗೀತ ದಿಗ್ದರ್ಶಕ ಹೇಮಂತ ಕುಮಾರ, ಸೌಜನ್ಯಮೂರ್ತಿ, 'ಎನ್ಕೆ', ಕರ್ನಾಟಕದಲ್ಲಿ ಜಾನಪದ ಲೋಕ, ವೃಕ್ಷಪ್ರೇಮಿ ಮಾನವ, ತಿರುಪತಿ ವೆಂಕಟಾಚಲ, ರಾಷ್ಟ್ರೀಯ ಪುರಾತನ ಲೇಖ ಸಂಗ್ರಹಾಲಯ, ಶ್ರೀ ಪ್ರಸನ್ನ ವೆಂಕಟದಾಸರು, ಮಸಾಲೆ ರುಚಿ, ಯುನೆಸ್ಕೋ ಪ್ರದರ್ಶನದ ವಿಹಂಗಮ ನೋಟ, ಶ್ರೀ ಕೊಪ್ಪರದ ನರಸಿಂಹ, ಸ್ವಾದಿ ವಾದಿರಾಜ ಮಠ. ಇವುಗಳ ಜೊತೆಗೆ ಪ್ರವಾಸಿ ಬರಹಗಳು ಕೆಲವು ಬಂದಿವೆ. ಉದಾಹರಣೆಗೆ ರಾಜಧಾನಿ ದಿಲ್ಲಿ, ಕೆಂಪುಕೋಟೆ, ತಾಜಮಹಲ್, ನಾ ಕಂಡ ಸೇವಾಗ್ರಾಮ, ಪೆರಿಯಾರ್ ವನ್ಯಜೀವಿಗಳ ಧಾಮ, ಸಾಲಾರಜಂಗ ವಸ್ತುಸಂಗ್ರಹಾಲಯ ಇತ್ಯಾದಿ. ಪತ್ರಿಕೆಗಳಿಗೆ ಆಗಾಗ್ಗೆ ಬರೆದ ಲೇಖನಗಳ ಪುಸ್ತಕರೂಪ ಇದಾಗಿರುವುದರಿಂದ 'ಪ್ರವಾಸ ಸಾಹಿತ್ಯ' ಎಂಬ ತಲೆಬರಹ ಕೊಡಲಾಗಿದೆ.

ಆಗುಂಬೆ ಎಸ್. ನಟರಾಜ್‌ರವರು **ಯಾತ್ರಾವಳಿ** ಎಂಬ ಪ್ರವಾಸ ಕಥನ ಬರೆದಿರುವುದಾಗಿ ಹೇಳುವರು. ಆದರೆ, ಅವರ ಯಾತ್ರಾವಳಿಯಲ್ಲಿ ಇತಿಹಾಸ ವಂಚಿತ ಕಳಲೆ ನಂಜರಾಜಯ್ಯ, ಶ್ರೇಷ್ಠ ಮಾನವ ಶ್ರೇಷ್ಠಕವಿ ಮಿರ್ಜಾ ಗಾಲಿಬ್, ನೆಹರೂ ವಂಶದ ಅನಾಥ ಮಹಲ್, ಸಂಗೀತ ಸಾಮ್ರಾಟ್ ತಾನ್‌ಸೇನ್, ಕಾಶಿಯ ಜಂಗಮಮಠ, ಕಲ್ಕತ್ತದಲ್ಲಿ 'ಮೈಸೂರು ಹುಲಿ' ಸಂತತಿ -ಇವೇ ಮೊದಲಾದ ಲೇಖನಗಳು ಶೀರ್ಷಿಕೆಗೆ ಹೊರತಾಗಿರುವ ಪ್ರಬಂಧಗಳಾಗಿವೆ.

ಕರ್ನಾಟಕ ಪ್ರಸಿದ್ಧ ಯಾತ್ರಾ ಸ್ಥಳಗಳನ್ನು ಕುರಿತು ಮಕ್ಕಳಿಗೆ ಪರಿಚಯಾತ್ಮಕವಾಗಿ ತಿಳಿಸುವ ಪ್ರಯತ್ನವನ್ನು ಇಂಡಿಯಾ ಬುಕ್ ಹೌಸ್ ಸಂಸ್ಥೆಯವರು ಮಾಡಿರುವರು. ಈ ಪುಸ್ತಕಗಳನ್ನು 'ಪ್ರವಾಸ ಸಾಹಿತ್ಯ'ದ ಗುಂಪಿಗೆ ಸೇರಿಸುವುದು ಸರಿಯಲ್ಲ. ಈ ಪುಸ್ತಕಗಳು ಪ್ರವಾಸಾನುಭವಕಥನವನ್ನು ನಿರೂಪಿಸುತ್ತಿಲ್ಲ. ಇವು ಪ್ರವಾಸಿಗರಿಗೆ ಅದರಲ್ಲೂ ಧಾರ್ಮಿಕ ಮನೋಭಾವದ ಯಾತ್ರಾರ್ಥಿಗಳಿಗೆ ಮಾರ್ಗದರ್ಶಿ ರೂಪದಲ್ಲಿವೆ. ಪು.ತಿ.ನ. **ಆವು ಮೇಲುಕೊಟೆ**ಯನ್ನೂ, ಎನ್.ಎಸ್. ಸೀತಾರಾಮ ಶಾಸ್ತ್ರಿಯವರು **ಶಿವಗಂಗೆ**ಯನ್ನೂ, ಪಂಚಾಕ್ಷರಿ ಹಿರೇಮಠರವರು **ಮುಕ್ತಿಕ್ಷೇತ್ರ ಉಳವಿ**ಯನ್ನೂ, ಡಾ।। ಎಚ್. ತಿಪ್ಪೇರುದ್ರಸ್ವಾಮಿಯವರು **ಬಸವ ಕಲ್ಯಾಣ**ವನ್ನೂ, ಡಾ।। ಕಂಬಾರ ಅವರು **ಸವದತ್ತಿ ಎಲ್ಲಮ್ಮ**ನನ್ನೂ, ನಾಡಿಗೇರ ಅವರು **ಹರಿಹರ ಕ್ಷೇತ್ರ**ವನ್ನೂ, ಭಾರತೀಸುತರು **ಕಾವೇರಿ**ಯನ್ನೂ ಗೌರೀಶ ಕಾಯ್ಕಿಣಿಯವರು **ಗೋಕರ್ಣ**ವನ್ನೂ, ಕಮಲಾ ಹಂಪನಾರವರು **ಮುಳಬಾಗಿಲು** ಅನ್ನೂ, ಎಸ್. ಭೀಮಪ್ಪನವರು **ಪುಣ್ಯಕ್ಷೇತ್ರ ಬಂದಳಿಕೆ**ಯನ್ನೂ, ಕೆ. ಭುಜಬಲಿಶಾಸ್ತ್ರಿಗಳು **ಹೊಂಬುಜ ಕ್ಷೇತ್ರ**ವನ್ನೂ, ಟಿ.ಎಸ್.

ರಾಜಗೋಪಾಲ್‌ರವರು **ತಲಕಾಡು** ಅನ್ನೂ, ರಘುಸುತರು **ವಿದುರಾಶ್ವತ್ಥ**ವನ್ನೂ, ಮೋಹನಚಂದ ಕೀರಣಗಿ ಅವರು **ಕೊಪ್ಪಳ**ವನ್ನೂ, ಎಂ.ಆರ್. ಶಾನಭಾಗರವರು **ಶ್ರೀಕ್ಷೇತ್ರ ಯಾಣ**ವನ್ನೂ, ಜಯತೀರ್ಥ ರಾಜಪುರೋಹಿತರು **ಕನಕಗಿರಿ**ಯನ್ನೂ, ಶಾಂತಿ ಅವರು **ಶ್ರೀಕ್ಷೇತ್ರ ಕೊಲ್ಲೂರು**ಅನ್ನೂ, ಪಿ.ಗುರುರಾಜ ಭಟ್‌ರವರು **ತುಳುನಾಡಿನ ಸಪ್ತ ಕ್ಷೇತ್ರಗಳು** ಹಾಗೂ **ನಾಗಮಂಡಲ**ವನ್ನೂ, ಹ.ಕ. ರಾಜೇಗೌಡರು **ಆದಿಚುಂಚನಗಿರಿ**ಯನ್ನೂ ಕುರಿತು ಗ್ರಂಥ ಬರೆದಿರುವರು.

ಇವಲ್ಲದೆ ಮನೋಜ್ ದಾಸ್‌ರವರು ಇಂಗ್ಲೀಷಿನಲ್ಲಿ ಬರೆದಿರುವ **ಭಾರತದ ದೇವಾಲಯಗಳು** ಎಂಬ ಗ್ರಂಥವು ಕನ್ನಡಕ್ಕೆ ಪ್ರೊ|| ವಿ. ಸೀತಾರಾಮಯ್ಯನವರಿಂದ ಅನುವಾದಗೊಂಡಿದ್ದು, ಈ ಗ್ರಂಥವನ್ನೂ ಐ.ಬಿ.ಎಚ್. ಸಂಸ್ಥೆಯವರು ಹೊರ ತಂದಿರುವರು.

ಬೆಳಗಾಂ ಜಿಲ್ಲೆಯ ಸವದತ್ತಿಯ ಎಲ್ಲಮ್ಮ ಕರ್ನಾಟಕದ ಪ್ರಸಿದ್ಧ ಗ್ರಾಮ ದೇವತೆಗಳಲ್ಲಿ ಒಬ್ಬಳು. ಮತಿಘಟ್ಟ ಕೃಷ್ಣಮೂರ್ತಿಯವರ **ವಿಳುಕೊಳ್ಳದ ಎಲ್ಲಮ್ಮ** ಮೇಲೆ ತಿಳಿಸಿದ ಗ್ರಾಮದೇವತೆಯು ನೆಲೆಸಿರುವ ಕ್ಷೇತ್ರ ಪರಿಚಯವನ್ನೂ, ಮಹಿಮೆಯನ್ನೂ ತಿಳಿಸುವ ಪುಟ್ಟ ಕೃತಿ. ಈ ಕೃತಿಯಲ್ಲಿ ಎಲ್ಲಮ್ಮನ ಕೊಳ್ಳದ ವರ್ಣನೆ, ಕ್ಷೇತ್ರದ ಸುತ್ತಮುತ್ತ ಇರುವ ಪ್ರೇಕ್ಷಣೀಯ ಸ್ಥಳಗಳು, ಎಲ್ಲಮ್ಮ ದೇವಿಯ ಮಹಿಮೆಯನ್ನು ಹೇಳುವ ಜಾನಪದ ಕಥೆ-ಹಾಡುಗಳು -ಇವೆಲ್ಲವೂ ಬಂದಿವೆ. ಭಕ್ತಜನರ ಉಪಯೋಗಕ್ಕಾಗಿ ಈ 'ಕೈಪಿಡಿ'ಯನ್ನು ಪ್ರಕಟಿಸಲಾಗಿದೆ. ಈ 'ಕೈಪಿಡಿ'ಗೆ ದ.ರಾ. ಬೇಂದ್ರೆಯವರ ಪುಟ್ಟ ಮುನ್ನುಡಿ ಇದೆ.

ಗುರುವಾಯೂರು, ವಡಕನಾಥೇಶ್ವರ, ಕೌಲಟಿ, ತಿರುವನಂತಪುರ, ಮಂಗಳೂರು ಸಮೀಪದ ಉಳ್ಳಾಲ, ಮಂಜೇಶ್ವರ, ಕುಂಬಳೆಯ ಅನಂತಪದ್ಮನಾಭ, ಕೋವಳಂ ಬೀಚ್, ಕನ್ಯಾಕುಮಾರಿ, ನಾಗರಕೋಯಿಲ್, ಶುಚೀಂದ್ರಂ, ತಿರುಚ್ಚೆಂದೂರು -ಹೀಗೆ ಮುಖ್ಯ ಕ್ಷೇತ್ರಗಳ ಪರಿಚಯವನ್ನು ವಸಂತೀಚಂದ್ರರು 'ಮೌನಮೋಹಿನಿ'ಯಲ್ಲಿ ಮಾಡಿಕೊಟ್ಟಿರುವರು. ಅಧ್ಯಯನಪೂರ್ಣ ಪ್ರವಾಸವಿದು. ವಸಂತೀಚಂದ್ರರ ಪ್ರೌಢವಾದ ಬರವಣಿಗೆಯಲ್ಲಿ ಈ ತೀರ್ಥಕ್ಷೇತ್ರಗಳ ಪರಿಚಯ ಸೊಗಸಾಗಿ ಮೂಡಿಬಂದಿದೆ.

# ಕರ್ನಾಟಕದೊಳಗಣ ಪ್ರವಾಸ ಸಾಹಿತ್ಯ

**ಕ**ರ್ನಾಟಕದಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿದ ಪ್ರವಾಸಿಗರ ಅನುಭವಕಥನ ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಅವುಗಳಲ್ಲಿನ ಬಹುಪಾಲು ಬರಹಗಳು ಪ್ರವಾಸ ಸಾಹಿತ್ಯಕ್ಕೆ ಒಳ್ಳೆಯ ಕಾಣಿಕೆಗಳಾಗಿವೆ. ಪ್ರೊ.ವಿ. ಸೀತಾರಾಮಯ್ಯನವರ 'ಪಂಪಾಯಾತ್ರೆ' ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಪ್ರಾರಂಭಗೊಂಡ ಕಾಲಕ್ಕೆ ಹೆಸರಿಸಬಹುದಾಗಿದ್ದ ಮುಖ್ಯ ಕೃತಿಯಾಗಿದ್ದಿತು. ಇಂದಿಗೂ ಅದು ಪ್ರವಾಸ ಸಾಹಿತ್ಯದಲ್ಲಿ ಗಣನೀಯ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿ ಪರಿಗಣಿತವಾಗಿದೆ. ಎಲ್ಲ ಕಾಲಕ್ಕೂ ನಿಲ್ಲುವ ಕೃತಿ ಅದು. ಡಾ|| ಹಿರೇಮಲ್ಲೂರು ಈಶ್ವರನ್‌ರವರ **ಕವಿ ಕಂಡ ನಾಡು**; ಗುಂಡ್ಮಿ ಚಂದ್ರಶೇಖರ ಐತಾಳರ **ಸೌಂದರ್ಯದ ಸಾನ್ನಿಧ್ಯದಲ್ಲಿ** ಹಾಗೂ **ಚೆಲುವು ಚೆಲ್ಲಿದಲ್ಲಿ**; ಶಂಕರ ಪಟೇಲರ **ಸವಿ ಸಂಚಾರ**; ಜೀರಿಗೆಕಟ್ಟೆ ಬಸವಪ್ಪನವರ **ಕರ್ನಾಟಕ ಯಾತ್ರೆ**; ಪಾಟೀಲ ಪುಟ್ಟಪ್ಪನವರ **ನನ್ನದು ಈ ಕನ್ನಡ ನಾಡು** ವಿಷಯ ವ್ಯಾಪ್ತಿಯ ದೃಷ್ಟಿಯಿಂದ ಮಹತ್ವದ ಕೃತಿಗಳು. ಒಂದೇ ಕೃತಿಯಲ್ಲಿ ಬೇರೆ ಬೇರೆ ಲೇಖಕರು ಸ್ಥಳ ಪರಿಚಯ ಮಾಡಿಕೊಟ್ಟಿರುವರು. ಉದಾಹರಣೆಗೆ ವಿ.ಕೃ. ಗೋಕಾಕ್‌ರವರಿಂದ ಸಂಪಾದಿತವಾಗಿರುವ **ಇಂದಿನ ಕರ್ನಾಟಕ**. ಒಂದೇ ಪ್ರೇಕ್ಷಣೀಯ ಸ್ಥಳವು ಮೂವರು ಪ್ರವಾಸಿಗಳ ನೋಟಕ್ಕೆ ಹೇಗೆ ಭಿನ್ನ ಭಿನ್ನವಾಗಿ ಕಾಣಬಂದಿತು ಎಂಬುದರ ವಿಶಿಷ್ಟ ಪ್ರಯೋಗ ಶ್ರೀ-ರಂಗ-ಮಂಗ-ರು ಮಾಡಿದ **ಮುಕ್ಕಣ್ಣ ಯಾತ್ರೆ**ಯಲ್ಲಿ ಕಂಡುಬರುತ್ತಿದೆ. ಭೂತ-ವರ್ತಮಾನ-ಭವಿಷ್ಯತ್ ಕಾಲಗಳಲ್ಲಿ ಕರ್ನಾಟಕ ಹೇಗಿತ್ತು-ಹೇಗಿದೆ-ಹೇಗಿರಬೇಕು ಎಂಬುದರ ತಿಳುವಳಿಕೆಯನ್ನು ಕರ್ನಾಟಕ ಏಕೀಕರಣದ ಜ್ವಲಂತ ಸಮಸ್ಯೆಯ ಹಿನ್ನೆಲೆಯಲ್ಲಿ ನೀಡುವ ಪ್ರಯತ್ನವನ್ನು ಪಿ.ಚಂದ್ರಶೇಖರ ಹೆಗ್ಡೆಯವರ '**ಕರ್ನಾಟಕದ ದಿಗ್ದರ್ಶನ**'ದಲ್ಲಿ ನೋಡಬಹುದಾಗಿದೆ. ಬಿಡಿ ಬಿಡಿಯಾಗಿ ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳ ಪರಿಚಯವನ್ನು ಶಿಶು ಸಾಹಿತ್ಯ ರೂಪದಲ್ಲಿ ಐ.ಬಿ.ಎಚ್. ಪ್ರಕಾಶನದವರು ನೀಡಿರುವರು. ಈ ಸಂಸ್ಥೆಯವರು ಕರ್ನಾಟಕದ ಪ್ರಮುಖ ಜಿಲ್ಲೆಗಳ 'ದರ್ಶನ'ವನ್ನೂ ಕಿರುಹೊತ್ತಗೆಗಳ ಮೂಲಕ ಮಾಡಿಸಿರುವರು. ಕರ್ನಾಟಕದ ಸಂಸ್ಕೃತಿಯ ಪರಿಚಯವನ್ನು ಮಾಡಿಕೊಡುವ ಯತ್ನವೂ ಪಲವು ಕಿರುಹೊತ್ತಗೆಗಳಲ್ಲಿ ಕಂಡುಬಂದಿದೆ.

ಈ ಪ್ರಯತ್ನಗಳು ಕರ್ನಾಟಕದ ನೆಲ-ಜಲ, ಇತಿಹಾಸ, ಪರಂಪರೆ, ಸಂಸ್ಕೃತಿಗಳನ್ನು ಅರಿಯಲು ಸಹಾಯ ಮಾಡುತ್ತವೆ. ಇವು 'ಪ್ರವಾಸ ಸಾಹಿತ್ಯ'ವಲ್ಲದಿದ್ದರೂ ಪ್ರವಾಸಿಗಳಿಗೆ ಮಾಹಿತಿ ನೀಡುವ ಬೆಲೆಯುಳ್ಳ 'ಕೈಪಿಡಿ'ಗಳಾಗಿವೆ.

ಕರ್ನಾಟಕವನ್ನು ಆಳಿದ ಮಹಾನ್ ಸಾಮ್ರಾಜ್ಯವಾದ ವಿಜಯನಗರ ಹಾಗೂ ಅದರ ಅರಸರ ನೆಲೆವೀಡೂ ಪ್ರಸಿದ್ಧ ಪುಣ್ಯಕ್ಷೇತ್ರವೂ ಆದ ಹಂಪೆಯ ಭಗ್ನಾವಶೇಷಗಳ ದರ್ಶನದ ಒಂದು ದಿನದ ಅನುಭವ ಕಥನ ವಿ.ಸೀ. ಅವರ **ಪಂಪಾಯಾತ್ರೆ**ಯಲ್ಲಿ ಬಂದಿದೆ. ಇಂದು ಹಾಳುಸುರಿಯುತ್ತಿರುವ ಹಂಪೆಯ ಅಂದಿನ ತನ್ನ ವೈಭವದ ದಿನಗಳನ್ನೂ, ಅಂದಿನ ಕಾಲದ ಜನರ ರಸಿಕ ಜೀವನ ಹಾಗೂ ಕಲಾಪ್ರೇಮವನ್ನೂ ನಮಗೆ ನೆನಪಿಸುತ್ತದೆ. ಆ ಭವ್ಯ ಸಾಮ್ರಾಜ್ಯ ಶತ್ರುಗಳ ದುರಾಕ್ರಮಣಕ್ಕೆ ಸಿಕ್ಕಿ ಹಾಳಾಯಿತು. ಆದರೆ, ಅದರ ಹಿಂದಿರುವ ದೊಡ್ಡ ಇತಿಹಾಸ ಬಲ್ಲವರು ಅದನ್ನು ನೋಡಿದಾಗ ಮನಸ್ಸು ಹಿಂಡುತ್ತದೆ, ಕಣ್ಣು ವಿಧಿಲೀಲೆ ನೋಡಿ ಒದ್ದೆಯಾಗುತ್ತದೆ.

ವಿ.ಸೀ. ಅವರು 'ಪಂಪಾಯಾತ್ರೆ'ಯಲ್ಲಿ ಪ್ರವಾಸದ ಅನುಭವಗಳ ನೇರ ನಿರೂಪಣೆಯಿಲ್ಲ. ವಿ.ಸೀ. ಅವರು ವರ್ಣನೆಯೊಂದಿಗೆ ತಮ್ಮ ಭಾವನೆಗಳನ್ನು ಬೆರಸಿ, ಮನಸ್ಸನ್ನು ಅದರೊಳಗೆ ಹೊಗಿಸಿ ಒಂದು ಮಧುರ ಸ್ಮೃತಿಯಾಗಿ ಬರೆದಿರುವರು. ಆ ಕಾರಣದಿಂದ ಈ ಪ್ರವಾಸ ಕಥನವು ನೀರಸವಾಗದೆ ಹೃದ್ಯವಾಗುತ್ತದೆ. ನಾಲ್ವರು ಹಿರಿಯ ಮಿತ್ರರ ಸಹವಾಸ ಭಾಗ್ಯದಲ್ಲಿ ಅವರ ಸವಿರಾದ ಹಾಸ್ಯ ಹರಡಿಹೋಗಿ ಪ್ರವಾಸಕಥನ ಓದುಗರಿಗೆ ಪ್ರಿಯವಾಗುತ್ತದೆ.

ವಿಜೃಂಭಣೆಯಿಂದ ಬಾಳಿದ ಒಂದು ಸಾಮ್ರಾಜ್ಯದ ಬೀಳನ್ನು ಕಂಡಾಗ ಎಂತಹವನ ಅಂತರಂಗವೂ ಕದಡುತ್ತದೆ. ಆ ಬೀಳಿಗೆ ಕಾರಣರಾದವರ ಬಗೆಗೆ ಮನಸ್ಸು ಕುದಿಯುತ್ತದೆ. ಈ ಅಂತರಂಗದ ಕದಡು ಕುದಿತಗಳು **ಪಂಪಾಯಾತ್ರೆ**ಯಲ್ಲಿ ವಿಶೇಷವಾಗಿ ಬಂದಿವೆ. ಹಾಳು ಸುರಿಯುತ್ತಿರುವ ಹಂಪೆ ಅವರ ಕಣ್ಣಿಗೆ 'ಹಿಂದಿನ ಹೆಕ್ಕಳವನ್ನು ಕಳೆದುಕೊಡು ಈ ವೈಧವ್ಯವನ್ನು ಅನುಭವಿಸುತ್ತಿರುವ ಶ್ರೀಮಂತ ರಮಣಿಯೊಬ್ಬಳಂತೆ' ಕಾಣುತ್ತದೆ. ವಿ.ಸೀ. ಅವರು ಕೊಡುವ ಹಾಳು ಹಂಪೆಯ ವರ್ಣನೆಗಳು ಹೃದಯವನ್ನು ಮಿಡಿಯುತ್ತವೆ. ವರ್ಣನೆಯಲ್ಲಿ ಅವರು ತಾದಾತ್ಮ್ಯ ಹೊಂದುವುದನ್ನು ಪಂಪಾ ಯಾತ್ರೆಯಲ್ಲಿ ನಾವು ಕಾಣಬಹುದು; ಆ ವರ್ಣನೆಯಲ್ಲೂ ಭಿನ್ನ ಗುಣಗಳನ್ನು ನಾವು ನೋಡಬಹುದು. ವಿಠಲಸ್ವಾಮಿ ದೇವಸ್ಥಾನ, ಕಲ್ಯಾಣ ಮಂಟಪಗಳ ವರ್ಣನಾ-ವೈಖರಿಯಲ್ಲಿ ಕಲಾರಸಿಕನೊಬ್ಬನ ತುಂಬಿಬಂದ ಮನದ ಭಾವನೆಗಳ ಅಭಿವ್ಯಕ್ತಿಯನ್ನು ಕಂಡರೆ, ಪಂಪಾಸರಸ್ಸಿನ ವರ್ಣನೆಯಲ್ಲಿ ಕವಿಮನದ ಭಾವ ವಿಲಾಸವನ್ನು ನೋಡುತ್ತೇವೆ. ಪಂಪಾಸರೋವರದ ಭವ್ಯತೆಗೆ ದಿವ್ಯತೆಗೆ ಅರಳಿದ ಕವಿಮನ ಕಾವ್ಯಮಯವಾಗಿ ಅದನ್ನು ವರ್ಣಿಸತೊಡಗುತ್ತದೆ. ಆ ಭಾವಸ್ಪಂದನ ಶಬ್ದಗಳಲ್ಲಿ ರೂಪಗೊಳ್ಳುವ ವಿಲಾಸವೇ

ಒಂದು ಬಗೆಯ ಮೋಜಿನದು. ಸಂಸ್ಕೃತ ಕನ್ನಡಗಳ ಮಧುರ ಮಿಶ್ರಣದಿಂದ ಪಾಕಗೊಂಡ ಪದಬ್ಬಂದಗಳು ಭಾವಾಲೀಢ ಮನದಿಂದ ಲಲಿತಗತಿಯಲ್ಲಿ ಮಂಜುಳವಾಣಿಯಾಗಿ ಬಂದಿವೆ. ಆ ಮಾತಿನ ಮೋಡಿಗೆ ನಾವು ಪರವಶರಾಗುತ್ತೇವೆ.

**ಪಂಪಾಯಾತ್ರೆ** ನಿಸ್ಸಂಶಯವಾಗಿ ಕನ್ನಡದ ಶ್ರೇಷ್ಠ ಪ್ರವಾಸಕಥನಗಳಲ್ಲಿ ಒಂದು. ಎಸ್.ವಿ. ಪರಮೇಶ್ವರಭಟ್ಟರು ಹೇಳುವಂತೆ "ಎಂತಹ ಕಲಾಪ್ರೇಮಿಯಾಗಲಿ ಎಂತಹ ಇತಿಹಾಸ ಪ್ರೇಮಿಯಾಗಲಿ ಎಂತಹ ರಸಾಭಿಜ್ಞನಾಗಲಿ 'ಪಂಪಾಯಾತ್ರೆ'ಯ ಪಠನಾನಂತರದಲ್ಲಿ ಹೊಸ ಒಂದು ಸಂಸ್ಕೃತಿಯ ಕಾಂತಿಯಿಂದ ದೀಪ್ತವಾದ ಮನಸ್ಸುಳ್ಳವನಾಗುತ್ತಾನೆ ಎನ್ನುವುದರಲ್ಲಿ ಯಾವ ಸಂಶಯವು ಇಲ್ಲ."[೧] ಪಂಪಾಯತ್ರೆಯನ್ನು ಕುರಿತಂತೆ ಅಂಬಿಕಾತನಯದತ್ತರು ಹೀಗೆ ಹೇಳುವರು:[೨]

ಜೀವಕ್ಕೆ ಕಳೆ ಕಡಿಮೆ ಇರುವುದುಂಟು
ಭಾವಕ್ಕು ಹುಸಿಬಣ್ಣ ಬರುವುದುಂಟು
ಜೀವಭಾವಕ್ಕೊಂದು ಸಾಂಗತ್ಯವಿಲ್ಲದಿರೆ
ಅಪಸರದ ಮಾಲೆಯನು ತರುವದುಂಟು.
ಹೀಗಿಹುದು ನೋಡಿಹೆನು-ಎಂದ ಮೇಲೆ,
"ಹಾಳಿಗೂ ಬಾಳುಂಟೇ?"
ಉಂಟು, ಉಂಟು!

ಕರ್ನಾಟಕದ ಬಗೆಗೆ ಜನಸಾಮಾನ್ಯರೂ ಬಾಲಕ-ಬಾಲಕಿಯರೂ ತಿಳಿಯಲೆಂದು ಕನ್ನಡನಾಡಿನ ಸ್ಥಿತಿಗತಿ, ನಮ್ಮ ಸಂಪತ್ತು, ವ್ಯವಸಾಯ, ದನಬಲ, ಅರಣ್ಯ ಸಂಪತ್ತು, ಗ್ರಾಮ ಮತ್ತು ಗೃಹಕೈಗಾರಿಕೆಗಳು, ದೊಡ್ಡ ಕೈಗಾರಿಕೆಗಳು, ಮಲೆನಾಡಿನ ಅಭಿವೃದ್ಧಿ, ಗ್ರಾಮಾಭಿವೃದ್ಧಿ -ಹೀಗೆ ಬಹುಮುಖಿಯಾದ ವಿಷಯಗಳನ್ನು ರೇ. ಸಿದ್ದಪ್ಪನವರು **'ನಮ್ಮ ನಾಡು'** ಎಂಬ ಕೃತಿಯಲ್ಲಿ ವಿವರಿಸಿರುವರು. ನಮ್ಮ ಪ್ರಕೃತಿಯ ಸುಂದರ ತಾಣಗಳು, ಜೋಗ್, ಶಿವನಸಮುದ್ರ ಜಲಪಾತಗಳು, ಹಳೇಬೀಡಿನ ದೇವಾಲಯಗಳು -ಹೀಗೆ ಸಾಂಸ್ಕೃತಿಕವಾಗಿಯೂ ಸಂಪದ್ಭರಿತವಾದ ಕನ್ನಡನಾಡಿನ ಹಿರಿಮೆಯನ್ನು ತಿಳಿಯಪಡಿಸಿರುವರು.

ಜಿ.ಎಲ್. ಸ್ವಾಮಿಯವರು ಮೈಸೂರು ಡಿಸ್ಟ್ರಿಕ್ಟ್ ಕೈಪಿಡಿ (೧೯೩೫), ಹಾಸನ ಡಿಸ್ಟ್ರಿಕ್ಟ್ ಕೈಪಿಡಿ (೧೯೩೭), ಕೋಲಾರ ಡಿಸ್ಟ್ರಿಕ್ಟ್ ಕೈಪಿಡಿ (೧೯೩೮)ಗಳನ್ನು ಹೊರತಂದಿರುವರು.

---

೧. 'ವಿ.ಸೀ' ಪು. ೫೫.

೨. ವಿ.ಸೀ. ೭೫ (ಸಂಭಾವನಾ ಗ್ರಂಥ) ಸಂ: ವಿ.ಎಂ. ಇನಾಂದಾರ್, ಪು. ೨೯೦.

ಡಾ. ಮ.ಸು. ಅಚ್ಯುತ ಶರ್ಮಾರವರ **ಉಡುಪಿ ಕ್ಷೇತ್ರದ ನೈಜ ಚಿತ್ರ ಮತ್ತು ಚಾರಿತ್ರಿಕ ಹಿನ್ನೆಲೆ** ಎಂಬ ಕೃತಿ ಉಡುಪಿಕ್ಷೇತ್ರದ ಪರಿಚಯದ ನೆಪದಲ್ಲಿ ಉಡುಪಿಯ ಶ್ರೀಕೃಷ್ಣಮಠಕ್ಕಿಂತ ಪ್ರಾಚೀನವಾದ ಇತಿಹಾಸವುಳ್ಳ ಶ್ರೀಮದನಂತೇಶ್ವರ ಮತ್ತು ಚಂದ್ರಮೌಳೀಶ್ವರ ಶಿವಾಲಯಗಳು ಅಲಕ್ಷ್ಯಕ್ಕೆ ಒಳಗಾಗಿರುವುದನ್ನು ಆಧಾರಪೂರ್ವಕವಾಗಿ ತೋರಿಸಿಕೊಡುವ ಪ್ರಯತ್ನವಾಗಿದೆ. ಉಡುಪಿಯ ಚರಿತ್ರೆಯನ್ನು ಬರೆದು ಉಡುಪಿಯ ಸತ್ಯಾಂಶವನ್ನು ಸಾರ್ವಜನಿಕರ ಅವಗಾಹನೆಗೆ ತರುವುದು ತಮ್ಮ 'ಸತ್ಯಶೋಧ'ದ ಪ್ರಧಾನ ಉದ್ದೇಶವಾಗಿರುವುದೆಂದು ಲೇಖಕರೇ ಹೇಳಿಕೊಂಡಿರುವರು:

"ಉಡುಪಿ ಕ್ಷೇತ್ರವು ಶ್ರೀ ಕೃಷ್ಣಪರಮಾತ್ಮನಿಗೆ ಸಂಬಂಧಪಟ್ಟ ದೊಡ್ಡ ಕ್ಷೇತ್ರವೆಂದು ಈಗಿನ ಜನರು ಹೇಳಿಕೊಳ್ಳುವುದನ್ನು ಕೇಳಿ ಅದನ್ನು ಸಂದರ್ಶಿಸಬೇಕು ಎಂಬ ಕುತೂಹಲವು ನನಗೆ ಉಂಟಾದುದರಿಂದ ಅಲ್ಲಿಗೆ ಹೋದೆನು. ಹಾಗೆ ಹೋದವನು ಅಲ್ಲಿಯ ಕೃಷ್ಣಮಠದ ಮಾಧ್ವ ವೈಷ್ಣವ ಮಾಣಿಗಳ ಸಹಾಯದಿಂದ ಶ್ರೀ ಕೃಷ್ಣನ ದರ್ಶನವು ಒಂದು ಗಾಳಿ ಕಿಟಕಿಯ ತೂತಿನಿಂದ ಅತಿಪ್ರಯಾಸಪಟ್ಟು ಆಯಿತು. "ಉಡುಪಿ ಕೃಷ್ಣ ಪೊಡವಿಗೊಡೆಯ"ನೆಂಬ ಬಿರುದನ್ನು ಪಡೆದವನೂ ತನ್ನ ಗೀತೋಪದೇಶದಿಂದ, ಭಕ್ತರಿಗೆ ಅನುಗ್ರಹಮೂರ್ತಿಯೂ ಆದ ಶ್ರೀ ಕೃಷ್ಣಪರಮಾತ್ಮನು ಜಾತಿ ಮತ ಪಂಥಗಳೆಂಬ ಭೇದವಿಲ್ಲದೆ ಜನತೆಯ ಕಲ್ಯಾಣಕ್ಕಾಗಿ ಅವತರಿಸಿ ಅವನ ಕ್ಷೇತ್ರವೆಂದು ಹೇಳಲ್ಪಡುವ ಈ ಉಡುಪಿಯಲ್ಲಿ ಗಾಳಿ ಸೋಕದ ಮಹಾದ್ವಾರವಿಲ್ಲದ ಒಂದು ಕೋಣೆಯಲ್ಲಿ ಅಡಗಿ ಕೂತುಕೊಂಡಿರುವುದು ನೋಡಿ ನನಗೆ ವಿಚಿತ್ರವಾಗಿ ಕಂಡಿತು.

ಅಲ್ಲದೆ, ಇಲ್ಲಿಯ ಪ್ರಧಾನ ದೇವರೆಂದು ಹೇಳಲ್ಪಡುವ ಈ ಕಡಗೋಲು ಕೃಷ್ಣನು ಇಲ್ಲಿಯ ಪುರಾತನವಾದ ಶ್ರೀಮದನಂತೇಶ್ವರ ಮತ್ತು ಶ್ರೀಚಂದ್ರಮೌಳೀಶ್ವರ ಶಿವಾಲಯಗಳ ಈಶಾನ್ಯ ಮೂಲೆಯಲ್ಲಿದ್ದುಕೊಂಡು ಉತ್ಸವಾದಿಗಳ ಕಾಲದಲ್ಲಿ ಇತರ ದೇವಾಲಯಗಳಂತೆ ತನ್ನ ದೇವಾಲಯಕ್ಕೆ ಪ್ರದಕ್ಷಿಣೆಬಾರದೆ, ಅಲ್ಲಿಯ ಮುಖ್ಯ ದೇವಸ್ಥಾನಗಳಾಗಿ ಕಾಣುವ ಮೇಲಿನ ಶಿವಾಲಯಗಳಿಗೆ ಪ್ರದಕ್ಷಿಣೆ ಬರುವುದನ್ನು ಕಾಣುವಾಗ ಈ ಕೃಷ್ಣನಿಗೆ ತನ್ನದೇ ಆದ ಸ್ವತಂತ್ರ ದೇವಾಲಯವಿಲ್ಲದೆ ಈ ಉಡುಪಿಯಲ್ಲಿ ಪ್ರಾಧಾನ್ಯತೆಯು ಹೇಗೆ ಬಂತು? ಏಕೆ ಬಂತು? ಯಾರಿಂದ ಬಂತು? ಎಂಬುದು ಸಂಶೋಧನೀಯವಾಗಿ ಕಂಡುಬಂತು. ಅದು ವಿನಹ ಈ ಕ್ಷೇತ್ರದಲ್ಲಿ ಪುರಾತನವಾದ ಈ ಎರಡು ದೊಡ್ಡ ಶಿವಾಲಯಗಳಿಂದ "ಶಿವನಹಳ್ಳಿ"ವ "ಶಿವಳ್ಳಿ" ಗ್ರಾಮ ಎಂಬ ಹೆಸರನ್ನು ಪಡಕೊಂಡು ಇಲ್ಲಿ ಒಬ್ಬನಾದರೂ ಶೈವ ವಾ ಸ್ಮಾರ್ತ ಸಂಪ್ರದಾಯದ ಬ್ರಾಹ್ಮಣನೂ ಇಲ್ಲದೆ ಬರೇ ತಪ್ತ ಮುದ್ರಾಧಾರಣೆ ಮಾಡಿಕೊಂಡಿರುವ ಊರ್ಧ್ವ ಪುಂಡ್ರಾದಾರಿಗಳಾದ ಮಾಧ್ವರಿಂದ ತುಂಬಿ ಆ ಎರಡು ಶಿವಾಲಯಗಳಲ್ಲೂ ಶೈವಾಗಮ

ರೀತ್ಯಾ ಪೂಜೆಯಿಲ್ಲದಿರುವುದು ನೋಡಿಯೂ ಇಲ್ಲಿಯ ನೈಜಚಿತ್ರ ಮತ್ತು ಸತ್ಯತೆ ಬೇರೆಯೇ ಇರಬಹುದೆಂದು ಗ್ರಹಿಸಿ ಇದರ ಪರಿಶೋಧನೆಗೆ ತೊಡಗಿದೆನು.

ನಾನು ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಧರ್ಮದರ್ಶಿಯಾಗಿದ್ದಾಗ ಸಂಗ್ರಹಿಸಿದ ಅನೇಕ ಹಳೇ ದಾಖಲೆಗಳಿಂದಲೂ, ದಿವಂಗತ ಶ್ರೀ ನಟ್ಟೋಜ ಶಿವರಾಯರ ಶ್ರೀ ಶಾರದಾ ಲೈಬ್ರೆರಿಯಲ್ಲಿ ದೊರಕಿದ ಹಳೇ ಗ್ರಂಥಗಳ ಆಧಾರಗಳಿಂದಲೂ, ದಿವಂಗತ ಶ್ರೀ ಐ.ಕೆ. ಶ್ರೀನಿವಾಸರಾಯರು ಬರೆದಿಟ್ಟ ಹಸ್ತಪ್ರತಿಗಳ ಆಧಾರದಿಂದಲೂ ಅಲ್ಲದೆ ಇನ್ನಿತರ ಹಳೆಯ ಪತ್ರಿಗಳನ್ನು ಪ್ರಕಟಸಲ್ಪಟ್ಟ ಆಧಾರಗಳಿಂದಲೂ ಸಂಗ್ರಹಿಸಿ ಈ ವಿಮರ್ಶಾತ್ಮಕ ರೂಪವಾದ ಚರಿತ್ರೆಯನ್ನು ಬರೆದುದಾಗಿದೆ. ಸತ್ಯವನ್ನು ಎತ್ತಿಹಿಡಿದು ಅಸತ್ಯವನ್ನು ಹೊರಪಡಿಸಿ ಜನತೆಗೆ ತೋರಿಸಿ ಕೊಡುವುದೇ ಈ ಲೇಖಕನ ಗುರಿಯಾಗಿದೆ. ಈ ಚರಿತ್ರೆಯನ್ನು ಓದುವುದರಿಂದ ಉಡುಪಿಯಮಾಧ್ವರು ಇದರಲ್ಲಿರುವ ವಿಷಯಗಳನ್ನು ಅರಿತುಕೊಂಡು ಭೇದಭಾವವನ್ನು ತೊರೆದು ಹಿಂದೂ ಸನಾತನಧರ್ಮದ ವಿಶಾಲಧ್ಯೇಯವನ್ನರಿತುಕೊಂಡು ತಮ್ಮ ಸ್ವಾರ್ಥವನ್ನು ಬಿಟ್ಟುನಿಜವಾದ ಹಿಂದುಗಳಾಗಿ ದೇಶಸೇವೆಯನ್ನು ಇನ್ನಾದರೂ ಮಾಡಬಹುದೆಂಬ ಮಹತ್ವಾಕಾಂಕ್ಷೆಯಿಂದಲೂ ಇದನ್ನು ಬರೆದುದಾಗಿದೆ."

"ತಾ. ೧೮.೧.೧೯೬೩ರಲ್ಲಿ ಪರ್ಯಾಯ ಪೀಠವನ್ನು ಏರಲಿರುವ ಶ್ರೀ ಪೇಜಾವರ ಮಠದ ಸ್ವಾಮಿಗಳವರು ಬಹಳ ವಿದ್ವಾಂಸರೆಂದೂ ಭೇದಭಾವವಿಲ್ಲದ ವಿಶ್ವಹಿಂದೂ ಪರಿಷತ್ತಿನ ಸಕ್ರಿಯ ಸದಸ್ಯರೆಂದೂ ತಿಳಿದುಬಂದುದರಿಂದ ಅವರ ಮೂಲಕ ಉಡುಪಿ, ಮಠದವರಿಂದ ಈ ಮೊದಲು ನಡೆದಿರುವ ಕೆಲವು ಲೋಪದೋಷಗಳನ್ನು ಸರಿಪಡಿಸಬಹುದೆಂಬ ಅಭಿಲಾಷೆಯಿಂದ ಅದರ ವಿಚಾರವನ್ನು ಒಳಗೊಂಡ "ವಿಜ್ಞಾಪನಾ ಪತ್ರ"ವೆಂಬ ಕರಪತ್ರ ಒಂದನ್ನು ಅವರ ಮತ್ತು ಇತರ ಸಾರ್ವಜನಿಕ ಹಿಂದೂ ಸನಾತನ ಧರ್ಮಾಭಿಮಾನಿಗಳ ಅವಗಾಹನೆಗೆ ಬರುವಂತೆ ಮುದ್ರಿಸಿ ಶ್ರೀಗಳವರ ಪರ್ಯಾಯ ಕಾಲದಲ್ಲಿ ಪರ್ಯಾಯ ಸ್ವಾಮಿಗಳಿಗೂ, ಇತರ ಸ್ವಾಮಿಗಳಿಗೂ, ಜನತೆಗೂ ತಿಳಿಯುವಂತೆ ವಿತರಣೆ ಮಾಡಿಸಿದೆನು. ಇದರ ಪರಿಣಾಮವಾಗಿ ಮಠಗಳ ಶ್ರೀಗಳಮ್ಯಾಲಿಂದಲೂ ಸರಿಯಾದ ಉತ್ತರವು ಬಾರದೇ ಇದ್ದುದರಿಂದ ಈ ಉಡುಪಿ ಚರಿತ್ರೆಯನ್ನು ಬರೆದು ಉಡುಪಿಯ ಸತ್ಯಾಂಶವನ್ನು ಸಾರ್ವಜನಿಕರ ಅವಗಾಹನೆಗೆ ಬರುವಂತೆ ಪ್ರಕಟಿಸಬೇಕಾಯಿತು."

"ಈ ಪುಸ್ತಕದ ಅಂತ್ಯದಲ್ಲಿ ವಿವರಿಸಿದ ಸೌರಪುರಾಣದ ಆಧಾರಗಳಿಗೆ ಅನುಗುಣವಾಗಿ ಈಗಲೂ ಅಷ್ಟಮಠದ ಯತಿಗಳು ನಡೆದುಕೊಳ್ಳುತ್ತಿರುವ ಈ ಕೆಳಗಿನ ನಡತೆಗಳು ಗಮನಾರ್ಹವಾಗಿದೆ. ತಾ. ೩-೨-೧೯೬೯ರಂದು ಮಾಧ್ವರ ಅಷ್ಟಮಠಗಳಲ್ಲಿ

ಒಂದಾದ ಫಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥರು ಸನ್ಯಾಸವು ಒತ್ತಾಯದ ಮಾಘಸ್ನಾನವಲ್ಲ. ತಲೆ ಬಗ್ಗಿಸುವವರ ಅಪ್ರಮಾಣಿಕ ಗೌರವಕ್ಕೆ ಶಿರೋನಾಮೆಯಲ್ಲ" ಎಂಬಿತ್ಯಾದಿ ಕಾರಣಗಳನ್ನು ಕೊಟ್ಟು ಸನ್ಯಾಸವನ್ನೂ, ಮಠದ ಅಧಿಕಾರವನ್ನೂ ಕೂಡ ಬಿಟ್ಟು ಗೃಹಸ್ಥರಾದದ್ದೂ ಅಷ್ಟಮಠಕ್ಕೆ ಸೇರದ ಭಂಡಾರಿಕೇರಿ ಮಠದ ಸ್ವಾಮಿಗಳೂ ತನ್ನ ಸ್ವಂತ ಧನವಂತ ಮಠವನ್ನು ಬಿಟ್ಟು ಅವರು ಫಲಿಮಾರು ಮಠದ ಪೀಠವನ್ನು ಏರಿದ್ದೂ, ಇದರಲ್ಲಿ ಫಲಿಮಾರಿನ ದ್ವಂದ್ವ ಮಠವಾದ ಅದಮಾರು ಮಠದ ಯತಿಗಳು ಇದಕ್ಕೆ, 'ಅಸ್ತು' ಎಂದು ಒಪ್ಪಿದ್ದೂ ಇದಕ್ಕೆ ವಿರೋಧವಾಗಿ ಇತರ ಐದು ಮಠಾಧಿಪತಿಗಳು ಮಠಗಳ ಬಾಲಸನ್ಯಾಸದ ವಿಚಾರ ಎತ್ತಿಹಿಡಿದು ಕೋರ್ಟಿನಲ್ಲಿ ದಾವೆ ಹೂಡಿದ್ದೂ, ಇವರಿಬ್ಬರ ಮಧ್ಯದಲ್ಲಿ ಪೇಜಾವರ ಮಠಾಧೀಶರು ಪೌರೋಹಿತ್ಯ ವಹಿಸಿ ಈ ರೀತಿಯ ಮಠಾಂತರ ಕಾರ್ಯವನ್ನು ಅನುಮೋದಿಸಿ ಸ್ವಸ್ತಿವಾಚನ ಹೇಳಿ ಜನರ ಕಣ್ಣಿಗೆ ಮಂಕುಬೂದಿ ಹಚ್ಚುವಂತೆ ಪ್ರಕಟಿಸಿದ್ದೂ, ನೋಡುವಾಗ ಇವೆಲ್ಲಾ ಸ್ವಾರ್ಥಕ್ಕೋ ವಾ ನಿಸ್ವಾರ್ಥಕ್ಕೋ ಎಂಬುದನ್ನು ವಾಚಕರೇ ಊಹಿಸಬಹುದು."

ಹೀಗೆ ಇಲ್ಲಿ ಬರುವ ವಿವರಗಳು ಚರ್ಚಾಸ್ಪದವಾಗಿದ್ದು ಆ ಕಾಲಮಾನದ ಮಠೀಯ ವ್ಯವಸ್ಥೆಯಲ್ಲಿನ ರಾಜಕೀಯ ಪ್ರವೇಶವನ್ನು ಪ್ರತಿಬಿಂಬಿಸುತ್ತದೆ. ಲೇಖಕರು ಶೋಧನೆ ನಡೆಸಿ ತಮ್ಮ ನಿಲುವನ್ನು ಪ್ರತಿಪಾದಿಸಲು ಆಧಾರಗಳನ್ನು ಒದಗಿಸಿರುವುದು ಲಕ್ಷಿಸಬೇಕಾದ ಸಂಗತಿ.

ಮಾನ್ವಿ ನರಸಿಂಹರಾವ್‌ರವರ **ಕನ್ನಡ ಯಾತ್ರೆ** ಶಿವಮೊಗ್ಗೆಯಲ್ಲಿ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ನಡೆದ ಇಪ್ಪತ್ತೇಳನೆಯ ಸಾಹಿತ್ಯ ಸಮ್ಮೇಳನಕ್ಕೆ ಗೆಳೆಯರೊಡಗೂಡಿ ಮಾಡಿದ ಪ್ರವಾಸ ಕಥನವಾಗಿದೆ. ಹೈದರಾಬಾದಿನಿಂದ ಹೊರಟು ಶಿವಮೊಗ್ಗೆ ತಲುಪಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ, ಉಡುಪಿಯ ಶ್ರೀಕೃಷ್ಣನನ್ನು ಕಂಡು ಮರಳಿ ಹೈದರಾಬಾದಿಗೆ ಹಿಂತಿರುಗುವವರೆಗಿನ ಅನುಭವ ಕಥನ ಇಲ್ಲಿ ಬಂದಿದೆ.

ಅರಯ್ಯ ಅವರ **ನಾ ಕಂಡ ಕರ್ನಾಟಕ** ಸೀಮಿತ ಅರ್ಥದಲ್ಲಿ ಪ್ರವಾಸ ಕಥನ ವಾಗಿದೆ. ಇದರಲ್ಲಿ ಬಿ.ಎಸ್. ಕೇಶವನ್, ಅನಕೃ, ಶಿವರಾಮ ಕಾರಂತ, ಟಿ.ಎಲ್.ಕೆ. ಆಚಾರ್ಯ, ಎಂ.ಪಿ.ಎಲ್. ಶಾಸ್ತ್ರಿ -ಈ ಮಹನೀಯರ ವ್ಯಕ್ತಿ ಚಿತ್ರಗಳೂ, ಲೇಖಕರ ಬಾಲ್ಯಜೀವನದ ಕೆಲ ವಿವರಗಳೂ; ಹಲವು ಆಂಗ್ಲ ಕಿರು ಲೇಖನಗಳೂ; ನಂದಿ, ಮಹಾಬಲೇಶ್ವರ, ಉದಕಮಂಡಲ, ಕೆಮ್ಮಣ್ಣುಗುಂಡಿ, ಗೋವಾ -ಈ ಬೇಸಗೆ ತಂಗುದಾಣಗಳ ಪ್ರವಾಸಾನುಭವಗಳೂ; ಬೆಳಗಾವಿ ಲಿಂಗರಾಜಾ ಕಾಲೇಜು ಹಾಗೂ ಮೈಸೂರು -ಇಲ್ಲಿ ಒದಗಿದ ಅನುಭವಗಳ ಚಿತ್ರಗಳೂ; ಸಹೃದಯ ಗೋಷ್ಠಿಗಳ ಕೆಲವು ಸವಿನೆನಪುಗಳೂ ಸೇರ್ಪಡೆಯಾಗಿವೆ. ಲೇಖಕರದು ಸುಲಲಿತ ಬರವಣಿಗೆ. ಬೇಸಗೆ

ತಂಗುದಾಣಗಳ ಪರಿಚಯ ಚೆನ್ನಾಗಿ ಬಂದಿದೆ. ಪ್ರವಾಸ ಕಾಲದ ಅನುಭವಗಳು ಚಿತ್ತಾಕರ್ಷಕವಾಗಿವೆ.

ಮ.ನ. ಮೂರ್ತಿಯವರ **ನಮ್ಮ ಪ್ರವಾಸವು** "ಲಘು ಕಥನ ರೂಪದಲ್ಲಿ ನಮ್ಮ ನಾಡಿನ ಮುಖ್ಯಸ್ಥಳಗಳ ಇತಿಹಾಸ, ಧಾರ್ಮಿಕ ಹಿನ್ನೆಲೆ, ಗುಡಿ ಗೋಪುರಗಳ ಕಲಾವೈಭವ, ಪ್ರಕೃತಿ ಪರಿಚಯ ಮುಂತಾದ ವಿಷಯಗಳನ್ನು ತಿಳಿಸುವ" ಒಂದು ಒಳ್ಳೆಯ ಪ್ರಯತ್ನ. ಕೃಷ್ಣರಾಜ ಸಾಗರ, ಶ್ರೀರಂಗಪಟ್ಟಣ, ನಂಜನಗೂಡು, ಮೈಸೂರು, ಬೇಲೂರು, ಹಳೇಬಿಡು, ಉಡುಪಿ -ಈ ಪ್ರೇಕ್ಷಣೀಯ ಸ್ಥಳಗಳ ಪ್ರವಾಸ ಕಥನವಿದು. ಉದ್ದಕ್ಕೂ ಸರಸ ಶೈಲಿಯಲ್ಲಿ ಅನುಭವ ಕಥನ ನಿರೂಪಣೆಗೊಳ್ಳುವುದರಿಂದ, ಪ್ರವಾಸಕಾಲದ ಪ್ರಸಂಗಗಳು ಸ್ವಾರಸ್ಯಕರವಾಗಿ ಬರುವುದರಿಂದ ಓದುಗ ಅನಾಯಾಸವಾಗಿ ಪುಸ್ತಕವನ್ನು ತಿರುವಿಹಾಕಲು ಸಾಧ್ಯವಾಗುತ್ತದೆ.

ಮ.ನ. ಮೂರ್ತಿಯವರ **ನಾವು ಕಂಡ ಬೆಂಗಳೂರು** ಒಳ್ಳೆಯ ಪ್ರವಾಸ ಕೈಪಿಡಿಯಾಗಿದೆ. ಬೆಂಗಳೂರಿನ ಪೂರ್ವಚರಿತ್ರೆ ಹಾಗೂ ಬೆಂಗಳೂರಿನ ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳ ಪರಿಚಯ ಇಲ್ಲಿ ಪ್ರಧಾನವಾಗಿ ಬಂದಿದೆ. ಹೊರಗಿನ ಪ್ರವಾಸಿಗಳಿಗೆ ಬೆಂಗಳೂರಿನ ಪರಿಚಯ ಪಡೆಯಲು ಇದು ಸಾಕಷ್ಟು ನೆರವು ನೀಡುತ್ತದೆ. ಸಂಭಾಷಣಾ ಪ್ರಧಾನವಾದ ನಿರೂಪಣೆ ಕಾದಂಬರಿಯಂತೆ ಸಾಗುತ್ತದೆ. ಅಷ್ಟೇ ಅಲ್ಲ, ಪುಸ್ತಕ ಒಂದು ಒಳ್ಳೆಯ ಕಾದಂಬರಿಯನ್ನು ಓದಿದಾಗಿನ 'ಖುಷಿ' ಒದಗಿಸುತ್ತದೆ.

ಹಿರೇಮಲ್ಲೂರು ಈಶ್ವರನ್‌ರವರು ಕನ್ನಡ ನಾಡಿನ ಉದ್ದಗಲಕ್ಕೂ ಸುತ್ತಾಡಿ ಬಂದ ಮೇಲೆ ನಿರೂಪಿಸಿದ ಸುಂದರ ಹಾಗೂ ಸ್ಫೂರ್ತಿದಾಯಕವಾದ ಪ್ರವಾಸ ಕಥನ **ಕವಿ ಕಂಡ ನಾಡು**. ಕನ್ನಡಿಗನ ಅಪೂರ್ವ ಪ್ರತಿಭೆ, ಸಂಸ್ಕೃತಿ, ಕಲೆ, ವೀರ ಹಾಗೂ ಸಮರ್ಪಣ ಗುಣ -ಇವೇ ಮೊದಲಾದವುಗಳ ಬಗೆಗೆ ಅಭಿಮಾನ, ಮೆಚ್ಚುಗೆ ಪ್ರವಾಸ ಕಥನದ ಉದ್ದಕ್ಕೂ ಮೇಳಗೊಂಡಿರುವುದು ಒಂದು ವಿಶೇಷ ಅಂಶ. ಈಶ್ವರನ್‌ರವರು ಭಾವಪರವಶರಾಗಿ ಒಂದೊಂದು ಸ್ಥಳದ ಇತಿಹಾಸ, ಕಲಾವೈಭವ, ಇತಿಹಾಸ ಪುರುಷರ ಕಲಾಪ್ರೇಮ -ಇವುಗಳನ್ನು ಓದುಗರಿಗೆ ಮನದಟ್ಟಾಗುವಂತೆ ವಿವರಿಸಿರುವರು. ಅವರ ಭಾವಪೂರ್ಣ ವಿವರಣೆ, ಕನ್ನಡ ನೆಲದ ಮೇಲಣ ಅದಮ್ಯ ಅಭಿಮಾನದಿಂದಾಗಿ ಅಂತರಂಗದಿಂದ ತೀಡಿ ಬಂದಿದೆ. ಕನ್ನಡ ನಾಡು-ನುಡಿ-ಸಂಸ್ಕೃತಿಗಳ ನೆನಪು ತುಂಬಿ ಬಂದಾಗ ಈಶ್ವರನ್ ಮೈಮರೆಯುವರು. ಹೀಗಾಗಿ ಚಾರಿತ್ರಿಕ ಪಾತ್ರಗಳು ಅವರ ಕಣ್ಣ ಮುಂದೆ ನಿಲ್ಲುತ್ತವೆ, ಅವರೊಡನೆ ಮಾತನಾಡುತ್ತವೆ. ಅವರ ನೆನಪು ಗತಕಾಲಕ್ಕೆ ಲಗ್ಗೆ ಹಾಕುತ್ತದೆ. ಗುಡಿಗುಂಡಾರಗಳ ಅಪೂರ್ವ ಕಲಾಸೃಷ್ಟಿಗೆ ಕಾರಣವಾದ ಹಿನ್ನೆಲೆಯನ್ನು ಭಾವುಕರಾಗಿ ನಮ್ಮ ಕಣ್ಣ ಮುಂದೆ ನಿಲ್ಲಿಸಲು ಅವರು ಯತ್ನಿಸುವರು. ಈ 'ಅತಿ

ಭಾವುಕತೆ'ಯ ಕಾವು ಅವರ ಹೃದಯವನ್ನೆಲ್ಲಾ ಕವಿಯುವುದರಿಂದ ಬರಹದಲ್ಲೂ ಅದು ಅನಿವಾರ್ಯವಾಗಿ ತಲೆದೋರುತ್ತದೆ.

ದಕ್ಷಿಣ ಭಾರತದ ಕಡೆ ಬಂಧು-ಮಿತ್ರರೊಡನೆ ಹೋಗಿ ಬಂದ ಪ್ರವಾಸ ಕಥನ ಕೆ.ಬಿ. ಪ್ರಭುಪ್ರಸಾದರ **ದೇಗುಲದ ದಾರಿಯಲ್ಲಿ** ಬಂದಿದೆ. "ದಕ್ಷಿಣ ಭಾರತದ ಹೆಸರಾಂತ ಯಾತ್ರಾ ಸ್ಥಳಗಳ ಪೂರ್ಣ ಪರಿಚಯ ಮಾಡಿಕೊಡುವ, ಇಲ್ಲವೆ ಆ ಪ್ರಾಂತ್ಯದ ಜನಜೀವನ ಸಂಸ್ಕೃತಿಗಳನ್ನು ತುಲನೆ ಮಾಡುವ ವಿದ್ವತ್ ಸಾಹಸವಂತೂ ಈ ಬರಹದ ಮಿತಿಗೆ ಹೊರಗಾದುದು" ಎಂದು ಲೇಖಕರೇ ಪ್ರಾರಂಭದಲ್ಲಿ ಹೇಳಿಕೊಂಡಿರುವರು. ಇದರಿಂದ ಅವರ ಪ್ರವಾಸದ ಇತಿ-ಮಿತಿ ತಿಳಿಯಬಹುದು. ಪ್ರವಾಸಕಾಲದಲ್ಲಿ ತಮಗಾದ ಸಂತೋಷವನ್ನು ಹಾಗೂ ಬಂಧು ಮಿತ್ರರೊಡಗೂಡಿ ತಾವು ಪಡೆದ ಅನುಭವಗಳನ್ನು ಲೇಖಕರು ಇಲ್ಲಿ ಬಹು ಆತ್ಮೀಯವಾಗಿ ನಿರೂಪಿಸಿರುವರು. ಇಲ್ಲಿ ಪ್ರವಾಸವು ಓದುಗರಿಗೆ ಮಧುರವಾದ ಅನುಭವ ಪ್ರಪಂಚವನ್ನು ತೆರೆದಿಡುತ್ತಾ ಹೋಗುತ್ತದೆ. ಆ ಯಾತ್ರೆಯ ಅನುಭವಗಳು ಲೇಖಕರ ಸರಸ ಶೈಲಿಯಿಂದಾಗಿ ನಮ್ಮ ಪಾಲಿಗೆ ಜೀವಂತವಾಗುತ್ತವೆ. ಮೊದಲಿಗೇ ಬರುವ ಪ್ರವಾಸ ಸಿದ್ಧತೆಯ ಭಾಗ ನಮ್ಮ ಮನ ಸೆಳೆಯುತ್ತದೆ. ನಿಸರ್ಗದ ಅದ್ಭುತ ವರ್ಣವಿನ್ಯಾಸದ ಸೊಗಸನ್ನಾಗಲೀ, ದಾರಿಯ ಇಕ್ಕೆಲಗಳ ರಮ್ಯ ಪ್ರಕೃತಿಯ ಚಿತ್ರವನ್ನಾಗಲೀ, ದೇವಾಲಯಗಳ ಕಲಾವಿನ್ಯಾಸವನ್ನಾಗಲೀ, ಅವ್ಯಕ್ತ ಆನಂದದ ಬಣ್ಣನೆಯನ್ನಾಗಲೀ, ಕನ್ಯಾಕುಮಾರಿಯ ಸೂರ್ಯೋದಯ ಸೂರ್ಯಾಸ್ತಗಳ ಅಪೂರ್ವ ನೋಟವನ್ನಾಗಲೀ ಲೇಖಕರು ಮನಮುಟ್ಟುವಂತೆ ಹೇಳುವರು. ಸ್ನೇಹದ ತಿಳಿವಾತಾವರಣದಲ್ಲಿ ಮಿಂಚಿದ ಹಾಸ್ಯ, ಕ್ವಿಲಾನ್ ಹೋಟಲಿನಲ್ಲಿ ತನ್ನ ನಾಡಿನವರನ್ನು ನೋಡಿದ ಮಾಣಿಯ ಮನದಲ್ಲಿ ಮೂಡಿದ ಭಾವನೆ ಹಾಗೂ ಹೋಟೆಲ್ ಬಿಡುವಾಗ ಅವನ ಬಗೆಗೆ ಎಲ್ಲರ ಮನದಲ್ಲಿ ಮಿಡಿದ ಭಾವನೆಗಳು, ನೀಲಗಿರಿಯ ದೋಣಿ ವಿಹಾರದ 'ಸುಸ್ತು'-ಇವೆಲ್ಲ ಓದುಗನ ನೆನಪಿನಾಳದಲ್ಲಿ ನಿಲ್ಲುವ ಚಿತ್ರಗಳು.

'ನಮ್ಮ ಘೋಷಣೆ ಕೇಳಿ ಆಕಾಶ ನಕ್ಕಿತ್ತು'; 'ನಿದ್ದೆಯ ಮೇಲ್ಪದರಿನ ತೆರೆಗಳು ಹಿತವಾದ ಆ ಬೆಳಕಿನಲ್ಲಿ ನೂರು ಬಣ್ಣಗಳ ನವುರಾದ ದೇವಾಂಗವನ್ನು ನೇಯುತ್ತಿದ್ದುವು'; 'ಕಣ್ಣು ತೂಕಡಿಕೆಯ ತಕ್ಕಡಿಯಾಗಿದ್ದುವು'; 'ಪ್ರಶಾಂತತೆಯ ತೊಟ್ಟಿಲಿನಲ್ಲಿ ನಮ್ಮನ್ನು ಕಡಲಲೆಗಳು ಜೋಗುಳ ಹಾಡಿ ತೂಗಿದ್ದುವು'; 'ಜನ ವಾಹನಗಳ ಜೊತೆಗೆ ರಸ್ತೆಯಲ್ಲಿ ಮೋಡದ ತೇರುಗಳೂ ಸ್ವಚ್ಛಂದವಾಗಿ ಚಲಿಸುತ್ತಿದ್ದುವು'; 'ಬಂಗಾರದ ಬಿಸಿಲು ಮಂಜನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಟ್ಟುತ್ತಾ, ಓಡಿಸುತ್ತ ಬಂದಿತ್ತು' -ಇಂತಹ ಅರ್ಥಪೂರ್ಣವಾಕ್ಯಗಳು ಸ್ಫಟಿಕದ ಹರಳುಗಳಂತೆ ಮಿನುಗಿವೆ. ಒಂದೊಂದು

ಅಧ್ಯಾಯಕ್ಕೂ ಕೊಟ್ಟಿರುವ ಶೀರ್ಷಿಕೆಗಳು ಆಕರ್ಷಕವಾಗಿವೆ. ಪ್ರವಾಸ ಕಥನದಲ್ಲಿ ಆತ್ಮೀಯತೆಯ ಸಂಸ್ಪರ್ಶವಿದ್ದರೆ ಓದುಗನಿಗೆ ಎಂತಹ ಆನಂದ ಕೊಡಬಲ್ಲುದೆಂಬುದಕ್ಕೆ ಈ ಕೃತಿ ಒಂದು ಉತ್ತಮ ಉದಾಹರಣೆ.

ಗುಂಡ್ಮಿ ಚಂದ್ರಶೇಖರ ಐತಾಳರ **'ಸೌಂದರ್ಯದ ಸಾನ್ನಿಧ್ಯದಲ್ಲಿ'** ಎಂಬ ಕೃತಿಯು ಬೇಲೂರು, ಹಳೇಬೀಡು, ಸೋಮನಾಥಪುರ, ಶ್ರವಣಬೆಳಗೊಳ, ಶೃಂಗೇರಿ, ಶ್ರೀರಂಗಪಟ್ಟಣ, ಹಂಪೆ, ಆಗುಂಬೆ, ಬಿಳಿಗಿರೆ, ಬಿಳಿಗಿರಿರಂಗನ ಬೆಟ್ಟ, ತಲಕಾಡು, ಶಿವನ ಸಮುದ್ರ, ಮೈಸೂರು -ಈ ಸ್ಥಳಗಳ ಪ್ರವಾಸಾನುಭವವನ್ನು ಹೇಳುತ್ತದೆ. ಕರ್ನಾಟಕದ ಪ್ರಸಿದ್ಧ ಶಿಲ್ಪಕಲಾ ಬೀಡುಗಳ, ಸೌಂದರ್ಯದ ನೆಲೆಗಳ ಸೊಗಸಾದ ರಸಾರ್ದ್ರಮನದ ಪರಿಚಯ ಇಲ್ಲಿನ ಲೇಖನಗಳಿಂದ ಓದುಗನಿಗಾಗುತ್ತದೆ. ಕರ್ನಾಟಕದಲ್ಲಿನ ಪ್ರತಿಯೊಬ್ಬರು ನೋಡಲೇಬೇಕಾದ ಸ್ಥಳಗಳ ಬಗೆಗೆ ಒಳ್ಳೆಯ ವಿಷಯ ಸಾಮಗ್ರಿ ಈ ಗ್ರಂಥದಿಂದ ಪ್ರವಾಸಿಗರಿಗೆ ಸಿಗುತ್ತದೆ.

ಇಲ್ಲಿನ ಬರಹಗಳಲ್ಲಿ, ಹಂಪೆಯ ಹಿಂದಣ ಭವ್ಯ ಸ್ಥಿತಿ ಹಾಗೂ ಇಂದಿನ ದುಸ್ಥಿತಿಗಳ ಚಿತ್ರ ಮನಮುಟ್ಟುವಂತಿದೆ. ಆಗುಂಬೆಯ ಸೂರ್ಯಾಸ್ತಮಾನದ ನಿರೂಪಣೆ ಚೇತೋಹಾರಿಯಾಗಿ ಬಂದಿದೆ. ಶ್ರೀರಂಗಪಟ್ಟಣದ ಇತಿಹಾಸದ ವಿವರ ಹೆಚ್ಚು ಬಂದಿದೆ. 'ಸು. ೪೦೦ ವರ್ಷಗಳವರೆಗೆ ಆ ಭೂಮಿ ಸಾವಿರಾರು ಯೋಧರ ರಕ್ತಪಾನ ಮಾಡಿತು. ಅಷ್ಟು ರಕ್ತದಿಂದ ತೊಯ್ದ ನೆಲ ಇತಿಹಾಸದಲ್ಲಿ ವಿರಳ' ಎಂಬ ಹೇಳಿಕೆಯ ಪ್ರತಿಪಾದನೆ ಇಡೀ ಲೇಖನವನ್ನು ಆಕ್ರಮಿಸಿದೆ. ಬಿಳಿಗೆರೆ, ಬಿಳಿಗಿರಿರಂಗನ ಬೆಟ್ಟ, ಶಿವನಸಮುದ್ರ-ಈ ಸ್ಥಳಗಳ ವಿವರಗಳು ಸಾಮಾನ್ಯ ಮಟ್ಟದಲ್ಲಿವೆ. ಕೊನೆಯ ಬರಹ 'ಮೈಚೆನ್ನ ನಗೆಮಿಂಚು ಬಾವನ್ನದುಸಿರು' ಮೈಸೂರನ್ನು ಮೊದಲಿಗೆ ನೋಡಬರುವವರಿಗೆ ಪರಿಚಯ ಮಾಡಿಕೊಡುವ ನೆಲೆಯಲ್ಲಿದೆ.

೧೯೬೨ರಲ್ಲಿ ಪ್ರಕಟವಾದ **ಸೌಂದರ್ಯದ ಸಾನ್ನಿಧ್ಯದಲ್ಲಿ** ಎಂಬ ಕೃತಿಯ ಒಡಲಿಗೆ ಇನ್ನಷ್ಟು ಲೇಖನಗಳನ್ನು ಸೇರಿಸಿ **'ಚೆಲುವು ಚೆಲ್ಲಿದಲ್ಲಿ'** ಎಂಬ ಹೆಸರಿನಲ್ಲಿ ೧೯೭೨ರಲ್ಲಿ ಗುಂಡ್ಮಿ ಚಂದ್ರಶೇಖರ ಐತಾಳರು ಇನ್ನೊಂದು ಕೃತಿ ಹೊರತಂದಿರುವರು. ಹೊಸದಾಗಿ ಸೇರ್ಪಡೆಯಾದ ಇಲ್ಲಿನ ಬರಹಗಳು ಕನ್ನಡನಾಡಿನ ಪ್ರೇಕ್ಷಣೀಯ ಸ್ಥಳಗಳ ಪರಿಚಯ ಮಾಡಿಕೊಡುವಷ್ಟಕ್ಕೇ ತೃಪ್ತವಾಗಿವೆ.

'ಎದೆ ತೆರೆದು ನಿರೀಕ್ಷಿಸಿದರೆ, ಕಿವಿಯಿಟ್ಟು ಕೇಳಿದರೆ ಕಲ್ಲಿನ ಕಣಕಣವೂ ತುಟಿ ತೆರೆದು ತನ್ನ ಅಮರಗಾನವನ್ನು ಹಾಡುತ್ತಿರುವುದು ಕೇಳಿಸುತ್ತದೆ.' (ಪು. ೨)

'ಇಲ್ಲಿಯ ಕಲ್ಲಿನ ಕಣಕಣದಲ್ಲಿಯೂ ಕಲೆ ಕೆನೆಗಟ್ಟಿ ಕುಳಿತಿದೆ. ಇಲ್ಲಿ ಕಲಾ ಸೃಷ್ಟಿಯಿಲ್ಲದ ಕಲ್ಲಿಲ್ಲ.' (ಪು. ೩)

'ಇಲ್ಲಿ ಕಲ್ಲಿನಲ್ಲಿ ಕಡೆಯದ ವಸ್ತುವಿಲ್ಲ; ಕಲ್ಲು ಇಲ್ಲಿ ಒಂದು ಮಹಾಕಾವ್ಯವಾಗಿದೆ. ಆದರೆ ಅದರ ಪುಟಪುಟವೂ ಕಾಲನ ಗೆದ್ದಲಿಗೆ ತುತ್ತಾದ ಪುರಾತನ ಪುಸ್ತಕದಂತಿದೆ.' (ಪು. ೧೫)

'ಪ್ರಕೃತಿಯ ಸಾವಿರಾರು ಪುಟಗಳಿಂದ ಕೂಡಿದ ಸೃಷ್ಟಿ ಕಾವ್ಯದಲ್ಲಿನ ಒಂದು ಸುಂದರ ಪುಟ ಮಾರಸ್ವಾಮಿ!' (ಪು. ೯೭)

'ಸರ್ಕಾರ, ಜನತೆ ಮನಸ್ಸು ಮಾಡಿದರೆ ಈ ಸುಂದರ ಪ್ರದೇಶವನ್ನು (ಮಾರಸ್ವಾಮಿ) ದಕ್ಷಿಣ ಕನ್ನಡ ಜಿಲ್ಲೆಯ 'ಸ್ವಿಜರ್ಲೆಂಡ್' ಆಗಿ ಮಾಡುವುದೇನೂ ಕಷ್ಟವಿಲ್ಲ.' (ಪು.೧೦೦)

- 'ಶರಾವತಿ ಇಲ್ಲಿ ಸೌಂದರ್ಯದ ಗಂಧವಿಲ್ಲದವರನ್ನೂ ಸೌಂದರ್ಯಪಾಠದ ಪ್ರವೀಣರನ್ನಾಗಿ ಮಾಡುವಳು.' (ಪು. ೧೨೦)

-ಇಂತಹ ಆಶ್ಚರ್ಯೋದ್ಗಾರಗಳು, ಸಂದೇಶಗಳು ಪುಸ್ತಕದುದ್ದಕ್ಕೂ ಕಾಣಸಿಗುತ್ತವೆ. ಲೇಖಕ ಭಾವುಕನಾದಾಗ, ಭಾವುಕತೆ ಅವನನ್ನೇ ಕಟ್ಟಿನಿಲ್ಲಿಸಿದಾಗ ಈ ರೀತಿಯ ಬರವಣಿಗೆ ಅನಿವಾರ್ಯ. 'ಅಲ್ಲಿ ಸೂರೆಹೋದ, ಚೆಲ್ಲಿದ ಚೆಲುವನ್ನು ನನ್ನ ನುಡಿಯ ಬಟ್ಟಲಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದೇನೆ... ನಾನು ಅನುಭವಿಸಿದ ಆನಂದವನ್ನು ಇಲ್ಲಿ ತೋಡಿಕೊಂಡಿದ್ದೇನೆ' ಎಂದು ಲೇಖಕರು ಮೊದಲಿಗೇ ಹೇಳಿಕೊಂಡಿರುವರು. 'ಹಂಪೆ ಮುರಿಯಿಕ್ಕಿದೆ ಲೇಪಾಕ್ಷಿಯಲ್ಲಿ'; 'ಕಲ್ಲರಳಿ ಹೂವಾದ ಶಿಲ್ಪಕಲೆಯು ಪುಷ್ಪರಾಶಿ-ಅರಳುಗುಪ್ಪೆ'; 'ಇಲ್ಲಿಯ ನೀರೇ ನಮ್ಮ ಪಾಲಿಗೆ ಹಾಲು, ಮೊಸರು, ಬೆಣ್ಣೆ, ತುಪ್ಪ!' -ಈ ಶೀರ್ಷಿಕೆಗಳ ಕೆಳಗೆ ಬರುವ ಅನುಭವಕಥನ ಮೆಚ್ಚುವಂತಿದೆ. ಲೇಖಕರ ಇತಿ-ಮಿತಿಯಿಂದಾಗಿ 'ಚೆಲುವು ಚೆಲ್ಲಿದಲ್ಲಿ' 'ಪ್ರವಾಸ ಕಥನ'ವೆಂದೂ ಕರೆಯಿಸಿಕೊಳ್ಳದೆ, 'ಪ್ರವಾಸೀ ಮಾರ್ಗದರ್ಶಿ' ಎಂಬ ಹಣೆಪಟ್ಟೆಯನ್ನೂ ಹಚ್ಚಿಕೊಳ್ಳದೆ ಉತ್ತಮ ಪ್ರಬಂಧಗಳ ಮಟ್ಟದಲ್ಲಿಯೇ ನಿಲ್ಲುತ್ತದೆ.

ಬಿ. ಶಿವಮೂರ್ತಿಶಾಸ್ತ್ರಿಗಳ **ಕರ್ನಾಟಕ ಸಂದರ್ಶನವು** ಕನ್ನಡ ನಾಡು ನುಡಿಗಳಿಗೆ ಸಂಬಂಧಿಸಿದಂತೆ ೪೫ ಲೇಖನಗಳನ್ನೊಳಗೊಂಡ ಸಂಕೀರ್ಣಕೃತಿ. ಕರ್ನಾಟಕದ ತೀರ್ಥಕ್ಷೇತ್ರಗಳು, ದಕ್ಷಿಣಕಾಶಿ ಶಿವಗಂಗಾ, ಅಜಂತ ಎಲ್ಲೋರಾಗಳಲ್ಲಿ ಕನ್ನಡಿಗರ ಪ್ರತಿಭೆ, ಶ್ರೀಕ್ಷೇತ್ರ ಧರ್ಮಸ್ಥಳ, ಲೇಪಾಕ್ಷಿ ಕ್ಷೇತ್ರ, ಶ್ರೀಕ್ಷೇತ್ರ ಶೃಂಗೇರಿ, ಶ್ರೀಕ್ಷೇತ್ರ ಪಂಪಾ, ಕೂಡಲಸಂಗಮ ಕ್ಷೇತ್ರ -ಈ ಲೇಖನಗಳನ್ನು ಸ್ಥಳಪರಿಚಯಗಳೆನ್ನಬಹುದು. ಕೃತಿಗಿಡಲಾಗಿರುವ ಹೆಸರನ್ನು ಗಮನಿಸಿ ಇದೊಂದು ಪ್ರವಾಸಾನುಭವ ಕಥನ ಎಂದು

ಪರಿಗಣಿಸಿದರೆ ತಪ್ಪಾಗುತ್ತದೆ. ಇಲ್ಲಿನ ಬಹಳಷ್ಟು ಲೇಖನಗಳು ಪ್ರವಾಸಕ್ಕೆ ಹೊರತಾದುವು. ಸಾಮಾನ್ಯರಿಗಾಗಿ ಬರೆದ ಪರಿಚಯಾತ್ಮಕ ಲೇಖನಗಳು.

ಜೇರಿಗೆಕಟ್ಟೆ ಬಸವಪ್ಪನವರ **ಕರ್ನಾಟಕ ಯಾತ್ರೆ** ಕರ್ನಾಟಕದ ಎಲ್ಲ ಜಿಲ್ಲೆಗಳ ಸಂಕ್ಷಿಪ್ತ ಇತಿಹಾಸ, ತಾಲೂಕುಗಳ ವಿವರ, ಪ್ರೇಕ್ಷಣೀಯ ಸ್ಥಳಗಳು -ಹೀಗೆ ಎಲ್ಲವನ್ನೂ ಒಳಗೊಂಡ ಮಾಹಿತಿಗಳನ್ನು ಕೊಡುವುದರಲ್ಲಿಯೇ ಲೇಖಕರಿಗೆ ತೃಪ್ತಿ.

ಅಮೃತ ಮಹಾದೇವ ಅಣ್ಣಿಗೇರಿ ಅವರ **ಕರ್ನಾಟಕದ ಸಾಂಸ್ಕೃತಿಕ ಸ್ಥಳಗಳು** ಕನ್ನಡ ನಾಡಿನ ಪ್ರಮುಖ ಸ್ಥಳಗಳ ಇತಿಹಾಸ-ಸಂಸ್ಕೃತಿ-ಪೂರ್ವವೈಭವಗಳ ಪರಿಚಯ ಮಾಡಿಕೊಡಲು ಪ್ರಯತ್ನಿಸಿದೆ. ಕರ್ನಾಟಕದ ಪ್ರಾಚೀನ ಪರಂಪರೆಯ ಬಗೆಗೆ ವಿಶೇಷ ಮಮತೆಯುಳ್ಳ ಲೇಖಕರು ಈಗಾಗಲೇ ತಮ್ಮ ಅಭ್ಯಾಸದ ಫಲವನ್ನು ಬಾದಾಮಿ, ಪಟ್ಟದಕಲ್ಲು, ಮಹಾಕೂಟಗಳಲ್ಲಿನ ಶಿಲ್ಪಗಳ ಕೂಲಂಕಶ ಪರಿಚಯ ಮಾಡಿಕೊಡುವ ಕೈಪಿಡಿಯೊಂದರಲ್ಲಿ ನೀಡಿರುವರು. ಪ್ರಸ್ತುತ ಕೃತಿಯಲ್ಲಿ ಲೇಖಕರು ಕರ್ನಾಟಕದ ಹಲವು ಪ್ರದೇಶಗಳ ಐತಿಹಾಸಿಕ ವಿಷಯಗಳನ್ನು ಸಂಗ್ರಹಿಸಿ ಆಧಾರಯತವಾಗಿ ಹೇಳಿರುವರು. ಹೂಲಿ, ಕಲ್ಯಾಣ, ಬಳ್ಳಾರಿ ಜಿಲ್ಲೆ, ಲಕ್ಕುಂಡಿ, ಧಾರವಾಡ ಜಿಲ್ಲೆ, ಅಕ್ಕಲಕೋಟೆ, ಹೈದರಾಬಾದು ಕರ್ನಾಟಕ, ವಿಜಾಪುರ, ಸಿದ್ಧನಕೊಳ್ಳ, ಗೋಕರ್ಣ, ಉಣಕಲ್ಲು-ಇವು ಲೇಖಕರ ವಿಶೇಷ ಅಧ್ಯಯನಕ್ಕೆ ಒಳಗಾಗಿರುವ ಸ್ಥಳಗಳು. ಈ ಸ್ಥಳಗಳ ಐತಿಹಾಸಿಕ ಮಹತ್ವವನ್ನು-ರಾಜಕೀಯ, ಸಾಮಾಜಿಕ, ವಾಣಿಜ್ಯ, ವಿದ್ಯೆ, ಕಲೆಗಳಿಗೆ ಸಂಬಂಧಿಸಿದಂತೆ-ಸಮಗ್ರವಾಗಿ ಸಪ್ರಮಾಣವಾಗಿ ವಿವೇಚಿಸಿರುವ ಎ.ಎಂ. ಅಣ್ಣಿಗೇರಿ ಅವರ ಪ್ರಯತ್ನ ನಿಜಕ್ಕೂ ಮೆಚ್ಚುವಂತಹದು.

ಶಂಕರ ಪಾಟೀಲರ **ಸವಿ ಸಂಚಾರ** ಕನ್ನಡ ನಾಡಿನ ಪ್ರೇಕ್ಷಣೀಯ ಸ್ಥಳಗಳನ್ನು ಕುರಿತ ಪರಿಚಯಾತ್ಮಕವಾದ ಲೇಖನಮಾಲೆ. ಪತ್ರಿಕಾಕರ್ತರಾದ ಶಂಕರ ಪಾಟೀಲರು 'ಕರ್ಮವೀರ' ವಾರಪತ್ರಿಕೆಯಲ್ಲಿ ಮೂಡಿಬಂದ ತಮ್ಮ ಪ್ರವಾಸದ ಅನುಭವಗಳನ್ನು ಇಲ್ಲಿ ಪುಸ್ತಕರೂಪದಲ್ಲಿ ಸಂಕಲಿಸಿರುವರು. ಪತ್ರಿಕೆಯಲ್ಲಿ ಬರೆದ ಕೆಲವು ಹೊಸ ಲೇಖನಗಳೂ ಇಲ್ಲಿ ಸೇರಿವೆ. ತಮ್ಮ ಮನಸ್ಸಿಗೆ ಹಿಡಿಸಿದ ನಿಸರ್ಗದ ಚೆಲುವನ್ನು, ಮನಮೋಹಕ ಶಿಲ್ಪಗಳನ್ನು, ನೆಮ್ಮದಿ ತುಂಬಿದ ತೀರ್ಥಕ್ಷೇತ್ರಗಳನ್ನು, ಶಿಸ್ತಿನ ಶಿಕ್ಷಣ ಕೇಂದ್ರಗಳನ್ನು, ಉದ್ಯಮದ ಬೀಡುಗಳನ್ನು ಸಂದರ್ಶಿಸಿ ಅಲ್ಲಿ ತಮಗಾದ ಸಿಹಿ ಅನುಭವಗಳನ್ನು, ತಮ್ಮ ಮನಸ್ಸು ಮಿಡಿದ ಭಾವನೆಗಳನ್ನು ಮಾತಿನಲ್ಲಿ ಆಕರ್ಷಕವಾಗಿ ಸೆರೆಹಿಡಿಯುವ ಪ್ರಯತ್ನವನ್ನು ಲೇಖಕರು ಮಾಡಿರುವರು. ಪ್ರವಾಸಕ್ಕೆ ಹೊರತಾದ 'ಹಿಂದಿ ಕಲಿಯಲು ವಿದೇಶೀ ಗೃಹಿಣಿಯರ ಆತುರ' 'ಕನ್ನಡ ಭಾಷೆಗೆ ಲಿಪಿಯೂ ಉಂಟೆ?' ಎಂಬ ಲೇಖನಗಳೂ ಸೇರಿವೆ. ಇದರ ಔಚಿತ್ಯವೇನೆಂಬುದು ತಿಳಿಯಲಿಲ್ಲ.

ವಿ.ಕೃ.ಗೋಕಾಕ್‌ರವರಿಂದ ಸಂಪಾದಿತವಾಗಿರುವ '**ಇಂದಿನ ಕರ್ನಾಟಕ**'ದಲ್ಲಿ ಉತ್ತರ ಕರ್ನಾಟಕ, ಮದ್ರಾಸು ಕರ್ನಾಟಕ, ಮೈಸೂರು ಕರ್ನಾಟಕ, ನಿಝಾಮ ಕರ್ನಾಟಕ, ಕೊಡಗು-ಕನ್ನಡ ಈ ಭಾಗಗಳ ಪ್ರಮುಖ ಪಟ್ಟಣ-ಗ್ರಾಮಗಳ ನುಡಿ ಚಿತ್ರಗಳನ್ನು (ಲೇಖನ ಮಾಲೆಯ ರೂಪದಲ್ಲಿ) ಬೇರೆ ಬೇರೆ ಲೇಖಕರು ಬಿಡಿಸಿರುವರು. ಈ ಲೇಖನಮಾಲೆಯನ್ನು 'ಜೀವನ' ಪತ್ರಿಕೆಯಲ್ಲಿ ಪ್ರಾರಂಭಿಸಿದವರು ವಿ.ಕೃ. ಗೋಕಾಕ್‌ರವರು. 'ಕ್ರಾಂತಿಪ್ರಿಯ' ಎಂಬ ಹೆಸರಿನಲ್ಲಿ ಅವರು ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಅಥಣಿ, ವಿಜಾಪುರ, ಬೆಂಗಳೂರು -ಇವುಗಳ ನುಡಿಚಿತ್ರವನ್ನು ಮೊದಲಿಗೆ ಕೊಟ್ಟರು. "ವ್ಯಕ್ತಿಗಳ ರೇಖಾಚಿತ್ರಗಳನ್ನು ಬರೆಯುವುದು ಸಾಧ್ಯವಿದ್ದಂತೆ ನಮ್ಮ ನಮ್ಮ ನಾಡಿನ ನಗರ-ಗ್ರಾಮಗಳ ಚಿತ್ರವನ್ನು ಬರೆಯುವದೂ ಸಾಧ್ಯವಲ್ಲದೆ ಪ್ರಯೋಜನಕಾರಿ" ಎಂದು ವಿ.ಕೃ. ಗೋಕಾಕ್ ಅವರಿಗೆ ಅನ್ನಿಸಿ, ಲೇಖನ ಮಾಲೆ ಪ್ರಾರಂಭಿಸಿದರು. ಇದರಿಂದ ಇದರಿಂದ ಪ್ರಚೋದನೆಗೊಂಡು ಶಿವರಾಮ ಕಾರಂತ (ಮಂಗಳೂರು), 'ವಿಹಾರಿ' (ಬಳ್ಳಾರಿ, ಆದವಾನಿ, ಮೈಸೂರು, ರಾಯಚೂರು, ಮಾನ್ವಿ), ಸಿಂಪಿಲಿಂಗಣ್ಣ (ಹಲಸಂಗಿ), ವೆಂಕಟರಾವ್ ಬಿದರಕುಂದಿ (ನಂದಗಡ), ರಾ.ಬಾ. ಲಕ್ಷ್ಮೇಶ್ವರ (ಹುಲಗೂರು), ದತ್ತಾತ್ರೇಯ ಕುಲಕರ್ಣಿ (ಮಡಿಕೇರಿ), ಮ.ಗ. ಶೆಟ್ಟಿ (ಕಾರವಾರ) -ಇವರುಗಳು ತಮಗೆ ಪರಿಚಿತವಿದ್ದ ಗ್ರಾಮ-ನಗರಗಳ ಚಿತ್ರವನ್ನು ಬರೆದರು. ಅವೆಲ್ಲವನ್ನೂ ಸಂಗ್ರಹಿಸಿ ಪುಸ್ತಕರೂಪದಲ್ಲಿ ವಿ.ಕೃ. ಗೋಕಾಕ್‌ರವರ ಸಂಪಾದಕತ್ವದಲ್ಲಿ ಹೊರತರಲಾಗಿದೆ. "ಇಪ್ಪತ್ತನೆಯ ಶತಮಾನದಲ್ಲಿ ಜನ್ಮ ತಾಳಲಿರುವ ಅಖಂಡ ಕರ್ನಾಟಕದ ದೃಷ್ಟಿಯಿಂದ ಕನ್ನಡ ನಾಡಿನಲ್ಲಿಯ ಪಟ್ಟಣ-ಹಳ್ಳಿಗಳಲ್ಲಿ ಬೆಳೆದುಬರುತ್ತಿರುವ ಹೊಸ ಜೀವನವನ್ನು ಇಲ್ಲಿ ಚಿತ್ರಿಸಲು ಹವಣಿಸಿದೆ" ಎಂದು ಸಂಪಾದಕರು ಮುನ್ನುಡಿಯಲ್ಲಿ ಹೇಳಿರುವರು. ಕರ್ನಾಟಕ ಏಕೀಕರಣವಾಗಲಿಕ್ಕೆ ಮುನ್ನಿನ ಪ್ರಯತ್ನ ಇದು. ಕರ್ನಾಟಕ ರಾಜ್ಯೋದಯವಾದ ಮೇಲೆ ಅಖಂಡ ಕರ್ನಾಟಕ ನನಸಾದ ಮೇಲೆ ಕರ್ನಾಟಕದ ಪ್ರತಿಯೊಂದು ಹಳ್ಳಿಯ ಹಾಗೂ ಪಟ್ಟಣದ ಚಾರಿತ್ರ, ವೈಶಿಷ್ಟ್ಯ, ಮಾಹಿತಿಗಳನ್ನು ಕುರಿತ ಸಾಹಿತ್ಯ ಬರಬೇಕಾಗಿದೆ. 'ಈ ವಿಶಿಷ್ಟ ಪ್ರಕಾರವನ್ನು ಬೆಳೆಸಲು' ತರುಣ ಲೇಖಕರಿಗೆ ಈ ಕೃತಿಯ ಸಂಪಾದಕರು ಕರೆ ನೀಡಿರುವರು. ಅವಶ್ಯ ಆಗಬೇಕಾಗಿರುವ ಈ ಕಾರ್ಯ ಆದೆಷ್ಟು ಬೇಗ ಆಗಲಿ.

'ನನ್ನ ಸುತ್ತಾಟವೂ ಬಹುಶಃ ನನ್ನ ಸುತ್ತಮುತ್ತೇ!' ಎಂದು ಲಿಂಗಣ್ಣ ಸತ್ಯಂಪೇಟೆಯವರ ಮಾತು ಅವರ ಕೃತಿಗೆ ಒಪ್ಪುವಂತಿದೆ. ಅವರ ಸುತ್ತಾಟ ಗುರು ಮಠಕಲ್, ಸೊಲ್ಲಾಪುರ, ಸಜ್ಜಲಗುಡ್ಡ, ಧಾರವಾಡ -ಈ ಸೀಮಿತ ಪ್ರದೇಶಗಳಲ್ಲಿ ಮಾತ್ರ. ಲೇಖಕರು '**ಸುತ್ತಾಟದ ಸ್ಮೃತಿ**'ಯನ್ನು ಪ್ರವಾಸಕಥನವೆಂದಿರುವರು. ಸೀಮಿತ

ಅರ್ಥದಲ್ಲಿ ಈ ಮಾತು ನಿಜ. ಗುರುಮಠಕಲ್ ಹಾಗೂ ಸೊಲ್ಲಾಪುರದಲ್ಲಿ ಜಯದೇವಿತಾಯಿ, ಸಜ್ಜಲ ಗುಡ್ಡದಲ್ಲಿ ಶರಣಮ್ಮತಾಯಿ, ಧಾರವಾಡದಲ್ಲಿ ಮೃತ್ಯುಂಜಯಪ್ಪಗಳು -ಇವರ ಸಂದರ್ಶನ, ಆಗ ನಡೆಸಿದ ಚರ್ಚೆ -ಇವುಗಳ ವಿವರಗಳಷ್ಟೇ ಈ ಕೃತಿಯಲ್ಲಿ ಪ್ರಧಾನ. ವ್ಯಕ್ತಿಪರಿಚಯ, ಸಂದರ್ಶನ -ಈ ನಿಟ್ಟಿನಲ್ಲಿ ಕೃತಿ ಸ್ವಲ್ಪ ತೃಪ್ತಿಕೊಡುತ್ತದೆ. ಮತ್ತೆ, ಹೆಚ್ಚಿನದೇನನ್ನೂ ಇದರಲ್ಲಿ ನಿರೀಕ್ಷಿಸುವಂತಿಲ್ಲ. "ಪ್ರವಾಸ ಕಾಲಕ್ಕೆ ಇದಿರಾದ ಪರಿಸರವನ್ನು ಗ್ರಹಿಸುತ್ತ, ಇಂದ್ರಿಯ ಗೋಚರವಾದುದನ್ನೆಲ್ಲ ವಿವರಿಸುತ್ತ, ವ್ಯಕ್ತಿ ನಿಷ್ಠವಾಗಿ ಸಮಕಾಲೀನ ಜೀವನ ತಂದೊಡ್ಡಿರುವ ಸಮಸ್ಯೆಗಳಿಗೆ ಪ್ರತಿಕ್ರಿಯಿಸುತ್ತ ವಸ್ತುಸ್ಥಿತಿ ವಿಪರ್ಯಾಸಗಳಿಗೆ ಕಣ್ಣುತೆರೆದು ಖೋಟಾ ನಂಬಿಕೆಗಳನ್ನು ಕಾಣಿಸುತ್ತ, ಧರ್ಮ ಸೂಕ್ಷ್ಮಗಳಿಗೆ ಹೊಸ ಪರಿಸ್ಥಿತಿಯ ಸವಾಲನ್ನು ಗಮನಿಸಿ ಎಲ್ಲೂ Establish ಆಗದೆ ಇಲ್ಲಿ ಯೋಚಿಸಿದ್ದೇನೆ" ಎಂದು ಲೇಖಕರು ಹೇಳಿಕೊಂಡಿರುವರು. ಆದರೆ ಈ ಉದ್ದೇಶ ಕೃತಿಯಲ್ಲಿ ಕಾರ್ಯರೂಪಕ್ಕೆ ಬಂದಂತೆ ತೋರುವುದಿಲ್ಲ.

ಶ್ರೀ ಗೋಪಾಲಕೃಷ್ಣ ಪಿ. ನಾಯಕರ **ಉತ್ತರ ಕನ್ನಡ ದರ್ಶನವು** ಹೆಸರೇ ಸೂಚಿಸುವಂತೆ ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಪ್ರವಾಸಿ ಆಕರ್ಷಣೆಗಳನ್ನು ಚೆನ್ನಾಗಿ ಪರಿಚಯಿಸುವ ಕೃತಿ. ಒಂದೊಂದು ಪ್ರವಾಸಿ ತಾಣದ ಬಗೆಗೂ ಲೇಖಕರು ನೀಡಿರುವ ಮಾಹಿತಿಗಳು ಬಹಳ ಮೌಲಿಕವಾಗಿವೆ. ಶ್ರಮಪಟ್ಟು ಮಾಹಿತಿ-ಕಲೆಹಾಕಿರುವರು.

ಚಂದ್ರಶೇಖರ ಬ. ಕಾರಟಗಿ ಅವರ **ಪಯಣಿಗ** ಮಕ್ಕಳಿಗಾಗಿ ಕರ್ನಾಟಕದ ಸ್ಥಳಗಳನ್ನು ಸರಳಶೈಲಿಯಲ್ಲಿ ಪರಿಚಯ ಮಾಡಿಕೊಡಬೇಕೆಂಬ ಉದ್ದೇಶದಿಂದ ರಚಿತವಾದ ಕೃತಿ. ಕೃತಿಯ ಮೊದಲಿಗೆ ಸ್ವಾತಂತ್ರ್ಯ ಹೋರಾಟಗಾರ ಹರ್ಡೀಕರರ ಬಗೆಗೆ ಒಳ್ಳೆಯ ಲೇಖನ ಬಂದಿದೆ. ಮಕ್ಕಳಿಗೆ ಅರ್ಥವಾಗುವಂತೆ ಕರ್ನಾಟಕದ ಪ್ರಮುಖ ಸ್ಥಳಗಳ ಬೆಳೆ; ಜನಜೀವನ, ಪ್ರೇಕ್ಷಣೀಯ ಸ್ಥಳಗಳು -ಇವೇ ಮೊದಲಾದ ವಿಷಯಗಳ ಬಗೆಗೆ ಪರಿಚಯ ಮಾಡಿಕೊಟ್ಟಿರುವರು. ಇವಲ್ಲದೆ ಮದ್ರಾಸು, ತಿರುಪತಿಗಳ ಬಗೆಗೂ ಮಾಹಿತಿ ಬಂದಿದೆ.

ಸಮಾಜದಲ್ಲಿ ಬಡವರು ಧನಿಕರ ಶೋಷಣೆಗೆ ಒಳಗಾಗುತ್ತಿರುವುದರ ಕುರಿತು ಅಲ್ಲಲ್ಲಿ ಲೇಖಕರ ಸಿಟ್ಟು, ಆಕ್ರೋಶ ವ್ಯಕ್ತವಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಶೋಷಣೆಗೆ ಒಳಗಾದವರಿಗೆ ಸಹಾಯ ನೀಡುತ್ತಿದೆ ಎಂದು ತಮ್ಮ ಸಂತೋಷ ವ್ಯಕ್ತಪಡಿಸಿರುವರು. ಇದು ಪಾರ್ಶ್ವಿಕಸತ್ಯವೇ ಹೊರತು ಪೂರ್ಣಸತ್ಯವಲ್ಲ. ರಾಷ್ಟ್ರೀಯತೆಗಾಗಿ ಹಿಂದಿ ಸಂಸ್ಕೃತ ಭಾಷೆಗಳನ್ನೂ ಕಲಿಯಬೇಕೆಂಬ ಇವರ ಇನ್ನೊಂದು ವಾದವು ಸಮರ್ಥನೀಯವಾಗಿಲ್ಲ. ಮಕ್ಕಳ ಆಸಕ್ತಿಯನ್ನು ಸ್ವಲ್ಪಮಟ್ಟಿಗೆ ಕೆರಳಿಸಬಲ್ಲ ಈ ಸರಳ ಶೈಲಿಯ ಕೃತಿ ಸ್ವಾಗತಾರ್ಹವಾಗಿದೆ.

ಶ್ರೀ-ರಂಗ-ಮಂಗ-ರು ಮಾಡಿದ **ಮುಕ್ಕಣ್ಣ ಯಾತ್ರೆ** ಒಂದು ಪ್ರವಾಸ ಕಥನವಾಗಿದೆ. ಶ್ರವಣಬೆಳುಗೊಳ, ಹಳೇಬೀಡು, ಬೇಲೂರು -ಈ ಮೂರು ಶಿಲ್ಪಕಲಾ ಬೀಡುಗಳಿಗೆ ಮೂವರು (ಶ್ರೀರಂಗ, ನೆಗಳೂರು ರಂಗನಾಥ ಹಾಗೂ ಎಚ್.ಎಸ್. ಪಾಟೀಲ) ಮೂರು ದಿನದ ಪ್ರವಾಸ ಕೈಗೊಂಡು ತಮ್ಮ ತಮ್ಮ ಅನುಭವ-ದೃಷ್ಟಿ ಇಲ್ಲಿ ಪ್ರತ್ಯೇಕ ಕೊಟ್ಟಿರುವರು. ಪ್ರವಾಸ ಸಾಹಿತ್ಯದಲ್ಲಿ ಇದೊಂದು ಹೊಸ ಪ್ರಯೋಗ. ತಿಳಿಯಾದ ಹಾಸ್ಯಶೈಲಿಯಲ್ಲಿ ನಿರೂಪಿತವಾಗಿರುವ ಪ್ರವಾಸದ ಅನುಭವಗಳು ಚೇತೋಹಾರಿಯಾಗಿವೆ. ಮೊದಲ ಲೇಖನ ಶ್ರೀರಂಗರದು. ಅವರ **ಜಕ್ಕಣ್ಣನ ಜಾತ್ರೆ** ಶ್ರೇಷ್ಠ ಪ್ರವಾಸಾನುಭವ ಕಥನವಾಗಿದೆ. ಇಲ್ಲಿನ ವಿಡಂಬನಾತ್ಮಕ ಶೈಲಿ ವಿಶಿಷ್ಟ ಸ್ವರೂಪದ್ದು.[೧]

ಉಡುಪಿಯ ಪಿ. ಚಂದ್ರಶೇಖರ ಹೆಗ್ಡೆ ಅವರ **ಕರ್ನಾಟಕದ ದಿಗ್ದರ್ಶನವು** ಕರ್ನಾಟಕ ಏಕೀಕರಣದ ಗೊತ್ತು ಗುರಿಗಳನ್ನು ಅಂದು ಅಭಿಮಾನಶೂನ್ಯರಾಗಿದ್ದ ಕನ್ನಡಿಗರಿಗೆ ಪರಿಚಯಿಸಿಕೊಡುವ ಉದ್ದೇಶದಿಂದ ಹೊರಬಂದ ಕೃತಿ. ಕರ್ನಾಟಕವು ಹಿಂದೆ ಹೇಗಿತ್ತು, ಇಂದಿನ ಕರ್ನಾಟಕ ಹೇಗಿದೆ, ಮುಂದಿನ ಕರ್ನಾಟಕವು ಹೇಗಿರಬೇಕೆಂಬ ಭಾವನೆಯನ್ನು ಚೆನ್ನಾಗಿ ತಿಳಿಯಪಡಿಸುವ ಲೇಖಕರು ತಮ್ಮ ಏಕೀಕರಣದವಾದಕ್ಕೆ ಬೇಕಾದ ಅಂಕಿ-ಸಂಖ್ಯೆ, ಸಮರ್ಥನೆಗಳನ್ನು ಸಾಕಷ್ಟು ಕೊಟ್ಟಿರುವರು. ಪುಸ್ತಕದ ಕೊನೆಯಲ್ಲಿ ಕನ್ನಡಿಗರ ಕರ್ತವ್ಯವನ್ನು ಜ್ಞಾಪಿಸುತ್ತಾ

೧. ಜಾತಿ ಮತ್ತು ಸ್ವಾರ್ಥ ಮುಕ್ತವಾದ ಶುದ್ಧ ಕರ್ನಾಟಕಾಭಿಮಾನಿಗಳ ಸಂಘಗಳನ್ನು ಹೆಚ್ಚು ಹೆಚ್ಚಾಗಿ ಬಲಪಡಿಸುವುದು.

೨. ಸದ್ಯ ಇರುವ ಕರ್ನಾಟಕ ಏಕೀಕರಣ ಸಂಘದ ಉಪಶಾಖೆಗಳನ್ನು ಪ್ರತಿ ತಾಲೂಕುಗಳಿಗೂ ಹಳ್ಳಿ ಹಳ್ಳಿಗಳಿಗೂ ವಿಸ್ತರಿಸುವುದು.

೩. ಏಕೀಕರಣದ ಕೇಳಿಕೆಯನ್ನು ಬ್ರಿಟಿಷ್ ಅಧಿಕಾರಿಗಳ ಕಿವಿಗೆ ಮುಟ್ಟಿಸಿ ಅವರ ಲಕ್ಷ್ಯ ಸೆಳೆಯುವುದು. ಇದಕ್ಕೆ ಕರ್ನಾಟಕ ಮುಖಂಡರಿಂದ ಕೂಡಿದ ಡೆಪ್ಯೂಟೇಶನ್ ಒಂದನ್ನು ಇಂಗ್ಲೆಂಡಿಗೆ ಕಳುಹಿಸುವುದು.

-ಇವು ಪ್ರಕೃತ ಕರ್ತವ್ಯಗಳೆಂದು ಅಭಿಪ್ರಾಯಪಟ್ಟಿರುವರು. ಸ್ವಾತಂತ್ರ್ಯಪೂರ್ವದ ಕನ್ನಡಿಗರ ಏಕೀಕರಣದ ಕನಸನ್ನೂ, ಅದು ಹೇಗೇ ವಿದ್ವಾಂತರ ಮೊದಲ ವಿಚಾರವಾಗಿದ್ದಿತೆಂಬುದನ್ನೂ ಈ ಕೃತಿ ಚೆನ್ನಾಗಿ ತಿಳಿಯಪಡಿಸುತ್ತದೆ.

---

೧. ವರದರಾಜ ಹುಯಿಲಗೋಳರವರು ಶ್ರೀರಂಗರ ಮತ್ತೊಂದು ಪ್ರವಾಸ ಗ್ರಂಥ 'ಋತು ಸಂಹಾರ'ದಲ್ಲಿಯೂ ಈ ವಿಡಂಬನಾತ್ಮಕ ಶೈಲಿಯನ್ನು ಕಂಡಿರುವರು. (ನೋಡಿ: 'ಪ್ರಬುದ್ಧ ಕರ್ನಾಟಕ' ಚಿನ್ನದ ಸಂಚಿಕೆ (ಸಾಹಿತ್ಯ ಸಂಪುಟ), ಮೈಸೂರು ವಿಶ್ವವಿದ್ಯಾಲಯ, (೧೯೬೯) ಪು. ೩೫೧.

ಸಿ.ಎಸ್. ಕುಪ್ಪುಸ್ವಾಮಿ ಅಯ್ಯಂಗಾರ್‌ರವರ **ಮೈಸೂರು ಡಿಸ್ಟ್ರಿಕ್ಟು ಕೈಪಿಡಿ** ಮೈಸೂರು ಜಿಲ್ಲೆಯ ಸಾಮಾನ್ಯ ವಿವರಣೆ ಹಾಗೂ ಅಲ್ಲಿ ವ್ಯವಸಾಯ, ಕೈಗಾರಿಕೆ, ವಿದ್ಯಾಭ್ಯಾಸ, ಆರೋಗ್ಯ, ಆಡಳಿತ ಮುಂತಾದ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಹೇಳುವ ಕೃತಿ. ಗ್ರಂಥರಚನೆಯ ಸಂದರ್ಭದಲ್ಲಿ ವಿವರಗಳನ್ನು ಕೊಡುವಾಗ ಸರಕಾರದ ಇಲಾಖೆಗಳ ವಾರ್ಷಿಕ ವರದಿಗಳನ್ನು ಲೇಖಕರು ಆಧರಿಸಿರುವರು. ಹಾಗೆಯೇ ಅನೇಕ ಗಣ್ಯವ್ಯಕ್ತಿಗಳನ್ನು ಸಂದರ್ಶಿಸಿ ಅವರಿಂದ ಸಲಹೆ, ಸೂಚನೆಗಳನ್ನು ಪಡೆದಿರುವರು, ವಿಷಯ ಸಂಗ್ರಹಣೆ ಮಾಡಿರುವರು. ಮೈಸೂರು ಜಿಲ್ಲೆಯ ಸರ್ವಾಂಗೀಣ ಪ್ರಗತಿಯ ವಿಹಂಗಮ ನೋಟ ಈ ಕೃತಿಯಿಂದ ನಮಗಾಗುತ್ತದೆ. ಕೃತಿಯ ಹೆಸರೇ ಸೂಚಿಸುವಂತೆ ಇದು ಮೈಸೂರು ಜಿಲ್ಲೆಯ 'ಕೈಪಿಡಿ'ಯಾಗಿದೆ.

**ನನ್ನದು ಈ ಕನ್ನಡ ನಾಡು** ಕನ್ನಡ ನಾಡಿನ ಪ್ರಸಿದ್ಧವಾದ ಇಪ್ಪತ್ತು ಸ್ಥಳಗಳ ಪರಿಚಯ ಮಾಡಿಕೊಡುವ ಕೃತಿ. ಪಾಟೀಲ ಪುಟ್ಟಪ್ಪನವರ ಈ ಕೃತಿ ಕೇವಲ ಸ್ಥಳಪರಿಯವಷ್ಟನ್ನೇ ಮಾಡಿಕೊಡುವುದಿಲ್ಲ. ಭೌಗೋಳಿಕ, ಪೌರಾಣಿಕ ಹಿನ್ನೆಲೆಯಲ್ಲಿ ಪ್ರತಿಯೊಂದು ಸ್ಥಳದ ಪ್ರಾಚೀನ ಇತಿಹಾಸ ಹಾಗೂ ಅದರ ಮಹತ್ತರ ಕೊಡುಗೆಗಳ ಪ್ರಸ್ತಾಪವನ್ನೂ ಸಂಕ್ಷೇಪವಾಗಿ ಹೇಳುತ್ತದೆ. ಆಯಾ ನೆಲದ ಇತಿಹಾಸದ ಗತಕಾಲದ ಚಿತ್ರಗಳು ಓದುತ್ತಿದ್ದಂತೆ ಕಣ್ಣ ಮುಂದೆ ಸುಳಿಯುತ್ತವೆ. ರಾಜಕೀಯ, ಸಾಮಾಜಿಕ, ಸಾಹಿತ್ತಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮಹನೀಯರ ಸ್ಮರಣೆಯೂ ಪ್ರಾಸ್ತಾವಿಕವಾಗಿ ಬರುತ್ತದೆ. "ಈ ನೆಲದಲ್ಲಿ ನೀವು ಈ ತುದಿಯಿಂದ ಆ ತುದಿಯವರೆಗೆ ಎಲ್ಲಿಯೇ ಹೋದರೂ ಪ್ರತಿಯೊಂದು ಸ್ಥಳವೂ ಹೇಳುವ, ಮಾತು ಮೂಕವಾಗುವಂಥ, ಹೃದಯವನ್ನು ಅಲುಗಿಸುವ, ಒಂದು ಚೇತೋಹಾರಿ ಕಥೆ ಇದ್ದೇ ಇದೆ. 'ನನ್ನದು ಈ ಕನ್ನಡ ನಾಡು' ಓದಿದವರಿಗೆ ಈ ನಾಡಿನ ಮಹತ್ತತೆಯ, ವಿಪುಲ ವೈವಿಧ್ಯದ ಬಗೆಗೆ ಒಂದಿಷ್ಟಾದರೂ ಮನಸ್ಸು ಮಿಸಿಮಿಸಿ ಎನಿಸಿ, ಹೆಚ್ಚಿನದನ್ನು ನೋಡಬೇಕು, ತಿಳಿದುಕೊಳ್ಳಬೇಕು ಎನ್ನುವ ಪ್ರೇರಣೆ ಉಂಟಾದರೆ ಈ ಬರಹ ಸಾರ್ಥಕ ಎಂದು ನನ್ನ ಭಾವನೆ" ಎಂದು ಪ್ರಾರಂಭದಲ್ಲಿ ಲೇಖಕರು ಹೇಳಿಕೊಂಡಿರುವರು. ಸ್ವಾರಸ್ಯಪೂರ್ಣ ನಿರೂಪಣೆ, ಕುತೂಹಲ ಕೆರಳಿಸುವ ಸುಭಗ ಶೈಲಿ ಈ ಪುಸ್ತಕದ ವಿಶೇಷ ಗುಣಗಳು. ಹೆಚ್ಚಿನದನ್ನು ನೋಡಬೇಕು, ತಿಳಿದುಕೊಳ್ಳಬೇಕು ಎನ್ನುವ ಪ್ರೇರಣೆ ಖಂಡಿತಾ ಈ ಪುಸ್ತಕದ ಓದುಗನ ಮನದಲ್ಲಾಗುತ್ತದೆ.

ಬೆ.ಗೋ. ರಮೇಶ್‌ರವರು ಕರ್ನಾಟಕದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾದ **ಹಂಪಿಯ** ಬಗೆಗೆ ಪ್ರವಾಸಿಗರ ಕೈಪಿಡಿಯೊಂದನ್ನು ಸಿದ್ಧಪಡಿಸಿರುವರು. ಇದರಲ್ಲಿ ಹಂಪಿಯ ಇತಿಹಾಸ, ವಿದೇಶೀ ಪ್ರವಾಸಿಗರು ನೀಡಿರುವ ಹಂಪಿಯ ಬಗೆಗಿನ ವರದಿ, ಪ್ರೇಕ್ಷಣೀಯ ಸ್ಥಳಗಳು -ಹೀಗೆ ಪ್ರವಾಸಿಗೆ ಅಗತ್ಯವಿರುವ ಮಾಹಿತಿಗಳನ್ನೆಲ್ಲಾ ಒಂದೆಡೆ ಕೊಟ್ಟಿರುವರು.

ಡಾ. ಉಪ್ಪಂಗಳ ರಾಮಭಟ್ಟ ಅವರ **ಸಂಚಾರ ಸಂಪುಟವು** ಲೇಖಕರು ಎರಡು ದಶಕಗಳಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸಂಚಾರ ಕೈಗೊಂಡು ತಮ್ಮ ಅನುಭವಗಳನ್ನು ಇಲ್ಲಿ ದಾಖಲಿಸಿರುವರು. ಇದು ಬರಿಯ ಸಂಚಾರ, ಮಹಾ ಪ್ರವಾಸವಲ್ಲ; "ಚಾರಣಿಗನಾಗಿ ಕೈಗೊಂಡ ಸಂಚಾರದ ಸವಿನೆನಪುಗಳು ಮನಸ್ಸಿನ ಕುಲುಮೆಯಲ್ಲಿ ಪುಟಗೊಂಡು ಸಂಪುಟವಾಗಿ ಹೊರಹೊಮ್ಮಿ ಪ್ರತಿ ಪುಟದಲ್ಲಿ ಮೈದಾಳಿವೆ" ಎಂದು ಲೇಖಕರೇ ಹೇಳಿಕೊಂಡಿರುವರು. ಇಲ್ಲಿನ ಸೊಗಸಾದ ಭಾಷೆ ಸವಿಸಂಚಾರದ ಅನುಭವವನ್ನು ಓದುಗನಿಗೆ ಸಂವಹನ ಮಾಡುವಲ್ಲಿ ಯಶಸ್ವಿಯಾಗಿದೆ. ಮಾಹಿತಿ ಸಂಗ್ರಹಣೆ ಹಾಗೂ ನಿರೂಪಣೆ ಎರಡೂ ಅಚ್ಚುಕಟ್ಟಾಗಿದೆ.

ಕರ್ನಾಟಕದ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳ ಪರಿಚಯವನ್ನು ಅವುಗಳ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆಯಲ್ಲಿ ಹಲವಾರು ಮಂದಿ ಲೇಖಕರ ಮೂಲಕ ಮಕ್ಕಳಿಗಾಗಿ ಬರೆಯಿಸಿ ಐ.ಬಿ.ಎಚ್. ಸಂಸ್ಥೆಯವರು ಪ್ರಕಟಿಸಿರುವರು. ಇವು ಪ್ರವಾಸಿಯ ಅನುಭವ ಕಥನಗಳಲ್ಲ; ಪ್ರವಾಸಿಗಳಿಗಾಗಿಯೇ ಬರೆದ 'ಕೈಪಿಡಿ'ಗಳು. ಎಲ್.ಆರ್. ಕುಲಕರ್ಣಿಯವರ **'ಬೀದರ್'**, ಕುಲಕರ್ಣಿ ನಾರಾಯಣರಾವ್‌ರವರ **ವಿಜಾಪುರ**, ಪಿ. ಗುರುರಾಜಭಟ್ ರವರ **ಉಡುಪಿ ಇತಿಹಾಸ**, ಕೆ. ಪದ್ಮಾವತಮ್ಮ-ನವರ **ಶ್ರೀರಂಗಪಟ್ಟಣ**, ಎ.ಎಂ. ಅಣ್ಣಿಗೇರಿಯವರ **ಲಕ್ಕುಂಡಿ**, ಸಿ.ವಿ. ಕೆರಿಮುನಿಯವರ **ಪುಲಿಗೆರೆ**, ಶೇಖರ ಇಡ್ಯರವರ **ಮಂಗಳೂರು**, ಕೃಷ್ಣಮೂರ್ತಿ ಪುರಾಣಿಕರವರ **ಬೆಳಗಾವಿ**, ಮ. ಶ್ರೀಧರಮೂರ್ತಿಯವರ **ಗಾಣಗಾಪುರ**, ಸವ್ಯಸಾಚಿಯವರ **ರಾಮನಾಥಪುರ**, ಆ. ಸುಂದರರವರ **ಬ್ರಹ್ಮಗಿರಿ** ಮತ್ತು **ಚಂದ್ರವಳ್ಳಿ**, ದಯಾನಂದ ತೊರ್ಕೆಯವರ **ಧಾರವಾಡ**, ಎಸ್.ಎಸ್. ಭೂಸರೆಡ್ಡಿಯವರ **ರಾಯಚೂರು** ಹಾಗೂ **ಬಂಕಾಪುರ**, ಮೋಹನಚುದ ಕೀರಣಗಿಯವರ **ಕೊಪ್ಪಳ**, ಬಿ. ಮಹಾಬಲರಾವ್‌ರವರ **ಗದಗ-ಬೆಟಗೇರಿ**, ಬಾ.ರಾ. ಗೋಪಾಲ್‌ರವರ **ಬನವಾಸಿ**, ನಾ. ಡಿಸೋಜಾರವರ **ಗೇರುಸೊಪ್ಪೆ**, ಶಂಸ ಐತಾಳರ **ಕೃಷ್ಣರಾಜಸಾಗರ** -ಈ ಕೃತಿಗಳು ಪರಿಚಯಾತ್ಮಕ ನೆಲೆಯಲ್ಲಿ ಪ್ರವಾಸಿಗಳಿಗೆ ಅಗತ್ಯವಿರುವ ಉಪಯುಕ್ತ ಮಾಹಿತಿಗಳನ್ನು ನೀಡುವುದರಲ್ಲಿ ಸಫಲವಾಗಿವೆ.

ಕರ್ನಾಟಕದ ಪ್ರಮುಖ ಜಿಲ್ಲೆಗಳನ್ನು ಐತಿಹಾಸಿಕ, ಸಾಂಸ್ಕೃತಿಕ, ಔದ್ಯಮಿಕ ಪ್ರಗತಿಯ ಹಿನ್ನೆಲೆಯಲ್ಲಿ ಪರಿಚಯ ಮಾಡಿಕೊಡುವ ಪ್ರಯತ್ನವನ್ನೂ ಐ.ಬಿ.ಎಚ್. ಸಂಸ್ಥೆ ಕೈಗೊಂಡಿದೆ. ಬೇರೆ ಬೇರೆ ಲೇಖಕರುಗಳಿಂದ ಮಕ್ಕಳಿಗೆ ತಿಳಿಯುವಂತೆ ಜಿಲ್ಲೆಗಳ 'ದರ್ಶನ'ವನ್ನು ಕಿರುಪುಸ್ತಕಗಳ ಮೂಲಕ ಮಾಡಿಸುವ ಯೋಜನೆಯಲ್ಲಿ ಸದ್ಯ ಒಂಬತ್ತು ಪುಸ್ತಕಗಳು ಹೊರಬಂದಿವೆ. ದಯಾನಂದ ತೊರ್ಕೆಯವರ **ಉತ್ತರ ಕನ್ನಡ ಜಿಲ್ಲೆ ದರ್ಶನ**, ಬ.ನ. ಸುಂದರರಾವ್‌ರವರ **ಕೋಲಾರ ಜಿಲ್ಲೆ ದರ್ಶನ**, ಈಶ್ವರಚಂದ್ರರ

**ದಕ್ಷಿಣ ಕನ್ನಡ ಜಿಲ್ಲೆ ದರ್ಶನ**, ಕೃಷ್ಣಮೂರ್ತಿ ಪುರಾಣಿಕರ **ಬೆಳಗಾವಿ ಜಿಲ್ಲೆ ದರ್ಶನ**, ರಘುನಾಥಭಟ್‌ರವರ **ಮೈಸೂರು ಜಿಲ್ಲೆ ದರ್ಶನ**, ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ **ಹಾಸನ ಜಿಲ್ಲೆ ದರ್ಶನ**, ಸಿ.ವ. ಚನ್ನಬಸವೇಶ್ವರ ಅವರ **ಬಳ್ಳಾರಿ ಜಿಲ್ಲೆ ದರ್ಶನ**, ಮನ್ನೇಕೋಟೆ ಕೇಶವರಾವ್‌ರವರ **ಮಂಡ್ಯ ಜಿಲ್ಲೆಯ ದರ್ಶನ** -ಇವು ಈ ಮಾಲೆಯಲ್ಲಿ ಪ್ರಕಟವಾಗಿರುವ ಕೃತಿಗಳು.

ಕರ್ನಾಟಕ ಸುಪ್ರಸಿದ್ಧ ಕಲಾಬೀಡುಗಳ ಬಗೆಗೂ ಪುಸ್ತಕಗಳು ಬಂದಿವೆ. ಮಕ್ಕಳಿಗಾಗಿ ಬರೆದಿರುವ ಈ ಪುಸ್ತಕಗಳು ಆಯಾ ಸ್ಥಳಗಳು ಸಾಂಸ್ಕೃತಿಕವಾಗಿ ಹೇಗೆ ಮಹತ್ವದ ಸ್ಥಾನ ಪಡೆದಿವೆ ಎಂಬುದನ್ನು ತಿಳಿಸುವುದರ ಜೊತೆಗೆ ಅಲ್ಲಿರುವ ದೇವಾಲಯಗಳು, ಅವುಗಳನ್ನು ಅಲಂಕರಿಸಿರುವ ಶಿಲ್ಪಗಳು -ಅವುಗಳ ಸ್ವರೂಪ ಮತ್ತು ಲಕ್ಷಣಗಳು, ಕಲಾಪ್ರತಿಭೆ-ಸಂಪತ್ತು -ಇವನ್ನು ವಿವರಿಸುವ, ಸ್ಪಷ್ಟಗೊಳಿಸುವ ಪ್ರಯತ್ನ ಮಾಡಿವೆ. ಬಾ.ರಾ. ಗೋಪಾಲ್‌ರವರ **ಬಾದಾಮಿ** ಹಾಗೂ **ಐಹೊಳೆ**, ಕಾ.ಸಾ. ಧರಣೇಂದ್ರಯ್ಯ ಅವರ **ಕಾರ್ಕಳ-ವೇಣೂರು**, ಎಸ್.ಕೆ. ರಾಮಚಂದ್ರರಾವ್‌ರವರ ಶ್ರವಣಬೆಳುಗೊಳದ **ಗೊಮ್ಮಟೇಶ್ವರ**, ಅ. ಸುಂದರರವರ **ಪಟ್ಟದಕಲ್ಲು**, ಪಿ.ವಿ. ನಾರಾಯಣರವರ **ಬಳ್ಳಿಗಾವೆ**, ಟಿ.ಎಸ್. ರಾಜಗೋಪಾಲ್‌ರವರ **ಬೇಲೂರು** ಹಾಗೂ **ಹಳೇಬೀಡು** -ಈ ಕೃತಿಗಳಲ್ಲಿ ಉಪಯುಕ್ತ ನಕ್ಷೆ, ಮಾದರಿ ವಿನ್ಯಾಸ, ಚಿತ್ರಗಳ ಮೂಲಕ ಲೇಖಕರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಲು ಪ್ರಯತ್ನ ಮಾಡಿರುವರು. ಪ್ರವಾಸಿಗಳಿಗೆ ಉಪಯುಕ್ತ ಕೈಪಿಡಿಯಂತಿರುವ ಈ ಕೃತಿಗಳು ಕರ್ನಾಟಕದ ಭವ್ಯ ಸಾಂಸ್ಕೃತಿಕ ಇತಿಹಾಸವನ್ನು ಮಕ್ಕಳಿಗಷ್ಟೇ ಅಲ್ಲ, ಆಸಕ್ತರೆಲ್ಲರಿಗೂ ಪರಿಚಯ ಮಾಡಿಕೊಡುತ್ತವೆ. ಸಾಂಸ್ಕೃತಿಕ ಯಾತ್ರೆ ಕೈಗೊಳ್ಳುವ ಪ್ರವಾಸಿಗಳಿಗೆ ಇವು ಒಳ್ಳೆಯ 'ಕೈಪಿಡಿ'ಗಳಾಗಿವೆ.

ಕರ್ನಾಟಕದಲ್ಲಿ ಪ್ರವಾಸಿಗಳನ್ನು ತಮ್ಮ ನೈಸರ್ಗಿಕ ಚೆಲುವಿನಿಂದ ಆಕರ್ಷಿಸುತ್ತಿರುವ **ನಂದಿದುರ್ಗ**ವನ್ನು ಕುರಿತು ಮೈ.ನ. ನಾಗರಾಜರವರೂ, **ಸಾವನ ದುರ್ಗ**ವನ್ನು ಕುರಿತು ಹ.ಕ. ರಾಜೇಗೌಡರೂ, '**ದೇವರಾಯನದುರ್ಗ**'ವನ್ನು ಕುರಿತು ಹಂಪನಾರವರೂ, **ಬಾಬಾಬುಡನ್‌**ಗಿರಿಯನ್ನು ಕುರಿತು ಕಾಶಿ ವಿಶ್ವನಾಥ ಶೆಟ್ಟಿಯವರೂ ಮಕ್ಕಳಿಗಾಗಿ ಪುಟ್ಟ ಪುಸ್ತಕ ಬರೆದಿರುವರು.

ಕರ್ನಾಟಕವನ್ನು ಆಳಿದ ಹಲವು ಅರಸು ಮನೆತನಗಳು ಶಿಲ್ಪಕಲೆಯ ಬೆಳವಣಿಗೆಗೆ ಕಾರಣವಾಗಿರುವುವು. ಇತಿಹಾಸದಲ್ಲಿ ಹೊಯ್ಸಳ, ಚಾಲುಕ್ಯ, ವಿಜಯನಗರ 'ವಾಸ್ತು ಶಿಲ್ಪ'ಗಳಿಂದೇ ಪ್ರಖ್ಯಾತವಾಗಿವೆ. ಎ.ವಿ. ನರಸಿಂಹಮೂರ್ತಿಯವರ **ಚಾಲುಕ್ಯ ವಾಸ್ತುಶಿಲ್ಪ ಪರಿಚಯ**, ಬೆ.ಗೋ. ರಮೇಶರವರ **ಕರ್ನಾಟಕ ವಾಸ್ತುಶಿಲ್ಪ**, ಬಿ.ಆರ್. ಗೋಪಾಲ್‌ರವರ **ವಿಜಯನಗರ ವಾಸ್ತುಶಿಲ್ಪ** -ಇವು ಮಕ್ಕಳಿಗೆ ಕರ್ನಾಟಕದ

ವಾಸ್ತುಶಿಲ್ಪದ ಗುಣ-ಹಿರಿಮೆ-ವೈಶಿಷ್ಟ್ಯಗಳನ್ನು ಪರಿಚಯಿಸುವ ನೆಲೆಯಲ್ಲಿ ವಿಶೇಷವಾಗಿ ಸಹಾಯ ಮಾಡುತ್ತವೆ.

ಕರ್ನಾಟಕದ ನೃತ್ಯ, ಚಿತ್ರ, ಶಿಲ್ಪ, ನಾಟಕ, ಕಲೆಗಳನ್ನು ಕುರಿತು ಸಂಕ್ಷಿಪ್ತ ಪರಿಚಯವನ್ನು ಡಾ|| ಶಿವರಾಮ ಕಾರಂತರು ಪ್ರತ್ಯೇಕ ಪ್ರತ್ಯೇಕವಾಗಿ ಕಿರುಹೊತ್ತಗೆಗಳಲ್ಲಿ ಕೊಟ್ಟಿರುವರು. ಮೇಲಿನ ಪ್ರತಿಯೊಂದು ವಿಷಯದಲ್ಲೂ ವ್ಯಾಪಕವಾದ ತಿಳಿವಳಿಕೆಯುಳ್ಳ ಡಾ|| ಶಿವರಾಮ ಕಾರಂತರು ಕಿರದರಲ್ಲೇ ಅವುಗಳ ಹಿರಿಮೆಯನ್ನೂ ವೈಶಿಷ್ಟ್ಯವನ್ನೂ ವಿವರಿಸಿರುವರು. ಮಕ್ಕಳ ಮನಸ್ಸನ್ನರಿತ ಅವರು ಸರಳ ಹಾಗೂ ಆಕರ್ಷಕ ಶೈಲಿಯಲ್ಲಿ ಪುಟ್ಟಪುಟ್ಟ ವಾಕ್ಯಗಳಲ್ಲಿ ವಿಷಯ ನಿರೂಪಣೆ ಮಾಡಿರುವರು; ಚಿತ್ರಗಳೊಂದಿಗೆ ವಿವರಣೆ ನೀಡಿರುವರು, ಇವು ಮಕ್ಕಳಿಗಷ್ಟೇ ಅಲ್ಲ ನಮ್ಮ ಪ್ರಾಚೀನ ಕಲೆಗಳ ಬಗೆಗೆ ತಿಳಿಯಬೇಕೆನ್ನುವ ಎಲ್ಲರಿಗೂ ಅರ್ಥವಾಗುವಂತೆ ಹೇಳಿರುವುದು ಮೆಚ್ಚಬೇಕಾದ ಅಂಶ.

ಡಾ|| ಶಿವರಾಮ ಕಾರಂತರ ಮಕ್ಕಳಿಗೆಂದೇ ಬರೆದ ಇನ್ನೆರಡು ಮಹತ್ವದ ಕೃತಿಗಳು- **ಕರ್ನಾಟಕ ಕರಾವಳಿ** ಹಾಗೂ **ಚೆಲುವಿನ ಕನ್ನಡ ನಾಡು.** ಮೊದಲನೆಯದರಲ್ಲಿ ನಮ್ಮ ಸಮುದ್ರ ಕರಾವಳಿಯ ಸಂಪತ್ತನ್ನೂ ಅದಕ್ಕೆ ಅಂಟಿಕೊಂಡೇ ವಾಸಿಸುತ್ತಿರುವ ಜನರಿಗೆ ಅದು ಹೇಗೆ ವರಪ್ರದವಾಗಿದೆ, ಜೀವನಾಧಾರವಾಗಿದೆ ಎಂಬುದರ ತಿಳಿವಳಿಕೆಯನ್ನೂ ಕಾರಂತರು ಕೊಟ್ಟಿರುವರು. ಈ ಕರಾವಳಿ ಪ್ರದೇಶದಲ್ಲಿ ನಾವಿನ್ನೂ ಗುರುತಿಸಿರದ ಬಗೆಬಗೆಯ ವೃಕ್ಷ, ಹಕ್ಕಿಗಳು, ಚೆಲುವುದಾಣಗಳು ಇವೆ. ಇವೂ ಒಂದು ವಿಧದ ಸಂಪತ್ತು. ನಮಗೆ ನಮ್ಮಲ್ಲಿನ ಮರಗಳ, ಸಸ್ಯಗಳ, ಪಶು ಪಕ್ಷಿಗಳ ಹೆಚ್ಚಿನ ತಿಳುವಳಿಕೆಯಿಲ್ಲ; ಅವುಗಳ ಬಗೆಗೆ ಕುತೂಹಲ ಬೆಳೆಸಿಕೊಳ್ಳುವ, ಹೆಚ್ಚಿನ ಅಭ್ಯಾಸ ನಡೆಸುವ ವ್ಯವಧಾನವಿಲ್ಲ; ಅವುಗಳನ್ನು ನೋಡಿ ಸಂತೋಷಪಡುವ ಹೃದಯವಿಲ್ಲ. ನಮ್ಮಲ್ಲಿ ಸುಂದರ ಕಡಲು, ನದಿಗಳಿವೆ. ಅವುಗಳನ್ನು ಕೆಲಹೊತ್ತು ನಿಂತು ನೋಡಿ ಸುಖಿಸುವ ಮನೋಭಾವ ಬೆಳೆದಿಲ್ಲ. ನಮ್ಮ ಸಂಪತ್ತನ್ನು ಅರಿಯುವ, ನೋಡಿ ಸಂತೋಷಿಸುವಲ್ಲಿ ಕಂಡುಬರುವ ನಮ್ಮ ಹೃದಯ ದಾರಿದ್ರ್ಯವನ್ನು, ಅಲಸೀ ಮನೋಭಾವವನ್ನು ಕಾರಂತರು ಕಟುವಾಗಿ ಟೀಕಿಸುತ್ತಾ 'ನಮ್ಮ ಕರಾವಳಿಯ ಸೊಬಗು ಮಂಗನ ಮುಂದೆ ಚೆಲ್ಲಿದ ಮಾಣಿಕ್ಯದಂತಾಗಿದೆ' ಎಂದಿರುವರು. "ಯಾವುದೇ ನಾಡಿನಲ್ಲಿದ್ದು ಸುಖಿಪಡಬೇಕಾದರೆ ಅಲ್ಲಿನ ಪ್ರಕೃತಿಯ ಸಂಪತ್ತನ್ನು ಕುರಿತು ಜನ ಆಳವಾಗಿ ಅಭ್ಯಾಸ ಮಾಡಬೇಕು. ಆಗ ಜೀವನ ನಡೆಯಿಸುವ ಕೆಲಸ ಸುಲಭವಾಗುತ್ತದೆ. ಜೀವನದಲ್ಲಿ ಸಂತೋಷ ತಂದುಕೊಳ್ಳುವುದೂ ಸುಲಭವಾಗುತ್ತದೆ" ಎಂಬ ಕಾರಂತರ ಮಾತನ್ನು ನಾವಿಂದು ವಿಚಾರಮಾಡಬೇಕಾಗಿದೆ.

ಕಾರಂತರ ಮತ್ತೊಂದು ಪುಸ್ತಕ- **ಚಲುವಿನ ಕನ್ನಡನಾಡು** ನಮ್ಮ ಸುಂದರ ಪ್ರಾಕೃತಿಕ ಸಂಪತ್ತಿನ ಪರಿಚಯ ಮಾಡಿಕೊಡಲು ಹೊರಟಿದೆ. ನಮ್ಮಲ್ಲಿರುವ ನಯನ ಮನೋಹರವಾದ ಪರ್ವತ, ಸಮುದ್ರ, ಹೊಳೆ, ಕಾಡುಗಳಲ್ಲಿ ಹುದುಗಿರುವ ಮನಸ್ಸನ್ನು ಸೂರೆಗೊಳ್ಳುವ-ಸೌಂದರ್ಯವನ್ನು, ನೋಟಗಳನ್ನು, ಭಯ-ಆನಂದವನ್ನು ತಂದು ಕೊಡುವ ಪ್ರಾಣಿಗಳ ಮೋಹಕಾಕೃತಿಗಳನ್ನು ಪುಸ್ತಕದುದ್ದಕ್ಕೂ ಕಾರಂತರು ಹೇಳುತ್ತಾ ಹೋಗಿರುವರು. ನಮ್ಮ ಪ್ರಕೃತಿ ಸಂಪತ್ತನ್ನು ಜನ ಸ್ವಲಾಭಕ್ಕಾಗಿ ನಾಶಮಾಡುತ್ತಿರುವ ಅನಾಗರೀಕ ಪ್ರವೃತ್ತಿಯನ್ನು ಕಾರಂತರು ಕಟುವಾಗಿ ಟೀಕಿಸಿರುವರು. ಕುತೂಹಲ ಮೀಟುವ ವಿವರಣೆ, ಪುಟ್ಟವಾಕ್ಯಗಳಲ್ಲಿ ಮಕ್ಕಳ ಮನಮುಟ್ಟುವ ರೀತಿಯಲ್ಲಿ ಹೇಳುವ ಕಲೆಗಾರಿಕೆಗಳಿಂದಾಗಿ ಈ ಹೊತ್ತಗೆ ಮಕ್ಕಳಿಗಷ್ಟೇ ಅಲ್ಲ ಆಸಕ್ತರೆಲ್ಲರಿಗೂ ಹಿಡಿಸುತ್ತದೆ. ಕನ್ನಡ ನಾಡಿನಲ್ಲಿ ಪ್ರವಾಸ ಕೈಗೊಳ್ಳುವ ಪ್ರವಾಸಿಗಳು ಆಗತ್ಯ ಓದಬೇಕಾದ ಪುಸ್ತಕಗಳಿವು.

ಕೆ. ಚಂದ್ರಮೌಳಿಯವರ **ಬೆಂಗಳೂರಿನ ನೋಟಗಳು** ಪ್ರವಾಸ ಕಥನವಲ್ಲ, ಬಹುಮುಖೀ ಬೆಳವಣಿಗೆಯನ್ನು ಕಂಡುಕೊಂಡ ಬೆಂಗಳೂರಿನ ಬಗೆಗೆ ಒಂದು ಅಧ್ಯಯನಪೂರ್ಣ ಬರವಣಿಗೆ. ಈ ಕೃತಿ ಬೆಂಗಳೂರನ್ನು ಕೇಂದ್ರ ನೆಲೆಯಲ್ಲಿಟ್ಟುಕೊಂಡು ಅದರ "ಚಾರಿತ್ರಿಕ ಸಾಹಿತ್ಯಿಕ ಸಾಂಸ್ಕೃತಿಕ (ನೃತ್ಯ, ಗಾನ, ಕಲೆ...) ಜನಜೀವನ (ಪೇಟೆ, ಗರಡಿಮನೆ, ಆಟೋಟ...), ನಗರಾಕರ್ಷಣೆ (ಕಟ್ಟಡ, ಸ್ಮಾರಕ, ಕೆರೆ, ಉದ್ಯಾನಗಳು...), ವಿಶಿಷ್ಟಗಳು (ವಲಸಿಗರು, ಕುದುರೆ ಓಟ...) ಮತ್ತು ಇನ್ನೂ ಇತರ ಅನೇಕ ವಿಷಯಗಳು ಒಂದೇ ಗ್ರಂಥದಲ್ಲಿ ಎಲ್ಲೂ ಬಂದಿಲ್ಲ. ಹೀಗೆ ಬೆಂಗಳೂರಿನ ಬಗ್ಗೆ ಅನೇಕ ವಿಷಯಗಳನ್ನು ಸಾಕಷ್ಟು ವಿಸ್ತಾರವಾಗಿ, ಆದಷ್ಟೂ ಸಮಗ್ರವಾಗಿ ಚಿತ್ರಿಸಿ, ಗ್ರಂಥರೂಪದಲ್ಲಿ ತರುವ ಮೊದಲ ಪ್ರಯತ್ನವಿದು. ನನ್ನ ಆ ಪ್ರಯತ್ನ ದೇಶ ವಿಚಾರಗಳನ್ನು ತೋರುವ ಕೋಶ (ಗೆಜೆಟಿಯರ್) ಆಗಿ, ಕೇವಲ ಅಂಕಿ-ಅಂಶಗಳಿಂದ ತುಂಬಿ ಒಣಗಿದ ಕುರುಚಲಿನಂತೆ ಆಗಬಾರದೆಂದು ಎಚ್ಚರಿಕೆ ವಹಿಸಿದೆ. ಇದಕ್ಕಾಗಿ ಚರಿತ್ರೆಯ ನಿಖರತೆ, ಸಾಹಿತ್ಯದ ಮಧುರತೆ, ಸಂಸ್ಕೃತಿಯ ಮೆರುಗು, ನಗರದ ಬೆಡಗು, ನಿತ್ಯಜೀವನದ ಸಹಜತೆ ಎಲ್ಲವನ್ನೂ ಸೂಕ್ತವಾಗಿ ಬೆರೆಸಿ ಒಂದು (ಮಧುರ) ಸ್ವಾದಿಷ್ಟ ಮಿಶ್ರಣವನ್ನು, ವಿವಿಧ ಹೂಗಿಡಗಳ ಒಂದು ಸುಂದರ ಉದ್ಯಾನವನ್ನು ಈ ಬೆಂಗಳೂರಿನ ನೋಟಗಳಲ್ಲಿ ಇಡಲು ಪ್ರಯತ್ನಿಸಿದ್ದೇನೆ." (ಮೊದಲ ಮಾತು) ಎಂಬ ಲೇಖಕರ ಮಾತುಗಳಲ್ಲಿ ಸತ್ಯಾಂಶವಿದೆ. ಬೆಂಗಳೂರಿನ ಬಾಹ್ಯ ಸೌಂದರ್ಯವನ್ನು ಹಾಗೂ ಅದರ ಬೆಳವಣಿಗೆಯನ್ನು ವಿವರಿಸುವುದಕ್ಕಿಂತ ಮುಖ್ಯವಾಗಿ ಅದರ ಪರಂಪರೆ, ವೈಶಿಷ್ಟ್ಯ ಹಾಗೂ ಸಾಂಸ್ಕೃತಿಕ ಮಹತ್ವಗಳನ್ನು ಇಲ್ಲಿ ದಾಖಲಿಸಲು ಲೇಖಕರು ಪಟ್ಟಿರುವ ಶ್ರಮ ಸಾರ್ಥಕವಾದುದು. ಸೊಗಸಾದ ಚಿತ್ರಗಳಿಂದ ಬೆಂಗಳೂರಿನ ಬಗೆಗೆ ಮಾಹಿತಿಗಳನ್ನು ನೀಡುವ ಈ ಕೃತಿಯ ಮೌಲಿಕತೆಯನ್ನು ಎಷ್ಟು ಹೊಗಳಿದರೂ ಸಾಲದು.

ಎಂ.ಕೆ. ಲಿಂಗಯ್ಯನವರ **ಮೈಸೂರು ಒಂದು ಅಧ್ಯಯನವು** ಪ್ರವಾಸ ಸಾಹಿತ್ಯವಲ್ಲ. ಜಗತ್ತಿನ ಸುಂದರ ನಗರಗಳಲ್ಲಿ ಮೈಸೂರು ಒಂದು ಪ್ರಮುಖ ಪಟ್ಟಣ. ಅದಕ್ಕೆ ಅದರದೇ ಆದ ಇತಿಹಾಸವಿದೆ, ಸಾಂಸ್ಕೃತಿಕ ವೈಲಕ್ಷಣ್ಯಗಳಿವೆ. ಇತ್ತೀಚಿನ ದಿನಗಳಲ್ಲಿ ಅದು ಮುಂಬಯಿ, ಬೆಂಗಳೂರುಗಳಂತೆ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ, ತನ್ನ ಪ್ರಾಚೀನ ಸಾಂಸ್ಕೃತಿಕ ಇತಿಹಾಸವನ್ನು ಮರೆಯುತ್ತಿದೆ. ಈ ಸಂದರ್ಭದಲ್ಲಿ ಎಂ.ಕೆ. ಲಿಂಗಯ್ಯನವರು ಮೈಸೂರು ಐತಿಹಾಸಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ವಾಣಿಜ್ಯ ಹಾಗೂ ಕೈಗಾರಿಕೆಯಿಂದಾಗಿ, ಕಲೆ-ಸಾಹಿತ್ಯಗಳಿಂದಾಗಿ ತನ್ನದೇ ಆದ ಕೊಡುಗೆಯನ್ನು ವಿಶಿಷ್ಟರೂಪದಲ್ಲಿ ಕೊಟ್ಟಿರುವುದನ್ನು ವಿಶದವಾಗಿ ಈ ಕೃತಿಯಲ್ಲಿ ನಿರೂಪಿಸಿರುವರು.

ಕೆ. ಅನಂತರಾಮು ಅವರ **ಸಕ್ಕರೆಯ ಸೀಮೆ** ಪ್ರವಾಸಕಥನವೆಂದು ಹೇಳಬಹುದಾದರೂ ಅದರ ವ್ಯಾಪ್ತಿ ಅಷ್ಟಕ್ಕೇ ಸೀಮಿತವಾಗಿಲ್ಲ. ಮಂಡ್ಯ ಜಿಲ್ಲೆಯು 'ಸಕ್ಕರೆಯ ಸೀಮೆ'ಯೆಂದು ಹೆಸರು ಪಡೆದಿದೆ. ಮಂಡ್ಯ ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲ ಪ್ರವಾಸೀತಾಣಗಳನ್ನು ಮೂರುವರ್ಷಗಳ ಅವಧಿಯಲ್ಲಿ ಸುತ್ತಾಡಿ ತಮ್ಮ ಪ್ರವಾಸಾನುಭವಗಳನ್ನು ಸ್ವಾರಸ್ಯಕರವಾಗಿ ತಿಳಿಸಿರುವರು. ಇಲ್ಲಿ ಪ್ರವಾಸಿಯೊಬ್ಬನ ಅನುಭವ ಪರಿಚಯಾತ್ಮಕ ನೆಲೆಯಲ್ಲಿ ನಿರೂಪಣೆಗೊಳ್ಳದೆ ಅದರ ಆಚೆಗೂ ವಿಸ್ತರಿಸಿದೆ. ಇತಿಹಾಸ, ಸ್ಥಳಪುರಾಣ, ಜಾನಪದ ನಂಬಿಕೆಗಳು, ಪ್ರಾದೇಶಿಕ ಗಾದೆಗಳು -ಹೀಗೆ ಗ್ರಾಮೀಣ ಬದುಕಿನ ಎಲ್ಲ ಸಾಂಸ್ಕೃತಿಕ ವಿವರಗಳು ಇಲ್ಲಿ ಸೇರ್ಪಡೆಯಾಗಿವೆ. ಈ ದೃಷ್ಟಿಯಿಂದ ಇದೊಂದು ವಿಶಿಷ್ಟ ಜಾನಪದ ವಿಶ್ವಕೋಶ.

ದೇ.ನಾ.ಶ್ರೀ. ಯವರ **ಗಿರಿಕಂದರ ಮೋಹಿತರು** ಬಿಸಿನೆತ್ತರಿನ ಸಾಹಸಿಗರು ಜೊತೆಗೂಡಿ ನಡೆಸಿದ ಸಾಹಸಯಾತ್ರೆಯ ಕಥನ. ಇದರಲ್ಲಿ ಕುದುರೆಮುಖ ಸಾಸಸ ಯಾತ್ರೆ, ಮುಳ್ಳಯ್ಯನಗಿರಿಯ ಆರೋಹಣ, ಸೈಲೆಂಟ್ ವ್ಯಾಲಿಯಲ್ಲಿ 'ಸ್ಪಾರ್ಕ್' ಕಿಡಿಗಳು ಎಂಬ ಮೂರು ಪ್ರಬಂಧಗಳಿವೆ. ಪ್ರಕೃತಿಯನ್ನು ಪ್ರೇಮಿಸುವ, ಸಾಹಸ ಪ್ರವೃತ್ತಿಯ ಒಂದೆರಡು ಹಿಡಿ ಯುವಕರ ಸಂಸ್ಥೆ 'ಸ್ಪಾರ್ಕ್' (ಸೊಸೈಟಿ ಫಾರ್ ಪ್ರಾಪಗೇಷನ್ ಅಂಡ್ ಆಕ್ಟಿವೇಶನ್ ಆಫ್ ರಾಕ್ ಕ್ಲೈಂಬಿಂಗ್). ಲೇಖಕರಿಗೆ ತಮ್ಮ ಅನುಭವಗಳ ನಿರೂಪಣೆಗೆ ಬೇಕಾದ ಆಕರ್ಷಕ ಶೈಲಿಯಿದೆ. ಹೀಗಾಗಿ ಅವರ ಬರವಣಿಗೆ ಜೀವಂತವಾಗಿದೆ.

ಹೀ.ಚಿ. ಬೋರಲಿಂಗಯ್ಯನವರ **ಗಿರಿಜನ ನಾಡಿಗೆ ಪಯಣವು** ಕರ್ನಾಟಕ ಪಶ್ಚಿಮ ಘಟ್ಟ ಹಾಗೂ ಕರಾವಳಿ ತೀರಗಳಲ್ಲಿ ನಡೆಸಿದ ಅಧ್ಯಯನ ಪ್ರವಾಸದ ಅನುಭವಗಳ ಕಥನವಾಗಿದೆ. "ಈ ಪಯಣದ ಬರಹಗಳು ಗಿರಿಜನರನ್ನು ಕುರಿತ ಆಳವಾದ

ಸಂಶೋಧನೆಯಲ್ಲ, ಬದಲಾಗಿ ಕುತೂಹಲದ ಕಣ್ಣು ನೋಡಿದ ಪ್ರಥಮ ಅನುಭವ." ಎಂದು ಲೇಖಕರು ಪ್ರಾರಂಭದಲ್ಲಿ ಹೇಳಿರುವ ಮಾತಿನಲ್ಲಿ ಸತ್ಯವಿದೆ. ಲೇಖಕರು ಕನ್ನಡದ ಹೆಸರಾಂತ ಜಾನಪದ ತರುಣ ಸಂಶೋಧಕರು; ಉತ್ಸಾಹದ ಜೊತೆಗೆ ಸಾಹಸವೂ ಇವರ ವ್ಯಕ್ತಿತ್ವದಲ್ಲಿ ಮೈಗೂಡಿರುವುದರಿಂದ ಇಲ್ಲಿನ ಬಹುಪಾಲು ಬರಹಗಳಲ್ಲಿ ಈ ಗುಣಗಳು ಮೇಳನಗೊಂಡಿವೆ. ಗಿರಿಜನರ ಸಮಸ್ಯೆಗಳ ಅಧ್ಯಯನದ ಜೊತೆಗೆ ಅವರ ಜೀವನ ವಿಧಾನ, ಸಂಸ್ಕೃತಿಗಳ ಅಧ್ಯಯನವನ್ನು ಲೇಖಕರು ಇಲ್ಲಿ ಮಾಡಿರುವರು. ಕನ್ನಡದಲ್ಲಿ ಇಂತಹ ಪ್ರಯತ್ನ ಬೆರಳೆಣಿಕೆಯದಾದ್ದರಿಂದ ಈ ಕೃತಿ ಮುಖ್ಯವೆನ್ನಿಸುತ್ತದೆ.

ಇಲ್ಲಿನ ಯಾವುದೇ ಗಿರಿಜನರನ್ನು ತೆಗೆದುಕೊಂಡರೂ ಎಲ್ಲರ ವ್ಯಥೆಯ ಕಥೆ ಒಂದೇ. ಇವರು ಬಡವರು, ಸರಕಾರದ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾದವರು, ಇವರ ಮಕ್ಕಳಿಗೆ ಅಕ್ಷರ ಕಲಿಸುವ ವ್ಯವಸ್ಥೆಯಿಲ್ಲ. ಮೇಘಾನೆಯ ಕುಣಬಿಯರ ದುರ್ಗ ಹೇಳುತ್ತಾನೆ: "ನಮ್ಮ ಮಕ್ಕಳಿಗೆ ಅಕ್ಷರ ಕಲಿಸುವುದು ಹೇಗೆ ಸಾಧ್ಯ ಸ್ವಾಮಿ, ಐದು ಸಾವಿರ ಅಡಿ ಇಳಿಯಬೇಕು, ಬೆಟ್ಟದ ಬುಡದಿಂದ ಹಾಡುವಳ್ಳಿಗೆ ೫ ಕಿ.ಮೀ. ನಡೆಯಬೇಕು. ಇಷ್ಟು ದೂರ ಹೋಗಿ ಮಕ್ಕಳು ಹಿಂತಿರುಗುವುದಾದರೂ ಹೇಗೆ? ನಾವಂತೂ ಕಲಿಯಲಿಲ್ಲ. ನಮ್ಮ ಮಕ್ಕಳಾದರೂ ಕಲಿಯಲಿ ಎಂದರೆ ಯಾರೂ ನಮ್ಮ ಕಡೆ ಗಮನ ಕೊಡುತ್ತಿಲ್ಲ. ಇಲ್ಲಿ ಶಾಲೆ ಸ್ಥಾಪನೆ ಮಾಡಿದರೂ ಪಾಠ ಹೇಳುವ ಮಾಸ್ತರು ಬರುವುದು ಮಾತ್ರ ಅನುಮಾನ."

ಕಾಡುಗಳ್ಳರ ಲೂಟಿಯಿಂದಾಗಿ ಕಾಡು ದಿನದಿನಕ್ಕೆ ಸೊರಗಿ ಬತ್ತಲೆಯಾಗುತ್ತಿರುವುದರ ಬಗೆಗೆ ಲೇಖಕರ ಕಳಕಳಿಯಿದೆ. ಗೋವರ್ಧನಗಿರಿ, ಕಾನೂರುಕೋಟೆ, ಮೇಘಾನೆ ಮುಂತಾದ ಬೆಟ್ಟಸಾಲುಗಳಲ್ಲಿ ಕಾಡು ಸೂರೆಯಾಗುತ್ತಿರುವುದನ್ನು ಲೇಖಕರು ಮನಮುಟ್ಟುವಂತೆ ವಿವರಿಸಿರುವರು. ಸಹ್ಯಾದ್ರಿ ಬೋಳಾಗುತ್ತಿರುವ ವಾಸ್ತವ ಚಿತ್ರ ನಮ್ಮನ್ನು ವಿಚಾರಮಾಡುವಂತೆ ಪ್ರೇರೇಪಿಸುತ್ತದೆ. ಸಹ್ಯಾದ್ರಿಯ ಕಾಡನ್ನು ನಾಶಮಾಡಿ ಅಲ್ಲಿ ಲಾವಂಚದ ಹುಲ್ಲು ಬೆಳೆಯುತ್ತಿರುವ ಕೇರಳದ ಬೇರಿಗಳ ಹೊಸ ಉದ್ಯಮದ ವಿವರ ಓದಿ ಬೆಕ್ಕಸಬೆರಗಾಗುತ್ತೇವೆ. ಲಾವಂಚದ ಬೇರಿನಿಂದ ಎಣ್ಣೆ ಒಸರುತ್ತದೆ. ನಿಂಬೆಹುಲ್ಲು (ಲೆಮನ್‌ಗ್ರಾಸ್)ನಿಂದ ಎಣ್ಣೆ ಬರುತ್ತದೆ. ಈ ಸುವಾಸನಾ ಎಣ್ಣೆ ಬರಲು ಲಾವಂಚದ ಬೇರನ್ನು ೪೮ ಗಂಟೆ ಬೇಯಿಸಬೇಕು, ಲೆಮನ್‌ಗ್ರಾಸ್ ಹುಲ್ಲನ್ನು ೧೨ ಗಂಟೆ ಬೇಯಿಸಬೇಕು. ಈ ಭಟ್ಟಿಯಿಳಿಸುವ ಕಾರ್ಯಕ್ಕೆ ಹೇರಳವಾಗಿ ಕಟ್ಟಿಗೆ ಬೇಕು. ಕೈಗೆ ಸಿಕ್ಕಿದ ಮರ ಕಡಿದು ಉಬ್ಬೆಗೆ ತುಂಬುತ್ತಾರೆ. "ಒಂದು ಸಲಕ್ಕೆ ಒಂದು ಬುಟ್ಟಿಯಿಂದ ಒಂದು ಕೆ.ಜಿ. ಎಣ್ಣೆ ಸಿಗುತ್ತದೆ. ಒಂದು ಕೆ.ಜಿ. ಎಣ್ಣೆಗೆ ೧೩೦೦ ರೂಪಾಯಿ. ಗೋವರ್ಧನಗಿರಿ ಪ್ರದೇಶದ ಬಚ್ಚೋಡಿಯಲ್ಲಿನ ಒಂದು ವ್ಯವಸ್ಥಿತ ಗುಂಪು ಇಂಥ

೧೩೮ ಭಟ್ಟಿಗಳನ್ನು ಒಂದೇಸಲ ಪ್ರತಿಷ್ಠಾಪಿಸಿ ಕೇವಲ ೪೮ ಗಂಟೆಗಳಲ್ಲಿ ೧೩೮ ಲೀಟರ್ ಎಣ್ಣೆಯನ್ನು ತೆಗೆದರಂತೆ. ಇದರ ಮೌಲ್ಯ ಸುಮಾರು ೨ ಲಕ್ಷ ರೂಪಾಯಿ. ಒಬ್ಬ ಫಾರೆಸ್ಟ್ ಗಾರ್ಡ್ ಪ್ರಕಾರ ಇದಕ್ಕೆ ಖರ್ಚಾದ ಉರುವಲಿನ ಮೌಲ್ಯವೂ ೨ ಲಕ್ಷ ರೂಪಾಯಿಗೆ ಕಡಿಮೆಯಿಲ್ಲ." ಕಾಡುಗಳ್ಳರ ದುರಾಸೆಗೆ ಮಿತಿಯೇ ಇಲ್ಲ. ಇದಕ್ಕೆ ಇನ್ನೊಂದು ಉದಾಹರಣೆ ಮಲೆನಾಡಿನಲ್ಲಿ ಬೃಹದಾಕಾರವಾಗಿ ಬೆಳೆಯುವ ಬಲಿಷ್ಠವಾದ 'ಮರ ಧೂಮ' ದಿನದಿನಕ್ಕೆ ಒಣಗುತ್ತಿರುವುದು. 'ಧೂಮ' ವೃಕ್ಷದ ಕಾಂಡದಲ್ಲಿ ಸುವಾಸನೆಯ ತೈಲ ಅಡಗಿದೆಯೆಂದು ಹೊಸದಾಗಿ ಕಂಡುಹಿಡಿಯಲಾಯಿತಂತೆ. ಕಾಡುಗಳ್ಳರು ಧೂಮಮರದ ಕಾಂಡಕ್ಕೆ ಬೈರಿಗೆ ಹಿಡಿದು ಅಲ್ಲಿದ ಜಿನುಗುವ ಸುವಾನಾಯುಕ್ತ ಅಂಟನ್ನು ಸಂಗ್ರಹಿಸಹೊರಟರು. ಇದರಿಂದಾಗಿ ನಾಗವಳ್ಳಿ ಪ್ರಾಂತ್ಯದ ಸುತ್ತಿನಲ್ಲಿ ೩೦೦ ಮರಗಳು ಒಣಗಿ ನಿಂತಿವೆಯಂತೆ. ಆ ಮರಗಳ ಅಂದಾಜು ಬೆಲೆ ೧೫೦ ಲಕ್ಷ!

ಲೇಖಕರಿಗೆ ಗಿರಿಜನರ ಬಗೆಗೆ ಅಪಾರವಾದ ಪ್ರೀತಿಯಿದೆ. ಅವರ ಜನಪದ ಕಲೆಯ ಬಗೆಗೆ ಬಡತನದಲ್ಲೂ ಅವರು ಬಾಳುತ್ತಿರುವ ಸಂತೃಪ್ತಿಯ ಬದುಕಿನ ಬಗೆಗೆ ಮೆಚ್ಚುಗೆಯಿದೆ. ಸರಕಾರ ಅವರ ಜೀವನ ಸುಧಾರಣೆಗಾಗಿ ಏನೂ ಕಾರ್ಯ ಮಾಡುತ್ತಿಲ್ಲವಲ್ಲಾ ಎನ್ನುವ ಬಗೆಗೆ ಅಸಹನೆಯಿದೆ. ಆಧುನಿಕತೆಯ ಗಾಳಿ ಈ ಗಿರಿಜನರ ಪೋಡುಗಳಿಗೂ ಬೀಸಿ ಪರಂಪರೆಯಿಂದ ಬೆಳೆದು ಬಂದ ಉಚ್ಚಸಂಸ್ಕೃತಿಯೊಂದನ್ನು ಬಲಿತೆಗೆದುಕೊಳ್ಳುತ್ತಿದೆಯಲ್ಲಾ ಎಂಬ ಬಗೆಗೆ ವಿಷಾದವಿದೆ.

ಗಿರಿಜನರ ಬದುಕನ್ನು ಹತ್ತಿರದಿಂದ ನೋಡಿದ ಲೇಖಕರು ತಮ್ಮ ಅನುಭವಗಳನ್ನು ಭಾಷೆಯಲ್ಲಿ ಹದವಾಗಿ ಬೆರಸಿ ಚೇತೋಹಾರಿಯಾಗುವಂತೆ ಹೇಳುವರು. ಕಂಡದ್ದನ್ನು ಭಾವವುಕ್ಕಿ ವರ್ಣಿಸಲು ತಕ್ಕ ಭಾಷೆ ಲೇಖಕರಿಗೆ ಇದೆ. ಉದಾಹರಣೆಗೆ ಈ ಸಾಲುಗಳನ್ನು ಗಮನಿಸಬಹುದು: "ನಾವು ಮೇಲೇರತೊಡಗಿದಂತೆ ಮಂಜು ಮತ್ತು ಮಳೆಯ ಚದುರಂಗದಾಟ ನಡೆದೇ ಇತ್ತು. ಆಗಾಗ ಮಳೆ, ಹಿಂದೆಯೇ ದಟ್ಟ ಮಂಜು, ಮತ್ತೆ ಮಂದ ಬೆಳಕು. ಒಂದಿಷ್ಟು ಬಿಸಿಲು ಇಣುಕಿದರಂತೂ ನಮ್ಮ ಕಣ್ಮುಂದೆ ಕಿನ್ನರಲೋಕವೇ ತೆರೆದುಕೊಳ್ಳುತ್ತಿತ್ತು. ಬೃಹದಾಕಾರದ ಬೆಟ್ಟಸಾಲುಗಳ ಮೇಲೆ ಉದುರುವ ಏಳುವ ಅಂಟುಪುರಲೆಗಳಂತಹ ತಿಳಿ ಮೋಡಗಳು ಆಗಾಗ ಬಿದ್ದ ಮಳೆಯಿಂದ ಮೈತೊಳೆದುಕೊಂಡು ನಳನಳಿಸುವ ಹಸಿರಸಿರು ಕಾಡು. ದೃಷ್ಟಿ ಹಾಯಿಸುವವರೆಗೆ ಅದೇ ಕಾಡು, ಅದೇ ಗುಡ್ಡ, ಅದೇ ಬೆಟ್ಟಗಳ ವರ್ಣಮಯ ಮಾಲೆ. ಮೇಲೇರುತ್ತಾ ಹೋದಂತೆ ಹಿಂದೆ ನೋಡಿದ ಬೃಹತ್ ಬೆಟ್ಟಗಳು ಮರಿಗಳಾಗಿಬಿಡುತ್ತಿದ್ದುವು..." (ಪು. ೩೪) ಶತಾಯುಷಿ ಸೈಮನ್ ಲೋಬೋವಿನ ವ್ಯಕ್ತಿ ಚಿತ್ರವನ್ನು ಲೇಖಕರು ಸೊಗಸಾಗಿ ಕೊಟ್ಟಿರುವರು (ಪು. ೩೫-೩೭.)

ಲೇಖಕರು ಸಾಹಸಯಾತ್ರಿಯಾಗಿ ಗಿರಿಜನರ ಸಾಮಾಜಿಕ ಜೀವನ, ನಂಬಿಕೆಗಳು, ಆಚಾರ-ವಿಚಾರ, ಜನಪದ ಕಲೆ, ಸಂಸ್ಕೃತಿ -ಹೀಗೆ ಹಲವು ದೃಷ್ಟಿಕೋನಗಳಿಂದ ಅಧ್ಯಯನ ನಡೆಸಿರುವರು. ಗಿರಿಜನರನ್ನು ಭೇಟಿಮಾಡಲು ಅವರು ಪಟ್ಟಿರುವ ಶ್ರಮ ಅಪಾರವಾದುದು. ಅವರ ಪರಿಶ್ರಮ ಈ ಪ್ರವಾಸ ಕಥನದಲ್ಲಿ ಸಾರ್ಥಕತೆಯನ್ನು ಕಂಡುಕೊಂಡಿರುವುದು ಮೆಚ್ಚಲೇಬೇಕಾದ ಸಂಗತಿ.

ಡಾ. ಎಂ. ಚಿದಾನಂದ ಮೂರ್ತಿಯವರ **ಕನ್ನಡಾಯಣ** ಲೇಖಕರೇ ಹೇಳಿಕೊಂಡಿರುವಂತೆ ಜಲಬುಗ್ಗೆಯ ಸಿದ್ಧಗಂಗೆಯಿಂದ ತುಂಗಭದ್ರೆಯ ಹಂಪಿವರೆಗೆ ೧೯೮೬ರಲ್ಲಿ ಕೈಗೊಂಡ ಕಾಲ್ನಡಿಗೆಯ ಪ್ರವಾಸ ಕಥನ. ಮೇಲ್ನೋಟಕ್ಕೆ ಇದು ಪ್ರವಾಸ ಸಾಹಿತ್ಯವಾದರೂ ಒಳಗೆ ಇರುವುದು ಕನ್ನಡ ನೆಲದ ಸಾಂಸ್ಕೃತಿಕ ಸವಿ ಸಂಚಾರ. ಒಳನೋಟಕ್ಕೆ, ಸೂಕ್ಷ್ಮಸಂವೇದಿ ವಿದ್ವಾಂಸರೊಬ್ಬರು ಕನ್ನಡ-ಕನ್ನಡಿಗ-ಕರ್ನಾಟಕದ ಪುನಶ್ಚೇತನದ ಸಂಕಲ್ಪಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡು ಸಂಚಾರದ ನೆಪದಲ್ಲಿ ಆತ್ಮಸ್ಥೈರ್ಯವನ್ನು ಉದ್ದೀಪಿಸಿಕೊಂಡು ಒಂದು ಸ್ಪಷ್ಟ ದೃಢನಿರ್ಧಾರಕ್ಕೆ ಬಂದ ಪರಿವರ್ತಿತ ಘಟ್ಟವೆಂಬುದು ಡಾ. ಚಿದಾನಂದಮೂರ್ತಿಯವರನ್ನು ಹತ್ತಿರದಿಂದ ಬಲ್ಲವರಿಗೆ ತಿಳಿದಿರುವ ಸಂಗತಿ.

ಒಂದು ಅರ್ಥದಲ್ಲಿ ಇದು ಭವ್ಯ ಸಾಂಸ್ಕೃತಿಕ ಇತಿಹಾಸವಿರುವ ಕರ್ನಾಟಕದ ಸಂತೋಷದ ಕಥೆ, ಹಾಗೆಯೇ ವ್ಯಥೆಯ ಕಥೆ. ಇಲ್ಲಿ ಪ್ರವಾಸ ಕಥನ ಮನದ ಸಂತೋಷ ಹಾಗೂ ದುಃಖವನ್ನು ತೋಡಿಕೊಳ್ಳಲು ಒಂದು ನೆಪವಾಗಿದೆಯಷ್ಟೆ. ಇದೊಂದು ವಿಭಿನ್ನ ಶೈಲಿಯ ಅಪರೂಪದ ಪ್ರವಾಸ ಕಥನ.

**ಕವಿ ನಮನ** ಒಂದು ವಿಶಿಷ್ಟ ಬಗೆಯ ಪ್ರವಾಸ ಕಥನ. ಕರ್ನಾಟಕ ಪ್ರಸಿದ್ಧ ಕವಿಗಳ ಜನ್ಮಸ್ಥಳಗಳಿಗೆ ಪ್ರವಾಸ ಹೋಗಿ ಅವುಗಳ ಬಗೆಗೆ ವಿವರ ನೀಡುವ ವಿಶಿಷ್ಟ ಪ್ರಯತ್ನ ಇದಾಗಿದೆ. ಇದರಲ್ಲಿ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಪ್ರೊ. ಧ್ರುವನಾರಾಯಣ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಚಿರಂಜೀವಿ, ಡಾ. ನೀ.ಕೃ. ರಾಮಶೇಷನ್, ಪ್ರೊ. ನಾ. ಗೀತಾಚಾರ್ಯ -ಇವರ ಅನುಭವಪೂರ್ಣ ಲೇಖನಗಳಿವೆ.

≋≋≋

# ಅನುವಾದ ಪ್ರವಾಸ ಸಾಹಿತ್ಯ

**ಬೇ**ರೆ ಭಾಷೆಯಿಂದ ಕನ್ನಡಕ್ಕೆ ಬಂದಿರುವ ಪ್ರವಾಸ ಸಾಹಿತ್ಯ ಸಂಖ್ಯೆಯಲ್ಲಿ ಬಹಳ ಕಡಿಮೆ. ಈ ದಿಶೆಯಲ್ಲಿ ಬಹಳ ದುಡಿದಿರುವವರೆಂದರೆ ಎಚ್.ಎಲ್. ನಾಗೇಗೌಡರು. ವಿದೇಶೀ ಪ್ರವಾಸಿಗರ ಪ್ರವಾಸ ಕಥನಗಳೇ, ಒಂದು ಅರ್ಥದಲ್ಲಿ ಕನ್ನಡದ ಮೊದಲ ಪ್ರವಾಸ ಸಾಹಿತ್ಯವಾಗುತ್ತವೆ. ಜಿ.ಪಿ. ರಾಜರತ್ನಂರವರ **ಚೀನಾದೇಶದ ಬೌದ್ಧ ಯಾತ್ರಿಕರು**, ತ.ರಾ.ಸು. ಅವರ **ಬಾರ್ಬೋಸಾ ಕಂಡ ವಿಜಯನಗರ** ಹಾಗೂ ಎಚ್.ಎಲ್. ನಾಗೇಗೌಡರ **ಮಾರ್ಕೊಪೋಲೊ ಪ್ರವಾಸ ಕಥನ** ಗಮನಾರ್ಹ ಕೃತಿಗಳು. ಈ ಮೂರು ಕೃತಿಗಳಲ್ಲಿ ಮೊದಲ ಎರಡು "ವಿಷಯ ವೈಶಾಲ್ಯದಲ್ಲಾಗಲೀ ಅನುವಾದ ಸಂಕೀರ್ಣತೆಯಲ್ಲಾಗಲೀ **ಮಾರ್ಕೋಪೋಲೊ ಪ್ರವಾಸಕಥನಕ್ಕೆ** ಸಾಟಿಯಾಗಲಾರವು"[೧]. ಭಾರತಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಪ್ರವಾಸೀ ಬರಹಗಳಿಗೆ ಸುಮಾರು ಎರಡು ಸಾವಿರದ ಐದನೂರು ವರುಷಗಳ ಸುದೀರ್ಘ ಇತಿಹಾಸವೇ ಇದೆ. ಕ್ರಿ.ಪೂ.ಸು. ಐದನೇ ಶತಮಾನದಿಂದ ಕ್ರಿ.ಶ. ಹದಿನೆಂಟನೇ ಶತಮಾನದವರೆಗೆ ಈ ದೀರ್ಘಾವಧಿಯಲ್ಲಿ ಭಾರತಕ್ಕೆ ಬಂದ ವಿದೇಶೀ ಪ್ರವಾಸಿಗರು ಇಲ್ಲಿಯ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ವಾಣಿಜ್ಯ ಜೀವನ ವೈವಿಧ್ಯಗಳನ್ನು ಕಣ್ಣಾರೆ ಕಂಡು ಬರೆದಿಟ್ಟಿರುವರು. ಇಂತಹ ಪ್ರವಾಸಿಗಳ ಸಂಖ್ಯೆ ನೂರಾರು. ಅವರಲ್ಲಿ ನಾವಿಕರು, ಸಂಶೋಧಕರು, ವೈದ್ಯರು, ವಿಜ್ಞಾನಿಗಳು, ವಾಣಿಜ್ಯೋದ್ಯಮಿಗಳು, ವ್ಯಾಪಾರಿಗಳು, ವಿದ್ವಾಂಸರು, ಹವ್ಯಾಸಿ ಪ್ರವಾಸಿಗಳು -ಹೀಗೆ ನಾನಾ ಬಗೆಯ ಜನರಿರುವರು. ಇವರ ಬರವಣಿಗೆಯಲ್ಲಿ ಕೆಲವೊಮ್ಮೆ ತಪ್ಪು ಕಲ್ಪನೆಗಳೂ, ಅತಿರೇಕಗಳೂ ನುಸುಳಿರುವುದುಂಟು. ಆದರೂ ಇವರು ಕೊಡುವ ವಿವರಗಳು, ವಿಷಯ ಸಾಮಗ್ರಿಗಳು ನಾಡಿನ ಸಾಂಸ್ಕೃತಿಕ ಚರಿತ್ರೆಯ ಪುನಾರಚನೆಗೆ ಬಹಳ ಸಹಾಯಮಾಡಿವೆ. ಈ ಬಗೆಯ ಪ್ರವಾಸಿ ಕಥನಗಳನ್ನು ಒಂದೆಡೆ ಸೇರಿಸಿ ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿರುವುದುಂಟು. ಎಚ್.ಎಲ್. ನಾಗೇಗೌಡರು ಈ ಪ್ರವಾಸಿ ಕಥನಗಳ ಸ್ವಾರಸ್ಯಪೂರ್ಣ

---

೧. ಎಚ್.ಕೆ. ಜಗದೀಶ್ : ಮಾರ್ಕೋಪೋಲೋ ಪ್ರವಾಸ ಕಥನ : ನಾಗವಲ್ಲಿ (ನಾಗೇಗೌಡ ಗೌರವ ಗ್ರಂಥ, ೧೯೭೯), ಪು. ೨೨೯.

ಸಂಗ್ರಹಾನುವಾದವನ್ನು **ಪ್ರವಾಸಿ ಕಂಡ ಇಂಡಿಯಾ** ಎಂಬ ಆರು ಬೃಹತ್ ಸಂಪುಟಗಳಲ್ಲಿ ಕೊಟ್ಟಿರುವರು. ಇವು ಕನ್ನಡಕ್ಕೆ ಬಹುದೊಡ್ಡ ಕೊಡುಗೆ.

ಮಾರ್ಕೋಪೋಲೊ ಹದಿಮೂರನೇ ಶತಮಾನದ ಪ್ರಮುಖ ಪ್ರವಾಸಿ. ಅವನು ೧೨೭೧ರಲ್ಲಿ ತನ್ನ ತಂದೆ ಹಾಗೂ ಚಿಕ್ಕಪ್ಪನೊಂದಿಗೆ ಇಟಲಿಯಿಂದ ಪ್ರವಾಸ ಕೈಗೊಂಡನು. "ಏಳು ಶತಮಾನಗಳ ಹಿಂದೆ ಈ ಪ್ರಪಂಚದ ಭೂಪಟವನ್ನೇ ಇನ್ನೂ ಬರೆಯದಿದ್ದಾಗ, ಪ್ರಪಂಚದ ರೂಪುರೇಷೆಗಳನ್ನೇ ಸ್ಥಿರವಾಗಿ ಅರಿಯದಿದ್ದಾಗ ಪ್ರಯಾಣಕ್ಕೆ ಕಾಲ್ನಡಗೆ, ಒಂಟೆ, ಕತ್ತೆ, ಕುದುರೆ, ದೋಣಿಗಳಲ್ಲದೆ ಬೇರೆ ಯಾವ ಸೌಕರ್ಯವೂ ಇಲ್ಲದಿರುವಾಗ ಅಪಾರ ಕಷ್ಟಗಳನ್ನನುಭವಿಸಿ ಇಟಲಿ ದೇಶದಿಂದ ಹೊರಟು ಈಗಿನ ತುರ್ಕಿ, ಇರಾಕ್, ಆಫ್ಘಾನಿಸ್ಥಾನ, ಟಿಬೆಟ್, ದಕ್ಷಿಣ ರಷ್ಯಾ, ಮಂಗೋಲಿಯ, ಚೀನಾ, ಜಪಾನ್, ಜಾವಾ, ಸುಮಾತ್ರಾ ಸಿಲೋನ್, ಇಂಡಿಯಾ ದೇಶಗಳನ್ನೂ, ಗೋಬಿ ಮರುಭೂಮಿಯಂಥ ಮರುಳುಗಾಡನ್ನೂ, ಹಿಂದೂಸಾಗರದಂಥ ಮಹಾಸಾಗರಗಳನ್ನೂ ಸುತ್ತಿಬಂದ" ಮಹಾಸಾಹಸಿ.

ಮಾರ್ಕೋಪೋಲೊ ತನ್ನ ಪ್ರವಾಸ ಕಥನಗಳನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡಿರುವನು. ಈ ಮೂರು ಭಾಗಗಳಲ್ಲಿ ಇಂಡಿಯಾದ ಪ್ರಸ್ತಾಪ ಬರುತ್ತದೆ. "ಪ್ರಥಮ ಭಾಗದಲ್ಲಿ ಕಾಶ್ಮೀರ ಜನರ ಸ್ವಭಾವದ ವರ್ಣನೆಯಿದೆ. ಎರಡನೆಯ ಭಾಗದಲ್ಲಿ ಬರುವ ಪೂರ್ವ ಭಾರತದ ವರ್ಣನೆ ಬಹುಶಃ ತಾನು ಕಣ್ಣಾರೆ ಕಾಣದೆ ಬೇರೆಯವರಿಂದ ಕೇಳಿದುದನ್ನು ತನ್ನದೆಂಬಂತೆ ನಿರೂಪಿಸುತ್ತಾನೆ. ಮೂರನೆಯ ಭಾಗದಲ್ಲಿ ಹಿಂದೂ ಸಾಗರದಲ್ಲಿನ ದ್ವೀಪಗಳ ಜನರ ನಡೆನುಡಿ ಆಚಾರ ವಿಚಾರ ಮತ್ತು ಸಂಪತ್ತಿನ ವಿವರಣೆ ಕೊಡುತ್ತಾನೆ. ಮುಖ್ಯವಾಗಿ ಸಿಂಹಳ ಮತ್ತು ಕನ್ಯಾಕುಮಾರಿಯಿಂದ ಗುಜರಾತ್‌ವರೆಗಿನ ತೀರ ಪ್ರದೇಶಗಳ ವರ್ಣನೆಯನ್ನು ಕೊಡುತ್ತಾನೆ. ಅವನ ವಿವರಣೆಯಿಂದ ಸಿಂಹಳ ಮತ್ತು ಭಾರತದಲ್ಲಿ ಆ ವೇಳೆಗಾಗಲೆ ಕ್ರೈಸ್ತ ಮತ್ತು ಮಹಮದೀಯ ಧರ್ಮ ತಳವೂರಿತ್ತೆಂದು ತಿಳಿದುಬರುತ್ತದೆ. ಸಿಂಹಳದ Tomb of Adam ಅನ್ನು ಬೌದ್ಧರು ಮತ್ತು ಮಹಮದೀಯರು ತಮ್ಮ ಮತಸ್ಥಾಪಕರದೆಂದು ಹೇಳಿಕೊಳ್ಳುತ್ತಾರೆಂದು ತಿಳಿದುಬರುತ್ತದೆ. ಮದರಾಸಿನ ಬಳಿಯ ಮೈಲಾಪುರದ ಬಳಿಯ St. Thomas Apostleನ ದೈವೀಶಕ್ತಿಯ ವಿವರಣೆಯನ್ನು ಕೊಡುತ್ತಾನೆ. ದಕ್ಷಿಣ ಭಾರತದ ಬ್ರಾಹ್ಮಣರ ಸಾತ್ವಿಕ ಗುಣಗಳನ್ನೂ ಮತ್ತು ಇಲ್ಲಿಯ ಜನರ ವಿಶೇಷ ಸ್ವಭಾವವನ್ನೂ ವಿವರಿಸುತ್ತಾ ಹೋಗುತ್ತಾನೆ. ಸತಿ ಪದ್ಧತಿ, ದೇವದಾಸಿ ಪದ್ಧತಿ, ವೃಷಭ ಮತ್ತು ಅದರ ಸೆಗಣಿಯಿಂದ ಅಥವಾ ಅಸ್ಥಿಯಿಂದ ತಯಾರಿಸಿದ ಭಸ್ಮಕ್ಕಿರುವ ಭಾವನಾತ್ಮಕ ಮಹತ್ವ, ತಾಂಬೂಲಕ್ಕಿರುವ ಮಹತ್ವ, ಎಡಗೈ

ಬಲಗೈಗಳಿಗಿರುವ ಭೇದ, ತುಟಿಗಳಿಗೆ ಪಾತ್ರೆಯನ್ನು ಸೋಕಿಸದಂತೆ ನೀರು ಕುಡಿಯುವುದು, ವಿಚಿತ್ರ ರೀತಿಯ ಸಾಲ ವಸೂಲಿ, ಸಮುದ್ರದಲ್ಲಿ ಮುತ್ತನ್ನು ತೆಗೆಯುವ ಮತ್ತು ತಿಮಿಂಗಿಲವನ್ನು ಹಿಡಿಯುವ ರೀತಿ, ವಜ್ರಗಳನ್ನು ಆರಿಸುವ ರೀತಿ, ಗಂಡಸರು ಮತ್ತು ಹೆಂಗಸರ ದ್ವೀಪಗಳ ವರ್ಣನೆ ಮೊದಲಾದುವು ಭಾರತದ ಬಗ್ಗೆ ಅವನು ಹೇಳಿರುವ ವಿಷಯಗಳಲ್ಲಿ ಕೆಲವು. ಅವನ ವರ್ಣನೆಗಳಲ್ಲಿ ನೂರಕ್ಕೆ ತೊಂಬತ್ತು ಭಾಗ ನಿಜವಾಗಿದೆ. ಇದು ಅವನ ನಿರೀಕ್ಷಣಾಶಕ್ತಿಯನ್ನು ತೋರಿಸುತ್ತದೆ..."[೧]

ಮೂಲಕೃತಿಯ ನಾಲ್ಕನೆಯ ಒಂದು ಭಾಗಕ್ಕಿಂತಲೂ ಕಡಿಮೆಯಿರುವ[೨] ಎಚ್.ಎಲ್. ನಾಗೇಗೌಡರ **ಮಾರ್ಕೊಪೋಲೊ** ಮೂಲಕೃತಿಯ ಸಂಗ್ರಹಾನುವಾದ-ವಾಗಿದೆ. ಮೂಲಕೃತಿ ಹಾಗೂ ಕನ್ನಡ ಸಂಗ್ರಹಾನುವಾದಗಳನ್ನು ತುಲನೆ ಮಾಡಿ ನೋಡಿದರೆ, ಮೂಲಕೃತಿಯನ್ನು ಸಂಗ್ರಹಗೊಳಿಸುವಾಗ ತೀರ ಸಂಕ್ಷಿಪ್ತವಾಗಿ ಹೇಳಲಾಗಿದೆ.[೩] ಮೂಲವನ್ನು ನೋಡಿದವರಿಗೆ ಇದು ರಕ್ತಮಾಂಸ ರಹಿತವಾದ ಅಸ್ಥಿಪಂಜರದಂತೆ ಕಾಣುತ್ತದೆ.[೪] ಮಾರ್ಕೋಪೋಲೊ ಪ್ರವಾಸಕಥನವನ್ನು ಓದುತ್ತಿದ್ದರೆ ಯಾವುದೋ ಕಿನ್ನರಲೋಕದಲ್ಲಿ ವಿಹರಿಸಿದಂತಾಗುತ್ತದೆ. ಅದೊಂದು ಕನಸಿನ ರಾಜ್ಯ. ಕುಬ್ಲಾಯ್ ಖಾನನಂತಹ ಆದರ್ಶರಾಜ, ಜ್ಞಾನಪಿಪಾಸು, ದಕ್ಷ ಆಡಳಿತಗಾರ, ಪ್ರಜಾಪ್ರೇಮಿ ಇದುವರೆಗಿನ ಚರಿತ್ರೆಯಲ್ಲಿ ಬಂದಿಲ್ಲ... ಮಾರ್ಕೊಪೋಲೊ ವಿವರಿಸುವ ಜನರ ನಡೆನುಡಿ ಆಚಾರ ವಿಚಾರ ಮೊದಲಾದುವನ್ನು ಓದುತ್ತಿದ್ದರೆ ಜ್ಞಾನ ಸರೋವರದಲ್ಲಿ ಮಿಂದಂತೆ ಭಾಸವಾಗುತ್ತದೆ.[೫]

ಎಚ್.ಎಲ್. ನಾಗೇಗೌಡರ ಆರು ಸಂಪುಟಗಳಲ್ಲಿ ಬಂದಿರುವ 'ಪ್ರವಾಸಿ ಕಂಡ ಇಂಡಿಯಾ' ಕೃತಿ ಶ್ರೇಣಿಯು ಸುಮಾರು ಮೂರು ಸಾವಿರದ ನೂರ ಮೂವತ್ತು ಪುಟಗಳ ಬೃಹತ್ ಪ್ರವಾಸಿ ಸಾಹಿತ್ಯವನ್ನೇ ಕನ್ನಡಗರಿಗೆ ಕೊಟ್ಟಿದೆ. ಇದು ಇಲ್ಲಿಗೇ ನಿಲ್ಲದೆ ಇನ್ನೂ ನಾಲ್ಕು ಸಂಪುಟಗಳಲ್ಲಿ ಬರಲಿದೆಯಂತೆ.[೬] 'ಮಾರ್ಕೊಪೋಲೊ ಪ್ರವಾಸ ಕಥನ'ವನ್ನು ಬರೆಯಹೊರಟಾಗ ಎಚ್.ಎಲ್. ನಾಗೇಗೌಡರಿಗೆ ಪ್ರವಾಸಿಗಳ ಪರಿಚಯ

---

೧. ಅದೇ, ಪು. ೨೩೨
೨. ಅದೇ, ಪು. ೨೩೭
೩. ಅದೇ, ಪು. ೨೩೭
೪. ಅದೇ, ಪು. ೨೩೪-೨೩೬
೫. ಅದೇ, ಪು. ೨೩೬-೨೩೭
೬. ಎಚ್.ಎಲ್. ನಾಗೇಗೌಡ: ಪ್ರವಾಸಿ ಕಂಡ ಇಂಡಿಯಾ-VI, ಮೈಸೂರು, ೧೯೭೭, ಪು. XI.

ಮೊದಲ ಬಾರಿಗೆ ಆಯಿತಂತೆ.[೭] ಮೂಲದಲ್ಲಿನ ಸುಮಾರು ಇಪ್ಪತ್ತು ಮೂವತ್ತು ಸಾವಿರ ಪುಟಗಳಾಗುವಷ್ಟು ವಿಪುಲ ವಿಷಯವನ್ನು ಸಂಗ್ರಹಿಸಿ ತಮಗೆ ಉಪಯುಕ್ತವೆನ್ನಿಸಿದ ವಿಷಯಗಳನ್ನೆಲ್ಲ ಆರಿಸಿಕೊಂಡು ಕನ್ನಡಕ್ಕೆ ಈ ಬೃಹತ್ ಸಂಪುಟಗಳನ್ನು ನೀಡಿರುವರು. ಪ್ರವಾಸಿಗಳು ವಿಸ್ತಾರವಾಗಿ ಹೇಳಿರುವುದನ್ನು ಆದಷ್ಟೂ ಸಂಕ್ಷಿಪ್ತಗೊಳಿಸಿ ಹೇಳಲು ಅವರು ಪ್ರಯತ್ನಿಸಿರುವರು. ಪ್ರವಾಸಿಗಳು ಬೇಕೆಂದೊ, ತಿಳಿಯದೆಯೋ ಬಿಟ್ಟಿರುವುದನ್ನು ಪ್ರವಾಸಿಗಳ ಹೇಳಿಕೆಯಲ್ಲಿನ ಸತ್ಯಾಸತ್ಯತೆಯನ್ನು ಕುರಿತೂ ಅವರು ವಿಚಾರ ಮಾಡಿರುವರು. "ಪ್ರವಾಸಿಗಳು ಹೇಳಿದಷ್ಟನ್ನೇ ಹೇಳಿ ಕೈಬಿಡುವುದು ಸೂಕ್ತವಲ್ಲವೆಂದು ಭಾವಿಸಿ, ಅವರು ಹೇಳದೆ ಇರುವುದನ್ನು ಸೂಕ್ಷ್ಮವಾಗಿ ಹೇಳಿ, ಅವರು ಹೇಳಿರುವುದು ಎಷ್ಟರಮಟ್ಟಿಗೆ ಸಮರ್ಥನೀಯ ಎಷ್ಟರಮಟ್ಟಿಗೆ ಅಲ್ಲ ಎಂಬುದನ್ನು ತುಲನೆ ಮಾಡಿ ಎರಡೂವರೆ ಸಾವಿರ ವರ್ಷಗಳ ದೀರ್ಘಕಾಲದ ಒಂದು ವಿಹಂಗಮ ಚಿತ್ರವನ್ನು ಬಿಡಿಸುವುದು ಅವಶ್ಯಕವಾಗಿ ಕುಣುತ್ತದೆ" ಎಂದು ಸ್ವತಃ ಎಚ್.ಎಲ್. ನಾಗೇಗೌಡರೇ ತಮ್ಮ ಕೃತಿಯ ಎರಡನೇ ಸಂಪುಟದಲ್ಲಿ ಹೇಳಿಕೊಂಡಿರುವರು. ಅವರ ಈ ಕೊಡುಗೆ ಕನ್ನಡದ ಗೌರವವನ್ನು ಖಂಡಿತವಾಗಿಯೂ ಹೆಚ್ಚಿಸುವುದು. ಪುಟ್ಟಪ್ಪನವರು ಹೇಳುವಂತೆ "ಓದಿಯೆ ಅದನ್ನರಿಯದವರು ಅದೆಂತಹ ಐತಿಹಾಸಿಕ ಪ್ರಜ್ಞೆಯ ಅದ್ಭುತಾನುಭವದಿಂದ ತಾವು ವಂಚಿತರಾಗುತ್ತೇವೆ ಎಂದು ತಿಳಿಯದಷ್ಟು ಹೃದಯ ದರಿದ್ರರಾಗುತ್ತಾರೆ..."[೮]

ಕೊಲಂಬಸನ ಸಾಹಸಭರಿತ ಯಾತ್ರೆಯ ಅನುಭವಗಳು ಸಾಮ್ಯುಯಲ್ ಇಲಿಯಟ್ ಮಾರಿಸನ್‌ರವರ **ನಾವಿಕ ಕ್ರಿಸ್ಟೋಫರ್ ಕೊಲಂಬಸ್** (ಕನ್ನಡಾನುವಾದ: ಎಚ್.ವಿ. ನಾರಾಯಣ್) ಎಂಬ ಕೃತಿಯಲ್ಲಿ ಕುತೂಹಲಕಾರಿಯಾಗಿ ಬಂದಿದೆ. ದಕ್ಷಿಣ ಸಮುದ್ರಗಳ ಮೂಲಕ ಮಾಡಿದ ಸಮುದ್ರಯಾನದ ಅನುಭವವೊಂದನ್ನು ಥಾರ್ ಹೆಯರ್ ಡಾಹಲ್‌ರವರ 'ಕಾಂಟಕಿಯ ಸಾಹಸ' (ಕನ್ನಡನುವಾದ: ಹೆಚ್.ಎನ್. ಮಾಧವರಾವ್) ರೋಮಾಂಚನವಾಗುವಂತೆ ತಿಳಿಸುತ್ತದೆ.

ಗಂಗಾನದಿಯ ಮೇಲಿಂದ ಬಂಗಾಳಕೊಲ್ಲಿ, ಹಿಂದೂ ಮಹಾಸಾಗರ, ಕೆಂಪು ಸಮುದ್ರ ಈ ಮೂಲಕ ಯೂರೋಪಿಗೆ, ಹೋಗುವಾಗ ತಮಗಾದ ಅನುಭವಗಳನ್ನು

---

೭. ಎಚ್.ಎಲ್. ನಾಗೇಗೌಡ: ಪ್ರವಾಸಿ ಕಂಡ ಇಂಡಿಯಾ-I, ಮೈಸೂರು, ೧೯೬೪. ಪು. XVI.

೮. ಎಚ್.ಎಲ್. ನಾಗೇಗೌಡ: ಪ್ರವಾಸಿ ಕಂಡ ಇಂಡಿಯಾ-III, ಮೈಸೂರು, ೧೯೬೯, ಮುನ್ನುಡಿ, ಪು. X.

ಸ್ವಾಮಿ ವಿವೇಕಾನಂದರು **ಪರಿವ್ರಾಜಕ** ಎಂಬ ಕೃತಿಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿವರಿಸಿರುವರು. ಅವರ ಹಾಸ್ಯಮಯ ನಿರೂಪಣೆಗೆ ಅವರು ಕೊಡುವ ಹಡಗಿನ ಮೇಲಣ ವೈವಿಧ್ಯಮಯ ಜೀವನಚಿತ್ರ ಒಂದು ಸೊಗಸಾದ ಉದಾಹರಣೆ. ಪ್ಯಾರಿಸ್, ವಿಯನ್ನಾ, ಕಾನ್‌ಸ್ಟಾಂಟಿನೋಪಲ್, ಅಥೆನ್ಸ್, ಗ್ರೀಸ್, ಈಜಿಪ್ಟ್ -ಈ ದೇಶಗಳ ಸುತ್ತಾಟ ಅವರಿಗೆ ವಿಶೇಷ ಅನುಭವಗಳನ್ನು ತಂದುಕೊಟ್ಟಿದ್ದರೂ ಅವು ಬರಹಕ್ಕೆ ಬರುವಾಗ ವಿಸ್ತೃತವಾಗಿ ಬಂದಿಲ್ಲ. ಬಂದಿರುವಷ್ಟರಿಂದಲೇ ಆಯಾ ದೇಶಗಳ ಪ್ರಾಚೀನ ಇತಿಹಾಸ, ಸಂಸ್ಕೃತಿ, ಜನಜೀವನ ಇತ್ಯಾದಿ ವಿವರಗಳು ಸ್ಫುಟವಾಗಿ ಕಣ್ಣ ಮುಂದೆ ನಿಲ್ಲುವುದಿಲ್ಲ.

ಸ್ವಾಮಿ ವಿವೇಕಾನಂದರ ಮತ್ತೊಂದು ಕೃತಿ **ಕೊಲಂಬೋ ಇಂದ ಆಲ್ಮೋರಕೆ** (ಕನ್ನಡಾನುವಾದ: ಸ್ವಾಮಿ ಸೋಮಾನಾಥನಂದ) ಪ್ರವಾಸ ಸಾಹಿತ್ಯಕ್ಕೆ ನೇರವಾಗಿ ಸಂಬಂಧಿಸುವುದಿಲ್ಲವಾದರೂ ಇದು ಕನ್ನಡಕ್ಕೆ ಒಂದು ಮಹತ್ವದ ಕೊಡುಗೆ. ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ಅಮೋಘ ಭಾಷಣದಿಂದ ಜಗದ್ವಿಖ್ಯಾತರಾದ ಸ್ವಾಮಿ ವಿವೇಕಾನಂದರು ತಾಯ್ನಾಡಿಗೆ ಮರಳಿ ಬಂದ ಮೇಲೆ ಅವರಿಗೆ ಭಾರತಾದ್ಯಂತ ಅಭೂತಪೂರ್ವ ಸನ್ಮಾನಗಳಾದುವು. ಆ ಸಂದರ್ಭಗಳಲ್ಲಿ ಮಾಡಿದ ಸ್ಫೂರ್ತಿಯುತ ಭಾಷಣಗಳ ಸಂಕಲನವೇ 'ಕೊಲಂಬೊ ಇಂದ ಆಲ್ಮೋರಕೆ'. ಇದನ್ನು 'ಉಪನ್ಯಾಸ ಜೈತ್ರಯಾತ್ರೆ' ಎಂದು ಕರೆಯಲಾಗಿದೆ. ಭಾರತಾದ್ಯಂತ ಸಂಚರಿಸಿ ಭಾರತೀಯರ ಚೈತನ್ಯವನ್ನು ಬಡಿದೆಬ್ಬಿಸಿದ, ಭಾರತೀಯ ಸಂಸ್ಕೃತಿ, ಧರ್ಮ, ಆಧ್ಯಾತ್ಮಗಳ ಬಗೆಗೆ ಚೇತೋಹಾರಿಯಾದ ಭಾಷಣಗಳನ್ನು ಮಾಡುವುದರ ಮೂಲಕ ಭಾರತೀಯರನ್ನು ಜಾಗೃತಗೊಳಿಸಿದ ಮಹಾನ್ ಮೂರ್ತಿ ಸ್ವಾಮಿ ವಿವೇಕಾನಂದರ ಧೀಮಂತ ವಾಣಿ ಈ ಕೃತಿಯ ಪುಟ ಪುಟದಲ್ಲೂ ಕಂಗೊಳಿಸಿದೆ. ಪುಟ್ಟಪ್ಪನವರು ಹೇಳುವಂತೆ[೯] "ಹಿಂದೂ ಧರ್ಮದ ವೈಶಾಲ್ಯದ ಮತ್ತು ವೇದಾಂತ ತತ್ತ್ವದ ಗಂಭೀರತೆಯ ಪರಿಚಯ ಸರ್ವಸಾಮಾನ್ಯವೂ ಸರ್ವ ಸುಲಭಗ್ರಾಹ್ಯವೂ ಆಗಬೇಕಾದರೆ ಸ್ವಾಮೀಜಿಯ ಉಪನ್ಯಾಸಗಳನ್ನು ಬಿಟ್ಟರೆ ಬೇರಾವುದೂ ಇಲ್ಲ. ಸಂಕುಚಿತ ಮತಭಾವಗಳನ್ನು ಕತ್ತರಿಸಿ ಕೆಡಹಿ, ಮನಸ್ಸಿನಲ್ಲಿ ಉದಾತ್ತ ಸಮನ್ವಯ ದೃಷ್ಟಿಯನ್ನು ಪ್ರಜ್ವಲಿಸುವ ಶಕ್ತಿ ಈ ಉಪನ್ಯಾಸಗಳಲ್ಲಿ ಇರುವಂತೆ ಬೇರೆಲ್ಲಿಯೂ ಇಲ್ಲ. ಪತನ ಸಮಯದಲ್ಲಿ ನಮ್ಮನ್ನು ಹಿಡಿದೆತ್ತುವ ಔದಾರ್ಯ, ಹೃದಯ ದೌರ್ಬಲ್ಯದ ಸಮಯದಲ್ಲಿ ಕ್ಲೈಬ್ಯವನ್ನು ಕಿತ್ತೊಗೆದು ಕೆಚ್ಚನ್ನು ನೆಡುವ ಸಿಡಿಲಾಳ್ಮೆ ಈ ಭಾಷಣಗಳಲ್ಲಿ ಅನುಭವ ಪ್ರತ್ಯಕ್ಷವಾಗುವಂತೆ ಬೇರೆಲ್ಲಿಯೂ ಆಗುವುದಿಲ್ಲ. ಇಲ್ಲಿ ಬುದ್ಧಿಗೆ ಪುಷ್ಟಿ ಇದೆ; ಹೃದಯಕ್ಕೆ

---

೯. ಕೊಲೊಂಬೊ ಇಂದ ಆಲ್ಮೋರಕೆ, ಮುನ್ನುಡಿ, ಪು. vii-viii

ತುಷ್ಟಿ ಇದೆ. ನಮ್ಮ ವ್ಯಕ್ತಿತ್ವ ಸಮಸ್ತವನ್ನೂ ಸರ್ವಾವಯವ ಸಂಪೂರ್ಣವಾಗಿ ವಿಕಾಸಗೊಳಿಸಿ ಪೂರ್ಣತೆಯ ಕಡೆಗೆ ನಮ್ಮನ್ನು ಕೊಂಡೊಯ್ಯುವ ಪೂರ್ಣದೃಷ್ಟಿಯೂ ಇಲ್ಲಿ ಸಿದ್ಧಿಸುತ್ತದೆ..."

ಜವಾಹರಲಾಲ ನೆಹರೂರವರ **ಮಗಳಿಗೆ ತಂದೆಯ ಓಲೆಗಳು**[10] ಪ್ರವಾಸ ಸಾಹಿತ್ಯಕ್ಕೆ ನೇರವಾಗಿ ಸಂಬಂಧಿಸುವುದಿಲ್ಲವಾದರೂ ತಾರುಣ್ಯದ ಬೌದ್ಧಿಕ ವಿಕಾಸಕ್ಕೆ ಅಗತ್ಯವಿರುವ ವಿಷಯಗಳೆಲ್ಲವನ್ನೂ ಸರಳವಾಗಿ ಇಲ್ಲಿ ತಿಳಿಯಹೇಳಿರುವುದರಿಂದ ಮಹತ್ವದ ಗ್ರಂಥವಾಗಿ ನಿಲ್ಲುತ್ತದೆ.

ಕೆ.ಪಿ.ಎಸ್. ಮೆನನ್‌ರವರ **ವಿಶ್ವ ಪರ್ಯಟನ** (ಕನ್ನಡಾನುವಾದ: ಮಾ.ಭೀ. ಶೇಷಗಿರಿರಾವ್) ದಿನಚರಿ ರೂಪದಲ್ಲಿದೆ; ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ವಿಶ್ವವ್ಯಾಪಕವಾದ ಅನುಭವವುಳ್ಳ ಕೆ.ಪಿ.ಎಸ್. ಮೆನನ್‌ರವರು ಭಾರತ ಸರಕಾರದ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿದ ಗೌರವಾನ್ವಿತ ವ್ಯಕ್ತಿಯಾಗಿರುವರು. ಅವರ ಈ ಕೃತಿಯಲ್ಲಿ ಏಷ್ಯಾ ಅಮೇರಿಕಾ ಖಂಡಗಳ ಹಾಗೂ ಐರೋಪ್ಯ ದೇಶಗಳ ಪ್ರವಾಸಾನುಭವವಿದೆ.

ಇ.ಪಿ. ಮೆನನ್ ಹಾಗೂ ಸತೀಶ್‌ಕುಮಾರರ **ಪ್ರಪಂಚ ಪರ್ಯಟನೆ ಪಾದ ಯಾತ್ರೆಯಲ್ಲಿ** (ಕನ್ನಡ ಸಂಗ್ರಹಾನುವಾದ; ತಿ.ತಾ. ಶರ್ಮ) ಶಾಂತಿ ಸಂದೇಶ ಇಲ್ಲಿನ ಪ್ರವಾಸದ ಉದ್ದೇಶ. ಪ್ರಪಂಚದ ಉದ್ದಗಲಕ್ಕೂ ಕಾಲ್ನಡಿಗೆಯಿಂದ ಪ್ರಯಾಣ ಮಾಡಿ ಅನೇಕ ಕಷ್ಟ ನಷ್ಟಗಳಿಗೆ ಗುರಿಯಾದದ್ದು, ಜನ ಸಾಮಾನ್ಯರ ಬದುಕನ್ನು ಅವರೊಡನೆ ಬೆರೆಯುವುದರ ಮೂಲಕ ತಿಳಿದದ್ದು -ಇವೆಲ್ಲವೂ ಕುತೂಹಲಕಾರಿಯಾಗಿ ಇಲ್ಲಿ ಬಂದಿವೆ. ಕಂಬಾರರು ಹೇಳಿರುವಂತೆ[11] "ಇವರೇನು ಕೇಳಿದರು ಅವರೇನು ಹೇಳಿದರು? ಏನು ಚರ್ಚಿಸಿದರು? ಆಡಿದ್ದರಲ್ಲಿ ಎಷ್ಟು ಮೋಸ, ಎಷ್ಟು ಸಾಚಾ -ಇಂಥ ತರ್ಕವೇ ಇಲ್ಲಿ ಅನಗತ್ಯ. ಕಾಲ್ನಡಿಗೆಯಲ್ಲಿ ಈ ಯುವಕರು ಶಾಂತಿಯ ಬೋರ್ಡು ಹಿಡಿದುಕೊಂಡು

---

೧೦. ಪಂಡಿತ್ ಜವಾಹರಲಾಲ್ ನೆಹರೂವರ ಪ್ರಸಿದ್ಧ ಇಂಗ್ಲಿಷ್ ಕೃತಿಯಾದ 'Glimpses of world History' ಮಗಳು ಇಂದಿರಾ ಪ್ರಿಯಾದರ್ಶಿನಿಗೆ ನೆಹರೂವರು ಬರೆದ-ವಿಶ್ವ ಇತಿಹಾಸವನ್ನು ಕುರಿತ ಪ್ರಬೋಧಪೂರ್ಣ ಪತ್ರಗಳ ಸಂಕಲನವಾಗಿದ್ದು, ಇದು ಸಿದ್ಧನಹಳ್ಳಿ ಕೃಷ್ಣಶರ್ಮರಿಂದ ಕನ್ನಡಕ್ಕೆ 'ಜಗತ್ಕಥಾವಲ್ಲರಿ' ಎಂಬ ಹೆಸರಿನಲ್ಲಿ ಅನುವಾದಗೊಂಡಿದೆ. ಇದು ಮೊದಲಿಗೆ ಪ್ರಭಾತ ಸಾಹಿತ್ಯದವರಿಂದ ಬಹುಶಃ ಪುಟ್ಟ ಪುಸ್ತಕಮಾಲೆಯಲ್ಲಿ (?) ಹೊರ ಬಂದಿತು. ನಂತರ, ೧೯೬೪ರಲ್ಲಿ ಹುಬ್ಬಳ್ಳಿಯ ಅರುಣ ಪ್ರಕಾಶನದವರ ಮೂಲಕ 'ಜಗತ್ಕಥಾವಲ್ಲರಿ ಭಾಗ ೧' ಎಂಬ ಹೆಸರಿನಲ್ಲಿ ಪ್ರಕಟವಾಯಿತು.

೧೧. 'ಸಾಹಿತ್ಯ ವಾರ್ಷಿಕ' ೧೯೭೩, ಪು. ೧೩೪-೧೩೫.

ಅಡ್ಡಾಡುವಾಗ ರಾಜಕಾರಣಿಗಳಿಗೆ ಏನನ್ನಿಸಿತೋ; ಮಾತುಗಳನ್ನಂತೂ ಚೆನ್ನಾಗಿ ಆಡಿದ್ದಾರೆ. ಅಲ್ಲದೆ ದೊಡ್ಡದೊಡ್ಡವರ-ದೇಶಗಳನ್ನೇ ಅಂಗೈಯಲ್ಲಾಡಿಸಬಲ್ಲವರ ಮಾತುಗಳಿಗೆ ಎರಡೆರಡು ಅರ್ಥಗಳಿರುವಾಗ ಅಧಿಕಾರ, ಪ್ರಾತಿನಿಧಿಕ ಜವಾಬ್ದಾರಿ ಎರಡೂ ಇಲ್ಲದ ಇಂಥವರಿಗೆ ಗುಟ್ಟು ಬಿಟ್ಟುಕೊಟ್ಟರೆಂದು ನಂಬುವುದೂ ಬೇಡ..." ಈ ಪುಸ್ತಕ ಓದುತ್ತಿದ್ದಂತೆ ಕಂಬಾರರು ಹೇಳುವಂತೆ ಥ್ರಿಲ್ ಕೊಡುವುದಂತೂ ನಿಜ.

ಫ್ರೆಂಚ್ ಲೇಖಕ ಜೂಲ್ಸ್‌ವೆರ್ನ್‌ನ **ಭೂಗರ್ಭಯಾತ್ರೆ** (A Journey to the Centre of the earth) ಹಾಗೂ **ಎಂಬತ್ತು ದಿನಗಳಲ್ಲಿ ಭೂಪ್ರದಕ್ಷಿಣೆ** (Around the world in eighty days) ಎಂಬ ಎರಡು ಕೃತಿಗಳ ಸಂಗ್ರಹಾನುವಾದವನ್ನು ಗೋಪಾಲಕೃಷ್ಣ ಅಡಿಗ ಅವರು ಕೊಟ್ಟಿರುವರು. ಜೂಲ್ಸ್ ವೆರ್ನ್‌ನ ಈ ಕೃತಿಗಳು ಕಾಲ್ಪನಿಕ ಪ್ರವಾಸ ಕಥನಗಳಾಗಿವೆ. ಕನ್ನಡಕ್ಕೆ ಇದು ಹೊಸ ಪ್ರಕಾರವಾಗಿದೆ.[೧೨]

ಪ್ರಸಿದ್ಧ ಬಂಗಾಳಿ ಲೇಖಕ ಪ್ರಬೋಧಕುಮಾರ ಸನ್ಯಾಲ್‌ರವರ **ಮಹಾ ಪ್ರಸ್ಥಾನದ ಪಥದಲ್ಲಿ**[೧೩] (ಕನ್ನಡರೂಪ: ಎಂ.ಕೆ. ಭಾರತೀರಮಣಾಚಾರ್ಯ) ಪ್ರವಾಸ ಪ್ರಬಂಧವು ಕಾವ್ಯಮಯಶೈಲಿಯಲ್ಲಿ ಬಂದಿದೆ.

---

೧೨. ಕನ್ನಡದಲ್ಲೂ ಸ್ವತಂತ್ರವಾಗಿ ಕಾಲ್ಪನಿಕ ಪ್ರವಾಸ ಕಥನ ಪ್ರಕಾರ ಬಂದಿದೆ. ವಿ.ಎಂ. ಇನಾಂದಾರ್‌ರವರ 'ಮಂಗಲ್ಯಾಂಡಿನಲ್ಲಿ ಮೂರುವಾರ' ಈ ಬಗೆಯದಾಗಿದೆ. ಕೃತಿಯಲ್ಲಿ ವಿಡಂಬನೆ ಪ್ರಧಾನವಾಗಿದೆ. ಮಂಗಳಗ್ರಹಕ್ಕೆ ಭೂಲೋಕದಿಂದ ಪ್ರಯಾಣ ಮಾಡಿ ಅಲ್ಲಿರುವ ಮಂಗಾಲ್ಯಾಂಡಿನಲ್ಲಿ ತಾವು ಕಂಡ ಜೀವನದ ಎಲ್ಲಾ ಮುಖಗಳನ್ನು ಪರಿಚಯ ಮಾಡಿಕೊಡುತ್ತಿರುವಂತೆ ಲೇಖಕರು ಕಲ್ಪಿಸಿಕೊಂಡಿರುವರು.

೧೩. ಇದು ೧೯೫೮ರಲ್ಲಿಯೇ ಜಿ.ಆರ್. ಹೆಗಡೆ ಅವರಿಂದ 'ಯಾತ್ರಿಕ' ಎಂಬ ಹೆಸರಿನಲ್ಲಿ ಅನುವಾದಗೊಂಡು ಪ್ರಕಟವಾಗಿದೆ. ತೀರ್ಥಯಾತ್ರೆಯ ವಾಸ್ತವಿಕ ಚಿತ್ರವು ಕಾದಂಬರಿ ರೂಪದಲ್ಲಿ ಬಂದಿದೆ. ಮೇಲುನೋಟಕ್ಕೆ ಇದರ ವಸ್ತು ತೀರ್ಥಯಾತ್ರೆಯನ್ನು ಕುರಿತದ್ದಾದರೂ, ಒಂದು ಗಟ್ಟಿಯಾದ ಕಥೆಯಿದೆ; ಸಹಯಾತ್ರಿಕರ ಬಗೆಗೆ ತೆರದ ಮನಸ್ಸಿನ ಆಲೋಚನೆಯಿದೆ. ಪ್ರಭೋಧಕುಮಾರ ಸನ್ಯಾಲರ ಈ ಕೃತಿಯನ್ನು ಕುರಿತು ರವೀಂದ್ರನಾಥ ಠಾಕೂರರು ಮೆಚ್ಚುಗೆಯ ಮಾತುಗಳನ್ನಾಡುತ್ತಾ ಹೀಗೆಂದಿರುವರು: "ನಿಮ್ಮ ಯಾತ್ರಾವರ್ಣನೆಯು ಸಂಪ್ರದಾಯಬದ್ಧವಾಗಿ ಸಾಗುತ್ತಿಲ್ಲ; ಭೌಗೋಲಿಕ ಪಥದಲ್ಲಿಯೂ ನಡೆಯುತ್ತಿಲ್ಲ; ಆದರೆ ಅದು ಮಾನವಪಥವನ್ನು ತುಳಿಯುತ್ತಿದೆ. ಅನೇಕ ಶತಾಬ್ದಿಗಳಿಂದ ನಿರಂತರವಾಗಿ ಈ ದುರ್ಗಮ ಪ್ರಯತ್ನವನ್ನು ಸಾಧಕರು ಮಾಡುತ್ತಲೇ ಇದ್ದಾರೆ. ನಿಮ್ಮ ಈ ತೀರ್ಥಯಾತ್ರೆಯು ಇದರ ಪ್ರತೀಕವಾಗಿದೆ. ನೀವೂ ಇದೇ ಆಕರ್ಷಣೆಯಿಂದ ಹೊರಟಿದ್ದೀರಿ. ಇದರಲ್ಲಿ ವಿವಿಧ ಪ್ರದೇಶಗಳ, ಮನೆಗಳ, ಚಿತ್ರಗಳನ್ನು ವಿಚಿತ್ರವಾಗಿ ಒಂದೇ ಚಿತ್ರದಲ್ಲಿ ಚಿತ್ರಿಸಿದ್ದೀರಿ. ಇವುಗಳ ಜೊತೆಗೆ ಸುಖ-ದುಃಖ, ಆಶೆ-ನಿರಾಶೆ, ಜೀವನ ಮೃತ್ಯುಗಳ ಸಂಘರ್ಷಣೆಗಳಿವೆ. ನಿಮ್ಮ ವರ್ಣನೆಯಲ್ಲಿ ಯುಗ ಯುಗಾಂತರಗಳ ಸಂಸ್ಕಾರಗಳೂ ವಿವೇಕಪೂರ್ಣ ಉತ್ಸುಕತೆಯೂ ಸೇರಿಕೊಂಡಿದೆ. ಅದರ ಕೌತುಕವೂ ಅದರಿಂದ ಹುಟ್ಟುವ ಕುತೂಹಲವೂ ಓದುಗರನ್ನು ನಿಮ್ಮೊಂದಿಗೆ ಸೆಳೆಯುತ್ತದೆ."

ಗುಜರಾತಿ ಸಾಹಿತ್ಯದ ಶ್ರೇಷ್ಠ ವಿದ್ವಾಂಸರಾದ ಕಾಕಾ ಸಾಹೇಬ ಕಾಲೇಲಕರ ಅವರ **ಜೀವನ ಲೀಲೆಯು** (ಅನು: ಸಾಲಿ ರಾಮಚಂದ್ರರಾವ್) ಅವರ **ಲೋಕಮಾತಾ** ಎಂಬ ಗುಜರಾತಿ ಭಾಷೆಯ ಪ್ರವಾಸ ಗ್ರಂಥದ ವಿಸ್ತೃತ ಕನ್ನಡ ರೂಪ. 'ಲೋಕಮಾತಾ'ದಲ್ಲಿ ಭಾರತದ ಪವಿತ್ರ ನದಿಗಳ, ಸರೋವರಗಳ ದರ್ಶನಕ್ಕಾಗಿ ನಡೆಸಿದ ಯಾತ್ರೆಯ ಅನುಭವ ನಿರೂಪಣೆ ಬಂದಿದೆ. "ಭಗವಂತನ ಗುಣಗಾನ ಮಾಡುವುದು ನವವಿಧ ಭಕ್ತಿಯ ಒಂದು ಪ್ರಕಾರವಾಗಿರುವಂತೆ ಭಾರತದ ಭೂಮಿಯ, ಅದರ ಗುಡ್ಡಗಳ ಮತ್ತು ಪರ್ವತ ಶ್ರೇಣಿಗಳ, ನದಿಗಳ ಮತ್ತು ಸರೋವರಗಳ, ಹಳ್ಳಿಗಳ ಮತ್ತು ಪಟ್ಟಣಗಳ, ಅಲ್ಲಿ ಇರುತ್ತಿರುವ ಜನರ ಮತ್ತು ಅವರ ಪುರುಷಾರ್ಥಗಳ, ಅವರ ಆಶ್ರಯದಿಂದಿರುವ ಗ್ರಾಮ್ಯ ಪಶುಪಕ್ಷಿಗಳ ಮತ್ತು ಅವರಿಂದ ದೂರವಾಗಿ ಸ್ವತಂತ್ರತೆಯನ್ನು ಭೋಗಿಸುವ ವನ್ಯ ಪಶುಪಕ್ಷಿಗಳ -ಇವೆಲ್ಲವುಗಳ ವರ್ಣನೆ ಮಾಡಿ ಅವುಗಳ ಪರಿಚಯವನ್ನು ಮಾಡಿಕೊಡುವುದು ಭಾರತ ಭಕ್ತಿಯ ಒಂದು ಅತ್ಯಂತ ಆನಂದದಾಯಕವಾದ ಪ್ರಕಾರವಾಗಿರುತ್ತದೆ..." ಎಂದು ಮೂಲ ಲೇಖಕರು ಹೇಳಿರುವರು.[೧೪] ಅವರ ಈ ಉದ್ದೇಶ 'ಲೋಕಾಮಾತಾ' ಕೃತಿಯಲ್ಲಿ ನೆರವೇರಿದಂತಿದೆ. 'ಲೋಕ ಮಾತಾ' ಗ್ರಂಥಕ್ಕೆ ಬೇರೆ ಕೆಲವು ಪ್ರವಾಸ ವರ್ಣನೆಗಳನ್ನು ಸೇರಿಸಿ ಹೊಸದೊಂದು ಪುಸ್ತಕ ಬರೆದುಕೊಡುವಂತೆ ಕೇಂದ್ರ ಸಾಹಿತ್ಯ ಆಕಾಡೆಮಿ ಲೇಖಕರನ್ನು ಪ್ರಾರ್ಥಿಸಿತು. "ಅಂತಿಂತಹ ಪ್ರವಾಸ ವರ್ಣನೆಗಳಿಗಿಂತ ನದಿ, ಪ್ರಪಾತ ಮತ್ತು ಸರೋವರ ಇವುಗಳೊಡನೆ ಸರಿಹೋಗುವ ಸಾಗರಗಳ, ಸಾಗರ ಸಂಗಮಗಳ ಮತ್ತು ಸಾಗರ ತೀರಗಳ ವಿವಿಧ ಮನೋರಂಜಕ ದೃಶ್ಯಗಳ ವರ್ಣನೆಗಳನ್ನೇ ಸೇರಿಸಿದರೆ ಪಂಚಮಹಾಭೂತಗಳಲ್ಲಿಯ ಒಂದು ಅತ್ಯಂತ ಆಹ್ಲಾದಕವಾದ ತತ್ತ್ವದ ಲೀಲೆಗಳ ವರ್ಣನೆ ಒಂದೆಡೆಯಲ್ಲಿ ಬರುವುದಲ್ಲದೆ ಈ ಹೊಸ ಪುಸ್ತಕಕ್ಕೆ ಒಂದು ಬಗೆಯ ಏಕರೂಪತೆ ಉಂಟಾಗುತ್ತದೆ"[೧೫] ಎಂಬಿ ಲೇಖಕರ ಮರು ಪರಿಶೀಲನೆ 'ಜೀವನಲೀಲೆ' ಎಂಬ ಕೃತಿಯ ಆವಿರ್ಭಾವಕ್ಕೆ ಕಾರಣವಾಗಿದೆ. "ಗುಡ್ಡಗಳನ್ನು, ಹೊಲಗದ್ದೆಗಳನ್ನು, ಮೋಡಗಳನ್ನು ಮತ್ತು ಇವುಗಳ ಉತ್ಸವರೂಪವಾದ ಸೂರ್ಯೋದಯದ ಮತ್ತು ಸೂರ್ಯಾಸ್ತದ ಮರ್ಮ ಚಮತ್ಕಾರಗಳನ್ನು ನೋಡುತ್ತ ನಾನು ನಿಸರ್ಗ ನಿರೀಕ್ಷಣದ ಆನಂದವನ್ನು ಅನುಭವಿಸಿದ್ದೇನೆ. ಪ್ರತಿಯೊಂದರ ರೀತಿ ಬೇರೆ, ಪ್ರತಿಯೊಂದರ ಚಮತ್ಕೃತಿ ಅಸಾಧಾರಣ. ಹೀಗಿದ್ದರೂ ನೀರಿನ ಪ್ರವಾಹದಿಂದಾಗಲೀ ವಿಸ್ತಾರದಿಂದಾಗಲೀ ಪ್ರಕಟವಾಗುವ ಜೀವನಲೀಲೆಯ ಪರಿಣಾಮದ ತೂಕಕ್ಕೆ ಬೇರಾವ ಪ್ರಾಕೃತಿಕ

೧೪. ಜೀವನಲೀಲೆ (ಅನು: ಸಾಲಿ ರಾಮಚಂದ್ರರಾಗು). ಸಾಹಿತ್ಯ ಅಕಾದೆಮಿ ನವದೆಹಲಿ, ೧೯೭೦, (ಪು. ೧).

೧೫. ಅದೇ, ಪು. ೨.

ಅನುಭವವೂ ಬರಲಾರದು..." ಎಂದು ವಿಚಾರಮಾಡುವ ಲೇಖಕರು ಪ್ರಸ್ತುತ ಕೃತಿಯಲ್ಲಿ 'ದರ್ಶನಾನಂದವನ್ನು ಉಕ್ಕೇರಿಸುವಂತಹ ಜಲವರ್ಣನೆಗಳ ಸಂಗ್ರಹವನ್ನೇ ಕೊಟ್ಟಿರುವರು. ಒಂದೊಂದು ನದಿ ಒಂದೊಂದು ಸಂಸ್ಕೃತಿಯ ಪ್ರವಾಹವಾಗಿರುತ್ತದೆ. ನದಿಗಳಿಂದಲೇ ನಾವು ಈ ಸಂಗಮ ಸಂಸ್ಕೃತಿಯನ್ನು ಕಲಿತಿದ್ದೇವೆ; ನದಿಯ ಮತ್ತು ಜೀವನದ ಕ್ರಮ ಸಮನಾಗಿರುತ್ತದೆ -ಎಂಬ ಈ ಸ್ವತಂತ್ರ ವಿಚಾರಧಾರೆಗಳು ನಮ್ಮನ್ನು ವಿಚಾರಮಾಡುವಂತೆ ಪ್ರೇರೇಪಿಸುತ್ತವೆ. ಲೇಖಕರು ತಮ್ಮ ಪ್ರವಾಸದುದ್ದಕ್ಕೂ ಅಸಂಖ್ಯ ನದಿಗಳ ದರ್ಶನ ಪಡೆದಿರುವರು. ಹಾಗೆಯೇ ಸಮಾನಾಂತರವಾಗಿ ಬದುಕಿನ ಲೀಲೆಯನ್ನೂ ಕಂಡಿದ್ದಾರೆ. ನದಿ ಹಾಗೂ ಜೀವನ ಕ್ರಮ ಸಮನಾಗಿರುವುದರಿಂದ ಈ ಕೃತಿಗೆ ಇಟ್ಟಿರುವ 'ಜೀವನಲೀಲೆ' ಎಂಬ ಹೆಸರು ಧ್ವನಿಪೂರ್ಣವಾಗಿದೆ. ನಮ್ಮ ಪೂರ್ವಜರ ತೀರ್ಥಯಾತ್ರೆಯ ಬಹುಭಾಗ ನದೀ ಪ್ರದೇಶವನ್ನೇ ಒಳಗೊಂಡಿತ್ತು. ಅವರ ನದೀ-ಭಕ್ತಿ ಲೋಕವಿಶ್ರುತವಾಗಿದೆ. ಇಂದಿಗೂ ಅದು ಜೀವಂತವಾಗಿದೆ. ಭಾರತದ ನದೀ ಸರೋವರಗಳ ವರ್ಣನೆ ಜೀವಂತವಾಗಿ ಈ ಕೃತಿಯಲ್ಲಿ ಬಂದಿದ್ದು, ಅವುಗಳ ಸಂದರ್ಶನ ಭಾಗ್ಯವಿಲ್ಲದ ಲಕ್ಷಾಂತರ ಓದುಗರಿಗೆ, ಅಪರೋಕ್ಷಾನುಭವ ಈ ಕೃತಿಯಿಂದಾಗುತ್ತದೆ.

ಮೋತಿಚಂದ್ರರ ಹಿಂದೀ ಭಾಷೆಯ **ಸಾರ್ಥವಾಹ** ಪ್ರಾಚೀನ ಭಾರತದ ಪಥಪದ್ಧತಿಯನ್ನು ಪರಿಚಯಿಸುವ ಕೃತಿಯಾಗಿದೆ. ಪುಸ್ತಕದ ಮುನ್ನುಡಿಯಲ್ಲಿ ಹೇಳಲಾಗಿರುವಂತೆ "ಈ ವಿಷಯದ ಅಧ್ಯಯನವು ಅವರದೇ ಆದ ಮೂಲ ಕಲ್ಪನೆಯಾಗಿದೆ. ಇಂಗ್ಲೀಷ್ ಅಥವಾ ಬೇರೆ ಯಾವುದೇ ಭಾಷೆಯಲ್ಲಿ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಈ ಮಹತ್ವಪೂರ್ಣವಾದ ವಿಷಯದ ಮೇಲೆ ಗ್ರಂಥವನ್ನು ಯಾರು ಬರೆದಿಲ್ಲ... ಈ ಪುಸ್ತಕದ ವಿಷಯವು-ಪ್ರಾಚೀನ ಭಾರತದ ವ್ಯಾಪಾರಿಗಳು, ಅವರ ಪ್ರವಾಸಗಳು, ಕೊಡಕೊಳ್ಳುವ ವಸ್ತುಗಳು, ವ್ಯಾಪಾರದ ನಿಯಮಗಳು, ಮತ್ತು ಪಥಪದ್ಧತಿಗಳಾಗಿವೆ. ಈ ಸಂಬಂಧವಾಗಿ ವೈದಿಕಕಾಲದಿಂದ ೧೧ನೆಯ ಶತಕದವರೆಗೆ ಭಾರತೀಯ ಸಾಹಿತ್ಯ (ಸಂಸ್ಕೃತ, ಪಾಲೀ, ಪ್ರಾಕೃತ ಮೊದಲಾದವುಗಳಲ್ಲಿ) ಜನಾಂಗೀಯ ಮತ್ತು ರೋಮದ ಭೌಗೋಲಿಕ ವೃತ್ತಾಂತಗಳು, ಚೀನೀ ಪಯಣಿಗರ ವರ್ಣನೆಗಳು ಮತ್ತು ಭಾರತೀಯ ಕಲೆಯಲ್ಲಿ ದೊರೆಯುವ, ಅಲ್ಲಲ್ಲಿ ಹರಡಿಕೊಂಡಿರುವ ಅನೇಕ ಪರಮಾಣುಗಳನ್ನು ಜೋಡಿಸಿ ಲೇಖಕರು ಸಾರ್ಥವಾಹ ರೂಪದ ಭವ್ಯವಾದ ಸುಮೇರುವನ್ನು ನಿರ್ಮಿಸಿದ್ದಾರೆ..."[೧೬] ಇದು ಹಿಂದೀ ಸಾಹಿತ್ಯಕ್ಕೆ ಶ್ಲಾಘನೀಯವಾದ ಕಾಣಿಕೆ. ಕನ್ನಡಾನುವಾದ ಸರಳವಾಗಿದೆ.

---

೧೬. ಸಾರ್ಥವಾಹ (ಅನು: ಎಚ್.ಎಸ್. ಪಾಟೀಲ), ಸಾಹಿತ್ಯ ಅಕಾಡೆಮಿ, ನವದೆಹಲಿ, (೧೯೭೨) ಮುನ್ನುಡಿ, ಪು. V.

ದೊಡ್ಡಮ್ಮನೆ ಮಹಾದೇವಿಯಮ್ಮನವರು. ಚಿಕ್ಕವಯಸ್ಸಿನಲ್ಲಿಯೇ ಪತಿಯನ್ನು ಕಳೆದುಕೊಂಡು, ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯ ಪಾತ್ರವಹಿಸಿ ಗಾಂಧೀಜಿಯವರ ಮೆಚ್ಚುಗೆಗೆ ಪಾತ್ರರಾಗಿ ವಾರ್ಧಾದ ಮಹಿಳಾಶ್ರಮದಲ್ಲಿ ನೆಲೆಸಿ ಗಾಂಧೀಜಿ ಹಾಗೂ ಜಮುನಾಲಾಲ ಬಜಾಜರ ಸಾಕುಮಗಳಾಗಿ ವಿನೋಬಾಭಾವೆ ಹಾಗೂ ಕಾಕಾ ಕಾಲೇಲಕರರ ವಿಚಾರಪೂರ್ಣ ಉಪದೇಶಗಳಿಂದ ಪ್ರಭಾವಿತರಾಗಿ ಗ್ರಾಮ ಸೇವೆ, ಸಮಾಜ ಸೇವೆಗಳಲ್ಲಿ ನಿರತರಾದರು. ತಮ್ಮ ಸೇವಾತತ್ಪರತೆ ಹಾಗೂ ಸದ್ಗುಣಗಳಿಂದ ವಿನೋಬಾಜಿಯವರನ್ನು ಮೆಚ್ಚಿಸಿದ ಮಹಾದೇವಿಯಮ್ಮನವರು ಅವರ ಆಪ್ತ ಕಾರ್ಯದರ್ಶಿನಿ ಆಗುವ ಭಾಗ್ಯವನ್ನೂ ಪಡೆದರು.

'ಹಿಮಾಲಯ ಯಾತ್ರೆ'ಯ ಅನುಭವವನ್ನು ಹೇಳುವ **ದೇವತಾತ್ಮಾವು** ಮೊದಲಿಗೆ ಮಹದೇವಮ್ಮನವರಿಂದ ಹಿಂದಿಯಲ್ಲಿ ಬರೆಯಲಾಯಿತು. ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿರುವವರು ಗೌರೀಶ ಕಾಯ್ಕಿಣಿಯವರು.

ಐವರು ಮಹಿಳೆಯರಿಂದ ಹಿಮಾಲಯದ ಯಾತ್ರೆ ಪ್ರಾರಂಭವಾದುದು ೧೯೩೫ರ ಮೇ ತಿಂಗಳಲ್ಲಿ ಮತ್ತು ಆ ಯಾತ್ರೆ ಸುಗಮವಾಗಿ ಮುಗಿದುದು ಜುಲೈ ತಿಂಗಳಲ್ಲಿ. ಮೂರು ತಿಂಗಳ ಹಿಮಾಲಯ ಪ್ರವಾಸದ ಅನುಭವ ಈ ಕೃತಿಯ ವಸ್ತು. ಹಿಮಾಲಯದ ಯಾತ್ರೆ ಇಂದಿನಷ್ಟು ಸೌಲಭ್ಯಗಳಿಲ್ಲದ ಅಂದಿನ ದಿನಗಳಲ್ಲಿ ಸಾಹಸದ ಯಾತ್ರೆಯಾಗಿದ್ದಿತು. ಲೇಖಕಿಯವರ ಮನಮೋಹಕ ಶೈಲಿಯಿಂದಾಗಿ ಯಾತ್ರೆಯ ಅನುಭವ ಹೃದಯಕ್ಕೆ ಸಮೀಪವಾಗುತ್ತದೆ. ಪುಸ್ತಕದ ಮೊದಲ ಪರಿಚ್ಛೇದದಲ್ಲಿ ಹಿಮಾಲಯದ ಪ್ರಾಕೃತಿಕ ಸೌಂದರ್ಯದ ಬಣ್ಣನೆ ಬಂದರೆ, ಎರಡನೆಯದರಲ್ಲಿ ಯಾತ್ರೆಯ ಪ್ರತಿಯೊಂದು ಸ್ಥಾನದ ವಿವರವಾದ ವರ್ಣನೆ, ಘಟನೆಗಳನ್ನು ಅನುಸರಿಸಿ ಬಂದಿದೆ. ಕಷ್ಟಕರವಾದ ಯಾತ್ರೆಯ ಪರಿಪೂರ್ಣ ಕಲ್ಪನೆ ಓದುಗರಿಗೆ ಇದರಿಂದ ಆಗುತ್ತದೆ. ಮಾರ್ಗಮಧ್ಯದಲ್ಲಿ ಸಹಪ್ರವಾಸಿಗಳಲ್ಲಿ ಒಬ್ಬರಾಗಿದ್ದ ತಾರಾಬೆಹನ್ನರ ಮರಣದಿಂದಾಗಿ ಮನಸ್ಸಿಗಾದ ಅತೀವ ವೇದನೆ, ಆ ಸಂದರ್ಭದಲ್ಲಿ ತೋರಿದ ಧೈರ್ಯ, ಕರ್ತವ್ಯಪ್ರಜ್ಞೆ; ಟೆಹರಿಯಿಂದ ಮುಂದೆ ಹೋಗುವಾಗ ದುಃಖಿಸುತ್ತಿದ್ದ ಓರ್ವ ಅಸಹಾಯ ಹೆಣ್ಣು ಮುದುಕಿಗೆ ಧೈರ್ಯ ತುಂಬಿ ಸಹಾಯ ಮಾಡುವಾಗ ವ್ಯಕ್ತಗೊಂಡ ಕಾರುಣ್ಯಭಾವ; ಗೋಮುಖದ ದಾರಿ ಅತ್ಯಂತ ಇಕ್ಕಟ್ಟಿನದಾಗಿದ್ದರೂ ಅಲ್ಲಿಗೆ ಹೋಗುವುದು ಬೇಡ ಎಂದು ಎಚ್ಚರಿಸಿದರೂ ಉತ್ಸಾಹವೊಂದೇ ಚೇತನಶಕ್ತಿಯಾಗಿ ಪರಮೇಶ್ವರನ ಮೇಲೆ ಭಾರಹಾಕಿ ಪ್ರಯಾಣ ಮುಂದುವರಿಸಿ ಗೋಮುಖವನ್ನು ಕಷ್ಟದಿಂದ ತಲುಪುವಲ್ಲಿ ವ್ಯಕ್ತವಾಗುವ ಮನೋದೃಢತೆ; ಬದರೀನಾಥದ ಪುಂಡರ ಕಾಟವನ್ನು ನಿವಾರಿಸಿ ಅವರ ಮನಃಪರಿವರ್ತನೆ ಮಾಡುವಲ್ಲಿ ತೋರಿದ ಧೈರ್ಯ-ಹೀಗೆ

ಒಂದೊಂದು ಘಟನೆಯೂ ನಮ್ಮ ನೆನಪಿನಾಳದಲ್ಲಿ ಚಿರವಾಗಿ ಉಳಿಯುತ್ತವೆ. ಬರಿಯ ಹಿಮಾಲಯ ದರ್ಶನ ಮಾತ್ರ ಇಲ್ಲಿ ಇಲ್ಲ; ಅಲ್ಲಿನ ಜನತೆಯ ಚಿತ್ರಣವನ್ನೂ ರಮ್ಯವಾಗಿ ಇಲ್ಲಿ ಮೂಡಿಸಲಾಗಿದೆ.

ಈ ಪುಸ್ತಕದ ಗಮನಾರ್ಹ ಗುಣವೆಂದರೆ ಅದರ ಕಾವ್ಯಮಯ ಶೈಲಿ. ವರ್ಣನೆಗಳಲ್ಲಿ ಕವಿಹೃದಯದ ತನ್ಮಯೀಭಾವವನ್ನು ಕಾಣುತ್ತೇವೆ. ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಕೆಲವೆಡೆ ಕಾಣುವ ಪ್ರಕೃತಿಯ ರಮ್ಯ ವಿಲಾಸದ ಸೊಬಗನ್ನು ವರ್ಣಿಸುವ ಈ ಭಾಗವನ್ನು ನೋಡಿ:

"ಪರ್ವತರಾಜನು ಪಚ್ಚೆದುಪ್ಪಳದ ರೇಶಿಮೆಯ ಅಂಗಿಯನ್ನೇ ತೊಟ್ಟಂತೆ ತೋರುವುದು. ಆ ಚಿಕ್ಕ ಚಿಕ್ಕಗಳಂದದ ಹೂವು ಚಿಗುರುಗಳುಳ್ಳ ಗಿಡಗಳ ಶೋಭೆಯು ಬಹಳ ಮೋಹಕವೆನಿಸುವುದು! ಎತ್ತರದ ನಾಲ್ಕೂ ನಿಟ್ಟಿನ ನೋಟವನ್ನು ಇದಿರಿಸುವ ಪರ್ವತದ ಪ್ರೇಕ್ಷಣೀಯತೆಯು, ಎಣೆಯಿಲ್ಲದ ಐಶ್ವರ್ಯದಿಂದ ಒಪ್ಪುವುದು. ಸೀಮಾತೀತ, ಕಾಲಾತೀತ ಶೋಭಾಶಾಲಿತೆಯು ಪ್ರತ್ಯಯಕ್ಕೆ ಬರುವುದು. ಕಪ್ಪು ಮೋಡಗಳ ತೇಲ್ನೆಳಲು ಈ ಪರ್ವತಗಳ ಮೇಲೆ ಹಬ್ಬಿ ಬರುವಾಗ, ನೀಲ ನೀರಲ ಬೆಳಕಿನ ಕಲೆಗಳು ಹಸಿರುನೆಲದ ಮೇಲೆ ಬಿದ್ದು ಅಲ್ಲಿಯ ಸೊಬಗು ಇನ್ನಷ್ಟು ವಿಲೋಭನೀಯವಾಗಿ ಬೆಳೆಯುತ್ತದೆ. ಈ ಮೋಡಗಳ ನಡುವಿನಿಂದ ಸೂರ್ಯ ಕಿರಣಗಳು ಹಿಮದ ಮೇಲೆ ಬಿದ್ದು ಪರಾವರ್ತನೆ ಹೊಂದಿದಾಗ ಅಲ್ಲಿಯ ನೋಟದ ಬೆಡಗು ಮತ್ತಿಷ್ಟು ನವೋನವವಾಗಿ ಒಪ್ಪುತ್ತದೆ-ಅನುಪಮವೆನಿಸುತ್ತದೆ. ಮಳೆಯೆಲ್ಲ ಮೊಗೆಮೊಗೆದು ಬಿದ್ದು ಮುಗಿದಮೇಲೆ, ಬೆಟ್ಟದಂಚಿನ ಬಿಸಿಲಿನ ಬೇಗೆಗೆ ಆರಿದ ಉರಿದ ಒಣ ನೆಲದಿಂದ ತೇವ ತಂಗೊಳಗಳಿಂದ ಎದ್ದು ಮುಸುಕುವ ಮಂಜಿನ ಉಗಿಹೊಗೆಯ ತರವಿರಲ ಚಿತ್ರವು ಅಲೌಕಿಕ ಚೇತೋಹಾರಿಯಾಗಿರುತ್ತದೆ. ಆಗ ಚಂದ್ರಕಿರಣನ ಪ್ರತಾಪತಾಪದಿಂದ ಸಂತಾಪಗೊಂಡ ಧರೆಯು, ಬಿಸಿಯಾಗಿ ನಿಟ್ಟುಸಿರು ಬಿಡುವಂತೆನಿಸುವುದು..."

ಶ್ರೀ ಎಸ್.ಎಲ್. ಕುಲಕರ್ಣಿಯವರು ಇಂಗ್ಲಿಷ್‌ನಲ್ಲಿ ಬರೆದಿದ್ದ **ಭಾರತ ದರ್ಶನ** ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದವರು ಶ್ರೀ ಕಲ್ಯಾಣರಾವ್ ದೇಶಪಾಂಡೆ. ಇಲ್ಲಿ ಮೂಲ ಲೇಖಕರು ತಮ್ಮ ಪತ್ನಿಯೊಂದಿಗೆ ಕೈಗೊಂಡ ದಕ್ಷಿಣ ಹಾಗೂ ಉತ್ತರ ಭಾರತಗಳ ಪ್ರವಾಸ ಕಥನವನ್ನು ನೀಡಿರುವರು. ಇದು ಪ್ರವಾಸಿ ಸ್ಥಳಗಳ ಪೂರ್ಣಮಾಹಿತಿ ಕೋಶ. ಪ್ರವಾಸಿಗರಿಗೆ ಬೇಕಾದ ಅಗತ್ಯ ಮಾಹಿತಿಗಳನ್ನು ಲೇಖಕರು ಒದಗಿಸಿರುವರು. ಇದನ್ನು ಪ್ರವಾಸ ಕಥನ ಎನ್ನುವುದಕ್ಕಿಂತ ಉಪಯುಕ್ತ ಮಾರ್ಗದರ್ಶಿ ಎನ್ನಬಹುದು. ಪ್ರವಾಸಿ ತಾಣಗಳ ಚಿತ್ರಗಳೂ ಇದರಲ್ಲಿ ಸೇರ್ಪಡೆಯಾಗಿದೆ.

# ಉಪಸಂಹಾರ

"ಗತಕಾಲದ ಮತ್ತು ವಿದೇಶಗಳ ಕುರಿತಾದ ಅರಿವು ಮಾನವನ ಬುದ್ಧಿಯನ್ನು ಬೆಳೆಸುವುದು ಮತ್ತು ಅಲಂಕರಿಸುವುದು."

**-ಲಿಯನಾರ್ಡೋ ಡಾವಿಂಚಿ**

**ಮೂ**ರು ದಶಕಗಳ ಹಿಂದೆ ಪ್ರವಾಸವು ಕಾಲ ಹಾಗೂ ಹಣವನ್ನು ವಿನಿಯೋಗಿಸಲು ಸಮರ್ಥರಾದವರಿಗೊಂದು ಭೋಗ ವಸ್ತು (Luxury Product) ಆಗಿದ್ದಿತ್ತು. ಇತ್ತೀಚಿನ ದಿನಗಳಲ್ಲಿ ವಿದೇಶ ಪ್ರವಾಸ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. ಪ್ರಗತಿಪರ ರಾಷ್ಟ್ರಗಳು ಸಹಾ ತಮ್ಮ ಪ್ರಜೆಗಳು ರಜೆಯಲ್ಲಿ ವಿದೇಶಗಳಿಗೆ ಹೋಗಲು ಅನುಕೂಲವಾಗುವಂತೆ ನಿಯಮಾವಳಿಗಳನ್ನು ಉದಾರಗೊಳಿಸುತ್ತಲಿವೆ. ಅಂತಹ ರಾಷ್ಟ್ರಗಳಲ್ಲಿ ಭಾರತವೂ ಒಂದು. ಪ್ರಪಂಚದಾದ್ಯಂತ ಪ್ರವಾಸೋದ್ಯಮವು ಅಭಿವೃದ್ಧಿಗೊಳ್ಳುತ್ತಿದ್ದರೂ, ೧೯೮೨ರಲ್ಲಿ ದಕ್ಷಿಣ ಏಷ್ಯಾ ತನ್ನ ಗರಿಷ್ಠ ಬೆಳವಣಿಗೆಯನ್ನು ದಾಖಲಿಸಿತು. ಯಾರೇ ಆಗಲಿ ಈ ಭಾಗದಲ್ಲಿ ಆದರ ಅದ್ಭುತ ಬೆಳವಣಿಗೆಯನ್ನು ಲಕ್ಷಿಸುವಂತಿತ್ತು. ವಿದೇಶಗಳಲ್ಲಿ ಪ್ರವಾಸಿಗರಿಗೆ ಹೊಸ ಅನುಭವ ಪ್ರಪಂಚ ಕೈಬೀಸಿ ಸ್ವಾಗತಿಸುತ್ತದೆ. ಭಾರತೀಯ ಪರಿಸರಕ್ಕೆ ಭಿನ್ನವಾದ ಪರಿಸರವನ್ನೂ, ಕೈಗಾರಿಕೆ, ವಿಜ್ಞಾನ ಹಾಗೂ ಆರ್ಥಿಕ ರಂಗಗಳಲ್ಲಿನ ಅದ್ಭುತವಾದ ಪ್ರಗತಿಯನ್ನೂ, ಸುಖೀಜೀವನಕ್ಕೆ ಅಗತ್ಯವೆನ್ನಿಸುವ ಸೌಲಭ್ಯಗಳನ್ನೂ ಅಚ್ಚರಿಯ ಕಣ್ಣುಗಳಿಂದ ಪ್ರವಾಸಿಗರು ನೋಡುವರು. ಕೈಗಾರಿಕೆ, ವಿಜ್ಞಾನ ಹಾಗೂ ಆರ್ಥಿಕ ರಂಗಗಳ ಅದ್ಭುತ ಪ್ರಗತಿ ಅಲ್ಲಿ ಮಾನವ ಸುಖ-ಶಾಂತಿಗಳಿಗೆ ಹೇಗೆ ಮಾರಕವಾಗಿವೆ, ಸ್ವಚ್ಛಂದ ಲೈಂಗಿಕ ಜೀವನ ಅಲ್ಲಿನ ಗೃಹಶಾಂತಿಯನ್ನು ಹೇಗೆ ನುಚ್ಚುನೂರು ಮಾಡಿದೆ, ಹತೋಟಿ ತಪ್ಪಿದ ಯುವಪೀಳಿಗೆ ಮದ್ಯಪಾನ ಹಾಗೂ ಮಾದಕ ಔಷಧಗಳ ಸೇವನೆಯಿಂದ ಸುಲಭ ಗಳಿಕೆಗಾಗಿ ಇಲ್ಲವೆ ವಿನೋದಕ್ಕಾಗಿ ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರಗಳಲ್ಲಿ ಹೇಗೆ ಮೈಮರೆತಿದೆ ಎಂಬುದನ್ನೂ ನಮ್ಮ ಪ್ರವಾಸಿಗರು ಕಂಡಿರುವರು. ವೈಜ್ಞಾನಿಕ ಪ್ರಗತಿ ಪಾಶ್ಚಾತ್ಯ ಸಮಾಜದ ನೆಮ್ಮದಿಯನ್ನು ಧೂಳೀಪಟ ಮಾಡಿದೆ. ತಮ್ಮ ಬದುಕಿನಲ್ಲಿ ಶಾಂತಿ ಸಮಾಧಾನಗಳನ್ನು ಕಾಣದ ಅವರು ಭಾರತದ ಸಾಮಾಜಿಕ ಹಾಗೂ ಕೌಟುಂಬಿಕ ಜೀವನ ವಿಧಾನವನ್ನು

ಮೆಚ್ಚುತ್ತಿರುವರು. ಭಾರತದ ಧರ್ಮ-ಸಾಹಿತ್ಯ-ಸಂಸ್ಕೃತಿಗಳ ಬಗೆಗೆ ವಿಶೇಷವಾದ ಆಸಕ್ತಿಯನ್ನು ತಾಳುತ್ತಿರುವರು. ಅವರ ಆಸಕ್ತಿ ಆಧ್ಯಾತ್ಮದತ್ತ ತಿರುಗುತ್ತಿದ್ದು ವೇದ, ಉಪನಿಷತ್ತು, ಯೋಗ ಮೊದಲಾದವುಗಳ ಅಭ್ಯಾಸದಿಂದ ಶಾಂತಿ-ನೆಮ್ಮದಿಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವರು.

ವಿದೇಶ ಪ್ರವಾಸ ಮಾಡಿದ ನಮ್ಮವರು ಅಲ್ಲಿನ ಸುಖ-ಸಮೃದ್ಧಿ-ಪ್ರಗತಿ-ಶುಚಿಯಾದ ನಾಜೂಕು ಜೀವನ-ಶಿಸ್ತು-ಸೌಲಭ್ಯ ಇವುಗಳನ್ನು ನೋಡಿ ನಮ್ಮ ಸ್ಥಿತಿಗತಿಗಳೊಂದಿಗೆ ಅವನ್ನು ತುಲನೆ ಮಾಡಿ ನಮ್ಮ ಹಿಂದುಳಿಕೆಯ ಬಗೆಗೆ ಮನಸ್ಸು ಚಿಕ್ಕದು ಮಾಡಿಕೊಂಡು ಹೀನೈಸಿರುವುದೂ ಉಂಟು. ನಮ್ಮ ಹಿಂದುಳಿಕೆಗೆ ಅದರದೇ ಆದ ಕಾರಣಗಳುಂಟು. ನಮ್ಮವರ ಸೋಮಾರಿತನ, ರಾಜಕೀಯ ಹಾಗೂ ಸಾಮಾಜಿಕ ಶೋಷಣೆ, ಅವಿದ್ಯೆ, ಮೋಸ, ವಂಚನೆ, ಹುಸಿತನ, ಡಾಂಭಿಕ ಜೀವನ, ಪರಂಪರಾಗತ ಮೂಢನಂಬಿಕೆ, ಬೆಳೆದು ಬಂದಿರುವ ಅರ್ಥವಿಹೀನ ಆಚರಣೆ-ಪದ್ಧತಿಗಳು -ಹೀಗೆ ಅನೇಕ ಕಾರಣಗಳನ್ನು ನಮ್ಮ ಹಿಂದುಳಿಕೆಗೆ ಕೊಡಬಹುದು. ನಮ್ಮಲ್ಲಿ ಎಲ್ಲವೂ ಸರಿಯಾಗಿದೆ, ನಮ್ಮದು ನೆಮ್ಮದಿಯ ಬದುಕು ಎಂಬ ಹುಸಿ ಸಿದ್ಧಾಂತ ಕೆಲವರದು. ಈ ಬಗೆಯ ಅತಿರೇಕದ ಅಭಿಮಾನವೂ ಸಲ್ಲದು. ನಮಗೆ ನಮ್ಮ ದೇಶದ ಪ್ರಗತಿಗೆ ಬೇರೆಯವರಿಂದ ಕಲಿಯಬೇಕಾದ ಅನೇಕ ವಿಷಯಗಳಿವೆ. ಅನ್ಯದೇಶಗಳ ಸಂಚಾರದಿಂದ ನಾವು ನಮ್ಮ ಕೊರತೆಯನ್ನು ಕಂಡುಕೊಳ್ಳಬಹುದು. ಮಿಂಚಿನ ಗತಿಯಲ್ಲಿ ನಮ್ಮ ಸುತ್ತಮುತ್ತ ಬದಲಾವಣೆಗಳಾಗುತ್ತಿರುವಾಗ, ಜನ ಮುನ್ನಡೆಯುತ್ತಿರುವಾಗ, ಸುಖ-ಸಂತೃಪ್ತಿಗಳ ಕೀಲಿ ಕೈಯನ್ನು ಹೊಂದಿರುವಾಗ, ಆ ತೀವ್ರ ಸ್ವರೂಪದ ಮಾರ್ಪಾಟಿಗೆ ಕಾರಣಗಳೇನು? ಹಿನ್ನೆಲೆಯೇನು? ಎಂಬುದರ ತಿಳಿವಳಿಕೆ ಹೊಂದದಿದ್ದರೆ ನಮ್ಮ ಪಾಲಿಗೆ ಅದೊಂದು ಬಹುದೊಡ್ಡ ನಷ್ಟ. ಈ ತಿಳುವಳಿಕೆ ಪುಸ್ತಕ ಹಾಗೂ ಪ್ರಸಾರ ಮಾಧ್ಯಮಗಳ ಮೂಲಕ ಆಗುವುದಾದರೂ ಸಾಕ್ಷಿಕ ಅನುಭವ ಬೇರೆಲ್ಲ ರೀತಿಯ ಪರಿಣಾಮಗಳಿಗಿಂತ ತೀವ್ರತರವಾದುದರಿಂದ ಪ್ರವಾಸ ಇಲ್ಲಿ ಮುಖ್ಯವಾಗುತ್ತದೆ. ನಮ್ಮ ಪ್ರಗತಿಗೆ ಅಡ್ಡಿ ಯಾವುದು ಎಂಬುದು ಸ್ಪಷ್ಟವಾಗಿ ತಿಳಿಯಬೇಕಾದರೆ ನಾವು ಅನ್ಯರನ್ನು, ಅವರ ಜೀವನವಿಧಾನವನ್ನು, ಅವರ ಪ್ರಗತಿಯ ಮೂಲರಹಸ್ಯವನ್ನು ಮೊದಲಿಗೆ ಅರಿಯಲು ಪ್ರಯತ್ನಿಸಬೇಕು. ಈ ದಿಶಯಲ್ಲಿ ಫ್ರೆಂಚ್ ಜನರ ಸೌಜನ್ಯ ಪೂರಿತ ನಡಾವಳಿ, ರಷ್ಯನ್ನರ ತುಟಿಪಿಟಿಕ್ಕೆನ್ನದ ದುಡಿತ, ಜರ್ಮನರ ರಾಷ್ಟ್ರಪ್ರೇಮ ಹಾಗೂ ನಾಡಿನ ಪ್ರಗತಿಗಾಗಿ ಅವರ ಕಣ್ಣು ಕಾಣುವ ಕನಸು, ಸ್ವಿಜರ್ಲಂಡಿನವರ ತಾಂತ್ರಿಕ ಕೌಶಲ, ಜಪಾನೀಯರ ಅದ್ಭುತ ಕೈಗಾರಿಕಾ ಪ್ರಗತಿ, ಬ್ರಿಟಿಷರ ನಿಸರ್ಗ ಪ್ರೇಮ-ಕಲಾಭಿಮಾನ, ಅಮೆರಿಕನ್ನರ ನಾಗರಿಕ ಪ್ರಜ್ಞೆ-ಇವೆಲ್ಲವೂ ನಮಗೆ ಆದರ್ಶಗಳಾಗಬೇಕು.

ನಮ್ಮ ಬದುಕನ್ನು ರೂಪಿಸುವಲ್ಲಿ, ಶ್ರೀಮಂತಗೊಳಿಸುವಲ್ಲಿ, ಉತ್ಸಾಹ ಪುಟಿಸುವ ಶಕ್ತಿಗಳಾಗಬೇಕು; ನಮ್ಮ ಜೀವನಕ್ಕೆ ಹೆಚ್ಚಿನ ಕಳೆಯನ್ನು ತಂದು ಕೊಡುವ ಚೈತನ್ಯವಾಹಿಗಳಾಗಬೇಕು. ಅದೊಂದು ಜೀವನ ವಿಧಾನ (way of life)ವಾಗಬೇಕು; ಬದುಕನ್ನು ಹೆಚ್ಚು ಅರ್ಥಪೂರ್ಣವಾಗಿ ಸವಿಯಲು ಅದೊಂದು ಮಾಧ್ಯಮವಾಗಬೇಕು.

ಪ್ರವಾಸ ಸಾಹಿತ್ಯ ಏಕೆ ಬೇಕು? ಅದರ ಲೇಖಕರಿಗೆ ಇರಬೇಕಾದ ಅರ್ಹತೆಗಳಾವುವು? ಈ ಪ್ರಶ್ನೆಗಳಿಗೆ ಡಾ. ಹಾ.ಮಾ. ನಾಯಕ ಅವರು ಹೀಗೆ ವಿವರಣೆ ನೀಡಿರುವರು:

"...ಪ್ರವಾಸ ಕಥನ ಲೇಖಕರಿಗೆ ಅನೇಕ ಅರ್ಹತೆಗಳು ಅಗತ್ಯ. ಆಸಕ್ತಿಯ ಜೊತೆಗೆ ಕುತೂಹಲವಿರಬೇಕು; ಹೊಸತಾದುದನ್ನು ತಿಳಿಯುವುದಕ್ಕೆ ಪ್ರಯತ್ನ ಪಡಬೇಕು; ನೋಡಿದುದರ ಬಗೆಗೆ ಮಾಹಿತಿ ಸಂಗ್ರಹಿಸಬೇಕು; ಇತಿಹಾಸದ ಜ್ಞಾನವಿರಬೇಕು. ಭೂಗೋಳದ ಪರಿಚಯವಿರಬೇಕು; ಬದುಕಿನ ವೈವಿಧ್ಯಗಳನ್ನು ಗ್ರಹಿಸುವ, ಅವನ್ನು ಸಮನಾಗಿ ನೋಡುವ ಶಕ್ತಿ, ಸಮಚಿತ್ತಗಳನ್ನು ಪಡೆದಿರಬೇಕು; ಹೊಸದಾಗಿ ಪರಿಚಿತರಾದವರೊಡನೆ ಹೊಂದಿಕೊಂಡು ಹೋಗುವ ಗುಣವಿರಬೇಕು. ಇದೆಲ್ಲದರ ಜೊತೆಗೆ ಬರೆಯುವ ಶಕ್ತಿ ಇರಬೇಕು. ಯಾವುದನ್ನು ಬರೆಯಬೇಕು, ಯಾವುದನ್ನು ಬಿಡಬೇಕು ಎಂಬುದರ ಬಗೆಗೆ ತಾರತಮ್ಯ ಜ್ಞಾನವಿರಬೇಕು. ಪ್ರವಾಸ ಕಥನದ ಬರವಣಿಗೆ ಚರಿತ್ರೆಯೋ, ಭೂಗೋಳವೋ ಆಗಬಾರದು; ದಿನಚರಿಯ ನೀರಸ ವರದಿಯೂ ಆಗಬಾರದು. ಅದು ಅನುಭವದ ಅಭಿವ್ಯಕ್ತಿ. 'ಕಂಡ'ದ್ದನ್ನು 'ಕಾಣಿಸು'ವ ಕಲೆ. ಆದ್ದರಿಂದಲೇ ಪ್ರವಾಸ ಕಥನ ಬರವಣಿಗೆ ಸುಲಭವಲ್ಲ. ಅತ್ಯಂತ ಸುಂದರವಾದ ಪ್ರವಾಸ ಕಥನ, ಖಂಡಿತವಾಗಿಯೂ ಸೃಜನಶೀಲ ಕೃತಿಯೆನ್ನಿಸಿಕೊಳ್ಳುತ್ತದೆ. ಅದರ ಸ್ವರೂಪ ಸಂಕೀರ್ಣವಾದದ್ದು. ಅದು ಕಥೆ, ಪ್ರಬಂಧ, ವಿಚಾರ, ವಿಮರ್ಶೆ ಮೊದಲಾದವನ್ನೆಲ್ಲ ಒಳಗೊಳ್ಳಬಹುದಾದ ಪ್ರಕಾರ. ಒಳ್ಳೆಯ ಪ್ರವಾಸ ಕಥನ ನಮಗೆ ಸಂತೋಷ ಕೊಡುವುದರ ಜೊತೆಗೆ, ನಮ್ಮ ಅನುಭವವನ್ನು ವಿಸ್ತರಿಸುತ್ತದೆ. ಅದು ವಸ್ತುಸ್ಥಿತಿಗಳ ದಾಖಲೆಯೂ ಹೌದು; ಆಲೋಚನೆ ಅನುಭವಗಳ ಏರಿಳಿತ ದಾಖಲೆಯೂ ಹೌದು. ಬಹುಶಃ ಈ ಕಾರಣಗಳಿಂದಲೇ ಒಳ್ಳೆಯ ಪ್ರವಾಸ ಕಥನಗಳು ಅಪರೂಪವಾಗಿರುವುದು."

-ಸುವರ್ಣ ಮಧುಚಂದ್ರ, ಮುನ್ನುಡಿ, ಪು. V.

ಪ್ರವಾಸ ಸಾಹಿತ್ಯ ಏಕೆ ಬೇಕು ಎನ್ನುವ ಪ್ರಶ್ನೆಗೆ ಪ್ರವಾಸಿಗರಾದ ಪ್ರೊ. ಸಿ.ಹೆಚ್. ಮರಿದೇವರು ತಮ್ಮದೇ ಆದ ಕಾರಣವನ್ನು ಹೀಗೆ ಕೊಡುವರು:

"...ವಿದೇಶ ಪ್ರವಾಸ ಹೋದವರು ತಾವು ಕಂಡುಂಡು ಅನುಭವಿಸಿದ ಸಂಗತಿಗಳನ್ನು, ನೋಡಿದ ಪ್ರೇಕ್ಷಣೀಯ ಸ್ಥಳ ಮತ್ತು ಅವುಗಳ ಮಹತ್ವವನ್ನು ಬಹುಜನಕ್ಕೆ ಹೇಳುವ ಏಕೈಕ ಮಾಧ್ಯಮವೆಂದರೆ ಪ್ರವಾಸ ಸಾಹಿತ್ಯ ರಚನೆ. ಪ್ರವಾಸ ಸಾಹಿತ್ಯದ ಮೂಲಕ ಅದನ್ನು ಹೇಳದಿದ್ದಲ್ಲಿ ಅವು ತನ್ನೊಂದಿಗೆ ತನ್ನ ಮರೆವು ಕೂಪಕ್ಕೆ ತಳ್ಳಲ್ಪಟ್ಟು ಯಾರಿಗೂ ಹೇಳಲಾರದವುಗಳಾಗುತ್ತವೆ. ಆದ್ದರಿಂದ ಪ್ರವಾಸ ಸಾಹಿತ್ಯದ ಮೂಲಕ ಅವುಗಳನ್ನು ಹಿಡಿದಿಡುವುದು ಮೇಲು. ಅದು ಉತ್ತಮ ಸಂಸ್ಕೃತಿಯ ಬೆಳವಣಿಗೆಗೆ ಪೂರಕ... ಥಾಯ್‌ಲ್ಯಾಂಡಿನ 5 1/2 ಟನ್ ಸಾಲಿಡ್ ಗೋಲ್ಡ್ ಬುದ್ಧನನ್ನು ಸ್ವತಃ ನೋಡುವುದು ನೂರಕ್ಕೆ ೮೦ರಿಂದ ೯೦ ಜನಕ್ಕೆ ಸಾಧ್ಯವಾಗದಿರಬಹುದು. ಆದರೆ, ಸ್ವತಃ ನೋಡಿದವರಿಂದ ಅದರ ಕಥೆ ಕೇಳುವುದೇ ಒಂದು ಪುಣ್ಯಚರಿತೆ ಎನಿಸುವುದಿಲ್ಲವೇನು? ಅಂತೆಯೇ ಮಲೇಷಿಯಾದ ಬಾಟುಕೇವ್ಸ್‌ಗಳನ್ನು, ಜಪಾನಿನ ಟೋಕಿಯೋ ಗೋಪುರವನ್ನು ಮತ್ತು ಜಪಾನಿನ ಗಂಧಕಾಮ್ಲದ ಪರ್ವತಗಳನ್ನು ನೋಡದವರಿಗೆ, ನೋಡಲಾಗದವರಿಗೆ ಕೇಳುವುದೇ, ಓದುವುದೇ ಒಂದು ಅಪೂರ್ವನಿಧಿ ಕಂಡಂತಾಗುವುದಿಲ್ಲವೇನು? ಇದಕ್ಕಾಗಿಯಾದರೂ ವಿದೇಶ ಪ್ರವಾಸ ಸಾಹಿತ್ಯ ಅತ್ಯವಶ್ಯಕ..."

(ಆಗ್ನೇಷಿಯಾ ಮತ್ತು ಜಪಾನ್ ರಾಷ್ಟ್ರಗಳಲ್ಲಿ ಮರಿದೇವರು, ಅರಿಕೆ, ಪು. xiii)

ಪ್ರವಾಸಿಗಳ ಪಾಲಿಗೆ ವಿದೇಶಗಳು ಸ್ವರ್ಗ. ವಿದೇಶಗಳಲ್ಲಿ ಪ್ರವಾಸಿಗರಿಗೆಬೇಕಾದ ಎಲ್ಲ ಅನುಕೂಲಗಳನ್ನು ಕಲ್ಪಿಸಲಾಗಿದೆ. ಅಧಿಕಾರಿಗಳು ಹಾಗೂ ಅವರ ಕೈಕೆಳಗಿನ ಸಿಬ್ಬಂದಿ ವರ್ಗದವರು ಪ್ರವಾಸಿಗರೊಡನೆ ಸೌಜನ್ಯಪೂರ್ವಕವಾಗಿ ವ್ಯವಹರಿಸುವರು. (ಯಾವುದೇ ಸಾರ್ವಜನಿಕ ಸೇವಾ ಕಛೇರಿಗಳಿಗೆ ಭೇಟಿ ನೀಡಿದರೂ ಪ್ರವಾಸಿಗೆ ನಗೆಯೊಡನೆ ಸ್ವಾಗತ ಕಾದಿರುತ್ತದೆ. ನಮ್ಮ ಕೆಲಸ ಎಷ್ಟೇ ಶ್ರಮದಾಯಿಯಾಗಿದ್ದರೂ, ಮುಖದಲ್ಲಿ ಬೇಸರ ತೋರಿಸದೆ, ನಗುನಗುತ್ತ ಮಾಡಿಕೊಡುವರು. ನಮ್ಮ ಸಮಸ್ಯೆಗಳಿಗೆ ತಮ್ಮಿಂದ ಸಾಧ್ಯವಾದಷ್ಟು-ಕೆಲವು ಸಂದರ್ಭಗಳಲ್ಲಿ ಪ್ರವಾಸಿಗರಿಗೆ ನೆರವಾಗಬೇಕೆಂಬ ಉತ್ಸಾಹದಲ್ಲಿ ಗಂಟೆಗಟ್ಟಲೆ ಶ್ರಮವನ್ನು ಲೆಕ್ಕಿಸದೆ ದುಡಿಯುವರು-ನೆರವು ನೀಡುವರು. ನಕಾಶೆಗಳು, ಐತಿಹಾಸಿಕ ಪುರವಣಿಗೆಗಳು, ವರ್ಣರಂಜಿತ ಅತ್ಯಾಕರ್ಷಕ ಫೋಲ್ಡರ್ಸ್‌ಗಳು, ಮಾರ್ಗದರ್ಶಿಗಳು, ಹಣ ಬದಲಾವಣೆಗೆ ಅನುಕೂಲಗಳು ಪ್ರವಾಸಿಗಳ ಸಹಾಯಕ್ಕೆ ಬರುತ್ತವೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಹೋಗಲು ಬಸ್ಸು, ರೈಲು, ವಿಮಾನ, ಸೌಕರ್ಯಗಳಿರುತ್ತವೆ. ಸುರಂಗ ರೈಲುಗಳು ಮಧ್ಯರಾತ್ರಿ ೧೨ರವರೆವಿಗೂ ಪಟ್ಟಣದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಬಿಡುವಿಲ್ಲದೆ ಸಂಚರಿಸುತ್ತಿರುತ್ತವೆ. (ಅಮೆರಿಕದಲ್ಲಿ ವಿಮಾನ, ಟ್ರಕ್ಕು, ಬಸ್ಸು, ಕಾರುಗಳು

ರೈಲ್ವೆಯನ್ನು ತುಂಬ ದುಸ್ಥಿತಿಗೆ ನೂಕಿವೆ. ಅಲ್ಲಿ ಅದನ್ನು ಕೇಳುವವರೇ ಇಲ್ಲ.) ಇಡೀ ಅಮೆರಿಕವನ್ನು ಸುತ್ತಿ ಬರಲು ಬಸ್ ಹಾಗೂ ವಿಮಾನ ಸೌಕರ್ಯಗಳಿವೆ. ದೀರ್ಘ ಪ್ರವಾಸಕ್ಕೆ ಗ್ರೇಹೌಂಡ್ ಬಸ್‌ಗಳಿವೆ. ಪ್ರವಾಸಿಗಳಿಗೆ ಬೇಕಾದ ಎಲ್ಲ ಅನುಕೂಲಗಳನ್ನು ಈ ಗ್ರೇಹೌಂಡ್ ಬಸ್ಸಿನಲ್ಲಿ ಕಲ್ಪಿಸಲಾಗಿದ್ದು, ದೂರ ಪ್ರಯಾಣವೂ ಇಲ್ಲಿ ಆನಂದದಾಯಿಯಾಗಿರುತ್ತದೆ. ಪ್ರಯಾಣದ ದರವೂ ಇದರಲ್ಲಿ ಕಡಿಮೆ. ೩೨೫ ಡಾಲರ್ ಕೊಟ್ಟರೆ ಒಂದು ಟಿಕೆಟ್‌ನಲ್ಲಿ ೬೦ ದಿವಸ ಅಮೆರಿಕ ಮತ್ತು ಕೆನಡಾಗಳಲ್ಲಿ ಎಲ್ಲಿ ಬೇಕಾದರೂ ಸುತ್ತಬಹುದು, ಎಲ್ಲಿ ಬೇಕಾದರೂ ಹತ್ತಬಹುದು, ಇಳಿಯಬಹುದು. ೩೫೦ ಡಾಲರ್ ಕೊಟ್ಟರೆ ವಿಮಾನದಲ್ಲಿ ನಾಲ್ಕು ತಿಂಗಳು ಅಮೆರಿಕದಲ್ಲಿ ಸುತ್ತಾಡಬಹುದು, ಏಳು ಕಡೆ ತಂಗಬಹುದು. ಅದಕ್ಕಿಂತ ಹೆಚ್ಚಿಗೆ ಸ್ಥಳಗಳಲ್ಲಿ ತಂಗಬೇಕಾದರೆ ಅಂಥ ಒಂದೊಂದು ತಂಗಣೆಗೂ ಹತ್ತು ಡಾಲರ್ ಕೊಡಬೇಕಷ್ಟೆ.

ವಿದೇಶ ಪ್ರವಾಸ ಮಾಡುವವರು ಅಗತ್ಯ ವಿದೇಶೀವಿನಿಮಯ ಹಣವನ್ನು ಹೊಂದಿರಬೇಕು. ಅಮೇರಿಕಾದ ನಾಣ್ಯವಾದ ಡಾಲರ್ ಮತ್ತು ಇಂಗ್ಲಿಷ್ ನಾಣ್ಯ ಪೌಂಡು ಎರಡೂ ಯೂರೋಪಿನ ಎಲ್ಲ ದೇಶಗಳಲ್ಲಿ ಚಲಾವಣೆ ಆಗುತ್ತದೆ. ಮೊದಲೇ ಆಯಾ ದೇಶಗಳ ಗಡಿ ಸರಹದ್ದಿನ ಪಟ್ಟಣದಲ್ಲಿಯೋ ಅಥವಾ ಹೋದಕಡೆಯೋ ಬ್ಯಾಂಕಿಗೆ ಹೋಗಿ ಅವಶ್ಯವಿದ್ದಷ್ಟು ಆ ದೇಶದ ನಾಣ್ಯಕ್ಕೆ ಬದಲಾಯಿಸಿಕೊಂಡರೆ ವ್ಯವಹಾರ ಸುಲಭವಾಗುತ್ತದೆ. ಅಂತರರಾಷ್ಟ್ರೀಯ ವಿನಿಮಯ ಬ್ಯಾಂಕಿನಲ್ಲಿ ನಮಗೆ ಬೇಕಾದ ದೇಶದ-ಅಂದರೆ ಫ್ರಾನ್ಸ್‌ನ ಫ್ರಾಂಕ್, ಜಪಾನ್‌ನ ಯೆನ್, ಅಮೆರಿಕಾದ ಡಾಲರ್, ಇಂಗ್ಲೆಂಡ್‌ನ ಪೌಂಡ್, ಜರ್ಮನಿಯ ಫ್ರಾಂಕ್, ಇಟಲಿಯ ಲೀರಾ-ಹಣ ದೊರೆಯುತ್ತದೆ.

ಪ್ರವಾಸ ಸುಖಕಾರಿಯಾಗಲು ಮುಖ್ಯವಾಗಿ ಒಳ್ಳೆಯ ರಸ್ತೆಗಳಿರಬೇಕು. ನಿರ್ಭಾಗ್ಯ ಭಾರತೀಯ ಪ್ರವಾಸಿಗಳ ಪಾಲಿಗೆ ವಿದೇಶಗಳಲ್ಲಿನ ಹೆದ್ದಾರಿಗಳು ಬೆರಗನ್ನುಂಟು ಮಾಡುತ್ತವೆ. ವಿಶಾಲವಾದ ದೊಡ್ಡ ರಸ್ತೆಗಳಿಗೆ ಫ್ರೀವೇ ಎಂದು ಕರೆಯುವರು. ಒಂದರ ಪಕ್ಕದಲ್ಲಿ ಒಂದರಂತೆ ಎಂಟು ವಾಹನಗಳು ಧಾರಳವಾಗಿ ಓಡಾಡಲು ಅನುಕೂಲವಾಗುವಂತಹ ಭಾರಿ ರಾಜಮಾರ್ಗಗಳು. ನಾಲ್ಕು ವಾಹನಗಳು ಒಂದು ದಿಕ್ಕಿನಲ್ಲಿ ಹೋಗುವುದಕ್ಕೂ ನಾಲ್ಕು ವಾಹನಗಳು ಎದುರು ದಿಕ್ಕಿನಿಂದ ಬರುವುದಕ್ಕೂ ಅಲ್ಲಿ ವ್ಯವಸ್ಥೆ ಮಾಡಿರುತ್ತಾರೆ. ಪ್ರವಾಸಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಇಂಥ ಊರು ಇಷ್ಟು ಮೈಲಿ ದೂರದಲ್ಲಿದೆ ಎಂಬ ಭಾರಿ ಭಾರಿ ಬೋರ್ಡುಗಳು ಹೆಜ್ಜೆ ಹೆಜ್ಜೆಗೂ ಕಾಣಬರುತ್ತವೆ. ಮುಂದೆ ಎಷ್ಟು ದೂರದಲ್ಲಿ ಬಸ್ಸು ಕಾರುಗಳಿಗೆ ಬೇಕಾಗುವ ಪೆಟ್ರೋಲ್ ದೊರೆಯುತ್ತದೆಂಬುದರ ಸೂಚನಾ ಫಲಕಗಳು ಮಾರ್ಗಮುದ್ದಕ್ಕೂ ಅಲ್ಲಲ್ಲಿ ಕಾಣಸಿಗುತ್ತವೆ.

"ಹೈವೇಗಳಲ್ಲಿ ನಡುನಡುವೆ ಆಯಾಸ ಪರಿಹರಿಸಿಕೊಳ್ಳಲು ತಂಗುದಾಣಗಳನ್ನು ಕಟ್ಟಿರುತ್ತಾರೆ. ಇವು ಸಿಗುವ ಮೈಲುಗಟ್ಟಲೆ ಮೊದಲೇ ರಸ್ತೆ ಬದಿಯಲ್ಲಿ 'ಫುಡ್-ಗ್ಯಾಸ್-ರೆಸ್ಟ್' ಬೋರ್ಡು ದೊಡ್ಡದಾಗಿ ಕಣ್ಣಿಗೆ ಬೀಳುತ್ತದೆ. ಹೈವೇ ಪಕ್ಕದಲ್ಲೇ ತಂಗುದಾಣವಿದ್ದರೂ ನಾವು ತಕ್ಷಣ ತಿರುಗಿ ನೇರ ಅಲ್ಲಿಗೆ ಹೋಗುವ ಹಾಗೆ ಇಲ್ಲ. ಹಾಗೆ ತಿರುಗಿದರೆ ಹಿಂದಿನಿಂದ ಬರುತ್ತಿರುವ ಅತಿವೇಗದ ವಾಹನಗಳು ಢಿಕ್ಕಿಯಾಗಿ ಅಪಘಾತವಾಗಿಬಿಡುತ್ತದೆ ಎಂದು ಅವರು ಪ್ರತ್ಯೇಕ ತಿರುವುಗಳನ್ನು ಹೈವೇ ಬಿಟ್ಟು ನಂತರ ಹೋಗುವ ಹಾಗೆ ಮಾಡಿರುತ್ತಾರೆ. ನಾವು ಹೈವೇಗಳ ಪಕ್ಕಕ್ಕೆ ತಿರುಗಲು ನಿಯಮದ ಅನುಸಾರ ಅವರು ತಿಳಿಸಿದಷ್ಟು ದೂರ ಮುಂದೆ ಹೋಗಿ ಅಲ್ಲಿಂದ ವಾಪಸ್ಸು ಅದೇ ದಿಕ್ಕಿಗೆ ಬಂದು ತಂಗುದಾಣಕ್ಕೆ, ಪಕ್ಕದ ಊರುಗಳಿಗೆ ಹೋಗಬೇಕು. ಪುನಃ ಹೈವೇ ಸೇರಬೇಕಿದ್ದರೂ ಅದೇ ಕ್ರಮ.

ಅಲ್ಲಿ (ತಂಗುದಾಣದಲ್ಲಿ) ಒಳಗೆ ಹೋದೊಡನೆ ಒಂದು ರಿಸಪ್‌ಶನ್ ಕೋಣೆ. ಆ ಕೋಣೆಯಲ್ಲಿ ಆ ಜಿಲ್ಲೆಯ ಚಾರಿತ್ರಿಕ, ಸಾಂಸ್ಕೃತಿಕ, ಭೌಗೋಳಿಕ, ವ್ಯಾಪಾರ, ವಿಹಾರ ಸ್ಥಳಗಳ ಬಗ್ಗೆ ಬೇಕಾದಷ್ಟು ಕರಪುಸ್ತಕಗಳನ್ನಿಟ್ಟಿರುತ್ತಾರೆ. ಅದಕ್ಕೆ ಕ್ರಯ ಕೊಡಬೇಕಾಗಿಲ್ಲ. ಇಷ್ಟ ಬಂದಷ್ಟು ಆರಿಸಿಕೊಳ್ಳಬಹುದು. ಇನ್ನೊಂದು ಕೋಣೆಯಲ್ಲಿ ಪಯಣಿಗರಿಗೆ ಅಗತ್ಯವಾದ ಸೋಪು, ಟೂತ್‌ಪೇಸ್ಟ್, ಬ್ರಷ್, ಶ್ಯಾಂಪೂ, ಟ್ಯಾಂಪೂನ್, ಚೂಯಿಂಗ್ ಗಂ, ಲಿಪ್‌ಸ್ಟಿಕ್ ಇಂಥಹವನ್ನೆಲ್ಲಾ ಮಾರಾಟಕ್ಕಿಟ್ಟಿರುತ್ತಾರೆ. ಒಳಗಡೆ ಸದಾ ಚೊಕ್ಕಟವಾಗಿರುವ ಬಾತ್‌ರೂಂಗಳಿರುವುವು. ಮತ್ತೊಂದು ಇಲ್ಲಿನ ವಿಶೇಷವೆಂದರೆ, ಎಲ್ಲಿ ಹೋದರೂ ಅಂಗವಿಕಲರಿಗೆ ವಿಶೇಷ ಸೌಕರ್ಯ ಮಾಡಿರುತ್ತಾರೆ. ತಂಗುದಾಣಗಳ ಕಕ್ಕಸುಗಳಲ್ಲಿ ಸಹಾ ಕುರುಡರು, ಪೋಲಿಯೋ ರೋಗಿಗಳು, ಇಂಥವರಿಗೆಲ್ಲ ಅನುಕೂಲವಾಗುವಂತೆ ಪ್ರತ್ಯೇಕ ಕೈ ಹಿಡಿದುಕೊಂಡು, ಆಧಾರದಿಂದ ಕುಳಿತು ಎದ್ದು ಮಾಡುವ ಸ್ಟೆಯಿನ್‌ಲೆಸ್‌ಸ್ಟೀಲ್ ಟ್ಯೂಬುಗಳನ್ನು ಅಳವಡಿಸಿಟ್ಟಿರುತ್ತಾರೆ. ಅದು ಪ್ರತ್ಯೇಕ ಕೋಣೆ. ಮತ್ಯಾರೂ ಇದನ್ನು ಉಪಯೋಗಿಸುವುದಿಲ್ಲ.

ತಂಗುದಾಣದಲ್ಲಿ ಮುಖ ಕೈಕಾಲು ತೊಳೆದು ಬಂದಾಗ ಅಲ್ಲಿ ಒದ್ದೆ ಕೈ ಒರೆಸಿಕೊಳ್ಳಲು ಟಿಷ್ಯೂ, ಟವಲ್ ಯಾವುದೂ ಇಟ್ಟಿರುವುದಿಲ್ಲ. ಬದಲಾಗಿ ಒತ್ತಡದ ಬಿಸಿಗಾಳಿ ನಳ ಇರುತ್ತದೆ. ಒಂದು ನಿಮಿಷ ಆ ಗಾಳಿಗೆ ಕೈ ಒಡ್ಡಿದರೆ ಸಾಕು, ಕೈ ಒಣಗುತ್ತದೆ. ಹೊರಗೆ ಬಂದರೆ ಕೌಂಟರಿನಲ್ಲಿ ಸೊಗಸಾದ ಬಿಸಿ ಬಿಸಿ ಹವೆ ಕಾರುವ ಕಾಫಿ ಕಾದಿರುತ್ತದೆ. ಕಾಫಿಯನ್ನು ಕಾಗದದ ಲೋಟದಲ್ಲಿ ಬಗ್ಗಿಸಿಕೊಂಡು ಕುಡಿಯಬೇಕು.

ಕಾಫಿ ಜೊತೆಗೆ ಡೂನೆಟ್, ಸ್ಯಾಂಡ್‌ವಿಚ್ -ಇಂತಹ ತಿನಿಸುಗಳನ್ನು ಇಟ್ಟಿರುತ್ತಾರೆ.[೧] ರಸ್ತೆಯಲ್ಲಿ ಕಾರು ಕೆಟ್ಟು ನಿಂತರೆ ತುರ್ತಿನ ವೇಳೆಯಲ್ಲಿ ವಾಹನಗಳನ್ನು ನಿಲ್ಲಿಸುವುದಕ್ಕಾಗಿ ರಸ್ತೆ ಇಟ್ಟಿದ್ದಾರೆ. ಅಲ್ಲಿ ವಾಹನ ನಿಲ್ಲಿಸಿದ್ದರೆ ರೇಡಾರ್ ಮೂಲಕ ಸುದ್ದಿ ಹೋಗಿ ಪೊಲೀಸರು ಸಹಾಯಕ್ಕಾಗಿ ಬರುತ್ತಾರೆ. ವೈರ್‌ಲೆಸ್ ಮೂಲಕ ಅವರು ವಾಹನ ರಿಪೇರಿಗೆ ತಿಳಿಸುವರು. ಮೆಕ್ಯಾನಿಕ್ ಬಂದು ರಿಪೇರಿ ಮಾಡುವನು. ಇಲ್ಲದಿದ್ದರೆ ತನ್ನ ಗಾಡಿಗೆ ಕಟ್ಟಿರುವ ವಾಹನವನ್ನು ಸಿಕ್ಕಿಸಿಕೊಂಡು ಹೋಗುವನು. ನಮ್ಮಲ್ಲಿ ಮಾರ್ಗದಲ್ಲಿ ಎಲ್ಲೆಂದರಲ್ಲಿ ಜನ ಓಡಾಡುತ್ತಿರುತ್ತಾರೆ. ಹಸು, ಎಮ್ಮೆ, ಕತ್ತೆ, ಕುದುರೆಗಳೂ ಬೇಕಾಬಿಟ್ಟಿ ನಿಂತಿರುತ್ತವೆ. ಇವೆಲ್ಲವುಗಳ ನಡುವೆ ವಾಹನ ಚಾಲಕ ಜಾಗ ಮಾಡಿಕೊಂಡು ವಾಹನ ನಡೆಸಬೇಕಾಗುತ್ತದೆ. ಅಮೆರಿಕದ ರಸ್ತೆಗಳಲ್ಲಿ ಪ್ರಾಣಿಗಳು ಓಡಾಡುವುದಿರಲಿ ಜನ ಓಡಾಡುವುದು ದಂಡನಾರ್ಹ ಅಪರಾಧ. ಸಂಚಾರಿ ನಿಯಮಗಳು ಕಟ್ಟುನಿಟ್ಟಾಗಿದ್ದು ಅವುಗಳ ಅರಿವು ಇರುವ ಜನ ಬಹು ಎಚ್ಚರಿಕೆಯಿಂದ ನಿಯಮಪಾಲನೆ ಮಾಡುವರು. ಇಂತಿಂಥ ವಾಹನಗಳು ಇಂತಿಂಥ ಕಡೆಯೇ ಹೋಗಬೇಕು ಎಂಬುದನ್ನು ನಿರ್ಣಯಿಸಲಾಗಿದ್ದು, ಈ ನಿಯಮ ಉಲ್ಲಂಘಿಸುವವರ ಮೇಲೆ ಸಂಚಾರಿ ಪೋಲೀಸರು ಕ್ರಮ ಜರುಗಿಸುವರು. ನಿಯಮದ ಉಲ್ಲಂಘನೆಗೆ ದುಬಾರಿ ದಂಡ ತೆರಬೇಕಾಗಿ ಬರುವುದರಿಂದ ಜನ ಎಚ್ಚರದಿಂದಲೇ ಇರುವರು.

ವಿದೇಶಗಳಲ್ಲಿ ಊರಿಂದೂರಿಗೆ ಹೋಗುವಾಗ ಜನ ಕಾರುಗಳಲ್ಲಿ ಹೋಗುತ್ತಾರೆ ಇಲ್ಲವೆ ವಿಮಾನದಲ್ಲಿ ಹೋಗುತ್ತಾರೆ. ನಮ್ಮಲ್ಲಿ ಹಣವಂತರಿಗೆ ಮಾತ್ರ ವಿಮಾನ ಪ್ರಯಾಣ ಸಾಧ್ಯ. ಅಲ್ಲಿಯಾದರೂ ಸಾಮಾನ್ಯನಿಗೂ ವಿಮಾನ ಪ್ರಯಾಣ ಸಾಧ್ಯ. ನಮಗೆ ಬಸ್‌ಪ್ರಯಾಣ ಹೇಗೋ ಹಾಗೆ ಅವರಿಗೆ ವಿಮಾನ ಪ್ರಯಾಣ. ಕಾರು, ವಿಮಾನಗಳಲ್ಲಿ ಪ್ರಯಾಣ ಮಾಡಲು ಅನುಕೂಲವಿಲ್ಲದವರು ಬಸ್ಸುಗಳಲ್ಲಿ ಪ್ರಯಾಣ ಮಾಡುವರು. ಪ್ರಯಾಣಿಕರು ಎಷ್ಟೇ ಕಡಿಮೆ ಸಂಖ್ಯೆಯಲ್ಲಿದ್ದರೂ ಬಸ್ಸುಗಳು ಮಾತ್ರ ಸಕಾಲಕ್ಕೆ ಹೊರಡುತ್ತಲೇ ಇರುತ್ತವೆ. ಬಸ್ ಭರ್ತಿಯಾದರೆ ಬೇರೆ ಬಸ್ ವ್ಯವಸ್ಥೆ ಮಾಡಲಾಗುತ್ತದೆ. ಆಸನಗಳು ಸೊಗಸಾದ ಮೆತ್ತೆಯವು. ಕಾಲುಚಾಚಿ ಹಾಯಾಗಿ ಕುಳಿತು ಪ್ರಯಾಣ ಮಾಡಬಹುದು. ಒಂದು ಸಾವಿರ ಮೈಲಿ ಪ್ರಯಾಣ ಮಾಡಿದರೂ ಆಯಾಸವಾಗುವುದಿಲ್ಲ. ಬಸ್‌ಗಳಿಗೆ ಕಂಡಕ್ಟರುಗಳಿರುವುದಿಲ್ಲ; ಡ್ರೈವರ್ ಮಾತ್ರ ಇರುತ್ತಾನೆ. ಪ್ರವಾಸಿಗಳ ಲಗ್ಗೇಜನ್ನು ಇಡಲು ಬಸ್‌ನ ತಳಭಾಗದಲ್ಲಿ ಪ್ರತ್ಯೇಕ ಏರ್ಪಾಡು ಮಾಡಲಾಗಿರುತ್ತದೆ. ಸಾಮಾನುಗಳನ್ನು ಇಡುವವನು ಹಾಗೂ ದಾರಿಯಲ್ಲಿ ಹತ್ತುವ ಪ್ರಯಾಣಿಕರಿಗೆ ಟಿಕೆಟ್ ಕೊಡುವವನು ಡ್ರೈವರೇ. ಆತ ಸದಾ ಹಸನ್ಮುಖಿ, ವಿನಯಶಾಲಿ, ವಾಹನ ನಡೆಸುವ ವೇಳೆಯಲ್ಲಿ ಆತ ಬಹಳ ಜಾಗರೂಕನಾಗಿರುವನು.

---

೧. ನೋಡಿ: ನೀಳಾದೇವಿ : ನಾ ಕಂಡ ಆ ಖಂಡ, ಪು. ೬೯-೭೦.

ವಿದೇಶಗಳಲ್ಲಿ ಎಲ್ಲಿಯೇ ಪ್ರಯಾಣ ಮಾಡಲಿ ಪ್ರವಾಸಿಗೆ ಹಾಸಿಗೆ ಹೊದಿಕೆಗಳ ಯೋಚನೆಯೇ ಇಲ್ಲ. ರೈಲುಗಳ ಸ್ಲೀಪಿಂಗ್ ಕೋಚ್‌ಗಳಲ್ಲಿ ಶುಭ್ರವಾದ ಹಾಸಿಗೆ ಹೊದಿಕೆಗಳನ್ನು ನಾವು ಕಾಣಬಹುದು. ಒಬ್ಬರು ಬಳಸಿದ ಮರುದಿನವೇ ಶುಭ್ರಗೊಳಿಸಿದ ಹೊದಿಕೆಗಳು ಬೇರೊಬ್ಬ ಪ್ರಯಾಣಿಕರಿಗೆ ಸುಸಜ್ಜಿತವಾಗಿರುತ್ತವೆ. ಸಾಮಾನ್ಯ ಬೋಗಿಯಲ್ಲಿ ಕುಳಿತರೂ ಯಾವುದೋ ಅತಿಥಿಗೃಹದಲ್ಲಿ ಕುಳಿತಿರುವ ಅನುಭವ ನಮಗಾಗುತ್ತದೆ. ವೇಳೆಗೆ ಸರಿಯಾಗಿ ಬರುವ ರೈಲು, ನಿಲ್ದಾಣದಲ್ಲಿ ನಿಂತ ಕ್ಷಣ ಕಂಪಾರ್ಟ್‌ಮೆಂಟಿನ ಬಾಗಿಲುಗಳು ತನಗೆ ತಾನೆ ತೆಗೆದುಕೊಂಡು ಪ್ರಯಾಣಿಕರು ಹೊರಹೋಗಲು ದಾರಿ ಮಾಡಿಕೊಡುತ್ತವೆ. ರೈಲು ಹೊರಡುವ ಮುನ್ನ ಎಲ್ಲಾ ಕಂಪಾರ್ಟ್‌ಮೆಂಟಿನ ಬಾಗಿಲುಗಳು ತನಗೆ ತಾನೇ ಮುಚ್ಚಿಕೊಳ್ಳುತ್ತವೆ. ನೂಕುನುಗ್ಗಲು, ಜಾಗಕ್ಕಾಗಿ ತಿಕ್ಕಾಟ, ಕೂಗಾಟ ಎಲ್ಲಿಯೂ ಕಾಣಬರುವುದಿಲ್ಲ.

ಪಾಶ್ಚಾತ್ಯರಿಗೆ ಪ್ರವಾಸ ಅತ್ಯಂತ ಆನಂದದ ಸಂಗತಿ. ಬೇಸಗೆಯಲ್ಲಿ ವಿಶ್ರಾಂತಿಗಾಗಿ ಬೇರೆಡೆ ಹೋಗುವುದು ಇಲ್ಲಿಯ ಪ್ರತಿಯೊಬ್ಬ ವ್ಯಕ್ತಿಯ ಜೀವನ ಕ್ರಮ. ಅದಕ್ಕಾಗಿ ಅವರು ವರ್ಷದ ದುಡಿಮೆಯ ಒಂದು ಭಾಗವನ್ನು ಮೀಸಲಿಡುವರು. "ಒಬ್ಬ ಸಾಮಾನ್ಯ ಹೋಟೆಲ್ ನೌಕರನೂ ತಿಂಗಳಿಗೊಪ್ಪತ್ತು ಈ ರೀತಿ ಹೋಗುವುದರಿಂದ ಹೋಟೆಲ್ ಮಾಲೀಕ ಬೇರೊಬ್ಬರನ್ನು ತಾತ್ಕಾಲಿಕವಾಗಿ ನಿಯಮಿಸಿಕೊಳ್ಳಬೇಕಾಗುತ್ತದೆ. ಈ ಬೇರೊಬ್ಬ ಬಹುತೇಕ ವಿದ್ಯಾರ್ಥಿ. ಇಂತಹ ತಾತ್ಕಾಲಿಕವಾಗಿ ತೆರವಾದ ನಾನಾ ಉದ್ಯೋಗಗಳನ್ನು ಕೈಗೊಂಡು ಬೇಸಿಗೆಯ ಮೂರು ತಿಂಗಳು (ರಜಾಕಾಲದಲ್ಲಿ) ವಿದ್ಯಾರ್ಥಿ-ವಿದ್ಯಾರ್ಥಿನಿಯರು ದುಡಿಯುತ್ತಾರೆ; ಬಾಕಿಯಂತೆ ಓದುತ್ತಾರೆ..."[೨] ಬೇಸಿಗೆಯ ಬೇಗೆಯನ್ನು ಪರಿಹರಿಸಿಕೊಳ್ಳಲು ಅಲ್ಲಿನ ಜನ-ಗಂಡು ಹೆಣ್ಣು ಕೂಡಿ-ಸರೋವರದ ತೀರಕ್ಕೆ ಪ್ರಯಾಣ ಬೆಳಸುತ್ತಾರೆ. ರಾತ್ರಿಯ ಬಹುಭಾಗವನ್ನು ಅಲ್ಲಿಯೇ ಕಳೆಯುತ್ತಾರೆ. ಗಂಡು-ಹೆಣ್ಣು ಯಾವ ಎಗ್ಗೂ ಇಲ್ಲದೆ, ಭೇದಭಾವವಿಲ್ಲದೆ ನರ್ತನ ಭೋಜನಗಳಲ್ಲಿ ನಿರತರಾಗುವರು. ಬೇಸಗೆಯಲ್ಲಿ ಗಂಡು-ಹೆಣ್ಣು ಅರೆಬೆತ್ತಲೆಯಲ್ಲಿ ಸಮುದ್ರದಡದಲ್ಲಿ ಮಲಗಿ ಸೂರ್ಯಸ್ನಾನ ಮಾಡುವುದು ಸಾಮಾನ್ಯ ದೃಶ್ಯ. "ಫ್ಲಾರಿಡಾ ಬಿಸಿಲು ಕಾಸುವವರ ಸ್ವರ್ಗ. ಅದಕ್ಕೆ ಚಳಿಗಾಲ ಬಂದಿತೆಂದರೆ ಅಮೆರಿಕದ ಜನ ಫ್ಲಾರಿಡಾದತ್ತ ಪ್ರವಾಸ ಹೊರಟುಬಿಡುತ್ತಾರೆ. ಬಿಸಿಲು ಕಾಲದಲ್ಲಿ ಈ ಪ್ರವಾಸೀ ಪ್ರವಾಹ ಉತ್ತರದ ಕಡೆಗೆ ಎಂದರೆ ನಯಾಗರಾ, ಕೆನಡಾದತ್ತ ಹೊರಡುತ್ತದೆ.

---

೨. ಡಾ. ತರಳಬಾಳು ಶಿವಮೂರ್ತಿ: ಓಲೆಗಳಲ್ಲಿ ವಿದೇಶಾನುಭವ: 'ಪಟ್ಟಾಭಿಷೇಕ' ಸ್ಮರಣ ಸಂಚಿಕೆ (೧೯೭೯) ತರಳಬಾಳು ಹುಣ್ಣಿಮೆ ಮತ್ತು ಪಟ್ಟಾಭಿಷೇಕ ಮಹೋತ್ಸವ ಸಮಿತಿ, ಸಿರಿಗೆರೆ.

ಫ್ಲಾರಿಡಾ ಹೊಕ್ಕ ಒಡನೆ ನಮ್ಮ ಕಣ್ಣಿಗೆ ಬೀಳುವ ಬೋರ್ಡು 'ಗೆಟ್ ಸನ್ ಟ್ಯಾನ್-ಕಾಪರ್‌ಟ್ಯಾನ್!...' ಮೈಯನ್ನು ಬಿಸಿಲಿಗೆ ಒಡ್ಡಿ ತಾಮ್ರವರ್ಣಕ್ಕೆ ತಂದುಕೊಳ್ಳುವುದು ಅವರಿಗೆ ಅಚ್ಚು ಮೆಚ್ಚು... 'ಟ್ಯಾನ್' ಆದವರ ಮೈಮೇಲೆ ಕನಿಷ್ಠ ಬಟ್ಟೆ ಅವರ ಬತ್ತಲ ಮೈ ನೋಡಿ ನಾವು ತಲೆ ತಗ್ಗಿಸಬೇಕಷ್ಟೆ. ಅವರು ಪರಿವೆಯೇ ಇಲ್ಲದೆ ಆರೆಂಜ್ ಜ್ಯೂಸ್ ಹೀರುತ್ತಾ ಓಡಾಡುತ್ತಾರೆ. ಕೆಲವರ ಮೈಯಂತೂ ಬಿಸಿಲಿಗೆ ಸುಟ್ಟ ಚರ್ಮ ವ್ರಣವೇ ಆಗಿದೆ. ಅದಕ್ಕೆ ಒಂದಿಷ್ಟು ಮುಲಾಮು ಬಳಿದಿದ್ದಾರೆ. ಸುತ್ತಾಟ, ಒಡನಾಟ, ಊಟ, ಪಾನೀಯಗಳ ಸ್ವರ್ಗಸುಖ ಅನುಭವಿಸುತ್ತಾ ಜೂಜು ಕುದುರೆಗಳಂತೆ ಬರುತ್ತಿರುವ ಇವರು ಗಂಟು ಕರಗಿಸಿ, ಹಗೂರಾಗಿ ನಾಳೆ ಕೆಲಸಕ್ಕೆ ಹಾಜರಾಗುತ್ತಾರೆ. ಆಗ ಕತ್ತೆಯಂತೆ ದುಡಿಯುತ್ತಾರೆ. ವಿಹಾರ ಕೆಲಸ ಎರಡೂ ಬೇರೆ ಬೇರೆ ವಿಭಾಗ. ಒಂದರಲ್ಲಿ ತೊಡಗಿದ್ದಾಗ ಮತ್ತೊಂದರ ಚಿಂತೆ ಅವರ ತಲೆಗೂ ಬರುವುದಿಲ್ಲ."[೬]

ಅಮೆರಿಕನ್ನರಿಗೆ ಪ್ರವಾಸ ಬದುಕಿನ ಒಂದು ಅವಿಭಾಜ್ಯ ಅಂಗದಂತಿದೆ. ಅವರಿಗೆ ಬದುಕನ್ನು ಉಲ್ಲಾಸಮಯವಾಗಿಸುವ ಕಲೆ ತಿಳಿದಿದೆ. ಅವರು ತಮ್ಮ ಬದುಕಿಗೆ ಪ್ರವಾಸವು ಹೊಸ ಚೈತನ್ಯವನ್ನು ತುಂಬುತ್ತದೆ ಎಂದು ನಂಬಿರುವಂತಿದೆ. ಹೀಗಾಗಿ ಅವರು ವಾರಾಂತ್ಯದ ಸುಖ ಸವಿಯಲು ಪ್ರೇಕ್ಷಣೀಯ ಸ್ಥಳಗಳಲ್ಲಿ ಯಾವುದಾದರೂ ಒಂದಕ್ಕೆ ಧಾವಿಸುವರು. "ಅವಕಾಶ ದೊರೆತಾಗಲೆಲ್ಲಾ ಜನರು ನಗರದ ಗಲಿಬಿಲಿಯಿಂದ ದೂರ ಬಂದು ಪರ್ವತ ಸರೋವರಗಳ ಪ್ರಶಾಂತಿಯನ್ನೂ ಸೌಂದರ್ಯವನ್ನೂ ಸವಿಯುತ್ತಾರೆ. ಶನಿವಾರ ಭಾನುವಾರಗಳಲ್ಲಿ ಇಪ್ಪತ್ತು ಮೂವತ್ತು ಸಾವಿರ ಜನ ಇಂಥ ಸ್ಥಳಗಳಿಗೆ ಬರುವುದು ಸಾಮಾನ್ಯ ಸಂಗತಿ. ನಮ್ಮ ದೇಶದಲ್ಲಿ ಜನರು ಸಾವಿರಗಟ್ಟಲೆಯಲ್ಲಿ ಹೀಗೆ ಸೌಂದರ್ಯ ಯಾತ್ರಿಗಳಾಗಿ ಹೋಗುವುದು ಅಪರೂಪ. ಇಲ್ಲಾದರೆ ಜನ ಹೀಗೆ ಸೌಂದರ್ಯಾಸ್ವಾದನೆಗಾಗಿಯೇ ನೂರಾರು ಮೈಲಿ ಪ್ರಯಾಣ ಮಾಡಿಕೊಂಡು ಹೋಗುವುದು ಸಾಮಾನ್ಯವಾದ ಸಂಗತಿ. ಇದೇ ಇವರಿಗೆ ತೀರ್ಥಯಾತ್ರೆ."[೭] ಪ್ರೊ. ಎ.ಎನ್. ಮೂರ್ತಿರಾವ್‌ರವರು ಒಂದೆಡೆ ಅಮೆರಿಕನ್ನರ ಈ ಪ್ರವಾಸದ ಹುಚ್ಚನ್ನು ಗೇಲಿಮಾಡುತ್ತಾ "ಅಮೆರಿಕಕ್ಕೆ ಹೋದವರನ್ನೆಲ್ಲಾ ತಿರುಗುದೆವ್ವ ಮೆಟ್ಟಿಕೊಳ್ಳುತ್ತದೆ" ಎಂದಿರುವರು.[೮] ಪ್ರೊ. ತೀ.ನಂ.ಶ್ರೀ. ಅವರು ಅಭಿಪ್ರಾಯಪಡುವಂತೆ "ಕಾಡುಮೇಡುಗಳಲ್ಲಿ, ಹಳ್ಳಕೊಳ್ಳಗಳಲ್ಲಿ, ಕಡೆಗೆ ಮರುಭೂಮಿಗಳಲ್ಲಿ ಕೂಡ ವಿಹಾರಸ್ಥಾನಗಳನ್ನು ನಿರ್ಮಿಸುವುದರಲ್ಲಿ ಅಮೆರಿಕನ್ನರು ನಿಪುಣರು. ದೈವದತ್ತವಾದ

---

೬. ನೋಡಿ: ನೀಳಾದೇವಿ: ನಾಕಂಡ ಆ 'ಖಂಡ' ಪು. ೭೫-೭೬.

೭. ನೋಡಿ: ಡಾ। ಪ್ರಭುಶಂಕರ: ಅಮೆರಿಕದಲ್ಲಿ ನಾನು, ಶಾಂತಿ, ಪು. ೬೧-೬೨.

೮. ಅಪರವಯಸ್ಕನ ಅಮೆರಿಕಯಾತ್ರೆ, ಪು. ೧೮೧.

ಪ್ರಕೃತಿ ಸೌಂದರ್ಯದ ಸಂಪತ್ತನ್ನು ಕಣ್ಣು ಮನಸ್ಸುಗಳು ನಲಿಯುವಂತೆ, ತಣಿಯುವಂತೆ ಆಸ್ವಾದಿಸಲು ಅನುಕೂಲಿಸುವ ಎಲ್ಲ ಏರ್ಪಾಡುಗಳನ್ನು ಎಲ್ಲೆಲ್ಲಿಯೂ ಮಾಡಿರುತ್ತಾರೆ. (ಈ ಭೋಗಕ್ಕೆ ಹಣವೊಂದು ಮಾತ್ರ ಕೈತುಂಬ ಇರಬೇಕು!)[೬]

ರಜಾದಿನಗಳಲ್ಲಿ ಪರ್ವತಗಳಿಂದ ಆವೃತವಾಗಿರುವ ಸ್ಕಾಟ್ಲೆಂಡಿಗೋ ದೂರ ದೇಶಗಳಾದ ಫ್ರಾನ್ಸ್, ಇಟಲಿ, ನಾರ್ವೆ, ಸ್ವಿಜರ್ಲೆಂಡ್‌ಗಳಿಗೋ ಹಿರಿಯರು ಕಿರಿಯರು ಮಕ್ಕಳಾದಿಯಾಗಿ ಎಲ್ಲರೂ ಪ್ರವಾಸ ಹೋಗುವುದು ಅಮೆರಿಕದಲ್ಲಿ ಸಾಮಾನ್ಯ ಸಂಗತಿ. ಪ್ರವಾಸ ಹೊರಡುವಾಗ ತಮ್ಮ ಕಾರಿಗೆ ಅವರು ಟ್ರೆಯ್ಲರನ್ನು ಜೋಡಿಸಿರುವರು (ಈ ಟ್ರೆಯ್ಲರ್ ಒಂದು ಸುಸಜ್ಜಿತ ಮನೆಯಂತೆಯೇ ಇರುತ್ತದೆ.) ಸುಮಾರು ೧೪ ಸಾವಿರ ಡಾಲರ್ ಬೆಲೆಬಾಳುವ ಇದರಲ್ಲಿ ಫ್ರಿಜ್, ಏರ್‌ಕಂಡಿಷನರ್, ಹೀಟರ್, ಮೆತ್ತನೆಯ ಪೀಠಗಳು, ಮೆತ್ತನೆಯ ಹಾಸಿಗೆ, ಫ್ಲಷ್ ಶೌಚಗೃಹ, ಟಾಯಲೆಟ್ ಸಾಮಗ್ರಿಗಳು-ಬೇಕಾದದ್ದೆಲ್ಲ ಇದೆ. ಕಾರು ಹೋಗಬಹುದಾದ ಕಡೆಗೆಲ್ಲ ಈ ಟ್ರೆಯ್ಲರನ್ನು ತೆಗೆದುಕೊಂಡು ಹೋಗಬಹುದು. ಹೋಟಲಿಗಾಗಲಿ ಮೋಟಲಿಗಾಗಲಿ ದಿನಕ್ಕೆ ೧೫ ಡಾಲರಿನಿಂದ ಹಿಡಿದು ೧೦೦-೧೫೦ ಡಾಲರಿನ ಹಣ ತೆರಬೇಕಾಗಿಲ್ಲ. ಮೋಟಲುಗಳಲ್ಲಿ ಕೊಠಡಿ ಖಾಲಿ ಇದೆಯೋ ಇಲ್ಲವೊ ಎಂದು ಚಿಂತೆಪಡಬೇಕಾಗಿಲ್ಲ. ಕ್ಯಾಂಪಿಂಗ್ ಸ್ಥಳ ಒಂದು ಸಿಕ್ಕಿದರೆ ಸಾಕು. (ಕ್ಯಾಂಪಿಗ್ ಸ್ಥಳವೆಂದರೆ ಪ್ರವಾಸ ಕಾಲದಲ್ಲಿ ಮಾರ್ಗ ಮಧ್ಯೆ ವಿಶ್ರಾಮಕ್ಕಾಗಿ ಬೀಡುಬಿಡುವ ಸ್ಥಳ.) ಅಲ್ಲಿ ಪ್ರವಾಸಿಗರ ಕಾರು ನಿಲ್ಲಿಸಲು ಪ್ರತಿಯೊಂದು ಕಾರಿಗೂ ಸುಮಾರು ೧೫ ಅಡಿ ಅಗಲದ ಜಾಗ ಗೊತ್ತುಮಾಡಿ ಬಿಳಿಯ ಬಣ್ಣದ ಪಟ್ಟೆಗಳಿಂದ ಅದನ್ನು ಪ್ರತ್ಯೇಕಿಸುವರು. ಕಾರನ್ನು ಟ್ರೆಯ್ಲರನ್ನೂ ಆ ಪಟ್ಟೆಗಳ ನಡುವಿನ ಜಾಗದಲ್ಲೇ ನಿಲ್ಲಿಸಬೇಕು. ಟ್ರೆಯ್ಲರಿನಲ್ಲೂ ನಿಲ್ಲಿಸುವ ಸ್ಥಳದಲ್ಲೂ ನೀರು ವಿದ್ಯುತ್ತುಗಳನ್ನು ಒದಗಿಸುವ ಮತ್ತು ಮಲವನ್ನು ಸೆಳೆದುಕೊಳ್ಳುವ ನಾಳಗಳಿರುತ್ತವೆ. ಟ್ರೆಯ್ಲರ್ ನಿಲ್ಲಿಸಿದ ಮೇಲೆ ಅದರ ನಾಳಗಳಿಗೂ ನೆಲದಲ್ಲಿರುವ ನಾಳಗಳಿಗೂ ಸಂಬಂಧ ಕಲ್ಪಿಸಿದರೆ ಸರಿ-ಟ್ರೆಯ್ಲರಿನಲ್ಲಿ ಮನೆಯಲ್ಲಿರುವ ಅನುಕೂಲಗಳೆಲ್ಲ-ಪರಿಶುದ್ಧವಾದ ನೀರು, ವಿದ್ಯುತ್, ಫ್ಲಷ್ ಶೌಚ ಸಾಧನ -ಇದ್ದಂತಾಯಿತು. ಈ ಕ್ಯಾಂಪಿಂಗ್ ಸ್ಥಳದಲ್ಲಿ ೨೪ ಘಂಟೆ ಅಥವಾ ಅದಕ್ಕಿಂತ ಕಡಿಮೆ ಕ್ಯಾಂಪ್ ಮಾಡಿದರೆ ೩೧/೨-೪ ಡಾಲರ್ ಬಾಡಿಗೆ. ಇದರ ಮಾಲೀಕರು ಮನೆಯಲ್ಲಿರಲಿ ಇಲ್ಲದಿರಲಿ, ಹಗಲಾಗಲಿ ಮಧ್ಯರಾತ್ರಿಯಾಗಲಿ ಬಂದವರು ಕ್ಯಾಂಪನ್ನು ಉಪಯೋಗಿಸುವಂತೆ ವ್ಯವಸ್ಥೆಯಿದೆ.[೭]

---

೬. ನಂಟರು, ಶಾರದಾ ಮಂದಿರ, ಮೈಸೂರು (೧೯೬೭), ಪು. ೧೪೦-೧೪೧.

೭. ಟ್ರೆಯ್ಲರ್ ಹಾಗೂ ಕ್ಯಾಂಪಿಂಗ್ ಸ್ಥಳಗಳ ಬಗೆಗಿನ ವಿವರಗಳನ್ನು ಪ್ರೊ. ಎ.ಎನ್. ಮೂರ್ತಿರಾಯರ 'ಅಪರವಯಸ್ಕನ ಅಮೆರಿಕಾ ಯಾತ್ರೆ' ಎಂಬ ಗ್ರಂಥದಿಂದ (ಪು. ೩೯-೪೦) ತೆಗೆದುಕೊಂಡಿರುವೆನು.

ಹಣವಂತರು ಕಾರಿನಲ್ಲಿ ವಿಮಾನದಲ್ಲಿ ಬಸ್ಸಿನಲ್ಲಿ ಪ್ರವಾಸ ಕೈಗೊಂಡರೆ, ಕೈಯಲ್ಲಿ ಸಾಕಷ್ಟು ಹಣವಿಲ್ಲದವರು ಅವಶ್ಯಕ ವಸ್ತುಗಳನ್ನು ಹೆಗಲಿಗೇರಿಸಿಕೊಂಡು ಧೈರ್ಯ ಉತ್ಸಾಹಗಳೇ ಮೂಲಧನವಾಗಿ ಕಾಲುನಡಿಗೆಯಲ್ಲಿಯೇ ಪ್ರವಾಸಕ್ಕೆ ಹೊರಡುವರು. ಕಾಲು ದಣಿಯುವಷ್ಟು ಸುತ್ತುವರು, ಕಣ್ಣು ತಣಿಯುವಷ್ಟು ನೋಡುವರು, ಖುಷಿಪಡುವರು. ನಡೆಯಲು ಆಗದಿದ್ದಾಗ ರಸ್ತೆಯ ಬದಿಯಲ್ಲಿ ನಿಂತು ಹೋಗುವ ವಾಹನಗಳತ್ತ ಕೈಬೀಸುವರು. ಇಂತಹವರ ಉತ್ಸಾಹವನ್ನು ಪ್ರೋತ್ಸಾಹಿಸಲು ಕರುಣೆಗಳೂ ಉದಾರಿಗಳೂ ಆದವರು ಕಾರು ನಿಲ್ಲಿಸಿ ಇವರನ್ನು ಹತ್ತಿಸಿಕೊಂಡು ಹೋಗುವುದೂ ಉಂಟು. ಹೀಗೇ ಸಾಹಸಿಗಳು ಕಾಲ್ನಡಿಗೆಯಲ್ಲೇ ದೇಶ ದೇಶಗಳನ್ನು ಸುತ್ತಿ ಬಂದಿರುವರು.[೮] ಇವರನ್ನು ನಮ್ಮೊಂದಿಗೆ ಹೋಲಿಸಿಕೊಂಡಾಗ ನಮ್ಮ ಸೋಮಾರಿತನಕ್ಕೆ ನಿಜಕ್ಕೂ ನಾಚಿಕೆಯಾಗುತ್ತದೆ.

"ಈ ದೇಶದ ಜನರಿಗೆ (ಅಮೆರಿಕನ್ನರಿಗೆ) ಬ್ರಹ್ಮಾನಂದ ಅದೆಲ್ಲಿಗೆ ಒಯ್ಯುತ್ತದೆ ಎಂದರೆ ಅವರಿಗೆ ಮೋಜುಮಾಡುವ ಉತ್ಸಾಹದಲ್ಲಿ ಶಾರೀರಿಕ ತೊಂದರೆ ಸಹ ಅಡ್ಡಿ ಬರುವುದಿಲ್ಲ. ಕೈಕಾಲಿಲ್ಲದಿರಲಿ, ಕಣ್ಣು ಕಾಣದಿರಲಿ, ಎಂತಹ ಮುದುಕರೇ ಆಗಲೀ ಅವರಿಗೆ ಮೋಜು ಬೇಕೇ ಬೇಕು... ಈಗಷ್ಟೇ ನಾವು ಬೀಚಿಗೆ (ಅಟ್ಲಾಂಟಿಕ್ ತೀರದ 'ಡೆಟಾನಾ' ಬೀಚಿಗೆ) ಬರುವ ಮುನ್ನ ಊರೊಳಗೆ ಪೆಟ್ರೋಲ್ ತೆಗೆದುಕೊಳ್ಳಲು ಕಾರು ನಿಲ್ಲಿಸಿದ್ದೆವು. ಆಗ ಒಂದು ಸಣ್ಣ ವ್ಯಾನ್ ಬಂದು ನಿಂತಿತು. ಅದರಲ್ಲಿದ್ದದ್ದು ಡ್ರೈವ್ ಮಾಡುತ್ತಿದ್ದವನೊಬ್ಬನೇ. ನೋಡುತ್ತಿದ್ದಂತೆಯೇ ಅವನು ಬಾಗಿಲು ತೆರೆದಾಗ ಸ್ಟೀಲಿನ ಇಳಿಜಾರು ಮಣೆಯೊಂದು ಬಾಗಿಲು ತೆರೆದೊಡನೆ ಹೊರಕ್ಕೆ ಜಾರಿ, ನೆಲಕ್ಕೂ ವ್ಯಾನಿಗೂ ಒಂದು ಇಳಿಜಾರು ಸೇತುವೆ ಹಾಕಿತು. ಅವನು ಒಳಗಿಂದ ಒಂದು ಗಾಲಿ ಕುರ್ಚಿ ಮೇಲೆ ಕುಳಿತು ಇಳಿಜಾರಲ್ಲಿ ಹೊರಕ್ಕೆ ಬಂದಾಗ ನೋಡಿದರೆ ಅವನಿಗೇ ಕಾಲುಗಳೇ ಇರಲಿಲ್ಲ; ಕುರ್ಚಿಸಮೇತ ಪೆಟ್ರೋಲ್ ಪಂಪಿನ ಬಳಿ ಹೋಗಿ ಸ್ವಸಹಾಯದಿಂದಲೇ ಪೆಟ್ರೋಲ್ ತಾನೇ ಪಂಪು ಮಾಡಿಕೊಂಡು, ಹಣ ತೂರಿ, ಮತ್ತೆ ಕುರ್ಚಿಸಮೇತ ವ್ಯಾನಿನೊಳಹೊಕ್ಕು ಮಣೆಯನ್ನು ಒಳಕ್ಕೆಳೆದುಕೊಂಡ. ಬಾಗಿಲು ಮುಚ್ಚಿಕೊಂಡಿತು. ಕಾಲಿಲ್ಲದೇ ಕ್ಲಚ್ಚು, ಅಕ್ಸಿಲರೇಟರ್ ಒತ್ತುವ ಸಾಧನ ಹೇಗೆ ಮಾಡಿಕೊಂಡಿದ್ದನೋ; ವ್ಯಾನು ಭರ್ರನೆ ಹೊರಟೇ ಹೋಯಿತು; ಮತ್ತೊಂದೆಡೆ ಸೈಪ್ರಸ್ ಗಾರ್ಡನ್‌ನಲ್ಲಿ ಒಬ್ಬ ವೃದ್ಧನನ್ನು ಅಷ್ಟೇ ವಯಸ್ಸಾದ ಮುದುಕಿ ತಳ್ಳುಗಾಡಿಯಲ್ಲಿ ತಳ್ಳಿಕೊಂಡು ತೋಟವನ್ನೆಲ್ಲಾ ತೋರಿಸುತ್ತಿದ್ದಳು. ಆತನ ಬಳಿ ನೋಡಿದರೆ ಒಂದು

೮. ಡಾ|| ಶಿವರಾಮ ಕಾರಂತರು 'ಪಾತಾಳಕ್ಕೆ ಪಯಣ' ಎಂಬ ಕೃತಿಯಲ್ಲಿ ಈ ಬಗೆಯ ಸಾಹಸೀ ಪ್ರವಾಸಿಗಳನ್ನು ಕುರಿತು ಪ್ರಸ್ತಾಪಿಸಿರುವರು (ಪು. ೯೬-೯೭).

ಸಣ್ಣ 'ಆಕ್ಸಿಜನ್ ಕಿಟ್' ಇತ್ತು; ಉಸಿರಿರುವ ತನಕ ಆದಷ್ಟು ಅನುಕೂಲಗಳನ್ನು ಮಾಡಿಕೊಂಡು ಸುಖ ಅನುಭವಿಸಲು ಇಚ್ಛಿಸುವ ಸಾಹಸಿಗರಿವರು."[೯]

ವಾರದ ರಜಾದಿನಗಳಲ್ಲಿ ಅಮೆರಿಕನ್ನರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪ್ರವಾಸದ ಹುಚ್ಚು ಹತ್ತಿಸಿಕೊಂಡು ಪ್ರೇಕ್ಷಣೀಯ ಸ್ಥಳಗಳ ಕಡೆಗೆ ಧಾವಿಸಿ ಹೋಗುವುದರಿಂದ ಆಗಬಹುದಾದ ಪರಿಣಾಮಗಳನ್ನೂ ನಾವು ಗಮನಿಸಲೇಬೇಕು. ಪ್ರವಾಸಿಗಳ ಸಂಖ್ಯೆ ಹೆಚ್ಚಿದಂತೆ ಅಲ್ಲಿ ಅನಿವಾರ್ಯವಾಗಿ ಜನಸಂದಣಿಯೂ ಹೆಚ್ಚುತ್ತದೆ; ಮೋಟಾರು, ಕಾರುಗಳ ಓಡಾಟದಿಂದ ನೆಮ್ಮದಿಗೆ ಭಂಗವುಂಟಾಗುತ್ತದೆ; ಪ್ರವಾಸಿಗರ ಅನುಕೂಲಕ್ಕಾಗಿ ಅಂಗಡಿ, ರೆಸ್ಟೋರಾಂಟ್, ಹೋಟೆಲು, ಮೋಟೆಲು, ಬ್ಯಾಂಕು ಇತ್ಯಾದಿಗಳು ಹುಟ್ಟಿಕೊಳ್ಳುತ್ತವೆ. ಇವೆಲ್ಲಾ ಸೃಷ್ಟಿಕಾಲದ ವಾತಾವರಣದಲ್ಲಿ ಪ್ರವಾಸಿಗರು ಲೀನರಾಗಲು ಅಡ್ಡಿಯುಂಟುಮಾಡುತ್ತವೆ. ನಯಾಗಾರಾ ಜಲಪಾತವನ್ನು ನೋಡಲು ಹೋದಾಗ ಪ್ರೊ. ಎ.ಎನ್. ಮೂರ್ತಿರಾವ್‌ರವರು ಈ ಪ್ರತಿಕೂಲವನ್ನು ಗಮನಿಸಿ, ತಮ್ಮ ಅನಿಸಿಕೆಯನ್ನು 'ಪಂಚ್'ನಲ್ಲಿ ಬಂದ ಕಾರ್ಟೂನೊಂದರ ಪ್ರಸ್ತಾಪದ ಮೂಲಕ ಸಮರ್ಥಿಸುತ್ತಾ, ಪ್ರೇಕ್ಷಣೀಯ ಸ್ಥಳಗಳಲ್ಲಿನ ವಿರೋಧಾಭಾಸವನ್ನು ಗೇಲಿ ಮಾಡಿರುವರು.[೧೦] 'ಪಂಚ್'ನಲ್ಲಿ ಬಂದ ಆ ಕಾರ್ಟೂನಿನ ತಮಾಷೆ ಹೀಗಿದೆ: ಬೇಸಿಗೆಯ ಒಂದು ದಿನ ಲಂಡನ್ನಿನ ಜನ ವಿವಿಕ್ತತೆಯನ್ನೂ ಶಾಂತಿಯನ್ನೂ ಅರಸಿಕೊಂಡು ಬ್ರಿಟನ್‌ಗೆ ನುಗ್ಗಿದರು. ಇತ್ತ ಬ್ರಿಟನ್‌ವನೊಬ್ಬ ಲಂಡನ್ನಿಗೆ ಬಂದು ನಿರ್ಜನವಾದ ಬೀದಿಗಳಲ್ಲಿ ಹಾಯಾಗಿ ಓಡಾಡುತ್ತಿದ್ದ. ಇದೇನು ಇಲ್ಲಿಗೆ ಬಂದೆ ಎಂದು ಕೇಳಿದ್ದಕ್ಕೆ 'ಶಾಂತಿಯನ್ನು ಅರಸುತ್ತ ಬಂದೆ' ಎಂದು ಉತ್ತರ ಕೊಟ್ಟ!

ವಿದೇಶಗಳಲ್ಲಿ ಪ್ರವಾಸ ಕೈಗೊಳ್ಳುವವರಿಗೆ ತಾವು ಪ್ರವಾಸ ಹೋಗುವ ಸ್ಥಳಗಳ ಬಗೆಗೆ ಪ್ರಾಥಮಿಕ ತಿಳುವಳಿಕೆಯಾದರೂ ಇರಬೇಕು. ಹಾಗಿಲ್ಲದೆ ಪ್ರವಾಸ ಕೈಗೊಂಡಾಗ ಪ್ರವಾಸಿಯನ್ನು ದಿಕ್ಕುಗೆಡಿಸುತ್ತದೆ. ಆಯಾ ದೇಶದ ಭೌಗೋಳಿಕ ಸ್ಥಿತಿ, ಪ್ರೇಕ್ಷಣೀಯ ಸ್ಥಳಗಳು, ಬಸ್ಸು, ರೈಲು, ವಿಮಾನ ಸೌಲಭ್ಯಗಳು -ಹೀಗೆ ಎಲ್ಲವೂ ತಿಳಿದಿರಬೇಕು. ಸರಿಯಾದ ನಕಾಶೆಗಳು, ತಂಗಣೆಗೆ ಅನುಕೂಲಗಳು, ಐತಿಹಾಸಿಕ ಪುರವಣಿಗಳು, ಮಾರ್ಗದರ್ಶಿ (ಗೈಡ್)ಗಳು-ಪ್ರವಾಸಿಯ ಕ್ಲೇಶಗಳನ್ನು ಸ್ವಲ್ಪಮಟ್ಟಿಗೆ ಪರಿಹರಿಸಬಲ್ಲವು. ಮಿತವ್ಯಯದ ದೃಷ್ಟಿಯಿಂದ, ಅತ್ಯಂತ ಕಡಿಮೆ ಖರ್ಚಿನಲ್ಲಿ ತಂಗಲು ಹಲವು ಎಡೆಗಳಿವೆ. 'ದಿನಕ್ಕೆ ಐದು ಡಾಲರ್‌ನಲ್ಲಿ ನ್ಯೂಯಾರ್ಕ್ ವಾಸ' 'ದಿನಕ್ಕೆ ಐದು ಡಾಲರ್‌ನಲ್ಲಿ

---

೯. ನೀಳಾದೇವಿ: ನಾ ಕಂಡ ಆ 'ಖಂಡ' (ಪು. ೯೩-೯೪).

೧೦. ನೋಡಿ: 'ಅಪರವಯಸ್ಕನ ಅಮೆರಿಕಯಾತ್ರೆ' (ಪು. ೧೪೮)

ವಾಷಿಂಗ್‌ಟನ್ ವಾಸ' ಎಂಬ ಪ್ರಚಾರ ಪುಸ್ತಕಗಳು ಈ ದಿಶೆಯಲ್ಲಿ ಸ್ವಲ್ಪಮಟ್ಟಿಗೆ ಪ್ರವಾಸಿಗೆ ನೆರವಾಗುತ್ತವೆ. ಕಡಿಮೆ ಖರ್ಚಿನ ವಾಸಸ್ಥಾನಗಳು ಬೇಕಾದಷ್ಟು ಇದ್ದರೂ ಅವನ್ನು ಪತ್ತೆ ಹಚ್ಚುವುದು ಕಷ್ಟ. ಆಗಂತುಕ ಪ್ರವಾಸಿಗೆ ಅವನ್ನು ಹುಡುಕಿಕೊಂಡು ಹೊರಡುವುದು ಪ್ರಯಾಸದ ಕೆಲಸ. ಸ್ಥಳ ಪರಿಚಯ ಚೆನ್ನಾಗಿ ಹೊಂದಿರುವ ಗೈಡ್ ಪ್ರವಾಸಿಗೆ ನೆರವಾಗಬಹುದು. ಪರದೇಶಗಳಲ್ಲಿ ಹಣ, ಶ್ರಮ ಹಾಗೂ ಸಮಯಗಳ ಉಳಿತಾಯವಾಗಬೇಕಿದ್ದರೆ ಪ್ರವಾಸಿಯು ಗೈಡೊಬ್ಬನ ನೆರವು ಪಡೆಯುವುದು ಅನಿವಾರ್ಯ. ಗೈಡ್ ಒಬ್ಬನನ್ನು ನೇಮಿಸಿಕೊಳ್ಳುವುದು ಹಣಕಾಸಿನ ದೃಷ್ಟಿಯಿಂದ ದುಬಾರಿ ಎನ್ನಿಸಿದರೆ ಪ್ರವಾಸ ಹೋಗುವ ಸ್ಥಳಗಳಲ್ಲಿ ನೆಲೆಸಿರುವ ಭಾರತೀಯ ಮಿತ್ರರ (ಇವರು ಪರಿಚಿತರಿರಲಿ ಅಪರಿಚಿತರಿರಲಿ ಪ್ರವಾಸ ಹೊರಡುವುದಕ್ಕೆ ಮುನ್ನವೇ ವಿದೇಶಗಳಲ್ಲಿ ನೆಲಸಿರುವ ತನ್ನ ನೆರೆಹೊರೆಯವರ ಬಂಧುಗಳ, ಮಿತ್ರರ ವಿಳಾಸಗಳನ್ನು ಪ್ರವಾಸಿ ತೆಗೆದಿಟ್ಟುಕೊಂಡು ಇವರ) ನೆರವು ಪಡೆಯುವುದು ಸೂಕ್ತ. ಹಾಗೆ ಮಾಡದಿದ್ದರೆ ಪ್ರವಾಸಿಯು ಬರಿಯ ಕಟ್ಟಡಗಳು, ಪ್ರಸಿದ್ಧ ಸ್ಥಳಗಳು ಇವಷ್ಟನ್ನು ಮಾತ್ರ ನೋಡಿ ಅಮೂಲ್ಯವಾದವುಗಳನ್ನೇ ನೋಡದೆ ಹಿಂತಿರುಗಿ ಬರಬಹುದು. ನಮ್ಮಲ್ಲಿ ದಿಲ್ಲಿ, ಬೊಂಬಾಯಿ, ಹೈದರಾಬಾದು, ಮದರಾಸು, ಬೆಂಗಳೂರು ಇವೇ ಮುಂತಾದ ಪ್ರಮುಖ ಸ್ಥಳಗಳಲ್ಲಿ ನಗರ ವೀಕ್ಷಣೆಗೆ ಕರೆದೊಯ್ಯಲು ಪ್ರವಾಸೋದ್ಯಮ ಇಲಾಖೆ ಇಲ್ಲವೇ ಖಾಸಗೀ ಸಂಸ್ಥೆಗಳು ಬಸ್ ವ್ಯವಸ್ಥೆ ಮಾಡಿರುವಂತೆ ಪಾಶ್ಚಾತ್ಯ ದೇಶಗಳಲ್ಲೂ ಈ ಅನುಕೂಲ ಕಲ್ಪಿಸಲಾಗಿದೆ. (ಕೇವಲ ನಾಲ್ಕು ಡಾಲರ್ ಕೊಟ್ಟರೆ ನ್ಯೂಯಾರ್ಕ ನಗರವನ್ನು ಬಸ್‌ನಲ್ಲಿ ಸುತ್ತಿಸಿ, ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಲಾಗುವುದು.)

ಪೂರ್ವಭಾವಿಯಾಗಿ ತಂಗಣೆಯ ವ್ಯವಸ್ಥೆಯನ್ನು ಮಾಡದಿದ್ದರೆ ಪ್ರವಾಸಿ ವಿದೇಶಗಳಲ್ಲಿ ತೊಂದರೆಗೆ ಗುರಿಯಾಗಬೇಕಾಗುತ್ತದೆ. ಪ್ರವಾಸಿಯು ತನ್ನ ಪ್ರವಾಸದ ಮತ್ತು ವಸತಿಗೃಹಗಳ ವಿವರಗಳ ಪಟ್ಟಿಯನ್ನು ಮೊದಲೇ ತರಿಸಿಕೊಳ್ಳುವುದು ಅವಶ್ಯಕ. ಪರಸ್ಥಳದಲ್ಲಿ ಹಣದ ಬೆಲೆಗಿಂತ ಸಮಯದ ಬೆಲೆ ಖಂಡಿತಾ ಹೆಚ್ಚು. ಯೂರೋಪಿನ ಎಲ್ಲ ರೈಲು ನಿಲ್ದಾಣಗಳಲ್ಲೂ ಆಯಾ ಪಟ್ಟಣದ ವಸತಿಗಳನ್ನು ಕುರಿತು ಮಾಹಿತಿ ಕೊಡುವ ಅಧಿಕಾರಿಗಳಿರುತ್ತಾರೆ. ಅವರ ಸಹಾಯವನ್ನು ಪಡೆಯಬಹುದು. ಡಾ।। ಗೊರೂರರು ಒಂದೆಡೆ ಹೀಗೆ ಹೇಳಿರುವರು: "ನಮ್ಮ ದೇಶದಲ್ಲಿ ಮನುಷ್ಯ, ಬಹುಮಟ್ಟಿಗೆ ಹಕ್ಕಿಯಂತೆ ಸ್ವತಂತ್ರವಾಗಿರಬಲ್ಲ. ಯಾವ ಊರಿನಲ್ಲಿಯೂ, ಯಾವ ಬೆಟ್ಟದ ಮೇಲೆಯೂ, ಯಾವ ನದಿ ಕೆರೆ ತೀರದಲ್ಲಿಯೂ, ಒಂದು ದೇವಾಲಯ, ಕಲ್ಲುಮಂಟಪ, ಧರ್ಮಛತ್ರ ಯಾವುದಾದರೂ ಇರುತ್ತದೆ. ಕೊನೆಗೆ ಒಂದು ಅರಳಿಮರದ ಕೆಳಗೆ, ಬೇವಿನಮರದ ಕೆಳಗೆ, ಒಂದು ಕಟಕಟೆ ಅಥವಾ ಎತ್ತರಿಸಿದ ಜಗುಲಿಯಾದರೂ

ಇರುತ್ತದೆ. ಒಂದು ಚೆಂಬು, ಹಗ್ಗ ಕೊಡುತ್ತಾರೆ. ನೀರು ಸೇದಿ ಕುಡಿದು ಸುಖವಾಗಿ ಮಲಗಬಹುದು. ಅಮೆರಿಕ ಅಷ್ಟು ದೊಡ್ಡ ದೇಶವಾದರೂ, ಅಲ್ಲಿ ಇಂತಹ ಸೌಕರ್ಯವಿಲ್ಲ. ಭಾರತೀಯ ಅಲ್ಲಿ ನೀರಿನಿಂದ ಮೇಲೆಕ್ಕೆ ಎಸೆಯಲ್ಪಟ್ಟ ಮೀನಿನಂತಾಗುತ್ತಾನೆ. ಹೋಟೆಲ್‌ಗಳಲ್ಲಿ ಸಹ ಮೊದಲೇ ಸ್ಥಳವನ್ನು ಕಾಯ್ದಿಟ್ಟುಕೊಂಡಿರಬೇಕು. ಯಾರ ಜಗಲಿಯ ಮೇಲಾದರೂ ಒಂದು ರಾತ್ರಿ ಮಲಗಿಕೊಳ್ಳೋಣ ಎಂದರೆ ಅಲ್ಲಿ ಮನೆಗಳಿಗೆ ಜಗಲಿಗಳೇ ಇಲ್ಲ. ಕಾಂಪೌಂಡ್ ಒಳಗಡೆ ಜನರನ್ನೇ ಸೇರಿಸುವುದಿಲ್ಲ. ಹೀಗಾಗಿ ಸಾಮಾನ್ಯ ಪ್ರವಾಸಿ, ತುಂಬಾ ಕಷ್ಟವನ್ನು ಎದುರಿಸಬೇಕಾಗುತ್ತದೆ."[೧೧] ಡಾ|| ಗೊರೂರರು ಇಲ್ಲಿ ಅಮೆರಿಕವನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದರೂ ಅವರ ಈ ಅನುಭವೋಕ್ತಿ ಎಲ್ಲ ವಿದೇಶಗಳಿಗೂ ಅನ್ವಯಿಸುವಂತಹದು.

ವಿದೇಶಗಳಲ್ಲಿ ಸಂಚರಿಸುವವರನ್ನು ಕಾಡುವ ಸಮಸ್ಯೆಗಳು ಹಲವಾರು. ಅವುಗಳಲ್ಲಿ ಮುಖ್ಯವಾದುವು ಆಹಾರ, ಭಾಷೆ ಹಾಗೂ ಹವಾಮಾನಗಳು. "ಕಾಫಿಯನ್ನು ಫಿಲ್ಟರಿನಲ್ಲೇ ಶೋಧಿಸಿರಬೇಕು, ಇಡ್ಡಲಿಗೆ ತೆಂಗಿನಕಾಯಿ ಚಟ್ನಿಯೇಬೇಕು. 'ಕಾಯ್ದಿಳಿಸಿದ ತುಪ್ಪ'ವೂ ಕೆನೆಮೊಸರೂ ಇಲ್ಲದೆ ಅನ್ನದ ತುತ್ತು ಗಂಟಲಿಗೇ ಹೋಗುವುದಿಲ್ಲ ಎನ್ನುವ 'ಕುಸಿವಿಷ್ಟೆ'ಯ ಸ್ವಭಾವ ಯಾರಿಗಾದರೂ ಇದ್ದರೆ ಅಂಥವನಿಗೆ ಪ್ರವಾಸ ಒಳ್ಳೆಯ ಪಾಠಗಳನ್ನು ಕಲಿಸುತ್ತದೆ" ಎನ್ನುವ ಪ್ರೊ|| ತೀ.ನಂ.ಶ್ರೀ. ಅವರು ಪ್ರವಾಸಿಗೆ ವಿದೇಶದಲ್ಲಿ ಪ್ರವಾಸ ಮಾಡುವಾಗ ಆಹಾರದ ವಿಷಯ ಭಾರಿಯ ತಲೆನೋವಾಗಬಹುದು ಎನ್ನುವರು. ಅವರ ಪ್ರಕಾರ, ಶಾಕಾಹಾರಿಯಾಗಿ ಇದ್ದುಕೊಂಡೇ ಪ್ರಪಂಚ ಪರ್ಯಟನ ಮಾಡುವುದು ಸಾಧ್ಯ. ಆದರೆ ಆ ವ್ರತ ಪರಿಪಾಲನೆಗೆ ಮನಸ್ಸಿನ ಒಂದು ಭಾಗವನ್ನು ಸಂತತವಾಗಿ ನೇಮಿಸಿರಬೇಕಾಗುತ್ತದೆ. ಊಟಕ್ಕೆ ಕರೆದವರಿಗೆ "ನಾನು ಶಾಖಾಹಾರಿ" ಎಂದು ಅರಿಕೆ ಮಾಡಿದರೆ ಸಾಲದು. ಅವರ ಗಣನೆಯಲ್ಲಿ ಮೀನು ಒಂದು ಶಾಕ ಸಾಮಗ್ರಿ. (ನಮ್ಮ ದೇಶದಲ್ಲೇ ಬಂಗಾಳದವರು ಮೀನನ್ನು 'ಗಂಗಾಫಲ' ಎಂದು ಕರೆಯುತ್ತಾರಂತೆ.) ಆದಕಾರಣ ಎಲ್ಲೆಲ್ಲಿ ಹೋದರೂ 'No Fish, no meat' 'ಮೀನು ಬೇಡ ಮಾಂಸ ಬೇಡ') ಎಂದು ಬಿಡಿಸಿ ಹೇಳಬೇಕು. ಉಪಾಹಾರಗೃಹಗಳಲ್ಲಿ ಊಟ ತಿಂಡಿಗಳನ್ನು ಆರಿಸಿಕೊಳ್ಳುವ ಮೊದಲು, ಈ ಪದಾರ್ಥದಲ್ಲಿ ನಿಷಿದ್ಧ ವಸ್ತುಗಳು ಉಂಟೆ ಎಂದು ಕೇಳಿ ಕೇಳಿ ದೃಢಪಡಿಸಿಕೊಳ್ಳಬೇಕು. ಅಷ್ಟಕ್ಕೆ ಅವಕಾಶವಿಲ್ಲದಿದ್ದರೆ ಅಥವಾ ಇದನ್ನೆಲ್ಲಾ ಕೇಳಲು ಸಂಕೋಚ ಅಡ್ಡಿಬಂದರೆ, ಕೇವಲ ಬ್ರೆಡ್ಡು ಬೆಣ್ಣೆ ಹಾಲು ಹಣ್ಣುಗಳಿಂದಲೇ ಹಸಿವನ್ನು ಇಂಗಿಸಿಕೊಳ್ಳಬೇಕು."[೧೨]

---

೧೧. ಅಮೆರಿಕದಲ್ಲಿ ಗೊರೂರು (ಪು. ೭೭)

೧೨. ನಂಟರು, ಪು. ೧೨೫-೧೨೬.

ಶುದ್ಧ ಶಾಖಾಹಾರಿಗಳಾದ ಗೊರೂರರು ತಮ್ಮ ಅಮೆರಿಕ ಪ್ರವಾಸದಲ್ಲಿ ವಿಮಾನದಲ್ಲಿ ಹೋಗುತ್ತಿದ್ದಾಗ ಗಗನಸಖಿಯನ್ನು "ಮಾಂಸ ಮೊಟ್ಟೆ ಮೀನು ಇವುಗಳ ಹೊರತಾದ ಶಾಖಾಹಾರ ಏನಾದರೂ ಇದೆಯೆ?" ಎಂದು ಕೇಳಿದರಂತೆ. ಅದಕ್ಕೆ ಆಕೆ ಕೊಟ್ಟ ಉತ್ತರ ಹೀಗಿದೆ: 'Yes we have chicken, becon fork Ham etc'. ವಿದೇಶಗಳಲ್ಲಿ ಶಾಖಾಹಾರಿಗಳ ಸಂಖ್ಯೆಯು ಬಹಳ ಕಡಿಮೆ. ಅಲ್ಲಿ ಶಾಖಾಹಾರದ ಪಟ್ಟಿಗೆ ಮೀನು, ಮೊಟ್ಟೆ ಎಲ್ಲವೂ ಸೇರುತ್ತವೆ. ಪಶ್ಚಿಮ ಯುರೋಪು ದೇಶಗಳಲ್ಲಿ ಪ್ರವಾಸ ಮಾಡುವ ಸಸ್ಯಾಹಾರಿಗಳಿಗೆ ಅನ್ನ ಮತ್ತು ರೊಟ್ಟಿ ಸಿಗದೆ ನಿರಾಶೆಯಾಗಬಹುದು. ಬೇಯಿಸಿದ ಶುದ್ಧ ತರಕಾರಿಯ ಪದಾರ್ಥಗಳೂ ಅಪರೂಪ. ಆದರೆ ಎಲ್ಲ ಕಡೆಯೂ ರುಚಿಯಾದ ಬ್ರೆಡ್, ಬನ್, ಜೇನುತುಪ್ಪ, ಹಣ್ಣಿನ ರಸಗಳು, ಹಣ್ಣಿನ ಜಾಮ್, ಹಾಲು, ಬೇಯಿಸಿದ ಕಾಳುಗಳು, ಮೊಳಕೆ ಬರಿಸಿದ ದ್ವಿದಳ ಧಾನ್ಯಗಳು ಸಮೃದ್ಧವಾಗಿ ದೊರೆಯುತ್ತವೆ. ಅಮೆರಿಕದಲ್ಲಿ ಪ್ರವಾಸ ಮಾಡುವ ಶಾಖಾಹಾರಿ ಪ್ರವಾಸಿಗೆ ಆಹಾರದ ವಿಷಯದಲ್ಲಿ ಅಷ್ಟೊಂದು ಕಷ್ಟ ಕಾಣಿಸುವುದಿಲ್ಲ. ಭಾರತೀಯರು ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲಸಿರುವುದರಿಂದ ಭಾರತೀಯ ಊಟೋಪಚಾರಗಳಿಗೆ ಅಗತ್ಯವಿರುವ ಪದಾರ್ಥಗಳು ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗುತ್ತವೆ. ಅವುಗಳಿಗೆ ಅಲ್ಲಿ ಪ್ರಚಲಿತವಿರುವ ಹೆಸರುಗಳ ಅರಿವು ಇದ್ದರೆ ಭಾರತೀಯ ಅಡುಗೆಯ ರುಚಿಯನ್ನು ಅಲ್ಲಿಯೂ ಪ್ರವಾಸಿ ನೋಡಬಹುದು. ಬೆಂಡೇಕಾಯಿ (Bab-yokra), ಬದನೆಕಾಯಿ (Egg-plant), ಮೆಣಸಿನಕಾಯಿ (Red pepper), ಮೆಣಸಿನ ಪುಡಿ (Peprica), ಕರಿಬೇವು (Bay leaves), ರವೆ (Cream of wheat), ಬಗೆಬಗೆಯ ಕರಿದ ತಿಂಡಿಗಳನ್ನು ಮಾಡಲು ಬಳಸುವ ಮೈದಾಹಿಟ್ಟು (All purpose flour), ದೋಸೆ ಹಿಟ್ಟು (Pancake mix flour), ಬಾತು-ಬಿರಿಯಾನಿಗಳಿಗೆ ಉಪಯೋಗಿಸುವ ಅಕ್ಕಿ (Uncle-ben's rice), ಗೋಧಿಹಿಟ್ಟು (Whole wheat flour), ಮೊಸರು (Ogert), ಗಟ್ಟಿಕೆನೆ (Heavy cream), ಹಾಲುಪುಡಿ (Milk Powder)* ಅಡುಗೆಗೆ ಬೇಕಾದ ಸಾಮಾನುಗಳು ಅಮೆರಿಕದಲ್ಲಿ ನ್ಯೂಯಾರ್ಕ್, ವಾಶಿಂಗ್‌ಟನ್, ಚಿಕಾಗೋ, ನ್ಯೂ ಆರ್ಲಿಯನ್ಸ್ ಮೊದಲಾದ ದೊಡ್ಡ ಊರುಗಳಲ್ಲಿ ಸಿಗುತ್ತಿರುವುದರಿಂದ ಅಲ್ಲಿ ನೆಲಸಿರುವ ಭಾರತೀಯ ಕುಟುಂಬಗಳು ತಮ್ಮ ಆಹಾರ ಪದ್ಧತಿಯಲ್ಲಿ ಹೆಚ್ಚಿನ ಬದಲಾವಣೆಗಳನ್ನೇನೂ ಮಾಡಿದಂತಿಲ್ಲ. ಮನೆಯ ಹೊರಗೂ ಭಾರತೀಯವಾದ

---

* ಈ ವಿವರಗಳನ್ನು ನಾನು ಕೃಷ್ಣಾನಂದ ಕಾಮತರ 'ನಾನೂ ಅಮೆರಿಕೆಗೆ ಹೋಗಿದ್ದೆ' (ನೋಡಿ ಪು. ೪೧-೪೨) ಹಾಗೂ ಡಾ॥ ರಾ.ಯ. ಧಾರವಾಡಕರ ಅವರ 'ನಾನು ಕಂಡ ಅಮೆರಿಕೆ' ಎಂಬ ಗ್ರಂಥದಿಂದ ತೆಗೆದುಕೊಂಡಿರುವೆನು.

ಊಟೋಪಚಾರಗಳ ಸವಿಯನ್ನು ಅಲ್ಲಿ ಭಾರತೀಯರು ನಡೆಸುತ್ತಿರುವ ಹೋಟಲ್‌ಗಳಲ್ಲಿ ಪಡೆಯಬಹುದು. ಭಾರತೀಯ ಶಾಕಾಹಾರಿಗಳು ಮಾಂಸಾಹಾರಿ ದೇಶಗಳಲ್ಲಿ ಸಂಚರಿಸುವಾಗ ಎಲ್ಲೆಡೆ ನಾಲಗೆಗೆ ರುಚಿಯಾದ ಭಾರತೀಯ ಊಟ, ತಿಂಡಿಗಳನ್ನು ನಿರೀಕ್ಷಿಸಲಾಗದು. ಆದರೂ, ಅಲ್ಲಿ ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ ಸಾಕಾಗುವಷ್ಟು ಶುದ್ಧ ಶಾಖಾಹಾರ ಪದಾರ್ಥಗಳು ಹೋಟೆಲುಗಳಲ್ಲಿ ಸಿಗುತ್ತವೆ ಎಂದು ವಿನೋದವಾಗಿ ಹೇಳುವ ಪ್ರೊ|| ಎ.ಎಸ್. ಮೂರ್ತಿರಾವ್‌ರವರು ಹಾಗೂ ಡಾ|| ರಾ.ಯ. ಧಾರವಾಡಕರರು ಅವುಗಳ ಬಗೆಗೆ ಸಾಕಷ್ಟು ಹೇಳಿರುವರು.[೧೩] ಈ ವಿವರಗಳಿಂದ ವಿದೇಶಗಳಲ್ಲಿ ಸಂಚರಿಸುವ ಶಾಕಾಹಾರಿ ಪ್ರವಾಸಿಗಳ ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಗುವಂತಿದೆ.

ವಿದೇಶದಲ್ಲಿ ಸಂಚರಿಸುವ ಪ್ರವಾಸಿಗೆ ಇರುವ ದೊಡ್ಡ ಆತಂಕ ಭಾಷೆಯದು. ಅಮೆರಿಕ, ಇಂಗ್ಲೆಂಡ್, ಹಾಲೆಂಡ್, ಸ್ವಿಜರ್ಲೆಂಡ್ ದೇಶಗಳಲ್ಲಿ ಪ್ರವಾಸ ಮಾಡುವವರಿಗೆ ಭಾಷೆಯ ತೊಡಕು ಅಷ್ಟಾಗಿ ಬಾಧಿಸುವುದಿಲ್ಲ. ಅಲ್ಲೆಲ್ಲಾ ನಮಗೆ ತಿಳಿದಿರುವ ಇಂಗ್ಲಿಷ್ ನಡೆಯುತ್ತದೆ. ಇಂಗ್ಲಿಷ್ ರಾಜ್ಯ ಭಾಷೆಯಲ್ಲದ ದೇಶಗಳಲ್ಲಿ ಭಾರತೀಯ ಪ್ರವಾಸಿಗೆ ಭಾಷೆಯ ತೊಡಕು ಬಲವಾಗಿ ಕಾಡುತ್ತದೆ. ಉದಾಹರಣೆಗೆ ಜರ್ಮನಿ ಮತ್ತು ಆಸ್ಟ್ರಿಯಾಗಳಲ್ಲಿ ಜರ್ಮನ್ ಭಾಷೆ, ಫ್ರಾನ್ಸ್‌ನಲ್ಲಿ ಫ್ರೆಂಚ್ ಭಾಷೆ, ಇಟಲಿಯಲ್ಲಿ ಇಟಾಲಿಯನ್, ಹಾಲೆಂಡ್‌ನಲ್ಲಿ ಡಚ್, ನಾರ್ವೆ ಸ್ವೀಡನ್ ಮತ್ತು ಡೆನ್‌ಮಾರ್ಕ್‌ಗಳಲ್ಲಿ ಕ್ರಮವಾಗಿ ನಾರ್ವೇಜಿಯನ್, ಸ್ವೀಡಿಶ್ ಮತ್ತು ಡೇನಿಶ್ ಭಾಷೆಯನ್ನು ಬಳಸುವರು. ಬೆಲ್ಜಿಯಂನಂತಹ ಪುಟ್ಟ ರಾಷ್ಟ್ರದಲ್ಲಿ ಫ್ರೆಂಚ್ ಮತ್ತು ಫ್ಲೆಮಿಕ್ ಈ ಎರಡೂ ಭಾಷೆಗಳಿಗೆ ಸಮಾನ ಸ್ಥಾನ. ಸ್ವಿಟ್ಜರ್‌ಲೆಂಡ್‌ನಲ್ಲಿ ಜರ್ಮನ್, ಫ್ರೆಂಚ್, ಇಟಾಲಿಯನ್ ಮತ್ತು ರೋಮನ್ ಈ ನಾಲ್ಕೂ ಭಾಷೆಗಳು ಬಳಕೆಯಲ್ಲಿವೆ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಐದು ಭಾಷೆಗಳಿವೆ: ಬ್ರಿಟನ್‌ನಲ್ಲಿ ಇಂಗ್ಲಿಷ್, ವೇಲ್ಸ್‌ನಲ್ಲಿ ವೆಲ್ಷ್, ಸ್ಕಾಟ್‌ಲೆಂಡ್‌ನಲ್ಲಿ ಸ್ಕಾಟಿಶ್‌ಗೇಲಿಕ್, ಐರ್ಲೆಂಡ್‌ನಲ್ಲಿ ಐರಿಷ್ ಗೇಲಿಕ್ ಮತ್ತು ನೈರುತ್ಯ ಬ್ರಿಟನ್‌ನಲ್ಲಿ ಮೃತಭಾಷೆಯೆಂದು ಭಾವಿಸಲಾಗಿರುವ ಕೋನಿಶ್ ಭಾಷೆಗೆ ಜೀವತುಂಬುವ ವಿಶೇಷ ಪ್ರಯತ್ನ ನಡೆದಿದೆ.

ಪ್ರೊ|| ತೀ.ನಂ.ಶ್ರೀಯವರು ಹೇಳುವಂತೆ "ಪ್ರವಾಸಿಗಳ ಉಪಚಾರವನ್ನೇ ಹಿರಿಯ ಉದ್ಯಮವಾಗಿ ಮಾಡಿಕೊಂಡು, ಅಮೆರಿಕನ್ ಡಾಲರುಗಳನ್ನು ರಾಶಿ ರಾಶಿಯಾಗಿ ಗಳಿಸುತ್ತಿರುವ ಇಟಲಿಯ ಹೋಟಲುಗಳಲ್ಲೂ ಇಂಗ್ಲಿಷಿನ ಬಳಕೆ ತಕ್ಕಮಟ್ಟಿಗೆ

---

೧೩. ವಿವರಗಳಿಗೆ ನೋಡಿ: ಅಪರ ವಯಸ್ಕನ ಅಮೆರಿಕಯಾತ್ರೆ, ಪು. ೧೫೪-೧೬೪; ಡಾ|| ರಾ.ಯ. ಧಾರವಾಡಕರ ಅವರ 'ನಾನು ಕಂಡ ಅಮೆರಿಕೆ', ಪು. ೨೩೯-೨೪೬.

ಉಂಟು. (ಇಂಗ್ಲಿಷಿನಲ್ಲಿ ನೀವು ಮಾತಾಡಿದರೆ ಸಾಕು, ನಿಮಗೆ ಅಮೆರಿಕನ್ ಪಟ್ಟವನ್ನೇ ಕಟ್ಟಿ ದುಬಾರಿಯ ದರಗಳನ್ನು ನಿರ್ದಾಕ್ಷಿಣ್ಯವಾಗಿ ವಿಧಿಸುತ್ತಾರೆ)..."[೧೪] ಪಾಶ್ಚಾತ್ಯದೇಶಗಳಲ್ಲಿ ಪ್ರವಾಸಿಗಳ ಅನುಕೂಲಕ್ಕಾಗಿಯೇ ದ್ವಿಭಾಷಾ ಶಬ್ದಕೋಶಗಳು ನಿರ್ಮಾಣಗೊಂಡಿವೆ. ದಿನನಿತ್ಯದ ವ್ಯವಹಾರಕ್ಕೆ ಬೇಕಾಗುವ ಶಬ್ದಗಳು, ಶಬ್ದ ಸಮುಚ್ಚಯಗಳು, ವಾಕ್ಯಗಳು ಹಾಗೂ ಅವುಗಳ ಉಚ್ಚಾರಣೆಯನ್ನು ಈ ದ್ವಿಭಾಷಾ ಶಬ್ದಕೋಶಗಳಲ್ಲಿ ಕೊಡಲಾಗಿದೆ. ಒಮ್ಮೊಮ್ಮೆ ಸಂವಹನಕ್ಕೆ ಈ ಶಬ್ದಕೋಶದ ನೆರವೂ ಸಾಲದೆ ಬರುವುದುಂಟು. ಇದಕ್ಕೆ ನಿದರ್ಶನಾರ್ಥವಾಗಿ ಪ್ರೊ|| ತೀ.ನಂ.ಶ್ರೀ. ಸ್ವಾರಸ್ಯ ಪ್ರಸಂಗವೊಂದನ್ನು ತಮ್ಮ ಲೇಖನವೊಂದರಲ್ಲಿ ಹೇಳಿರುವರು. ಆ ಪ್ರಸಂಗ ಹೀಗಿದೆ: "ಒಬ್ಬ ಪ್ರವಾಸಿ ಫ್ರಾನ್ಸಿನಲ್ಲಿ ಊಟಕ್ಕಾಗಿ ಒಂದು ರೆಸ್ಟೊರಾಂಟಿಗೆ ಹೋದನಂತೆ. ಆತನಿಗೆ ನಡುವೆ ಉಪ್ಪು ಬೇಕಾಯಿತು. ಫ್ರೆಂಚಿನಲ್ಲಿ ಉಪ್ಪು ಎನ್ನುವುದಕ್ಕೆ ಸಮಾನ ಪದ ಯಾವುದೆಂದು ತಿಳಿಯದು. ತನ್ನ ಒಡನಾಡಿಯಾದ ಶಬ್ದಪುಸ್ತಕವನ್ನು ತೆರೆದು ನೋಡುತ್ತಾನೆ: ಆತನ ದುರ್ದೈವದಿಂದ ಅದರಲ್ಲಿ ಉಪ್ಪು ಇರಲಿಲ್ಲ ! "Salt Salt" ಎಂದು ಕೂಗಿದರೂ, ತಿಳಿದ ಸನ್ನೆಗಳನ್ನೆಲ್ಲಾ ಮಾಡಿದರೂ, ಅಲ್ಲಿಯ "ಮಾಣಿ"ಗೆ ಅರ್ಥವಾಗಲಿಲ್ಲ. ಕಡೆಗೆ ಈತನು ಉಪ್ಪಿಲ್ಲದೆಯೆ ಊಟ ಮುಗಿಸಿಕೊಂಡು ಹೊರಡಬೇಕಾಯಿತಂತೆ!"[೧೫]

ವಿದೇಶಗಳಲ್ಲಿ ಪ್ರವಾಸ ಮಾಡುವವರಿಗೆ ಹವಾಮಾನ ಪ್ರತಿಕೂಲ ಹೆಚ್ಚಿನ ಬೇಸರ, ನಿರಾಶೆಗಳನ್ನುಂಟುಮಾಡುತ್ತದೆ. ಪಶ್ಚಿಮ ಯೂರೋಪು ದೇಶಗಳಲ್ಲಿ ಪ್ರವಾಸಕ್ಕೆ ಸಾಮಾನ್ಯವಾಗಿ ಜೂನ್ ತಿಂಗಳ ಪ್ರಾರಂಭದಿಂದ ಸೆಪ್ಟೆಂಬರ್‌ವರೆಗಿನ ಬೇಸಿಗೆ ಕಾಲದ ಹವೆಯು ಸಹ್ಯ ಮತ್ತು ಹಿತಕರ. ಆ ಕಾಲದಲ್ಲಿ ಪ್ರವಾಸವು ಆಹ್ಲಾದನೀಯ. ಅಮೆರಿಕದಲ್ಲಿ ೨೨ ಸೆಪ್ಟೆಂಬರ್ ತಿಂಗಳಿಂದ ೨೧ ಡಿಸೆಂಬರ್‌ವರೆಗೆ ಶರತ್ಕಾಲ; ಡಿಸೆಂಬರ್ ೨೨ ರಿಂದ ೧೯ ಮಾರ್ಚ್‌ವರೆಗೆ ಶಿಶಿರ; ೨೦ ಮಾರ್ಚ್ ಇಂದ ೨೦ ಜೂನ್‌ವರೆಗೆ ವಸಂತ; ೨೧ ಜೂನ್ ಇಂದ ೨೧ ಸೆಪ್ಟೆಂಬರ್‌ವರೆಗೆ ಗ್ರೀಷ್ಮ. ಶರತ್ಕಾಲ ಮತ್ತು ಶಿಶಿರಗಳಲ್ಲಿ ಅಮೆರಿಕದಲ್ಲಿ ಚಳಿ, ಮಂಜು ಮತ್ತು ಮಳೆ. ನವೆಂಬರ್‌ನಲ್ಲಿ ಎಲೆಗಳು ಉದುರಿ ಕೊಂಬೆಗಳು ಬೋಳಾಗುತ್ತವೆ. ಎಲೆಗಳು ಉದುರುವ ಶಬ್ದ, ಗೂಬೆ ಮತ್ತು ವರಟೆಗಳ ಕೂಗಿನಿಂದ ನವಂಬರ್ ತಿಂಗಳು ಬಂದಿತು ಎಂದು ಹೇಳಬಹುದು. ಸಂಜೆ ಮೊಟಕಾಗಿ ಬೇಗ ಕತ್ತಲೆಯಾಗುತ್ತದೆ. ಮನೆಯಲ್ಲಿ ಹೀಟರಿನ ಜೊತೆಗೆ ಬೆಂಕಿಗೂಡಿನಲ್ಲಿ ಸೌದೆಯನ್ನು ಜನ ಉರಿಸುತ್ತಾರೆ. ವರಟೆಗಳು 'ಮೇಲೆದ್ದು ಹೊರಗೆ

---

೧೪. ನಂಟರು, ಪು. ೧೨೬-೧೨೭

೧೫. ನಂಟರು, ಪು. ೧೨೭-೧೨೮

ಹೋಗಿ' ಎಂದು ಕೂಗಿದರೆ ಗೂಬೆಗಳು ಮನೆಯಲ್ಲಿ ಬೆಚ್ಚಗೆ ಬೆಂಕಿಗೂಡಿನ ಮುಂದೆ ಕುಳಿತಿರಿ' ಎಂದು ಕೂಗುತ್ತವೆ. ಈ ಋತುವಿನಲ್ಲಿ ನಿಸರ್ಗ ಸೌಂದರ್ಯ ಮಾಯವಾಗುತ್ತದೆ. ರಂಗುರಂಗಿನ ಅಕ್ಟೋಬರ್ ಮತ್ತು ಮಸುಕಿನ ಡಿಸೆಂಬರ್ ನಡುವೆ ನವಂಬರ್ ತಾತ್ಕಾಲಿಕ ಬದಲಿ ಮಾತ್ರ. ಗ್ರೀಷ್ಮದಲ್ಲಿ ಕೊಂಬೆಗಳಿಂದ ಎಲೆಗಳು ಉದುರುತ್ತಲೇ ಇರುತ್ತವೆ (ಪ್ರೊ|| ವೀ. ಪುಟ್ಟಮಾದಪ್ಪ: ಮಂಜಿನ ಮಡಿಲಲ್ಲಿ, ಪು. ೨೮-೨೯).

ಶೀತವಲಯಗಳಲ್ಲಿ ಆಗಸ್ಟ್‌ನಿಂದ ಪ್ರಾರಂಭವಾದ ಚಳಿ ಡಿಸೆಂಬರ್ ವೇಳೆಗೆ ಶಿಖರವನ್ನು ಮುಟ್ಟುತ್ತದೆ. ಒಂದೇ ದಿನದಲ್ಲಿ ಉಷ್ಣಾಂಶ ೩೦$^0$F ಗೆ ಏರಿಳಿಯಬಹುದು. ನವಂಬರ್-ಡಿಸೆಂಬರ್ ತಿಂಗಳುಗಳಲ್ಲಿ (ಗಂಟೆಗೆ ೫೦ ಮೈಲಿ ವೇಗದಲ್ಲಿ) ಚಳಿಗಾಳಿ ಬೀಸುತ್ತಿರುತ್ತದೆ. ಆ ಕೊರೆಯುವ ಗಾಳಿಗೆ ಸಿಕ್ಕಿದ ಜೀವ ಉಳಿದರೆ ಸಾಕು ಎಂಬ ನಿಲುವಿಗೆ ಬಂದುಬಿಡುತ್ತದೆ. ಡಿಸೆಂಬರ್‌ನಲ್ಲಿ ದಟ್ಟವಾಗಿ ಸುರಿಯುವ ಭಾರಿ ಸ್ನೋ ಪ್ರವಾಸಿಯ ಉತ್ಸಾಹವನ್ನೇ ಬತ್ತಿಸುತ್ತದೆ. ಕಿಟಕಿಯ ಮೂಲಕ ಹೊರಗೆ ನೋಡಿದರೆ ಮನೆಯ ಸುತ್ತಮುತ್ತ ಎರಡು ಅಡಿಯುವರೆವಿಗೂ ಸ್ನೋ ಬಿದ್ದಿರುವುದು ಕಾಣಿಸುತ್ತದೆ. ದೇಹವನ್ನು ಹಿಂಡುವ ಆ ಚಳಿಗಾಳಿಗೆ ಜೀವ ತತ್ತರಿಸಿಹೋಗುತ್ತದೆ. ಜರ್ಮನಿ, ರಷ್ಯ, ಪೋಲೆಂಡ್‌ಗಳಲ್ಲಿ ಅಕ್ಟೋಬರ್ ವೇಳೆಗೆ ದಿನದ ಉಷ್ಣಾಂಶ ಸಾಧಾರಣವಾಗಿ ೧೮$^0$F ಇರುತ್ತದೆ. (ಬೆಂಗಳೂರಿನಲ್ಲಿ ದಿನದ ಉಷ್ಣಾಂಶ ೫೮$^0$F ಇರುವಾಗಲೇ ಚಳಿ ಎಂದು ಬೆಚ್ಚನೆಯ ವಸ್ತ್ರ ಧರಿಸಿ ಮನೆಯ ಕಿಟಕಿಗಳನ್ನು ಮುಚ್ಚಿ ಮನೆಯಲ್ಲಿ ಕೂರುವ ನಮಗೆ ವಿದೇಶಗಳಲ್ಲಿನ ಆ ಶೀತಹವೆ ಎಷ್ಟು ಬಾಧಿಸಬಹುದು ಎಂಬುದನ್ನು ಊಹಿಸಿದರೇ ನಡುಕ ಬರುತ್ತದೆ.) ವಿದೇಶಗಳಲ್ಲಿನ ಈ ಶೀತಹವಗೆ ತಕ್ಕ ಉಣ್ಣೆಯ ಉಡುಪುಗಳನ್ನು ಪ್ರವಾಸಿಗರು ಧರಿಸಬೇಕಾಗುತ್ತದೆ. ಮೊಳಕಾಲವರೆಗೆ ದಪ್ಪ ಉಣ್ಣೆಯ ಇಲ್ಲವೆ ಕುರಿರೋಮದ ಕೋಟನ್ನೂ, ಕೈಗಳಿಗೆ ಗ್ಲೌಸುಗಳನ್ನು ತೊಡಬೇಕಾಗುತ್ತದೆ. ಕಾಲಿಗೆ ಬೆಚ್ಚಗಿನ ಷೂಗಳನ್ನು ಧರಿಸಬೇಕಾಗುತ್ತದೆ. ಅಸ್ತಮಾ, ರಕ್ತದೊತ್ತಡಗಳಿರುವವರಿಗೆ, ಬಹು ಬೇಗ ಶೀತಹತ್ತುವವರಿಗೆ ಈ ಪ್ರತಿಕೂಲ ಹವೆಯಲ್ಲಿ ಪ್ರವಾಸ ಕಷ್ಟ ಹಾಗೂ ಅಪಾಯಕಾರಿ. ಹವಾಮಾನವನ್ನರಿತು ಪ್ರವಾಸ ಕಾರ್ಯಕ್ರಗಳನ್ನು ಹೊಂದಿಸುವುದು ಎಲ್ಲ ದೃಷ್ಟಿಯಿಂದಲೂ ಒಳಿತು.

ಪ್ರವಾಸೋದ್ಯಮ (travel industry) ಅಭಿವೃದ್ಧಿಗೊಳ್ಳಲು ಬಹಳ ಮುಖ್ಯವಾದುದು ಪ್ರಾದೇಶಿಕ ಭದ್ರತೆ, ಶಾಂತಿ ನೆಮ್ಮದಿ. ಅಭದ್ರ ಸ್ಥಿತಿಯಿಂದಾಗಿ ಶಾಂತಿ ಕದಡುತ್ತದೆ. ೧೯೯೧ರ ಜನವರಿಯಲ್ಲಿ ಇರಾಕ್ ಪ್ರಾರಂಭಿಸಿದ ಯುದ್ಧದಿಂದಾಗಿ ಜಗತ್ತು ತಲ್ಲಣಿಸಿ ಹೋಯಿತು. ಇದರಿಂದಾಗಿ ವಿಶ್ವದಾದ್ಯಂತ ಪ್ರವಾಸೋದ್ಯಮಕ್ಕೆ ಧಕ್ಕೆಯೊದಗಿತು. ಭಾರತದಲ್ಲಿ ಇಂದಿರಾಗಾಂಧಿ, ರಾಜೀವ್‌ಗಾಂಧಿಯವರ ದುರಂತ ಮರಣದಲ್ಲಿ ಉಗ್ರಗಾಮಿಗಳ ಕೈವಾಡವಿದ್ದುದರಿಂದ ಭಾರತಕ್ಕೆ ಪ್ರವಾಸ ಬರುವವರು

ಹೆದರುವಂತಾಯಿತು. ಪಂಜಾಬ್, ಕಾಶ್ಮೀರಗಳ ಉಗ್ರಗಾಮಿಗಳ ಶ್ರೀಲಂಕಾದ LTTEಗಳ ಭಯವಿದ್ದುದರಿಂದ ಭಾರತಕ್ಕೆ ಪ್ರವಾಸ ಹೋಗಬಾರದೆಂದು ವಿದೇಶಗಳಲ್ಲಿ ಅಪಪ್ರಚಾರವಾಯಿತು. ಇದರಿಂದ ದೇಶದ ಆದಾಯಕ್ಕೆ ದೊಡ್ಡ ನಷ್ಟ ಸಂಭವಿಸಿತು. ೨೦೦೪ರ ಕೊನೆಯವರೆವಿಗೂ ಉಗ್ರಗಾಮಿಗಳ ಭಯ ಪ್ರವಾಸಿಗರನ್ನು ವಿಶೇಷವಾಗಿ ಕಾಡುತ್ತಿತ್ತು.

ಭಾರತದಲ್ಲಿ ಪ್ರವಾಸೋದ್ಯಮ ರಾಷ್ಟ್ರಕ್ಕೆ ಬಲುದೊಡ್ಡ ಆದಾಯ ತರುವ 'ಉದ್ಯಮ'ವಾಗಿ ಇನ್ನೂ ಬೆಳೆಯುತ್ತಿದೆ. ಅಮೆರಿಕಾದ ಫ್ಲಾರಿಡಾ ಸಂಸ್ಥಾನ ವರ್ಷಕ್ಕೆ ನಾಲ್ಕುಕೋಟಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆಯಂತೆ. ಈ ಸಂಸ್ಥಾನ ಪ್ರವಾಸೋದ್ಯಮ ಒಂದರಿಂದಲೇ ಸಾವಿರ ಕೋಟಿ ಡಾಲರ್ ವಾರ್ಷಿಕ ವರಮಾನ ಪಡೆಯುತ್ತದೆಯಂತೆ.[೧೬] ಹೊರದೇಶಗಳಿಂದ ಪ್ರವಾಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ನಮ್ಮಲ್ಲಿ ಅಸಂಖ್ಯ ಪ್ರೇಕ್ಷಣೀಯ ಸ್ಥಳಗಳಿವೆ. ಕಾಶ್ಮೀರ, ಸಿಮ್ಲಾ, ಡಾರ್ಜಲಿಂಗ್, ಕೊಡೈಕೆನಾಲ್, ಊಟಿ ಮೊದಲಾದ ರಮಣೀಯ ನಿಸರ್ಗ ಸೌಂದರ್ಯದ ತಾಣಗಳಿವೆ; ದಟ್ಟವಾದ ಕಾಡುಗಳಿವೆ, ಅಲ್ಲಿ ಅಪರೂಪದ ವನ್ಯಜೀವಿಗಳಿವೆ, ಸಸ್ಯ ಸಂಪತ್ತಿದೆ; ಜಗತ್ತಿನ ವಿಶಿಷ್ಟ ಮೃಗಪಕ್ಷಿಗಳ ಸಂಗ್ರಹಾಲಯಗಳಿವೆ; ಭಾರತವನ್ನು ಆಳಿದ ಪ್ರಸಿದ್ಧ ಅರಸರ ಕೋಟೆ ಕೊತ್ತಲಗಳಿವೆ; ಶ್ರೇಷ್ಠ ವಾಸ್ತು ಶಿಲ್ಪಗಳಿವೆ; ಪ್ರಸಿದ್ಧ ದೇವಾಲಯಗಳಿವೆ; ಜಗದ್ವಿಖ್ಯಾತ ತಾಜಮಹಲ್ ಇದೆ; ಇಂದ್ರನ ನಂದನವನವನ್ನು ನೆನಪಿಸುವ ಪುಷ್ಪಕಾಶಿಗಳಿವೆ; ಸ್ವರ್ಗಸಮಾನವಾದ ಕೃಷ್ಣರಾಜಸಾಗರವಿದೆ; ರುದ್ರಮಯ ಜೋಗದ ಜಲಪಾತವಿದೆ: ಜನಾಂಗಿಕ ವೈಶಿಷ್ಟ್ಯಗಳಿವೆ; ಸಾಹಿತ್ಯ-ಸಂಗೀತ-ನೃತ್ಯಗಳಿಗೆ ತಮ್ಮದೇ ಆದ ಪ್ರಾಚೀನ ಪರಂಪರೆಯಿದೆ; ಎಲ್ಲಕ್ಕಿಂತ ಮಿಗಿಲಾಗಿ ನಮ್ಮಲ್ಲಿ ಭವ್ಯವಾದ ಹಿಮಾಲಯವಿದೆ. ಆದರೂ ನಾವು ಪ್ರವಾಸಿಗಳನ್ನು ಆಕರ್ಷಿಸುವುದರಲ್ಲಿ ಹಿಂದುಳಿದಿದ್ದೇವೆ. ವಿಶ್ವದ ಪ್ರತಿಯೊಂದು ರಾಷ್ಟ್ರವೂ ತನ್ನಲ್ಲಿನ ಪ್ರವಾಸೀ ಆಕರ್ಷಣೆಗಳಿಂದ ಪ್ರವಾಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಪೈಪೋಟಿ ನಡೆಸಿದೆ. ಆ ಮೂಲಕ ತಮ್ಮ ರಾಷ್ಟ್ರದ ಬೊಕ್ಕಸವನ್ನು ತುಂಬಿಕೊಳ್ಳುತ್ತಿವೆ. ಯು.ಎಸ್:ಎಸ್.ಆರ್. ಹಾಗೂ ಚೈನಾ ದೇಶಗಳು ತಮ್ಮ ರಾಷ್ಟ್ರೀಯ ಆದಾಯದಲ್ಲಿ ಪ್ರವಾಸೋದ್ಯಮದ ಪ್ರಾಮುಖ್ಯತೆಯನ್ನು ಗುರುತಿಸಿವೆ. ಯು.ಎಸ್.ಎಸ್.ಆರ್ ತನ್ನ ಪ್ರಸ್ತುತ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಬಿಲಿಯನ್ ಡಾಲರನ್ನು ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿದೆ. ಹಾಗೆಯೇ, ಸುಮಾರು ೧೦೦ ಅಭಿವೃದ್ಧಿಶೀಲ ರಾಷ್ಟ್ರಗಳು ಪ್ರವಾಸೋದ್ಯಮ ಅಭಿವೃದ್ಧಿಯ ಬಗೆಗೆ ಆಸಕ್ತಿ ತಾಳಿವೆ. UNDP, ILO ಹಾಗೂ WTO -ಇವೇ ಮೊದಲಾದ ಯು.ಎನ್. ಏಜೆನ್ಸಿಗಳು ಈ ದೇಶಗಳಲ್ಲಿ ಪ್ರವಾಸೀ ಸೌಲಭ್ಯಗಳನ್ನು ಅಭಿವೃದ್ಧಿ

---

೧೬. ನೋಡಿ: ಪ್ರೊ||ಎನ್. ನಂಜುಂಡಶಾಸ್ತ್ರಿ: ಅಮೆರಿಕ-ಭಾರತೀಯನ ದೃಷ್ಟಿಯಲ್ಲಿ (೧೯೮೭)

ಪಡಿಸುವುದು, ಟೂರಿಸ್ಟ್ ಇನಫ್ರಾಸ್ಟ್ರಕ್ಚರ್ ಹಾಗೂ ತರಬೇತಿ ಕಾರ್ಯಕ್ರಮ - "ನಕಾಶೆಯಲ್ಲಿ ಕೇವಲ ಚುಕ್ಕೆಗಳಂತಿರುವ ಸಿಂಗಾಪುರ, ಹಾಂಕಾಂಗ್ ಮುಂತಾದ ರಾಷ್ಟ್ರಗಳೂ ನಮ್ಮ ಬೃಹತ್ ಭಾರತಕ್ಕಿಂತಲೂ ಹೆಚ್ಚಿನ ವಿದೇಶಿ ವಿನಿಮಯವನ್ನು ಗಳಿಸುತ್ತಿವೆ. ಶೇಕಡಾ ಎಂಬತ್ತರಷ್ಟು ಅಂತರರಾಷ್ಟ್ರೀಯ ಪ್ರವಾಸೋದ್ಯಮವು ಪಶ್ಚಿಮ ಯುರೋಪದ ಒಂಬತ್ತು ರಾಷ್ಟ್ರಗಳಲ್ಲಿ ಸಂಯುಕ್ತ ರಾಷ್ಟ್ರ, ಕೆನಡಾ, ಜಪಾನ್ ಮತ್ತು ಆಸ್ಟ್ರೇಲಿಯಾಗಳಲ್ಲಿ ಹರಿದು ಹಂಚಿಹೋಗಿದೆ.[೧೭]

ಭಾರತದ ಅಭಿವೃದ್ಧಿಗೆ ಇಂದು ಅಗತ್ಯವಾಗಿರುವ ವಿದೇಶಿ ವಿನಿಮಯದ ಗಳಿಕೆಯಲ್ಲಿ ಪ್ರವಾಸೋದ್ಯಮ ಒಂದು ಪ್ರಬಲ ಸಾಧನೆವಾಗಿದೆ. ಭಾರತ ಸರಕಾರ ೧೯೫೫ರಿಂದೀಚೆಗೆ ಪ್ರವಾಸೋದ್ಯಮದ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿದೆ. ಕೇಂದ್ರ ಸರಕಾರ ಪ್ರತಿಯೊಂದು ರಾಜ್ಯದಲ್ಲೂ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆಗಳನ್ನು ಪ್ರಾರಂಭಿಸಿ, ಹಣಕಾಸಿನ ನೆರವನ್ನು ನೀಡಿ, ಪ್ರವಾಸೀ ಆಕರ್ಷಣೆಗಳನ್ನು ಉತ್ತಮಪಡಿಸುವ ಹಾಗೂ ಪ್ರವಾಸಿಗರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವ ಪ್ರಯತ್ನ ನಡೆಸುತ್ತಿದೆ. ರಾಜ್ಯ ಸರಕಾರಗಳೂ ಪ್ರವಾಸೋದ್ಯಮದ ಅಭಿವೃದ್ಧಿಗೆ ಹೊಸ ಹೊಸ ಯೋಜನೆಗಳನ್ನು ಸಿದ್ಧಪಡಿಸಿ, ತಮ್ಮ ತಮ್ಮ ರಾಜ್ಯಗಳಿಗೆ ವಿದೇಶೀ ಪ್ರವಾಸಿಗರನ್ನು ಆಕರ್ಷಿಸಲು ವಿಶೇಷವಾಗಿ ಶ್ರಮಿಸುತ್ತಿವೆ. ಆದರೂ ನಮ್ಮ ಪ್ರಗತಿ ತೃಪ್ತಿಕರವಾಗಿಲ್ಲ. "೧೯೬೦ ರಿಂದ ೧೯೭೫ರ ಈ ಹದಿನೈದು ವರ್ಷಗಳ ಅವಧಿಯಲ್ಲಿ ೧,೨೩,೧೦೦ ಇದ್ದ ಪ್ರವಾಸಿಗಳ ಸಂಖ್ಯೆ ೪,೨೩,೧೬೧ಕ್ಕೆ ಏರಿದೆ. ವಿದೇಶೀ ವಿನಿಮಯದ ಆದಾಯ ೨೦.೫೬ ಕೋಟಿ ರೂಪಾಯಿ ಇದ್ದದ್ದು ೬೯.೬೫ ಕೋಟಿ ರೂಪಾಯಿಗೆ ಏರಿದೆ... ೧೯೭೪ರ ಜಗತ್ತಿನ ಒಟ್ಟು ಆದಾಯದಲ್ಲಿ ನಮ್ಮದು ಕೇವಲ ಶೇಕಡಾ ೦.೩°ವಷ್ಟು ಇದೆ."[೧೮]

ವಿದೇಶೀ ವಿನಿಮಯದ ಗಳಿಕೆಯೇ ಪ್ರಬಲ ಗುರಿಯಾಗಿ ಕೇಂದ್ರ ಸರಕಾರವು ೧೯೮೧ನೇ ವರ್ಷವನ್ನು **'ಪ್ರವಾಸಿ ವರ್ಷ'**ವಾಗಿ ಘೋಷಿಸಿತು. ಸಾಕಷ್ಟು ಪೂರ್ವ ಸಿದ್ಧತೆಗಳಿಲ್ಲದೆ, ವಿದೇಶೀ ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವಲ್ಲಿ ವಿಶೇಷ ಮುಂಜಾಗರೂಕತೆ ವಹಿಸದೆ, ಪ್ರವಾಸೀ ಆಕರ್ಷಣೆಗಳ ಕಡೆಗೆ ಹಾಗೂ ಅವುಗಳನ್ನು ಪುನರ್ವ್ಯವಸ್ಥೆಗೊಳಿಸುವ ಕಡೆಗೆ ಗಮನಕೊಡದೆ ಇದ್ದುದರಿಂದ ಕೇಂದ್ರ ಸರಕಾರ ತನ್ನ ಈ ಯೋಜನೆಯಲ್ಲಿ ಹೆಚ್ಚಿನ ಪ್ರಗತಿ ಕಾಣಲಿಲ್ಲ.

---

೧೭. ಜೆ.ಎಸ್. ವಡಗಾಂವಿ: ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ (೧೯೭೬) ಪು. ೮

೧೮. ಅದೇ, ಪು. ೯

೧೯೮೭ರಲ್ಲಿ ಭಾರತಕ್ಕೆ ಭೇಟಿ ನೀಡಿದ ಸಂಖ್ಯೆ ೮,೩೪,೮೨೪. ಮಹಿಳೆಯರ ಸಂಖ್ಯೆ ೩,೨೭,೬೨೪. ಮಕ್ಕಳ ಸಂಖ್ಯೆ ೧,೩೨೬. ಒಟ್ಟು ಪ್ರವಾಸಿಗರ ಸಂಖ್ಯೆ ೧೧,೬೩,೭೭೪. ೧೯೮೮ರಲ್ಲಿ ಇದು ಕ್ರಮವಾಗಿ ೮,೬೫,೬೦೧, ೩,೭೩,೦೧೫, ೧,೩೭೬, ೧೨,೩೯,೯೯೨ಕ್ಕೆ ಏರಿತು.

### ೧೯೮೭-೮೮ರಲ್ಲಿ ಭಾರತಕ್ಕೆ ಖುಷಿ ಪ್ರವಾಸಿಗರಾಗಿ ಬಂದ ಮೊದಲ ಹತ್ತು ದೇಶಗಳವರು

| ರಾಷ್ಟ್ರ | ೧೯೯೭ | ೧೯೮೮ | %ವ್ಯತ್ಯಾಸ | %ಭಾಗಾಂಶ |
|---|---|---|---|---|
| ಯು.ಕೆ. | ೧,೦೨,೭೮೦ | ೧,೪೨,೬೪೬ | ೩೮.೮ | ೧೬.೪ |
| ಯು.ಎಸ್.ಎ. | ೭೪,೧೨೦ | ೭೯,೮೮೮ | ೭.೮ | ೯.೨ |
| ಎಫ್.ಆರ್.ಜಿ. | ೫೧,೪೬೭ | ೬೦,೯೩೫ | ೧೮.೪ | ೭.೦ |
| ಶ್ರೀಲಂಕಾ | ೬೦,೦೪೮ | ೫೯,೯೯೬ | -೦೧ | ೬.೯ |
| ಫ್ರಾನ್ಸ್ | ೪೮,೦೦೫ | ೫೫,೫೧೮ | ೧೫.೭ | ೬.೪ |
| ಜಪಾನ್ | ೩೪,೬೧೯ | ೪೦,೪೪೦ | ೧೬.೮ | ೪.೬ |
| ಇಟಲಿ | ೩೧,೪೯೪ | ೩೬,೯೫೧ | ೧೭.೩ | ೪.೨ |
| ಯು.ಎಸ್.ಎಸ್.ಆರ್ | ೧೯,೦೨೧ | ೨೫,೭೨೭ | ೩೫.೩ | ೩.೦ |
| ಕೆನಡಾ | ೧೮,೯೫೧ | ೨೧,೫೪೮ | ೧೩.೭ | ೨.೫ |
| ಆಸ್ಟ್ರೇಲಿಯಾ | ೨೦,೭೬೮ | ೨೦,೭೦೮ | -೦೩ | ೨.೪ |
| ಒಟ್ಟು ಖುಷಿ ಪ್ರವಾಸಿಗರು | ೭,೧೬,೪೪೯ | ೮,೭೨,೦೭೬ | ೨೧.೭ | - |

### ಮೊದಲ ಹತ್ತು ದೇಶಗಳಿಂದ ಭಾರತಕ್ಕೆ ಆಗಮಿಸಿದ ಪ್ರವಾಸಿಗರು

| ರಾಷ್ಟ್ರ | ೧೯೮೭ | ೧೯೮೮ | %ವ್ಯತ್ಯಾಸ | %ಭಾಗಾಂಶ |
|---|---|---|---|---|
| ಯು.ಕೆ. | ೧,೬೬,೫೯ | ೨,೦೦,೫೦೯ | ೨೦.೪ | ೧೬.೨ |
| ಯು.ಎಸ್.ಎ. | ೧,೩೪,೮೭೬ | ೧,೨೨,೮೮೮ | -೮.೯ | ೯.೯ |
| ಎಫ್.ಆರ್.ಜಿ | ೭೦,೬೯೭ | ೭೬,೩೭೧ | ೮.೦ | ೬.೨ |
| ಶ್ರೀಲಂಕಾ | ೭೪,೩೫೧ | ೭೦,೬೪೦ | -೫.೦ | ೫.೭ |
| ಫ್ರಾನ್ಸ್ | ೬೪,೪೩೨ | ೬೯,೭೯೯ | ೮.೩ | ೫.೬ |
| ಜಪಾನ್ | ೪೬,೨೪೦ | ೪೯,೨೪೪ | ೬.೫ | ೪.೦ |
| ಇಟಲಿ | ೪೧,೧೫೧ | ೪೭,೬೧೨ | ೧೫.೭ | ೩.೮ |
| ಕೆನಡಾ | ೩೭,೬೭೭ | ೩೭,೪೯೮ | -೦.೫ | ೩.೦ |
| ಯು.ಎಸ್.ಎಸ್.ಆರ್ | ೨೭.೯೬೮ | ೩೩,೭೩೯ | ೨೦.೬ | ೨.೭ |
| ಆಸ್ಟ್ರೇಲಿಯಾ | ೩೨,೮೮೩ | ೩೧,೪೫೨ | -೪.೩ | ೨.೫ |
| ಒಟ್ಟು | ೧೧,೬೩,೭೭೪೧೨, | ೩೯,೯೯೨ | ೬.೫ | ೧೦೦.೦ |

## ಪ್ರಮುಖ ಭಾಗಗಳಿಂದ ಭಾರತಕ್ಕೆ ಆಗಮಿಸಿದ ಪ್ರವಾಸಿಗಳು

| ಪ್ರದೇಶ | ೧೯೮೭ | ೧೯೮೮ | %ವ್ಯತ್ಯಾಸ | %ಭಾಗಾಂಶ |
|---|---|---|---|---|
| ಯೂರೋಪ್ | ೫,೦೩,೬೯೮ | ೫,೭೫,೦೯೩ | ೧೪.೨ | ೪೬.೪ |
| ಏಷ್ಯಾ | ೩,೮೫,೫೪೬ | ೩,೯೬,೩೮೫ | ೨.೮ | ೩೨.೦ |
| ಅಮೇರಿಕಾ | ೧,೮೦,೪೬೧ | ೧,೬೯,೧೭೮ | -೬.೩ | ೧೩.೬ |
| ಆಫ್ರಿಕಾ | ೫೧,೮೯೮ | ೫೭,೦೧ | ೧೧.೮ | ೪.೭ |
| ಆಸ್ಟ್ರೇಲಿಯಾ | ೪೧,೬೭೪ | ೪೦,೭೩೫ | -೨.೩ | ೩.೩ |
| ಇತರೆ | ೪೯೭ | ೫೮೭ | ೧೮.೧ | - |
| ಒಟ್ಟು | ೧೧,೬೩,೭೭೪ | ೧೨,೩೯,೯೯೨೬ | ೫ | ೧೦೦.೦ |

## ವಯೋಮಾನ ಸಮೂಹದಲ್ಲಿ ಭಾರತಕ್ಕೆ ಆಗಮಿಸಿದ ಪ್ರವಾಸಿಗರು

| ವಯೋಮಾನ ಸಮೂಹ | ೧೯೮೭ | ೧೯೮೮ | %ವ್ಯತ್ಯಾಸ | %ಭಾಗಾಂಶ |
|---|---|---|---|---|
| ೩-೧೪ | ೮೭,೬೫೦ | ೯೦,೮೪೦ | ೩.೬ | ೭.೩ |
| ೧೫-೨೪ | ೧,೨೧,೮೬೭ | ೧,೩೨,೨೫೬ | ೮.೫ | ೧೦.೭ |
| ೨೫-೩೪ | ೩,೧೫,೧೭೬ | ೩,೨೫,೫೩೪ | ೩.೩ | ೨೬.೩ |
| ೩೫-೪೪ | ೩,೦೬,೪೭೧ | ೩,೫೧-೧೯೦ | ೧೪.೬ | ೨೮.೩ |
| ೪೫-೫೪ | ೧,೮೮,೯೩೨ | ೧,೯೯,೨೩೨ | ೫,೫ | ೧೬.೧ |
| ೫೫-೬೪ | ೯೪,೩೯೮ | ೯೪,೮೮೩ | ೦.೫ | ೭.೬ |
| ೬೫ಕ್ಕಿಂತ ಮೇಲ್ಪಟ್ಟು | ೪೪-೭೪೫ | ೪೦.೬೪೬ | -೯.೨ | ೩.೩ |
| ಎನ್.ಎ | ೪,೫೩೫ | ೫,೪೧೧ | ೧೯.೩ | ೦.೪ |
| ಒಟ್ಟು | ೧೧,೬೩,೭೭೪ | ೧೨,೩೯,೯೯೨ | ೬.೫ | ೧೦೦.೦ |

## ಭೇಟಿಯ ಉದ್ದೇಶದಿಂದ ಭಾರತಕ್ಕೆ ಆಗಮಿಸಿದ ಪ್ರವಾಸಿಗರು

| ಉದ್ದೇಶ | ೧೯೮೭ | ೧೯೮೮ | %ವ್ಯತ್ಯಾಸ | %ಭಾಗಾಂಶ |
|---|---|---|---|---|
| ಖುಷಿಗಾಗಿ | ೭,೧೬,೪೪೯ | ೮,೭೨,೦೭೬ | ೨೧.೭ | ೭೦.೩ |
| ವ್ಯಾಪಾರಕ್ಕಾಗಿ | ೨,೨೨,೬೫೬ | ೧,೯೭,೫೧೭ | -೧೧.೩ | ೧೫.೯ |
| ವಿ.ಎಫ್.ಆರ್ | ೧,೨೦,೩೨೭ | ೯೪,೯೦೧ | -೨೧.೧ | ೭.೭ |
| ಅಧ್ಯಯನಕ್ಕಾಗಿ | ೫೫.೪೧೪ | ೪೬,೯೨೦ | -೧೫.೩ | ೩.೮ |
| ಸಮ್ಮೇಳನಕ್ಕಾಗಿ | ೧೦,೮೭೦ | ೭,೦೯೨ | -೩೪.೮ | ೦.೬ |
| ಇತರೆ | ೩೮,೦೫೮ | ೨೧,೪೮೬ | -೪೩.೫ | ೧.೭ |
| ಒಟ್ಟು | ೧೧,೬೩,೭೭೪ | ೧೨,೩೯,೯೯೨ | ೬.೫ | ೧೦೦.೦ |

## ಭಾರತದ ರಾಷ್ಟ್ರೀಯರು ವಿದೇಶಗಳಿಗೆ ಹೋದದ್ದು

| ತಿಂಗಳು | ೧೯೮೭ | ೧೯೮೮ | %ವ್ಯತ್ಯಾಸ | %ಭಾಗಾಂಶ |
|---|---|---|---|---|
| ಜನವರಿ | ೧,೬೮,೪೨೦ | ೧,೯೨,೩೪೧ | ೧೪.೨ | ೮.೬ |
| ಫೆಬ್ರವರಿ | ೧,೫೧,೩೨೦ | ೧,೬೯,೬೨೦ | ೧೨.೧ | ೭.೬ |
| ಮಾರ್ಚ್ | ೧,೬೪,೧೬೨ | ೧,೭೫,೬೩೬ | ೭.೦ | ೭.೯ |
| ಏಪ್ರಿಲ್ | ೧,೮೯,೨೮೨ | ೨,೦೧,೮೦೧ | ೬.೬ | ೯.೦ |
| ಮೇ | ೧,೯೨,೭೯೧ | ೨,೦೨,೯೮೯ | ೫.೩ | ೯.೧ |
| ಜೂನ್ | ೧,೭೯,೮೬೩ | ೨,೦೦,೦೮೮ | ೧೧.೨ | ೯.೦ |
| ಜುಲೈ | ೧,೯೪,೦೧೨ | ೨,೦೪,೦೪೩ | ೫.೨ | ೯.೧ |
| ಆಗಸ್ಟ್ | ೧,೮೫,೪೨೦ | ೧,೮೬,೯೪೪ | ೦.೮ | ೮.೪ |
| ಸೆಪ್ಟೆಂಬರ್ | ೧,೯೬,೬೬೪ | ೧,೮೮,೬೨೪ | -೪.೧ | ೮.೫ |
| ಅಕ್ಟೋಬರ್ | ೧,೬೦,೬೭೩ | ೧,೬೮,೭೩೭ | ೫.೦ | ೭.೬ |
| ನವೆಂಬರ್ | ೧,೫೫,೩೩೪ | ೧,೬೨,೪೨೬ | ೪.೬ | ೭.೩ |
| ಡಿಸೆಂಬರ್ | ೧,೭೨,೩೧೨ | ೧,೭೬,೯೦೬ | ೨.೭ | ೭.೯ |
| ಒಟ್ಟು | ೨೧,೧೦,೨೫೩ | ೨೨,೩೦,೧೫೫ | ೫.೭ | ೧೦೦.೦ |
| ವಾಯುಮಾನ | ೧೯,೩೬,೦೩೭ | ೨೦,೪೮,೮೬೬ | | |
| ಸಮುದ್ರಯಾನ | ೬೬ | ೭೦ | | |
| ಭೂಯಾನ | ೧,೭೪,೧೫೦ | ೧,೮೧,೩೧೯ | | |

## ವಿದೇಶಿ ಪ್ರವಾಸಿಗರ ಆಗಮನ

### (ಪಾಕಿಸ್ತಾನ ಹಾಗೂ ಬಾಂಗ್ಲಾದೇಶಗಳ ರಾಷ್ಟ್ರೀಯರು ಹೊರತಾಗಿ)

| | ಪ್ರವಾಸಿಗರು ಬಂದದ್ದು | | | ಶೇಕಡಾವಾರು ವ್ಯತ್ಯಾಸ | |
|---|---|---|---|---|---|
| ತಿಂಗಳು | ೧೯೮೮ | ೧೯೮೯ | ೧೯೯೦ | ೧೯೮೯/೮೮ | ೧೯೯೦/೮೯ |
| ಜನವರಿ | ೧,೨೧,೮೯೧ | ೧,೨೮,೦೭೧ | ೧,೪೧,೫೯೪ | ೫.೧ | ೧೦.೬ |
| ಫೆಬ್ರವರಿ | ೧,೦೮,೨೩೪ | ೧,೧೩,೦೯೮ | ೧,೨೪,೬೯೨ | ೪.೫ | ೧೦.೩ |
| ಮಾರ್ಚ್ | ೧,೦೫.೬೯೪ | ೧,೧೯,೬೬೫ | ೧,೧೭,೫೪೩ | ೧೩.೨ | -೧.೮ |
| ಏಪ್ರಿಲ್ | ೭೯,೭೪೪ | ೮೨,೭೬೯ | ೯೧,೭೦೮ | ೩.೮ | ೧೦.೮ |
| ಮೇ | ೬೭,೪೯೦ | ೭೬,೨೫೩ | ೭೭,೭೯೭(ರಿ). | ೧೩.೦ | ೨.೯ |
| ಜೂನ್ | ೮೨,೨೫೪ | ೮೬,೩೯೩ | ೮೫,೩೧೭(ಪ್ರಾ.) | ೫.೦ | -೧.೨ |
| ಒಟ್ಟು | ೫,೬೫,೩೦೭ | ೬,೦೬,೨೪೯ | ೬೩೮,೬೫೧(ಪ್ರಾ.) | ೭.೨ | ೫.೩ |

### (ಪಾಕಿಸ್ತಾನ ಹಾಗೂ ಬಾಂಗ್ಲಾದೇಶಗಳ ರಾಷ್ಟ್ರೀಯರು ಸೇರಿದಂತೆ)

| | ಪ್ರವಾಸಿಗರು ಬಂದದ್ದು | | | ಶೇಕಡಾವಾರು ವ್ಯತ್ಯಾಸ | |
|---|---|---|---|---|---|
| ತಿಂಗಳು | ೧೯೮೮ | ೧೯೮೯ | ೧೯೯೦ | ೧೯೮೯/೮೮ | ೧೯೯೦/೮೯ |
| ಜನವರಿ | ೧,೪೯.೧೫೬ | ೧,೫೫,೬೩೩ | ೧,೭೭,೯೮೪ | ೪.೩ | ೧೪.೪ |
| ಫೆಬ್ರವರಿ | ೧,೩೬,೭೭೬ | ೧,೪೨,೨೭೯ | ೧,೫೪,೭೫೮ | ೪.೦ | ೮.೮ |
| ಮಾರ್ಚ್ | ೧,೩೮,೮೪೦ | ೧,೫೫,೪೯೭ | ೧,೪೯,೬೫೩ | ೧೨.೦ | -೩.೮ |
| ಏಪ್ರಿಲ್ | ೧,೦೮,೮೦೪ | ೧,೧೪,೦೪೬ | ೧,೨೨,೯೮೬ | ೪.೮ | ೭.೮ |
| ಮೇ | ೯೪,೬೪೯ | ೧,೦೪,೨೩೭ | ೧,೦೭,೯೮೯(ರಿ). | ೧೦.೧ | ೩.೬ |
| ಜೂನ್ | ೧,೧೧,೩೮೧ | ೧,೨೦,೧೮೮ | ೧,೧೦,೧೩೬(ಪ್ರಾ) | ೭.೯ | -೮.೨ |
| ಒಟ್ಟು | ೭,೩೯,೬೦೬ | ೭,೯೧,೮೮೦ | ೮,೨೩,೭೩೧(ಪ್ರಾ) | ೭೧ | ೪.೦ |

ರಿ: ರಿವೈಸ್ಡ್

ಪ್ರಾ: ಪ್ರಾವಿಷನಲ್

| | ಪ್ರವಾಸಿಗರು ಬಂದದ್ದು | | | ಶೇಕಡಾವಾರು ವ್ಯತ್ಯಾಸ | |
|---|---|---|---|---|---|
| ತಿಂಗಳು | ೨೦೦೩ | ೨೦೦೪ | ೨೦೦೫ | ೨೦೦೪/೦೩ | ೨೦೦೫/೦೪ |
| ಜನವರಿ | ೨೭೪೨೧೫ | ೩೧೭೫೧೦ | ೩೬೩೬೩೧ | ೧೫.೮ | ೧೪.೫ |
| ಫೆಬ್ರವರಿ | ೨೬೨೬೯೨ | ೩೧೭೪೯೮ | ೩೭೨೨೬೯ | ೨೦.೯ | ೧೭.೩ |
| ಮಾರ್ಚ್ | ೨೧೮೪೭೩ | ೨೭೨೭೯೬ | ೩೪೧೫೫೪ | ೨೪.೯ | ೨೫.೨ |
| ಏಪ್ರಿಲ್ | ೧೬೦೯೪೧ | ೨೧೯೦೬೪ | ೨೫೫೨೧೨ | ೩೬.೧ | ೧೬.೫ |
| ಮೇ | ೧೪೧೫೦೮ | ೧೮೦೩೧೪ | ೨೨೩೧೬೭ | ೨೭.೪ | ೨೩.೮ |
| ಜೂನ್ | ೧೭೬೩೨೪ | ೨೧೭೪೬೩ | ೨೫೨೨೫೮ | ೨೩.೩ | ೧೬.೦ |
| ಜುಲೈ | ೨೨೫೩೫೯ | ೨೬೯೧೭೧ | ೨೮೮೯೨೧ | ೧೯.೪ | ೭.೩ |
| ಆಗಸ್ಟ್ | ೨೦೪೯೪೦ | ೨೬೩೫೧೧ | ೨೮೧೬೭೦ | ೨೮.೬ | ೬.೯ |
| ಸೆಪ್ಟೆಂಬರ್ | ೧೯೧೩೩೯ | ೨೩೫೯೭೦ | ೨೬೨೯೨೫ | ೨೩.೩ | ೧೧.೪ |
| ಅಕ್ಟೋಬರ್ | ೨೬೦೫೮೯ | ೩೦೦೯೪೪ | ೩೨೧೯೮೦ | ೧೫.೫ | ೭.೦ |
| ನವೆಂಬರ್ | ೨೯೦೫೮೩ | ೩೫೫೬೦೯ | ೩೮೩೩೭೩ | ೨೨.೪ | ೭.೮ |
| **ಒಟ್ಟು** | **೨೪೦೬೯೪೩** | **೨೯೪೯೮೫೦** | **೩೩೪೬೯೬೦** | **೨೨.೫** | **೧೩.೫** |

**ವಿದೇಶಿ ವಿನಿಮಯ ಗಳಿಕೆ (ಕೋಟಿ ರೂಪಾಯಿ ಲೆಕ್ಕದಲ್ಲಿ)**

| | ಪ್ರವಾಸಿಗರು ಬಂದದ್ದು | | | ಶೇಕಡಾವಾರು ವ್ಯತ್ಯಾಸ | |
|---|---|---|---|---|---|
| ಜನವರಿ | ೧೫೦೫.೦೬ | ೧೯೯೮.೬೨ | ೨೫೨೭.೭೪ | ೩೨.೮ | ೨೬.೫ |
| ಫೆಬ್ರವರಿ | ೧೪೪೧.೮೨ | ೧೯೯೮.೫೫ | ೨೫೯೫.೪೮ | ೩೮.೬ | ೨೯.೯ |
| ಮಾರ್ಚ್ | ೧೧೯೯.೧೨ | ೧೭೭೭.೮೩ | ೨೨೯೨.೬೫ | ೪೮.೩ | ೨೯.೦ |
| ಏಪ್ರಿಲ್ | ೧೧೫೩.೦೦ | ೧೪೨೨.೬೭ | ೧೬೯೧.೩೭ | ೨೩.೪ | ೧೮.೯ |
| ಮೇ | ೧೦೧೩.೭೯ | ೧೧೪೬.೩೫ | ೧೪೬೪.೫೩ | ೧೩.೧ | ೨೭.೮ |
| ಜೂನ್ | ೧೨೬೩.೨೧ | ೧೬೫೯.೮೯ | ೧೯೫೫.೨೭ | ೩೧.೪ | ೧೭.೮ |
| ಜುಲೈ | ೧೪೮೮.೫೨ | ೧೮೩೫.೯೮ | ೨೦೨೦.೮೪ | ೨೩.೩ | ೧೦.೧ |
| ಆಗಸ್ಟ್ | ೧೩೫೩.೬೬ | ೧೮೧೦.೬೭ | ೧೯೮೫.೩೫ | ೨೬.೦ | ೧೫.೯ |
| ಸೆಪ್ಟೆಂಬರ್ | ೧೨೬೩.೮೨ | ೧೫೯೩.೦೨ | ೧೮೪೬.೩೫ | ೨೬.೦ | ೧೫.೯ |
| ಅಕ್ಟೋಬರ್ | ೧೪೨೧.೦೬ | ೧೭೯೫.೬೫ | ೨೧೩೩.೪೧ | ೨೬.೪ | ೧೮.೮ |
| ನವೆಂಬರ್ | ೧೬೮೪.೭೪ | ೨೦೭೨.೮೭ | ೨೪೪೫.೩೧ | ೩೦.೮ | ೧೮.೦ |
| **ಒಟ್ಟು** | **೧೪೬೮೭.೮೦** | **೧೯೧೧೨.೧೦** | **೨೨೯೫೭.೯೯** | **೩೦.೧** | **೨೦.೧** |

ವಿದೇಶಿ ವಿನಿಮಯ ಗಳಿಕೆ (ಮಿಲಿಯನ್ ಡಾಲರ್ ಲೆಕ್ಕದಲ್ಲಿ)

| | ಪ್ರವಾಸಿಗರು ಬಂದದ್ದು | | | ಶೇಕಡಾವಾರು ವ್ಯತ್ಯಾಸ | |
|---|---|---|---|---|---|
| ಜನವರಿ | ೩೧೫.೧೦ | ೪೪೨.೯೮ | ೫೫೫.೭೩ | ೪೦.೬ | ೨೫.೫ |
| ಫೆಬ್ರವರಿ | ೩೦೧.೮೫ | ೪೪೨.೯೭ | ೫೭೦.೬೩ | ೪೬.೮ | ೨೮.೮ |
| ಮಾರ್ಚ್ | ೨೫೧.೦೫ | ೩೯೪.೦೪ | ೫೨೪.೮೮ | ೫೭.೦ | ೩೩.೨ |
| ಏಪ್ರಿಲ್ | ೨೫೪.೦೬ | ೩೨೫.೬೨ | ೩೮೭.೧೨ | ೩೨.೯ | ೧೮.೯ |
| ಮೇ | ೨೧೫.೪೭ | ೨೬೨.೩೮ | ೩೩೫.೨೧ | ೨೧.೮ | ೨೭.೮ |
| ಜೂನ್ | ೨೬೮.೪೭ | ೩೬೪.೭೨ | ೪೪೭.೬೪ | ೩೫.೯ | ೨೨.೭ |
| ಜುಲೈ | ೩೨೩.೭೩ | ೪೧೭.೬೪ | ೪೬೩.೬೭ | ೨೯.೦ | ೧೧.೦ |
| ಆಗಸ್ಟ್ | ೨೯೪.೪೦ | ೪೧೧.೮೮ | ೪೫೫.೪೬ | ೩೯.೯ | ೧೦.೬ |
| ಸೆಪ್ಟೆಂಬರ್ | ೨೭೪.೮೭ | ೩೬೩.೩೮ | ೪೨೦.೫೮ | ೩೧.೮ | ೧೬.೧ |
| ಅಕ್ಟೋಬರ್ | ೩೧೨.೨೩ | ೩೯೫.೦೭ | ೪೮೫.೯೧ | ೨೬.೫ | ೨೩.೦ |
| ನವೆಂಬರ್ | ೩೪೮.೨೦ | ೪೬೧.೪೮ | ೫೪೬.೮೩ | ೩೨.೫ | ೧೮.೫ |
| ಒಟ್ಟು | ೩೪೯೦.೦೦ | ೩೪೨೪೬೧ | ೪೧೬೦.೮೨ | ೩೮.೫ | ೨೧.೫ |

೨೦೦೪ರ ಅವಧಿಯಲ್ಲಿ ಭಾರತವು ವಿದೇಶೀ ಪ್ರವಾಸಿಗರ ಆಗಮನವನ್ನು ಶೇಕಡಾ ೨೪ರಷ್ಟು ಹೆಚ್ಚುವರಿ ಎಂದು ದಾಖಲಿಸಿತು. ಲೆಕ್ಕಾಚಾರದಂತೆ ಅದು ಶೇಕಡಾ ೩.೫ರಷ್ಟು ಬೆಳವಣಿಗೆಯನ್ನು ದಾಖಲಿಸಿತು. ನವೆಂಬರ್ ೨೦೦೫ರ ವರೆವಿಗೆ ಭಾರತಕ್ಕೆ ವಿದೇಶೀ ಪ್ರವಾಸಿಗರ ಆಗಮನವು ತನ್ನ ಪ್ರಮಾಣದಲ್ಲಿ ಶೇಕಡಾ ೧೩.೫ರಷ್ಟು ಹೆಚ್ಚುವರಿ ಆಗಿದೆ. ಈ ಕಾಲಮಾನದಲ್ಲಿ ೩,೩೪೬,೯೫೦ ಮಂದಿ ವಿದೇಶೀ ಪ್ರವಾಸಿಗರು ಭಾರತಕ್ಕೆ ಭೇಟಿನೀಡಿದ್ದರು. ಕಳೆದ ವರ್ಷ ಭಾರತಕ್ಕೆ ಭೇಟಿಕೊಟ್ಟವರ ಸಂಖ್ಯೆ ೨,೯೫೯,೮೫೦ ಇದ್ದಿತ್ತು. ಜನವರಿ-ನವೆಂಬರ್ ೨೦೦೫ರಲ್ಲಿ ವಿದೇಶೀ ವಿನಿಮಯ ಗಳಿಕೆ ರೂಪಾಯಿಗಳ ಲೆಕ್ಕದಲ್ಲಿ ಶೇಕಡಾ ೨೦.೧ರಷ್ಟು ಹೆಚ್ಚುವರಿ ಪ್ರಮಾಣವನ್ನು ದಾಖಲಿಸಿತು.

**ಪ್ರವಾಸೋದ್ಯಮ ಅಭಿವೃದ್ಧಿಗೆ ಕೆಲವು ಸಲಹೆ-ಸೂಚನೆಗಳು:**

೧. ವರ್ಲ್ಡ್ ಹೆರಿಟೇಜ್ ಸೈಟ್‌ಗಳ ಸಮೀಪವಿರುವ ಎಲ್ಲಾ ವಿಮಾನ ನಿಲ್ದಾಣಗಳನ್ನು ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಎತ್ತರಿಸಬೇಕು.

೨. ವಿಮಾನ ನಿಲ್ದಾಣಗಳಲ್ಲಿ ಹೊರದೇಶೀಯರ ತಪಾಸಣೆಯನ್ನು ತೀವ್ರಗೊಳಿಸಬೇಕು.

೩. ಉತ್ತರ ಪೂರ್ವದ ನಿರ್ಬಂಧಿತ ಪ್ರದೇಶಗಳಿಗೆ ಅನುಮತಿ ನೀಡುವ ಬಗೆಗೆ ಮರುಪರಿಶೀಲಿಸಬೇಕು.

೪. ಪ್ರವಾಸೋದ್ಯಮ ವಿಭಾಗದ ಮೇಲೆ ಹೇರುವ ತೆರಿಗೆಯಲ್ಲಿ ಏಕರೂಪತೆ ಇರಬೇಕು.

೫. ದೇಶೀ ಪ್ರವಾಸೋದ್ಯಮಕ್ಕೆ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಕಲ್ಪಿಸಬೇಕು.

೬. ಮಾರ್ಗದರ್ಶಿಗಳಿಗೆ (Guides) ಅವರ ವೃತ್ತಿಯಲ್ಲಿ ಹೆಚ್ಚಿನ ಪ್ರಗತಿ ಕಾಣಿಸಲು ತರಬೇತಿ ಶಿಬಿರಗಳನ್ನು ಆಗಾಗ್ಗೆ ಕಲ್ಪಿಸಬೇಕು.

೭. ಖಾಸಗೀ ಬಂಡವಾಳ ಹೂಡಿಕೆದಾರರು ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪಾಲುಗೊಳ್ಳುವಂತೆ ಉತ್ತೇಜನ ನೀಡಬೇಕು.

೮. ಪ್ರವಾಸಿ ನಿಯೋಜಕರು ಅತಿಥಿದೇವೋಭವ ಎಂಬ ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಪ್ರವಾಸಿಗಳನ್ನು ಗೌರವದಿಂದ ನಡೆಸಿಕೊಳ್ಳಬೇಕು.

ವಿದೇಶೀ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಭಾರತ ಸರಕಾರವು ವೀಸಾ ಕೊಡುವ ವಿಷಯದಲ್ಲಿ ಮಹತ್ತರವಾದ ಬದಲಾವಣೆಗಳನ್ನು ಜಾರಿಗೊಳಿಸಿದೆ. ಯಾವುದೇ ಒಬ್ಬ ಭಾರತಕ್ಕೆ ಭೇಟಿ ನೀಡುವ ಪ್ರವಾಸಿಗೆ ವೀಸಾಕ್ಕಾಗಿ ಅರ್ಜಿ ಸಲ್ಲಿಸಿದಾಗ ತೊಂದರೆಯಾಗಬಾರದೆನ್ನುವ ಉದ್ದೇಶದಿಂದ ನಿಯಮಗಳನ್ನು ಸರಳಗೊಳಿಸಿದೆ. ತಂಗಣೆಯ ಅವಧಿಯ ದೃಷ್ಟಿಯಿಂದ ಟೂರಿಸ್ಟ್ ವೀಸಾ ಹಾಗೂ ದೀರ್ಘಕಾಲದ ವೀಸಾ ಎಂದು ಎರಡು ಬಗೆಯ ಹಲವು ವೀಸಾವನ್ನು ಈಗ ಕೊಡಬಹುದಾಗಿದೆ. ಟೂರಿಸ್ಟ್ ವೀಸಾಕ್ಕೆ ಆರು ತಿಂಗಳ ಗಡುವು ಇದೆ. ಇದೊಂದು ಪ್ರವೇಶದ ವೀಸಾ; ಆರು ತಿಂಗಳ ಅವಧಿಗಿಂತ ಹೆಚ್ಚಿಗೆ ವಿಸ್ತರಿಸಲಾಗುವುದಿಲ್ಲ. ಪ್ರವಾಸಿ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ತೀರಾ ಅಲ್ಪಕಾಲದ ವೀಸಾ ಮುಂದುವರಿಕೆ ನೀಡುಬಹುದಾಗಿದೆ. ಗೃಹ ವ್ಯವಹಾರ ಮಂತ್ರಾಲಯದ ನಿಯಮದ ಪ್ರಕಾರ, ಭಾರತದಲ್ಲಿ ಆರು ತಿಂಗಳುಗಳಿಗಿಂತ ಹೆಚ್ಚಿಗೆ ಕಾಲಕಳೆಯಬೇಕೆಂದು ಪ್ರವಾಸಿಯು ಅಪೇಕ್ಷಿಸಿದಲ್ಲಿ, ಅವನು ಎಲ್ಲ ದೃಷ್ಟಿಯಿಂದಲೂ ಪ್ರವಾಸಿಯಾಗಲಾರ. ಆರು ತಿಂಗಳ ಅವಕಾಶವು ವ್ಯಕ್ತಿಯು ಭಾರತವನ್ನು ಮೊದಲಿಗೆ ಪ್ರವೇಶಿಸಿದ ದಿನಾಂಕದಿಂದ ಲೆಕ್ಕಹಾಕಲ್ಪಡುವುದು. ದೀರ್ಘ ಕಾಲಾವಧಿಯ ವೀಸಾವನ್ನು ಭಾರತೀಯ ಮೂಲವುಳ್ಳ ವಿದೇಶೀಯರಿಗೆ ಹಾಗೂ ಯಾವುದೇ ರಾಷ್ಟ್ರಕ್ಕೆ ಸೇರಿದವರಿದ್ದರೂ ಮೇಲಿಂದ ಮೇಲೆ ಭಾರತಕ್ಕೆ ಬರುತ್ತಿದ್ದವರಿಗೆ ಐದು ವರ್ಷಗಳ ಅವಧಿಯ ದೀರ್ಘ ಕಾಲಾವಧಿ ವೀಸಾವನ್ನು ಕೊಡಬಹುದು. ಅಂತಹವರು ಹಲವು ಬಾರಿ ಪ್ರವೇಶ ಹೊಂದಲು ಅವಕಾಶವಿದೆ. ಐದು ವರ್ಷಗಳ

ಹಲವು ಬಾರಿ ಪ್ರವೇಶ ಪಡೆಯುವ ವೀಸಾವನ್ನು ಭಾರತೀಯ ಸಂಸ್ಕೃತಿ, ಯೋಗ, ಕಲೆ, ನೃತ್ಯ ಮತ್ತು ಸಂಗೀತ ಹಾಗೂ ಇತರೆ ಸಂಬಂಧಪಟ್ಟ ವಿಷಯಗಳ ಬಗೆಗೆ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಕೂಡಾ ನೀಡಬಹುದು. ಭಾರತಕ್ಕೆ ಮೇಲಿಂದ ಮೇಲೆ ಭೇಟಿಕೊಡುವ ಪ್ರವಾಸಿಗರಿಗೆ ಐದು ವರ್ಷಗಳ ಹಲವು ಬಾರಿ ಪ್ರವೇಶ ಪಡೆಯುವ ವೀಸಾ ನೀಡಬಹುದು. ಮೇಲಿಂದ ಮೇಲೆ ಪ್ರವಾಸ ಕೈಗೊಳ್ಳುವವರಲ್ಲಿ ಪ್ರವಾಸಿ ಏಜೆಂಟರು, ಟೂರ್ ಆಪರೇಟರ್‌ಗಳು, ವ್ಯಾಪಾರೋದ್ಯಮಿಗಳು ಹಾಗೂ ದೇಶದೊಂದಿಗೆ ಸಂಯುಕ್ತವಾಗಿ ಒಪ್ಪಂದ ಮಾಡಿಕೊಂಡಿರುವವರು ಸೇರುವರು. ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡದಿರುವ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣಾವಧಿಯವರೆವಿಗೆ ವೀಸಾವನ್ನು ನೀಡಬಹುದು. ಈ ವೀಸಾಗಳನ್ನು ಭಾರತೀಯ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯು ಒಂದು ಶೈಕ್ಷಣಿಕ ವಿಷಯದಲ್ಲಿ ಪ್ರವೇಶ ಪಡೆದ ಮೇಲೆ ಕೊಡಬೇಕು. ಪ್ರವೇಶಗಳು ಐ.ಸಿ.ಸಿ.ಆರ್. ಮೂಲಕ ಒಂದೆಡೆ ಸುಸಂಘಟಿತವಾಗಿಸಿ ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಕಳುಹಿಸಲ್ಪಡುತ್ತವೆ ಹಾಗೂ ಅರ್ಜಿದಾರರಿಗೆ ಅವರ ಪ್ರವೇಶ ವಿದ್ಯಾಮಾನಗಳ ಬಗೆಗೆ ಐ.ಸಿ.ಸಿ.ಆರ್. ತಿಳುವಳಿಕೆ ನೀಡುತ್ತದೆ. ಗೃಹವ್ಯವಹಾರ ಸಚಿವಾಲಯವು ತಾನು ನಿಯಮಗಳನ್ನು ಎಷ್ಟೇ ಸರಳಗೊಳಿಸಿದ್ದರೂ ಒಬ್ಬ ವೀಸಾ ಹೊಂದಿರುವವನಿಗೆ ತನ್ನ ಭೇಟಿಯ ಉದ್ದೇಶವನ್ನು ಬದಲಿಸಲು ಏನೇ ಆಗಲಿ ಅವಕಾಶ ನೀಡುವುದಿಲ್ಲ. ವೀಸಾ ಹೊಂದಿರುವವನು ದೇಶದಲ್ಲಿರುವಾಗ ಪ್ರವಾಸಿ ವೀಸಾವನ್ನು ಬದಲಿಸಲು-ಉದಾಹರಣೆಗೆ ಪ್ರವಾಸಿ ವೀಸಾವನ್ನು ಭಾರತೀಯ ಸಂಸ್ಕೃತಿಯ ಅಧ್ಯಯನದ ವಿದ್ಯಾರ್ಥಿಯೆಂದು ಬದಲಿಸಲು -ಅವಕಾಶ ನೀಡುವುದಿಲ್ಲ.

ಗೃಹ ವ್ಯವಹಾರ ಸಚಿವಾಲಯವು ಹಿಂದೆ ಪ್ರವಾಸಿಗರಿಗೆ ಪ್ರವೇಶ ನಿಷೇಧ ಮಾಡಿದ್ದ ಭಾಗಗಳಿಗೂ ಈಗ ಪ್ರವೇಶ ದೊರಕಿಸಿಕೊಟ್ಟಿದೆ. ಉದಾಹರಣೆಗೆ ಹಿಂದೆ ಪಶ್ಚಿಮ ಬಂಗಾಳದ ಗಡಿ ಪ್ರದೇಶಗಳಲ್ಲಿ ಪ್ರವೇಶ ನಿಷಿದ್ಧವಾಗಿದ್ದಿತು. ಈಗ ಪ್ರವಾಸಿಗರು ಮುಕ್ತವಾಗಿ ಡಾರ್ಜಿಲಿಂಗ್ ಹಾಗೂ ಕಾಲಿಂಪೊಂಗ್‌ಗಳಲ್ಲಿ ಸಂಚರಿಸಬಹುದು. ಸಿಕ್ಕಿಂನ ದಕ್ಷಿಣ ಭಾಗದಲ್ಲಿ ಈಗ ಪ್ರವಾಸಿಗರು ಸಂಚರಿಸಲು ಅವಕಾಶ ನೀಡಲಾಗಿದೆ. ಹಾಗೆಯೇ ದೇಶದ ಉತ್ತರ ಮೂಡಲ ಭಾಗಗಳಲ್ಲೂ (North Eastern region) ಮುಕ್ತವಾಗಿ ಸಂಚರಿಸಬಹುದಾಗಿದೆ. ಈಗ ನಿಷೇಧಿತ ಪ್ರದೇಶಗಳ ಪ್ರವೇಶಕ್ಕಾಗಿ ಗೃಹ ವ್ಯವಹಾರ ಸಚಿವಾಲಯದ ಒಪ್ಪಿಗೆಯನ್ನು ಪಡೆಯಬೇಕಾಗಿಲ್ಲ, ರಾಜ್ಯ ಸರಕಾರಗಳೇ ಈಗ ಅನುಮತಿ ಪತ್ರ ನೀಡಬಹುದಾಗಿದೆ. ಇದರಿಂದಾಗಿ ಪ್ರವಾಸಿಯೋರ್ವನು, ಉದಾಹರಣೆಗೆ, ಗೌಹತಿಗೆ ಹೋಗಿ ಅಲ್ಲಿ ಅವನು ಅನುಮತಿ ಪತ್ರ ಪಡೆಯಬಹುದಾಗಿದೆ. ಇದರಷ್ಟೇ ಮುಖ್ಯವಾದ ಬದಲಾವಣೆಯೆಂದರೆ ವಿದೇಶಗಳಲ್ಲಿನ

ಭಾರತದ ರಾಯಭಾರ ಕಛೇರಿಯವರು ಈಗ ನಿಷೇಧಿತ ಪ್ರದೇಶಗಳ ಪ್ರವೇಶದ ಬಗೆಗೆ ನವದೆಹಲಿಗೆ ಒಪ್ಪಿಗೆಗೆ ಬರೆಯದೆ ತಾವೇ ಅನುಮತಿಪತ್ರ ನೀಡಲು ಅಧಿಕಾರ ಕೊಡಲಾಗಿದೆ.

೧೯೯೧ನ್ನು 'ಭಾರತ ಪ್ರವಾಸಿ ವರ್ಷ'ವನ್ನಾಗಿ ಸರಕಾರ ಘೋಷಿಸಿತು. 'ಭಾರತ ಸಂದರ್ಶಿಸಿ' - ಭಾರತ ಪ್ರವಾಸಿ ವರ್ಷಕ್ಕೆ ರಾಷ್ಟ್ರೀಯ ಪಕ್ಷಿಯಾದ ನವಿಲನ್ನು ಚಿಹ್ನೆಯನ್ನಾಗಿ ಸರಕಾರ ಸ್ವೀಕರಿಸಿತು. ಭಾರತ ಸಂದರ್ಶಿಸಿ-ಭಾರತ ಪ್ರವಾಸಿ ವರ್ಷ ೧೯೯೧ರ ಎರಡು ಸ್ಪಷ್ಟ ಒತ್ತಾಯಗಳು ದೇಶೀಯ (Domestic) ಹಾಗೂ ಅಂತರರಾಷ್ಟ್ರೀಯ ಪ್ರವಾಸೋದ್ಯಮವನ್ನು ಸೂಚಿಸಬಯಸುತ್ತವೆ. ಈ ಎರಡೂ ಕ್ಷೇತ್ರಗಳಲ್ಲಿ ಪ್ರವಾಸೋದ್ಯಮ ವಿಭಾಗದ ಗೊತ್ತು ಗುರಿಗಳು ಹಾಗೂ ಸಂದರ್ಶಕರು ಬೇರೆ ಬೇರೆ. ನಿರೀಕ್ಷಿಸಿರುವ ಪರಿಣಾಮವೂ ಸಹಾ ಭಿನ್ನವಾದುದು. ಅದೇನೇ ಇರಲಿ, ಮುಂಬರುವ ವರುಷಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯನ್ನು ಮನದಟ್ಟು ಮಾಡಿ ಕೊಡುವ ಸಂದರ್ಭದಲ್ಲಿ ಅವೆರಡೂ ಸಮಾನವಾಗಿ ಪ್ರಾಮುಖ್ಯತೆ ಪಡೆಯುತ್ತವೆ.

ರಾಷ್ಟ್ರೀಯ ದೃಷ್ಟಿಯಿಂದ ದೇಶೀಯ ಪ್ರವಾಸೋದ್ಯಮವು ಕೇಂದ್ರ ಹಾಗೂ ರಾಜ್ಯಗಳಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಮಾರುಕಟ್ಟೆ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಶಕ್ತಿಯ ಬಗೆಗೆ ಎಚ್ಚರವಹಿಸಿ ಭಾರತದಲ್ಲಿ ಭಾರತೀಯರ ಸಂಚಾರ ವನ್ನು ಜನಪ್ರಿಯಗೊಳಿಸಿ ಆ ಮೂಲಕ ಅವರು ತಮ್ಮ ನೆಲದ ಬಗೆಗೆ ಹಾಗೂ ಆಕರ್ಷಣೆಗಳ ಬಗೆಗೆ ತಿಳಿಯುವಂತಾಗಲಿ ಎಂಬುದು ಪ್ರವಾಸೋದ್ಯಮ ಇಲಾಖೆಯ ಆಶಯ. ಪ್ರವಾಸೋದ್ಯಮ ಅತ್ಯಮೂಲ್ಯವಾದ ವಿದೇಶೀ ವಿನಿಮಯ ಗಳಿಸುವುದಕ್ಕೆ ಆರ್ಥಿಕ ಚಟುವಟಿಕೆಗೆ ಒಂದು ಸಾಧನವಾಗಿರುವುದಲ್ಲದೆ, ಜನಗಳ ನಡುವೆ ಸೌಹಾರ್ದತೆ ಹಾಗೂ ಐಕಮತ್ಯವನ್ನು ಸಾಧಿಸಲು ಒಂದು ಮಾಧ್ಯಮವೂ ಆಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಭಾವಿಸಿದೆ. ಸಮಾಜದ ಎಲ್ಲ ನೆಲೆಗಳಲ್ಲಿ ಪ್ರವಾಸೋದ್ಯಮದ ಪ್ರಾಮುಖ್ಯತೆಯನ್ನು ಜನ ತಿಳಿಯುವಂತಾಗಬೇಕು, ಪ್ರವಾಸವನ್ನು ಜನ ಮೆಚ್ಚುವಂತಾಗಬೇಕು ಎಂಬುದು ಪ್ರವಾಸೋದ್ಯಮ ಇಲಾಖೆಯ ಇಚ್ಛೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ 'ಭಾರತ ಸಂದರ್ಶಿಸಿ' ಎಂಬ ಘೋಷಣೆ ಯನ್ನು ಪ್ರಮುಖವಾಗಿ ಜಾರಿಗೆ ತರುವುದರಲ್ಲಿ ಎಲ್ಲವೂ ಅಡಗಿದೆ. ವಿದೇಶೀ ಪ್ರವಾಸಿಗರನ್ನು '೧೯೯೧ರಲ್ಲಿ ಭಾರದ ಸಂದರ್ಶಿಸಿ' ಎಂದು ಪ್ರಮುಖವಾಗಿ ಸಾರಿ ಹೇಳುವುದು ಪ್ರವಾಸೋದ್ಯಮ ಇಲಾಖೆಯ ಉದ್ದೇಶವಾಗಿದ್ದಿತು. ಪ್ರವಾಸಿಗರ ಆಗಮನದಿಂದ ತನ್ನ ಉದ್ದೇಶಿತ ಗುರಿ ಸಾಧಿತವಾಯಿತೆಂದು ಅಷ್ಟಕ್ಕೇ ಅದು ತೃಪ್ತಿಪಟ್ಟುಕೊಳ್ಳುವುದಿಲ್ಲ. ಅದು ಸಾಧ್ಯವಾದಷ್ಟು ಹೆಚ್ಚಿನ ಪ್ರವಾಸಿಗರನ್ನು ಭಾರತದ

ಆಕರ್ಷಣೀಯವಾದ ಭಾಗಗಳಿಗೆ ವ್ಯವಸ್ಥಿತವಾಗಿ ವರುಷ ಪೂರ್ತ ಹರಡುವ ಮೂಲಕ ಪ್ರವಾಸಿ ಋತುಮಾನದಲ್ಲಿ ಬೇಸಿಗೆ ಕಾಲದಲ್ಲಾಗುವ ಇಳಿಮುಖವನ್ನು ತಗ್ಗಿಸಬಹುದೆಂದು ನಿರೀಕ್ಷಿಸುತ್ತದೆ. 'ಭಾರತ ಸಂದರ್ಶಿಸಿ' ಎನ್ನುವ ಘೋಷಣೆಯಲ್ಲಿ ವಿದೇಶೀಯರಿಗೆ ಅದರ ಪ್ರಾಮುಖ್ಯತೆಯನ್ನು ಅಂತರರಾಷ್ಟ್ರೀಯ ಪ್ರವಾಸೋದ್ಯಮ ಮಾರುಕಟ್ಟೆಯಲ್ಲಿ ತುರ್ತಾಗಿ ತಿಳಿಯಪಡಿಸುವ ಆಶಯವಿದೆ.

ಅಂತರರಾಷ್ಟ್ರೀಯ ಸಂಚಾರದಲ್ಲಿ (International traffic) ಭಾರತವು ಹೆಚ್ಚಿನ ಭಾಗ(share)ವನ್ನೇಕೆ ಪಡೆಯುತ್ತಿಲ್ಲ? ಇದಕ್ಕೆ ಆರ್ಥಿಕ, ರಾಜಕೀಯ ಹಾಗೂ ಭೌಗೋಳಿಕ ಕಾರಣಗಳಿವೆ:

೧. ಅಂತರರಾಷ್ಟ್ರೀಯ ಪ್ರವಾಸವು ಬಹುವಾಗಿ ಪ್ರಗತಿಹೊಂದಿದ ರಾಷ್ಟ್ರ ರಾಷ್ಟ್ರಗಳ ನಡುವೆಯೇ ನಡೆದಿದೆ. ಉದಾಹರಣೆಗೆ ಉತ್ತರ ಅಮೇರಿಕಾ ಹಾಗೂ ಯೂರೋಪ್, ಆಸ್ಟ್ರೇಲಿಯಾ, ಜಪಾನ್ ಮತ್ತು ಇತರ ಪ್ರಗತಿ ಹೊಂದಿದ ರಾಷ್ಟ್ರಗಳು. ಪ್ರಗತಿಪರ ರಾಷ್ಟ್ರಗಳ ಭಾಗವು (share) ವಿಶ್ವಪ್ರವಾಸೋದ್ಯಮದ ಶೇಕಡಾ ಹತ್ತಕ್ಕಿಂತ ಹೆಚ್ಚಿಗೆ ಇಲ್ಲ. ಇಲ್ಲಿ ಪ್ರಗತಿ ಸ್ಥಗಿತವಾಗಿದೆ.

೨. ಉತ್ತರ ಅಮೇರಿಕಾ ಹಾಗೂ ಯೂರೋಪ್‌ಗಳ ನಡುವೆ ದೊಡ್ಡ ಪ್ರಮಾಣದ ಸಂಚಾರವಿರುವುದರಿಂದ ಈ ಹಾದಿಗಳಲ್ಲಿ (routes) ವಿಮಾನಯಾನದ ವೆಚ್ಚ ಸಾಮಾನ್ಯವಾಗಿ ಕಡಿಮೆ. ವಿಮಾನಯಾನ ಸಂಸ್ಥೆಯ ಸಂಚಾರಿ ಪ್ರಯಾಣದ ಮೇಲೆ ಪ್ರಯಾಣದ ವೆಚ್ಚ ನಿರ್ಧರಿಸುತ್ತದೆ. ಭಾರತದಂತಹ ದೂರದೇಶಗಳಿಗೆ ಪ್ರಯಾಣ ಮಾಡುವವರ ಸಂಖ್ಯೆ ಕಡಿಮೆಯಿರುವುದರಿಂದ ವಿಮಾನಯಾನದ ವೆಚ್ಚ ಸಹಜವಾಗಿ ಹೆಚ್ಚು.

೩. ರಾಷ್ಟ್ರವೊಂದರ ನೆರೆಹೊರೆಯವರು ಧನಿಕರಾಗಿದ್ದಲ್ಲಿ ಪ್ರಾಂತೀಯ ಸಂಚಾರವು ಹೆಚ್ಚಿನದಿರುತ್ತದೆ. ASEAN REGIONನಲ್ಲಿ (ಥಾಯಲೆಂಡ್, ಸಿಂಗಪೂರ್, ಮಲೇಷಿಯಾ, ಫಿಲಿಫೈನ್ಸ್ ಹಾಗೂ ಇಂಡೋನೇಷ್ಯಾ) ಪ್ರಾಂತೀಯ ಸಂಚಾರವು ಶೇಕಡಾ ಐವತ್ತಕ್ಕಿಂತ ಹೆಚ್ಚು. ನಮ್ಮ ದೇಶದ ನೆರೆಹೊರೆಯ ರಾಷ್ಟ್ರಗಳು ಧನಿಕ ರಾಷ್ಟ್ರಗಳಲ್ಲಿ ಮೇಲಾಗಿ ನಮ್ಮ ನಮ್ಮ ನಡುವೆಯೇ ರಾಜಕೀಯ ಹಾಗೂ ಆರ್ಥಿಕ ಸಮಸ್ಯೆಗಳಿವೆ.

೪. ಭೌಗೋಳಿಕವಾಗಿ ಇಂಡಿಯಾವು ಧನಿಕ ರಾಷ್ಟ್ರಗಳಿಂದ ಬಹಳ ದೂರದಲ್ಲಿದೆ. ಇದರಿಂದಾಗಿ ವಿದೇಶೀ ಸಂಚಾರ ವೆಚ್ಚ ಹೆಚ್ಚು.

ಭಾರತಕ್ಕೆ ಭೇಟಿ ನೀಡುತ್ತಿರುವ ವಿದೇಶಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ.

೧೯೯೯-೨೦೦೦ದಲ್ಲಿ ಶೇ. ೫ರ ಸಮೀಪದಲ್ಲಿದ್ದ ಈ ಸಂಖ್ಯೆ ಪ್ರಸಕ್ತ ವರ್ಷ ಶೇ. ೬.೬ ತಲುಪಿದೆ ಎಂದು ಕೇಂದ್ರ ಪ್ರವಾಸೋದ್ಯಮ ಕಾರ್ಯದರ್ಶಿ ಎಂ.ಪಿ. ಬೇಜ್ ಬರುವಾ ತಿಳಿಸಿರುವರು. ಪರಮಾಣು ಸ್ಫೋಟ, ಆ ಹಿನ್ನೆಯಲ್ಲಿನ ನಿರ್ಬಂಧ ಮತ್ತು ಕಾರ್ಗಿಲ್ ಕದನದಿಂದ ೧೯೯೮-೯೯ ಪ್ರವಾಸೋದ್ಯಮಕ್ಕೆ ಅತ್ಯಂತ ಕೆಟ್ಟ ವರ್ಷವಾಗಿತ್ತು. ೧೯೫೦ರಲ್ಲಿ ೧೭೦೦೦ ಇದ್ದ ವಿದೇಶೀ ಪ್ರವಾಸಿಗರ ಭೇಟಿ ಸಂಖ್ಯೆ ಇಂದು ೨.೫ ದಶಲಕ್ಷಕ್ಕೆ ಸಮೀಪದಲ್ಲಿದೆ. ೧೯೯೦ರಿಂದೀಚೆಗೆ ಈ ಸಂಖ್ಯೆಯಲ್ಲಿ ತೀವ್ರ ಹೆಚ್ಚಳ ಕಂಡುಬಂದಿದೆ.

ನಮ್ಮಲ್ಲಿ ಪ್ರವಾಸೋದ್ಯಮವು ಹಣ ಗಳಿಕೆಯ 'ಉದ್ಯಮ'ವಾಗಿ ಪರಿಗಣಿಸಲ್ಪಟ್ಟಿರುವುದು ಎರಡು ದಶಕಗಳಿಂದೀಚೆಗೆ ಅಷ್ಟೆ. ಬೇರೆ ರಾಷ್ಟ್ರಗಳಲ್ಲಿ ಈ ಉದ್ಯಮ ಬೆಳೆಯಲು ಅಲ್ಲಿನ ಸರಕಾರ ಅಹರ್ನಿಶಿ ಪ್ರಯತ್ನಿಸುತ್ತಿವೆ. ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ತಮ್ಮ ಪ್ರಾಕೃತಿಕ ಹಾಗೂ ಮಾನವ ನಿರ್ಮಿತ ಸಂಪತ್ತನ್ನು ರಕ್ಷಿಸುವ ಹೊಣೆ ಹೊತ್ತಿವೆ. ಪ್ರವಾಸಿಗರಿಗೆ ಅಗತ್ಯವಿರುವ ಎಲ್ಲ ಬಗೆಯ ಸೌಲಭ್ಯಗಳನ್ನು ಒದಗಿಸಿ ಅವರನ್ನು ತಮ್ಮತ್ತ ಸೆಳೆಯುವಲ್ಲಿ ಬಹಳವಾಗಿ ದುಡಿಯುತ್ತಿವೆ. ಸ್ನೇಹ ಸೌಜನ್ಯಗಳಿಂದ ಹೊರದೇಶಗಳ ಪ್ರವಾಸಿಗರ ಮನಸ್ಸನ್ನು ಮುದಗೊಳಿಸುತ್ತಿವೆ.

ನಮ್ಮಲ್ಲಿ ಪ್ರವಾಸೋದ್ಯಮ ಇನ್ನೂ ಶೈಶವಾಸ್ಥೆಯಲ್ಲಿಯೇ ಇರುವುದಕ್ಕೆ ಕಾರಣಗಳು ಹಲವಾರು. ನಮ್ಮಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೆ ಕೊರತೆ ಇಲ್ಲ. ಪಟ್ಟಣಗಳಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಎಲ್ಲ ಅನುಕೂಲಗಳು ಪ್ರಾಪ್ತವಾಗುವಂತೆ ಪಟ್ಟಣಗಳಿಂದ ದೂರವಿರುವ ಪ್ರೇಕ್ಷಣೀಯ ಸ್ಥಳಗಳಿಗೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ನಾವಿನ್ನೂ ಕಲ್ಪಿಸಿಲ್ಲ. ಒಳ್ಳೆಯ ರಸ್ತೆಗಳಿಲ್ಲ; ಪ್ರೇಕ್ಷಣೀಯ ಸ್ಥಳಗಳಲ್ಲಿ ಯೋಗ್ಯ ಉಟೋಪಚಾರಗಳ ವ್ಯವಸ್ಥೆಯಿಲ್ಲ; ಅನುಕೂಲಕರವಾದ ವಸತಿ ಸೌಕರ್ಯಗಳಿಲ್ಲ; ಸಾರಿಗೆಯ ಅನುಕೂಲವಿಲ್ಲ; ಉಲ್ಲಾಸವನ್ನುಂಟುಮಾಡುವ, ನರನಾಡಿಗಳಲ್ಲಿ ಚೈತನ್ಯ ಉಕ್ಕಿಸುವ ಪರಿಸರ ನಿರ್ಮಾಣವಾಗಿಲ್ಲ. ವಿಹಾರ ಪ್ರದೇಶದ ವ್ಯವಸ್ಥೆ ವೈಜ್ಞಾನಿಕವಾಗಿರುವುದಿಲ್ಲ; ನಮ್ಮ ಗತವೈಭವದ ಭಗ್ನಾವಶೇಷಗಳನ್ನು, ಗುಡಿಗುಂಡಾರಗಳನ್ನು, ಸುಂದರ ಶಿಲ್ಪಗಳನ್ನು, ಚಿತ್ರಗಳನ್ನು ರಕ್ಷಿಸುವ ಕಾರ್ಯ ಸಮರ್ಪಕವಾಗಿ ಆಗಿಲ್ಲ; ಹೊಸ ಕೈಗಾರಿಕೆಗಳ ಸ್ಥಾಪನೆಯಿಂದ ವಾತಾವರಣ ಕಲುಷಿತವಾಗುತ್ತಿರುವುದನ್ನು ತಪ್ಪಿಸಲು ತೀವ್ರ ಪ್ರಯತ್ನಗಳು ನಡೆದಿಲ್ಲ. (ತಾಜಮಹಲೂ ಸೇರಿದಂತೆ) ಆಗ್ರಾದಲ್ಲಿರುವ ಐತಿಹಾಸಿಕ ಸ್ಮಾರಕಗಳಿಗೆ 'ಕಲ್ಲಿನ ಕ್ಯಾನ್ಸರ್' ತಗಲದಂತೆ ನಿರ್ದಿಷ್ಟ ಕ್ರಮ ಕೈಗೊಂಡಿಲ್ಲ. ವಿಶ್ವದ ಅದ್ಭುತಗಳಲ್ಲಿ ಒಂದಾದ ತಾಜ್‌ಮಹಲ್‌ನ ಸೌಂದರ್ಯ ಸಂರಕ್ಷಣೆಯ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದ್ದು, ತಾಜ್‌ಗೆ ಅಪಾಯ ಉಂಟುಮಾಡಬಲ್ಲ

ವ್ಯಾಸದಲ್ಲಿರುವ ೨೯೨ ಕಲ್ಲಿದ್ದಲು ಮೂಲದ ಕಾರ್ಖಾನೆಗಳಿಗೆ ಏಪ್ರಿಲ್ ೩೦ರ ಒಳಗಾಗಿ ಮುಚ್ಚುವಂತೆ ಆದೇಶ ನೀಡಿದೆ.

ಆಗ್ರಾದ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್ ಸೂಪರಿಂಟೆಂಡೆಂಟ್ ಅವರಿಗೆ ಈ ಆದೇಶವನ್ನು ಅನುಷ್ಠಾನಕ್ಕೆ ತರುವಂತೆ ನ್ಯಾಯಮೂರ್ತಿ ಕಲುದೀಪ್‌ಸಿಂಗ್ ಅವರನ್ನೊಳಗೊಂಡ ವಿಭಾಗೀಯ ಪೀಠ ನಿರ್ದೇಶಿಸಿದೆ.

ಕಲ್ಲಿದ್ದಲಿನಿಂದಲೇ ಹೆಚ್ಚಿನ ಪರಿಸರ ಮಾಲಿನ್ಯ ಆಗುವ ಹಿನ್ನೆಲೆಯಲ್ಲಿ ಕಾರ್ಖಾನೆಗಳಿಗೆ ಕಲ್ಲಿದ್ದಲು ಪೂರೈಕೆ ನಿಲ್ಲಿಸುವಂತೆಯೂ ಕೋರ್ಟ್ ಆದೇಶಿಸಿದೆ.

ಈ ಕಾರ್ಖಾನೆಗಳಿಗೆ ಇಂಧನವಾಗಿ ಗ್ಯಾಸ್ ಅಳವಡಿಸಿಕೊಳ್ಳುವಂತೆ ಸಲಹೆ ಮಾಡಿರುವ ಕೋರ್ಟ್ ಇದು ಸಾಧ್ಯವಾಗದ ಕಾರ್ಖಾನೆಗಳಿಗೆ ಬೇರೆಡೆ ಸ್ಥಳಾಂತರಿಸುವಂತೆ ಹೇಳಿದೆ.

ಈ ಆದೇಶ ಷರತ್ತುರಹಿತ ಮತ್ತು ಬದಲಿಸಲು ಸಾಧ್ಯವಿಲ್ಲದ್ದು ಎಂದು ಕೋರ್ಟ್ ತಿಳಿಸಿದೆ.

ತಾಜ್‌ಮಹಲ್ ವರ್ಷಕ್ಕೆ ೨೦೦ ದಶಲಕ್ಷಕ್ಕೂ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು, ಭಾರಿ ವಿದೇಶಿ ವಿನಿಮಯ ಗಳಿಕೆ ಮಾಡುತ್ತಿದೆ ಎಂದು ನ್ಯಾಯಪೀಠ ಹೇಳಿದೆ. ಬೃಂದಾವನದ ಪ್ರಕೃತಿ ಸಹಜ ಸೌಂದರ್ಯಕ್ಕೆ ಹಾಗೂ ಭರತಪುರದ ಪಕ್ಷಿಧಾಮಗಳಿಗೆ ಅಲ್ಲಿರುವ ಕೈಗಾರಿಕೆಗಳಿಂದ ಧಕ್ಕೆ ಬಂದಿದೆ. ಶೀಘ್ರವಾಗಿ ಮೇಲೇಳುತ್ತಿರುವ ಮಥುರಾ ರಿಫೈನರಿಯಿಂದ ಮತ್ತೂ ಹೆಚ್ಚಿನ ಅಪಾಯ ಪ್ರಾಪ್ತವಾಗುತ್ತಿದೆ.

ರಾಸಾಯನಿಕ ಕೈಗಾರಿಕೆಗಳಿಂದ ಉಂಟಾಗುವ ವಾಯು ಮತ್ತು ಜಲಮಾಲಿನ್ಯದಿಂದ ಸುತ್ತಮುತ್ತಲಿನ ನಿವಾಸಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಂತರ್ಜಲ ಮತ್ತು ಮೇಲ್ಮೈ ನೀರು ಕಲುಷಿತಗೊಂಡು ಕೃಷಿ ಇಳುವರಿಯಲ್ಲಿ ಶೇ. ೮೦ ರಿಂದ ೯೦ರಷ್ಟು ನಷ್ಟವಾಗುತ್ತದೆ. ಮೀನುಗಳು ಜಾನುವಾರುಗಳು ಸಾಕಷ್ಟು ಸಂಖ್ಯೆಯಲ್ಲಿ ಸಾಯುತ್ತಿರುವುದು ದಾಖಲಾಗಿದೆ. ಕೈಗಾರಿಕೆಗಳು ಹೊರಬಿಡುವ ಕೊಳೆನೀರು ನಾಲೆಗೆ, ತೆರೆದ ಚರಂಡಿಗಳಿಗೆ, ಕೆರೆಗೆ ಹರಿದು ಬರುತ್ತದೆ. ಕೆಟ್ಟ ರಾಸಾಯನಿಕ ವಸ್ತುಗಳು ಈ ಕೊಳೆ ನೀರಿನೊಂದಿಗೆ ಬಂದು ಜನರ ಹಾಗೂ ಪ್ರಾಣಿಗಳ ಆರೋಗ್ಯಕ್ಕೆ ಧಕ್ಕೆ ತರುತ್ತಿವೆ. ಈ ಕೆಟ್ಟ ನೀರು ಹಾಗೂ ಕೈಗಾರಿಕೆಗಳು ತಮ್ಮ ಹೊಗೆ ಚಿಮಿಣಿಯಿಂದ ಹೊರಚೆಲ್ಲುವ ದುರ್ಗಂಧಗಳು ಜಲ ಹಾಗೂ ವಾಯು ಮಾಲಿನ್ಯಕ್ಕೆ ಕಾರಣವಾಗುತ್ತಿವೆ. ವೈದ್ಯ ತಪಾಸಣೆಯಿಂದ ಜಠರ ಉರಿ, ಕೆಂಗಣ್ಣು ಬೇನೆ,

ಮಹಿಳೆಯರಲ್ಲಿ ರಕ್ತ ಹೀನತೆ, ಬೆರಳು ಚರ್ಮದ ಸೋಂಕುಗಳು, ಅನೇಕ ಮಕ್ಕಳಲ್ಲಿ ಖಿನ್ನತೆ, ಪುರುಷರು ಮತ್ತು ಮಹಿಳೆಯರಲ್ಲಿ ಸಾಮಾನ್ಯ ನಿಶ್ಶಕ್ತಿ ಹಾಗೂ ವಯೋವೃದ್ಧರಲ್ಲಿ ನರಗಳ ಉರಿಯೂತ ಕಾಣಿಸಿಕೊಂಡಿರುವುದು ದೃಢಪಟ್ಟಿದೆ.

ಅನೇಕ ವರ್ಷಗಳಿಂದ ವಿವಿಧ ತಂಡಗಳು ಮತ್ತು ಸಮಿತಿಗಳು ಕೈಗಾರಿಕೆಗಳಿಂದ ಉಂಟಾಗುವ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಶಿಫಾರಸುಗಳನ್ನು ಮಾಡಿದ್ದರೂ ಕೈಗಾರಿಕೆಗಳು ಅನಾರೋಗ್ಯಕರ ಪದ್ಧತಿಗಳನ್ನು ಅನುಸರಿಸಿ ನೀತಿ ನಿಯಮಗಳನ್ನು ಗಾಳಿಗೆ ತೂರಿವೆ. ಇಂತಹ ಕೈಗಾರಿಕೆಗಳ ವಿರುದ್ಧ ಮಾಲಿನ್ಯ ನಿಯಂತ್ರಣ ಮಂಡಲಿ ಬಿಗಿಯಾದ ಕಾನೂನಿನ ಕ್ರಮವನ್ನು ಕೈಗೊಳ್ಳಬೇಕು. ಪಕ್ಷಿಧಾಮಗಳ ಹಾಗೂ ರಾಷ್ಟ್ರೀಯ ಉದ್ಯಾನಗಳ ಬಳಿ ಹೋಟೆಲ್‍ಗಳನ್ನು ನಿರ್ಮಿಸುವುದರಿಂದ ಪಕ್ಷಿ ಹಾಗೂ ಪ್ರಾಣಿಗಳ ನೆಮ್ಮದಿಗೆ ಭಂಗ ಉಂಟಾಗಿದೆ. ಈ ಭಾಗಗಳಿಂದ ೫೦೦ ಮೀಟರ್ ಸುತ್ತಮುತ್ತ ಕಟ್ಟಡಗಳ ನಿರ್ಮಾಣ ನಿಷೇಧಗೊಳ್ಳಬೇಕು. ಮಲೆನಾಡಿನಲ್ಲಿ ಅರಣ್ಯಗಳ ನಾಶ, ಅಕ್ರಮವಾಗಿ ಅರಣ್ಯಜಮೀನಿನ ಒತ್ತುವರಿ ನಿರಂತರವಾಗಿ ನಡೆಯುತ್ತಿವೆ. ಅರಣ್ಯಗಳ ನಾಶದಿಂದ ಆಗುತ್ತಿರುವ ಪ್ರತಿಕೂಲ ಪರಿಣಾಮವನ್ನು ನಾವು ಇಂದು ಅನುಭವಿಸುತ್ತಿದ್ದೇವೆ. ಅರಣ್ಯ ನಾಶದೊಂದಿಗೆ ನಮ್ಮ ಅಮೂಲ್ಯ ವೃಕ್ಷ ಹಾಗೂ ಪ್ರಾಣಿ ಸಂಪತ್ತು ನಾಶವಾಗುತ್ತಿದೆ. ಅಪರೂಪದ ಪ್ರಾಣಿಗಳ ಸಂತಾನ ಅರಣ್ಯ ನಾಶದಿಂದ ಕ್ಷೀಣಿಸುತ್ತಿದೆ. ಕೇರಳದ ನೀರವ ಕಣಿವೆಯ ಮೇಲೆ ನಡೆಸಹೊರಟ ಆಘಾತ ರಾಷ್ಟ್ರಮಟ್ಟದಲ್ಲಿ ಚರ್ಚೆಗೆ ವಸ್ತುವಾಗಿದೆ. ಭಾರತದ ಕರಾವಳಿ ಪ್ರದೇಶ ಹಾಗೂ ಸಮುದ್ರ ದಂಡೆಗಳು ರಕ್ಷಣೆಗೊಳಗಾಗಬೇಕಾಗಿದೆ. ಕೈಗಾರಿಕಾಕೋಟೆ ಹಾಗೂ ನಗರದ ಕಸವನ್ನು ಸಮುದ್ರದಲ್ಲಿ ವಿಸರ್ಜಿಸುವುದರಿಂದ ಕರಾವಳಿ ಪ್ರದೇಶ ಹಾಗೂ ಸಮುದ್ರ ದಂಡೆಗಳ ನೈರ್ಮಲ್ಯಕ್ಕೆ ಧಕ್ಕೆಯೊದಗಿದೆ.*

ಭಾರತದ ಪವಿತ್ರಕ್ಷೇತ್ರಗಳ ದರ್ಶನಕ್ಕೆ ಹೋದರೆ ಅಲ್ಲಿ ಪುಂಡರ ಕಾಟ ಇಲ್ಲವೆ ಭಿಕ್ಷುಕರ ಕಾಟ. ಆ ಪವಿತ್ರ ಕ್ಷೇತ್ರಗಳಲ್ಲೂ ಮೋಸ ವಂಚನೆ ನಿರಂತರವಾಗಿ ನಡೆದಿದೆ.

---

* ದಿ|| ಪ್ರಧಾನಿ ಇಂದಿರಾಗಾಂಧಿಯವರು ೧೯೮೧ರ ನವಂಬರ್ ೨೭ರಂದು ರಾಜ್ಯ ಸರಕಾರಗಳಿಗೆ ಬರೆದ ಪತ್ರದಲ್ಲಿ ಇದಕ್ಕೆ ಒತ್ತುಕೊಟ್ಟಿದ್ದರು. ಪ್ರಧಾನಿಯವರ ಈ ಸೂಚನೆಯನ್ನು ರಾಜ್ಯಸರಕಾರಗಳು ಪಾಲಿಸಲಿಲ್ಲ. ಗುಜರಾತಿನ ಪತ್ರಕರ್ತ ಮಹೇಶ ದೇಸಾಯಿ ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದು, ಇದನ್ನು ಸಾರ್ವಜನಿಕ ಹಿತರಕ್ಷಣೆಯ ಅರ್ಜಿಯೆಂದು ಸುಪ್ರೀಂ ಕೋರ್ಟ್ ಸ್ವೀಕರಿಸಿ ಕರ್ನಾಟಕ, ಮಹಾರಾಷ್ಟ್ರ, ಕೇರಳ, ತಮಿಳನಾಡು, ಗುಜರಾತ್, ಆಂದ್ರಪ್ರದೇಶ್, ಒರಿಸ್ಸಾ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಿಗೆ ನೋಟಿಸ್ ಜಾರಿ ಮಾಡಲು ಆದೇಶ ನೀಡಿದೆ. (೨೨-೧೧-೮೮ರ 'ಪ್ರಜಾವಾಣಿ' ವರದಿ.)

ನೆಮ್ಮದಿ ಅರಸಿಕೊಂಡು ಬಂದ ವಿದೇಶೀ ಪ್ರವಾಸಿಗರಿಗೆ ಇಲ್ಲಿನ ಜನರ ವರ್ತನೆ ಕಂಡು ಜಿಗುಪ್ಸೆ ತಲೆದೋರಿದರೆ ಆಶ್ಚರ್ಯವೇನಿಲ್ಲ. ಇತ್ತೀಚೆಗೆ ನಡೆದ ಘಟನೆಯೊಂದರ ವರದಿ ಹೀಗಿದೆ. ಬಾರ್ಬರಾ ಬಾಂಡ್ ೩೯ ವರ್ಷ ವಯಸ್ಸಿನ ವಿದೇಶೀ ಮಹಿಳೆ ಗೋಕರ್ಣಕ್ಕೆ ಪ್ರವಾಸಿಯಾಗಿ ಬಂದಳು. ಅವಳ ಮೇಲೆ ಅಪರಿಚಿತ ವ್ಯಕ್ತಿಯೊಬ್ಬ ೨೧-೨-೯೧ರ ರಾತ್ರಿ ೩-೩೦ರ ವೇಳೆಯಲ್ಲಿ ಸಾರ್ವಜನಿಕವಾಗಿಯೇ ಕೈಮಾಡಿದ. ಪೋಲೀಸರು ಅಲ್ಲಿ ಹಾಜರಿದ್ದೂ ಸುಮ್ಮನಿದ್ದರು. ಪೋಲೀಸರ ಸಮ್ಮುಖದಲ್ಲಿ ಬಾರ್ಬರಾ ತನ್ನ ಮೇಲೆ ಕೈಮಾಡಿದ ವ್ಯಕ್ತಿಯನ್ನು ಗುರುತಿಸಿದಳು. ವಕೀಲರು ಬಾರ್ಬರಾಳ ಪರವಾಗಿ ವಾದಿಸಲು ಸಿದ್ಧರಿರಲಿಲ್ಲ. ಬ್ರಿಟಿಷ್ ಹೈಕಮಿಷನ್ ಅಧಿಕಾರಿಗಳ ಬಳಿ ದೂರೊಯ್ದಾಗ ಅವರು ತಾವೇನೂ ಮಾಡಲಾಗದು ಎಂದರು. ಬಾರ್ಬರಾ ಕಾರವಾರದ ಪೋಲೀಸ್ ಅಧಿಕಾರಿಗಳಿಗೆ ತನಗಾದ ಅನ್ಯಾಯದ ಬಗೆಗೆ ದೂರು ಸಲ್ಲಿಸಿದಳು ('ಪ್ರಜಾವಾಣಿ'ಯ ೧೩-೩-೯೧ ವರದಿ). ವಿದೇಶೀ ಪ್ರವಾಸಿಗರು ತಂಗಿದ್ದ ಹೋಟೆಲ್‌ಗಳಲ್ಲಿ ನಡೆದ ಕಳ್ಳತನಗಳ ಬಗೆಗೆ ಪತ್ರಿಕೆಗಳಲ್ಲಿ ವರದಿಗಳು ಬರುತ್ತಿವೆ. ವಿದೇಶೀ ಪ್ರವಾಸಿಗರಿಗೆ ಭಾರತದಲ್ಲಿ ಕಾಣುವಷ್ಟು ಕಪಟ, ನಯವಂಚನೆ, ಸುಲಿಗೆ ಬೇರೆ ಯಾವ ದೇಶದಲ್ಲೂ ಕಾಣಲಿಕ್ಕಿಲ್ಲ. ಇಲ್ಲಿಂದ ಹಿಂತಿರುಗಿ ಹೋದವರು ತಮ್ಮ ಅನುಭವ ಹೇಳಿಕೊಂಡಾಗೆಲ್ಲ ನಮ್ಮ ಪ್ರವಾಸೋದ್ಯಮಕ್ಕೆ ಬಲವಾದ ಕೊಡಲಿ ಏಟು ಬೀಳುತ್ತಿರುತ್ತದೆ. ದೇವಸ್ಥಾನಗಳಲ್ಲಿನ ದೇವರು ಸಿರಿವಂತ ದೇವರಾದರೆ ಕಣ್ಣು ಕೋರೈಸುವ ಒಡವೆ ವಸ್ತ್ರಗಳಿಂದ ಮುಚ್ಚಿ ಹೋಗಿರುತ್ತದೆ; ಬಡ ದೇವರಾದರೆ ಪತ್ರೆ ಹೂವುಗಳಿಂದ ಆವೃತವಾಗಿರುತ್ತದೆ. ಶ್ರದ್ಧಾವಂತ ಭಕ್ತರುಗಳು ಎಣ್ಣೆ ಮಜ್ಜನದಿಂದ ಸುಣ್ಣಬಣ್ಣದಿಂದ ದೇವರ ಮೂರ್ತಿಗಳನ್ನು ವಿಕೃತಗೊಳಿಸಿರುವ ನಿದರ್ಶನಗಳೂ ಹೇರಳವಾಗಿ ದೊರೆಯುತ್ತವೆ.

ಸಿರಿವಂತರು, ವಿದೇಶಿಯರು-ಇವರುಗಳು ಮಾತ್ರ ಪ್ರವಾಸಿಗರು ಎನ್ನುವ ಧೋರಣೆ ಪ್ರವಾಸೋದ್ಯಮ ಇಲಾಖೆಗಿರುವಂತೆ ತೋರುತ್ತದೆ. ವಸತಿ ಸೌಲಭ್ಯ, ಊಟೋಪಚಾರಗಳು, ನಿಯೋಜಿತ ಪ್ರವಾಸಗಳು (conducted Tours) ಇವುಗಳನ್ನು ಏರ್ಪಡಿಸುವ ಇಲಾಖೆಯ ವೈಖರಿ ನೋಡಿದಾಗ ಪ್ರವಾಸವು ಸಾಮಾನ್ಯ ಅಥವಾ ಭಾರತೀಯ ಮಧ್ಯಮವರ್ಗದ ಪ್ರಜೆಗಲ್ಲ ಎಂಬ ಭಾವನೆಯುಂಟಾಗುತ್ತದೆ. ವಿದೇಶದಿಂದ ಬರುವ ಪ್ರವಾಸಿಗರು ಪ್ರವಾಸಿ ಏಜೆಂಟರ ಅಥವಾ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅತಿಥಿಗಳಾಗಿಬಿಡುವುದರಿಂದ ಪಟ್ಟಣಗಳಿಂದ ನೇರವಾಗಿ ಪ್ರವಾಸಿ ತಾಣಗಳಿಗೆ ಕರೆದುಕೊಂಡು ಹೋಗಿ ವಾಪಸು ಕರೆದುಕೊಂಡು ಬರುವ ವ್ಯವಸ್ಥೆಯಿರುತ್ತದೆ. ಇದರಿಂದಾಗಿ ಪ್ರವಾಸಿಗೆ ವಿರಾಮವಾಗಿ ನಿಂತು ನೋಡುವ,

ಹೆಚ್ಚಿನ ವಿವರಗಳನ್ನು ತಿಳಿಯುವ, ಜನರನ್ನು-ಅವರ ಜೀವನ ವಿಧಾನವನ್ನು ಗ್ರಹಿಸುವ ಅವಕಾಶಗಳು ಕಡಿಮೆ; ಪ್ರವಾಸಿ ತಾಣಗಳಲ್ಲಿ ಸೌಕರ್ಯಗಳನ್ನು ಕಲ್ಪಿಸಲೂ ಇದರಿಂದ ತೊಂದರೆ. ಆರ್ಥಿಕವಾಗಿ ಸುತ್ತಮುತ್ತಲಿನ ಜನ ಅಭಿವೃದ್ಧಿ ಹೊಂದಲೂ ಇದರಿಂದ ಅಡ್ಡಿ; ಗುಡಿ ಕೈಗಾರಿಕೆಗಳ ಅಭಿವೃದ್ಧಿಗೂ ವಿಘ್ನ.

ಕನ್ನಡದ ಪ್ರಸಿದ್ಧ ಸಾಹಿತಿಗಳಲ್ಲಿ ಒಬ್ಬರಾದ ವ್ಯಾಸರಾಯ ಬಲ್ಲಾಳರು ಒಮ್ಮೆ ರಾಜಸ್ಥಾನದ ಉದಯಪುರ ಜಯಪುರಗಳ ಪ್ರವಾಸ ಕೈಗೊಂಡಿದ್ದರು. ಜಯಪುರದಲ್ಲಿ ರಾಜಮನೆತನದವರು ಅರಮನೆಯನ್ನು ಪ್ರವಾಸಿಗಳ ಆಕರ್ಷಣೆಯಾಗಿ ಪರಿವರ್ತಿಸಿ ಸಿಬ್ಬಂದಿ ನೇಮಿಸಿರುವರು. ಅರಮನೆ ನೋಡಲು ನಿಶ್ಚಿತ ಪ್ರವೇಶಧನ ವಿಧಿಸಿರುವರು. ಆದರೆ ಈ ಪ್ರವೇಶಧನ ಖಾಸಗಿ ಮಾರ್ಗದರ್ಶಿ ಹಾಗೂ ಸಿಬ್ಬಂದಿಗಳ ನಡುವೆ ಒಳ ಒಪ್ಪಂದವಿರುವುದರಿಂದ ಪ್ರವಾಸಿಗರಿಂದ ವಸೂಲಾದದ್ದು ಲೆಕ್ಕಕ್ಕೆ ಸೇರದೆ ಅವರಲ್ಲಿ ಹಂಚಿಕೆಯಾಗುತ್ತಿರುವುದನ್ನು ನೋಡಿದ ವ್ಯಾಸರಾಯ ಬಲ್ಲಾಳರು ಅಲ್ಲಿಯ ಸಿಬ್ಬಂದಿಯ ಅಪ್ರಾಮಾಣಿಕತೆಯನ್ನೂ ವಂಚನೆಯನ್ನೂ ಖಂಡಿಸುವರು. ಇದು ಜಯಪುರದ ಒಂದು ಅರಮನೆಗೆ ಸಂಬಂಧಿಸಿದ ವಿಚಾರವಲ್ಲ. ನಮ್ಮೆಲ್ಲ ಪುರಾತನ ಅವಶೇಷಗಳನ್ನು, ವಾಸ್ತುಶಿಲ್ಪಗಳನ್ನು ಪ್ರವಾಸಿಗರು ನೋಡಿ ಸಂತೋಷಪಟ್ಟು ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದಾದಲ್ಲೆಲ್ಲ ಇಂಥದೇ ಪರಿಸ್ಥಿತಿ ಎನ್ನುವರು ಅವರು.

ಪುರಾತತ್ವ ಇಲಾಖೆಯವರು ಚಿತ್ತೋರದಲ್ಲಿ ಅಲ್ಲಾವುದ್ದೀನ್ ಪದ್ಮಿನಿಯನ್ನು ಕನ್ನಡಿಯ ಮೂಲಕ ಕಂಡ ಅರಮನೆಯ ಭಾಗದಲ್ಲಿದ್ದ ಜಲಮಹಲ್ ಕಟ್ಟಡದ ಪರಿಸರವನ್ನು ಪ್ರವಾಸಿಗಳಿಗೆ ತುಂಬ ಸಂತೋಷಕೊಡುವ ಆಕರ್ಷಣೆಯನ್ನಾಗಿ ಪರಿವರ್ತಿಸುವ ಸಾಧ್ಯತೆಯಿತ್ತೆಂದು ವ್ಯಾಸರಾಯ ಬಲ್ಲಾಳರು ವಿಚಾರಮಾಡುವರು. ಅವರು ಅಲ್ಲೇ ಇರುವ ಒಂದು ಸಣ್ಣ ವಸ್ತು ಸಂಗ್ರಹಾಲಯವನ್ನು ನೋಡಲು ಹೋದಾಗ ದೀಪಗಳಿಗೆ ಬಲ್ಬುಗಳೇ ಇರಲಿಲ್ಲವಂತೆ. "ಕತ್ತಲಲ್ಲಿ ಕುರುಡು ಬೆಳಕಿನಲ್ಲಿ ನಾವು ಆ ಸಂಗ್ರಹಾಲಯದ ವೈಶಿಷ್ಟ್ಯಗಳನ್ನು ಗುರುತಿಸಬೇಕು, ಅಭ್ಯಾಸ ಮಾಡಿ ತಿಳಿವಳಿಕೆ ತಂದುಕೊಳ್ಳಬೇಕು" ಎಂದು ಅವರು ವ್ಯಂಗ್ಯವಾಡುವರು. ಅವರು ಬೆಳಕೇ ಇಲ್ಲವಲ್ಲಾ ಎಂದು ಕಾವಲುಗಾರನೊಡನೆ ಕೇಳಿದಾಗ, ಅಲ್ಲಿದ್ದ 'ಟ್ಯೂಬ್' ದೀಪಗಳನ್ನೇ ಯಾರೋ ಕದಿಯುತ್ತಿದ್ದಾರೆ ಎಂಬ ಸಂದೇಶ ಬರುವಂತೆ ಆತ 'ಹೌದು ಸಾಬ್, ನೀವು ದಯಮಾಡಿ ದೂರು ಕೊಡಿ ಆಫೀಸಿನಲ್ಲಿ' ಎಂದ. ಅವರು ದೂರು ಕೊಡಲೆಂದೇ ಆಫೀಸಿಗೆ ಹೋದಾಗ 'ದೂರು ಕೊಡುವ ಜಾಗ ಇದಲ್ಲ ಬಾಗಿಲಲ್ಲಿ ಕೊಡಿ' ಎಂದರು. ಮತ್ತೆ ಬಾಗಿಲಿಗೆ ಹೋದಾಗ 'ಇಲ್ಲಲ್ಲ, ಆಫೀಸಿನಲ್ಲಿ ಕೊಡಿ' ಎಂದರು. ಈ ಓಡಾಟದಲ್ಲಿ ಅರ್ಧತಾಸು ವ್ಯಯ. ಈ ಕೆಟ್ಟ ಅನುಭವದಿಂದ ನೊಂದ ವ್ಯಾಸರಾಯ ಬಲ್ಲಾಳರು

"ನಮ್ಮ ಐತಿಹಾಸಿಕ ಮಹತ್ವದ ಅವಶೇಷಗಳಲ್ಲಿ ಅವುಗಳ ಮೇಲ್ವಿಚಾರಣೆ ನೋಡಬೇಕಾದಂಥವರೇ ಅವುಗಳ ಬಗೆಗೆ ಯಾವ ರೀತಿಯ ಅಭಿಮಾನವನ್ನೂ ಇರಿಸಿಕೊಳ್ಳದೆ, ಅಲ್ಲೂ ಸಾಧ್ಯವಾದಷ್ಟು ವಂಚನೆಯಿಂದ ಗಿಟ್ಟಿಸೋಣ ಅಥವಾ ಇತರರು ಗಿಟ್ಟಿಸಲು ಅನುವು ಮಾಡಿಕೊಡೋಣ ಎಂದು ನಂಬಿರುವಾಗ, ನಮ್ಮಲ್ಲಿ ಇತಿಹಾಸ ವಾಸ್ತುಶಿಲ್ಪ, ಮತ್ತಿತರ ಸಾಂಸ್ಕೃತಿಕ ಅವಶೇಷಗಳೆಲ್ಲ ಬರೀ ಶೋಷಣೆಯ ಸಾಧನೆಗಳಾಗುತ್ತವೆ" ಎನ್ನುವರು.[೧೯]

ವ್ಯಾಸರಾಯ ಬಲ್ಲಾಳರು ಅಮೆರಿಕಾ ಪ್ರವಾಸ ಕೈಗೊಂಡಿದ್ದಾಗ ಲಾಸ್ ಏಂಜಲೀಸ್‌ನ ಯುನಿವರ್ಸಲ್ ಸ್ಟುಡಿಯೊ ನೋಡಲು ಹೋದರು. ಅದು ಪ್ರವಾಸಿಗಳ ಆಕರ್ಷಣೆಯ ಕೇಂದ್ರ. ಪ್ರವಾಸಿಗಳಿಗೆಂದೆ ಗಂಟೆ ಗಂಟೆಗೆ ಸ್ಟುಡಿಯೋದವರು ಸಂದರ್ಶನ ಕಾರ್ಯಕ್ರಮವನ್ನು ಏರ್ಪಡಿಸುವ ವ್ಯವಸ್ಥೆ ಮಾಡಿರುವರು. ತಮ್ಮ ಮಾರ್ಗದರ್ಶಿಗಳ ಸಹಾಯದಿಂದ ಅಮೆರಿಕದ ಚಲನಚಿತ್ರ ಜಗತ್ತಿನಲ್ಲಿ ನಡೆಯುತ್ತಿರುವುದೇನು ಎಂಬುದನ್ನು ಅವರು ತಿಳಿಸಿಕೊಡುವರು. ಸಂದರ್ಶನ ಕಾರ್ಯಕ್ರಮವನ್ನು ಅವರು ಒಂದು ಯಶಸ್ವೀ ಉದ್ಯಮವಾಗಿ ಪರಿವರ್ತಿಸಿರುವರು. ಇದನ್ನು ನೋಡಿದ ವ್ಯಾಸರಾಯ ಬಲ್ಲಾಳರಿಗೆ ನಮ್ಮ ಭಾರತದ ಪ್ರವಾಸಿ ಪರಿಸರ ಯಾವ ರೀತಿ ಇದೆಯೆಂಬ ಯೋಚನೆಯಾಯಿತು.[೨೦]

ನೋಡಬೇಕಾದ ಸ್ಥಳಗಳು ಯಾವುವು? ಎಲ್ಲಿವೆ? ಅವುಗಳ ಇತಿಹಾಸವೇನು? ಇವೆಲ್ಲವುಗಳ ಬಗೆಗೆ ಅಪರಿಚಿತನಾದ ಪ್ರವಾಸಿಗೆ ಮಾರ್ಗದರ್ಶನ ನೀಡಬಲ್ಲ ಕಿರು ಹೊತ್ತಗೆಗಳು, ಫೋಲ್ಡರ್‌ಗಳು, ನಕಾಶೆಗಳು ವಿದೇಶಗಳಲ್ಲಿ ಉಚಿತವಾಗಿ ದೊರೆಯುತ್ತವೆ. ಸ್ಥಳಪುರಾಣ, ದಂತಕಥೆಗಳಿಂದ ತುಂಬಿಹೋಗಿರುವ ಪ್ರವಾಸಿ ಸಾಹಿತ್ಯ (Tourist Literature) ನಮ್ಮಲ್ಲಿ ಸಾಕಷ್ಟಿವೆ. ವಸ್ತುನಿಷ್ಠವಾದ, ವೈಜ್ಞಾನಿಕವಾದ, ಸಾಂಸ್ಕೃತಿಕ ವಿವರಗಳನ್ನು ನೀಡುವ ಪ್ರವಾಸಿ ಸಾಹಿತ್ಯ ನಮ್ಮಲ್ಲಿಲ್ಲ. ಬಿಹಾರಿಗಳು ಅನ್ನ ವಸ್ತ್ರಗಳಿಗಾಗಿ ಮುಂಬಯಿ, ಕಲ್ಕತ್ತಾ, ದಿಲ್ಲಿ, ಚಂಡಿಗಡಗಳಿಗೆ ಗುಳೆ ಹೋಗಿದ್ದರಿಂದ ಬಿಹಾರದಲ್ಲಿ ಪ್ರವಾಸಿಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕಲ್ಪಿಸಲೇ ಇಲ್ಲ. ಕರ್ನಾಟಕ, ತಮಿಳುನಾಡು, ಪಶ್ಚಮಬಂಗಾಲ, ಕಾಶ್ಮೀರ ರಾಜ್ಯಗಳು ಪ್ರವಾಸೋದ್ಯಮ ನಕಾಶೆಯಲ್ಲಿ ಸ್ವಲ್ಪಮಟ್ಟಿನ ಪ್ರಗತಿ ತೋರಿಸಿವೆ.

ರಾಜ್ಯ ಹಾಗೂ ದೇಶದ ಪ್ರವಾಸೋದ್ಯಮ ಬೆಳೆಯಬೇಕಾದರೆ ನಮ್ಮೆಲ್ಲರ ದೃಷ್ಟಿಕೋನದಲ್ಲಿ ಬದಲಾವಣೆ ಬೇಕು. ಧನಿಕ ಪ್ರವಾಸಿ ಏಜೆಂಟರ ಹಾಗೂ ಸರಕಾರದ

---

೧೯. ನೋಡಿ: ನಾನೊಬ್ಬ ಭಾರತೀಯ ಪ್ರವಾಸಿ, ಪು. ೮೭-೮೮.
೨೦. ಅದೇ, ಪು. ೮೮.೮೯.

ಬೊಕ್ಕಸ ತುಂಬಿಸಲು ಯಾರೂ ಪ್ರವಾಸ ಮಾಡುವುದಿಲ್ಲ. ಇಂದು ಧನಿಕರಷ್ಟೇ ಅಲ್ಲ ಶ್ರೀಸಾಮಾನ್ಯನೂ ಪ್ರವಾಸ ಮಾಡಲು ಸಾಧ್ಯ ಎನ್ನುವ ಮಟ್ಟಿಗೆ ಧೋರಣೆ ಬದಲಾಗಬೇಕಾಗಿದೆ. ಅದಕ್ಕಾಗಿ ರಜಾದಿನಗಳಲ್ಲಿ ಉಲ್ಲಾಸಕಾರಿ ಪ್ರವಾಸ ಕೈಗೊಳ್ಳಲು ಸಹಕಾರಿಯಾಗುವಂತೆ ರೈಲು, ವಿಮಾನ, ಸಂಚಾರಗಳನ್ನು ರಿಯಾಯಿತಿ ದರದಲ್ಲಿ ವ್ಯವಸ್ಥೆಗೊಳಿಸಬೇಕು. ಪ್ರವಾಸಿಗರು ಖರ್ಚುಮಾಡುವ ಹಣಕ್ಕೆ ಪ್ರತಿಯಾಗಿ ವಿರಾಮ, ವಿಹಾರ, ಜ್ಞಾನಾರ್ಜನೆ, ಮನೋರಂಜನೆಗಳು ದೊರೆಯಬೇಕು. ಮುಖ್ಯವಾಗಿ ನಮ್ಮ ಕಲೆ, ಸಂಸ್ಕೃತಿ, ಜೀವನ ವಿಧಾನ, ಪ್ರಾಚೀನ ಪರಂಪರೆ -ಇವುಗಳು ಪ್ರವಾಸದ ಮೂಲಕ ಬಿಂಬಿತವಾಗಬೇಕು; ನಮ್ಮ ತಿಳುವಳಿಕೆ ವಿಸ್ತೃತವಾಗಬೇಕು. ವಿದೇಶಿಯರಿಗೆ ಈ ರಾಜ್ಯದ ಭವ್ಯತೆಯ ಬಗೆಗೆ ಪರಿಚಯವಾಗಬೇಕು ಹಾಗೆಯೇ ಗೌರವಾದರಗಳು ಮೂಡಬೇಕು.

ಪ್ರವಾಸವು ಈಗ ಒಂದು ಅತ್ಯಂತ ವ್ಯಾಪಕವಾದ ಉದ್ಯಮ, ಪ್ರವಾಸಿ ಕೈಗಾರಿಕೆ (Tourist industry). ಅರ್ಥಪೂರ್ಣವಾಗಿ ಹೇಳುವುದಾದರೆ ಇದೊಂದು ಹೊಗೆಯಿಲ್ಲದ ಕೈಗಾರಿಕೆ, ಚಿಮಿಣಿಗಳಿಲ್ಲದ ಕೈಗಾರಿಕೆ, ಹೆಚ್ಚಿನ ಬಂಡವಾಳ ಬೇಕಿಲ್ಲದ ಕೈಗಾರಿಕೆ. ಯಾವುದೇ ಕೈಗಾರಿಕೆಯಂತೆ ಇದೂ ಅವರಿಗೆ ಹೆಚ್ಚಿನ ಉದ್ಯೋಗವನ್ನು ಒದಗಿಸುವ ಕೈಗಾರಿಕೆ. ಹೆಚ್ಚು ಮುಂದುವರಿದ ರಾಷ್ಟ್ರಗಳಾದ ಯುಎಸ್ಎ, ಯುಕೆ, ಫ್ರಾನ್ಸ್ ಹಾಗೂ ಇಟಲಿ ದೇಶಗಳು ಪ್ರವಾಸವನ್ನು ಒಂದು ಕೈಗಾರಿಕೆಯೆಂದು ಭಾವಿಸಿ ತನ್ನ ಪ್ರಜೆಗಳಿಗೆ ಹೆಚ್ಚಿನ ಉದ್ಯೋಗಗಳನ್ನು ನೀಡಿವೆ. ಈ ಕೈಗಾರಿಕೆಯಲ್ಲಿ ಬಂಡವಾಳಕ್ಕಿಂತ ಅತ್ಯುತ್ತಮವಾದ ಪ್ಲ್ಯಾನಿಂಗ್ ಮುಖ್ಯ. ಇದು ಸೇವಾ ಕೈಗಾರಿಕೆ. ಇಲ್ಲಿ ಶ್ರಮದ ಧಾರೆ ನಿರಂತರವಾಗಿದ್ದು, ಪ್ರತಿಯೊಂದು ಘಟ್ಟದಲ್ಲೂ ವೈಯಕ್ತಿಕವಾದ ಸೇವೆ ಹಾಗೂ ಶ್ರಮ ಒಳ್ಳೆಯ ಫಲ ನೀಡುತ್ತದೆ.

ವಿಶ್ವದ ಪ್ರಮುಖ ರಾಷ್ಟ್ರಗಳು ತನ್ನ ಪ್ರಮುಖ ಕೈಗಾರಿಕಾ ರಫ್ತುಗಳಿಂದ ವಿದೇಶೀ ವಿನಿಮಯವನ್ನು ಗಳಿಸುತ್ತವೆ. ಅಂತರರಾಷ್ಟ್ರೀಯ ಪ್ರವಾಸೋದ್ಯಮವೂ ಒಂದು ಕೈಗಾರಿಕೆಯಾಗಿ ವಿದೇಶೀ ವಿನಿಮಯವನ್ನು ದೊಡ್ಡ ಪ್ರಮಾಣದಲ್ಲಿ - ಪ್ರಮುಖ ಕೈಗಾರಿಕಾ ರಫ್ತುಗಳಿಂದ ಪಡೆಯುವುದಕ್ಕಿಂತ ಹೆಚ್ಚಿಗೆ-ಗಳಿಸುತ್ತಿದೆ. ಪ್ರವಾಸಿ ಕೈಗಾರಿಕೆಯು ರಫ್ತು ಮಾಡಿ ವಿದೇಶೀ ವಿನಿಮಯ ಗಳಿಸುತ್ತಿಲ್ಲ. ಬದಲಿಗೆ ವಿದೇಶೀ ಪ್ರವಾಸಿಯು ತಾನು ಪ್ರವಾಸ ಮಾಡುವ ಪ್ರದೇಶಗಳಲ್ಲಿ ಅದು ಕಲ್ಪಿಸಿಕೊಡುವ ಸೌಲಭ್ಯಗಳಿಗಾಗಿ ತನ್ನ ದೇಶದ ಕರೆನ್ಸಿಯನ್ನು ಖರ್ಚುಮಾಡುವನು. ಈ ಕಾರಣಕ್ಕಾಗಿಯೇ ಇದನ್ನು ಒಂದು ಅದೃಶ್ಯ ರಫ್ತು (An invisible export) ಎಂದು ಕರೆಯುವುದು. ದೇವರ

ಕರುಣೆಯಿಂದಾಗಿ ಹಾಗೂ ನಮ್ಮ ಪೂರ್ವಿಕರು ಬಿಟ್ಟುಹೋಗಿರುವ, ಅಪೂರ್ವ ದೇಣಿಗೆಯಿಂದಾಗಿ ನಮ್ಮಲ್ಲಿ 'Tourist Resources'ಗಳು ಅಪಾರವಾಗಿದೆ. ಇವು ಪ್ರವಾಸೋದ್ಯಮದ ಭಾಗ್ಯ. ಭಾರತಕ್ಕೆ ಅಂತರರಾಷ್ಟ್ರೀಯ ಪ್ರವಾಸಿಗರು ಬರುತ್ತಿರುವುದು ವಿಶ್ವದ ಬೇರೆಡೆ ಕಾಣಸಿಗದ ಈ ಅನುಪಮ ಸಂಪತ್ತಿನ ದರ್ಶನಕ್ಕಾಗಿಯೇ. ವಿದೇಶೀಯ ಪ್ರವಾಸಿಗರ ಆಗಮನದಿಂದ ನಮ್ಮ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಆರ್ಥಿಕ ತಜ್ಞರು ಪ್ರವಾಸೋದ್ಯಮದಿಂದ ದೇಶಕ್ಕೆ ಬಲವಾದ ಆದಾಯವಿದೆಯೆಂದು ಇತ್ತೀಚಿಗೆ ತಿಳಿಯುತ್ತಿರುವರು. ಇದು ಪ್ರವಾಸೋದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಶುಭ ಲಕ್ಷಣ.

ಅಮೆರಿಕದ ಸುಪ್ರಸಿದ್ಧ ಅಂಕಣ ಬರಹಗಾರ ಆರ್ಟ್ ಬುಚ್‌ವಾಲ್ಡ್ ತಮ್ಮ ನಗೆ ಹಾಗೂ ಲೇವಡಿ ಬರಹಗಳಿಂದ ಜನಪ್ರಿಯರಾಗಿರುವರು. ಅವರು ತಮ್ಮ ಅಂಕಣವೊಂದರಲ್ಲಿ **'ಪ್ರವಾಸಿಗಳಿಗಾಗಿ ಒಂದು ಪ್ರಾರ್ಥನೆ'** ಎಂಬ ತಲೆಬರಹದಲ್ಲಿ ಲೇಖನ ಬರೆದಿರುವರು. ಲಂಡನ್‌ನ Times ಪ್ರಕಾರ, ಗ್ರೀಕ್‌ನ ಸಂಪ್ರದಾಯವಾದಿ ಚರ್ಚ್ ಗ್ರೀಕ್ ಜನರನ್ನು ಪ್ರವಾಸಿಗಳಿಂದ ರಕ್ಷಿಸುವಂತೆ ದೇವರನ್ನು ಪ್ರಾರ್ಥಿಸುವಂತಹ ಒಂದು ಹೊಸ ಪ್ರಾರ್ಥನೆಯನ್ನು ಪ್ರತಿದಿನ ಪ್ರಾತಃಕಾಲ ಹಾಗೂ ಸಂಜೆ ಪಾದ್ರಿಗಳು ಹಾಗೂ ಸನ್ಯಾಸಿನಿಯರು ಮಾಡಬೇಕೆಂದು ವಿಧಿಸಿತು. ಆ ಪ್ರಾರ್ಥನೆ ಹೀಗಿದೆ:

"ಪ್ರಭು ಏಸುಸ್ವಾಮಿಯೆ, ದೇವರ ಪುತ್ರನೆ,

ನಮ್ಮ ತಂದೆಯ ಸಂಪ್ರದಾಯವಾದೀ ನೆಲೆಯಾದ ಪಟ್ಟಣಗಳು, ದ್ವೀಪಗಳು, ಹಳ್ಳಿಗಳು ಹಾಗೂ ಪವಿತ್ರ ಪ್ರಾರ್ಥನಾಮಂದಿರಗಳು ಪ್ರಪಂಚದ ಪ್ರವಾಸಿಗರ ಸಂದಣಿಯಿಂದ ನಜ್ಜುಗುಜ್ಜಾಗಿ ಹೋಗಿವೆ. ಇವುಗಳ ಮೇಲೆ ದಯೆ ತೋರು.

ಸಮಸ್ಯೆಗಳಿಗೆ ನಾಟಕೀಯ ಪರಿಹಾರೋಪಾಯವನ್ನು ಕಾಣಿಸುವ ಮೂಲಕ ನಮ್ಮನ್ನು ಅನುಗ್ರಹಿಸು. ಹಾಗೆಯೇ ಈ ತತ್ಕಾಲೀನ ಪಾಶ್ಚಾತ್ಯ ವಿಜಯಿಗಳ ಆಧುನಿಕ ಪ್ರಭಾವಗಳಿಂದ ನಮ್ಮನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ನಮ್ಮ ಸೋದರರನ್ನು ಪಾರುಗಾಣಿಸು.

ಪಾದ್ರಿಗಳು ಹಾಗೂ ಸನ್ಯಾಸಿನಿಯರು ದೇವರನ್ನು ಪ್ರವಾಸಿ ಪ್ರತಿರೋಧ ಪ್ರಾರ್ಥನೆಗಳಿಂದ ಸುಪ್ರೀತರಾಗಿಸುತ್ತಿದ್ದರೆ ಪ್ರವಾಸಿಗಳಿಗೂ ಈ ದಿಶೆಯಲ್ಲಿ ಸಮಾನ ಅವಕಾಶ ಕೊಡುವುದು ನ್ಯಾಯಯುತವಾದುದು. ಅವರುಗಳು ಬೆಳಿಗ್ಗೆ ಮತ್ತು ಸಂಜೆ ಈ ಪ್ರಾರ್ಥನೆಯನ್ನು ಪಠಿಸುವರು:

"ಸ್ವರ್ಗದಲ್ಲಿನ ತಂದೆಯೆ,

ಈ ಭೂಮಿಯ ಮೇಲೆ ಸಂಚಾರ ಮಾಡಲಿರುವ ಪ್ರವಾಸಿಗರನ್ನು, ನಿಮ್ಮ ವಿಮನ್ರ-ವಿಧೇಯ ಪ್ರವಾಸಿಗರನ್ನು, ಛಾಯಾಗ್ರಹಣ ಮಾಡುತ್ತ, ಪೋಸ್ಟ್ ಕಾರ್ಡ್‌ಗಳನ್ನು ಅಂಚೆಪೆಟ್ಟಿಗೆಗೆ ಹಾಕುತ್ತ, ಸ್ಮರಣ ಸಂಚಿಕೆಗಳನ್ನುಕೊಳ್ಳುತ್ತ, ಚಿಕ್ಕಳದಂತಹ ತುಂಡು ಚಡ್ಡಿಯಲ್ಲಿ ನಡೆದಾಡುತ್ತಿರುವವರನ್ನು ಕರುಣೆಯಿಂದ ನೋಡು.

ಓ ದೇವರೇ,

ನಮ್ಮ ವಿಮಾನ ಹೈಜಾಕ್ ಆಗದಂತೆ, ನಮ್ಮ ಲಗ್ಗೇಜುಗಳು ಕಳೆದು ಹೋಗದಂತೆ, ನಮ್ಮ ತುಂಬಿ ತುಳುಕುವ ಬ್ಯಾಗೇಜುಗಳು ಲಕ್ಷ್ಯಕ್ಕೆ ಬಾರದಿರುವಂತೆ ನೋಡಿಕೋ. ನಾವು ನಿನ್ನನ್ನು ಅತ್ಯಂತ ಪ್ರೀತ್ಯಾದರಗಳಿಂದ ಓಲೈಸುತ್ತೇವೆ.

ನಮ್ಮನ್ನು ನಿಷ್ಠುರಿಯೂ ನಿಷ್ಕರುಣೆಯೂ ಆದ ಟ್ಯಾಕ್ಸಿ ಚಾಲಕರಿಂದ, ಕ್ರೌರ್ಯ ತುಂಬಿದ ಕೂಲಿಗಳಿಂದ, ಪರವಾನಗಿಯಿಲ್ಲದ ಇಂಗ್ಲಿಷ್‌ನಲ್ಲಿ ಮಾತನಾಡುವ ಮಾರ್ಗದರ್ಶಿಗಳಿಂದ ನಮ್ಮನ್ನು ಕಾಪಾಡು.

ನಮ್ಮ ಹೋಟಲ್ಲಿನ ಆಯ್ಕೆಯಲ್ಲಿ, ಹೋಟಲ್ಲಿನ ಕೊಠಡಿ ಕಾದಿರಿಸುವುದು ಮಾನ್ಯವಾಗುವಲ್ಲಿ, ನಮ್ಮ ಕೊಠಡಿಗಳು ಸುಸಜ್ಜಿತವಾಗಿದ್ದು ನಲ್ಲಿಗಳಿಂದ ನೀರು ಹರಿದು ಬರುವಂತೆ ನಿನ್ನ ದಿವ್ಯ ಮಾರ್ಗದರ್ಶನವನ್ನು ಅನುಗ್ರಹಿಸು.

ನಮ್ಮ ದೂರವಾಣಿಗಳು ನಾವು ಹೇಳಿದಂತೆ ಸರಿಯಾಗಿ ಕೆಲಸ ಮಾಡುವಂತೆ, ನಮ್ಮ ಉಳಿದ ಪ್ರವಾಸವನ್ನು ರದ್ದುಪಡಿಸಿ ಒಡನೆಯೆ ಹಿಂದಿರುಗುವಂತೆ ಒತ್ತಾಯಿಸುವ ನಮ್ಮ ಮಕ್ಕಳ ಪತ್ರ ನಮಗೆ ಬರದಂತೆ, ಮಾಡೆಂದು ನಾವು ನಿನ್ನನ್ನು ಪ್ರಾರ್ಥಿಸುತ್ತೇವೆ.

ಪ್ರೀತಿಯ ದೇವರೇ,

ಊಟೋಪಚಾರಗಳು ಅತ್ಯಂತ ಸೊಗಸಾಗಿರುವ, ಪರಿಚಾರಕರು ಸ್ನೇಹಿತರಂತೆ ವರ್ತಿಸುವ, ಊಟದ ವೆಚ್ಚದಲ್ಲಿಯೇ ವೈನೂ ಸೇರಿರುವ ಅತ್ಯಂತ ಸೋವಿಯಾದ ರೆಸ್ಟೋರೆಂಟ್‌ಗಳಿಗೆ ನಮ್ಮನ್ನು ಕರೆದೊಯ್ಯಿ.

ನಮಗೆ ಪರಿಚಿತವಲ್ಲದ ಕರೆನ್ಸಿಯಲ್ಲಿ ಸರಿಯಾಗಿ ಭಕ್ಷೀಸನ್ನು ನೀಡುವ ವಿವೇಕವನ್ನು ಅನುಗ್ರಹಿಸು. ಅಜ್ಞಾನದಿಂದ ಕಡಿಮೆ ಭಕ್ಷೀಸು ಕೊಟ್ಟಿದ್ದಕ್ಕೆ, ಭಯದಿಂದ ಹೆಚ್ಚಿನ ಭಕ್ಷೀಸು ಕೊಟ್ಟಿದ್ದಕ್ಕೆ ನಮ್ಮನ್ನು ಕ್ಷಮಿಸು.

ಮಾರ್ಗದರ್ಶಿ ಪುಸ್ತಕಗಳಲ್ಲಿ ನೋಡಲೇಬೇಕೆಂದು ಪಟ್ಟಿ ಮಾಡಿರುವ ವಸ್ತು ಸಂಗ್ರಹಾಲಯಗಳಿಗೆ, ಕೆಥಡ್ರಲ್‌ಗಳಿಗೆ, ಅರಮನೆಗಳಿಗೆ, ಕೋಟೆ-ಕೊತ್ತಲಗಳಿಗೆ ಭೇಟಿ

ನೀಡಲು ನಮಗೆ ಶಕ್ತಿಯನ್ನು ಅನುಗ್ರಹಿಸು. ಹಾಗೆಯೇ ಅದೃಷ್ಟವಶಾತ್ ಊಟಮಾಡಿ ವಿಶ್ರಾಂತಿ ಪಡೆಯುವ ಅವಸರದಲ್ಲಿ ನಾವು ಐತಿಹಾಸಿಕ ಸ್ಮಾರಕಗಳನ್ನು ನೋಡದೆ ಬಂದಲ್ಲಿ ನಮ್ಮ ಮೇಲೆ ದಯೆ ತೋರು. ಏಕೆಂದರೆ, ನಮ್ಮ ದೇಹದ ಮಾಂಸಖಂಡಗಳು ಬಲಿಷ್ಠವಲ್ಲ.

(ಈ ಭಾಗದ ಪ್ರಾರ್ಥನೆ ಗಂಡಂದಿರಿಗೆ)

ಪ್ರೀತಿಯ ದೇವರೇ,

ನಮ್ಮ ಹೆಂಡಂದಿರನ್ನು ಶಾಪಿಂಗ್ ಸಮ್ಮೋಹನದಿಂದ ದೂರವಿಡು. ಅವರನ್ನು ಅಗತ್ಯವಿಲ್ಲದುದರ ಬಗೆಗೆ ಅಥವಾ ಕೊಳ್ಳಲು ಸಾಧ್ಯವಿಲ್ಲದುದರ ಬಗೆಗೆ ಚೌಕಾಶಿ ಮಾಡುವುದರಿಂದ ರಕ್ಷಿಸು. ಪ್ರಲೋಭನೆಗೆ ಅವರನ್ನು ಗುರಿಮಾಡಬೇಡ. ಏಕೆಂದರೆ, ಅವರಿಗೆ ತಾವೇನು ಮಾಡುತ್ತೇವೆಂಬುದರ ಅರಿವಿಲ್ಲ.

(ಈ ಭಾಗದ ಪ್ರಾರ್ಥನೆ ಪತ್ನಿಯರಿಗೆ)

ಕರುಣಾಳು ತಂದೆಯೆ,

ನಮ್ಮ ಗಂಡಂದಿರು ವಿದೇಶೀ ಹೆಂಗಸರನ್ನು ನೋಡದಂತೆ ಮತ್ತು ನಮ್ಮನ್ನು ಅವರ ಜೊತೆ ಹೋಲಿಸದಂತೆ ರಕ್ಷಿಸು. ಕೊಠಿಗಳಲ್ಲಿ ನೈಟ್‌ಕ್ಲಬ್‌ಗಳಲ್ಲಿ ತಮ್ಮನ್ನು ತಾವೇ ಮೂರ್ಖರನ್ನಾಗಿ ಮಾಡಿಕೊಳ್ಳದಂತೆ ಅವರನ್ನು ಕಾಪಾಡು. ಎಲ್ಲಕ್ಕಿಂತ ಮಿಗಿಲಾಗಿ, ಅವರು ಎಲ್ಲೆಮೀರಿ ಹೋಗುವುದನ್ನು ದಯಮಾಡಿ ಕ್ಷಮಿಸದಿರು. ಏಕೆಂದರೆ, ತಾವೇನು ಮಾಡಿದರೆಂಬುದು ಅವರಿಗೆ ಖಚಿತವಾಗಿ ತಿಳಿದಿದೆ.

(ಒಟ್ಟಿಗೆ)

ನಮ್ಮ ಪಯಣ ಮುಗಿದ ಮೇಲೆ, ನಮ್ಮನ್ನು ಪ್ರೀತಿಸುವವರ ಬಳಿಗೆ ನಾವು ಹಿಂದಿರುಗಿದ ಬಳಿಕ, ನಮ್ಮ ಮನೆಯ ಸಿನಿಮಾಗಳನ್ನು ಬೇರೆ ಯಾರಾದರೂ ನೋಡುವಂತೆ ಮಾಡಿ ಉಪಕರಿಸು. ಅವರು ನಮ್ಮ ಪ್ರವಾಸ ಕಥನಕ್ಕೆ ಕಿವಿಗೊಡುವಂತೆ ಮಾಡು. ಹಾಗಾದಲ್ಲಿ ಪ್ರವಾಸಿಗಳಾಗಿ ನಮ್ಮ ಬದುಕು ನಿರರ್ಥಕವಾಗುವುದಿಲ್ಲ.

ಕೊನಾರ್ಡ್ ಹಿಲ್ಟನ್, ಥಾಮಸ್ ಕುಕ್ ಹಾಗೂ ಅಮೆರಿಕನ್ ಎಕ್ಸ್‌ಪ್ರೆಸ್‌ಗಳ ಹೆಸರಿನಲ್ಲಿ ನಾವಿದನ್ನು ನಿನ್ನಲ್ಲಿ ಪ್ರಾರ್ಥಿಸುತ್ತೇವೆ. ಆಮನ್.

# ಅನುಬಂಧ

### ವಿಶ್ವ ಪ್ರವಾಸ ಸಾಹಿತ್ಯ

* **ಮುಮ್ಮಡಿ ಕೃಷ್ಣರಾಜ ಒಡೆಯರು : ನನ್ನ ಪ್ರಪಂಚ ಸಂಚಾರ** (೧೯೩೭-೩೮), ೧/೪ ಕ್ರೌನ್ ಆಕಾರ, ಪುಟ ೫೪, ಮೊ.ಮು. ೧೯೩೮(?), ಬೆಲೆ: ರೂ.?, ಪ್ರ: ಎವಲಾನ್, ೯ ಬಳ್ಳಾರಿ ರಸ್ತೆ, ಬೆಂಗಳೂರು.

* **ಟಿ.ಕೆ. ರಾಮರಾವ್ : ಗೋಳದ ಮೇಲೊಂದು ಸುತ್ತು**, ೧/೮ ಕ್ರೌನ್, ಪು. ೨೭೦, ಬೆಲೆ: ರೂ. ೭.೫೦, ಮೊ.ಮು. ೧೯೭೧, ಪ್ರ: ಹಂಸಧ್ವನಿ ಪ್ರಕಾಶನ, ಬೆಂಗಳೂರು.

* **ಎನ್.ಡಿ. ಬಗರಿ : ವಿದೇಶ ಪ್ರವಾಸದ ಅನುಭವಗಳು**, ೧/೮ ಡೆಮಿ, ಪು. ೬೪+೨೭೬, ಮೊ.ಮು. ೧೯೭೬, ಬೆಲೆ: ?, ಪ್ರ: ಕಲಾ ಪ್ರಕಾಶನ, ೯೨೪, ೩ನೇ ಮೈನ್, ವಿಜಯನಗರ, ಬೆಂಗಳೂರು-೪೦.

### ಯೂರೋಪ್ ಪ್ರವಾಸ ಸಾಹಿತ್ಯ

* **ಆರ್.ಎಸ್. ನಾರಾಯಣರಾವ್ : ಪೃಥುವರ್ಯರ ಯೂರೋಪ್ ಪ್ರವಾಸ**, ೧/೮ ಕ್ರೌನ್, ಪು. ೩೮, ಮೊ.ಮು. ೧೯೩೭, ಬೆಲೆ: ನಾಲ್ಕು ಆಣೆ, ಪ್ರ: C/o ತಾಯಿನಾಡು, ಅರಳೇಪೇಟೆ, ಬೆಂಗಳೂರು ಸಿಟಿ.

* **ವಿ.ಕೃ. ಗೋಕಾಕ್ : ಸಮುದ್ರದಾಚೆಯಿಂದ**, ೧/೮ ಕ್ರೌನ್, ಪು. ೧೯೬, ಮೊ.ಮು. ೧೯೩೭, ಬೆಲೆ: ರೂ. ೧.೦೦/-, ಪ್ರ: ಜಿ.ಬಿ. ಜೋಶಿ, ಮನೋಹರ ಗ್ರಂಥಮಾಲಾ, ಧಾರವಾಡ.

* **ಶಿವರಾಮ ಕಾರಂತ : ಅಪೂರ್ವ ಪಶ್ಚಿಮ**, ೧/೮ ಕ್ರೌನ್, ಪು. ೩೪೦, ಪ್ರ.ಮು. ೧೯೫೩, ಬೆಲೆ: ರೂ. ೪/-, ಪ್ರ: ಹರ್ಷ ಮುದ್ರಣ ಪ್ರಕಟಾಲಯ, ಪುತ್ತೂರು (ದ.ಕ.)

* **ಕೆ.ಆರ್. ಕಾರಂತ್ : ಪ್ರವಾಸಿಯ ಪತ್ರಗಳು**, ೧/೮ ಕ್ರೌನ್, ಪು. ೨೨೬, ಮೊ.ಮು. ೧೯೫೫, ಬೆಲೆ: ರೂ. ೧೫೦/-, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು.

* **ವಿ.ಕೃ. ಗೋಕಾಕ್ : ಸಮುದ್ರದೀಚೆಯಿಂದ**, ೧/೮ ಕ್ರೌನ್, ಪು. ೧೬೮, ಮೊ.ಮು. ೧೯೬೦, ಬೆಲೆ: ರೂ. ೧.೫೦, ಪ್ರ: ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿ., ಧಾರವಾಡ.

* **ಎಸ್. ರಜತಾದ್ರಿ : ಪಶ್ಚಿಮದ ಹೊಂಬೆಳಕು**, ೧/೮ ಕ್ರೌನ್, ಪು. ೧೨೦, ಮೊ.ಮು. ೧೯೬೮, ಬೆಲೆ: ರೂ. ೩/-, ಪ್ರ: ಸ್ವರ್ಣ ಕಿರಣ ಪ್ರಕಾಶನ, ೩೦ ನಾಲ್ಕನೇ ಕ್ರಾಸ್, ಗೋಕುಲ, ವಿ.ವಿ. ಮೊಹಲ್ಲಾ, ಮೈಸೂರು-೨.

* **ಚಂದ್ರಭಾಗಾದೇವಿ ಕೃಷ್ಣರಾವ್ : ಗೆಜ್ಜೆಯ ಹೆಜ್ಜೆ ನುಡಿ**, ೧/೮ ಡೆಮಿ, ಪು. ೪೦೨, ಮೊ.ಮು. ೧೯೭೧, ಬೆಲೆ: ರೂ. ೧೫/-, ಪ್ರ: ಲೋಕ ಶಿಕ್ಷಣ ಮಾಲೆ, ಬೆಂಗಳೂರು.

* **ಪೇಜಾವರ ವಾಸುದೇವರಾವ್ : ನಾವೂ ಯೂರೋಪಿಗೆ ಹೋಗಿದ್ದೆವು (೨೧ ದಿನಗಳ ಪ್ರವಾಸ ಕಥನ)**, ೧/೮ ಕ್ರೌನ್, ಪು. ೩೮, ಮೊ.ಮು. ೧೯೭೭, ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ

* **ಗಿರಿಯಯ್ಯ ಗೋಪಾಲ್ : ವೈದ್ಯನ ವಿದೇಶ ಪ್ರವಾಸ**, ೧/೮ ಕ್ರೌನ್, ಪು. ೧೩೪, ಮೊ.ಮು. ೧೯೮೦, ಬೆಲೆ: ರೂ. ೬/-, ಪ್ರ: ಗಿರಿ ಪ್ರಕಾಶನ, ಮೈಸೂರು.

* **ಶಿವರಾಮ ಕಾರಂತ : ಪೂರ್ವದಿಂದ ಅತ್ಯಪೂರ್ವಕೆ**, ೧/೮ ಡೆಮಿ, ಪು. ೨೪೮, ಮೊ.ಮು. ೧೯೮೨, ಬೆಲೆ: ರೂ. ೨೦/-, ಪ್ರ: ಅಕ್ಷರ ಪ್ರಕಾಶನ, ಸಾಗರ-೫೭೭೪೦೧.

* **ಎಚ್.ವಿ. ಶ್ರೀರಂಗರಾಜ್ : ವೇಲ್ಸ್ ದಿನಚರಿಯಿಂದ**, ೧/೮ ಕ್ರೌನ್, ಪು. ೧೮೬, ಮೊ.ಮು. ೧೯೮೨, ಬೆಲೆ: ರೂ. ೩೦/-, ಪ್ರ: ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು-೪.

* **ರಾಜಾಮಣಿ ನಾಗರಾಜರಾವ್ : ಸುವರ್ಣ ಮಧುಚಂದ್ರ**, ೧/೮ ಡೆಮಿ, ಪು. ೩೨೮, ಮೊ.ಮು. ೧೯೮೮, ಬೆಲೆ: ರೂ. ೪೫/-, ಪ್ರ: ಶ್ರೀಕಾಂತ ಪ್ರಕಾಶನ, ೪೩೫, ೧೯ನೇ ಅಡ್ಡರಸ್ತೆ, ಜಯನಗರ ೧ ಮತ್ತು ೨ನೇ ಬ್ಲಾಕ್ ಪೂರ್ವ, ಬೆಂಗಳೂರು-೧೧.

* **ಕೆ. ಶಿವರಾಮ ಕಾರಂತ : ಯಕ್ಷರಂಗಕ್ಕಾಗಿ ಪ್ರವಾಸ**, ೧/೮ ಡೆಮಿ, ಪು. ೮೨, ಮೊ.ಮು. ೧೯೯೨, ಬೆಲೆ: ರೂ. ೨೭/-, ಪ್ರ: ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪ್ಯಾರಲರ್ ರಸ್ತೆ, ಕುಮಾರಪಾರ್ಕ್ ಈಸ್ಟ್, ಬೆಂಗಳೂರು-೫೬೦೦೦೧.

* **ಡಾ. ಎಚ್.ಎಂ. ಮಹೇಶ್ವರಯ್ಯ : ಬೆಳಕಿನ ನಾಡಿನಲ್ಲಿ**, ೧/೮ ಡೆಮಿ, ಪು. ೧೦೦, ಮೊ.ಮು. ೧೯೯೩, ಬೆಲೆ: ರೂ. ೪೦/-, ಪ್ರ: ಸಹಿತಾ ಪ್ರಕಾಶನ, ಧಾರವಾಡ-೭.

* **ಹೇಮಲತಾ ಮಹಿಷಿ : ಯೂರೋಪ ದರ್ಶನ**, ೧/೮ ಡೆಮಿ, ಪು. ೧೮೪, ಮೊ.ಮು. ೧೯೯೯, ಬೆಲೆ: ರೂ. ೮೦/-, ಪ್ರ: ಮನೋಹರ ಗ್ರಂಥಮಾಲೆ, ಸುಭಾಷ್ ರಸ್ತೆ, ಧಾರವಾಡ.

* **ಸುಶೀಲಾ ಕೊಪ್ಪರ : ಪಡುವಣ ಪತ್ರಮಾಲೆ**, ೧/೮ ಕ್ರೌನ್, ಪು. ೧೫೦, ಮೊ.ಮು. ೧೯೯೦, ಬೆಲೆ: ರೂ. ೨೨/-, ಪ್ರ: ಸಾಹಿತ್ಯ ಪ್ರಕಾಶನ, ಸಿಟಿ ಕ್ಲಿನಿಕ್ ಸಂಕೀರ್ಣ, ದಾಜೀಬಾನ್ ಪೇಟೆ, ಹುಬ್ಬಳ್ಳಿ-೫೮೦೦೨೯.

* **ಆಶಾದೇವಿ ನೂಲಾ : ನನ್ನ ಪ್ರವಾಸ ಕಥನ**, ೧/೮ ಕ್ರೌನ್, ಪು. ೮೦, ಮೊ.ಮು. ೨೦೦೦, ಬೆಲೆ: ರೂ. ೩೦/-, ಪ್ರ: ಸದ್ಭಾವಗೋಷ್ಠಿ ಸಮಿತಿ, ಗದ್ದುಗೆಮಠ, ಮುಕ್ತಂಪೂರ, ಗುಲಬರ್ಗಾ-೫೮೫೧೦೧.

* **ಇಂದಿರಾ ಶಿವಣ್ಣ : ಹಾಲೆಂಡ್‌ನಿಂದ ಲಂಡನ್‌ವರೆಗೆ**, ೧/೮ ಡೆಮಿ, ಪು. ೨೦೨, ಮೊ.ಮು. ೨೦೦೧, ಬೆಲೆ: ರೂ. ೭೫/-, ಪ್ರ: ಸಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು-೯.
* **ರಹಮತ್ ತರೀಕೆರೆ : ಅಂಡಮಾನ್ ಕನಸು**, ೧/೮ ಕ್ರೌನ್, ಪು. ೧೫೬, ಮೊ.ಮು. ೨೦೦೧, ಬೆಲೆ: ರೂ. ೬೦/-, ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦೦೦೧.
* **ತ್ರಿವೇಣಿ ಶಿವಕುಮಾರ್ : ನಿಸರ್ಗಪ್ರಿಯರ ನಾಡುಗಳಲ್ಲಿ**, ೧/೮ ಡೆಮಿ, ಪು. ೧೬೬, ಮೊ.ಮು. ೨೦೦೨, ಬೆಲೆ: ರೂ. ೮೦/-, ಪ್ರ: ಪ್ರಭುದೀಪ ಪ್ರಕಾಶನ, ೨೩೦, 'ಶಿವಸಂತೃಪ್ತಿ', ೧೪ನೇ ಅಡ್ಡರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-೫೬೦೦೪೦.
* **ವೆಂಕಟೇಶ ಮಾಚಕನೂರು: ಥೇಮ್ಸ್‌ದಿಂದ ಟೈಬರ್‌ವರೆಗೆ**, ೧/೮ ಡೆಮಿ ಪು. ೧೩೬, ಮೊದಲ ಮುದ್ರಣ ೨೦೦೨, ಬೆಲೆ: ರೂ. ೫೦/- ಪ್ರ: ಲೋಹಿಯಾ ಪ್ರಕಾಶನ, 'ಕ್ಷಿತಿಜ' ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-೨೫೭೪೧೨ (ಯೂರೋಪ್ ರಾಷ್ಟ್ರಗಳ ಪ್ರವಾಸ ಕಥನ)

## ಬಿಡಿ ದೇಶಗಳ ಪ್ರವಾಸ ಸಾಹಿತ್ಯ

### ಇಂಗ್ಲೆಂಡ್

* **ಡಾ. ಪಿ.ಎಸ್. ಶಂಕರ್ : ನೆನಪಿನ ಸುಳಿಯಲ್ಲಿ ಲಂಡನ್**, ೧/೮ ಕ್ರೌನ್, ಪು.೧೧೨, ಮೊ.ಮು. ೧೯೭೧, ಬೆಲೆ: ರೂ. ೩/-, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು-೧.
* **ದೇಜಗೌ : ಪ್ರವಾಸಿಯ ದಿನಚರಿ**, ೧/೮ ಕ್ರೌನ್, ಪು. ೧೮೦, ಮೊ.ಮು. ೧೯೭೪, ಬೆಲೆ: ರೂ. ೯.೦೦/-, ಪ್ರ: ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು.
* **ಡಿ.ಕೆ. ನಾಗರಾಜ್ : ನಾ ಕಂಡ ಮ್ಯಾಂಚೆಸ್ಟರ್**, ೧/೮ ಕ್ರೌನ್, ಪು. ೧೯೬, ಮೊ.ಮು. ೧೯೯೦, ಬೆಲೆ: ರೂ. ೩೫/-, ಪ್ರ: ಶ್ರೀ ರಾಮಕೃಷ್ಣ ಪ್ರಕಾಶನ, ನಂ. ೨೬, ಶ್ರೀನಗರ, ಜೇವರ್ಗಿ ರಸ್ತೆ, ಗುಲ್ಬರ್ಗ-೨.

### ಕೆನಡಾ

* **ಗುರುಮೂರ್ತಿ ಪೆಂಡಕೂರು : ಓ! ಕೆನಡಾ**, ೧/೮ ಡೆಮಿ, ಪು. ೮೪, ಮೊ.ಮು. ೨೦೦೪, ಬೆಲೆ: ರೂ. ೫೦, ಪ್ರ: ಯುವಕರ ಸಂಘ (ರಿ), ರಾಮನಗರ, ಹಗರಿಬೊಮ್ಮನಹಳ್ಳಿ - ೫೮೩೨೧೨.

### ಅಮೆರಿಕ

* **ವೈ.ಎಸ್. ಲೂಯಿಸ್ : ಕೊಲಂಬಿಯಾ ಯಾತ್ರೆ**, ೧/೮ ಕ್ರೌನ್, ಪು. ೧೦೪, ಮೊ.ಮು. ೧೯೫೧, ಬೆಲೆ: ೧.೮.೦.

* **ನಾಡಿಗ ಕೃಷ್ಣಮೂರ್ತಿ : ಸಾಗರದಾಚೆ,** ೧/೮ ಕ್ರೌನ್, ಪು. ೨೧೨, ಪ್ರ.ಮು. ೧೯೫೨, ಬೆಲೆ: ರೂ. ೨.೪.೦, ಪ್ರ: ಗೀತಾ ಸಾಹಿತ್ಯ ಮಂದಿರ, ಮಲ್ಲೇಶ್ವರಂ, ಬೆಂಗಳೂರು-೦೩.

* **ಬಿ.ಜಿ.ಎಲ್. ಸ್ವಾಮಿ : ಅಮೆರಿಕದಲ್ಲಿ ನಾನು,** ೧/೮ ಕ್ರೌನ್, ಪು. ೧೪೦, ಮೊ.ಮು. ೧೯೬೨, ಬೆಲೆ: ರೂ. ?, ಪ್ರ: ಕಾವ್ಯಾಲಯ ಪ್ರಕಾಶನ, ಮೈಸೂರು.

* **ಬಿ.ಜಿ.ಎಲ್. ಸ್ವಾಮಿ : ಅಮೆರಿಕಾದಲ್ಲಿ ನಾನು,** ೧/೮ ಕ್ರೌನ್, ಪು. ೧೩೨, ಮೊ.ಮು. ೧೯೬೨, ಬೆಲೆ: ರೂ. ೫/-, ಪ್ರ: ಕಾವ್ಯಾಲಯ, ಮೈಸೂರು.

* **ಸೈಯದ್ ಹಫೀಜುದ್ದೀನ್ : ಅಮೆರಿಕದ ಸಂಯುಕ್ತ ಸಂಸ್ಥಾನಗಳು ಅದರ ಭೂಗೋಳ ಮತ್ತು ಬೆಳವಣಿಗೆ,** ೧/೮ ಕ್ರೌನ್, ಪು. ೧೨೮, ಮೊ.ಮು. ೧೯೬೫, ಬೆಲೆ: ರೂ. ೨.೨೫, ಪ್ರ: ಕಾವ್ಯಾಲಯ ಪ್ರಕಾಶಕರು, ಮೈಸೂರು-೫.

* **ಕೃಷ್ಣಾನಂದ ಲಕ್ಷ್ಮಣ ಕಾಮತ್ : ನಾನೂ ಅಮೆರಿಕೆಗೆ ಹೋಗಿದ್ದೆ,** ೧/೮ ಕ್ರೌನ್ ಪು.೧೮೪, ಮೊ.ಮು. ೧೯೬೯, ಬೆಲೆ: ರೂ. ೬/-, ಪ್ರ: ಮನೋಹರ ಗ್ರಂಥಮಾಲಾ ಧಾರವಾಡ.

* **ಲಲಿತ ಸುಬ್ಬರಾವ್ : ನಾನು ಕಂಡ ಅಮೆರಿಕ,** ೧/೮ ಕ್ರೌನ್, ಪು. ೧೮೪, ಬೆಲೆ: ರೂ. ೪/-, ಮೊ.ಮು. ೧೯೭೧, ಪ್ರ: ವಾಗ್ದೇವಿ ಪ್ರಕಾಶನ, ೪೬೮, ೪ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು-೧೯.

* **ಕೆ. ಗಣೇಶ ಮಲ್ಯ : ಅಮೇರಿಕದಲ್ಲಿ ಅರವತ್ತು ದಿನಗಳು,** ೧/೮ ಕ್ರೌನ್, ಪು. ೨೯೪, ಮೊ.ಮು. ೧೯೭೨, ಬೆಲೆ: ೬/-, ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ (ದ.ಕ.)

* **ಬಿ.ವಿ. ರಾಮನ್ (ಮೂಲ ಲೇಖಕ. ಅನು: ಎಸ್.ಎಸ್. ಸೀತಾರಾಮಶಾಸ್ತ್ರಿ) : ಅಮೆರಿಕದಲ್ಲಿ ಓರ್ವ ಹಿಂದು,** ೧/೮ ಡೆಮಿ, ಪು. ೨೧೨, ಮೊ.ಮು. ೧೯೭೩, ಬೆಲೆ: ರೂ. ೮/-, ಪ್ರ: ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು-೯.

* **ಪ್ರಭುಶಂಕರ : ಅಮೆರಿಕದಲ್ಲಿ ನಾನು ಶಾಂತಿ,** ೧/೮ ಕ್ರೌನ್, ಪು. ೨೫೨, ಮೊ.ಮು. ೧೯೭೮, ಬೆಲೆ: ರೂ. ೨೫/-, ಪ್ರ: ಅಪರ್ಣಾ ಪ್ರಕಾಶನ, ಮೈಸೂರು-೬.

* **ಗೊರೂರು ರಾಮಸ್ವಾಮಿ ಅಯ್ಯಂಗಾರ್ : ಅಮೆರಿಕದಲ್ಲಿ ಗೊರೂರು,** ೧/೮ ಡೆಮಿ, ಪು. ೩೫೦, ಬೆಲೆ: ರೂ. ೧೫/-, ಮೊ.ಮು. ೧೯೭೯, ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

* **ಎ.ಎನ್. ಮೂರ್ತಿರಾವ್ : ಅಪರ ವಯಸ್ಸಿನ ಅಮೆರಿಕಾ ಯಾತ್ರೆ,** ೧/೮ ಡೆಮಿ, ಪು. ೨೭೦, ಮೊ.ಮು. ೧೯೭೯, ಬೆಲೆ: ರೂ. ೨೨/-, ಪ್ರ: ಶ್ರೀನಿಧಿ ಎಂಟರ್‌ಪ್ರೈಸಸ್, ೬೨೯, ಚಾಮರಾಜ ಮೊಹಲ್ಲ, ಮೈಸೂರು-೫೭೦೦೦೪.

* **? : ಸಂಚಾರ ಸಂಗಮ (ಅಮೆರಿಕೆಯ ಪ್ರವಾಸ),** ೧/೮ ಕ್ರೌನ್, ಪು. ೨೨೬, ಮೊ.ಮು. ೧೯೭೯, ಬೆಲೆ: ರೂ. ೧೧/-, ಪ್ರ: ಜಯ ಪ್ರಕಾಶನ, ಧಾರವಾಡ.

* **ಬಿ. ಶ್ರೀಧರ : ಸ್ವಪ್ನಲೋಕ**, ೧/೮ ಕ್ರೌನ್, ಪು. ೨೮೦, ಮೊ.ಮು. ೧೯೮೦, ಬೆಲೆ: ರೂ. ೧೫/-, ಪ್ರ: ಶ್ರೀ ಶ್ರೀ ಶ್ರೀ ಸಂಸ್ಥೆ, ಬೆಂಗಳೂರು.

* **ಡಾ. ಬಿ. ಶ್ರೀಧರ : ಸ್ವಪ್ನಲೋಕದ ಪುನರ್‌ದರ್ಶನ (ಎರಡನೆ ಭಾಗ)**, ೧/೮ ಕ್ರೌನ್, ಪು. ೪೧೬, ಮೊ.ಮು. ೧೯೮೧, ಬೆಲೆ:?, ಪ್ರ: ಶ್ರೀ ರಾಘವೇಂದ್ರ ಪ್ರಕಾಶನ, ನಂ.೧೪, ೫ನೇ ಕ್ರಾಸ್, ಹೊಂಬೇಗೌಡ ನಗರ, ಬೆಂಗಳೂರು-೫೬೦೦೨೭.

* **ಎಸ್. ಆರ್. ಗೌತಮ್ : ನಯಾಗರಕ್ಕೆ ಐನೂರು ಮೈಲಿ**, ೧/೮ ಡೆಮಿ, ಪು. ೧೬೦, ಮೊ.ಮು. ೧೯೮೧, ಬೆಲೆ: ರೂ. ೧೫/-, ಪ್ರ: ಅನುಪಮ ಪ್ರಕಾಶನ, ೭೪೧/ ೫೨, ಮೊದಲನೇ ಮುಖ್ಯರಸ್ತೆ, ವೈಯಾಳಿಕಾವಲ್, ಬೆಂಗಳೂರು-೩.

* **ಸುಧಾಮೂರ್ತಿ : ಅಟ್ಲಾಂಟಿಕ್‌ದಾಚೆಗೆ**, ೧/೮ ಕ್ರೌನ್, ಪು. ೧೧೬, ಮೊ.ಮು. ೧೯೮೧, ಬೆಲೆ: ರೂ. ೧೦/-, ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ-೧.

* **ರಂಜನ ಭಟ್ಟ : ಕುಬೇರನ ರಾಜ್ಯದ ಚಿತ್ರ ವಿಚಿತ್ರ**, ೧/೮ ಕ್ರೌನ್, ಪು. ೩೬೬, ಮೊ.ಮು. ೧೯೮೩, ಬೆಲೆ: ರೂ. ೨೦/-, ಪ್ರ: ಗೀತಾ ಬುಕ್ ಹೌಸ್, ಮೈಸೂರು.

* **ಎನ್. ನಂಜುಂಡಶಾಸ್ತ್ರಿ : ಅಮೆರಿಕ : ಭಾರತೀಯನ ದೃಷ್ಟಿಯಲ್ಲಿ**, ೧/೮ ಕ್ರೌನ್, ಪು.೧೯೨, ಮೊ.ಮು. ೧೯೮೭, ಬೆಲೆ: ರೂ. ೧೨/-, ಪ್ರ: ಪ್ರೊ. ನಂಜುಂಡಶಾಸ್ತ್ರಿ, ನಂ. ೧೦೫/ಡಿ, ೨೯ನೇ ಅಡ್ಡರಸ್ತೆ, ೭ನೇ ಬ್ಲಾಕ್, ಜಯನಗರ, ಬೆಂಗಳೂರು-೮೨.

* **ವ್ಯಾಸರಾಯ ಬಲ್ಲಾಳ : ನಾನೊಬ್ಬ ಭಾರತೀಯ ಪ್ರವಾಸಿ**, ೧/೮ ಕ್ರೌನ್, ಪು. ೧೯೨, ಮೊ.ಮು. ೧೯೮೭, ಬೆಲೆ: ರೂ. ೩೦/-, ಪ್ರ: ಗೀತಾ ಬುಕ್ ಹೌಸ್, ಮೈಸೂರು.

* **ಕೆ.ಎನ್. ಕೃಷ್ಣಮೂರ್ತಿರಾವ್ : ಅಮೇರಿಕ ಪ್ರವಾಸದ ಅನುಭವಗಳು**, ೧/೮ ಕ್ರೌನ್, ಪು. ೧೯೬, ಮೊ.ಮು. ೧೯೮೮, ಬೆಲೆ: ರೂ. ೨೦/-, ಪ್ರ: ಸುವಿದ್ಯಾ ಪ್ರಕಾಶನ, ೭ ಸರ್ವೆಯರ್ ಸ್ಟ್ರೀಟ್, ಬಸವನಗುಡಿ, ಬೆಂಗಳೂರು-೫೬೦೦೦೪.

* **ಪ್ರೊ. ದೇಜಗೌ : ವಿಸ್ಮಯಗಳ ನಾಡಿನಲ್ಲಿ**, ೧/೮ ಡೆಮಿ, ಪು. ೩೬೪, ಮೊ.ಮು. ೧೯೯೫, ಬೆಲೆ: ರೂ. ೧೦೫, ಪ್ರ: ಸಂವಹನ, ೧೨/೧, ಈವಿನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು-೫೭೦೦೦೧.

* **ಬಿ. ವಿರೂಪಾಕ್ಷಪ್ಪ : ನಾ ಕಂಡ ಅಮೇರಿಕಾ**, ೧/೮ ಡೆಮಿ, ಪು. ೧೮೦, ಮೊ.ಮು. ೧೯೯೬, ಬೆಲೆ: ರೂ. ೩೦/-, ಪ್ರ: ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಂಗಳೂರು-೧.

* **ಕುಲಶೇಖರಿ : ಬೊಗಸೆ ಬುತ್ತಿ**, ೧/೮ ಕ್ರೌನ್, ಪು. ೧೦೪, ಮೊ.ಮು. ೧೯೯೭, ಬೆಲೆ: ರೂ. ೩೦/-, ಪ್ರ: ಚಿನ್ಮಯಿ ಪ್ರಕಾಶನ, 'ಕ್ಷಿತಿಜ', ೫ನೇ ತಿರುವು, ಮಲ್ಲೇಶ್ವರ, ಬೆಂಗಳೂರು-೫೬೦೦೦೩.

* **ನಾಗತಿಹಳ್ಳಿ ಚಂದ್ರಶೇಖರ : ಅಮೆರಿಕಾ! ಅಮೆರಿಕಾ!!**, ೧/೮ ಕ್ರೌನ್, ಪು. ೨೬೦, ಮೊ.ಮು. ೧೯೯೭, ಬೆಲೆ: ರೂ. ೫೦/-, ಪ್ರ: "ಅಭಿವ್ಯಕ್ತಿ" ಒಂದು ಸಾಂಸ್ಕೃತಿಕ ವೇದಿಕೆ, ಬೆಂಗಳೂರು-೫೬೦೦೧೧.

* **ವನಜಾ ರಾಜನ್ : ಕಣ್ಣಂಚಿನಲ್ಲಿ ಪೂರ್ವ ಪಶ್ಚಿಮ**, ೧/೮ ಕ್ರೌನ್, ಪು. ೯೦, ಮೊ.ಮು. ೧೯೯೮, ಬೆಲೆ: ರೂ. ೨೫/-, ಪ್ರ: ದಿವ್ಯಚಂದ್ರ ಪ್ರಕಾಶನ, ಕೆಎಚ್‌ಬಿ ಕಾಲೋನಿ, ೨ನೇ ಹಂತ, ೭ನೇ ಮೈನ್, ೮ನೇ ಕ್ರಾಸ್, ಬಸವೇಶ್ವರನಗರ, ಬೆಂಗಳೂರು-೭೯

* **ವಸಂತೀ ಚಂದ್ರ : ಭೋಗಭೂಮಿಯ ಮಡಿಲಲ್ಲಿ (ಭಾಗ-೧)**, ೧/೮ ಕ್ರೌನ್, ಪು.೧೬೦, ಮೊ.ಮು. ೧೯೯೯, ಬೆಲೆ: ರೂ. ೭೫/-, ಪ್ರ: ವಿಜಯ ಸಾಹಿತ್ಯ ಪ್ರಕಾಶನ, ೧೬೦, ೩ನೇ ಕ್ರಾಸ್, ೩ನೇ ಮೈನ್, ಹನುಮಂತನಗರ, ಬೆಂಗಳೂರು-೧೯.

* **ಬಿ.ಎಸ್. ಸಣ್ಣಯ್ಯ : ನಾನೂ ಹೋಗಿದ್ದೆ ಅಮೆರಿಕಾಗೆ**, ೧/೮ ಕ್ರೌನ್, ಪು. ೮೮, ಮೊ.ಮು. ೨೦೦೧, ಬೆಲೆ: ರೂ. ೪೦/-, ಪ್ರ: ಸಂವಹನ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು-೫೭೦೦೦೧.

* **ಡಾ. ಕೆ.ಜಿ. ಗುರುಮೂರ್ತಿ : ಅಮೆರಿಕೆಯಲ್ಲಿ ಪ್ರವಾಸ**, ೧/೮ ಡೆಮಿ, ಪು. ೩೯೨, ಮೊ.ಮು. ೨೦೦೦, ಬೆಲೆ: ರೂ. ೧೦೦/-, ಪ್ರ: ಪ್ರಿಯದರ್ಶಿನಿ ಪ್ರಕಾಶನ, ೧೩೮, ೭ನೇ 'ಸಿ' ಮೈನ್, ವಿಜಯನಗರ ೨ನೇ ಹಂತ, ಬೆಂಗಳೂರು-೫೬೦೦೪೦.

* **ಪ್ರೊ. ವೈ.ಆರ್. ಮೋಹನ್ : ಅಮೇರಿಕಾಯಣ**, ೧/೮ ಡೆಮಿ, ಪು. ೮೯೨, ಮೊ.ಮು. ೨೦೦೩, ಬೆಲೆ: ರೂ. ೬.೫೦, ಪ್ರ: ಅಭಿನವ, ೫೮ ಮಹಡಿ, ೫ನೇ 'ಎ' ಕ್ರಾಸ್, ಸುಬ್ಬಣ್ಣ ಗಾರ್ಡನ್, ವಿಜಯನಗರ, ಬೆಂಗಳೂರು-೪೦.

* **ಗುರುಮೂರ್ತಿ ಪೆಂಡಕೂರು : ಅವಕಾಶಗಳ ಅಮರಾವತಿ ಅಮೇರಿಕಾ**, ೧/೮ ಡೆಮಿ, ಪು. ೧೧೩, ಮೊ.ಮು. ೨೦೦೪, ಬೆಲೆ: ರೂ. ೬೦, ಪ್ರ: ಯುವಕರ ಸಂಘ (ರಿ), ರಾಮನಗರ, ಹಗರಿಬೊಮ್ಮನಹಳ್ಳಿ - ೫೮೩೨೧೨.

* **ವೆಂಕಟಸ್ವಾಮಿ: ಅಮೇರಿಕಾದಲ್ಲಿ ನನ್ನ ಅನುಭವಗಳು**, ೧/೮ ಡೆಮಿ ಪು. ೧೩೬, ಮೊದಲ ಮುದ್ರಣ ೨೦೦೪, ಬೆಲೆ: ರೂ. ೮೦/- ಪ್ರ: ಅಳಿಲು ಸೇವಾ ಸಂಸ್ಥೆ, ೧೩೩, ಮೊದಲ ಮಹಡಿ, ಓಬಳಪ್ಪ ಗಾರ್ಡನ್, ಕೆ.ಆರ್. ರಸ್ತೆ, ಬೆಂಗಳೂರು-೮೨.

* **ಪಾರ್ವತಮ್ಮ ಮಹಾಲಿಂಗಶೆಟ್ಟಿ : ಅಮೆರಿಕದ ಇತಿಹಾಸ ಮತ್ತು ಇಂದಿನ ಜನಜೀವನ**, ೧/೮ ಕ್ರೌನ್, ಪು. ೩೬೦, ಮೊ.ಮು. ೨೦೦೪, ಬೆಲೆ: ರೂ. ೧೬೦/-, ಪ್ರ: ಐಬಿಎಚ್ ಪ್ರಕಾಶನ, ೭೪೫/೬, ೧೦ನೇ 'ಬಿ' ಮುಖ್ಯರಸ್ತೆ, ೮ನೇ ಬ್ಲಾಕ್, ಜಯನಗರ, ಬೆಂಗಳೂರು-೧೧.

**ರಷ್ಯಾ**

* **ಬಳಿಗೆರೆ ರಾಮಚಂದ್ರರಾವ್ : ನಾನು ಕಂಡ ರಷ್ಯಾ**, ೧/೮ ಕ್ರೌನ್, ಪು. ೧೨೮, ಮೊ.ಮು. ೧೯೫೬, ಬೆಲೆ: ರೂ. ೧/-, ಪ್ರ: ಜನಶಕ್ತಿ ಪ್ರಕಾಶನ, ಸುಲ್ತಾನ್‌ಪೇಟೆ, ಬೆಂಗಳೂರು-೨.

* **ಎಚ್.ವಿ. ಶ್ರೀರಂಗರಾಜ್ : ಸೋವಿಯೆತ್ ದಿನಚರಿ**, ೧/೮ ಕ್ರೌನ್, ಪು. ೧೯೮, ಮೊ.ಮು. ೧೯೬೯, ಬೆಲೆ: ರೂ. ೩.೦೦/-, ಪ್ರ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ನಿಯಮಿತ, ಚಾಮರಾಜಪೇಟೆ, ಬೆಂಗಳೂರು.

* **ಬಸವರಾಜ ಕಟ್ಟೀಮನಿ : ನಾನು ಕಂಡ ರಶಿಯಾ**, ೧/೮ ಕ್ರೌನ್, **ಪು.** ೧೩೪, ಮೊ.ಮು. ೧೯೬೯, ಬೆಲೆ: ರೂ. ೩/-, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು-೧.
* **ಬಸವರಾಜ ಕಟ್ಟೀಮನಿ : ನಾನು ಕಂಡ ರಶಿಯಾ**, ೧/೮ ಕ್ರೌನ್, **ಪು.** ೧೩೪, ಮೊ.ಮು. ೧೯೭೦, ಬೆಲೆ; ರೂ. ೩/-, ಪ್ರ; ಉಷಾ ಸಾಹಿತ್ಯ ಮಾಲೆ, ಮೈಸೂರು.
* **ದೇಜಗೌ : ವಿದೇಶದಲ್ಲಿ ನಾಲ್ಕು ವಾರ**, ೧/೮ ಡೆಮಿ, **ಪು.** ೨೩೪, ಮೊ.ಮು. ೧೯೭೦, ಬೆಲೆ: ರೂ. ೮/-, ಪ್ರ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ನಿಯಮಿತ, ಚಾಮರಾಜಪೇಟೆ, ಬೆಂಗಳೂರು.
* **ಜಿ.ಎಸ್. ಶಿವರುದ್ರಪ್ಪ : ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ**, ೧/೮ ಡೆಮಿ, **ಪು.** ೧೨೦, ಮೊ.ಮು. ೧೯೭೩, ಪ್ರ: ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು-೪.
* **ಹ.ವೆಂ. ನಾಗರಾಜರಾವ್ : ನವ ರಷ್ಯದ ನೋಟ**, ೧/೮ ಡೆಮಿ, **ಪು.** ೧೪೨, ಮೊ.ಮು. ೧೯೭೪, ಬೆಲೆ: ರೂ. ೮/-, ಪ್ರ: ಸಾಹಿತ್ಯಲೋಕ, ೨೦, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬೆಂಗಳೂರು-೪.
* **ರಾಜಮ್ ಕೃಷ್ಣನ್ : ಹೊಸ ಬಾಳು ಹೊಸ ಹಾಡು (ಸೋವಿಯೆತ್ ಮಹಿಳೆಯರ ಜೀವನ)**, ೧/೮ ಕ್ರೌನ್, **ಪು.** ೧೨೬, ಮೊ.ಮು. ೧೯೭೮, ಬೆಲೆ: ರೂ. ೫/-, ಪ್ರ: ನವ ಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.
* **ಅನುಪಮಾ ನಿರಂಜನ : ಸ್ನೇಹಯಾತ್ರೆ**, ೧/೮ ಕ್ರೌನ್, **ಪು.** ೧೫೦, ಮೊ.ಮು. ೧೯೭೮, ಬೆಲೆ: ರೂ. ೪.೦೦/-, ಪ್ರ: ಡಿ.ವಿ.ಕೆ. ಮೂರ್ತಿ, ಮೈಸೂರು-೪.
* **ಎನ್.ಕೆ. ಉಪಾಧ್ಯಾಯ : ದೇವರ ಗುಡಿ**, ೧/೮ ಕ್ರೌನ್, **ಪು.** ೭೮, ಮೊ.ಮು. ೧೯೮೬, ಬೆಲೆ: ರೂ. ೮/-, ಪ್ರ: ಭಾರತಿ ಪ್ರಕಾಶನ, ಸರಸ್ವತಿಪುರಂ, ಮೈಸೂರು-೯.
* **ಶಿವರಾಮ ಕಾರಂತ : ಅರಸಿಕರಲ್ಲ**, ೧/೮ ಡೆಮಿ, **ಪು.** ೧೮೮, ಮೊ.ಮು. ೧೯೮೭, ಬೆಲೆ: ರೂ. ೩೦/-, ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ-೫೭೭೪೧೭.
* **ಹ.ವೆಂ. ನಾಗರಾಜ್‌ರಾವ್ : ಯಾಸ್ನಯ ಪಲ್ಯಾನ (ಲೆವ್ ತೊಲ್‌ಸ್ತೋಯ್ ತಪದ ಮನೆಯ ಪರಿಚಯ)**, ೧/೮ ಕ್ರೌನ್, **ಪು.** ೧೦೬, ಮೊ.ಮು. ೧೯೯೧, ಬೆಲೆ: ರೂ. ೧೬/-, ಪ್ರ: ಪದ್ಮ-ಪ್ರಜ್ಞಾ ಪ್ರಕಾಶನ, ೩೧೦, ೩ನೇ ಮೈನ್, ೩ನೇ ಹಂತ, ಜೆ.ಪಿ. ನಗರ, ಬೆಂಗಳೂರು-೫೬೦೦೭೮.

ಜಪಾನ್

* **ಜೆ. ಕೃಷ್ಣಶಾಸ್ತ್ರಿ : ಜಪಾನ್ ಸಾಮ್ರಾಜ್ಯ**, ೧/೮ ಕ್ರೌನ್, **ಪು.** ೧೧೪, ಬೆಲೆ: ?, ಮೊ.ಮು. ೧೯೧೬, ಪ್ರ: ಜೆ. ಕೃಷ್ಣಶಾಸ್ತ್ರೀ, ಮೈಸೂರು.
* ಎಂ. ವೀರಪ್ಪ : **ಸಯೋನರ ಜಪಾನ್**, ೧/೮ ಕ್ರೌನ್, **ಪು.** ೮೪, ಮೊ.ಮು.೧೯೫೯, ಬೆಲೆ: ರೂ. ೧.೦೦/-, ಪ್ರ: ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.
* **ಕೆ. ಅನಂತರಾಮು : ಉದಯರವಿಯ ನಾಡಿನಲ್ಲಿ**, ೧/೮ ಡೆಮಿ, **ಪು.** ೨೧೨, ಮೊ.ಮು. ೧೯೭೪, ಬೆಲೆ: ರೂ. ೧೬/-, ಪ್ರ: ಅನಂತ ಪ್ರಕಾಶನ, ೩೩೬, ರಾಮಾನುಜಾ ರಸ್ತೆ, ಮೈಸೂರು-೪.

* **ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು : ನಮ್ಮ ವಿದೇಶ ಯಾತ್ರೆ,** ೧/೮ ಕ್ರೌನ್, ಪು. ೨೫೪, ಬೆಲೆ: ರೂ. ೮/-, ಮೊ.ಮು. ೧೯೭೯.

* **ಟಿ.ಆರ್. ಗುರುರಾಜರಾವ್ : ನಾ ಕಂಡ ಜಪಾನ್,** ೧/೮ ಕ್ರೌನ್, ಪು. ೧೨೮, ಮೊ.ಮು. ೧೯೮೯, ಬೆಲೆ: ರೂ. ೧೨/-, ಪ್ರ: ಸಾಹಿತ್ಯ ಕಲಾದರ್ಶಿನಿ, ನಂ. ೩, ಐಟಿಐ ಬಡಾವಣೆ, ಬೆಂಗಳೂರು-೫೬೦೦೫೪.

**ಜಪಾನ್-ಆಗ್ನೇಷಿಯಾ**

* **ಸಿ.ಹೆಚ್. ಮರಿದೇವರು : ಆಗ್ನೇಷಿಯಾ ಮತ್ತು ಜಪಾನ್ ರಾಷ್ಟ್ರಗಳಲ್ಲಿ ಮರಿದೇವರು,** ೧/೮ ಡೆಮಿ, ಪು. ೨೮೦, ಮೊ.ಮು. ೧೯೮೬, ಬೆಲೆ: ರೂ. ೫೦, ಪ್ರ: ಉದಯಭಾನು ಪ್ರಕಾಶನ, ಕಲ್ಪತರು ಎಸ್ಟೇಟ್, ಜಿಲ್ಲಾ ಯಲ್ಲಾಪುರ, ಅರಕೆರೆ ಅಂಚೆ, ತುಮಕೂರುತಾ॥

**ಥಾಯ್‌ಲ್ಯಾಂಡ್-ಇಂಡೋನೇಶಿಯಾ**

* **ಗುರುಮೂರ್ತಿ ಪೆಂಡಕೂರು : ಥಾಯ್‌ಲ್ಯಾಂಡ್ ಇಂಡೋನೇಶಿಯಾ ತಿರುಗಾಟ,** ೧/೮ ಕ್ರೌನ್, ಪು. ೧೫೪, ಮೊ.ಮು. ೨೦೦೧, ಬೆಲೆ: ರೂ. ೬೫, ಪ್ರ: ಯುವಕರ ಸಂಘ (ರಿ), ರಾಮನಗರ, ಹಗರಿಬೊಮ್ಮನಹಳ್ಳಿ - ೫೮೩೨೧೨.

**ಜರ್ಮನಿ**

* **ಹೊ. ಶ್ರೀನಿವಾಸಯ್ಯ : ನಾ ಕಂಡ ಜರ್ಮನಿ,** ೧/೮ ಕ್ರೌನ್, ಪು. ೨೯೦, ಮೊ.ಮು. ೧೯೬೭, ಬೆಲೆ: ರೂ. ೬/-, ಪ್ರ: ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ಬೆಂಗಳೂರು-೩.

* **ಹೊ. ಶ್ರೀನಿವಾಸಯ್ಯ : ಶಶಿ ಕಂಡ ಜರ್ಮನಿ,** ೧/೮ ಕ್ರೌನ್, ಪು. ೪೦, ಮೊ.ಮು.?, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮.

* **ಡಾ. ಶಿವಾಜಿರಾವ ಸರ್ವಿ : ಹ್ಯಾಂಬರ್ಗದಲ್ಲಿ ಹದಿನೈದು ದಿನ,** ೧/೮ ಡೆಮಿ, ಪು.೧೮೮, ಮೊ.ಮು. ೨೦೦೦, ಬೆಲೆ: ರೂ. ೮೦/-, ಪ್ರ: ಅಮೋಘ ವಾಙ್ಮಯ ಪ್ರಸಾರ, 'ವೆಂಗೊ' ೬೫, ಆರ್.ಸಿ. ನಗರ, ಮೊದಲನೆ ಹಂತ, ಬೆಳಗಾವಿ-೫೯೦೦೦೬.

**ಬರ್ಲಿನ್**

* **ಶ್ರೀರಂಗ : ಶ್ರೀ-ರಂಗ-ಯಾತ್ರೆ,** ೧/೮ ಕ್ರೌನ್, ಪು. ೭೦, ಮೊ.ಮು. ೧೯೭೦, ಬೆಲೆ: ರೂ. ೧.೨೫/-, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು-೧.

**ಇಟಲಿ**

* **ಕು.ಶಿ. ಹರಿದಾಸಭಟ್ಟ : ಇಟಾಲಿಯಾ ನಾನು ಕಂಡಂತೆ,** ೧/೮ ಕ್ರೌನ್, ಪು. ೨೩೬, ಮೊ.ಮು. ೧೯೭೧, ಬೆಲೆ: ರೂ. ೫/-, ಪ್ರ: ಮಣಿಪಾಲ್ ಪವರ್ ಪ್ರೆಸ್, ಮಣಿಪಾಲ.

**ಇಟಲಿ-ಫಿನ್ಲೆಂಡ್-ಹಾಲೆಂಡ್**

* **ಕು.ಶಿ. ಹರಿದಾಸಭಟ್ಟ : ರಂಗಾಯನ,** ೧/೮ ಕ್ರೌನ್, ಪು. ೧೫೬, ಮೊ.ಮು. ೧೯೮೭, ಬೆಲೆ: ರೂ. ೧೮/-, ಪ್ರ: ಗೀತಾ ಬುಕ್ ಹೌಸ್, ನ್ಯೂ ಸ್ಟ್ಯಾಚ್ಯು ಸ್ಕ್ವಯರ್, ಮೈಸೂರು.

**ಪ್ಯಾರಿಸ್**

* **ನವರತ್ನ ರಾಮ್** : ಪ್ಯಾರಿಸ್ಸಿನಿಂದ ಪ್ರೇಯಸಿಗೆ, ೧/೮ ಕ್ರೌನ್, ಪು. ೨೬೮, ಮೊ.ಮು. ೧೯೬೬, ಬೆಲೆ: ರೂ. ೪/-, ಪ್ರ: ಆರತಿ ಪ್ರಕಾಶನ, 'ನವರತ್ನ ಹೋಮ್', ೧೭೬, ಸುಬ್ಬರಾಮಶೆಟ್ಟಿ ರೋಡ್, ಬೆಂಗಳೂರು-೪.

* **ಶಂಕರ್ ಪಿ.ಎಸ್.** : ನೆನಪಿನ ಸುಳಿಯಲ್ಲಿ ಲಂಡನ್, ೧/೮ ಕ್ರೌನ್, ಪು. ೧೧೨, ಮೊ.ಮು. ೧೯೭೧, ಬೆಲೆ: ರೂ. ೫/-, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು.

* **ವಸಂತ ಕವಲಿ** : ರಾಗತಾನ : ಸೀನ ದಡದಲ್ಲಿ, ಮೊ.ಮು. ೧೯೭೯, ೧/೮ ಡೆಮಿ, ಪು. ೧೮೨, ಬೆಲೆ: ರೂ. ೧೧/-, ಪ್ರ: ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು.

**ಬಂಗ್ಲಾದೇಶ**

* **ರಾವಬಹದ್ದೂರ್** : ನಾನು ಕಂಡ ಬಂಗ್ಲಾದೇಶ, ೧/೮ ಕ್ರೌನ್, ಪು. ೧೮೮, ಮೊ.ಮು. ೧೯೭೨, ಬೆಲೆ: ರೂ. ೪.೦೦, ಪ್ರ: ಲೋಕ ಶಿಕ್ಷಣ ಮಾಲಾ, ಹುಬ್ಬಳ್ಳಿ-ಬೆಂಗಳೂರು.

**ಆಫ್ರಿಕ**

* **ದೇಜಗೌ** : ಆಫ್ರಿಕಾ ಯಾತ್ರೆ, ೧/೮ ಕ್ರೌನ್, ಪು. ೧೬೦, ಮೊ.ಮು. ೧೯೭೫, ಬೆಲೆ: ರೂ. ೬/-, ಪ್ರ: ಸುರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು-೯.

* **ಟಿ.ಆರ್. ನಾಗಪ್ಪ** : ಆಫ್ರಿಕದ ಒಂದು ನೋಟ, ೧/೮ ಕ್ರೌನ್, ಪು. ೧೭೦, ಮೊ.ಮು. ೧೯೯೫, ಬೆಲೆ: ರೂ. ૩೦/-, ಪ್ರ: ೨೯೦೪, ೧೫ನೇ ಕ್ರಾಸ್, ಬಸವೇಶ್ವರ ರಸ್ತೆ, ಚಾಮುಂಡಿಪುರಂ, ಮೈಸೂರು-೪.

**ಇಸ್ರೇಲ್, ಶ್ರೀಲಂಕಾ**

* **ದೇಜಗೌ** : ಏಸು ವಿಭೀಷಣರ ನಾಡಿನಲ್ಲಿ, ೧/೮ ಕ್ರೌನ್, ಪು. ೧૩೦, ಮೊ.ಮು. ೧೯೭೮, ಬೆಲೆ: ರೂ. ೬.೦೦, ಪ್ರ: ಗುರುದೇವ್ ಉದ್ಯಮ ಕೇಂದ್ರ, ಜಯಲಕ್ಷ್ಮೀಪುರಂ, ಮೈಸೂರು-೧೨.

* **ಹೊ. ಶ್ರೀನಿವಾಸಯ್ಯ** : ಶ್ರೀಲಂಕಾ, ಪ್ರಚಾರೋಪನ್ಯಾಸಮಾಲೆ, ಪು. ೯೨, ಮೊ.ಮು. ೧೯೮೦, ಬೆಲೆ: ರೂ. ೦.೪೦, ಪ್ರ: ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು.

**ಸಿಂಹಳ**

* **ಹೊ. ಶ್ರೀನಿವಾಸಯ್ಯ** : ಸಿಂಹಳದಲ್ಲಿ ಶಶಿ, ೧/೮ ಕ್ರೌನ್, ಪು. ೮೦, ಮೊ.ಮು. ೧೯೮೨, ಬೆಲೆ: ರೂ. ೫.೦೦, ಪ್ರ: ಐಬಿಹೆಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು-೧.

**ಲಕ್ಷದ್ವೀಪ**

* **ಮುನಿಲ್ ಗಣೇಶ ಶೆಣೈ** : ಲಕ್ಷದ್ವೀಪದಲ್ಲಿ, ೧/೮ ಕ್ರೌನ್, ಪು. ೮೮, ಮೊ.ಮು. ೧೯೮೬, ಬೆಲೆ: ರೂ. ೧೦/-, ಪ್ರ: ಪುಸ್ತಕ ನಿಧಿ, ೧೪ ಕಾರ್‍ಕಳ ಹೌಸ್, ಸಾರಕ್ಕಿ ಬಡಾವಣೆ, ಜೆ.ಪಿ. ನಗರ, ಬೆಂಗಳೂರು-೭೮.

**ಚೀನಾ**

* **ಪ್ರೊ. ಹೆಚ್.ಆರ್. ದಾಸೇಗೌಡ : ಸಾಂಗ್ ಸೇನ್ ಕುಂಗ್ ನೆಲದಲ್ಲಿ**, ೧/೮ ಕ್ರೌನ್, ಪು. ೧೦೮, ಮೊ.ಮು. ೧೯೮೯, ಬೆಲೆ: ರೂ. ೨೦/-, ಪ್ರ: ಚಿಂತನ ಪ್ರಕಾಶನ, ೬೮೧, 'ಅನುರಾಧ-ಅನುರೂಪ', ೧೨ನೇ ಅಡ್ಡರಸ್ತೆ, ಎಂ.ಸಿ.ಆರ್. ಬಡಾವಣೆ, ಬೆಂಗಳೂರು-೪೦.

**ಮಾಲ್ಡಿವ್ಸ್**

* **ಎ.ಎಲ್. ರಾಮಚಂದ್ರರಾವ್ : ಮಾಲ್ಡಿವ್ಸ್ ದ್ವೀಪಗಳು**, ೧/೮ ಕ್ರೌನ್, ಪು. ೩೬, ಮೊ.ಮು. ೧೯೮೯, ಬೆಲೆ: ರೂ. ೯/-, 'ವಸಂತ ವಿಹಾರ', ೧೦೩೮, ದೇವಪಾರ್ಥಿವ ರಸ್ತೆ, ಚಾಮರಾಜಪುರಂ, ಮೈಸೂರು-೫೭೦೦೦೪.

**ಫ್ರಾನ್ಸ್**

* **ಪಿ.ಆರ್. ತಿಪ್ಪೇಸ್ವಾಮಿ : ಕಲಾವಿದ ಕಂಡ ಫ್ರಾನ್ಸ್**, ೧/೮ ಡೆಮಿ, ಪು. ೧೨೬, ಮೊ.ಮು. ೧೯೯೪, ಬೆಲೆ: ರೂ. ೪೫/-, ಪ್ರ: ಮಯೂರ್ ಪಬ್ಲಿಕೇಷನ್ಸ್, ೬೧೮, ೨ನೇ ಮೈನ್, ೨ನೇ ಕ್ರಾಸ್, ಎನ್.ಜಿ.ಇ.ಎಫ್. ಲೇಔಟ್, ಬೆಂಗಳೂರು-೭೨.
* **ಮೀನಾ ಮೈಸೂರು: ಎತ್ತಣಿಂದೆತ್ತ**, ೧/೮ ಡೆಮಿ ಪು. ೨೬೪, ಮೊದಲ ಮುದ್ರಣ ೨೦೦೩, ಬೆಲೆ: ರೂ. ೧೫೦/- ಪ್ರಕಾಶಕರು: ಋಜುವಾತು ಪ್ರಕಾಶನ, ೪೯೮, ೬ನೇ 'ಎ' ಮೈನ್, ಆರ್.ಎಂ.ವಿ. ೨ನೇ ಹಂತ, ಬೆಂಗಳೂರು-೯೪.

**ಅಲಾಸ್ಕ**

* **ದೇಜಗೌ : ಜಗತ್ತಿನ ನಡುನೆತ್ತಿಯ ಮೇಲೆ**, ೧/೮ ಕ್ರೌನ್, ಪು. ೧೧೮, ಮೊ.ಮು. ೧೯೯೯, ಬೆಲೆ: ರೂ. ೫೦/-, ಪ್ರ: ಶೃಂಗಾರ ಪ್ರಕಾಶನ, ಬ್ರಾಹ್ಮಣರ ಬೀದಿ, ಚಿಕ್ಕನಾಯಕನಹಳ್ಳಿ-೫೭೨೨೧೪.

**ಮೆಕಾಂಗ್**

* **ಸುಧಾ ಮೂರ್ತಿ : ಕಾವೇರಿಯಿಂದ ಮೆಕಾಂಗಿಗೆ**, ೧/೮ ಕ್ರೌನ್, ಪು. ೧೧೬, ಮೊ.ಮು.:?, ನಾಲ್ಕನೇ ಮುದ್ರ... ೨೦೦೨, ಪ್ರ: ಐಬಿಹೆಚ್ ಪ್ರಕಾಶನ, ೬೪೫/೬, ೧೦ನೇ ಮೈನ್, ೪ನೇ ಬ್ಲಾಕ್, ಜಯನಗರ, ಬೆಂಗಳೂರು-೫೬೦೦೧೧.

**ಈಜಿಪ್ಟ್**

* **ಸುಧಾ ಮೂರ್ತಿ : ಹಕ್ಕಿಯ ತೆರದಲಿ...**, ೧/೮ ಡೆಮಿ, ಪು. ೧೨೪, ಮೊ.ಮು. ೨೦೦೨, ಬೆಲೆ: ರೂ. ೨೦/-, ಪ್ರ: ಲೋಕ ಶಿಕ್ಷಣ ಟ್ರಸ್ಟ್, ಗ್ರಂಥಮಾಲೆ, ಬೆಂಗಳೂರು-ಹುಬ್ಬಳ್ಳಿ-ಗುಲ್ಬರ್ಗಾ.

**ನ್ಯೂಜಿಲೆಂಡ್-ಆಸ್ಟ್ರೇಲಿಯಾ**

* **ನಾಗತಿಹಳ್ಳಿ ಚಂದ್ರಶೇಖರ್ : ದಕ್ಷಿಣ ಧ್ರುವದಿಂ**, ೧/೮ ಡೆಮಿ, ಪು. ೭೬, ಪ್ರ.ಮು. ೨೦೦೪, ಬೆಲೆ: ರೂ. ೬೦/-, ಪ್ರ: ಅಭಿವ್ಯಕ್ತಿ, ೧೬೬, ೨೮ನೇ ಕ್ರಾಸ್, ೧೭ನೇ ಮೈನ್, ಬನಶಂಕರಿ ೨ನೇ ಹಂತ, ಬೆಂಗಳೂರು-೭೦.

### ಸಿಂಗಪುರ-ಆಸ್ಟ್ರೇಲಿಯಾ

* **ಪ್ರೊ. ಬಿ. ವಿರೂಪಾಕ್ಷಪ್ಪ : ನನ್ನ ಸಿಂಗಪುರ ಮತ್ತು ಆಸ್ಟ್ರೇಲಿಯಾ ಪ್ರವಾಸದ ಅನುಭವಗಳು**, ೧/೮ ಡೆಮಿ, ಪು. ೧೭೦, ಮೊ.ಮು. ೨೦೦೦, ಬೆಲೆ: ರೂ. ೮೦, ಪ್ರ: ನವೋದಯ ಪ್ರಕಾಶನ, ನಂ. ೫, 'ಚೇತನ' ವಿಜಯನಗರ ೨ನೇ ಹಂತ, ಬೆಂಗಳೂರು-೪೦.

### ಆಸ್ಟ್ರೇಲಿಯಾ

* **ಟಿ. ಮಹಾಬಲೇಶ್ವರ ಭಟ್ಟ : ಆಸ್ಟ್ರೇಲಿಯಾದಲ್ಲಿ ಎಪ್ಪತ್ತು ದಿನಗಳು**, ೧/೮ ಕ್ರೌನ್, ಪು.೧೩೬, ಮೊ.ಮು. ೨೦೦೧, ಬೆಲೆ: ರೂ. ೧೦೦/-, ಪ್ರ: ಹೇಮಂತ ಸಾಹಿತ್ಯ, ನಂ. ೯೭೨, 'ಸಿ' ಆನೇ 'ಇ' ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦.

### ಅಂಡಮಾನ್

* **ದೇ.ನಾ. ಶ್ರೀನಿವಾಸಮೂರ್ತಿ : ಕಾಲಾತೀತರ ದ್ವೀಪಗಳಲ್ಲಿ**, ೧/೮ ಕ್ರೌನ್, ಪು. ೨೦೪, ಮೊ.ಮು. ೧೯೮೩, ದ್ವಿ.ಮು. ೧೯೮೯, ಬೆಲೆ: ರೂ. ೧೫/-, ಪ್ರ: ಸ್ಟಾರ್ಕ್ ಕಾರ್ಪೊರೇಷನ್ ಸ್ಟೇಡಿಯಂ ಕಟ್ಟಡ, ಜಯನಗರ ೩ನೇ ಬ್ಲಾಕ್, ಬೆಂಗಳೂರು-೧೧.

### ಅಂಡಮಾನ್-ಮಹಾನದಿ ನೈಲ್

* **ಕೆ.ಪಿ. ಪೂರ್ಣಚಂದ್ರ ತೇಜಸ್ವಿ : ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್**, ೧/೮ ಕ್ರೌನ್, ಪು. ೨೧೦, ಮೊ.ಮು. ೧೯೯೦, ಬೆಲೆ: ರೂ. ೨೫/-, ಪ್ರ: ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ.

### ಅಂಡಮಾನ್-ಮಾರಿಷಸ್

* **ತ್ರಿವೇಣಿ ಶಿವಕುಮಾರ್ : ಹವಳ ದ್ವೀಪಗಳಲ್ಲಿ (ಅಂಡಮಾನ್ ಮತ್ತು ಮಾರಿಷಸ್ ಪ್ರವಾಸ ಕಥನ)**, ೧/೮ ಕ್ರೌನ್, ಪು. ೧೩೬, ಮೊ.ಮು. ೨೦೦೪, ಬೆಲೆ: ರೂ. ೭೦, ಪ್ರ: ಪ್ರಭುದೀಪ ಪ್ರಕಾಶನ, ೨೩೦, 'ಶಿವಸಂತೃಪ್ತಿ', ೧೪ನೇ ಅಡ್ಡರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-೫೬೦೦೪೦.

### ಬ್ರಝಿಲ್

* **ಡಾ. ಸಿ. ನಾಗಭೂಷಣ : ನಾ ಕಂಡ ಬ್ರಝಿಲ್**, ೧/೮ ಡೆಮಿ, ಪು. ೧೩೦, ಮೊ.ಮು. ೨೦೦೧, ಬೆಲೆ: ರೂ. ೬೦/-, ಪ್ರ: ಲೋಹಿಯಾ ಪ್ರಕಾಶನ, 'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಬಳ್ಳಾರಿ-೫೮೩೧೦೨.

### ಕ್ಯೂಬಾ

* **ಜಿ.ಎನ್. ಮೋಹನ್ : ನನ್ನೊಳಗಿನ ಹಾಡು : ಕ್ಯೂಬಾ**, ೧/೮ ಡೆಮಿ, ಪು. ೧೨೪, ಮೊ.ಮು. ೨೦೦೦, ಬೆಲೆ: ರೂ. ೫೦/-, ಪ್ರ: ಲೋಹಿಯಾ ಪ್ರಕಾಶನ, 'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಬಳ್ಳಾರಿ-೫೮೩೧೦೩.

## ಭಾರತದ ಪ್ರವಾಸ ಸಾಹಿತ್ಯ

* **ಶಿವರಾಮ ಕಾರಂತ : ಅಬೂವಿನಿಂದ ಬರಾಮಾಕ್ಕೆ**, ೧/೮ ಕ್ರೌನ್, ಪು. ೧೪೬, ಮೊ.ಮು. ೧೯೫೦, ಬೆಲೆ: ರೂ. ೨.೦೦/-, ಪ್ರ: ಹರ್ಷ ಮುದ್ರಣ ಪ್ರಕಟಣಾಲಯ, ಪುತ್ತೂರು (ದ.ಕ.)

* **ವೀ.ಚ. ಹಿತ್ತಲಮನಿ : ಶರಾವತಿಯಿಂದ ಸಾಬರಮತಿ**, ೧/೮ ಕ್ರೌನ್, ಪು. ೧೨೮, ಮೊ.ಮು. ೧೯೫೧, ಬೆಲೆ: ೧.೮.೦, ಪ್ರ: ಶರಾವತಿ ಪ್ರಕಟನೆ ಮಂದಿರ, ಪೋತನೀಸ ಗಲ್ಲಿ, ಧಾರವಾಡ.

* **ಎಸ್. ಮುಕುಂದರಾವ್ : ಭವ್ಯ ಭಾರತ ದರ್ಶನ**, ೧/೮ ಕ್ರೌನ್, ಪು. ೧೦೦, ಬೆಲೆ: ರೂ. ೦.೮.೦, ಮೊ.ಮು. ೧೯೫೨, ಪ್ರ: ವಸಂತ ಮಾಲಿಕೆ, ಮಂಗಳೂರು-೩.

* **ಜಿ. ಮರುಳಸಿದ್ಧಯ್ಯ : ಭಾರತ ಪ್ರವಾಸ ಚಿತ್ರಗಳು**, ೧/೮ ಕ್ರೌನ್, ಪು. ೧೬೦, ಮೊ.ಮು. ೧೯೫೯, ಬೆಲೆ: ರೂ. ೨/-, ಪ್ರ: ಕೆ. ಸೀತಾರಾಮಶೆಟ್ಟಿ ಅಂಡ್ ಸನ್ಸ್, ಚೌಡೇಶ್ವರಿ ಗುಡಿ ಬೀದಿ, ಬೆಂಗಳೂರು-೨.

* **ಫಕೀರ್ ಮುಹಮ್ಮದ್ ಕಟ್ಪಾಡಿ : ಕೇರಳದಲ್ಲಿ ಹದಿನೈದು ದಿನಗಳು**, ೧/೮ ಕ್ರೌನ್, ಪು.೯೪, ಮೊ.ಮು. ೧೯೫೯, ಬೆಲೆ: ರೂ. ೫/-, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೨.

* **ಗಿರಿಜಾಬಾಯ್ : ಭಾರತದ ಭವ್ಯ ನದಿಗಳು**, ೧/೮ ಡೆಮಿ, ಪು. ೧೪೦, ಮೊ.ಮು. ೧೯೬೨, ಬೆಲೆ: ರೂ. ೨/-, ಪ್ರ: ವಿಚಾರ ಸಾಹಿತ್ಯ ಪ್ರೈ.ಲಿ., ಬಳೇಪೇಟೆ, ಬೆಂಗಳೂರು-೫೬೦೦೦೨.

* **ಗಿರಿಜಾಬಾಯ್** : ನಮ್ಮ ನದಿಗಳು, ೧/೮ ಕ್ರೌನ್, ಪು. ೪೪, ಮೊ.ಮು.?, ಬೆಲೆ: ರೂ. ೧.೦೦/-, ಪ್ರ: ವಿಚಾರ ಸಾಹಿತ್ಯ ಪ್ರೈ.ಲಿ., ಬೆಂಗಳೂರು-೨.

* **ಶಾ.ಮಂ. ಕೃಷ್ಣರಾಯ : ದೇವಭೂಮಿ ಗೋಮಂತಕ**, ೧/೮ ಡೆಮಿ, ಪು. ೧೮೪, ಮೊ.ಮು. ೧೯೬೭, ಬೆಲೆ: ರೂ. ೪/-, ಪ್ರ: ಸಾಹಿತ್ಯ ಸದನ, ಖಾರೆಬಾಂದ, ಮಡಗಾಂವ, ಗೋವಾ.

* **ಕೆ. ಕೊಟ್ರಗೌಡ** : ನಮ್ಮ ಪ್ರವಾಸ, ೧/೮ ಕ್ರೌನ್, ಪು. ೪೮, ಮೊ.ಮು. ೧೯೬೯, ಬೆಲೆ: ರೂ. ೦.೯೫, ಪ್ರ: ಶ್ರೀ ಕೊಟ್ಟೂರೇಶ ಪ್ರಕಾಶನ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.

* **ಕೊಟ್ರಗೌಡ ಕೆ.** : ನಮ್ಮ ಪ್ರವಾಸ, ೧/೮ ಕ್ರೌನ್, ಪು. ೪೨, ಮೊ.ಮು. ೧೯೬೯, ಬೆಲೆ: ರೂ. ೯೫/-, ಪ್ರ: ಕೊಟ್ಟೂರೇಶ ಪ್ರಕಾಶನ, ಹಗರಿಬೊಮ್ಮನಹಳ್ಳಿ.

* **ಆದ್ಯ ರಂಗಾಚಾರ್ಯ : ಶ್ರೀರಂಗ ಯಾತ್ರೆ**, ೧/೮ ಕ್ರೌನ್, ಪು. ೭೦, ಮೊ.ಮು. ೧೯೭೦, ಬೆಲೆ: ರೂ. ೧.೨೫, ಪ್ರ: ಸಮಾಜ ಪುಸ್ತಕಾಲಯ, ಧಾರವಾಡ.

* **ಗುಂಡಪ್ಪ ಗುಂಡಣ್ಣ : ಪ್ರವಾಸ ತೀರ್ಥ**, ೧/೮ ಕ್ರೌನ್, ಪು. ೧೯೦, ಮೊ.ಮು. ೧೯೭೧, ಮೈಸೂರು.

* **ಕೃಷ್ಣಾನಂದ ಕಾಮತ** : ವಂಗದರ್ಶನ, ೧/೮ ಕ್ರೌನ್, ಪು. ೪೦೮, ಮೊ.ಮು. ೧೯೭೨, ಬೆಲೆ: ರೂ. ೧೦/-, ಪ್ರ: ಜಿ.ಬಿ. ಜೋಶಿ, ಮನೋಹರ ಗ್ರಂಥಮಾಲೆ, ಧಾರವಾಡ-೧.

* **ವಿವಿಧ ಲೇಖಕರು : ನೋಡುವ ಬೀಡುಗಳು**, ೧/೮ ಕ್ರೌನ್, ಪು. ೧೬೦, ಮೊ.ಮು. ೧೯೭೨, ಬೆಲೆ: ರೂ. ೩.೨೫.೦, ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಕೆಂಪೇಗೌಡ ನಗರ, ಬೆಂಗಳೂರು-೧೯.

* **'ರಸಿಕ' ಪುತ್ತಿಗೆ : ಕನ್ನಡದ ಕಣ್ಣು-ಉತ್ತರದ ಮಣ್ಣು**, ೧/೮ ಕ್ರೌನ್, ಪು. ೧೧೨, ಮೊ.ಮು. ೧೯೭೨, ಬೆಲೆ: ರೂ. ೩/-, ಪ್ರ: ಶ್ರೀ ಕಾವೇರಿ ಪ್ರಕಾಶನ, ಮಡಿಕೇರಿ.

* **ಕೃಷ್ಣಾನಂದ ಕಾಮತ್ : ನಾ ರಾಜಸ್ಥಾನದಲ್ಲಿ**, ೧/೮ ಡೆಮಿ, ಪು. ೨೫೬, ಮೊ.ಮು. ೧೯೭೪, ಬೆಲೆ: ರೂ. ೧೨/-, ಪ್ರ: ಅಕ್ಷರ ಪ್ರಕಾಶನ, ಸಾಗರ-೫೭೭೪೦೧.

* **ಪಾಟೀಲ ಪುಟ್ಟಪ್ಪ : ನಮ್ಮದು ಈ ಭರತಭೂಮಿ**, ೧/೮ ಕ್ರೌನ್, ಪು. ೨೨೦, ಮೊ.ಮು. ೧೯೭೭, ಬೆಲೆ: ರೂ. ೭/-, ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩.

* **? : ಕಂಗೊಳಿಸುವ ಕಲ್ಕತ್ತಾ**, ೧/೮ ಕ್ರೌನ್, ಪು. ೫೪, ಬೆಲೆ: ರೂ. ೨.೫೦, ಮೊ.ಮು. ೧೯೭೭, ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ.

* **ಕೊಡತ್ತೂರು ನಯನಾಭಿರಾಮ ಉಡುಪ : ಔತ್ತರೇಯ ಖಂಡದರ್ಶನ**, ಮೊ.ಮು. ೧೯೭೮, ಬೆಲೆ: ರೂ. ೩/-, ೧/೮ ಕ್ರೌನ್, ಪು. ೬೬, ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ.

* **ಮಹಾಂತ ಸ್ವಾಮಿಗಳು : ಭಾರತ ದರ್ಶನ**, ೧/೮ ಕ್ರೌನ್, ಪು. ೬೦, ಮೊ.ಮು. ೧೯೭೮, ಬೆಲೆ: ರೂ. ೫.೦೦ ಪ್ರ: ತಾರಾ ಗ್ರಂಥ ಪ್ರಕಾಶನ, ಧಾರವಾಡ.

* **ಕೆ. ಗಣೇಶ ಮಲ್ಯ : ಯಾತ್ರೆ**, ೧/೮ ಕ್ರೌನ್, ಪು. ೧೨೦, ಮೊ.ಮು. ೧೯೮೦, ಬೆಲೆ: ರೂ. ೬.೦೦, ಪ್ರ: ಮಾನವೋತ್ಥಾನ ಸಾಹಿತ್ಯ, ಹರಿಹರ.

* **ಎಚ್.ಎಸ್. ರಾಘವೇಂದ್ರರಾವ್ : ಜನ ಗಣ ಮನ (ಬಂಗಾಳ ಹಾಗೂ ಒರಿಸ್ಸಾ ಪ್ರವಾಸ ಕಥನ)**, ೧/೮ ಕ್ರೌನ್, ಪು. ೧೯೨, ಮೊ.ಮು. ೧೯೮೯, ಬೆಲೆ: ರೂ. ೧೦/-, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು-೫೬೦೦೦೨.

* **ಜಿ.ಪಿ. ಬಸವರಾಜು : ನೀಲಾಚಲಗಳ ನಾಡಿನಲ್ಲಿ**, ೧/೮ ಡೆಮಿ, ಪು. ೧೫೨, ಮೊ.ಮು. ೧೯೯೦, ಬೆಲೆ: ರೂ. ೧೦/-, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೨.

* **ಲೀಲಾ ಮಿರ್ಲೆ : ಪ್ರವಾಸ**, ೧/೮ ಕ್ರೌನ್, ಪು. ೯೮, ಮೊ.ಮು. ೧೯೯೫, ಬೆಲೆ: ರೂ. ೨೦/-, ಪ್ರ: ಕರ್ನಾಟಕ ಬುಕ್ ಏಜೆನ್ಸಿ, ತುಂಗಾ ಕಾಂಪ್ಲೆಕ್ಸ್, ತ್ರಿಭುವನ ಚಿತ್ರಮಂದಿರದ ಎದುರು, ಗಾಂಧಿನಗರ, ಬೆಂಗಳೂರು-೯.

* **ಶಮಂತ : ಗಿರಿಸ್ನೇಹ**, ೧/೮ ಕ್ರೌನ್, ಪು. ೧೫೪, ಮೊ.ಮು. ೧೯೯೨, ಬೆಲೆ: ರೂ. ೨೪/-, ಪ್ರ: ಇಳಾ ಪ್ರಕಾಶನ, ೧೫೩, ೪ನೇ ಮೈನ್, ಚಾಮರಾಜಪೇಟೆ, ಬೆಂಗಳೂರು-೫೬೦೦೧೮.

* **ಕೆ.ಸಿ. ಲಕ್ಷ್ಮೀನರಸಯ್ಯ : ನಾ ಕಂಡ ಭಾರತ**, ೧/೮ ಡೆಮಿ, ಪು. ೧೭೨, ಮೊ.ಮು. ೧೯೯೭, ಬೆಲೆ: ರೂ. ೬೦/-, ಪ್ರ: ಮಾತಾ ಮುದ್ರಣ, 'ಜ್ಯೋತಿ', ೧೦ನೇ ಅಡ್ಡರಸ್ತೆ, ಎಸ್.ಎಸ್. ಪುರಂ, ತುಮಕೂರು-೨.

* **ಡಾ. ಎಂ.ಎಸ್. ಶೇಖರ್ : ನಾರಾಯಣ ಗುರುವಿನ ನಾಡಿನಲ್ಲಿ**, ೧/೮ ಕ್ರೌನ್, ಪು.೧೩೬, ಮೊ.ಮು. ೧೯೯೭, ಬೆಲೆ: ರೂ. ೫೫/-, ಪ್ರ: ಚರಿತ ಪ್ರಕಾಶನ, ೭೨೮, ಕುವೆಂಪು ನಗರ, ಹಾಸನ-೫೭೩೨೦೧.

* **ಬಿ.ಹೆಚ್. ಕೊಪ್ಪರ್ : ಪ್ರವಾಸ ಸಾಹಿತ್ಯ** ೧/೮ ಕ್ರೌನ್, ಪ್ರ: ೯೪, ಮೊ.ಮು. ೧೯೯೯, ಬೆಲೆ: ರೂ. ೫೦/-, ಪ್ರ: ಐಬಿಹೆಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು-೯.

* **ಶ್ರೀ ಮನ್ನಿರಂಜನ ಪ್ರಣವ ಸ್ವರೂಪ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು, ಮುಂಡರಗಿ: ಭಾರತ ಯಾತ್ರೆ (ದಕ್ಷಿಣೋತ್ತರ ಭಾರತ ಪ್ರವಾಸ ಕಥನ)**, ೧/೮ ಕ್ರೌನ್, ಪು. ೨೧೬, ಮೊದಲ ಮುದ್ರಣ ೧೯೯೯, ಬೆಲೆ: ರೂ. ೬೦/-, ಪ್ರ: ಶ್ರೀಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ.

* **ಶ್ರೀ ಶಿವಕುಮಾರ ಸ್ವಾಮಿಗಳು : ಬಿದರಕುಂದಿಯಿಂದ ಬೆಳ್ಳಿಬೆಟ್ಟದೆಡೆಗೆ**, ೧/೮ ಕ್ರೌನ್, ಪು. ೧೬೨, ಮೊ.ಮು. ೨೦೦೦, ಬೆಲೆ: ರೂ. ೭೦/-, ಪ್ರ: ಶಿವಯೋಗಾಶ್ರಮ ಬಿದರಕುಂದಿ, ಮುದ್ದೇಬಿಹಾಳ ತಾ., ಬಿಜಾಪುರ ಜಿಲ್ಲೆ.

* **ಜಿ.ಪಿ. ಬಸವರಾಜು: ಪಂಚಮುಖಿ ಪಂಜಾಬ್**, ೧/೮ ಡೆಮಿ, ಪು. ೧೪೪, ಮೊ.ಮು. ೨೦೦೧, ಬೆಲೆ: ರೂ. ೬೦, ಪ್ರ: ಲೋಹಿಯಾ ಪ್ರಕಾಶನ, 'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-೫೮೩೧೦೨

* **ಜಯದೇವಪ್ಪ ಜೈನಕೇರಿ: ನಂಜನ ದರುಶನ**, ೧/೮ ಡೆಮಿ ಪು. ೧೨೮, ಮೊದಲ ಮುದ್ರಣ ೨೦೦೧, ಬೆಲೆ: ರೂ. ೭೫/-, ಪ್ರ: ಶಾಂತಲಾ ಪ್ರಕಾಶನ, ೮೭, 'ಶಾಂತಲಾ', ಕುವೆಂಪು ರಸ್ತೆ, ಶಿವಮೊಗ್ಗ.

* **ಎಸ್.ಎಲ್. ಕುಲಕರ್ಣಿ (ಇಂಗ್ಲಿಷ್‌ನಿಂದ ಕನ್ನಡಕ್ಕೆ ಕಲ್ಯಾಣರಾವ್ ದೇಶಪಾಂಡೆ: ಭಾರತ ದರ್ಶನ**, ೧/೮ ಡೆಮಿ, ಪು. ೪೪೮, ಬೆಲೆ: ರೂ. ೨೦೦, ಮೊದಲ ಮುದ್ರಣ ೨೦೦೧, ಪ್ರ: ಲೀಲಾ ಪ್ರಕಾಶನ, 'ಶ್ರೀಪಾದ ಕೃಪಾ' ಕಾವಿ ಪ್ಲಾಟ್ ಹತ್ತಿರ, ಸುದರ್ಶನ ಕಾಲನಿ, ಸ್ಟೇಷನ್ ರಸ್ತೆ, ಬಿಜಾಪುರ.

* **ಎಂ. ವೆಂಕಟಸ್ವಾಮಿ: ಅಲೆಮಾರಿಯ ಹೆಜ್ಜೆಗಳು**, ೧/೮ ಡೆಮಿ, ಪು. ೨೧೪, ಮೊ.ಮು. ೨೦೦೧, ಬೆಲೆ: ರೂ. ೫೦/-, ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮.

* **ವಸಂತೀಚಂದ್ರ : ಮೌನ ಮೋಹಿನಿ**, ೧/೮ ಕ್ರೌನ್, ಪು. ೧೪೮, ಮೊ.ಮು. ೨೦೦೨, ಬೆಲೆ: ರೂ. ೬೦/-, ಪ್ರ: ಐಬಿಹೆಚ್ ಪ್ರಕಾಶನ, ೬೪೫/೬, ೧೧ನೇ 'ಬಿ' ಮುಖ್ಯರಸ್ತೆ, ೪ನೇ ಬ್ಲಾಕ್, ಜಯನಗರ, ಬೆಂಗಳೂರು-೧೧.

* **ಪ್ರೇಮಾಭಟ್ : 'ಪೂರ್ವಾಂಚಲದಲ್ಲಿ ಕೆಲವು ದಿನಗಳು...'**, ೧/೮ ಕ್ರೌನ್, ಪು. ೭೨, ಮೊ.ಮು. ೨೦೦೨, ಬೆಲೆ: ರೂ. ೪೦/-, ಪ್ರ: ಶ್ರೀ ಪ್ರೇಮಸಾಯಿ ಪ್ರಕಾಶನ, 'ಗುರುಪ್ರಸಾದ', ನಂ. ೮೪೫, ೪ನೇ ಮೈನ್, ವಿಜಯನಗರ, ಬೆಂಗಳೂರು-೫೬೦೦೪೦.

**ತೀರ್ಥಯಾತ್ರಾ ಸಾಹಿತ್ಯ**

* **ಕೃಷ್ಣ ಗೋಸಾವಿ: ಚಿತ್ರಮಯ ನನ್ನ ಹಿಮಾಲಯ ಯಾತ್ರೆ,** ೧/೮ ಕ್ರೌನ್, ಪು.೧೨೨, ಮೊ.ಮು. ೧೯೩೨, ಬೆಲೆ: ರೂ. ೧/-, ಪ್ರ: ಕಾರ್ಯದರ್ಶಿ, ಕರ್ನಾಟಕ ಶಿಕ್ಷಣ ಸಮಿತಿ, ಧಾರವಾಡ.
* **ದ.ಕೃ. ಭಾರದ್ವಾಜ : ಸಚಿತ್ರ ಭಾರತ ಯಾತ್ರೆ,** ೧/೮ ಕ್ರೌನ್, ಪು. ೨೦೬, ಮೊ.ಮು. ೧೯೩೯, ಬೆಲೆ: ರೂ.?, ಪ್ರ: ಭಾರತ ಯಾತ್ರಿಕ ಸಂಘ, ೩೬೬, ಎಸ್‌ಪ್ಲೇನೇಡು, ಮದ್ರಾಸು.
* **ಗುರುನಾಥ ಜೋಶಿ : ಕಾಶ್ಮೀರ ಪ್ರವಾಸ,** ೧/೮ ಕ್ರೌನ್, ಪು. ೭೮, ಮೊ.ಮು. ೧೯೩೯, ಬೆಲೆ: ೦-೬-೦, ಪ್ರ: ಪ್ರೇಮ ಪ್ರಕಟನಾಲಯ, ಧಾರವಾಡ.
* **ದೊಡ್ಮನೆ ಮಹಾದೇವಿಯಮ್ಮ : ದೇವತಾತ್ಮಾ,** ೧/೮ ಕ್ರೌನ್, ಪು. ೧೦೦, ಮೊ.ಮು. ೧೯೫೩, ಬೆಲೆ: ರೂ. ೧.೦.೦, ಪ್ರ: ಮಿಂಚಿನಬಳ್ಳಿ ಚಾವಡಿ, ಧಾರವಾಡ.
* **ಸೋಮನಾಥಾನಂದ : ಹೈಮಾಚಲ ಸಾನ್ನಿಧ್ಯದಲ್ಲಿ** ೧/೮ ಕ್ರೌನ್, ಪು. ೧೪೦, ಮೊ.ಮು. ೧೯೫೪, ಬೆಲೆ: ರೂ. ೨/-, ಪ್ರ: ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು-೪.
* **ಹನುಮಂತಾಚಾರ್ಯ ರಾಘವೇಂದ್ರಾಚಾರ್ಯ ಪುರೋಹಿತ : ರಾಮೇಶ್ವರ ಕನ್ಯಾಕುಮಾರಿ ದರ್ಶನ,** ೧/೮ ಕ್ರೌನ್, ಪು. ೧೦೪, ಮೊ.ಮು. ೧೯೫೬, ಬೆಲೆ: ರೂ. ೧.೦.೦, ಪ್ರ: ಹ.ರಾ. ಪುರೋಹಿತ, ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ.
* **ಕೃಷ್ಣನಾರಾಯಣ ಗೋಸಾವಿ : ಹಿಮಾಲಯ ದರ್ಶನ (ಅಖಂಡ ಹಿಮಾಯಲದ ನಕಾಶೆಗಳೊಂದಿಗೆ),** ೧/೮ ಕ್ರೌನ್, ಪು. ೨೭೪, ಮೊ.ಮು. ೧೯೬೧, ಬೆಲೆ: ರೂ. ೩.೫೦, ಪ್ರ: ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ.
* **ಪ್ರಭು ಪ್ರಸಾದ : ದೇಗುಲಗಳ ದಾರಿಯಲ್ಲಿ** ೧/೮ ಕ್ರೌನ್, ಪು. ೧೬೦, ಮೊ.ಮು. ೧೯೬೧, ಬೆಲೆ: ರೂ. ೨/-, ಪ್ರ: ಸಾರಸ ವಿಹಾರ, ಸರಸ್ವತೀಪುರ, ಮೈಸೂರು.
* **ಚಿ.ಶ್ರೀ. ಕುಲಕರ್ಣಿ : ತೀರ್ಥಯಾತ್ರೆ,** ೧/೮ ಕ್ರೌನ್, ಪು. ೩೯೨, ಮೊ.ಮು. ?, ಬೆಲೆ: ರೂ. ?, ಪ್ರ: ಭಾರತ್ ಬುಕ್ ಡಿಪೋ, ಕೊಪ್ಪಿಕರ ರೋಡ್, ಹುಬ್ಬಳ್ಳಿ.
* **ಕೋ. ಚೆನ್ನಬಸಪ್ಪ : ದಕ್ಷಿಣೇಶ್ವರ ದರ್ಶನ,** ೧/೮ ಕ್ರೌನ್, ಪು. ೧೧೮, ಮೊ.ಮು. ೧೯೬೨, ಬೆಲೆ: ರೂ. ೨.೫೦, ಪ್ರ: ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿ ಪುರಂ, ಮೈಸೂರು.
* **ಹ.ರಾ. ಪುರೋಹಿತ : ರಾಮೇಶ್ವರ ಕನ್ಯಾಕುಮಾರಿ ದರ್ಶನ,** ೧/೮ ಕ್ರೌನ್, ಪು.೧೦೮, ಮೊ.ಮು. ೧೯೬೩, ಬೆಲೆ: ರೂ. ೨೦/-, ಪ್ರ: ಪ್ರವಾಸಿ ಪ್ರಬಂಧಮಾಲಾ, ನಂ. ೬, ೧೨ನೇ ಮೈನ್, ಲಕ್ಕಸಂದ್ರ ಬಡಾವಣೆ, ಬೆಂಗಳೂರು-೩.
* **ಡಿ.ಟಿ. ರಂಗಸ್ವಾಮಿ : ಭಾರತ ಯಾತ್ರೆ,** ೧/೮ ಕ್ರೌನ್, ಪು. ೧೪೮, ಮೊ.ಮು. ೧೯೬೬, ಬೆಲೆ: ರೂ. ೨.೦೦, ಪ್ರ: ಪ್ರತಿಭಾ ಗ್ರಂಥಮಾಲೆ, ಧಾರವಾಡ.

* **ಬಸವರಾಜ ಶಿವಾಚಾರ್ಯ ಹಿರೇಮಠ : ಹಿಮಗಿರಿ ಹಿರಿಮೆ**, ೧/೮ ಕ್ರೌನ್, ಪು.೧೩೦, ಬೆಲೆ : ರೂ. ೨/-, ಮೊ.ಮು. ೧೯೭೧, ಪ್ರ: ಶಾಂತಲಿಂಗ ಶಿವಾಚಾರ್ಯರು, ಅಮ್ಮಿನಭಾವಿ.

* **ಹೆಗ್ಗೆ ಗೋಪಾಲಕೃಷ್ಣ ಕುತ್ತುಪ್ಪಾಡಿ : ತ್ರಿಮೂರ್ತಿ ದರ್ಶನ**, ೧/೮ ಕ್ರೌನ್, ಪು. ೫೬, ಮೊ.ಮು. ೧೯೭೧, ಬೆಲೆ: ೧.೫೦, ಪ್ರ: ಮಾನವಧರ್ಮ ಕಾರ್ಯಾಲಯ, ಮುಂಬಯಿ.

* **ಶಾಂತಾದೇವಿ ಮಾಳವಾಡ : ಶ್ರೀಗಿರಿಯಿಂದ ಹಿಮಗಿರಿಗೆ**, ೧/೮ ಕ್ರೌನ್, ಪು. ೧೮೮, ಮೊ.ಮು. ೧೯೭೪, ಬೆಲೆ: ರೂ. ೬/-, ಪ್ರ: ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿ ಪುರಂ, ಮೈಸೂರು-೪.

* **ಜಿ.ಎ. ನರಸಿಂಹಮೂರ್ತಿ : ಆಸೇತು ಹಿಮಾಚಲ ಯಾತ್ರೆ**

* **ಸ.ಸ. ಮಾಳವಾಡ : ಪಯಣದ ಕತೆ**, ೧/೮ ಕ್ರೌನ್, ಪು. ೮೪, ಮೊ.ಮು. ೧೯೭೯, ಬೆಲೆ: ರೂ. ೩.೫೦, ಪ್ರ: ಜಯ ಪ್ರಕಾಶನ, ಧಾರವಾಡ.

* **ಕೆ.ಜಿ. ಕಾಮತ್ ಮತ್ತು ಕೆ.ಜಿ. ಮಲ್ಯ : ಬಾಣಗಂಗೆಯಿಂದ ಹರಿದ್ವಾರಕ್ಕೆ**, ೧/೮ ಕ್ರೌನ್, ಪು. ೨೦೮, ಬೆಲೆ: ರೂ. ೧೦/-, ಮೊ.ಮು. ೧೯೭೯, ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ.

* **ಡಾ. ಜಿ.ಎಸ್. ಶಿವರುದ್ರಪ್ಪ : ಗಂಗೆಯ ಶಿಖರಗಳಲ್ಲಿ (ಗಂಗೋತ್ರಿ, ಯಮುನೋತ್ರಿ, ಬದರೀ ಕೇದಾರಗಳ ಪ್ರವಾಸ ಕಥನ)**, ೧/೮ ಕ್ರೌನ್, ಪು. ೧೨೮, ಮೊ.ಮು. ೧೯೮೫, ಬೆಲೆ: ರೂ. ೭.೫೦, ಪ್ರ: ಶಾರದಾ ಪ್ರಕಾಶನ, ನಂ. ೨, ಕೆ.ವಿ. ಲೇನ್, ಅರಳೇಪೇಟೆ, ಬೆಂಗಳೂರು-೫೬೦೦೫೩.

* **ಶಮಂತ : ಕಾಲ್ನಡಿಗೆಯಲ್ಲಿ ಹಿಮಾಲಯಕ್ಕೆ ರಮ್ಯಸಾಹಸ ಭಾಗ-೧**, ೧/೮ ಕ್ರೌನ್, ಪು.೧೦೮, ಮೊ.ಮು. ೧೯೯೨, ಬೆಲೆ: ರೂ. ೧೨/-, ಪ್ರ: ಹಂಸಧ್ವನಿ ಪ್ರಕಾಶನ, ೨೭, ಭಾಷ್ಯಂ ರಸ್ತೆ, ಕಾಟನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು-೫೬೦೦೫೩.

* **ಶಮಂತ : ಕಾಲ್ನಡಿಗೆಯಲ್ಲಿ ಹಿಮಾಲಯಕ್ಕೆ ರಮ್ಯಸಾಹಸ ಭಾಗ-೨**, ೧/೮ ಕ್ರೌನ್, ಪು. ೭೦, ಮೊ.ಮು. ೧೯೯೨, ಬೆಲೆ: ರೂ. ೮/-, ಪ್ರ: ಹಂಸಧ್ವನಿ ಪ್ರಕಾಶನ, ೨೭, ಭಾಷ್ಯಂ ರಸ್ತೆ, ಕಾಟನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು-೫೬೦೦೫೩.

* **ಡಾ. ಬಿ.ಎಸ್. ಸ್ವಾಮಿ : ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ**, ೧/೮ ಕ್ರೌನ್, ಪು. ೨೪೮, ಮೊ.ಮು. ೧೯೯೫, ಬೆಲೆ: ರೂ. ೬೦/-, ಪ್ರ: ಗೀತಾಂಜಲಿ ಪ್ರಕಾಶನ, ೫ ಎಂ.ಎಸ್. ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಗೋಕುಲ, ಬೆಂಗಳೂರು-೫೪.

* **ಲಲಿತಾ ಶಾಸ್ತ್ರಿ : ಹಿಮವಂತನ ನಾಡಿನಲ್ಲಿ**, ೧/೮ ಕ್ರೌನ್, ಪು. ೮೦, ಮೊ.ಮು. ೧೯೯೬, ಬೆಲೆ: ರೂ. ೧೮.೦೦/-, ಪ್ರ: ಆರತಿ ಪಬ್ಲಿಕೇಶನ್ಸ್, ೨೪೮, ೧೭ನೇ ಕ್ರಾಸ್, ೬೪, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦೦೦೩.

* **ಕೆ. ಸತ್ಯನಾರಾಯಣ : ಸದ್ದು! ದೇವರು ಸ್ನಾನ ಮಾಡುತ್ತಿದ್ದಾರೆ**, ೧/೮ ಡೆಮಿ, ಪು.೧೨೦, ಮೊ.ಮು. ೧೯೯೮, ಬೆಲೆ: ರೂ. ೪೫/-, ಪ್ರ: ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಡಾ. ಎಂ.ಎಚ್. ಮರೀಗೌಡ ರಸ್ತೆ, ಬೆಂಗಳೂರು-೫೬೦೦೨೯.

* **ಎಂ. ರಾಜಗೋಪಾಲ್ : ಸಾಕಾರದಿಂದ ನಿರಾಕಾರಕ್ಕೆ**, ೧/೮ ಡೆಮಿ, ಪು. ೨೪೮, ಮೊ.ಮು. ೨೦೦೧, ಬೆಲೆ: ರೂ. ೧೫೦/-, ಪ್ರ: ಕರ್ನಾಟಕ ಸಂಘ, ಪುತ್ತೂರು.

* **ಗುರುಮೂರ್ತಿ ಪೆಂಡಕೂರು : ಅಮರನಾಥ ಪ್ರವಾಸ**, ೧/೮ ಕ್ರೌನ್, ಪು. ೧೦೨, ಮೊ.ಮು. ೨೦೦೧, ಬೆಲೆ: ರೂ. ೫೦, ಪ್ರ: ಯುವಕರ ಸಂಘ (ರಿ), ರಾಮನಗರ, ಹಗರಿಬೊಮ್ಮನಹಳ್ಳಿ - ೫೮೩೨೧೨.

* **ಆಗುಂಬೆ ಎಸ್. ನಟರಾಜ್ : ಯಾತ್ರಾವಳಿ**, ೧/೮ ಕ್ರೌನ್, ಪು. ೯೬, ಮೊ.ಮು. ೨೦೦೨, ಬೆಲೆ: ರೂ. ೪೦/-, ಪ್ರ: ಹಂಸ ಪ್ರಕಾಶನ, ೯೪೭, ಮೂರನೆ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-೪೦.

* **ಕೋಟೇಶ್ವರ ಸೂರ್ಯನಾರಾಯಣರಾವ್ : ಭಾರತ ಕ್ಷೇತ್ರ ದರ್ಶನ ಯಾತ್ರಾ-೨**, ೧/೮ ಡೆಮಿ, ಪು. ೧೩೨, ಮೊ.ಮು. ೨೦೦೨, ಬೆಲೆ: ರು. ೭೫/-, ಪ್ರ: ಮಹಾಲಕ್ಷ್ಮೀ ಪ್ರಕಾಶನ, ಮಹಾಲಕ್ಷ್ಮೀ ಕೃಪಾ, ೨೫/೦೧, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು-೫೬೦೦೦೪.

* **ಸುಮನಾ ವಿಶ್ವನಾಥ್: ಮತ್ತೂರರೊಂದಿಗೆ ಕಾಶೀಯಾತ್ರೆ**, ೧/೮ ಡೆಮಿ ಪು. ೨೪೦, ಮೊದಲ ಮುದ್ರಣ ೨೦೦೨, ಬೆಲೆ: ರೂ. ೨೩೦/-, ಪ್ರ: ಪುಸ್ತಕ ಶಕ್ತಿ, ನಂ. ೧೦೩, ೩ನೇ ಮುಖ್ಯರಸ್ತೆ, ಟಾಟಾ ಸಿಲ್ಕ್ ಫಾರಂ, ಬೆಂಗಳೂರು-೫೬೦ ೦೦೪.

* **ವಸಂತೀ ಚಂದ್ರ : ಮೌನ ಮೋಹಿನಿ**, ೧/೮ ಕ್ರೌನ್, ಪು. ೧೪೪, ಮೊ.ಮು. ೨೦೦೨, ಬೆಲೆ: ರೂ. ೬೦/-, ಪ್ರ: ಐಬಿಎಚ್ ಪ್ರಕಾಶನ, ೬೪೫/೬, ೧೦ನೇ 'ಬಿ' ಮೈನ್, ೪ನೇ ಬ್ಲಾಕ್, ಜಯನಗರ, ಬೆಂಗಳೂರು.

* **ಬಿ.ವಿ. ವಿದ್ಯಾನಂದ ಶೆಣೈ : ಭಾರತ ದರ್ಶನ**, ೧/೮ ಡೆಮಿ, ಪು. ೩೦೨, ಮೊ.ಮು. ೨೦೦೩, ಬೆಲೆ: ರೂ. ೧೨೦/-, ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಕೇಶವ ಶಿಲ್ಪ, ಕೆಂಪೇಗೌಡ ನಗರ, ಬೆಂಗಳೂರು-೫೬೦೦೧೯.

## ಕರ್ನಾಟಕ ಪ್ರವಾಸ ಸಾಹಿತ್ಯ

* **ಡಿ.ವಿ. ಗುಂಡಪ್ಪ : ಮೈಸೂರಿನ ಕೈಗನ್ನಡಿ ಎಂಬ ಕರ್ನಾಟಕ, ವಾರ್ಷಿಕ ಪುಸ್ತಕ**, ೧/೮ ಡೆಮಿ, ಪು. ೧೬೪, ಮೊ.ಮು. ೧೯೧೫, ಬೆಲೆ: ರೂ.?, ಪ್ರ: ಕರ್ನಾಟಕ ಪತ್ರಿಕಾಲಯ, ಬೆಂಗಳೂರು.

* **ಜಿ.ಎಲ್. ಸ್ವಾಮಿ : ಮೈಸೂರು ಡಿಸ್ಟ್ರಿಕ್ಟ್ ಕೈಪಿಡಿ**, ೧/೮ ಡೆಮಿ, ಪು. ೧೭೨, ಮೊ.ಮು. ೧೯೩೫, ಬೆಲೆ: ರೂ. ೧.೪.೦, ಪ್ರ: ಜಿ.ಎಲ್. ಸ್ವಾಮಿ, ಮೈಸೂರು.

* **ಜಿ.ಎಲ್. ಸ್ವಾಮಿ : ಹಾಸನ ಡಿಸ್ಟ್ರಿಕ್ಟ್ ಕೈಪಿಡಿ**, ೧/೮ ಡೆಮಿ, ಪು. ೬೮, ಮೊ.ಮು. ೧೯೩೭, ಬೆಲೆ: ರೂ. ೦.೧೨.೦, ಪ್ರ: ಜಿ.ಎಲ್. ಸ್ವಾಮಿ, ಮೈಸೂರು.

* **ಜಿ.ಎಲ್. ಸ್ವಾಮಿ : ಕೋಲಾರ ಡಿಸ್ಟ್ರಿಕ್ಟ್ ಕೈಪಿಡಿ**, ೧/೮ ಕ್ರೌನ್, ಪು. ೯೦, ಮೊ.ಮು. ೧೯೩೮, ಬೆಲೆ: ರೂ. ೧.೦೦/-, ಪ್ರ: ಜಿ.ಎಲ್. ಸ್ವಾಮಿ, ಮೈಸೂರು.

* **ನಾರಾಯಣ ಕಲ್ಲೆ : ಕರ್ನಾಟಕ ಪರಿಚಯ**, ೧/೮ ಕ್ರೌನ್, ಪು. ೨೦, ಮೊ.ಮು. ೧೯೩೯, ಬೆಲೆ: ಮೂರು ಆಣೆ, ಪ್ರ: ರಾಷ್ಟ್ರೀಯ ವಾಙ್ಮಯ ಟ್ರಸ್ಟ್, ಹುಬ್ಬಳ್ಳಿ.

* **ವಿ.ಕೃ. ಗೋಕಾಕ (ಸಂ.) : ಇಂದಿನ ಕರ್ನಾಟಕ**, ೧/೮ ಕ್ರೌನ್, ಪು. ೯೬, ಮೊ.ಮು. ೧೯೪೫, ಬೆಲೆ: ರೂ. ೧.೮.೦, ಪ್ರ: ಲಲಿತ ಸಾಹಿತ್ಯ ಮಾಲೆ, ಧಾರವಾಡ.

* **ವಿ.ಸೀ. : ಪಂಪಾಯಾತ್ರೆ**, ೧/೮ ಕ್ರೌನ್, ಪು. ೬೬, ಮೊ.ಮು. ೧೯೪೫, ಬೆಲೆ: ೧.೨೦, ಪ್ರ: ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ನಗರ.

* **ಶ್ರೀ-ರಂಗ-ಮಂಗ : ಮುಕ್ಕಣ್ಣ ಯಾತ್ರೆ**, ೧/೮ ಕ್ರೌನ್, ಪು. ೭೪, ಮೊ.ಮು. ೧೯೪೬, ಬೆಲೆ: ರೂ. ೧.೨.೦, ಪ್ರ: ಆರ್.ವ್ಹಿ. ಜಾಗಿರದಾರ, ರಂಗಮಂಗ ಪ್ರಕಾಶನ, ಧಾರವಾಡ.

* **ರೇ. ಸಿದ್ಧಪ್ಪ : ನಮ್ಮ ನಾಡು**, ೧/೮ ಕ್ರೌನ್, ಪು. ೧೨೮, ಮೊ.ಮು. ೧೯೫೨, ಬೆಲೆ: ರೂ. ೧.೮.೦, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು.

* **ಆರಯ್ಯ : ನಾ ಕಂಡ ಕರ್ನಾಟಕ**, ೧/೮ ಕ್ರೌನ್, ಪು. ೧೪೬, ಮೊ.ಮು. ೧೯೫೩, ಬೆಲೆ: ರೂ.?, ಪ್ರ: ತುಮಕೂರು ಎಲೆಕ್ಟ್ರಿಕ್ ಪ್ರೆಸ್, ತುಮಕೂರು.

* **ಮ.ನ. ಮೂರ್ತಿ : ನಮ್ಮ ಪ್ರವಾಸ (ಭಾಗ-೧)**, ೧/೮ ಕ್ರೌನ್, ಪು. ೧೭೮,ಮೊ.ಮು. ೧೯೫೭, ಬೆಲೆ: ೧.೬೦/-, ಪ್ರ: ಮ.ನ. ಮೂರ್ತಿ, ೨೫೭, ಗವೀಪುರ ಗುಟ್ಟಹಳ್ಳಿ, ಬೆಂಗಳೂರು-೪.

* **ಹಿರೇಮಲ್ಲೂರು ಈಶ್ವರನ್ : ಕವಿ ಕಂಡ ನಾಡು (ಭಾಗ-೧)**, ೧/೮ ಕ್ರೌನ್, ಪು.೧೬೦, ಮೊ.ಮು. ೧೯೬೦, ಬೆಲೆ: ರೂ. ೨.೦೦, ಪ್ರ: ಜಿ.ಕೆ. ಅಂಡ್ ಬ್ರದರ್ಸ್, ಬೆಂಗಳೂರು-೪.

* **ಎ.ಎಂ. ಅಣ್ಣಿಗೇರಿ : ಕರ್ನಾಟಕದ ಸಾಂಸ್ಕೃತಿಕ ಸ್ಥಳಗಳು**, ೧/೮ ಕ್ರೌನ್, ಪು.೧೩೨, ಮೊ.ಮು. ೧೯೬೧, ಬೆಲೆ: ರೂ. ೧.೭೫, ಪ್ರ: ಚಾಲುಕ್ಯ ಪ್ರಕಾಶನ, ಮಾಳಮಡ್ಡಿ, ಧಾರವಾಡ.

* **ಎಸ್. ಸಿಲ್ವಾ : ಕಾರವಾರ ಜಿಲ್ಲಾ ದರ್ಶನ (ಕನ್ನಡಾನುವಾದ: ಎಂ.ಎನ್. ಭಂಡಾರಕರ)**, ೧/೮ ಡೆಮಿ, ಪು. ೧೮೮, ಮೊ.ಮು. ೧೯೬೨, ಬೆಲೆ: ರೂ. ೩/-, ಪ್ರ: ಶ್ರೀರಾಮ ಪ್ರಿಂಟಿಂಗ್ ಪ್ರೆಸ್, ಕಾರವಾರ.

* **ಗುಂಡ್ಮಿ ಚಂದ್ರಶೇಖರ್ ಐತಾಳ : ಸೌಂದರ್ಯದ ಸಾನ್ನಿಧ್ಯದಲ್ಲಿ** ೧/೮ ಕ್ರೌನ್, ಪು.೮೮, ಮೊ.ಮು. ೧೯೬೨, ಬೆಲೆ: ರೂ. ೧.೫೦/-, ಪ್ರ: ಕರ್ನಾಟಕ ಸಂಘ, ಹಂಗಾರಕಟ್ಟೆ, (ದ.ಕ.).

* **ಜಿ. ವೆಂಕಟಯ್ಯ : ಬನದ ಸೆರಗು**, ೧/೮ ಕ್ರೌನ್, ಪು. ೧೩೮, ಮೊ.ಮು. ೧೯೬೨, ಬೆಲೆ: ರೂ. ೩.೫೦, ಪ್ರ: ಲಕ್ಷ್ಮೀ ಸ್ಮಾರಕ ಗ್ರಂಥಮಾಲೆ, ೧೨೨, ಜಯನಗರ, ಮೈಸೂರು-೫.

* **ಮತಿಘಟ್ಟ ಕೃಷ್ಣಮೂರ್ತಿ : ಏಳುಕೊಳ್ಳದ ಎಲ್ಲಮ್ಮ**, ೧/೮ ಕ್ರೌನ್, ಪು. ೮೦. ಮೊ.ಮು. ೧೯೬೫, ಬೆಲೆ: ರೂ. ೨.೫೦, ಪ್ರ: ಗುರುಮೂರ್ತಿ ಪ್ರಕಾಶನ, ನಂ. ೧೫, ದತ್ತಾತ್ರೇಯ ಬಡಾವಣೆ, ಕೆಂಪೇಗೌಡ ನಗರ, ಬೆಂಗಳೂರು-೧೯.

* **ದಕ್ಷಿಣ ಕನ್ನಡ ಜಿಲ್ಲೆ (ಜಿಲ್ಲೆಯ ಪರಿಚಯ)**, ೧/೮ ಕ್ರೌನ್, ಪು. ೪೮, ಮೊ.ಮು. ೧೯೬೬, ಬೆಲೆ:?, ಪ್ರ: ಮೈಸೂರು ಸರಕಾರದ ಪ್ರಚಾರ ಮತ್ತು ವಾರ್ತಾ ಇಲಾಖೆ, ಬೆಂಗಳೂರು.

* **ಧಾರವಾಡ ಜಿಲ್ಲೆ** ೧/೮ ಕ್ರೌನ್, ಪು. ೬೮, ಮೊ.ಮು. ೧೯೬೬, ಬೆಲೆ: ?, ಪ್ರ:ಮೈಸೂರು ಸರಕಾರದ ಪ್ರಚಾರ ಮತ್ತು ವಾರ್ತಾ ಇಲಾಖೆ, ಬೆಂಗಳೂರು.

* **ಬಳ್ಳಾರಿ ಜಿಲ್ಲೆ (ಪ್ರಗತಿ ಚಿತ್ರ)**, ೧/೮ ಕ್ರೌನ್, ಪು. ೪೮, ಮೊ.ಮು. ೧೯೬೬, ಬೆಲೆ:?, ಪ್ರ: ಮೈಸೂರು ಸರಕಾರದ ಪ್ರಚಾರ ಮತ್ತು ವಾರ್ತಾ ಇಲಾಖೆ, ಬೆಂಗಳೂರು.

* **ಡಿ.ಎನ್. ಕೃಷ್ಣಯ್ಯ : ಸುಂದರನಾಡು ಕೊಡಗು**, ೧/೮ ಕ್ರೌನ್, ಪು. ೯೬, ಮೊ.ಮು. ೧೯೬೭, ಬೆಲೆ: ೧.೫೦, ಪ್ರ: ಡಿ.ಎನ್. ಕೃಷ್ಣಯ್ಯ, ಜೈನರ ಬೀದಿ, ವಿರಾಜಪೇಟೆ (ಕೊಡಗು).

* **ಡಾ. ಮ.ಸು. ಅಚ್ಯುತ ಶರ್ಮಾ : ಉಡುಪಿ ಕ್ಷೇತ್ರದ ನೈಜ ಚಿತ್ರ ಮತ್ತು ಚಾರಿತ್ರಿಕ ಹಿನ್ನೆಲೆ**, ೧/೮ ಕ್ರೌನ್, ಪು. ೮೦, ಮೊ.ಮು. ೧೯೬೯, ಬೆಲೆ: ರೂ. ೩/-, ಪ್ರ:ಸತ್ಯಶೋಧ ಪ್ರಕಾಶನ, ಕಂಕನಾಡಿ, ಮಂಗಳೂರು-೨.

* **ಶೇಷಾದ್ರಿ ಅಯ್ಯಂಗಾರ್ ಎಂ.ಎಸ್. : ಧರ್ಮಸ್ಥಳ ಯಾತ್ರೆ**, ೧/೮ ಕ್ರೌನ್, ಪು. ೬೪, ಬೆಲೆ: ೨.೫೦, ಮೊ.ಮು. ೧೯೬೯, ಪ್ರ: ಶೇಷಾದ್ರಿ ಅಯ್ಯಂಗಾರ್, ಬೂದನಹಳ್ಳಿ.

* **ಎಸ್.ಬಿ. ವಸಂತರಾಜಯ್ಯ : ಶ್ರವಣ ಬೆಳುಗೊಳದಿಂದ ಕೊಪ್ಪಳದವರೆಗೆ**, ೧/೮ ಕ್ರೌನ್, ಪು. ೫೧, ಮೊ.ಮು. ೧೯೭೧, ಬೆಲೆ: ರೂ. ೧.೦೦, ಪ್ರ: ಜೈನ ಬೋರ್ಡಿಂಗ್, ಹುಬ್ಬಳ್ಳಿ.

* **ಗುಂಡ್ಮಿ ಚಂದ್ರಶೇಖರ ಐತಾಳ : ಚೆಲುವು ಚೆಲ್ಲಿದಲ್ಲಿ**, ೧/೮ ಕ್ರೌನ್, ಪು. ೧೬೨, ಮೊ.ಮು. ೧೯೭೨, ಬೆಲೆ: ರೂ. ೪.೦.೦, ಪ್ರ: ಸುರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು-೯.

* **ಸದಾನಂದ ಕನವಳ್ಳಿ : ಚನ್ನಪ್ಪ ಕೆರಿಮನಿ (ಸಂ.) : ಪುಲಿಗೆರೆ**, ೧/೮ ಕ್ರೌನ್, ಪು.೧೨೪, ಮೊ.ಮು. ೧೯೭೨, ಪ್ರ: ಪಂಪ ಪ್ರಕಾಶನ, ಲಕ್ಷ್ಮೇಶ್ವರ.

* **ಲಿಂಗಣ್ಣ ಸತ್ಯಂಪೇಟೆ : ಸುತ್ತಾಟದ ಸ್ಮೃತಿ**, ೧/೮ ಕ್ರೌನ್, ಪು. ೮೦, ಮೊ.ಮು. ೧೯೭೩, ಬೆಲೆ: ೨.೦೦/-, ಪ್ರ: ಶಾಂತರಸ ಪ್ರಕಾಶನ, ಅಮ್ಮಾಪುರ, ಸುರಪುರ.

* **ಜೀರಿಗೆ ಕಟ್ಟೆ ಬಸವಪ್ಪ : ಕರ್ನಾಟಕದ ಯಾತ್ರೆ**, ೧/೮ ಡೆಮಿ, ಪು. ೫೩೦, ಮೊ.ಮು. ೧೯೭೩, ಬೆಲೆ: ರೂ.?, ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮.

* **ಶಂಕರ ಪಾಟೀಲ : ಸವಿ ಸಂಚಾರ**, ೧/೮ ಕ್ರೌನ್, ಪು. ೧೭೦, ಮೊ.ಮು. ೧೯೭೫, ಬೆಲೆ: ರೂ. ೬.೦೦, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು-೧.

* **ಉದಯ ಕುಲಕರ್ಣಿ : ಪ್ರವಾಸಿ ಮಿತ್ರ**, ೧/೮ ಕ್ರೌನ್, ಪು. ೧೩೨, ಬೆಲೆ: ರೂ. ೪.೫೦, ಪ್ರ.ಮು. ೧೯೭೭, ಪ್ರ: ರಾಘವೇಂದ್ರ ಪ್ರಕಾಶನ, ಹುಬ್ಬಳ್ಳಿ.

* **ಚಂದ್ರಶೇಖರ ಬ. ಕೌರಗಿ : ಪಯಣಿಗ,** ೧/೮ ಕ್ರೌನ್, ಪು. ೧೦೮, ಬೆಲೆ: ರೂ. ೫, ಮೊ.ಮು. ೧೯೭೭, ಪ್ರ: ಅಶೋಕ ಪ್ರಕಾಶನ, ಬೆಳಗಾವಿ.

* **ಹಣಮಂತ ಶಿವಪ್ಪ ಭೈರನಟ್ಟಿ : ನೆಲದ ಮೇಲೆ ಹೆಜ್ಜೆ (ಹನ್ನೆರಡು ಪ್ರವಾಸಾನುಭವಗಳು),** ೧/೮ ಕ್ರೌನ್, ಪು. ೫೮, ಮೊ.ಮು. ೧೯೮೦, ಬೆಲೆ: ರೂ. ೩/-, ಪ್ರ: ನಕ್ಷತ್ರ ಪ್ರಕಾಶನ, ಕುಲಗೋಡ.

* **ಕೆ. ಅನಂತರಾಮು : ಸಕ್ಕರೆಯ ಸೀಮೆ,** ೧/೮ ಡೆಮಿ, ಪು. ೬೫೬, ಮೊ.ಮು.೧೯೮೨, ಬೆಲೆ: ರೂ. ೭೦/-, ಪ್ರ: ಅನಂತ ಪ್ರಕಾಶನ, ೪೧೪, ವೀಣೆ ಶೇಷಣ್ಣ ರಸ್ತೆ, ದೇವಾಂಬ ಅಗ್ರಹಾರ, ಮೈಸೂರು-೫೭೦೦೦೧.

* **ಅ.ಮ. ರಂಗಣ್ಣ : ನಮ್ಮ ಊರು ನಮ್ಮ ನಾಡು ನಮ್ಮ ದೇಶ ನಮ್ಮ ಜನ (ಮಾಹಿತಿ ಕೈಪಿಡಿ) ಭಾಗ-೧,** ೧/೮ ಡೆಮಿ, ಪು. ೨೪೬, ಮೊ.ಮು. ೧೯೮೩, ಬೆಲೆ: ರೂ. ೧೦, ಪ್ರ: ಅಮರ ಪ್ರಕಾಶನ, ಹರಿಹರ-೫೭೭೬೦೧.

* **ಪ್ರಕೃತಿ ಚಾರಣ : ಜಿ.ಎನ್. ಅಶೋಕ್‌ವರ್ಧನ : ಚಕ್ರವರ್ತಿಗಳು,** ೧/೮ ಡೆಮಿ, ಪು.೧೧೨, ಮೊ.ಮು. ೧೯೯೦, ಬೆಲೆ: ರೂ. ೧೩/-, ಪ್ರ: ದತ್ತಾತ್ರೇಯ ಪ್ರಕಾಶನ, ಅತ್ರಿ ಬುಕ್ ಸೆಂಟರ್, ಶರಾವತಿ ಕಟ್ಟಡ, ಬಲ್ಮಠ, ಮಂಗಳೂರು-೫೭೫೦೦೧.

* **ಡಾ. ಉಪ್ಪಂಗಳ ರಾಮಭಟ್ಟ : ಸಂಚಾರ ಸಂಪುಟ,** ೧/೮ ಕ್ರೌನ್, ಪು. ೧೩೨, ಮೊ.ಮು. ೧೯೯೭, ಬೆಲೆ: ರೂ. ೪೫/-, ಪ್ರ: ಅಕಲಂಕ ಪ್ರಕಾಶನ, 'ಪರಾಶರ', ೮-೧-೬೪ಬಿ, ಸುಧೀಂದ್ರತೀರ್ಥ ಮಾರ್ಗ, ಕುಂಜಿಬೆಟ್ಟು, ಉಡುಪಿ-೫೭೬೧೦೨.

* **ಡಾ. ಎಂ. ಚಿದಾನಂದ ಮೂರ್ತಿ : ಕನ್ನಡಾಯಣ,** ೧/೮ ಡೆಮಿ, ಪು. ೨೮೦, ಮೊ.ಮು. ೧೯೯೯, ಬೆಲೆ: ರೂ. ೧೦೦/-, ಪ್ರ: ಪ್ರಿಯದರ್ಶಿನಿ ಪ್ರಕಾಶನ, ೧೩೮, ೭ನೇ 'ಸಿ' ಮುಖ್ಯರಸ್ತೆ, ವಿಜಯನಗರ ೨ನೇ ಹಂತ, ಬೆಂಗಳೂರು-೪೦.

* **ಬಿ.ಗೋ. ರಮೇಶ್: ಹಂಪಿ (ಪ್ರವಾಸಿಗರ ಕೈಪಿಡಿ),** ೧/೮ ಕ್ರೌನ್, ಪು. ೬೨, ಮೊದಲ ಮುದ್ರಣ ೧೯೯೯, ಬೆಲೆ: ರೂ. ೧೦/-, ಪ್ರ: ವಾಸನ್ ಬುಕ್ ಡಿಪೋ, ಬೆಂಗಳೂರು-೯

* **ಕೆ. ಚಂದ್ರಮೌಳಿ: ಬೆಂಗಳೂರಿನ ನೋಟಗಳು,** ೧/೮ ಡೆಮಿ ಪು. ೪೩೨, ಮೊದಲ ಮುದ್ರಣ ೨೦೦೨, ಬೆಲೆ ರೂ. ೧೮೦/- ಪ್ರ: ಪ್ರಿಸಂ ಬುಕ್ಸ್ ಪ್ರೈ.ಲಿ., ೧೯೬೫, ೩೨ನೇ ಕ್ರಾಸ್, ಬನಶಂಕರಿ ೨ನೇ ಹಂತ, ಬೆಂಗಳೂರು-೭೦.

* **'ಚಿರಂಜೀವಿ' : ನಮ್ಮ ನಿಮ್ಮ ಬೆಂಗಳೂರು,** ೧/೮ ಡೆಮಿ, ಪು. ೧೬೮, ಮೊ.ಮು. ೨೦೦೪, ಬೆಲೆ: ರೂ. ೮೦/-, ಪ್ರ: ವಸಂತ ಪ್ರಕಾಶನ, ನಂ. ೧೦, ತುಳಸೀವನಂ, ಬೆಂಗಳೂರು-೫೬೦೦೫೫.

* **ನಾ. ಗೀತಾಚಾರ್ಯ (ಸಂ.) : ಕವಿ ನಮನ,** ೧/೮ ಡೆಮಿ, ಪು. ೧೯೫, ಮೊ.ಮು. ೨೦೦೪, ಬೆಲೆ: ರೂ. ೧೮೦/-, ಪ್ರ: ಪುಸ್ತಕ ಶಕ್ತಿ, ೧೦೩, ೩ನೇ ಮುಖ್ಯರಸ್ತೆ, ಟಾಟಾ ಸಿಲ್ಕ್ ಫಾರಂ, ಬಸವನಗುಡಿ, ಬೆಂಗಳೂರು-೪.

## ಅನುವಾದ ಪ್ರವಾಸ ಸಾಹಿತ್ಯ

* **ವಿನೂ ಮಸಾನಿ : ನಮ್ಮ ಹಿಂದುಸ್ಥಾನ (ಕನ್ನಡಾನುವಾದ ಸಿದ್ಧವನಹಳ್ಳಿ ಕೃಷ್ಣಶರ್ಮ),** ೧/೮ ಕ್ರೌನ್, ಪು. ೧೫೮, ಮೊ.ಮು. ೧೯೪೨, ಪ್ರ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಬೊಂಬಾಯಿ-ಕಲ್ಕತ್ತಾ-ಮದ್ರಾಸ್.


* **ಸ್ವಾಮಿ ವಿವೇಕಾನಂದ: ಪರಿವ್ರಾಜಕ,** ೧/೮ ಕ್ರೌನ್, ಪು. ೧೧೮, ಮೊ.ಮು. ೧೯೫೧, ಬೆಲೆ: ರೂ. ೧.೪.೦, ಪ್ರ: ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು.

* **ಕೆ.ಪಿ.ಎಸ್. ಮೆನನ್ : ವಿಶ್ವಪರ್ಯಟನೆ (ಕನ್ನಡಾನುವಾದ : ಮಾ.ಭೀ. ಶೇಷಗಿರಿರಾವ್),** ೧/೮ ಕ್ರೌನ್, ಪು. ೧೨೪, ಮೊ.ಮು. ೧೯೬೭, ಬೆಲೆ: ರೂ. ೧.೬೦, ಪ್ರ: ಹೇಮಂತ ಸಾಹಿತ್ಯ, ಭಾಷ್ಯ ರಸ್ತೆ, ಬೆಂಗಳೂರು-೨.

* **ಕಾಕಾ ಕಾಲೇಲಕರ : ಜೀವನ ಲೀಲೆ (ಗುಜರಾತಿ ಮೂಲ, ಕನ್ನಡಕ್ಕೆ ಸಾಲಿ ರಾಮಚಂದ್ರರಾವ್),** ೧/೮ ಡೆಮಿ, ಪು. ೪೦೨, ಮೊ.ಮು. ೧೯೭೦, ಬೆಲೆ: ರೂ. ೧೦/- ಪ್ರ: ಸಾಹಿತ್ಯ ಅಕಾಡೆಮಿ, ರಬೀಂದ್ರ ಭವನ್, ನವದೆಹಲಿ-೧.

* **ಮೋತಿಚಂದ್ರ : ಸಾರ್ಥವಾಹ, (ಕನ್ನಡಾನುವಾದ : ಹೆಚ್.ಎಸ್. ಪಾಟೀಲ),** ೧/೮ ಡೆಮಿ, ಪು. ೩೬೦, ಮೊ.ಮು. ೧೮೭೨, ಬೆಲೆ: ರೂ. ೧೫/-, ಪ್ರ: ಸಾಹಿತ್ಯ ಅಕಾಡೆಮಿ, ರಬೀಂದ್ರ ಭವನ್, ನವದೆಹಲಿ-೧.

* **ಇ.ಪಿ. ಮೆನನ್ : ಪ್ರಪಂಚ ಪರ್ಯಟನೆ ಯಾತ್ರೆಯಲ್ಲಿ (ಕನ್ನಡಾನುವಾದ : ಟಿ.ಟಿ. ಶರ್ಮ),** ೧/೮ ಕ್ರೌನ್, ಪು. ೧೯೬, ಮೊ.ಮು. ೧೯೭೩, ಬೆಲೆ: ರೂ. ೫/-, ಪ್ರ: ಸಾಹಿತ್ಯ ಮಂದಿರ, ಬೆಂಗಳೂರು-೧೯.



ಡಾ. ಎಸ್. ವಿದ್ಯಾಶಂಕರ ಅವರ ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಒಂದು ಮಹತ್ವದ ಕೃತಿ. ಇಲ್ಲಿನ ಮಹತ್ತಿಗೆ ಎರಡು ಕಾರಣಗಳಿವೆ. ಒಂದು: ಪ್ರವಾಸೋದ್ಯಮವನ್ನು ಕುರಿತು ಅದರ ಉದ್ದೇಶ, ಗುರಿ ಸಾಧನೆಗಳ ಬಗ್ಗೆ ಚಾರಿತ್ರಿಕ ದಾಖಲಾತಿಗಳೊಂದಿಗೆ ಒಂದು ಸಂಪೂರ್ಣ ಚಿತ್ರವನ್ನು ಕಟ್ಟಿಕೊಟ್ಟಿರುತ್ತಾರೆ. ಅದು ನಿರ್ವಹಿಸಬಹುದಾದ ಗೊತ್ತು ಗುರಿಗಳ ಬಗೆಗೆ ಉತ್ತಮ ಮಾರ್ಗಸೂಚಿ ವಿಚಾರಗಳಿವೆ. ಎರಡು: ಕನ್ನಡದಲ್ಲಿ ಇದುವರೆಗೆ ಬಂದಿರುವ ಹಲವು ಪ್ರವಾಸಾನುಭವ ಕೃತಿಗಳ ಒಂದು ವಿವರಪೂರ್ಣ ಸಮೀಕ್ಷೆ ಈ ಪುಸ್ತಕದಲ್ಲಿದೆ. ಒಂದು ದೇಶವನ್ನು ಕುರಿತು ಹಲವು ಪ್ರವಾಸಾನುಭವಗಳು ಬಂದಿದ್ದರೂ ನೋಡುವವರ ಕಣ್ಣಿನ ಗ್ರಹಿಕೆಗನುಗುಣವಾಗಿ ಅಲ್ಲಿನ ಅನುಭವದ ಅಸ್ಮಿತೆ ವಿಶಿಷ್ಟವೆನ್ನಿಸಿದಂತೆ ಹರಿದಿರುತ್ತದೆ. ಇದೆಲ್ಲವನ್ನು ಡಾ. ಎಸ್. ವಿದ್ಯಾಶಂಕರ ಅವರು ಒಳನೋಟ ಹರಿಸಿ, ವಿಶ್ಲೇಷಿಸಿದ್ದಾರೆ. ಅಲ್ಲಿನ ಚಾರಿತ್ರಿಕ, ಸಾಂಸ್ಕೃತಿಕ ಮಹತ್ವಗಳ ಬಗೆಗಿನ ಭಿನ್ನ ಅಭಿಪ್ರಾಯಗಳನ್ನು ಸಮಚಿತ್ತದಲ್ಲಿ ವಿಶ್ಲೇಷಿಸಿದ್ದಾರೆ. ಇದೊಂದು ಕನ್ನಡಕ್ಕೆ ಅಪೂರ್ವವಾದ ಕೊಡುಗೆ.

ಒಂದು ಶತಮಾನಕ್ಕೂ ಹೆಚ್ಚಿನ ಕಾಲಾವಧಿಯ ಸಾಹಿತ್ಯದ ಅಧ್ಯಯನ ಹಾಗೂ ವಿಶ್ಲೇಷಣೆಯಲ್ಲಿ ಕಂಡುಬರುವ ಪ್ರಾಮಾಣಿಕತೆ ಮತ್ತು ಪರಿಶ್ರಮವನ್ನು ಯಾರೇ ಆಗಲಿ ಮೆಚ್ಚುವಂತಿದೆ. ಕನ್ನಡದಲ್ಲಿ ಇಂತಹ ದಾಖಲೆ ನಿರ್ಮಿಸಿರುವ ಲೇಖಕರು ಅಭಿನಂದನಾರ್ಹರು.

-ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೧